ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಶಾಂತಿಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೨೩

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 23

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ

163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ

ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ

ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್, M.A. B.Com., B.L.,

ಕೋಶಾಧ್ಯಕ್ಷರು

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು
ಶಂಕರಾಚಾರ್ಯ ಶ್ರೀರಾಮಚಂದ್ರಾಪುರಮಠಸ್ಥ

ಶ್ರೀರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ ।



ಅಸ್ಮದತ್ಯಂತ ಪ್ರಿಯಶಿಷ್ಯ ಶ್ರೀಯುತ ಕೇಶವ-ಸುಬ್ರಹ್ಮಣ್ಯ-ಕೌಶಿಕ,
ಸಂಪಾದಕರು, ಭಾರತ ದರ್ಶನ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು.

ಏತೇಷಾಂ ವಿಷಯೇ ಶ್ರೀಮನ್ನಾರಾಯಣಸ್ಮರಣಪುರಸ್ಸರಂ ಸಂದಿಷ್ಟೋಽಯಂ ಸಂದೇಶಃ

ಅದಾಗಿ ಶ್ರೀಮನ್ಮಹಾಭಾರತದ ೨೩ನೆಯ ಸಂಪುಟವೂ ಪ್ರಕಾಶನಕ್ಕೆ ಇದೇ ವರ್ಷ ಸಿದ್ಧವಾಗುತ್ತಿರುವುದನ್ನು ತಿಳಿದು ಅತೀವ ಸಂತೋಷವಾಯಿತು. ನೂತನ ಸಂಪುಟಗಳು ಪ್ರಕಟವಾಗುತ್ತಿದ್ದಂತೆ, ಕಾತರತೆಯಿಂದ ಇರುವ ವಾಚಕರಿಗೂ ಸಮಾಧಾನವಾಗುತ್ತದೆ. ಪ್ರಕಾಶನಸಂಸ್ಥೆಯವರಿಗೂ ಭಾರವು

ಸ್ವಲ್ಪ ಕಡಿಮೆಯಾದ ಸಮಾಧಾನವಾಗುತ್ತದೆ. ಕಾರಣ : ನಿಮ್ಮ ಸಂಸ್ಥೆಯ ವತಿಯಿಂದ 30 ಸಂಪುಟಗಳೂ ನಿರೀಕ್ಷಿಸಿರುವುದಕ್ಕಿಂತ ಶೀಘ್ರವಾಗಿ ಹೊರ ಬರಬಹುದೆಂಬ ಭರವಸೆ ಕನ್ನಡ ಜನತೆಗೆ ಉಂಟಾಗುವುದಾಗಿ ಭಾವಿಸುತ್ತೇವೆ.

23ನೆಯ ಸಂಪುಟದಲ್ಲಿ ಆಪದ್ಧರ್ಮ ಉಪಪರ್ವವು ಮುಗಿದು, ಮೋಕ್ಷಧರ್ಮವು ಪ್ರಾರಂಭವಾಗಿದೆ. ಆಪದ್ಧರ್ಮಪರ್ವದಲ್ಲಿ ಬರುವ ವಿಶ್ವಾಮಿತ್ರ-ಚಾಂಡಾಲರ ಸಂಭಾಷಣೆಯು ಹೃದಯಂಗಮವಾಗಿದೆ. ವ್ಯಾಧ-ಕಪೋತರ ಉಪಾಖ್ಯಾನವು ವಾಚಕರ ಮನಸ್ಸಿಗೆ ಅತೀವ ಪರಿಣಾಮ ಕರವಾಗಿದೆ. ಅಹಂಕಾರವನ್ನು ತೊರೆಯಬೇಕೆಂದು ನಿರೂಪಿಸಲು ಬೂರುಗ ಮರದ ಉಪಾಖ್ಯಾನವು ಬಹಳ ಸ್ವಾರಸ್ಯವಾಗಿ ಚಿತ್ರಿತವಾಗಿದೆ. ಗೌತಮನ ಉಪಾಖ್ಯಾನದ ಮೂಲಕವಾಗಿ ಮಹರ್ಷಿಗಳಾದ ವೇದವ್ಯಾಸರು ಕೃತಘ್ನನು ಹೇಗಿರುವನೆಂಬುದನ್ನು ಕಣ್ಣಿಗೆ ಕಟ್ಟುವ ರೀತಿಯಲ್ಲಿ ನಿರೂಪಿಸಿದ್ದಾರೆ.

ಮೋಕ್ಷಧರ್ಮಪರ್ವದಲ್ಲಿ ಜೀವನ ವಿಷಯವಾಗಿ ಭರದ್ವಾಜನ ಪೂರ್ವಪಕ್ಷ ಪ್ರತಿಪಾದನೆಯು ಆಧುನಿಕ ವಿದ್ವಾಂಸರನ್ನೂ ತಲೆದೂಗಿಸದೇ ಇರದು. ಸಾಮಾನ್ಯವಾಗಿ ಈ ಪರ್ವದಲ್ಲಿ ಎಲ್ಲ ಶ್ಲೋಕಗಳನ್ನೂ ಕೊಟ್ಟು ಅರ್ಥಮಾಡಿರುವುದು ಶ್ಲಾಘ್ಯವಾಗಿದೆ. ಎಲ್ಲ ಶ್ಲೋಕಗಳೂ ಬಾಯಿಪಾಠಕ್ಕೆ ಯೋಗ್ಯವಾಗಿವೆ.

ಇದರಲ್ಲಿರುವ ತತ್ತ್ವವನ್ನು ಕನ್ನಡಿಗರೆಲ್ಲರೂ ಮನನಮಾಡಬೇಕು. ಸಾಧ್ಯವಾದಷ್ಟು ಮಟ್ಟಿಗಾದರೂ ಆಚರಣೆಯಲ್ಲಿ ತರುವುದು ಶ್ರೇಯಸ್ಕರ.

ಮುಂದಿನ ಸಂಪುಟಗಳೂ ಶೀಘ್ರಾತಿಶೀಘ್ರವಾಗಿ ಹೊರಬಂದು ಈ ಮಹಾಭಾರತ ಸಂಪುಟಗಳು ಕನ್ನಡ ಜನರಿಗೆ ಆಧ್ಯಾತ್ಮಿಕಸ್ವತ್ತಾಗಲೆಂದು ಹಾರೈಸುತ್ತೇವೆ.

–ಇತಿ, ಶ್ರೀಮನ್ನಾರಾಯಣಸ್ಮೃತಯಃ

ಮಿತಿ :- ಶ್ರೀದುರ್ಮತಿ ಸಂವತ್ಸರದ ಮಾರ್ಗಶೀರ್ಷ ಶುಕ್ಲ ೩ ಯು (ದಿನಾಂಕ
೨೯-೧೧-೮೧ ಭಾನುವಾಸರೇ)

ವಸತಿ :- ತುಂಗಾತೀರಸ್ಥ ತೀರ್ಥಹಳ್ಳಿ ಶ್ರೀಮದ್ರಾಮಚಂದ್ರಾಪುರಮಠೇ.

ವಿನಮ್ರವಚನಗಳು

ಭಗವಂತನ ದಯೆಯಿಂದಲೂ, ಸದ್ಗುರುವಿನ ದಿವ್ಯಾನುಗ್ರಹದಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ದಿವ್ಯಕುಸುಮರೂಪವಾದ ಶ್ರೀಮನ್ಮಹಾಭಾರತದ ೨೩ನೆಯ ಸಂಪುಟವನ್ನು ಪರಮಾತ್ಮನ ದಿವ್ಯಪಾದಾರ ವಿಂದಗಳಲ್ಲಿ ಸಮರ್ಪಿಸಿ ಪ್ರಸಾದರೂಪವಾದ ಈ ದಿವ್ಯಕುಸುಮವನ್ನು ವಾಚಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ. ಈ ಸಂಪುಟವನ್ನು ನವೆಂಬರ್ ತಿಂಗಳಿನಲ್ಲಿಯೇ ಪ್ರಕಾಶಿಸುವ ಆಶಯವಿದ್ದಿತು. ಅನಿವಾರ್ಯಕಾರಣ ಗಳಿಂದಾಗಿ ಒಂದು ತಿಂಗಳು ಸಾವಕಾಶವಾಯಿತು. ೨೨ನೆಯ ಸಂಪುಟವು ಪ್ರಕಾಶನವಾದನಂತರ ೮ನೆಯ ಸಂಪುಟದ ಪುನರ್ಮುದ್ರಣವನ್ನು ಮುಗಿಸಿ ಇದೀಗ ೨೩ನೆಯ ಸಂಪುಟವನ್ನು ಪ್ರಕಾಶನಗೊಳಿಸುತ್ತಿದ್ದೇವೆ. ಆದುದರಿಂದ ಮುದ್ರಣಕಾರ್ಯವು ವ್ಯವಸ್ಥಿತವಾಗಿ ನಡೆದಿದೆಯೆಂದೇ ಸಮಾಧಾನಪಟ್ಟು ಕೊಳ್ಳಬಹುದಾಗಿದೆ. ಆದರೆ ಮುಗಿದು ಹೋಗಿರುವ ಸಂಪುಟಗಳನ್ನು ನೆನೆಸಿ ಕೊಂಡರೆ ಭಯವೇ ಆಗುತ್ತದೆ. ೨೩ನೆಯ ಸಂಪುಟವು ಹೊರಬೀಳುವ ವೇಳೆಗೆ ಹಿಂದಿನ ಸಂಪುಟಗಳಲ್ಲಿ ಹತ್ತು ಸಂಪುಟಗಳು ಇಲ್ಲವಾಗಿವೆ. ೧೨ ಸಂಪುಟಗಳು ಮಾತ್ರವೇ ಹೊಸ ಗ್ರಾಹಕರಿಗೆ ಲಭಿಸುತ್ತವೆ. ಈ ವರ್ಷದಲ್ಲಿ ೩ ಹಳೆಯ ಸಂಪುಟಗಳನ್ನು ಪುನರ್ಮುದ್ರಿಸಿದ್ದೇವೆ. ಮತ್ತೊಂದು ಹಳೆಯ ಸಂಪುಟವನ್ನೂ ಈ ವರ್ಷದ ಕಡೆಯೊಳಗಾಗಿಯೇ ಮುಗಿಸುವ ಆಶಯವಿದೆ. ಬೇರೆಯ ಕಡೆ ಪುನರ್ಮುದ್ರಣಕ್ಕಾಗಿ ಮಾಡಿದ್ದ ವ್ಯವಸ್ಥೆಯು ಅಷ್ಟು ಫಲದಾಯಕವಾಗಲಿಲ್ಲ. ೧೫ ದಿವಸಗಳಲ್ಲಿಯೇ ಸಂಪುಟವು ಸಿದ್ಧವಾಗುವು ದೆಂದು ನಿರೀಕ್ಷಿಸಿದ್ದೆವು. ನಾಲ್ಕು ತಿಂಗಳಾದರೂ ಸಿದ್ಧವಾಗಲಿಲ್ಲ. ಆದುದರಿಂದ ಮುಂದೆ ನಮ್ಮ ಮುದ್ರಣಾಲಯದಲ್ಲಿಯೇ ಹೊಸ ಮತ್ತು ಹಳೆಯ ಸಂಪುಟಗಳನ್ನು ಮುದ್ರಿಸುವುದು ಅನಿವಾರ್ಯವಾಗಿದೆ.

ಪೂರ್ಣಮಾಲೆಗೆ ಬೇಡಿಕೆಯನ್ನು ಕಳುಹಿಸಿದ್ದ ಹಲವಾರು ಮಂದಿ ಮಧ್ಯ-ಮಧ್ಯದಲ್ಲಿ ಹತ್ತು ಸಂಪುಟಗಳೇ ಸಿಗದೆಂದು ತಿಳಿದೊಡನೆಯೇ ಬೇಡಿಕೆ ಯನ್ನು ಹಿಂತೆಗೆದುಕೊಂಡಿರುತ್ತಾರೆ. ಇದು ನಮ್ಮ ಗಮನಕ್ಕೆ ಬಂದಿರುತ್ತದೆ. ಗ್ರಾಹಕರಾಗಲು ಇಚ್ಛಿಸಿ ಮುಂದೆ ಬರುವ ಧರ್ಮಾಭಿಮಾನಿಗಳಾದ ಸತ್ಪು ರುಷರಿಗೆ ಈ ಒಂದು ವಿಷಯವನ್ನು ತಿಳಿಯಬಯಸುತ್ತೇವೆ. ಹಲವಾರು ಸಂಪುಟಗಳಲ್ಲಿ ಪ್ರಕಟವಾಗುವ ಮಹಾಗ್ರಂಥಗಳ ವ್ಯವಸ್ಥೆಯೇ ಹೀಗಿರುತ್ತದೆ.

ಇದು ನಮ್ಮ ಮಹಾಭಾರತದ ಪ್ರಕಟಣೆಗೂ ಹೊರತಾದುದಲ್ಲ. ಆದರೆ ಅನೇಕ ಪ್ರಕಾಶನಗಳು ಮುಗಿದುಹೋದ ಸಂಪುಟಗಳ ಪುನರ್ಮುದ್ರಣವಿಲ್ಲ ದೆಯೇ ಇರುತ್ತವೆ. ಆದರೆ ಪರಮಾತ್ಮನ ದಯೆಯಿಂದಲೂ ಸತ್ಪುರುಷರ ಸಹಕಾರದಿಂದಲೂ ನಾವು ಮುಗಿದುಹೋದ ಸಂಪುಟಗಳೆಲ್ಲವನ್ನೂ ಖಂಡಿತ ವಾಗಿಯೂ ಪುನರ್ಮುದ್ರಿಸಿ ಕೊಡುತ್ತೇವೆ. ಯಾರನ್ನೂ ನಿರಾಶರನ್ನಾಗಿ ಮಾಡುವುದಿಲ್ಲ. ಆದರೆ ಅದಕ್ಕಾಗಿ ಸ್ವಲ್ಪ ಕಾಲಾವಕಾಶಬೇಕು. ಎಲ್ಲವೂ ಪುನರ್ಮುದ್ರಣವಾದನಂತರವೇ ಮಹಾಭಾರತದ ಸಂಪುಟಗಳನ್ನು ತೆಗೆದು ಕೊಳ್ಳಬಯಸುವವರು ಖಂಡಿತವಾಗಿಯೂ ನಿರಾಶರಾಗುತ್ತಾರೆ. ಏಕೆಂದರೆ : ಮುಗಿದುಹೋಗಿರುವ ಎಲ್ಲ ಸಂಪುಟಗಳನ್ನೂ ಒಟ್ಟಾಗಿ ಪುನರ್ಮುದ್ರಿಸಲು ಸಾಧ್ಯವಾಗುವುದಿಲ್ಲ. ನಾಲ್ಕು ಸಂಪುಟಗಳನ್ನು ಪುನರ್ಮುದ್ರಿಸುವ ವೇಳೆಗೆ ಮತ್ತೆ ನಾಲ್ಕು ಸಂಪುಟಗಳು ಮುಗಿದಿರುತ್ತವೆ. ಹೀಗೆ ಇದು ಮುಂದುವರಿಯುತ್ತಲೇ ಇರುತ್ತದೆ. ಆದುದರಿಂದ ಈಗ ಲಭ್ಯವಿರುವ ಸಂಪುಟಗಳನ್ನು ತೆಗೆದುಕೊಂಡು ಮಹಾಭಾರತಕ್ಕೆ ಗ್ರಾಹಕರಾಗಿ ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇವೆ.

ಈ ೨೩ನೆಯ ಸಂಪುಟದಲ್ಲಿ-ಶಾಂತಿಪರ್ವದ ಎರಡನೆಯ ಉಪಪರ್ವ ವಾದ ಆಪದ್ಧರ್ಮಪರ್ವವು ಮುಗಿದು ಮೂರನೆಯದಾದ ಮೋಕ್ಷಧರ್ಮ ಪರ್ವದಲ್ಲಿ ೨೧ ಅಧ್ಯಾಯಗಳು ಮುಗಿದಿವೆ. ಸ್ವಾರಸ್ಯವಾದ-ಹೃದಯಂಗಮ ವಾದ ಕಥೆಗಳೂ, ಸಂಭಾಷಣೆಗಳೂ, ರಾಜನೀತಿಗಳೂ, ಆಧ್ಯಾತ್ಮಿಕ ವಿಷಯ ಗಳೂ ಈ ಸಂಪುಟದಲ್ಲಿ ತುಂಬಿಹೋಗಿವೆ. ಹಿಂದಿನ ಸಂಪುಟಗಳನ್ನು ಓದಿದ ನಂತರ ನಮ್ಮ ವಾಚಕರಲ್ಲನೇಕರು–'ಈ ಪ್ರಕರಣವನ್ನು ಓದದೇ ಇದ್ದಿದ್ದರೆ ನಮ್ಮ ಜನ್ಮವು ಸಾರ್ಥಕವಾಗುತ್ತಿರಲಿಲ್ಲ'–ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಸಂಪುಟವೂ ಅದೇ ಮಾದರಿಯಲ್ಲಿದೆ. ಶ್ರೀಮನ್ಮಹಾ ಭಾರತವೇ ಅಂತಹುದು. ಒಂದೊಂದು ಶ್ಲೋಕವೂ–ಒಂದೊಂದು ಅಧ್ಯಾಯವೂ ಪ್ರಶಸ್ತತಮವಾದುದು. ಇದರ ಸವಿಯನ್ನು ಕನ್ನಡಿಗರೆಲ್ಲರೂ ಸವಿಯಬೇಕು. ಲಕ್ಷಸಂಖ್ಯೆಯಲ್ಲಿ ಗ್ರಾಹಕರಾಗಬೇಕು. ಲಕ್ಷಜನಕ್ಕೆ ಸಂಪುಟಗಳನ್ನು ಒದಗಿಸಿಕೊಡುವ ಸಾಮರ್ಥ್ಯವನ್ನು ಪರಮಾತ್ಮನು ನಮಗೆ ದಯಪಾಲಿಸಬೇಕು. ಇದೇ ನಮ್ಮ ಜೀವನದ ಧ್ಯೇಯವಾಗಿದೆ.

೨೨ನೆಯ ಸಂಪುಟದ ಪ್ರಕಾಶನಸಮಾರಂಭವು ದಕ್ಷಿಣಕನ್ನಡ ದ್ರಾವಿಡಬ್ರಾಹ್ಮಣ ಸಂಘದ ಶ್ರೀಗುರುನರಸಿಂಹಕಲ್ಯಾಣಮಂಟಪದಲ್ಲಿ 19-7-1981ನೇ ಭಾನುವಾರ ಸಾಯಂಕಾಲ ನೆರವೇರಿತು. ಕರ್ನಾಟಕದ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಜಿ. ಎನ್. ಸಭಾಹಿತ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ತಿರುಮಲೆ-ತಿರುಪತಿ ದೇವಸ್ಥಾನದ ಆಡಳಿತಾಧಿಕಾರಿಗಳಾದ ಸನ್ಮಾನ್ಯ ಶ್ರೀ ಪಿ. ವಿ. ಆರ್. ಕೆ. ಪ್ರಸಾದ್‌ರವರು ಸಂಪುಟವನ್ನು ಪ್ರಕಾಶನಗೊಳಿಸಿದರು. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯರು ಸಂಪುಟವನ್ನು ಪರಿಚಯಮಾಡಿಕೊಟ್ಟರು. ವೇದಘೋಷದೊಡನೆ ಸಮಾ ರಂಭವು ಪ್ರಾರಂಭವಾಯಿತು. ಶ್ರೀಮತೀ ವಿಜಯವಾಣಿಯವರು ಸ್ವಾಗತ ಪದ್ಯಮಾಲಿಕೆಯನ್ನು ಸುಶ್ರಾವ್ಯವಾಗಿ ಹಾಡಿದರು. ಶ್ರೀ ನೆ. ವೆಂ. ಶ್ರೀನಿವಾಸ ರಾಯರು ಸಂದೇಶಗಳನ್ನು ಓದಿದರು. ವಿದ್ವಾನ್ ಹೆಚ್. ಎನ್. ರಂಗಸ್ವಾಮಿ ಯವರು ಸರ್ವರನ್ನೂ ಸ್ವಾಗತಿಸುತ್ತಾ–ಪ್ರಕಾಶನದ ಗುರಿ, ಪ್ರಚಾರ, ಕಚ್ಚಾ ವಸ್ತುಗಳ ಅಧಿಕ ಬೆಲೆಯಿಂದಾಗಿ ಪ್ರಕಾಶನಕ್ಕೆ ಒದಗಿರುವ ಆರ್ಥಿಕಬಿಕ್ಕಟ್ಟು– ಎಲ್ಲವನ್ನೂ ವಿವರಿಸಿ ಹೇಳಿ ತಿರುಮಲೆ-ತಿರುಪತಿ ದೇವಸ್ಥಾನದವರು ಈ ಸಮಯದಲ್ಲಿ ಆರ್ಥಿಕ ಸಹಾಯವನ್ನು ಮಾಡಬೇಕೆಂದು ಪ್ರಾರ್ಥಿಸಿದರು. ವೇದಘೋಷ-ಮಂಗಳವಾದ್ಯಗಳೊಡನೆ ಸನ್ಮಾನ್ಯ ಶ್ರೀ ಪಿ. ವಿ. ಆರ್. ಕೆ. ಪ್ರಸಾದ್‌ರವರು ೨೨ನೆಯ ಸಂಪುಟವನ್ನು ಪ್ರಕಾಶನಗೊಳಿಸಿದರು. ಅನಂತರ ಶ್ರೀಮತಿ ಇಂದಿರಾರಾಮಚಂದ್ರ ಅವರು ಈ ಸಂಪುಟದಿಂದ ಆಯ್ದ ಶ್ಲೋಕ ಗಳನ್ನು ಸುಶ್ರಾವ್ಯವಾಗಿ ಹಾಡಿದರು. ಅನಂತರ ವಿದ್ವಾನ್ ವರದದೇಶಿಕಾ ಚಾರ್ಯರಂಗಪ್ರಿಯರು ಸಂಪುಟದ ಪರಿಚಯವನ್ನು ಮಾಡಿಕೊಡುತ್ತಾ–'ಈ ಸಂಪುಟದಲ್ಲಿ ಬಂದಿರುವ ಉಪದೇಶಗಳು ಕಾಲ-ದೇಶಗಳನ್ನು ಮೀರಿ ಸಾರ್ವಕಾಲಿಕವಾದದ್ದಾಗಿದೆ. ಜ್ಞಾನಭಾಸ್ಕರರಾದ ಭೀಷ್ಮರ ಉಪದೇಶವನ್ನೆಲ್ಲಾ ಒಟ್ಟಿಗೆ ಸೇರಿಸಿದರೆ ಒಂದು ಅರ್ಥಶಾಸ್ತ್ರ, ನೀತಿಶಾಸ್ತ್ರ, ಸಮಾಜಶಾಸ್ತ್ರ, ಧರ್ಮಶಾಸ್ತ್ರಗಳಾಗುತ್ತವೆ. ಇದು ಭಾರತೀಯರೆಲ್ಲರೂ ಓದಲೇಬೇಕಾದ ಮಹಾಗ್ರಂಥ. ಇದಕ್ಕೆ ಸಾರ್ವಜನಿಕರೂ ಪ್ರೋತ್ಸಾಹ ನೀಡಬೇಕು. ಸರ್ಕಾರ ದವರೂ ಪ್ರೋತ್ಸಾಹ ನೀಡಬೇಕು. ದಯಮಾಡಿ ಆಗಮಿಸಿರುವ ತಿರುಮಲೆ

ತಿರುಪತಿ ದೇವಸ್ಥಾನದ ಆಡಳಿತಾಧಿಕಾರಿಗಳಾದ ಶ್ರೀ ಪ್ರಸಾದ್‌ರವರೂ ಸಹಾಯಮಾಡಬೇಕು'–ಎಂದರು. ಅನಂತರ ಮಾತನಾಡಿದ ಸನ್ಮಾನ್ಯ ಶ್ರೀ ಪಿ. ವಿ. ಆರ್. ಕೆ. ಪ್ರಸಾದ್ ಅವರು–'ಪ್ರಾಂತೀಯಭಾಷೆಯಾದ ಕನ್ನಡದಲ್ಲಿ ವ್ಯಾಸಭಾರತವನ್ನು ಉತ್ತಮರೀತಿಯಲ್ಲಿ ಹೊರತಂದಿರುವ ಭಾರತದರ್ಶನ ಸಂಸ್ಥೆಯು ಸ್ತುತ್ಯರ್ಹಸೇವೆಯನ್ನು ಸಲ್ಲಿಸಿದೆ. ಪುನರ್ಮುದ್ರಣವಾಗ ಬೇಕಾಗಿರುವ ಸಂಪುಟಗಳಿಗೂ ಹಾಗೂ ಮುಂಬರುವ ನೂತನ ಸಂಪುಟ ಗಳಿಗೂ ಪ್ರತಿಯೊಂದಕ್ಕೂ ಐದು ಸಾವಿರ ರೂಪಾಯಿಗಳ ಆರ್ಥಿಕ ನೆರವನ್ನು ತಿರುಮಲೆ-ತಿರುಪತಿ ದೇವಸ್ಥಾನಗಳ ಪ್ರಕಟನಾನಿಧಿಯಿಂದ ಖಂಡಿತ ನೀಡು ತ್ತೇವೆ. ಸಂಶಯವೇ ಇಲ್ಲದಂತೆ ಈ ಸಹಾಯವು ಬಂದೇಬಿಟ್ಟಿದೆ–ಎಂದು ಪ್ರಕಾಶನ ಸಂಸ್ಥೆಯವರು ಭರವಸೆಯಿಡಬೇಕು. ಇದಕ್ಕೆ ಯಾವುದೇ ರೀತಿಯ ಅಡಚಣೆಗಳೂ ಉಂಟಾಗದಂತೆ ನಾನು ನೋಡಿಕೊಳ್ಳುತ್ತೇನೆ. ಮುಂದೆ ಇದಕ್ಕಿಂತಲೂ ಹೆಚ್ಚಿನ ಸಹಾಯವು ಬೇಕಾದಲ್ಲಿ ಅದನ್ನು ಪರಿಶೀಲಿಸಲಾಗು ವುದು'–ಎಂದು ಭರವಸೆಯನ್ನೂ ನೀಡಿದರು. ಸಮಾರಂಭದ ಅಧ್ಯಕ್ಷತೆ ಯನ್ನು ವಹಿಸಿದ್ದ ಶ್ರೀ ಜಿ. ಎನ್. ಸಭಾಹಿತರು ಸಹಾಯಧನದ ಆಶ್ವಾಸನೆ ಯನ್ನು ಕೊಟ್ಟುದಕ್ಕಾಗಿ ಶ್ರೀ ಪ್ರಸಾದ್‌ರನ್ನು ಅಭಿನಂದಿಸಿ ಸಮಕಾಲೀನವಾದ ಅನೇಕ ಅಪರಿಹಾರ್ಯಸಮಸ್ಯೆಗಳಿಗೆ ರಾಮಾಯಣ-ಭಾರತಗಳಲ್ಲಿ ಸೂಕ್ತಪರಿಹಾರವನ್ನು ಕಾಣಬಹುದು. ಅವುಗಳ ಅಧ್ಯಯನ-ಚಿಂತನ-ಅನು ಷ್ಠಾನಗಳು ಅತ್ಯಗತ್ಯ ಎಂದು ತಿಳಿಸಿದರು.

ಸಮಾರಂಭದ ಕೊನೆಯಲ್ಲಿ ನ್ಯಾಯಮೂರ್ತಿ ಶ್ರೀ ಜಿ. ಎನ್. ಸಭಾಹಿತರು ಪರಮಹಂಸಪರಿವ್ರಾಜಕಾಚಾರ್ಯ ಶ್ರೀ ಜಗದ್ಗುರು ಶಂಕರಾ ಚಾರ್ಯ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿಗಳು ಕಳುಹಿಸಿಕೊಟ್ಟಿದ್ದ ಸುವರ್ಣಮಂತ್ರಾಕ್ಷತೆಯನ್ನು ಸಂಪಾದಕಮಂಡಲಿಯ ವಿದ್ವಾಂಸರಿಗೆ ಅರ್ಪಿಸಿ ಗೌರವಿಸಿದರು. ವಿದ್ವಾನ್ ರಾಮೇಶ್ವರಾವಧಾನಿಗಳಿಂದ ವಂದನಾರ್ಪಣೆ ಯಾದನಂತರ ಶಾಂತಿಪಾಠದೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ನಿಜವಾಗಿಯೂ ಈ ಸಮಾರಂಭವು ಚಿರಸ್ಮರಣೀಯವಾದುದು. ಕಷ್ಟ ಸಮಯದಲ್ಲಿ ಪರಮಾತ್ಮನು ಯಾವುದೋ ರೂಪದಿಂದ ಸಹಾಯಮಾಡು ತ್ತಾನೆ. ಅವನನ್ನೇ ಅವಲಂಬಿಸಿರುವವರನ್ನು ಅವನೆಂದಿಗೂ ಕೈಬಿಡತಕ್ಕವ

ನಲ್ಲ–ಎಂಬ ನಮ್ಮ ನಂಬಿಕೆಯು ಈ ಸನ್ನಿವೇಶದಿಂದ ಮತ್ತಷ್ಟು ದೃಢವಾಯಿತು. ಸಭಾಮಂದಿರದಲ್ಲಿ ಆಶ್ವಾಸನೆಯನ್ನಿತ್ತ ಸನ್ಮಾನ್ಯ ಶ್ರೀ ಪಿ. ವಿ. ಆರ್. ಕೆ. ಪ್ರಸಾದರೂ ಕೆಲವೇ ದಿವಸಗಳಲ್ಲಿ ಮುದ್ರಣವಾಗುವ ಶ್ರೀಮನ್ಮಹಾಭಾರತದ ಎಲ್ಲ ಸಂಪುಟಗಳಿಗೂ ಐದು ಸಾವಿರ ರೂಪಾಯಿಗಳ ಸಹಾಯ ದ್ರವ್ಯವನ್ನು ಕೊಡುವುದಾಗಿ ಪರಿಪತ್ರವನ್ನು ಹೊರಡಿಸಿದರು. ಅದರಂತೆ ನಾವು ಈಗಾಗಲೇ ೨೨ನೆಯ ಮತ್ತು ೧ನೆಯ ಸಂಪುಟಗಳಿಗೆ ಸಹಾಯದ್ರವ್ಯವನ್ನು ತಿರುಮಲೆ-ತಿರುಪತಿ ದೇವಸ್ಥಾನದಿಂದ ಪಡೆದುಕೊಂಡಿರುತ್ತೇವೆ. ಮನಸ್ಸು, ಮಾತು ಮತ್ತು ಕೃತಿಯಲ್ಲಿ ಏಕಮುಖರಾಗಿರುವ ಶ್ರೀ ಪ್ರಸಾದ್‌ರಂತಹ ಸತ್ಪುರುಷರು ನಮ್ಮ ಪುಣ್ಯಭೂಮಿಯಲ್ಲಿ ಇರುವುದರಿಂದಲೇ ಧರ್ಮಕಾರ್ಯಗಳನ್ನು ಮಾಡುವವರ ಉತ್ಸಾಹವು ಕುಗ್ಗಿಲ್ಲವೆಂದು ಹೇಳಬಹುದಾಗಿದೆ. ಮಹಾನುಭಾವನಾದ, ಕರುಣಾಮಯನಾದ, ದಿವ್ಯಮಂಗಳ ವಿಗ್ರಹನಾದ ತಿರುಪತಿ ವೆಂಕಟೇಶ್ವರನಿಗೆ ದೀರ್ಘದಂಡನಮಸ್ಕಾರಗಳನ್ನು ಅರ್ಪಿಸುವುದಲ್ಲದೇ ಅವನ ಪ್ರತಿನಿಧಿಗಳಾಗಿರುವ ಸತ್ಯನಿಷ್ಠರಾದ ಸನ್ಮಾನ್ಯ ಶ್ರೀ ಪಿ. ವಿ. ಆರ್. ಕೆ. ಪ್ರಸಾದ್‌ರವರಿಗೂ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಕರ್ನಾಟಕರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಆರ್. ಗುಂಡೂರಾಯರು ಇತ್ತಿದ್ದ ಆಶ್ವಾಸನೆಯು ಇನ್ನೂ ಕಾರ್ಯಗತವಾಗಿರುವುದಿಲ್ಲ. ಮುಖ್ಯಮಂತ್ರಿಗಳು ಮಹಾಸಭೆಯಲ್ಲಿ ಕೊಟ್ಟ ಆಸ್ವಾಸನೆಯು ಸುಳ್ಳಾಗಲಾರದೆಂಬ ಭರವಸೆಯನ್ನು ಇನ್ನೂ ಇಟ್ಟುಕೊಂಡೇ ಇದ್ದೇವೆ. ಮರಳಿಯತ್ನವ ಮಾಡು–ಮರಳಿಯತ್ನವ ಮಾಡು–ಎಂಬ ಕನ್ನಡಕವಿಯ ಉಪದೇಶದಂತೆ ಆ ನಿಟ್ಟಿನಲ್ಲಿ ನಮ್ಮ ಪ್ರಯತ್ನವು ಮುಂದುವರಿಯುತ್ತಲೇ ಇದೆ.

ಸಂಪಾದಕಮಂಡಲಿಯ ವಿದ್ವಾಂಸರು ಸೌಜನ್ಯದಿಂದ, ಸಹನೆಯಿಂದ, ಸಾವಧಾನತೆಯಿಂದ ಸಂಪುಟಗಳನ್ನು ಸಂಪಾದಿಸಿಕೊಡುತ್ತಿದ್ದಾರೆ. ನಿಸ್ಪೃಹತೆಯಿಂದ ಕಾರ್ಯಮಾಡುತ್ತಿದ್ದಾರೆ. ಸಾವಿರಾರು ಮಂದಿ ಕನ್ನಡ ಬಾಂಧವರು ಈ ಮಹಾಗ್ರಂಥವನ್ನು ಓದುವುದರ ಮೂಲಕ ತಮ್ಮ ಶ್ರಮದ ಸಾರ್ಥಕತೆಯನ್ನು ಕಾಣುವವರಾಗಿದ್ದಾರೆ. ಈ ಮಹಾಗ್ರಂಥವು ಎಲ್ಲ ಕನ್ನಡಿಗರ ಮನೆಗಳಲ್ಲಿಯೂ ಜ್ಯೋತಿಯಂತೆ ಬೆಳಗಬೇಕೆಂಬುದೇ ಅವರ ಪರಮ

ಧ್ಯೇಯವಾಗಿದೆ. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ವರದದೇಶಿಕಾಚಾರ್ಯ ರಂಗಪ್ರಿಯರವರು ಮಾರ್ಗದರ್ಶನಮಾಡುತ್ತಿದ್ದಾರೆ. ಅವರೆಲ್ಲರಿಗೂ ಅನಂತಾನಂತ ವಂದನೆಗಳನ್ನು ಅರ್ಪಿಸುತ್ತೇವೆ.

ಸನ್ಮಾನ್ಯ ಶ್ರೀ ಆರ್. ಆರ್. ದಿವಾಕರ್ ಅವರು ಈ ಸಂಪುಟಕ್ಕೆ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಅವರಿಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳು.

ತಿಳಿದಂತೆ ಮತ್ತು ತಿಳಿಯದಂತೆ ಮಹಾಭಾರತದ ಪ್ರಚಾರಕಾರ್ಯದಲ್ಲಿ ತೊಡಗಿರುವವರು ಅನೇಕರಿದ್ದಾರೆ. ಗ್ರಾಹಕರನ್ನು ಕಾಣುತ್ತಿರುವೆವೇ ಹೊರತು ಗ್ರಾಹಕರಾಗಲು ಪ್ರೋತ್ಸಾಹಿಸುವವರನ್ನು ನಾವು ಕಾಣುತ್ತಿಲ್ಲ. ಪ್ರೋತ್ಸಾಹ-ಸಲಹೆಗಳಿಲ್ಲದೇ ಇಂತಹ ಧರ್ಮಗ್ರಂಥಗಳಿಗೆ ಗ್ರಾಹಕರು ಲಭಿಸುವುದು ಕಷ್ಟ. ಹೀಗೆ ತೆರೆಯ ಮರೆಯಲ್ಲಿ ಕೇವಲ ಧರ್ಮದೃಷ್ಟಿಯಿಂದ ಕೆಲಸಮಾಡುತ್ತಿರುವ ಸಾವಿರಾರು ಮಂದಿ ಹಿತೈಷಿಗಳಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸಿ, ದಯಾಮಯನಾದ ಪರಮಾತ್ಮನನ್ನು ಪುನಃ ಭಕ್ತಿಪೂರ್ವಕವಾಗಿ ನಮಿಸಿ ೨೪ನೆಯ ಸಂಪುಟದ ವಿನಮ್ರವಚನಗಳನ್ನು ಬರೆಯುವ ಸಾಮರ್ಥ್ಯವನ್ನು ಕರುಣಿಸಲೆಂದು ಪ್ರಾರ್ಥಿಸಿ ವಿರಮಿಸುವೆವು.

–ಪ್ರಕಾಶಕರು.

ಎರಡನೆಯ ಮುದ್ರಣದ ಪ್ರಸ್ತಾವನೆ

ಭಗವಂತನ ದಯೆಯಿಂದ 23ನೇ ಸಂಪುಟದ ಪುನರ್ಮುದ್ರಣವನ್ನು ಮುಗಿಸಿರುತ್ತೇವೆ. ಪ್ರತಿಯೊಂದು ಪುನರ್ಮುದ್ರಣಕ್ಕೂ ಐವತ್ತುಸಾವಿರ ರೂಪಾಯಿಗಳು ಬೇಕಾಗುವುದರಿಂದ ಭಗವಂತನ ದಯೆಯಿಲ್ಲದೆ ದೊಡ್ಡ ಮೊತ್ತವು ಸಂಗ್ರಹವಾಗಲಾರದು. ಅದರಲ್ಲಿಯೂ ಸತತವಾಗಿ ಪುನರ್ಮುದ್ರಣವು ನಡೆಯಬೇಕಾದರೆ ಅವನ ಅಪಾರವಾದ ಕರುಣೆಯೇಬೇಕು. ದಯಾಮಯನಾದ ಅವನು ಹೇಗೋ ನಡೆಸಿಕೊಡುತ್ತಿದ್ದಾನೆ. ಈ ವರ್ಷದಲ್ಲಿ ನಾವು ಮಹಾಭಾರತದ 6 ಸಂಪುಟಗಳನ್ನು ಪುನರ್ಮುದ್ರಣ ಮಾಡಿರುತ್ತೇವೆ. ಆದರೂ ಈಗ ನಮ್ಮಲ್ಲಿ 14 ಸಂಪುಟಗಳು ಮಾತ್ರವೇ ಇವೆ. ಅಷ್ಟೇ ವೇಗವಾಗಿ ಸಂಪುಟಗಳು ಮುಗಿದು ಹೋಗುತ್ತಿವೆ. ಮುಂದಿನ ವರ್ಷದಲ್ಲಿಯೂ 6 ಸಂಪುಟಗಳಿಗೆ ಕಡಿಮೆಯಿಲ್ಲದೇ ಮಹಾಭಾರತ ಸಂಪುಟಗಳನ್ನು

ಪುನರ್ಮುದ್ರಣಮಾಡುವ ಯೋಜನೆಯಿದೆ. ಪರಮಾತ್ಮನ ಕರುಣೆ, ಸತ್ಪುರುಷರ ಸಹಕಾರ ಇವುಗಳಿದ್ದರೆ ಸಾಧ್ಯವಾದೀತು.

ಸಂಪಾದಕಮಂಡಲಿಯವರು ಈ ಸಂಪುಟದ ತಪ್ಪು-ಒಪ್ಪುಗಳನ್ನೂ ನೋಡಿಕೊಟ್ಟು ಸಹಕರಿಸಿರುತ್ತಾರೆ. ಇವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ಒಂದು ವರ್ಷದಲ್ಲಿ ಸಾವಿರ ಮಂದಿಯನ್ನು ಚಂದಾದಾರ ರನ್ನಾಗಿ ಮಾಡಲು ತೆರೆಯಮರೆಯ ಗೆಳೆಯರು ಬಹಳವಾಗಿ ಶ್ರಮಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಅನಂತಾನಂತವಂದನೆಗಳು.

ಪ್ರತಿಯೊಬ್ಬ ಕನ್ನಡಿಗರೂ ಮಹಾಭಾರತ-ರಾಮಾಯಣಗಳನ್ನು ಓದಲಿ; ಸುಸಂಸ್ಕೃತರಾಗಲಿ—ಎಂಬುದು ಪರಮಾತ್ಮನಲ್ಲಿ ನಮ್ಮ ದೈನಂದಿನ ಪ್ರಾರ್ಥನೆಯಾಗಿದೆ.

ಶಾಂತಿಃಪುಷ್ಟಿಸ್ತುಷ್ಟಿಶ್ಚಾಸ್ತು। ಸಮಸ್ತಸನ್ಮಙ್ಗಲಾನಿ ಭವನ್ತು

—ಪ್ರಕಾಶಕರು

ಮೂರನೆಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಪರಮಾತ್ಮನ ಕರುಣೆಯಿಂದ ಶ್ರೀಮನ್ಮಹಾಭಾರತದ 23ನೆಯ ಸಂಪುಟದ 3ನೆಯ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ಪುನರ್ಮುದ್ರಣವು ಸಾವಕಾಶವೂ ಆಗುತ್ತಿದ್ದು ಪುನರ್ಮುದ್ರಣವಾಗಬೇಕಾಗಿರುವ ಸಂಪುಟಗಳ ಸಂಖ್ಯೆಯೂ ಹೆಚ್ಚುತ್ತಿದೆ. ಮಹಾಭಾರತ ವಿಭಾಗದಲ್ಲಿ ಪ್ರಸಕ್ತ 21 ಸಂಪುಟಗಳನ್ನೂ ರಾಮಾಯಣ ವಿಭಾಗದಲ್ಲಿ 4 ಸಂಪುಟಗಳನ್ನೂ ಭಾಗವತದಲ್ಲಿ 2 ಸಂಪುಟಗಳನ್ನೂ ಪುನರ್ಮುದ್ರಣ ಮಾಡಬೇಕಾಗಿದೆ.

ಶ್ರೀಮದ್ಭಾಗವತವು ಮುಗಿದನಂತರ (ಸುಮಾರು ಒಂದು ವರ್ಷದ ಅವಧಿಯಲ್ಲಿ ಮುಗಿಯಬಹುದು) 3-4 ವರ್ಷಗಳ ಕಾಲ ಕೇವಲ ಪುನರ್ಮುದ್ರಣವನ್ನೇ ಮಾಡಿ ಗ್ರಾಹಕರ ಮನಸ್ಸನ್ನು ಸಂತೋಷಗೊಳಿಸಬೇಕೆಂಬ ಆಶಯವಿದೆ. ಭಗವಂತನು ಸಾಮರ್ಥ್ಯವನ್ನು ದಯಪಾಲಿಸಬೇಕು. ಸಂಪಾದಕ ಮಂಡಲಿಯ ವಿದ್ವಾಂಸರು ಈ ಸಂಪುಟದ ತಪ್ಪು-ಒಪ್ಪುಗಳನ್ನು ನೋಡಿಕೊಟ್ಟು ಸಹಕರಿಸಿರುತ್ತಾರೆ. ಅವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಸರ್ವೇಜನಾಃ ಸುಖಿನೋಭವನ್ತು। ಸಮಸ್ತಸನ್ಮಙ್ಗಲಾನಿ ಭವನ್ತು

—ಪ್ರಕಾಶಕರು

ಮುನ್ನುಡಿ

ಆದಿಕವಿ ಶ್ರೀವಾಲ್ಮೀಕಿಯ ತರುವಾಯ ಕವಿಕುಲಶಿರೋಮಣಿ ಎನಿಸ ಬಹುದಾದ ಶ್ರೀವ್ಯಾಸಮುನಿಗಳು 'ಶ್ರೀಮನ್ಮಹಾಭಾರತ'ದ ಕರ್ತರು. ಒಂಬತ್ತು ಸಾವಿರ ಶ್ಲೋಕಗಳ 'ಜಯ' ಎಂಬ ಹೆಸರಿನಿಂದ ಮೊಟ್ಟ ಮೊದಲು ಈ ಮಹಾಕಾವ್ಯ ಪ್ರಕಟವಾಯಿತು; ಅದು ಮುಂದೆ ಇಪ್ಪತ್ತೈದು ಸಾವಿರ ಶ್ಲೋಕಗಳಾಗಿ 'ಭಾರತ' ಎಂಬ ಹೆಸರಿನಿಂದ ಅವತರಿಸಿತು ; ಅದು ಸಾಲದೆ, ಮುಂದೆ ಶ್ರೀವ್ಯಾಸರು ಅದನ್ನು ಒಂದು ಲಕ್ಷ ಶ್ಲೋಕಗಳನ್ನಾಗಿ ಪ್ರಕಟಿಸಿದರು. ಅದೇ ಈಗ ನಾವೆಲ್ಲರೂ ಓದುವ 'ಮಹಾಭಾರತ'. ವಿಶ್ವದಲ್ಲಿಯೇ ಇದು ಎಲ್ಲಕ್ಕೂ ವಿಶಾಲವಾದ ಮಹಾಕಾವ್ಯ (ಎಪಿಕ್). ಅದು ಮೂಲದಲ್ಲಿ ದೇವವಾಣೀ ಎನಿಸಿದ ಸಂಸ್ಕೃತದಲ್ಲಿ ಬರೆಯಲಾಯಿತು. ಆ ಸಂಸ್ಕೃತಭಾಷೆ ನಮ್ಮ ಮಾತೃವಾಣಿಯೂ ಅಹುದು ; ಮೂಲಕನ್ನಡಕ್ಕೆ ವಿಧ-ವಿಧದ ಸುಸಂಸ್ಕಾರಗಳನ್ನು ಕೊಟ್ಟು ಕನ್ನಡವನ್ನು ಘನತೆಗೇರಿಸಿದ ಶ್ರೇಯಸ್ಸೂ ಆ ಸಂಸ್ಕೃತಕ್ಕೆ ಸೇರಿದೆ. ಈಗ ಕನ್ನಡ ಬೆಳೆ-ಬೆಳೆದಂತೆ, ಕನ್ನಡಿಗರು ಫಾರಸಿ, ಇಂಗ್ಲಿಷ್ ಭಾಷೆಗಳ ಪ್ರಭಾವಕ್ಕೆ ತಲೆಬಾಗುತ್ತಾ ಹೋದಂತೆ ಮೂಲಸಂಸ್ಕೃತ ಮಹಾಭಾರತವನ್ನು ಓದುವ-ಅಭ್ಯಸಿಸುವ ರೂಢಿ ಕಡಿಮೆಯಾಗುತ್ತಾ, ಶೂನ್ಯಕ್ಕೆ ಮುಟ್ಟಿದೆ–ಎಂದರೆ ಅದು ಅತಿಶಯೋಕ್ತಿ ಎನಿಸಲಾರದು.

ಶ್ರೀಮನ್ಮಹಾಭಾರತವನ್ನು ಕನ್ನಡಿಸುವ ಪ್ರಯತ್ನಗಳು ಈವರೆಗೆ ಹಲವು ಆಗಿವೆ. ಅದು ಸಹಜ. ಆ ಗ್ರಂಥದ ಮಹಿಮೆಯೇ ಹಾಗಿದೆ. 'ಮಹಾಭಾರತ'ದಲ್ಲಿ ಇಲ್ಲದ ವಿಷಯ ಇನ್ನೆಲ್ಲಿಯೂ ಇರಲಾರದು–ಎಂಬ ಐತಿಹ್ಯ ಈಗ್ಯೂ ಪ್ರಚಾರದಲ್ಲಿದೆ. ಶ್ರುತಿ-ಸ್ಮೃತಿಗಳ ತರುವಾಯ ಮಹಾ ಭಾರತವು ಇತಿಹಾಸ-ಪುರಾಣಗಳ ಶ್ರೇಣಿಗೆ ಸೇರಿದುದು. ಅತೀತಾಧ್ಯಾತ್ಮಿಕ ವಾದ ತುರೀಯಾವಸ್ಥೆಯಿಂದ ಇಳಿಯುವಾಗ ಅತಿಮಾನಸಾವಸ್ಥೆಯಲ್ಲಿ ಹೊಳೆದ ಸತ್ಯ-ಮತಗಳನ್ನೇ ಋಷಿಗಳು ದ್ರಷ್ಟಾರರೆನಿಸಿಕೊಂಡು ಮಂತ್ರ-

ಮಹಾವಾಕ್ಯಗಳ ರೂಪದಿಂದ ಮಾನವಕುಲಕ್ಕೆ ದಯಪಾಲಿಸಿದರು. ಅದನ್ನೇ ಮುನಿಗಳು ಆಚಾರಸಂಹಿತೆ ಎನಿಸಿದ ಸ್ಮೃತಿಗ್ರಂಥಗಳ ರೂಪದಿಂದ ಸಾರಿದರು. ಆ ಎಲ್ಲ ಜ್ಞಾನಪುಂಜದ ಪ್ರಕಾಶವನ್ನು ಸಾಮಾನ್ಯಜನಸಮೂಹಕ್ಕೆ ಹೊಳೆಯುವಂತೆ ಪೂರ್ವೇತಿಹಾಸದ ಹಾಗೂ ಕರ್ಣೋಪಕರ್ಣವಾಗಿ ಕೇಳುತ್ತಾ ಬಂದ ಐತಿಹ್ಯಗಳ ಸಹಾಯದಿಂದ ವ್ಯಾಸರು ಕಥಾರೂಪ ಪುರಾಣಾದಿ ಗ್ರಂಥಗಳ ಮೂಲಕ ಹರಡಿದರು. ಅಂಥ ಎಲ್ಲ ಕೃತಿಗಳಲ್ಲಿ ಮಹಾಭಾರತ ಎಲ್ಲಕ್ಕೂ ವಿಸ್ತೃತ. ಸರ್ವಾರ್ಥಪೂರ್ಣ. ಶ್ರೀಕೃಷ್ಣನು ಕಿಂಕರ್ತವ್ಯಮೂಢನಾದ ಅರ್ಜುನನಿಗೆ ಉಪದೇಶಿಸಿದ, ವೇದಾಂತವ್ಯವಹಾರಗಳ ಸಮನ್ವಯವನ್ನು ಸಾಧಿಸಬಲ್ಲ ಶ್ರೀಮದ್ಭಗವದ್ಗೀತೆಯೂ ಈ ಮಹಾಭಾರತದ ಮುಖ್ಯಾಂಗ ಅಥವಾ ದಿವ್ಯಾಂಗ ಆಗಿದೆ.

ಮಹಾಭಾರತದ ಸಂಸ್ಕೃತಭಾಷೆ ಸುಲಭ, ಸರಳ, ಸಹಜವಾಗಿ ಅರ್ಥವಾಗುವ ಭಾಷೆ. ಅದನ್ನು ಈಗ ಬೆಂಗಳೂರಿನ ಭಾರತ ದರ್ಶನ ಪ್ರಕಾಶನ ಸಮಿತಿಯವರು ಸುಲಭ ಕನ್ನಡದಲ್ಲಿ 'ಮಹಾಭಾರತ'ದ ದರ್ಶನವನ್ನು ಕನ್ನಡಿಗರಿಗೆ ಮಾಡಿಸುವ ಮಹಾಪ್ರಯತ್ನವನ್ನು ಕೈಗೊಂಡಿರುವುದು ಅಭಿನಂದನೀಯವಲ್ಲದೇ ಪ್ರಶಂಸನೀಯ.

ಸಂಸ್ಕೃತಿಯೇ ಮಾನವಜೀವನದ ಸರ್ವಸ್ವ. ಭಾರತೀಯಸಂಸ್ಕೃತಿಯು ಸಾವಿರಾರು ವರುಷಗಳಿಂದ ತನ್ನದೇ ಆದ ವೈಶಿಷ್ಟ್ಯವನ್ನು ಕಾಯ್ದುಕೊಳ್ಳುತ್ತಾ, ಆಧ್ಯಾತ್ಮಿಕ - ನೈತಿಕ - ಸಾತ್ತ್ವಿಕಮೌಲ್ಯಗಳನ್ನು ಎತ್ತಿಹಿಡಿಯುತ್ತಾ ಬಂದಿದೆ. ಕನ್ನಡ ಜನಾಂಗ, ಕರ್ನಾಟಕದ ಮೂರು ಕೋಟಿ ಜನ ಹಲವಾರು ಆಘಾತಗಳನ್ನು ಸಹಿಸುತ್ತ ಜೀವನಯಾತ್ರೆಯಲ್ಲಿ ಮುಂದುವರಿಯುತ್ತಾ ಇದೆ. ತನ್ನ ಭಾಷೆ, ತನ್ನ ಸಾಂಸ್ಕೃತಿಕವೈಶಿಷ್ಟ್ಯ ಇವುಗಳನ್ನು ಕಾಯ್ದುಕೊಳ್ಳುವುದರಲ್ಲಿ ಇಲ್ಲಿಯ ಜನ ಯಶಸ್ಸು ಪಡೆಯುತ್ತಾ ಇದೆ. ಭೂತಕಾಲದ ಸ್ಫೂರ್ತಿ, ಹಂಸಕ್ಷೀರನ್ಯಾಯದಿಂದ ಹಳೆಯದರಲ್ಲಿಯ ಸಾರವನ್ನು ಗ್ರಹಿಸುವ ಶಕ್ತಿ, ಭವಿಷ್ಯದ ಸ್ಪಷ್ಟದರ್ಶನ, ಪ್ರಸ್ತುತಕಾಲದಲ್ಲಿ ಧೈರ್ಯದಿಂದ ಅಡಿಯಿಡುವ ಸಾಹಸೋತ್ಸಾಹ—ಇವು ನಮ್ಮೆಲ್ಲರಿಗೂ ಅವಶ್ಯ. ಆ ದಿಕ್ಕಿನಲ್ಲಿ ಬಲಕೊಡುವ ಮಹಾಗ್ರಂಥಗಳಲ್ಲಿ ಮಹಾಭಾರತವು, ಅದರಲ್ಲಿಯೂ ಭಗವದ್ಗೀತೆಯು ವಿಶ್ವದಲ್ಲಿಯೇ ಮನ್ನಣೆ ಪಡೆದ ಗ್ರಂಥವು.

ಭಾರತ ದರ್ಶನ ಸಮಿತಿಯವರು ಈಗಾಗಲೇ 23 ಸಂಪುಟಗಳನ್ನು ಪ್ರಕಟಿಸಿದ್ದಾರೆ. ಒಟ್ಟು 30 ಸಂಪುಟಗಳ ಯೋಜನೆಯನ್ನು ಇಟ್ಟು ಕೊಂಡಿದ್ದಾರೆ. ಕನ್ನಡಿಗರೆಲ್ಲರೂ ಈ ಯೋಜನೆ ತನ್ನದೇ ಎಂಬ ಭಾವದಿಂದ ಅದನ್ನು ಮುಂದುವರಿಸಬೇಕು. ಹಾಗೂ ಸಮಿತಿಯವರು ಇಂಥ ಸಾಂಸ್ಕೃತಿಕ ಪ್ರಚಾರಗಳಲ್ಲಿ ಮತ್ತಷ್ಟು ಮುಂದುವರಿಯುವಂತೆ ಪ್ರೋತ್ಸಾಹಿಸಬೇಕು.

ತನ್ನ ಸಂಸ್ಕೃತಿಯಿಂದಲೇ ಮಾನವ ಮಾನವತ್ವವನ್ನು ಪಡೆಯುವನು. ಅದೇ ಅವನ ಜೀವಾಳ. ಸಂಸ್ಕೃತಗ್ರಂಥಗಳೇ ನಮ್ಮ ಸಂಸ್ಕೃತಿಯ ಮೂಲಾಧಾರಗಳು. ಅವುಗಳನ್ನೆಲ್ಲ ಕನ್ನಡಿಸುವುದೇ ಕನ್ನಡಿಗರ ಕರ್ತವ್ಯಗಳಲ್ಲಿ ಒಂದು ಮಹಾನ್‌ಕರ್ತವ್ಯ. ಆ ಕರ್ತವ್ಯವನ್ನು ಮಾಡುವ ಸ್ಫೂರ್ತಿಯನ್ನು ಅದಕ್ಕೆ ಬೇಕಾಗುವ ಸಾಹಸ-ಸಹಾಯ-ಸಂಪತ್ತುಗಳನ್ನು ಭುವನೇಶ್ವರಿಯು ಎಲ್ಲರಿಗೂ ಅನುಗ್ರಹಿಸಲೆಂದು ಪ್ರಾರ್ಥಿಸಿ ಈ ಮುನ್ನುಡಿಯನ್ನು ಮುಗಿಸುವೆ.

ಬೆಂಗಳೂರು — **–ರಂಗನಾಥ ರಾಮಚಂದ್ರ ದಿವಾಕರ**

27-11-81

ಮಹಾಭಾರತ-ಇಪ್ಪತ್ತಮೂರನೆಯ ಸಂಪುಟದ ವಿಷಯಾನುಕ್ರಮಣಿಕೆ

ಶ್ರೀಮಹಾಗಣಪತಯೇ ನಮಃ   ಶ್ರೀಮಹಾಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ-ಶಾಂತಿಪರ್ವ
ಇಪ್ಪತ್ತಮೂರನೆಯ ಸಂಪುಟ

೧೩೧ನೆಯ ಅಧ್ಯಾಯ   ಆಪದ್ಧರ್ಮಪರ್ವ

ಆಪತ್ತಿನಲ್ಲಿರುವ ರಾಜನ ಕರ್ತವ್ಯ

ವೈಶಂಪಾಯನರು ಪ್ರಣವೋಚ್ಚಾರಣೆಯ ಪೂರ್ವಕವಾಗಿ ಮಹಾಭಾರತದ ಕಥೆಯನ್ನು ಮುಂದುವರಿಸುತ್ತಾ ಹೇಳತೊಡಗಿದರು :

ಜನಮೇಜಯ! ಯುಧಿಷ್ಠಿರನು ಭೀಷ್ಮನನ್ನು ಪ್ರಶ್ನಿಸುತ್ತಾನೆ :

ಕ್ಷೀಣಸ್ಯ ದೀರ್ಘಸೂತ್ರಸ್ಯ ಸಾನುಕ್ರೋಶಸ್ಯ ಬನ್ಧುಷು ।
ಪರಿಶಙ್ಕಿತವೃತ್ತಸ್ಯ ಶ್ರುತಮನ್ತ್ರಸ್ಯ ಭಾರತ ॥೧॥

ವಿಭಕ್ತಪುರರಾಷ್ಟ್ರಸ್ಯ ನಿರ್ದ್ರವ್ಯನಿಚಯಸ್ಯ ಚ ।
ಅಸಮ್ಭಾವಿತಮಿತ್ರಸ್ಯ ಭಿನ್ನಾಮಾತ್ಯಸ್ಯ ಸರ್ವಶಃ ॥೨॥

ಪರಚಕ್ರಾಭಿಯಾತಸ್ಯ ದುರ್ಬಲಸ್ಯ ಬಲೀಯಸಾ ।
ಆಪನ್ನಚೇತಸೋ ಬ್ರೂಹಿ ಕಿಂ ಕಾರ್ಯಮವಶಿಷ್ಯತೇ ॥೩॥

“ಪಿತಾಮಹ! ಯಾವನ ಬೊಕ್ಕಸವೂ-ಸೈನ್ಯವೂ ಕ್ಷೀಣಿಸಿರುವುದೋ, ಯಾವನು ಅಲಸನೋ, ಬಂಧುಗಳ ವಿಷಯದಲ್ಲಿ ದಯಾಪೂರ್ಣನಾಗಿರುವನೋ (ಬಂಧುಗಳು ಕ್ಷಯಿಸುವರೆಂಬ ಅನುಕಂಪದಿಂದ ದುರ್ಗವನ್ನು ಬಿಟ್ಟು ಹೊರಕ್ಕೆ ಹೋಗಿ ಶತ್ರುಗಳೊಡನೆ ಯುದ್ಧಮಾಡಲು ಅಸಮರ್ಥನಾಗಿರು

ವನೋ), ಮಂತ್ರಿಗಳ ಚಾರಿತ್ರ್ಯದ ವಿಷಯದಲ್ಲಿ ಸಂಶಯಗ್ರಸ್ತನಾಗಿರುವನೋ, ಯಾವನ ಮಂತ್ರಾಲೋಚನೆಯು ಗುಪ್ತವಾಗಿರದೆ ಪ್ರಜೆಗಳೆಲ್ಲರಿಗೂ ತಿಳಿಯುವಂತೆ ಬಹಿರಂಗವಾಗಿರುವುದೋ, ಯಾವನ ಪಟ್ಟಣಗಳನ್ನೂ-ರಾಷ್ಟ್ರಗಳನ್ನೂ ವಿಭಜಿಸಿ ಕೆಲವು ಭಾಗಗಳನ್ನು ಶತ್ರುಗಳು ಸ್ವಾಧೀನಪಡಿಸಿಕೊಂಡಿರುವರೋ, ಯಾವನ ಬೊಕ್ಕಸವು ದ್ರವ್ಯವೇ ಇಲ್ಲದೆ ಬರಿದಾಗಿರುವುದೋ, ಯಾವನಿಗೆ ಸಂಭಾವಿತರಾದ ಮಿತ್ರರೇ ಇಲ್ಲವೋ, ಯಾವನ ಮಂತ್ರಿಗಳನ್ನು ಶತ್ರುಗಳು ಭೇದೋಪಾಯದಿಂದ ವಶಪಡಿಸಿಕೊಂಡಿರುವರೋ, ಯಾವನು ಶತ್ರುಸೈನ್ಯದಿಂದ ಆಕ್ರಮಿಸಲ್ಪಟ್ಟಿರುವನೋ, ಯಾವನು ದುರ್ಬಲನಾಗಿದ್ದು ಬಲಿಷ್ಠನಾದ ಶತ್ರುವಿನಿಂದ ವ್ಯಾಕುಲಿತವಾದ ಮನಸ್ಸನ್ನು ಹೊಂದಿರುವನೋ-ಅಂತಹ ರಾಜನಿಗೆ ಯಾವ ಕಾರ್ಯವು ಶೇಷವಾಗಿ ಉಳಿಯುತ್ತದೆ? ಯಾವ ಕಾರ್ಯವನ್ನು ಮಾಡಿದರೆ ಅವನು ಅಂತಹ ಆಪತ್ತುಗಳಿಂದ ವಿಮುಕ್ತನಾಗುತ್ತಾನೆ?"

ಭೀಷ್ಮನು ಹೇಳುತ್ತಾನೆ :

ಬಾಹ್ಯಶ್ಚೇದ್ವಿಜಿಗೀಷುಃ ಸ್ಯಾದ್ಧರ್ಮಾರ್ಥಕುಶಲಃ ಶುಚಿಃ ।
ಜವೇನ ಸಂಧಿಂ ಕುರ್ವೀತ ಪೂರ್ವಭುಕ್ತಾನ್ವಿಮೋಚಯೇತ್ ॥೪॥

"ಯುಧಿಷ್ಠಿರಮಹಾರಾಜ! ವಿಜಯವನ್ನು ಗಳಿಸುವ ಇಚ್ಛೆಯಿಂದ ಆಕ್ರಮಿಸಲು ಬಂದಿರುವ ರಾಜನು ಹೊರಗಿನವನಾಗಿದ್ದು-ಅವನು ಧರ್ಮಾರ್ಥಕುಶಲನೂ, ಆಚಾರ-ವಿಚಾರಗಳಲ್ಲಿ ಪರಿಶುದ್ಧನೂ ಆಗಿದ್ದರೆ-ಅಂತಹವನೊಡನೆ ತ್ವರಿತವಾಗಿಯೇ ಸಂಧಿಯನ್ನು ಮಾಡಿಕೊಳ್ಳಬೇಕು. ಗ್ರಾಮಗಳು ಅಥವಾ ನಗರಗಳು ತಮ್ಮ ಪೂರ್ವಜರ ಸ್ವಾಧೀನದಲ್ಲಿದ್ದು ಅವುಗಳನ್ನೇನಾದರೂ ದೇಶೀಯನಾದ ಶತ್ರುವು ಆಕ್ರಮಿಸಿದರೆ ಮಧುರವಾದ ಮಾತುಗಳಿಂದಲೇ ಅವನನ್ನು ಸಮಾಧಾನಗೊಳಿಸಿ ಆಕ್ರಮಿಸಿಕೊಂಡ ನಗರ-ಗ್ರಾಮಗಳನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಬೇಕು.

ಯೋಽಧರ್ಮವಿಜಿಗೀಷುಃ ಸ್ಯಾದ್ಬಲವಾನ್ಪಾಪನಿಶ್ಚಯಃ ।
ಆತ್ಮನಃ ಸಂನಿರೋಧೇನ ಸಂಧಿಂ ತೇನಾಪಿ ರೋಚಯೇತ್ ॥೫॥

ವಿಜಯವನ್ನು ಗಳಿಸುವ ಇಚ್ಛೆಯಿಂದ ಬಂದಿರುವ ಶತ್ರುರಾಜನು

ಅಧರ್ಮಿಷ್ಠನಾಗಿದ್ದಲ್ಲಿ, ಬಲಿಷ್ಠನಾಗಿದ್ದು ಪಾಪಸಂಕಲ್ಪನಾಗಿದ್ದಲ್ಲಿ–ತನ್ನದಾದ ಹಲವಾರು ಗ್ರಾಮಗಳನ್ನಾದರೂ ಅವನಿಗೆ ಬಿಟ್ಟುಕೊಟ್ಟು ಅಂತಹವ ನೊಡನೆಯೂ ಸಂಧಿಯನ್ನು ಅಪೇಕ್ಷಿಸಬೇಕು.

ಅಪಾಸ್ಯ ರಾಜಧಾನೀಂ ವಾ ತರೇದ್ದ್ರವ್ಯೇಣ ಚಾಪದಮ್ ।
ತದ್ಭಾವಯುಕ್ತೋ ದ್ರವ್ಯಾಣಿ ಜೀವನ್ಪುನರುಪಾರ್ಜಯೇತ್ ॥೬॥

ಅಥವಾ ರಾಜಧಾನಿಯನ್ನೇ ಬಿಟ್ಟು ಹೊರಟುಹೋಗಬೇಕು. ಶತ್ರುರಾಜನಿಗೆ ಹಣವನ್ನು ಕೊಟ್ಟಾದರೂ ಆಪತ್ತನ್ನು ಪರಿಹರಿಸಿಕೊಳ್ಳಬೇಕು. ಹೀಗೆ ಆಪತ್ತಿನಿಂದ ಪಾರಾಗಬೇಕು. ರಾಜೋಚಿತವಾದ ಗುಣಗಳಿಂದ ಯುಕ್ತನಾದವನು ಜೀವಿಸಿದ್ದೇ ಆದರೆ ಪುನಃ ದ್ರವ್ಯವನ್ನು ಸಂಪಾದಿಸಬಹುದು.

ಯಾಸ್ತು ಕೋಶಬಲತ್ಯಾಗಾಚ್ಛಕ್ಯಾಸ್ತರಿತುಮಾಪದಃ ।
ಕಸ್ತತ್ರಾಧಿಕಮಾತ್ಮಾನಂ ಸಂತ್ಯಜೇದರ್ಥಧರ್ಮವಿತ್ ॥೭॥

ಕೋಶ-ಸೈನ್ಯಗಳ ಪರಿತ್ಯಾಗದಿಂದಾದರೂ ಆಪತ್ತುಗಳನ್ನು ದಾಟಲು ಸಾಧ್ಯವಿದ್ದರೆ ಕೋಶ-ಸೈನ್ಯಗಳಿಗಿಂತಲೂ ಅಧಿಕವಾದ ತನ್ನ ಶರೀರವನ್ನು ಧರ್ಮಾರ್ಥಗಳನ್ನು ತಿಳಿದಿರುವಂತಹ ಯಾವ ರಾಜನು ತಾನೇ ತ್ಯಾಗಮಾಡಿ ಯಾನು? (ಕೋಶಕ್ಕಿಂತಲೂ ಸೈನ್ಯಕ್ಕಿಂತಲೂ ಆತ್ಮವು (ಶರೀರವು) ಹೆಚ್ಚಿನದು. ಆದುದರಿಂದ ಧರ್ಮಾರ್ಥಜ್ಞಾನಿಯಾದವನು ಕೋಶ-ಬಲ ಗಳನ್ನಾದರೂ ತ್ಯಾಗಮಾಡಿ ವಿಪತ್ತುಗಳನ್ನು ಪರಿಹರಿಸಿಕೊಳ್ಳಬೇಕು. ಧರ್ಮಾರ್ಥಜ್ಞಾನಿಯಾದ ಯಾವನು ತಾನೇ ಆತ್ಮತ್ಯಾಗಮಾಡುತ್ತಾನೆ?)

ಅವರೋಧಾಜ್ಜುಗುಪ್ಸೇತ ಕಾ ಸಪತ್ನಧನೇ ದಯಾ ।
ನ ತ್ವೇವಾತ್ಮಾ ಪ್ರದಾತವ್ಯಃ ಶಕ್ಯೇ ಸತಿ ಕಥಂಚನ ॥೮॥

ಶತ್ರುವು ಆಕ್ರಮಿಸಿದೊಡನೆಯೇ ರಾಜನು ಎಲ್ಲಕ್ಕಿಂತಲೂ ಮುಖ್ಯವಾಗಿ ಮೊದಲು ತನ್ನ ಅಂತಃಪುರದ ಸ್ತ್ರೀಯರನ್ನು ರಕ್ಷಿಸಬೇಕು. ಒಂದು ವೇಳೆ ಅಂತಃಪುರವನ್ನು ಶತ್ರುಗಳಿಂದ ರಕ್ಷಿಸಲು ಅಸಮರ್ಥನಾದರೆ ಪರಿವಾರದವರ ಮೇಲೆ ಮತ್ತು ಧನದ ಮೇಲಿನ ದಯೆಯನ್ನು ದೂರಮಾಡಬೇಕು.

ವ್ಯಾಮೋಹವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಶತ್ರುವಶವಾಗಿರುವ ಪರಿವಾರದವರ ಮೇಲೆ ದಯೆತೋರುವುದರಿಂದ ಪ್ರಯೋಜನವೇನಿದೆ? ಹಾಗೆ ದಯೆತೋರಲು ಹೋದರೆ ಪರಿವಾರದವರೊಡನೆ ತಾನೂ ಶತ್ರುವಶನಾಗಬೇಕಾಗುತ್ತದೆ. ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೂ ಎಲ್ಲವನ್ನೂ ಪರಿತ್ಯಾಗಮಾಡಿದರೂ ಸರಿಯೆ ; ರಾಜನು ತಾನು ಮಾತ್ರ ಶತ್ರುವಶನಾಗಬಾರದು."

ಯುಧಿಷ್ಠಿರನು ಪುನಃ ಪ್ರಶ್ನಿಸುತ್ತಾನೆ :

ಅಭ್ಯನ್ತರೇ ಪ್ರಕುಪಿತೇ ಬಾಹ್ಯೇ ಚೋಪನಿಪೀಡಿತೇ ।
ಕ್ಷೀಣೇ ಕೋಶೇ ಶ್ರುತೇ ಮನ್ತ್ರೇ ಕಿಂ ಕಾರ್ಯಮವಶಿಷ್ಯತೇ ॥೯॥

"ಪಿತಾಮಹ! ಒಳಗಿರುವ ಅಮಾತ್ಯರೇ ಮೊದಲಾದವರು ಕುಪಿತರಾಗಿರಲಾಗಿ, ದುರ್ಗ-ರಾಷ್ಟ್ರಗಳು ಶತ್ರುಗಳಿಂದ ಪೀಡಿಸಲ್ಪಡುತ್ತಿರಲಾಗಿ, ಬೊಕ್ಕಸವು ಕ್ಷೀಣಿಸಿಹೋಗಿರಲಾಗಿ, ರಾಜರಹಸ್ಯಗಳೆಲ್ಲವೂ ಬಹಿರಂಗವಾಗುತ್ತಿರಲಾಗಿ–ರಾಜನು ಮಾಡಬೇಕಾದ ಯಾವ ಕಾರ್ಯವು ಉಳಿದಿರುತ್ತದೆ? (ರಾಜನು ಅಂತಹ ಸಂದರ್ಭದಲ್ಲಿ ಯಾವ ಕಾರ್ಯವನ್ನು ಮಾಡುವುದರಿಂದ ಪಾರಾಗಬಲ್ಲನು?)"

ಭೀಷ್ಮನು ಹೇಳುತ್ತಾನೆ :

ಕ್ಷಿಪ್ರಂ ವಾ ಸಂಧಿಕಾಮಃ ಸ್ಯಾತ್ಕ್ಷಿಪ್ರಂ ವಾ ತೀಕ್ಷ್ಣವಿಕ್ರಮಃ ।
ತದಾಪನಯನಂ ಕ್ಷಿಪ್ರಮೇತಾವತ್ಸಾಮ್ಪರಾಯಿಕಮ್ ॥೧೦॥

"ಯುಧಿಷ್ಠಿರ! ಅಂತಹ ಸಮಯದಲ್ಲಿ ರಾಜನು ಶೀಘ್ರವಾಗಿ ಶತ್ರುವಿನೊಡನೆ ಸಂಧಿಯನ್ನಾದರೂ ಮಾಡಿಕೊಳ್ಳಬೇಕು. ಅಥವಾ ಉಗ್ರವಾದ ಪರಾಕ್ರಮವನ್ನು ಪ್ರದರ್ಶಿಸುತ್ತಾ ಆಕ್ರಮಣಮಾಡುವ ಶತ್ರುವನ್ನು ಹಿಮ್ಮೆಟ್ಟಿಸಲಾದರೂ ಶೀಘ್ರವಾಗಿ ಪ್ರಯತ್ನಿಸಬೇಕು. ಒಂದು ವೇಳೆ ಧರ್ಮಯುದ್ಧದಿಂದ ಮರಣವು ಸಂಭವಿಸಿದರೆ ಪುಣ್ಯಲೋಕವು ಲಭಿಸುತ್ತದೆ.

ಅನುರಕ್ತೇನ ಪುಷ್ಟೇನ ಹೃಷ್ಟೇನ ಜಗತೀಪತಿಃ ।
ಅಲ್ಪೇನಾಪಿ ಹಿ ಸೈನ್ಯೇನ ಮಹೀಂ ಜಯತಿ ಭೂಮಿಪಃ ॥೧೧॥

ರಾಜನಲ್ಲಿಯೇ ಅನುರಕ್ತವಾದ, ಪ್ರಿಯವಾದ, ಹೃಷ್ಟ-ಪುಷ್ಟವಾದ ಸ್ವಲ್ಪವೇ ಸೈನ್ಯದಿಂದಲೇ ರಾಜನು ಅಖಂಡಭೂಮಂಡಲವನ್ನಾದರೂ ಜಯಿಸಲು ಸಮರ್ಥನಾಗುತ್ತಾನೆ.

ಹತೋ ವಾ ದಿವಮಾರೋಹೇದ್ಧತ್ವಾ ವಾ ಕ್ಷಿತಿಮಾವಸೇತ್ ।
ಯುದ್ಧೇ ಹಿ ಸಂತ್ಯಜನ್ಪ್ರಾಣಾಞ್ಶಕ್ರಸ್ಯೈತಿ ಸಲೋಕತಾಮ್ ॥೧೨॥

ಒಂದು ವೇಳೆ ಯುದ್ಧದಲ್ಲಿ ರಾಜನು ಮರಣಹೊಂದಿದರೆ ಸ್ವರ್ಗಾರೋಹಣವನ್ನು ಮಾಡುತ್ತಾನೆ. ಪರಾಕ್ರಮದಿಂದ ಶತ್ರುವನ್ನು ಕೊಂದರೆ ರಾಜ್ಯಭೋಗವನ್ನು ಅನುಭವಿಸುತ್ತಾನೆ. ಯುದ್ಧದಲ್ಲಿ ಪ್ರಾಣತೊರೆದವನು ಇಂದ್ರನ ಲೋಕಕ್ಕೆ ಹೋಗುತ್ತಾನೆ.

ಸರ್ವಲೋಕಾಗಮಂ ಕೃತ್ವಾ ಮೃದುತ್ವಂ ಗನ್ತುಮೇವ ಚ ।
ವಿಶ್ವಾಸಾದ್ವಿನಯಂ ಕುರ್ಯಾದ್ವಿಶ್ವಸೇಚ್ಚಾಪ್ಯುಪಾಯತಃ ॥೧೩॥

ದುರ್ಬಲನಾದ ರಾಜನು ಶತ್ರುವಿನಲ್ಲಿ ಮೃದುತ್ವವನ್ನುಂಟುಮಾಡಲು ಶತ್ರುಪಕ್ಷದಲ್ಲಿರುವ ಎಲ್ಲ ಜನರ ಪ್ರೀತಿಯನ್ನೂ ಸಂಪಾದನೆಮಾಡಿ ನಂಬಿಕೆಯನ್ನುಂಟುಮಾಡಿ ವಿನಯವನ್ನು ತೋರ್ಪಡಿಸಬೇಕು. ಉಪಾಯವಾಗಿ ಯುದ್ಧವು ನಿಲ್ಲುವಂತೆ ಮಾಡಬೇಕು. ತಾತ್ಕಾಲಿಕವಾಗಿ ಶತ್ರುವಿನಲ್ಲಿ ವಿಶ್ವಾಸವನ್ನೂ ಇಡಲೇಬೇಕು. (**ಸರ್ವಲೋಕಾಗಮಂ**–ಎಂಬುದಕ್ಕೆ ವ್ಯಾಖ್ಯಾನಕಾರರು : **ಸರ್ವಲೋಕಸ್ಯ ಪ್ರಸಿದ್ಧಂ ಆಗಮಂ ಶಪಥಾದ್ಯುಪಾಯಂ ಛಲಂ ಮಾಭೂದಿತಿ ಬುದ್ಧ್ಯಾ ಕೃತ್ವಾ**–ಸರ್ವಲೋಕ ಪ್ರಸಿದ್ಧವಾದ ಶಪಥವೇ ಮೊದಲಾದ ಉಪಾಯವನ್ನು ಇದು ಮೋಸವೆಂದು ಶತ್ರುಗಳು ಭಾವಿಸಬಾರದೆಂಬ ಬುದ್ಧಿಯಿಂದ ಮಾಡಿ **ವಿಶ್ವಾಸಾತ್** =**ವಿಶ್ವಾಸಂ ಪ್ರಾಪಯ್ಯ** = ವಿಶ್ವಾಸವನ್ನು ಹೊಂದಿಸಿ (ನಂಬಿಕೆಯನ್ನು ಹುಟ್ಟಿಸಿ) **ವಿನಯಂ ಕುರ್ಯಾತ್** =ವಿನಯವನ್ನು ತೋರಿಸಬೇಕು. **ಮೃದುರ್ಭವೇತ್** =ಮೃದುವಾಗಬೇಕು. **ನ ತು ಯುದ್ಧಮೇವ ಹಠೇನ ಶ್ರಯೇತ** =ಹಠದಿಂದ ಯುದ್ಧವನ್ನೇ ಮುಂದುವರಿಸಬಾರದು–ಎಂದು ವ್ಯಾಖ್ಯಾನಿಸಿದ್ದಾರೆ.)

ಅಪಚಿಕ್ರಮಿಷುಃ ಕ್ಷಿಪ್ರಂ ಸಾಮ್ನಾ ವಾ ಪರಿಸಾನ್ತ್ವಯನ್ ।
ವಿಲಙ್ಘಯಿತ್ವಾ ಮನ್ತ್ರೇಣ ತತಃ ಸ್ವಯಮುಪಕ್ರಮೇತ್ ॥೧೪॥

ಅಥವಾ ಶತ್ರುಪಕ್ಷದ ಮಂತ್ರಿಗಳನ್ನೂ ಸೇನಾಪತಿಗಳನ್ನೂ ಮಧುರ ವಾದ ಮಾತುಗಳಿಂದ ಪ್ರಸನ್ನಗೊಳಿಸುತ್ತಾ ದುರ್ಗದಿಂದ ಬಹಳ ವೇಗವಾಗಿ ಪಲಾಯನಮಾಡಲು ಪ್ರಯತ್ನಿಸಬೇಕು. ಸ್ವಲ್ಪಕಾಲವು ಕಳೆದನಂತರ ಶ್ರೇಷ್ಠಪುರುಷರೊಡನೆ ಮಂತ್ರಾಲೋಚನೆಯನ್ನು ಮಾಡಿ ತಾನು ಕಳೆದು ಕೊಂಡಿರುವ ಸಂಪತ್ತನ್ನೂ ಮತ್ತು ರಾಜ್ಯವನ್ನೂ ಪುನಃ ಪಡೆದುಕೊಳ್ಳಲು ಪ್ರಯತ್ನಿಸಬೇಕು.”

೧೩೧ನೆಯ ಅಧ್ಯಾಯವು ಮುಗಿಯಿತು.

೧೩೨ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣರ ಮತ್ತು ರಾಜರ ಧರ್ಮದ ವರ್ಣನೆ : ಧರ್ಮದ ಸೂಕ್ಷ್ಮಗತಿಯ ವಿವರಣೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಹೀನೇ ಪರಮಕೇ ಧರ್ಮೇ ಸರ್ವಲೋಕಾಭಿಸಂಹಿತೇ ।
ಸರ್ವಸ್ಮಿನ್ದಸ್ಯುಸಾದ್ಭೂತೇ ಪೃಥಿವ್ಯಾಮುಪಜೀವನೇ ॥೧॥

ಕೇನಸ್ಮಿದ್ಬ್ರಾಹ್ಮಣೋ ಜೀವೇಜ್ಜಘನ್ಯೇ ಕಾಲ ಆಗತೇ ।
ಅಸಂತ್ಯಜನ್ಪುತ್ರಪೌತ್ರಾನನುಕ್ರೋಶಾತ್ಪಿತಾಮಹ ॥೨॥

“ಪಿತಾಮಹನೇ! ಸರ್ವಲೋಕಕ್ಕೂ ಹಿತಕರವಾದ ಪರಮಶ್ರೇಷ್ಠ ವಾದ ರಾಜಧರ್ಮವು ನಾಶವಾಗಲಾಗಿ, ಭೂಮಂಡಲದ ಪ್ರಜೆಗಳ ಜೀವನ ಸಾಧನಗಳೆಲ್ಲವೂ ದಸ್ಯುಗಳ ಅಧಿಕಾರವ್ಯಾಪ್ತಿಗೆ ಸೇರಿ ಅತ್ಯಂತಸಂಕಟಮಯ ವಾದ, ನಿಹೀನವಾದ ಕಾಲವು ಸನ್ನಿಹಿತವಾದ ಸಮಯದಲ್ಲಿ ಮಕ್ಕಳನ್ನೂ ಮೊಮ್ಮಕ್ಕಳನ್ನೂ ದಯಾಪರನಾಗಿ ಪರಿತ್ಯಾಗಮಾಡದೇ ಇರುವ ಬ್ರಾಹ್ಮಣನು ಯಾವ ವೃತ್ತಿಯಿಂದ ಜೀವನವನ್ನು ನಡೆಸಬೇಕು?”

ಭೀಷ್ಮನು ಹೇಳುತ್ತಾನೆ :

ವಿಜ್ಞಾನಬಲಮಾಸ್ಥಾಯ ಜೀವಿತವ್ಯಂ ತಥಾಗತೇ ।
ಸರ್ವಂ ಸಾಧ್ವರ್ಥಮೇವೇದಮಸಾಧ್ವರ್ಥಂ ನ ಕಿಂಚನ ॥೩॥

"ಧರ್ಮಜ! ಅಂತಹ ಸಂದರ್ಭವು ಒದಗಿಬಂದಲ್ಲಿ ಬ್ರಾಹ್ಮಣನು ತನ್ನ ವಿಜ್ಞಾನದ ಬಲವನ್ನು ಆಶ್ರಯಿಸಿ ಜೀವನನಿರ್ವಹಣೆಯನ್ನು ಮಾಡಬೇಕು. ಈ ಪ್ರಪಂಚದಲ್ಲಿರುವ ಸಕಲೈಶ್ವರ್ಯಗಳೂ ಸಾಧುಗಳ ಸಲುವಾಗಿಯೇ ಇರುವುವೇ ಹೊರತು ಅಸಾಧುಗಳ (ದುಷ್ಟರ) ಸಲುವಾಗಿ ಸ್ವಲ್ಪವಾದರೂ ಇರುವುದಿಲ್ಲ.

ಅಸಾಧುಭ್ಯೋಽರ್ಥಮಾದಾಯ ಸಾಧುಭ್ಯೋ ಯಃ ಪ್ರಯಚ್ಛತಿ ।
ಆತ್ಮಾನಂ ಸಂಕ್ರಮಂ ಕೃತ್ವಾ ಕೃಚ್ಛ್ರಧರ್ಮವಿದೇವ ಸಃ ॥೪॥

ಯಾವನು ತನ್ನನ್ನೇ ಸೇತುವನ್ನಾಗಿ (ಒಡ್ಡು) ಮಾಡಿಕೊಂಡು ದುಷ್ಟಜನರಿಂದ ಹಣವನ್ನು ತೆಗೆದುಕೊಂಡು ಸತ್ಪುರುಷರಿಗೆ ಕೊಡುತ್ತಾನೆಯೋ–ಅವನೇ ಆಪದ್ಧರ್ಮವನ್ನು ತಿಳಿದಿರತಕ್ಕವನು.

ಆಕಾಂಕ್ಷನ್ನಾತ್ಮನೋ ರಾಜ್ಯಂ ರಾಜ್ಯೇ ಸ್ಥಿತಿಮಕೋಪಯನ್ ।
ಅದತ್ತಮೇವಾದದೀತ ದಾತುರ್ವಿತ್ತಂ ಮಮೇತಿ ಚ ॥೫॥

ತನ್ನ ರಾಜ್ಯವನ್ನು ಪುನಃ ಪಡೆದುಕೊಳ್ಳಬೇಕೆಂಬ ಇಚ್ಛೆಯಿಂದಿರುವ ರಾಜ್ಯಭ್ರಷ್ಟನಾದ ರಾಜನು–ರಾಜ್ಯದ ಪರಿಸ್ಥಿತಿಯನ್ನು ಹದಗೆಡಿಸದೇ ಪ್ರಜೆಗಳ ರಕ್ಷಣೆಗಾಗಿ ಧನಿಕರಲ್ಲಿರುವ ಧನವು ತನ್ನದೇ ಆಗಿರುವುದೆಂದು ಭಾವಿಸಿ, ಧನಿಕರು ಕೊಡದಿದ್ದರೂ ಅವರಿಂದ ಬಲಾತ್ಕಾರವಾಗಿ ಧನವನ್ನು ತೆಗೆದುಕೊಳ್ಳಬೇಕು.

ವಿಜ್ಞಾನಬಲಪೂತೋ ಯೋ ವರ್ತತೇ ನಿನ್ದಿತೇಷ್ವಪಿ ।
ವೃತ್ತಿವಿಜ್ಞಾನವಾನ್ಧೀರಃ ಕಸ್ತಂ ವಾ ವಕ್ತುಮರ್ಹತಿ ॥೬॥

ತತ್ತ್ವಜ್ಞಾನದ ಪ್ರಭಾವದಿಂದ ಪವಿತ್ರನಾಗಿರುವ, ಯಾವ ವೃತ್ತಿಯಿಂದ ಯಾವ ಕಾರ್ಯವು ನಿರ್ವಾಹವಾಗುವುದೆಂದು ತಿಳಿದಿರುವ, ಧೀರನಾದ

ರಾಜನು ಆಪತ್ಕಾಲದಲ್ಲಿ ಪ್ರಜೆಗಳನ್ನು ಉದ್ಧರಿಸಲು ನಿಂದಿತವಾದ ಕಾರ್ಯಗಳಲ್ಲಿ ಪ್ರವೃತ್ತನಾದರೂ ಅವನನ್ನು ಯಾರು ತಾನೇ ನಿಂದಿಸುತ್ತಾರೆ?

ಯೇಷಾಂ ಬಲಕೃತಾ ವೃತ್ತಿಸ್ತೇಷಾಮನ್ಯಾ ನ ರೋಚತೇ ।
ತೇಜಸಾಭಿಪ್ರವರ್ತನ್ತೇ ಬಲವನ್ತೋ ಯುಧಿಷ್ಠಿರ ॥೭॥

ಯುಧಿಷ್ಠಿರ! ಯಾರು ಬಲ ಮತ್ತು ಪರಾಕ್ರಮಗಳಿಂದ ತಮ್ಮ ಜೀವನವನ್ನು ನಿರ್ವಹಿಸುತ್ತಿರುವರೋ–ಅಂತಹವರಿಗೆ ಬೇರೆಯ ವೃತ್ತಿಯು ರುಚಿಸುವುದಿಲ್ಲ. ಬಲಿಷ್ಠರಾದ ಪುರುಷರು ತೇಜೋಯುಕ್ತವಾದ ಕರ್ಮಗಳಿಂದಲೇ ಜೀವನನಿರ್ವಹಣೆಯನ್ನು ಮಾಡುತ್ತಾರೆ.

ಯದ್ವೈವ ಪ್ರಾಕೃತಂ ಶಾಸ್ತ್ರಮವಿಶೇಷೇಣ ವರ್ತತೇ ।
ತದ್ವೈವಮಭ್ಯಸೇದೇವಂ ಮೇಧಾವೀ ವಾಪ್ಯಥೋತ್ತರಮ್ ॥೮॥

ತನ್ನ ರಾಷ್ಟ್ರದಿಂದಲೂ, ಬೇರೆಯವರ ರಾಷ್ಟ್ರದಿಂದಲೂ ಧನವನ್ನು ತಂದು ಬೊಕ್ಕಸವನ್ನು ತುಂಬಬೇಕು–ಎಂಬ ಸಾಮಾನ್ಯರೀತಿಯಲ್ಲಿರುವ ಆಪದ್ಧರ್ಮೋಪಯೋಗಿಯಾದ ಪ್ರಾಕೃತಶಾಸ್ತ್ರವನ್ನೇ ಅಭ್ಯಸಿಸಿ ತನ್ನ ಜೀವನವನ್ನು ನಡೆಸಬೇಕು. ಮೇಧಾವಿಯಾದವನು ತನ್ನ ದೇಶದಲ್ಲಿರುವ ಧನಿಕರಿಂದಲೂ–ಶಿಕ್ಷೆಗೆ ಅರ್ಹರಾದವರಿಂದಲೂ ಧನವನ್ನು ಸಂಗ್ರಹಿಸಬೇಕೆಂಬ ಸಾಮಾನ್ಯಶಾಸ್ತ್ರಕ್ಕಿಂತಲೂ ಉತ್ತಮವಾದ ಶಾಸ್ತ್ರವನ್ನು ಅಭ್ಯಸಿಸಬೇಕು. (ಇದು ವ್ಯಾಖ್ಯಾನಕಾರರ ವ್ಯಾಖ್ಯೆಯನ್ನು ಅನುಸರಿಸಿ ಮಾಡಿರುವ ವಿವರಣೆಯಾಗಿದೆ. ಈ ಶ್ಲೋಕಕ್ಕೆ ಪಾಠಾಂತರವು ಹೀಗಿದೆ : **ಯದೇವ ಪ್ರಕೃತಂ ಶಾಸ್ತ್ರಮವಿಶೇಷೇಣ ವಿನ್ದತಿ । ತದೇವ ಮಧ್ಯಾಃ ಸೇವನ್ತೇ ಮೇಧಾವೀ ಚಾಪ್ಯಥೋತ್ತರಮ್ ॥** ಸಂದರ್ಭಕ್ಕೆ ತಕ್ಕಂತೆ ಯಾವ ಶಾಸ್ತ್ರವನ್ನು ಹೊಂದುತ್ತಾರೆಯೋ (ರಾಜರಿಗೆ ಹೊಳೆಯುತ್ತದೆಯೋ) ಅದನ್ನೇ ಯಾವ ವಿಶೇಷವೂ ಇಲ್ಲದೆ (ವಿಶೇಷಪ್ರಯತ್ನವೂ ಇಲ್ಲದೇ) ಮಧ್ಯಮವರ್ಗದ ರಾಜರು ಆಶ್ರಯಿಸುತ್ತಾರೆ. ಮೇಧಾವಿಗಳಾದವರು ಇದಕ್ಕಿಂತಲೂ ಉತ್ತಮವಾದ ಮಾರ್ಗವನ್ನು ಅವಲಂಬಿಸಿರುತ್ತಾರೆ.)

ಋತ್ವಿಕ್ಪುರೋಹಿತಾಚಾರ್ಯಾನ್ಸತ್ಕೃತಾನಭಿಸತ್ಕೃತಾನ್ ।
ನ ಬ್ರಾಹ್ಮಣಾನ್ಘಾತಯೀತ ದೋಷಾನ್ಪ್ರಾಪ್ನೋತಿ ಘಾತಯನ್ ॥೯॥

ಎಂತಹ ಆಪತ್ಕಾಲದಲ್ಲಿಯೇ ಆದರೂ–ಸತ್ಕೃತರಾದ ಋತ್ವಿಜರನ್ನೂ, ವಿಶೇಷವಾಗಿ ಸತ್ಕಾರವನ್ನು ಪಡೆದ ಆಚಾರ್ಯರನ್ನೂ, ಪುರೋಹಿತರನ್ನೂ ಮತ್ತು ಬ್ರಾಹ್ಮಣರನ್ನೂ–ಅವರು ಧನಿಕರೇ ಆಗಿದ್ದರೂ–ಅವರಿಂದ ಧನವನ್ನು ತೆಗೆದುಕೊಂಡು ಹಿಂಸಿಸಬಾರದು. ಒಂದು ವೇಳೆ ರಾಜನು ಧನಾಪಹರಣದ ಮೂಲಕವಾಗಿ ಋತ್ವಿಗಾಚಾರ್ಯ–ಬ್ರಾಹ್ಮಣರನ್ನು ಪೀಡಿಸಿದರೆ ಪಾಪಕ್ಕೆ ಭಾಗಿಯಾಗುತ್ತಾನೆ.

ಏತತ್ಪ್ರಮಾಣಂ ಲೋಕಸ್ಯ ಚಕ್ಷುರೇತತ್ಸನಾತನಮ್ ।
ತತ್ಪ್ರಮಾಣೋಽವಗಾಹೇತ ತೇನ ತತ್ಸಾಧ್ವಸಾಧು ವಾ ॥೧೦॥

ಆಪತ್ಕಾಲದ ಈ ಧರ್ಮವು ಲೋಕಕ್ಕೇ ಪ್ರಮಾಣಭೂತವಾಗಿದೆ. ಇದು ಸನಾತನಧರ್ಮದ ದೃಷ್ಟಿಯಾಗಿದೆ. ರಾಜನು ಇದನ್ನೇ ಪ್ರಮಾಣವನ್ನಾಗಿಟ್ಟುಕೊಂಡು ವ್ಯವಹಾರಕ್ಷೇತ್ರದಲ್ಲಿ ಪ್ರವೇಶಿಸಬೇಕು. ಇದಕ್ಕೆ ಅನುಸಾರವಾಗಿಯೇ ಆಪತ್ಕಾಲದಲ್ಲಿ ರಾಜನು ಸಾಧುವಾದ ಅಥವಾ ಅಸಾಧುವಾದ ಕಾರ್ಯವನ್ನು ನಿರ್ಣಯಿಸಬೇಕು.

ಬಹವೋ ಗ್ರಾಮವಾಸ್ತವ್ಯಾ ರೋಷಾದ್ಬ್ರೂಯುಃ ಪರಸ್ಪರಮ್ ।
ನ ತೇಷಾಂ ವಚನಾದ್ರಾಜಾ ಸತ್ಕುರ್ಯಾದ್ಘಾತಯೀತ ವಾ ॥೧೧॥

ಗ್ರಾಮವಾಸಿಗಳಾದ ಅನೇಕಜನರು ಕ್ರೋಧವಶರಾಗಿ ರಾಜನ ಬಳಿಗೆ ಬಂದು ಪರಸ್ಪರವಾಗಿ ಆಪಾದನೆಗಳನ್ನು ಹೊರೆಸುತ್ತಾರೆ. ಆದರೆ ಅವರ ಮಾತನ್ನೇ ಆಧರಿಸಿ ರಾಜನು ಯಾರನ್ನೂ ಸತ್ಕರಿಸಲೂಬಾರದು ; ಶಿಕ್ಷಿಸಲೂ ಬಾರದು.

ನ ವಾಚ್ಯಃ ಪರಿವಾದೋಽಯಂ ನ ಶ್ರೋತವ್ಯಃ ಕಥಂಚನ ।
ಕರ್ಣಾವಥ ಪಿಧಾತವ್ಯೌ ಪ್ರಸ್ಥೇಯಂ ಚಾನ್ಯತೋ ಭವೇತ್ ॥೧೨॥

ಪರನಿಂದೆಯನ್ನು ಮಾಡಲೂಬಾರದು ; ಪರನಿಂದೆಯನ್ನು ಯಾವುದೇ ಕಾರಣದಿಂದಲೂ ಕೇಳಲೂಬಾರದು. ಯಾರಾದರೂ ಪರನಿಂದೆಯನ್ನು ಮಾಡುತ್ತಿದ್ದರೆ ಕಿವಿಗಳನ್ನು ಭದ್ರವಾಗಿ ಮುಚ್ಚಿಕೊಳ್ಳಬೇಕು ಅಥವಾ ಅಲ್ಲಿಂದ ಬೇರೆಯ ಕಡೆಗಾದರೂ ಹೊರಟುಹೋಗಬೇಕು.

ಅಸತಾಂ ಶೀಲಮೇತದ್ವೈ ಪರಿವಾದೋಽಥ ಪೈಶುನಮ್ ।
ಗುಣಾನಾಮೇವ ವಕ್ತಾರಃ ಸನ್ತಃ ಸತ್ಸು ನರಾಧಿಪ ॥೧೩॥

ನರೇಶ್ವರ! ಇತರರನ್ನು ನಿಂದಿಸುವುದೂ ಮತ್ತು ಮತ್ತೊಬ್ಬರ ಮೇಲೆ ಚಾಡಿ ಹೇಳುವುದೂ ದುಷ್ಟರ ಸ್ವಭಾವವಾಗಿರುತ್ತದೆ. ಸತ್ಪುರುಷರಾದರೋ ಸಜ್ಜನರ ಸಂಘಗಳಲ್ಲಿ ಇತರರ ಗುಣಗಳನ್ನೇ ಗಾನಮಾಡುತ್ತಿರುತ್ತಾರೆ.

ಯಥಾ ಸುಮಧುರೌ ದಮ್ಯೌ ಸುದನ್ತೌ ಸಾಧುವಾಹಿನೌ ।
ಧುರಮುದ್ಯಮ್ಯ ವಹತಸ್ತಥಾ ವರ್ತೇತ ವೈ ನೃಪಃ ॥೧೪॥

ಯಾವ ರೀತಿಯಲ್ಲಿ ಮನೋಹರವಾದ ರೂಪಗಳುಳ್ಳ, ಸುಶಿಕ್ಷಿತವಾದ, ಚೆನ್ನಾಗಿ ಹೊರೆಯನ್ನು ಹೊರುವ ಎರಡು ಎತ್ತುಗಳು–ಭಾರವನ್ನೆತ್ತಿಕೊಂಡು ನಡೆದು ಹೋಗುತ್ತವೆಯೋ–ಅದೇ ರೀತಿಯಲ್ಲಿ ರಾಜನಾದವನೂ ರಾಜ್ಯಭಾರವನ್ನು ಚೆನ್ನಾಗಿ ನಿರ್ವಹಿಸಬೇಕು.

ಯಥಾ ಯಥಾಸ್ಯ ಬಹವಃ ಸಹಾಯಾಃ ಸ್ಯುಸ್ತಥಾ ಪರೇ ।
ಆಚಾರಮೇವ ಮನ್ಯನ್ತೇ ಗರೀಯೋ ಧರ್ಮಲಕ್ಷಣಮ್ ॥೧೫॥

ಯಾವ ವಿಧವಾದ ಆಚಾರ-ವ್ಯವಹಾರಗಳಿಂದ ರಾಜನಿಗೆ ಇತರ ಅನೇಕ ಸಹಾಯಕರು ಲಭಿಸುವರೋ–ಅಂತಹುದೇ ಆಚಾರ-ವ್ಯವಹಾರಗಳನ್ನಿಟ್ಟುಕೊಳ್ಳಬೇಕು. ಧರ್ಮವನ್ನು ತಿಳಿದವರು ಸದಾಚಾರ-ಸದ್ವ್ಯವಹಾರಗಳೇ ಧರ್ಮದ ಮುಖ್ಯವಾದ ಲಕ್ಷಣಗಳೆಂದು ಹೇಳುತ್ತಾರೆ.

ಅಪರೇ ನೈವಮಿಚ್ಛನ್ತಿ ಯೇ ಶಙ್ಖಲಿಖಿತಪ್ರಿಯಾಃ ।
ಮಾತ್ಸರ್ಯಾದಥವಾ ಲೋಭಾನ್ನ ಬ್ರೂಯುರ್ವಾಕ್ಯಮೀದೃಶಂ ॥೧೬॥

ಆದರೆ ಶಂಖ-ಲಿಖಿತಮುನಿಗಳಿಗೆ ಪ್ರಿಯರಾದವರು (ಶಂಖ-ಲಿಖಿತ ಸ್ಮೃತಿಯ ಅಭಿಪ್ರಾಯವನ್ನು ಅನುಮೋದಿಸುವವರು) ಋತ್ವಿಗಾಚಾರ್ಯ-ಬ್ರಾಹ್ಮಣರಿಂದ ಧನವನ್ನು ತೆಗೆದುಕೊಳ್ಳಬಾರದು–ಇವೇ ಮುಂತಾದ ಅಭಿಪ್ರಾಯಗಳನ್ನು ಸ್ವೀಕರಿಸುವುದಿಲ್ಲ. ಆದರೆ ಅವರು ಈರ್ಷ್ಯೆಯಿಂದಾಗಲೀ ಮಾತ್ಸರ್ಯದಿಂದಾಗಲೀ ಹೀಗೆ ಮಾತನಾಡುವುದಿಲ್ಲ. ಧರ್ಮಾನುಸಾರವಾಗಿಯೇ ಅವರೂ ಮಾತನಾಡುತ್ತಾರೆ. (ಧರ್ಮದ ಪ್ರತಿಪಾದನೆಯಲ್ಲಿ ಅವರಿಗೂ ನಮಗೂ ಸ್ವಲ್ಪ ಮತಭೇದವಿದೆ.)

ಆರ್ಷಮಪ್ಯತ್ರ ಪಶ್ಯನ್ತಿ ವಿಕರ್ಮಸ್ಥಸ್ಯ ಪಾತನಮ್ ।
ನ ತಾದೃಕ್ಸದೃಶಂ ಕಿಞ್ಚಿತ್ಪ್ರಮಾಣಂ ದೃಶ್ಯತೇ ಕ್ವಚಿತ್ ॥೧೭॥

ಶಾಸ್ತ್ರಕ್ಕೆ ವಿರೋಧವಾಗಿ ವರ್ತಿಸುವವನು ಗುರುವೇ ಆಗಿದ್ದರೂ–ಅವನೂ ಶಿಕ್ಷಾರ್ಹನೆಂಬುದಕ್ಕೆ ಶಾಸ್ತ್ರಪ್ರಮಾಣವನ್ನು ಹೇಳುತ್ತಾರೆ. ಋಷಿಗಳ ಮಾತಿಗೆ ಅನುರೂಪವಾದ ಪ್ರಮಾಣವು ಬೇರೆ ಯಾವುದೂ ಇರುವುದಿಲ್ಲ.

ದೇವತಾಶ್ಚ ವಿಕರ್ಮಸ್ಥಂ ಪಾತಯನ್ತಿ ನರಾಧಮಮ್ ।
ವ್ಯಾಜೇನ ವಿನ್ದನ್ವಿತ್ತಂ ಹಿ ಧರ್ಮಾತ್ಸಪರಿಹೀಯತೇ ॥೧೮॥

ದೇವತೆಗಳೂ ಕೂಡ ಶಾಸ್ತ್ರಕ್ಕೆ ವಿರೋಧವಾಗಿ ಕರ್ಮಮಾಡುವ ನರಾಧಮನನ್ನು ನರಕದಲ್ಲಿ ಬೀಳಿಸುತ್ತಾರೆ. ಆಪತ್ತಿನಲ್ಲಿಲ್ಲದಿದ್ದರೂ ಆಪತ್ತಿನಲ್ಲಿರುವೆನೆಂಬ ವ್ಯಾಜದಿಂದ ಧನವನ್ನು ಸಂಗ್ರಹಿಸುವವನು ಧರ್ಮ ಭ್ರಷ್ಟನಾಗುತ್ತಾನೆ.

ಸರ್ವತಃ ಸತ್ಕೃತಃ ಸದ್ಭಿರ್ಭೂತಿಪ್ರವರಕಾರಣೈಃ ।
ಹೃದಯೇನಾಭ್ಯನುಜ್ಞಾತೋ ಯೋ ಧರ್ಮಸ್ತಂ ವ್ಯವಸ್ಯತಿ ॥೧೯॥

ಐಶ್ವರ್ಯದ ಪ್ರಾದುರ್ಭಾವಕ್ಕೆ ಕಾರಣರಾದ ಸತ್ಪುರುಷರಿಂದ ಸರ್ವ ಪ್ರಕಾರದಿಂದಲೂ ಆದರಿಸಲ್ಪಟ್ಟ, ಹೃದಯದಿಂದಲೂ ಅನುಮೋದಿಸಲ್ಪಟ್ಟ ಯಾವ ಧರ್ಮವಿರುವುದೋ–ಆ ಧರ್ಮವನ್ನೇ ರಾಜನೂ ಅನುಸರಿಸಬೇಕು.

ಯಶ್ಚತುರ್ಗುಣಸಮ್ಪನ್ನಂ ಧರ್ಮಂ ಬ್ರೂಯಾತ್ಸ ಧರ್ಮವಿತ್ ।
ಅಹೇರಿವ ಹಿ ಧರ್ಮಸ್ಯ ಪದಂ ದುಃಖಂ ಗವೇಷಿತುಮ್ ॥೨೦॥

ವೇದವಿಹಿತವಾದ, ಸ್ಮೃತಿಗಳಿಂದ ಅನುಮೋದಿತವಾದ, ಸಜ್ಜನ ಸೇವಿತವಾದ ಮತ್ತು ತನಗೂ ಪ್ರಿಯವಾಗಿರುವ ಧರ್ಮವನ್ನೇ ಚತುರ್ಗುಣ ಗಳಿಂದ ಸಂಪನ್ನವಾದ ಧರ್ಮವೆಂದು ಹೇಳುತ್ತಾರೆ. (ಆನ್ವೀಕ್ಷಕೀ, ತ್ರಯೀ, ವಾರ್ತಾ, ದಂಡನೀತಿಗಳಿಗೆ ಅನುಗುಣವಾದುದು.) ಯಾವನು ಈ ಚತುರ್ಗುಣಸಂಪನ್ನವಾದ ಧರ್ಮವನ್ನು ಉಪದೇಶಮಾಡುವನೋ–ಅವನು ಧರ್ಮವಿದನೆನಿಸಿಕೊಳ್ಳುತ್ತಾನೆ. ಸರ್ಪದ ಪದಚಿಹ್ನೆಗಳನ್ನು ತಿಳಿಯಲು ಸಾಧ್ಯವಾಗದಂತೆ–ಧರ್ಮದ ಯಥಾರ್ಥಸ್ವರೂಪವನ್ನು ತಿಳಿಯುವುದೂ ಅತ್ಯಂತಕಠಿನವೇ ಸರಿ.

ಯಥಾ ಮೃಗಸ್ಯ ವಿದ್ಧಸ್ಯ ಪದಮೇಕಂ ಪದಂ ನಯೇತ್ ।
ಲಕ್ಷೇದ್ರುಧಿರಲೇಪೇನ ತಥಾ ಧರ್ಮಪದಂ ನಯೇತ್ ॥೨೧॥

ಯಾವ ರೀತಿಯಲ್ಲಿ ಬಾಣದಿಂದ ಪ್ರಹೃತವಾದ ಮೃಗದ ಒಂದು ಕಾಲು ರಕ್ತದ (ಕಾಲಿನಿಂದ ಸುರಿಯುತ್ತಿರುವ ರಕ್ತದ) ಲೇಪನದಿಂದ ಗುರುತನ್ನುಂಟುಮಾಡಿ ಮೃಗವಿರುವ ಸ್ಥಳಕ್ಕೆ ವ್ಯಾಧನನ್ನು ಒಯ್ಯು ವುದೋ–ಅದೇ ರೀತಿಯಲ್ಲಿ ಮೇಲೆ ಹೇಳಿದ ನಾಲ್ಕು ಗುಣಗಳಿಂದ ಯುಕ್ತ ವಾಗಿರುವ ಧರ್ಮಾಚರಣೆಯು ಧರ್ಮಪದಕ್ಕೆ ಒಯ್ಯುತ್ತದೆ.

ಯುಧಿಷ್ಠಿರ! ಹೀಗೆ ಸತ್ಪುರುಷರು ಯಾವ ಮಾರ್ಗವನ್ನು ಅನುಸರಿಸಿ ಹೋಗಿರುವರೋ–ಆ ಮಾರ್ಗವನ್ನೇ ಅನುಸರಿಸಿ ಹೋಗುವುದು ಯುಕ್ತವಾಗಿದೆ. ರಾಜರ್ಷಿಗಳ ಸದಾಚಾರ-ಸದ್ವ್ಯವಹಾರಗಳನ್ನು ನೀನೂ ಮನನಮಾಡು.”

೧೩೨ನೆಯ ಅಧ್ಯಾಯವು ಮುಗಿಯಿತು.

೧೩೩ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ರಾಜನು ಕೋಶವನ್ನು ಸಂಗ್ರಹಿಸುವುದರ ಆವಶ್ಯಕತೆ : ದಸ್ಯುವೃತ್ತಿಯ ನಿಂದನೆ

ಮಹಾರಾಜ! ಭೀಷ್ಮನು ಆಪದ್ಧರ್ಮವನ್ನು ಮುಂದುವರಿಸಿ ಹೇಳುತ್ತಾನೆ:

ಸ್ವರಾಷ್ಟ್ರಾತ್ಪರರಾಷ್ಟ್ರಾಚ್ಚ ಕೋಶಂ ಸಂಜನಯೇನ್ನೃಪಃ ।
ಕೋಶಾದ್ಧಿ ಧರ್ಮಃ ಕೌನ್ತೇಯ ರಾಜ್ಯಮೂಲಂ ಚ ವರ್ಧತೇ ॥೧॥

“ಯುಧಿಷ್ಠಿರ! ರಾಜನಾದವನು ತನ್ನ ರಾಜ್ಯದಿಂದಲೂ–ಶತ್ರುಗಳ ರಾಜ್ಯಗಳಿಂದಲೂ ಧನವನ್ನು ಸಂಗ್ರಹಿಸಿ ಬೊಕ್ಕಸವನ್ನು ತುಂಬಬೇಕು. ಕೋಶದಿಂದಲೇ ಧರ್ಮವು ವೃದ್ಧಿಹೊಂದುತ್ತದೆ. ರಾಜ್ಯದ ಮೂಲವೂ ಅಭಿವೃದ್ಧಿಯನ್ನು ಹೊಂದುತ್ತದೆ. (ರಾಜ್ಯವೂ ಸುದೃಢವಾಗುತ್ತದೆ.)

ತಸ್ಮಾತ್ಸಂಜನಯೇತ್ಕೋಶಂ ಸತ್ಕೃತ್ಯ ಪರಿಪಾಲಯೇತ್ ।
ಪರಿಪಾಲ್ಯಾನುತನುಯಾದೇಷ ಧರ್ಮಃ ಸನಾತನಃ ॥೨॥

ಆದುದರಿಂದ ರಾಜನು ಕೋಶವನ್ನು ಸಂಗ್ರಹಿಸಬೇಕು. ಸಂಗ್ರಹಿಸಿದ ಕೋಶವನ್ನು ಆದರಪೂರ್ವಕವಾಗಿ ರಕ್ಷಿಸಬೇಕು. ರಕ್ಷಣೆಯನ್ನು ಮಾಡುವುದೇ ಅಲ್ಲದೇ ನಿರಂತರವೂ ಅದನ್ನು ವೃದ್ಧಿಪಡಿಸುತ್ತಲೇ ಇರಬೇಕು. ಇದು ರಾಜನಿಗೆ ಸನಾತನಧರ್ಮವಾಗಿದೆ.

ನ ಕೋಶಃ ಶುದ್ಧಶೌಚೇನ ನ ನೃಶಂಸೇನ ಜಾತುಚಿತ್ ।
ಮಧ್ಯಮಂ ಪದಮಾಸ್ಥಾಯ ಕೋಶಸಂಗ್ರಹಣಂ ಚರೇತ್ ॥೩॥

ಯಾವನು ಅತಿಶುದ್ಧವಾದ ಆಚಾರ-ವಿಚಾರವುಳ್ಳವನಾಗಿರುವನೋ–ಅವನು ಕೋಶಸಂಗ್ರಹವನ್ನು ಮಾಡಲಾರನು. ಯಾವನು ಅತಿಕ್ರೂರಿಯಾಗಿರುವನೋ–ಅವನು ಎಂದಿಗೂ ಕೋಶಸಂಗ್ರಹವನ್ನು ಮಾಡಲಾರನು. ಆದುದರಿಂದ ಪರಮದಯಾಳುವೂ ಆಗಿರದೇ–ಅತ್ಯಂತಕ್ರೂರಿಯೂ ಆಗಿರದೇ ಮಧ್ಯಮ ಮಾರ್ಗವನ್ನು ಆಶ್ರಯಿಸಿ ಕೋಶವನ್ನು ಸಂಗ್ರಹಿಸಬೇಕು.

ಅಬಲಸ್ಯ ಕುತಃ ಕೋಶೋ ಹ್ಯಕೋಶಸ್ಯ ಕುತೋ ಬಲಮ್ ।
ಅಬಲಸ್ಯ ಕುತೋ ರಾಜ್ಯಮರಾಜ್ಞಃ ಶ್ರೀರ್ಭವೇತ್ಕುತಃ ॥೪॥

ರಾಜನು ದುರ್ಬಲನಾಗಿದ್ದರೆ ಅವನಿಗೆ ಕೋಶಸಂಗ್ರಹವು ಹೇಗಾಗುತ್ತದೆ? ಕೋಶವೇ ಇಲ್ಲದವನು ಸೈನ್ಯವನ್ನು ಹೇಗೆ ಸಂಗ್ರಹಿಸಿಯಾನು? ಸೈನ್ಯವೇ ಇಲ್ಲದಿದ್ದರೆ ರಾಜ್ಯವೆಲ್ಲಿಯದು? ರಾಜ್ಯದಿಂದ ಹೀನನಾದವನ ಬಳಿಯಲ್ಲಿ ಲಕ್ಷ್ಮಿಯು ಹೇಗೆತಾನೇ ಒಲಿದಾಳು?

ಉಚ್ಚೈರ್ವೃತ್ತೇಃ ಶ್ರಿಯೋ ಹಾನಿರ್ಯಥೈವ ಮರಣಂ ತಥಾ ।
ತಸ್ಮಾತ್ಕೋಶಂ ಬಲಂ ಮಿತ್ರಮಥ ರಾಜಾ ವಿವರ್ಧಯೇತ್ ॥೫॥

ಯಾವನು ಧನದ ಆಶ್ರಯದಿಂದ ಮಹತ್ತ್ವಪೂರ್ಣವಾದ ಉನ್ನತ ಸ್ಥಾನಕ್ಕೆ ಹೋಗಿರುವನೋ–ಅಂತಹವನಿಗೆ ಧನದ ನಾಶವಾಯಿತೆಂದರೆ ಅದು ಅವನಿಗೆ ಮರಣಕ್ಕೆ ಸಮಾನವಾಗುತ್ತದೆ. ಧನವನ್ನು ಕಳೆದುಕೊಂಡನಂತರ ಅವನು ಜೀವಚ್ಛವವಾಗುತ್ತಾನೆ. ಆದುದರಿಂದ ರಾಜನಾದವನು ಕೋಶವನ್ನೂ, ಸೈನ್ಯವನ್ನೂ, ಮಿತ್ರರನ್ನೂ ವೃದ್ಧಿಪಡಿಸುತ್ತಲೇ ಇರಬೇಕು.

ಹೀನಕೋಶಂ ಹಿ ರಾಜಾನಮವಜಾನನ್ತಿ ಮಾನವಾಃ ।
ನ ಚಾಸ್ಯಾಲ್ಪೇನ ತುಷ್ಯನ್ತಿ ಕಾರ್ಯಮಪ್ಯುತ್ಸಹನ್ತಿ ಚ ॥೬॥

ಯಾವ ರಾಜನ ಕೋಶವು ನಷ್ಟವಾಗಿ ಹೋಗಿರುವುದೋ–ಅಂತಹ ರಾಜನನ್ನು ಮನುಷ್ಯಸಾಮಾನ್ಯರೂ ಅನಾದರಣೆಮಾಡುತ್ತಾರೆ. ಅಂತಹ ರಾಜನು ಕೊಡುವ ಅಲ್ಪವಾದ ವೇತನಗಳಿಂದ ಸೇವಕರು ತೃಪ್ತಿಗೊಳ್ಳುವುದಿಲ್ಲ. ಅಂತಹ ರಾಜನ ಕಾರ್ಯಗಳನ್ನು ಮಾಡಲು ಉತ್ಸಾಹಪೂರ್ಣರಾಗಿಯೂ ಇರುವುದಿಲ್ಲ.

ಶ್ರಿಯೋ ಹಿ ಕಾರಣಾದ್ರಾಜಾ ಸತ್ಕ್ರಿಯಾಂ ಲಭತೇ ಪರಾಮ್ ।
ಸಾಸ್ಯ ಗೂಹತಿ ಪಾಪಾನಿ ವಾಸೋ ಗುಹ್ಯಮಿವ ಸ್ತ್ರಿಯಾಃ ॥೭॥

ರಾಜನ ಬಳಿಯಲ್ಲಿ ಅಪಾರವಾದ ಐಶ್ವರ್ಯವಿರುವುದರಿಂದಲೇ ಅವನು ಎಲ್ಲರಿಂದಲೂ ಪರಮಶ್ರೇಷ್ಠವಾದ ಸತ್ಕಾರವನ್ನು ಹೊಂದುತ್ತಾನೆ. ಯಾವ ರೀತಿಯಲ್ಲಿ ಬಟ್ಟೆಯು (ಸೀರೆಯು) ಸ್ತ್ರೀಯರ ಗುಪ್ತಾಂಗಗಳನ್ನು ಗೋಪ್ಯವಾಗಿಡುವುದೋ–ಅದೇ ರೀತಿಯಲ್ಲಿ ರಾಜನಲ್ಲಿರುವ ಐಶ್ವರ್ಯವು ಅವನು ಮಾಡುವ ದೋಷಗಳೆಲ್ಲವನ್ನೂ ಮುಚ್ಚುತ್ತದೆ.

ಋದ್ಧಿಮಸ್ಯಾನುತಪ್ಯನ್ತೇ ಪುರಾ ವಿಪ್ರಕೃತಾ ನರಾಃ ।
ಶಾಲಾವೃಕಾ ಇವಾಜಸ್ರಂ ಜಿಘಾಂಸುಮೇವ ವಿನ್ದತಿ ।
ಈದೃಶಸ್ಯ ಕುತೋ ರಾಜ್ಞಃ ಸುಖಂ ಭವತಿ ಭಾರತ ॥೮॥

ಹಿಂದೆ ರಾಜನಿಂದ ತಿರಸ್ಕೃತರಾದ ಮನುಷ್ಯರು ರಾಜನ ಧನಸಮೃದ್ಧಿಯನ್ನು ನೋಡಿ ಪರಿತಪಿಸುತ್ತಾರೆ. ನಾಯಿಗಳು ತಮ್ಮನ್ನು ಕೊಲ್ಲುವ ಚಾಂಡಾಲನನ್ನೇ ಅನುಸರಿಸಿ ಯಾವಾಗಲೂ ಹೋಗುವಂತೆ–ತಿರಸ್ಕೃತರಾದ ಜನರು ಐಶ್ವರ್ಯದಿಂದ ಸಮೃದ್ಧನಾದ ರಾಜನನ್ನೇ ಅನುಸರಿಸಿ ಹೋಗುತ್ತಾರೆ. ಹೀಗೆ ಶತ್ರುಗಳಿಂದ ಸಂವೃತನಾದ ರಾಜನಿಗೆ ಸುಖವೆಂಬುದೆಲ್ಲಿರುತ್ತದೆ?

ಉದ್ಯಚ್ಛೇದೇವ ನ ನಮೇದುದ್ಯಮೋ ಹ್ಯೇವ ಪೌರುಷಮ್ ।
ಅಪ್ಯಪರ್ವಣಿ ಭಜ್ಯೇತ ನ ನಮೇತೇಹ ಕಸ್ಯಚಿತ್ ॥೯॥

ಆದುದರಿಂದ ರಾಜನು ಯಾವಾಗಲೂ ಸೆಟೆದೇ ನಿಂತಿರಬೇಕು.

ಯಾರಿಗೂ ತಲೆತಗ್ಗಿಸಬಾರದು. ಉದ್ಯೋಗಶೀಲನಾಗಿರಬೇಕು. ಉದ್ಯೋಗವೇ ಪೌರುಷದ ಲಕ್ಷಣವಾಗಿರುತ್ತದೆ. ಒಣಗಿರುವ ಉದ್ದವಾದ ಕಟ್ಟಿಗೆಯು ಗಿಣ್ಣಿಲ್ಲದ ಸ್ಥಳದಲ್ಲಿಯೂ ಮುರಿದುಹೋಗುತ್ತದೆ. ಆದರೆ ಅದು ಬಗ್ಗುವುದಿಲ್ಲ. ಅಂತೆಯೇ ರಾಜನೂ ವಿನಾಶಹೊಂದಿದರೂ ಸರಿಯೇ ; ತಲೆಯನ್ನು ಮಾತ್ರ ಯಾರ ಮುಂದೆಯೂ ತಗ್ಗಿಸಬಾರದು.

ಅಪ್ಯರಣ್ಯಂ ಸಮಾಶ್ರಿತ್ಯ ಚರೇನ್ಮೃಗಗಣೈಃ ಸಹ ।
ನ ತ್ವೇವೋಜ್ಝಿತಮರ್ಯಾದೈರ್ದಸ್ಯುಭಿಃ ಸಹಿತಶ್ಚರೇತ್ ॥೧೦॥

ಅರಣ್ಯವನ್ನಾದರೂ ಆಶ್ರಯಿಸಿ ಮೃಗಗಳ ಜೊತೆಯಲ್ಲಾದರೂ ಸಂಚರಿಸುತ್ತಿರಬಹುದು. ಆದರೆ ಲೋಕಮರ್ಯಾದೆಯನ್ನೇ ಮೀರಿ ನಡೆಯುತ್ತಿರುವ ದರೋಡೆಕೋರರೊಡನೆ ಮಾತ್ರ ಯಾವಾಗಲೂ ಸೇರಬಾರದು.

ದಸ್ಯೂನಾಂ ಸುಲಭಾ ಸೇನಾ ರೌದ್ರಕರ್ಮಸು ಭಾರತ ।
ಏಕಾನ್ತತೋ ಹ್ಯಮರ್ಯಾದಾತ್ಸರ್ವೋಽಪ್ಯುದ್ವಿಜತೇ ಜನಃ ।
ದಸ್ಯವೋಽಪ್ಯಭಿಶಙ್ಕನ್ತೇ ನಿರನುಕ್ರೋಶಕಾರಿಣಃ ॥೧೨॥

ಲೂಟಿಹೊಡೆಯುವುದು, ಕೊಲೆಮಾಡುವುದು–ಇವೇ ಮೊದಲಾದ ಭಯಂಕರ ಕರ್ಮಗಳನ್ನು ಮಾಡಲು ದಸ್ಯುಗಳಿಗೆ ಸೈನ್ಯವು ಸುಲಭವಾಗಿ ಸಿಕ್ಕುತ್ತದೆ. ಮರ್ಯಾದಾಶೂನ್ಯರಾದ ದಸ್ಯುಗಳ ವಿಷಯದಲ್ಲಿ ಎಲ್ಲ ಜನರೂ ಉದ್ವಿಗ್ನರಾಗುತ್ತಾರೆ. ನಿರ್ದಯತಾಪೂರ್ಣರಾದ, ಕ್ರೂರಕರ್ಮಗಳನ್ನು ಮಾಡುವ ದಸ್ಯುಗಳಿಂದ ಎಲ್ಲರೂ ಸಂದೇಹಿಸಲ್ಪಡುತ್ತಾರೆ. (ದಸ್ಯುಗಳು ಎಲ್ಲರನ್ನೂ ಸಂಶಯಗ್ರಸ್ತರಾಗಿಯೇ ನೋಡುತ್ತಾರೆ. ಅವರು ಯಾರ ವಿಷಯದಲ್ಲಿಯೂ ವಿಶ್ವಾಸವನ್ನಿಡುವುದಿಲ್ಲ.)

ಸ್ಥಾಪಯೇದೇವ ಮರ್ಯಾದಾಂ ಜನಚಿತ್ತಪ್ರಸಾದಿನೀಮ್ ।
ಅಲ್ಪೇಽಪ್ಯರ್ಥೇ ಚ ಮರ್ಯಾದಾ ಲೋಕೇ ಭವತಿ ಪೂಜಿತಾ ॥೧೩॥

ಎಲ್ಲ ಪ್ರಜೆಗಳ ಮನಸ್ಸನ್ನೂ ಪ್ರಸನ್ನಗೊಳಿಸುವ ಮರ್ಯಾದೆಯನ್ನು (ಕಟ್ಟುಪಾಡನ್ನು) ರಾಜನು ರಾಜ್ಯದಲ್ಲಿ ಸ್ಥಾಪಿಸಬೇಕು. ಅಲ್ಪವಾದ ಪ್ರಯೋಜನದಲ್ಲಿಯೂ ಕಟ್ಟುಪಾಡುಗಳಿರುವುದು ಲೋಕದಲ್ಲಿ ಮಾನ್ಯವಾಗುತ್ತದೆ.

ನಾಯಂ ಲೋಕೋऽಸ್ತಿ ನ ಪರ ಇತಿ ವ್ಯವಸಿತೋ ಜನಃ ।
ನಾಲಂ ಗನ್ತುಂ ಹಿ ವಿಶ್ವಾಸಂ ನಾಸ್ತಿಕೇ ಭಯಶಙ್ಕಿತೇ ॥೧೪॥

'ಈ ಲೋಕವೂ ಇಲ್ಲ ; ಪರಲೋಕವೂ ಇಲ್ಲ'–ಎಂದು ನಿಶ್ಚಯಿಸಿ ಕುಳಿತಿರುವ ಜನರೂ ಪ್ರಪಂಚದಲ್ಲಿರುತ್ತಾರೆ. ಇಂತಹ ನಾಸ್ತಿಕರು ಭಯಕ್ಕೆ ಸ್ಥಾನವಾಗಿರುತ್ತಾರೆ. ಇಂತಹ ನಾಸ್ತಿಕರ ವಿಷಯದಲ್ಲಿ ಖಂಡಿತವಾಗಿಯೂ ವಿಶ್ವಾಸವನ್ನಿಡಬಾರದು.

ಯಥಾ ಸದ್ಭಿಃ ಪರಾದಾನಮಹಿಂಸಾ ದಸ್ಯುಭಿಃ ಕೃತಾ ।
ಅನುರಜ್ಯನ್ತಿ ಭೂತಾನಿ ಸಮರ್ಯಾದೇಷು ದಸ್ಯುಷು ॥೧೫॥

ದಸ್ಯುಗಳಲ್ಲಿಯೂ ಕೂಡ ಮರ್ಯಾದೆಯಿಂದ ನಡೆದುಕೊಳ್ಳುವವರೂ ಇದ್ದಾರೆ. ಸತ್ಪುರುಷರಾದ ದರೋಡೆಕೋರರು ಇತರರಲ್ಲಿರುವ ಹಣವನ್ನು ದೋಚುವರೇ ಹೊರತು ಅವರನ್ನು ಹಿಂಸಿಸುವುದಿಲ್ಲ. ಲೋಕ ಮರ್ಯಾದೆಯನ್ನು ಮೀರದಿರುವ ದಸ್ಯುಗಳ ವಿಷಯದಲ್ಲಿ ಪ್ರಾಣಿಗಳೂ (ಪ್ರಜೆಗಳೂ) ಅನುಕಂಪದಿಂದಿರುತ್ತಾರೆ. (ಸ್ನೇಹಪರರಾಗಿರುತ್ತಾರೆ.)

ಅಯುಧ್ಯಮಾನಸ್ಯ ವಧೋ ದಾರಾಮರ್ಷಃ ಕೃತಘ್ನತಾ ।
ಬ್ರಹ್ಮವಿತ್ತಸ್ಯ ಚಾದಾನಂ ನಿಃಶೇಷಕರಣಂ ತಥಾ ॥೧೬॥

ಸ್ತ್ರಿಯಾ ಮೋಷಃ ಪತಿಸ್ಥಾನಂ ದಸ್ಯುಷ್ವೇತದ್ವಿಗರ್ಹಿತಮ್ ।
ಸಂಶ್ಲೇಷಂ ಚ ಪರಸ್ತ್ರೀಭಿರ್ದಸ್ಯುರೇತಾನಿ ವರ್ಜಯೇತ್ ॥೧೭॥

ತನ್ನೊಡನೆ ಸೆಣೆಸಾಡಲು ಬರದೇ ಇರುವವರನ್ನು ಕೊಲ್ಲುವುದು, ಪರಸ್ತ್ರೀಯರನ್ನು ಉಪಭೋಗಕ್ಕಾಗಿ ಬಲಾತ್ಕರಿಸುವುದು, ಮಾಡಿದ ಉಪಕಾರವನ್ನು ಮರೆಯುವುದು, ಬ್ರಾಹ್ಮಣನ ವಿತ್ತವನ್ನು ಅಪಹರಿಸುವುದು, ಕನ್ಯೆಯನ್ನು ಅಪಹರಿಸುವುದು, ಗ್ರಾಮವನ್ನು ಆಕ್ರಮಿಸಿ ಕೊಳ್ಳೆಹೊಡೆದನಂತರ ಆ ಗ್ರಾಮಕ್ಕೆ ತಾನೇ ಸ್ವಾಮಿಯಾಗುವುದು-ಇವುಗಳೆಲ್ಲವೂ ದಸ್ಯುಗಳಿಗೂ ನಿಂದಿತವಾದ ಕಾರ್ಯಗಳಾಗಿವೆ. ಪರಸ್ತ್ರೀಯರೊಡನೆ ಸಂಬಂಧವನ್ನೂ ಮತ್ತು ಮೇಲೆ ಹೇಳಿದ ದುಷ್ಕಾರ್ಯಗಳನ್ನೂ ಮರ್ಯಾದೆಯಿಂದ ಇರಬಯಸುವ ದರೋಡೆಕೋರರೂ ವರ್ಜಿಸಬೇಕು.

ಅಭಿಸಂದಧತೇ ಯೇ ಚ ವಿಶ್ವಾಸಾಯಾಸ್ಯ ಮಾನವಾಃ ।
ಅಶೇಷಮೇವೋಪಲಭ್ಯ ಕುರ್ವನ್ತೀತಿ ವಿನಿಶ್ಚಯಃ ॥೧೮॥

ದಸ್ಯುಗಳು ಯಾರ ಸಕಲಸರ್ವಸ್ವವನ್ನೂ ದೋಚಿಕೊಂಡು ಹೋಗಿರುವರೋ–ಆ ಮನುಷ್ಯರು, ದಸ್ಯುಗಳೊಡನೆಯೇ ವಿಶ್ವಾಸವನ್ನು ಬೆಳೆಸಿ ಅವರಿರುವ ಸ್ಥಾನಗಳನ್ನು ತಿಳಿದುಕೊಂಡು, ಸಮಯವು ಬಂದಾಗ ದಸ್ಯುಗಳಲ್ಲಿರುವ ಸಕಲೈಶ್ವರ್ಯಗಳನ್ನೂ ಸಂಪೂರ್ಣವಾಗಿ ಅಪಹರಿಸುತ್ತಾರೆ. ಇದು ನಿಜ.

ತಸ್ಮಾತ್ಸಶೇಷಂ ಕರ್ತವ್ಯಂ ಸ್ವಾಧೀನಮಪಿ ದಸ್ಯುಭಿಃ ।
ನ ಬಲಸ್ಥೋಽಹಮಸ್ಮೀತಿ ನೃಶಂಸಾನಿ ಸಮಾಚರೇತ್ ॥೧೯॥

ಆದುದರಿಂದ ದರೋಡೆಕೋರರು ಕೂಡ ಇತರರ ಐಶ್ವರ್ಯವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಾಗ ಸ್ವಲ್ಪವನ್ನಾದರೂ ಅವರ ಜೀವಿಕೆಗೆ ಉಳಿಸಿರಬೇಕು. ತಾನೇ ಮಹಾಬಲಿಷ್ಠನಾಗಿರುವೆನೆಂದು ಭಾವಿಸಿ ಕ್ರೂರವಾದ ಕಾರ್ಯಗಳನ್ನು ಮಾಡಬಾರದು.

ಸಶೇಷಕಾರಿಣಸ್ತತ್ರ ಶೇಷಂ ಪಶ್ಯನ್ತಿ ಸರ್ವಶಃ ।
ನಿಃಶೇಷಕಾರಿಣೋ ನಿತ್ಯಂ ನಿಃಶೇಷಕರಣಾದ್ಭಯಮ್ ॥೨೦॥

ಇತರರ ಐಶ್ವರ್ಯದಲ್ಲಿ ಸ್ವಲ್ಪ ಭಾಗವನ್ನಾದರೂ ಉಳಿಸಿ ತೆಗೆದುಕೊಳ್ಳುವ ದರೋಡೆಕೋರರು ತಾವು ಸಂಗ್ರಹಿಸಿದ ಐಶ್ವರ್ಯದಲ್ಲಿ ಸ್ವಲ್ಪವಾದರೂ ಉಳಿಯುವುದನ್ನು ಕಾಣುತ್ತಾರೆ. ಇತರರಲ್ಲಿರುವ ಐಶ್ವರ್ಯವನ್ನು ನಿಃಶೇಷವಾಗಿ ಅಪಹರಿಸಿಬಿಡುವ ದರೋಡೆಕೋರರಿಗೆ ತಾವು ಸಂಗ್ರಹಿಸಿದ ಐಶ್ವರ್ಯವೆಲ್ಲವೂ ನಿಃಶೇಷವಾಗಿ ಹೋಗಿಬಿಡಬಹುದೆಂಬ ಭಯವಿದ್ದೇ ಇರುತ್ತದೆ."

೧೩೩ನೆಯ ಅಧ್ಯಾಯವು ಮುಗಿಯಿತು.

ಬಲದ ಮಹತ್ತ್ವ: ಪಾಪದಿಂದ ಪಾರಾಗಲು ಪ್ರಾಯಶ್ಚಿತ್ತಗಳು

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹಿಂದಿನ ಕಾಲದ ರಾಜ್ಯವ್ಯವಹಾರಗಳನ್ನು ತಿಳಿದವರು ಧರ್ಮಕ್ಕೆ ಸಂಬಂಧಿಸಿದಂತೆ ಈ ವಾಕ್ಯವನ್ನು ಹೇಳುತ್ತಾರೆ :

ಪ್ರತ್ಯಕ್ಷಾವೇವ ಧರ್ಮಾರ್ಥೌ ಕ್ಷತ್ರಿಯಸ್ಯ ವಿಜಾನತಃ ॥೧॥

ತಿಳಿವಳಿಕೆಯುಳ್ಳ ಕ್ಷತ್ರಿಯನಿಗೆ ಧರ್ಮಾರ್ಥಗಳೆರಡೂ ಪ್ರತ್ಯಕ್ಷವಾದು ವುಗಳು.

ತತ್ರ ನ ವ್ಯವಧಾತವ್ಯಂ ಪರೋಕ್ಷಾ ಧರ್ಮಯಾಪನಾ ।
ಅಧರ್ಮೋ ಧರ್ಮ ಇತ್ಯೇತದ್ಯಥಾ ವೃಕಪದಂ ತಥಾ ॥೨॥

'ಇದು ಧರ್ಮವೇ? ಈ ಕಾರ್ಯವನ್ನು ಮಾಡಬಹುದೇ? ಈ ರೀತಿ ಯಲ್ಲಿ ಕಾರ್ಯಮಾಡಿದರೆ ಅಧರ್ಮವಾಗುವುದೇ?'–ಈ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಮಾಡಬೇಕಾಗಿರುವ ಕರ್ತವ್ಯದಲ್ಲಿ ವಿಳಂಬಮಾಡ ಬಾರದು. ಧರ್ಮದ ಫಲವು ಪ್ರತ್ಯಕ್ಷವಾಗಿ ಕಾಣಿಸತಕ್ಕುದಲ್ಲ. ತೋಳದ ಹೆಜ್ಜೆಯ ಗುರುತನ್ನು ನೋಡಿ–ಅದು ಚಿರತೆಯ ಹೆಜ್ಜೆಯೋ, ನಾಯಿಯ ಹೆಜ್ಜೆಯೋ ಅಥವಾ ತೋಳದ ಹೆಜ್ಜೆಯೋ–ಎಂಬುದನ್ನು ಗುರುತಿಸಲು ಸಾಧ್ಯವಾಗದಂತೆ ಆಪತ್ಕಾಲದಲ್ಲಿ ಧರ್ಮ ಮತ್ತು ಅಧರ್ಮಗಳ ವಿಷಯದಲ್ಲಿ ಯಾವ ವಿಧವಾದ ನಿರ್ಣಯವನ್ನೂ ಮಾಡಲು ಸಾಧ್ಯವಾಗುವುದಿಲ್ಲ.

ಧರ್ಮಾಧರ್ಮಫಲೇ ಜಾತು ದದರ್ಶೇಹ ನ ಕಶ್ಚನ ।
ಬುಭೂಷೇದ್ಬಲಮೇವೈತತ್ಸರ್ವಂ ಬಲವತೋ ವಶೇ ॥೩॥

ಧರ್ಮ ಮತ್ತು ಅಧರ್ಮಗಳ ಫಲಗಳನ್ನು ಯಾವನೂ ಯಾವಾಗಲೂ ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಆದುದರಿಂದ ರಾಜನು ಮುಖ್ಯವಾಗಿ ಬಲಿಷ್ಠನಾಗಲು ಪ್ರಯತ್ನಿಸಬೇಕು. ಏಕೆಂದರೆ : ಈ ಎಲ್ಲ ಜಗತ್ತೂ ಬಲಿಷ್ಠನ ವಶದಲ್ಲಿಯೇ ಇರುತ್ತದೆ.

ಶ್ರಿಯೋ ಬಲಮಮಾತ್ಯಾಂಶ್ಚ ಬಲವಾನಿಹ ವಿನ್ದತಿ ।
ಯೋ ಹ್ಯನಾಢ್ಯಃ ಸ ಪತಿತಸ್ತದುಚ್ಛಿಷ್ಟಂ ಯದಲ್ಪಕಮ್ ॥೪॥

ಬಲಿಷ್ಠನಾದವನು ಈ ಜಗತ್ತಿನಲ್ಲಿ ಸಂಪತ್ತನ್ನೂ, ಸೈನ್ಯವನ್ನೂ, ಮಂತ್ರಿಗಳನ್ನೂ ಹೊಂದುತ್ತಾನೆ. ಯಾವನು ದರಿದ್ರನಾಗಿರುವನೋ ಅವನನ್ನು ಪತಿತನೆಂದು ಹೇಳುತ್ತಾರೆ. ಯಾವನ ಬಳಿಯಲ್ಲಿ ಅಲ್ಪಧನವಿರುವುದೋ–ಅವನ ಆ ಧನವನ್ನು ಉಚ್ಛಿಷ್ಟವೆಂದು ಜನರು ಭಾವಿಸುತ್ತಾರೆ.

ಬಹ್ವಪಥ್ಯಂ ಬಲವತಿ ನ ಕಿಂಚಿತ್ಕ್ರಿಯತೇ ಭಯಾತ್ ।
ಉಭೌ ಸತ್ಯಾಧಿಕಾರಸ್ಥೌ ತ್ರಾಯೇತೇ ಮಹತೋ ಭಯಾತ್ ॥೫॥

ಬಲಿಷ್ಠನಲ್ಲೇನೋ ಅನೇಕವಿಧವಾದ ದೋಷಗಳಿರುತ್ತವೆ. ಆದರೆ ಬಲಿಷ್ಠನು ಅವುಗಳನ್ನು ಜೀರ್ಣಿಸಿಕೊಳ್ಳಬಲ್ಲನು. ಅವನು ಬಲಿಷ್ಠನೆಂಬ ಭಯದಿಂದಾಗಿ ಬೇರೆಯವರು ಏನನ್ನೂ ಮಾಡುವುದಿಲ್ಲ. ಒಂದು ವೇಳೆ ಬಲ ಮತ್ತು ಧರ್ಮಗಳು ಸತ್ಯದಲ್ಲಿ ಪ್ರತಿಷ್ಠಿತವಾಗಿದ್ದರೆ ಆ ಬಲ-ಧರ್ಮಗಳೇ ಮನುಷ್ಯನನ್ನು ಮಹಾಭಯದಿಂದ ರಕ್ಷಣೆಮಾಡುತ್ತವೆ. (ಬಲಿಷ್ಠನಾದವನು ಸತ್ಯ-ಧರ್ಮಪರಿಪಾಲಕನೂ ಆಗಿದ್ದರೆ ಅವನು ಯಾವುದಕ್ಕೂ ಭಯಪಡಬೇಕಾಗುವುದಿಲ್ಲ.)

ಅತಿಧರ್ಮಾದ್ಬಲಂ ಮನ್ಯೇ ಬಲಾದ್ಧರ್ಮಃ ಪ್ರವರ್ತತೇ ।
ಬಲೇ ಪ್ರತಿಷ್ಠಿತೋ ಧರ್ಮೋ ಧರಣ್ಯಾಮಿವ ಜಙ್ಗಮಮ್ ॥೬॥

ನಾನು ಧರ್ಮಕ್ಕಿಂತಲೂ ಬಲವೇ ಶ್ರೇಷ್ಠವಾದುದೆಂದು ಭಾವಿಸುತ್ತೇನೆ. ಏಕೆಂದರೆ : ಬಲದಿಂದಲೇ ಧರ್ಮವು ಪ್ರವರ್ತಿಸುತ್ತದೆ. ಪೃಥ್ವಿಯಲ್ಲಿ ಜಂಗಮಗಳಿರುವಂತೆ–ಬಲದಲ್ಲಿಯೇ ಧರ್ಮವು ಪ್ರತಿಷ್ಠಿತವಾಗಿದೆ.

ಧೂಮೋ ವಾಯೋರಿವ ವಶೇ ಬಲಂ ಧರ್ಮೋಽನುವರ್ತತೇ ।
ಅನೀಶ್ವರೋ ಬಲೇ ಧರ್ಮೋ ದ್ರುಮೇ ವಲ್ಲೀವ ಸಂಶ್ರಿತಾ ॥೭॥

ಯಾವ ರೀತಿಯಲ್ಲಿ ಹೊಗೆಯು ವಾಯುವಿಗೆ ಅಧೀನವಾಗಿರುವುದೋ–ಗಾಳಿಯನ್ನೇ ಅನುಸರಿಸಿ ಹೋಗುವುದೋ–ಅದೇ ರೀತಿಯಲ್ಲಿ ಧರ್ಮವು ಬಲ

ವನ್ನೇ ಅನುಸರಿಸಿ ಹೋಗುತ್ತದೆ. ಬಳ್ಳಿಯು ವೃಕ್ಷವನ್ನೇ ಆಶ್ರಯಿಸಿ ವೃದ್ಧಿ ಹೊಂದುವಂತೆ–ನಿರಾಶ್ರಯವಾದ ಧರ್ಮವು ಬಲದಲ್ಲಿಯೇ ಸುಪ್ರತಿಷ್ಠಿತ ವಾಗಿರುತ್ತದೆ. (ಬಲದ ಆಶ್ರಯವನ್ನು ಹೊಂದಿ ವೃದ್ಧಿಹೊಂದುತ್ತದೆ.)

ವಶೇ ಬಲವತಾಂ ಧರ್ಮಃ ಸುಖಂ ಭೋಗವತಾಮಿವ ।
ನಾಸ್ತ್ಯಸಾಧ್ಯಂ ಬಲವತಾಂ ಸರ್ವಂ ಬಲವತಾಂ ಶುಚಿ ॥೮॥

ಭೋಗಸಾಮಗ್ರಿಗಳಿಂದ ಸಂಪನ್ನನಾಗಿರುವ ಮನುಷ್ಯನಿಗೆ ಸುಖವು ಲಭಿಸುವಂತೆ–ಬಲದಿಂದ ಸಂಪನ್ನನಾಗಿರುವವನಿಗೆ ಧರ್ಮವು ವಶ್ಯವಾಗುತ್ತದೆ. ಬಲಿಷ್ಠರಾದವರಿಗೆ ಸಾಧಿಸಲು ಅಸಾಧ್ಯವಾದುದು ಯಾವುದೂ ಇರುವುದಿಲ್ಲ. ಬಲಿಷ್ಠರಾದವರು ಮಾಡುವುದೆಲ್ಲವೂ ಶುದ್ಧಕರ್ಮಗಳೆಂದೇ ಪರಿಗಣಿಸಲ್ಪಡುತ್ತದೆ.

ದುರಾಚಾರಂ ಕ್ಷೀಣಬಲಂ ಪರಿತ್ರಾಣಂ ನ ಗಚ್ಛತಿ ।
ಅಥ ತಸ್ಮಾದುದ್ವಿಜತೇ ಸರ್ವೋ ಲೋಕೋ ವೃಕಾದಿವ ॥೯॥

ಬಲಹೀನನಾಗಿರುವವನೂ, ದುರಾಚಾರಿಯಾಗಿರುವವನೂ–ಭಯವು ಉಪಸ್ಥಿತವಾದಾಗ ಯಾವ ವಿಧವಾದ ರಕ್ಷಣೆಯನ್ನೂ ಹೊಂದುವುದಿಲ್ಲ. ಜನರು ತೋಳದಿಂದ ಭಯಪಡುವಂತೆ–ಎಲ್ಲ ಪ್ರಜೆಗಳೂ ದುರ್ಬಲನಾದ ರಾಜನಿಂದ ಉದ್ವಿಗ್ನರಾಗುತ್ತಾರೆ.

ಅಪಧ್ವಸ್ತೋ ಹ್ಯವಮತೋ ದುಃಖಂ ಜೀವತಿ ಜೀವಿತಮ್ ।
ಜೀವಿತಂ ಯದಪಕೃಷ್ಟಂ ಯಥೈವ ಮರಣಂ ತಥಾ ॥೧೦॥

ದುರ್ಬಲನಾದವನು ತನ್ನ ಐಶ್ವರ್ಯದಿಂದಲೇ ವಂಚಿತನಾಗುತ್ತಾನೆ. ಎಲ್ಲರ ಅನಾದರಣೆಗೂ ಪಾತ್ರನಾಗುತ್ತಾನೆ. ದುಃಖಮಯವಾದ ಜೀವನವನ್ನು ಕಳೆಯುತ್ತಾನೆ. ಯಾವ ಜೀವನವು ಅತ್ಯಂತಹೀನವಾಗಿರುವುದೋ ಆ ಜೀವನವು ಮರಣತುಲ್ಯವಾದುದು.

ಯದೇವಮಾಹುಃ ಪಾಪೇನ ಚಾರಿತ್ರೇಣ ವಿವರ್ಜಿತಃ ।
ಸುಭೃಶಂ ತಪ್ಯತೇ ತೇನ ವಾಕ್ಶಲ್ಯೇನ ಪರಿಕ್ಷತಃ ॥೧೧॥

ದುರ್ಬಲನಾದ ಮನುಷ್ಯನ ವಿಷಯದಲ್ಲಿ ಜನರು–'ಇವನು ತನ್ನ

ಪಾಪಾಚರಣೆಯ ಕಾರಣದಿಂದಾಗಿ ಬಂಧು-ಬಾಂಧವರಿಂದ ಪರಿತ್ಯಕ್ತನಾಗಿ ದ್ದಾನೆ'–ಎಂದು ಆಡಿಕೊಳ್ಳುತ್ತಾರೆ. ಅಂತಹ ಮುಳ್ಳಿಗೆ ಸಮಾನವಾದ ಮಾತುಗಳಿಂದ ಗಾಯಗೊಂಡ ದುರ್ಬಲನು ಬಹಳವಾಗಿ ಪರಿತಪಿಸುತ್ತಾನೆ.

ಅಧರ್ಮದ ಮೂಲಕವಾಗಿ ಧನವನ್ನು ಸಂಗ್ರಹಿಸಿದವನ ಪಾಪಪರಿ ಹಾರಕ್ಕಾಗಿ ಆಚಾರ್ಯರು ಈ ಉಪಾಯವನ್ನು ಹೇಳಿರುತ್ತಾರೆ.

ತ್ರಯೀಂ ವಿದ್ಯಾಮವೇಕ್ಷೇತ ತಥೋಪಾಸೀತ ವೈ ದ್ವಿಜಾನ್ ।
ಪ್ರಸಾದಯೇನ್ಮಧುರಯಾ ವಾಚಾ ಚಾಪ್ಯಥ ಕರ್ಮಣಾ ।
ಮಹಾಮನಾಶ್ಚಾಪಿ ಭವೇದ್ವಿವಹೇಚ್ಚ ಮಹಾಕುಲೇ ॥೧೩॥

ಇತ್ಯಸ್ಮೀತಿ ವದೇದೇವಂ ಪರೇಷಾಂ ಕೀರ್ತಯೇದ್ಗುಣಾನ್ ।
ಜಪೇದುದಕಶೀಲಃ ಸ್ಯಾತ್ಪೇಶಲೋ ನಾತಿಜಲ್ಪಕಃ ॥೧೪॥

ಬ್ರಹ್ಮಕ್ಷತ್ರಂ ಸಮ್ಪ್ರವಿಶೇದ್ಬಹು ಕೃತ್ವಾ ಸುದುಷ್ಕರಮ್ ।
ಉಚ್ಯಮಾನೋ ಹಿ ಲೋಕೇನ ಬಹುಕೃತ್ತದಚಿತ್ತಯನ್ ॥೧೫॥

ಪಾಪಲಿಪ್ತನಾದ ರಾಜನು ಮೂರು ವೇದಗಳನ್ನೂ ಅಧ್ಯಯನಮಾಡ ಬೇಕು. ಬ್ರಾಹ್ಮಣರ ಸೇವೆಯನ್ನು ಮಾಡಬೇಕು. ಸುಮಧುರವಾದ ಮಾತು ಗಳಿಂದಲೂ–ಸತ್ಕರ್ಮಗಳಿಂದಲೂ ಬ್ರಾಹ್ಮಣರನ್ನು ಪ್ರಸನ್ನಗೊಳಿಸಬೇಕು. ಉದಾರಹೃದಯನಾಗಬೇಕು. ಉಚ್ಚಕುಲದ ಕನ್ಯೆಯನ್ನು ವಿವಾಹಮಾಡಿ ಕೊಳ್ಳಬೇಕು. ಬ್ರಾಹ್ಮಣರನ್ನು ಸೇವಿಸುವಾಗ ಅವರಿಗೆ ತನ್ನ ಪರಿಚಯವನ್ನು ಮಾಡಿಕೊಡಬೇಕು. ಇತರರಲ್ಲಿರುವ ಗುಣಗಳನ್ನು ಕೀರ್ತನಮಾಡಬೇಕು. ಪ್ರತಿದಿನವೂ ಸ್ನಾನಮಾಡಿದನಂತರದಲ್ಲಿ ಮಹಾಮಂತ್ರಗಳನ್ನು ಜಪಿಸಬೇಕು. ಮೃದುಸ್ವಭಾವದವನಾಗಿರಬೇಕು. ಹೆಚ್ಚು ಮಾತನಾಡಬಾರದು. ಲೋಕದ ಜನರು ಪಾಪಕರ್ಮಿಯೆಂದು ಅನೇಕಪ್ರಕಾರವಾಗಿ ಹೇಳುತ್ತಿದ್ದರೂ ಅದನ್ನು ಮನಸ್ಸಿಗೆ ತೆಗೆದುಕೊಳ್ಳಕೂಡದು. ಸುದುಷ್ಕರವಾದ ಅನೇಕಪುಣ್ಯಕರ್ಮ ಗಳನ್ನೇ ಮಾಡಿ ಬ್ರಾಹ್ಮಣರ ಮತ್ತು ಕ್ಷತ್ರಿಯರ ಸಮಾಜದಲ್ಲಿ ಪ್ರವೇಶಿಸಬೇಕು.

ಅಪಾಪೋ ಹ್ಯೇವಮಾಚಾರಃ ಕ್ಷಿಪ್ರಂ ಬಹುಮತೋ ಭವೇತ್ ।

ಸುಖಂ ಚ ಚಿತ್ರಂ ಭುಞ್ಜೀತ ಕೃತೇನೈಕೇನ ಗೋಪಯೇತ್ ।
ಲೋಕೇ ಚ ಲಭತೇ ಪೂಜಾಂ ಪರತ್ರೇಹ ಮಹತ್ಫಲಮ್ ॥೧೭॥

ಹೀಗೆ ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವನು ಪಾಪವನ್ನು ಕಳೆದುಕೊಂಡು ಬಹುಸಂಖ್ಯಾತರಾದ ಜನರ ಆದರಕ್ಕೆ ಪಾತ್ರನಾಗುತ್ತಾನೆ. ನಾನಾಪ್ರಕಾರವಾದ ಸುಖಗಳನ್ನು ಉಪಭೋಗಿಸುತ್ತಾನೆ. ತಾನು ಮಾಡಿದ ಒಂದು ಸತ್ಕರ್ಮದ ಪ್ರಭಾವದಿಂದ ತನ್ನ ರಕ್ಷಣೆಯನ್ನು ಮಾಡಿಕೊಳ್ಳುತ್ತಾನೆ. ಲೋಕದಲ್ಲವನು ಎಲ್ಲರ ಸತ್ಕಾರಕ್ಕೂ ಪಾತ್ರನಾಗುತ್ತಾನೆ. ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಮಹಾಫಲಕ್ಕೆ ಭಾಗಿಯಾಗುತ್ತಾನೆ.”

೧೩೪ನೆಯ ಅಧ್ಯಾಯವು ಮುಗಿಯಿತು.

೧೩೫ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಮರ್ಯಾದೆಯನ್ನು ಪರಿಪಾಲಿಸುತ್ತಿದ್ದ ಕಾಯವ್ಯ ಎಂಬ ಹೆಸರಿನ ದರೋಡೆಗಾರನಿಗೆ ಸದ್ಗತಿಯುಂಟಾದುದು

ಜನಮೇಜಯ! ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ದರೋಡೆಗಾರನಾಗಿದ್ದರೂ ಲೋಕಮರ್ಯಾದೆಯನ್ನು ಪಾಲಿಸುತ್ತಿದ್ದರೆ ಅವನು ದುರ್ಗತಿಯನ್ನು ಹೊಂದುವುದಿಲ್ಲವೆಂಬ ವಿಷಯವಾಗಿ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಕಾಯವ್ಯ ಎಂಬ ಹೆಸರಿನ ಪ್ರಸಿದ್ಧನಾದೊಬ್ಬ ನಿಷಾದನು (ಬೇಡನು) ದರೋಡೆಕೋರನೇ ಆಗಿದ್ದರೂ ಸಿದ್ಧಿಯನ್ನು ಪಡೆದನು. ಕಾಯವ್ಯನು ಪ್ರಹಾರಕುಶಲನಾಗಿದ್ದನು. ಮಹಾಶೂರನಾಗಿದ್ದನು. ಬುದ್ಧಿವಂತನಾಗಿದ್ದನು. ಶಾಸ್ತ್ರಜ್ಞನಾಗಿದ್ದನು. ಕ್ರೌರ್ಯದಿಂದ ರಹಿತನಾಗಿದ್ದನು. ಆಶ್ರಮವಾಸಿಗಳ ಧರ್ಮವನ್ನು ರಕ್ಷಿಸುತ್ತಿದ್ದನು. ಬ್ರಾಹ್ಮಣಪ್ರಿಯನಾಗಿದ್ದನು. ಗುರುಗಳ ಸೇವೆಯನ್ನು ಮಾಡುತ್ತಿದ್ದನು. ಕಾಯವ್ಯನು ಕ್ಷತ್ರಿಯಪುರುಷನಿಂದ ನಿಷಾದಸ್ತ್ರೀಯಲ್ಲಿ ಹುಟ್ಟಿದ್ದನು. ಆದುದರಿಂದ ಅವನು ಕ್ಷತ್ರಧರ್ಮವನ್ನೇ

ಸದಾ ಪಾಲಿಸುತ್ತಿದ್ದನು. ಕಾಯವ್ಯನು ಪ್ರತಿನಿತ್ಯವೂ ಪ್ರಾತಃಕಾಲ-ಸಾಯಂಕಾಲಗಳ ಸಮಯಗಳಲ್ಲಿ ಅರಣ್ಯಕ್ಕೆ ಹೋಗಿ ಮೃಗಗಳ ಸಮೂಹ ಗಳನ್ನು ಉತ್ತೇಜಿಸುತ್ತಿದ್ದನು. (ಕೋಪಗೊಳಿಸುತ್ತಿದ್ದನು.) ನಾನಾ ಜಾತಿಯ ಮೃಗಗಳ ಸ್ವಭಾವಗಳನ್ನು ತಿಳಿದವನಾಗಿದ್ದನು. ನಿಷಾದರಲ್ಲಿಯೇ ಅವನು ಅತ್ಯಂತನಿಪುಣನಾಗಿದ್ದನು. ಅರಣ್ಯದಲ್ಲಿನ ಎಲ್ಲ ಪ್ರದೇಶಗಳನ್ನೂ ಚೆನ್ನಾಗಿ ತಿಳಿದುಕೊಂಡಿದ್ದನು. ಯಾವಾಗಲೂ ಪಾರಿಯಾತ್ರಪರ್ವತದ ಮೇಲೆ ಸಂಚರಿಸುತ್ತಿದ್ದು ಸರ್ವಪ್ರಾಣಿಗಳ ಧರ್ಮವನ್ನೂ ತಿಳಿದವನಾಗಿದ್ದನು. ಅವನು ಬಿಟ್ಟ ಬಾಣವು ಲಕ್ಷ್ಯವನ್ನು ಭೇದಿಸುವುದರಲ್ಲಿ ಯಾವಾಗಲೂ ವಿಫಲಗೊಳ್ಳುತ್ತಿರಲಿಲ್ಲ. ದೃಢವಾದ ಆಯುಧಗಳನ್ನು ಹೊಂದಿದ್ದನು. ನೂರಾರು ಸಂಖ್ಯೆಯ ಸೈನಿಕರನ್ನೂ ಏಕಾಕಿಯಾಗಿಯೇ ಜಯಿಸುತ್ತಿದ್ದನು. ಅವನು ಆ ಮಹಾರಣ್ಯದಲ್ಲಿದ್ದುಕೊಂಡೇ ಕಿವುಡರಾದ ಮತ್ತು ಕುರುಡರಾದ ತನ್ನ ವೃದ್ಧ ತಾಯಿ-ತಂದೆಗಳ ಸೇವೆಯನ್ನು ಮಾಡುತ್ತಿದ್ದನು. ಕಾಯವ್ಯನು ತನ್ನ ತಂದೆ-ತಾಯಿಗಳನ್ನು ಸತ್ಕರಿಸಿ ಮಧು, ಮಾಂಸ, ಫಲ, ಮೂಲ, ನಾನಾವಿಧವಾದ ಅನ್ನ–ಇವುಗಳಿಂದ ಅವರಿಗೆ ಭೋಜನಮಾಡಿಸುತ್ತಿದ್ದನು. ಮಾನನೀಯರಾದ ಇತರ ಪುರುಷರನ್ನೂ ಯಥೋಚಿತವಾಗಿ ಉಪಚರಿಸುತ್ತಿದ್ದನು. ಅರಣ್ಯದಲ್ಲಿರುತ್ತಿದ್ದ ವಾನಪ್ರಸ್ಥಬ್ರಾಹ್ಮಣರನ್ನೂ, ಸಂನ್ಯಾಸಿಗಳನ್ನೂ ಪೂಜಿಸಿ ಸತ್ಕರಿಸುತ್ತಾ ಪ್ರತಿನಿತ್ಯವೂ ಭೋಜನವನ್ನು ಅವರ ಆಶ್ರಮಗಳಿಗೇ ಕೊಂಡೊಯ್ಯುತ್ತಿದ್ದನು. ದರೋಡೆಕೋರನ ಅನ್ನವನ್ನು ತಿನ್ನುವುದು ದೋಷಯುಕ್ತವಾಗುವುದೆಂಬ ಸಂದೇಹದಿಂದ ಯಾರು ಅವನು ತಂದ ಅನ್ನವನ್ನು ತಿನ್ನುತ್ತಿರಲಿಲ್ಲವೋ–ಅಂತಹವರ ಮನೆಗೆ ಫಲ-ಮೂಲಾದಿ ಭೋಜನ ಸಾಮಗ್ರಿಗಳನ್ನು ಮುಂಜಾನೆ ಹೋಗಿ ಇಟ್ಟುಬರುತ್ತಿದ್ದನು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ಲೋಕಮರ್ಯಾದೆಯನ್ನು ಅತಿಕ್ರಮಿಸಿ ನಡೆಯುತ್ತಿದ್ದ, ನಾನಾವಿಧವಾದ ಕ್ರೂರಕರ್ಮಗಳನ್ನು ಮಾಡುತ್ತಿದ್ದ, ಅನೇಕಸಹಸ್ರ ದರೋಡೆಕೋರರು ಕಾಯವ್ಯನನ್ನು ತಮ್ಮ ಅಧಿಪತಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆಶಯದಿಂದ ಅವನನ್ನು ಸುತ್ತುವರಿದು ನಿಂತು ಪ್ರಾರ್ಥಿಸಿದರು :

ಮುಹೂರ್ತದೇಶಕಾಲಜ್ಞಃ ಪ್ರಾಜ್ಞಃ ಶೂರೋ ದೃಢವ್ರತಃ ।
ಗ್ರಾಮಣೀರ್ಭವ ನೋ ಮುಖ್ಯಃ ಸರ್ವೇಷಾಮೇವ ಸಮ್ಮತಃ ॥೧೧॥

"ನೀನು ದೇಶ, ಕಾಲ ಮತ್ತು ಮುಹೂರ್ತಗಳನ್ನು ತಿಳಿದವನಾಗಿರುವೆ. ಪ್ರಾಜ್ಞನಾಗಿರುವೆ. ಶೂರನೂ–ದೃಢವ್ರತನೂ ಆಗಿರುವೆ. ನಮ್ಮೆಲ್ಲರಿಗೂ ನೀನು ಸಮ್ಮತನಾಗಿರುವೆ. ಆದುದರಿಂದ ನೀನು ನಮಗೆ ಮುಖ್ಯ ಯಜಮಾನನಾಗು.

ಯಥಾ ಯಥಾ ವಕ್ಷ್ಯಸಿ ನಃ ಕರಿಷ್ಯಾಮಸ್ತಥಾ ತಥಾ ।
ಪಾಲಯಾಸ್ಮಾನ್ಯಥಾನ್ಯಾಯಂ ಯಥಾ ಮಾತಾ ಯಥಾ ಪಿತಾ ॥೧೨॥

ನೀನು ಯಾವ ಯಾವ ರೀತಿಯಲ್ಲಿ ಆಜ್ಞೆಮಾಡುವೆಯೋ–ನಾವು ಹಾಗೆಯೇ ನಡೆದುಕೊಳ್ಳುತ್ತೇವೆ. ತಂದೆ-ತಾಯಿಗಳು ಮಕ್ಕಳನ್ನು ಪಾಲಿಸುವಂತೆ–ನೀನು ನಮ್ಮನ್ನು ಯಥೋಚಿತವಾಗಿ ಪರಿಪಾಲಿಸು."

ಅದಕ್ಕೆ ಕಾಯವ್ಯನು ಹೇಳುತ್ತಾನೆ :

ಮಾ ವಧೀಸ್ತ್ವಂ ಸ್ತ್ರಿಯಂ ಭೀರುಂ ಮಾ ಶಿಶುಂ ಮಾ ತಪಸ್ವಿನಮ್ ।
ನಾಯುಧ್ಯಮಾನೋ ಹನ್ತವ್ಯೋ ನ ಚ ಗ್ರಾಹ್ಯಾ ಬಲಾತ್ಸ್ತ್ರಿಯಃ ॥೧೩॥

"ಪ್ರಿಯಬಂಧುಗಳೇ! ನೀವು ಯಾವಾಗಲೂ ಸ್ತ್ರೀಯರನ್ನಾಗಲೀ, ಭಯಗೊಂಡಿರುವವರನ್ನಾಗಲೀ, ಶಿಶುವನ್ನಾಗಲೀ, ತಪಸ್ವಿಯನ್ನಾಗಲೀ–ಕೊಲ್ಲಬಾರದು. ನಿಮ್ಮೊಡನೆ ಯುದ್ಧಮಾಡದೇ ಇರುವವನನ್ನೂ ಕೊಲ್ಲಬಾರದು. ಸ್ತ್ರೀಯರನ್ನು ಬಲಾತ್ಕಾರವಾಗಿ ಅಪಹರಿಸಬಾರದು.

ಸರ್ವಥಾ ಸ್ತ್ರೀ ನ ಹನ್ತವ್ಯಾ ಸರ್ವಸತ್ತ್ವೇಷು ಕೇನಚಿತ್ ।
ನಿತ್ಯಂ ತು ಬ್ರಾಹ್ಮಣೇ ಸ್ವಸ್ತಿ ಯೋದ್ಧವ್ಯಂ ಚ ತದರ್ಥತಃ ॥೧೪॥

ನಿಮ್ಮಲ್ಲಿ ಯಾರೇ ಆಗಲಿ ಸರ್ವಪ್ರಾಣಿಗಳಲ್ಲಿಯೂ ಇರುವ ಸ್ತ್ರೀವರ್ಗವನ್ನು ಕೊಲ್ಲಬಾರದು. (ಮನುಷ್ಯವರ್ಗದಲ್ಲಿ ಸ್ತ್ರೀಯರನ್ನು ಕೊಲ್ಲದಿರುವುದು ಮಾತ್ರವಲ್ಲ ; ಪ್ರಾಣಿವರ್ಗದಲ್ಲಿಯೂ ಹೆಣ್ಣುಪ್ರಾಣಿಗಳನ್ನು ಕೊಲ್ಲಬಾರದು.) ಬ್ರಾಹ್ಮಣನ ಹಿತಕ್ಕಾಗಿ ಸರ್ವದಾ ಪ್ರಯತ್ನಿಸಬೇಕು. ಅವಶ್ಯವಿದ್ದಲ್ಲಿ ಬ್ರಾಹ್ಮಣನ ಸಲುವಾಗಿ ಯುದ್ಧವನ್ನೂ ಮಾಡಬೇಕು.

ಸಸ್ಯಂ ಚ ನಾಪಿ ಹರ್ತವ್ಯಂ ಸಾರವಿಘ್ನಂ ಚ ಮಾ ಕೃಥಾಃ ।
ಪೂಜ್ಯನ್ತೇ ಯತ್ರ ದೇವಾಶ್ಚ ಪಿತರೋಽತಿಥಯಸ್ತಥಾ ॥೧೫॥

ಹೊಲ-ಗದ್ದೆಗಳಲ್ಲಿರುವ ಪೈರನ್ನು ಕೊಳ್ಳೆಹೊಡೆಯಬಾರದು. ವಿವಾಹಾದಿ ಸಮಾರಂಭಗಳು ನಡೆಯುತ್ತಿರುವಾಗ ಅದಕ್ಕೆ ವಿಘ್ನವನ್ನುಂಟುಮಾಡಬಾರದು. ದೇವತೆಗಳೂ, ಪಿತೃಗಳೂ ಮತ್ತು ಅತಿಥಿಗಳೂ ಎಲ್ಲಿ ಪೂಜಿಸಲ್ಪಡುತ್ತಿರುವರೋ ಅಲ್ಲಿ ಹಲ್ಲೆಗಳನ್ನು ನಡೆಸಬಾರದು.

ಸರ್ವಭೂತೇಷ್ವಪಿ ಚ ವೈ ಬ್ರಾಹ್ಮಣೋ ಮೋಕ್ಷಮರ್ಹತಿ ।
ಕಾರ್ಯಾ ಚೋಪಚಿತಿಸ್ತೇಷಾಂ ಸರ್ವಸ್ವೇನಾಪಿ ಯಾ ಭವೇತ್ ॥೧೬॥

ಪ್ರಾಣಿಸಾಮಾನ್ಯರಲ್ಲಿ ಬ್ರಾಹ್ಮಣನು ದರೋಡೆಕೋರರಿಂದ ವಿಮುಕ್ತನಾಗಲು ವಿಶೇಷತಃ ಅಧಿಕಾರಿಯಾಗಿದ್ದಾನೆ. ಬ್ರಾಹ್ಮಣನನ್ನು ದರೋಡೆಕೋರರು ಬಿಟ್ಟುಬಿಡಬೇಕು. ಇಷ್ಟುಮಾತ್ರವಲ್ಲ ; ದರೋಡೆಕೋರನು ತನ್ನ ಸರ್ವಸ್ವವನ್ನಾದರೂ ಕೊಟ್ಟು ಬ್ರಾಹ್ಮಣನ ಅಭಿವೃದ್ಧಿಗೆ ಪ್ರಯತ್ನಮಾಡಬೇಕು.

ಯಸ್ಯ ಹ್ಯೇತೇ ಸಮ್ಪ್ರರುಷ್ಟಾ ಮನ್ತ್ರಯನ್ತಿ ಪರಾಭವಮ್ ।
ನ ತಸ್ಯ ತ್ರಿಷು ಲೋಕೇಷು ತ್ರಾತಾ ಭವತಿ ಕಶ್ಚನ ॥೧೭॥

ಯಾವನ ವಿಷಯದಲ್ಲಿ ಬ್ರಾಹ್ಮಣರು ಕೋಪಗೊಂಡು ಅವನ ಪರಾಭವದ ವಿಷಯವಾಗಿ ಸಮಾಲೋಚಿಸುವರೋ–ಅಂತಹವನನ್ನು ರಕ್ಷಿಸಲು ಮೂರು ಲೋಕಗಳಲ್ಲಿಯೂ ಯಾವನೊಬ್ಬನೂ ಇರುವುದಿಲ್ಲ.

ಯೋ ಬ್ರಾಹ್ಮಣಾನ್ಪರಿಭವೇದ್ವಿನಾಶಂ ಚಾಪಿ ರೋಚಯೇತ್ ।
ಸೂರ್ಯೋದಯ ಇವ ಧ್ವಾನ್ತೇ ಧ್ರುವಂ ತಸ್ಯ ಪರಾಭವಃ ॥೧೮॥

ಯಾವನು ಬ್ರಾಹ್ಮಣರನ್ನು ನಿಂದಿಸುವನೋ, ಅವರ ವಿನಾಶವಾಗಲೆಂದು ಅಪೇಕ್ಷಿಸುವನೋ, ಅಂತಹವನು–ಸೂರ್ಯೋದಯವಾದೊಡನೆಯೇ ಅಂಧಕಾರವು ಪರಾಭವವನ್ನು ಹೊಂದಿ ವಿನಾಶವಾಗುವಂತೆ–ಪರಾಭವವನ್ನು ಹೊಂದಿ ವಿನಾಶವಾಗುವುದಂತೂ ನಿಶ್ಚಯ.

ಇಹೈವ ಫಲಮಾಸೀನಃ ಪ್ರತ್ಯಾಕಾಂಕ್ಷೇತ ಸರ್ವಶಃ ।
ಯೇ ಯೇ ನೋ ನ ಪ್ರದಾಸ್ಯನ್ತಿ ತಾಂಸ್ತಾಂಸ್ತೇನಾಭಿಯಾಸ್ಯಸಿ ॥೧೯॥

ನೀವು ಯಾವಾಗಲೂ ಇಲ್ಲಿಯೇ ಇದ್ದುಕೊಂಡು ಎಲ್ಲ ಕಡೆಗಳಿಂದಲೂ ಫಲವನ್ನು ನಿರೀಕ್ಷಿಸುತ್ತಿರಬೇಕು. (ಇಲ್ಲಿಯೇ ಇದ್ದುಕೊಂಡು ದಾರಿಹೋಕರಿಂದ ಹಣದ ಸುಲಿಗೆಯನ್ನು ಮಾಡಬೇಕು.) ಯಾವ ಯಾವ ವ್ಯಾಪಾರಿಗಳು ತಾವೇ ತಾವಾಗಿ ನಿಮಗೆ ಹಣವನ್ನು ಕೊಡುವುದಿಲ್ಲವೋ– ಅಂತಹವರ ಮೇಲೆ ಆಕ್ರಮಣವನ್ನು ನಡೆಸಬೇಕು.

ಶಿಷ್ಟ್ಯರ್ಥಂ ವಿಹಿತೋ ದಣ್ಡೋ ನ ವೃದ್ಧ್ಯರ್ಥಂ ವಿನಿಶ್ಚಯಃ ।
ಯೇ ಚ ಶಿಷ್ಟಾನ್ಪ್ರಬಾಧನ್ತೇ ದಣ್ಡಸ್ತೇಷಾಂ ವಧಃ ಸ್ಮೃತಃ ॥೨೦॥

ದುಷ್ಟರನ್ನು ಶಾಸನಮಾಡುವ ಸಲುವಾಗಿಯೇ ದಂಡವು ವಿಹಿತ ವಾಗಿದೆ. ತಮ್ಮಲ್ಲಿರುವ ಹಣವನ್ನು ಮತ್ತಷ್ಟು ವೃದ್ಧಿಗೊಳಿಸುವ ಸಲುವಾಗಿ ದಂಡವು ವಿಹಿತವಾಗಿಲ್ಲ. ಯಾರು ಶಿಷ್ಟಪುರುಷರನ್ನು ಬಾಧೆಪಡಿಸುವರೋ– ಅಂತಹವರಿಗೆ ಮರಣದಂಡನೆಯೇ ಸರಿಯಾದ ಶಿಕ್ಷೆಯೆಂದು ಹೇಳಲ್ಪಟ್ಟಿದೆ.

ಯೇ ಚ ರಾಷ್ಟ್ರೋಪರೋಧೇನ ವೃದ್ಧಿಂ ಕುರ್ವನ್ತಿ ಕೇಚನ ।
ತದೈವ ತೇಽನುಮಾರ್ಯನ್ತೇ ಕುಣಪೇ ಕೃಮಯೋ ಯಥಾ ॥೨೧॥

ಯಾವ ಕೆಲವರು ರಾಷ್ಟ್ರವನ್ನು ಹಾಳುಮಾಡಿಯಾದರೂ ತಮ್ಮ ಔನ್ನತ್ಯಕ್ಕಾಗಿ ಪ್ರಯತ್ನಿಸುವರೋ–ಅವರು ಹೆಣಕ್ಕೆ ಮುತ್ತಿರುವ ಕ್ರಿಮಿ ಗಳಂತೆ–ಆ ಕ್ಷಣದಲ್ಲಿಯೇ ವಿನಾಶಹೊಂದುತ್ತಾರೆ.

ಯೇ ಪುನರ್ಧರ್ಮಶಾಸ್ತ್ರೇಣ ವರ್ತೇರನ್ನಿಹ ದಸ್ಯವಃ ।
ಅಪಿ ತೇ ದಸ್ಯವೋ ಭೂತ್ವಾ ಕ್ಷಿಪ್ರಂ ಸಿದ್ಧಿಮವಾಪ್ನುಯುಃ ॥೨೨॥

ಯಾರು ದರೋಡೆಕೋರರಾಗಿಯೇ ಹುಟ್ಟಿದ್ದರೂ ಧರ್ಮಶಾಸ್ತ್ರಾನು ಸಾರವಾಗಿ ಆಚಾರ-ವ್ಯವಹಾರಗಳನ್ನಿಟ್ಟುಕೊಂಡಿರುವರೋ–ಅಂತಹವರು ದರೋಡೆಕೋರರ ವೃತ್ತಿಯನ್ನೇ ಅನುಸರಿಸಿ ಜೀವನವನ್ನು ನಡೆಸುತ್ತಿದ್ದರೂ ಬಹಳ ಬೇಗ ಸಿದ್ಧಿಯನ್ನು ಪಡೆದುಕೊಳ್ಳುತ್ತಾರೆ. (ನೀವೆಲ್ಲರೂ ನಾನು ಹೇಳಿರುವಂತೆ ನಡೆದುಕೊಳ್ಳುವುದಾದರೆ ನಾನು ನಿಮಗೆ ಯಜಮಾನನಾಗಲು ಸಮ್ಮತಿಸುತ್ತೇನೆ.)"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಕಾಯವ್ಯನನ್ನು ನಾಯಕನಾಗುವಂತೆ ಪ್ರಾರ್ಥಿಸಿ

ಕೊಳ್ಳಲು ಬಂದಿದ್ದ ಸಾವಿರಾರು ದರೋಡೆಕೋರರು ಕಾಯವ್ಯನ ಅನುಶಾಸನದಂತೆಯೇ ನಡೆದುಕೊಂಡರು. ಅದರ ಫಲವಾಗಿ ಅವರೆಲ್ಲರೂ ವೃದ್ಧಿಯನ್ನು ಹೊಂದಿದರು. ಪಾಪಗಳಿಂದಲೂ ವಿಮುಕ್ತರಾದರು. ಕಾಯವ್ಯನು ಸಾಧು-ಸತ್ಪುರುಷರಿಗೆ ಕ್ಷೇಮವನ್ನುಂಟುಮಾಡುತ್ತಿದ್ದುದರಿಂದಲೂ–ದಸ್ಯುಗಳನ್ನು ಪಾಪಕಾರ್ಯಗಳಿಂದ ವಿಮುಖರನ್ನಾಗಿ ಮಾಡುತ್ತಿದ್ದುದರಿಂದಲೂ ಮಹಾಸಿದ್ಧಿಯನ್ನು ಪಡೆದುಕೊಂಡನು.

ಇದಂ ಕಾಯವ್ಯಚರಿತಂ ಯೋ ನಿತ್ಯಮನುಚಿನ್ತಯೇತ್ ।
ನಾರಣ್ಯೇಭ್ಯೋ ಹಿ ಭೂತೇಭ್ಯೋ ಭಯಂ ಪ್ರಾಪ್ನೋತಿ ಕಿಂಚನ ॥

ಯಾರು ಈ ಕಾಯವ್ಯನ ಚರಿತ್ರೆಯನ್ನು ಪ್ರತಿನಿತ್ಯವೂ ಸ್ಮರಣೆಮಾಡಿಕೊಳ್ಳುವರೋ–ಅವರಿಗೆ ಅರಣ್ಯವಾಸಿಗಳಾದ ಪ್ರಾಣಿಗಳಿಂದ ಕಿಂಚಿತ್ತಾದರೂ ಭಯವು ಉಂಟಾಗುವುದಿಲ್ಲ.

ನ ಭಯಂ ತಸ್ಯ ಭೂತೇಭ್ಯಃ ಸರ್ವೇಭ್ಯಶ್ಚೈವ ಭಾರತ ।
ನಾಸತೋ ವಿದ್ಯತೇ ರಾಜನ್ಸ ಹ್ಯರಣ್ಯೇಷು ಗೋಪತಿಃ ॥೨೬॥

ಭಾರತ! ಕಾಯವ್ಯನ ಚರಿತ್ರೆಯನ್ನು ಅನುದಿನವೂ ಚಿಂತಿಸುವವನಿಗೆ ಸಕಲಪ್ರಾಣಿಗಳಿಂದಲೂ ಯಾವ ವಿಧವಾದ ಭಯವೂ ಇರುವುದಿಲ್ಲ. ದುಷ್ಟಾತ್ಮರಿಂದಲೂ ಅವನಿಗೆ ಯಾವ ಭಯವೂ ಇರುವುದಿಲ್ಲ. ಮಹಾರಾಜ! ಕಾಯವ್ಯನ ಮಾಹಾತ್ಮ್ಯದಿಂದಾಗಿ ಅಂತಹವನು ಅರಣ್ಯಕ್ಕೇ ಅಧಿಪತಿಯಂತಿರುತ್ತಾನೆ."

೧೩೫ನೆಯ ಅಧ್ಯಾಯವು ಮುಗಿಯಿತು.

೧೩೬ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ರಾಜನು ಯಾರ ಹಣವನ್ನು ತೆಗೆದುಕೊಳ್ಳಬಾರದು? ಯಾರದನ್ನು ತೆಗೆದುಕೊಳ್ಳಬಹುದು? ಯಾರೊಡನೆ ಹೇಗೆ ವ್ಯವಹರಿಸಬೇಕು–ಎಂಬುದರ ವಿವರಣೆ

ಜನಮೇಜಯ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ರಾಜನು ಯಾವ ಮಾರ್ಗದಿಂದ ಅಥವಾ ಉಪಾಯ

ದಿಂದ ತನ್ನ ಬೊಕ್ಕಸವನ್ನು ತುಂಬಿಕೊಳ್ಳಬೇಕೆಂಬುದರ ಬಗೆಗೆ ಪ್ರಾಚೀನೇತಿಹಾಸವನ್ನು ತಿಳಿದ ಜನರು ಬ್ರಹ್ಮನು ಹೇಳಿರುವ ಗೀತಗಳನ್ನು ಕೀರ್ತನ ಮಾಡುತ್ತಾರೆ. ಅದನ್ನೇ ನಿನಗೂ ಹೇಳುವೆನು ; ಕೇಳು :

ನ ಧನಂ ಯಜ್ಞಶೀಲಾನಾಂ ಹಾರ್ಯಂ ದೇವಸ್ವಮೇವ ಚ ।
ದಸ್ಯೂನಾಂ ನಿಷ್ಕ್ರಿಯಾಣಾಂ ಚ ಕ್ಷತ್ರಿಯೋ ಹರ್ತುಮರ್ಹತಿ ॥೨॥

'ರಾಜನು ಯಜ್ಞಾನುಷ್ಠಾನಮಾಡುವವರ ಧನವನ್ನು ಅಪಹರಿಸಬಾರದು. ಹೀಗೆಯೇ ದೈವದ ಸ್ವತ್ತನ್ನೂ (ದೇವತಾರಾಧನೆಗೆ ಬಿಟ್ಟಿರುವ ದತ್ತಿ ಮುಂತಾದುವನ್ನೂ) ಅಪಹರಿಸಬಾರದು. ದರೋಡೆಕಾರರ ಮತ್ತು ವರ್ಣಾಶ್ರಮೋಕ್ತವಾದ ಕರ್ಮಗಳನ್ನು ಮಾಡದೇ ಇರುವವರ ಧನವನ್ನು ರಾಜನು ಅಪಹರಿಸಬಹುದಾಗಿದೆ.

ಇಮಾಃ ಪ್ರಜಾಃ ಕ್ಷತ್ರಿಯಾಣಾಂ ರಾಜ್ಯಭೋಗಾಶ್ಚ ಭಾರತ ।
ಧನಂ ಹಿ ಕ್ಷತ್ರಿಯಸ್ಯೈವ ದ್ವಿತೀಯಸ್ಯ ನ ವಿದ್ಯತೇ ।
ತದಸ್ಯ ಸ್ಯಾದ್ಬಲಾರ್ಥಂ ವಾ ಧನಂ ಯಜ್ಞಾರ್ಥಮೇವ ಚ ॥೩॥

ಈ ಎಲ್ಲ ಪ್ರಜೆಗಳೂ ಕ್ಷತ್ರಿಯರಿಗೆ ಸೇರಿದವರಾಗಿದ್ದಾರೆ. ರಾಜ್ಯಭೋಗಗಳೂ ಕ್ಷತ್ರಿಯರಿಗೇ ಮೀಸಲಾಗಿವೆ. ಪ್ರಪಂಚದಲ್ಲಿರುವ ಸಕಲಧನವೂ ಕ್ಷತ್ರಿಯರದೇ ಆಗಿದೆ. ಬೇರೆ ಯಾರದ್ದೂ ಆಗಿರುವುದಿಲ್ಲ. ಆದರೆ ತನ್ನದೇ ಆಗಿರುವ ಆ ಧನವನ್ನು ರಾಜನು ಸೈನ್ಯದ ಸಂಗ್ರಹಕ್ಕಾಗಲೀ, ಯಜ್ಞಮಾಡುವುದಕ್ಕಾಗಲೀ ಉಪಯೋಗಿಸಿಕೊಳ್ಳಬೇಕು.

ಅಭೋಗ್ಯಾಶ್ಚೌಷಧೀಶ್ಛಿತ್ವಾ ಭೋಗ್ಯಾ ಏವ ಪಚನ್ತ್ಯುತ ॥೪॥

ಯೋ ವಾ ನ ದೇವಾನ್ನ ಪಿತೄನ್ನಮರ್ತ್ಯಾನ್ಹವಿಷಾರ್ಚತಿ ।
ಅನರ್ಥಕಂ ಧನಂ ತತ್ರ ಪ್ರಾಹುರ್ಧರ್ಮವಿದೋ ಜನಾಃ ॥೫॥

ಹರೇತ್ತದ್ದ್ರವಿಣಂ ರಾಜನ್ಧಾರ್ಮಿಕಃ ಪೃಥಿವೀಪತಿಃ ।
ತತಃ ಪ್ರೀಣಯತೇ ಲೋಕಂ ನ ಕೋಶಂ ತದ್ವಿಧಂ ನೃಪಃ ॥೬॥

ಮನುಷ್ಯನು ಬತ್ತ-ಗೋಧಿ ಮೊದಲಾದ ಹುಲ್ಲಿನ ರೂಪವಾದ ಪೈರುಗಳಲ್ಲಿನ ತಿನ್ನಲು ಯೋಗ್ಯವಲ್ಲದ ಭಾಗಗಳನ್ನು ಕತ್ತರಿಸಿ ತಿನ್ನಲು ಯೋಗ್ಯವಾದ ಶುದ್ಧವಾದ ಧಾನ್ಯಗಳನ್ನು ಶೇಖರಿಸಿ ಉಪಭುಂಜಿಸುತ್ತಾನೆ.

ದೇವ-ಪಿತೃಗಳನ್ನು ಹವಿಸ್ಸುಗಳಿಂದಲೂ, ಅತಿಥಿಗಳನ್ನು ಅನ್ನ-ಪಾನಗಳಿಂದಲೂ ತೃಪ್ತಿಗೊಳಿಸದೇ ಇರುವವನಲ್ಲಿರುವ ಧನವು ವ್ಯರ್ಥವೆಂದು ಧರ್ಮವನ್ನು ತಿಳಿದಿರುವ ಜನರು ಹೇಳುತ್ತಾರೆ. ತಿನ್ನಲು ಯೋಗ್ಯವಲ್ಲದ ಹುಲ್ಲಿನ ರೂಪವಾದ ಪೈರನ್ನು ಕತ್ತರಿಸಿ ಜನರು ತಿನ್ನಲು ಯೋಗ್ಯವಾದ ಧಾನ್ಯಗಳನ್ನು ಮಾಡಿಕೊಳ್ಳುವಂತೆಯೇ–ಧಾರ್ಮಿಕನಾದ ರಾಜನು ವ್ಯರ್ಥವಾಗಿ ಹೋಗುವ ಧನವನ್ನು ಲೋಭಿಗಳಿಂದ ಕಸಿದುಕೊಂಡು ಆ ಧನದ ಮೂಲಕವಾಗಿ ಪ್ರಜೆಗಳಿಗೆ ಬೇಕಾಗುವ ಅನುಕೂಲಗಳನ್ನು ಮಾಡಿಕೊಟ್ಟು ಅವರನ್ನು ಪ್ರೀತಿಗೊಳಿಸಬೇಕು. ಆದರೆ ಇಂತಹ ಧನದಿಂದ ಬೊಕ್ಕಸವನ್ನು ತುಂಬಬಾರದು.

ಅಸಾಧುಭ್ಯೋಽರ್ಥಮಾದಾಯ ಸಾಧುಭ್ಯೋ ಯಃ ಪ್ರಯಚ್ಛತಿ ।
ಆತ್ಮಾನಂ ಸಂಕ್ರಮಂ ಕೃತ್ವಾ ಕೃತ್ಸ್ನಧರ್ಮವಿದೇವ ಸಃ ॥೭॥

ತನ್ನನ್ನೇ ಸೇತುವನ್ನಾಗಿ ಮಾಡಿಕೊಂಡು ಯಾವ ರಾಜನು ದುಷ್ಟರಿಂದ ಧನವನ್ನು ತೆಗೆದುಕೊಂಡು ಸತ್ಪುರುಷರಿಗೆ ಕೊಡುತ್ತಾನೆಯೋ–ಅಂತಹ ರಾಜನು ಸಂಪೂರ್ಣಧರ್ಮವನ್ನೂ ತಿಳಿದವನಾಗಿರುತ್ತಾನೆ.

ತಥಾ ತಥಾ ಜಯೇಲ್ಲೋಕಾಞ್ಛಕ್ತ್ಯಾ ಹ್ಯೆವ ಯಥಾ ಯಥಾ ।
ಉದ್ಭಿಜ್ಜಾ ಜನ್ತವೋ ಯದ್ವಚ್ಛುಕ್ಲಜೀವಾ ಯಥಾ ಯಥಾ ।
ಅನಿಮಿತ್ತಾತ್ಸಮ್ಭವನ್ತಿ ತಥಾ ಯಜ್ಞಃ ಪ್ರಜಾಯತೇ ॥೯॥

ಯಥೈವ ದಂಶಮಶಕಂ ಯಥಾ ಚಾಣ್ಡಪಿಪೀಲಿಕಮ್ ।
ಸೈವ ವೃತ್ತಿರಯಜ್ಞೇಷು ಯಥಾ ಧರ್ಮೋ ವಿಧೀಯತೇ ॥೧೦॥

ಉದ್ಭಿಜ್ಜಗಳು (ತರು-ಗುಲ್ಮಾದಿಗಳು) ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ಬೆಳೆಯುತ್ತಾ ಹೋಗುವಂತೆ–ಧರ್ಮಜ್ಞನಾದ ರಾಜನು ತನ್ನ ಶಕ್ತಿಗೆ ಅನುಸಾರವಾಗಿ ದೇಶಗಳನ್ನು ಜಯಿಸುತ್ತಾ ಹೋಗಬೇಕು. ವಜ್ರಕೀಟವೇ ಮೊದಲಾದ ಕ್ರಿಮಿಗಳು ಯಾವ ರೀತಿಯಲ್ಲಿ ನಿರ್ನಿಮಿತ್ತವಾಗಿ ಹುಟ್ಟುತ್ತವೆಯೋ–ಅದೇ ರೀತಿಯಲ್ಲಿ ಯಜ್ಞವಿರೋಧಿಗಳಾದ ಜನರೂ ಪ್ರಪಂಚದಲ್ಲಿ ಹುಟ್ಟುತ್ತಾರೆ. ಆದುದರಿಂದ ಜನರು–ನೊಣ, ಸೊಳ್ಳೆ, ಮೊಟ್ಟೆ ಮತ್ತು ಇರುವೆಗಳ ವಿಷಯದಲ್ಲಿ ಯಾವ ವಿಧವಾದ ವ್ಯವಹಾರ

ವನ್ನಿಟ್ಟುಕೊಳ್ಳುವರೋ–ರಾಜನೂ ಅದೇ ವಿಧವಾದ ವ್ಯವಹಾರವನ್ನು ಯಜ್ಞಕರ್ಮವಿರೋಧಿಗಳಾದವರೊಡನೆಯೂ ಇಟ್ಟುಕೊಳ್ಳಬೇಕು. (ಯಜ್ಞ ಕರ್ಮವಿರೋಧಿಗಳನ್ನು ಮನುಷ್ಯರೆಂದೇ ಭಾವಿಸಬಾರದು.) ಹೀಗೆಂದು ಧರ್ಮವೇ ಅನುಶಾಸನಮಾಡುತ್ತದೆ.”

ಯಥಾ ಹ್ಯಕಸ್ಮಾದ್ಭವತಿ ಭೂಮೌ ಪಾಂಸುವಿಲೋಲಿತಃ ।
ತಥೈವೇಹ ಭವೇದ್ಧರ್ಮಃ ಸೂಕ್ಷ್ಮಃ ಸೂಕ್ಷ್ಮತರಸ್ತಥಾ ॥೧೧॥

ಅನಿರೀಕ್ಷಿತವಾಗಿ ಭೂಮಿಯಲ್ಲಿ ಬಿದ್ದಿರುವ ಧೂಳನ್ನು ಕಲ್ಲಿನ ಮೇಲಿಟ್ಟು ಅರೆದರೆ ಆ ಧೂಳಿಯು ಮತ್ತೂ ನುಣುಪಾಗುವಂತೆ–ವಿಚಾರ ಮಾಡುತ್ತಾ ಹೋದರೆ ಧರ್ಮದ ಸ್ವರೂಪವೂ ಉತ್ತರತ್ರ ಅತಿಸೂಕ್ಷ್ಮವಾಗುತ್ತಲೇ ಹೋಗುತ್ತದೆ.”

೧೩೬ನೆಯ ಅಧ್ಯಾಯವು ಮುಗಿಯಿತು.

೧೩೭ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಸಂಕಟಸಮಯಗಳಲ್ಲಿ ದೂರದರ್ಶೀ, ಪ್ರತ್ಯುತ್ಪನ್ನಮತಿ ಮತ್ತು ದೀರ್ಘಸೂತ್ರಿಗಳು ಹೇಗೆ ನಡೆದುಕೊಳ್ಳುವರೆಂಬ ವಿಷಯದಲ್ಲಿ ಮೂರು ಮೀನುಗಳ ದೃಷ್ಟಾಂತಕಥನ

ಜನಮೇಜಯ! ಭೀಷ್ಮನು ಹೇಳುತ್ತಾನೆ :

ಅನಾಗತವಿಧಾತಾ ಚ ಪ್ರತ್ಯುತ್ಪನ್ನಮತಿಶ್ಚ ಯಃ ।
ದ್ವಾವೇವ ಸುಖಮೇಧೇತೇ ದೀರ್ಘಸೂತ್ರೀ ವಿನಶ್ಯತಿ ॥೧॥

“ಯುಧಿಷ್ಠಿರ! ಯಾವನು ಸಂಕಟಕಾಲವು ಬರುವ ಮೊದಲೇ ಸಂಕಟ ದಿಂದ ಪಾರಾಗುವ ಉಪಾಯವನ್ನು ಯೋಚಿಸುತ್ತಾನೆಯೋ–ಅವನನ್ನು ಅನಾಗತವಿಧಾತ ಅಥವಾ ದೂರದರ್ಶೀ–ಎಂದು ಕರೆಯುತ್ತಾರೆ. ಯಾವನು ಸಂಕಟವು ಒದಗಿದಾಗ ಅದರ ನಿವಾರಣೋಪಾಯವನ್ನು ಕೂಡಲೇ ಯೋಚಿಸಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವನೋ–ಅಂತಹವನನ್ನು ಪ್ರತ್ಯುತ್ಪನ್ನ ಮತಿಯೆಂದು ಕರೆಯುತ್ತಾರೆ. ಅವರಿಬ್ಬರೂ ಸುಖವನ್ನು ಹೊಂದುತ್ತಾರೆ. ಪ್ರತಿಯೊಂದು ಕಾರ್ಯದಲ್ಲಿಯೂ ಯಾವನು ಅನವಶ್ಯವಾಗಿ ವಿಳಂಬ

ಮಾಡುತ್ತಾ ಕಾರ್ಯವನ್ನು ಮಾಡುವನೋ–ಅವನನ್ನು ದೀರ್ಘಸೂತ್ರೀ ಎಂದು ಕರೆಯುತ್ತಾರೆ. ದೀರ್ಘಸೂತ್ರಿಯು ಸಮಯಾನುಸಾರವಾಗಿ ಕಾರ್ಯ ಮಾಡದೇ ಇರುವುದರಿಂದ ವಿನಾಶಹೊಂದುತ್ತಾನೆ.

ಕರ್ತವ್ಯಾಕರ್ತವ್ಯಗಳನ್ನು ನಿಶ್ಚಯಿಸುವುದರಲ್ಲಿ ಯಾವನು ದೀರ್ಘ ಸೂತ್ರಿಯಾಗಿರುವನೋ–ಸಮಯಕ್ಕೆ ತಕ್ಕಂತೆ ಯಾವ ನಿಶ್ಚಯವನ್ನೂ ಮಾಡುವುದಿಲ್ಲವೋ–ಅಂತಹವನ ವಿಷಯವಾಗಿ ನಾನು ಸುಂದರವಾದ ಒಂದು ಉಪಾಖ್ಯಾನವನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಕೌಂತೇಯ! ಬಹುಸಂಖ್ಯಾತವಾದ ಮೀನುಗಳಿಂದ ಸಮೃದ್ಧವಾಗಿದ್ದ ಹೆಚ್ಚು ಆಳವಿಲ್ಲದಿದ್ದ ತಟಾಕವೊಂದರಲ್ಲಿ–ಕಾರ್ಯದಲ್ಲಿ ಕುಶಲತೆಯನ್ನು ಹೊಂದಿದ್ದ ಮೂರು ಮೀನುಗಳಿದ್ದುವು. ಆ ಮೂರು ಮೀನುಗಳೂ ಪರಸ್ಪರ ವಾಗಿ ಸ್ನೇಹದಿಂದಿರುತ್ತಾ ಜೊತೆ-ಜೊತೆಯಲ್ಲಿಯೇ ಸಂಚರಿಸುತ್ತಿದ್ದುವು. ಆ ಮೀನುಗಳಲ್ಲಿ ಮೊದಲನೆಯದು ದೀರ್ಘದರ್ಶಿಯಾಗಿದ್ದಿತು. (ಬಹಳ ಮುಂದಾಗುವುದನ್ನು ಅಂದೇ ಯೋಚಿಸಿ ಕಾರ್ಯಮಾಡುತ್ತಿದ್ದಿತು.) ಎರಡ ನೆಯದು ಪ್ರತ್ಯುತ್ಪನ್ನಮತಿಯಾಗಿದ್ದಿತು. (ಸಮಯಕ್ಕೆ ತಕ್ಕಂತೆ ಯೋಚಿಸಿ ನಿರ್ಧಾರವನ್ನು ತೆಗೆದುಕೊಂಡು ಕಾರ್ಯಮಾಡುತ್ತಿದ್ದಿತು.) ಮೂರನೆಯದು ದೀರ್ಘಸೂತ್ರಿಯಾಗಿದ್ದಿತು. (ಯಾವ ಕಾರ್ಯವನ್ನೇ ಆದರೂ ವಿಳಂಬ ವಾಗಿಯೇ ಮಾಡುತ್ತಿದ್ದಿತು.)

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಕೆಲವು ಬೆಸ್ತರು ಆ ತಟಾಕದ ಬಳಿಗೆ ಬಂದು ಆ ತಟಾಕದ ಸುತ್ತಲೂ ರಂಧ್ರಗಳನ್ನು ಕೊರೆದು ಅವುಗಳ ಮೂಲಕ ವಾಗಿ ತಟಾಕದ ನೀರನ್ನು ಹತ್ತಿರದಲ್ಲಿದ್ದ ತಗ್ಗಿನ ಪ್ರದೇಶಗಳಿಗೆ ಹರಿಸಲು ಉಪಕ್ರಮಿಸಿದರು. ಜಲಾಶಯದಲ್ಲಿದ್ದ ನೀರು ಕ್ರಮವಾಗಿ ಕಡಿಮೆಯಾಗು ತ್ತಿರುವುದನ್ನು ಕಂಡು ದೀರ್ಘದರ್ಶಿಯು–ಭಯವು ಸನ್ನಿಹಿತವಾಗಿದೆಯೆಂಬು ದನ್ನು ಮನಗಂಡು–ತನ್ನ ಇಬ್ಬರು ಸುಹೃದರನ್ನು ಕುರಿತು ಹೇಳಿತು :

ಇಯಮಾಪತ್ಸಮುತ್ಪನ್ನಾ ಸರ್ವೇಷಾಂ ಸಲಿಲೌಕಸಾಮ್ ।
ಶೀಘ್ರಮನ್ಯತ್ರ ಗಚ್ಛಾಮಃ ಪನ್ಥಾ ಯಾವನ್ನ ದುಷ್ಯತಿ ॥೭॥

"ಸುಹೃದರೇ! ಈ ಜಲಾಶಯದಲ್ಲಿರುವ ಎಲ್ಲ ಮೀನುಗಳಿಗೂ

ಆಪತ್ಕಾಲವು ಒದಗಿ ಬಂದಿರುವಂತೆ ಕಾಣುತ್ತಿದೆ. ನಾವು ಹೊರಹೋಗುವ ಮಾರ್ಗವು ದೂಷಿತವಾಗುವುದರೊಳಗಾಗಿ (ಜಲಾಶಯವು ಬರಿದಾಗುವುದ ರೊಳಗಾಗಿ) ನಾವೀಗಲೇ ಶೀಘ್ರವಾಗಿ ಬೇರೆಯ ಕಡೆಗೆ ಹೊರಟು ಹೋಗೋಣ.

ಅನಾಗತಮನರ್ಥಂ ಹಿ ಸುನಯೈರ್ಯಃ ಪ್ರಬಾಧಯೇತ್ ।
ಸ ನ ಸಂಶಯಮಾಪ್ನೋತಿ ರೋಚತಾಂ ಭೋ ವ್ರಜಾಮಹೇ ॥೮॥

ಮುಂದೆ ಬರಬಹುದಾದ ಅನರ್ಥವನ್ನು ಅದು ಬರುವ ಮೊದಲೇ ತಿಳಿದುಕೊಂಡು ಒಳ್ಳೆಯ ನೀತಿಯಿಂದ ಆ ಅನರ್ಥವನ್ನು ಯಾವನು ದೂರೀ ಕರಿಸುವನೋ ಅಂತಹವನು ಯಾವಾಗಲೂ ಕಷ್ಟಕ್ಕೀಡಾಗುವುದಿಲ್ಲ. ನನ್ನ ಮಾತು ನಿಮಗೂ ರುಚಿಸಿದ್ದೇ ಆದರೆ ಬೇರೆಯ ಜಲಾಶಯಕ್ಕೆ ಈಗಲೇ ಹೊರಟುಹೋಗೋಣ.”

ದೀರ್ಘದರ್ಶಿಯು ಹೇಳಿದ ಮಾತನ್ನು ಕೇಳಿ ದೀರ್ಘಸೂತ್ರಿಯು ಹೇಳಿತು :

“ವಯಸ್ಯ! ನೀನು ಹೇಳುವುದೇನೋ ಸರಿ. ವಿಷಯವನ್ನು ಚೆನ್ನಾ ಗಿಯೇ ಪ್ರತಿಪಾದಿಸಿರುವೆ. ಆದರೆ ನಾವು ಇಷ್ಟು ಬೇಗ ಇಲ್ಲಿಂದ ಹೊರಟು ಹೋಗುವ ಕಾರ್ಯವನ್ನು ಕೈಗೊಳ್ಳಬೇಕಾಗಿಲ್ಲವೆಂಬುದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ.”

ದೀರ್ಘಸೂತ್ರಿಯು ಹೇಳಿದ ಮಾತನ್ನು ಕೇಳಿ ಪ್ರತ್ಯುತ್ಪನ್ನಮತಿಯು ದೀರ್ಘದರ್ಶಿಯನ್ನು ಕುರಿತು ಹೇಳಿತು :

ಪ್ರಾಪ್ತೇ ಕಾಲೇ ನ ಮೇ ಕಿಂಚಿನ್ನ್ಯಾಯತಃ ಪರಿಹೀಯತೇ ॥೧೦॥

“ಸಂಕಟಕಾಲವು ಪ್ರಾಪ್ತವಾಯಿತೆಂದರೆ ನನ್ನ ಬುದ್ಧಿಯು ನ್ಯಾಯವಾದ ಯುಕ್ತಿಯನ್ನು ಹುಡುಕಲು ಯಾವಾಗಲೂ ನುಣುಚಿಕೊಳ್ಳುವುದಿಲ್ಲ. (ಪರಿಹಾರಕವಾದ ಯುಕ್ತಿಯನ್ನೇ ನಿಶ್ಚಯಿಸುತ್ತದೆ.)”

ದೀರ್ಘಸೂತ್ರಿಯೂ ಮತ್ತು ಪ್ರತ್ಯುತ್ಪನ್ನಮತಿಯೂ ಹೇಳಿದ ಮಾತು ಗಳನ್ನು ಕೇಳಿ ಮಹಾಮತಿಯಾದ ದೀರ್ಘದರ್ಶಿಯು (ಮುಂದಾಗುವುದನ್ನು ಇಂದೇ ಕಾಣುವವನು) ಸುಹೃದರನ್ನು ಕಾಯದೇ ಮೀನುಹಿಡಿಯುವವರು

ಮಾಡಿದ್ದ ಬಿರುಕುಗಳ ಮೂಲಕವಾಗಿಯೇ ಆ ತಟಾಕದಿಂದ ಹೊರ ಹೊರಟು ಆಳವಾಗಿದ್ದ ಮತ್ತೊಂದು ಜಲಾಶಯದಲ್ಲಿ ಸೇರಿಕೊಂಡಿತು.

ಒಂದೆರಡು ದಿವಸಗಳು ಕಳೆದನಂತರ ತಟಾಕದ ನೀರು ಕಡಿಮೆಯಾದುದನ್ನು ಕಂಡು ಮೀನುಗಳಿಂದಲೇ ಜೀವನವನ್ನು ನಡೆಸುವ ಆ ಮೀಂಗುಲಿಗಳು (ಬೆಸ್ತರು) ನಾನಾವಿಧವಾದ ಉಪಾಯಗಳಿಂದ ಆ ತಟಾಕದಲ್ಲಿದ್ದ ಮೀನುಗಳೆಲ್ಲವನ್ನೂ ಹಿಡಿಯತೊಡಗಿದರು. ನೀರಿನಿಂದ ಬರಿದಾಗಿದ್ದ ಆ ಜಲಾಶಯವು ಮೀನುಗಾರರಿಂದ ಕದಡಲ್ಪಡುತ್ತಿರಲಾಗಿ, ದೀರ್ಘಸೂತ್ರವೆಂಬ ಮತ್ಸ್ಯವೂ ಇತರ ಮೀನುಗಳೊಡನೆ ಸಿಕ್ಕಿಬಿದ್ದಿತು. ಮೀನುಗಳನ್ನು ಒಟ್ಟಾಗಿ ಸೇರಿಸಿ ಕಟ್ಟಿ ಸರೋವರದಿಂದ ಬಲೆಯನ್ನು ಮೇಲಕ್ಕೆಳೆಯುವ ಕಾರ್ಯವು ನಡೆಯುತ್ತಿರಲಾಗಿ ಪ್ರತ್ಯುತ್ಪನ್ನಮತಿಯೂ ಇತರ ಮೀನುಗಳ ಮಧ್ಯದಲ್ಲಿ ಸೇರಿಕೊಂಡಿದ್ದಿತು. ಮೀನುಗಾರರು ತಟಾಕದಲ್ಲಿದ್ದ ಮೀನುಗಳೆಲ್ಲವನ್ನೂ ದಾರದಿಂದ ಪೋಣಿಸುತ್ತಿದ್ದರು. ಆ ಸಮಯದಲ್ಲಿ ಪ್ರತ್ಯುತ್ಪನ್ನಮತಿಯು ಮೀನುಗಾರರು ಪೋಣಿಸುವ ಮೊದಲೇ ಆ ದಾರವನ್ನು ಕಚ್ಚಿಕೊಂಡಿದ್ದು ಮೀನುಗಾರರಿಗೆ ಅದನ್ನು ಪೋಣಿಸಿದ್ದಾಗಿರುವುದೆಂಬ ಭ್ರಾಂತಿಯನ್ನುಂಟುಮಾಡಿತು. ಎಲ್ಲ ಮೀನುಗಳನ್ನೂ ದಾರದಲ್ಲಿ ಪೋಣಿಸಿರುವುದಾಗಿ ಮೀನುಗಾರರು ತಿಳಿದುಕೊಂಡರು. ಆ ಮೀನುಗಳ ಸರಗಳನ್ನು ಎತ್ತಿಕೊಂಡು ಮೀನುಗಾರರು ಅಪಾರವಾದ ಜಲವಿದ್ದ ಸ್ಥಳಕ್ಕೆ ಹೋಗಿ ಮೀನುಗಳನ್ನು ತೊಳೆಯಲು ಪ್ರಾರಂಭಿಸಿದರು. ಆ ಸಮಯದಲ್ಲಿ ದಾರವನ್ನು ಕಚ್ಚಿಕೊಂಡಿದ್ದ ಪ್ರತ್ಯುತ್ಪನ್ನಮತಿಯು ಶೀಘ್ರವಾಗಿ ದಾರವನ್ನು ಬಿಟ್ಟು ಮೀನುಗಾರರಿಂದ ವಿಮುಕ್ತಿಯನ್ನು ಹೊಂದಿ ಅಗಾಧವಾದ ಜಲರಾಶಿಯಲ್ಲಿ ಸೇರಿಕೊಂಡಿತು. ಹೀನಬುದ್ಧಿಯಾದ, ಸೋಮಾರಿಯಾದ, ಮೂರ್ಖತನದಿಂದ ಕೂಡಿದ್ದ ದೀರ್ಘಸೂತ್ರವು–ಇಂದ್ರಿಯಪಾಟವಗಳನ್ನು ಕಳೆದುಕೊಂಡ ಮನುಷ್ಯನು ವಿನಾಶಹೊಂದುವಂತೆ–ವಿನಾಶವನ್ನು ಹೊಂದಿತು.

ಏವಂ ಪ್ರಾಪ್ತತಮಂ ಕಾಲಂ ಯೋ ಮೋಹಾನ್ನಾವಬುಧ್ಯತೇ ।
ಸ ವಿನಶ್ಯತಿ ವೈ ಕ್ಷಿಪ್ರಂ ದೀರ್ಘಸೂತ್ರೋ ಯಥಾ ಝುಷಃ ॥೧೮॥

ಹೀಗೆ ಯಾವನು ಮೋಹಪರವಶನಾಗಿ ತನಗೆ ಸಂಭವಿಸಬಹುದಾದ ಆಪತ್ಕಾಲವನ್ನು ತಿಳಿದುಕೊಳ್ಳುವುದಿಲ್ಲವೋ (ತಿಳಿದುಕೊಂಡೂ ಅದರಿಂದ ಪಾರಾಗಲು ಒಡನೆಯೇ ಕಾರ್ಯಮಾಡುವುದಿಲ್ಲವೋ)–ಅಂತಹವನು ದೀರ್ಘಸೂತ್ರವೆಂಬ ಮೀನಿನಂತೆ ಬಹಳ ಬೇಗ ವಿನಾಶಹೊಂದುತ್ತಾನೆ.

ಆದೌ ನ ಕುರುತೇ ಶ್ರೇಯಃ ಕುಶಲೋऽಸ್ಮೀತಿ ಯಃ ಪುಮಾನ್ ।
ಸ ಸಂಶಯಮವಾಪ್ನೋತಿ ಯಥಾ ಸಮ್ಪ್ರತಿಪತ್ತಿಮಾನ್ ॥೧೯॥

ಯಾವ ಮನುಷ್ಯನು ತಾನು ಕುಶಲಮತಿಯಾಗಿರುವೆನೆಂದು ಭಾವಿಸಿಕೊಂಡು ಮೊದಲೇ ತನ್ನ ಶ್ರೇಯಸ್ಸಿಗೆ ಸಾಧನವಾದ ಕಾರ್ಯವನ್ನು ಮಾಡುವುದಿಲ್ಲವೋ–ಅವನು ಪ್ರತ್ಯುತ್ಪನ್ನಮತಿಯಾಗಿದ್ದ ಮೀನಿನಂತೆ ಸಂಕಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ.

ಅನಾಗತವಿಧಾತಾ ಚ ಪ್ರತ್ಯುತ್ಪನ್ನಮತಿಶ್ಚ ಯಃ ।
ದ್ವಾವೇವ ಸುಖಮೇಧೇತೇ ದೀರ್ಘಸೂತ್ರೋ ವಿನಶ್ಯತಿ ॥೨೦॥

ಯಾವನು ದೀರ್ಘದರ್ಶಿಯಾಗಿರುವನೋ ಮತ್ತು ಯಾವನು ಪ್ರತ್ಯುತ್ಪನ್ನಮತಿಯಾಗಿರುವನೋ–ಆ ಇಬ್ಬರು ಮಾತ್ರವೇ ಸುಖವನ್ನು ಹೊಂದುತ್ತಾರೆ. ದೀರ್ಘಸೂತ್ರನು ವಿನಾಶಹೊಂದುತ್ತಾನೆ.

ಕಾಷ್ಠಗಳು, ಕಲೆಗಳು, ಮುಹೂರ್ತಗಳು, ಹಗಲು-ರಾತ್ರಿಗಳು, ಲವಗಳು, ಮಾಸಗಳು, ಪಕ್ಷಗಳು, ಆರು ಋತುಗಳು, ಸಂವತ್ಸರಗಳು, ಕಲ್ಪಗಳು–ಇವುಗಳೆಲ್ಲವೂ ಕಾಲವೆಂಬ ಹೆಸರಿನಿಂದ ಕರೆಯಲ್ಪಡುತ್ತವೆ. ಪೃಥಿವಿಯನ್ನು 'ದೇಶ' ಎಂದು ಕರೆಯುತ್ತಾರೆ. ದೇಶವನ್ನು ನೋಡಬಹುದು. ಆದರೆ ಕಾಲವನ್ನು ನೋಡಲು ಸಾಧ್ಯವಾಗುವುದಿಲ್ಲ. ಅಭೀಷ್ಟವಾದ ಮನೋರಥಗಳನ್ನು ಸಿದ್ಧಿಮಾಡಿಕೊಳ್ಳಲು ಚಿಂತಿಸಲ್ಪಡುವ ಕಾರ್ಯಗಳೆಲ್ಲವೂ ಕಾಲ-ದೇಶಗಳನ್ನೇ ಅವಲಂಬಿಸಿರುತ್ತವೆ. ಋಷಿಗಳು ಧರ್ಮಶಾಸ್ತ್ರ-ಅರ್ಥಶಾಸ್ತ್ರ-ಮೋಕ್ಷಶಾಸ್ತ್ರಗಳಲ್ಲಿ ದೇಶ ಮತ್ತು ಕಾಲಗಳನ್ನು ಕಾರ್ಯಸಿದ್ಧಿಗೆ ಪ್ರಧಾನವಾದ ಸಾಧನಗಳೆಂದು ಹೇಳಿದ್ದಾರೆ. ಮನುಷ್ಯರ ಎಲ್ಲ ಕಾಮನಾವಸ್ತುಗಳ ಸಿದ್ಧಿಗೂ ಕೂಡ ದೇಶ-ಕಾಲಗಳೇ ಪ್ರಧಾನಸಾಧನಗಳೆಂದು ಹೇಳಿದ್ದಾರೆ.

ಪರೀಕ್ಷ್ಯಕಾರೀ ಯುಕ್ತಶ್ಚ ಸ ಸಮ್ಯಗುಪಪಾದಯೇತ್ ।
ದೇಶಕಾಲಾವಭಿಪ್ರೇತೌ ತಾಭ್ಯಾಂ ಫಲಮವಾಪ್ನುಯಾತ್ ॥೨೪॥

ಯಾವ ಮನುಷ್ಯನು ಚೆನ್ನಾಗಿ ಪರೀಕ್ಷಿಸಿ (ಸಮಾಲೋಚಿಸಿ) ಕಾರ್ಯಮಾಡುವನೋ, ಯಾವಾಗಲೂ ಸಾವಧಾನತೆಯಿಂದಿರುವನೋ– ಅಂತಹ ಮನುಷ್ಯನು ಅಪೇಕ್ಷಿತವಾದ ದೇಶ-ಕಾಲಗಳನ್ನು ಉಪಯೋಗಿಸಿ ಕೊಳ್ಳುತ್ತಾನೆ. ದೇಶ-ಕಾಲಗಳ ಸಹಯೋಗದಿಂದ ಇಚ್ಛಾನುಸಾರವಾಗಿ ಫಲ ವನ್ನೂ ಪಡೆಯುತ್ತಾನೆ.''

೧೩೭ನೆಯ ಅಧ್ಯಾಯವು ಮುಗಿಯಿತು.

೧೩೮ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಶತ್ರುಗಳಿಂದ ಆಕ್ರಮಿಸಲ್ಪಟ್ಟಿರುವ ರಾಜನ ಕರ್ತವ್ಯ: ದೃಷ್ಟಾಂತರೂಪವಾಗಿ ಬೆಕ್ಕು-ಇಲಿಗಳ ಉಪಾಖ್ಯಾನಕಥನ

ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

“ಪಿತಾಮಹ! ನೀನು ಮುಂದಾಲೋಚನೆಯ ಬುದ್ಧಿಯನ್ನೂ, ಪ್ರತ್ಯುತ್ಪನ್ನಬುದ್ಧಿಯನ್ನೂ ಶ್ರೇಷ್ಠವಾದುದೆಂದು ಹೇಳಿದೆ. ದೀರ್ಘಸೂತ್ರ ಬುದ್ಧಿಯು ವಿನಾಶಕರವಾದುದೆಂದೂ ಹೇಳಿರುವೆ. ಶ್ರೇಷ್ಠವಾದ ಈ ಬುದ್ಧಿಯ ವಿಷಯವಾಗಿ ಪುನಃ ನಿನ್ನಿಂದ ಕೇಳಿ ತಿಳಿದುಕೊಳ್ಳಬೇಕೆಂದು ಇಚ್ಛಿಸಿರುತ್ತೇನೆ. ಧರ್ಮಾರ್ಥಕುಶಲನಾದ, ಧರ್ಮಶಾಸ್ತ್ರವಿಶಾರದನಾದ ರಾಜನು ಶತ್ರುಗಳಿಂದ ಪರಿವೃತನಾಗಿದ್ದರೂ ಎಂತಹ ಬುದ್ಧಿಯನ್ನು ಆಶ್ರಯಿಸುವುದರಿಂದ ಮೋಹ ಗೊಳ್ಳುವುದಿಲ್ಲ? ಕುರುಶ್ರೇಷ್ಠನೇ! ನಾನು ಈ ವಿಷಯವಾಗಿ ಪ್ರಶ್ನಿಸುತ್ತಿದ್ದೇನೆ. ಇದನ್ನು ವಿವರವಾಗಿ ತಿಳಿಸುವ ಕೃಪೆಮಾಡು. ಅನೇಕ ಶತ್ರುಗಳಿಂದ ಆಕ್ರಮಿಸಲ್ಪಟ್ಟಿರುವ ರಾಜನು ಹೇಗೆ ವ್ಯವಹರಿಸಬೇಕು? ಇದಕ್ಕೆ ಸಂಬಂಧಿಸಿ ದಂತೆ ಎಲ್ಲ ವಿಷಯಗಳನ್ನೂ ವಿಧಿಪೂರ್ವಕವಾಗಿ ಕೇಳಬೇಕೆಂದಿರುತ್ತೇನೆ.

ವಿಷಮಸ್ಥಂ ಹಿ ರಾಜಾನಂ ಶತ್ರವಃ ಪರಿಪನ್ಥಿನಃ ।
ಬಹವೋಽಪ್ಯೇಕಮುದ್ಧರ್ತುಂ ಯತನ್ತೇ ಪೂರ್ವತಾಪಿತಾಃ ॥೩॥

ಹಿಂದೆ ಪರಾಭವಗೊಂಡಿದ್ದ ಕಾರಣದಿಂದ ಪರಿತಪ್ತರಾಗಿರುವ ಅನೇಕ

ಶತ್ರುಗಳೂ ಮತ್ತು ದಸ್ಯುಗಳೂ ಕಷ್ಟದಲ್ಲಿ ಸಿಕ್ಕಿರುವ ಏಕಾಕಿಯಾದ, ಅಸಹಾಯಕನಾದ ರಾಜನನ್ನು ನಾಶಪಡಿಸಲು ಪ್ರಯತ್ನಿಸುತ್ತಿರುತ್ತಾರೆ.

ಸರ್ವತ್ರ ಪ್ರಾರ್ಥ್ಯಮಾನೇನ ದುರ್ಬಲೇನ ಮಹಾಬಲೈಃ ।
ಏಕೇನೈವಾಸಹಾಯೇನ ಶಕ್ಯಂ ಸ್ಥಾತುಂ ಭವೇತ್ಕಥಮ್ ॥೬॥

ಮಹಾಬಲಿಷ್ಠರಾದ ರಾಜರು ದುರ್ಬಲನಾದೊಬ್ಬ ರಾಜನನ್ನು ಎಲ್ಲ ಕಡೆಗಳಿಂದಲೂ ಯುದ್ಧಕ್ಕೆ ಕರೆಯುತ್ತಿರುತ್ತಾರೆ. (ನಾಶಪಡಿಸಲು ಅಪೇಕ್ಷಿಸುತ್ತಾರೆ.) ಅಸಹಾಯಕನಾದ, ಏಕಾಕಿಯಾದ ಮತ್ತು ದುರ್ಬಲನಾದ ರಾಜನು ಅವರೆಲ್ಲರನ್ನೂ ಎದುರಿಸಿ ನಿಲ್ಲಲು ಹೇಗೆ ಸಾಧ್ಯವಾಗುವುದು?

ಕಥಂ ಮಿತ್ರಮರಿಂ ಚಾಪಿ ವಿನ್ದತೇ ಭರತರ್ಷಭ ।
ಚೇಷ್ಟಿತವ್ಯಂ ಕಥಂ ಚಾತ್ರ ಶತ್ರೋರ್ಮಿತ್ರಸ್ಯ ಚಾನ್ತರೇ ॥೭॥

ರಾಜನಾದವನು ಮಿತ್ರರನ್ನೂ ಮತ್ತು ಶತ್ರುಗಳನ್ನೂ ತನ್ನ ವಶಪಡಿಸಿಕೊಳ್ಳುವುದು ಹೇಗೆ? ಶತ್ರು-ಮಿತ್ರರ ಮಧ್ಯದಲ್ಲಿ ರಾಜನು ಹೇಗೆ ನಡೆದುಕೊಳ್ಳಬೇಕು?

ಪ್ರಜ್ಞಾತಲಕ್ಷಣೇ ಮಿತ್ರೇ ತಥೈವಾಮಿತ್ರತಾಂ ಗತೇ ।
ಕಥಂ ತು ಪುರುಷಃ ಕುರ್ಯಾತ್ಕೃತ್ವಾ ಕಿಂ ವಾ ಸುಖೀ ಭವೇತ್॥೮॥

ಹಿಂದಿನ ಅವನ ಲಕ್ಷಣಗಳಿಂದ (ನಡವಳಿಕೆಗಳಿಂದ) ಮಿತ್ರನೆಂದು ಪರಿಗಣಿತನಾಗಿದ್ದವನೊಬ್ಬನು ಶತ್ರುವಾದರೆ ಅಂತಹವನೊಡನೆ ರಾಜನು ಹೇಗೆ ವ್ಯವಹರಿಸಬೇಕು? ಹೇಗೆ ವ್ಯವಹರಿಸುವುದರಿಂದ ಇವನು ಸುಖಿಯಾಗುತ್ತಾನೆ?

ವಿಗ್ರಹಂ ಕೇನ ವಾ ಕುರ್ಯಾತ್ಸಂಧಿಂ ವಾ ಕೇನ ಯೋಜಯೇತ್ ।
ಕಥಂ ವಾ ಶತ್ರುಮಧ್ಯಸ್ಥೋ ವರ್ತೇತ ಬಲವಾನಪಿ ॥೯॥

ಎಂತಹವನೊಡನೆ ಯುದ್ಧವನ್ನು ಮಾಡಬೇಕು? ಎಂತಹವನೊಡನೆ ಸಂಧಿಯನ್ನು ಮಾಡಿಕೊಳ್ಳಬೇಕು? ರಾಜನು ಬಲಿಷ್ಠನೇ ಆಗಿದ್ದರೂ ಹಲವಾರು ಶತ್ರುಗಳ ಮಧ್ಯದಲ್ಲಿದ್ದಾಗ ಹೇಗೆ ವ್ಯವಹರಿಸಬೇಕು?

ಏತದ್ವೈ ಸರ್ವಕೃತ್ಯಾನಾಂ ಪರಂ ಕೃತ್ಯಂ ಪರಂತಪ ।
ನೈತಸ್ಯ ಕಶ್ಚಿದ್ವಕ್ತಾಸ್ತಿ ಶ್ರೋತಾ ವಾಪಿ ಸುದುರ್ಲಭಃ ॥೧೦॥

ಋತೇ ಶಾನ್ತನವಾದ್ಭೀಷ್ಮಾತ್ಸತ್ಯಸಂಧಾಜ್ಜಿತೇನ್ದ್ರಿಯಾತ್ ।
ತದನ್ವಿಷ್ಯ ಮಹಾಭಾಗ ಸರ್ವಮೇತದ್ವದಸ್ವ ಮೇ ॥೧೧॥

ಪಿತಾಮಹನೇ! ಪರಂತಪ! ಅಂತಹ ಇಕ್ಕಟ್ಟಿನ ಸಮಯದಲ್ಲಿ ಮಾಡಬೇಕಾದ ಕಾರ್ಯವು ಉಳಿದ ಎಲ್ಲ ಕಾರ್ಯಗಳಿಗಿಂತಲೂ ಬಹಳ ಮುಖ್ಯವಾದುದು. ಶಾಂತನುವಿನ ಮಗನಾದ, ಸತ್ಯಸಂಧನಾದ, ಜಿತೇಂದ್ರಿಯನಾದ ಭೀಷ್ಮನನ್ನು ಬಿಟ್ಟರೆ ಈ ವಿಷಯವನ್ನು ಹೇಳುವವರೇ ಮತ್ತಾರೂ ಇರುವುದಿಲ್ಲ. ಕೇಳುವವರೂ ಅಪರೂಪವೇ. ಮಹಾಭಾಗನೇ! ನೀನು ಈ ವಿಷಯವನ್ನು ಸಂಪೂರ್ಣವಾಗಿ ಅನುಸಂಧಾನಮಾಡಿ ಸಮಗ್ರವಾಗಿ ತಿಳಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಹಿಂದೆ ನಾನು ಹೇಳಿರುವುದೆಲ್ಲವನ್ನೂ ವಿವೇಚಿಸಿ ಕೇಳುತ್ತಿರುವ ಈ ನಿನ್ನ ಪ್ರಶ್ನೆಯು ಸುಖಕ್ಕೆ ಹೇತುಭೂತವಾಗಿದೆ. ಆಪತ್ಕಾಲದಲ್ಲಿ ಏನು ಮಾಡಬೇಕು?–ಎಂಬ ಈ ವಿಷಯವು ಅತ್ಯಂತ ರಹಸ್ಯವಾದುದು. ಈ ಎಲ್ಲ ರಹಸ್ಯ ವಿಷಯಗಳನ್ನೂ ಸಮಗ್ರವಾಗಿ ತಿಳಿಸು ತ್ತೇನೆ ; ಕೇಳು.

ಅಮಿತ್ರೋ ಮಿತ್ರತಾಂ ಯಾತಿ ಮಿತ್ರಂ ಚಾಪಿ ಪ್ರದುಷ್ಯತಿ ।
ಸಾಮರ್ಥ್ಯಯೋಗಾತ್ಕಾರ್ಯಾಣಾಮನಿತ್ಯಾ ವೈ ಸದಾ ಗತಿಃ ॥೧೩॥

ಕಾರ್ಯಗಳನ್ನು ಮಾಡುವ ಸಾಮರ್ಥ್ಯವನ್ನು ಅವಲಂಬಿಸಿ ಕೆಲವು ವೇಳೆ ಶತ್ರುಗಳಾದರೂ ಮಿತ್ರರಾಗುತ್ತಾರೆ ; ಮಿತ್ರರಾಗಿದ್ದವರು ದ್ವೇಷಭಾವದಿಂದ ದೂಷಿತರಾಗುತ್ತಾರೆ. ಆದುದರಿಂದ ಶತ್ರು-ಮಿತ್ರರಿಗೆ ಸಂಬಂಧಿಸಿದ ಕಾರ್ಯಗತಿಯು ಯಾವಾಗಲೂ ಅನಿತ್ಯವಾಗಿಯೇ ಇರುತ್ತದೆ.

ತಸ್ಮಾದ್ವಿಶ್ವಸಿತವ್ಯಂ ಚ ವಿಗ್ರಹಂ ಚ ಸಮಾಚರೇತ್ ।
ದೇಶಂ ಕಾಲಂ ಚ ವಿಜ್ಞಾಯ ಕಾರ್ಯಾಕಾರ್ಯವಿನಿಶ್ಚಯೇ ॥೧೪॥

ಆದುದರಿಂದ ದೇಶ-ಕಾಲಗಳನ್ನು ಚೆನ್ನಾಗಿ ತಿಳಿದುಕೊಂಡು ಕಾರ್ಯಾಕಾರ್ಯಗಳನ್ನು ನಿಶ್ಚಯಿಸಬೇಕಾಗುತ್ತದೆ. ಹಾಗೆ ನಿಶ್ಚಯಮಾಡುವಾಗ

ಕೆಲವರ ವಿಷಯದಲ್ಲಿ ವಿಶ್ವಾಸವನ್ನಿಟ್ಟು ಸಂಧಿಮಾಡಿಕೊಳ್ಳಬೇಕಾಗುತ್ತದೆ. ಮತ್ತೆ ಕೆಲವರೊಡನೆ ಯುದ್ಧವನ್ನೇ ಮಾಡಬೇಕಾಗುತ್ತದೆ.

ಸಂಧಾತವ್ಯಂ ಬುಧೈರ್ನಿತ್ಯಂ ವ್ಯವಸ್ಯ ಚ ಹಿತಾರ್ಥಿಭಿಃ ।
ಅಮಿತ್ರೈರಪಿ ಸಂಧೇಯಂ ಪ್ರಾಣಾ ರಕ್ಷ್ಯಾ ಹಿ ಭಾರತ ॥೧೫॥

ಭಾರತನೇ! ಪರಸ್ಪರವಾಗಿ ಹಿತಾಪೇಕ್ಷಿಗಳಾದ ವಿದ್ವಾಂಸರು ಕಾರ್ಯವನ್ನು ನಿಶ್ಚಯಿಸಿ ಸಂಧಿಯನ್ನು ಮಾಡಿಕೊಳ್ಳಬೇಕು. ಕೆಲವು ಸಂದರ್ಭಗಳಲ್ಲಿ ಶತ್ರುಗಳೊಡನೆಯೂ ಸಂಧಾನಮಾಡಿಕೊಳ್ಳಬೇಕಾಗುತ್ತದೆ. ರಾಜನಾದವನಿಗೆ ತನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳುವುದೇ ಮುಖ್ಯಕರ್ತವ್ಯ ವಾಗಿರುತ್ತದೆ.

ಯೋ ಹ್ಯಮಿತ್ರೈರ್ನರೋ ನಿತ್ಯಂ ನ ಸಂದಧ್ಯಾದಪಣ್ಡಿತಃ ।
ನ ಸೋಽರ್ಥಂ ಪ್ರಾಪ್ನುಯಾತ್ಕಿಂಚಿತ್ಫಲಾನ್ಯಪಿ ಚ ಭಾರತ ॥೧೬॥

ಮೂರ್ಖನಾದ ಯಾವನು ಶತ್ರುಗಳೊಡನೆ ಯಾವಾಗಲೂ ಯಾವುದೇ ಅವಸ್ಥೆಯಲ್ಲಿಯೂ ಸಂಧಿಯನ್ನು ಮಾಡಿಕೊಳ್ಳುವುದಿಲ್ಲವೋ– ಅವನು ಅರ್ಥಸಿದ್ಧಿಯನ್ನು ಪಡೆದುಕೊಳ್ಳುವುದಿಲ್ಲ. ಯಾವ ವಿಧವಾದ ಫಲಗಳನ್ನೂ ಪಡೆದುಕೊಳ್ಳುವುದಿಲ್ಲ.

ಯಸ್ತ್ವಮಿತ್ರೇಣ ಸಂದಧ್ಯಾನ್ಮಿತ್ರೇಣ ಚ ವಿರುಧ್ಯತೇ ।
ಅರ್ಥಯುಕ್ತಿಂ ಸಮಾಲೋಕ್ಯ ಸುಮಹದ್ವಿನ್ದತೇ ಫಲಮ್ ॥೧೭॥

ಯಾವನು ಸ್ವಾರ್ಥವು ಸಿದ್ಧಿಸುವುದೆಂಬುದನ್ನು ಚೆನ್ನಾಗಿ ಕಂಡುಕೊಂಡು ಶತ್ರುಗಳೊಡನೆಯೂ ಸಂಧಿಯನ್ನು ಮಾಡಿಕೊಳ್ಳುವನೋ–ಮಿತ್ರ ರೊಡನೆಯೂ ವಿರೋಧವನ್ನು ಕಟ್ಟಿಕೊಳ್ಳುವನೋ–ಅಂತಹವನು ಮಹಾ ಫಲವನ್ನೇ ಹೊಂದುತ್ತಾನೆ.

ಈ ವಿಷಯದಲ್ಲಿ ವಿದ್ವಾಂಸರು–ವಟವೃಕ್ಷದಲ್ಲಿ ವಾಸಮಾಡಿಕೊಂಡಿದ್ದ ಬೆಕ್ಕಿಗೂ ಮತ್ತು ಇಲಿಗೂ ಹಿಂದೆ ನಡೆದ ಇತಿಹಾಸರೂಪವಾದ, ಪುರಾತನ ವಾದ ಸಂವಾದವನ್ನು ಉದಾಹರಿಸುತ್ತಾರೆ.

ದೊಡ್ಡದಾದೊಂದು ಅರಣ್ಯದಲ್ಲಿ ಲತೆಗಳ ಸಮೂಹಗಳಿಂದ ಪರಿವೃತ ವಾಗಿದ್ದ, ನಾನಾವಿಧವಾದ ಪಕ್ಷಿಗಳಿಂದ ಕೂಡಿದ್ದ, ದೊಡ್ಡದಾದ ಒಂದು

ಆಲದ ಮರವಿದ್ದಿತು. ಆ ಆಲದ ಮರವು ದೊಡ್ಡ ದೊಡ್ಡ ರೆಂಬೆಗಳನ್ನು ಹೊಂದಿದ್ದುದರಿಂದ ಮಹಾಮೇಘದಂತೆಯೇ ಕಾಣುತ್ತಿದ್ದಿತು. ವೃಕ್ಷದ ನೆಳಲು ಶೀತಲವಾಗಿದ್ದಿತು. ಆ ವೃಕ್ಷವು ಬಹಳ ಮನೋಹರವಾಗಿದ್ದುದರಿಂದಲೂ, ಅರಣ್ಯಕ್ಕೆ ಸಮೀಪದಲ್ಲಿ ಇದ್ದುದರಿಂದಲೂ ಅನೇಕಸರ್ಪಗಳೂ, ಮೃಗಗಳೂ ಆ ವೃಕ್ಷವನ್ನೇ ಆಶ್ರಯವನ್ನಾಗಿ ಮಾಡಿಕೊಂಡಿದ್ದುವು. ಆ ವೃಕ್ಷದ ಬುಡವನ್ನು ಆಶ್ರಯಿಸಿ ಹಲವಾರು ಮುಖಗಳುಳ್ಳ ಬಿಲವನ್ನು ಮಾಡಿಕೊಂಡು ಮಹಾಪ್ರಜ್ಞೆಯಿಂದ ಕೂಡಿದ್ದ 'ಪಲಿತ' ಎಂಬ ಹೆಸರಿನ ಇಲಿಯು ವಾಸಮಾಡುತ್ತಿದ್ದಿತು. ಪಕ್ಷಿಗಳ ಸಮೂಹಗಳನ್ನೇ ತಿನ್ನುತ್ತಿದ್ದ 'ಲೋಮಶ' ಎಂಬ ಹೆಸರಿನ ಬೆಕ್ಕೊಂದು ಆ ಆಲದ ಮರದ ರೆಂಬೆಯನ್ನು ಆಶ್ರಯಿಸಿಕೊಂಡು ಸುಖದಿಂದ ವಾಸಮಾಡುತ್ತಿದ್ದಿತು. ಅದೇ ಅರಣ್ಯದಲ್ಲಿ ಚಾಂಡಾಲನೊಬ್ಬನು ಮನೆಯನ್ನು ಮಾಡಿಕೊಂಡು ವಾಸವಾಗಿದ್ದನು. ಅವನು ಪ್ರತಿನಿತ್ಯವೂ ಸೂರ್ಯನು ಮುಳುಗಿದನಂತರ ಆಲದ ಮರದ ಸಮೀಪಕ್ಕೆ ಬಂದು ಮೃಗಗಳನ್ನು ಬಂಧಿಸುವ ಬಲೆಯನ್ನು ಸುತ್ತಲೂ ಬೀಸುತ್ತಿದ್ದನು. ಮೃಗಗಳ ನರಗಳಿಂದಲೇ ಮಾಡಿದ್ದ ಬಲೆಗೆ ಸಂಬಂಧಿಸಿದ ಪಾಶಗಳನ್ನು ಯಥಾವತ್ತಾಗಿ ವೃಕ್ಷಕ್ಕೆ ಬಿಗಿದು ಮನೆಗೆ ಹೋಗಿ ಸುಖವಾಗಿ ಮಲಗುತ್ತಿದ್ದನು. ಬೆಳಗಾದೊಡನೆಯೇ ಅಲ್ಲಿಗೆ ಬರುತ್ತಿದ್ದನು. ರಾತ್ರಿಯ ವೇಳೆಯಲ್ಲಿ ಅನೇಕ ಜಾತಿಯ ಮೃಗಗಳು ಆ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದುವು. ಒಂದು ದಿನ ಲೋಮಶ ಎಂಬ ಹೆಸರಿನ ಮಾರ್ಜಾಲವು ಸದಾ ಎಚ್ಚರಿಕೆಯಿಂದಿರುತ್ತಿದ್ದರೂ ಆಕಸ್ಮಿಕವಾಗಿ ಚಾಂಡಾಲನು ಬೀಸಿದ್ದ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿತು. ಮಹಾಶಕ್ತಿಶಾಲಿಯಾದ, ನಿತ್ಯವೂ ತನ್ನ ಸಜಾತೀಯರನ್ನು ಕೊಲ್ಲುವ ಸ್ವಭಾವದಿಂದ ಕೂಡಿದ್ದ, ಶತ್ರುವಾದ ಮಾರ್ಜಾಲವು ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವುದನ್ನು ತಿಳಿದು ಪಲಿತ ಎಂಬ ಹೆಸರಿನ ಇಲಿಯು ನಿರ್ಭಯವಾಗಿ ಸಂಚರಿಸತೊಡಗಿತು. ತನ್ನ ಶತ್ರುವು ಬಂಧಿಸಲ್ಪಟ್ಟನಂತರ ಅರಣ್ಯದಲ್ಲಿ ತನ್ನನ್ನು ಯಾರೂ ಏನೂ ಮಾಡುವುದಿಲ್ಲವೆಂಬ ದೃಢವಿಶ್ವಾಸದಿಂದ ಅರಣ್ಯದಲ್ಲಿ ಸಂಚರಿಸುತ್ತಾ ಆಹಾರವನ್ನು ಹುಡುಕುತ್ತಿದ್ದ ಆ ಇಲಿಗೆ ಬಹಳ ಹೊತ್ತಾದನಂತರ ಚಾಂಡಾಲನು ಬೀಸಿದ್ದ ಬಲೆಯ ಮೇಲೆ ಮಾಂಸದ ತುಂಡೊಂದು ಕಾಣಿಸಿತು. ಇಲಿಯು

ಬಲೆಯ ಮೇಲೆ ಹತ್ತಿಹೋಗಿ ಆ ಮಾಂಸದ ತುಂಡನ್ನು ಭಕ್ಷಿಸಿತು. ಬಲೆಯ ಮೇಲೆ ಬಿದ್ದಿದ್ದ ಮಾಂಸವನ್ನು ತಿನ್ನುತ್ತಿದ್ದ ಇಲಿಯು ಆ ಬಲೆಯಿಂದಲೇ ಬಂಧಿಸಲ್ಪಟ್ಟಿದ್ದ ತನ್ನ ಶತ್ರುವನ್ನು ನೋಡಿ ಮನಸ್ಸಿನಲ್ಲಿಯೇ ನಗುತ್ತಿದ್ದಿತು. ಮಾಂಸದ ಭಕ್ಷಣೆಯಲ್ಲಿಯೇ ಆಸಕ್ತವಾಗಿದ್ದ ಆ ಇಲಿಯೊಮ್ಮೆ ಮತ್ತೊಂದು ದಿಕ್ಕಿಗೆ ತಿರುಗಿ ನೋಡಿತು. ಘೋರಸ್ವರೂಪವನ್ನು ತಾಳಿದ್ದ ಮತ್ತೊಂದು ಶತ್ರುವು (ಮುಂಗುಸಿಯು) ಅಲ್ಲಿಗೆ ಬಂದಿರುವುದನ್ನು ಇಲಿಯು ನೋಡಿತು. ಆ ಮುಂಗುಸಿಯು ತೃಣಕುಸುಮಕ್ಕೆ ಸದೃಶವಾದ ಬಣ್ಣದಿಂದ ಕೂಡಿದ್ದು ಭೂಮಿಯಲ್ಲಿ ಬಿಲವನ್ನು ಮಾಡಿಕೊಂಡು ಅದರಲ್ಲಿ ವಾಸವಾಗಿದ್ದಿತು. ಅದಕ್ಕೆ ಚಂಚಲವಾದ ಮತ್ತು ಕೆಂಪಾದ ಕಣ್ಣುಗಳಿದ್ದುವು. 'ಹರಿಣ' ಎಂಬ ಹೆಸರಿನಿಂದ ಅದು ಪ್ರಸಿದ್ಧವಾಗಿದ್ದಿತು. ಇಲಿಯ ವಾಸನೆಯನ್ನು ಆಘ್ರಾಣಿಸಿದೊಡನೆಯೇ ಆ ಮುಂಗುಸಿಯು ಬಹಳ ಬೇಗ ಅಲ್ಲಿಗೆ ಆಗಮಿಸಿತು. ತನ್ನನ್ನು ಭಕ್ಷಿಸುವ ಸಲುವಾಗಿಯೇ ನಾಲಿಗೆಯಿಂದ ತುಟಿಯನ್ನು ನೆಕ್ಕುತ್ತಾ ಊರ್ಧ್ವಮುಖವಾಗಿ ಭೂಮಿಯ ಮೇಲೆ ಮುಂಗುಸಿಯು ನಿಂತಿರುವುದನ್ನು ಇಲಿಯು ನೋಡಿತು. ವೃಕ್ಷದ ಪೊಟರೆಯನ್ನೇ ಮನೆಯನ್ನಾಗಿ ಮಾಡಿಕೊಂಡಿದ್ದ, ತೀಕ್ಷ್ಣವಾದ ಕೊಕ್ಕನ್ನು ಹೊಂದಿದ್ದ, ರಾತ್ರಿಯಲ್ಲಿ ಮಾತ್ರವೇ ಸಂಚರಿಸುತ್ತಿದ್ದ, ಇಲಿಯ ಮತ್ತೊಂದು ಶತ್ರುವಾದ 'ಚಂದ್ರಕ' ಎಂಬ ಹೆಸರಿನ ಗೂಬೆಯೂ ಸಹ ಅದೇ ಆಲದ ಮರದ ರೆಂಬೆಯಲ್ಲಿ ಕುಳಿತಿರುವುದನ್ನು ಇಲಿಯು ನೋಡಿತು. ಆ ಸಮಯದಲ್ಲಿ ಇಲಿಯು ಭೂಮಿಯ ಮೇಲಿದ್ದ ಮುಂಗುಸಿಗೂ–ಮರದ ಮೇಲಿದ್ದ ಗೂಬೆಗೂ ಭಕ್ಷಣಕ್ಕೆ ವಿಷಯವಾಗಿದ್ದಿತು. ಅಂತಹ ಭಯಂಕರಸನ್ನಿವೇಶವನ್ನು ಗಮನಿಸಿದ ಇಲಿಯ ಮನಸ್ಸಿನಲ್ಲಿ ಈ ವಿಧವಾದ ಚಿಂತೆಯುಂಟಾಯಿತು :

ಆಪದ್ಯಸ್ಯಾಂ ಸುಕಷ್ಟಾಯಾಂ ಮರಣೇ ಪ್ರತ್ಯುಪಸ್ಥಿತೇ ।
ಸಮನ್ತಾದ್ಭಯ ಉತ್ಪನ್ನೇ ಕಥಂ ಕಾರ್ಯಂ ಹಿತೈಷಿಣಾ ॥೩೪॥

"ಅತ್ಯಂತಕಷ್ಟಕರವಾಗಿರುವ ಈ ಆಪತ್ಕಾಲದಲ್ಲಿ–ಅದರಲ್ಲಿಯೂ ಮರಣವೇ ಸನ್ನಿಹಿತವಾಗಿರುವ ಈ ಸಮಯದಲ್ಲಿ–ಎಲ್ಲ ಕಡೆಗಳಲ್ಲಿಯೂ ಭಯವೇ ಮೈದೋರಿ ನಿಂತಿರುವಾಗ ಸ್ವಹಿತವನ್ನು ಅಪೇಕ್ಷಿಸುವವನು ಹೇಗೆ ಕಾರ್ಯಮಾಡಬೇಕು? (ಹೇಗೆ ವ್ಯವಹರಿಸಬೇಕು?)"

ಹಾಗೆ ಎಲ್ಲ ಕಡೆಗಳಿಂದಲೂ ಆಕ್ರಮಿಸಲ್ಪಟ್ಟಿದ್ದ, ಎಲ್ಲ ಕಡೆಗಳಲ್ಲಿಯೂ ಭಯವನ್ನೇ ಕಾಣುತ್ತಿದ್ದ, ಭಯದಿಂದ ಬಹಳವಾಗಿ ಪರಿತಪಿಸುತ್ತಿದ್ದ ಇಲಿಯು ಶ್ರೇಷ್ಠವಾದ ಬುದ್ಧಿಯನ್ನು ಆಶ್ರಯಿಸಿ ಯೋಚಿಸತೊಡಗಿತು :

ಆಪದ್ವಿನಾಶಭೂಯಿಷ್ಠಂ ಗತ್ವೈಃ ಕಾರ್ಯಂ ಹಿ ಜೀವಿತಮ್ ।
ಸಮನ್ತಾತ್ಸಂಶಯಾತ್ಸೈಷಾ ತಸ್ಮಾದಾಪದುಪಸ್ಥಿತಾ ॥೩೬॥

“ಆಪತ್ತಿನಲ್ಲಿ ಸಿಕ್ಕಿಬಿದ್ದು ವಿನಾಶದ ಸಮೀಪವನ್ನೇ ಹೊಂದಿದವರೂ ತಮ್ಮ ಪ್ರಾಣಗಳ ರಕ್ಷಣೆಗಾಗಿ ಪ್ರಯತ್ನವನ್ನು ಮಾಡಲೇಬೇಕು. ಈ ಎಲ್ಲ ಕಡೆಗಳಿಂದಲೂ ಪ್ರಾಣಸಂಶಯವೇ ಒದಗಿಬಂದಿರುವ ಕಾರಣದಿಂದ ನನಗೀಗ ಪ್ರಾಣಾಪತ್ತು ಸನ್ನಿಹಿತವಾಗಿದೆ.

ಗತಂ ಮಾಂ ಸಹಸಾ ಭೂಮಿಂ ನಕುಲೋ ಭಕ್ಷಯಿಷ್ಯತಿ ।
ಉಲೂಕಶ್ಚೇಹ ತಿಷ್ಠನ್ತಂ ಮಾರ್ಜಾರಃ ಪಾಶಸಂಕ್ಷಯಾತ್ ॥೩೭॥

ನಾನೊಂದು ವೇಳೆ ಭೂಮಿಗೆ ಹಾರಿ ನನ್ನ ಬಿಲದ ಬಳಿಗೆ ಓಡಿ ಹೋಗಲು ಪ್ರಯತ್ನಿಸಿದರೆ–ಮುಂಗುಸಿಯು ನನ್ನನ್ನು ತಿಂದುಹಾಕುತ್ತದೆ. ಇಲ್ಲಿಯೇ ಇದ್ದರೆ–ವೃಕ್ಷದ ಮೇಲಿರುವ ಗೂಬೆಯೇ ತಿಂದುಹಾಕುತ್ತದೆ. ಬಲೆಯನ್ನಾದರೂ ಕತ್ತರಿಸಿ ನುಸುಳಿ ಹೋಗೋಣವೆಂದರೆ–ಬಂಧನದಿಂದ ಮುಕ್ತಿಯನ್ನು ಹೊಂದುವ ಬೆಕ್ಕು ನನ್ನನ್ನು ತಿಂದುಹಾಕುತ್ತದೆ.

ನ ತ್ವೇವಾಸ್ಮದ್ವಿಧಃ ಪ್ರಾಜ್ಞಃ ಸಮ್ಮೋಹಂ ಗನ್ತುಮರ್ಹತಿ ।
ಕರಿಷ್ಯೇ ಜೀವಿತೇ ಯತ್ನಂ ಯಾವದ್ಯುಕ್ತ್ಯಾ ಪ್ರತಿಗ್ರಹಾತ್ ॥೩೮॥

ಇಂತಹ ಸಮಯಗಳಲ್ಲಿ ನನ್ನಂತಹ ಪ್ರಾಜ್ಞನು ಮೋಹಪರವಶನಾಗುವುದು ಯುಕ್ತವಲ್ಲ. ಎಲ್ಲಿಯವರೆಗೆ ನನ್ನ ಯುಕ್ತಿಯು ಕಾರ್ಯಮಾಡುತ್ತದೆಯೋ ಅಲ್ಲಿಯವರೆಗೂ ನನ್ನ ಬುದ್ಧಿಯ ಸಹಯೋಗದಿಂದಲೂ ಆದಾನ–ಪ್ರದಾನಾದಿಗಳ ಉಪಾಯಗಳಿಂದಲೂ ನನ್ನ ಜೀವನವನ್ನು ಉಳಿಸಿಕೊಳ್ಳಲು ಪ್ರಯತ್ನವನ್ನು ಮಾಡುತ್ತೇನೆ.

ನ ಹಿ ಬುದ್ಧ್ಯಾನ್ವಿತಃ ಪ್ರಾಜ್ಞೋ ನೀತಿಶಾಸ್ತ್ರವಿಶಾರದಃ ।
ನಿಮಜ್ಜತ್ಯಾಪದಂ ಪ್ರಾಪ್ಯ ಮಹತೀಂ ದಾರುಣಾಮಪಿ ॥೩೯॥

ಬುದ್ಧಿಯಿಂದ ಯುಕ್ತನಾದವನು, ಪ್ರಾಜ್ಞನಾದವನು, ನೀತಿಶಾಸ್ತ್ರ ವಿಶಾರದನಾದವನು–ಮಹತ್ತರವಾದ, ಅತ್ಯಂತದಾರುಣವಾದ ಆಪತ್ತನ್ನು ಹೊಂದಿದರೂ–ಮುಳುಗಿಹೋಗುವುದಿಲ್ಲ. ಅದರಿಂದ ಪಾರಾಗಲು ಪ್ರಯತ್ನಿಸುತ್ತಾನೆ.

ನ ತ್ವನ್ಯಾಮಿಹ ಮಾರ್ಜಾರಾದ್ಗತಿಂ ಪಶ್ಯಾಮಿ ಸಾಮ್ಪ್ರತಮ್ ।
ವಿಷಮಸ್ಥೋ ಹ್ಯಯಂ ಶತ್ರುಃ ಕೃತ್ಯಂ ಚಾಸ್ಯಂ ಮಹನ್ಮಯಾ ॥೪೦॥

ಈ ಸಮಯದಲ್ಲಿ ನಾನು ಬೆಕ್ಕಿನ ಸಹಕಾರವನ್ನು ಪಡೆಯುವುದರ ಹೊರತಾಗಿ ನನ್ನ ರಕ್ಷಣೆಗೆ ಬೇರೆ ಗತಿಯನ್ನೇ ಕಾಣದವನಾಗಿದ್ದೇನೆ. ಈ ಬೆಕ್ಕು ನನಗೆ ಪರಮಶತ್ರುವೇ ಆಗಿದ್ದರೂ–ಇದೀಗ ಸಂಕಟದಲ್ಲಿ ಸಿಕ್ಕಿಕೊಂಡಿದೆ. ನನ್ನ ಮೂಲಕವಾಗಿ ಈಗ ಇದಕ್ಕೆ ದೊಡ್ಡ ಕೆಲಸವೇ ಆಗಬೇಕಾಗಿದೆ.

ಜೀವಿತಾರ್ಥೀ ಕಥಂ ತ್ವದ್ಯ ಶತ್ರುಭಿಃ ಪ್ರಾರ್ಥಿತಸ್ತ್ರಿಭಿಃ ।
ತಸ್ಮಾದೇನಮಹಂ ಶತ್ರುಂ ಮಾರ್ಜಾರಂ ಸಂಶ್ರಯಾಮಿ ವೈ ॥೪೧॥

ಮೂವರು ಶತ್ರುಗಳಿಗೂ ಆಹಾರರೂಪದಲ್ಲಿ ಬೇಕಾಗಿರುವ ನನಗೆ ಜೀವವನ್ನು ಉಳಿಸಿಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ಆದುದರಿಂದ ನಾನು ಈ ಸಮಯದಲ್ಲಿ ನನ್ನ ಪರಮಶತ್ರುವಾದ ಬೆಕ್ಕನ್ನೇ ಆಶ್ರಯಿಸುತ್ತೇನೆ.

ನೀತಿಶಾಸ್ತ್ರಂ ಸಮಾಶ್ರಿತ್ಯ ಹಿತಮಸ್ಯೋಪವರ್ಣಯೇ ।
ಯೇನೇಮಂ ಶತ್ರುಸಂಘಾತಂ ಮತಿಪೂರ್ವೇಣ ವಞ್ಚಯೇ ॥೪೨॥

ನೀತಿಶಾಸ್ತ್ರವನ್ನು ಆಶ್ರಯಿಸಿ ಮಾರ್ಜಾಲನಿಗೆ ನನ್ನಿಂದ ಹಿತವು ಯಾವ ರೀತಿಯಲ್ಲಾಗುವುದೆಂಬುದನ್ನು ವರ್ಣಿಸಿ ಹೇಳುತ್ತೇನೆ. ಬುದ್ಧಿಪೂರ್ವಕವಾಗಿ ಈ ನನ್ನ ಶತ್ರುಗಳ ಸಮೂಹವನ್ನು ವಂಚಿಸುತ್ತೇನೆ. ಈ ಮೂವರಿಂದಲೂ ನಾನು ಪಾರಾಗುತ್ತೇನೆ.

ಅಯಮತ್ಯನ್ತಶತ್ರುರ್ಮೇ ವೈಷಮ್ಯಂ ಪರಮಂ ಗತಃ ।
ಮೂಢೋ ಗ್ರಾಹಯಿತುಂ ಸ್ವಾರ್ಥಂ ಸಙ್ಗತ್ಯಾ ಯದಿ ಶಕ್ಯತೇ ॥೪೩॥

ಈ ಮಾರ್ಜಾಲವು ನನಗೆ ಪರಮಶತ್ರುವೆಂಬುದರಲ್ಲಿ ಸಂದೇಹವೇ ಇಲ್ಲ.

ಆದರೆ ಇದೂ ಈಗ ಅತ್ಯಂತಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುತ್ತದೆ. ಸಾಧ್ಯವಾದರೆ ಈ ಮೂಢಶತ್ರುವಿನೊಡನೆಯೇ ಸ್ನೇಹಮಾಡಿಕೊಂಡು ಸ್ವಾರ್ಥಸಾಧನೆಯನ್ನು ಮಾಡಿಕೊಳ್ಳಲು ಸಾಧ್ಯವೇ? ಎಂಬುದನ್ನು ನೋಡುತ್ತೇನೆ.

ಕದಾಚಿದ್ವ್ಯಸನಂ ಪ್ರಾಪ್ಯ ಸಂಧಿಂ ಕುರ್ಯಾನ್ಮಯಾ ಸಹ ।
ಬಲಿನಾ ಸಂನಿಕೃಷ್ಟಸ್ಯ ಶತ್ರೋರಪಿ ಪರಿಗ್ರಹಃ ।
ಕಾರ್ಯ ಇತ್ಯಾಹುರಾಚಾರ್ಯಾ ವಿಷಮೇ ಜೀವಿತಾರ್ಥಿನಾ ॥೪೫॥

ಮಾರ್ಜಾಲವು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುವುದರಿಂದ ನನ್ನೊಡನೆ ಸಂಧಿಯನ್ನು ಮಾಡಿಕೊಳ್ಳಬಹುದು. ಆಪತ್ಕಾಲದಲ್ಲಿ ಜೀವವನ್ನು ಉಳಿಸಿ ಕೊಳ್ಳಬೇಕೆಂದು ಇಚ್ಛಿಸುವವನು ಬಲಿಷ್ಠನೇ ಆಗಿದ್ದರೂ–ತನ್ನ ಹತ್ತಿರದಲ್ಲಿರುವ ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಳ್ಳುವುದು ಸೂಕ್ತವೆಂದು ನೀತಿಶಾಸ್ತ್ರಜ್ಞರಾದ ಆಚಾರ್ಯರು ಹೇಳುತ್ತಾರೆ.

ಶ್ರೇಷ್ಠೋ ಹಿ ಪಣ್ಡಿತಃ ಶತ್ರುರ್ನ ಚ ಮಿತ್ರಮಪಣ್ಡಿತಃ ।
ಮಮ ತ್ವಮಿತ್ರೇ ಮಾರ್ಜಾರೇ ಜೀವಿತಂ ಸಮ್ಪ್ರತಿಷ್ಠಿತಮ್ ॥೪೬॥

ಮೂರ್ಖನಾದ ಮಿತ್ರನಿಗಿಂತಲೂ ಪಂಡಿತನಾದ ಶತ್ರುವೇ ಸಮಯ ಗಳಲ್ಲಿ ಶ್ರೇಷ್ಠನೆನಿಸಿಕೊಳ್ಳುತ್ತಾನೆ. ಈಗ ನನಗೆ ಪರಮಶತ್ರುವಾದ ಮಾರ್ಜಾಲದಲ್ಲಿಯೇ ನನ್ನ ಜೀವಿತವು ಪ್ರತಿಷ್ಠಿತವಾಗಿದೆ. ನನ್ನ ಉಳಿವು-ಅಳಿವುಗಳು ಇದನ್ನೇ ಅವಲಂಬಿಸಿವೆ.

ಹನ್ತಾಸ್ಮೈ ಸಮ್ಪ್ರವಕ್ಷ್ಯಾಮಿ ಹೇತುಮಾತ್ಮಾಭಿರಕ್ಷಣೇ ।
ಅಪೀದಾನೀಮಯಂ ಶತ್ರುಃ ಸಙ್ಗತ್ಯಾ ಪಣ್ಡಿತೋ ಭವೇತ್ ॥೪೭॥

ಈಗ ನಾನು ಇದರ ಆತ್ಮರಕ್ಷಣೆಗಾಗಿ ಒಂದು ಯುಕ್ತಿಯನ್ನು ಹೇಳು ತ್ತೇನೆ. ಇದು ನನ್ನ ಶತ್ರುವೇ ಆಗಿದ್ದರೂ ಈಗ ನನ್ನ ಸಹವಾಸದಿಂದ ಕಾರ್ಯಾಕಾರ್ಯಗಳನ್ನು ನಿಶ್ಚಯಿಸಲು ಸಮರ್ಥನಾದ ವಿದ್ವಾಂಸನೇ ಆಗಬಹುದು."

ಯುಧಿಷ್ಠಿರ! ಶತ್ರುವಿನ ಕಾರ್ಯದ ವಿಷಯವಾಗಿ ಇಲಿಯು ಹೀಗೆ ಚಿಂತಿಸಿತು. ಅರ್ಥಸಿದ್ಧಿಯ ಉಪಾಯವನ್ನು ಯಥಾವತ್ತಾಗಿ ತಿಳಿದಿದ್ದ,

ಸಂಧಿಯನ್ನಾಗಲೀ ಅಥವಾ ವಿಗ್ರಹವನ್ನಾಗಲೀ ಯಾವ ಸಮಯದಲ್ಲಿ–ಯಾರೊಡನೆ–ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಅರಿತಿದ್ದ ಇಲಿಯು ಬೆಕ್ಕನ್ನು ಕುರಿತು ಸಾಂತ್ವಪೂರ್ವಕವಾಗಿ ಹೇಳಿತು :

ಸೌಹೃದೇನಾಭಿಭಾಷೇ ತ್ವಾಂ ಕಚ್ಚಿನ್ಮಾರ್ಜಾರ ಜೀವಸಿ ।
ಜೀವಿತಂ ಹಿ ತವೇಚ್ಛಾಮಿ ಶ್ರೇಯಃ ಸಾಧಾರಣಂ ಹಿ ನೌ ॥೫೦॥

"ಮಾರ್ಜಾಲನೇ! ನಾನು ನಿನ್ನೊಡನೆ ಮಿತ್ರಭಾವವನ್ನಿಟ್ಟುಕೊಂಡು ಮಾತನಾಡುತ್ತಿದ್ದೇನೆ. ನೀನು ಕಷ್ಟದಲ್ಲಿ ಸಿಕ್ಕಿದ್ದರೂ ಇದುವರೆಗೂ ಬದುಕಿಯೇ ಇರುವೆಯಲ್ಲವೇ? ನಿನ್ನ ಜೀವಿತವು ಸುರಕ್ಷಿತವಾಗಿರಬೇಕೆಂದು ನಾನೂ ಇಚ್ಛಿಸುತ್ತೇನೆ. ಏಕೆಂದರೆ : ಇದರಲ್ಲಿ ನಮ್ಮಿಬ್ಬರಿಗೂ ಒಂದೇ ರೀತಿಯ ಶ್ರೇಯಸ್ಸಿದೆ. (ನಾನು ಬದುಕಿರುವುದರಿಂದ ನಿನಗೂ ಶ್ರೇಯಸ್ಸುಂಟಾಗುತ್ತದೆ. ನೀನು ಬದುಕಿರುವುದರಿಂದ ನನಗೂ ಶ್ರೇಯಸ್ಸುಂಟಾಗುತ್ತದೆ.)

ನ ತೇ ಸೌಮ್ಯ ಭಯಂ ಕಾರ್ಯಂ ಜೀವಿಷ್ಯಸಿ ಯಥಾಸುಖಮ್ ।
ಅಹಂ ತ್ವಾಮುದ್ಧರಿಷ್ಯಾಮಿ ಯದಿ ಮಾಂ ನ ಜಿಘಾಂಸಸಿ ॥೫೧॥

ಸೌಮ್ಯನೇ! ನೀನು ಭಯಪಡಬೇಕಾದ ಕಾರಣವಿಲ್ಲ. ಮುಂದೆ ನೀನು ಸುಖವಾಗಿಯೇ ಜೀವನವನ್ನು ನಡೆಸುವೆ. ನೀನು ನನ್ನನ್ನು ಕೊಲ್ಲುವುದಿಲ್ಲವಾದರೆ–ನಾನು ನಿನ್ನನ್ನು ಈ ಸಂಕಟದಿಂದ ಉದ್ಧಾರ ಮಾಡುತ್ತೇನೆ.

ಅಸ್ತಿ ಕಶ್ಚಿದುಪಾಯೋಽತ್ರ ದುಷ್ಕರಃ ಪ್ರತಿಭಾತಿ ಮೇ ।
ಯೇನ ಶಕ್ಯಸ್ತ್ವಯಾ ಮೋಕ್ಷಃ ಪ್ರಾಪ್ತುಂ ಶ್ರೇಯಸ್ತಥಾ ಮಯಾ ॥೫೨॥

ಒಂದು ಉಪಾಯವಿದೆ. ಅದರಿಂದ ನೀನೂ ಸಂಕಟದಿಂದ ಪಾರಾಗಬಹುದು. ನನಗೂ ಶ್ರೇಯಸ್ಸುಂಟಾಗುತ್ತದೆ. ಆದರೆ ಆ ಉಪಾಯವು ಅತ್ಯಂತ ದುಷ್ಕರವಾದುದೆಂದು ನನಗೆ ಭಾಸವಾಗುತ್ತಿದೆ.

ಮಯಾಪ್ಯುಪಾಯೋ ದೃಷ್ಟೋಽಯಂ ವಿಚಾರ್ಯ ಮತಿಮಾತ್ಮನಃ ।
ಆತ್ಮಾರ್ಥಂ ಚ ತ್ವದರ್ಥಂ ಚ ಶ್ರೇಯಃ ಸಾಧಾರಣಂ ಹಿ ನೌ ॥೫೩॥

ನಾನು ನನ್ನ ಬುದ್ಧಿಯಿಂದ ಬಹಳವಾಗಿ ವಿಚಾರಮಾಡಿ ನನ್ನ ಬಿಡುಗಡೆಯ ಸಲುವಾಗಿಯೂ ಮತ್ತು ನಿನ್ನ ಬಿಡುಗಡೆಯ ಸಲುವಾಗಿಯೂ ಒಂದು ಉಪಾಯವನ್ನು ಕಂಡುಕೊಂಡಿದ್ದೇನೆ. ಇದರಿಂದ ನಮ್ಮಿಬ್ಬರಿಗೂ ಏಕಮುಖವಾದ ಶ್ರೇಯಸ್ಸುಂಟಾಗುತ್ತದೆ.

ಇದಂ ಹಿ ನಕುಲೋಲೂಕಂ ಪಾಪಬುದ್ಧ್ಯಾಭಿಸಂಸ್ಥಿತಮ್ ।
ನ ಧರ್ಷಯತಿ ಮಾರ್ಜಾರ ತೇನ ಮೇ ಸ್ವಸ್ತಿಸಾಮ್ಪ್ರತಮ್ ॥೫೮॥

ಇದೋ ನೋಡು, ಮಾರ್ಜಾಲ! ಇಲ್ಲಿರುವ ಮುಂಗುಸಿ ಮತ್ತು ಗೂಬೆಗಳು ನನ್ನನ್ನು ಕಬಳಿಸಬೇಕೆನ್ನುವ ಪಾಪಬುದ್ಧಿಯಿಂದ ಕುಳಿತಿವೆ. ಇವು ಎಲ್ಲಿಯವರೆಗೆ ನನ್ನ ಮೇಲೆ ಆಕ್ರಮಣವನ್ನು ನಡೆಸುವುದಿಲ್ಲವೋ–ಅಲ್ಲಿಯವರೆಗೂ ನಾನು ಕುಶಲಿಯಾಗಿರುತ್ತೇನೆ.

ಕೂಜಂಶ್ಚಪಲನೇತ್ರೋಽಯಂ ಕೌಶಿಕೋ ಮಾಂ ನಿರೀಕ್ಷತೇ ।
ನಗಶಾಖಾಗ್ರಗಃ ಪಾಪಸ್ತಸ್ಯಾಹಂ ಭೃಶಮುದ್ವಿಜೇ ॥೫೯॥

ಚಂಚಲವಾದ ಕಣ್ಣುಗಳನ್ನು ಹೊಂದಿರುವ, ಆಲದ ಮರದ ಕೊಂಬೆಯ ತುದಿಯಲ್ಲಿ ಕುಳಿತಿರುವ, ಪಾಪಬುದ್ಧಿಯಾದ ಗೂಬೆಯು ಕೂಗುತ್ತಾ ನನ್ನನ್ನೇ ದಿಟ್ಟಿಸಿ ನೋಡುತ್ತಿದೆ. ಇದರ ಕಾರಣದಿಂದ ನಾನು ಬಹಳ ಉದ್ವಿಗ್ನನಾಗಿದ್ದೇನೆ.

ಸತಾಂ ಸಾಪ್ತಪದಂ ಮೈತ್ರಂ ಸ ಸಖಾ ಮೇಽಸಿ ಪಣ್ಡಿತಃ ।
ಸಾಂವಾಸ್ಯಕಂ ಕರಿಷ್ಯಾಮಿ ನಾಸ್ತಿ ತೇ ಭಯಮದ್ಯ ವೈ ॥೬೦॥

ಸತ್ಪುರುಷರೊಡನೆ ಏಳು ಹೆಜ್ಜೆಗಳು ಅವರ ಜೊತೆಗೂಡಿ ನಡೆಯುವುದರಿಂದಲೇ ಮಿತ್ರತ್ವವುಂಟಾಗುತ್ತದೆ. ನಾವಾದರೋ ಯಾವಾಗಲೂ ಈ ಮರದಲ್ಲಿ ಜೊತೆಯಲ್ಲಿಯೇ ಇದ್ದೇವೆ. ಆದುದರಿಂದ ಪಂಡಿತನಾದ ನೀನು ನನಗೆ ಮಿತ್ರನಾಗಿರುವೆ. ನಾನೂ ಮತ್ತು ನೀನೂ ಜೊತೆಗೂಡುವುದರ ಫಲವಾಗಿ ಮಾಡಬೇಕಾದ ಮಿತ್ರಕರ್ತವ್ಯವನ್ನು ನಾನು ಅವಶ್ಯವಾಗಿ ಮಾಡುತ್ತೇನೆ. ಆದುದರಿಂದ ನಿನಗೀಗ ಭಯವೆಂಬುದೇ ಇಲ್ಲ.

ನ ಹಿ ಶಕ್ತೋಽಸಿ ಮಾರ್ಜಾರ ಪಾಶಂ ಛೇತ್ತುಂ ಮಯಾ ವಿನಾ ।
ಅಹಂ ಛೇತ್ಸ್ಯಾಮಿ ಪಾಶಾಂಸ್ತೇ ಯದಿ ಮಾಂ ತ್ವಂ ನ ಹಿಂಸಸಿ ॥೬೧॥

ಮಾರ್ಜಾಲನೇ! ನೀನು ನನ್ನ ಸಹಾಯವಿಲ್ಲದೇ ನಿನ್ನನ್ನು ಬಂಧಿಸಿರುವ ಈ ಪಾಶಗಳನ್ನು ಕತ್ತರಿಸಿಕೊಳ್ಳಲು ಸಮರ್ಥನಲ್ಲ. ನೀನು ನನ್ನನ್ನು ಹಿಂಸಿಸದಿದ್ದರೆ–ನಿನ್ನನ್ನು ಬಂಧಿಸಿರುವ ಈ ಪಾಶಗಳನ್ನು ನಾನು ಕತ್ತರಿಸಿ ಹಾಕುತ್ತೇನೆ.

ತ್ವಮಾಶ್ರಿತೋ ದ್ರುಮಸ್ಯಾಗ್ರಂ ಮೂಲಂ ತ್ವಹಮುಪಾಶ್ರಿತಃ ।
ಚಿರೋಷಿತಾವುಭಾವಾವಾಂ ವೃಕ್ಷೇಽಸ್ಮಿನ್ವಿದಿತಂ ಚ ತೇ ॥೫೮॥

ನೀನು ವಟವೃಕ್ಷದ ಅಗ್ರಭಾಗದಲ್ಲಿ ವಾಸಮಾಡುತ್ತಿದ್ದರೆ ನಾನು ಈ ವೃಕ್ಷದ ಮೂಲದಲ್ಲಿ ವಾಸಮಾಡುತ್ತಿರುವೆನು. ಬಹಳ ಕಾಲದಿಂದಲೂ ನಾವಿಬ್ಬರೂ ಈ ವೃಕ್ಷವನ್ನೇ ಆಶ್ರಯಿಸಿಕೊಂಡಿರುತ್ತೇವೆ. ಈ ವಿಷಯವು ನಿನಗೂ ತಿಳಿದೇ ಇರುವುದು.

ಯಸ್ಮಿನ್ನಾಶ್ವಾಸತೇ ಕಶ್ಚಿದ್ಯಶ್ಚ ನಾಶ್ವಸಿತಿ ಕ್ವಚಿತ್ ।
ನ ತೌ ಧೀರಾಃ ಪ್ರಶಂಸನ್ತಿ ನಿತ್ಯಮುದ್ವಿಗ್ನಮಾನಸೌ ॥೫೯॥

ಯಾವನಲ್ಲಿ ಯಾವನೊಬ್ಬನೂ ವಿಶ್ವಾಸವನ್ನಿಡುವುದಿಲ್ಲವೋ, ಯಾವನು ಯಾರಲ್ಲಿಯೂ ನಂಬಿಕೆಯಿಡುವುದಿಲ್ಲವೋ, ಅಂತಹವರನ್ನು ಧೀರರಾದವರು ಪ್ರಶಂಸೆಮಾಡುವುದಿಲ್ಲ. ಏಕೆಂದರೆ : ಅಂತಹವರ ಮನಸ್ಸಿನಲ್ಲಿ ಯಾವಾಗಲೂ ಉದ್ವೇಗವೇ ಇರುತ್ತದೆ.

ತಸ್ಮಾದ್ವಿವರ್ಧತಾಂ ಪ್ರೀತಿರ್ನಿತ್ಯಂ ಸಂಗತಮಸ್ತು ನೌ ।
ಕಾಲಾತೀತಮಿಹಾರ್ಥಂ ತು ನ ಪ್ರಶಂಸನ್ತಿ ಪಣ್ಡಿತಾಃ ॥೬೦॥

ಆದುದರಿಂದ ಈ ಸಮಯದಲ್ಲಿ ನಾವಿಬ್ಬರೂ ಒಬ್ಬರು ಮತ್ತೊಬ್ಬರನ್ನು ನಂಬೋಣ. ನಮ್ಮ ಪ್ರೀತಿಯು ವರ್ಧಿಸಲಿ. ನಿತ್ಯವೂ ನಮ್ಮಿಬ್ಬರಿಗೂ ಸಂಪರ್ಕವಿರಲಿ. ನಮ್ಮಿಬ್ಬರ ಬಂಧವಿಮೋಚನಾಕಾರ್ಯವು ಈ ಕ್ಷಣ ದಲ್ಲಿಯೇ ಆಗಬೇಕು. ಕಾಲಾತೀತವಾಗಿ ಮಾಡುವ ಕಾರ್ಯವನ್ನು ಪಂಡಿತರು ಪ್ರಶಂಸೆಮಾಡುವುದಿಲ್ಲ.

ಅರ್ಥಯುಕ್ತಿಮಿಮಾಂ ತತ್ರ ಯಥಾಭೂತಾಂ ನಿಶಾಮಯ ।
ತವ ಜೀವಿತಮಿಚ್ಛಾಮಿ ತ್ವಂ ಮಮೇಚ್ಛಸಿ ಜೀವಿತಮ್ ॥೬೧॥

ಯಥಾರೂಪವಾದ, ನಮ್ಮಿಬ್ಬರಿಗೂ ಪ್ರಯೋಜನಕಾರಿಯಾದ ಈ ನನ್ನ ಉಪಾಯವನ್ನಾದರೂ ನೋಡು. ನೀನು ನನ್ನ ಜೀವನದ ರಕ್ಷಣೆಯನ್ನು ಇಚ್ಛಿಸಿದ್ದೇ ಆದರೆ–ನಾನೂ ನಿನ್ನ ಜೀವನದ ರಕ್ಷಣೆಯನ್ನು ಇಚ್ಛಿಸುತ್ತೇನೆ.

ಕಶ್ಚಿತ್ತರತಿ ಕಾಷ್ಠೇನ ಸುಗಮ್ಭೀರಾಂ ಮಹಾನದೀಮ್ ।
ನ ತಾರಯತಿ ತತ್ಕಾಷ್ಠಂ ಸ ಚ ಕಾಷ್ಠೇನ ತಾರ್ಯತೇ ॥೬೨॥

ಆಳವಾಗಿರುವ ಮತ್ತು ವಿಶಾಲವಾಗಿರುವ ಮಹಾನದಿಯನ್ನು ಒಬ್ಬನು ಒಂದು ಕಟ್ಟಿಗೆಯ ಸಹಾಯದಿಂದ ದಾಟುತ್ತಾನೆ. ಹಾಗೆ ಅವನು ನದಿಯನ್ನು ದಾಟುವಾಗ ತಾನೊಬ್ಬನೇ ದಾಟುವುದಿಲ್ಲ. ತನಗೆ ಆಶ್ರಯವನ್ನಿತ್ತ ಕಟ್ಟಿಗೆಯನ್ನೂ ದಾಟಿಸುತ್ತಾನೆ. ಅವನೂ ಕಟ್ಟಿಗೆಯಿಂದ ದಾಟಿಸಲ್ಪಡುತ್ತಾನೆ. (ಕಟ್ಟಿಗೆಯೂ ಅವನನ್ನು ದಾಟಿಸುತ್ತದೆ.) ಹೀಗೆ ಪರಸ್ಪರ ಸಹಕಾರದಿಂದ ಇಬ್ಬರೂ ಕಷ್ಟವನ್ನು ಪರಿಹರಿಸಿಕೊಳ್ಳಬಹುದು.

ಈ ರೀತಿಯಲ್ಲಿ ನಮ್ಮಿಬ್ಬರ ಸಮಾಯೋಗವು ಚಿರಸ್ಥಾಯಿಯಾಗಿರುತ್ತದೆ. ನಾನು ನಿನ್ನನ್ನು ವಿಪತ್ತಿನಿಂದ ಪಾರುಮಾಡುತ್ತೇನೆ. ನೀನು ನನ್ನನ್ನೂ ಪಾರುಮಾಡುವೆ."

ಹೀಗೆ ಪಲಿತನು (ಇಲಿಯು) ಇಬ್ಬರಿಗೂ ಹಿತಕರವಾದ, ಯುಕ್ತಿಯುಕ್ತವಾದ, ಸಕಾರಣವಾದ, ಗ್ರಹಿಸಲು ಯೋಗ್ಯವಾದ ಮಾತನ್ನು ಮಾರ್ಜಾಲನಿಂದ ಉತ್ತರವನ್ನು ನಿರೀಕ್ಷಿಸುತ್ತಾ ಬೆಕ್ಕಿನ ಕಡೆಗೆ ನೋಡಿತು.

ಶತ್ರುವಿನ ಯುಕ್ತಿಯುಕ್ತವಾದ, ಗ್ರಹಿಸಲು ಯೋಗ್ಯವಾದ, ಸುಂದರವಾದ ಮಾತನ್ನು ಕೇಳಿ ಬುದ್ಧಿಯಿಂದ ಕೂಡಿದ್ದ ಮಾರ್ಜಾಲವು ಹೇಳತೊಡಗಿತು. ಮಾರ್ಜಾಲವು ಒಳ್ಳೆಯ ಬುದ್ಧಿಯಿಂದ ಕೂಡಿದ್ದಿತು. ಮಾತನಾಡುವುದರಲ್ಲಿ ಕುಶಲಿಯಾಗಿದ್ದಿತು. ತನ್ನ ಆಗಿನ ಅವಸ್ಥೆಯನ್ನು ಮನಗಂಡು ಇಲಿಯು ಹೇಳಿದ ಮಾತುಗಳನ್ನೇ ಪುನಃ ವರ್ಣನೆಮಾಡುತ್ತಾ ಸೌಮ್ಯಭಾವದಿಂದಲೇ ಇಲಿಯ ಮಾತುಗಳನ್ನು ಪ್ರಶಂಸೆಮಾಡಿತು. ಮುಂಭಾಗದಲ್ಲಿ ತೀಕ್ಷ್ಣವಾದ ಹಲ್ಲುಗಳನ್ನು ಹೊಂದಿದ್ದ, ವೈದೂರ್ಯಮಣಿಯಂತಹ ಫಳ-

ಘಳಿಸುವ ಕಣ್ಣುಗಳಿಂದ ಕೂಡಿದ್ದ, ಲೋಮಶನಾಮಕ ಮಾರ್ಜಾಲವು ಇಲಿಯ ಕಡೆಗೆ ಸ್ವಲ್ಪ ಕಣ್ಣನ್ನು ಹೊರಳಿಸಿ ಹೇಳಿತು :

ನನ್ದಾಮಿ ಸೌಮ್ಯ ಭದ್ರಂ ತೇ ಯೋ ಮಾಂ ಜೀವಿತುಮಿಚ್ಛಸಿ ।
ಶ್ರೇಯಶ್ಚ ಯದಿ ಜಾನೀಷೇ ಕ್ರಿಯತಾಂ ಮಾ ವಿಚಾರಯ ॥೬೮॥

"ಸೌಮ್ಯನೇ! ನಾನು ಜೀವಂತನಾಗಿಯೇ ಇರಲು ಇಚ್ಛಿಸಿರುವ ನಿನ್ನನ್ನು ಅಭಿನಂದಿಸುತ್ತೇನೆ. (ಪ್ರಶಂಸೆಮಾಡುತ್ತೇನೆ.) ನಿನಗೆ ಮಂಗಳವಾಗಲಿ. ನೀನು ಮಾಡುವ ಕಾರ್ಯದಿಂದ ಶ್ರೇಯಸ್ಸುಂಟಾಗುವುದೆಂದು ನೀನು ಭಾವಿಸುವುದಾದರೆ–ಈಗಲೇ ಆ ಕಾರ್ಯವನ್ನು ಮಾಡು. ಬೇರೆ ಯಾವುದನ್ನೂ ವಿಚಾರಮಾಡಬೇಕಾಗಿಲ್ಲ.

ಅಹಂ ಹಿ ಭೃಶಮಾಪನ್ನಸ್ತ್ವಮಾಪನ್ನತರೋ ಮಮ ।
ದ್ವಯೋರಾಪನ್ನಯೋಃ ಸಂಧಿಃ ಕ್ರಿಯತಾಂ ಮಾ ಚಿರಾಯ ಚ ॥೬೯॥

ಪಲಿತ! ನಾನು ಮಹಾವಿಪತ್ತಿನಲ್ಲಿ ಸಿಕ್ಕಿಹಾಕಿಕೊಂಡಿರುತ್ತೇನೆ. ನೀನು ನನಗಿಂತಲೂ ಅಧಿಕವಾದ ಆಪತ್ತಿನಲ್ಲಿ ಸಿಕ್ಕಿಹಾಕಿಕೊಂಡಿರುವೆ. ಆಪತ್ತಿನಲ್ಲಿ ಸಿಕ್ಕಿಹಾಕಿಕೊಂಡಿರುವ ನಮ್ಮಿಬ್ಬರ ನಡುವೆ ಸಂಧಿಯು ಏರ್ಪಡಲಿ. ಸಾವಕಾಶಮಾಡುವುದು ಬೇಡ.

ವಿಧಾಸ್ಯೇ ಪ್ರಾಪ್ತಕಾಲಂ ಯತ್ಕಾರ್ಯಂ ಸಿದ್ಧಿಕರಂ ವಿಭೋ ।
ಮಯಿ ಕೃಚ್ಛ್ರಾದ್ವಿನಿರ್ಮುಕ್ತೇ ನ ವಿನಂಕ್ಷ್ಯತಿ ತೇ ಕೃತಮ್ ॥೭೦॥

ಪ್ರಭುವೇ! ಸಮಯವು ಒದಗಿಬಂದಾಗ ನಿನ್ನ ಅಭೀಷ್ಟಸಿದ್ಧಿಗಾಗಿ ಯಾವ ಕಾರ್ಯವನ್ನು ಮಾಡಬೇಕಾಗುವುದೋ ಆ ಕಾರ್ಯವನ್ನು ಅವಶ್ಯವಾಗಿ ಮಾಡುತ್ತೇನೆ. ನಾನು ಈ ಕಷ್ಟದಿಂದ ವಿಮುಕ್ತಿಯನ್ನು ಹೊಂದಿದ ನಂತರ ಈಗ ನೀನು ಮಾಡಲಿರುವ ಉಪಕಾರವು ಖಂಡಿತವಾಗಿಯೂ ವ್ಯರ್ಥವಾಗುವುದಿಲ್ಲ. ಪ್ರತ್ಯುಪಕಾರವನ್ನು ಮಾಡಿಯೇ ತೀರುತ್ತೇನೆ.

ನ್ಯಸ್ತಮಾನೋಽಸ್ಮಿ ಭಕ್ತೋಽಸ್ಮಿ ಶಿಷ್ಯಸ್ತ್ವದ್ಧಿತಕೃತ್ತಥಾ ।
ನಿದೇಶವಶವರ್ತೀ ಚ ಭವನ್ತಂ ಶರಣಂ ಗತಃ ॥೭೧॥

ಈಗ ನಾನು ಮಾನ-ಮರ್ಯಾದೆಗಳೆಲ್ಲವನ್ನೂ ಬಿಟ್ಟುಬಿಟ್ಟಿದ್ದೇನೆ.

ಈಗ ನಾನು ನಿನಗೆ ಭಕ್ತನೂ–ಶಿಷ್ಯನೂ ಆಗಿರುತ್ತೇನೆ. ನಿನಗೆ ಹಿತವಾಗುವ ಕಾರ್ಯವನ್ನೇ ಮಾಡುತ್ತೇನೆ. ನಿನ್ನ ಅಧೀನನಾಗಿರುವ ನಾನು ನಿನ್ನ ಆಜ್ಞೆಯಂತೆ ನಡೆದುಕೊಳ್ಳುತ್ತೇನೆ. ಈಗ ನಾನು ಸರ್ವಪ್ರಕಾರದಿಂದಲೂ ನಿನಗೆ ಶರಣಾಗತನಾಗಿದ್ದೇನೆ.”

ಯುಧಿಷ್ಠಿರ! ಮಾರ್ಜಾಲವು ಹೀಗೆ ಹೇಳಿದನಂತರ ಸ್ನೇಹದ ಪ್ರಯೋಜನವನ್ನು ಸಂಪೂರ್ಣವಾಗಿ ತಿಳಿದಿದ್ದ (ಮಾತಿನ ಅರ್ಥವನ್ನು ತಿಳಿದಿದ್ದ) ಇಲಿಯು ತನ್ನ ವಶವರ್ತಿಯಾಗಿದ್ದ ಬೆಕ್ಕನ್ನು ಕುರಿತು ಹಿತಕರವೂ ಅಭಿಪ್ರಾಯಪೂರ್ಣವೂ ಆದ ಮಾತನ್ನು ಹೇಳಿತು :

ಉದಾರಂ ಯದ್ಭವಾನಾಹ ನೈತಚ್ಚಿತ್ರಂ ಭವದ್ವಿಧೇ ।
ವಿಹಿತೋ ಯಸ್ತು ಮಾರ್ಗೋ ಮೇ ಹಿತಾರ್ಥಂ ಶೃಣು ತಂ ಮಮ ॥೭೩॥

“ಲೋಮಶ! ನಿನ್ನಂತಹ ಮೇಧಾವಿಯು ಇಂತಹ ಉದಾರವಾದ ಮಾತುಗಳನ್ನು ಆಡಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ನಮ್ಮಿಬ್ಬರ ಹಿತಾರ್ಥವಾಗಿ ಯಾವ ಮಾರ್ಗವು ವಿಹಿತವಾಗಿರುವುದೆಂದು ನಾನು ತಿಳಿದಿರುವೆನೋ–ಅದನ್ನೇ ಹೇಳುವೆನು ; ಕೇಳು.

ಅಹಂ ತ್ವಾನುಪ್ರವೇಕ್ಷ್ಯಾಮಿ ನಕುಲಾನ್ಮೇ ಮಹದ್ಭಯಮ್ ।
ತ್ರಾಯಸ್ವ ಭೋ ಮಾ ವಧೀಸ್ತ್ವಂ ಶಕ್ತೋಽಸ್ಮಿ ತವ ರಕ್ಷಣೇ ॥೭೪॥

ವಯಸ್ಯ! ನನಗೆ ಇಲ್ಲಿರುವ ಮುಂಗುಸಿಯಿಂದ ಬಹಳ ಭಯವಾಗುತ್ತಿದೆ. ಆದುದರಿಂದ ನಾನು ನಿನ್ನ ಹಿಂದೆಯೇ ಈ ಬಲೆಯೊಳಗೆ ಪ್ರವೇಶಿಸುತ್ತೇನೆ. ಆ ಸಮಯದಲ್ಲಿ ನೀನು ನನ್ನನ್ನು ಕೊಂದುಹಾಕಬಾರದು. ರಕ್ಷಿಸಬೇಕು. ನಾನು ನಿನ್ನ ರಕ್ಷಣೆಯನ್ನು ಪಡೆದು ಜೀವದಿಂದುಳಿದರೆ ನಿನ್ನ ರಕ್ಷಣೆಯನ್ನು ನಾನು ಮಾಡಲು ಶಕ್ತನಾಗುತ್ತೇನೆ.

ಉಲೂಕಾಚ್ಚೈವ ಮಾಂ ರಕ್ಷ ಕ್ಷುದ್ರಃ ಪ್ರಾರ್ಥಯತೇಹಿ ಮಾಮ್ ।
ಅಹಂ ಛೇತ್ಸ್ಯಾಮಿ ತೇ ಪಾಶಾನ್ಸಖೇ ಸತ್ಯೇನ ತೇ ಶಪೇ ॥೭೫॥

ವೃಕ್ಷದ ಮೇಲಿರುವ ಈ ಗೂಬೆಯಿಂದಲೂ ನನ್ನನ್ನು ರಕ್ಷಿಸು.

ನೀಚಸ್ವಭಾವದಿಂದ ಕೂಡಿರುವ ಈ ಗೂಬೆಯು ನನ್ನನ್ನು ತಿಂದುಹಾಕಬೇಕೆಂದು ಹೊಂಚುಹಾಕುತ್ತಿದೆ. ವಯಸ್ಯ! ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನೀನು ಈ ಎರಡು ಪ್ರಾಣಿಗಳಿಂದಲೂ ನನ್ನನ್ನು ರಕ್ಷಿಸಿದೆಯಾದರೆ ನಿನ್ನನ್ನು ಬಂಧಿಸಿರುವ ಈ ಪಾಶಗಳನ್ನು ಕತ್ತರಿಸಿಹಾಕುತ್ತೇನೆ."

ಇಲಿಯು ಹೇಳಿದ ಯುಕ್ತಿಯುಕ್ತವಾದ, ಸುಸಂಗತವಾದ ಮತ್ತು ಅಭಿಪ್ರಾಯಪೂರ್ಣವಾದ ಮಾತನ್ನು ಕೇಳಿ ಲೋಮಶಮಾರ್ಜಾಲವು ಇಲಿಯನ್ನು ಸಂತೋಷಯುಕ್ತವಾದ ದೃಷ್ಟಿಯಿಂದ ನೋಡಿತು. ಇಲಿಯನ್ನು ಸ್ವಾಗತಿಸುತ್ತಾ ಅದರ ಅಭಿಪ್ರಾಯವನ್ನು ಪ್ರಶಂಸಿಸಿತು. ಇಲಿಯೊಡನೆ ಸೌಹಾರ್ದದಲ್ಲಿ ಸ್ಥಿರಮನಸ್ಸನ್ನು ಹೊಂದಿದ್ದ, ಪ್ರಸನ್ನತೆಯಿಂದಲೂ-ಧೀರತ್ವದಿಂದಲೂ ಕೂಡಿದ್ದ ಲೋಮಶವು ಇಲಿಯ ಮಾತನ್ನು ಪ್ರಶಂಸೆ ಮಾಡುತ್ತಾ ಮನಸ್ಸಿನಲ್ಲಿಯೇ ಇಲಿಯು ಹೇಳಿದುದನ್ನು ಚೆನ್ನಾಗಿ ವಿಚಾರ ಮಾಡಿ, ತ್ವರೆಯಿಂದಲೇ ಈ ಮಾತನ್ನು ಹೇಳಿತು :

ಶೀಘ್ರಮಾಗಚ್ಛ ಭದ್ರಂ ತೇ ತ್ವಂ ಮೇ ಪ್ರಾಣಸಮಃ ಸಖಾ ।
ತವ ಪ್ರಾಜ್ಞ ಪ್ರಸಾದಾದ್ಧಿ ಪ್ರಾಯಃ ಪ್ರಾಪ್ಸ್ಯಾಮಿ ಜೀವಿತಮ್ ॥೭೮॥

"ಪ್ರಾಜ್ಞನೇ! ಬೇಗ ಬಾ! ನಿನಗೆ ಮಂಗಳವಾಗಲಿ. ನೀನು ನನಗೆ ಪ್ರಾಣಗಳಿಗೆ ಸಮಾನನಾದ ಮಿತ್ರನಾಗಿರುವೆ. ಪ್ರಾಯಶಃ ನಿನ್ನ ಕೃತಿಯಿಂದಲೇ ನಾನು ಈ ಸಮಯದಲ್ಲಿ ಜೀವಿತವನ್ನು ಪಡೆದುಕೊಳ್ಳುವೆನು.

ಯದ್ಯದೇವಂಗತೇನಾದ್ಯ ಶಕ್ಯಂ ಕರ್ತುಂ ಮಯಾ ತವ ।
ತದಾಜ್ಞಾಪಯ ಕರ್ತಾಸ್ಮಿ ಸಂಧಿರೇವಾಸ್ತು ನೌ ಸಖೇ ॥೭೯॥

ವಯಸ್ಯ! ಇಂತಹ ಪರಿಸ್ಥಿತಿಯಲ್ಲಿ ನಾನು ನಿನಗೆ ಯಾವ ಕಾರ್ಯವನ್ನು ಮಾಡಿಕೊಡಲು ಸಾಧ್ಯವಾಗುವುದೋ-ಅದನ್ನು ಮಾಡಿಕೊಡುತ್ತೇನೆ. ಆಜ್ಞಾಪಿಸು. ನಮ್ಮಿಬ್ಬರಿಗೂ ಸಂಧಿಯಾಗಲಿ.

ಅಸ್ಮಾತ್ತು ಸಂಕಟಾನ್ಮುಕ್ತಃ ಸಮಿತ್ರಗಣಬಾನ್ಧವಃ ।
ಸರ್ವಕಾರ್ಯಾಣಿ ಕರ್ತಾಹಂ ಪ್ರಿಯಾಣಿ ಚ ಹಿತಾನಿ ಚ ॥೮೦॥

ಈ ಸಂಕಟದಿಂದ ವಿಮುಕ್ತನಾದೊಡನೆಯೇ ನಾನು ನನ್ನ ಮಿತ್ರ

ರೊಡನೆಯೂ ಬಂಧುಗಳೊಡನೆಯೂ ಸೇರಿಕೊಂಡು ನಿನಗೆ ಪ್ರಿಯವಾಗುವ ಮತ್ತು ಹಿತವಾಗುವ ಸರ್ವಕಾರ್ಯಗಳನ್ನೂ ಮಾಡಿಕೊಡುವೆನು.

ಮುಕ್ತಶ್ಚ ವ್ಯಸನಾದಸ್ಮಾತ್ಸೌಮ್ಯಾಹಮಪಿ ನಾಮ ತೇ ।
ಪ್ರೀತಿಮುತ್ಪಾದಯೇಯಂ ಚ ಪ್ರೀತಿಕರ್ತುಶ್ಚ ಸತ್ಕ್ರಿಯಾಮ್ ॥೮೧॥

ಸೌಮ್ಯನೇ! ಈ ಸಂಕಟದಿಂದ ನಾನು ಪಾರಾದೊಡನೆಯೇ ನಾನೂ ನನ್ನ ಆಚರಣೆಯಿಂದ ಪರಸ್ಪರ ಪ್ರೀತಿಗೆ ಕಾರಣನಾದ ನಿನ್ನ ಹೃದಯದಲ್ಲಿ ಪ್ರೀತಿಯನ್ನು ಹುಟ್ಟಿಸುತ್ತೇನೆ. ನಿನ್ನನ್ನು ಚೆನ್ನಾಗಿ ಸತ್ಕರಿಸುತ್ತೇನೆ.

ಪ್ರತ್ಯುಪಕುರ್ವನ್ಬಹ್ವಪಿ ನ ಭಾತಿ ಪೂರ್ವೋಪಕಾರಿಣಾ ತುಲ್ಯಃ ।
ಏಕಃ ಕರೋತಿ ಹಿ ಕೃತೇ ನಿಷ್ಕಾರಣಮೇವ ಕುರುತೇಽನ್ಯಃ ॥೮೨॥

ಉಪಕೃತನಾದವನು ಬಹಳವಾಗಿ ಪ್ರತ್ಯುಪಕಾರವನ್ನೇ ಮಾಡಿದರೂ ಮೊದಲು ಉಪಕಾರಮಾಡಿದವನಿಗೆ ಸಮನಾಗಿ ಶೋಭಿಸುವುದಿಲ್ಲ. ಮೊದಲು ಉಪಕಾರಮಾಡಿದವನಿಗೆ ಪ್ರತ್ಯುಪಕಾರಮಾಡಿದವನೆಂದಿಗೂ ಸಮಾನನಾಗುವುದಿಲ್ಲ. ಒಬ್ಬನು ಉಪಕಾರಮಾಡಿದುದಕ್ಕೆ ಪ್ರತಿಯಾಗಿ ಮತ್ತೊಬ್ಬನು ಉಪಕಾರಮಾಡುತ್ತಾನೆ. ಮೊದಲನೆಯವನು ನಿಷ್ಕಾರಣ ವಾಗಿಯೇ ಉಪಕಾರ ಮಾಡಿರುತ್ತಾನೆ. ಹೀಗಿರುವುದರಿಂದ ನಾನು ನಿನಗೆ ಎಷ್ಟೇ ಉಪಕಾರವನ್ನೇ ಮಾಡಿದರೂ ಮೊದಲು ಉಪಕಾರವನ್ನು ಮಾಡುವ ನಿನಗೆ ನಾನು ಸಮಾನನೆನಿಸುವುದಿಲ್ಲ.”

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ಹೀಗೆ ಇಲಿಯು ತನ್ನ ಪ್ರಯೋಜನವನ್ನು ಸಾಧಿಸಿ ಕೊಡಲು ಬೆಕ್ಕನ್ನು ಒಪ್ಪುವಂತೆ ಮಾಡಿ–ಬೆಕ್ಕು ತನ್ನ (ಇಲಿಯ) ವಿಷಯ ದಲ್ಲಿ ಅನೇಕವಾದ ಅಪರಾಧಗಳನ್ನೇ ಮಾಡಿದ್ದರೂ–ಅದರ ಮೇಲೆ ವಿಶ್ವಾಸ ವನ್ನಿಟ್ಟು ಅದರ ಭುಜಗಳ ಮಧ್ಯಭಾಗವನ್ನು ಪ್ರವೇಶಿಸಿತು. ಬೆಕ್ಕು ಸಂಪೂರ್ಣವಾಗಿ ಆಶ್ವಾಸನೆಯನ್ನಿತ್ತನಂತರ ತಿಳುವಳಿಕೆಯಿಂದ ಕೂಡಿದ್ದ ಇಲಿಯು–ತಂದೆ-ತಾಯಿಗಳ ಮಡಿಲಿನಲ್ಲಿ ಮಗುವು ಮಲಗುವಂತೆ–ಸಂಪೂರ್ಣವಾದ ವಿಶ್ವಾಸದಿಂದಲೇ ಬೆಕ್ಕಿನ ಎದೆಯನ್ನು ತಬ್ಬಿಕೊಂಡು ಮಲಗಿತು. ಬೆಕ್ಕಿನ ವಕ್ಷಃಸ್ಥಳದಲ್ಲಿ ಮೂಷಿಕವು ಲೀನವಾದುದನ್ನು ಕಂಡು

ಮುಂಗುಸಿ ಮತ್ತು ಉಲೂಕಗಳು ನಿರಾಸೆಯನ್ನು ಹೊಂದಿದುವು. ಅತಿಯಾದ ಆಯಾಸದ ಕಾರಣದಿಂದ ತೂಕಡಿಕೆಯು ಬರುತ್ತಿದ್ದು ಅವುಗಳು ಬಹಳವಾಗಿ ಭಯಗೊಂಡುವು. ಮಾರ್ಜಾಲ-ಮೂಷಿಕಗಳ ಅಗಾಧವಾದ ಪ್ರೀತಿಯನ್ನು ನೋಡಿ ಬಹಳವಾಗಿ ಅಚ್ಚರಿಗೊಂಡುವು. ಮುಂಗುಸಿ ಮತ್ತು ಉಲೂಕಗಳು ಬಹಳ ಬಲಿಷ್ಠವಾಗಿದ್ದುವು. ಬುದ್ಧಿಯಿಂದ ಕೂಡಿದ್ದುವು. ವ್ಯವಹಾರ ಕುಶಲತೆಯನ್ನು ಹೊಂದಿದ್ದುವು. ತಮ್ಮ ಆಹಾರಭೂತವಾದ ಲಕ್ಷ್ಯಕ್ಕೆ ಬಹಳ ಹತ್ತಿರದಲ್ಲಿಯೇ ಇದ್ದುವು. ಆದರೂ ಮಾರ್ಜಾಲ-ಮೂಷಿಕಗಳು ಪರಸ್ಪರವಾಗಿ ಸಂಧಿಯನ್ನು ಮಾಡಿಕೊಂಡುದರಿಂದ ಬಲಪೂರ್ವಕವಾಗಿ ಅವುಗಳನ್ನು ಆಕ್ರಮಿಸಲು ಸಮರ್ಥವಾಗಲಿಲ್ಲ. ಪರಸ್ಪರ ಪ್ರಯೋಜನಕ್ಕಾಗಿ ಸಂಧಿಮಾಡಿಕೊಂಡಿದ್ದ ಮಾರ್ಜಾಲ-ಮೂಷಿಕಗಳನ್ನು ನೋಡಿ ಉಲೂಕ-ನಕುಲಗಳು ತಮ್ಮ ನಿವಾಸಸ್ಥಳಗಳಿಗೆ ಶೀಘ್ರವಾಗಿಯೇ ಹೊರಟುಹೋದುವು.

ಇತ್ತಲಾಗಿ ಮಾರ್ಜಾಲದ ಹೃದಯದಲ್ಲಿ ಅಡಗಿಕೊಂಡಿದ್ದ, ದೇಶ-ಕಾಲಗಳ ರಹಸ್ಯವನ್ನು ತಿಳಿದಿದ್ದ ಮೂಷಿಕವು–ಬೆಕ್ಕಿನ ಭುಜಗಳ ಮಧ್ಯಭಾಗದಿಂದ ಹೊರಬಂದು ಚಾಂಡಾಲನು ಬರುವ ಸಮಯವನ್ನೇ ನಿರೀಕ್ಷಿಸುತ್ತಾ ಮಾರ್ಜಾಲವನ್ನು ಬಂಧಿಸಿದ್ದ ಪಾಶಗಳನ್ನು ನಿಧಾನವಾಗಿ ಕತ್ತರಿಸತೊಡಗಿತು.

ಮಾರ್ಜಾಲವು ಪಾಶದ ಬಿಗಿತದಿಂದಾಗಿ ಬಹಳ ಸಂಕಟಪಡುತ್ತಿದ್ದಿತು. ಆದುದರಿಂದಲೇ ಅದಕ್ಕೆ ಪಾಶಗಳಿಂದ ಸಾಧ್ಯವಾದಷ್ಟು ಬೇಗ ಬಿಡಿಸಿಕೊಳ್ಳಬೇಕೆಂಬ ಆತುರವಿದ್ದಿತು. ಆದರೆ ಮೂಷಿಕಕ್ಕೆ ಅಂತಹ ಅವಸರವೇನೂ ಇರಲಿಲ್ಲ. ಮೆಲ್ಲ-ಮೆಲ್ಲನೆ ಅದು ಪಾಶಗಳನ್ನು ಒಂದೊಂದನ್ನಾಗಿಯೇ ಕತ್ತರಿಸುತ್ತಿದ್ದಿತು. ತ್ವರೆಯಿಲ್ಲದೆ ಸಾವಕಾಶವಾಗಿ ಪಾಶಗಳನ್ನು ಕತ್ತರಿಸುತ್ತಿದ್ದ ಮೂಷಿಕವನ್ನು ಕಂಡು ಮಾರ್ಜಾಲವು ತ್ವರೆಯಿಂದ ಪಾಶಗಳನ್ನು ಕತ್ತರಿಸುವಂತೆ ಪ್ರಚೋದಿಸುತ್ತಾ ಹೇಳಿತು :

ಕಿಂ ಸೌಮ್ಯ ನಾತಿತ್ವರಸೇ ಕಿಂ ಕೃತಾರ್ಥೋಽವಮನ್ಯಸೇ ।
ಛಿನ್ಧಿ ಪಾಶಾನಮಿತ್ರಘ್ನ ಪುರಾ ಶ್ವಪಚ ಏತಿ ಚ ॥೯೨॥

"ಸೌಮ್ಯನೇ! ತ್ವರೆಯಿಂದೇಕೆ ಪಾಶಗಳನ್ನು ಕತ್ತರಿಸುತ್ತಿಲ್ಲ? ಕೃತಾರ್ಥನಾದೆನೆಂದು ಭಾವಿಸಿ ನನ್ನನ್ನು ಅವಮಾನಗೊಳಿಸುತ್ತಿರುವೆಯಾ?

ಶತ್ರುನಾಶಕನೇ! ಚಂಡಾಲನು ಬರುವ ವೇಳೆಯಾಯಿತು. ಅವನು ಬರುವುದರೊಳಗಾಗಿಯೇ ನನ್ನನ್ನು ಬಂಧಿಸಿರುವ ಎಲ್ಲ ಪಾಶಗಳನ್ನೂ ಕತ್ತರಿಸು."

ಆತುರಪಡಿಸುತ್ತಾ ಹೀಗೆ ಹೇಳಿದ, ನಿಶ್ಚಿತವಾದ ಬುದ್ಧಿಯನ್ನು ಹೊಂದಿರದಿದ್ದ ಮಾರ್ಜಾಲವನ್ನು ಕುರಿತು ವಿವೇಕಬುದ್ಧಿಯಿಂದ ಕೂಡಿದ್ದ ಮೂಷಿಕವು ಪಥ್ಯವೂ ತನಗೆ ಹಿತಕರವೂ ಆದ ಈ ಮಾತನ್ನು ಹೇಳಿತು :

ತೂಷ್ಣೀಂ ಭವ ನ ತೇ ಸೌಮ್ಯ ತ್ವರಾ ಕಾರ್ಯಾ ನ ಸಮ್ಭ್ರಮಃ ।
ವಯಮೇವಾತ್ರ ಕಾಲಜ್ಞಾ ನ ಕಾಲಃ ಪರಿಹಾಸ್ಯತೇ ॥೯೪॥

"ಸೌಮ್ಯನೇ! ಸುಮ್ಮನಿರು ; ಅವಸರಪಡಿಸಬೇಡ. ಗಾಬರಿಗೊಳ್ಳುವ ಕಾರಣವಿಲ್ಲ. ನಾನು ಕಾಲವನ್ನು ಚೆನ್ನಾಗಿ ತಿಳಿದವನಾಗಿದ್ದೇನೆ. ಕಾಲವು ಮೀರಿಹೋಗದಂತೆ ನಾನು ನೋಡಿಕೊಳ್ಳುತ್ತೇನೆ.

ಅಕಾಲೇ ಕೃತ್ಯಮಾರಬ್ಧಂ ಕರ್ತುರ್ನಾರ್ಥಾಯ ಕಲ್ಪತೇ ।
ತದೇವ ಕಾಲ ಆರಬ್ಧಂ ಮಹತೇಽರ್ಥಾಯ ಕಲ್ಪತೇ ॥೯೫॥

ಅಕಾಲದಲ್ಲಿ ಪ್ರಾರಂಭಿಸಿದ ಕಾರ್ಯವು ಕಾರ್ಯವನ್ನು ಮಾಡುವವನಿಗೆ ಯಾವ ವಿಧವಾದ ಪ್ರಯೋಜನವನ್ನೂ ಉಂಟುಮಾಡುವುದಿಲ್ಲ. ಅದೇ ಕಾರ್ಯವನ್ನು ಸಕಾಲದಲ್ಲಿ ಪ್ರಾರಂಭಿಸಿದರೆ–ಆ ಕಾರ್ಯವು ಮಹತ್ತಾದ ಅರ್ಥಸಾಧನೆಗೆ ಕಾರಣವಾಗುತ್ತದೆ.

ಅಕಾಲೇ ವಿಪ್ರಮುಕ್ತಾನ್ಮೇ ತ್ವತ್ತ ಏವ ಭಯಂ ಭವೇತ್ ।
ತಸ್ಮಾತ್ಕಾಲಂ ಪ್ರತೀಕ್ಷಸ್ವ ಕಿಮಿತಿ ತ್ವರಸೇ ಸಖೇ ॥೯೬॥

ಅಕಾಲದಲ್ಲಿ ನಾನೇನಾದರೂ ನಿನ್ನನ್ನು ಬಂಧನದಿಂದ ಮುಕ್ತಗೊಳಿಸಿ ಬಿಟ್ಟರೆ ನಿನ್ನಿಂದಲೇ ನನಗೆ ಭಯವುಂಟಾಗಬಹುದು. ಆದುದರಿಂದ, ಪ್ರಿಯ ಸಖನೇ! ಸ್ವಲ್ಪ ಕಾಲ ತಾಳು. ಏಕೆ ಅವಸರಪಡುವೆ?

ಯದಾ ಪಶ್ಯಾಮಿ ಚಾಣ್ಡಾಲಮಾಯಾನ್ತಂ ಶಸ್ತ್ರಪಾಣಿನಮ್ ।
ತತಶ್ಛೇತ್ಸ್ಯಾಮಿ ತೇ ಪಾಶಾನ್ಪ್ರಾಪ್ತೇ ಸಾಧಾರಣೇ ಭಯೇ ॥೯೭॥

ಶಸ್ತ್ರಪಾಣಿಯಾದ ಚಾಂಡಾಲನು ಇಲ್ಲಿಗೆ ಬರುತ್ತಿರುವುದನ್ನು ನೋಡಿ

ನಮ್ಮಿಬ್ಬರಿಗೂ ಸಮಾನವಾದ ಭಯವು ಹುಟ್ಟಿಕೊಂಡೊಡನೆಯೇ–ನಿನ್ನನ್ನು ಬಂಧಿಸಿರುವ ಈ ಪಾಶಗಳನ್ನು ಸಂಪೂರ್ಣವಾಗಿ ಕಡಿದುಹಾಕುತ್ತೇನೆ.

ತಸ್ಮಿನ್ಕಾಲೇ ಪ್ರಮುಕ್ತಸ್ತ್ವಂ ತರುಮೇವಾಧಿರೋಕ್ಷ್ಯಸೇ ।
ನ ಹಿ ತೇ ಜೀವಿತಾದನ್ಯತ್ಕಿಂಚಿತ್ಕೃತ್ಯಂ ಭವಿಷ್ಯತಿ ॥೯೮॥

ಆ ಸಮಯದಲ್ಲಿ ನಿನ್ನನ್ನು ಬಂಧನದಿಂದ ವಿಮುಕ್ತಿಗೊಳಿಸಿದರೆ ನೀನು ಒಡನೆಯೇ ವೃಕ್ಷವನ್ನು ಹತ್ತಿಹೋಗುವೆ. ಭೀತನಾಗಿರುವ ನಿನಗೆ ಜೀವವನ್ನು ರಕ್ಷಿಸಿಕೊಳ್ಳುವುದಕ್ಕಿಂತಲೂ ಬೇರೆ ಯಾವ ಕಾರ್ಯವೂ ಇರುವುದಿಲ್ಲ. (ಜೀವವನ್ನು ರಕ್ಷಿಸಿಕೊಳ್ಳುವುದರ ಹೊರತಾಗಿ ಬೇರೆ ಯಾವ ಕಾರ್ಯವನ್ನು ಮಾಡಲೂ ವ್ಯವಧಾನವಿರುವುದಿಲ್ಲ.)

ತತೋ ಭವೇತ್ಯಪಕ್ರಾನ್ತೇ ತ್ರಸ್ತೇ ಭೀತೇ ಚ ಲೋಮಶ ।
ಅಹಂ ಬಿಲಂ ಪ್ರವೇಕ್ಷ್ಯಾಮಿ ಭವಾನ್ಶಾಖಾಂ ಭಜಿಷ್ಯತಿ ॥೯೯॥

ಲೋಮಶನೇ! ಗಾಬರಿಯಿಂದಲೂ ಭಯದಿಂದಲೂ–ಆಕ್ರಾಂತ ನಾಗುವ ನೀನು ಪ್ರಾಣವನ್ನುಳಿಸಿಕೊಳ್ಳುವ ಅವಸರದಿಂದ ಹೊರಟುಹೋದ ನಂತರ ನಾನು ನನ್ನ ಬಿಲವನ್ನು ಪ್ರವೇಶಿಸುತ್ತೇನೆ. ನೀನು ವೃಕ್ಷದ ಶಾಖೆಯನ್ನು ಅವಲಂಬಿಸುವೆ."

ಯುಧಿಷ್ಠಿರ! ಇಲಿಯು ತನ್ನ ಹಿತಕ್ಕಾಗಿ ಹೀಗೆ ಹೇಳಿದನಂತರ ಮಾತಿನ ಮರ್ಮವನ್ನು ತಿಳಿದಿದ್ದ, ತನ್ನ ಜೀವದ ರಕ್ಷಣೆಯನ್ನು ಅಭಿಲಷಿಸುತ್ತಿದ್ದ, ಮಹಾಮತಿಯಾದ ಮಾರ್ಜಾಲವು ತನ್ನ ಹಿತವನ್ನೇ ಕುರಿತು ಯೋಚಿಸಿತು. ಲೋಮಶನಿಗೆ ತನ್ನ ಕಾರ್ಯವು ಬೇಗ ಆಗಿಬಿಡಬೇಕೆಂಬ ಅವಸರವಿದ್ದಿತು. ಆ ಕಾರಣದಿಂದಲೇ ಅದು ನಯ-ವಿನಯಗಳಿಂದಲೇ ವ್ಯವಹರಿಸುತ್ತಾ ಬಹಳ ನಿಧಾನವಾಗಿ ಪಾಶಗಳನ್ನು ಕತ್ತರಿಸುತ್ತಿದ್ದ ಇಲಿಯನ್ನು ಕುರಿತು ಹೇಳಿತು :

ನ ಹ್ಯೇವಂ ಮಿತ್ರಕಾರ್ಯಾಣಿ ಪ್ರೀತ್ಯಾ ಕುರ್ವನ್ತಿ ಸಾಧವಃ ।
ಯಥಾ ತ್ವಂ ಮೋಕ್ಷಿತಃ ಕೃಚ್ಛ್ರಾತ್ತ್ವರಮಾಣೇನ ವೈ ಮಯಾ ॥೧೦೨॥

ತಥಾ ಹಿ ತ್ವರಮಾಣೇನ ತ್ವಯಾ ಕಾರ್ಯಂ ಹಿತಂ ಮಮ ।
ಯತ್ನಂ ಕುರು ಮಹಾಪ್ರಾಜ್ಞ ಯಥಾ ರಕ್ಷಾವಯೋರ್ಭವೇತ್ ॥೧೦೩॥

"ಮಹಾಪ್ರಾಜ್ಞನೇ! ಸತ್ಪುರುಷರು ಯಾವಾಗಲೂ ತಮ್ಮ ಮಿತ್ರರ ಕಾರ್ಯವನ್ನು ಪ್ರೀತಿಯಿಂದ ಮಾಡುತ್ತಾರೆ. ನೀನು ಮಾಡುತ್ತಿರುವಂತೆ ಮಾಡುವುದಿಲ್ಲ. ನಾನು ಎಷ್ಟು ಅವಸರದಿಂದ ನಿನ್ನನ್ನು ಕಷ್ಟದಿಂದ ಪಾರು ಮಾಡಿದೆನೋ–ಅದೇ ರೀತಿಯಲ್ಲಿ ನೀನೂ ತ್ವರೆಯಿಂದ ನನಗೆ ಹಿತವಾಗುವ ಕಾರ್ಯವನ್ನು ಮಾಡಬೇಕು. ನಮ್ಮಿಬ್ಬರ ರಕ್ಷಣೆಯೂ ಆಗುವ ರೀತಿಯಲ್ಲಿ ಪ್ರಯತ್ನವನ್ನು ಮಾಡು.

ಅಥವಾ ಪೂರ್ವವೈರಂ ತ್ವಂ ಸ್ಮರನ್ಕಾಲಂ ಜಿಹೀರ್ಷಸಿ ।
ಪಶ್ಯ ದುಷ್ಕೃತಕರ್ಮಸ್ತ್ವಂ ವ್ಯಕ್ತಮಾಯುಃ ಕ್ಷಯಂ ತವ ॥೧೦೪॥

ಹಾಗಲ್ಲದೇ ನೀನು ಹಿಂದಿನ ವೈರವನ್ನೇ ಸ್ಮರಿಸಿಕೊಂಡು ಕಾಲಯಾಪನೆಯನ್ನು ಮಾಡಲು ಇಚ್ಛಿಸಿರುವೆಯಾ? ದುಷ್ಕೃತಕರ್ಮನೇ! ಇದರ ಫಲವನ್ನು ಈಗಲೇ ನೀನು ಕಾಣಲಿರುವೆ. ನಿಶ್ಚಯವಾಗಿಯೂ ನಿನ್ನ ಆಯುಷ್ಯವು ಕ್ಷೀಣಿಸುವುದು.

ಯದಿ ಕಿಂಚಿನ್ಮಯಾಜ್ಞಾನಾತ್ಪುರಸ್ತಾದ್ದುಷ್ಕೃತಂ ಕೃತಮ್ ।
ನ ತನ್ಮನಸಿ ಕರ್ತವ್ಯಂ ಕ್ಷಾಮಯೇ ತ್ವಾಂ ಪ್ರಸೀದ ಮೇ ॥೧೦೫॥

ಒಂದು ವೇಳೆ ನಾನು ಈ ಹಿಂದೆ ಅಜ್ಞಾನದ ಕಾರಣದಿಂದ ನಿನ್ನಲ್ಲಿ ಅಪರಾಧವನ್ನೆಸಗಿದ್ದರೆ–ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಡ. ಹಿಂದಿನ ಅಪರಾಧಕ್ಕಾಗಿ ನಿನ್ನಲ್ಲಿ ಕ್ಷಮೆಯನ್ನು ಬೇಡುತ್ತೇನೆ. ನನ್ನ ವಿಷಯದಲ್ಲಿ ಪ್ರಸನ್ನನಾಗು."

ಯುಧಿಷ್ಠಿರ! ವಿಶೇಷವಾದ ಪ್ರಜ್ಞೆಯಿಂದ ಕೂಡಿದ್ದ, ಶಾಸ್ತ್ರಜ್ಞಾನದಿಂದಲೂ–ಬುದ್ಧಿಶಕ್ತಿಯಿಂದಲೂ ಸಂಪನ್ನವಾಗಿದ್ದ ಮೂಷಿಕವು ಮಾರ್ಜಾಲವು ಹೇಳಿದ ಮಾತುಗಳನ್ನು ಕೇಳಿ ಶ್ರೇಷ್ಠವಾದ ಈ ಮಾತನ್ನು ಹೇಳಿತು :

ಶ್ರುತಂ ಮೇ ತವ ಮಾರ್ಜಾರ ಸ್ವಮರ್ಥಂ ಪರಿಗೃಹ್ಣತಃ ।
ಮಮಾಪಿ ತ್ವಂ ವಿಜಾನಾಸಿ ಸ್ವಮರ್ಥಂ ಪರಿಗೃಹ್ಣತಃ ॥೧೦೬॥

"ಮಾರ್ಜಾಲನೇ! ಸ್ವಾರ್ಥದ ಸಿದ್ಧಿಗಾಗಿ ನೀನು ಯಾವ ಮಾತುಗಳನ್ನಾಡಿದೆಯೋ–ಆ ಎಲ್ಲ ಮಾತುಗಳನ್ನೂ ನಾನು ಕೇಳಿದೆನು. ಅದೇ ರೀತಿ

ಯಲ್ಲಿ ನನ್ನ ಪ್ರಯೋಜನವನ್ನೇ ಮುಖ್ಯವಾಗಿಟ್ಟುಕೊಂಡು ನಾನು ಯಾವ ಮಾತುಗಳನ್ನಾಡಿರುವೆನೋ–ಆ ಮಾತುಗಳನ್ನೂ ನೀನು ಕೇಳಿ ತಿಳಿದು ಕೊಂಡಿರುವೆ. (ನಿನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಲು ನೀನು ಮಾತನಾಡು ತ್ತಿರುವೆ. ನನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳಲು ನಾನು ಕಾರ್ಯಮಾಡು ತ್ತಿದ್ದೇನೆ.)

ಯನ್ಮಿತ್ರಂ ಭೀತವತ್ಸಾಧ್ಯಂ ಯನ್ಮಿತ್ರಂ ಭಯಸಂಹಿತಮ್ ।
ಸುರಕ್ಷಿತವ್ಯಂ ತತ್ಕಾರ್ಯಂ ಪಾಣಿಃ ಸರ್ಪಮುಖಾದಿವ ॥೧೦೮॥

ಯಾವ ಮೈತ್ರಿಯು ಭಯಗೊಂಡಿರುವ ಪ್ರಾಣಿಯೊಡನೆ ಉಂಟಾಗಿರು ವುದೋ ಮತ್ತು ಯಾವ ಮೈತ್ರಿಯು ತಾನೇ ಭಯಭೀತವಾಗಿ ಮಾಡಿಕೊಂಡ ಮೈತ್ರಿಯಾಗಿರುವುದೋ, ಅಂತಹ ಮೈತ್ರಿಯು–ಹಾವಾಡಿಗನ ಹಸ್ತವು ಸರ್ಪದ ಮುಖದಿಂದ ರಕ್ಷಿಸಿಕೊಳ್ಳಲ್ಪಡುವಂತೆ–ರಕ್ಷಿಸಿಕೊಳ್ಳಲ್ಪಡಬೇಕು. (ಬೆಕ್ಕು-ಇಲಿಗಳ ಮೈತ್ರಿಯು ಸಹಜವಾದುದಲ್ಲ ; ಅಸಹಜವಾದುದು. ಭಯದ ವಾತಾವರಣವಿದ್ದುದರಿಂದ ಕಲ್ಪಿತವಾದುದು. ಆ ಎರಡು ಪ್ರಾಣಿಗಳ ಮೈತ್ರಿಗೆ ಭಯವೇ ಕಾರಣ. ಅಂತಹ ಮೈತ್ರಿಯನ್ನು ಹೇಗೆ ರಕ್ಷಿಸಬೇಕು? ಪರಸ್ಪರವಾಗಿ ಅಪಾಯವುಂಟಾಗದಂತೆ ರಕ್ಷಿಸಬೇಕು. ಬೇಡರವನಿಂದ ಬೆಕ್ಕಿಗೂ ಅಪಾಯವಾಗಬಾರದು. ಬೆಕ್ಕಿನಿಂದ ಇಲಿಗೂ ಅಪಾಯವಾಗ ಬಾರದು. ಹಾವಾಡಿಗನ ಹಸ್ತವು ಸರ್ಪದ ದಂಶನದಿಂದ ಹಾವಾಡಿಗನನ್ನು ರಕ್ಷಿಸುವಂತೆ ರಕ್ಷಿಸಬೇಕು. ಹೆಡೆಯೆತ್ತಿದ ಸರ್ಪದ ಮುಂದೆ ಹಾವಾಡಿಗನು ಕೈಯನ್ನು ಆಡಿಸುತ್ತಿರುತ್ತಾನೆ. ಹಾಗೆ ಕೈಯನ್ನು ಅಳ್ಳಾಡಿಸುತ್ತಿದ್ದರೆ ಸರ್ಪವು ಕಚ್ಚಲು ಹೆದರುತ್ತದೆ. ಹಾವಾಡಿಗನಿಗೂ ಸರ್ಪವು ಕಚ್ಚೀತೆಂಬ ಭಯವಿದ್ದೇ ಇರುತ್ತದೆ. ಅಂತಹ ಸಂದರ್ಭದಲ್ಲಿ ಅತ್ಯಂತ ಜಾಗರೂಕತೆಯಿಂದ ಹಸ್ತವನ್ನು ಅಳ್ಳಾಡಿಸುತ್ತಾ ಅಪಾಯದಿಂದ ಪಾರಾಗುವಂತೆ ಭಯದ ಕಾರಣದಿಂದ ಮೈತ್ರಿಯನ್ನು ಹೊಂದಿರುವ ಇಬ್ಬರೂ ಜಾಗರೂಕತೆಯಿಂದ ವರ್ತಿಸಿ ಅಪಾಯದಿಂದ ಪಾರಾಗಬೇಕು.)

ಕೃತ್ವಾ ಬಲವತಾ ಸಂಧಿಮಾತ್ಮಾನಂ ಯೋ ನ ರಕ್ಷತಿ ।
ಅಪಥ್ಯಮಿವ ತದ್ಭುಕ್ತಂ ತಸ್ಯ ನಾರ್ಥಾಯ ಕಲ್ಪತೇ ॥೧೦೯॥

ಯಾವನು ಬಲಿಷ್ಠನಾದವನೊಡನೆ ಸಂಧಿಯನ್ನು ಮಾಡಿಕೊಂಡು ತನ್ನ ರಕ್ಷಣೆಯ ವಿಷಯದಲ್ಲಿ ಅಜಾಗರೂಕನಾಗಿರುವನೋ, ಅಂತಹವನಿಗೆ ಆ ಸಂಧಿಯು–ಭಕ್ಷಿಸಿದ ಅಪಥ್ಯವಾದ ಅನ್ನದಂತೆ–ಅರ್ಥಸಿದ್ಧಿಯನ್ನು ಮಾಡಿಕೊಡುವುದಿಲ್ಲ. (ಅನರ್ಥಕ್ಕೇ ಕಾರಣವಾಗುತ್ತದೆ.)

ನ ಕಶ್ಚಿತ್ಕಸ್ಯಚಿನ್ಮಿತ್ರಂ ನ ಕಶ್ಚಿತ್ಕಸ್ಯಚಿದ್ರಿಪುಃ ।
ಅರ್ಥತಸ್ತು ನಿಬಧ್ಯನ್ತೇ ಮಿತ್ರಾಣಿ ರಿಪವಸ್ತಥಾ ।
ಅರ್ಥೈರರ್ಥಾ ನಿಬಧ್ಯನ್ತೇ ಗಜೈರ್ವನಗಜಾ ಇವ ॥೧೧೦॥

ಯಾವನೂ ಯಾವನಿಗೂ ಮಿತ್ರನಾಗಿಯೂ ಇರುವುದಿಲ್ಲ ; ಯಾವನೂ ಯಾವನಿಗೂ ಶತ್ರುವಾಗಿಯೂ ಇರುವುದಿಲ್ಲ. ಸ್ವಾರ್ಥದ ಕಾರಣ ದಿಂದ ಕೆಲವರು ಕೆಲವರ ಮಿತ್ರರಾಗುತ್ತಾರೆ ; ಕೆಲವರು ಕೆಲವರ ಶತ್ರುಗಳಾಗು ತ್ತಾರೆ. ಸ್ವಪ್ರಯೋಜನವೆಂಬುದು ಕೆಲವರನ್ನು ಮಿತ್ರರನ್ನಾಗಿಸುತ್ತದೆ ; ಕೆಲವರನ್ನು ಶತ್ರುಗಳನ್ನಾಗಿಸುತ್ತದೆ. ಶತ್ರುತ್ವಕ್ಕಾಗಲೀ–ಮಿತ್ರತ್ವಕ್ಕಾಗಲೀ ಎಲ್ಲರಲ್ಲಿಯೂ ಇರುವ ಸ್ವಾರ್ಥವೇ ಮುಖ್ಯ ಕಾರಣವಾಗಿರುತ್ತದೆ. ಪಳಗಿದ ಆನೆಗಳಿಂದ ಅರಣ್ಯದ ಆನೆಗಳು ಬಂಧಿಸಲ್ಪಡುವಂತೆ–ಅರ್ಥಗಳಿಂದ ಅರ್ಥ ಗಳು ಬಂಧಿಸಲ್ಪಡುತ್ತವೆ. ಪರಸ್ಪರವಾದ ಕಾರ್ಯಸಿದ್ಧಿಗೆ ಅರ್ಥದ ಸಹಯೋಗದಿಂದ ಮಾಡುವ ಕಾರ್ಯವು ಸಾಧನವಾಗುತ್ತದೆ.

ನ ಚ ಕಶ್ಚಿತ್ಕೃತೇ ಕಾರ್ಯೇ ಕರ್ತಾರಂ ಸಮವೇಕ್ಷತೇ ।
ತಸ್ಮಾತ್ಸರ್ವಾಣಿ ಕಾರ್ಯಾಣಿ ಸಾವಶೇಷಾಣಿ ಕಾರಯೇತ್ ॥೧೧೧॥

ಕಾರ್ಯವು ಮುಗಿದುಹೋದನಂತರ ಯಾವನೇ ಆದರೂ ಕಾರ್ಯ ಮಾಡಿಕೊಟ್ಟವನ ಕಡೆಗೆ ಲಕ್ಷ್ಯವನ್ನೇ ಕೊಡುವುದಿಲ್ಲ. ಆದುದರಿಂದ ಎಲ್ಲ ಕಾರ್ಯಗಳನ್ನೂ ಶೇಷಯುಕ್ತವನ್ನಾಗಿಯೇ ಮಾಡಬೇಕು. (ಮಾಡ ಬೇಕಾಗಿರುವ ಎಲ್ಲ ಕಾರ್ಯಗಳಲ್ಲಿಯೂ ಸ್ವಲ್ಪ ಭಾಗವನ್ನಾದರೂ ಉಳಿಸಿಯೇ ಇರಬೇಕು.)

ತಸ್ಮಿನ್ಕಾಲೇऽಪಿ ಚ ಭವಾನ್ದಿವಾಕೀರ್ತಿಭಯಾರ್ದಿತಃ ।
ಮಮ ನ ಗ್ರಹಣೇ ಶಕ್ತಃ ಪಲಾಯನಪರಾಯಣಃ ॥೧೧೨॥

ಯಾವಾಗ ದಿವಾಕೀರ್ತಿಯು (ಚಾಂಡಾಲನು) ಇಲ್ಲಿಗೆ ಬರುವನೋ ಆ

ಸಮಯದಲ್ಲಿ ಬಂಧನದಿಂದ ವಿಮುಕ್ತನಾಗುವ ನೀನು ಆ ಚಾಂಡಾಲನ ಭಯದಿಂದ ಪೀಡಿತನಾಗಿ ಪಲಾಯನಮಾಡುವೆ. ನನ್ನನ್ನು ಹಿಡಿಯುವ ಶಕ್ತಿಯು ಆ ಸಮಯದಲ್ಲಿ ನಿನಗಿರುವುದಿಲ್ಲ.

ಛಿನ್ನಂ ತು ತನ್ತುಬಾಹುಲ್ಯಂ ತನ್ತುರೇಕೋಽವಶೇಷಿತಃ ।
ಛೇತ್ಸ್ಯಾಮ್ಯಹಂ ತಮಪ್ಯಾಶು ನಿರ್ವೃತೋ ಭವ ಲೋಮಶ ॥೧೧೩॥

ಲೋಮಶನೇ! ನಾನೀಗಲೇ ನಿನ್ನನ್ನು ಬಂಧಿಸಿರುವ ಈ ಬಲೆಯ ಎಲ್ಲ ದಾರಗಳನ್ನೂ ಕಡಿದುಹಾಕಿಬಿಟ್ಟಿದ್ದೇನೆ. ಒಂದು ದಾರವನ್ನು ಮಾತ್ರ ಕತ್ತರಿಸದೇ ಬಿಟ್ಟಿದ್ದೇನೆ. ಆ ದಾರವನ್ನೂ ಕಡಿದುಹಾಕುತ್ತೇನೆ. ಶಾಂತನಾಗಿರು ; ಗಾಬರಿಗೊಳ್ಳಬೇಡ."

ಯುಧಿಷ್ಠಿರ! ವಿಪತ್ತಿನಲ್ಲಿ ಸಿಲುಕಿಕೊಂಡಿದ್ದ ಮೂಷಿಕ-ಮಾರ್ಜಾಲಗಳು ಹೀಗೆಯೇ ಸಂಭಾಷಿಸುತ್ತಿರಲಾಗಿ ರಾತ್ರಿಯು ಕಳೆದುಹೋಯಿತು. ಲೋಮಶಮಾರ್ಜಾಲವನ್ನು ಭಯವು ಆವರಿಸಿತು. ಬೆಳಗಾಗುತ್ತಲೇ ಪರಿಘ ಎಂಬ ಹೆಸರಿನ ಚಾಂಡಾಲನು ಆಯುಧಪಾಣಿಯಾಗಿ ಕಾಣಿಸಿಕೊಂಡನು. ಅವನ ಸ್ವರೂಪವು ವಿಕಾರವಾಗಿದ್ದಿತು. ಅವನ ಬಣ್ಣವು ಪಿಂಗಳ (ಕಂದು ಬಣ್ಣ) ಬಣ್ಣದ್ದಾಗಿದ್ದಿತು. ನಿತಂಬವು ಸ್ಥೂಲವಾಗಿದ್ದಿತು. ನೋಡಲು ವಿಕಾರವಾಗಿ ಕಾಣುತ್ತಿದ್ದನು. ಅವನ ಸ್ವಭಾವವು ಅತಿತೀಕ್ಷ್ಣವಾಗಿದ್ದಿತು. ಅವನು ನಾಯಿಗಳ ಸಮೂಹದಿಂದ ಪರಿವೃತನಾಗಿದ್ದನು. ಅವನ ಕಿವಿಗಳು ಬಾಗಿಲಿನ ಲಾಳಮುಂಡಿಗೆಗಳಂತಿದ್ದುವು. ಅವನಿಗೆ ವಿಶಾಲವಾದ ಮುಖವಿದ್ದಿತು. ಶರೀರವೆಲ್ಲವೂ ಕೊಳೆಯಿಂದ ತುಂಬಿಹೋಗಿದ್ದಿತು. ನೋಡಲು ಬಹಳ ಭಯಂಕರವಾಗಿ ಕಾಣುತ್ತಿದ್ದನು. ಯಮದೂತನಂತೆಯೇ ಇದ್ದ ಚಾಂಡಾಲನನ್ನು ನೋಡಿದೊಡನೆಯೇ ಮಾರ್ಜಾಲವು ವ್ಯಾಕುಲಿತವಾದ ಮನಸ್ಸನ್ನು ಹೊಂದಿ ಬಹಳವಾಗಿ ಭಯಗೊಂಡು ಇಲಿಯನ್ನು ಕುರಿತು ಹೇಳಿತು: "**ಕಿಮಿದಾನೀಂ ಕರಿಷ್ಯಸಿ?** ವಯಸ್ಯ! ಈಗ ನೀನೇನು ಮಾಡುವೆ?"

ಅತ್ತಲಾಗಿ ಇಲಿಯನ್ನು ಭಕ್ಷಿಸಲು ಹೊಂಚುಹಾಕುತ್ತಿದ್ದ ಮುಂಗುಸಿ ಮತ್ತು ಗೂಬೆಗಳು ಘೋರರೂಪನಾದ ಚಾಂಡಾಲನನ್ನೂ ಮತ್ತು ಅವನ ಸುತ್ತಲೂ ಇದ್ದ ನಾಯಿಗಳ ಸಮೂಹವನ್ನೂ ನೋಡಿ ಭಯಗೊಂಡು ಮರು

ಕ್ಷಣದಲ್ಲಿಯೇ ಸಂಪೂರ್ಣವಾಗಿ ನಿರಾಶೆಗೊಂಡುವು. ನಿಶ್ಚಯವಾಗಿಯೂ ಮುಂಗುಸಿ ಮತ್ತು ಗೂಬೆಗಳು ಮಹಾಬಲಿಷ್ಠವಾಗಿದ್ದುವು. ಬುದ್ಧಿಯನ್ನೂ ಹೊಂದಿದ್ದುವು. ಇಲಿಯನ್ನು ಭಕ್ಷಿಸಲು ಎರಡು ಪ್ರಾಣಿಗಳೂ ಸಂಘಟನೆ ಯಿಂದಲೇ ಬಂದಿದ್ದುವು. ಆದರೆ ಇಲಿಯ ಸುನೀತಿಯ ಕಾರಣದಿಂದಾಗಿ ಬಲಾತ್ಕಾರದಿಂದ ಅದನ್ನು ಆಕ್ರಮಿಸಲು ಅವುಗಳಿಗೆ ಸಾಧ್ಯವಾಗಲಿಲ್ಲ. ಕಾರ್ಯಸಿದ್ಧಿಗಾಗಿ ಪರಸ್ಪರವಾಗಿ ಸಂಧಾನವನ್ನು ಮಾಡಿಕೊಂಡ



ಮಾರ್ಜಾಲ-ಮೂಷಿಕಗಳನ್ನು ನೋಡಿ ನಿರಾಸೆಯನ್ನು ಹೊಂದಿದ ಗೂಬೆ ಮತ್ತು ಮುಂಗುಸಿಗಳು ತಮ್ಮ ನಿವಾಸಗಳಿಗೆ ಹೊರಟುಹೋದುವು.

ಬಳಿಕ ಮೂಷಿಕವು ಮಾರ್ಜಾಲವನ್ನು ಬಂಧಿಸಿದ್ದ ಕಡೆಯ ತಂತು ವನ್ನೂ ಕಡಿದುಹಾಕಿತು. ಬಲೆಯಿಂದ ಬಿಡಿಸಿದೊಡನೆಯೇ ಮಾರ್ಜಾಲವು

ಅದೇ ವೃಕ್ಷದ ಮೇಲಕ್ಕೆ ಹೊರಟುಹೋಯಿತು. ಮಹಾಘೋರವಾದ ಶತ್ರುವಿನಿಂದಲೂ–ಪ್ರಾಣಾಂತಿಕವಾದ ಭಯದಿಂದಲೂ ವಿಮುಕ್ತವಾದ ಇಲಿಯು ತನ್ನ ಬಿಲದೊಳಗೆ ನುಸುಳಿತು. ಮಾರ್ಜಾಲವು ವೃಕ್ಷದ ಕೊಂಬೆಯನ್ನಾಶ್ರಯಿಸಿತು. ಬಲೆಯಲ್ಲಿ ಬಿದ್ದಿರುವ ಮೃಗಗಳನ್ನು ಹಿಡಿಯಲೆಂದು ಬಂದಿದ್ದ ಚಾಂಡಾಲನು ಹರಡಿದ್ದ ಬಲೆಯನ್ನು ಅತ್ತಿಂದಿತ್ತ ಹೊರಳಿಸಿ ನೋಡಿದನು. ಒಂದು ಮೃಗವೂ ಆ ಬಲೆಯಲ್ಲಿ ಸಿಕ್ಕಿಕೊಂಡಿರದೇ ಇದ್ದುದನ್ನು ನೋಡಿ ನಿರಾಶನಾದನು. ಸ್ವಲ್ಪ ಹೊತ್ತು ಅಲ್ಲಿಯೇ ಇದ್ದು ಅನಂತರ ಆ ಸ್ಥಳವನ್ನೇ ಬಿಟ್ಟು ಹೊರಟುಹೋದನು. ಸ್ವಲ್ಪ ಹೊತ್ತಿನಲ್ಲಿಯೇ ಆ ಚಾಂಡಾಲನು ತನ್ನ ಮನೆಯನ್ನು ಸೇರಿಕೊಂಡನು.

ಬಳಿಕ ಪ್ರಾಣಾಂತಿಕವಾದ ಭಯದಿಂದ ಮುಕ್ತಿಯನ್ನು ಹೊಂದಿ, ಸುದುರ್ಲಭವಾಗಿದ್ದ ತನ್ನ ಜೀವಿತವನ್ನು ಪುನಃ ಪಡೆದುಕೊಂಡು ವೃಕ್ಷದ ತುದಿಯಲ್ಲಿ ಕುಳಿತಿದ್ದ ಲೋಮಶಮಾರ್ಜಾಲವು ಬಿಲದಲ್ಲಿದ್ದ ಮೂಷಿಕವನ್ನು ಕುರಿತು ಹೇಳಿತು :

ಅಕೃತ್ವಾ ಸಂವಿದಂ ಕಾಞ್ಚಿತ್ಸಹಸಾ ಸಮವಪ್ಲುತಃ ।
ಕೃತಜ್ಞಂ ಕೃತಕರ್ಮಾಣಂ ಕಚ್ಚಿನ್ಮಾಂ ನಾಭಿಶಂಕಸೇ ॥೧೨೬॥

“ಮಿತ್ರನೇ! ನೀನು ನನ್ನೊಡನೆ ಯಾವ ಸಂಧಿಯನ್ನೂ ಮಾಡಿಕೊಳ್ಳದೇ (ಮಾತನ್ನೂ ಆಡದೇ) ಬಹಳ ಬೇಗ ಬಿಲದೊಳಗೇಕೆ ಸೇರಿಕೊಂಡೆ? ನೀನು ಮಾಡಿರುವ ಉಪಕಾರಕ್ಕೆ ಕೃತಜ್ಞನಾಗಿರುವ ಮತ್ತು ನಿನ್ನ ಪ್ರಾಣದ ರಕ್ಷಣೆಯನ್ನೂ ಮಾಡಿರುವ ನನ್ನ ವಿಷಯದಲ್ಲಿ ಶಂಕಿತನಾಗಿಲ್ಲವಷ್ಟೆ?

ಗತ್ವಾ ಚ ಮಮ ವಿಶ್ವಾಸಂ ದತ್ತ್ವಾ ಚ ಮಮ ಜೀವಿತಮ್ ।
ಮಿತ್ರೋಪಭೋಗಸಮಯೇ ಕಿಂ ಮಾಂ ತ್ವಂ ನೋಪಸರ್ಪಸಿ ॥೧೨೭॥

ನಿನ್ನ ಆಪತ್ತಿನ ಸಮಯದಲ್ಲಿ ನನ್ನಲ್ಲಿ ವಿಶ್ವಾಸವನ್ನು ಹೊಂದಿದ್ದೆ. ಅದಕ್ಕೆ ಪ್ರತಿಯಾಗಿ ನನಗೆ ಪ್ರಾಣದಾನವನ್ನೂ ಮಾಡಿದೆ. ಹೀಗೆ ಇಬ್ಬರೂ ಪರಸ್ಪರಸಹಕಾರದಿಂದ ಪ್ರಾಣಗಳನ್ನುಳಿಸಿಕೊಂಡನಂತರ ಶ್ರೇಷ್ಠವಾದ ಆ ಮೈತ್ರಿಯ ಸುಖವನ್ನು ಅನುಭವಿಸುವ ಈ ಕಾಲದಲ್ಲಿ ನೀನು ನನ್ನ ಹತ್ತಿರಕ್ಕೂ ಏಕೆ ಬರುತ್ತಿಲ್ಲ?

ಕೃತ್ವಾ ಹಿ ಪೂರ್ವಂ ಮಿತ್ರಾಣಿ ಯಃ ಪಶ್ಚಾನ್ನಾನುತಿಷ್ಠತಿ ।
ನ ಸ ಮಿತ್ರಾಣಿ ಲಭತೇ ಕೃಚ್ಛ್ರಾಸ್ವಾಪತ್ಸು ದುರ್ಮತಿಃ ॥೧೨೮॥

ದುಷ್ಟಬುದ್ಧಿಯನ್ನು ಹೊಂದಿರುವ ಯಾವನು ಮೊದಲು ಅನೇಕರನ್ನು ಮಿತ್ರರನ್ನಾಗಿ ಮಾಡಿಕೊಂಡು ಅನಂತರ ಮಿತ್ರಭಾವದಲ್ಲಿ ಸ್ಥಿರವಾಗಿರುವುದಿಲ್ಲವೋ–ಅಂತಹವನು ಮುಂದೆ ಒದಗಬಹುದಾದ ಕಷ್ಟಕರವಾದ ಆಪತ್ತುಗಳಲ್ಲಿ ಸಹಾಯಕರಾದ ಯಾವ ಮಿತ್ರರನ್ನೂ ಹೊಂದುವುದಿಲ್ಲ.

ಸತ್ಕೃತೋಽಹಂ ತ್ವಯಾ ಮಿತ್ರ ಸಾಮರ್ಥ್ಯಾದಾತ್ಮನಃ ಸಖೇ ।
ಸ ಮಾಂ ಮಿತ್ರತ್ವಮಾಪನ್ನಮುಪಭೋಕ್ತುಂ ತ್ವಮರ್ಹಸಿ ॥೧೨೯॥

ಪ್ರಿಯಸಖನೇ! ನೀನು ನಿನ್ನ ಶಕ್ತಿಗೆ ಅನುಸಾರವಾಗಿ ನನ್ನನ್ನು ಸತ್ಕರಿಸಿರುವೆ. (ರಕ್ಷಿಸಿರುವೆ.) ಈ ಕಾರಣದಿಂದಲೇ ನೀನು ನನ್ನ ಮಿತ್ರತ್ವವನ್ನೂ ಪಡೆದುಕೊಂಡಿರುವೆ. ನಾನೂ ನಿನ್ನ ಮೈತ್ರಿಯನ್ನು ಪಡೆದುಕೊಂಡೆನು. ಆದುದರಿಂದ ನೀನು ನನ್ನೊಡನಿದ್ದುಕೊಂಡು ಅಂತಹ ಮಿತ್ರತ್ವದ ಪ್ರಯೋಜನವನ್ನು ಪಡೆದುಕೊಳ್ಳಲು ಯೋಗ್ಯನಾಗಿರುವೆ.

ಯಾನಿ ಮೇ ಸನ್ತಿ ಮಿತ್ರಾಣಿ ಯೇ ಚ ಸಮ್ಬನ್ಧಿಬಾನ್ಧವಾಃ ।
ಸರ್ವೇ ತ್ವಾಂ ಪೂಜಯಿಷ್ಯನ್ತಿ ಶಿಷ್ಯಾ ಗುರುಮಿವ ಪ್ರಿಯಮ್ ॥೧೩೦॥

ನನಗೆ ಯಾವ ಮಿತ್ರರಿರುವರೋ ಮತ್ತು ಸಂಬಂಧಿಗಳೂ ಬಂಧುಗಳೂ ಇರುವರೋ ಅವರೆಲ್ಲರೂ–ಶಿಷ್ಯರು ಪ್ರಿಯನಾದ ಗುರುವನ್ನು ಸತ್ಕರಿಸುವಂತೆ–ನಿನ್ನನ್ನು ಸತ್ಕರಿಸುತ್ತಾರೆ.

ಅಹಂ ಚ ಪೂಜಯಿಷ್ಯೇ ತ್ವಾಂ ಸಮಿತ್ರಗಣಬಾನ್ಧವಮ್ ।
ಜೀವಿತಸ್ಯ ಪ್ರದಾತಾರಂ ಕೃತಜ್ಞಃ ಕೋ ನ ಪೂಜಯೇತ್ ॥೧೩೧॥

ಮೂಷಕನೇ! ನಾನೂ ಕೂಡ ಮಿತ್ರ-ಬಂಧುಗಳಿಂದೊಡಗೂಡಿರುವ ನಿನ್ನನ್ನು ಸತ್ಕರಿಸುತ್ತೇನೆ. ಜೀವನವನ್ನೇ ಪ್ರದಾನಮಾಡಿರುವವನನ್ನು ಕೃತಜ್ಞನಾದ ಯಾವನು ತಾನೇ ಸತ್ಕರಿಸದೇ ಇರುವನು?

ಈಶ್ವರೋ ಮೇ ಭವಾನಸ್ತು ಸ್ವಶರೀರಗೃಹಸ್ಯ ಚ ।
ಅರ್ಥಾನಾಂ ಚೈವ ಸರ್ವೇಷಾಮನುಶಾಸ್ತಾ ಚ ಮೇ ಭವ ॥೧೩೨॥

ನನ್ನ ಶರೀರಕ್ಕೂ ಮತ್ತು ನನ್ನ ಮನೆಗೂ ನೀನೇ ಸ್ವಾಮಿಯಾಗಿರು.

ನನ್ನಲ್ಲಿರುವ ಸಕಲವಿಧವಾದ ಐಶ್ವರ್ಯಗಳಿಗೂ ನೀನೇ ಅನುಶಾಸಕನಾಗು. ನೀನು ಹೇಳಿದ ರೀತಿಯಲ್ಲಿ ನಾನು ನನ್ನಲ್ಲಿರುವ ಐಶ್ವರ್ಯವನ್ನು ವಿತರಣೆ ಮಾಡುತ್ತೇನೆ. ನೀನು ಹೇಳಿದಂತೆ ನಡೆದುಕೊಳ್ಳುತ್ತೇನೆ.

ಅಮಾತ್ಯೋ ಮೇ ಭವ ಪ್ರಾಜ್ಞ ಪಿತೇವೇಹ ಪ್ರಶಾಧಿ ಮಾಮ್ ।
ನ ತೇಽಸ್ತಿ ಭಯಮಸ್ಮತ್ತೋ ಜೀವಿತೇನಾತ್ಮನಃ ಶಪೇ ॥೧೩೩॥

ಪ್ರಾಜ್ಞನೇ! ನೀನೇ ನನಗೆ ಮಹಾಮಂತ್ರಿಯಾಗು. ತಂದೆಯಾದ ವನು ಮಗನನ್ನು ಅನುಶಾಸನಮಾಡುವಂತೆ–ನೀನು ನನಗೆ ಕರ್ತವ್ಯನಿರ್ವಹಣೆಗಾಗಿ ಆಜ್ಞೆಯನ್ನು ನೀಡು. ನಮ್ಮಿಂದ ನಿನಗೆ ಯಾವ ವಿಧವಾದ ಭಯವೂ ಇರುವುದಿಲ್ಲ. ಈ ವಿಷಯವನ್ನು ನಾನು ನನ್ನ ಜೀವಿತವನ್ನೇ ಪ್ರಮಾಣೀಕರಿಸಿ (ಜೀವದ ಮೇಲೆ ಆಣೆಯಿಟ್ಟು) ಹೇಳುತ್ತಿದ್ದೇನೆ.

ಬುದ್ಧ್ಯಾ ತ್ವಮುಶನಾ ಸಾಕ್ಷಾದ್ಬಲೇನಾಧಿಕೃತಾ ವಯಮ್ ।
ತ್ವಂ ಮನ್ತ್ರಬಲಯುಕ್ತೋ ಹಿ ದತ್ವಾ ಜೀವಿತಮದ್ಯ ಮೇ ॥೧೩೪॥

ಬುದ್ಧಿಯಲ್ಲಿ ನೀನು ಸಾಕ್ಷಾತ್ ಶುಕ್ರಾಚಾರ್ಯನೇ ಆಗಿರುವೆ. ನಾವು ಬಲದಿಂದ ಯುಕ್ತರಾಗಿದ್ದೇವೆ. ಮಂತ್ರಬಲದಿಂದಲೂ ನೀನು ಯುಕ್ತನಾಗಿರುವೆ. ನೀನು ಮಂತ್ರಬಲಯುಕ್ತನಾಗಿರುವುದರಿಂದಲೇ ನನಗೆ ಪ್ರಾಣದಾನಮಾಡಿ ನಮ್ಮ ಮೇಲೆ ಅಧಿಕಾರವನ್ನು ಹೊಂದಿರುವೆ.”

ಯುಧಿಷ್ಠಿರ! ಮಾರ್ಜಾಲನಿಂದ ಹೇಳಲ್ಪಟ್ಟ ಪರಮಶಾಂತಿಯುತ ವಾದ ಮಾತುಗಳನ್ನು ಕೇಳಿದನಂತರ, ಶ್ರೇಷ್ಠವಾದ ಮಂತ್ರಾಲೋಚನೆ ಯಲ್ಲಿ ನಿಷ್ಣಾತವಾಗಿದ್ದ ಮೂಷಿಕವು ಮಧುರವಾಗಿಯೂ ತನಗೆ ಹಿತಕರ ವಾಗಿಯೂ ಇರುವ ಮಾತನ್ನು ಹೇಳಿತು :

“ಲೋಮಶನೇ! ನೀನು ಹೇಳಿದುದೆಲ್ಲವನ್ನೂ ನಾನು ಕೇಳಿದೆನು. ನನ್ನ ಬುದ್ಧಿಗೆ ಹೊಳೆದಿರುವ ಕೆಲವು ವಿಷಯಗಳನ್ನು ನಾನು ನಿನ್ನೊಡನೆ ಹೇಳುತ್ತೇನೆ. ನಾನು ಹೇಳಲಿರುವ ಈ ಮಾತುಗಳನ್ನೂ ಅವಧರಿಸು.

ವೇದಿತವ್ಯಾನಿ ಮಿತ್ರಾಣಿ ವಿಜ್ಞೇಯಾಶ್ಚಾಪಿ ಶತ್ರವಃ ।
ಏತತ್ಸುಸೂಕ್ಷ್ಮಂ ಲೋಕೇಽಸ್ಮಿನ್ದೃಶ್ಯತೇ ಪ್ರಾಜ್ಞಸಮ್ಮತಮ್ ॥೧೩೭॥

ಮಿತ್ರರು ಯಾರೆಂಬುದನ್ನು ತಿಳಿದುಕೊಳ್ಳಬೇಕು. ಶತ್ರುಗಳು ಯಾರೆಂಬುದನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕು. ಲೋಕದಲ್ಲಿ ಮಿತ್ರರು ಯಾರು ಮತ್ತು ಶತ್ರುಗಳು ಯಾರು?–ಎಂಬುದನ್ನು ತಿಳಿಯುವುದು ಅತ್ಯಂತ ಸೂಕ್ಷ್ಮವಾದ ವಿಚಾರವೆಂದು ಪ್ರಾಜ್ಞರಾದವರೂ ಅಭಿಪ್ರಾಯ ಪಡುತ್ತಾರೆ.

ಶತ್ರುರೂಪಾ ಹಿ ಸುಹೃದೋ ಮಿತ್ರರೂಪಾಶ್ಚ ಶತ್ರವಃ ।
ಸಂಧಿತಾಸ್ತೇ ನ ಬುಧ್ಯನ್ತೇ ಕಾಮಕ್ರೋಧವಶಂ ಗತಾಃ ॥೧೩೮॥

ಕೆಲವು ವೇಳೆ ಸುಹೃದರು ಶತ್ರುಗಳ ರೂಪದಲ್ಲಿಯೂ ಇರುತ್ತಾರೆ. ಶತ್ರುಗಳು ಮಿತ್ರರ ರೂಪದಲ್ಲಿಯೂ ಇರುತ್ತಾರೆ. ಯಾವುದೋ ಕಾರಣಕ್ಕಾಗಿ ದೇಶ-ಕಾಲಾನುಸಾರವಾಗಿ ಪರಸ್ಪರವಾಗಿ ಸಂಧಿಮಾಡಿಕೊಂಡ ಅವರು ಕಾಮ-ಕ್ರೋಧಗಳಿಗೆ ಅಧೀನರಾಗಿ ಯಾರು ಮಿತ್ರರು ಅಥವಾ ಯಾರು ಶತ್ರುಗಳು–ಎಂಬುದನ್ನೇ ತಿಳಿಯದವರಾಗುತ್ತಾರೆ.

ನಾಸ್ತಿ ಜಾತು ರಿಪುರ್ನಾಮ ಮಿತ್ರಂ ನಾಮ ನ ವಿದ್ಯತೇ ।
ಸಾಮರ್ಥ್ಯಯೋಗಾಜ್ಜಾಯನ್ತೇ ಮಿತ್ರಾಣಿ ರಿಪವಸ್ತಥಾ ॥೧೩೯॥

ನಿರಂತರವಾಗಿ ಯಾವನೂ ಶತ್ರುವಾಗುವುದಿಲ್ಲ ; ಮಿತ್ರನೂ ಆಗುವುದಿಲ್ಲ. ಅವರವರ ಸಾಮರ್ಥ್ಯಕ್ಕೆ ಅನುಸಾರವಾಗಿ ಜನರು ಪರಸ್ಪರವಾಗಿ ಶತ್ರುಗಳೂ–ಮಿತ್ರರೂ ಆಗುತ್ತಾರೆ.

ಯೋ ಯಸ್ಮಿಞ್ಜೀವತಿ ಸ್ವಾರ್ಥಂ ಪಶ್ಯೇತ್ಪೀಡಾಂ ನ ಜೀವತಿ ।
ಸ ತಸ್ಯ ಮಿತ್ರಂ ತಾವತ್ಸ್ಯಾದ್ಯಾವನ್ನ ಸ್ಯಾದ್ವಿಪರ್ಯಯಃ ॥೧೪೦॥

ಯಾವನು, ಮತ್ತೊಬ್ಬನು ಜೀವಿಸಿರುವವರೆಗೆ ಮಾತ್ರವೇ ತನ್ನ ಸ್ವಾರ್ಥದ ಸಾಧನೆಯಾಗುವುದೆಂದೂ, ಅವನು ಗತಿಸಿದೊಡನೆಯೇ ತನ್ನ ಹಿತಕ್ಕೆ ಧಕ್ಕೆಯುಂಟಾಗುವುದೆಂದೂ ಭಾವಿಸಿರುವನೋ–ಅಂತಹವನು ತನಗೆ ಹಿತಕರನಾದ ಅಂತಹ ಮನುಷ್ಯನನ್ನು ಮಿತ್ರನೆಂದು ಭಾವಿಸುತ್ತಾನೆ. ಹಿತಕ್ಕೆ ಧಕ್ಕೆಯುಂಟಾಗುವವರೆಗೂ ಅವನು ತನ್ನ ಪರಮಮಿತ್ರನೆಂದೇ ಭಾವಿಸುತ್ತಾನೆ. ತನ್ನ ಹಿತಕ್ಕೆ ಧಕ್ಕೆಯುಂಟಾಗುವುದೆಂದು ಕಂಡಕೂಡಲೇ ಅಂತಹ

ಪವಿತ್ರವಾದ ಮೈತ್ರಿಯೂ ಅಳಿದುಹೋಗುತ್ತದೆ. ಆದುದರಿಂದ ಮೈತ್ರಿಯೆಂಬುದು ಸ್ವಹಿತಸಾಧನೆಯನ್ನೇ ಅವಲಂಬಿಸಿದೆ.

ನಾಸ್ತಿ ಮೈತ್ರೀ ಸ್ಥಿರಾ ನಾಮ ನ ಚ ಧ್ರುವಮಸೌಹೃದಮ್ ।
ಅರ್ಥಯುಕ್ತ್ಯಾನುಜಾಯನ್ತೇ ಮಿತ್ರಾಣಿ ರಿಪವಸ್ತಥಾ ॥೧೪೧॥

ಮೈತ್ರಿಯು ಸ್ಥಿರವಾಗಿ ಉಳಿಯುವುದು–ಎಂಬುದೇ ಇಲ್ಲ. ಶತ್ರುತ್ವವೂ ಸ್ಥಿರವಾಗಿ ಉಳಿಯಲಾರದು. ಮನುಷ್ಯನ ಸ್ವಾರ್ಥಕ್ಕೆ ಅನುಸಾರವಾಗಿ ಅವನಿಗೆ ಕೆಲವು ಸಮಯಗಳಲ್ಲಿ ಕೆಲವರು ಶತ್ರುಗಳಾಗುತ್ತಾರೆ ; ಕೆಲವರು ಮಿತ್ರರಾಗುತ್ತಾರೆ.

ಮಿತ್ರಂ ಚ ಶತ್ರುತಾಮೇತಿ ಕಸ್ಮಿಂಶ್ಚಿತ್ಕಾಲಪರ್ಯಯೇ ।
ಶತ್ರುಶ್ಚ ಮಿತ್ರತಾಮೇತಿ ಸ್ವಾರ್ಥೋ ಹಿ ಬಲವತ್ತರಃ ॥೧೪೨॥

ಕಾಲದ ವಿಪರ್ಯಾಸದಿಂದಾಗಿ ಮಿತ್ರನೇ ಶತ್ರುತ್ವವನ್ನು ಹೊಂದುತ್ತಾನೆ. ಶತ್ರುವೂ ಮಿತ್ರನಾಗುತ್ತಾನೆ. ಏಕೆಂದರೆ : ಸ್ವಾರ್ಥವೆಂಬುದು ಬಲವತ್ತರವಾದುದು.

ಯೋ ವಿಶ್ವಸಿತಿ ಮಿತ್ರೇಷು ನ ವಿಶ್ವಸಿತಿ ಶತ್ರುಷು ।
ಅರ್ಥಯುಕ್ತಿಮವಿಜ್ಞಾಯ ಯಃ ಪ್ರೀತೌ ಕುರುತೇ ಮನಃ ।
ಮಿತ್ರೇ ವಾ ಯದಿ ವಾ ಶತ್ರೌ ತಸ್ಯಾಪಿ ಚಲಿತಾ ಮತಿಃ ॥೧೪೩॥

ಯಾವನು ಸ್ವಾರ್ಥವನ್ನು ಚೆನ್ನಾಗಿ ವಿಚಾರಮಾಡದೇ ಮಿತ್ರರ ವಿಷಯದಲ್ಲಿ ವಿಶ್ವಾಸವನ್ನಿಡುವನೋ–ಶತ್ರುಗಳ ವಿಷಯದಲ್ಲಿ ವಿಶ್ವಾಸವನ್ನಿಡುವುದಿಲ್ಲವೋ ಮತ್ತು ಯಾವನು ಮಿತ್ರನನ್ನಾಗಲೀ ಶತ್ರುವನ್ನಾಗಲೀ ಪ್ರೇಮಭಾವದಿಂದ ಕಾಣಲು ಪ್ರಯತ್ನಿಸುವನೋ–ಅಂತಹವನ ಬುದ್ಧಿಯು ಚಾಂಚಲ್ಯವನ್ನು ಹೊಂದಿರುವುದೆಂದು ತಿಳಿಯಬೇಕು.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿವಿಶ್ವಸೇತ್ ।
ವಿಶ್ವಾಸಾದ್ಭಯಮುತ್ಪನ್ನಮಪಿ ಮೂಲಾನಿ ಕೃನ್ತತಿ ॥೧೪೪॥

ವಿಶ್ವಾಸಕ್ಕೆ ಪಾತ್ರನಲ್ಲದವನ ಮೇಲೆ ಸ್ವಲ್ಪವಾದರೂ ವಿಶ್ವಾಸವನ್ನಿಡಬಾರದು. ವಿಶ್ವಾಸಕ್ಕೆ ಪಾತ್ರನಾದವನ ಮೇಲೂ ಅತಿಯಾದ ನಂಬಿಕೆ

ಯನ್ನಿಡಬಾರದು. ಏಕೆಂದರೆ : ವಿಶ್ವಾಸದಿಂದ (ನಂಬಿದವನಿಂದ) ಉಂಟಾದ ಭಯವು ಮನುಷ್ಯನನ್ನು ಸಮೂಲವಾಗಿ ನಾಶಮಾಡಿಬಿಡುತ್ತದೆ. (ಒಬ್ಬನು ಮತ್ತೊಬ್ಬನ ಮೇಲೆ ಸಂಪೂರ್ಣವಾಗಿ ವಿಶ್ವಾಸವನ್ನಿಟ್ಟಿರುತ್ತಾನೆ. ತನ್ನ ಅಂತರಂಗದ ವಿಷಯಗಳೆಲ್ಲವನ್ನೂ ಅವನೊಡನೆ ಹೇಳಿಕೊಂಡಿರುತ್ತಾನೆ. ತಾನು ಮಾಡಿರುವ ಒಳ್ಳೆಯ ಕೆಲಸ, ಕೆಟ್ಟ ಕೆಲಸ ಎಲ್ಲವನ್ನೂ ಅವನೊಡನೆ ಹೇಳಿರುತ್ತಾನೆ. ಆದರೆ ಕಾಲವಿಪರ್ಯಾಸದಿಂದ ಅಂತಹ ವಿಶ್ವಾಸಿಯೂ ಅವಿಶ್ವಾಸಿಯಾಗುತ್ತಾನೆ. ಇವನ ಲೋಪ-ದೋಷಗಳೆಲ್ಲವೂ ಅವನಿಗೆ ತಿಳಿದಿರುತ್ತವೆಯಾದುದರಿಂದ ಇವನ ವಿನಾಶಕ್ಕೆ ಅವನೇ ಕಾರಣನಾಗುತ್ತಾನೆ. ಆದುದರಿಂದ ವಿಶ್ವಾಸಕ್ಕೆ ಪಾತ್ರನಾದವನಲ್ಲಿಯೂ ಅತ್ಯಂತವಿಶ್ವಾಸವನ್ನಿಡ ಬಾರದು.)

ಅರ್ಥಯುಕ್ತ್ಯಾ ಹಿ ಜಾಯನ್ತೇ ಪಿತಾ ಮಾತಾ ಸುತಸ್ತಥಾ ।
ಮಾತುಲಾ ಭಾಗಿನೇಯಾಶ್ಚ ತಥಾ ಸಮ್ಬನ್ಧಿಬಾನ್ಧವಾಃ ॥೧೪೫॥

ತಂದೆ, ತಾಯಿ, ಮಗ, ಸೋದರಮಾವ, ಸೋದರಳಿಯ ಮತ್ತು ಬಂಧು-ಬಾಂಧವರು ಸ್ವಾರ್ಥದ ಕಾರಣದಿಂದಲೇ ಹುಟ್ಟಿಕೊಂಡಿರುತ್ತಾರೆ. (ಇವರ ನಡುವೆ ಸ್ನೇಹವು ಸ್ವಾರ್ಥದ ಕಾರಣದಿಂದಲೇ ಹುಟ್ಟಿಕೊಂಡಿರುತ್ತದೆ.)

ಪುತ್ರಂ ಹಿ ಮಾತಾಪಿತರೌ ತ್ಯಜತಃ ಪತಿತಂ ಪ್ರಿಯಮ್ ।
ಲೋಕೋ ರಕ್ಷತಿ ಚಾತ್ಮಾನಂ ಪಶ್ಯ ಸ್ವಾರ್ಥಸ್ಯ ಸಾರತಾಮ್ ॥೧೪೬॥

ಅತ್ಯಂತಪ್ರೀತಿಗೆ ಪಾತ್ರನಾದ ಪುತ್ರನೇ ಆಗಿದ್ದರೂ ಅವನು ಪತಿತ ನಾದನೆಂದರೆ ತಂದೆ-ತಾಯಿಗಳೇ ಅವನನ್ನು ಪರಿತ್ಯಜಿಸುತ್ತಾರೆ. ಜನರು ಯಾವಾಗಲೂ ತಮ್ಮ ಆತ್ಮರಕ್ಷಣೆಯಲ್ಲಿಯೇ ನಿರತರಾಗಿರುತ್ತಾರೆ. ಮಾರ್ಜಾಲನೇ! ಸ್ವಾರ್ಥದ ಸಾರವನ್ನಾದರೂ ನೋಡು! (ಸ್ವಾರ್ಥದ ಪ್ರಭಾವವನ್ನಾದರೂ ನೋಡು!)

ಸಾಮಾನ್ಯಾ ನಿಷ್ಕೃತಿಃ ಪ್ರಾಜ್ಞ ಯೋ ಮೋಕ್ಷಾತ್ಪ್ರತ್ಯನನ್ತರಮ್ ।
ಕೃತಂ ಮೃಗಯಸೇ ಶತ್ರುಂ ಸುಖೋಪಾಯಮಸಂಶಯಮ್ ॥೧೪೭॥

ಪ್ರಾಜ್ಞನೇ! ವಿಮೋಚನೆಯೆಂಬುದು ನಮ್ಮಿಬ್ಬರಿಗೂ ಒಂದೇ ರೀತಿ

ಯದಾಗಿದ್ದಿತು. ಮುಂಗುಸಿ-ಗೂಬೆಗಳಿಂದ ನನ್ನ ವಿಮೋಚನೆಯಾಗಬೇಕಾಗಿದ್ದಿತು. ಚಾಂಡಾಲನು ಬೀಸಿದ್ದ ಬಲೆಯಿಂದ ನಿನ್ನ ಬಿಡುಗಡೆಯೂ ಆಗಬೇಕಾಗಿದ್ದಿತು. ನೀನು ನನಗೆ ಆಶ್ರಯವನ್ನಿತ್ತುದರಿಂದ ನನ್ನ ಬಿಡುಗಡೆಯಾಯಿತು. ಅದಕ್ಕೆ ಪ್ರತಿಯಾಗಿ ನಾನು ಬಲೆಯನ್ನು ಕತ್ತರಿಸಿಹಾಕಿದುದರಿಂದ ನಿನ್ನ ಬಿಡುಗಡೆಯೂ ಆಯಿತು. ಮುಂದೆ ನಾನೂ ನಿನಗೆ ಏನನ್ನೂ ಮಾಡಬೇಕಾಗಿಲ್ಲ ; ನೀನೂ ನನಗೆ ಏನನ್ನೂ ಮಾಡಬೇಕಾಗಿಲ್ಲ. ಹಾಗಿದ್ದರೂ ನೀನು ನಿನಗೆ ಉಪಕಾರಮಾಡಿದ ಶತ್ರುವನ್ನು ಹುಡುಕುತ್ತಿರುವೆ. ಇದು ನಿಶ್ಚಯವಾಗಿಯೂ ನಿನ್ನ ಸುಖೋಪಾಯವನ್ನು (ನನ್ನ ಭಕ್ಷಣೆಯಿಂದುಂಟಾಗುವ ಆನಂದದ ಉಪಾಯವನ್ನು) ಹುಡುಕುವುದೇ ಆಗಿದೆಯೆಂದು ನಾನು ತಿಳಿಯುತ್ತೇನೆ.

ಅಸ್ಮಿನ್ನಿಲಯ ಏವಂ ತ್ವಂ ನ್ಯಗ್ರೋಧಾದವತಾರಿತಃ ।
ಪೂರ್ವಂ ನಿವಿಷ್ಟಮುನ್ಮಾಥಂ ಚಪಲತ್ವಾನ್ನ ಬುದ್ಧವಾನ್ ॥೧೪೮॥

ನೀನು ಹಿಂದೆ ಇದೇ ಸ್ಥಳದಲ್ಲಿಯೇ ನ್ಯಗ್ರೋಧವೃಕ್ಷದಿಂದ ಕೆಳಕ್ಕೆ ಇಳಿದು ಬಂದೆ. ಆದರೆ ನೀನು ಬರುವುದಕ್ಕೆ ಮೊದಲೇ ಇಲ್ಲಿ ಬಲೆಯು ಹರಡಲ್ಪಟ್ಟಿದ್ದಿತು. ನೀನು ಜಿಹ್ವಾಚಾಪಲ್ಯದ ಕಾರಣದಿಂದಾಗಿ ಅದನ್ನು ತಿಳಿದುಕೊಳ್ಳಲಿಲ್ಲ.

ಆತ್ಮನಶ್ಚಪಲೋ ನಾಸ್ತಿ ಕುತೋಽನ್ಯೇಷಾಂ ಭವಿಷ್ಯತಿ ।
ತಸ್ಮಾತ್ಸರ್ವಾಣಿ ಕಾರ್ಯಾಣಿ ಚಪಲೋ ಹನ್ತ್ಯಸಂಶಯಮ್ ॥೧೪೯॥

ಚಪಲಚಿತ್ತದಿಂದ ಕೂಡಿರುವ ಪ್ರಾಣಿಯು ತನಗೇ ಒಳ್ಳೆಯದನ್ನು ಮಾಡಿಕೊಳ್ಳಲು ಸಾಧ್ಯವಾಗದೇ ಇರುವಾಗ ಅದು ಬೇರೆಯವರಿಗೆ ಒಳ್ಳೆಯದನ್ನು ಹೇಗೆತಾನೇ ಮಾಡೀತು? ಆದುದರಿಂದ ಚಪಲತೆಯಿಂದ ಕೂಡಿರುವ ಪ್ರಾಣಿಯು ಅಥವಾ ಮನುಷ್ಯನು ಎಲ್ಲ ಕಾರ್ಯಗಳನ್ನೂ ಹಾಳುಮಾಡಿಕೊಳ್ಳುತ್ತಾನೆ.

ಬ್ರವೀಷಿ ಮಧುರಂ ಯಚ್ಚ ಪ್ರಿಯೋ ಮೇಽದ್ಯ ಭವಾನಿತಿ ॥೧೫೦॥

ತನ್ಮಿತ್ರ ಕಾರಣಂ ಸರ್ವಂ ವಿಸ್ತರೇಣಾಪಿ ಮೇ ಶೃಣು ।
ಕಾರಣಾತ್ಪ್ರಿಯತಾಮೇತಿ ದ್ವೇಷ್ಯೋ ಭವತಿ ಕಾರಣಾತ್ ॥೧೫೧॥

ಮಿತ್ರನೇ! ನೀನೀಗ ‘ ನೀನು ನನಗೆ ಅತ್ಯಂತಪ್ರಿಯನಾಗಿರುವೆ ’ ಎಂಬ ಮಧುರವಾದ ಯಾವ ಮಾತನ್ನು ನನ್ನೊಡನೆ ಹೇಳುತ್ತಿರುವೆಯೋ ಅದಕ್ಕೂ ಕಾರಣವಿದೆ. ಆ ಎಲ್ಲವನ್ನೂ ವಿಸ್ತಾರವಾಗಿಯೇ ಕೇಳು. ಕಾರಣ ವಿರುವುದರಿಂದಲೇ ಒಬ್ಬನು ಮತ್ತೊಬ್ಬನಿಗೆ ಪ್ರಿಯನಾಗುತ್ತಾನೆ ; ಕಾರಣ ವಿರುವುದರಿಂದಲೇ ಒಬ್ಬನು ಮತ್ತೊಬ್ಬನಿಗೆ ದ್ವೇಷಿಯೂ ಆಗುತ್ತಾನೆ.

ಅರ್ಥಾರ್ಥೀ ಜೀವಲೋಕೋಽಯಂ ನ ಕಶ್ಚಿತ್ಕಸ್ಯಚಿತ್ಪ್ರಿಯಃ ।
ಸಖ್ಯಂ ಸೋದರ್ಯಯೋರ್ಭ್ರಾತ್ರೋರ್ದಮ್ಪತ್ಯೋರ್ವಾ ಪರಸ್ಪರಮ್ ।
ಕಸ್ಯಚಿನ್ನಾಭಿಜಾನಾಮಿ ಪ್ರೀತಿಂ ನಿಷ್ಕಾರಣಾಮಿಹ ॥೧೫೨॥

ಈ ಜೀವಲೋಕವು ಪ್ರಯೋಜನಾಪೇಕ್ಷಿಯಾಗಿದೆ. ಸ್ವಪ್ರಯೋಜನ ವಿಲ್ಲದೆ ಯಾರೂ ಯಾವ ಕಾರ್ಯವನ್ನೂ ಮಾಡುವುದಿಲ್ಲ. ಆದುದರಿಂದ ಯಾರೂ ಯಾರಿಗೂ ಕಾರಣವಿಲ್ಲದೇ ಪ್ರಿಯನಾಗುವುದಿಲ್ಲ. ಒಡಹುಟ್ಟಿದ ಸೋದರರು ಪರಸ್ಪರ ಪ್ರೀತಿಯುಳ್ಳವರಾಗಿದ್ದರೆ ಅದಕ್ಕೂ ಅರ್ಥ ಅಥವಾ ಸ್ವಾರ್ಥವೇ ಕಾರಣವಾಗಿರುತ್ತದೆ. ದಂಪತಿಗಳು ಪರಸ್ಪರಾನುರಾಗವುಳ್ಳವ ರಾಗಿದ್ದರೆ ಅದಕ್ಕೂ ಕಾರಣವು ಅರ್ಥ ಅಥವಾ ಸ್ವಾರ್ಥವೇ ಆಗಿರುತ್ತದೆ. ಹೆಂಡತಿಯು ಗಂಡನನ್ನು ಪ್ರೀತಿಸುವುದು ಸ್ವಾರ್ಥಕ್ಕಾಗಿ ; ಅಥವಾ ಗಂಡನು ಹೆಂಡತಿಯನ್ನು ಪ್ರೀತಿಸುವುದೂ ಸ್ವಪ್ರಯೋಜನಕ್ಕಾಗಿಯೇ. ಈ ಜಗತ್ತಿನಲ್ಲಿ ಯಾರಲ್ಲಿಯೇ ಆಗಲೀ–ನಿಷ್ಕಾರಣವಾದ (ಸ್ವಾರ್ಥರಹಿತವಾದ) ಪ್ರೀತಿ ಯಿರುವುದು ಎಲ್ಲಿಯೂ ತಿಳಿದುಬಂದಿಲ್ಲ.

ಯದ್ಯಪಿ ಭ್ರಾತರಃ ಕ್ರುದ್ಧಾ ಭಾರ್ಯಾ ವಾ ಕಾರಣಾನ್ತರೇ ।
ಸ್ವಭಾವತಸ್ತೇ ಪ್ರೀಯನ್ತೇ ನೇತರಃ ಪ್ರೀಯತೇ ಜನಃ ॥೧೫೩॥

ಇದೇ ಸ್ವಾರ್ಥದ ಕಾರಣದಿಂದಲೇ ಯದ್ಯಪಿ ಸಹೋದರರು ಪರಸ್ಪರ ವಾಗಿ ಕ್ರುದ್ಧರಾಗಿ ವರ್ತಿಸಿದರೂ–ಭಾರ್ಯೆಯೂ ಗಂಡನ ವಿಷಯದಲ್ಲಿ ಕ್ರುದ್ಧಳಾಗಿ ವರ್ತಿಸಿದರೂ–ಸೋದರ್ಯರೂ ಮತ್ತು ದಂಪತಿಗಳೂ ಸ್ವಭಾವತಃ ಪರಸ್ಪರ ಪ್ರೀತಿಯುಳ್ಳವರಾಗಿರುತ್ತಾರೆ. ಅಂತಹ ಅನ್ಯೋನ್ಯ

ಪ್ರೀತಿಯು ಅನ್ಯಜನರಲ್ಲಿ ಇರುವುದಿಲ್ಲ. ಮೈತ್ರಿಯು ಪ್ರೇಮಮೂಲವೇ ಆಗಿದ್ದರೂ–ಸೋದರರರಲ್ಲಿರುವ ಮತ್ತು ದಂಪತಿಗಳಲ್ಲಿರುವ ಸ್ವಾಭಾವಿಕವಾದ ಪ್ರೇಮವು–ಇಬ್ಬರು ಮಿತ್ರರಲ್ಲಿರುವುದಿಲ್ಲ.

ಪ್ರಿಯೋ ಭವತಿ ದಾನೇನ ಪ್ರಿಯವಾದೇನ ಚಾಪರಃ ।
ಮನ್ತ್ರಹೋಮಜಪೈರನ್ಯಃ ಕಾರ್ಯಾರ್ಥಂ ಪ್ರಿಯತೇ ಜನಃ ॥೧೫೪॥

ಯಥೇಚ್ಛವಾಗಿ ದಾನಕೊಡುವುದರಿಂದ ದಾನಕೊಟ್ಟವನು–ದಾನ ತೆಗೆದುಕೊಂಡವನಿಗೆ ಪ್ರಿಯನಾಗುತ್ತಾನೆ. ಪ್ರಿಯವಾದ ಮಾತುಗಳನ್ನಾಡು ವುದರಿಂದ ಪ್ರಿಯವಾದ ಮಾತುಗಳನ್ನಾಡಿದವನು–ಆಡಿಸಿಕೊಂಡವನಿಗೆ ಪ್ರಿಯನಾಗುತ್ತಾನೆ. ಒಬ್ಬನ ಕಾರ್ಯಸಿದ್ಧಿಗಾಗಿ ಮಂತ್ರ-ಹೋಮ-ಜಪಗಳನ್ನು ಮಾಡುವವನು–ಕಾರ್ಯಸಿದ್ಧಿಯನ್ನು ಪಡೆದವನಿಗೆ ಪ್ರಿಯನಾಗುತ್ತಾನೆ.

ಉತ್ಪನ್ನಾ ಕಾರಣೇ ಪ್ರೀತಿರಾಸೀನ್ನೌ ಕಾರಣಾನ್ತರೇ ।
ಪ್ರಧ್ವಸ್ತೇ ಕಾರಣಸ್ಥಾನೇ ಸಾ ಪ್ರೀತಿರ್ವಿನಿವರ್ತತೇ ॥೧೫೫॥

ಕಾರಣಾಂತರದಿಂದ (ಪರಸ್ಪರ ಸ್ವಾರ್ಥದ ಕಾರಣದಿಂದ) ಹುಟ್ಟಿದ್ದ ನಮ್ಮಿಬ್ಬರ ಪರಸ್ಪರ ಪ್ರೀತಿಯು ನಮ್ಮ ಸ್ವಾರ್ಥದ ಸಾಧನೆಯಾಗುವವರೆಗೂ ಇದ್ದಿತು. ಪ್ರೀತಿಯ ಉತ್ಪತ್ತಿಗೆ ಕಾರಣವಾದ ಸಂದರ್ಭವೇ ನಷ್ಟವಾಗಿ ಹೋದನಂತರ (ಕಳೆದುಹೋದನಂತರ) ನಮ್ಮಲ್ಲಿ ಪರಸ್ಪರವಾಗಿ ಉಂಟಾ ಗಿದ್ದ ಪ್ರೀತಿಯೂ ಕೂಡ ಹಿಂದಿರುಗಿಬಿಡುತ್ತದೆ. ಸಹೋದರರಂತೆ ಮತ್ತು ದಂಪತಿಗಳಂತೆ ನಮ್ಮದು ಸ್ವಾಭಾವಿಕ ಪ್ರೇಮವಲ್ಲವಾದುದರಿಂದ ಸ್ವಾರ್ಥ ಕ್ಕಾಗಿಯೇ ಹುಟ್ಟಿದ ಮೈತ್ರಿಯು ಸ್ವಾರ್ಥದ ಸಾಧನೆಯಾದೊಡನೆಯೇ ನಶಿಸಿಹೋಯಿತು. ಶಾಶ್ವತವಾಗಿ ಉಳಿಯಲು ಸಾಧ್ಯವೇ ಇಲ್ಲ.

ಕಿಂ ನು ತತ್ಕಾರಣಂ ಮನ್ಯೇ ಯೇನಾಹಂ ಭವತಃ ಪ್ರಿಯಃ ।
ಅನ್ಯತ್ರಾಭ್ಯವಹಾರಾರ್ಥಂ ತತ್ರಾಪಿ ಚ ಬುಧಾ ವಯಮ್ ॥೧೫೬॥

ನಾನು ನಿನಗೇಕಿಷ್ಟೊಂದು ಪ್ರಿಯನಾಗಿರುವೆನೆಂಬುದರ ಕಾರಣವನ್ನೂ ನಾನು ತಿಳಿದುಕೊಂಡಿರುತ್ತೇನೆ. ನನ್ನನ್ನು ಭಕ್ಷಿಸುವುದೊಂದರ ಹೊರತಾಗಿ ನನ್ನ ಮೇಲೆ ನೀನು ಇಷ್ಟೊಂದು ಅಗಾಧವಾದ ಪ್ರೀತಿಯನ್ನು ಪ್ರಕಟಿಸಲು ಬೇರೆ ಯಾವ ಕಾರಣವೂ ಇರುವುದಿಲ್ಲ. ನಾವೂ ನಿನ್ನಂತೆಯೇ ತಿಳಿವಳಿಕೆ

ಯುಳ್ಳವರಾಗಿರುವುದರಿಂದ ನಿನ್ನ ಮನಸ್ಸಿನಲ್ಲಿ ಏನಿರುವುದೆಂಬುದನ್ನು ಗ್ರಹಿಸಿದ್ದೇವೆ.

ಕಾಲೋ ಹೇತುಂ ವಿಕುರುತೇ ಸ್ವಾರ್ಥಸ್ತಮನುವರ್ತತೇ ॥೧೫೭॥

ಸ್ವಾರ್ಥಂ ಪ್ರಾಜ್ಞೋಽಭಿಜಾನಾತಿ ಪ್ರಾಜ್ಞಂ ಲೋಕೋಽನುವರ್ತತೇ ।
ನ ತ್ವೀದೃಶಂ ತ್ವಯಾ ವಾಚ್ಯಂ ವಿದುಷಿ ಸ್ವಾರ್ಥಪಣ್ಡಿತೇ ॥೧೫೮॥

ಕಾಲವೆಂಬುದು ಕಾರಣವನ್ನು ವ್ಯತ್ಯಾಸಗೊಳಿಸುತ್ತದೆ. (ಹಿಂದೆ ನಾವಿಬ್ಬರೂ ಸ್ವಾರ್ಥಸಾಧನೆಗಾಗಿ ಮೈತ್ರಿಯನ್ನು ಮಾಡಿಕೊಂಡೆವು. ಈಗ ಅಂತಹ ಭಯವು ನಮ್ಮಿಬ್ಬರಿಗೂ ಇರುವುದಿಲ್ಲ. ಆದರೂ ನೀನು ಬೇರೆಯ ಕಾರಣವನ್ನು ಕೊಟ್ಟು ನನ್ನ ಮೈತ್ರಿಯನ್ನು ಅಪೇಕ್ಷಿಸುತ್ತಿರುವೆ. ಆದುದರಿಂದ ಕಾಲವು ಕಳೆದಂತೆ ಕಾರಣವೂ ಬದಲಾಯಿಸುತ್ತಿರುತ್ತದೆ.) ಅಂತಹ ಕಾರಣವನ್ನು ಸ್ವಾರ್ಥವು ಅನುಸರಿಸಿ ಹೋಗುತ್ತಿರುತ್ತದೆ. ಸ್ವಾರ್ಥವು ಕಾಲಕ್ಕೆ ಅನುಗುಣವಾಗಿ ಹೊಸ-ಹೊಸ ಕಾರಣಗಳನ್ನು ಸೃಷ್ಟಿಸುತ್ತಿರುತ್ತದೆ. ಸ್ವಾರ್ಥಕ್ಕಾಗಿ ಸಮಯಕ್ಕೆ ತಕ್ಕಂತೆ ಕಾರಣಗಳನ್ನು ಬದಲಾಯಿಸುವುದನ್ನು ಪ್ರಾಜ್ಞನು ಚೆನ್ನಾಗಿ ತಿಳಿದುಕೊಂಡಿರುತ್ತಾನೆ. ಅಂತಹ ಸ್ವಾರ್ಥಪರನಾದ ಪ್ರಾಜ್ಞನನ್ನು ಲೋಕವು ಅನುಸರಿಸಿ ಹೋಗುತ್ತಿರುತ್ತದೆ. ಆದರೆ ನಾನಾದರೋ ಸಾಮಾನ್ಯನಲ್ಲ. ವಿದ್ವಾಂಸನಾಗಿದ್ದೇನೆ. ಸ್ವಾರ್ಥದ ವಿಷಯದಲ್ಲಿ ಪಾಂಡಿತ್ಯವನ್ನೂ ಪಡೆದಿರುತ್ತೇನೆ. ಆದುದರಿಂದ ನನ್ನಂತಹವನೊಡನೆ ನೀನು ಹೀಗೆ ಮಾತನಾಡುವುದು ಯುಕ್ತವಲ್ಲ.

ಅಕಾಲೇ ಹಿ ಸಮರ್ಥಸ್ಯ ಸ್ನೇಹಹೇತುರಯಂ ತವ ।
ತಸ್ಮಾನ್ನಾಹಂ ಚಲೇ ಸ್ವಾರ್ಥಾತ್ಸುಸ್ಥಿರಃ ಸಂಧಿವಿಗ್ರಹೇ ॥೧೫೯॥

ನೀನೀಗ ಸರ್ವಸಮರ್ಥನಾಗಿರುವೆ. ಯಾವ ವಿಧವಾದ ಅಪಾಯವೂ ಈಗ ನಿನಗಿರುವುದಿಲ್ಲ. ನೀನೀಗ ನಿರೂಪಿಸುತ್ತಿರುವ ಸ್ನೇಹದ ಕಾರಣವು ಸಮಯಕ್ಕೆ ತಕ್ಕುದಾಗಿಲ್ಲ. ಅಕಾಲದಲ್ಲಿ ನಿಷ್ಕಾರಣವಾಗಿ ನೀನು ಇಂತಹ ಸ್ನೇಹವನ್ನು ಪ್ರದರ್ಶಿಸುತ್ತಿರುವೆ. ಇದಕ್ಕೆ ಕಾರಣವು ನಿನ್ನ ಸ್ವಾರ್ಥವೇ ಆಗಿದೆ. (ನನ್ನನ್ನು ಕಬಳಿಸುವುದೇ ಆಗಿದೆ.) ನಾನೂ ಸ್ವಾರ್ಥಪಂಡಿತ

ನಾಗಿದ್ದೇನೆ. ನನ್ನ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬುದು ನನಗೆ ಗೊತ್ತಿದೆ. ಆದುದರಿಂದ ಸ್ವಾರ್ಥದಿಂದ ನಾನೆಂದಿಗೂ ವಿಚಲಿತನಾಗುವುದಿಲ್ಲ. ಆತ್ಮರಕ್ಷಣೆಯ ವಿಷಯದಲ್ಲಿ ನಾನೆಂದಿಗೂ ಭ್ರಾಂತನಾಗುವುದಿಲ್ಲ. ಸಂಧಿ-ವಿಗ್ರಹಗಳ ವಿಷಯದಲ್ಲಿ ನಾನು ನಿಶ್ಚಿತವಾದ ಅಭಿಪ್ರಾಯವುಳ್ಳವನಾಗಿದ್ದೇನೆ. ಸಂಧಿಯನ್ನೇ ಆಗಲೀ, ದ್ವೇಷವನ್ನೇ ಆಗಲೀ–ಯಾರೊಡನೆ– ಹೇಗೆ–ಯಾವ ಸಮಯದಲ್ಲಿ ಮಾಡಿಕೊಳ್ಳಬೇಕೆಂಬ ವಿಷಯವು ನನಗೆ ಚೆನ್ನಾಗಿ ತಿಳಿದಿದೆ.

ಅಭ್ರಾಣಾಮಿವ ರೂಪಾಣಿ ವಿಕುರ್ವನ್ತಿ ಕ್ಷಣೇ ಕ್ಷಣೇ ।
ಅದ್ಯೈವ ಹಿ ರಿಪುರ್ಭೂತ್ವಾ ಪುನರದ್ಯೈವ ಮೇ ಸುಹೃತ್ ।
ಪುನಶ್ಚ ರಿಪುರದ್ಯೈವ ಯುಕ್ತೀನಾಂ ಪಶ್ಯ ಚಾಪಲಮ್ ॥೧೬೦॥

ಮೋಡಗಳ ರೂಪಗಳು ಕ್ಷಣ-ಕ್ಷಣಕ್ಕೂ ಬದಲಾಗುತ್ತಿರುವಂತೆ ಮಿತ್ರತ್ವ-ಶತ್ರುತ್ವಗಳ ಸ್ವರೂಪಗಳೂ ಬದಲಾಯಿಸುತ್ತಿರುತ್ತವೆ. ಈಗಲೇ–ಹಿಂದೆ ನೀನು ನನ್ನ ಶತ್ರುವೂ ಆಗಿದ್ದೆ. ಈಗಲೇ ಸ್ವಲ್ಪಮುಂಚೆ ನೀನು ನನ್ನ ಮಿತ್ರನೂ ಆಗಿದ್ದೆ. ಈಗ ಪುನಃ ನೀನು ಹಿಂದಿನಂತೆಯೇ ನನ್ನ ಶತ್ರುವಾಗಿರುವೆ. ಸ್ವಾರ್ಥಕ್ಕೆ ಸಂಬಂಧಿಸಿದ ಯುಕ್ತಿಗಳು ಎಷ್ಟು ಚಂಚಲ ವಾಗಿರುವುವೆಂಬುದನ್ನಾದರೂ ನೋಡು, ಮಾರ್ಜಾಲ!

ಆಸೀನ್ಮೈತ್ರೀ ತು ತಾವನ್ನೌ ಯಾವದ್ಧೇತುರಭೂತ್ಪುರಾ ।
ಸಾ ಗತಾ ಸಹ ತೇನೈವ ಕಾಲಯುಕ್ತೇನ ಹೇತುನಾ ॥೧೬೧॥

ಹಿಂದೆ ಎಲ್ಲಿಯವರೆಗೆ ಕಾರಣವಿದ್ದಿತೋ (ಅವಶ್ಯಕತೆಯಿದ್ದಿತೋ) ಅಲ್ಲಿಯವರೆಗೆ ನಮ್ಮ ಮೈತ್ರಿಯೂ ಇದ್ದಿತು. ಕಾಲಕ್ಕೆ ಅನುಗುಣವಾದ ಕಾರಣವು ಕಳೆದುಹೋದನಂತರ ಅದರೊಡನೆಯೇ ನಮ್ಮ ಮೈತ್ರಿಯೂ ಹೊರಟುಹೋಯಿತು.

ತ್ವಂ ಹಿ ಮೇ ಜಾತಿತಃ ಶತ್ರುಃ ಸಾಮರ್ಥ್ಯಾನ್ಮಿತ್ರತಾಂ ಗತಃ ।
ತತ್ಕೃತ್ಯಮಭಿನಿರ್ವರ್ತ್ಯ ಪ್ರಕೃತಿಃ ಶತ್ರುತಾಂ ಗತಾ ॥೧೬೨॥

ಜಾತಿಯಿಂದಲೇ ನೀನು ನನಗೆ ಶತ್ರುವಾಗಿರುವೆ. ನನ್ನ ಬುದ್ಧಿಯ ಸಾಮರ್ಥ್ಯದಿಂದಾಗಿ ನೀನು ನನ್ನಲ್ಲಿ ತಾತ್ಕಾಲಿಕವಾಗಿ ಮೈತ್ರಿಯನ್ನು

ಬೆಳೆಸಿದೆ. ಪ್ರಯೋಜನದ ಸಿದ್ಧಿಯಾದೊಡನೆಯೇ ನಿನ್ನ ಪ್ರಕೃತಿಯು ಯಥಾಪೂರ್ವಕವಾಗಿ ನನ್ನ ಮೇಲೆ ಶತ್ರುತ್ವವನ್ನೇ ತಾಳಿದೆ.

ಸೋಽಹಮೇವಂ ಪ್ರಣೀತಾನಿ ಜ್ಞಾತ್ವಾ ಶಾಸ್ತ್ರಾಣಿ ತತ್ತ್ವತಃ ।
ಪ್ರವಿಶೇಯಂ ಕಥಂ ಪಾಶಂ ತ್ವತ್ಕೃತೇ ತದ್ವದಸ್ವ ಮೇ ॥೧೬೩॥

ಹೀಗೆ ಶುಕ್ರರೇ ಮೊದಲಾದ ಆಚಾರ್ಯರಿಂದ ಪ್ರಣೀತವಾದ ಶಾಸ್ತ್ರಗಳನ್ನು ತಿಳಿದುಕೊಂಡಿರುವ ನಾನು ನಿನ್ನನ್ನು ರಕ್ಷಿಸುವ ಸಲುವಾಗಿ ಆ ಬಲೆಯೊಳಗೆ ಹೇಗೆ ಪ್ರವೇಶಮಾಡುತ್ತಿದ್ದೆನು? ಅದನ್ನಾದರೂ ನನಗೆ ಹೇಳು.

ತ್ವದ್ವೀರ್ಯೇಣ ಪ್ರಮುಕ್ತೋಽಹಂ ಮದ್ವೀರ್ಯೇಣ ತಥಾ ಭವಾನ್ ।
ಅನ್ಯೋನ್ಯಾನುಗ್ರಹೇ ವೃತ್ತೇ ನಾಸ್ತಿ ಭೂಯಃ ಸಮಾಗಮಃ ॥೧೬೪॥

ನಿನ್ನ ಪರಾಕ್ರಮದಿಂದ ನಾನು ಮುಕ್ತನಾದೆನು. ಅಂತೆಯೇ ನನ್ನ ಪರಾಕ್ರಮದಿಂದ ನೀನೂ ಮುಕ್ತನಾದೆ. ಒಬ್ಬರು ಮತ್ತೊಬ್ಬರನ್ನು ಅವಲಂಬಿಸಿರಬೇಕಾದ ಕಾಲವು ಕಳೆದುಹೋಯಿತು. ಈಗ ನಾನು ನಿನ್ನನ್ನು ಆಶ್ರಯಿಸಬೇಕಾಗಿಲ್ಲ ; ನೀನು ನನ್ನನ್ನೂ ಆಶ್ರಯಿಸಬೇಕಾಗಿಲ್ಲ. ಆದುದರಿಂದ ಪುನಃ ನಮ್ಮಿಬ್ಬರ ಸಮಾಗಮದ ಆವಶ್ಯಕತೆಯಿಲ್ಲ.

ತ್ವಂ ಹಿ ಸೌಮ್ಯ ಕೃತಾರ್ಥೋಽದ್ಯ ನಿರ್ವೃತ್ತಾರ್ಥಾಸ್ತಥಾ ವಯಮ್ ।
ನ ತೇಽಸ್ತ್ಯದ್ಯ ಮಯಾ ಕೃತ್ಯಂ ಕಿಂಚಿದನ್ಯತ್ರ ಭಕ್ಷಣಾತ್ ॥೧೬೫॥

ಸೌಮ್ಯನೇ! ನೀನೀಗ ಕೃತಾರ್ಥನಾಗಿರುವೆ. (ಅಪಾಯದಿಂದ ವಿಮುಕ್ತನಾಗಿರುವೆ.) ನಾವೂ ಕೂಡ ಸಿದ್ಧವಾದ ಪ್ರಯೋಜನವುಳ್ಳವರಾಗಿದ್ದೇವೆ. (ನಮ್ಮ ಕಾರ್ಯವೂ ಸಿದ್ಧಿಸಿದೆ.) ನನ್ನನ್ನು ಭಕ್ಷಿಸುವುದರ ಹೊರತಾಗಿ ನಿನಗೆ ಯಾವ ಕಾರ್ಯವೂ ನನ್ನಿಂದ ಆಗಬೇಕಾಗಿಲ್ಲ.

ಅಹಮನ್ನಂ ಭವಾನ್ಭೋಕ್ತಾ ದುರ್ಬಲೋಽಹಂ ಭವಾನ್ಬಲೀ ।
ನಾವಯೋರ್ವಿದ್ಯತೇ ಸಂಧಿರ್ವಿಯುಕ್ತೇ ವಿಷಮೇ ಬಲೇ ॥೧೬೬॥

ನಾನು ನಿನಗೆ ಆಹಾರವಾಗಿದ್ದೇನೆ. ನೀನು ಉಪಭೋಗಿಸುವವನಾಗಿರುವೆ. ನಾನು ದುರ್ಬಲನಾಗಿದ್ದೇನೆ. ನೀನು ಬಲಿಷ್ಠನಾಗಿರುವೆ. ಅಸಮವಾದ ಬಲವುಳ್ಳ ನಮ್ಮಿಬ್ಬರಲ್ಲಿ ಸಂಧಿಯು ಯಾವಾಗಲೂ ಸಂಭವಿಸುವುದಿಲ್ಲ.

ನ ಮನ್ಯೇಽಹಂ ತವ ಪ್ರಜ್ಞಾಂ ಯನ್ಮೋಕ್ಷಾತ್ಪ್ರತ್ಯನನ್ತರಮ್ ।
ಭಕ್ಷ್ಯಂ ಮೃಗಯಸೇ ನೂನಂ ಸುಖೋಪಾಯೇನ ಕರ್ಮಣಾ ॥೧೬೭॥

ನಾನು ನಿನ್ನ ಮನಸ್ಸಿನ ಆಶಯವೇನೆಂಬುದನ್ನು ತಿಳಿದುಕೊಂಡಿರುತ್ತೇನೆ. ಬಲೆಯಿಂದ ಬಿಡಿಸಿಕೊಂಡಾಗಿನಿಂದಲೂ ನೀನು ಸುಲಭೋಪಾಯದಿಂದ ಆಹಾರವನ್ನು ಹುಡುಕುತ್ತಿರುವೆಯೆಂಬುದಂತೂ ನಿಶ್ಚಯ.

ಭಕ್ಷಾರ್ಥಂ ಹ್ಯವಬದ್ಧಸ್ತ್ವಂ ಸ ಮುಕ್ತಃ ಪೀಡಿತಃ ಕ್ಷುಧಾ ।
ಶಾಸ್ತ್ರಜಾಂ ಮತಿಮಾಸ್ಥಾಯ ನೂನಂ ಭಕ್ಷಯಿತಾದ್ಯ ಮಾಮ್ ॥೧೬೮॥

ಜಾನಾಮಿ ಕ್ಷುಧಿತಂ ತು ತ್ವಾಮಾಹಾರಸಮಯಶ್ಚ ತೇ ।
ಸ ತ್ವಂ ಮಾಮಭಿಸಂಧಾಯ ಭಕ್ಷ್ಯಂ ಮೃಗಯಸೇ ಪುನಃ ॥೧೬೯॥

ಆಹಾರವನ್ನು ಹುಡುಕುವ ಸಲುವಾಗಿ ಮರದ ಕೊಂಬೆಯಿಂದ ಕೆಳಕ್ಕಿಳಿದಾಗಲೇ ಬಲೆಯಲ್ಲಿ ಸಿಕ್ಕಿಹಾಕಿಕೊಂಡೆ. ಬಲೆಯಿಂದ ಮುಕ್ತನಾಗಿರುವ ನೀನೀಗ ಹಸಿವಿನಿಂದ ಪೀಡಿತನಾಗಿರುವೆ. ಶಾಸ್ತ್ರಜನ್ಯವಾದ ಬುದ್ಧಿಯನ್ನು ಅವಲಂಬಿಸಿ ನಿಶ್ಚಯವಾಗಿಯೂ ನೀನು ನನ್ನನ್ನು ಭಕ್ಷಿಸುವೆ. ನಿನ್ನ ನೀತಿಯುಕ್ತವಾದ ಮತ್ತು ಸುಮಧುರವಾದ ಮಾತುಗಳು ನನ್ನನ್ನು ಭಕ್ಷಿಸುವ ಮುಖ್ಯೋದ್ದೇಶದಿಂದಲೇ ಕೂಡಿದುವು. ಈಗ ನೀನು ಹಸಿವಿನಿಂದ ಬಳಲಿರುವೆಯೆಂಬುದನ್ನೂ ತಿಳಿದಿದ್ದೇನೆ. ಇದು ನಿನಗೆ ಆಹಾರದ ಸಮಯವಾಗಿದೆಯೆಂಬುದನ್ನೂ ನಾನು ಬಲ್ಲೆನು. ಆದಕ್ಕಾಗಿಯೇ ನೀನು ನನ್ನೊಡನೆ ಸಂಧಿಯನ್ನು ಮಾಡಿಕೊಂಡು ನಿನ್ನ ಭೋಜನವನ್ನು ಹುಡುಕಲು ಹೊರಟಿರುವೆ.

ತ್ವಂ ಚಾಪಿ ಪುತ್ರದಾರಸ್ಥೋ ಯತ್ಸಂಧಿಂ ಸೃಜಸೇ ಮಯಿ ।
ಶುಶ್ರೂಷಾಂ ಯತಸೇ ಕರ್ತುಂ ಸಖೇ ಮಮ ನ ತತ್ಕ್ಷಮಮ್ ॥

(ಮಾರ್ಜಾಲನು ಹೇಳಿದ ಮಾತುಗಳು ವಂಚನೆಯಿಂದ ಕೂಡಿರದೇ ಸಹಜವಾಗಿಯೇ ಇದ್ದರೂ ಅದಕ್ಕೂ ಇಲಿಯು ಉತ್ತರವನ್ನು ಹೀಗೆ ಕೊಡುತ್ತದೆ.) ಪ್ರಿಯಸಖನೇ! ನೀನು ನಿನ್ನ ಭಾರ್ಯಾ-ಪುತ್ರರ ಮಧ್ಯ ದಲ್ಲಿರುವೆ. ನನ್ನಲ್ಲಿ ಸಂಧಿಯ ಭಾವವನ್ನು (ಸ್ನೇಹಭಾವವನ್ನು) ತೋರಿಸು

ತ್ತಿರುವೆ. ನನ್ನ ಸೇವೆಯನ್ನು ಮಾಡಲೂ ಪ್ರಯತ್ನಿಸುತ್ತಿರುವೆ. ಇದು ನನಗೆ ಯುಕ್ತವಾಗಿ ಕಾಣುವುದಿಲ್ಲ.

ತ್ವಯಾ ಮಾಂ ಸಹಿತಂ ದೃಷ್ಟ್ವಾ ಪ್ರಿಯಾ ಭಾರ್ಯಾ ಸುತಾಶ್ಚ ತೇ ।
ಕಸ್ಮಾತ್ತೇ ಮಾಂ ನ ಖಾದೇಯುರ್ಹೃಷ್ಟಾಃ ಪ್ರಣಯಿನಸ್ತ್ವಯಿ ॥೧೭೧॥

ನಿನ್ನಲ್ಲಿ ಅತಿಯಾದ ಪ್ರೀತಿಯನ್ನಿಟ್ಟಿರುವ ನಿನ್ನ ಪ್ರಿಯಭಾರ್ಯೆಯೂ ಮತ್ತು ಪ್ರಿಯಪುತ್ರರೂ ನಿನ್ನೊಡನಿರುವ ನನ್ನನ್ನು ನೋಡಿ ಪರಮಹೃಷ್ಟರಾಗಿ ನನ್ನನ್ನೇಕೆ ಭಕ್ಷಿಸದೇ ಇರುತ್ತಾರೆ? (ಮೈತ್ರಿಯ ಕಾರಣದಿಂದಾಗಿ ನೀನು ನನ್ನನ್ನು ಭಕ್ಷಿಸದಿದ್ದರೂ ನಿನ್ನ ಹೆಂಡತಿ-ಮಕ್ಕಳು ನನ್ನನ್ನು ಭಕ್ಷಿಸದೇ ಇರಲಾರರು.)

ನಾಹಂ ತ್ವಯಾ ಸಮೇಷ್ಯಾಮಿ ವೃತ್ತೋ ಹೇತುಃ ಸಮಾಗಮೇ ।
ಶಿವಂ ಧ್ಯಾಯಸ್ವ ಮೇ ಸ್ವಸ್ಥಃ ಸುಕೃತಂ ಸ್ಮರಸೇ ಯದಿ ॥೧೭೨॥

ಆದುದರಿಂದ ನಾನು ನಿನ್ನೊಡನೆ ಖಂಡಿತವಾಗಿಯೂ ಸೇರುವುದಿಲ್ಲ. ನಮ್ಮ ಸಮಾಗಮಕ್ಕೆ ಯಾವುದು ಕಾರಣವಾಗಿದ್ದಿತೋ ಅದೀಗ ಮುಗಿದು ಹೋಯಿತು. ನಾನು ಮಾಡಿರುವ ಶುಭಕರ್ಮವನ್ನು (ಉಪಕಾರವನ್ನು) ನೀನು ಸ್ಮರಿಸುವುದೇ ಆದರೆ–ನೀನು ಸ್ವಸ್ಥಚಿತ್ತನಾಗಿ ನನ್ನ ಕಲ್ಯಾಣವನ್ನು ಚಿಂತಿಸು.

ಶತ್ರೋರನಾರ್ಯಭೂತಸ್ಯ ಕ್ಲಿಷ್ಟಸ್ಯ ಕ್ಷುಧಿತಸ್ಯ ಚ ।
ಭಕ್ಷ್ಯಂ ಮೃಗಯಮಾಣಸ್ಯ ಕಃ ಪ್ರಾಜ್ಞೋ ವಿಷಯಂ ವ್ರಜೇತ್ ॥೧೭೩॥

ದುಷ್ಟರೂಪನಾಗಿರುವ, ಕಷ್ಟದಲ್ಲಿರುವ, ಹಸಿವಿನಿಂದ ಬಳಲಿರುವ, ಆಹಾರವನ್ನು ಹುಡುಕುತ್ತಿರುವ ಶತ್ರುವಿನ ಸಮೀಪಕ್ಕೆ (ಆಹಾರವಾಗಲು) ಪ್ರಾಜ್ಞನಾದ ಯಾವನು ತಾನೇ ಹೋಗುತ್ತಾನೆ?

ಸ್ವಸ್ತಿ ತೇಽಸ್ತು ಗಮಿಷ್ಯಾಮಿ ದೂರಾದಪಿ ತವೋದ್ವಿಜೇ ॥೧೭೪॥

ವಿಶ್ವಸ್ತಂ ವಾ ಪ್ರಮತ್ತಂ ವಾ ಏತದೇವ ಕೃತಂ ಭವೇತ್ ।
ಬಲವತ್ಸನ್ನಿಕರ್ಷೋ ಹಿ ನ ಕದಾಚಿತ್ಪ್ರಶಸ್ಯತೇ ॥೧೭೫॥

ಲೋಮಶನೇ! ನಿನಗೆ ಮಂಗಳವಾಗಲಿ. ನಾನು ಇಲ್ಲಿಂದಲೂ

ಹೊರಟುಹೋಗುತ್ತೇನೆ. ಏಕೆಂದರೆ : ನೀನು ದೂರದಲ್ಲಿಯೇ ಇದ್ದರೂ ನಾನು ನಿನಗೆ ಭಯಪಡುತ್ತೇನೆ. ನೀನು ವಿಶ್ವಸ್ತನೇ ಆಗಿದ್ದರೂ (ನನ್ನಲ್ಲಿ ವಿಶ್ವಾಸವನ್ನೇ ಇಟ್ಟಿದ್ದರೂ) ಪ್ರಮತ್ತನೇ ಆಗಿದ್ದರೂ ನಾನು ನಿನ್ನನ್ನು ಬಿಟ್ಟು ದೂರಕ್ಕೆ ಹೊರಟುಹೋಗುತ್ತೇನೆ. ಈ ಸಮಯದಲ್ಲಿ ಇದೇ ನನ್ನ ಕರ್ತವ್ಯವಾಗಿದೆ. ಮೇಲಾಗಿ ದುರ್ಬಲರಿಗೆ ಬಲಿಷ್ಠರ ಸಾನ್ನಿಧ್ಯದಲ್ಲಿರುವುದು ಯಾವಾಗಲೂ ಪ್ರಶಂಸನೀಯವಲ್ಲ.

ನಾಹಂ ತ್ವಯಾ ಸಮೇಷ್ಯಾಮಿ ನಿವೃತ್ತೋ ಭವ ಲೋಮಶ ।
ಯದಿ ತ್ವಂ ಸುಕೃತಂ ವೇತ್ಸಿ ತತ್ಸಖ್ಯಮನುಸಾರಯ ॥೧೭೬॥

ಲೋಮಶನೇ! ನಾನು ನಿನ್ನೊಡನೆ ಎಂದಿಗೂ ಸೇರುವುದಿಲ್ಲ. ನೀನು ಹಿಂದಿರುಗಿ ಹೋಗು. ನಾನು ಮಾಡಿರುವುದು ಒಳ್ಳೆಯ ಕೆಲಸವೆಂದು (ಉಪಕಾರವೆಂದು) ನೀನು ಭಾವಿಸುವೆಯಾದರೆ–ನನ್ನೊಡನೆ ಸರ್ವದಾ ಮೈತ್ರೀಭಾವವನ್ನು ಅನುಸರಿಸು.

ಪ್ರಶಾನ್ತಾದಪಿ ಮೇ ಪಾಪಾದ್ಭೇತವ್ಯಂ ಬಲಿನಃ ಸದಾ ।
ಯದಿ ಸ್ವಾರ್ಥಂ ನ ತೇ ಕಾರ್ಯಂ ಬ್ರೂಹಿ ಕಿಂ ಕರವಾಮ ತೇ ॥

ಯಾವನು ಬಲಿಷ್ಠನಾಗಿರುವನೋ ಮತ್ತು ಪಾಪಿಷ್ಠನಾಗಿರುವನೋ ಅಂತಹವನು ಪ್ರಶಾಂತನಾಗಿರುವಂತೆ ಕಂಡುಬಂದರೂ ಅಂತಹವನ ವಿಷಯ ದಲ್ಲಿ ಭಯಪಟ್ಟುಕೊಂಡೇ ಇರಬೇಕು. ನಿಶ್ಚಯವಾಗಿಯೂ ನನ್ನೊಡನೆ ಮೈತ್ರಿಯನ್ನು ಬೆಳೆಸುವುದರಲ್ಲಿ ನಿನಗೆ ಸ್ವಾರ್ಥವಿಲ್ಲದಿದ್ದರೆ (ನನ್ನನ್ನು ಕಬಳಿಸುವ ಸಲುವಾಗಿ ನನ್ನೊಡನೆ ನಯ-ವಿನಯಗಳ ಮಾತುಗಳನ್ನು ಆಡಿರದಿದ್ದರೆ,) ನಿನ್ನ ಹತ್ತಿರಕ್ಕೆ ಬರುವುದೊಂದನ್ನು ಬಿಟ್ಟು ನಾನು ನಿನಗೆ ಬೇರೆ ಯಾವ ಕಾರ್ಯವನ್ನು ಮಾಡಿಕೊಡಬೇಕೆಂಬುದನ್ನು ಹೇಳು.

ಕಾಮಂ ಸರ್ವಂ ಪ್ರದಾಸ್ಯಾಮಿ ನ ತ್ವಾತ್ಮಾನಂ ಕದಾಚನ ।
ಆತ್ಮಾರ್ಥೇ ಸಂತತಿಸ್ತ್ಯಾಜ್ಯಾ ರಾಜ್ಯಂ ರತ್ನಂ ಧನಾನಿ ಚ ।
ಅಪಿ ಸರ್ವಸ್ವಮುತ್ಸೃಜ್ಯ ರಕ್ಷೇದಾತ್ಮಾನಮಾತ್ಮನಾ ॥೧೭೮॥

ನಿನ್ನ ಇಚ್ಛೆಗೆ ಅನುಸಾರವಾಗಿ ನನ್ನಲ್ಲಿರುವ ಸಕಲ ಸರ್ವಸ್ವವನ್ನೂ

ನಿನಗೆ ಕೊಟ್ಟುಬಿಡುತ್ತೇನೆ. ಆದರೆ ನನ್ನ ಆತ್ಮಾರ್ಪಣೆಯನ್ನು ಮಾತ್ರ ನಿನಗೆ ಮಾಡುವುದಿಲ್ಲ. ಆತ್ಮವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಮಕ್ಕಳನ್ನಾದರೂ ತ್ಯಜಿಸಬಹುದು. ರಾಜ್ಯ-ರತ್ನ-ಧನಗಳನ್ನಾದರೂ ತ್ಯಜಿಸಬಹುದು. ಸರ್ವಸ್ವವನ್ನಾದರೂ ತ್ಯಜಿಸಿ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳಬೇಕು.

ಐಶ್ವರ್ಯಧನರತ್ನಾನಾಂ ಪ್ರತ್ಯಮಿತ್ರೇ ನಿವರ್ತತಾಮ್ ।
ದೃಷ್ಟಾ ಹಿ ಪುನರಾವೃತ್ತಿರ್ಜೀವತಾಮಿತಿ ನಃ ಶ್ರುತಮ್ ॥೧೭೯॥

ಒಬ್ಬ ಮನುಷ್ಯನು ಜೀವಿಸಿದ್ದೇ ಆದರೆ ಶತ್ರುವು ವಶಪಡಿಸಿಕೊಂಡಿರುವ ಐಶ್ವರ್ಯ-ಧನ-ರತ್ನಗಳೆಲ್ಲವನ್ನೂ ಪುನಃ ಸ್ವಾಧೀನಪಡಿಸಿಕೊಳ್ಳಬಹು ದೆಂಬುದನ್ನು ನಾವು ನೋಡಿಯೂ ಇದ್ದೇವೆ ; ಕೇಳಿಯೂ ಇದ್ದೇವೆ.

ನ ತ್ವಾತ್ಮನಃ ಸಮ್ಪ್ರದಾನಂ ಧನರತ್ನವದಿಷ್ಯತೇ ।
ಆತ್ಮಾ ಹಿ ಸರ್ವದಾ ರಕ್ಷ್ಯೋ ದಾರೈರಪಿ ಧನೈರಪಿ ॥೧೮೦॥

ಧನವನ್ನಾಗಲೀ, ರತ್ನವನ್ನಾಗಲೀ–ಶತ್ರುವಿಗೆ ಒಪ್ಪಿಸುವಂತೆ ಆತ್ಮ ಪ್ರದಾನಮಾಡಲು ಸಾಧ್ಯವಾಗುವುದಿಲ್ಲ. ಪತ್ನಿಯರಿಂದಲೂ ಐಶ್ವರ್ಯ ಗಳಿಂದಲೂ (ಪತ್ನಿಯರನ್ನೂ, ಐಶ್ವರ್ಯಗಳನ್ನೂ ತ್ಯಾಗಮಾಡಿಯಾದರೂ), ತನ್ನನ್ನು ತಾನು ಸರ್ವದಾ ರಕ್ಷಿಸಿಕೊಳ್ಳಬೇಕು.

ಆತ್ಮರಕ್ಷಣತನ್ತ್ರಾಣಾಂ ಸುಪರೀಕ್ಷಿತಕಾರಿಣಾಮ್ ।
ಆಪದೋ ನೋಪಪದ್ಯನ್ತೇ ಪುರುಷಾಣಾಂ ಸ್ವದೋಷಜಾಃ ॥೧೮೧॥

ಯಾರು ಆತ್ಮರಕ್ಷಣೆಯಲ್ಲಿ ತತ್ಪರರಾಗಿರುವರೋ–ಚೆನ್ನಾಗಿ ಪರೀಕ್ಷೆ ಮಾಡಿ ಮಾಡಬೇಕಾದ ಕಾರ್ಯವನ್ನು ಮಾಡುವರೋ–ಅಂತಹ ಮನುಷ್ಯ ರಿಗೆ ತಮ್ಮ ದೋಷದಿಂದ ಸಂಭವಿಸಬಹುದಾದ ಆಪತ್ತುಗಳು ಪ್ರಾಪ್ತವಾಗು ವುದಿಲ್ಲ.

ಶತ್ರೂನ್ಸಮ್ಯಗ್ವಿಜಾನನ್ತಿ ದುರ್ಬಲಾ ಯೇ ಬಲೀಯಸಃ ।
ನ ತೇಷಾಂ ಚಾಲ್ಯತೇ ಬುದ್ಧಿಃ ಶಾಸ್ತ್ರಾರ್ಥಕೃತನಿಶ್ಚಯಾ ॥೧೮೨॥

ಯಾವ ದುರ್ಬಲರಾದ ಮನುಷ್ಯರು ಬಲಿಷ್ಠರಾದ ಶತ್ರುಗಳ

ಗುಣ-ಸ್ವಭಾವಗಳನ್ನು ಚೆನ್ನಾಗಿ ತಿಳಿದುಕೊಂಡಿರುವವರೋ–ಶಾಸ್ತ್ರಜ್ಞಾನದಿಂದ ನಿಶ್ಚಯಿಸಲ್ಪಡುವ ಅಂತಹವರ ಬುದ್ಧಿಯು ಯಾವುದೇ ಕಾರಣದಿಂದಲೂ ವಿಚಲಿತವಾಗುವುದಿಲ್ಲ.”

ಯುಧಿಷ್ಠಿರ! ಹೀಗೆ ಪಲಿತನಿಂದ ಸುಸ್ಪಷ್ಟವಾಗಿ ತಿರಸ್ಕರಿಸಲ್ಪಟ್ಟ ಮಾರ್ಜಾಲವು ನಾಚಿಕೆಗೊಂಡು ಇಲಿಯೊಡನೆ ಹೇಳಿತು :

ಸತ್ಯಂ ಶಪೇ ತ್ವಯಾಹಂ ವೈ ಮಿತ್ರದ್ರೋಹೋ ವಿಗರ್ಹಿತಃ ।
ತನ್ಮನ್ಯೇಽಹಂ ತವ ಪ್ರಜ್ಞಾಂ ಯಸ್ತ್ವಂ ಮಮ ಹಿತೇ ರತಃ ॥೧೮೩॥

“ಪಲಿತ! ನಾನು ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಮಿತ್ರ ದ್ರೋಹವೆಂಬುದು ಅತಿನಿಂದನೀಯವಾದುದು. ಸರ್ವದಾ ನನ್ನ ಹಿತ ದಲ್ಲಿಯೇ ನಿರತವಾಗಿರುವ ನಿನ್ನ ಬುದ್ಧಿಮತ್ತೆಯನ್ನು ನಾನು ತಿಳಿದು ಕೊಂಡಿರುತ್ತೇನೆ.

ಉಕ್ತವಾನರ್ಥತತ್ತ್ವೇನ ಮಯಾ ಸಮ್ಭಿನ್ನದರ್ಶನಃ ।
ನ ತು ಮಾಮನ್ಯಥಾ ಸಾಧೋ ತ್ವಂ ಗೃಹೀತುಮಿಹಾರ್ಹಸಿ ॥೧೮೪॥

ಸಾಧುಸ್ವಭಾವದವನೇ! ನೀನು ನೀತಿಶಾಸ್ತ್ರದ ಸಾರವನ್ನು ಯಥಾ ವತ್ತಾಗಿ ಹೇಳಿರುವೆ. ನನ್ನ ಭಾವನೆಯು ನಿನ್ನ ಭಾವನೆಗಿಂತಲೂ ಭಿನ್ನವಾಗಿರುವುದಿಲ್ಲ. ಆದರೆ ನೀನು ನನ್ನನ್ನು ಬೇರೆಯ ರೀತಿಯಲ್ಲಿ (ದುಷ್ಟಭಾವನೆಯುಳ್ಳವನೆಂದು) ಭಾವಿಸುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ.

ಪ್ರಾಣಪ್ರದಾನಜಂ ತ್ವತ್ತೋ ಮಯಿ ಸೌಹೃದಮಾಗತಮ್ ।
ಧರ್ಮಜ್ಞೋಽಸ್ಮಿ ಗುಣಜ್ಞೋಽಸ್ಮಿ ಕೃತಜ್ಞೋಽಸ್ಮಿ ವಿಶೇಷತಃ ॥೧೮೫॥

ಮಿತ್ರೇಷು ವತ್ಸಲಶ್ಚಾಸ್ಮಿ ತ್ವದ್ಭಕ್ತಶ್ಚ ವಿಶೇಷತಃ ।
ತಸ್ಮಾದೇವಂ ಪುನಃ ಸಾಧೋ ಮಯ್ಯಾಚರಿತುಮರ್ಹಸಿ ॥೧೮೬॥

ಪ್ರಾಣಪ್ರದಾನದಿಂದ ಹುಟ್ಟಿರುವ ಈ ಸೌಹಾರ್ದವು ನಿನ್ನ ಮೂಲಕ ವಾಗಿ ನನ್ನಲ್ಲಿ ಆವಿರ್ಭವಿಸಿತು. ನಾನು ಧರ್ಮವನ್ನು ತಿಳಿದವನಾಗಿದ್ದೇನೆ ; ಗುಣಗಳ ಮೌಲ್ಯವನ್ನು ತಿಳಿದವನಾಗಿದ್ದೇನೆ ; ಅದರಲ್ಲಿಯೂ ವಿಶೇಷವಾಗಿ

ಮತ್ತೊಬ್ಬರು ಮಾಡಿರುವ ಉಪಕಾರವನ್ನು ಬಾರಿ-ಬಾರಿಗೂ ಸ್ಮರಿಸುತ್ತಿರುತ್ತೇನೆ. ನಾನು ಮಿತ್ರವತ್ಸಲನು. ಮಿತ್ರರನ್ನು ಕಂಡರೆ ನನಗೆ ಬಹಳವಾದ ಪ್ರೀತಿ. ಅದರಲ್ಲಿಯೂ ವಿಶೇಷವಾಗಿ ನನಗೆ ಪ್ರಾಣದಾನಮಾಡಿರುವ ನಿನ್ನ ಭಕ್ತನೇ ಆಗಿದ್ದೇನೆ. ಆದುದರಿಂದ ಸಾಧುಸ್ವಭಾವವನ್ನು ಹೊಂದಿರುವ ಪಲಿತನೇ! ಪುನಃ ಹಿಂದಿನಂತೆಯೇ ನನ್ನೊಡನೆ ಮೈತ್ರಿಯಿಂದ ವ್ಯವಹರಿಸುವುದು ನಿನಗೆ ಯೋಗ್ಯವಾಗಿದೆ.

ತ್ವಯಾ ಹಿ ವಾಚ್ಯಮಾನೋಽಹಂ ಜಹ್ಯಾಂ ಪ್ರಾಣಾನ್ಸಬಾನ್ಧವಃ ।
ವಿಶ್ರಮ್ಭೋ ಹಿ ಬುಧೈರ್ದೃಷ್ಟೋ ಮದ್ವಿಧೇಷು ಮನಸ್ವಿಷು ॥೧೮೯॥

ನೀನೇನಾದರೂ ನನ್ನೊಡನೆ ಪ್ರಾಣಪರಿತ್ಯಾಗಮಾಡಲು ಹೇಳಿದರೂ ಮರುಮಾತನಾಡದೇ ಬಂಧುಗಳ ಸಹಿತನಾಗಿ ನಾನು ಪ್ರಾಣತ್ಯಾಗಮಾಡುತ್ತೇನೆ. ನನ್ನಂತಹ ಜಿತೇಂದ್ರಿಯರ ವಿಷಯದಲ್ಲಿ ವಿದ್ವಾಂಸರು ವಿಶ್ವಾಸವನ್ನಿಡುವುದು ಸರ್ವತ್ರ ಕಂಡುಬಂದಿದೆ. (ನೀನು ವಿದ್ವಾಂಸನೇ ಆಗಿದ್ದರೂ ನನ್ನ ಮೇಲೆ ವಿಶ್ವಾಸವನ್ನಿಡುತ್ತಿಲ್ಲ.)

ಧರ್ಮದ ತತ್ತ್ವವನ್ನು ತಿಳಿದವನೇ! ಈ ಕಾರಣಗಳಿಂದ ನೀನು ನನ್ನ ವಿಷಯದಲ್ಲಿ ಸಂದೇಹಪಡಬೇಡ"

ಯುಧಿಷ್ಠಿರ! ಮಾರ್ಜಾಲನು ಮೂಷಿಕನನ್ನು ಹೀಗೆ ಸ್ತೋತ್ರಮಾಡಿದರೂ ಮೂಷಿಕವು ಹಿಗ್ಗಿಹೋಗದೇ ಗಂಭೀರವಾದ ಮನಸ್ಸನ್ನು ಹೊಂದಿ ಮಾರ್ಜಾಲದೊಡನೆ ಹೇಳಿತು :

ಸಾಧುರ್ಭವಾಞ್ಛ್ರುತಾರ್ಥೋಽಸ್ಮಿ ಪ್ರೀಯೇ ಚ ನ ಚ ವಿಶ್ವಸೇ ।
ಸಂಸ್ತವೈರ್ವಾ ಧನೌಘೈರ್ವಾ ನಾಹಂ ಶಕ್ಯಃ ಪುನಸ್ತ್ವಯಾ ।
ನ ಹ್ಯಮಿತ್ರೇ ವಶಂ ಯಾನ್ತಿ ಪ್ರಾಜ್ಞಾ ನಿಷ್ಕಾರಣಂ ಸಖೇ ॥೧೯೦॥

"ಲೋಮಶ! ನಿಶ್ಚಯವಾಗಿಯೂ ನೀನು ಸಾಧುವೇ ಆಗಿರುವೆ. ನಿನ್ನ ವಿಷಯದಲ್ಲಿ ನಾನು ಈ ಮಾತನ್ನು ಕೇಳಿದ್ದೇನೆ. ನೀನು ಸಾಧುಸ್ವಭಾವದವನೆಂಬ ವಿಷಯವನ್ನು ತಿಳಿದು ನಾನು ಸುಪ್ರೀತನೂ ಆಗಿದ್ದೇನೆ. ಆದರೆ ನಿನ್ನಲ್ಲಿ ನಾನು ನಂಬಿಕೆಯನ್ನು ಮಾತ್ರ ಇಡುವುದಿಲ್ಲ. ಅನೇಕ ಪ್ರಕಾರವಾದ

ಸ್ತೋತ್ರಗಳಿಂದಾಗಲೀ, ಅಪಾರವಾದ ಧನರಾಶಿಗಳಿಂದಾಗಲೀ ಪುನಃ ನಾನು ನಿನಗೆ ವಶನಾಗತಕ್ಕವನಲ್ಲ. ವಯಸ್ಯ! ಪ್ರಾಜ್ಞರಾದವರು ವಿಶೇಷವಾದ ಕಾರಣವಿಲ್ಲದೇ ಶತ್ರುಗಳ ವಶರಾಗುವುದಿಲ್ಲ.

ಲೋಮಶ! ಇದೇ ಅರ್ಥದಲ್ಲಿ ಆಚಾರ್ಯ ಶುಕ್ರರು ಹೇಳಿರುವ ಎರಡು ಶ್ಲೋಕಗಳನ್ನು ಕೇಳು :

ಶತ್ರುಸಾಧಾರಣೇ ಕೃತ್ಯೇ ಕೃತ್ವಾ ಸಂಧಿಂ ಬಲೀಯಸಾ ।
ಸಮಾಹಿತಶ್ಚರೇದ್ಯುಕ್ತ್ಯಾ ಕೃತಾರ್ಥಶ್ಚ ನ ವಿಶ್ವಸೇತ್ ॥೧೯೩॥

'ಶತ್ರುವಿಗೂ ಮತ್ತು ತನಗೂ ಉಭಯಸಾಧಾರಣವಾದ ವಿಪತ್ತು ಸಂಭವಿಸಿದಾಗ–ದುರ್ಬಲನಾದವನು ಬಲಿಷ್ಠನಾದ ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಂಡು ಅತ್ಯಂತಜಾಗರೂಕತೆಯಿಂದ ವರ್ತಿಸಬೇಕು. ಯುಕ್ತಿಯಿಂದ ಕೃತಕೃತ್ಯನಾಗಬೇಕು. (ಆಪತ್ತಿನಿಂದ ಪಾರಾಗಬೇಕು). ಆದರೆ ಆಪತ್ತಿನ ಕಾಲದಲ್ಲಿ ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಂಡು ಕೃತಾರ್ಥನಾದ ಬಳಿಕವೂ ಅವರಲ್ಲಿ ವಿಶ್ವಾಸವನ್ನಿಡಬಾರದು.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿವಿಶ್ವಸೇತ್ ।
ನಿತ್ಯಂ ವಿಶ್ವಾಸಯೇದನ್ಯಾನ್ಪರೇಷಾಂ ತು ನ ವಿಶ್ವಸೇತ್ ॥೧೯೪॥

ಯಾವನು ವಿಶ್ವಾಸಕ್ಕೆ ಪಾತ್ರನಲ್ಲವೋ–ಅಂತಹವನ ವಿಷಯದಲ್ಲಿ ವಿಶ್ವಾಸವನ್ನಿಡಬಾರದು. ಯಾವನು ವಿಶ್ವಾಸಕ್ಕೆ ಪಾತ್ರನೋ–ಅಂತಹವನ ವಿಷಯದಲ್ಲಿಯೂ ಸಂಪೂರ್ಣವಾಗಿ ವಿಶ್ವಾಸವನ್ನಿಡಬಾರದು. ತನ್ನ ವಿಷಯದಲ್ಲಿ ಬೇರೆಯವರು ವಿಶ್ವಾಸವನ್ನಿಡುವಂತೆ ವರ್ತಿಸಬೇಕು. ಆದರೆ ತಾನು ಮಾತ್ರ ಇತರರಲ್ಲಿ ವಿಶ್ವಾಸವನ್ನಿಡಬಾರದು.'

ತಸ್ಮಾತ್ಸರ್ವಾಸ್ವವಸ್ಥಾಸು ರಕ್ಷೇಜ್ಜೀವಿತಮಾತ್ಮನಃ ।
ದ್ರವ್ಯಾಣಿ ಸನ್ತತಿಶ್ಚೈವ ಸರ್ವಂ ಭವತಿ ಜೀವತಃ ॥೧೯೫॥

ಆದುದರಿಂದ ಎಲ್ಲ ಅವಸ್ಥೆಗಳಲ್ಲಿಯೂ ತನ್ನ ಜೀವನದ ರಕ್ಷಣೆಯನ್ನು ಮಾಡಿಕೊಳ್ಳಬೇಕು. ಏಕೆಂದರೆ : ಜೀವಿಸಿರುವ ಮನುಷ್ಯನಿಗೆ ಐಶ್ವರ್ಯವೂ ಲಭಿಸುತ್ತದೆ ; ವಂಶವೂ ವೃದ್ಧಿಯಾಗುತ್ತದೆ.

ಸಂಕ್ಷೇಪೋ ನೀತಿಶಾಸ್ತ್ರಾಣಾಮವಿಶ್ವಾಸಃ ಪರೋ ಮತಃ ।
ನೃಷು ತಸ್ಮಾದವಿಶ್ವಾಸಃ ಪುಷ್ಕಲಂ ಹಿತಮಾತ್ಮನಃ ॥೧೯೬॥

ನೀತಿಶಾಸ್ತ್ರಗಳ ಸಾರವನ್ನು ಸಂಕ್ಷೇಪಿಸಿ ಹೇಳುವುದಾದರೆ ಇತರರಲ್ಲಿ ವಿಶ್ವಾಸವನ್ನಿಡದಿರುವುದೇ ಪರಮಶ್ರೇಷ್ಠವೆಂದು ನೀತಿಶಾಸ್ತ್ರದ ಅಭಿಮತ ವಾಗಿದೆ. ಆದುದರಿಂದ ಇತರ ಮನುಷ್ಯರ ವಿಷಯದಲ್ಲಿ ವಿಶ್ವಾಸವನ್ನಿಡದಿರು ವುದೇ ತನ್ನ ವಿಶೇಷವಾದ ಹಿತಕ್ಕೆ ಕಾರಣವಾಗುತ್ತದೆ.

ವಧ್ಯನ್ತೇ ನ ಹ್ಯವಿಶ್ವಸ್ತಾಃ ಶತ್ರುಭಿರ್ದುರ್ಬಲಾ ಅಪಿ ।
ವಿಶ್ವಸ್ತಾಸ್ತೇಷು ವಧ್ಯನ್ತೇ ಬಲವನ್ತೋಽಪಿ ದುರ್ಬಲೈಃ ॥೧೯೭॥

ಯಾರು ಇತರರ ವಿಷಯದಲ್ಲಿ ವಿಶ್ವಾಸವನ್ನಿಡುವುದಿಲ್ಲವೋ–ಅವರು ದುರ್ಬಲರೇ ಆಗಿದ್ದರೂ ಶತ್ರುಗಳಿಂದ ವಧಿಸಲ್ಪಡುವುದಿಲ್ಲ. ಯಾರು ಇತರರ ವಿಷಯದಲ್ಲಿ ವಿಶ್ವಾಸವನ್ನಿಡುವರೋ ಅವರು ಬಲಿಷ್ಠರೇ ಆಗಿದ್ದರೂ ದುರ್ಬಲರಾದವರಿಂದಲೂ ವಧಿಸಲ್ಪಡುತ್ತಾರೆ.

ತ್ವದ್ವಿಧೇಭ್ಯೋ ಮಯಾ ಹ್ಯಾತ್ಮಾ ರಕ್ಷ್ಯೋ ಮಾರ್ಜಾರ ಸರ್ವದಾ ।
ರಕ್ಷ ತ್ವಮಪಿ ಚಾತ್ಮಾನಂ ಚಾಣ್ಡಾಲಾಜ್ಜಾತಿಕಿಲ್ಬಿಷಾತ್ ॥೧೯೮॥

ಲೋಮಶ! ನಿನ್ನಂತಹವರಿಂದಲೂ ನಾನು ಸರ್ವಕಾಲದಲ್ಲಿಯೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳಲೇಬೇಕು. ನೀನು ಕೂಡ ನಿನ್ನ ಆಜನ್ಮ ಶತ್ರುವಾಗಿರುವ ಚಾಂಡಾಲನಿಂದ ನಿನ್ನನ್ನು ರಕ್ಷಿಸಿಕೊ."

ಯುಧಿಷ್ಠಿರ! ಇಲಿಯು ಚಾಂಡಾಲನ ಹೆಸರನ್ನು ಎತ್ತುತ್ತಿದ್ದಂತೆಯೇ ಸಂತ್ರಸ್ತವಾದ ಮಾರ್ಜಾಲವು ಬಹಳವಾಗಿ ಭಯಗೊಂಡು ತಾನು ಕುಳಿತಿದ್ದ ರೆಂಬೆಯನ್ನೇ ಬಿಟ್ಟು ಬಹಳ ಬೇಗ ಬೇರೆಯ ಕಡೆಗೆ ಹೊರಟುಹೋಯಿತು. ಬಳಿಕ ನೀತಿಶಾಸ್ತ್ರದ ಅರ್ಥವನ್ನೂ ತತ್ತ್ವವನ್ನೂ ತಿಳಿದಿದ್ದ, ವಿಶೇಷವಾದ ಪ್ರಜ್ಞೆಯಿಂದ ಕೂಡಿದ್ದ ಮೂಷಿಕವು ತನ್ನ ಬುದ್ಧಿಯ ಸಾಮರ್ಥ್ಯವನ್ನು ಪ್ರದರ್ಶಿಸಿ ತಾನು ಮೊದಲು ವಾಸವಾಗಿದ್ದ ಬಿಲವನ್ನು ಬಿಟ್ಟು ಬೇರೆಯ ಬಿಲಕ್ಕೆ ಹೊರಟುಹೋಯಿತು.

ಯುಧಿಷ್ಠಿರ! ಹೀಗೆ ಪ್ರಜ್ಞಾಯುಕ್ತವಾದ ಬುದ್ಧಿಯನ್ನು ಹೊಂದಿದ್ದ

ಮೂಷಿಕವು ಏಕಾಕಿಯಾಗಿದ್ದರೂ, ದುರ್ಬಲವಾಗಿದ್ದರೂ–ಮಹಾಬಲಿಷ್ಠರಾದ ಅನೇಕ ಶತ್ರುಗಳನ್ನು ವಂಚಿಸಿತು. ಆಪತ್ಕಾಲದಲ್ಲಿ ಪಂಡಿತನಾದವನು ಸಮರ್ಥನಾದ ಶತ್ರುವಿನೊಡನೆಯೂ ಸಂಧಿಯನ್ನು ಮಾಡಿಕೊಳ್ಳಬೇಕು. ಅನ್ಯೋನ್ಯಾಶ್ರಯದಿಂದ ಮೂಷಿಕ-ಮಾರ್ಜಾಲಗಳೆರಡೂ ಆಪತ್ತಿನಿಂದ ಪಾರಾದುವು.

ಮಹಾರಾಜ! ಈ ದೃಷ್ಟಾಂತದಿಂದ ನಾನು ನಿನಗೆ ವಿಸ್ತಾರವಾದ ಕ್ಷಾತ್ರಧರ್ಮದ ಮಾರ್ಗವನ್ನು ತೋರಿಸಿದ್ದೇನೆ. ಇದನ್ನೇ ಸಂಕ್ಷೇಪವಾಗಿಯೂ ಹೇಳುವೆನು ; ಕೇಳು.

ಇಲಿ ಮತ್ತು ಬೆಕ್ಕುಗಳು ಪರಸ್ಪರವಾಗಿ ವೈರವಿರತಕ್ಕ ಪ್ರಾಣಿಗಳು. ಆದರೂ ಸಮಾನವಾದ ಆಪತ್ತಿನ ಸಮಯದಲ್ಲಿ ಎರಡು ಪ್ರಾಣಿಗಳೂ ಪರಸ್ಪರವಾಗಿ ಪ್ರೀತಿಸತೊಡಗಿದುವು. ಆ ಸಮಯದಲ್ಲಿ ಆಪತ್ತಿನಿಂದ ಪಾರಾಗಲು ಪರಸ್ಪರವಾಗಿ ಸಂಧಿಮಾಡಿಕೊಳ್ಳಬೇಕೆಂದು ಎರಡಕ್ಕೂ ಮನಸ್ಸಾಯಿತು.

ತತ್ರ ಪ್ರಾಜ್ಞೋಽಭಿಸಂಧತ್ತೇ ಸಮ್ಯಗ್ಬುದ್ಧಿಸಮಾಶ್ರಯಾತ್ ।
ಅಭಿಸಂಧೀಯತೇ ಪ್ರಾಜ್ಞಃ ಪ್ರಮಾದಾದಪಿ ಚಾಬುಧೈಃ ॥೨೦೫॥

ಅಂತಹ ಸಮಯದಲ್ಲಿ ಬುದ್ಧಿವಂತನಾದವನು ಉತ್ತಮವಾದ ಬುದ್ಧಿಯನ್ನು ಆಶ್ರಯಿಸಿ ಸಂಧಿಯನ್ನು ಮಾಡಿಕೊಂಡು ಶತ್ರುಗಳನ್ನು ಪರಾಜಯಗೊಳಿಸುತ್ತಾನೆ. ಹಾಗೆ ಸಂಧಿಮಾಡಿಕೊಂಡು ಅಜಾಗರೂಕತೆಯಿಂದಿದ್ದರೆ ವಿದ್ವಾಂಸನಾಗಿದ್ದರೂ ಅಪಂಡಿತರಿಂದಲೂ (ಬುದ್ಧಿವಂತರಲ್ಲದವರಿಂದಲೂ) ವಂಚಿಸಲ್ಪಡುತ್ತಾನೆ.

ತಸ್ಮಾದಭೀತವದ್ಭೀತೋ ವಿಶ್ವಸ್ತವದವಿಶ್ವಸನ್ ।
ನ ಹ್ಯಪ್ರಮತ್ತಶ್ಚಲತಿ ಚಲಿತೋ ವಾ ವಿನಶ್ಯತಿ ॥೨೦೬॥

ಆದುದರಿಂದ ಮನುಷ್ಯನು ಭಯಗೊಂಡಿದ್ದರೂ ಭಯವಿಲ್ಲದವನಂತೆ ತೋರಿಸಿಕೊಳ್ಳಬೇಕು. ವಿಶ್ವಾಸವನ್ನಿಡದಿದ್ದರೂ ವಿಶ್ವಾಸವಿಟ್ಟವನಂತೆ ನಟನೆ ಮಾಡಬೇಕು. ಹೀಗೆ ಅಪ್ರಮತ್ತನಾದವನು ಎಚ್ಚರಿಕೆಯುಳ್ಳವನು ; ತನ್ನ ದಾರಿಯಿಂದ ಚಲಿಸುವುದಿಲ್ಲ. ಹಾಗೆ ಚಲಿಸಿದ್ದೇ ಆದರೆ ವಿನಾಶಹೊಂದುತ್ತಾನೆ.

ಕಾಲೇನ ರಿಪುಣಾ ಸಂಧಿಃ ಕಾಲೇ ಮಿತ್ರೇಣ ವಿಗ್ರಹಃ ।
ಕಾರ್ಯ ಇತ್ಯೇವ ಸಂಧಿಜ್ಞಾಃ ಪ್ರಾಹುರ್ನಿತ್ಯಂ ನರಾಧಿಪ ॥೨೦೭॥

ಸಮಯಾನುಸಾರವಾಗಿ ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಳ್ಳ ಬೇಕಾಗುವುದು. ಮಿತ್ರನೊಡನೆ ಯುದ್ಧವನ್ನೂ ಮಾಡಬೇಕಾಗುವುದು–ಎಂಬುದಾಗಿ ಸಂಧಿ-ವಿಗ್ರಹಾದಿಗಳ ನಿರ್ಣಯದಲ್ಲಿ ನಿಷ್ಣಾತರಾದ ವಿದ್ವಾಂಸರು ಸರ್ವದಾ ಹೇಳುತ್ತಲೇ ಇರುತ್ತಾರೆ.

ಏತಜ್ಜ್ಞಾತ್ವಾ ಮಹಾರಾಜ ಶಾಸ್ತ್ರಾರ್ಥಮಭಿಗಮ್ಯ ಚ ।
ಅಭಿಯುಕ್ತೋಽಪ್ರಮತ್ತಶ್ಚ ಪ್ರಾಗ್ಭಯಾದ್ಭೀತವಚ್ಚರೇತ್ ॥೨೦೮॥

ಮಹಾರಾಜ! ಸಂಧಿ-ವಿಗ್ರಹಗಳ ಸ್ವರೂಪಗಳನ್ನು ಸರಿಯಾಗಿ ತಿಳಿದು, ಶಾಸ್ತ್ರಾರ್ಥಗಳ ಸಿದ್ಧಾಂತಗಳನ್ನೂ ಪರಿಶೀಲಿಸಿ, ಉದ್ಯೋಗಶೀಲನಾಗಿಯೂ ಜಾಗರೂಕನಾಗಿಯೂ ಇದ್ದು, ಭಯಪ್ರಸಂಗಗಳು ಬರುವ ಮೊದಲೇ ಭಯಗೊಂಡವನಂತೆ ಆಚರಿಸಬೇಕು.

ಭೀತವತ್ಸಂನಿಧಿಃ ಕಾರ್ಯಃ ಪ್ರತಿಸಂಧಿಸ್ತಥೈವ ಚ ।
ಭಯಾದುತ್ಪದ್ಯತೇ ಬುದ್ಧಿರಪ್ರಮತ್ತಾಭಿಯೋಗಜಾ ॥೨೦೯॥

ಬಲಿಷ್ಠನಾದ ಶತ್ರುವಿನ ಬಳಿಯಲ್ಲಿ ಭಯಗೊಂಡವನಂತಿರಬೇಕು. ಹಾಗೆಯೇ ತೋರ್ಪಡಿಸಿಕೊಂಡು ಅವನೊಡನೆ ಸಂಧಿಯನ್ನೂ ಮಾಡಿಕೊಳ್ಳ ಬೇಕು. ಭಯದ ದೆಸೆಯಿಂದ–ಉದ್ಯೋಗಶೀಲವಾದ, ಜಾಗರೂಕತೆಯಿಂದಿ ರುವ ಬುದ್ಧಿಯು ಉಂಟಾಗುತ್ತದೆ.

ನ ಭಯಂ ವಿದ್ಯತೇ ರಾಜನ್ಭೀತಸ್ಯಾನಾಗತೇ ಭಯೇ ।
ಅಭೀತಸ್ಯ ಚ ವಿಶ್ರಮ್ಭಾತ್ಸುಮಹಜ್ಜಾಯತೇ ಭಯಮ್ ॥೨೧೦॥

ಭಯಪ್ರಸಂಗಗಳು ಬರುವ ಮೊದಲೇ ಯಾವನು ಭಯಗೊಂಡಿರು ವನೋ (ಬರಲಿರುವ ಆಪತ್ತಿಗೆ ಪರಿಹಾರವನ್ನು ಕಂಡುಕೊಳ್ಳುವನೋ)–ಅಂತಹವನಿಗೆ ಭಯವೆಂಬುದೇ ಇರುವುದಿಲ್ಲ. ಯಾವನು ಇತರರ ಮೇಲಿನ ನಂಬಿಕೆಯ ಕಾರಣದಿಂದ ಭಯಗೊಂಡಿರುವುದಿಲ್ಲವೋ (ಬರಲಿರುವ ಆಪತ್ತಿಗೆ ಪರಿಹಾರವನ್ನು ಯೋಚಿಸದೇ ನಿರಾತಂಕನಾಗಿರುವನೋ)–ಅಂತಹವನಿಗೆ ಮಹಾಭಯವು ಉಂಟಾಗುತ್ತದೆ.

ಅಭೀಕ್ಷ್ಣರತಿ ಯೋ ನಿತ್ಯಂ ಮನ್ತ್ರೋಽದೇಯಃ ಕಥಂಚನ ।
ಅವಿಜ್ಞಾನಾದ್ಧಿ ವಿಜ್ಞಾತೋ ಗಚ್ಛೇದಾಸ್ಪದದರ್ಶಿಷು ॥೨೧೧॥

ಯಾವನು ತಾನೇ ಮಹಾಬುದ್ಧಿವಂತನೆಂದು ಭಾವಿಸಿಕೊಂಡು ನಿರ್ಭಯವಾಗಿ ಸರ್ವದಾ ವ್ಯವಹರಿಸುವನೋ–ಅಂತಹವನಿಗೆ ಯಾವ ವಿಧ ವಾದ ಸಲಹೆಗಳನ್ನೂ ನೀಡಲು ಹೋಗಬಾರದು. ಏಕೆಂದರೆ : ಅವನು ಇತರರ ಸಲಹೆಗಳನ್ನು ತಾನಾಗಿಯೇ ಕೇಳುವುದೂ ಇಲ್ಲ ; ಮುಂದೆ ಒದಗುವ ವಿಪತ್ತನ್ನು ತಿಳಿದುಕೊಳ್ಳದೇ ಇರುವುದರಿಂದ, ಹಿತಚಿಂತಕರು ತಾವಾಗಿಯೇ ಕೊಡುವ ಸಲಹೆಗಳನ್ನು ತಿರಸ್ಕರಿಸಿಯೂ ಬಿಡುತ್ತಾನೆ. ಮುಂದೆ ಭಯವು ಒದಗಿಬರುವುದೆಂಬುದನ್ನು ತಿಳಿಯದೇ ಇರುವುದಕ್ಕಿಂತ ತಿಳಿದುಕೊಳ್ಳು ವುದು ಒಳ್ಳೆಯದು. ಏಕೆಂದರೆ ಭಯವು ಒದಗಿಬರುವುದೆಂಬ ಭೀತಿಯ ಕಾರಣದಿಂದ ರಾಜನು, ಆಶ್ರಯವನ್ನು ತೋರಿಸುವವರ ಸಮೀಪಕ್ಕೆ ಭಯದ ನಿವಾರಣೋಪಾಯವನ್ನು ತಿಳಿಯುವ ಸಲುವಾಗಿ ಹೋಗಬಹುದು.

ತಸ್ಮಾದಭೀತವದ್ಭೀತೋ ವಿಶ್ವಸ್ತವದವಿಶ್ವಸನ್ ।
ಕಾರ್ಯಾಣಾಂ ಗುರುತಾಂ ಪ್ರಾಪ್ಯ ನಾನೃತಂ ಕಿಂಚಿದಾಚರೇತ್ ॥

ಆದುದರಿಂದ ಬುದ್ಧಿವಂತನಾದ ಮನುಷ್ಯನು ಭಯಗೊಂಡಿದ್ದರೂ ಭಯರಹಿತನಾದವನಂತೆಯೇ ತೋರ್ಪಡಿಸಿಕೊಳ್ಳಬೇಕು. ಅಂತರಂಗದಲ್ಲಿ ನಂಬಿಕೆಯನ್ನಿಡದಿದ್ದರೂ ಬಹಿರಂಗದಲ್ಲಿ ಅತ್ಯಂತ ನಂಬಿಕಸ್ಥನಂತೆ ತೋರ್ಪಡಿಸಿಕೊಳ್ಳಬೇಕು. ಕಾರ್ಯಗಳು ಎಷ್ಟೇ ಮಹತ್ವದ್ದಾಗಿದ್ದರೂ (ಕಠಿನವಾದ ಪ್ರಸಂಗಗಳನ್ನೇ ಎದುರಿಸಬೇಕಾಗಿ ಬಂದರೂ) ಸುಳ್ಳಿನ ವ್ಯವಹಾರವನ್ನಿಟ್ಟುಕೊಳ್ಳಬಾರದು.

ಯುಧಿಷ್ಠಿರ! ಹೀಗೆ ನಾನು ಪ್ರವಚನದ ಮಧ್ಯದಲ್ಲಿ ಮಾರ್ಜಾಲ-ಮೂಷಿಕಗಳ ಇತಿಹಾಸವನ್ನು ಹೇಳಿದ್ದೇನೆ. ಈ ಇತಿಹಾಸವನ್ನು ಕೇಳಿದ ಬಳಿಕ ಸುಹೃದರ ವಿಷಯದಲ್ಲಿ ನೀನೂ ಯಥಾಯೋಗ್ಯವಾಗಿ ವ್ಯವಹರಿಸು.

ಶ್ರೇಷ್ಠವಾದ ಬುದ್ಧಿಯನ್ನು ಆಶ್ರಯಿಸಿ ಮಿತ್ರರ ಮತ್ತು ಶತ್ರುಗಳಲ್ಲಿರುವ ಭೇದವನ್ನೂ, ಸಂಧಿ ಮತ್ತು ಯುದ್ಧಗಳಿಗೆ ಯೋಗ್ಯವಾದ ಕಾಲಗಳನ್ನೂ, ವಿಪತ್ತಿನಿಂದ ಪಾರಾಗುವ ಉಪಾಯವನ್ನೂ ತಿಳಿದುಕೊ.

ಶತ್ರುಸಾಧಾರಣೇ ಕೃತ್ಯೇ ಕೃತ್ವಾ ಸಂಧಿಂ ಬಲೀಯಸಾ ।
ಸಮಾಗತಶ್ಚರೇದ್ಯುಕ್ತ್ಯಾ ಕೃತಾರ್ಥೋ ನ ಚ ವಿಶ್ವಸೇತ್ ॥೨೧೫॥

ಶತ್ರುವಿಗೂ ತನಗೂ ಉಭಯಸಾಧಾರಣವಾದ ವಿಪತ್ತು ಸಂಭವಿಸಿದಾಗ ದುರ್ಬಲನಾದವನು ಬಲಿಷ್ಠನಾದ ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಂಡು ಅವನೊಡನೆ ಸೇರಿಕೊಂಡನಂತರ ಬಹಳ ಯುಕ್ತಿಯಿಂದ ನಡೆದುಕೊಳ್ಳಬೇಕು. ಕೃತಕೃತ್ಯನಾದನಂತರ ಅಂತಹ ಶತ್ರುವಿನ ವಿಷಯದಲ್ಲಿ ವಿಶ್ವಾಸವನ್ನಿಡಬಾರದು.

ಅವಿರುದ್ಧಾಂ ತ್ರಿವರ್ಗೇಣ ನೀತಿಮೇತಾಂ ಮಹೀಪತೇ ।
ಅಭ್ಯುತ್ತಿಷ್ಠ ಶ್ರುತಾದಸ್ಮಾದ್ಭೂಯಃ ಸಂರಕ್ಷಯನ್ಪ್ರಜಾಃ ॥೨೧೬॥

ಮಹಾರಾಜ! ಧರ್ಮಾರ್ಥ-ಕಾಮಗಳಿಗೆ ವಿರೋಧವಲ್ಲದಿರುವ ಈ ನೀತಿಯನ್ನು ನೀನು ಆಶ್ರಯಿಸು. ನನ್ನಿಂದ ಕೇಳಿರುವ ಈ ಉಪದೇಶದ ಪ್ರಭಾವದಿಂದ ಪುನಃ ನೀನು ಪ್ರಜೆಗಳನ್ನು ಸಂರಕ್ಷಿಸುತ್ತಾ ಔನ್ನತ್ಯವನ್ನು ಹೊಂದು.

ಬ್ರಾಹ್ಮಣೈಶ್ಚಾಪಿ ತೇ ಸಾರ್ಧಂ ಯಾತ್ರಾ ಭವತು ಪಾಣ್ಡವ ।
ಬ್ರಾಹ್ಮಣಾ ವೈ ಪರಂ ಶ್ರೇಯೋ ದಿವಿ ಚೇಹ ಚ ಭಾರತ ॥೨೧೭॥

ಭಾರತ! ನಿನ್ನ ಜೀವನಯಾತ್ರೆಯು ಬ್ರಾಹ್ಮಣರೊಡನೆ ನಡೆಯಲಿ. ಬ್ರಾಹ್ಮಣರು ಇಹಲೋಕದಲ್ಲಾಗಲೀ-ಪರಲೋಕದಲ್ಲಾಗಲೀ ಶ್ರೇಷ್ಠವಾದ ಶ್ರೇಯಸ್ಸನ್ನು ದಯಪಾಲಿಸುವವರಾಗಿದ್ದಾರೆ.

ಏತೇ ಧರ್ಮಸ್ಯ ವೇತ್ತಾರಃ ಕೃತಜ್ಞಾಃ ಸತತಂ ಪ್ರಭೋ ।
ಪೂಜಿತಾಃ ಶುಭಕರ್ತಾರಃ ಪೂಜಯೇತ್ತಾನ್ನರಾಧಿಪ ॥೨೧೮॥

ನರಾಧಿಪನೇ! ಬ್ರಾಹ್ಮಣರು ಧರ್ಮವನ್ನು ತಿಳಿದವರಾಗಿದ್ದಾರೆ. ಮಾಡಿದ ಉಪಕಾರವನ್ನು ಸ್ಮರಿಸುವವರಾಗಿದ್ದಾರೆ. ಸಮ್ಮಾನಿತರಾದ ಅವರು ಶುಭವನ್ನುಂಟುಮಾಡುತ್ತಾರೆ. ಆದುದರಿಂದ ಅವರನ್ನು ಯಾವಾಗಲೂ ಆದರಿಸುತ್ತಿರಬೇಕು.

ರಾಜ್ಯಂ ಶ್ರೇಯಃ ಪರಂ ರಾಜನ್ಯಶಃ ಕೀರ್ತಿಂ ಚ ಲಪ್ಸ್ಯಸೇ ।
ಕುಲಸ್ಯ ಸನ್ತತಿಂ ಚೈವ ಯಥಾನ್ಯಾಯಂ ಯಥಾಕ್ರಮಮ್ ॥೨೧೯॥

ನೀನು ಬ್ರಾಹ್ಮಣರನ್ನು ಯಥೋಚಿತವಾಗಿ ಸತ್ಕರಿಸುವುದರಿಂದ ಯಥಾನುಕ್ರಮವಾಗಿ ರಾಜ್ಯವನ್ನೂ, ಶ್ರೇಯಸ್ಸನ್ನೂ, ಯಶಸ್ಸನ್ನೂ, ಕೀರ್ತಿಯನ್ನೂ, ಕುಲದ ವೃದ್ಧಿಗಾಗಿ ಸಂತತಿಯನ್ನೂ ಪಡೆದುಕೊಳ್ಳುವೆ.

ದ್ವಯೋರಿಮಂ ಭಾರತ ಸಂಧಿವಿಗ್ರಹಂ
ಸುಭಾಷಿತಂ ಬುದ್ಧಿವಿಶೇಷಕಾರಕಮ್ ।
ಯಥಾ ತ್ವವೇಕ್ಷ್ಯ ಕ್ಷಿತಿಪೇನ ಸರ್ವದಾ
ನಿಷೇವಿತವ್ಯಂ ನೃಪ ಶತ್ರುಮಣ್ಡಲೇ ॥೨೨೧॥

ಭಾರತನೇ! ನಾನು ಹೇಳಿರುವ ಮಾರ್ಜಾಲ–ಮೂಷಿಕಗಳ ಸುಂದರವಾದ ಉಪಾಖ್ಯಾನವು ಸಂಧಿ-ವಿಗ್ರಹಗಳ ಕಾಲಜ್ಞಾನವನ್ನುಂಟುಮಾಡುವುದಾಗಿದೆ. ಬುದ್ಧಿಯನ್ನು ವಿಶೇಷವಾಗಿ ಚುರುಕುಗೊಳಿಸುವುದಾಗಿದೆ. ರಾಜನಾದವನು ಸರ್ವಕಾಲದಲ್ಲಿಯೂ ಇದನ್ನೇ ಗಮನದಲ್ಲಿಟ್ಟುಕೊಂಡು ಶತ್ರುಸಮೂಹದೊಡನೆ ಯಥೋಚಿತವಾಗಿ ವ್ಯವಹರಿಸಬೇಕು.”

ು೩೮ನೆಯ ಅಧ್ಯಾಯವು ಮುಗಿಯಿತು.

೧೩೯ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಶತ್ರುವಿನೊಡನೆ ಜಾಗರೂಕತೆಯಿಂದ ಇರಬೇಕೆನ್ನುವ ವಿಷಯದಲ್ಲಿ ಬ್ರಹ್ಮದತ್ತರಾಜನ ಮತ್ತು ಕಲವಿಂಕದ (ಗುಬ್ಬಚ್ಚಿಯ) ಸಂಭಾಷಣೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

“ಮಹಾಬಾಹುವೇ! ಭೀಷ್ಮಪಿತಾಮಹ! ನೀನು ಹೇಳಿದ ಮೂಷಿಕ-ಮಾರ್ಜಾಲಗಳ ಸಮಾಖ್ಯಾನದ ಮೂಲಕ ಶತ್ರುಗಳ ವಿಷಯದಲ್ಲಿ ವಿಶ್ವಾಸವನ್ನಿಡಕೂಡದೆಂಬ ಸಲಹೆಯನ್ನು ನೀಡಿರುವೆ. ಹಾಗಾದರೆ ಯಾರಲ್ಲಿಯೂ ವಿಶ್ವಾಸವನ್ನಿಡದೇ (ಯಾರನ್ನೂ ನಂಬದೇ) ರಾಜನು ಹೇಗೆ ಕಾರ್ಯನಿರ್ವಹಣೆಯನ್ನು ಮಾಡಬೇಕು? ಯಾರನ್ನೂ ನಂಬದಿದ್ದರೆ ರಾಜನಿಗೆ ರಾಜಕಾರ್ಯಗಳನ್ನು ನಡೆಸಲು ಹೇಗೆತಾನೇ ಸಾಧ್ಯವಾಗುತ್ತದೆ? ‘ಇತರರ ಮೇಲೆ ಹೆಚ್ಚಿನ ವಿಶ್ವಾಸವಿಡುವುದರಿಂದ ರಾಜರಿಗೆ ಭಯವುಂಟಾಗುತ್ತದೆ

ಅಥವಾ ಭಯಕ್ಕೆ ಕಾರಣವಾಗುತ್ತದೆ. ಅದರಿಂದ ಅವರಿಗೆ ಅಪಾಯವುಂಟಾಗುವುದು'–ಎಂಬ ಅಭಿಪ್ರಾಯವನ್ನೂ ನೀನು ಹೇಳಿರುವೆ. ಯಾರನ್ನೂ ನಂಬದೇ ಇರುವ–ಯಾರ ಮೇಲೂ ವಿಶ್ವಾಸವನ್ನೇ ಇಡದಿರುವ ರಾಜನು ಶತ್ರುಗಳನ್ನು ಹೇಗೆ ಜಯಿಸಬಲ್ಲನು? ನೀನು ಹೇಳಿದ ಅವಿಶ್ವಾಸದ ಕಥೆಯನ್ನು ಕೇಳಿ ನನ್ನ ಮನಸ್ಸು ಮೋಹಗೊಂಡಿದೆ. ಯಾರಲ್ಲಿಯೂ ವಿಶ್ವಾಸವನ್ನೇ ಇಡಬಾರದೇ? ಯಾರನ್ನೂ ನಂಬಲೇಬಾರದೇ?–ಎಂಬ ಸಂಶಯವುಂಟಾಗಿದೆ. ಈ ನನ್ನ ಸಂಶಯವನ್ನು ಪರಿಹರಿಸು, ತಾತ!"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಬ್ರಹ್ಮದತ್ತನ ಅರಮನೆಯಲ್ಲಿದ್ದ ಪೂಜನೀ ಎಂಬ ಹೆಸರಿನ ಗುಬ್ಬಚ್ಚಿಗೂ ಮತ್ತು ಬ್ರಹ್ಮದತ್ತನಿಗೂ ನಡೆದ ಸಂವಾದವನ್ನು ಹೇಳುವೆನು ; ಕೇಳು. ಆ ಸಂವಾದವೇ ನೀನು ಕೇಳಿರುವ ಪ್ರಶ್ನೆಗೆ ಉತ್ತರ ರೂಪವಾಗಿದೆ.

ಕಾಂಪಿಲ್ಯವೆಂಬ ಪಟ್ಟಣದಲ್ಲಿ ಬ್ರಹ್ಮದತ್ತನೆಂಬ ರಾಜನು ರಾಜ್ಯಭಾರ ಮಾಡುತ್ತಿದ್ದನು. ಅವನ ಅಂತಃಪುರದಲ್ಲಿ 'ಪೂಜನೀ' ಎಂಬ ಹೆಸರಿನ ಗುಬ್ಬಚ್ಚಿಯು ವಾಸಮಾಡುತ್ತಿದ್ದಿತು. ಅದು ಬಹಳ ಕಾಲದಿಂದಲೂ ರಾಜನೊಡನೆಯೇ ವಾಸಮಾಡಿಕೊಂಡಿದ್ದಿತು.

ಜೀವಜೀವಕನಂತೆಯೇ (ಪಕ್ಷಿಶಕುನಶಾಸ್ತ್ರಜ್ಞನಂತೆ) ಆ ಗುಬ್ಬಚ್ಚಿಯೂ ಎಲ್ಲ ಪ್ರಾಣಿಗಳ ಭಾಷೆಗಳನ್ನೂ ತಿಳಿದುಕೊಂಡಿದ್ದಿತು. ಅದು ತಿರ್ಯಗ್ಯೋನಿಯಲ್ಲಿ ಹುಟ್ಟಿದ್ದರೂ ಸರ್ವವಿಷಯಗಳನ್ನೂ ತಿಳಿದುಕೊಂಡಿದ್ದಿತು. ಒಂದು ದಿನ ಆ ಪಕ್ಷಿಯು ರಾಜನ ಅಂತಃಪುರದಲ್ಲಿಯೇ ತೇಜಃಪುಂಜಯುಕ್ತವಾದ ಮರಿಯನ್ನು ಪ್ರಸವಿಸಿತು. ಅದೇ ಸಮಯದಲ್ಲಿಯೇ ರಾಜನಿಗೂ ಅವನ ಪತ್ನಿಯಲ್ಲಿ ಒಬ್ಬ ಮಗನು ಹುಟ್ಟಿದನು. ಆಕಾಶಗಾಮಿನಿಯಾದ, ರಾಜನ ವಿಷಯದಲ್ಲಿ ಕೃತಜ್ಞಳಾಗಿದ್ದ ಪೂಜನಿಯು ಆ ಎರಡು ಮಕ್ಕಳ ಸಲುವಾಗಿ ಪ್ರತಿನಿತ್ಯವೂ ಸಮುದ್ರದ ತೀರಕ್ಕೆ ಹೋಗಿ ಎರಡು ಹಣ್ಣುಗಳನ್ನು ತರುತ್ತಿದ್ದಿತು. ತನ್ನ ಮಗನ ಮತ್ತು ರಾಜಪುತ್ರನ ಪೋಷಣೆಗಾಗಿ ಆ ಗುಬ್ಬಚ್ಚಿಯು ಎರಡು ಹಣ್ಣುಗಳನ್ನು ತಂದು ಒಂದು ಹಣ್ಣನ್ನು ತನ್ನ ಪುತ್ರನಿಗೂ ಮತ್ತೊಂದು ಹಣ್ಣನ್ನು ರಾಜಪುತ್ರನಿಗೂ ಕೊಡುತ್ತಿದ್ದಿತು.

ಪೂಜನಿಯು ತರುತ್ತಿದ್ದ ಆ ಹಣ್ಣುಗಳು ಅಮೃತದಂತೆ ರುಚಿಕರವಾಗಿದ್ದುವು ಮತ್ತು ಆ ಹಣ್ಣುಗಳನ್ನು ತಿನ್ನುತ್ತಿದ್ದ ಬಾಲಕರ ಬಲವನ್ನೂ ಮತ್ತು ತೇಜಸ್ಸನ್ನೂ ಹೆಚ್ಚಿಸುತ್ತಿದ್ದುವು. ಪೂಜನಿಯು ಅಂತಹ ಹಣ್ಣುಗಳನ್ನು ಪದೇ-ಪದೇ ರಾಜಕುಮಾರನಿಗೂ ಮತ್ತು ತನ್ನ ಪುತ್ರನಿಗೂ ತಂದುಕೊಡುತ್ತಿದ್ದಿತು. ರಾಜಪುತ್ರನು, ಪಕ್ಷಿಯು ತಂದುಕೊಡುತ್ತಿದ್ದ ಹಣ್ಣುಗಳನ್ನು ತಿಂದು-ತಿಂದು ಹೃಷ್ಟ-ಪುಷ್ಟನಾದನು. ಒಮ್ಮೆ ದಾದಿಯು ರಾಜಪುತ್ರನನ್ನು ಎತ್ತಿಕೊಂಡು ಹೋಗುತ್ತಿರುವಾಗ ರಾಜಪುತ್ರನು ಅಲ್ಲಿ ನಲಿದಾಡಿಕೊಂಡಿದ್ದ ಪಕ್ಷಿಯ ಮಗನನ್ನು ನೋಡಿದನು. ಬಾಲ್ಯಸ್ವಭಾವದಿಂದಾಗಿ ರಾಜಪುತ್ರನು ತಾನು ನೋಡಿದ ಆ ಪಕ್ಷಿಯೊಡನೆ (ಪೂಜನಿಯ ಪುತ್ರನೊಡನೆ) ಪ್ರಯತ್ನ ಪೂರ್ವಕವಾಗಿ ಆಡಲು ಉಪಕ್ರಮಿಸಿದನು. ರಾಜಕುಮಾರನು ತನ್ನ ಒಡನಾಡಿಯಾದ ಆ ಪಕ್ಷಿಯನ್ನು ಕೈಯಲ್ಲಿ ಹಿಡಿದುಕೊಂಡು ಆಟವಾಡಿಸುತ್ತಾ ನಿರ್ಜನವಾದ ಸ್ಥಳಕ್ಕೆ ಹೋಗಿ ಅದನ್ನು ಎರಡು ಕೈಗಳಿಂದಲೂ ಹಿಸುಕಿ ಕೊಂದು ಪುನಃ ತನ್ನ ದಾದಿಯ ತೋಳಿನೊಳಗೆ ಸೇರಿಕೊಂಡನು.

ಸ್ವಲ್ಪಹೊತ್ತಿನಲ್ಲಿಯೇ ಪೂಜನಿಯು ಹಿಂದಿನಂತೆಯೇ ಎರಡು ಹಣ್ಣುಗಳನ್ನೆತ್ತಿಕೊಂಡು ರಾಜನ ಅರಮನೆಯ ಬಳಿಗೆ ಬಂದಿತು. ಅಲ್ಲಿಯೇ ರಾಜಕುಮಾರನಿಂದ ಕೊಲ್ಲಲ್ಪಟ್ಟಿದ್ದ ತನ್ನ ಕಂದನನ್ನು ಕಂಡಿತು. ಪೂಜನಿಯ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಅದು ಪುತ್ರಶೋಕದಿಂದ ಪರಿತಪಿಸುತ್ತಿದ್ದಿತು. ತನ್ನ ಕಂದನು ಗತಪ್ರಾಣನಾಗಿ ಬಿದ್ದಿರುವುದನ್ನು ನೋಡಿ ದೈನ್ಯವನ್ನು ತಾಳಿತು. ಬಿಕ್ಕಿ-ಬಿಕ್ಕಿ ಅಳುತ್ತಳುತ್ತಲೇ ಪೂಜನಿಯು ಈ ಮಾತುಗಳನ್ನು ಹೇಳಿತು:

ಕ್ಷತ್ರಿಯೇ ಸಂಗತಂ ನಾಸ್ತಿ ನ ಪ್ರೀತಿರ್ನ ಚ ಸೌಹೃದಮ್ ।
ಕಾರಣಾತ್ಸಾನ್ತ್ವಯನ್ತ್ಯೇತೇ ಕೃತಾರ್ಥಾಃ ಸಂತ್ಯಜನ್ತಿ ಚ ॥೧೬॥

"ಕ್ಷತ್ರಿಯನಲ್ಲಿ ಸಾಂಗತ್ಯವೆಂಬುದೇ (ಜೊತೆಗೂಡಿ ಬಾಳುವುದೆಂಬುದೇ) ಇಲ್ಲ. ಅವನಲ್ಲಿ ಪ್ರೀತಿಯೆಂಬುದೂ ಇಲ್ಲ; ಸಹೃದಯತೆಯೆಂಬುದೂ ಇಲ್ಲ. ಯಾವುದೋ ಸ್ವಾರ್ಥದ ಕಾರಣಕ್ಕಾಗಿ ಕ್ಷತ್ರಿಯರು ಇತರರನ್ನು ಸಂತೈಸುತ್ತಾರೆ. ತಮ್ಮ ಕಾರ್ಯದ ಸಿದ್ಧಿಯಾದೊಡನೆಯೇ ಆಶ್ರಯಿಸಿಕೊಂಡಿದ್ದ ವ್ಯಕ್ತಿಗಳನ್ನು ಪರಿತ್ಯಜಿಸುತ್ತಾರೆ.

ಕ್ಷತ್ರಿಯೇಷು ನ ವಿಶ್ವಾಸಃ ಕಾರ್ಯಃ ಸರ್ವಾಪಕಾರಿಷು ।
ಅಪಕೃತ್ವಾಪಿ ಸತತಂ ಸಾನ್ತ್ವಯನ್ತಿ ನಿರರ್ಥಕಮ್ ॥೧೭॥

ಸರ್ವರಿಗೂ ಅಪಕಾರಿಗಳಾದ ಕ್ಷತ್ರಿಯರಲ್ಲಿ ವಿಶ್ವಾಸವನ್ನಿಡಲೇ ಬಾರದು. ಇತರರಿಗೆ ಅಪಕಾರವನ್ನು ಮಾಡಿದಾಗಲೂ ವ್ಯರ್ಥವಾದ ಸಮಾಧಾನವನ್ನು ಯಾವಾಗಲೂ ಮಾಡುತ್ತಾರೆ.



ಅಹಮಸ್ಯ ಕರೋಮ್ಯದ್ಯ ಸದೃಶೀಂ ವೈರಯಾತನಾಮ್ ।
ಕೃತಘ್ನಸ್ಯ ನೃಶಂಸಸ್ಯ ಭೃಶಂ ವಿಶ್ವಾಸಘಾತಿನಃ ॥೧೮॥

ಕೃತಘ್ನನಾದ, ಕ್ರೂರಿಯಾದ, ಅತ್ಯಂತ ವಿಶ್ವಾಸಘಾತಕನಾದ ಈ ಕುಮಾರನಿಗೆ ಅವನು ಮಾಡಿರುವುದಕ್ಕೆ ಅನುರೂಪವಾದ ಯಾತನೆಯ

ನ್ನುಂಟುಮಾಡುವ ಕಾರ್ಯವನ್ನೇ ಮಾಡುತ್ತೇನೆ. ವೈರದಿಂದ ನನಗೆ ಉಂಟುಮಾಡಿರುವ ಈ ಯಾತನೆಗೆ ಪ್ರತಿಯಾದ ಯಾತನೆಯನ್ನೇ ಇವನಿಗೂ ಉಂಟುಮಾಡುತ್ತೇನೆ. ನನ್ನ ಸೇಡನ್ನು ತೀರಿಸಿಕೊಳ್ಳುತ್ತೇನೆ.

ಸಹಸಂಜಾತವೃದ್ಧಸ್ಯ ತಥೈವ ಸಹಭೋಜಿನಃ ।
ಶರಣಾಗತಸ್ಯ ಚ ವಧಸ್ತ್ರಿವಿಧಂ ಹ್ಯೇವ ಪಾತಕಮ್ ॥೧೯॥

ತನ್ನೊಡನೆಯೇ ಹುಟ್ಟಿ ತನ್ನೊಡನೆಯೇ ಬೆಳೆದ ಪಕ್ಷಿಯನ್ನು ಸಂಹರಿಸಿದುದು ಮೊದಲನೆಯ ಪಾತಕವಾಗಿದೆ. ತನ್ನೊಡನೆಯೇ ಹಣ್ಣು ತಿನ್ನುತ್ತಿದ್ದ ಪಕ್ಷಿಯನ್ನು (ಸಹಭೋಜಿಯಾದವನನ್ನು) ಕೊಂದುದು ಎರಡನೆಯ ಮಹಾಪಾತಕ. ಎಲ್ಲಕ್ಕಿಂತಲೂ ಮಿಗಿಲಾಗಿ ರಾಜಾಶ್ರಯದಲ್ಲಿಯೇ ಬೆಳೆಯುತ್ತಿದ್ದ ಪಕ್ಷಿಯನ್ನು (ಆಶ್ರಿತನನ್ನು) ಕೊಂದುದು ಮೂರನೆಯ ಮಹಾಪಾತಕ. ಹೀಗೆ ಈ ರಾಜಕುಮಾರನು ಮೂರು ಪ್ರಕಾರವಾದ ಮಹಾ ಪಾತಕಗಳನ್ನು ಮಾಡಿರುತ್ತಾನೆ."

ಪುತ್ರಶೋಕದಿಂದ ದುಃಖತಪ್ತವಾಗಿದ್ದ ಪೂಜನಿಯು ಹೀಗೆ ನಿರ್ಧರಿಸಿ ತನ್ನೆರಡು ಕಾಲಿನ ಪಂಜಗಳಿಂದಲೂ ಆ ರಾಜಪುತ್ರನ ಕಣ್ಣುಗಳೆರಡನ್ನೂ ಪರಚಿ ಮನಸ್ಸಿಗೆ ಸಮಾಧಾನವನ್ನು ತಂದುಕೊಂಡು ಆಕಾಶದಲ್ಲಿ ಹಾರುತ್ತಾ ರಾಜನ ಬಳಿಗೆ ಬಂದು ಹೇಳಿತು :

ಇಚ್ಛಯೇಹ ಕೃತಂ ಪಾಪಂ ಸದ್ಯಸ್ತಂ ಚೋಪಸರ್ಪತಿ ।
ಕೃತಂ ಪ್ರತಿಕೃತಂ ಯೇಷಾಂ ನ ನಶ್ಯತಿ ಶುಭಾಶುಭಮ್ ॥೨೦॥

"ಮಹಾರಾಜ! ಈ ಜಗತ್ತಿನಲ್ಲಿ ಇಚ್ಛಾಪೂರ್ವಕವಾಗಿ ಯಾರು ಪಾಪಮಾಡುತ್ತಾರೆಯೋ–ಅದರ ಫಲವು ಅವರಿಗೆ ಒಡನೆಯೇ ಲಭಿಸುತ್ತದೆ. ಆದರೆ ಬೇರೆಯವರು ಮಾಡಿದ ಪಾಪಕ್ಕೆ ಯಾರು ಪ್ರತಿಯಾಗಿ ಮಾಡುತ್ತಾರೆಯೋ ಅವರ ಶುಭಾಶುಭಕರ್ಮಗಳು ನಷ್ಟವಾಗುವುದಿಲ್ಲ.

ಪಾಪಂ ಕರ್ಮ ಕೃತಂ ಕಿಂಚಿದ್ಯದಿ ತಸ್ಮಿನ್ನ ದೃಶ್ಯತೇ ।
ನೃಪತೇ ತಸ್ಯ ಪುತ್ರೇಷು ಪೌತ್ರೇಷ್ವಪಿ ಚ ನಪ್ತೃಷು ॥೨೧॥

ಒಂದು ವೇಳೆ ಪಾಪಮಾಡಿದವನಿಗೆ ತಾನು ಮಾಡಿದ ಪಾಪದ ಫಲವು ಒಡನೆಯೇ ಕಾಣಿಸಿಕೊಳ್ಳದಿದ್ದರೆ ಆ ಪಾಪದ ಫಲವು ಅವನ ಮಕ್ಕಳ

ಲ್ಲಾಗಲೀ, ಮೊಮ್ಮಕ್ಕಳಲ್ಲಾಗಲೀ (ಪೌತ್ರರಲ್ಲಾಗಲೀ) ಮಗಳ ಮಕ್ಕಳ ಲ್ಲಾಗಲೀ (ದೌಹಿತ್ರರಲ್ಲಾಗಲೀ) ಕಾಣಿಸಿಕೊಳ್ಳುತ್ತದೆ."

ಯುಧಿಷ್ಠಿರ! ಬ್ರಹ್ಮದತ್ತನು ತನ್ನ ಮಗನ ಕಣ್ಣುಗಳನ್ನು ನೋಡಿದನು. ಪೂಜನಿಯು ಉಗುರುಗಳಿಂದ ಚುಚ್ಚಿ ತನ್ನ ಪ್ರೇಮಪುತ್ರನ ಕಣ್ಣುಗಳನ್ನು ಕಳೆದುಬಿಟ್ಟಿದ್ದಳು. ರಾಜಕುಮಾರನು ಮಾಡಿದ ಪಾಪಕ್ಕೆ ತಕ್ಕುದಾದ ಪ್ರತೀಕಾರವನ್ನೇ ಪೂಜನಿಯು ಮಾಡಿರುವಳೆಂದು ರಾಜನು ಭಾವಿಸಿ ಪೂಜನಿಯೊಡನೆ ಹೇಳಿದನು :

ಅಸ್ತಿ ವೈ ಕೃತಮಸ್ಮಾಭಿರಸ್ತಿ ಪ್ರತಿಕೃತಂ ತ್ವಯಾ ।
ಉಭಯಂ ತತ್ಸಮೀಭೂತಂ ವಸ ಪೂಜನಿ ಮಾ ಗಮಃ ॥೨೪॥

" ಪೂಜನಿ! ನಾವು ನಿನಗೆ ಅಪಕಾರಮಾಡಿದೆವು. ಅದಕ್ಕೆ ಪ್ರತಿಯಾಗಿ ನೀನೂ ನಮ್ಮನ್ನು ಶಿಕ್ಷಿಸಿರುವೆ. ನಾವಿಬ್ಬರೂ ಈಗ ಉಭಯಸಮಾನವಾದ ಶಿಕ್ಷೆಯನ್ನೇ ಅನುಭವಿಸಿದಂತಾಗಿದೆ. (ಅಪಕಾರ-ಪ್ರತ್ಯಪಕಾರಗಳೆರಡೂ ಸಮನಾದುವು.) ನಾವಿಬ್ಬರೂ ರಾಜಿಮಾಡಿಕೊಳ್ಳೋಣ. ಆಗಿಹೋದುದನ್ನು ನಾನಾಗಲೀ ನೀನಾಗಲೀ ಸ್ಮರಿಸಿಕೊಂಡು ಪರಸ್ಪರವೈರಿಗಳಾಗುವುದು ಬೇಡ. ನೀನು ಬೇರೆಯ ಕಡೆಗೆ ಹೋಗುವ ಮನಸ್ಸು ಮಾಡದೇ ಇಲ್ಲಿಯೇ ಇದ್ದುಬಿಡು."

ಪೂಜನಿಯು ಹೇಳುತ್ತಾಳೆ :

ಸಕೃತ್ಕೃತಾಪರಾಧಸ್ಯ ತತ್ರೈವ ಪರಿಲಮ್ಬತಃ ।
ನ ತದ್ಬುಧಾಃ ಪ್ರಶಂಸನ್ತಿ ಶ್ರೇಯಸ್ತತ್ರಾಪಸರ್ಪಣಮ್ ॥೨೫॥

"ಮಹಾರಾಜ! ಒಂದು ಬಾರಿ ಒಬ್ಬನಿಗೆ ಅಪರಾಧವನ್ನು ಮಾಡಿದ ನಂತರ, ಅವನಲ್ಲಿಯೇ ಆಶ್ರಯವನ್ನು ಹೊಂದಿರುವವನ ಸ್ವಭಾವವನ್ನು ವಿದ್ವಾಂಸರು ಪ್ರಶಂಸೆಮಾಡುವುದಿಲ್ಲ. ಅಪರಾಧಮಾಡಿದವನು ಆಶ್ರಯ ದಾತನ ಬಳಿಯಿಂದ ಹೊರಟುಹೋಗುವುದೇ ಶ್ರೇಯಸ್ಕರ.

ಸಾನ್ತ್ವೇ ಪ್ರಯುಕ್ತೇ ಸತತಂ ಕೃತವೈರೇ ನ ವಿಶ್ವಸೇತ್ ।
ಕ್ಷಿಪ್ರಂ ಸ ಬಧ್ಯತೇ ಮೂಢೋ ನ ಹಿ ವೈರಂ ಪ್ರಶಾಮ್ಯತಿ ॥೨೬॥

ಒಬ್ಬನೊಡನೆ ವೈರವು ಪ್ರಾರಂಭವಾಯಿತೆಂದರೆ ವೈರಿಯಾದವನು

ಸಾಂತ್ವನಪೂರ್ವವಾದ ಮಾತುಗಳನ್ನು ಪದೇಪದೇ ಹೇಳುತ್ತಿದ್ದರೂ ಅವನ ವಿಷಯದಲ್ಲಿ ವಿಶ್ವಾಸವನ್ನಿಡಬಾರದು. ಪರಸ್ಪರಾಪರಾಧಗಳಿಂದ ಹುಟ್ಟಿಕೊಂಡ ವೈರವು ಖಂಡಿತವಾಗಿಯೂ ಉಪಶಮನಹೊಂದುವುದಿಲ್ಲ. ಸಾಂತ್ವನದ ಮಾತುಗಳಿಗೆ ಮನಸೋತ ಮೂಢನು ಬಹಳ ಬೇಗ ಬಂಧನಕ್ಕೆ ಒಳಗಾಗುತ್ತಾನೆ.

ಅನ್ಯೋನ್ಯಕೃತವೈರಾಣಾಂ ಪುತ್ರಪೌತ್ರಂ ನಿಯಚ್ಛತಿ ।
ಪುತ್ರಪೌತ್ರವಿನಾಶೇ ಚ ಪರಲೋಕಂ ನಿಯಚ್ಛತಿ ॥೨೭॥

ಪರಸ್ಪರವಾಗಿ ವೈರಭಾವವನ್ನು ಹೊಂದಿರುವವರ ಕ್ರೋಧಾಗ್ನಿಯು ಅವರ ಮಕ್ಕಳು-ಮೊಮ್ಮಕ್ಕಳನ್ನೂ ವಿನಾಶಗೊಳಿಸುತ್ತದೆ. ಪುತ್ರ-ಪೌತ್ರರ ವಿನಾಶವಾದರೆ ಪರಲೋಕವೇ ಇಲ್ಲದಂತಾಗುತ್ತದೆ.

ಸರ್ವೇಷಾಂ ಕೃತವೈರಾಣಾಮವಿಶ್ವಾಸಃ ಸುಖೋದಯಃ ।
ಏಕಾನ್ತತೋ ನ ವಿಶ್ವಾಸಃ ಕಾರ್ಯೋ ವಿಶ್ವಾಸಘಾತಕೈಃ ॥೨೮॥

ಯಾರು ಪರಸ್ಪರವಾಗಿ ದ್ವೇಷಭಾವವನ್ನಿಟ್ಟುಕೊಂಡಿರುವರೋ ಅವರಲ್ಲಿ ಒಬ್ಬರು ಮತ್ತೊಬ್ಬರ ವಿಷಯದಲ್ಲಿ ವಿಶ್ವಾಸವನ್ನು ಇಡದಿರುವುದೇ ಸುಖಪ್ರಾಪ್ತಿಗೆ ಮುಖ್ಯವಾದ ಹಾದಿಯಾಗಿದೆ. ಪರಸ್ಪರ ವೈರವನ್ನು ಬೆಳೆಸಿದ ನಂತರ ಯಾವುದೇ ಕಾರಣದಿಂದಲೂ ಒಬ್ಬರು ಮತ್ತೊಬ್ಬರಲ್ಲಿ ವಿಶ್ವಾಸವನ್ನಿಡಬಾರದು. ಅದರಲ್ಲಿಯೂ ಮುಖ್ಯವಾಗಿ ವಿಶ್ವಾಸಘಾತಕರೊಡನೆ ಖಂಡಿತವಾಗಿಯೂ ವಿಶ್ವಾಸವನ್ನಿಡಲೇಬಾರದು.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿವಿಶ್ವಸೇತ್ ।
ವಿಶ್ವಾಸಾದ್ಭಯಮುತ್ಪನ್ನಮಪಿ ಮೂಲಂ ನಿಕೃನ್ತತಿ ।
ಕಾಮಂ ವಿಶ್ವಾಸಯೇದನ್ಯಾನ್ಪರೇಷಾಂ ಚ ನ ವಿಶ್ವಸೇತ್ ॥೨೯॥

ವಿಶ್ವಾಸಕ್ಕೆ ಪಾತ್ರನಲ್ಲದವನಲ್ಲಿ ವಿಶ್ವಾಸವನ್ನಿಡಲೇಬಾರದು. ವಿಶ್ವಾಸಕ್ಕೆ ಪಾತ್ರನಾದವನಲ್ಲಿಯೂ ಹೆಚ್ಚಿನ ವಿಶ್ವಾಸವನ್ನಿಡಬಾರದು. ವಿಶ್ವಾಸವಿಟ್ಟುದುದರಿಂದ ಹುಟ್ಟಿದ ಭಯವು ವಿಶ್ವಾಸವಿಟ್ಟವನನ್ನು ಸಮೂಲವಾಗಿ ವಿನಾಶಗೊಳಿಸುತ್ತದೆ. ಇತರರಿಗೆ ತನ್ನ ವಿಷಯದಲ್ಲಿ ಹೆಚ್ಚಿನ ವಿಶ್ವಾಸವು

ಹುಟ್ಟುವಂತೆ ಮಾಡಬೇಕು. ಆದರೆ ಇತರರಲ್ಲಿ ಎಂದೆಂದಿಗೂ ಪೂರ್ಣ ವಿಶ್ವಾಸವನ್ನಿಡಬಾರದು.

ಮಾತಾ ಪಿತಾ ಬಾನ್ಧವಾನಾಂ ವರಿಷ್ಠೌ
ಭಾರ್ಯಾ ಜರಾ ಬೀಜಮಾತ್ರಂ ತು ಪುತ್ರಃ ।
ಭ್ರಾತಾ ಶತ್ರುಃ ಕ್ಲಿನ್ನಪಾಣಿರ್ವಯಸ್ಯ
ಆತ್ಮಾ ಹ್ಯೇಕಃ ಸುಖದುಃಖಸ್ಯ ಭೋಕ್ತಾ ॥೩೦॥

ತಾಯಿ-ತಂದೆಗಳು ಬಂಧುವರ್ಗದಲ್ಲಿಯೇ ಶ್ರೇಷ್ಠರಾದವರು. ಆದುದರಿಂದ ಉಪಚಾರಕ್ಕೆ ಅರ್ಹರಾದವರು. ಭಾರ್ಯೆಯು ಜರಾಸ್ವರೂಪಳು. (ಪುರುಷನ ವೀರ್ಯವನ್ನಪಹರಿಸಿ ಮುಪ್ಪನ್ನುಂಟುಮಾಡುವವಳು.) ಮಗನು ವಂಶೋದ್ಧಾರಕ್ಕೆ ಬೀಜಮಾತ್ರನಾಗಿರುತ್ತಾನೆ. ಅಣ್ಣ-ತಮ್ಮಂದಿರು ಯಾವಾಗಲೂ ಶತ್ರುಗಳೇ ಸರಿ. ಅವರಿಗೆ ಆಸ್ತಿಯನ್ನು ಹಂಚಿಕೊಳ್ಳುವುದರಲ್ಲಿಯೇ ಹೆಚ್ಚಿನ ಆಸಕ್ತಿಯಿರುತ್ತದೆ. ವಯಸ್ಯನು (ಮಿತ್ರನು) ಒದ್ದೆಯಾದ ಕೈಯುಳ್ಳವನು ; ಸ್ವಾರ್ಥಸಾಧಕನು. ಕೈಗೇನಾದರೂ ಸಿಕ್ಕುತ್ತಿದ್ದರೆ ಅವನೂ ಬಂದು ಹೋಗುತ್ತಿರುತ್ತಾನೆ. ಕೈ ಒಣಗಿದರೆ ದೂರಸರಿಯುತ್ತಾನೆ. ಆದುದರಿಂದ ಸುಖವನ್ನಾಗಲೀ–ದುಃಖವನ್ನಾಗಲೀ ಉಪಭೋಗಿಸುವವನು ತಾನೊಬ್ಬನೇ.

ಅನ್ಯೋನ್ಯಕೃತವೈರಾಣಾಂ ನ ಸಂಧಿರುಪಪದ್ಯತೇ ।
ಸ ಚ ಹೇತುರತಿಕ್ರಾನ್ತೋ ಯದರ್ಥಮಹಮಾವಸಮ್ ॥೩೧॥

ಪರಸ್ಪರ ಬದ್ಧವೈರಿಗಳಲ್ಲಿ ಸಂಧಿಯು ಉಚಿತವೆನಿಸುವುದಿಲ್ಲ. ನಾನು ಯಾವ ಕಾರಣದಿಂದ ನಿನ್ನ ಅರಮನೆಯಲ್ಲಿ ವಾಸಮಾಡಿಕೊಂಡಿದ್ದೆನೋ–ಆ ಕಾರಣವು ಕಳೆದುಹೋಯಿತು. ಪುನಃ ನಿನ್ನ ಅರಮನೆಯಲ್ಲಿ ವಾಸವಾಗಿರಲು ನನಗೆ ಯಾವ ಕಾರಣವೂ ಇಲ್ಲ.

ಪೂಜಿತಸ್ಯಾರ್ಥಮಾನಾಭ್ಯಾಂ ಜನ್ತೋಃ ಪೂರ್ವಾಪಕಾರಿಣಃ ।
ಮನೋ ಭವತ್ಯವಿಶ್ವಸ್ತಂ ಕರ್ಮ ತ್ರಾಸಯತೇಽಬಲಾನ್ ॥೩೨॥

ಹಿಂದೆ ಅಪಕಾರಮಾಡಿದ ಪ್ರಾಣಿಯೊಂದಕ್ಕೆ ದಾನ-ಮಾನಾದಿಗಳನ್ನಿತ್ತು ಗೌರವಿಸಿದರೂ ಅಪಕಾರಮಾಡಿದ ಆ ಪ್ರಾಣಿಯ ಮನಸ್ಸು ಅವಿಶ್ವಾಸದಲ್ಲಿಯೇ ನೆಲೆಸಿರುತ್ತದೆ. ಮಾಡುವ ಮರ್ಯಾದೆಗಳು ತೋರಿಕೆಗಾಗಿಯೇ

ಇರಬಹುದೋ ಎಂದು ಆ ಪ್ರಾಣಿಯು ಭಾವಿಸುತ್ತದೆ. ಅಪರಾಧವನ್ನು ಕ್ಷಮಿಸಿರುವುದಾಗಿ ಹೇಳಿದರೂ ಅಪರಾಧಿಯ ಮನಸ್ಸು ಸ್ವಸ್ಥವಾಗಿರುವುದಿಲ್ಲ. ಮಾನ-ದಾನಾದಿಕರ್ಮಗಳು ಅಬಲರಾದವರನ್ನು ಭಯಗೊಳಿಸುತ್ತವೆ.

ಪೂರ್ವಂ ಸಮ್ಮಾನನಾ ಯತ್ರ ಪಶ್ಚಾಚ್ಚೈವ ವಿಮಾನನಾ ।
ಜಹ್ಯಾತ್ತತ್ಸತ್ತ್ವವಾನ್ಸ್ಥಾನಂ ಶತ್ರೋಃ ಸಮ್ಮಾನಿತೋಽಪಿ ಸನ್ ॥೩೩॥

ಮೊದಲು ಎಲ್ಲಿ ಸಮ್ಮಾನವಿದ್ದು ಅನಂತರದಲ್ಲಿ ಅಪಮಾನವಾಗು ವುದೋ–ಅಂತಹ ಸ್ಥಾನವನ್ನು ಸತ್ತ್ವಸಂಪನ್ನನಾದವನು ಕೂಡಲೇ ತ್ಯಜಿಸ ಬೇಕು. ಒಂದು ವೇಳೆ ಅಪಮಾನಗೊಳಿಸಿದ ಶತ್ರುವೇ ಪುನಃ ಸಮ್ಮಾನಿಸಿ ದರೂ ಒಮ್ಮೆ ಅವಮಾನಿತನಾದವನು ಪುನಃ ಅಲ್ಲಿರಬಾರದು.

ಉಷಿತಾಸ್ಮಿ ತವಾಗಾರೇ ದೀರ್ಘಕಾಲಂ ಸಮರ್ಚಿತಾ ।
ತದಿದಂ ವೈರಮುತ್ಪನ್ನಂ ಸುಖಮಾಶು ವ್ರಜಾಮ್ಯಹಮ್ ॥೩೪॥

ಮಹಾರಾಜ! ನಾನು ನಿನ್ನ ಅರಮನೆಯಲ್ಲಿ ಅತ್ಯಂತವಾಗಿ ಆದೃತಳಾಗಿ ಬಹಳ ಕಾಲದಿಂದಲೂ ವಾಸಮಾಡಿಕೊಂಡಿದ್ದೆನು. ಕಾಲಕರ್ಮ ಸಂಯೋಗದಿಂದಾಗಿ ನಮ್ಮಿಬ್ಬರಲ್ಲಿ ಈಗ ಪರಸ್ಪರವೈರಭಾವವು ಹುಟ್ಟಿ ಕೊಂಡಿದೆ. ಆದುದರಿಂದ ನಾನು ಬಹಳ ಬೇಗ ಸುಖದಿಂದ ಪ್ರಯಾಣ ಮಾಡುತ್ತೇನೆ. (ಬಹಳ ಬೇಗ ಇಲ್ಲಿಂದ ಹೊರಟರೆ ಸುಖವಾಗಿರಬಲ್ಲೆನು.)"

ಬ್ರಹ್ಮದತ್ತನು ಪುನಃ ಪೂಜನಿಯನ್ನು ಸಮಾಧಾನಗೊಳಿಸಲು ಪ್ರಯತ್ನಿಸುತ್ತಾ ಹೇಳಿದನು :

ಯಃ ಕೃತೇ ಪ್ರತಿಕುರ್ಯಾದ್ವೈ ನ ಸ ತತ್ರಾಪರಾಧ್ನುಯಾತ್ ।
ಅನೃಣಸ್ತೇನ ಭವತಿ ವಸ ಪೂಜನಿ ಮಾ ಗಮಃ ॥೩೫॥

"ಪೂಜನಿ! ಒಬ್ಬನು-ತನಗೆ ಅಪರಾಧಮಾಡಿರುವ ಮತ್ತೊಬ್ಬನಿಗೆ ಪ್ರತಿಮಾಡಿದರೆ–ಅವನು ಅಪರಾಧವನ್ನೇ ಮಾಡಿದಂತಾಗುವುದಿಲ್ಲ. ಹೀಗೆ ಮಾಡುವುದರಿಂದ ಮೊದಲನೆಯ ಅಪರಾಧಿಯು ಋಣಮುಕ್ತನಾಗುತ್ತಾನೆ. (ನೀನು ನನ್ನ ಮಗನ ಕಣ್ಣುಗಳನ್ನು ಅಪಹರಿಸಿದುದರಿಂದ ನನ್ನ ಮಗನು ನಿನ್ನ ಮಗನನ್ನು ಕೊಂದ ಅಪರಾಧದಿಂದ ವಿಮುಕ್ತಿಯನ್ನು ಹೊಂದಿದ್ದಾನೆ. ಆದುದರಿಂದ ನಿನ್ನ ಮನಸ್ಸಿನಲ್ಲಾಗಲೀ ನನ್ನ ಮನಸ್ಸಿನಲ್ಲಾಗಲೀ ವೈರಭಾವವು

ಉಳಿದುಕೊಳ್ಳಲು ಯಾವ ಕಾರಣವೂ ಇಲ್ಲ.) ನೀನೆಲ್ಲಿಗೂ ಹೋಗಬೇಡ; ಇಲ್ಲಿಯೇ ಇದ್ದುಬಿಡು."

ಪೂಜನಿಯು ಹೇಳುತ್ತಾಳೆ :

ನ ಕೃತಸ್ಯ ತು ಕರ್ತುಶ್ಚ ಸಖ್ಯಂ ಸಂಧೀಯತೇ ಪುನಃ ।
ಹೃದಯಂ ತತ್ರ ಜಾನಾತಿ ಕರ್ತುಶ್ಚೈವ ಕೃತಸ್ಯ ಚ ॥೩೬॥

"ಮಹಾರಾಜ! ನೀನು ಹೇಳುವುದು ತಾರ್ಕಿಕವಾದ ಸಿದ್ಧಾಂತವೇ ಹೊರತು ಸ್ವಭಾವಸಿದ್ಧವಾದ ಅನುಭವದ ಮಾತಲ್ಲ. ಅಪಕಾರಮಾಡಿದವನಿಗೂ–ಅಪಕಾರವನ್ನು ಹೊಂದಿದವನಿಗೂ ಪುನಃ ಸಖ್ಯವೆಂಬುದೇ ಸಂಭವಿಸುವುದಿಲ್ಲ. ಅಪಕಾರಮಾಡಿದವನ ಮತ್ತು ಅಪಕಾರಮಾಡಿಸಿಕೊಂಡವನ ಹೃದಯಗಳು ಅದನ್ನು ಚೆನ್ನಾಗಿ ತಿಳಿದಿರುತ್ತವೆ. ಇನ್ನೊಬ್ಬನು ತನಗೆ ಮಾಡಿದ ಅಪರಾಧವನ್ನಾಗಲೀ ತಾನು ಇನ್ನೊಬ್ಬನಿಗೆ ಮಾಡಿದ ಅಪರಾಧವನ್ನಾಗಲೀ ಅವರಲ್ಲಿ ಅಂತರ್ಗತವಾಗಿರುವ ಹೃದಯಗಳು ಎಂದೂ ಮರೆಯುವುದಿಲ್ಲ. ಆದುದರಿಂದ ಆ ಇಬ್ಬರ ಪುನರ್ಮಿಲನವು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ."

ಅದಕ್ಕೆ ಬ್ರಹ್ಮದತ್ತನು ಹೇಳುತ್ತಾನೆ :

ಕೃತಸ್ಯ ಚೈವ ಕರ್ತುಶ್ಚ ಸಖ್ಯಂ ಸಂಧೀಯತೇ ಪುನಃ ।
ವೈರಸ್ಯೋಪಶಮೋ ದೃಷ್ಟಃ ಪಾಪಂ ನೋಪಾಶ್ನುತೇ ಪುನಃ ॥೩೭॥

"ಪೂಜನಿ! ನನ್ನ ಅಭಿಪ್ರಾಯದಂತೆ ಅಪಕಾರಮಾಡಿದವನಿಗೂ ಪ್ರತಿಯಾಗಿ ಅಪಕಾರಮಾಡಿಸಿಕೊಂಡವನಿಗೂ ಪುನಃ ಸಖ್ಯವುಂಟಾಗಿಯೇ ತೀರುತ್ತದೆ. ಹೇಗೆಂದರೆ : ಅಪರಾಧಕ್ಕೆ ಗುರಿಯಾದವನು ಪ್ರತೀಕಾರವನ್ನು ಮಾಡುವುದರಿಂದ ಮೊದಲೇ ಅಪರಾಧಮಾಡಿಸಿಕೊಂಡವನ ವೈರವು ಶಮನವಾಗುತ್ತದೆ. ಎರಡನೆಯದಾಗಿ ಮೊದಲು ಅಪರಾಧಮಾಡಿದವನು ಒಡನೆಯೇ ಶಿಕ್ಷೆಯನ್ನು ಅನುಭವಿಸುವುದರಿಂದ ಅವನು ಮಾಡಿದ ಅಪರಾಧದ ಪಾಪದ ಫಲವನ್ನು ಪುನಃ ಅನುಭವಿಸಬೇಕಾಗುವುದಿಲ್ಲ. ಈ ಎರಡು ಕಾರಣಗಳಿಂದ ಅಪಕಾರಮಾಡಿದವನ ಮತ್ತು ಅಪಕಾರಮಾಡಿಸಿ ಕೊಂಡವನ ನಡುವೆ ಸಖ್ಯವು ಏರ್ಪಡುತ್ತದೆ."

ಅದಕ್ಕುತ್ತರವಾಗಿ ಪಕ್ಷಿಯು ಹೇಳುತ್ತದೆ :

ನಾಸ್ತಿ ವೈರಮತಿಕ್ರಾನ್ತಂ ಸಾನ್ತ್ವಿತೋಽಸ್ಮೀತಿ ನಾಶ್ವಸೇತ್ ।
ವಿಶ್ವಾಸಾದ್ವಧ್ಯತೇ ಲೋಕೇ ತಸ್ಮಾಚ್ಛ್ರೇಯೋಽಪ್ಯದರ್ಶನಮ್ ॥೩೮॥

"ಮಹಾರಾಜ! ನೀನು ಹೇಳುವಂತೆ ಹುಟ್ಟಿದ ವೈರವು ಹೃದಯ ವನ್ನು ಬಿಟ್ಟುಹೋಗುವುದಿಲ್ಲ. ಹುಟ್ಟಿದ ವೈರವು 'ಹೋಯಿತು'–ಎಂಬುದೇ ಇಲ್ಲ. ವೈರವು ಅಷ್ಟು ಸುಲಭವಾಗಿ ಹೋಗುವುದೂ ಇಲ್ಲ. 'ಶತ್ರುವಿನಿಂದ ನಾನು ಸಂತೈಸಲ್ಪಟ್ಟೆನು'–ಎಂದು ಭಾವಿಸಿಕೊಂಡು ಶತ್ರುವಿನ ವಿಷಯದಲ್ಲಿ ವಿಶ್ವಾಸವನ್ನಿಡಬಾರದು. ಹೀಗೆ ವಿಶ್ವಾಸವನ್ನಿಡುವುದರಿಂದಲೇ ಲೋಕದಲ್ಲಿ ಜನರು ವಧಿಸಲ್ಪಡುತ್ತಾರೆ. (ಶತ್ರುವಶರಾಗಿ ಮರಣ ಹೊಂದುತ್ತಾರೆ.) ಈ ಕಾರಣದಿಂದ ಪುನಃ ನಾನು ನಿನ್ನ ಮುಖದರ್ಶನ ಮಾಡದಿರುವುದೇ (ನಿನಗೆ ಕಾಣದಂತಾಗುವುದೇ) ನನಗೆ ಶ್ರೇಯಸ್ಕರವೆಂದು ಭಾವಿಸುತ್ತೇನೆ.

ತರಸಾ ಯೇ ನ ಶಕ್ಯನ್ತೇ ಶಸ್ತ್ರೈಃ ಸುನಿಶಿತೈರಪಿ ।
ಸಾಮ್ನಾ ತೇಽಪಿ ನಿಗೃಹ್ಯನ್ತೇ ಗಜಾ ಇವ ಕರೇಣುಭಿಃ ॥೩೯॥

ಪಳಗಿದ ಹೆಣ್ಣಾನೆಗಳ ಸಹಾಯದಿಂದ ಕಾಡಿನಲ್ಲಿರುವ ಮದಗಜ ಗಳನ್ನು ಬಂಧಿಸುವಂತೆ–ಸುನಿಶಿತವಾದ ಶಸ್ತ್ರಗಳಿಂದ ವಶಮಾಡಿಕೊಳ್ಳಲು ಸಾಧ್ಯವಾಗದೇ ಇರುವವರನ್ನೂ ಸಾಂತ್ವನದ ಮಾತುಗಳಿಂದ ಬಹಳ ಬೇಗ ವಶಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. (ಆದುದರಿಂದ ಸವಿಮಾತುಗಳಿಗೆ ಬೆರಗಾಗಿ ಶತ್ರುವಿನ ವಿಷಯದಲ್ಲಿ ನಂಬಿಕೆಯನ್ನಿಡಬಾರದು.")

ಅದಕ್ಕೆ ರಾಜನು ಹೇಳುತ್ತಾನೆ :

ಸಂವಾಸಾಜ್ಜಾಯತೇ ಸ್ನೇಹೋ ಜೀವಿತಾನ್ತಕರೇಷ್ವಪಿ ।
ಅನ್ಯೋನ್ಯಸ್ಯ ಚ ವಿಶ್ವಾಸಃ ಶ್ವಪಚೇನ ಶುನೋ ಯಥಾ ॥೪೦॥

"ಪೂಜನಿ! ನಿರಂತರವಾದ ಸಹವಾಸದಿಂದ ಸ್ನೇಹವು ಬೆಳೆಯು ತ್ತದೆ. ಶ್ವಪಚನೊಡನಿರುವ (ನಾಯಿಯ ಮಾಂಸವನ್ನು ತಿನ್ನುವವನೊಡ ನಿರುವ) ನಾಯಿಗೂ-ಶ್ವಪಚನಿಗೂ ಕಾಲಾನುಕ್ರಮವಾಗಿ ಸ್ನೇಹವು ಬೆಳೆಯುವಂತೆ–ಕೊಲೆಪಾತಕರಲ್ಲಿಯೂ ಕೂಡ ಪರಸ್ಪರ ಸಹವಾಸದಿಂದ

ಸ್ನೇಹವು ಬೆಳೆಯುತ್ತದೆ. (ಆದುದರಿಂದ ನಾವಿಬ್ಬರೂ ಮೊದಲಿನಂತೆಯೇ ಜೊತೆಯಲ್ಲಿಯೇ ಇದ್ದರೆ ವೈರವು ಹೊರಟುಹೋಗಿ ನಮ್ಮಿಬ್ಬರ ನಡುವೆ ಸ್ನೇಹವೇ ಬೆಳೆಯುತ್ತದೆ. ಸ್ನೇಹವು ಬೆಳೆಯಲು ಸಂಪರ್ಕವು ಅತಿಮುಖ್ಯ ವಾದುದು.)

ಅನ್ಯೋನ್ಯಕೃತವೈರಾಣಾಂ ಸಂವಾಸಾನ್ಮೃದುತಾಂ ಗತಮ್ ।
ನೈವ ತಿಷ್ಠತಿ ತದ್ವೈರಂ ಪುಷ್ಕರಸ್ಥಮಿವೋದಕಮ್ ॥೪೧॥

ನಮ್ಮಿಬ್ಬರಲ್ಲಿ ಪರಸ್ಪರಾಪರಾಧಗಳಿಂದ ಹುಟ್ಟಿರುವ ವೈರವು ನಾವಿಬ್ಬರೂ ಜೊತೆಯಲ್ಲಿಯೇ ಇರುವುದನ್ನು ಮುಂದುವರಿಸಿದರೆ ಮಾರ್ದವವನ್ನು ಹೊಂದುತ್ತದೆ. ನಮ್ಮಿಬ್ಬರ ಹೃದಯದಲ್ಲಿರುವ ವೈರವು ಸ್ನೇಹವಾಗಿ ಪರಿವರ್ತನೆಯನ್ನು ಹೊಂದುತ್ತದೆ. ಕಮಲದೆಲೆಯ ಮೇಲಿರುವ ನೀರು ಸ್ಥಿರವಾಗಿ ನಿಲ್ಲದಂತೆ–ಆ ವೈರವು ನಮ್ಮ ಹೃದಯಗಳಲ್ಲಿ ಸ್ಥಿರವಾಗಿ ಉಳಿದುಕೊಳ್ಳುವುದಿಲ್ಲ."

ಅದಕ್ಕೆ ಕಲವಿಂಕವು ಉತ್ತರಿಸುತ್ತಾ ಹೇಳುತ್ತದೆ :

ವೈರಂ ಪಞ್ಚಸಮುತ್ಥಾನಂ ತಚ್ಚ ಬುಧ್ಯನ್ತಿ ಪಣ್ಡಿತಾಃ ।
ಸ್ತ್ರೀಕೃತಂ ವಾಸ್ತುಜಂ ವಾಗ್ಜಂ ಸಸಾಪತ್ನಾಪರಾಧಜಮ್ ॥೪೨॥

"ಮಹಾರಾಜ! ವೈರವು ಐದು ಕಾರಣಗಳಿಂದ ಹುಟ್ಟಿಕೊಳ್ಳುತ್ತದೆ. ಈ ವಿಷಯವನ್ನು ಪಂಡಿತರು ತಿಳಿದುಕೊಂಡಿರುತ್ತಾರೆ. 1) ಸ್ತ್ರೀಯರ ಸಲುವಾಗಿ, 2) ಮನೆ ಅಥವಾ ಭೂಮಿಯ ಸಲುವಾಗಿ, 3) ಕಠೋರ ವಾದ ಮಾತಿನ ಸಲುವಾಗಿ, 4) ಜಾತಿಯ ಸಂಬಂಧವಾಗಿ ಮತ್ತು 5) ಅಪರಾಧದ ಕಾರಣದಿಂದಾಗಿ ವೈರವು ಹುಟ್ಟುತ್ತದೆ. (ಈ ಐದು ವಿಧವಾದ ವೈರಕ್ಕೂ ವ್ಯಾಖ್ಯಾನಕಾರರು ಉದಾಹರಣೆಗಳನ್ನು ಕೊಟ್ಟಿರುತ್ತಾರೆ. **ಸ್ತ್ರೀಕೃತಂ = ಕೃಷ್ಣ–ಶಿಶುಪಾಲಯೋಃ** – ಶ್ರೀಕೃಷ್ಣ-ಶಿಶುಪಾಲರಿಗೆ ಸ್ತ್ರೀ (ರುಕ್ಮಿಣಿಯ) ಸಂಬಂಧವಾಗಿ ವೈರವು ಹುಟ್ಟಿತೆಂದು ತಿಳಿಸಿರುತ್ತಾರೆ. **ವಾಸ್ತುಜಂ = ವಾಸ್ತು ಗೃಹಾದಿಕಂ ಸ್ಥಾನಂ ತಜ್ಜಂ ಕೌರವ–ಪಾಣ್ಡವಾನಾಂ ವೈರಂ** = ಪಾಂಡವ-ಕೌರವರ ವೈರವು ವಾಸ್ತು-ಗೃಹಾದಿಗಳಿಗೆ ಸಂಬಂಧಿ ಸಿದುದು. **ವಾಗ್ಜಂ = ದ್ರೋಣ–ದ್ರುಪದಯೋಃ** – ದ್ರೋಣ-ದ್ರುಪದ

ರಿಗೆ ಕಠೋರವಾದ ಮಾತಿನ ಕಾರಣದಿಂದ ವೈರವುಂಟಾಯಿತು. ಸಾಪತ್ನಂ= ಜಾತಿವೈರಂ ಮೂಷಿಕ ಮಾರ್ಜಾರಯೋಃ –ಬೆಕ್ಕು-ಇಲಿಗಳಿಗೆ ಇರುವ ವೈರವು ಜಾತಿಗೆ ಸಂಬಂಧಿಸಿದುದು. ಅಪರಾಧಜಂ = ಅಪರಾಧದಿಂದ ಹುಟ್ಟಿದುದು. ಪ್ರಸಕ್ತಸಂದರ್ಭದಲ್ಲಿ ನನಗೂ ಮತ್ತು ನಿನಗೂ ಉಂಟಾಗಿರುವ ವೈರವು ಅಪರಾಧದಿಂದ ಹುಟ್ಟಿರುವುದು. ಹೀಗೆ ಐದು ಕಾರಣಗಳಿಂದ ವೈರವು ಉತ್ಪತ್ತಿಯಾಗುತ್ತದೆ.)

ತತ್ರ ದಾತಾ ನ ಹನ್ತವ್ಯಃ ಕ್ಷತ್ರಿಯೇಣ ವಿಶೇಷತಃ ।
ಪ್ರಕಾಶಂ ವಾಪ್ರಕಾಶಂ ವಾ ಬುದ್ಧ್ವಾ ದೋಷಬಲಾಬಲಮ್ ॥೪೩॥

ಪ್ರತ್ಯಕ್ಷವಾಗಿಯೇ ಆಗಲೀ, ಪರೋಕ್ಷವಾಗಿಯೇ ಆಗಲೀ–ದಾನಮಾಡಿದವನನ್ನು ಅಥವಾ ಉಪಕಾರಮಾಡಿದವನನ್ನು ಕೊಲ್ಲಬಾರದು. ಅದರಲ್ಲಿಯೂ ವಿಶೇಷವಾಗಿ ಕ್ಷತ್ರಿಯನಾದವನು ಉಪಕಾರಮಾಡಿದವನನ್ನು ಖಂಡಿತವಾಗಿಯೂ ಹಿಂಸೆಮಾಡಬಾರದು. ಅಪರಾಧದ ಮಹತ್ವವನ್ನು ಅಥವಾ ಲಘುತ್ವವನ್ನು ಬುದ್ಧಿಯಿಂದ ಪರಿಶೀಲಿಸಿದನಂತರವೇ ಕಾರ್ಯವನ್ನು ಮಾಡಬೇಕು.

ಕೃತವೈರೇ ನ ವಿಶ್ವಾಸಃ ಕಾರ್ಯಸ್ತ್ವಿಹ ಸುಹೃದ್ಯಪಿ ।
ಛನ್ನಂ ಸಂತಿಷ್ಠತೇ ವೈರಂ ಗೂಢೋಽಗ್ನಿರಿವ ದಾರುಷು ॥೪೪॥

ವೈರವು ಹುಟ್ಟಿದನಂತರ ವೈರಿಯು ಹಿಂದೆ ಸುಹೃದನೇ ಆಗಿದ್ದರೂ ಅವನಲ್ಲಿ ವಿಶ್ವಾಸವನ್ನಿಡಬಾರದು. ಕಟ್ಟಿಗೆಗಳಲ್ಲಿ ನಿಗೂಢವಾಗಿರುವ ಅಗ್ನಿಯಂತೆ–ವೈರವು ಹೃದಯದಾಳದಲ್ಲಿ ಅಡಗಿಕೊಂಡಿರುತ್ತದೆ.

ನ ವಿತ್ತೇನ ನ ಪಾರುಷ್ಯೈರ್ನ ಸಾನ್ತ್ವೇನ ನ ಚ ಶ್ರುತೈಃ ।
ಕೋಪಾಗ್ನಿಃ ಶಾಮ್ಯತೇ ರಾಜಂಸ್ತೋಯಾಗ್ನಿರಿವ ಸಾಗರೇ ॥೪೫॥

ಸಮುದ್ರದಲ್ಲಿರುವ ಬಡಬಾಗ್ನಿಯು ಯಾವಾಗಲೂ ನಂದಿಹೋಗದೇ ಇರುವಂತೆ–ಕ್ರೋಧಾಗ್ನಿಯು ವಿತ್ತದಿಂದಾಗಲೀ (ಹಣದ ದಾನದಿಂದಾಗಲೀ), ಪಾರುಷ್ಯದಿಂದಾಗಲೀ (ಕ್ರೌರ್ಯವನ್ನು ತೋರಿಸುವುದರಿಂದಾಗಲೀ), ಸಂತೈಸುವುದರಿಂದಾಗಲೀ, ಶಾಸ್ತ್ರಜ್ಞಾನದಿಂದಾಗಲೀ–ಶಾಂತವಾಗುವುದಿಲ್ಲ.

ನ ಹಿ ವೈರಾಗ್ನಿರುದ್ಭೂತಃ ಕರ್ಮ ಚಾಪ್ಯಪರಾಧಜಮ್ ।
ಶಾಮ್ಯತ್ಯದಗ್ಧ್ವಾ ನೃಪತೇ ವಿನಾ ಹ್ಯೇಕತರಕ್ಷಯಾತ್ ॥೪೬॥

ಇಬ್ಬರ ಹೃದಯಗಳಲ್ಲಿಯೂ ಹುಟ್ಟಿರುವ ವೈರಾಗ್ನಿಯು–ಒಬ್ಬನನ್ನು ಸುಡದೇ ಉಪಶಮನಹೊಂದುವುದಿಲ್ಲ. ಹಾಗೆಯೇ ಅಪರಾಧದಿಂದ ಹುಟ್ಟಿದ ಕರ್ಮವೂ ಕೂಡ ಒಬ್ಬನು ವಿನಾಶಹೊಂದಿದ ಹೊರತು ಪೂರ್ಣವಾಗಿ ಶಾಂತಿಗೊಳ್ಳುವುದಿಲ್ಲ.

ಸತ್ಕೃತಸ್ಯಾರ್ಥಮಾನಾಭ್ಯಾಂ ತತ್ರ ಪೂರ್ವಾಪಕಾರಿಣಃ ।
ನಾದೇಯೋಽಮಿತ್ರವಿಶ್ವಾಸಃ ಕರ್ಮ ತ್ರಾಸಯತೇಽಬಲಾನ್ ॥೪೭॥

ಹಿಂದೆ ಅಪಕಾರಮಾಡಿದವನು–ಅಪಕಾರವನ್ನು ಹೊಂದಿದವನಿಂದ ಅರ್ಥದಿಂದಲೂ ಮರ್ಯಾದೆಯಿಂದಲೂ ಸತ್ಕಾರವನ್ನು ಹೊಂದಿದರೂ (ಅಪರಾಧಕ್ಕೆ ಪಾತ್ರನಾದವನು ಸತ್ಕಾರಮಾಡಿದರೂ)–ಅವನನ್ನು ಮಿತ್ರನೆಂದು ಭಾವಿಸಬಾರದು. ಸತ್ಕಾರವು ತೋರಿಕೆಗೆ ಮಾತ್ರವೇ ಆಗಿರುತ್ತದೆ. ಅಪರಾಧಕ್ಕೆ ಈಡಾದವನು ನಿಜವಾದ ಶತ್ರುವೇ ಆಗಿರುತ್ತಾನೆ. ಆದುದರಿಂದ ಅಂತಹವನ ವಿಷಯದಲ್ಲಿ ಖಂಡಿತವಾಗಿಯೂ ವಿಶ್ವಾಸವನ್ನಿಡಬಾರದು. ಅದಕ್ಕಿಂತಲೂ ವಿಶೇಷವಾಗಿ ಮಾಡಿದ ಅಪರಾಧವು ದುರ್ಬಲರನ್ನು ಭಯಗೊಳಿಸುತ್ತಿರುತ್ತದೆ.

ನೈವಾಪಕಾರೇ ಕಸ್ಮಿಂಶ್ಚಿದಹಂ ತ್ವಯಿ ತಥಾ ಭವಾನ್ ।
ಉಷಿತಾಸ್ಮಿ ಗೃಹೇಽಹಂ ತೇ ನೇದಾನೀಂ ವಿಶ್ವಸಾಮ್ಯಹಮ್ ॥೪೮॥

ಇದುವರೆಗೂ ನನ್ನ ವಿಷಯದಲ್ಲಿ ನೀನು ಯಾವ ಅಪಕಾರವನ್ನೂ ಮಾಡಿರಲಿಲ್ಲ ; ನಿನ್ನ ವಿಷಯದಲ್ಲಿ ನಾನೂ ಯಾವ ಅಪಕಾರವನ್ನೂ ಮಾಡಿರಲಿಲ್ಲ. ಈ ಕಾರಣದಿಂದಲೇ ನಾನು ನಿನ್ನ ಮನೆಯಲ್ಲಿ ವಾಸಮಾಡಿಕೊಂಡಿದ್ದೆನು. ಆದರೆ ಈಗ ಮಾತ್ರ ನಾನು ನಿನ್ನಲ್ಲಿ ವಿಶ್ವಾಸವನ್ನಿಡುವುದಿಲ್ಲ."

ಬ್ರಹ್ಮದತ್ತನು ಹೇಳುತ್ತಾನೆ :

ಕಾಲೇನ ಕ್ರಿಯತೇ ಕಾರ್ಯಂ ತಥೈವ ವಿವಿಧಾಃ ಕ್ರಿಯಾಃ ।
ಕಾಲೇನೈತೇ ಪ್ರವರ್ತನ್ತೇ ಕಃ ಕಸ್ಯೇಹಾಪರಾಧ್ಯತಿ ॥೪೯॥

“ಪೂಜನಿ! ಕಾಲವೇ ಎಲ್ಲ ಕಾರ್ಯಗಳನ್ನೂ ಮಾಡುತ್ತದೆ. ವಿಧ-ವಿಧವಾದ ಕಾರ್ಯಗಳೆಲ್ಲವೂ ಕಾಲದ ಪ್ರಭಾವದಿಂದಲೇ ಪ್ರಾರಂಭಿಸಲ್ಪಡುತ್ತವೆ. ಕಾಲದ ಪ್ರಭಾವದಿಂದಲೇ ನನ್ನ ಮಗನು ನಿನ್ನ ಮಗನನ್ನು ಸಂಹರಿಸಿದನು. ನೀನೂ ನನ್ನ ಮಗನ ಕಣ್ಣುಗಳನ್ನು ಕಿತ್ತುಹಾಕಿರುವೆ. ಎಲ್ಲ ಕಾರ್ಯಗಳೂ ಕಾಲದ ಪ್ರಭಾವದಿಂದಲೇ ನಡೆಯುತ್ತಿರುವಾಗ ಯಾರು ಯಾರಿಗೆ ಅಪರಾಧ ಮಾಡುತ್ತಾರೆ?

ತುಲ್ಯಂ ಚೋಭೇ ಪ್ರವರ್ತೇತೇ ಮರಣಂ ಜನ್ಮ ಚೈವ ಹ ।
ಕಾರ್ಯತೇ ಚೈವ ಕಾಲೇನ ತನ್ನಿಮಿತ್ತಂ ನ ಜೀವತಿ ॥೫೦॥

ಹುಟ್ಟು-ಸಾವುಗಳು ಜೊತೆಗೂಡಿಯೇ ನಡೆಯುತ್ತಿರುತ್ತವೆ. ಹುಟ್ಟು-ಸಾವುಗಳಿಗೆ ಕಾಲವೇ ಕಾರಣವಾಗಿರುತ್ತದೆ. ಕಾಲವನ್ನೇ ನಿಮಿತ್ತವನ್ನಾಗಿಟ್ಟುಕೊಂಡು ಪ್ರಾಣಿಗಳೂ ಮರಣಹೊಂದುತ್ತವೆ.

ವಧ್ಯನ್ತೇ ಯುಗಪತ್ಕೇಚಿದೇಕೈಕಸ್ಯ ನ ಚಾಪರೇ ।
ಕಾಲೋ ದಹತಿ ಭೂತಾನಿ ಸಮ್ಪ್ರಾಪ್ಯಾಗ್ನಿರಿವೇನ್ಧನಮ್ ॥೫೧॥

ಕೆಲವು ಸಮಯಗಳಲ್ಲಿ ಕೆಲವರು ಒಟ್ಟೊಟ್ಟಿಗೇ ಸಾಯುತ್ತಾರೆ. ಮತ್ತೆ ಕೆಲವು ಸಮಯಗಳಲ್ಲಿ ಒಬ್ಬೊಬ್ಬರೇ ಸಾಯುತ್ತಾರೆ. ಅನೇಕರು ದೀರ್ಘಕಾಲದವರೆಗೆ ಸಾಯುವುದೇ ಇಲ್ಲ. ಅಗ್ನಿಯು ಕಟ್ಟಿಗೆಯನ್ನು ಹೊಂದಿ ಅನುಕ್ರಮವಾಗಿ ದಹಿಸುವಂತೆ–ಕಾಲವೇ ಪ್ರಾಣಿಗಳನ್ನು ಅನುಕ್ರಮವಾಗಿ ದಹಿಸುತ್ತಿರುತ್ತದೆ.

ನಾಹಂ ಪ್ರಮಾಣಂ ನೈವ ತ್ವಮನ್ಯೋನ್ಯಂ ಕಾರಣಂ ಶುಭೇ ।
ಕಾಲೋ ನಿತ್ಯಮುಪಾದತ್ತೇ ಸುಖಂ ದುಃಖಂ ಚ ದೇಹಿನಾಮ್ ॥೫೨॥

ಶುಭಪ್ರದಳೇ! ಒಬ್ಬರಿಂದೊಬ್ಬರಿಗೆ ಆಗಿರುವ ಈ ಅಪರಾಧಗಳಲ್ಲಿ ನಿನಗಾದ ಅಪರಾಧಕ್ಕೆ ನಾನೂ ಕಾರಣನಲ್ಲ ; ನನಗಾದ ಅಪರಾಧಕ್ಕೆ ನೀನೂ ಕಾರಣಳಲ್ಲ. ಕಾಲವು ಪ್ರಾಣಿಗಳಿಗೆ ಅನುದಿನವೂ ದುಃಖವನ್ನಾಗಲೀ–ಸುಖವನ್ನಾಗಲೀ ಒದಗಿಸುತ್ತಲೇ ಇರುತ್ತದೆ. ಕಾಲಕ್ಕೆ ಅಧೀನರಾಗಿಯೇ ನಾವಿಂದು ದುಃಖವನ್ನೋ–ಸುಖವನ್ನೋ ಅನುಭವಿಸುತ್ತಿದ್ದೇವೆ.

ಏವಂ ವಸೇಹ ಸಸ್ನೇಹಾ ಯಥಾಕಾಮಮಹಿಂಸಿತಾ ।
ಯತ್ಕೃತಂ ತತ್ತು ಮೇ ಕ್ಷಾನ್ತಂ ತ್ವಂ ಚ ವೈ ಕ್ಷಮ ಪೂಜನಿ ॥೫೩॥

ನಡೆದುಹೋದುದೆಲ್ಲವೂ ಕಾಲದ ಪ್ರಭಾವವೆಂಬುದನ್ನು ಮನಗಂಡು ಮೊದಲಿನಂತೆಯೇ ಸ್ನೇಹಯುಕ್ತಳಾಗಿ ನನ್ನ ಅರಮನೆಯಲ್ಲಿ ವಾಸಮಾಡಿಕೊಂಡಿರು. ನನ್ನ ಆಶ್ರಯದಲ್ಲಿ ಯಾವ ವಿಧವಾದ ಹಿಂಸೆಗೂ ನೀನು ಗುರಿಯಾಗಲಾರೆ. ಸ್ವೇಚ್ಛೆಯಿಂದಲೇ ನೀನಿಲ್ಲಿರಬಹುದು. ನೀನೇನು ಅಪರಾಧ ಮಾಡಿರುವೆಯೋ ಆ ನಿನ್ನ ಅಪರಾಧವನ್ನು ನಾನು ಕ್ಷಮಿಸಿಬಿಟ್ಟಿದ್ದೇನೆ. ನಮ್ಮಿಂದಾಗಿರುವ ಅಪರಾಧವನ್ನು ನೀನೂ ಕ್ಷಮಿಸು.”

ಪೂಜನಿಯು ಹೇಳುತ್ತಾಳೆ :

ಯದಿ ಕಾಲಃ ಪ್ರಮಾಣಂ ತೇ ನ ವೈರಂ ಕಸ್ಯಚಿದ್ಭವೇತ್ ।
ಕಸ್ಮಾತ್ತ್ವಪಚಿತಿಂ ಯಾನ್ತಿ ಬಾನ್ಧವಾ ಬಾನ್ಧವೇ ಹತೇ ॥೫೪॥

“ಮಹಾರಾಜ! ನೀನು ಕಾಲವೇ ಎಲ್ಲಕ್ಕೂ ಕಾರಣವೆನ್ನುವುದಾದರೆ–ಯಾರೊಡನೆಯೂ ಯಾರಿಗೂ ವೈರವೇ ಉಂಟಾಗುತ್ತಿರಲಿಲ್ಲ. ಬಂಧುವೊಬ್ಬನು ಹತನಾದರೆ–ಹತನಾದವನ ಬಂಧುಗಳೇಕೆ ಪ್ರತೀಕಾರ ಮಾಡುತ್ತಾರೆ? ಕಾಲನ ಪ್ರೇರಣೆಯಿಂದಲೇ ನಮ್ಮ ಬಂಧುವು ಮತ್ತೊಬ್ಬನಿಂದ ಹತನಾದನೆಂದು ಸುಮ್ಮನಿರಬಹುದಾಗಿದ್ದಿತು. ಹಾಗೆ ಯಾರೂ ಮಾಡುವುದಿಲ್ಲ. ಬಂಧುಘಾತಕನನ್ನು ಸಂಹರಿಸುವವರೆಗೂ ಅವರ ಮನಸ್ಸಿಗೆ ಶಾಂತಿಯೇ ಇರುವುದಿಲ್ಲ. ಪ್ರತೀಕಾರಮಾಡಲು ಹೋಗಿ ಅವರೂ ವಿನಾಶ ಹೊಂದಬಹುದು. ಆದರೆ ಬಂಧುವಿನ ಮರಣವು ಕಾಲಚೋದಿತವೆಂದು ಭಾವಿಸಿ ಯಾರೇ ಆಗಲಿ ಪ್ರತೀಕಾರಮಾಡದೇ ಇರುವುದಿಲ್ಲ.

ಕಸ್ಮಾದ್ದೇವಾಸುರಾಃ ಪೂರ್ವಮನ್ಯೋನ್ಯಮಭಿಜಘ್ನಿರೇ ।
ಯದಿ ಕಾಲೇನ ನಿರ್ಯಾಣಂ ಸುಖಂ ದುಃಖಂ ಭವಾಭವೌ ॥೫೫॥

‘ಕಾಲನಿಂದಲೇ ಮೃತ್ಯುವು ಸಂಭವಿಸುತ್ತದೆ. ಕಾಲನಿಂದಲೇ ಪ್ರಾಣಿಗಳಿಗೆ ಸುಖ-ದುಃಖಗಳುಂಟಾಗುತ್ತವೆ. ಹುಟ್ಟುವುದೂ ಮತ್ತು ಸಾಯುವುದೂ ಕಾಲನ ಪ್ರಭಾವದಿಂದಲೇ’–ಎಂದಾಗಿದ್ದರೆ ಹಿಂದೆ ದೇವತೆಗಳೂ ಮತ್ತು ಅಸುರರೂ ಪರಸ್ಪರವಾಗಿ ಏಕೆ ಬಡಿದಾಡಿದರು?

ಭಿಷಜೋ ಭೈಷಜಂ ಕರ್ತುಂ ಕಸ್ಮಾದಿಚ್ಛನ್ತಿ ರೋಗಿಣಃ ।
ಯದಿ ಕಾಲೇನ ಪಚ್ಯನ್ತೇ ಭೇಷಜೈಃ ಕಿಂ ಪ್ರಯೋಜನಮ್ ॥೫೬॥

ವೈದ್ಯರು ರೋಗಿಗಳಿಗೆ ಚಿಕಿತ್ಸೆಮಾಡಲು ಏಕೆ ಇಚ್ಛಿಸುತ್ತಾರೆ? ಕಾಲಾನುಸಾರವಾಗಿ ಅಥವಾ ಕಾಲದ ಪ್ರಭಾವದಿಂದಲೇ ರೋಗವು ಬಂದಿರುವುದೆಂದು ಸುಮ್ಮನಿರಬಹುದಿತ್ತು. ವೈದ್ಯರ ಅವಶ್ಯಕತೆಯೇ ಇರಲಿಲ್ಲ. ಕಾಲವೇ ಎಲ್ಲವನ್ನೂ ಪರಿಣಾಮಗೊಳಿಸುತ್ತದೆ–ಎನ್ನುವುದಾದರೆ ಔಷಧಗಳಿಂದೇನು ಪ್ರಯೋಜನ? (ಕಾಲವೇ ಪ್ರಾಣಿಗಳಿಗೆ ರೋಗವನ್ನು ಬರಿಸುತ್ತದೆ ; ಕಾಲವೇ ರೋಗಗಳ ಮೂಲಕವಾಗಿ ಪ್ರಾಣಿಗಳಿಗೆ ಮರಣವನ್ನು ಹೊಂದಿಸುತ್ತದೆ–ಎಂಬುದನ್ನೇ ಪ್ರಮಾಣವೆನ್ನುವುದಾದರೆ ಪ್ರಪಂಚದಲ್ಲಿ ವೈದ್ಯರ ಅವಶ್ಯಕತೆಯೂ ಇಲ್ಲ–ಔಷಧಗಳ ಅವಶ್ಯಕತೆಯೂ ಇಲ್ಲ.)

ಪ್ರಲಾಪಃ ಸುಮಹಾನ್ಕಸ್ಮಾತ್ಕ್ರಿಯತೇ ಶೋಕಮೂರ್ಛಿತೈಃ ।
ಯದಿ ಕಾಲಃ ಪ್ರಮಾಣಂ ತೇ ಕಸ್ಮಾದ್ಧರ್ಮೋಽಸ್ತಿ ಕರ್ತೃಷು ॥೫೭॥

ಕಾಲನೇ ಎಲ್ಲಕ್ಕೂ ಕಾರಣನೆನ್ನುವುದಾದರೆ–ಶೋಕಾಭಿಭೂತರಾದವರು ಏಕೆ ಗಟ್ಟಿಯಾಗಿ ಪ್ರಲಾಪಮಾಡುತ್ತಾರೆ? ಸಕಲಪ್ರಾಣಿಗಳೂ ಮಾಡುವ ಸಕಲಕರ್ಮಗಳಿಗೂ ಕಾಲವೇ ಕಾರಣವೆನ್ನುವುದಾದರೆ–ಕರ್ಮ ಮಾಡುವವರಿಗೆ ವಿಧಿ-ನಿಷೇಧಾದಿಗಳ ರೂಪವಾದ ಧರ್ಮವನ್ನು ಪರಿಪಾಲಿಸಬೇಕೆಂಬ ನಿಯಮವೇಕಿರಬೇಕಿತ್ತು?

ತವ ಪುತ್ರೋ ಮಮಾಪತ್ಯಂ ಹತವಾನ್ಸ ಹತೋ ಮಯಾ ।
ಅನನ್ತರಂ ತ್ವಯಾಹಂ ಚ ಹನ್ತವ್ಯಾ ಹಿ ನರಾಧಿಪ ॥೫೮॥

ನರಾಧಿಪನೇ! ಎಲ್ಲವೂ ಕಾಲಾಧೀನವಾಗಿ ನಡೆಯುತ್ತಿದೆಯೆಂದು ಭಾವಿಸಿ ಅಪರಾಧಮಾಡಿದವನನ್ನು ದಂಡಿಸದೇ ಇರುವುದು ಪ್ರಾಣಿಯ ಸ್ವಭಾವದಲ್ಲಿಯೇ ಇಲ್ಲ. ನಿನ್ನ ಮಗನು ನನ್ನ ಶಿಶುವನ್ನು ಕೊಂದನು. ಅದಕ್ಕೆ ಪ್ರತಿಯಾಗಿ ನಾನು ನಿನ್ನ ಮಗನ ಕಣ್ಣುಗಳನ್ನು ಕಿತ್ತುಹಾಕುವ ಮೂಲಕ ನಿನ್ನ ಮಗನನ್ನು ಮೃತಪ್ರಾಯನನ್ನಾಗಿ ಮಾಡಿದೆನು. ನಾನು ಮಾಡಿರುವ ಈ ಅಪರಾಧಕ್ಕೆ ಪ್ರತಿಯಾಗಿ ನೀನು ನನ್ನನ್ನು ಕೊಲ್ಲಲೇಬೇಕು.

ಕೊಂದೇ ಕೊಲ್ಲುವೆ. ಪ್ರಾಣಿಗಳ ಸ್ವಭಾವದಲ್ಲಿಯೇ ಈ ವಿಧವಾದ ಪ್ರತಿಕ್ರಿಯೆಯಿರುತ್ತದೆ.

ಅಹಂ ಹಿ ಪುತ್ರಶೋಕೇನ ಕೃತಪಾಪಾ ತವಾತ್ಮಜೇ ।
ಯಥಾ ತ್ವಯಾ ಪ್ರಹರ್ತವ್ಯಂ ತಥಾ ತತ್ತ್ವಂ ಚ ಮೇ ಶೃಣು ॥೫೯॥

ನಾನು ಯಾವ ರೀತಿಯಲ್ಲಿ ಪುತ್ರಶೋಕದಿಂದ ಸಂತಪ್ತಳಾಗಿ ನಿನ್ನ ಮಗನ ವಿಷಯದಲ್ಲಿ ಅಪರಾಧವನ್ನೆಸಗಿದೆನೋ–ಅದೇ ರೀತಿಯಲ್ಲಿ ನೀನೂ ಪುತ್ರನೇತ್ರಾಪಹರಣದಿಂದುಂಟಾದ ಶೋಕದ ಕಾರಣದಿಂದ ನನ್ನನ್ನು ಪ್ರಹರಿಸಲೇಬೇಕು. ಈ ವಿಷಯದಲ್ಲಿ ಯಥಾರ್ಥವಾದ ತತ್ತ್ವವನ್ನು ಹೇಳುವೆನು; ಕೇಳು :

ಭಕ್ಷ್ಯಾರ್ಥಂ ಕ್ರೀಡನಾರ್ಥಂ ಚ ನರಾ ವಾಞ್ಛನ್ತಿ ಪಕ್ಷಿಣಃ ।
ತೃತೀಯೋ ನಾಸ್ತಿ ಸಂಯೋಗೋ ವಧಬನ್ಧಾದೃತೇ ಕ್ಷಮಃ ॥೬೦॥

ಮನುಷ್ಯರು ಭಕ್ಷಿಸುವುದಕ್ಕಾಗಿ ಅಥವಾ ಆಟವಾಡುವುದಕ್ಕಾಗಿ ಪಕ್ಷಿಗಳನ್ನು ಅಪೇಕ್ಷಿಸುತ್ತಾರೆ. ಆಟಕ್ಕಾಗಿ ಪಕ್ಷಿಗಳನ್ನು ಬಂಧಿಸುವುದು ಮತ್ತು ಊಟಕ್ಕಾಗಿ ಅವುಗಳನ್ನು ಕೊಲ್ಲುವುದು–ಈ ಎರಡು ಕಾರಣಗಳನ್ನು ಬಿಟ್ಟರೆ ಪಕ್ಷಿಗಳೊಡನೆ ಸ್ನೇಹಮಾಡುವುದಕ್ಕೆ ಮನುಷ್ಯರಿಗೆ ಮೂರನೆಯ ಕಾರಣವೇ ಯಾವುದೂ ಇರುವುದಿಲ್ಲ.

ವಧಬನ್ಧಭಯಾದೇತೇ ಮೋಕ್ಷತನ್ತ್ರಮುಪಾಶ್ರಿತಾಃ ।
ಜನೀಮರಣಜಂ ದುಃಖಂ ಪ್ರಾಹುರ್ವೇದವಿದೋ ಜನಾಃ ॥೬೧॥

ವಧೆಯ ಮತ್ತು ಬಂಧನದ ಭಯದಿಂದಾಗಿ (ಮರಣ ಮತ್ತು ಸಂಸಾರಬಂಧನಗಳಿಂದ ತಪ್ಪಿಸಿಕೊಳ್ಳಲು) ಮುಮುಕ್ಷುಗಳು ಮೋಕ್ಷತಂತ್ರ ವನ್ನು ಆಶ್ರಯಿಸಿರುತ್ತಾರೆ. ವೇದವಿದರಾದ ಪ್ರಾಜ್ಞರು ಹುಟ್ಟು-ಸಾವುಗಳಿಂದ ಪ್ರಾಪ್ತವಾಗುವ ದುಃಖವು ಸಹಿಸಲಸಾಧ್ಯವೆಂದು ಹೇಳುತ್ತಾರೆ.

ಸರ್ವಸ್ಯ ದಯಿತಾ ಪ್ರಾಣಾಃ ಸರ್ವಸ್ಯ ದಯಿತಾಃ ಸುತಾಃ ।
ದುಃಖಾದುದ್ವಿಜತೇ ಸರ್ವಃ ಸರ್ವಸ್ಯ ಸುಖಮೀಪ್ಸಿತಮ್ ॥೬೨॥

ಎಲ್ಲರಿಗೂ ಪ್ರಾಣವೆಂಬುದು ಅತ್ಯಂತಪ್ರಿಯವಾದುದು ; ಸರ್ವ ರಿಗೂ ಮಕ್ಕಳು ಅತಿಪ್ರಿಯರಾದವರಾಗಿರುತ್ತಾರೆ. ಎಲ್ಲರೂ ದುಃಖದಿಂದ

ಉದ್ವಿಗ್ನರಾಗುತ್ತಾರೆ. (ಭಯಪಡುತ್ತಾರೆ.) ಎಲ್ಲರೂ ಸುಖಾಪೇಕ್ಷಿಗಳೇ ಆಗಿರುತ್ತಾರೆ.

ದುಃಖಂ ಜರಾ ಬ್ರಹ್ಮದತ್ತ ದುಃಖಮರ್ಥವಿಪರ್ಯಯಃ ।
ದುಃಖಂ ಚಾನಿಷ್ಟಸಂವಾಸೋ ದುಃಖಮಿಷ್ಟವಿಯೋಜನಮ್ ॥೬೩॥

ಬ್ರಹ್ಮದತ್ತನೇ! ದುಃಖಗಳು ಅನೇಕ ರೂಪಗಳಾಗಿವೆ. ಮನುಷ್ಯನಿಗೆ ಮುಪ್ಪೆಂಬುದೇ ದುಃಖಕರವಾದುದು ; ಧನದ ವಿನಾಶದಿಂದ ದುಃಖವುಂಟಾಗುತ್ತದೆ. ಅಪ್ರಿಯರಾದವರೊಡನೆ ಮಾಡುವ ಸಹವಾಸವು ದುಃಖಕರವಾಗುತ್ತದೆ. ಪ್ರಿಯಜನರ ಅಗಲುವಿಕೆಯಿಂದಲೂ ದುಃಖವುಂಟಾಗುತ್ತದೆ.

ವಧಬನ್ಧಕೃತಂ ದುಃಖಂ ಸ್ತ್ರೀಕೃತಂ ಸಹಜಂ ತಥಾ ।
ದುಃಖಂ ಸುತೇನ ಸತತಂ ಜನಾನ್ವಿಪರಿವರ್ತತೇ ॥೬೪॥

ಬಂಧುಗಳ ವಧೆಯಿಂದಲೂ–ಬಂಧನದಿಂದಲೂ ದುಃಖವುಂಟಾಗುತ್ತದೆ. ಹೆಂಗಸಿನ ಕಾರಣದಿಂದಲೂ (ಕಾಮಿಸಿದ ಸ್ತ್ರೀಯನ್ನು ಪಡೆಯದೇ ಇರುವುದರಿಂದಲೂ) ದುಃಖವುಂಟಾಗುತ್ತದೆ. ರೋಗ-ರುಜಿನಾದಿಗಳಿಂದ ದುಃಖವಾಗುವುದು ಸಹಜವಾಗಿಯೇ ಇದೆ. ಮಗನು ನಷ್ಟನಾಗಿಹೋದರೂ, ದುಷ್ಟನಾದರೂ ತಂದೆ-ತಾಯಿಗಳಿಗೆ ಸತತವಾದ ದುಃಖವೇ ಉಂಟಾಗುತ್ತದೆ. ಹೀಗೆ ದುಃಖವು ಯಾವಾಗಲೂ ಜನರನ್ನು ಆವರಿಸಿಕೊಂಡೇ ಇರುತ್ತದೆ.

ನ ದುಃಖಂ ಪರದುಃಖೇ ವೈ ಕೇಚಿದಾಹುರಬುದ್ಧಯಃ ।
ಯೋ ದುಃಖಂ ನಾಭಿಜಾನಾತಿ ಸ ಜಲ್ಪತಿ ಮಹಾಜನೇ ॥೬೫॥

ಕೆಲವರು ಮೂಢಾತ್ಮರು–ಒಂದು ಕಾರಣದಿಂದ ಇತರರಿಗೆ ದುಃಖವಾದರೂ ಆ ಕಾರಣದಿಂದ ತಮಗೆ ದುಃಖವಾಗುವುದಿಲ್ಲವೆಂದು ಹೇಳುತ್ತಾರೆ. ಯಾವನು ದುಃಖವೆಂದರೆ ಏನೆಂಬುದನ್ನೇ ತಿಳಿದಿಲ್ಲವೋ–ಅಂತಹವನು ಮಾತ್ರವೇ ಮಹಾಜನರ ಸಮ್ಮುಖದಲ್ಲಿ ಹೀಗೆ ಹರಟುತ್ತಾನೆ.

ಯಸ್ತು ಶೋಚತಿ ದುಃಖಾರ್ತಃ ಸ ಕಥಂ ವಕ್ತುಮುತ್ಸಹೇತ್ ।
ರಸಜ್ಞಃ ಸರ್ವದುಃಖಸ್ಯ ಯಥಾತ್ಮನಿ ತಥಾ ಪರೇ ॥೬೬॥

ಯಾವನು ದುಃಖಪೀಡಿತನಾಗಿ ಶೋಕಿಸುವನೋ, ತನ್ನಲ್ಲಿಯೂ ಮತ್ತು ಇತರರಲ್ಲಿಯೂ ಇರುವ ಸಕಲದುಃಖಗಳ ಸಾರವನ್ನೂ ಯಾವನು

ತಿಳಿದಿರುವನೋ–ಅಂತಹವನು 'ನ ದುಃಖಂ ಪರದುಃಖೇ ವೈ' ಒಂದು ಕಾರಣದಿಂದ ಇತರರಿಗೆ ದುಃಖವಾದರೂ ತನಗೆ ದುಃಖವಾಗುವುದಿಲ್ಲವೆಂದು ಹೇಳಲು ಹೇಗೆ ಸಮರ್ಥನಾಗುತ್ತಾನೆ?

ಯತ್ಕೃತಂ ತೇ ಮಯಾ ರಾಜಂಸ್ತ್ವಯಾ ಚ ಮಮ ಯತ್ಕೃತಮ್ ।
ನ ತದ್ವರ್ಷಶತೈಃ ಶಕ್ಯಂ ವ್ಯಪೋಹಿತುಮರಿಂದಮ ॥೬೭॥

ಅರಿಂದಮನೇ! ನಾನು ನಿನಗೆ ಯಾವ ಅಪರಾಧವನ್ನು ಮಾಡಿರುವೆನೋ, ನೀನು ನನಗೆ ಯಾವ ಅಪರಾಧವನ್ನು ಮಾಡಿರುವೆಯೋ–ಅದನ್ನು ನೀನಾಗಲೀ ನಾನೇ ಆಗಲೀ–ನೂರು ವರ್ಷಗಳು ಕಳೆದರೂ ಹೋಗಲಾಡಿಸಲು ಸಾಧ್ಯವೇ ಆಗುವುದಿಲ್ಲ. ನಮ್ಮಿಬ್ಬರ ಪರಸ್ಪರಾಪರಾಧಗಳು ಸರಿಪಡಿಸುವುದಕ್ಕೆ ಸಾಧ್ಯವೇ ಆಗದಂತಹ ಮತ್ತು ಎಂದೆಂದಿಗೂ ಮರೆಯಲಾಗದಂತಹ ಅಪರಾಧಗಳಾಗಿವೆ.

ಆವಯೋಃ ಕೃತಮನ್ಯೋನ್ಯಂ ಪುನಃ ಸಂಧಿರ್ನ ವಿದ್ಯತೇ ।
ಸ್ಮೃತ್ವಾ ಸ್ಮೃತ್ವಾ ಹಿ ತೇ ಪುತ್ರಂ ನವಂ ವೈರಂ ಭವಿಷ್ಯತಿ ॥೬೮॥

ನಮ್ಮಿಂದ ಪರಸ್ಪರವಾಗಿ ಮಾಡಲ್ಪಟ್ಟಿರುವ ಅಪರಾಧಗಳ ಕಾರಣದಿಂದಾಗಿ ಪುನಃ ನಮ್ಮಿಬ್ಬರಲ್ಲಿ ಸಂಧಿಯುಂಟಾಗುವ, ನಾವಿಬ್ಬರೂ ಒಟ್ಟಾಗಿರುವ ಸಾಧ್ಯತೆಯೇ ಇಲ್ಲ. ನಿನ್ನ ಮಗನು ನನ್ನಿಂದ ಕುರುಡನಾದುದನ್ನು ಸ್ಮರಿಸಿದಂತೆಲ್ಲಾ ನನ್ನ ಮೇಲಿನ ನಿನ್ನ ವೈರವು ನೂತನವಾಗುತ್ತಿರುತ್ತದೆ. (ಕ್ಷಣ-ಕ್ಷಣಕ್ಕೂ ಹೆಚ್ಚುತ್ತಿರುತ್ತದೆ.)

ವೈರಮನ್ತಿಕಮಾಸಾದ್ಯ ಯಃ ಪ್ರೀತಿಂ ಕರ್ತುಮಿಚ್ಛತಿ ।
ಮೃಣ್ಮಯಸ್ಯೇವ ಭಗ್ನಸ್ಯ ಯಥಾ ಸಂಧಿರ್ನ ವಿದ್ಯತೇ ॥೬೯॥

ಮರಣಾಂತವಾದ ವೈರವನ್ನು ಹೊಂದಿದನಂತರವೂ ಯಾವನು ತನ್ನ ಶತ್ರುವಿನೊಡನೆ ಪ್ರೀತಿಯನ್ನು ಬೆಳೆಸಲು ಇಚ್ಛಿಸುವನೋ–ಅಂತಹವನ ಸಂಧಿಯ ಪ್ರಯತ್ನ ವ್ಯರ್ಥವೇ ಸರಿ. ಒಡೆದುಹೋದ ಮಣ್ಣಿನ ಗಡಿಗೆಯನ್ನು ಪುನಃ ಕೂಡಿಸಲು ಹೇಗೆ ಸಾಧ್ಯವಾಗುವುದಿಲ್ಲವೋ–ಹಾಗೆಯೇ ಒಡೆದುಹೋದ ಸ್ನೇಹವನ್ನೂ ಪುನಃ ಕೂಡಿಸಲು ಸಾಧ್ಯವಾಗುವುದಿಲ್ಲ.

ನಿಶ್ಚಯಃ ಸ್ವಾರ್ಥಶಾಸ್ತ್ರೇಷು ವಿಶ್ವಾಸಶ್ಚಾಸುಖೋದಯಃ ।
ಉಶನಾ ಚೈವ ಗಾಥೇ ದ್ವೇ ಪ್ರಹ್ಲಾದಾಯಾಬ್ರವೀತ್ಪುರಾ ॥೨೦॥

ಶತ್ರುವಿನ ವಿಷಯದಲ್ಲಿ ವಿಶ್ವಾಸವನ್ನಿಡುವುದು ಅಸುಖಕ್ಕೆ (ದುಃಖಕ್ಕೆ) ಕಾರಣವಾಗುತ್ತದೆ–ಎಂದು ನೀತಿಶಾಸ್ತ್ರಗಳಲ್ಲಿ ನಿಶ್ಚಯಮಾಡಿ ಹೇಳಲ್ಪಟ್ಟಿದೆ. ಹಿಂದೆ ಶುಕ್ರಾಚಾರ್ಯರು ಇದರ ಸಂಬಂಧವಾಗಿಯೇ ಎರಡು ಶ್ಲೋಕಗಳನ್ನು ಪ್ರಹ್ಲಾದನಿಗೆ ಹೇಳಿದ್ದರು.

ವಧ್ಯನ್ತೇ ಶ್ರದ್ದಧತೇ ಸತ್ಯೇ ಸತ್ಯೇತರೇಽಪಿ ವಾ ।
ಯೇ ವೈರಿಣಃ ಶ್ರದ್ದಧಾನಾಸ್ತು ಮಧು ಶುಷ್ಕತೃಣೈರ್ಯಥಾ ॥೨೧॥

'ವೃಕ್ಷದ ಮೇಲಿರುವ ಜೇನುತುಪ್ಪದಲ್ಲಿಯೇ ಶ್ರದ್ಧೆಯಿರುವವನು ವೃಕ್ಷದ ಬುಡದಲ್ಲಿರುವ ಒಣಹುಲ್ಲುಗಳಿಂದ ಮುಚ್ಚಲ್ಪಟ್ಟ ಹಳ್ಳದಲ್ಲಿ ಬಿದ್ದು ಹೇಗೆ ವಿನಾಶಹೊಂದುವನೋ–ಹಾಗೆಯೇ ವೈರಿಗಳ ಸತ್ಯವಾದ ಅಥವಾ ಅಸತ್ಯವಾದ ಮಾತಿನಲ್ಲಿ ಶ್ರದ್ಧೆಯಿಡುವವರು ವಿನಾಶಹೊಂದುತ್ತಾರೆ. (ಶತ್ರುಗಳ ಅಮೃತಪ್ರಾಯವಾದ ಮಾತಿಗೆ ಮನಸೋತವರು–ಅಗಾಧವಾದ ಹಳ್ಳವು ಒಣಹುಲ್ಲಿನಿಂದ ಮುಚ್ಚಿದೆಯೆಂಬುದನ್ನರಿಯದೇ ಹಳ್ಳದ ದಡದಲ್ಲಿರುವ ವೃಕ್ಷದ ಮೇಲಿರುವ ಜೇನುತುಪ್ಪವನ್ನು ಪಡೆದುಕೊಳ್ಳುವ ಆಶೆಯಿಂದ ಮುನ್ನುಗ್ಗಿಹೋಗಿ ಹಳ್ಳದಲ್ಲಿ ಬಿದ್ದು ನಾಶಹೊಂದುವಂತೆ–ವಿನಾಶ ಹೊಂದುತ್ತಾರೆ.)

ನ ಹಿ ವೈರಾಣಿ ಶಾಮ್ಯನ್ತಿ ಕುಲೇ ದುಃಖಗತಾನಿ ಚ ।
ಆಖ್ಯಾತಾರಶ್ಚ ವಿದ್ಯನ್ತೇ ಕುಲೇ ವೈ ಧ್ರಿಯತೇ ಪುಮಾನ್ ॥೨೨॥

ಯಾವ ಕುಲದಲ್ಲಿ ದುಃಖವನ್ನು ಉದ್ಬೋಧಿಸುವ ವೈರವು ಹುಟ್ಟಿಕೊಂಡಿರುವುದೋ–ಅಂತಹ ವೈರವು ಯಾವುದೇ ಕಾರಣದಿಂದಲೂ ಉಪಶಮನಹೊಂದುವುದಿಲ್ಲ. ಕಾರಣವೇನೆಂದರೆ : ದುಃಖದ ಕಾರಣವನ್ನು ಹೇಳುವವರು ಇದ್ದೇ ಇರುತ್ತಾರೆ. ಪ್ರತೀಕಾರಮಾಡಬಲ್ಲ ಪುರುಷರೂ ಆ ಕುಲದಲ್ಲಿ ಇದ್ದೇ ಇರುತ್ತಾರೆ. (ದುಃಖಕ್ಕೆ ಕಾರಣನಾದ ಮನುಷ್ಯನೂ ಮತ್ತು ನಡೆದುಹೋದ ಸಂಗತಿಯನ್ನು ಜ್ಞಾಪಿಸಿಕೊಡುವವರೂ ಇರುವವರೆಗೂ ವೈರವು ಉಪಶಮನವಾಗುವುದಿಲ್ಲ.)'

ಉಪಗೃಹ್ಯ ತು ವೈರಾಣಿ ಸಾನ್ತ್ವಯನ್ತಿ ನರಾಧಿಪ ।
ಅಥೈನಂ ಪ್ರತಿಶಂಸನ್ತಿ ಪೂರ್ಣಂ ಘಟಮಿವಾಶ್ಮನಿ ॥೭೩॥

ದುಷ್ಟಪ್ರಕೃತಿಯ ಜನರು ಮನಸ್ಸಿನಲ್ಲಿ ವೈರವನ್ನಡಗಿಸಿಕೊಂಡಿದ್ದು ವೈರಿಗಳನ್ನು ಮಧುರವಚನಗಳಿಂದ ಸಂತೈಸುತ್ತಿರುತ್ತಾರೆ. ಸಮಯವು ಸಿಕ್ಕಿದಾಗ–ನೀರು ತುಂಬಿರುವ ಗಡಿಗೆಯನ್ನು ಕಲ್ಲಿನ ಮೇಲೆ ಕುಕ್ಕುವಂತೆ ಹೊಸಕಿ ಹಾಕುತ್ತಾರೆ. (ವಿನಾಶಗೊಳಿಸುತ್ತಾರೆ)

ಸದಾ ನ ವಿಶ್ವಸೇದ್ರಾಜನ್ಪಾಪಂ ಕೃತ್ವೇಹ ಕಸ್ಯಚಿತ್ ।
ಅಪಕೃತ್ಯ ಪರೇಷಾಂ ಹಿ ವಿಶ್ವಾಸಾದ್ದುಃಖಮಶ್ನುತೇ ॥೭೪॥

ಒಬ್ಬನಿಗೆ ಅಪಕಾರಮಾಡಿದನಂತರ ಅಪಕಾರಕ್ಕೆ ಗುರಿಯಾದವನ ವಿಷಯದಲ್ಲಿ ಖಂಡಿತವಾಗಿಯೂ ವಿಶ್ವಾಸವನ್ನಿಡಬಾರದು. ಯಾವನು ಇತರರಿಗೆ ಅಪಕಾರಮಾಡಿದನಂತರವೂ ಅವರ ವಿಷಯದಲ್ಲಿ ವಿಶ್ವಾಸವನ್ನಿಡುವನೋ–ಅವನು ಖಂಡಿತವಾಗಿಯೂ ದುಃಖಕ್ಕೆ ಭಾಗಿಯಾಗುತ್ತಾನೆ."

ಬ್ರಹ್ಮದತ್ತನು ಪುನಃ ಹೇಳುತ್ತಾನೆ :

ನಾವಿಶ್ವಾಸಾದ್ವಿನ್ದತೇಽರ್ಥಾನೀಹತೇ ಚಾಪಿ ಕಿಂಚನ ।
ಭಯಾತ್ತ್ವೇಕತರಾನ್ನಿತ್ಯಂ ಮೃತಕಲ್ಪಾ ಭವನ್ತಿ ಚ ॥೭೫॥

"ಪೂಜನಿ! ಯಾವುದರಲ್ಲಿಯೂ ವಿಶ್ವಾಸವನ್ನಿಡದಿರುವ ಮನುಷ್ಯನು ಪ್ರಪಂಚದಲ್ಲಿ ಯಾವ ವಿಧವಾದ ಇಷ್ಟಾರ್ಥಗಳನ್ನೂ ಹೊಂದುವುದಿಲ್ಲ. ಅಂತಹವನು ಯಾವ ಕಾರ್ಯವನ್ನೂ ಮಾಡಲು ಇಚ್ಛಿಸುವುದೇ ಇಲ್ಲ. (ಯಾವ ಕಾರ್ಯವನ್ನು ಮಾಡಬೇಕಾದರೂ ವಿಶ್ವಾಸವಿರಬೇಕು. ಕಾರ್ಯದಲ್ಲಿಯೂ ವಿಶ್ವಾಸವಿರಬೇಕು. ಜನರಲ್ಲಿಯೂ ವಿಶ್ವಾಸವಿರಬೇಕು. ಆತ್ಮವಿಶ್ವಾಸವೂ ಇರಬೇಕು. ಜನರಲ್ಲಿ ವಿಶ್ವಾಸವನ್ನೇ ಇಡದಿದ್ದರೆ ಕಾರ್ಯದ ಸಿದ್ಧಿಯಾಗುವುದಿಲ್ಲ.) ಒಂದೇ ಕಡೆಯಿಂದ ಭಯವನ್ನು ಯಾವಾಗಲೂ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವ ಕಾರಣದಿಂದ ಜನರು ಮೃತಕಲ್ಪರಾಗುತ್ತಾರೆ. (ಬದುಕಿದ್ದರೂ ಮೃತಪ್ರಾಯರೇ ಆಗಿರುತ್ತಾರೆ.)"

ಪೂಜನಿಯು ಹೇಳುತ್ತಾಳೆ :

ಯಸ್ಯೇಹ ವ್ರಣಿನೌ ಪಾದೌ ಪದ್ಭ್ಯಾಂ ಚ ಪರಿಸರ್ಪತಿ ।
ಖನ್ಯೇತೇ ತಸ್ಯ ತೌ ಪಾದೌ ಸುಗುಪ್ತಮಿಹ ಧಾವತಃ ॥೭೬॥

"ಒಬ್ಬನ ಎರಡು ಕಾಲುಗಳೂ ಗಾಯಗೊಂಡಿವೆ. ಆದರೂ ಅವನು ಆ ಕಾಲುಗಳಿಂದಲೇ ಓಡಾಡುತ್ತಾನೆ. ಹಾಗೆ ಓಡಾಡುತ್ತಿರುವಾಗ ಅವನು ಆಗಿರುವ ಗಾಯಗಳಿಗೆ ಪುನಃ ಘಾಸಿಯಾಗದಂತೆ ಎಷ್ಟೇ ಎಚ್ಚರಿಕೆಯಿಂದ ರಕ್ಷಿಸಿಕೊಳ್ಳುತ್ತಿದ್ದರೂ ಆ ಗಾಯಗಳ ಮೇಲೆ ಪುನಃ ಗಾಯಗಳಾಗುವುದು ಸ್ವಾಭಾವಿಕ. (ಹಾಗೆಯೇ ಪರಸ್ಪರವಾಗಿ ಅಪರಾಧವನ್ನೆಸಗಿರುವ ನಾವು ಎಷ್ಟೇ ಜಾಗರೂಕತೆಯಿಂದಿದ್ದರೂ ಅಪರಾಧಗಳು ಪುನಃ ನಮ್ಮಿಬ್ಬರಲ್ಲಿ ಯಾರಿಂದಲಾದರೂ ನಡೆಯುವುದು ಸಹಜವಾಗಿರುತ್ತದೆ.)

ನೇತ್ರಾಭ್ಯಾಂ ಸರುಜಾಭ್ಯಾಂ ಯಃ ಪ್ರತಿವಾತಮುದೀಕ್ಷತೇ ।
ತಸ್ಯ ವಾಯುರುಜಾತ್ಯರ್ಥಂ ನೇತ್ರಯೋರ್ಭವತಿ ಧ್ರುವಮ್ ॥೭೭॥

ಬೇನೆಯಿಂದ ಕೂಡಿರುವ ಕಣ್ಣುಗಳಿಂದ ಯಾವನು ಎದುರುಗಾಳಿಯನ್ನು ನೋಡುತ್ತಿರುತ್ತಾನೆಯೋ (ಎದುರುಗಾಳಿಗೆ ಯಾರು ಕಣ್ಣುಗಳನ್ನು ಬಿಟ್ಟುಕೊಂಡು ಕುಳಿತಿರುವನೋ)–ಅವನು ಗಾಳಿಯ ಒತ್ತಡದಿಂದಾಗಿ ಇನ್ನೂ ಹೆಚ್ಚಿನ ಕಣ್ಣುಬೇನೆಯನ್ನು ಅನುಭವಿಸುತ್ತಾನೆ. ಅವನ ಕಣ್ಣುಗಳಿಗೆ ಇನ್ನೂ ಹೆಚ್ಚಿನ ಪೀಡೆಯುಂಟಾಗುತ್ತದೆ.

ದುಷ್ಟಂ ಪನ್ಥಾನಮಾಸಾದ್ಯ ಯೋ ಮೋಹಾದುಪಪದ್ಯತೇ ।
ಆತ್ಮನೋ ಬಲಮಜ್ಞಾಯ ತದನ್ತಂ ತಸ್ಯ ಜೀವಿತಮ್ ॥೭೮॥

ಯಾವನು ತನ್ನ ಶಕ್ತಿ-ಸಾಮರ್ಥ್ಯಗಳೆಷ್ಟೆಂಬುದನ್ನು ತಿಳಿದುಕೊಳ್ಳದೇ ಮೋಹವಶನಾಗಿ ದುಷ್ಟವಾದ ಮಾರ್ಗವನ್ನು (ಕೆಟ್ಟ ದಾರಿಯನ್ನು) ಆಶ್ರಯಿಸಿ ಪ್ರಯಾಣಮಾಡುವನೋ–ಅವನು ಅಂತಹ ಸಾಹಸಕಾರ್ಯದ ಪರಿಣಾಮವಾಗಿ ತನ್ನ ಪ್ರಾಣಗಳನ್ನೇ ಕಳೆದುಕೊಳ್ಳುತ್ತಾನೆ. ದುಷ್ಟವಾದ ಮಾರ್ಗವನ್ನು ಅವಲಂಬಿಸುವುದರಿಂದ ಅವನ ಜೀವಿತವೇ ಅಂತ್ಯವಾಗುತ್ತದೆ.

ಯಸ್ತು ವರ್ಷಮವಿಜ್ಞಾಯ ಕ್ಷೇತ್ರಂ ಕರ್ಷತಿ ಕರ್ಷಕಃ ।
ಹೀನಃ ಪುರುಷಕಾರೇಣ ಸಸ್ಯಂ ನೈವಾಶ್ನುತೇ ತತಃ ॥೭೯॥

ಮಳೆಯನ್ನೇ ಪ್ರತೀಕ್ಷಿಸದೇ ಯಾವ ರೈತನು ಭೂಮಿಯನ್ನು ಉತ್ತು ಬಿತ್ತನೆ ಮಾಡುವನೋ ಅಂತಹ ರೈತನು ವ್ಯರ್ಥವಾದ ಪ್ರಯತ್ನವುಳ್ಳವನಾಗಿ (ದೈವಸಹಾಯವಿಲ್ಲದೆ) ಧಾನ್ಯವನ್ನು ಖಂಡಿತವಾಗಿಯೂ ಪಡೆದುಕೊಳ್ಳುವು

ದಿಲ್ಲ. (ಮಳೆಯಿಲ್ಲದಾಗ ರೈತನು ಭೂಮಿಯನ್ನು ಉತ್ತು ಬೀಜವನ್ನು ಬಿತ್ತಿದರೆ ಹಾಕಿದ ಬೀಜವೂ ಹಾಳಾಗುತ್ತದೆ. ಪಟ್ಟ ಶ್ರಮವೂ ವ್ಯರ್ಥವಾಗುತ್ತದೆ. ಆದುದರಿಂದ ಪುರುಷಪ್ರಯತ್ನವೊಂದೇ ಫಲಕಾರಿಯಾಗುವುದಿಲ್ಲ.)

ಯಸ್ತು ತಿಕ್ತಂ ಕಷಾಯಂ ವಾ ಸ್ವಾದು ವಾ ಮಧುರಂ ಹಿತಮ್ ।
ಆಹಾರಂ ಕುರುತೇ ನಿತ್ಯಂ ಸೋಽಮೃತತ್ವಾಯ ಕಲ್ಪತೇ ॥೮೦॥

ಕಹಿಯಾಗಿರಲಿ ; ಒಗರಾಗಿರಲಿ ; ರುಚಿಯಾಗಿರಲಿ ; ಸಿಹಿಯಾಗಿರಲಿ– ಯಾವನು ಹಿತಕರವಾದ ಮಿತವಾದ ಭೋಜನವನ್ನು ಕ್ಲುಪ್ತಕಾಲದಲ್ಲಿ ನಿತ್ಯವೂ ಮಾಡುತ್ತಿರುವನೋ–ಅವನು ಅಮೃತಕ್ಕೆ ಸಮಾನವಾದ ಭೋಜನವನ್ನು ಮಾಡುತ್ತಿರುವನೆಂದು ತಿಳಿಯಬೇಕು. ಅವನ ಭೋಜನವು ಅಮೃತಕ್ಕೆ ಸಮಾನವಾಗಿರುತ್ತದೆ.

ಪಥ್ಯಂ ಮುಕ್ತ್ವಾ ತು ಯೋ ಮೋಹಾದ್ದುಷ್ಟಮಶ್ನಾತಿ ಭೋಜನಮ್ ।
ಪರಿಣಾಮಮವಿಜ್ಞಾಯ ತದನ್ತಂ ತಸ್ಯ ಜೀವಿತಮ್ ॥೮೧॥

ಯಾವನು ಪರಿಣಾಮವೇನಾಗುವುದೆಂಬುದನ್ನು ಯೋಚಿಸದೇ ಮೋಹವಶನಾಗಿ ಪಥ್ಯವಾದ ಮತ್ತು ಹಿತಕರವಾದ ಆಹಾರವನ್ನು ಬಿಟ್ಟು ಅಪಥ್ಯವಾದ ಮತ್ತು ದುಷ್ಟವಾದ ಭೋಜನವನ್ನು ಕಾಲಾಕಾಲವಿವೇಚನೆ ಯಿಲ್ಲದೇ ಮಾಡುವನೋ–ಅಂತಹವನು ಬಹಳ ಬೇಗ ವಿನಾಶಹೊಂದು ತ್ತಾನೆ. ಅಂತಹ ದುಷ್ಟಭೋಜನವೇ ಅವನ ಜೀವಿತವನ್ನು ಕಡೆಗಾಣಿಸುತ್ತದೆ.

ದೈವಂ ಪುರುಷಕಾರಶ್ಚ ಸ್ಥಿತಾವನ್ಯೋನ್ಯಸಂಶ್ರಯಾತ್ ।
ಉದಾರಾಣಾಂ ತು ಸತ್ಕರ್ಮ ದೈವಂ ಕ್ಲೀಬಾ ಉಪಾಸತೇ ॥೮೨॥

ದೈವ ಮತ್ತು ಪುರುಷಪ್ರಯತ್ನಗಳೆರಡೂ ಪರಸ್ಪರವಾಗಿ ಒಂದು ಮತ್ತೊಂದನ್ನು ಆಶ್ರಯಿಸಿಕೊಂಡಿರುತ್ತವೆ. ಉದಾರಚರಿತರಾದರೋ ಯಾವಾಗಲೂ ಒಳ್ಳೆಯ ಕಾರ್ಯಗಳನ್ನೇ ಮಾಡುತ್ತಿರುತ್ತಾರೆ. ಕರ್ತವ್ಯ ಪರಾಯಣರಾಗಿ ಪ್ರಯತ್ನಪೂರ್ವಕವಾಗಿ ಕರ್ಮಗಳನ್ನು ಮಾಡುತ್ತಿರುತ್ತಾರೆ.

ಪೌರುಷಹೀನರಾದವರು ಯಾವ ಕಾರ್ಯವನ್ನೂ ಮಾಡದೇ ದೈವವನ್ನೇ ಆಶ್ರಯಿಸಿ ಕುಳಿತಿರುತ್ತಾರೆ.

ಕರ್ಮ ಚಾತ್ಮಹಿತಂ ಕಾರ್ಯಂ ತೀಕ್ಷ್ಣಂ ವಾ ಯದಿ ವಾ ಮೃದು ।
ಗ್ರಸ್ಯತೇऽಕರ್ಮಶೀಲಸ್ತು ಸದಾನರ್ಥೈರಕಿಞ್ಚನಃ ॥೮೩॥

ಕಠೋರವಾದುದೇ ಆಗಲಿ ; ಕೋಮಲವಾದುದೇ ಆಗಲಿ–ಆತ್ಮಕ್ಕೆ (ತನಗೆ) ಹಿತವಾಗತಕ್ಕ ಕಾರ್ಯವನ್ನು ಮಾಡಲೇಬೇಕು. ಯಾವನು ಅಕರ್ಮಶೀಲನಾಗಿರುವನೋ, ಆತ್ಮಹಿತಕ್ಕಾಗಿಯಾದರೂ ಯಾವ ಕಾರ್ಯವನ್ನೂ ಮಾಡುವುದಿಲ್ಲವೋ–ಅಂತಹವನು ದರಿದ್ರನಾಗಿ ಸರ್ವಕಾಲಗಳಲ್ಲಿಯೂ ಅನರ್ಥಗಳಿಗೆ ಗುರಿಯಾಗುತ್ತಾನೆ.

ತಸ್ಮಾತ್ಸರ್ವಂ ವ್ಯಪೋಹ್ಯಾರ್ಥಂ ಕಾರ್ಯ ಏವ ಪರಾಕ್ರಮಃ ।
ಸರ್ವಸ್ವಮಪಿ ಸಂತ್ಯಜ್ಯ ಕಾರ್ಯಮಾತ್ಮಹಿತಂ ನರೈಃ ॥೮೪॥

ಆದುದರಿಂದ ಮಾನವನು ಕಾಲ, ದೈವ ಮತ್ತು ಸ್ವಭಾವಗಳನ್ನು ಬದಿಗೊತ್ತಿ (ಅವುಗಳಲ್ಲಿ ಹೆಚ್ಚಿನ ವಿಶ್ವಾಸವನ್ನಿಡದೆ) ಪರಾಕ್ರಮಶೀಲನಾಗಬೇಕು. ಮಾನವರು ಸರ್ವಸ್ವವನ್ನೂ ತ್ಯಜಿಸಿಯಾದರೂ ಆತ್ಮಕ್ಕೆ (ತಮಗೆ) ಹಿತವಾಗುವಂತಹ ಕಾರ್ಯವನ್ನೇ ಮಾಡಬೇಕು.

ವಿದ್ಯಾ ಶೌರ್ಯಂ ಚ ದಾಕ್ಷ್ಯಂ ಚ ಬಲಂ ಧೈರ್ಯಂ ಚ ಪಞ್ಚಮಮ್ ।
ಮಿತ್ರಾಣಿ ಸಹಜಾನ್ಯಾಹುರ್ವರ್ತಯನ್ತೀಹ ತೈರ್ಬುಧಾಃ ॥೮೫॥

ವಿದ್ಯೆ, ಶೌರ್ಯ, ದಕ್ಷತೆ, ಬಲ ಮತ್ತು ಧೈರ್ಯ– ಈ ಐದೂ ಮಾನವನ ಸಹಜಮಿತ್ರರೆಂದು ಹೇಳುತ್ತಾರೆ. ವಿದ್ವಾಂಸರಾದವರು ಈ ಐವರು ಮಿತ್ರರ ಮೂಲಕವಾಗಿಯೇ ಜಗತ್ತಿನಲ್ಲಿ ಎಲ್ಲ ಕಾರ್ಯಗಳನ್ನೂ ಮಾಡುತ್ತಾರೆ.

ನಿವೇಶನಂ ಚ ಕುಪ್ಯಂ ಚ ಕ್ಷೇತ್ರಂ ಭಾರ್ಯಾ ಸುಹೃಜ್ಜನಃ ।
ಏತಾನ್ಯುಪಹಿತಾನ್ಯಾಹುಃ ಸರ್ವತ್ರ ಲಭತೇ ಪುಮಾನ್ ॥೮೬॥

ಮನೆ, ತಾಮ್ರ-ಹಿತ್ತಾಳೆ ಮೊದಲಾದ ಲೋಹಗಳು, ಭೂಮಿ-ಕಾಣಿ,

ಭಾರ್ಯೆ ಮತ್ತು ಸುಹೃಜ್ಜನರು–ಇವರು ಮಾನವನಿಗೆ ಉಪಮಿತ್ರರಾಗಿರುತ್ತಾರೆ. ಈ ಉಪಮಿತ್ರರನ್ನು ಮನುಷ್ಯನು ಎಲ್ಲಿ ಬೇಕಾದರೂ ಪಡೆದುಕೊಳ್ಳಬಲ್ಲನು.

ಸರ್ವತ್ರ ರಮತೇ ಪ್ರಾಜ್ಞಃ ಸರ್ವತ್ರ ಚ ವಿರಾಜತೇ ।
ನ ವಿಭೀಷಯತೇ ಕಶ್ಚಿದ್ಭೀಷಿತೋ ನ ಬಿಭೇತಿ ಚ ॥೮೭॥

ವಿದ್ಯಾವಂತನಾದವನು ಸರ್ವತ್ರ ಆನಂದದಿಂದ ಇರುತ್ತಾನೆ. ಸರ್ವತ್ರ ಪ್ರಕಾಶಮಾನನಾಗುತ್ತಾನೆ. ಪ್ರಾಜ್ಞನಾದವನು ಯಾರನ್ನೂ ಭಯಪಡಿಸುವುದಿಲ್ಲ. ಬೇರೆಯವರು ಭಯಪಡಿಸಿದರೂ ಅವನು ಭಯಪಡುವುದಿಲ್ಲ.

ನಿತ್ಯಂ ಬುದ್ಧಿಮತೋಽಪ್ಯರ್ಥಃ ಸ್ವಲ್ಪಕೋಽಪಿ ವಿವರ್ಧತೇ ।
ದಾಕ್ಷ್ಯೇಣ ಕುರ್ವತಃ ಕರ್ಮ ಸಂಯಮಾತ್ಪ್ರತಿತಿಷ್ಠತಿ ॥೮೮॥

ಬುದ್ಧಿವಂತನ ಬಳಿಯಲ್ಲಿ ಸ್ವಲ್ಪವೇ ಧನವಿದ್ದರೂ ದಕ್ಷತೆಯಿಂದ ಕೆಲಸ ಮಾಡುವುದರಿಂದ ಅದು ಬಹಳವಾಗಿ ವೃದ್ಧಿಹೊಂದುತ್ತದೆ. ಸಂಯಮದಿಂದ ನಡೆದುಕೊಳ್ಳುವ ಅಂತಹ ಬುದ್ಧಿವಂತನ ಐಶ್ವರ್ಯವೂ ಸ್ಥಿರವಾಗಿಯೇ ಇರುತ್ತದೆ.

ಗೃಹಸ್ನೇಹಾವಬದ್ಧಾನಾಂ ನರಾಣಾಮಲ್ಪಮೇಧಸಾಮ್ ।
ಕುಸ್ತ್ರೀ ಖಾದತಿ ಮಾಂಸಾನಿ ಮಾಘಮಾಂ ಸೇಗವಾ ಇವ ॥೮೯॥

ಸಂಸಾರದಲ್ಲಿಯೇ ಅತ್ಯಂತಾಸಕ್ತರಾಗಿರುವ (ಸಂಸಾರಬಂಧನದಲ್ಲಿಯೇ ತೊಳಲುತ್ತಿರುವ), ಅಲ್ಪಬುದ್ಧಿಯ ಮನುಷ್ಯರ ಮಾಂಸಗಳನ್ನು ದುಷ್ಟ ಸ್ತ್ರೀಯು ತಿಂದುಹಾಕುತ್ತಾಳೆ. (ಸಂಸಾರದಲ್ಲಿಯೇ ಆಸಕ್ತರಾದವರನ್ನು ದುಷ್ಟಸ್ತ್ರೀಯರು ಶೋಷಿಸಿಬಿಡುತ್ತಾರೆ.) ಚೇಳಿನ ಮರಿಗಳು ತಾಯಿಚೇಳನ್ನೇ ವಿನಾಶಗೊಳಿಸುವಂತೆ–ದುಷ್ಟಸ್ತ್ರೀಯರು ಕಾಮಾಂಧನಾದ, ಸಂಸಾರಾಸಕ್ತನಾದ ಪುರುಷನನ್ನು ವಿನಾಶಗೊಳಿಸುತ್ತಾರೆ.

ಗೃಹಂ ಕ್ಷೇತ್ರಾಣಿ ಮಿತ್ರಾಣಿ ಸ್ವದೇಶ ಇತಿ ಚಾಪರೇ ।
ಇತ್ಯೇವಮವಸೀದನ್ತಿ ನರಾ ಬುದ್ಧಿವಿಪರ್ಯಯೇ ॥೯೦॥

ಬುದ್ಧಿಯ ವಿಪರ್ಯಾಸದಿಂದಾಗಿ ಮನುಷ್ಯರಲ್ಲಿ–ಕೆಲವರು ಮನೆ, ಗದ್ದೆ,

ಹೊಲ ಮತ್ತು ಮಿತ್ರರ ವಿಷಯವಾಗಿಯೂ, ಕೆಲವರು ಸ್ವದೇಶದ ವಿಷಯವಾಗಿಯೂ ಅನವಶ್ಯವಾಗಿ ಚಿಂತಿಸುತ್ತಾ ಕೃಶರಾಗುತ್ತಾರೆ.

ಉತ್ಪತೇತ್ಸಹಜಾದ್ದೇಶಾದ್ವ್ಯಾಧಿದುರ್ಭಿಕ್ಷಪೀಡಿತಾತ್ ।
ಅನ್ಯತ್ರ ವಸ್ತುಂ ಗಚ್ಛೇದ್ವಾ ವಸೇದ್ವಾ ನಿತ್ಯಮಾನಿತಃ ॥೯೧॥

ತನ್ನ ಜನ್ಮಸ್ಥಳವು ವ್ಯಾಧಿಗಳಿಂದಲೂ, ದುರ್ಭಿಕ್ಷದಿಂದಲೂ ಪೀಡಿತವಾಗಿದ್ದಲ್ಲಿ ಆತ್ಮರಕ್ಷಣೆಗಾಗಿ ಆ ಜನ್ಮಸ್ಥಳವನ್ನೇ ಬಿಟ್ಟು ಹೊರಟುಹೋಗಬೇಕು. ಬೇರೆಯ ಕಡೆಗೆ ಹೋಗಿ ವಾಸಮಾಡಬೇಕು. ಒಂದು ವೇಳೆ ಹುಟ್ಟಿದ ಸ್ಥಳದಲ್ಲಿಯೇ ಇರುವುದಾದರೂ ಸರ್ವಸಮ್ಮಾನ್ಯನಾಗಿರಬೇಕು.

ತಸ್ಮಾದನ್ಯತ್ರ ಯಾಸ್ಯಾಮಿ ವಸ್ತುಂ ನಾಹಮಿಹೋತ್ಸಹೇ ।
ಕೃತಮೇತದನಾರ್ಯಂ ಮೇ ತವ ಪುತ್ರೇ ಚ ಪಾರ್ಥಿವ ॥೯೨॥

ಮಹಾರಾಜ! ನಾನು ನಿನ್ನ ಮಗನ ವಿಷಯದಲ್ಲಿ ಅನಾರ್ಯಳಂತೆ ವ್ಯವಹರಿಸಿರುವೆನು. ಆದುದರಿಂದ ನಾನು ಬೇರೆಯ ಕಡೆಗೆ ಹೊರಟುಹೋಗುತ್ತೇನೆ. ನಿನ್ನ ಅರಮನೆಯಲ್ಲಿಯೇ ಇರಲು ನಾನು ಉತ್ಸಾಹಿಯಾಗಿಲ್ಲ.

ಕುಭಾರ್ಯಾಂ ಚ ಕುಪುತ್ರಂ ಚ ಕುರಾಜಾನಂ ಕುಸೌಹೃದಮ್ ।
ಕುಸಮ್ಬನ್ಧಂ ಕುದೇಶಂ ಚ ದೂರತಃ ಪರಿವರ್ಜಯೇತ್ ॥೯೩॥

ದುಷ್ಟಭಾರ್ಯೆಯನ್ನೂ, ದುಷ್ಟಪುತ್ರನನ್ನೂ, ದುಷ್ಟರಾಜನನ್ನೂ, ದುಷ್ಟಮಿತ್ರನನ್ನೂ, ದುಷ್ಟಬಂಧುವನ್ನೂ, ದುಷ್ಟದೇಶವನ್ನೂ–ದೂರದಿಂದಲೇ ತ್ಯಾಗಮಾಡಬೇಕು. (ತ್ಯಾಗಮಾಡಿ ಬಹಳ ದೂರ ಹೊರಟುಹೋಗಬೇಕು.)

ಕುಪುತ್ರೇ ನಾಸ್ತಿ ವಿಶ್ವಾಸಃ ಕುಭಾರ್ಯಾಯಾಂ ಕುತೋ ರತಿಃ ।
ಕುರಾಜ್ಯೇ ನಿರ್ವೃತಿರ್ನಾಸ್ತಿ ಕುದೇಶೇ ನಾಸ್ತಿ ಜೀವಿಕಾ ॥೯೪॥

ದುಷ್ಟಪುತ್ರನ ವಿಷಯದಲ್ಲಿ ವಿಶ್ವಾಸವನ್ನಿಡಲು ಸಾಧ್ಯವಾಗುವುದಿಲ್ಲ. ದುಷ್ಟಭಾರ್ಯೆಯಲ್ಲಿ ರತಿಸುಖವನ್ನು ಪಡೆಯಲು ಹೇಗೆ ಸಾಧ್ಯವಾದೀತು? ದುಷ್ಟರಾಜನ ರಾಜ್ಯದಲ್ಲಿ ಶಾಂತಿಯು ಲಭಿಸುವುದಿಲ್ಲ. ದುಷ್ಟದೇಶದಲ್ಲಿ ಜೀವನನಿರ್ವಹಣೆಯೂ ಸಾಧ್ಯವಾಗುವುದಿಲ್ಲ.

ಕುಮಿತ್ರೇ ಸಂಗತಿರ್ನಾಸ್ತಿ ನಿತ್ಯಮಸ್ಥಿರಸೌಹೃದೇ ।
ಅವಮಾನಃ ಕುಸಮ್ಬನ್ಧೇ ಭವತ್ಯರ್ಥವಿಪರ್ಯಯೇ ॥೯೫॥

ಸರ್ವದಾ ಚಂಚಲವಾದ ಮೈತ್ರಿಯಿಂದ ಕೂಡಿರುವ ದುಷ್ಟಮಿತ್ರನಲ್ಲಿ ಸ್ನೇಹವು ಶಾಶ್ವತವಾಗಿ ಉಳಿಯುವುದಿಲ್ಲ. ದುಷ್ಟಸಂಬಂಧಿಗಳನ್ನು ಹೊಂದಿರುವವನು ಅರ್ಥದ ವಿಪರ್ಯಾಸವಾದೊಡನೆಯೇ ಅವಮಾನಕ್ಕೆ ಪಾತ್ರನಾಗುತ್ತಾನೆ.

ಸಾ ಭಾರ್ಯಾ ಯಾ ಪ್ರಿಯಂ ಬ್ರೂತೇ ಸ ಪುತ್ರೋ ಯತ್ರ ನಿರ್ವೃತಿಃ।
ತನ್ಮಿತ್ರಂ ಯತ್ರ ವಿಶ್ವಾಸಃ ಸ ದೇಶೋ ಯತ್ರ ಜೀವ್ಯತೇ ॥೯೬॥

ಯಾವ ಸ್ತ್ರೀಯು ಪತಿಗೆ ಪ್ರಿಯವಚನಗಳನ್ನು ಹೇಳುವಳೋ–ಅವಳೇ ಶ್ರೇಷ್ಠಳಾದ ಭಾರ್ಯೆಯು. ಯಾವ ಪುತ್ರನು ತಂದೆಗೆ ಸುಖದಾಯಕನಾಗಿರುವನೋ–ಅವನೇ ಶ್ರೇಷ್ಠನಾದ ಸುತನು. ವಿಶ್ವಾಸವಿಡಲು ಯೋಗ್ಯನಾದವನೇ ಶ್ರೇಷ್ಠಮಿತ್ರನು. ಜೀವಿಕೆಗೆ ಅನುಕೂಲವಾಗಿರುವ ಸ್ಥಳವೇ ಶ್ರೇಷ್ಠವಾದ ದೇಶವು.

ಯತ್ರ ನಾಸ್ತಿ ಬಲಾತ್ಕಾರಃ ಸ ರಾಜಾ ತೀವ್ರಶಾಸನಃ ।
ಭೀರೇವ ನಾಸ್ತಿ ಸಮ್ಬನ್ಧೋ ದರಿದ್ರಂ ಯೋ ಬುಭೂಷತೇ ॥೯೭॥

ಯಾವನ ರಾಜ್ಯದಲ್ಲಿ ಬಲಾತ್ಕಾರದಿಂದ ತೆರಿಗೆಗಳನ್ನು ತೆಗೆದುಕೊಳ್ಳುವುದಿಲ್ಲವೋ, ಯಾವನ ರಾಜ್ಯದಲ್ಲಿ ಭಯವೆಂಬುದೇ ಇಲ್ಲವೋ, ಯಾವನು ದರಿದ್ರರನ್ನು ಪೋಷಿಸುವನೋ ಮತ್ತು ಯಾವನ ರಾಜ್ಯದಲ್ಲಿ ಪ್ರಜೆಗಳಿಗೂ ಮತ್ತು ರಾಜನಿಗೂ ಪಾಲ್ಯ-ಪಾಲಕ ಸಂಬಂಧವಿರುವುದೋ–ಅಂತಹ ಅತ್ಯಂತದಕ್ಷನಾದ ರಾಜನೇ ಶ್ರೇಷ್ಠನಾದ ರಾಜನು.

ಭಾರ್ಯಾ ದೇಶೋಽಥ ಮಿತ್ರಾಣಿ ಪುತ್ರಸಮ್ಬನ್ಧಿಬಾನ್ಧವಾಃ ।
ಏತೇ ಸರ್ವೇ ಗುಣವತಿ ಧರ್ಮನೇತ್ರೇ ಮಹೀಪತೌ ॥೯೮॥

ರಾಜನು ಗುಣವಂತನೂ, ಧರ್ಮಪರಾಯಣನೂ ಆಗಿದ್ದರೆ–ಭಾರ್ಯೆ, ದೇಶ, ಮಿತ್ರರು, ಪುತ್ರರು, ಸಂಬಂಧಿಗಳು, ಬಂಧುಗಳು–ಈ ಎಲ್ಲರೂ ಗುಣವಂತರೇ ಆಗುತ್ತಾರೆ.

ಅಧರ್ಮಜ್ಞಸ್ಯ ವಿಲಯಂ ಪ್ರಜಾ ಗಚ್ಛನ್ತಿ ನಿಗ್ರಹಾತ್ ।
ರಾಜಾ ಮೂಲಂ ತ್ರಿವರ್ಗಸ್ಯ ಸ್ವಪ್ರಮತ್ತೋಽನುಪಾಲಯೇತ್ ॥೯೯॥

ಯಾವ ರಾಜನು ಧರ್ಮವನ್ನು ತಿಳಿದಿರುವುದಿಲ್ಲವೋ ಅಂತಹ ರಾಜನ ಅತ್ಯುಗ್ರಶಾಸನದಿಂದಾಗಿ ಪ್ರಜೆಗಳು ವಿನಾಶಹೊಂದುತ್ತಾರೆ. ರಾಜನು ಧರ್ಮಾರ್ಥ-ಕಾಮಗಳ ಪ್ರಾಪ್ತಿಗೆ ಮೂಲಕಾರಣನಾಗಿರುತ್ತಾನೆ. ಆದುದ ರಿಂದ ರಾಜನು ಅತ್ಯಂತಜಾಗರೂಕತೆಯಿಂದ ಪ್ರಜೆಗಳನ್ನು ಪಾಲಿಸಬೇಕು.

ಬಲಿಷಡ್ಭಾಗಮುದ್ಧೃತ್ಯ ಬಲಿಂ ಸಮುಪಯೋಜಯೇತ್ ।
ನ ರಕ್ಷತಿ ಪ್ರಜಾಃ ಸಮ್ಯಗ್ಯಃ ಸ ಪಾರ್ಥಿವತಸ್ಕರಃ ॥೧೦೦॥

ಪ್ರಜೆಗಳಿಂದ ಅವರ ಆದಾಯದಲ್ಲಿ ಆರನೆಯ ಒಂದು ಭಾಗವನ್ನು ತೆಗೆದುಕೊಂಡು ಅದನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸ ಬೇಕು. ಯಾವ ರಾಜನು ಹಾಗೆ ಪ್ರಜೆಗಳನ್ನು ಚೆನ್ನಾಗಿ ಪರಿಪಾಲಿಸುವು ದಿಲ್ಲವೋ–ಅಂತಹ ರಾಜನು ಚೋರರಾಜನೆನಿಸಿಕೊಳ್ಳುತ್ತಾನೆ.

ದತ್ತ್ವಾಭಯಂ ಯಃ ಸ್ವಯಮೇವ ರಾಜಾ
ನ ತತ್ಪ್ರಮಾಣಂ ಕುರುತೇಽರ್ಥಲೋಭಾತ್ ।
ಸ ಸರ್ವಲೋಕಾದುಪಲಭ್ಯ ಪಾಪಂ
ಸೋಽಧರ್ಮಬುದ್ಧಿರ್ನಿರಯಂ ಪ್ರಯಾತಿ ॥೧೦೧॥

ಯಾವ ರಾಜನು ಪ್ರಜೆಗಳಿಗೆ ಅಭಯಪ್ರದಾನಮಾಡಿ ಅನಂತರ ಧನ ಲೋಭದಿಂದಾಗಿ ತನ್ನ ಪ್ರತಿಜ್ಞೆಯನ್ನು ಪರಿಪಾಲಿಸುವುದಿಲ್ಲವೋ–ಅಂತಹ ಅಧರ್ಮಬುದ್ಧಿಯಾದ ರಾಜನು ಸಕಲಜಗತ್ತಿನ ಪಾಪವನ್ನೂ ಪಡೆದುಕೊಂಡು ನರಕಕ್ಕೆ ಹೋಗುತ್ತಾನೆ.

ದತ್ತ್ವಾಭಯಂ ಸ್ವಯಂ ರಾಜಾ ಪ್ರಮಾಣಂ ಕುರುತೇ ಯದಿ ।
ಸ ಸರ್ವಸುಖಕೃಜ್ಜ್ಞೇಯಃ ಪ್ರಜಾ ಧರ್ಮೇಣ ಪಾಲಯನ್ ॥೧೦೨॥

ಧರ್ಮದಿಂದ ಪಾಲನೆಮಾಡುವುದಾಗಿ ಪ್ರಜೆಗಳಿಗೆ ಅಭಯವನ್ನಿತ್ತು, ಪ್ರಜೆಗಳನ್ನು ಧರ್ಮದಿಂದ ಪರಿಪಾಲನೆಮಾಡುತ್ತಾ ತಾನಿತ್ತ ವಚನವನ್ನು ಪ್ರಮಾಣೀಕರಿಸುವನೋ–ಅಂತಹ ರಾಜನು ಸರ್ವರಿಗೂ ಸುಖದಾಯಕ ನಾದ ಶ್ರೇಷ್ಠನಾದ ರಾಜನೆನಿಸಿಕೊಳ್ಳುತ್ತಾನೆ.

ಮಾತಾ ಪಿತಾ ಗುರುರ್ಗೋಪ್ತಾ ವಹ್ನಿರ್ವೈಶ್ರವಣೋ ಯಮಃ ।
ಸಪ್ತ ರಾಜ್ಞೋ ಗುಣಾನೇತಾನ್ಮನುರಾಹ ಪ್ರಜಾಪತಿಃ ॥೧೦೩॥

ತಾಯಿಯಲ್ಲಿರುವ ಗುಣಗಳು, ತಂದೆಯಲ್ಲಿರುವ ಗುಣಗಳು, ಗುರುವಿನಲ್ಲಿರುವ ಗುಣಗಳು, ರಕ್ಷಕನಲ್ಲಿರುವ ಗುಣಗಳು, ಅಗ್ನಿಯಲ್ಲಿರುವ ಗುಣಗಳು, ಕುಬೇರನಲ್ಲಿರುವ ಗುಣಗಳು, ಯಮನಲ್ಲಿರುವ ಗುಣಗಳು–ಈ ಏಳು ಗುಣಗಳೂ ರಾಜನೊಬ್ಬನಲ್ಲಿಯೇ ಕೇಂದ್ರೀಕೃತವಾಗಿರುವುದೆಂದು ಪ್ರಜಾಪತಿಮನುವು ಹೇಳಿದ್ದಾನೆ.

ಪಿತಾ ಹಿ ರಾಜಾ ರಾಷ್ಟ್ರಸ್ಯ ಪ್ರಜಾನಾಂ ಯೋಽನುಕಮ್ಪನಃ ।
ತಸ್ಮಿನ್ಮಿಥ್ಯಾವಿನೀತೋ ಹಿ ತಿರ್ಯಗ್ಗಚ್ಛತಿ ಮಾನವಃ ॥೧೦೪॥

ರಾಜನು ಯಾವಾಗಲೂ ಪ್ರಜೆಗಳ ವಿಷಯದಲ್ಲಿ ಕೃಪಾಶೀಲನಾಗಿರುತ್ತಾನೆ. ಆದುದರಿಂದ ರಾಷ್ಟ್ರಕ್ಕೆ ರಾಜನೇ ತಂದೆಯೆಂದು ಹೇಳುತ್ತಾರೆ. ಅಂತಹ ಪಿತೃಸಮಾನನಾದ ರಾಜನ ವಿಷಯದಲ್ಲಿ ಕಪಟದಿಂದ ವರ್ತಿಸುವ ಮನುಷ್ಯನು ಮುಂದೆ ಪಶು-ಪಕ್ಷಿಜನ್ಮಗಳಲ್ಲಿ ಹುಟ್ಟುತ್ತಾನೆ.

ಸಮ್ಭಾವಯತಿ ಮಾತೇವ ದೀನಮಪ್ಯುಪಪದ್ಯತೇ ।
ದಹತ್ಯಗ್ನಿರಿವಾನಿಷ್ಟಾನ್ಯಮಯನ್ನಸತೋ ಯಮಃ ॥೧೦೫॥

ತಾಯಿಯು ಮಕ್ಕಳನ್ನು ಸಂತೈಸಿ ಉಪಚರಿಸುವಂತೆ–ರಾಜನಾದವನು ಪ್ರಜೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ದೀನ-ದಲಿತರನ್ನೂ ಸಂತೈಸಿ ಉಪಚರಿಸುತ್ತಾನೆ. ಆದುದರಿಂದ ರಾಜನು ಪ್ರಜೆಗಳಿಗೆ ಮಾತೃಸಮಾನನೂ ಆಗಿರುತ್ತಾನೆ. ತನಗೂ ಮತ್ತು ಪ್ರಜೆಗಳಿಗೂ ಅಪ್ರಿಯರಾದ ದುಷ್ಟಜನರನ್ನು ಅಗ್ನಿಯಂತೆ ಸುಟ್ಟುಹಾಕುತ್ತಾನೆ. ಆದುದರಿಂದ ರಾಜನು ಅಗ್ನಿಗೆ ಸಮಾನನು. ಅಸತ್ಪುರುಷರನ್ನು ನಿಯಂತ್ರಿಸುವುದರಿಂದ (ಅಂಕೆಯಲ್ಲಿಟ್ಟುಕೊಳ್ಳುವುದರಿಂದ) ರಾಜನು ಯಮನೂ ಆಗಿದ್ದಾನೆ.

ಇಷ್ಟೇಷು ವಿಸೃಜನ್ನರ್ಥಾನ್ಕುಬೇರ ಇವ ಕಾಮದಃ ।
ಗುರುರ್ಧರ್ಮೋಪದೇಶೇನ ಗೋಪ್ತಾ ಚ ಪರಿಪಾಲಯನ್ ॥೧೦೬॥

ಪ್ರಿಯಜನರಿಗೆ ಯಥೇಚ್ಛವಾಗಿ ಧನ-ಕನಕ-ವಸ್ತು-ವಾಹನಗಳನ್ನು ದಯಪಾಲಿಸುತ್ತಾ ಅವರಿಗೆ ಬೇಕು-ಬೇಕಾದುದೆಲ್ಲವನ್ನೂ ಸಿದ್ಧಮಾಡಿಕೊಡುತ್ತಾನೆ. ಆದುದರಿಂದ ರಾಜನು ಕುಬೇರನಿಗೆ ಸಮಾನನು. ಪ್ರಜೆಗಳಿಗೆ ಆಯಾ ಕಾಲಗಳಲ್ಲಿ ಧರ್ಮೋಪದೇಶವನ್ನು ಮಾಡುವುದರಿಂದ ಅಥವಾ ಮಾಡಿಸುವುದರಿಂದ ರಾಜನು ಗುರುವಿಗೆ ಸಮಾನನು. ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುವುದರಿಂದ ರಕ್ಷಕನೂ ಆಗುತ್ತಾನೆ.

ಯಸ್ತು ರಞ್ಜಯತೇ ರಾಜಾ ಪೌರಜಾನಪದಾನ್ಗುಣೈಃ ।
ನ ತಸ್ಯ ಭ್ರಮತೇ ರಾಜ್ಯಂ ಸ್ವಯಂ ಧರ್ಮಾನುಪಾಲನಾತ್ ॥೧೦೭॥

ಪಟ್ಟಣಿಗರನ್ನೂ ಮತ್ತು ಹಳ್ಳಿಗರನ್ನೂ ಯಾವ ರಾಜನು ತನ್ನ ಗುಣಗಣಗಳಿಂದ ಸಂತೋಷಗೊಳಿಸುವನೋ–ಅಂತಹ ರಾಜನ ರಾಜ್ಯವು ವಿಚಲಿತವಾಗುವುದಿಲ್ಲ. (ರಾಜನು ಪದಚ್ಯುತನಾಗುವುದಿಲ್ಲ.) ಏಕೆಂದರೆ : ರಾಜನೇ ಸ್ವತಃ ಧರ್ಮಪರಿಪಾಲಕನಾಗಿರುತ್ತಾನೆ.

ಸ್ವಯಂ ಸಮುಪಜಾನನ್ಹಿ ಪೌರಜಾನಪದಾರ್ಚನಮ್ ।
ಸ ಸುಖಂ ಪ್ರೇಕ್ಷತೇ ರಾಜಾ ಇಹ ಲೋಕೇ ಪರತ್ರ ಚ ॥೧೦೮॥

ಯಾವ ರಾಜನು ನಗರವಾಸಿಗಳನ್ನೂ ಮತ್ತು ಹಳ್ಳಿಗಳ ಜನರನ್ನೂ ಯಥೋಚಿತವಾಗಿ ಸಮಯಗಳಲ್ಲಿ ಸಮ್ಮಾನಮಾಡುವುದನ್ನು ತಿಳಿದಿರುವನೋ–ಅಂತಹ ರಾಜನು ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖವನ್ನೇ ಕಾಣುತ್ತಾನೆ.

ನಿತ್ಯೋದ್ವಿಗ್ನಾಃ ಪ್ರಜಾ ಯಸ್ಯ ಕರಭಾರಪ್ರಪೀಡಿತಾಃ ।
ಅನರ್ಥೈರ್ವಿಪ್ರಲುಪ್ಯನ್ತೇ ಸ ಗಚ್ಛತಿ ಪರಾಭವಮ್ ॥೧೦೯॥

ಯಾವ ರಾಜನ ರಾಜ್ಯದಲ್ಲಿ ಪ್ರಜೆಗಳು ಅಧಿಕವಾದ ತೆರಿಗೆಗಳಿಂದ ಪೀಡಿಸಲ್ಪಟ್ಟವರಾಗಿ ನಿತ್ಯವೂ ಭಯದಿಂದ ಉದ್ವಿಗ್ನರಾಗಿರುವರೋ ಮತ್ತು ನಾನಾವಿಧವಾದ ಅನರ್ಥಗಳಿಂದ ಹಾನಿಗೊಳ್ಳುತ್ತಾರೆಯೋ–ಅಂತಹ ರಾಜ್ಯದ ರಾಜನು ಪರಾಭವಹೊಂದುತ್ತಾನೆ.

ಪ್ರಜಾ ಯಸ್ಯ ವಿವರ್ಧನ್ತೇ ಸರಸೀವ ಮಹೋತ್ಪಲಮ್ ।
ಸ ಸರ್ವಫಲಭಾಗ್ರಾಜಾ ಸ್ವರ್ಗಲೋಕೇ ಮಹೀಯತೇ ॥೧೧೦॥

ಸರೋವರದಲ್ಲಿ ಕಮಲಪುಷ್ಪಗಳು ವಿಕಸಿತವಾಗುವಂತೆ–ಯಾವ ರಾಜನ ರಾಜ್ಯದಲ್ಲಿ ಪ್ರಜೆಗಳು ಅಭಿವೃದ್ಧಿಹೊಂದುವರೋ–ಅಂತಹ ರಾಜ್ಯದ ರಾಜನು ಪ್ರಜೆಗಳು ಮಾಡುವ ಎಲ್ಲ ಪುಣ್ಯಫಲಗಳಿಗೂ ಭಾಗಿಯಾಗುತ್ತಾನೆ ಮತ್ತು ಅವಸಾನಾನಂತರದಲ್ಲಿ ಸ್ವರ್ಗಲೋಕದಲ್ಲಿಯೂ ಸಮ್ಮಾನಿತನಾಗುತ್ತಾನೆ.

ಬಲಿನಾ ವಿಗ್ರಹೋ ರಾಜನ್ನ ಕದಾಚಿತ್ಪ್ರಶಸ್ಯತೇ ।
ಬಲಿನಾ ವಿಗ್ರಹೋ ಯಸ್ಯ ಕುತೋ ರಾಜ್ಯಂ ಕುತಃ ಸುಖಮ್ ॥

ಮಹಾರಾಜ! ಬಲಿಷ್ಠನಾದವನೊಡನೆ ಯುದ್ಧವು ಯಾವಾಗಲೂ ಪ್ರಶಂಸನೀಯವಲ್ಲ. ತನಗಿಂತ ಬಲಿಷ್ಠರೊಡನೆ ಯುದ್ಧಮಾಡುವ ರಾಜನಿಗೆ ರಾಜ್ಯವೆಲ್ಲಿಯದು? ಸುಖವೆಲ್ಲಿಯದು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಪೂಜನಿಯು ಹೀಗೆ ಹೇಳಿ ರಾಜನ ಅನುಮತಿಯನ್ನು ಪಡೆದು ಅಭೀಷ್ಟವಾದ ದಿಕ್ಕಿನತ್ತ ಹಾರಿಹೋಯಿತು.

ನೃಪಶ್ರೇಷ್ಠನೇ! ಬ್ರಹ್ಮದತ್ತರಾಜನಿಗೂ ಪೂಜನಿಗೂ ನಡೆದ ಸಂಭಾಷಣೆಯನ್ನು ನಾನು ನಿನಗೆ ಹೇಳಿರುತ್ತೇನೆ. ಬೇರೆ ಯಾವ ವಿಷಯವನ್ನು ಕೇಳಲು ಇಚ್ಛಿಸಿರುವೆ?"

೧೩೯ನೆಯ ಅಧ್ಯಾಯವು ಮುಗಿಯಿತು.

೧೪೦ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಕಣಿಕನು ಸೌರಾಷ್ಟ್ರದೇಶದ ರಾಜನಿಗೆ ಕೂಟನೀತಿಯನ್ನು ಉಪದೇಶಿಸಿದುದು

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯುಗಕ್ಷಯಾತ್ಪರಿಕ್ಷೀಣೇ ಧರ್ಮೇ ಲೋಕೇ ಚ ಭಾರತ ।
ದಸ್ಯುಭಿಃ ಪೀಡ್ಯಮಾನೇ ಚ ಕಥಂ ಸ್ಥೇಯಂ ಪಿತಾಮಹ ॥೧॥

"ಪಿತಾಮಹನೇ! ಕೃತ-ತ್ರೇತಾ-ದ್ವಾಪರಯುಗಗಳು ಕ್ಷಯಿಸುತ್ತಿರಲಾಗಿ ಲೋಕದಲ್ಲಿ ಧರ್ಮವು ಕ್ಷಯಿಸುತ್ತದೆ. ಧರ್ಮವು ಗ್ಲಾನಿಹೊಂದಿ

ದೊಡನೆಯೇ ಲೋಕವು ಕಳ್ಳ-ಕಾಕರಿಂದಲೂ, ದರೋಡೆಗಾರರಿಂದಲೂ ಪೀಡಿಸಲ್ಪಡುವ ಸಮಯದಲ್ಲಿ ಅವರನ್ನು ಎದುರಿಸಿ ನಿಲ್ಲುವುದು ಹೇಗೆ?"

ಭೀಷ್ಮನು ಹೇಳುತ್ತಾನೆ :

"ಭಾರತನೇ! ಅಂತಹ ಸಮಯಗಳಲ್ಲಿ ಆಪತ್ಕಾಲದ ನೀತಿಗೆ ಅನುಸಾರವಾಗಿ ರಾಜನು ನೈರ್ಘೃಣ್ಯವನ್ನಾದರೂ ಅವಲಂಬಿಸಿ (ದಯೆಯನ್ನು ಬಿಟ್ಟಾದರೂ) ಯಾವ ರೀತಿಯಲ್ಲಿ ವ್ಯವಹರಿಸಬೇಕೆಂಬುದನ್ನೂ, ಆಪತ್ಕಾಲದಲ್ಲಿ ಯಾವ ನೀತಿಯನ್ನು ಅನುಸರಿಸಬೇಕೆಂಬುದನ್ನೂ ಹೇಳುವೆನು ; ಕೇಳು:

ಈ ವಿಷಯದಲ್ಲಿ ಹಿಂದೆ ಭರದ್ವಾಜವಂಶೋತ್ಪನ್ನನಾದ ಕಣಿಕನಿಗೂ ಮತ್ತು ಶತ್ರುಂಜಯನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ.

ಸೌವೀರದೇಶದಲ್ಲಿ ಶತ್ರುಂಜಯನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದ ಮಹಾರಥನಾದ ರಾಜನಿದ್ದನು. ಅವನೊಮ್ಮೆ ಆಪತ್ಕಾಲದಲ್ಲಿ ತನ್ನ ಕರ್ತವ್ಯವೇನೆಂಬುದನ್ನು ನಿಶ್ಚಯಿಸುವ ಸಲುವಾಗಿ ಕಣಿಕನ ಬಳಿಗೆ ಹೋಗಿ ಅವನನ್ನು ಪ್ರಶ್ನಿಸಿದನು :

ಅಲಬ್ಧಸ್ಯ ಕಥಂ ಲಿಪ್ಸಾ ಲಬ್ಧಂ ಕೇನ ವಿವರ್ಧತೇ ।
ವರ್ಧಿತಂ ಪಾಲ್ಯತೇ ಕೇನ ಪಾಲಿತಂ ಪ್ರಣಯೇತ್ಕಥಮ್ ॥೫॥

"ಪೂಜ್ಯರೇ! ಅಪ್ರಾಪ್ತವಾದ ವಸ್ತುವನ್ನು ಪಡೆದುಕೊಳ್ಳುವುದು ಹೇಗೆ? ವಸ್ತುವನ್ನು ಪಡೆದುಕೊಂಡನಂತರ ಅದನ್ನು ಯಾವ ಉಪಾಯದಿಂದ ವೃದ್ಧಿಗೊಳಿಸಬೇಕು? ಹಾಗೆ ವೃದ್ಧಿಗೊಳಿಸಿದ ವಸ್ತುವು ಯಾವ ಪ್ರಕಾರದಿಂದ ಪಾಲಿಸಲ್ಪಡಬೇಕು? ಸಂರಕ್ಷಿಸಲ್ಪಟ್ಟ ವಸ್ತುವನ್ನು ಸದುಪಯೋಗಪಡಿಸುವುದು ಹೇಗೆ?"

ಯುಧಿಷ್ಠಿರ! ಶಾಸ್ತ್ರನಿಶ್ಚಿತವಾದ ಅರ್ಥವನ್ನು ತಿಳಿಯುವ ಸಲುವಾಗಿ ಪ್ರಶ್ನಿಸಲ್ಪಟ್ಟ ಭಾರದ್ವಾಜನು ಶತ್ರುಂಜಯನಿಗೆ ಶಾಸ್ತ್ರಾರ್ಥನಿಶ್ಚಯದಿಂದ ಕೂಡಿದ್ದು ಯುಕ್ತಿಯುಕ್ತವೂ–ಉತ್ತಮವೂ ಆಗಿದ್ದ ಈ ಮಾತುಗಳನ್ನು ಹೇಳಿದನು :

ನಿತ್ಯಮುದ್ಯತದಣ್ಡಃ ಸ್ಯಾನ್ನಿತ್ಯಂ ವಿವೃತಪೌರುಷಃ ।
ಅಚ್ಛಿದ್ರಶ್ಛಿದ್ರದರ್ಶೀ ಚ ಪರೇಷಾಂ ವಿವರಾನುಗಃ ॥೭॥

"ರಾಜನಾದವನು ಯಾವಾಗಲೂ ದಂಡವನ್ನೆತ್ತಿಯೇ ಇರಬೇಕು. ತನ್ನ ಪೌರುಷವನ್ನು ತೋರಿಸುತ್ತಲೇ ಇರಬೇಕು. ತನ್ನಲ್ಲಿ ಯಾವ ವಿಧವಾದ ನ್ಯೂನತೆಯೂ ಉಂಟಾಗದಂತೆ ಜಾಗರೂಕನಾಗಿರಬೇಕು. ಶತ್ರುಪಕ್ಷದಲ್ಲಿರುವ ನ್ಯೂನತೆಯನ್ನು ಅಥವಾ ದೌರ್ಬಲ್ಯವನ್ನು ತಿಳಿದುಕೊಳ್ಳಬೇಕು. ಶತ್ರುಗಳಲ್ಲಿರುವ ದೌರ್ಬಲ್ಯವನ್ನು ತಿಳಿದುಕೊಂಡು ಸಮಯವರಿತು ಅವ ರನ್ನು ಆಕ್ರಮಿಸಬೇಕು.

ನಿತ್ಯಮುದ್ಯತದಣ್ಡಸ್ಯ ಭೃಶಮುದ್ವಿಜತೇ ನರಃ ।
ತಸ್ಮಾತ್ಸರ್ವಾಣಿ ಭೂತಾನಿ ದಣ್ಡೇನೈವ ಪ್ರಸಾಧಯೇತ್ ॥೮॥

ರಾಜನು ಯಾವಾಗಲೂ ಶಿಕ್ಷಿಸುವ ಸ್ವಭಾವದವನೇ ಆಗಿದ್ದರೆ ಪ್ರಜೆ ಗಳು ಬಹಳವಾಗಿ ಹೆದರುತ್ತಾರೆ. ಆದುದರಿಂದ ಸಕಲಪ್ರಾಣಿಗಳನ್ನೂ (ಸಕಲಪ್ರಜೆಗಳನ್ನೂ) ದಂಡದ ಮೂಲಕವಾಗಿಯೇ ಸ್ವಾಧೀನಪಡಿಸಿಕೊಳ್ಳ ಬೇಕು.

ಏವಂ ದಣ್ಡಂ ಪ್ರಶಂಸನ್ತಿ ಪಣ್ಡಿತಾಸ್ತತ್ತ್ವದರ್ಶಿನಃ ।
ತಸ್ಮಾಚ್ಚತುಷ್ಟಯೇ ತಸ್ಮಿನ್ಪ್ರಧಾನೋ ದಣ್ಡ ಉಚ್ಯತೇ ॥೯॥

ತತ್ತ್ವದರ್ಶಿಗಳಾದ ವಿದ್ವಾಂಸರು ದಂಡನೀತಿಯನ್ನು ಬಹಳವಾಗಿ ಪ್ರಶಂಸೆಮಾಡುತ್ತಾರೆ. ಆದುದರಿಂದ ಸಾಮ-ದಾನ-ಭೇದ-ದಂಡಗಳೆಂಬ ಚತುರುಪಾಯಗಳಲ್ಲಿ ದಂಡೋಪಾಯವೇ ಪ್ರಧಾನವೆಂದು ಹೇಳುತ್ತಾರೆ.

ಛಿನ್ನಮೂಲೇ ತ್ವಧಿಷ್ಠಾನೇ ಸರ್ವೇಷಾಂ ಜೀವನಂ ಹತಮ್ ।
ಕಥಂ ಹಿ ಶಾಖಾಸ್ತಿಷ್ಠೇಯುಶ್ಛಿನ್ನಮೂಲೇ ವನಸ್ಪತೌ ॥೧೦॥

ಆಧಾರಭೂತವಾಗಿರುವ ಮೂಲವೇ (ಶತ್ರುರಾಜನೇ) ನಷ್ಟವಾಗಿ ಹೋಯಿತೆಂದರೆ ಆ ಮೂಲವನ್ನೇ (ಶತ್ರುರಾಜನನ್ನೇ) ಆಶ್ರಯಿಸಿರುವ ಸರ್ವಶತ್ರುಗಳ ಜೀವನವೂ ನಷ್ಟವಾಗಿ ಹೋಗುತ್ತದೆ. ವೃಕ್ಷದ ಮೂಲವನ್ನೇ ಕತ್ತರಿಸಿಬಿಟ್ಟರೆ ಅದರಲ್ಲಿರುವ ರೆಂಬೆಗಳು ಹೇಗೆತಾನೇ ಉಳಿದುಕೊಳ್ಳುವುವು?

ಮೂಲಮೇವಾದಿತಶ್ಛಿನ್ದ್ಯಾತ್ಪರಪಕ್ಷಸ್ಯ ಪಣ್ಡಿತಃ ।
ತತಃ ಸಹಾಯಾನ್ಪಕ್ಷಂ ಚ ಮೂಲಮೇವಾನುಸಾಧಯೇತ್ ॥೧೧॥

ವಿದ್ವಾಂಸನಾದ ರಾಜನು ಮೊದಲು ಶತ್ರುಪಕ್ಷದ ಮೂಲವನ್ನೇ ಕತ್ತರಿಸಿಹಾಕಬೇಕು. ಅನಂತರ ಅವನ ಸಹಾಯಕರನ್ನೂ ಮತ್ತು ಪಕ್ಷಪಾತಿಗಳನ್ನೂ ಕೂಡ ಸಮೂಲವಾಗಿ ವಿನಾಶಗೊಳಿಸಬೇಕು.

ಸುಮನ್ತ್ರಿತಂ ಸುವಿಕ್ರಾನ್ತಂ ಸುಯುದ್ಧಂ ಸುಪಲಾಯಿತಮ್ ।
ಆಪದಾಸ್ಪದಕಾಲೇ ತು ಕುರ್ವೀತ ನ ವಿಚಾರಯೇತ್ ॥೧೨॥

ಆಪತ್ಕಾಲದಲ್ಲಿ ರಾಜನು ಚತುರರಾದ ಮಂತ್ರಿಗಳೊಡನೆ ಸಮಾಲೋಚನೆಮಾಡಬೇಕು. ಶ್ರೇಷ್ಠವಾದ ಪೌರುಷವನ್ನು ತೋರಿಸಬೇಕು. ಉತ್ಸಾಹಪೂರ್ವಕವಾಗಿ ಯುದ್ಧಮಾಡಬೇಕು. ಸಮಯವು ಬಂದಾಗ ಚತುರತೆಯಿಂದ ಪಲಾಯನವನ್ನೂ ಮಾಡಬೇಕು. ಆಪತ್ಕಾಲದಲ್ಲಿ ಅವಶ್ಯವಾದ ಕಾರ್ಯಗಳನ್ನು ಒಡನೆಯೇ ಮಾಡಿಬಿಡಬೇಕೇ ಹೊರತು ವಿಚಾರ ಮಾಡುತ್ತಾ ಕುಳಿತುಕೊಳ್ಳಬಾರದು.

ವಾಙ್ಮಾತ್ರೇಣ ವಿನೀತಃ ಸ್ಯಾದ್ಧೃದಯೇನ ಯಥಾ ಕ್ಷುರಃ ।
ಶ್ಲಕ್ಷ್ಣಪೂರ್ವಾಭಿಭಾಷೀ ಚ ಕಾಮಕ್ರೋಧೌ ವಿವರ್ಜಯೇತ್ ॥೧೩॥

ಮಾತಿನಲ್ಲಿ ಮಾತ್ರವೇ ವಿನಯಶೀಲನಾಗಿರಬೇಕು. ಹೃದಯದಲ್ಲಿ ಕತ್ತಿಯಂತೆ ತೀಕ್ಷ್ಣತೆಯನ್ನು ಹೊಂದಿರಬೇಕು. ಮಂದಹಾಸಪೂರ್ವಕವಾಗಿ ಸುಮಧುರವಾದ ಮಾತುಗಳನ್ನೇ ಆಡುತ್ತಿರಬೇಕು. ಕಾಮ-ಕ್ರೋಧಗಳೆರಡನ್ನೂ ವರ್ಜಿಸಬೇಕು.

ಸಪತ್ನಸಹಿತೇ ಕಾರ್ಯೇ ಕೃತ್ವಾ ಸಂಧಿಂ ನ ವಿಶ್ವಸೇತ್ ।
ಅಪಕ್ರಾಮೇತ್ತತಃ ಶೀಘ್ರಂ ಕೃತಕಾರ್ಯೋ ವಿಚಕ್ಷಣಃ ॥೧೪॥

ಶತ್ರುವಿನೊಡನೆ ಯಾವುದಾದರೂ ಒಪ್ಪಂದಕ್ಕೆ ಬರಬೇಕಾದ ಸಮಯದಲ್ಲಿ ಸಂಧಿಯನ್ನು ಮಾಡಿಕೊಂಡರೂ ಅವನಲ್ಲಿ ವಿಶ್ವಾಸವನ್ನಿಡಬಾರದು. ವಿಚಕ್ಷಣನಾದವನು ಆಗಬೇಕಾದ ಕಾರ್ಯವು ಮುಗಿದೊಡನೆಯೇ ಬಹಳ ಶೀಘ್ರವಾಗಿ ಆ ಸ್ಥಳವನ್ನೇ ಬಿಟ್ಟು ಹೊರಟುಹೋಗಬೇಕು.

ಶತ್ರುಂ ಚ ಮಿತ್ರರೂಪೇಣ ಸಾನ್ತ್ವೇನೈವಾಭಿಸಾನ್ತ್ವಯೇತ್ ।
ನಿತ್ಯಶಶ್ಚೋದ್ವಿಜೇತ್ತಸ್ಮಾದ್ಗೃಹಾತ್ಸರ್ಪಯುತಾದಿವ ॥೧೫॥

ಮಿತ್ರನಂತೆಯೇ ನಡೆದುಕೊಳ್ಳುತ್ತಾ ಶತ್ರುವನ್ನು ಸುಮಧುರವಾದ ಮಾತುಗಳಿಂದ ಸಂತೈಸುತ್ತಲೇ ಇರಬೇಕು. ಆದರೆ ಹಾವು ಹೊಕ್ಕ ಮನೆಯಲ್ಲಿ ವಾಸಿಸುತ್ತಿರುವವರು ಉದ್ವಿಗ್ನರಾಗಿರುವಂತೆ–ಶತ್ರುವಿನ ವಿಷಯದಲ್ಲಿ ಯಾವಾಗಲೂ ಉದ್ವಿಗ್ನನಾಗಿಯೇ ಇರಬೇಕು.

ಯಸ್ಯ ಬುದ್ಧಿಃ ಪರಿಭವೇತ್ತಮತೀತೇನ ಸಾನ್ತ್ವಯೇತ್ ।
ಅನಾಗತೇನ ದುಷ್ಪ್ರಜ್ಞಂ ಪ್ರತ್ಯುತ್ಪನ್ನೇನ ಪಣ್ಡಿತಮ್ ॥೧೬॥

ಯಾವನ ಬುದ್ಧಿಯು ಶೋಕಾಭಿಭೂತವಾಗಿರುವುದೋ–ಅವನಿಗೆ ಹಿಂದೆ ನಡೆದ (ನಳ, ಶ್ರೀರಾಮ ಇವರ) ಇತಿಹಾಸಗಳನ್ನು ಹೇಳಿ ಸಮಾಧಾನಪಡಿಸಬೇಕು. ದುಷ್ಟಬುದ್ಧಿಯಿರುವವರನ್ನು ಮುಂದೆ ಸಂಭವಿಸಬಹುದಾದ ದುಷ್ಪರಿಣಾಮಗಳನ್ನು ವಿವರಿಸಿ ಹೇಳಿ ಎಚ್ಚರಿಸಬೇಕು. ಪಂಡಿತನನ್ನು ತಾತ್ಕಾಲಿಕವಾದ (ಯುಕ್ತವಾದ ಮಾತುಗಳಿಂದ) ಧನ-ಭೋಜನಾದಿಗಳಿಂದ ಸಂತೃಪ್ತಿಗೊಳಿಸಬೇಕು.

ಅಞ್ಜಲಿಂ ಶಪಥಂ ಸಾನ್ತ್ವಂ ಪ್ರಣಮ್ಯ ಶಿರಸಾ ವದೇತ್ ।
ಅಶ್ರುಪ್ರಮಾರ್ಜನಂ ಚೈವ ಕರ್ತವ್ಯಂ ಭೂತಿಮಿಚ್ಛತಾ ॥೧೭॥

ಅಭಿವೃದ್ಧಿಯನ್ನು ಅಪೇಕ್ಷಿಸುವ ರಾಜನು ಸಮಯಗಳಲ್ಲಿ ಶತ್ರುವಿನ ಮುಂದೆ ಕೈಜೋಡಿಸಿಕೊಂಡು ನಿಂತುಕೊಳ್ಳಬೇಕು. ಎಂದೆಂದಿಗೂ ಆಶ್ರಯವನ್ನು ಬಿಟ್ಟುಹೋಗುವುದಿಲ್ಲವೆಂದು ಶಪಥಮಾಡಬೇಕು. ಹೇಳಿಕಳುಹಿಸಿದೊಡನೆಯೇ ಸಹಾಯಕ್ಕೆ ಬರುವುದಾಗಿ ಆಶ್ವಾಸನೆಯನ್ನು ಕೊಡಬೇಕು. ತಲೆಬಾಗಿ ನಮಸ್ಕರಿಸಿ ಮಾತನಾಡಬೇಕು. ಕೆಲವು ಸಮಯಗಳಲ್ಲಿ ಕಣ್ಣೀರನ್ನೂ ಒರೆಸಬೇಕಾಗುತ್ತದೆ. ಇವಿಷ್ಟೂ ಐಶ್ವರ್ಯಾಪೇಕ್ಷಿಯಾದ ರಾಜನ ಕರ್ತವ್ಯವಾಗಿರುತ್ತದೆ.

ವಹೇದಮಿತ್ರಂ ಸ್ಕನ್ಧೇನ ಯಾವತ್ಕಾಲಸ್ಯ ಪರ್ಯಯಃ ।
ಪ್ರಾಪ್ತಕಾಲಂ ತು ವಿಜ್ಞಾಯ ಭಿನ್ದ್ಯಾದ್ಘಟಮಿವಾಶ್ಮನಿ ॥೧೮॥

ಕಾಲವು ಬದಲಾವಣೆ ಹೊಂದುವವರೆಗೂ (ತನಗೆ ಅನುಕೂಲವಾದ

ಕಾಲವು ಪ್ರಾಪ್ತವಾಗುವವರೆಗೂ) ಶತ್ರುವಾದವನನ್ನು ಹೆಗಲಮೇಲೆಯೇ ಕುಳ್ಳಿರಿಸಿಕೊಂಡಿರಬೇಕು. ಕಾಲವು ಬದಲಾಗಿ ತನಗೆ ಅನುಕೂಲವಾಗಿರುವುದೆಂದು ತಿಳಿದುಬಂದೊಡನೆಯೇ–ನೀರು ತುಂಬಿದ ಗಡಿಗೆಯನ್ನು ಕಲ್ಲಿನ ಮೇಲೆ ಕುಕ್ಕಿ ಚೂರು-ಚೂರುಮಾಡುವಂತೆ–ಶತ್ರುವನ್ನು ವಿನಾಶಗೊಳಿಸಬೇಕು.

ಮುಹೂರ್ತಮಪಿ ರಾಜೇನ್ದ್ರ ತಿನ್ದುಕಾಲಾತವಜ್ಜ್ವಲೇತ್ ।
ನ ತುಷಾಗ್ನಿರಿವಾನರ್ಚಿರ್ಧೂಮಾಯೇತ ಚಿರಂ ನರಃ ॥೧೯॥

ಮಹಾರಾಜ! ಮುಹೂರ್ತಕಾಲವಾದರೂ ಒಣಗಿದ ತುಂಬೇಗಿಡವು ಹೊತ್ತಿಕೊಂಡು ಜಾಜ್ಜ್ವಲ್ಯಮಾನವಾಗಿ ಉರಿಯುವಂತೆ–ವರ್ಚಸ್ವಿಯಾಗಿ ಬಾಳಬೇಕು. (ಶತ್ರುವಿನ ಮುಂದೆ ಕ್ಷಣಮಾತ್ರವಾದರೂ ಘೋರ ಪರಾಕ್ರಮವನ್ನು ತೋರಿಸಬೇಕು.) ಜ್ವಾಲೆಗಳಿಂದ ವಿಹೀನವಾದ, ಹೊಟ್ಟಿನಲ್ಲಿ ಸೇರಿಕೊಂಡಿರುವ ಅಗ್ನಿಯಂತೆ–ಎಲ್ಲ ಕಾಲಗಳಲ್ಲಿಯೂ ಹೊಗೆಯಾಡುತ್ತಲೇ ಇರಬಾರದು. (ಸುಪ್ತಪರಾಕ್ರಮನಾಗಿರಬಾರದು.)

ನಾನಾರ್ಥಿಕೋಽರ್ಥಸಮ್ಬನ್ಧಂ ಕೃತಘ್ನೇನ ಸಮಾಚರೇತ್ ।
ಅರ್ಥೀ ತು ಶಕ್ಯತೇ ಭೋಕ್ತುಂ ಕೃತಕಾರ್ಯೋಽವಮನ್ಯತೇ ।
ತಸ್ಮಾತ್ಸರ್ವಾಣಿ ಕಾರ್ಯಾಣಿ ಸಾವಶೇಷಾಣಿ ಕಾರಯೇತ್ ॥೨೦॥

ಹಲವು ಬಗೆಯ ಪ್ರಯೋಜನಗಳನ್ನು ಪಡೆದುಕೊಳ್ಳಬೇಕೆಂಬ ಅಭಿಲಾಷೆಯುಳ್ಳ ಮನುಷ್ಯನು ಕೃತಘ್ನನೊಡನೆ ಆರ್ಥಿಕ ಸಂಬಂಧವನ್ನು ಇಟ್ಟುಕೊಳ್ಳಬಾರದು. ಯಾರೊಬ್ಬರಿಗೂ ಯಾವ ಕಾರ್ಯವನ್ನೂ ಪೂರ್ಣವಾಗಿ ಮಾಡಿಕೊಡಬಾರದು. ಏಕೆಂದರೆ : ಪ್ರಯೋಜನಸಿದ್ಧಿಗಾಗಿ ರಾಜನ ಬಳಿಗೆ ಬರುವ ಮನುಷ್ಯನಿಂದ ಯಾವ ಕಾರ್ಯವನ್ನು ಬೇಕಾದರೂ ಮಾಡಿಸಿಕೊಳ್ಳಬಹುದು. ಅವನ ಕಾರ್ಯವು ಸಿದ್ಧಿಸಿದೊಡನೆಯೇ ಅವನು ಪುನಃ ರಾಜನ ಸಮೀಪಕ್ಕೂ ಬರುವುದಿಲ್ಲ. ಉಪೇಕ್ಷಿಸಲೂಬಹುದು. ಆದುದರಿಂದ ಇತರರಿಗಾಗಿ ಯಾವ ಕಾರ್ಯವನ್ನು ಮಾಡಿದರೂ ಅಪೂರ್ಣವಾಗಿಯೇ ಮಾಡಬೇಕು. ಮುಗಿಸಿಕೊಡುವೆನೆಂಬ ಆಶ್ವಾಸನೆಯನ್ನು ಪದೇ-ಪದೇ ಕೊಡುತ್ತಲೇ ಇರಬೇಕು. ಆ ಮಧ್ಯದಲ್ಲಿ ಅವನಿಂದ (ಅರ್ಥಿಯಿಂದ) ಆಗಬಹು

ದಾದ ಎಲ್ಲ ಕಾರ್ಯಗಳನ್ನೂ ನಿರ್ದಾಕ್ಷಿಣ್ಯವಾಗಿ ಮಾಡಿಸಿಕೊಳ್ಳುತ್ತಲೇ ಇರಬೇಕು.

ಕೋಕಿಲಸ್ಯ ವರಾಹಸ್ಯ ಮೇರೋಃ ಶೂನ್ಯಸ್ಯ ವೇಶ್ಮನಃ ।
ನಟಸ್ಯ ಭಕ್ತಿಮಿತ್ರಸ್ಯ ಯಚ್ಛ್ರೇಯಸ್ತತ್ಸಮಾಚರೇತ್ ॥೨೧॥

ಕೋಗಿಲೆ, ಹಂದಿ, ಮೇರುಪರ್ವತ, ಶೂನ್ಯಗೃಹ, ನಟ, ಅನುರಕ್ತನಾದ ಮಿತ್ರ–ಇವರಲ್ಲಿ ಯಾವ ವಿಶೇಷವಾದ ಗುಣಗಳಿವೆಯೋ–ಆ ಎಲ್ಲ ಗುಣಗಳನ್ನೂ ರಾಜನಾದವನು ಮೈಗೂಡಿಸಿಕೊಳ್ಳಬೇಕು. (ಕೋಗಿಲೆಯ ಶ್ರೇಷ್ಠ ಗುಣ-ಸ್ವರಮಾಧುರ್ಯ. ರಾಜನು ಕೋಗಿಲೆಯಿಂದ ಸ್ವರಮಾಧುರ್ಯದ ಗುಣವನ್ನು ತೆಗೆದುಕೊಳ್ಳಬೇಕು–ಎಂದರೆ ಮಧುರಭಾಷಿಯಾಗಬೇಕು. ಹಂದಿಯ ಗುಣ-ಮೂಲೋತ್ಪಾಟನ. ಗೆಡ್ಡೆ-ಗೆಣಸುಗಳು ಎಷ್ಟೇ ಆಳದಲ್ಲಿದ್ದರೂ ಹಂದಿಯು ಅದನ್ನು ಕಿತ್ತುತಿನ್ನುವುದು–ಹಂದಿಯ ಗುಣ ಗ್ರಹಣವೆಂದರೆ ಶತ್ರುಗಳನ್ನು ಮೂಲೋತ್ಪಾಟನ ಮಾಡುವ ಗುಣ–ಎಂದರ್ಥ. ಮೇರುವಿನ ಗುಣವನ್ನು ಹೊಂದಿರಬೇಕು. ಮೇರುವಿನ ಗುಣ-ಔನ್ನತ್ಯ, ಅಚಲತ್ವ, ಅನುಲ್ಲಂಘನೀಯತ್ವ, ರಾಜನಾದವನು ಆ ಗುಣಗಳನ್ನೂ ಮೈಗೂಡಿಸಿಕೊಳ್ಳಬೇಕು. ಶೂನ್ಯವಾದ ಮನೆಯು ಇತರರಿಗೆ ಆಶ್ರಯವನ್ನು ನೀಡುವಂತೆ–ರಾಜನು ಯಾವಾಗಲೂ ಇತರರಿಗೆ ಆಶ್ರಯವನ್ನು ನೀಡಬೇಕು. ನಟನು ತನ್ನ ನಟನಕಲೆಯಿಂದ ಇತರರನ್ನು ಸಂತೋಷಗೊಳಿಸುವಂತೆ–ರಾಜನು ಇತರರನ್ನು ಸಂತೋಷಗೊಳಿಸಬೇಕು ಅಥವಾ ನಟನು ನಾನಾವೇಷಗಳನ್ನು ಧರಿಸುವಂತೆ ರಾಜನಾದವನೂ ಸಮಯವರಿತು ನಾನಾವೇಷಗಳನ್ನು ಧರಿಸಬೇಕು. (ಕೆಲವರಿಗೆ ಕೋಪಿಷ್ಠನಾಗಿರುವಂತೆ ಕಾಣಬೇಕು. ಕೆಲವರಿಗೆ ವಿನಮ್ರಭಾವದಿಂದಿರುವಂತೆ ತೋರಿಸಿಕೊಳ್ಳಬೇಕು. ಕೆಲವರಲ್ಲಿ ಸೌಹಾರ್ದವನ್ನು ತೋರಿಸಬೇಕು.) ಭಕ್ತಿಮಿತ್ರನ ಶ್ರೇಯಸ್ಕರವಾದ ಗುಣವು ಯಾವುದೆಂದರೆ–ಗೆಳೆಯನಲ್ಲಿ ಅನುರಕ್ತನಾಗಿರುವುದು. ಹಾಗೆಯೇ ರಾಜನು ತಾನು ಪಾಲನೆಮಾಡುವ ಪ್ರಜೆಗಳಲ್ಲಿ ವಿಶೇಷವಾದ ಅನುರಾಗವನ್ನಿಟ್ಟಿರಬೇಕು.)

ಉತ್ಥಾಯೋತ್ಥಾಯ ಗಚ್ಛೇತ ನಿತ್ಯಯುಕ್ತೋ ರಿಪೋರ್ಗೃಹಾನ್ ।
ಕುಶಲಂ ಚಾಸ್ಯ ಪೃಚ್ಛೇತ ಯದ್ಯಪ್ಯಕುಶಲಂ ಭವೇತ್ ॥೨೨॥

ರಾಜನು ಪ್ರತಿದಿನ ಬೆಳಗಾಗಿ ಎದ್ದೊಡನೆಯೇ ಸಾವಧಾನವಾದ ಮನಸ್ಸಿನಿಂದ ಕೂಡಿದವನಾಗಿ ಶತ್ರುವಿನ ಮನೆಗೆ ಹೋಗಬೇಕು. ಯದ್ಯಪಿ ಶತ್ರುವಿಗೆ ಕೇಡಾಗಬೇಕೆಂದು ಮನಸ್ಸಿನಲ್ಲಿದ್ದರೂ–'ಸೌಖ್ಯವಾಗಿರುವೆಯಾ?'–ಎಂದು ಪ್ರಶ್ನಿಸಿ ಶುಭವನ್ನೇ ಕೋರುತ್ತಿರಬೇಕು.

ನಾಲಸಾಃ ಪ್ರಾಪ್ನುವನ್ತ್ಯರ್ಥಾನ್ನ ಕ್ಲೀಬಾ ನಾಭಿಮಾನಿನಃ ।
ನ ಚ ಲೋಕರವಾದ್ಭೀತಾ ನ ವೈ ಶಶ್ವತ್ಪ್ರತೀಕ್ಷಿಣಃ ॥೨೩॥

ಸೋಮಾರಿಗಳಾಗಿರುವವರು, ಹೇಡಿಗಳು, ದುರಭಿಮಾನವನ್ನು ಹೊಂದಿರುವವರು, ಲೋಕದ ಮಾತಿಗೆ ಹೆದರುವವರು, ಒಳ್ಳೆಯ ಸಮಯವು ಬರುವುದೆಂದು ನಿರೀಕ್ಷಿಸುತ್ತಾ ಕುಳಿತಿರುವವರು–ಅಭೀಷ್ಟವಾದ ಅರ್ಥಗಳನ್ನು ಖಂಡಿತವಾಗಿಯೂ ಪಡೆದುಕೊಳ್ಳುವುದಿಲ್ಲ.

ನಾತ್ಮಚ್ಛಿದ್ರಂ ರಿಪುರ್ವಿದ್ಯಾದ್ವಿದ್ಯಾಚ್ಛಿದ್ರಂ ಪರಸ್ಯ ತು ।
ಗೂಹೇತ್ಕೂರ್ಮ ಇವಾಙ್ಗಾನಿ ರಕ್ಷೇದ್ವಿವರಮಾತ್ಮನಃ ॥೨೪॥

ರಾಜನು ತನ್ನಲ್ಲಿರುವ ನ್ಯೂನತೆಯು ಶತ್ರುವಿಗೆ ತಿಳಿಯದಂತೆ ಜಾಗರೂಕನಾಗಿರಬೇಕು. ಆದರೆ ಶತ್ರುವಿನಲ್ಲಿರುವ ನ್ಯೂನತೆಯನ್ನು ಅವಶ್ಯವಾಗಿ ತಿಳಿದುಕೊಳ್ಳಬೇಕು. ಆಮೆಯು ತನ್ನ ಅಂಗಾಂಗಗಳನ್ನು ಚಿಪ್ಪಿನಲ್ಲಡಗಿಸಿಕೊಂಡು ಗೂಢವಾಗಿಟ್ಟುಕೊಳ್ಳುವಂತೆ–ಚತುರನಾದ ರಾಜನು ತನ್ನಲ್ಲಿರಬಹುದಾದ ನ್ಯೂನತೆಗಳನ್ನು ಯಾರಿಗೂ ತಿಳಿಯದ ರೀತಿಯಲ್ಲಿ ನಿಗೂಢವಾಗಿಟ್ಟಿರಬೇಕು.

ಬಕವಚ್ಚಿನ್ತಯೇದರ್ಥಾನ್ಸಿಂಹವಚ್ಚ ಪರಾಕ್ರಮೇತ್ ।
ವೃಕವಚ್ಚಾವಲುಮ್ಪೇತ ಶರವಚ್ಚ ವಿನಿಷ್ಪತೇತ್ ॥೨೫॥

ರಾಜನಾದವನು ಬಕಪಕ್ಷಿಯಂತೆ ಏಕಾಗ್ರಚಿತ್ತನಾಗಿರುತ್ತಾ ಆರ್ಥಿಕ ವಿಷಯಗಳನ್ನು ಸಮಾಲೋಚಿಸಬೇಕು. (ಬಕವು ಮೀನುಗಳನ್ನು ಹಿಡಿಯಲು ನದಿಯ ಅಥವಾ ತಟಾಕಗಳ ದಡದಲ್ಲಿ ಏಕಾಗ್ರತೆಯಿಂದ ನಿಂತಿರುತ್ತದೆ. ಮೀನು ಮೇಲಕ್ಕೆ ಬಂದೊಡನೆಯೇ ಅದನ್ನು ಹಿಡಿಯುತ್ತದೆ.) ಸಿಂಹದಂತೆ ಶತ್ರುವಿನೊಡನೆ ಪರಾಕ್ರಮವನ್ನು ಪ್ರದರ್ಶಿಸಬೇಕು. ತೋಳದಂತೆ ರಾಜನು ಶತ್ರುವಿನ ಮೇಲೆ ಹಠಾತ್ತನೆ ದಾಳಿಯನ್ನು ಮಾಡಿ

ಅವನಲ್ಲಿರುವ ಐಶ್ವರ್ಯವನ್ನು ಅಪಹರಿಸಬೇಕು. ಬಾಣವು ಮುಂದೆ ಹೋದನಂತರ ಹಿಂದಕ್ಕೆ ಬಾರದ ರೀತಿಯಲ್ಲಿ ಶತ್ರುವಿನೊಡನೆ ಯುದ್ಧಕ್ಕೆ ಹೋಗುವ ರಾಜನು ಶತ್ರುವನ್ನು ಸಂಪೂರ್ಣವಾಗಿ ವಿಧ್ವಂಸನಮಾಡದೇ ಹಿಂದಿರುಗಬಾರದು.*

ಪಾನಮಕ್ಷಾಸ್ತಥಾ ನಾರ್ಯೋ ಮೃಗಯಾ ಗೀತವಾದಿತಮ್ ।
ಏತಾನಿ ಯುಕ್ತ್ಯಾ ಸೇವೇತ ಪ್ರಸಂಗೋ ಹ್ಯತ್ರ ದೋಷವಾನ್ ॥೨೬॥

ಪಾನ, ಪಗಡೆ, ಸ್ತ್ರೀಯರು, ಬೇಟೆ, ಗಾಯನ, ವಾದ್ಯಗಳು–ಇವುಗಳನ್ನು ಎಷ್ಟು ಬೇಕೋ ಅಷ್ಟು ಮಾತ್ರವೇ ಮಿತವಾಗಿ ಸೇವಿಸಬೇಕು. ಅಥವಾ ಅನಾಸಕ್ತಿಭಾವದಿಂದ ಸೇವಿಸಬೇಕು. ಏಕೆಂದರೆ : ಇವುಗಳಲ್ಲಿಯೇ ಅತ್ಯಂತಾಸಕ್ತನಾಗುವುದು ದೋಷಯುಕ್ತವಾಗುತ್ತದೆ. ರಾಜನಾದವನು ಮಿತಿಯಿಂದ ಇವುಗಳನ್ನು ಸೇವಿಸಿದರೆ ದೋಷವೆನಿಸುವುದಿಲ್ಲ. ಮಿತಿಮೀರಿ ಸೇವಿಸಿದರೆ ಇವುಗಳಲ್ಲಿಯೇ ಆಸಕ್ತನಾಗಿಬಿಟ್ಟರೆ ಅನಿಷ್ಟವಾದ ಪರಿಣಾಮ ವುಂಟಾಗುತ್ತದೆ.

ಕುರ್ಯಾತ್ತೃಣಮಯಂ ಚಾಪಂ ಶಯೀತ ಮೃಗಶಾಯಿಕಾಮ್ ।
ಅನ್ಧಃ ಸ್ಯಾದನ್ಧವೇಲಾಯಾಂ ಬಾಧಿರ್ಯಮಪಿ ಸಂಶ್ರಯೇತ್ ॥೨೭॥

ಧನುಸ್ಸನ್ನು ತೃಣಮಯವನ್ನಾಗಿ ಮಾಡಬೇಕು. ಬೇರೆಯವರಿಗೆ ಅದು ಹುಲ್ಲಿನ ಕಂತೆಯಂತೆ ಕಾಣಬೇಕು. ಆದರೆ ಅದು ಶತ್ರುಗಳನ್ನು ಸಂಹರಿಸಲು ಸಮರ್ಥವಾದ ಧನುಸ್ಸಾಗಿರಬೇಕು. ಸಮಯವರಿತು ಧನುಸ್ಸನ್ನು ಹೊರತೆಗೆದು ಶತ್ರುಗಳ ನಿರ್ಮೂಲನಕ್ಕಾಗಿ ಉಪಯೋಗಿಸಬೇಕು. ಜಿಂಕೆಯಂತೆ ಮಲಗಬೇಕು. (ಜಿಂಕೆಯು ಕಣ್ಣುಮುಚ್ಚಿ ನಿದ್ರಿಸುತ್ತಿದ್ದರೂ ಅತ್ಯಲ್ಪಶಬ್ದವಾದರೂ ಎಚ್ಚರಗೊಳ್ಳುತ್ತದೆ.) ಹಾಗೆಯೇ ರಾಜನಾದವನು ನಿದ್ರೆಯಲ್ಲಿಯೂ ಜಾಗರೂಕನಾಗಿರಬೇಕು. ಗಾಢನಿದ್ರೆ

---

* ವ್ಯಾಖ್ಯಾನಕಾರರು : ಬಕ, ಸಿಂಹ, ತೋಳ ಮತ್ತು ಬಾಣಗಳ ಗುಣಗಳನ್ನು ಹೀಗೆ ವಿವರಿಸಿದ್ದಾರೆ. ಏಕಾಗ್ರತ್ವಂ (ಏಕಾಗ್ರತೆ) ; ನಿರ್ಭಯತ್ವಂ (ಭಯರಹಿತನಾಗಿರುವುದು); ಶೀಘ್ರಕಾರಿತ್ವಂ (ಕೆಲಸವನ್ನು ಬಹಳ ಶೀಘ್ರವಾಗಿ ಮಾಡುವುದು) ; ಅಪರಾವೃತ್ತಿತ್ವಂ (ಹಿಂದಿರುಗದೇ ಇರುವುದು.)

ಯನ್ನು ಮಾಡಬಾರದು. ಕೆಲವು ಸಂದರ್ಭದಲ್ಲಿ ಕಣ್ಣುಗಳಿದ್ದೂ ಕುರುಡ ನಂತಿರಬೇಕು. ನಮಗೆ ಸಹಿಸಿಕೊಳ್ಳಲು ಸಾಧ್ಯವಾಗದ ಕೃತ್ಯಗಳು ನಮ್ಮ ಕಣ್ಣೆದುರಿನಲ್ಲಿಯೇ ನಡೆಯುತ್ತಿರುತ್ತವೆ. ಆದರೆ ಅಂತಹ ಸಮಯಗಳಲ್ಲಿ ಪ್ರತೀಕಾರಮಾಡಲು ಅಸಮರ್ಥರಾಗಿರುತ್ತೇವೆ. ಅಂತಹ ಸಂದರ್ಭಗಳಲ್ಲಿ ಕಂಡರೂ ಕಾಣದಂತಿರಬೇಕು. ನಮಗಾಗದವರು ನಮ್ಮನ್ನು ಹೀಯಾಳಿಸು ತ್ತಾರೆ. ನಿಂದಿಸುತ್ತಾರೆ. ಪ್ರತ್ಯಕ್ಷವಾಗಿಯೇ ಹಾಸ್ಯಮಾಡುತ್ತಾರೆ. ಪ್ರತಿಭಟಿಸಲು ನಾವು ಅಸಮರ್ಥರಾಗಿರುತ್ತೇವೆ. ಅಂತಹ ಸಂದರ್ಭಗಳಲ್ಲಿ ಕಿವುಡರಂತೆ ವರ್ತಿಸಬೇಕು. ಕೇಳಿಯೂ ಕೇಳದವರಂತಿರಬೇಕು.

ದೇಶಕಾಲೌ ಸಮಾಸಾದ್ಯ ವಿಕ್ರಮೇತ ವಿಚಕ್ಷಣಃ ।
ದೇಶಕಾಲವ್ಯತೀತೋ ಹಿ ವಿಕ್ರಮೋ ನಿಷ್ಫಲೋ ಭವೇತ್ ॥೨೮॥

ಬುದ್ಧಿವಂತನಾದವನು ದೇಶ-ಕಾಲಗಳು ತನಗೆ ಅನುಕೂಲವಾಗಿರುವು ವೆಂಬುದನ್ನು ನಿಶ್ಚಯಮಾಡಿಕೊಂಡನಂತರವೇ ಪರಾಕ್ರಮವನ್ನು ತೋರಿಸ ಬೇಕು. ದೇಶ ಮತ್ತು ಕಾಲಗಳ ಆನುಕೂಲ್ಯವು ವ್ಯತೀತವಾದರೆ–ಪರಾಕ್ರಮ ವನ್ನು ತೋರಿಸಬೇಕಾದ ಸಮಯದಲ್ಲಿ ಮತ್ತು ಸ್ಥಳದಲ್ಲಿ ಪರಾಕ್ರಮವನ್ನು ತೋರಿಸದೇ ಅಸಮಯದಲ್ಲಿ ಮತ್ತು ಅಸ್ಥಾನದಲ್ಲಿ ಪರಾಕ್ರಮವನ್ನು ತೋರಿಸಿದರೆ–ಅಂತಹ ಪರಾಕ್ರಮವು ನಿಷ್ಫಲವಾಗುತ್ತದೆ.

ಕಾಲಾಕಾಲೌ ಸಮ್ಪ್ರಧಾರ್ಯ ಬಲಾಬಲಮಥಾತ್ಮನಃ ।
ಪರಸ್ಯ ಚ ಬಲಂ ಜ್ಞಾತ್ವಾ ತತ್ರಾತ್ಮಾನಂ ನಿಯೋಜಯೇತ್ ॥೨೯॥

ತನ್ನ ಪರಾಕ್ರಮವನ್ನು ತೋರಿಸಲು ಅದು ಸಕಾಲವಾಗಿರುವುದೇ ಅಥವಾ ಅಕಾಲವಾಗಿರುವುದೇ–ಎಂಬುದನ್ನು ಮೊದಲು ನಿಶ್ಚಯಿಸಬೇಕು. ಎರಡನೆಯದಾಗಿ ತನ್ನಲ್ಲಿರುವ ಬಲಾಬಲಗಳನ್ನೂ ಸಮತೋಲನಮಾಡಿ ನೋಡಬೇಕು. ಶತ್ರುವಿನಲ್ಲಿರುವ ಬಲಾಬಲಗಳನ್ನೂ ಗೂಢಚಾರರ ಮೂಲಕವಾಗಿ ತಿಳಿದುಕೊಳ್ಳಬೇಕು. ಅನಂತರವೇ ರಾಜನು ಶತ್ರುದಮನದ ಕಾರ್ಯದಲ್ಲಿ ತೊಡಗಬೇಕು.

ದಣ್ಡೇನೋಪನತಂ ಶತ್ರುಂ ಯೋ ರಾಜಾ ನ ನಿಯಚ್ಛತಿ ।
ಸ ಮೃತ್ಯುಮುಪಗೃಹ್ಣಾತಿ ಗರ್ಭಮಶ್ವತರೀ ಯಥಾ ॥೩೦॥

ಯಾವ ರಾಜರು ದಂಡಪ್ರಯೋಗದಿಂದ ಶರಣಾಗತನಾಗಿರುವ ಶತ್ರುವನ್ನು ನಿಗ್ರಹಿಸುವುದಿಲ್ಲವೋ–ಅಂತಹ ರಾಜನು ಹೇಸರಗತ್ತೆಯು ಗರ್ಭವನ್ನು ಧರಿಸಿ ತಾನೇ ಮೃತ್ಯುವನ್ನು ತಂದುಕೊಳ್ಳುವಂತೆ–ಮೃತ್ಯುವನ್ನೇ ಆಹ್ವಾನಿಸುತ್ತಾನೆ. (ದಂಡಪ್ರಯೋಗದಿಂದ ವಿನೀತನಾದ ಶತ್ರುವನ್ನು ಸಂಪೂರ್ಣವಾಗಿ ನಿಗ್ರಹಿಸದ ರಾಜನು ತಾನೇ ವಿನಾಶವನ್ನು ಹೊಂದುತ್ತಾನೆ.)

ಸುಪುಷ್ಪಿತಃ ಸ್ಯಾದಫಲಃ ಫಲವಾನ್ಸ್ಯಾದ್ದುರಾರುಹಃ ।
ಆಮಃ ಸ್ಯಾತ್ಪಕ್ವಸಂಕಾಶೋ ನ ಚ ಶೀರ್ಯೇತ ಕಸ್ಯಚಿತ್ ॥೬೧॥

ನೀತಿಜ್ಞನಾದ ರಾಜನು ವೃಕ್ಷಕ್ಕೆ ಸಮಾನನಾಗಿರಬೇಕು. ವೃಕ್ಷವು ಪುಷ್ಪಗಳಿಂದ ಸಮೃದ್ಧವಾಗಿರುತ್ತದೆ. ಆಹ್ಲಾದಕರವಾಗಿಯೂ ಇರುತ್ತದೆ. ಆದರೆ ಆ ವೃಕ್ಷದಲ್ಲಿ ಫಲವೇನೂ ಇರುವುದಿಲ್ಲ. ಹಾಗೆಯೇ ರಾಜನು ಮುಗುಳ್ನಗೆಯನ್ನು ಬೀರುತ್ತಿರಬೇಕು. ಅದರಿಂದಲೇ ಜನರು ತೃಪ್ತರಾಗುವಂತೆ ಮಾಡಬೇಕು. ಒಂದು ವೇಳೆ ವೃಕ್ಷದಲ್ಲಿ ಫಲಬಿಟ್ಟರೂ ಮರವನ್ನು ಹತ್ತಿ ಫಲವನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ವೃಕ್ಷವು ಬಹಳ ಎತ್ತರವಾಗಿರುತ್ತದೆ. ರಾಜನಲ್ಲಿಗೆ ಹೋದರೆ ಕಾರ್ಯವಾಗುವುದೆಂಬ ಭಾವನೆಯನ್ನು ಜನರಲ್ಲಿ ಮೂಡಿಸಬೇಕು. ಆದರೆ ರಾಜನಲ್ಲಿಗೆ ಹೋಗುವುದು ಬಹಳ ಕಷ್ಟವೆಂಬುದನ್ನೂ ಜನರು ಮನಗಾಣುವಂತೆ ಮಾಡಬೇಕು. ಎಷ್ಟೋ ಮರಗಳಲ್ಲಿ ಕಾಯಿಯು ಪಕ್ವವಾದಂತೆ ಕಾಣುತ್ತಿರುತ್ತದೆ. ಆದರೆ ಅದನ್ನು ಕಿತ್ತರೆ ಅದು ಕಾಯೇ ಆಗಿರುತ್ತದೆ. ಹಾಗೆಯೇ ರಾಜನಲ್ಲಿ ಹೋದರೆ ಪ್ರಯೋಜನವು ಲಭಿಸುವುದೆಂಬ ಭಾವನೆಯು ಜನರಲ್ಲುಂಟಾಗುವಂತೆ ಮಾಡಬೇಕು. ಆದರೆ ಫಲವು ಮಾತ್ರ ಅವರಿಗೆ ಸಿಕ್ಕದಂತೆ ಆಶ್ವಾಸನೆಗಳಲ್ಲಿಯೇ ಕಾಲವನ್ನು ತಳ್ಳುತ್ತಿರಬೇಕು. ಆದರೆ ಯಾವುದೇ ಕಾರಣದಿಂದಲೂ ತಾನು ಮಾತ್ರ ಯಾರಿಂದಲೂ ವಿನಾಶಹೊಂದದಂತೆ ಜಾಗರೂಕನಾಗಿರಬೇಕು.

ಆಶಾಂ ಕಾಲವತೀಂ ಕುರ್ಯಾತ್ತಾಂ ಚ ವಿಘ್ನೇನ ಯೋಜಯೇತ್ ।
ವಿಘ್ನಂ ನಿಮಿತ್ತತೋ ಬ್ರೂಯಾನ್ನಿಮಿತ್ತಂ ಚಾಪಿ ಹೇತುತಃ ॥೬೨॥

ಕಾಲವು ಬಂದೊಡನೆಯೇ (ಇಂತಿಷ್ಟು ಕಾಲದಲ್ಲಿ) ಆಶೆಯು ಪೂರ್ಣ ವಾಗುವುದೆಂದು ಹೇಳುತ್ತಿರಬೇಕು. ನಿರ್ದಿಷ್ಟವಾದ ಕಾಲವು ಸಮೀಪಿಸು ತ್ತಿರುವಾಗಲೇ ಅನೇಕವಿಘ್ನಪರಂಪರೆಗಳಿಂದಾಗಿ ಕ್ಲೃಪ್ತಸಮಯದಲ್ಲಿಯೇ ಆಶೆಯು ಪೂರ್ಣವಾಗಲಾರದೆಂದೂ ಇನ್ನೂ ಸ್ವಲ್ಪ ವಿಳಂಬವಾಗಬಹು ದೆಂದೂ ಹೇಳುತ್ತಿರಬೇಕು. ವಿಘ್ನಕ್ಕೆ ಕಾರಣವನ್ನು ಯುಕ್ತಿಯುಕ್ತವಾಗಿ ಹೇಳಬೇಕು. (ಯಾಚಕನು ರಾಜನಲ್ಲಿ ನಂಬಿಕೆಯನ್ನೂ ಕಳೆದುಕೊಳ್ಳಕೂಡದು; ಅವನ ಕಾರ್ಯವೂ ಫಲಿತವಾಗಬಾರದು-ಹೀಗೆ ಉಪಾಯದಿಂದ ರಾಜನು ವರ್ತಿಸಬೇಕು.)

ಭೀತವತ್ಸಂವಿಧಾತವ್ಯಂ ಯಾವದ್ಭಯಮನಾಗತಮ್ ।
ಆಗತಂ ತು ಭಯಂ ದೃಷ್ಟ್ವಾ ಪ್ರಹರ್ತವ್ಯಮಭೀತವತ್ ॥೩೩॥

ಭಯಪಡಬೇಕಾದ ಸಂದರ್ಭವು ಸನ್ನಿಹಿತವಾಗುವವರೆಗೂ ಆ ಸಂದರ್ಭವನ್ನು ನೆನೆದು ಭೀತನಾಗಿರುವಂತೆಯೇ ತೋರಿಸಿಕೊಳ್ಳಬೇಕು. (ಎಚ್ಚರದಿಂದ ವರ್ತಿಸಬೇಕು.) ಭಯವು ಸನ್ನಿಹಿತವಾದೊಡನೆಯೇ ಸ್ವಲ್ಪ ವಾದರೂ ಭಯಗೊಳ್ಳದವನಂತೆ ಧೈರ್ಯದಿಂದ ಶತ್ರುವನ್ನು ಪ್ರಹರಿಸಬೇಕು.

ನ ಸಂಶಯಮನಾರುಹ್ಯ ನರೋ ಭದ್ರಾಣಿ ಪಶ್ಯತಿ ।
ಸಂಶಯಂ ಪುನರಾರುಹ್ಯ ಯದಿ ಜೀವತಿ ಪಶ್ಯತಿ ॥೩೪॥

ಪ್ರಾಣಸಂಕಟಕ್ಕೊಳಗಾಗದಿದ್ದರೆ (ಪ್ರಾಣಸಂಶಯವನ್ನುಂಟುಮಾಡ ಬಹುದಾದ ಸಾಹಸಕಾರ್ಯಗಳಿಗೆ ಕೈಹಾಕದೇ) ಮನುಷ್ಯನು ಶ್ರೇಯಸ್ಸು ಗಳನ್ನು ಕಾಣಲಾರನು. (ಕಷ್ಟಪಡದವನಿಗೆ ಶ್ರೇಯಸ್ಸುಂಟಾಗುವುದಿಲ್ಲ.) ಪ್ರಾಣಸಂಕಟದಿಂದ ಪಾರಾದರೆ (ಕಷ್ಟಗಳನ್ನೆದುರಿಸಿ ಅದರಲ್ಲವನು ಜಯ ಶಾಲಿಯಾದರೆ)–ಶುಭೋದಯವನ್ನು ಕಾಣುತ್ತಾನೆ.

ಅನಾಗತಂ ವಿಜಾನೀಯಾದ್ಯಚ್ಛೇದ್ಭಯಮುಪಸ್ಥಿತಮ್ ।
ಪುನರ್ವೃದ್ಧಿಭಯಾತ್ಕಿಂಚಿದನಿವೃತ್ತಂ ನಿಶಾಮಯೇತ್ ॥೩೫॥

ಮುಂದೆ ಸಂಭವಿಸಬಹುದಾದ ಭಯವನ್ನು ಮುಂದಾಗಿಯೇ ತಿಳಿದುಕೊಳ್ಳಲು ಪ್ರಯತ್ನಿಸಬೇಕು. ಸನ್ನಿಹಿತವಾದ ಭಯವನ್ನು ನಿವಾರಿಸಿ

ಕೊಳ್ಳಲು ಪ್ರಯತ್ನಿಸಬೇಕು. ತಾತ್ಕಾಲಿಕವಾಗಿ ಭಯವು ಉಪಶಮನವಾದರೂ ಮುಂದೆ ಅದು ವೃದ್ಧಿಯಾಗಬಹುದೆಂದೂ–ಸಂಪೂರ್ಣವಾಗಿ ಹೊರಟುಹೋಗಿಲ್ಲವೆಂದೂ ಭಾವಿಸಿ ಯಾವಾಗಲೂ ಜಾಗರೂಕನಾಗಿರಬೇಕು.

ಪ್ರತ್ಯುಪಸ್ಥಿತಕಾಲಸ್ಯ ಸುಖಸ್ಯ ಪರಿವರ್ಜನಮ್ ।
ಅನಾಗತಸುಖಾಶಾ ಚ ನೈವ ಬುದ್ಧಿಮತಾಂ ನಯಃ ॥೩೬॥

ಪ್ರಕೃತದಲ್ಲಿ ಸಿದ್ಧವಾಗಿ ಬಂದಿರುವ ಸುಖವನ್ನು ಪರಿತ್ಯಜಿಸುವುದೂ, ಬಾರದೇ ಇರುವ ಸುಖದಲ್ಲಿ (ಮುಂದೆ ಬರಬಹುದಾದ ಸುಖದಲ್ಲಿ) ಆಶೆಯನ್ನಿಟ್ಟುಕೊಳ್ಳುವುದೂ–ಬುದ್ಧಿವಂತರ ನೀತಿಯೇ ಅಲ್ಲ.

ಯೋಽರಿಣಾ ಸಹ ಸಂಧಾಯ ಸುಖಂ ಸ್ವಪಿತಿ ವಿಶ್ವಸನ್ ।
ಸ ವೃಕ್ಷಾಗ್ರೇ ಪ್ರಸುಪ್ತೋ ವಾ ಪತಿತಃ ಪ್ರತಿಬುಧ್ಯತೇ ॥೩೭॥

ಯಾವನು ಶತ್ರುವಿನೊಡನೆ ಸಂಧಾನಮಾಡಿಕೊಂಡನಂತರ ಅವನ ಮೇಲೆ ಸಂಪೂರ್ಣವಾಗಿ ವಿಶ್ವಾಸವನ್ನಿಟ್ಟು ಸುಖವಾಗಿ ನಿದ್ರಿಸುತ್ತಾನೆಯೋ–ಅವನು ವೃಕ್ಷದ ತುದಿಯಲ್ಲಿ ಮಲಗಿ ಕೆಳಕ್ಕೆ ಬಿದ್ದನಂತರ ಎಚ್ಚರಗೊಳ್ಳುವ ಮನುಷ್ಯನಂತೆ–ಶತ್ರುವಿನಿಂದ ಪ್ರಹೃತನಾದನಂತರವೇ (ಸ್ಥಾನದಿಂದ ಕೆಳಕ್ಕೆ ಬಿದ್ದನಂತರವೇ) ಎಚ್ಚರಗೊಳ್ಳುತ್ತಾನೆ.

ಕರ್ಮಣಾ ಯೇನ ತೇನೈವ ಮೃದುನಾ ದಾರುಣೇನ ಚ ।
ಉದ್ಧರೇದ್ದೀನಮಾತ್ಮಾನಂ ಸಮರ್ಥೋ ಧರ್ಮಮಾಚರೇತ್ ॥೩೮॥

ಮೃದುವಾದ ಕರ್ಮದಿಂದಲೇ ಆಗಲೀ, ದಾರುಣವಾದ ಕರ್ಮದಿಂದಲೇ ಆಗಲೀ, ಯಾವುದೇ ವಿಧವಾದ ಉಪಾಯದಿಂದಲೇ ಆಗಲೀ–(ಧಾರ್ಮಿಕವಾದ ಮಾರ್ಗದಿಂದಾಗಲೀ ; ಅಧಾರ್ಮಿಕವಾದ ಮಾರ್ಗದಿಂದಲೇ ಆಗಲೀ) ದೈನ್ಯಾವಸ್ಥೆಯಿಂದ ತನ್ನನ್ನು ಉದ್ಧಾರಮಾಡಿಕೊಳ್ಳಬೇಕು. ದೈನ್ಯವು ಹೋಗಿ ಸರ್ವಸಮರ್ಥನಾದನಂತರ ಧರ್ಮಾಚರಣೆಯನ್ನು ಮಾಡಬೇಕು.

ಯೇ ಸಪತ್ನಾಃ ಸಪತ್ನಾನಾಂ ಸರ್ವಾಂಸ್ತಾನುಪಸೇವಯೇತ್ ।
ಆತ್ಮನಶ್ಚಾಪಿ ಬೋದ್ಧವ್ಯಾಶ್ಚಾರಾ ವಿನಿಹಿತಾಃ ಪರೈಃ ॥೩೯॥

ಕಾರ್ಯಸಿದ್ಧಿಯನ್ನು ಅಪೇಕ್ಷಿಸುವ ರಾಜನು ಶತ್ರುಗಳ ಶತ್ರುಗಳು ಯಾರಿರುವರೋ–ಅವರೆಲ್ಲರ ಸೇವೆಯನ್ನೂ ಮಾಡಬೇಕು. ತನ್ನಲ್ಲಿರುವ ಛಿದ್ರಾನ್ವೇಷಣೆಗಾಗಿ ನಿಯುಕ್ತರಾಗಿರುವ ಶತ್ರುಗಳ ಗುಪ್ತಚಾರರನ್ನೂ ಉಪಾಯಾಂತರಗಳಿಂದ ತಿಳಿದುಕೊಳ್ಳಬೇಕು.

ಚಾರಸ್ತ್ವವಿದಿತಃ ಕಾರ್ಯ ಆತ್ಮನೋಽಥ ಪರಸ್ಯ ಚ ।
ಪಾಷಣ್ಡಾಂಸ್ತಾಪಸಾದೀಂಶ್ಚ ಪರರಾಷ್ಟ್ರೇ ಪ್ರವೇಶಯೇತ್ ॥೪೦॥

ತನ್ನ ರಾಜ್ಯದಲ್ಲಿಯೂ, ಶತ್ರುರಾಜ್ಯದಲ್ಲಿಯೂ ಗುಪ್ತಚಾರರೆಂದು ಊಹಿಸಲು ಕೂಡ ಸಾಧ್ಯವಾಗದವರನ್ನೇ ಗುಪ್ತಚಾರರನ್ನಾಗಿ ನಿಯಮಿಸ ಬೇಕು. ಈ ಕಾರಣದಿಂದಲೇ ವೇದವಿಹಿತವಾದ ಧರ್ಮಗಳನ್ನು ಬಿಟ್ಟಿರುವ ಪಾಷಂಡವೇಷಧಾರಿಗಳನ್ನೂ, ತಪಸ್ವಿಗಳ ವೇಷವನ್ನು ಧರಿಸಿರುವವರನ್ನೂ ಶತ್ರುರಾಷ್ಟ್ರಕ್ಕೆ ಕಳುಹಿಸಬೇಕು.

ಉದ್ಯಾನೇಷು ವಿಹಾರೇಷು ಪ್ರಪಾಸ್ವಾವಸಥೇಷು ಚ ।
ಪಾನಾಗಾರೇ ಪ್ರವೇಶೇಷು ತೀರ್ಥೇಷು ಚ ಸಭಾಸು ಚ ॥೪೧॥

ಗುಪ್ತಚಾರರು ಯಾವಾಗಲೂ ಉದ್ಯಾನವನಗಳಲ್ಲಿಯೂ, ವಿಹಾರಸ್ಥಳ ಗಳಲ್ಲಿಯೂ, ಅರವಟ್ಟಿಗೆಗಳಲ್ಲಿಯೂ (ಯಾತ್ರಾರ್ಥಿಗಳಿಗೆ ನೀರು-ಪಾನಕ ಮೊದಲಾದುವನ್ನು ಕೊಡುವ ಸ್ಥಳಗಳಲ್ಲಿಯೂ), ಧರ್ಮಶಾಲೆಗಳಲ್ಲಿಯೂ ಮದ್ಯಗೃಹಗಳಲ್ಲಿಯೂ, ನಗರದ್ವಾರಗಳಲ್ಲಿಯೂ, ತೀರ್ಥಗಳ ಸಮೀಪ ದಲ್ಲಿಯೂ, ಸಭೆಗಳಲ್ಲಿಯೂ ಸಂಚರಿಸುತ್ತಿರಬೇಕು.

ಧರ್ಮಾಭಿಚಾರಿಣಃ ಪಾಪಾಶ್ಚೌರಾ ಲೋಕಸ್ಯ ಕಣ್ಟಕಾಃ ।
ಸಮಾಗಚ್ಛನ್ತಿ ತಾನ್ಬುದ್ಧ್ವಾ ನಿಯಚ್ಛೇಚ್ಛಮಯೀತ ಚ ॥೪೨॥

ಕಪಟವಾದ ಧರ್ಮಾಚರಣೆಮಾಡುವವರೂ, ಪಾಪಿಷ್ಠರೂ, ಚೋರರೂ, ಲೋಕಕಂಟಕರೂ (ಲೋಕದಲ್ಲಿ ಜನಜೀವನಕ್ಕೆ ಮುಳ್ಳಿನ ರೂಪದಲ್ಲಿರುವವರೂ) ಅಂತಹ ಸ್ಥಳಗಳಲ್ಲಿರುತ್ತಾರೆ. ಅಂತಹವರನ್ನು ಗುಪ್ತ ಚಾರರು ಪತ್ತೆಹಚ್ಚಿ ಬಂಧಿಸಬೇಕು ಮತ್ತು ಶಿಕ್ಷೆಯಾಗುವುದೆಂಬ ಭಯವನ್ನು ಅವರಲ್ಲಿ ಹುಟ್ಟಿಸಿ ಪಾಪಾಚರಣೆಗಳಿಂದ ಪ್ರತಿನಿವೃತ್ತರಾಗುವಂತೆ ಮಾಡ ಬೇಕು.

ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿವಿಶ್ವಸೇತ್ ।
ವಿಶ್ವಾಸಾದ್ಭಯಮಭ್ಯೇತಿ ನಾಪರೀಕ್ಷ್ಯ ಚ ವಿಶ್ವಸೇತ್ ॥೪೩॥

ವಿಶ್ವಾಸಕ್ಕೆ ಯೋಗ್ಯನಲ್ಲದವನಲ್ಲಿ ವಿಶ್ವಾಸವನ್ನೇ ಇಡಬಾರದು. ವಿಶ್ವಾಸಕ್ಕೆ ಅರ್ಹನಾದವನಲ್ಲಿಯೂ ಹೆಚ್ಚು ವಿಶ್ವಾಸವನ್ನಿಡಬಾರದು. ಹಾಗೆ ಹೆಚ್ಚು ವಿಶ್ವಾಸವಿಡುವುದು ಭಯಕ್ಕೆ ಕಾರಣವಾಗುತ್ತದೆ. ಸಂಪೂರ್ಣವಾಗಿ ಪರೀಕ್ಷೆಮಾಡದೇ ಯಾವನಲ್ಲಿಯೂ ಕಿಂಚಿತ್ತಾದರೂ ವಿಶ್ವಾಸವನ್ನಿಡಬಾರದು.

ವಿಶ್ವಾಸಯಿತ್ವಾ ತು ಪರಂ ತತ್ತ್ವಭೂತೇನ ಹೇತುನಾ ।
ಅಥಾಸ್ಯ ಪ್ರಹರೇತ್ಕಾಲೇ ಕಿಂಚಿದ್ವಿಚಲಿತೇ ಪದೇ ॥೪೪॥

ತಾತ್ತ್ವಿಕವಾದ ಕಾರಣಗಳನ್ನು ನಿರೂಪಿಸುತ್ತಾ ಶತ್ರುವಿಗೆ ತನ್ನ ವಿಷಯದಲ್ಲಿ ಸಂಪೂರ್ಣವಾಗಿ ವಿಶ್ವಾಸವು ಹುಟ್ಟುವಂತೆ ಮಾಡಬೇಕು. ಶತ್ರುವೇನಾದರೂ ತನ್ನ ಸ್ಥಾನದಿಂದ ಸ್ವಲ್ಪ ವಿಚಲಿತನಾದರೆ ಅದೇ ಸರಿಯಾದ ಕಾಲವೆಂದು ನಿರ್ಣಯಿಸಿ ಶತ್ರುವನ್ನು ಬಗ್ಗುಬಡಿಯಬೇಕು.

ಅಶಙ್ಕ್ಯಮಪಿ ಶಙ್ಕೇತ ನಿತ್ಯಂ ಶಙ್ಕೇತ ಶಙ್ಕಿತಾತ್ ।
ಭಯಂ ಹ್ಯಶಙ್ಕಿತಾಜ್ಜಾತಂ ಸಮೂಲಮಪಿ ಕೃನ್ತತಿ ॥೪೫॥

ಸಂದೇಹಪಡಲು ಅರ್ಹರಲ್ಲದವರ ವಿಷಯದಲ್ಲಿಯೂ ಸಂದೇಹಿಸ ಬೇಕು. ಸಂದೇಹಪಡಲು ಅರ್ಹರಲ್ಲವೆಂದು ತಿಳಿದ ಮಾತ್ರಕ್ಕೆ ಅವರ ವಿಷಯದಲ್ಲಿ ಸಂಪೂರ್ಣವಾಗಿ ವಿಶ್ವಾಸವನ್ನಿಟ್ಟು ವ್ಯವಹರಿಸಬಾರದು. ತನಗೆ ಅಹಿತನೆಂದು ಶಂಕಿತನಾದವನ ವಿಷಯದಲ್ಲಿ ನಿತ್ಯವೂ ಸಂದೇಹಗ್ರಸ್ತ ನಾಗಿಯೇ ಇರುತ್ತಾ ಅವನು ಮಾಡುವ ಪ್ರತಿಯೊಂದು ಕಾರ್ಯವನ್ನೂ ಎಚ್ಚರಿಕೆಯಿಂದ ಗಮನಿಸುತ್ತಲೇ ಇರಬೇಕು. ಸಂದೇಹಕ್ಕೆ ಅರ್ಹನಲ್ಲ ದವನನ್ನೂ ಏಕೆ ಸಂಶಯದೃಷ್ಟಿಯಿಂದ ನೋಡಬೇಕೆಂದರೆ : ಸಂದೇಹಕ್ಕೆ ಅರ್ಹನಲ್ಲದವನಿಂದ ಭಯವೇನಾದರೂ ಪ್ರಾಪ್ತವಾದಲ್ಲಿ–ಆ ಭಯವು (ಅಪಾಯವು) ಮೂಲಸಹಿತವಾಗಿಯೇ ಕಿತ್ತುಹಾಕುತ್ತದೆ. (ಸರ್ವನಾಶ ಮಾಡುತ್ತದೆ.)

ಅವಧಾನೇನ ಮೌನೇನ ಕಾಷಾಯೇಣ ಜಟಾಜಿನೈಃ ।
ವಿಶ್ವಾಸಯಿತ್ವಾ ದ್ವೇಷ್ಟಾರಮವಲುಮ್ಪೇದ್ಯಥಾ ವೃಕಃ ॥೪೬॥

ಪರಮಾತ್ಮನಲ್ಲಿಯೇ ಏಕಾಗ್ರತೆಯನ್ನು ತೋರ್ಪಡಿಸುತ್ತಾ ಮೌನಿಯಾಗಿ, ಕಾಷಾಯವನ್ನು ಧರಿಸಿ, ಜಟೆಯನ್ನು ಬಿಟ್ಟು, ಕೃಷ್ಣಾಜಿನವನ್ನು ಹೊದ್ದುಕೊಂಡು ಶತ್ರುವಿನಲ್ಲಿ ಸಂಪೂರ್ಣವಾಗಿ ವಿಶ್ವಾಸವನ್ನು ಹುಟ್ಟಿಸ ಬೇಕು. ಸಮಯವು ಸನ್ನಿಹಿತವಾದೊಡನೆಯೇ ಹಸಿದ ತೋಳದಂತೆ ಶತ್ರುವಿನ ಮೇಲೆ ಬಿದ್ದು ಶತ್ರುವನ್ನು ಧ್ವಂಸಮಾಡಬೇಕು.

ಪುತ್ರೋ ವಾ ಯದಿ ವಾ ಭ್ರಾತಾ ಪಿತಾ ವಾ ಯದಿ ವಾ ಸುಹೃತ್ ।
ಅರ್ಥಸ್ಯ ವಿಘ್ನಂ ಕುರ್ವಾಣಾ ಹನ್ತವ್ಯಾ ಭೂತಿಮಿಚ್ಛತಾ ॥೪೭॥

ತನ್ನ ಅರ್ಥಸಿದ್ಧಿಗೆ ವಿಘ್ನವನ್ನುಂಟುಮಾಡುವವರು–ಮಗನಾಗಲೀ, ಸೋದರನಾಗಲೀ, ತಂದೆಯಾಗಲೀ, ಸುಹೃದನಾಗಲೀ–ಅಂತಹವನನ್ನು ಒಡನೆಯೇ ಸಂಹರಿಸುವುದು ಐಶ್ವರ್ಯಕಾಮನಾದ ರಾಜನ ಕರ್ತವ್ಯವಾಗಿರುತ್ತದೆ.

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ದಣ್ಡೋ ಭವತಿ ಶಾಸನಮ್ ॥೪೮॥

ಒಂದು ವೇಳೆ ಆಚಾರ್ಯನೇ ಆಗಿದ್ದರೂ ದುರಭಿಮಾನಿಯಾಗಿದ್ದರೆ, ಕಾರ್ಯಾಕಾರ್ಯಗಳನ್ನು ತಿಳಿಯದವನಾಗಿದ್ದರೆ, ತಪ್ಪುದಾರಿಯನ್ನು ಹಿಡಿದಿದ್ದರೆ–ಅಂತಹವನೂ ಶಿಕ್ಷಾರ್ಹನಾಗುತ್ತಾನೆ.

ಅಭ್ಯುತ್ಥಾನಾಭಿವಾದಾಭ್ಯಾಂ ಸಮ್ಪ್ರದಾನೇನ ಕೇನಚಿತ್ ।
ಪ್ರತಿಪುಷ್ಪಫಲಾಘಾತೀ ತೀಕ್ಷ್ಣತುಣ್ಡ ಇವ ದ್ವಿಜಃ ॥೪೯॥

ಬಲಿಷ್ಠನಾದ ಶತ್ರುವು ಬಂದೊಡನೆಯೇ ಪ್ರತ್ಯುತ್ಥಾನಮಾಡಿ ಅವನನ್ನು ಆದರದಿಂದ ಸ್ವಾಗತಿಸಬೇಕು. ಅನಂತರ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಬೇಕು. ಅಪೂರ್ವವಾದ ಬಹುಮೂಲ್ಯವಾದ ವಸ್ತುಗಳನ್ನು ಕಾಣಿಕೆಯಾಗಿ ಕೊಡಬೇಕು. ಶತ್ರುವು ತನ್ನ ಸ್ಥಾನದಿಂದ ಚ್ಯುತನಾದೊಡನೆಯೇ–ತೀಕ್ಷ್ಣವಾದ ಕೊಕ್ಕಿನಿಂದ ಕೂಡಿರುವ ಪಕ್ಷಿಯು ಪುಷ್ಪ

ಮತ್ತು ಫಲಗಳನ್ನು ಏಕಕಾಲದಲ್ಲಿ ಕುಕ್ಕಿ ಧ್ವಂಸಮಾಡುವಂತೆ–ಸಮೂಲವಾಗಿ ಶತ್ರುವನ್ನು ನಿಗ್ರಹಿಸಬೇಕು.

ನಾಚ್ಛಿತ್ವಾ ಪರಮರ್ಮಾಣಿ ನಾಕೃತ್ವಾ ಕರ್ಮ ದಾರುಣಮ್ ।
ನಾಹತ್ವಾ ಮತ್ಸ್ಯಘಾತೀವ ಪ್ರಾಪ್ನೋತಿ ಮಹತೀಂ ಶ್ರಿಯಮ್ ॥೫೦॥

ಮೀನುಗಳನ್ನು ಹಿಡಿದು ಕೊಲ್ಲುವ ಬೆಸ್ತರವನಂತೆ–ಇತರರ ಮರ್ಮವನ್ನು ಭೇದಿಸದೆ, ದಾರುಣವಾದ ಕಾರ್ಯವನ್ನು ಮಾಡದೇ, ಅನೇಕರನ್ನು ಸಂಹರಿಸದೆ ಮಹಾಸಂಪತ್ತನ್ನು ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ನಾಸ್ತಿ ಜಾತ್ಯಾ ರಿಪುರ್ನಾಮ ಮಿತ್ರಂ ವಾಪಿ ನ ವಿದ್ಯತೇ ।
ಸಾಮರ್ಥ್ಯಯೋಗಾಜ್ಜಾಯನ್ತೇ ಮಿತ್ರಾಣಿ ರಿಪವಸ್ತಥಾ ॥೫೧॥

ಜನ್ಮತಃ ಒಬ್ಬನು ಮತ್ತೊಬ್ಬನಿಗೆ ಶತ್ರುವಾಗುವನೆಂದಾಗಲೀ ಮಿತ್ರನಾಗುವನೆಂದಾಗಲೀ ಇಲ್ಲ. ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರಿಗೆ ಮಿತ್ರರೂ ಮತ್ತು ಶತ್ರುಗಳೂ ಆಗುತ್ತಾರೆ.

ಅಮಿತ್ರಂ ನೈವ ಮುಞ್ಚೀತ ವದನ್ತಂ ಕರುಣಾನ್ಯಪಿ ।
ದುಃಖಂ ತತ್ರ ನ ಕರ್ತವ್ಯಂ ಹನ್ಯಾತ್ಪೂರ್ವಾಪಕಾರಿಣಮ್ ॥೫೨॥

ಕರುಣಾಜನಕವಾದ ಮಾತನ್ನು ಹೇಳುತ್ತಿದ್ದರೂ ಬಂಧಿತನಾದ ಶತ್ರುವನ್ನು ಖಂಡಿತವಾಗಿಯೂ ಬಿಡಬಾರದು. ಹಿಂದೆ ಅಪಕಾರಮಾಡಿದವನನ್ನು ಸಂಹರಿಸಲೇಬೇಕು. ಶತ್ರುವನ್ನು ಸಂಹರಿಸಿದುದಕ್ಕಾಗಿ ದುಃಖಿಸುವುದು ಶ್ರೇಯಸ್ಕಾಮನಾದ ರಾಜನ ಕರ್ತವ್ಯವಲ್ಲ.

ಸಂಗ್ರಹಾನುಗ್ರಹೇ ಯತ್ನಃ ಸದಾ ಕಾರ್ಯೋಽನಸೂಯತಾ ।
ನಿಗ್ರಹಶ್ಚಾಪಿ ಯತ್ನೇನ ಕರ್ತವ್ಯೋ ಭೂತಿಮಿಚ್ಛತಾ ॥೫೩॥

ಶ್ರೇಯಸ್ಕಾಮನಾದ ರಾಜನು ಅಸೂಯಾರಹಿತನಾಗಿ ಪ್ರಜೆಗಳನ್ನು ಸಂಗ್ರಹಿಸುವುದರಲ್ಲಿಯೂ ಮತ್ತು ಅವರನ್ನು ಲಾಲನೆ-ಪಾಲನೆಗಳ ಮೂಲಕವಾಗಿ ಅನುಗ್ರಹಿಸುವುದರಲ್ಲಿಯೂ ಸತತವಾಗಿ ಪ್ರಯತ್ನಶೀಲನಾಗಿರಬೇಕು. ಹಾಗೆಯೇ ಶತ್ರುಗಳನ್ನು ಪ್ರಯತ್ನಪೂರ್ವಕವಾಗಿ ನಿಗ್ರಹಿಸಲೂ ಬೇಕು.

ಪ್ರಹರಿಷ್ಯನ್ಪ್ರಿಯಂ ಬ್ರೂಯಾತ್ಪ್ರಹೃತ್ಯೈವ ಪ್ರಿಯೋತ್ತರಮ್ ।
ಅಸಿನಾಪಿ ಶಿರಶ್ಛಿತ್ತ್ವಾ ಶೋಚೇತ ಚ ರುದೇತ ಚ ॥೫೪॥

ಶತ್ರುವನ್ನು ಪ್ರಹರಿಸುತ್ತಿರುವಾಗಲೂ ಒಳ್ಳೆಯ ಮಾತುಗಳನ್ನೇ ಹೇಳುತ್ತಿರಬೇಕು. ಪ್ರಹರಿಸಿದನಂತರವೂ ಪ್ರಿಯವಾದ ಮಾತುಗಳನ್ನೇ ಹೇಳಬೇಕು. ಕತ್ತಿಯಿಂದ ಕತ್ತನ್ನು ಕತ್ತರಿಸಿದನಂತರವೂ ಅವನಿಗಾಗಿ ಶೋಕಿಸಬೇಕು ಮತ್ತು ಅಳಲೂಬೇಕು.

ನಿಮನ್ತ್ರಯೀತ ಸಾನ್ತ್ವೇನ ಸಮ್ಮಾನೇನ ತಿತಿಕ್ಷಯಾ ।
ಲೋಕಾರಾಧನಮಿತ್ಯೇತತ್ಕರ್ತವ್ಯಂ ಭೂತಿಮಿಚ್ಛತಾ ॥೫೫॥

ಐಶ್ವರ್ಯಕಾಮನಾದ ರಾಜನು ಸಾಂತ್ವ (ಮಧುರ) ವಚನಗಳಿಂದಲೂ, ಬಹುಮಾನ-ಸಮ್ಮಾನಾದಿಗಳಿಂದಲೂ, ಸ್ಥೈರಣೆಯಿಂದಲೂ ಪ್ರಜೆಗಳನ್ನು ತನ್ನ ಕಡೆಗೆ ಬರಮಾಡಿಕೊಳ್ಳಬೇಕು. ಹೀಗೆ ಮಾಡುವುದು ಲೋಕದ (ಪ್ರಜೆಗಳ) ಆರಾಧನವಾಗಿದೆ. (ಪ್ರಜೆಗಳನ್ನು ಒಲಿಸಿಕೊಳ್ಳಲು ರಾಜನಾದವನು ಅವಶ್ಯವಾಗಿ ಈ ಕಾರ್ಯವನ್ನು ಮಾಡಬೇಕು.)

ನ ಶುಷ್ಕವೈರಂ ಕುರ್ವೀತ ಬಾಹುಭ್ಯಾಂ ನ ನದೀಂ ತರೇತ್ ।
ಅನರ್ಥಕಮನಾಯುಷ್ಯಂ ಗೋವಿಷಾಣಸ್ಯ ಭಕ್ಷಣಮ್ ।
ದನ್ತಾಶ್ಚ ಪರಿಮೃಜ್ಯನ್ತೇ ರಸಶ್ಚಾಪಿ ನ ಲಭ್ಯತೇ ॥೫೬॥

ಶುಷ್ಕವಾದ (ವ್ಯರ್ಥವಾದ) ವೈರವನ್ನು ಯಾರೊಡನೆಯೂ ಕಟ್ಟಿಕೊಳ್ಳಬಾರದು. ತೋಳುಗಳಿಂದ ಈಜಿಕೊಂಡು ನದಿಯನ್ನು ದಾಟಬಾರದು. ಈ ಎರಡು ಕರ್ಮಗಳೂ ಹಸುವಿನ ಕೊಂಬನ್ನು ತಿಂದಂತೆ ನಿರರ್ಥಕಗಳೂ ಮತ್ತು ಆಯುಷ್ಯವನ್ನು ನಾಶಮಾಡತಕ್ಕುವುಗಳೂ ಆಗಿವೆ. ಗೋವಿನ ಕೊಂಬುಗಳನ್ನು ಅಗಿದು ತಿನ್ನುವುದರಿಂದ ಹಲ್ಲುಗಳು ಉದುರಿ ಹೋಗುತ್ತವೆ ಮತ್ತು ಅದರಲ್ಲಿ ಯಾವ ವಿಧವಾದ ರಸವೂ ಸಿಕ್ಕುವುದಿಲ್ಲ. (ನಾಯಿಯು ಮೂಳೆಯನ್ನು ಕಡಿಯುವಂತೆ—ಇಂತಹ ಕರ್ಮಗಳು ನಿರರ್ಥಕಗಳೇ ಆಗಿವೆ.)

ತ್ರಿವರ್ಗೇ ತ್ರಿವಿಧಾ ಪೀಡಾನುಬನ್ಧಾಸ್ತ್ರಯ ಏವ ಚ ।
ಅನುಬನ್ಧಾಃ ಶುಭಾ ಜ್ಞೇಯಾಃ ಪೀಡಾಶ್ಚ ಪರಿವರ್ಜಯೇತ್ ॥೫೭॥

ಧರ್ಮ, ಅರ್ಥ ಮತ್ತು ಕಾಮಗಳ ಆಚರಣೆಯಲ್ಲಿ ಮೂರ್ಖತೆ, ಲೋಭ ಮತ್ತು ದುರ್ಬಲತೆ–ಎಂಬ ಮೂರು ವಿಧವಾದ ಪೀಡೆಗಳಿರುತ್ತವೆ. ಧರ್ಮಕ್ಕೆ ಚಿತ್ತಶುದ್ಧಿ, ಅರ್ಥಕ್ಕೆ ಯಜ್ಞಾದಿಕರ್ಮಗಳು, ಕಾಮಕ್ಕೆ ಉಪ ಭೋಗ–ಈ ಮೂರು ಶುಭಫಲಗಳೂ ಇರುತ್ತವೆ. ಇವಕ್ಕೆ ಅನುಬಂಧ ಗಳೆಂದು ಹೆಸರು. ಧರ್ಮಾರ್ಥ-ಕಾಮಗಳ ಮೂಲಕವಾಗಿ ಅನುಬಂಧ ಗಳನ್ನು ಸಾಧಿಸಬೇಕು. ಪೀಡೆಗಳನ್ನು ಪರಿತ್ಯಜಿಸಬೇಕು.

ಋಣಶೇಷಮಗ್ನಿಶೇಷಂ ಶತ್ರುಶೇಷಂ ತಥೈವ ಚ ।
ಪುನಃ ಪುನಃ ಪ್ರವರ್ಧನ್ತೇ ತಸ್ಮಾಚ್ಛೇಷಂ ನ ಧಾರಯೇತ್ ॥೫೮॥

ಋಣಶೇಷ, ಅಗ್ನಿಶೇಷ ಮತ್ತು ಶತ್ರುಶೇಷಗಳು ಸ್ವಲ್ಪವೇ ಇದ್ದರೂ ಕಾಲಾನುಕ್ರಮವಾಗಿ ಪುನಃ-ಪುನಃ ವೃದ್ಧಿಹೊಂದುತ್ತಲೇ ಇರುತ್ತವೆ. ಆದುದರಿಂದ ಋಣಶೇಷವನ್ನಾಗಲೀ, ಅಗ್ನಿಶೇಷವನ್ನಾಗಲೀ, ಶತ್ರುಶೇಷ ವನ್ನಾಗಲೀ–ಉಳಿಸಬಾರದು.

ವರ್ಧಮಾನಮೃಣಂ ತಿಷ್ಠೇತ್ಪರಿಭೂತಾಶ್ಚ ಶತ್ರವಃ ।
ಜನಯನ್ತಿ ಭಯಂ ತೀವ್ರಂ ವ್ಯಾಧಯಶ್ಚಾಪ್ಯುಪೇಕ್ಷಿತಾಃ ॥೫೯॥

ಸಾಲವು ಹೆಚ್ಚುತ್ತಲೇ ಇರುತ್ತದೆ. ತಿರಸ್ಕೃತರಾದ ಶತ್ರುಗಳೂ ಉಪೇಕ್ಷಿಸಲ್ಪಟ್ಟ ರೋಗಗಳೂ–ತೀವ್ರವಾದ ಪ್ರಾಣಭಯವನ್ನೇ ಉಂಟು ಮಾಡುತ್ತವೆ.

ನಾಸಮ್ಯಕ್ಕೃತಕಾರೀ ಸ್ಯಾದಪ್ರಮತ್ತಃ ಸದಾ ಭವೇತ್ ।
ಕಣ್ಟಕೋಽಪಿ ಹಿ ದುಶ್ಛಿನ್ನೋ ವಿಕಾರಂ ಕುರುತೇ ಚಿರಮ್ ॥೬೦॥

ಶತ್ರುವಿನಾಶಕಾರ್ಯವನ್ನು ಸರಿಯಾದ ರೀತಿಯಲ್ಲಿ ನಿಃಶೇಷವಾಗಿ ಮಾಡಬೇಕು. ಸರ್ವಕಾಲದಲ್ಲಿಯೂ ಜಾಗರೂಕನಾಗಿರಬೇಕು. ಕಾಲಿನಲ್ಲಿ ಹೊಕ್ಕಿರುವ ಮುಳ್ಳನ್ನು ಸಂಪೂರ್ಣವಾಗಿ ತೆಗೆದುಹಾಕದೇ ಅರ್ಧಕ್ಕೆ ಮುರಿದುಬಿಟ್ಟರೆ ಉಳಿದ ಅರ್ಧಭಾಗವು ಶರೀರದಲ್ಲಿ ಸೇರಿಕೊಂಡು ಬಹಳ ಕಾಲದವರೆಗೂ ಯಾತನೆಯನ್ನುಂಟುಮಾಡುತ್ತಿರುತ್ತದೆ. ಅದೇ ರೀತಿಯಲ್ಲಿ ಅವಮಾನಿತನಾದ ಶತ್ರುವನ್ನು ಸಂಪೂರ್ಣವಾಗಿ ವಿನಾಶಗೊಳಿಸದಿದ್ದರೆ ಕಾಲಾನುಕ್ರಮವಾಗಿ ಅವನಿಂದ ಪೀಡೆಯುಂಟಾಗುವುದು ನಿಶ್ಚಯ.

ವಧೇನ ಚ ಮನುಷ್ಯಾಣಾಂ ಮಾರ್ಗಾಣಾಂ ದೂಷಣೇನ ಚ ।
ಅಗಾರಾಣಾಂ ವಿನಾಶೈಶ್ಚ ಪರರಾಷ್ಟ್ರಂ ವಿನಾಶಯೇತ್ ॥೬೧॥

ಮನುಷ್ಯರ (ಸೈನಿಕರ) ವಧೆಯಿಂದಲೂ, ಹೆದ್ದಾರಿಗಳ ವಿನಾಶದಿಂದಲೂ ಮತ್ತು ಕಟ್ಟಡಗಳನ್ನು ಧ್ವಂಸಮಾಡುವುದರಿಂದಲೂ–ಶತ್ರುರಾಷ್ಟ್ರವನ್ನು ವಿನಾಶಗೊಳಿಸಬೇಕು.

ಗೃಧ್ರದೃಷ್ಟಿರ್ಬಕಾಲೀನಃ ಶ್ವಚೇಷ್ಟಃ ಸಿಂಹವಿಕ್ರಮಃ ।
ಅನುದ್ವಿಗ್ನಃ ಕಾಕಶಙ್ಕೀ ಭುಜಙ್ಗಚರಿತಂ ಚರೇತ್ ॥೬೨॥

ರಾಜನು ರಣಹದ್ದಿನಂತೆ ದೂರದೃಷ್ಟಿಯುಳ್ಳವನಾಗಿರಬೇಕು. ಬಕಪಕ್ಷಿಯಂತೆ ಕಾರ್ಯದ ಸಾಧನೆಯಲ್ಲಿ ಏಕಾಗ್ರತೆಯಿಂದಿರಬೇಕು. ನಾಯಿಯಂತೆ ಜಾಗರೂಕನಾಗಿರಬೇಕು. ಸಿಂಹದಂತೆ ಪರಾಕ್ರಮಶಾಲಿಯಾಗಿರಬೇಕು. ಯಾವುದೇ ಸಂದರ್ಭದಲ್ಲಿಯೂ ಉದ್ವೇಗಗೊಳ್ಳಬಾರದು. ಕಾಗೆಯಂತೆ ಇತರರ ವಿಷಯದಲ್ಲಿ ಸಂದೇಹಯುಕ್ತನಾಗಿಯೇ ಇರಬೇಕು. ಸರ್ಪವು ಗೆದ್ದಲುಹುಳುಗಳು ನಿರ್ಮಿಸುವ ಬಿಲದಲ್ಲಿ ನುಸುಳಿಕೊಳ್ಳುವಂತೆ ಸಮಯವನ್ನು ನೋಡಿ ಶತ್ರುವಿನ ಕೋಟೆಯನ್ನು ಆಕ್ರಮಿಸಬೇಕು.

ಶೂರಮಞ್ಜಲಿಪಾತೇನ ಭೀರುಂ ಭೇದೇನ ಭೇದಯೇತ್ ।
ಲುಬ್ಧಮರ್ಥಪ್ರದಾನೇನ ಸಮಂ ತುಲ್ಯೇನ ವಿಗ್ರಹಃ ॥೬೩॥

ತನಗಿಂತಲೂ ಶೂರನಾಗಿರುವವನನ್ನು ಅವನ ಮುಂದೆ ಕೈಜೋಡಿಸಿ ನಿಂತು ತನ್ನವನನ್ನಾಗಿ ಮಾಡಿಕೊಳ್ಳಬೇಕು. ಹೇಡಿಯನ್ನು ಭೇದೋಪಾಯದಿಂದ ತನ್ನ ಅಧೀನನನ್ನಾಗಿ ಮಾಡಿಕೊಳ್ಳಬೇಕು. ಜಿಪುಣನನ್ನು ಅಪಾರವಾದ ಹಣವನ್ನು ಕೊಟ್ಟು ತನ್ನ ವಶವರ್ತಿಯನ್ನಾಗಿ ಮಾಡಿಕೊಳ್ಳಬೇಕು. ತನಗೆ ಸಮಾನವಾದ ಪರಾಕ್ರಮವಿರುವವನೊಡನೆ ಸಮಯವರಿತು ಯುದ್ಧ ಮಾಡಬೇಕು.

ಶ್ರೇಣೀಮುಖ್ಯೋಪಜಾಪೇಷು ವಲ್ಲಭಾನುನಯೇಷು ಚ ।
ಅಮಾತ್ಯಾನ್ಪರಿರಕ್ಷೇತ ಭೇದಸಂಘಾತಯೋರಪಿ ॥೬೪॥

ದಳಗಳ ಮುಖ್ಯಸ್ಥರಲ್ಲಿ ಪರಸ್ಪರಭೇದಭಾವವುಂಟಾದ ಸಮಯ

ದಲ್ಲಿಯೂ ಮತ್ತು ದಳದ ಮುಖ್ಯಸ್ಥರನ್ನು ನಯ-ವಿನಯಗಳಿಂದ ಸಾಂತ್ವನಗೊಳಿಸುವ ಸಂದರ್ಭದಲ್ಲಿಯೂ, ಪರಸ್ಪರಭೇದಭಾವಗಳ ಮತ್ತು ಸಂಘರ್ಷಣೆಗಳ ಸಮಯದಲ್ಲಿಯೂ ರಾಜನು ಅಮಾತ್ಯರನ್ನು ಸಂರಕ್ಷಿಸಬೇಕು.

ಮೃದುರಿತ್ಯವಜಾನನ್ತಿ ತೀಕ್ಷ್ಣ ಇತ್ಯುದ್ವಿಜನ್ತಿ ಚ ।
ತೀಕ್ಷ್ಣಕಾಲೇ ಭವೇತ್ತೀಕ್ಷ್ಣೋ ಮೃದುಕಾಲೇ ಮೃದುರ್ಭವೇತ್ ॥೬೫॥

ರಾಜನು ಮೃದುಸ್ವಭಾವದವನಾಗಿದ್ದರೆ–ದುರ್ಬಲನೆಂದು ಪ್ರಜೆಗಳು ಅವಹೇಳನಮಾಡುತ್ತಾರೆ. ಕಠೋರಸ್ವಭಾವದವನಾಗಿದ್ದರೆ–ಕ್ರೂರಿಯೆಂದು ಉದ್ವಿಗ್ನರಾಗುತ್ತಾರೆ. ಆದುದರಿಂದ ರಾಜನು ಕ್ರೌರ್ಯವನ್ನು ತೋರಿಸಬೇಕಾಗಿ ಬಂದಾಗ ಕ್ರೂರಿಯಾಗಿಯೇ ಇರಬೇಕು. ಮಾರ್ದವದಿಂದ ವ್ಯವಹರಿಸಬೇಕಾದಾಗ ಮೃದುವಾಗಿಯೇ ಇರಬೇಕು.

ಮೃದುನೈವ ಮೃದುಂ ಹನ್ತಿ ಮೃದುನಾ ಹನ್ತಿ ದಾರುಣಮ್ ।
ನಾಸಾಧ್ಯಂ ಮೃದುನಾ ಕಿಂಚಿತ್ತಸ್ಮಾತ್ತೀಕ್ಷ್ಣತರೋ ಮೃದುಃ ॥೬೬॥

ಬುದ್ಧಿವಂತನಾದ ರಾಜನು ಮೃದುತ್ವದಿಂದಲೇ ಮೃದುವಾಗಿರುವ ಶತ್ರುರಾಜನನ್ನು ಸಂಹಾರಮಾಡುತ್ತಾನೆ. ಮೃದುತ್ವದಿಂದಲೇ ಕ್ರೂರನಾದ ಶತ್ರುವನ್ನೂ ಸಂಹಾರಮಾಡುತ್ತಾನೆ. ಮಾರ್ದವೋಪಾಯದಿಂದ ಸಾಧಿಸಲು ಆಗದಿರುವ ಕಾರ್ಯವೇ ಇಲ್ಲ. ಆದುದರಿಂದ ಕೋಮಲತೆಯು ದಾರುಣೋಪಾಯಕ್ಕಿಂತಲೂ ಅತ್ಯಂತತೀಕ್ಷ್ಣವಾಗಿಯೇ ಇರುತ್ತದೆ.

ಕಾಲೇ ಮೃದುರ್ಯೋ ಭವತಿ ಕಾಲೇ ಭವತಿ ದಾರುಣಃ ।
ಪ್ರಸಾಧಯತಿ ಕೃತ್ಯಾನಿ ಶತ್ರುಂ ಚಾಪ್ಯಧಿತಿಷ್ಠತಿ ॥೬೭॥

ಯಾವನು ಸಮಯವರಿತು ಮೃದುವಾಗಿರುವನೋ–ಸಮಯವರಿತು ಕ್ರೂರಿಯಾಗುವನೋ–ಅಂತಹ ರಾಜನು ತನ್ನ ಸಕಲಕಾರ್ಯಗಳನ್ನೂ ಸಾಧಿಸಿಕೊಳ್ಳುತ್ತಾನೆ. ಶತ್ರುವನ್ನೂ ಸ್ವಾಧೀನಪಡಿಸಿಕೊಳ್ಳುತ್ತಾನೆ.

ಪಣ್ಡಿತೇನ ವಿರುದ್ಧಃ ಸನ್ದೂರಸ್ಥೋಽಸ್ಮೀತಿ ನಾಶ್ವಸೇತ್ ।
ದೀರ್ಘೌ ಬುದ್ಧಿಮತೋ ಬಾಹೂ ಯಾಭ್ಯಾಂ ಹಿಂಸತಿ ಹಿಂಸಿತಃ ॥

ವಿದ್ವಾಂಸನಾದವನೊಡನೆ ವಿರೋಧವನ್ನು ಕಟ್ಟಿಕೊಂಡನಂತರ 'ನಾನು ಅವನಿಂದ ದೂರವಾಗಿದ್ದೇನೆ'–ಎಂದು ಭಾವಿಸಿ ನಿಶ್ಚಿಂತನಾಗಿರ

ಕೂಡದು. ಬುದ್ಧಿವಂತನ ತೋಳುಗಳು ಬಹಳ ಉದ್ದವಾಗಿರುತ್ತವೆ. (ಬುದ್ಧಿವಂತನು ಬುದ್ಧಿಯೆಂಬ ತೋಳುಗಳಿಂದ ಶತ್ರುವು ಎಷ್ಟೇ ದೂರದಲ್ಲಿದ್ದರೂ ಅವನನ್ನು ಬಂಧಿಸಬಲ್ಲನು ಅಥವಾ ಸಂಹರಿಸಬಲ್ಲನು.) ಶತ್ರುವಿ ನಿಂದ ಹಿಂಸಿಸಲ್ಪಟ್ಟ ಬುದ್ಧಿವಂತನಾದ ರಾಜನು ತನ್ನ ಸುದೀರ್ಘವಾದ ಬಾಹುಗಳಿಂದ ಶತ್ರುವನ್ನು ವಿನಾಶಗೊಳಿಸುತ್ತಾನೆ.

ನ ತತ್ತರೇದ್ಯಸ್ಯ ನ ಪಾರಮುತ್ತರೇ-
ನ್ನ ತದ್ಧರೇದ್ಯತ್ಪುನರಾಹರೇತ್ಪರಃ ।
ನ ತತ್ಖನೇದ್ಯಸ್ಯ ನ ಮೂಲಮುದ್ಧರೇ-
ನ್ನ ತಂ ಹನ್ಯಾದ್ಯಸ್ಯ ಶಿರೋ ನ ಪಾತಯೇತ್ ॥೯॥

ಯಾವ ನದಿಯ (ಸಮುದ್ರದ) ಪಾರವನ್ನು ದಾಟಲು ಸಾಧ್ಯವಾಗುವುದಿಲ್ಲವೋ–ಅಂತಹ ನದಿಯನ್ನು (ಸಮುದ್ರವನ್ನು) ದಾಟಲು ಸಾಹಸ ಮಾಡಬಾರದು. ಯಾವ ಕಾರ್ಯವನ್ನು ಮುಗಿಸಲು ಸಾಧ್ಯವಿಲ್ಲವೋ–ಆ ಕಾರ್ಯಕ್ಕೆ ಕೈಹಾಕಬಾರದು. ಯಾವ ಐಶ್ವರ್ಯವನ್ನು ಶತ್ರುವು ಪುನಃ ಅಪಹರಿಸಲು ಸಮರ್ಥನಾಗುವನೋ–ಅಂತಹ ಐಶ್ವರ್ಯವನ್ನು ಶತ್ರುವಿನಿಂದ ಅಪಹರಿಸಲೇಬಾರದು. ಯಾವ ವೃಕ್ಷದ ಮೂಲವನ್ನು ಸಂಪೂರ್ಣವಾಗಿ ಉತ್ಪಾಟನೆಮಾಡಲು ಸಾಧ್ಯವಾಗುವುದಿಲ್ಲವೋ–ಅಂತಹ ವೃಕ್ಷದ ಬುಡವನ್ನು ಅಗೆಯಲು ಉಪಕ್ರಮಿಸಲೇಬಾರದು. ಶತ್ರುವನ್ನು ಸಂಪೂರ್ಣವಾಗಿ ನಾಶಪಡಿಸಲು ಸಾಧ್ಯವಿಲ್ಲದಿದ್ದರೆ ಯುದ್ಧಕ್ಕೆ ತೊಡಗಲೇಬಾರದು. ಯಾವ ಶತ್ರುವಿನ ಶಿರಸ್ಸನ್ನು ಕೆಳಗುರುಳಿಸಲು ಸಾಧ್ಯವಾಗುವುದಿಲ್ಲವೋ–ಅಂತಹ ಶತ್ರುವನ್ನು ಘಾಸಿಪಡಿಸಲೇಬಾರದು.

ಶತ್ರುಂಜಯ! ಪಾಪಪೂರ್ಣವಾದ ಈ ನೀತಿಯನ್ನು ನಾನು ನಿನಗೆ ಹೇಳಿದ್ದೇನೆ. ರಾಜನು ಈ ನೀತಿಯಂತೆಯೇ ನಡೆಯಬಾರದು. ಆದರೆ ಶತ್ರುವೇನಾದರೂ ಈ ಪಾಪಪೂರ್ಣವಾದ ನೀತಿಯನ್ನೇ ಅನುಸರಿಸಿದರೆ ಅವನಿಗೆ ಪ್ರತೀಕಾರಮಾಡಲು ಏಕೆ ಈ ನೀತಿಯನ್ನು ಅನುಸರಿಸಬಾರದು? ಆದುದರಿಂದ ನಿನ್ನ ಹಿತದಲ್ಲಿಯೇ ಆಸಕ್ತನಾಗಿರುವ ನಾನು ಈ ಕುಟಿಲನೀತಿಯನ್ನು ಹೇಳಿದ್ದೇನೆ.”

ಯುಧಿಷ್ಠಿರ! ರಾಜನ ಹಿತಾಭಿಲಾಷಿಯಾದ ಬ್ರಾಹ್ಮಣೋತ್ತಮ

ನಾದ ಭಾರದ್ವಾಜನು ಹೇಳಿದ ಕಣಿಕನೀತಿಯನ್ನು ಸೌರಾಷ್ಟ್ರದೇಶದ ರಾಜನಾದ ಮಹಾಸತ್ತ್ವನಾದ ಶತ್ರುಂಜಯನು ಕೇಳಿ ಅದರಂತೆಯೇ ಮಾಡಿದನು. ಶತ್ರುಗಳನ್ನು ಗೆದ್ದು ಉಜ್ಜ್ವಲವಾದ ರಾಜ್ಯಶ್ರೀಯನ್ನೂ ಬಂಧು-ಮಿತ್ರರ ಸಮೇತನಾಗಿ ಉಪಭೋಗಿಸಿದನು.”

೧೪೦ನೆಯ ಅಧ್ಯಾಯವು ಮುಗಿಯಿತು.

೧೪೧ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಭಯಂಕರವಾದ ಸಂಕಟಕಾಲದಲ್ಲಿ ಬ್ರಾಹ್ಮಣನು ಹೇಗೆ ಜೀವನ ನಿರ್ವಹಣೆಯನ್ನು ಮಾಡಬೇಕು?-ಎಂಬ ವಿಷಯದಲ್ಲಿ ವಿಶ್ವಾಮಿತ್ರ-ಚಾಂಡಾಲರ ಸಂವಾದ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

“ಭೀಷ್ಮಪಿತಾಮಹ! ಯಾವಾಗ ಲೋಕದ ಎಲ್ಲ ಜನರೂ ಧರ್ಮದ ಉಲ್ಲಂಘನೆಯನ್ನೇ ಮಾಡುತ್ತಿದ್ದು, ಶ್ರೇಷ್ಠವಾದ ಸನಾತನಧರ್ಮವು ಕ್ಷೀಣಿಸಿ ಹೋಗುವುದೋ, ಅಧರ್ಮವೇ ಧರ್ಮದ ರೂಪವನ್ನೂ–ಧರ್ಮವು ಅಧರ್ಮದ ರೂಪವನ್ನೂ ತಾಳುವುದೋ, ಸಕಲಲೋಕಗಳ ಮರ್ಯಾದೆಗಳೂ ಉಲ್ಲಂಘಿಸಲ್ಪಡುವುವೋ, ಧರ್ಮದ ನಿಶ್ಚಯವು ಕ್ಷೋಭೆಗೊಳ್ಳುವುದೋ, ರಾಜರಿಂದಲೋ ಅಥವಾ ಶತ್ರುಗಳಿಂದಲೋ ಲೋಕವು ಪೀಡಿಸಲ್ಪಡುವುದೋ, ಎಲ್ಲ ಆಶ್ರಮಿಗಳೂ ಏನು ಮಾಡಬೇಕೆಂಬುದೇ ತಿಳಿಯದೆ ಮೂಢರಾಗಿರುವರೋ, ಕರ್ಮಗಳೆಲ್ಲವೂ ನಷ್ಟವಾಗಿಹೋಗಿರುವುವೋ, ಕಾಮ-ಲೋಭ-ಮೋಹಗಳ ಕಾರಣದಿಂದ ಎಲ್ಲರೂ ಸರ್ವತ್ರ ಭಯವನ್ನೇ ಕಾಣುತ್ತಿರುವರೋ, ಯಾರೂ ಯಾರ ಮೇಲೂ ಯಾವ ವಿಧವಾದ ವಿಶ್ವಾಸವನ್ನೂ ಇಡುವುದಿಲ್ಲವೋ, ಪ್ರಜೆಗಳೆಲ್ಲರೂ ನಿತ್ಯಭೀತಿಯಿಂದ ಇರುವರೋ, ಒಬ್ಬರನ್ನೊಬ್ಬರು ಮೋಸದಿಂದ ಕೊಲೆಮಾಡುವರೋ, ಒಬ್ಬರು ಮತ್ತೊಬ್ಬರನ್ನು ವಂಚಿಸುವರೋ, ದೇಶಗಳೆಲ್ಲವೂ ಅಗ್ನಿಯ ಬಾಧೆಯಿಂದ ಉರಿದು ಹೋಗುತ್ತಿರುತ್ತವೆಯೋ, ಬ್ರಾಹ್ಮಣರು ಬಹಳವಾಗಿ ಪೀಡಿಸಲ್ಪಡುವರೋ, ಪರ್ಜನ್ಯನು ಸಕಾಲದಲ್ಲಿ ಮಳೆಗರೆಯುವುದಿಲ್ಲವೋ, ಅಣ್ಣ-ತಮ್ಮಂದಿರಲ್ಲಿ,

ತಂದೆ-ಮಕ್ಕಳಲ್ಲಿ, ಪತಿ-ಪತ್ನಿಯರಲ್ಲಿ ಭೇದಭಾವಗಳು ಹುಟ್ಟಿಕೊಳ್ಳು ವುವೋ–ವಿಶ್ವವೆಲ್ಲವೂ ದರೋಡೆಕಾರರಿಂದ ತುಂಬಿಹೋಗಿರುವುದೋ– ಆಗ ಅಂತಹ ಅಧಮಾಧಮಪರಿಸ್ಥಿತಿಯಲ್ಲಿ ಬ್ರಾಹ್ಮಣನು ಯಾವ ಉಪಾಯದಿಂದ ಜೀವನವನ್ನು ನಿರ್ವಹಿಸಬೇಕು? ಅಂತಹ ದಾರುಣವಾದ ಆಪತ್ಕಾಲದ ಸಂದರ್ಭದಲ್ಲಿಯೂ ದಯಾಪರನಾಗಿ ಪುತ್ರ-ಪೌತ್ರರನ್ನು ಪರಿತ್ಯಜಿಸಲು ಇಚ್ಛಿಸದೇ ಇರುವ ಬ್ರಾಹ್ಮಣನು ಹೇಗೆ ಜೀವನನಿರ್ವಹಣೆಯನ್ನು ಮಾಡಬೇಕು? ಪಿತಾಮಹನೇ! ಶತ್ರುತಾಪನನೇ! ಲೋಕವು ಅತ್ಯಂತಪಾಪಭೂಯಿಷ್ಠವಾದಾಗ ರಾಜನಾದವನು ಅರ್ಥದಿಂದಲೂ ಧರ್ಮ ದಿಂದಲೂ ಚ್ಯುತನಾಗದಿರಲು ಹೇಗೆ ವ್ಯವಹರಿಸಬೇಕು?–ಈ ವಿಷಯ ಗಳನ್ನು ನನಗೆ ತಿಳಿಸು."

ಭೀಷ್ಮನು ಉತ್ತರಿಸುತ್ತಾನೆ :

ರಾಜಮೂಲಾ ಮಹಾಬಾಹೋ ಯೋಗಕ್ಷೇಮಸುವೃಷ್ಟಯಃ ।
ಪ್ರಜಾಸು ವ್ಯಾಧಯಶ್ಚೈವ ಮರಣಂ ಚ ಭಯಾನಿ ಚ ॥೯॥

"ಮಹಾಬಾಹೋ! ಯುಧಿಷ್ಠಿರ! ಪ್ರಜೆಗಳ ಯೋಗ-ಕ್ಷೇಮಗಳು, ಸುವೃಷ್ಟಿ, ವ್ಯಾಧಿ, ಮರಣ ಮತ್ತು ಭಯ–ಇವುಗಳೆಲ್ಲಕ್ಕೂ ರಾಜನೇ ಮೂಲ ಕಾರಣನಾಗಿರುತ್ತಾನೆ.

ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚ ಭರತರ್ಷಭ ।
ರಾಜಮೂಲಾ ಇತಿ ಮತಿರ್ಮಮ ನಾಸ್ತ್ಯತ್ರ ಸಂಶಯಃ ॥೧೦॥

ಭರತಶ್ರೇಷ್ಠನೇ! ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗಗಳಿಗೆ ಮೂಲಕಾರಣನೂ ರಾಜನೇ ಆಗಿದ್ದಾನೆಂಬುದು ನನ್ನ ಅಭಿಪ್ರಾಯವಾಗಿದೆ. (ರಾಜನು ಕಾಲವನ್ನು ಸತ್ಯಯುಗವನ್ನಾಗಿಯೂ ಪರಿವರ್ತಿಸಬಲ್ಲನು. ಅವನ ಆಡಳಿತದ ಧೋರಣೆಯನ್ನು ಅನುಸರಿಸಿ ಕಾಲಗಳು ಪರಿವರ್ತನೆಯನ್ನು ಹೊಂದುತ್ತವೆ.) ಈ ವಿಷಯದಲ್ಲಿ ಸಂಶಯವೇ ಇಲ್ಲ.

ತಸ್ಮಿಂಸ್ತ್ವಭ್ಯಾಗತೇ ಕಾಲೇ ಪ್ರಜಾನಾಂ ದೋಷಕಾರಕೇ ।
ವಿಜ್ಞಾನಬಲಮಾಸ್ಥಾಯ ಜೀವಿತವ್ಯಂ ಭವೇತ್ತದಾ ॥೧೧॥

ಪ್ರಜೆಗಳಲ್ಲಿ ದೋಷವನ್ನು ಉತ್ಪನ್ನಮಾಡುವ ಅಂತಹ ಸುದಾರುಣ ವಾದ ಕಾಲವು ಒದಗಿಬಂದಾಗ ಬ್ರಾಹ್ಮಣನು ವಿಜ್ಞಾನದ ಬಲವನ್ನೇ ಆಶ್ರಯಿಸಿ ಜೀವಿಸಬೇಕಾಗುತ್ತದೆ.

ಈ ವಿಷಯದಲ್ಲಿ ಚಾಂಡಾಲನೊಬ್ಬನ ಮನೆಯಲ್ಲಿ ಚಾಂಡಾಲನಿಗೂ ಮತ್ತು ವಿಶ್ವಾಮಿತ್ರನಿಗೂ ನಡೆದ ಪುರಾತನವಾದ ಇತಿಹಾಸವನ್ನು ಉದಾಹರಿಸುತ್ತಾರೆ. ತ್ರೇತಾ ಮತ್ತು ದ್ವಾಪರಯುಗಗಳ ಸಂಧಿಸಮಯದಲ್ಲಿ ಸಂಭವಿಸಿದ ಘಟನೆಯಿದು. ಆಗ ದೈವವಶದಿಂದ ಲೋಕದಲ್ಲಿ ಹನ್ನೆರಡು ವರ್ಷಗಳ ಪರ್ಯಂತವಾದ ಅನಾವೃಷ್ಟಿಯುಂಟಾಯಿತು. ತ್ರೇತಾಯುಗವು ಮುಗಿದುಹೋಗುವುದರಲ್ಲಿದ್ದಿತು. ದ್ವಾಪರಯುಗವು ಆರಂಭವಾಗುವುದ ರಲ್ಲಿದ್ದಿತು. ಪ್ರಜೆಗಳೆಲ್ಲರೂ ಅತ್ಯಂತವೃದ್ಧರಾಗಿದ್ದರು. ಆ ಸಮಯದಲ್ಲಿ ಹನ್ನೆರಡು ವರ್ಷಗಳ ಕಾಲ ಮಳೆಯೇ ಬಾರದೇ ಇರಲಾಗಿ ಪ್ರಳಯಕಾಲವು ಸನ್ನಿಹಿತವಾಯಿತು.

ನ ವವರ್ಷ ಸಹಸ್ರಾಕ್ಷಃ ಪ್ರತಿಲೋಮೋಽಭವದ್ಗುರುಃ ।
ಜಗಾಮ ದಕ್ಷಿಣಂ ಮಾರ್ಗಂ ಸೋಮೋ ವ್ಯಾವೃತ್ತಲಕ್ಷಣಃ ॥೧೫॥

ಆ ಸಮಯದಲ್ಲಿ ಇಂದ್ರನು ಮಳೆಗರೆಯಲಿಲ್ಲ. ಗುರುವು ವಕ್ರಿ ಯಾಗಿದ್ದನು. ಚಂದ್ರನು ವಿಕೃತವಾದ ಲಕ್ಷಣವನ್ನು ಹೊಂದಿ ದಕ್ಷಿಣ ದಿಕ್ಕಿನ ಕಡೆಗೆ ಹೋಗುತ್ತಿದ್ದನು. (ಗ್ರಹಗತಿಗಳು ಬಹಳ ಕ್ರೂರವಾಗಿದ್ದುವು.)

ಆ ಸಮಯದಲ್ಲಿ ಮಂಜು ಕೂಡ ಬೀಳುತ್ತಿರಲಿಲ್ಲವೆಂದ ಮೇಲೆ ಮೋಡಗಳು ಹುಟ್ಟುವುದೆಂತು? ನದಿಗಳಲ್ಲಿ ಜಲಪ್ರವಾಹವು ಬಹಳವಾಗಿ ಕ್ಷೀಣಿಸಿದ್ದಿತು. ಅನೇಕ ನದಿಗಳು ಅದೃಶ್ಯವಾಗಿ ಹೋದುವು.

ದೈವದ ಕಾರಣದಿಂದ ಅಥವಾ ಸ್ವಾಭಾವಿಕವಾದ ಅನಾವೃಷ್ಟಿಯಿಂದ ದೊಡ್ಡ-ದೊಡ್ಡ ಸರೋವರಗಳೂ, ನದಿಗಳೂ, ಬಾವಿಗಳೂ, ಚಿಲುಮೆಗಳೂ ಕಾಂತಿಯನ್ನು ಕಳೆದುಕೊಂಡಿದ್ದುವು. (ಸರೋವರಗಳೂ ಮತ್ತು ಬಾವಿಗಳೂ ಬತ್ತಿಯೇ ಹೋಗಿದ್ದುವು.)

ಸಣ್ಣ-ಸಣ್ಣ ಜಲಾಶಯಗಳು ಸಂಪೂರ್ಣವಾಗಿ ಬತ್ತಿಹೋಗಿದ್ದುವು.

ಅರವಟ್ಟಿಗೆಗಳು ನಿಂತುಹೋದುವು. ಯಜ್ಞಗಳಾಗಲೀ, ಅಧ್ಯಯನ-ಅಧ್ಯಾಪನಾದಿಗಳಾಗಲೀ ನಡೆಯುತ್ತಿರಲಿಲ್ಲ. ಸ್ವಾಹಾಕಾರ-ವಷಟ್ಕಾರಗಳ ಧ್ವನಿಯೇ ಕೇಳುತ್ತಿರಲಿಲ್ಲ. ಮಂಗಳೋತ್ಸವಗಳೂ ನಿಂತುಹೋದುವು. ಕೃಷಿ ಮತ್ತು ಗೋರಕ್ಷಣಾಕಾರ್ಯಗಳು ಸ್ತಬ್ಧವಾದುವು. ಕ್ರಯ-ವಿಕ್ರಯಗಳೂ ನಡೆಯುತ್ತಿರಲಿಲ್ಲ. ಯಜ್ಞಕ್ಕಾಗಿ ಸಾಮಗ್ರಿಗಳನ್ನು ಸಂಗ್ರಹಿಸುವುದೂ ನಿಂತುಹೋಯಿತು. ದೊಡ್ಡ-ದೊಡ್ಡ ಉತ್ಸವಗಳೆಲ್ಲವೂ ನಷ್ಟವಾಗಿಹೋದುವು. ಭೂಮಂಡಲವು ಎಲುಬುಗಳ ರಾಶಿಯಿಂದ ತುಂಬಿಹೋಗಿದ್ದಿತು. ಪ್ರಾಣಿಗಳ ಆರ್ತನಾದಗಳು ಸರ್ವತ್ರ ಕೇಳಿಬರುತ್ತಿದ್ದುವು. ನಗರದ ಅನೇಕ ಪ್ರದೇಶಗಳು ಶೂನ್ಯವಾಗಿದ್ದುವು. ಅನೇಕ ಗೃಹಗಳೂ ಅನೇಕ ಗ್ರಾಮಗಳೂ ಸುಟ್ಟುಹೋಗಿದ್ದುವು. ಭೂಮಿಯು ಹಲವೆಡೆಗಳಲ್ಲಿ ಚೋರರಿಂದಲೂ, ಅಸ್ತ್ರ-ಶಸ್ತ್ರಧಾರಿಗಳಿಂದಲೂ, ರಾಜರಿಂದಲೂ, ಹಸಿವಿನಿಂದ ಬಳಲಿದ ಮನುಷ್ಯರಿಂದಲೂ ವ್ಯಾಪ್ತವಾಗಿದ್ದು ಪರಸ್ಪರಭಯದಿಂದಾಗಿ ಶೂನ್ಯವೂ ಜನರಹಿತವೂ ಆಗಿದ್ದಿತು. ದೇವಾಲಯ-ಮಠ-ಮಂದಿರಗಳೆಲ್ಲವೂ ನಾಶಹೊಂದಿದ್ದುವು. ವೃದ್ಧರೂ, ಬಾಲಕರೂ ವಿನಾಶಹೊಂದಿದ್ದರು. ಭೂಮಂಡಲವು ಗೋವುಗಳಿಂದಲೂ, ಕುರಿಗಳಿಂದಲೂ, ಮೇಕೆಗಳಿಂದಲೂ, ಎಮ್ಮೆಗಳಿಂದಲೂ ವಿಹೀನವಾಗಿದ್ದಿತು. ಹಸಿವಿನಿಂದ ಬಳಲಿದ್ದ ಪ್ರಾಣಿಗಳು ಪರಸ್ಪರವಾಗಿ ಕಚ್ಚಾಡುತ್ತಿದ್ದುವು. ಬ್ರಾಹ್ಮಣರೆಲ್ಲರೂ ವಿನಾಶಹೊಂದಿದ್ದರು. ರಕ್ಷಣೆ ಮಾಡುವವರೂ ಇರಲಿಲ್ಲ. ಆಹಾರಧಾನ್ಯಗಳೂ, ಹಣ್ಣು-ಹಂಪಲುಗಳೂ ಹಾಳಾಗಿದ್ದುವು. ಆ ಸಮಯದಲ್ಲಿ ಭೂಮಂಡಲವು ಅಳಿದುಳಿದಿದ್ದ ಪ್ರಾಣಿಗಳ ಹಾಹಾಕಾರಗಳಿಂದ ತುಂಬಿಹೋಗಿದ್ದಿತು.

ಯುಧಿಷ್ಠಿರ! ಅಂತಹ ಮಹಾಭಯಂಕರವಾದ ಕಾಲದಲ್ಲಿ ಧರ್ಮವು ಸಂಪೂರ್ಣವಾಗಿ ಗ್ಲಾನಿಹೊಂದಲಾಗಿ, ಹಸಿವಿನಿಂದ ಬಳಲಿದ್ದ ಮನುಷ್ಯರು ಒಬ್ಬರನ್ನೊಬ್ಬರು ತಿನ್ನತೊಡಗಿದ್ದರು.

ಋಷಿಗಳೆಲ್ಲರೂ ನೀತಿ-ನಿಯಮಗಳನ್ನೂ, ಅಗ್ನಿಹೋತ್ರಾದಿಗಳನ್ನೂ ಪರಿತ್ಯಜಿಸಿ, ಆಶ್ರಮಗಳನ್ನೂ ಬಿಟ್ಟು ಆಹಾರಾರ್ಥವಾಗಿ ಅತ್ತಲಿತ್ತ ಧಾವಿಸುತ್ತಿದ್ದರು. ಅದೇ ಸಮಯದಲ್ಲಿ ಧೀಮಂತನಾದ, ಮಹರ್ಷಿಯಾದ ಮಹಾ

ತೇಜಸ್ವಿಯಾಗಿದ್ದ ಭಗವಾನ್ ವಿಶ್ವಾಮಿತ್ರನು ಹಸಿವಿನಿಂದ ಬಳಲಿದವನಾಗಿ ಆಶ್ರಮವನ್ನು ಬಿಟ್ಟು ನಾಲ್ಕು ದಿಕ್ಕುಗಳಲ್ಲಿಯೂ ಅಲೆದಾಡುತ್ತಿದ್ದನು. ಅವನು ತನ್ನ ಪತ್ನೀ-ಪುತ್ರರನ್ನೂ ಪರಿತ್ಯಜಿಸಿ, ಅಗ್ನಿಹೋತ್ರವನ್ನೂ ಬಿಟ್ಟು, ಆಶ್ರಮವನ್ನೂ ತೊರೆದು, ಭಕ್ಷ್ಯಾಭಕ್ಷ್ಯಗಳಲ್ಲಿ ಯಾವ ವಿಧವಾದ ಭೇದ ಭಾವವನ್ನೂ ಎಣಿಸದೇ ಯಾವುದಾದರೂ ಆಹಾರವು ಸಿಕ್ಕಿದರೆ ಸಾಕೆಂಬ ಕಾತರದಿಂದ ಅಲೆದಾಡುತ್ತಿದ್ದನು. ಹೀಗೆಯೇ ಸಂಚರಿಸುತ್ತಿದ್ದಾಗ ಅವ ನೊಮ್ಮೆ ಅರಣ್ಯದ ಮಧ್ಯದಲ್ಲಿದ್ದ, ಪ್ರಾಣಿಗಳನ್ನು ಬೇಟೆಯಾಡುತ್ತಿದ್ದ, ಹಿಂಸಾತತ್ಪರರಾದ ಚಾಂಡಾಲರ ಪಾಳ್ಯದ ಮುಂದೆ ಬಿದ್ದುಬಿಟ್ಟನು. ಆ ಸ್ಥಳವು ಒಡೆದುಹೋದ ಮಡಕೆಯ ಚೂರುಗಳಿಂದ ವ್ಯಾಪ್ತವಾಗಿದ್ದಿತು. ನಾಯಿಯ ಚರ್ಮವನ್ನು ಕತ್ತರಿಸುವ ಆಯುಧದಿಂದ ಕೂಡಿದ್ದಿತು. ಮುರಿದು ಬಿದ್ದಿದ್ದ ಹಂದಿಗಳ ಮತ್ತು ಕತ್ತೆಗಳ ಮೂಳೆಯ ಚೂರುಗಳಿಂದಲೂ, ಕಪಾಲಗಳಿಂದಲೂ, ಮಡಕೆಗಳಿಂದಲೂ ಆ ಸ್ಥಳವು ತುಂಬಿಹೋಗಿದ್ದಿತು. ಹೆಣಗಳ ಮೇಲಿನ ಬಟ್ಟೆಯನ್ನು ಸಂಗ್ರಹಿಸಿ ತಂದು ಅಲ್ಲಿ ಹರಡಿದ್ದರು. ಹೆಣ ಗಳ ಮೇಲಿನ ಹೂಗಳನ್ನು ಸಂಗ್ರಹಿಸಿ ತಂದು ಚಾಂಡಾಲರು ತಮ್ಮ ಮನೆ ಗಳನ್ನು ಸಿಂಗರಿಸಿಕೊಂಡಿದ್ದರು. ಅವರ ಗುಡಿಸಿಲುಗಳೂ ಮತ್ತು ಮಠಗಳೂ ಹಾವಿನ ಪೊರೆಗಳಿಂದ ಮಾಡಿದ ಮಾಲೆಗಳಿಂದ ಅಲಂಕರಿಸಲ್ಪಟ್ಟಿದ್ದು ಆ ಮಾಲೆಗಳೇ ಅವು ಚಾಂಡಾಲರ ಮನೆಗಳೆಂಬುದಕ್ಕೆ ಗುರುತುಗಳಾಗಿದ್ದುವು. ಆ ಸ್ಥಳದಲ್ಲಿ ಕೋಳಿಗಳ ಕೂಗು ಬಹಳವಾಗಿ ಕೇಳಿಸುತ್ತಿದ್ದಿತು. ಕತ್ತೆಗಳ ಕಿರುಚಾಟಗಳಿಂದ ಆ ಸ್ಥಳವು ಪ್ರತಿಧ್ವನಿತವಾಗುತ್ತಿದ್ದಿತು. ಪರಸ್ಪರವಾಗಿ ಜಗಳವಾಡುತ್ತಾ ಕರ್ಣಕಠೋರವಾದ ಮಾತುಗಳಿಂದ ಕೂಗಾಡುತ್ತಿದ್ದ ಶ್ವಪಚರಿಂದ ಆ ಸ್ಥಳವು ತುಂಬಿಹೋಗಿದ್ದಿತು. ಗೂಬೆಗಳ ಮತ್ತು ಇತರ ಪಕ್ಷಿಗಳ ಧ್ವನಿಗಳಿಂದ ಕೂಡಿದ್ದ ದೇವಾಲಯಗಳು ಆ ಹಳ್ಳಿಯ ಸುತ್ತಲೂ ಇದ್ದುವು. ಗುಡಿಸಿಲುಗಳು ಲೋಹದ ಘಂಟೆಗಳಿಂದ ಸಮಲಂಕೃತವಾಗಿದ್ದುವು ಮತ್ತು ನಾಯಿಗಳ ಹಿಂಡುಗಳಿಂದ ಪರಿವೃತವಾಗಿದ್ದುವು.

ಆಹಾರವನ್ನು ಹುಡುಕುವುದರಲ್ಲಿಯೇ ಆಸಕ್ತನಾಗಿ ದೇಶಪರ್ಯಟನೆ ಮಾಡುತ್ತಿದ್ದ, ಹಸಿವಿನಿಂದ ಬಳಲಿದ್ದ ವಿಶ್ವಾಮಿತ್ರಮಹರ್ಷಿಯು ಚಾಂಡಾಲರ ಆ ಹಳ್ಳಿಯನ್ನು ಪ್ರವೇಶಿಸಿ ಆಹಾರಾಹರಣಕ್ಕಾಗಿ ಬಹಳವಾಗಿ ಪ್ರಯತ್ನಿಸಿ

ದನು. ಅಲ್ಲಿದ್ದ ಎಲ್ಲ ಗುಡಿಸಿಲುಗಳ ಬಳಿಗೂ ಹೋಗಿ ಭಿಕ್ಷೆಬೇಡಿದರೂ ಅವನಿಗೆ ಆ ಗುಡಿಸಿಲುಗಳಲ್ಲಿ ಮಾಂಸವಾಗಲೀ, ಅನ್ನವಾಗಲೀ, ಹಣ್ಣು ಗಳಾಗಲೀ, ಗೆಡ್ಡೆ-ಗೆಣಸುಗಳಾಗಲೀ ಸಿಕ್ಕಲಿಲ್ಲ.

'ಅಯ್ಯೋ! ನನಗೆ ಅತಿಯಾದ ಕಷ್ಟವು ಸಂಭವಿಸಿತು. ನಾನು ಈ ಕಷ್ಟವನ್ನು ಸಹಿಸಲಾರೆನು'–ಎಂಬುದಾಗಿ ಯೋಚಿಸುತ್ತಾ ವಿಶ್ವಾಮಿತ್ರನು ಚಾಂಡಾಲರ ಆ ಹಳ್ಳಿಯಲ್ಲಿ-ಅನೇಕವರ್ಷಗಳು ಆಹಾರವಿಲ್ಲದೆ ದೌರ್ಬಲ್ಯದ ಕಾರಣದಿಂದ ಕೆಳಕ್ಕೆ ಬಿದ್ದುಬಿಟ್ಟನು. ಹಾಗೆ ಬಿದ್ದಿರುವಾಗಲೇ ಯೋಚಿಸ ತೊಡಗಿದನು. 'ಯಾವ ರೀತಿಯಲ್ಲಿ ನನಗೆ ಶುಭವಾಗುತ್ತದೆ? ಆಹಾರವಿಲ್ಲ ದಿದ್ದರೂ ಮರಣವು ಸಂಭವಿಸದಿರಲು ಏನು ಮಾಡಲಿ? ಆಹಾರವೇ ಸಿಗದಿದ್ದರೆ ಮೃತ್ಯುವನ್ನಾದರೂ ಜಯಿಸುವುದು ಹೇಗೆ? ಆಹಾರವಿಲ್ಲದೆ ಪ್ರಾಣವೇ ಹೋಗಿಬಿಡುವ ಸಂದರ್ಭವು ಒದಗಿಬಂದಿದೆ. ಈ ಸಮಯದಲ್ಲಿ ನನಗೆ ಆಹಾರವು ಸಿಕ್ಕಿ ನಾನು ಮೃತ್ಯುವಿನಿಂದ ಪಾರಾಗುವೆನೇ? ಬದುಕುವ ಅದೃಷ್ಟವು ನನಗೆ ಪುನಃ ಒದಗಿಬರುವುದೇ?'

ವಿಶ್ವಾಮಿತ್ರನು ಹೀಗೆ ಯೋಚಿಸುತ್ತಿರಲಾಗಿ, ಚಾಂಡಾಲನೊಬ್ಬನ ಮನೆಯಲ್ಲಿ ಆಗ ತಾನೇ ಕತ್ತಿಯಿಂದ ಕೊಂದು ಕತ್ತರಿಸಿ ತಂತಿಗೆ ನೇತು ಹಾಕಿದ್ದ ನಾಯಿಯ ಸೊಂಟದ ಭಾಗದ ಮಾಂಸದ ತುಂಡನ್ನು ನೋಡಿದನು. ಅದನ್ನು ನೋಡಿದೊಡನೆಯೇ ವಿಶ್ವಾಮಿತ್ರನು ಕಳ್ಳತನಮಾಡಿಯಾದರೂ ಅದನ್ನು ತೆಗೆದುಕೊಂಡು ಭಕ್ಷಿಸಬೇಕೆಂದು ಯೋಚಿಸಿದನು. "ಈ ಸಮಯದಲ್ಲಿ ನಾನು ಕಳ್ಳತನಮಾಡಿಯಾದರೂ ಈ ಮಾಂಸದ ತುಂಡನ್ನು ತೆಗೆದುಕೊಂಡು ಭಕ್ಷಿಸದಿದ್ದರೆ ಜೀವಸಹಿತವಾಗಿ ಉಳಿಯಲು ನನಗೆ ಬೇರೆ ಯಾವ ಉಪಾಯವೂ ಇಲ್ಲವಾಗಿದೆ.

ಆಪತ್ಸು ವಿಹಿತಂ ಸ್ತೈನ್ಯಂ ವಿಶಿಷ್ಟಸಮಹೀನತಃ ।
ವಿಪ್ರೇಣ ಪ್ರಾಣರಕ್ಷಾರ್ಥಂ ಕರ್ತವ್ಯಮಿತಿ ನಿಶ್ಚಯಃ ॥೩೯॥

ಬ್ರಾಹ್ಮಣನಾದವನು ಆಪತ್ಕಾಲದಲ್ಲಿ ಪ್ರಾಣಗಳ ರಕ್ಷಣಾರ್ಥವಾಗಿ ತನಗಿಂತಲೂ ಶ್ರೇಷ್ಠರಾದವರ ಮನೆಯಲ್ಲಾಗಲೀ, ತನಗೆ ಸಮಾನರಾದವರ

ಮನೆಯಲ್ಲಾಗಲೀ, ತನಗಿಂತಲೂ ಕೀಳಾದವರ ಮನೆಯಲ್ಲಾಗಲೀ–ಕಳ್ಳತನ ಮಾಡುವುದು ಉಚಿತವಾಗಿದೆ ಮತ್ತು ಇದು ಶಾಸ್ತ್ರದ ನಿಶ್ಚಿತವಿಧಾನವೂ ಆಗಿದೆ.

ಹೀನಾದಾದೇಯಮಾದೌ ಸ್ಯಾತ್ಸಮಾನಾತ್ತದನನ್ತರಮ್ ।
ಅಸಮ್ಭವೇ ವಾದದೀತ ವಿಶಿಷ್ಟಾದಪಿ ಧಾರ್ಮಿಕಾತ್ ॥೪೦॥

ಬ್ರಾಹ್ಮಣನಾದವನು ಮೊದಲು ಹೀನನಾದ ಮನುಷ್ಯನ ಮನೆಯಲ್ಲಿಯೇ ಪ್ರಾಣಗಳ ರಕ್ಷಣಾರ್ಥವಾಗಿ ಆಹಾರದ ಕಳ್ಳತನವನ್ನು ಮಾಡಬೇಕು. ಅಲ್ಲಿ ಅವನಿಗೆ ಆಹಾರವು ಸಿಗದಿದ್ದರೆ ಸಮಾನಸ್ಕಂಧನ ಮನೆಯಲ್ಲಿ ಆಪತ್ಕಾಲದಲ್ಲಿ ಆಹಾರಕ್ಕಾಗಿ ಕಳ್ಳತನ ಮಾಡಬಹುದು. ಅಲ್ಲಿಯೂ ಆಹಾರವು ಸಿಗದಿದ್ದರೆ ತನಗಿಂತಲೂ ವಿಶಿಷ್ಟನಾದವನ ಮತ್ತು ಧಾರ್ಮಿಕನಾದವನ ಮನೆಯಲ್ಲಿ ಕ್ಷುದ್ಬಾಧೆಯಿಂದ ಪೀಡಿತನಾದ ಬ್ರಾಹ್ಮಣನು ಕಳ್ಳತನ ಮಾಡಬಹುದು.

ಸೋಽಹಮನ್ತ್ಯಾವಸಾಯಾನಾಂ ಹರಮ್ಯೇನಾಂ ಪ್ರತಿಗ್ರಹಾತ್ ।
ನ ಸ್ತೈನ್ಯದೋಷಂ ಪಶ್ಯಾಮಿ ಹರಿಷ್ಯಾಮಿ ಶ್ವಜಾಘನೀಮ್ ॥೪೧॥

ಆದುದರಿಂದ ನಾನು ಈ ಚಾಂಡಾಲನ ಮನೆಯಲ್ಲಿ ಕಾಣುತ್ತಿರುವ ನಾಯಿಯ ಸೊಂಟದ ಮಾಂಸವನ್ನು ಅಪಹರಿಸುತ್ತೇನೆ. ಹೀಗೆ ಪ್ರತಿಗ್ರಹ ಮಾಡುವುದರಿಂದ ಕಳ್ಳತನದ ಯಾವ ದೋಷವನ್ನೂ ನಾನು ಕಾಣುತ್ತಿಲ್ಲ. ಆಪತ್ಕಾಲದಲ್ಲಿ ಹೀಗೆ ಮಾಡುವುದೇ ಬ್ರಾಹ್ಮಣನ ಕರ್ತವ್ಯವಾಗಿದೆ."

ಯುಧಿಷ್ಠಿರ! ಮಹಾಮುನಿಯಾದ ವಿಶ್ವಾಮಿತ್ರನು ತನ್ನ ಬುದ್ಧಿಯಲ್ಲಿ ಹೀಗೆ ನಿಶ್ಚಯಿಸಿ ಶ್ವಪಚನು ಮಲಗಿದ್ದ ಸ್ಥಳದಲ್ಲಿಯೇ ತಾನೂ ಮಲಗಿದನು. ಚಾಂಡಾಲಗ್ರಾಮದಲ್ಲಿ ಎಲ್ಲರೂ ಮಲಗಿರಲಾಗಿ, ಪ್ರಗಾಢವಾದ ಅಂಧಕಾರವು ಕವಿದಿರುವುದನ್ನು ನೋಡಿ ಭಗವಾನ್ ವಿಶ್ವಾಮಿತ್ರನು ಮೆಲ್ಲನೆ ಮೇಲೆದ್ದು ಚಾಂಡಾಲನ ಗುಡಿಸಿಲನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಆ ಮನೆಯ ಒಡೆಯನಾದ ಚಾಂಡಾಲನು ನಿದ್ದೆಮಾಡುತ್ತಿರುವವನಂತೆ ಮಲಗಿದ್ದನು. ಅವನ ಕಣ್ಣುಗಳು ಪಿಸುರಿನಿಂದ ಮುಚ್ಚಿಹೋಗಿದ್ದುವು. ಆದರೆ ಅವನು ಎಚ್ಚರವಾಗಿಯೇ ಇದ್ದನು. ಒಡೆದುಹೋದ

ಗೊಗ್ಗರಧ್ವನಿಯಿಂದ ಕೂಡಿದ್ದ, ಕಠಿನಸ್ವಭಾವದವನಾಗಿದ್ದ, ನೋಡಲು ಬಹಳ ಭಯಂಕರನಾಗಿ ಕಾಣುತ್ತಿದ್ದ ಆ ಚಾಂಡಾಲನು–ಮಾಂಸಾಪಹರಣಕ್ಕಾಗಿ ವಿಶ್ವಾಮಿತ್ರನು ಗುಡಿಸಿಲನ್ನು ಪ್ರವೇಶಿಸಿದೊಡನೆಯೇ–ಅವನನ್ನು ಪ್ರಶ್ನಿಸಿದನು:

ಕಃ ಕುತನ್ತ್ರೀಂ ಘಟಯತಿ ಸುಪ್ತೇ ಚಾಣ್ಡಾಲಪಕ್ಕಣೇ ।
ಜಾಗರ್ಮಿ ನಾತ್ರ ಸುಪ್ತೋಽಸ್ಮಿ ಹತೋಽಸೀತಿ ಚ ದಾರುಣಃ ॥೪೫॥

"ಚಾಂಡಾಲರ ಈ ಪಾಳ್ಯದಲ್ಲಿ ಎಲ್ಲರೂ ಮಲಗಿರುವಾಗ ಈ ಗುಡಿಸಿಲಿಗೆ ಬಂದು ತಂತಿಯಲ್ಲಿ ನೇತುಹಾಕಿರುವ ನಾಯಿಯ ಸೊಂಟದ ಮಾಂಸವನ್ನು ಅಪಹರಿಸುತ್ತಿರುವವರು ಯಾರು? ನಾನು ಎಚ್ಚರವಾಗಿಯೇ ಇದ್ದೇನೆ. ಮಲಗಿಲ್ಲ. ನನ್ನ ಕೈಗೆ ಸಿಕ್ಕಿರುವ ನೀನಿನ್ನು ಉಳಿಯಲಾರೆ. ಸತ್ತಂತೆಯೇ ಸರಿ."

ಕಳ್ಳತನ ಮಾಡಲು ಬಂದುದಕ್ಕಾಗಿ ವಿಶ್ವಾಮಿತ್ರನು ನಾಚಿಕೆಯಿಂದ ಕೂಡಿದ ಮುಖಭಾವದಿಂದಿದ್ದನು. ನೀಚಕರ್ಮವನ್ನು ಮಾಡುತ್ತಿರುವುದಕ್ಕಾಗಿ ಉದ್ವೇಗಪೂರ್ಣನಾಗಿಯೂ ಇದ್ದನು. ಭಯಂಕರನಾದ ಚಾಂಡಾಲನು ಹೀಗೆ ಹೇಳಲಾಗಿ ವಿಶ್ವಾಮಿತ್ರನು ಬಹಳ ಭಯಪಟ್ಟು ಅವನೊಡನೆ ಹೇಳಿದನು :

ವಿಶ್ವಾಮಿತ್ರೋಽಹಮಾಯುಷ್ಮನ್ನಾಗತೋಽಹಂ ಬುಭುಕ್ಷಿತಃ ।
ಮಾ ವಧೀರ್ಮಮ ಸದ್ಬುದ್ಧೇ ಯದಿ ಸಮ್ಯಕ್ಪ್ರಪಶ್ಯಸಿ ॥೪೭॥

"ಆಯುಷ್ಮಂತನೇ! ಸದ್ಬುದ್ಧಿಯವನೇ! ನಾನು ವಿಶ್ವಾಮಿತ್ರನು. ಹಸಿವಿನಿಂದ ಬಳಲಿ-ಬೆಂಡಾಗಿ ಇಲ್ಲಿಗೆ ಬಂದಿರುತ್ತೇನೆ. ನನ್ನ ಸ್ಥಿತಿಯನ್ನು ನೀನು ಚೆನ್ನಾಗಿ ಪರಿಶೀಲಿಸಿದ್ದೇ ಆದರೆ ನನ್ನನ್ನು ಕೊಲ್ಲಲಾರೆ. (ಮೊದಲು ನನ್ನ ಸ್ಥಿತಿಯೇನೆಂಬುದನ್ನಾದರೂ ಚೆನ್ನಾಗಿ ತಿಳಿದುಕೊ. ನನ್ನ ಸ್ಥಿತಿಯನ್ನು ತಿಳಿದುಕೊಳ್ಳುವ ಮೊದಲೇ ಕೊಂದುಬಿಡಬೇಡ.")

ಚಾಂಡಾಲನು ಪವಿತ್ರಾಂತಃಕರಣನಾದ ವಿಶ್ವಾಮಿತ್ರನ ಮಾತನ್ನು ಕೇಳಿ ಗಾಬರಿಗೊಂಡು ತನ್ನ ಹಾಸಿಗೆಯಿಂದ ಮೇಲೆದ್ದು ವಿಶ್ವಾಮಿತ್ರನ ಬಳಿಗೆ ಹೋದನು.

ಚಾಂಡಾಲನು ಆದರಪೂರ್ವಕವಾಗಿ ಎರಡು ಕೈಗಳನ್ನೂ ಜೋಡಿಸಿ ಕೊಂಡು ಕಣ್ಣೀರು ಸುರಿಸುತ್ತಾ ವಿಶ್ವಾಮಿತ್ರನೊಡನೆ ಹೇಳಿದನು :

"ಬ್ರಾಹ್ಮಣೋತ್ತಮ! ಈ ರಾತ್ರಿಯಲ್ಲಿ ನೀನು ಏನು ಮಾಡುತ್ತಿರುವೆ? ನಿನ್ನ ಅಪೇಕ್ಷೆಯಾದರೂ ಏನು?"

ವಿಶ್ವಾಮಿತ್ರನು ಚಾಂಡಾಲನನ್ನು ಸಂತೈಸುತ್ತಾ ಹೇಳಿದನು :

ಕ್ಷುಧಿತೋಽಹಂ ಗತಪ್ರಾಣೋ ಹರಿಷ್ಯಾಮಿ ಶ್ವಜಾಘನೀಮ್ ॥೫೦॥

"ಮಾತಂಗ! ನಾನು ಬಹಳವಾಗಿ ಹಸಿದಿದ್ದೇನೆ. ನನ್ನ ಪ್ರಾಣವು ಹೋಗುವುದರಲ್ಲಿದೆ. ಆದುದರಿಂದ ಈ ಗುಡಿಸಿಲಿನಲ್ಲಿರುವ ನಾಯಿಯ ಸೊಂಟದ ಮಾಂಸವನ್ನು ಕದಿಯುತ್ತಿದ್ದೇನೆ.

ಕ್ಷುಧಿತಃ ಕಲುಷಂ ಯಾತೋ ನಾಸ್ತಿ ಹ್ರೀರಶನಾರ್ಥಿನಃ ।
ಕ್ಷುಚ್ಚ ಮಾಂ ದೂಷಯತ್ಯತ್ರ ಹರಿಷ್ಯಾಮಿ ಶ್ವಜಾಘನೀಮ್ ॥೫೧॥

ಹಸಿವಿನಿಂದ ಬಳಲಿರುವ ನಾನು ಕಲುಷಿತನಾಗಿದ್ದೇನೆ. ಹಸಿವಿನಿಂದ ಬಳಲಿ ಭೋಜನಾರ್ಥವಾಗಿ ಬಂದಿರುವವನಿಗೆ ನಾಚಿಕೆ-ಹೇಸಿಕೆಗಳೊಂದೂ ಇರುವುದಿಲ್ಲ. ಕ್ಷುದ್ಬಾಧೆಯು ನನ್ನನ್ನು ಕಳಂಕಿತನನ್ನಾಗಿ ಮಾಡಿದೆ. ಆದುದರಿಂದ ಕ್ಷುದ್ಬಾಧೆಯನ್ನು ತೀರಿಸಿಕೊಂಡು ಪ್ರಾಣಗಳನ್ನುಳಿಸಿಕೊಳ್ಳಲು ಈ ನಾಯಿಯ ಸೊಂಟದ ಮಾಂಸವನ್ನು ಅಪಹರಿಸಿಕೊಂಡು ಹೋಗುತ್ತೇನೆ.

ಅವಸೀದನ್ತಿ ಮೇ ಪ್ರಾಣಾಃ ಶ್ರುತಿರ್ಮೇ ನಶ್ಯತಿ ಕ್ಷುಧಾ ।
ದುರ್ಬಲೋ ನಷ್ಟಸಂಜ್ಞಶ್ಚ ಭಕ್ಷ್ಯಾಭಕ್ಷ್ಯವಿವರ್ಜಿತಃ ॥೫೨॥

ನನ್ನ ಪ್ರಾಣಗಳೀಗ ಹೋಗಿಬಿಡುವುದರಲ್ಲಿವೆ. ಹಸಿವಿನ ಬಾಧೆ ಯಿಂದಾಗಿ ನನ್ನ ಶ್ರವಣಶಕ್ತಿಯು ಕುಂಠಿತವಾಗುತ್ತಿದೆ. ನಾನು ಅತ್ಯಂತ ದುರ್ಬಲನಾಗಿದ್ದೇನೆ. ನನ್ನ ಸಂಜ್ಞೆಯು ಹಾಳಾಗುತ್ತಿದೆ. ಈ ಕಾರಣಗಳಿಂದ ನಾನೀಗ ಭಕ್ಷ್ಯ ಮತ್ತು ಅಭಕ್ಷ್ಯಗಳ ವಿವೇಚನೆಯನ್ನೇ ಪರಿತ್ಯಜಿಸಿದ್ದೇನೆ. ತಿನ್ನಲು ಯಾವುದಾದರೂ ಸಿಕ್ಕಿದರೆ ಸಾಕೆಂಬ ಆತುರದಲ್ಲಿದ್ದೇನೆ.

ಸೋಽಧರ್ಮಂ ಬುಧ್ಯಮಾನೋಽಪಿ ಹರಿಷ್ಯಾಮಿ ಶ್ವಜಾಘನೀಮ್ ।
ಅಟನ್ಭೈಕ್ಷ್ಯಂ ನ ವಿನ್ದಾಮಿ ಯದಾ ಯುಷ್ಮಾಕಮಾಲಯೇ ।
ತದಾ ಬುದ್ಧಿಃ ಕೃತಾ ಪಾಪೇ ಹರಿಷ್ಯಾಮಿ ಶ್ವಜಾಘನೀಮ್ ॥೫೩॥

'ನಾಯಿಯ ಮಾಂಸವನ್ನು ತಿನ್ನುವುದು ಅಧರ್ಮ. ಅದರಲ್ಲಿಯೂ ಅದನ್ನು ಕದ್ದು ತಿನ್ನುವುದಂತೂ ಇನ್ನೂ ಅತಿಯಾದ ಅಧರ್ಮ'–ಎಂದು ತಿಳಿದಿದ್ದರೂ ನಾಯಿಯ ಸೊಂಟದ ಮಾಂಸವನ್ನು ಅಪಹರಿಸಲು ನಿಶ್ಚಯಿಸಿಬಿಟ್ಟಿದ್ದೇನೆ. ನಾನು ಭಿಕ್ಷೆಗಾಗಿ ಅಲೆದಾಡಿದರೂ ನಿಮ್ಮ ಗುಡಿಸಲುಗಳಲ್ಲಿ ನನಗೆ ಯಾವ ಭಿಕ್ಷೆಯೂ ಲಭಿಸಲಿಲ್ಲ. (ಯಾವ ಗುಡಿಸಿಲಿನಲ್ಲಿಯೂ ನನಗೆ ಭಿಕ್ಷೆಯನ್ನು ಹಾಕಲಿಲ್ಲ.) ಈ ಕಾರಣದಿಂದ ನನ್ನ ಬುದ್ಧಿಯು ಪಾಪ ಕಾರ್ಯದಲ್ಲಿ ತೊಡಗಿತು. ನಾನೀಗ ನನ್ನ ಹಸಿವನ್ನು ನೀಗಿಸಿಕೊಳ್ಳುವುದಕ್ಕಾಗಿ ನಾಯಿಯ ಮಾಂಸವನ್ನು ಅಪಹರಿಸುತ್ತಿದ್ದೇನೆ.

ಅಗ್ನಿರ್ಮುಖಂ ಪುರೋಧಾಶ್ಚ ದೇವಾನಾಂ ಶುಚಿಷಾಡ್ವಿಭುಃ ।
ಯಥಾವತ್ಸರ್ವಭುಗ್ಬ್ರಹ್ಮಾ ತಥಾ ಮಾಂ ವಿದ್ಧಿ ಧರ್ಮತಃ ॥೫೪॥

ಅಗ್ನಿದೇವನು ದೇವತೆಗಳ ಮುಖಸ್ವರೂಪನಾಗಿದ್ದಾನೆ. ಪುರೋಹಿತನಾಗಿದ್ದಾನೆ. ಪವಿತ್ರದ್ರವ್ಯವನ್ನೇ ಗ್ರಹಣಮಾಡುತ್ತಾನೆ. ಮಹಾಪ್ರಭಾವಶಾಲಿಯಾಗಿದ್ದಾನೆ. ಅಂತಹ ಅಗ್ನಿದೇವನೂ ಸಮಯಾನುಸಾರವಾಗಿ ಯಾವ ರೀತಿಯಲ್ಲಿ ಸರ್ವಭಕ್ಷಕನಾಗುವನೋ (ಶುಚಿ-ಅಶುಚಿಗಳೆಂಬ ವಿವೇಚನೆಯೇ ಇಲ್ಲದೆ, ಸರ್ವವನ್ನೂ ಭಕ್ಷಿಸುವನೋ) ಹಾಗೆಯೇ ನಾನು ಬ್ರಾಹ್ಮಣನಾಗಿದ್ದರೂ ಈ ಸಮಯದಲ್ಲಿ ಸರ್ವಭಕ್ಷಕನಾಗಿದ್ದೇನೆ. ಧರ್ಮತಃ ನನ್ನನ್ನು ನೀನು ಬ್ರಾಹ್ಮಣನೆಂದು ತಿಳಿ."

ವಿಶ್ವಾಮಿತ್ರನ ಆ ಮಾತನ್ನು ಕೇಳಿದನಂತರ ಚಾಂಡಾಲನು ಹೇಳುತ್ತಾನೆ:

"ಮಹರ್ಷಿಯೇ! ನನ್ನ ಮಾತನ್ನು ಕೇಳು. ನನ್ನ ಮಾತನ್ನು ಕೇಳಿದನಂತರ ಬ್ರಾಹ್ಮಣಧರ್ಮವು ನಷ್ಟವಾಗದಂತೆ ನಡೆದುಕೋ. ವಿಪ್ರರ್ಷಿಯೇ! ನಾನು ಹೇಳಲಿರುವ ಧರ್ಮವನ್ನು ಕೇಳು :

"ನರಿಗಿಂತಲೂ ನಾಯಿಯು ನಿಕೃಷ್ಟವಾದ ಪ್ರಾಣಿಯೆಂದು ವಿದ್ವಾಂಸ

ರಾದವರು ಹೇಳುತ್ತಾರೆ. ಅದರಲ್ಲಿಯೂ ನೀನು ಭಕ್ಷಿಸಲು ಉದ್ದೇಶಿಸಿರುವ ನಾಯಿಯ ಜಘನಪ್ರದೇಶದ ಮಾಂಸವಂತೂ ಅತ್ಯಂತಾಧಮಸ್ಥಾನೀಯವಾದುದು.

ನೇದಂ ಸಮ್ಯಗ್ವ್ಯವಸಿತಂ ಮಹರ್ಷೇ ಧರ್ಮಗರ್ಹಿತಮ್ ।
ಚಾಣ್ಡಾಲಸ್ವಸ್ಯ ಹರಣಮಭಕ್ಷ್ಯಸ್ಯ ವಿಶೇಷತಃ ॥೫೮॥

ಮಹರ್ಷಿಯೇ! ನೀನು ನಾಯಿಯ ಕಟಿಪ್ರದೇಶದ ಮಾಂಸವನ್ನು ತಿನ್ನಲು ಉದ್ದೇಶಿಸಿರುವುದು ಸರಿಯಲ್ಲ. ಚಾಂಡಾಲನ ಸ್ವತ್ತನ್ನು ಅದರಲ್ಲಿಯೂ ವಿಶೇಷವಾಗಿ ಅಭಕ್ಷ್ಯಪದಾರ್ಥವನ್ನು ಕದಿಯುವುದು ಧರ್ಮದ ದೃಷ್ಟಿಯಿಂದ ಅತ್ಯಂತನಿಂದ್ಯವಾಗಿದೆ.

ಸಾಧ್ವನ್ಯಮನುಪಶ್ಯ ತ್ವಮುಪಾಯಂ ಪ್ರಾಣಧಾರಣೇ ।
ನ ಮಾಂಸಲೋಭಾತ್ತಪಸೋ ನಾಶಸ್ತೇ ಸ್ಯಾನ್ಮಹಾಮುನೇ ॥೫೯॥

ಮಹಾಮುನಿಯೇ! ಪ್ರಾಣಧಾರಣೆಯ ಸಲುವಾಗಿ ಬೇರಾವುದಾದರೂ ಒಳ್ಳೆಯ ಉಪಾಯವನ್ನು ಯೋಚಿಸು. ಮಾಂಸದ ಲೋಭದಿಂದಾಗಿ (ಮಾಂಸವನ್ನು ತಿನ್ನಬೇಕೆಂಬುವ ಆಶೆಯಿಂದಾಗಿ) ನಿನ್ನ ತಪಸ್ಸಿನ ನಾಶವಾಗದಿರಲಿ.

ಜಾನತಾ ವಿಹಿತಂ ಧರ್ಮಂ ನ ಕಾರ್ಯೋ ಧರ್ಮಸಂಕರಃ ।
ಮಾ ಸ್ಮ ಧರ್ಮಂ ಪರಿತ್ಯಾಕ್ಷೀಸ್ತ್ವಂ ಹಿ ಧರ್ಮಭೃತಾಂ ವರಃ ॥೬೦॥

ನೀನು ಶಾಸ್ತ್ರವಿಹಿತವಾದ ಧರ್ಮವನ್ನು ತಿಳಿದವನಾಗಿರುವೆ. ಆದುದರಿಂದ ನೀನು ಇಂತಹ ಧರ್ಮಸಂಕಟದ ಕಾರ್ಯವನ್ನು ಮಾಡಬಾರದು. ಯಾವುದೇ ಕಾರಣದಿಂದಲೂ ಧರ್ಮವನ್ನು ಪರಿತ್ಯಾಗಮಾಡಬೇಡ. ನೀನು ಧರ್ಮಾತ್ಮರಲ್ಲಿ ಶ್ರೇಷ್ಠನಾದವನೆಂದು ಪರಿಗಣಿಸಲ್ಪಟ್ಟಿರುವೆಯಲ್ಲವೇ?”

ಯುಧಿಷ್ಠಿರ! ಚಾಂಡಾಲನು ವಿಶ್ವಾಮಿತ್ರನಿಗೆ ಹೀಗೆ ಹೇಳಿದನಂತರ ಹಸಿವಿನಿಂದ ಬಳಲಿದ್ದ ಮಹಾಮುನಿಯಾದ ವಿಶ್ವಾಮಿತ್ರನು ಚಾಂಡಾಲನನ್ನು ಕುರಿತು ಹೇಳಿದನು :

ನಿರಾಹಾರಸ್ಯ ಸುಮಹಾನ್ಮಮ ಕಾಲೋಽಭಿಧಾವತಃ ।
ನ ವಿದ್ಯತೇಽಪ್ಯುಪಾಯಶ್ಚ ಕಶ್ಚಿನ್ಮೇ ಪ್ರಾಣಧಾರಣೇ ॥೬೧॥

“ನನಗೆ ಆಹಾರವು ಎಲ್ಲಿಯೂ ಸಿಕ್ಕದೇ ಇದ್ದುದರಿಂದಲೇ ನಾನು ಹೀಗೆ ಅಲೆದಾಡುತ್ತಿದ್ದೇನೆ. ಆಹಾರವನ್ನು ಹುಡುಕುವ ಪ್ರಯತ್ನದಲ್ಲಿಯೇ ಬಹಳ ಕಾಲವು ಕಳೆದುಹೋಗಿದೆ. ಯಾವುದಾದರೂ ಆಹಾರವನ್ನು ಪಡೆಯುವುದರ ಹೊರತಾಗಿ ನನ್ನ ಪ್ರಾಣಧಾರಣೆಗೆ ಬೇರೆಯ ಉಪಾಯವೇ ಇಲ್ಲವಾಗಿದೆ.

ಯೇನ ಯೇನ ವಿಶೇಷೇಣ ಕರ್ಮಣಾ ಯೇನ ಕೇನಚಿತ್ ।
ಅಭ್ಯುಜ್ಜೀವೇತ್ಸಾದ್ಯಮಾನಃ ಸಮರ್ಥೋ ಧರ್ಮಮಾಚರೇತ್ ॥೬೩॥

ಹಸಿವಿನಿಂದ ಸಾಯುತ್ತಿರುವವನು ಯಾವುದಾದರೂ ವಿಶೇಷವಾದ ಉಪಾಯದಿಂದ ಅಥವಾ ಯಾವುದಾದರೂ ಕಾರ್ಯದಿಂದ ತನ್ನ ಪ್ರಾಣವನ್ನು ರಕ್ಷಿಸಿಕೊಳ್ಳಬೇಕು. ಪುನಃ ಸಮರ್ಥನಾದನಂತರ ಧರ್ಮವನ್ನು ಆಚರಿಸಬೇಕು.

ಐನ್ದ್ರೋ ಧರ್ಮಃ ಕ್ಷತ್ರಿಯಾಣಾಂ ಬ್ರಾಹ್ಮಣಾನಾಮಥಾಗ್ನಿಕಃ ।
ಬ್ರಹ್ಮವಹ್ನಿರ್ಮಮ ಬಲಂ ಭಕ್ಷ್ಯಾಮಿ ಶಮಯನ್ಕ್ಷುಧಾಮ್ ॥೬೪॥

ಕ್ಷತ್ರಿಯರಿಗೆ ಇಂದ್ರದೇವತಾಕವಾದ ಪ್ರಜಾಪಾಲನ ಧರ್ಮವು ಉಕ್ತವಾಗಿದೆ. ಬ್ರಾಹ್ಮಣರಿಗೆ ಅಗ್ನಿದೇವತಾಕವಾದ ಸರ್ವಭಕ್ಷ್ಯತ್ವವು ಉಕ್ತ ವಾಗಿದೆ. ನನ್ನ ಬಲವು ವೇದರೂಪವಾದ ಅಗ್ನಿಯೇ ಆಗಿದೆ. ಕ್ಷುದ್ಬಾಧೆಯನ್ನು ಪರಿಹರಿಸಿಕೊಳ್ಳುವ ಸಲುವಾಗಿ ನಾನು ಈ ಸಮಯದಲ್ಲಿ ಯಾವ ಆಹಾರವನ್ನಾದರೂ ಭಕ್ಷಿಸುತ್ತೇನೆ.

ಯಥಾ ಯಥೈವ ಜೀವೇದ್ಧಿ ತತ್ಕರ್ತವ್ಯಮಹೇಲಯಾ ।
ಜೀವಿತಂ ಮರಣಾಚ್ಛ್ರೇಯೋ ಜೀವನ್ಧರ್ಮಮವಾಪ್ನುಯಾತ್ ॥೬೫॥

ಯಾವ ರೀತಿಯಿಂದಾದರೂ ಜೀವಿಸಿರಲೇಬೇಕು. ಬದುಕುವ ಸಲುವಾಗಿ ನಾಚಿಕೆ-ತಿರಸ್ಕಾರಗಳನ್ನೂ ತ್ಯಜಿಸಿ ಕಾರ್ಯಮಾಡುವುದು ಮನುಷ್ಯನ ಕರ್ತವ್ಯವಾಗಿದೆ. ಹೊಟ್ಟೆಗಿಲ್ಲದೇ ಮರಣಹೊಂದುವುದಕ್ಕಿಂತಲೂ ಅಭಕ್ಷ್ಯವನ್ನಾದರೂ ತಿಂದು ಜೀವಿಸಿರುವುದೇ ಶ್ರೇಯಸ್ಕರ. ಜೀವಿಸಿದ್ದಲ್ಲಿ (ಅಭಕ್ಷ್ಯ ಭಕ್ಷಣದ ದೋಷನಿವಾರಣೆಯನ್ನು ಮಾಡಿಕೊಂಡು) ಪುನಃ ಧರ್ಮಕಾರ್ಯಗಳನ್ನು ಮಾಡಲು ಶಕ್ಯವಿದೆ.

ಸೋಽಹಂ ಜೀವಿತಮಾಕಾಂಕ್ಷನ್ನಭಕ್ಷ್ಯಸ್ಯಾಪಿ ಭಕ್ಷಣಮ್ ।
ವ್ಯವಸ್ಯೇ ಬುದ್ಧಿಪೂರ್ವಂ ಹಿ ತದ್ಭವಾನನುಮನ್ಯತಾಮ್ ॥೬೬॥

ನಾನು ಜೀವಿಸಿರಬೇಕೆಂದು ಆಕಾಂಕ್ಷಿಸುತ್ತಾ ಅಭಕ್ಷ್ಯವನ್ನಾದರೂ ಭಕ್ಷಿಸಲು ಬುದ್ಧಿಪೂರ್ವಕವಾಗಿಯೇ ನಿಶ್ಚಯಿಸಿದ್ದೇನೆ. ಈ ನನ್ನ ನಿಶ್ಚಯವನ್ನು ನೀನು ಅನುಮೋದಿಸು. ಇಲ್ಲಿರುವ ನಾಯಿಯ ಮಾಂಸವನ್ನು ತಿನ್ನಲು ಸಮ್ಮತಿಸು.

ಬಲವನ್ತಂ ಕರಿಷ್ಯಾಮಿ ಪ್ರಣೋತ್ಸ್ಯಾಮ್ಯಶುಭಾನಿ ತು ।
ತಪೋಭಿರ್ವಿದ್ಯಯಾ ಚೈವ ಜ್ಯೋತೀಂಷೀವ ಮಹತ್ತಮಃ ॥೬೭॥

ಸೂರ್ಯನೇ ಮೊದಲಾದ ಜ್ಯೋತಿರ್ಮಯಗ್ರಹಗಳು ಮಹಾಂಧಕಾರವನ್ನು ನಾಶಗೊಳಿಸುವಂತೆ–ನಾನು ನನ್ನ ವಿದ್ಯೆಯ ಮೂಲಕವಾಗಿಯೂ ತಪಸ್ಸಿನ ಮೂಲಕವಾಗಿಯೂ ನನ್ನನ್ನು ಬಲಪಡಿಸಿಕೊಳ್ಳುತ್ತೇನೆ. ಈಗ ಮಾಡುವ ಸಮಸ್ತವಾದ ಅಶುಭಕಾರ್ಯಗಳನ್ನೂ ನಿರಸನಗೊಳಿಸುತ್ತೇನೆ.”

ಚಾಂಡಾಲನು ಹೇಳುತ್ತಾನೆ :

ನೈತತ್ಖಾದನ್ಪ್ರಾಪ್ಸ್ಯತೇ ದೀರ್ಘಮಾಯು-
ರ್ನೈವ ಪ್ರಾಣಾನ್ನಾಮೃತಸ್ಯೇವ ತೃಪ್ತಿಃ ।
ಭಿಕ್ಷಾಮನ್ಯಾಂ ಭಿಕ್ಷ ಮಾ ತೇ ಮನೋಽಸ್ತು
ಶ್ವಭಕ್ಷಣೇ ಶ್ವಾ ಹ್ಯಭಕ್ಷ್ಯೋ ದ್ವಿಜಾನಾಮ್ ॥೬೮॥

“ಋಷಿವರ್ಯನೇ! ಈ ಸಣ್ಣ ಮಾಂಸದ ತುಂಡೊಂದನ್ನು ತಿನ್ನುವುದರಿಂದ ನಿನಗೆ ದೀರ್ಘಾಯುಷ್ಯವೇನೂ ಲಭಿಸುವುದಿಲ್ಲ. ಇಷ್ಟನ್ನು ತಿನ್ನುವುದರಿಂದಲೇ ನಿನ್ನ ಪ್ರಾಣಗಳು ಉಳಿದಾವೆಂಬ ಭರವಸೆಯೂ ಇಲ್ಲ. ಈ ಮಾಂಸದ ತುಂಡನ್ನು ತಿಂದಮಾತ್ರದಿಂದಲೇ ಅಮೃತವನ್ನು ಕುಡಿದಂತೆ ತೃಪ್ತಿಯೂ ಉಂಟಾಗುವುದಿಲ್ಲ. ಆದುದರಿಂದ ನಾಯಿಯ ಮಾಂಸವನ್ನು ತಿನ್ನಲು ನಿನ್ನ ಮನಸ್ಸು ಒಪ್ಪದಿರಲಿ. ಬೇರೆ ಎಲ್ಲಾದರೂ ಭಿಕ್ಷೆಯನ್ನು ಬೇಡಿ ಆಹಾರವನ್ನು ಸಂಪಾದಿಸು. ನಾಯಿಯ ಮಾಂಸವು ಬ್ರಾಹ್ಮಣರಿಗೆ ಸರ್ವಥಾ ಅಭಕ್ಷ್ಯವಾಗಿದೆ.”

ವಿಶ್ವಾಮಿತ್ರನು ಹೇಳುತ್ತಾನೆ :

ನ ದುರ್ಭಿಕ್ಷೇ ಸುಲಭಂ ಮಾಂಸಮನ್ಯ-
ಚ್ಛ್ವಪಾಕ ಮನ್ಯೇ ನ ಚ ಮೇಽಸ್ತಿ ವಿತ್ತಮ್ ।
ಕ್ಷುಧಾರ್ತಶ್ಚಾಹಮಗತಿರ್ನಿರಾಶಃ
ಶ್ವಮಾಂಸೇ ಚಾಸ್ಮಿನ್ಷಡ್ರಸಾನ್ಸಾಧು ಮನ್ಯೇ ॥೬೯॥

"ಶ್ವಪಾಕನೇ! ಎಲ್ಲೆಲ್ಲಿಯೂ ದುರ್ಭಿಕ್ಷವೇ ವ್ಯಾಪ್ತವಾಗಿರುವ ಈ ದೇಶದಲ್ಲಿ ಇರುವುದನ್ನು ಬಿಟ್ಟು ಬೇರೆಯ ಮಾಂಸವನ್ನು ದೊರಕಿಸಿಕೊಳ್ಳುವುದು ಅಷ್ಟು ಸುಲಭವಲ್ಲವೆಂಬುದು ನನ್ನ ದೃಢನಿಶ್ಚಯವಾಗಿದೆ. (ಒಂದು ತುತ್ತಿನ ಆಹಾರಕ್ಕಾಗಿ ನಾನು ದೇಶವನ್ನೆಲ್ಲಾ ಅಲೆದೇ ಇಲ್ಲಿಗೆ ಬಂದಿರುತ್ತೇನೆ.) ಭೋಜ್ಯಪದಾರ್ಥಗಳನ್ನು ಕೊಳ್ಳೋಣವೆಂದರೆ ನನ್ನಲ್ಲಿ ಹಣವೂ ಇಲ್ಲವಾಗಿದೆ. ಹಸಿವಿನಿಂದ ಬಳಲಿರುವ ನಾನು ನಿರಾಶ್ರಯನೂ ನಿರಾಶನೂ ಆಗಿರುತ್ತೇನೆ. ನಾಯಿಯ ಈ ಮಾಂಸದಲ್ಲಿಯೇ ನಾನು ಷಡ್ರಸೋಪೇತವಾದ ಭೋಜನದ ಸವಿಯನ್ನು ಅನುಭವಿಸುವೆನೆಂಬುದನ್ನು ಚೆನ್ನಾಗಿ ತಿಳಿದಿದ್ದೇನೆ."

ಅದಕ್ಕೆ ಚಾಂಡಾಲನು ಹೇಳುತ್ತಾನೆ :

ಪಞ್ಚ ಪಞ್ಚನಖಾ ಭಕ್ಷ್ಯಾ ಬ್ರಹ್ಮಕ್ಷತ್ರಸ್ಯ ವೈ ವಿಶಃ ।
ಯಥಾ ಶಾಸ್ತ್ರಂ ಪ್ರಮಾಣಂ ತೇ ಮಾ ಭಕ್ಷ್ಯೇ ಮಾನಸಂ ಕೃಥಾಃ ॥

"ಭಗವನ್! ಆಪತ್ಕಾಲದಲ್ಲಿ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಐದು ಉಗುರುಗಳಿಂದ ಕೂಡಿರುವ ಐದು ಜಾತಿಯ ಪ್ರಾಣಿಗಳನ್ನು ತಿನ್ನಬಹುದೆಂದು ಧರ್ಮಶಾಸ್ತ್ರವನ್ನು ತಿಳಿದವರು ಹೇಳಿದ್ದಾರೆ.* ಆ ಶಾಸ್ತ್ರವೇ ನಿನಗೂ ಪ್ರಮಾಣಭೂತವಾಗಿರುವಾಗ ಬ್ರಾಹ್ಮಣರಿಗೆ ಅಭಕ್ಷ್ಯವೆನಿಸಿರುವ ಈ ನಾಯಿಯ ಮಾಂಸವನ್ನು ತಿನ್ನಲು ಮನಸ್ಸುಮಾಡಬೇಡ."

---

* ಮನುಸ್ಮೃತಿಯಲ್ಲಿ ಪಂಚನಖಪ್ರಾಣಿಗಳನ್ನು ಹೇಳಿದ್ದಾರೆ :
ಶ್ವಾವಿಧಂ ಶಲ್ಯಕಂ ಗೋಧಾಂ ಖಡ್ಗಕೂರ್ಮಶಶಾಂಸ್ತಥಾ ।
ಭಕ್ಷ್ಯಾನ್ಪಞ್ಚನಖೇಷ್ವಾಹುರನುಷ್ಟ್ರಾಂಶ್ಚೈಕತೋ ದತಃ ॥೫-೧೮॥

ನಾಯಿಯನ್ನು ಸಂಹರಿಸುವ ಮುಳ್ಳುಹಂದಿ, ನೀರುಡ, ಖಡ್ಗಮೃಗ, ಆಮೆ,

ಕ್ಷುದ್ಬಾಧೆಯಿಂದ ಅತ್ಯಂತಪೀಡಿತನಾಗಿದ್ದ ಮಹರ್ಷಿಯು ಹೇಳುತ್ತಾನೆ :

ಅಗಸ್ತ್ಯೇನಾಸುರೋ ಜಗ್ಧೋ ವಾತಾಪಿಃ ಕ್ಷುಧಿತೇನ ವೈ ।
ಅಹಮಾಪದ್ಗತಃ ಕ್ಷುತ್ತೋ ಭಕ್ಷಯಿಷ್ಯೇ ಶ್ವಜಾಘನೀಮ್ ॥೭೧॥

"ಹಸಿವಿನಿಂದ ಕಂಗೆಟ್ಟಿದ್ದ ಅಗಸ್ತ್ಯನು ವಾತಾಪಿಯೆಂಬ ರಾಕ್ಷಸನನ್ನು ಅಗಿದು ನುಂಗಿಹಾಕಿದನು. ಹಾಗೆಯೇ ಹಸಿವಿನಿಂದ ಪ್ರಾಣಾಪತ್ತಿನಲ್ಲಿರುವ ನಾನು ನಾಯಿಯ ಸೊಂಟದ ಮಾಂಸವನ್ನು ತಿನ್ನುತ್ತೇನೆ."

ವಿಶ್ವಾಮಿತ್ರನನ್ನು ನಿವಾರಿಸುತ್ತಾ ಚಾಂಡಾಲನು ಹೇಳುತ್ತಾನೆ :

ಭಿಕ್ಷಾಮನ್ಯಾಮಾಹರೇತಿ ನ ಚ ಕರ್ತುಮಿಹಾರ್ಹಸಿ ।
ನ ನೂನಂ ಕಾರ್ಯಮೇತದ್ವೈ ಹರ ಕಾಮಂ ಶ್ವಜಾಘನೀಮ್ ॥೭೨॥

"ಮಹರ್ಷಿಯೇ! ನೀನು ಬೇರೇನಾದರೂ ಭಿಕ್ಷೆಯನ್ನು ತೆಗೆದು ಕೊಂಡುಹೋಗು. ಆದರೆ ಇದನ್ನೇ ಕದ್ದುಕೊಂಡುಹೋಗುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ. ನಿನ್ನ ಇಚ್ಛೆಯಂತೆ ನೀನು ಈ ನಾಯಿಯ ಸೊಂಟದ ಮಾಂಸವನ್ನೇ ತೆಗೆದುಕೊಂಡುಹೋಗಬಹುದು. ನಾನದಕ್ಕೆ ಪ್ರತಿಬಂಧಕವನ್ನುಂಟುಮಾಡುವುದಿಲ್ಲ. ಆದರೆ ನಿಶ್ಚಯವಾಗಿ ಹೇಳುತ್ತೇನೆ. ಇದು ನಿನಗೆ ಉಚಿತವಾದ ಕಾರ್ಯವಲ್ಲ. ನೀನು ನಾಯಿಯ ಮಾಂಸವನ್ನು ಕದಿಯಲೂ ಬಾರದು ; ತಿನ್ನಲೂಬಾರದು."

ಮಹರ್ಷಿಯು ಹೇಳುತ್ತಾನೆ :

ಶಿಷ್ಟಾ ವೈ ಕಾರಣಂ ಧರ್ಮೇ ತದ್ವೃತ್ತಮನುವರ್ತಯೇ ।
ಪರಾಂ ಮೇಧ್ಯಾಶನಾಮೇನಾಂ ಭಕ್ಷ್ಯಾಂ ಮನ್ಯೇ ಶ್ವಜಾಘನೀಮ್ ॥

"ಶಿಷ್ಟರಾದವರು ಧರ್ಮದ ಪ್ರವೃತ್ತಿಗೆ ಕಾರಣರಾಗಿರುತ್ತಾರೆ. ನಾನು ಧರ್ಮನಿಷ್ಠರಾದವರ ಆಚರಣೆಗಳನ್ನೇ ಅನುಸರಿಸುತ್ತೇನೆ. ಆದುದರಿಂದ ನಾನು ನಾಯಿಯ ಈ ಸೊಂಟದ ಮಾಂಸವನ್ನೇ ಪವಿತ್ರವಾದ ಭೋಜನಕ್ಕೆ ಸಮಾನವಾಗಿರುವುದೆಂದೂ ಭಕ್ಷಿಸುವುದಕ್ಕೆ ಅರ್ಹವಾಗಿರುವುದೆಂದೂ ಭಾವಿಸುತ್ತೇನೆ."

ಮೊಲ–ಇವುಗಳೇ ಪಂಚನಖ ಪ್ರಾಣಿಗಳು. ಒಂಟೆಯನ್ನು ಬಿಟ್ಟು ಉಳಿದ ಒಂದೇ ಕಡೆಯಲ್ಲಿ ಹಲ್ಲಿರುವ ಪ್ರಾಣಿಗಳು–ಇವುಗಳನ್ನು ಆಪತ್ಕಾಲದಲ್ಲಿ ಭಕ್ಷಿಸಬಹುದು.

ಪುನಃ ಚಾಂಡಾಲನು ಯುಕ್ತಿಯುಕ್ತವಾದ ಮಾತಿನಿಂದ ಋಷಿಯನ್ನು ತಡೆಯುತ್ತಾನೆ :

ಅಸತಾ ಯತ್ಸಮಾಚೀರ್ಣಂ ನ ಚ ಧರ್ಮಃ ಸನಾತನಃ ।
ನಾಕಾರ್ಯಮಿಹ ಕಾರ್ಯಂ ವೈ ಮಾ ಛಲೇನಾಶುಭಂ ಕೃಥಾಃ ॥೭೪॥

"ಅಸತ್ಪುರುಷರು ಯಾವುದಾದರೂ ಅನುಚಿತವಾದ ಕಾರ್ಯವನ್ನು ಮಾಡಿದರೆ ಅದು ಸನಾತನಧರ್ಮವೆನಿಸಿಕೊಳ್ಳುವುದಿಲ್ಲ. ಆದುದರಿಂದ ಮಾಡಲು ಅಯೋಗ್ಯವಾದ ಕಾರ್ಯವನ್ನು ಇಲ್ಲಿ ನೀನು ಮಾಡಬೇಡ. ವ್ಯಾಜಾಂತರದಿಂದ ಪಾಪಕಾರ್ಯವನ್ನು ಮಾಡಬೇಡ."

ಮಹರ್ಷಿಯು ತನ್ನ ನಿರ್ಧಾರವನ್ನೇ ಪುನರುಚ್ಚರಿಸುತ್ತಾ ಹೇಳುತ್ತಾನೆ :

ನ ಪಾತಕಂ ನಾವಮತಮೃಷಿಃ ಸನ್ಕರ್ತುಮರ್ಹತಿ ।
ಸಮೌ ಚ ಶ್ವಮೃಗೌ ಮನ್ಯೇ ತಸ್ಮಾದ್ಭೋಕ್ಷ್ಯೇ ಶ್ವಜಾಘನೀಮ್ ॥೭೫॥

"ಪಾಪಭೂಯಿಷ್ಠವಾದ ಮತ್ತು ನಿಂದನೀಯವಾದ ಕಾರ್ಯವನ್ನು ಯಾವ ಋಷಿಯೂ ಮಾಡಲಾರನು. ಅಂತೆಯೇ ನಾನಾದರೂ ಯಾವ ಪಾಪಕಾರ್ಯವನ್ನಾಗಲೀ ಮಾಡುತ್ತಿಲ್ಲ. ಆಪತ್ಕಾಲದಲ್ಲಿ ಅನುಸರಿಸಬೇಕಾದ ಮಾರ್ಗವನ್ನೇ ಅನುಸರಿಸುತ್ತಿದ್ದೇನೆ. ನನ್ನ ದೃಷ್ಟಿಯಲ್ಲಿ ಜಿಂಕೆಯೂ ಮತ್ತು ನಾಯಿಯೂ ಸಮಾನವೇ ಆಗಿರುತ್ತದೆ. ಆದುದರಿಂದ ನಾನು ಈ ನಾಯಿಯ ಸೊಂಟದ ಮಾಂಸವನ್ನು ಭಕ್ಷಿಸುತ್ತೇನೆ."

ಚಾಂಡಾಲನು ಹೇಳುತ್ತಾನೆ :

ಯದ್ಬ್ರಾಹ್ಮಣಾರ್ಥೇ ಕೃತಮರ್ಥಿತೇನ
ತೇನರ್ಷಿಣಾ ತದವಸ್ಥಾಧಿಕಾರೇ ।
ಸ ವೈ ಧರ್ಮೋ ಯತ್ರ ನ ಪಾಪಮಸ್ತಿ
ಸರ್ವೈರುಪಾಯೈರ್ಗುರವೋ ಹಿ ರಕ್ಷ್ಯಾಃ ॥೭೬॥

"ವಿಶ್ವಾಮಿತ್ರ! (ನೀನು ಮಾಡುತ್ತಿರುವ ಕಾರ್ಯಕ್ಕೆ ಅಗಸ್ತ್ಯರು ಮಾಡಿದ ಕಾರ್ಯದ ಹೋಲಿಕೆಯನ್ನು ಕೊಟ್ಟುದು ಸರಿಯಲ್ಲ.) ಇಲ್ವಲ-ವಾತಾಪಿಗಳಿಬ್ಬರೂ ಸೇರಿಕೊಂಡು ಒಳಸಂಚುಮಾಡಿ ಬ್ರಾಹ್ಮಣರನ್ನೂ ಋಷಿಗಳನ್ನೂ ಭಕ್ಷಿಸುತ್ತಿದ್ದರು. ಆ ರಾಕ್ಷಸರಿಂದ ರಕ್ಷಣೆಯನ್ನು ಪಡೆಯುವ

ಸಲುವಾಗಿ ಮತ್ತು ಬ್ರಾಹ್ಮಣರ ಉದ್ಧಾರಕ್ಕಾಗಿ ಅಗಸ್ತ್ಯರನ್ನು ಪ್ರಾರ್ಥಿಸಲಾಯಿತು. ಆ ಸಮಯದಲ್ಲವರು ಭೋಜನರೂಪದಲ್ಲಿದ್ದ ವಾತಾಪಿಯನ್ನು ಭಕ್ಷಿಸಿ ಜೀರ್ಣಮಾಡಿಕೊಂಡರು. ಹೀಗೆ ಮಾಡಿದುದರಿಂದ ಬ್ರಾಹ್ಮಣರಿಗೆ ಆಗುತ್ತಿದ್ದ ಉಪಟಳವು ತಪ್ಪಿತು. ಹಾಗೆ ಮಾಡದಿದ್ದರೆ ಇಲ್ವಲ-ವಾತಾಪಿಗಳು ತಮ್ಮ ಒಳಸಂಚಿನಿಂದ ಬ್ರಾಹ್ಮಣರೇ ಇಲ್ಲದಂತೆ ಮಾಡಿಬಿಡುತ್ತಿದ್ದರು. ಆ ಕಾರಣದಿಂದ ಅಗಸ್ತ್ಯರು ಭೋಜನರೂಪದಲ್ಲಿದ್ದ ವಾತಾಪಿಯನ್ನು ಭಕ್ಷಿಸಿದ್ದು ಧರ್ಮಕಾರ್ಯವೇ ಆಯಿತು. ಅದರಲ್ಲಿ ಪಾಪದ ಲೇಶವೂ ಇಲ್ಲ. ಎಲ್ಲಿ ಪಾಪವಿಲ್ಲವೋ, ಯಾವುದು ಪಾಪವಲ್ಲವೋ–ಅದೇ ಧರ್ಮವೆನಿಸಿಕೊಳ್ಳುತ್ತದೆ. ಸರ್ವೋಪಾಯಗಳಿಂದಲೂ ಗುರುಜನರನ್ನು ರಕ್ಷಿಸಲೇಬೇಕು. (ನೀನು ಮಾಡುತ್ತಿರುವ ಕಾರ್ಯದಿಂದ ಯಾರಿಗಾದರೂ ಉಪಕಾರವಾಗುವುದೇ?")

ಅದಕ್ಕೆ ವಿಶ್ವಾಮಿತ್ರನು ಉತ್ತರಿಸುತ್ತಾನೆ :

ಮಿತ್ರಂ ಚ ಮೇ ಬ್ರಾಹ್ಮಣಸ್ಯಾಯಮಾತ್ಮಾ
ಪ್ರಿಯಶ್ಚ ಮೇ ಪೂಜ್ಯತಮಶ್ಚ ಲೋಕೇ ।
ತಂ ಧರ್ತುಕಾಮೋಽಹಮಿಮಾಂ ಜಿಹೀರ್ಷೇ
ನೃಶಂಸಾನಾಮೀದೃಶಾನಾಂ ನ ಬಿಭ್ಯೇ ॥೭೭॥

"ಮಾತಂಗ! (ಬ್ರಾಹ್ಮಣರ ರಕ್ಷಣೆಗಾಗಿ ಅಗಸ್ತ್ಯರು ವಾತಾಪಿಯನ್ನು ತಿಂದರೆಂದು ನೀನು ಹೇಳುವೆಯಾದರೆ–ನಾನೂ ನನ್ನ ಮಿತ್ರನ ರಕ್ಷಣಾರ್ಥವಾಗಿ ಈ ನಾಯಿಯ ಮಾಂಸವನ್ನು ತಿನ್ನುತ್ತೇನೆ.) ನನ್ನ ಜೀವಾತ್ಮನು ಅಧಿಷ್ಠಾನಮಾಡಿಕೊಂಡಿರುವ ಈ ಬ್ರಾಹ್ಮಣಶರೀರವೇ ನನ್ನ ಮಿತ್ರನು. ನನಗೆ ಈ ಬ್ರಾಹ್ಮಣಶರೀರವು ಅತ್ಯಂತಪ್ರಿಯವಾದುದು. ಪ್ರಪಂಚದಲ್ಲಿ ಎಲ್ಲದಕ್ಕಿಂತಲೂ ಪೂಜ್ಯತಮವಾದುದು. ಇದನ್ನು ಧರಿಸಿ ಕೊಂಡಿರುವ ಇಚ್ಛೆಯಿಂದಲೇ ನಾನು ಈ ನಾಯಿಯ ಮಾಂಸವನ್ನು ತಿನ್ನಲಿಚ್ಛಿಸಿದ್ದೇನೆ. ಬ್ರಾಹ್ಮಣಶರೀರರೂಪವಾಗಿರುವ ಈ ನನ್ನ ಪ್ರಿಯಮಿತ್ರ ನನ್ನು ನಾನು ಉಳಿಸಿಕೊಳ್ಳಬೇಕಾಗಿರುವುದರಿಂದ ಇಂತಹ ಕ್ರೂರವಾದ ಕಾರ್ಯಗಳನ್ನು ಮಾಡಲು ನಾನೆಂದಿಗೂ ಭಯಪಡತಕ್ಕವನಲ್ಲ."

ಮಾತಂಗನು ಹೇಳುತ್ತಾನೆ :

ಕಾಮಂ ನರಾ ಜೀವಿತಂ ಸಂತ್ಯಜನ್ತಿ
ನ ಚಾಭಕ್ಷ್ಯೇ ಕ್ವಚಿತ್ಕುರ್ವನ್ತಿ ಬುದ್ಧಿಮ್ ।
ಸರ್ವಾನ್ಕಾಮಾನ್ಪ್ರಾಪ್ನುವನ್ತೀಹ ವಿದ್ವ-
ನ್ಪ್ರಿಯಸ್ವ ಕಾಮಂ ಸಹಿತಃ ಕ್ಷುಧೈವ ॥೭೮॥

"ವಿದ್ವಾಂಸನೇ! ಸತ್ಪುರುಷರು ಸ್ವೇಚ್ಛೆಯಿಂದಲೇ ಪ್ರಾಣಗಳನ್ನು ತ್ಯಜಿಸುತ್ತಾರೆ. (ನಶ್ವರವಾದ ಶರೀರದ ವಿಷಯವಾಗಿ ಹೆಚ್ಚು ವ್ಯಾಮೋಹ ಗೊಳ್ಳುವುದಿಲ್ಲ.) ಅಭಕ್ಷ್ಯಭಕ್ಷವನ್ನಾದರೂ ಮಾಡಿ ಜೀವಿಸಿರಬೇಕೆಂದು ಅವರು ಒಮ್ಮೆಯಾದರೂ ಯೋಚಿಸುವುದಿಲ್ಲ. ಈ ಕಾರಣದಿಂದಲೇ (ಉಪವಾಸವ್ರತದಿಂದಲೇ) ಅವರು ತಮ್ಮ ಸಂಪೂರ್ಣಕಾಮನೆಗಳನ್ನೂ ಪಡೆದುಕೊಳ್ಳುತ್ತಾರೆ. ಅಂತಹ ಮಹನೀಯರಂತೆ ನೀನೂ ಕೂಡ ಹಸಿವಿನಿಂದಲೇ ಇದ್ದು (ಉಪವಾಸವ್ರತವನ್ನು ಆಚರಿಸುತ್ತಾ) ನಿನ್ನ ಮನಸ್ಸಿನ ಅಭಿಲಾಷೆಗಳನ್ನು ಪೂರ್ಣಮಾಡಿಕೊಳ್ಳಬಹುದು."

ಮಹರ್ಷಿಯು ಅದಕ್ಕೆ ಸಮಾಧಾನವನ್ನು ಹೇಳುತ್ತಾನೆ :

ಸ್ಥಾನೇ ಭವೇತ್ಸಂಶಯಃ ಪ್ರೇತ್ಯಭಾವೇ
ನಿಃಸಂಶಯಃ ಕರ್ಮಣಾಂ ವೈ ವಿನಾಶಃ ।
ಅಹಂ ಪುನರ್ವ್ರತನಿತ್ಯಃ ಶಮಾತ್ಮಾ
ಮೂಲಂ ರಕ್ಷ್ಯಂ ಭಕ್ಷಯಿಷ್ಯಾಮ್ಯಭಕ್ಷ್ಯಮ್ ॥೭೯॥

"ಮಾತಂಗ! ಉಪವಾಸದಿಂದ ಪ್ರಾಣತೊರೆದರೆ ಮುಂದೇನಾಗುತ್ತದೆಂಬುದು ಸಂಶಯಾತ್ಮಕವಾದ ವಿಚಾರವಾಗಿದೆ. ನನ್ನ ಅಭಿಲಾಷೆಗಳನ್ನು ಈ ಶರೀರದಲ್ಲಂತೂ ಪಡೆಯಲು ಸಾಧ್ಯವಾಗುವುದಿಲ್ಲ. ಹೀಗೆ ಪ್ರಾಣತೊರೆಯುವುದರಿಂದ ನಾನು ಮಾಡಬೇಕಾಗಿರುವ ಧರ್ಮ-ಕರ್ಮಗಳ ವಿನಾಶವಾಗುವುದೆಂಬುದರಲ್ಲಿ ಸ್ವಲ್ಪವಾದರೂ ಸಂಶಯವೇ ಇಲ್ಲ. ಧರ್ಮಾಚರಣೆಗೆ ಶರೀರವೇ ಮೂಲಕಾರಣವಾಗಿದೆ. ನಾನು ಈ ಮಾಂಸವನ್ನು ತಿನ್ನುವುದರ ಮೂಲಕ ಜೀವವನ್ನು ಉಳಿಸಿಕೊಂಡನಂತರ ನಿತ್ಯವೂ ವ್ರತನಿಷ್ಠನಾಗಿದ್ದುಕೊಂಡು ಶಮ-ದಮಾದಿಗಳ ಮೂಲಕವಾಗಿ ಮಾಡಿಕೊಳ್ಳಬೇಕಾದ

ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇನೆ. ಈ ಸಮಯದಲ್ಲಿ ನಾನು ಧರ್ಮಕ್ಕೆ ಮೂಲಭೂತವಾದ ಈ ಶರೀರವನ್ನು ರಕ್ಷಿಸಿಕೊಳ್ಳಲೇಬೇಕು. ಆದುದರಿಂದ ಅಭಕ್ಷ್ಯವನ್ನಾದರೂ ನಾನೀಗ ಭಕ್ಷಣೆಮಾಡುತ್ತೇನೆ.

ಬುದ್ಧ್ಯಾತ್ಮಕೇ ವ್ಯಕ್ತಮಸ್ತೀತಿ ಪುಣ್ಯಂ
ಮೋಹಾತ್ಮಕೇ ಯತ್ರ ಯಥಾ ಶ್ವಭಕ್ಷ್ಯೇ ।
ಯದ್ಯಪ್ಯೇತತ್ಸಂಶಯಾತ್ಮಾ ಚರಾಮಿ
ನಾಹಂ ಭವಿಷ್ಯಾಮಿ ಯಥಾ ತ್ವಮೇವ ॥೮೦॥

ಮಾತಂಗ! ನಾಯಿಯ ಮಾಂಸದ ಭಕ್ಷಣೆಯಲ್ಲಿ ಎರಡು ಬಗೆಯಾದ ವಿಚಾರಗಳಿವೆ. ಮೊದಲನೆಯದು : ಬುದ್ಧಿ ಮತ್ತು ವಿಚಾರಪೂರ್ವಕ ವಾದುದು. ಎರಡನೆಯದು : ಅಜ್ಞಾನ ಮತ್ತು ಆಸಕ್ತಿಪೂರ್ವಕವಾದುದು. ಬುದ್ಧಿಪೂರ್ವಕವಾಗಿ ವಿಚಾರಮಾಡಿದಲ್ಲಿ ಈ ಸಮಯದಲ್ಲಿ ನಾನು ಧರ್ಮ ಕಾರ್ಯಗಳಿಗೆ ಮೂಲಭೂತವಾದ ಜ್ಞಾನಪ್ರಾಪ್ತಿಗೆ ಸಾಧನಭೂತವಾದ ಶರೀರವನ್ನು ಶ್ವಮಾಂಸಭಕ್ಷಣೆಯಿಂದಾದರೂ ರಕ್ಷಿಸಿಕೊಳ್ಳುವುದು ಪುಣ್ಯ ಕಾರ್ಯವೆಂಬುದು ಸ್ಪಷ್ಟವಾಗಿಯೇ ಇದೆ. ಮೋಹಪರವಶನಾಗಿ ಶ್ವಮಾಂಸ ವನ್ನು ತಿನ್ನಬೇಕೆಂಬ ಚಪಲತೆಯಿಂದ ತಿನ್ನುವವನು ದೋಷಕ್ಕೆ ಭಾಗಿ ಯಾಗುತ್ತಾನೆ. ಯದ್ಯಪಿ ನನಗೆ ಈ ನಿಶ್ಚಯಾತ್ಮಕವಾದ ಬುದ್ಧಿಯಿದ್ದರೂ ಸಂಶಯಾತ್ಮಕನಾಗಿಯೇ ಈ ಕಾರ್ಯವನ್ನು ಮಾಡುತ್ತಿದ್ದೇನೆ. ಆದರೆ ನನ್ನಲ್ಲಿ ಈ ದೃಢವಿಶ್ವಾಸವಿದೆ : ಒಂದು ವೇಳೆ ಧರ್ಮಕ್ಕೆ ಮೂಲವಾದ ಈ ಶರೀರದ ರಕ್ಷಣೆಗಾಗಿ ನಾನೀಗ ನಾಯಿಯ ಈ ಮಾಂಸವನ್ನು ಭಕ್ಷಿಸಿದರೂ ನಿನ್ನಂತೆ ನಾನು ಚಾಂಡಾಲನಾಗುವುದಿಲ್ಲ. ತಪಸ್ಸಿನ ಮೂಲಕವಾಗಿ ಈ ದೋಷವನ್ನು ಪರಿಹರಿಸಿಕೊಳ್ಳುತ್ತೇನೆ."

ಚಾಂಡಾಲನು ಹೇಳುತ್ತಾನೆ :

ಗೋಪನೀಯಮಿದಂ ದುಃಖಮಿತಿ ಮೇ ನಿಶ್ಚಿತಾ ಮತಿಃ ।
ದುಷ್ಕೃತೋಽಬ್ರಾಹ್ಮಣಃ ಸನ್ತಂ ಯಸ್ತ್ವಾಮಹಮುಪಾಲಭೇ ॥೮೧॥

"ಮಹರ್ಷೇ! ಈ ನಾಯಿಯ ಮಾಂಸವನ್ನು ತಿನ್ನುವುದರಿಂದ ನಿನಗೆ ಅತ್ಯಂತ ದುಃಖದಾಯಕವಾದ ಪಾಪವುಂಟಾಗುತ್ತದೆ. ಇದರಿಂದ ನಿನ್ನನ್ನು

ಹೇಗಾದರೂ ರಕ್ಷಿಸಲೇಬೇಕೆಂಬುದು ನನ್ನ ಅಭಿಮತವಾಗಿದೆ. ಆದರೆ ಅಬ್ರಾಹ್ಮಣನಾಗಿದ್ದರೂ ನಾನು ಸತ್ಪುರುಷನಾದ ನಿನ್ನನ್ನು ವ್ಯಾಜದಿಂದ ನಿಂದನೆಮಾಡುತ್ತಿದ್ದೇನೆ. ಈ ಕಾರಣದಿಂದ ನಾನೂ ಪಾಪಿಷ್ಠನೇ ಆಗಿದ್ದೇನೆ."

ಮಹರ್ಷಿಯು ಹಠದಿಂದ ಹೇಳುತ್ತಾನೆ :

ಪಿಬನ್ತ್ಯೇವೋದಕಂ ಗಾವೋ ಮಣ್ಡೂಕೇಷು ರುವತ್ಸ್ವಪಿ ।
ನ ತೇಽಧಿಕಾರೋ ಧರ್ಮೇಽಸ್ತಿ ಮಾ ಭೂರಾತ್ಮಪ್ರಶಂಸಕಃ ॥೮೨॥

"ಮಾತಂಗ! ಜಲಾಶಯಗಳಲ್ಲಿ ಕಪ್ಪೆಗಳು ವಟಗುಟ್ಟುತ್ತಿದ್ದರೂ ಹಸುಗಳು ನೀರನ್ನು ಕುಡಿದೇ ಕುಡಿಯುತ್ತವೆ. (ನೀನು ನನ್ನನ್ನು ಎಷ್ಟೇ ತಡೆದರೂ ನಾನು ಅಭಕ್ಷ್ಯಭಕ್ಷಣವನ್ನು ಮಾಡುತ್ತೇನೆ.) ಮೇಲಾಗಿ ಧರ್ಮೋಪದೇಶವನ್ನು ಮಾಡಲು ನಿನಗೆ ಯಾವ ಅಧಿಕಾರವೂ ಇಲ್ಲ. ಆದುದರಿಂದ ನೀನು ನನ್ನೊಡನೆ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳಬೇಡ."

ಮಾತಂಗನು ವಿನೀತನಾಗಿ ಹೇಳುತ್ತಾನೆ :

ಸುಹೃದ್ಭೂತ್ವಾನುಶಾಸೇ ತ್ವಾಂ ಕೃಪಾ ಹಿ ತ್ವಯಿ ಮೇ ದ್ವಿಜ ।
ಯದಿದಂ ಶ್ರೇಯ ಆಧತ್ಸ್ವ ಮಾ ಲೋಭಾತ್ಪಾತಕಂ ಕೃಥಾಃ ॥೮೩॥

"ಬ್ರಾಹ್ಮಣೋತ್ತಮ! ನನಗೆ ಧರ್ಮೋಪದೇಶಮಾಡಲು ಅಧಿಕಾರವಿರುವುದೆಂಬ ಭಾವನೆಯಿಂದ ನಾನು ನಿನಗೆ ಈ ಮಾತುಗಳನ್ನು ಹೇಳುತ್ತಿಲ್ಲ. ಹಿತೈಷಿಯಾದ ಸ್ನೇಹಿತನೆಂದು ಭಾವಿಸಿ ನಾನು ನಿನಗೆ ಧರ್ಮಯುಕ್ತವಾದ ಈ ಸಲಹೆಯನ್ನು ಕೊಡುತ್ತಿದ್ದೇನೆ. ಏಕೆಂದರೆ : ನಿನ್ನ ವಿಷಯದಲ್ಲಿ ನನಗೆ ಅಪಾರವಾದ ಅನುಕಂಪವಿದೆ. ಕಲ್ಯಾಣಕರವಾದ ನನ್ನ ಮಾತನ್ನು ಪರಿಗ್ರಹಿಸು. ಶ್ವಮಾಂಸದ ಲೋಭದಿಂದಾಗಿ ಪಾಪಕಾರ್ಯವನ್ನು ಮಾಡಬೇಡ."

ಮಹರ್ಷಿಯು ಹೇಳುತ್ತಾನೆ :

ಸುಹೃನ್ಮೇ ತ್ವಂ ಸುಖೇಪ್ಸುಶ್ಚೇದಾಪದೋ ಮಾಂ ಸಮುದ್ಧರ ।
ಜಾನೇಽಹಂ ಧರ್ಮತೋಽತ್ಮಾನಂ ಶೌನೀಮುತ್ಸೃಜ ಜಾಘನೀಮ್ ॥೮೪॥

"ಮಾತಂಗ! ನೀನು ನನ್ನ ಸುಹೃದನಾಗಿದ್ದರೆ, ನನ್ನ ಸುಖವನ್ನೇ ನೀನು ಇಚ್ಛಿಸುವವನಾಗಿದ್ದರೆ–ಈ ಪ್ರಾಣಾಪತ್ತಿನಿಂದ ನನ್ನನ್ನು ಉದ್ಧರಿಸು.

ಈ ನಾಯಿಯ ಸೊಂಟದ ಮಾಂಸವನ್ನು ನನಗೆ ಕೊಟ್ಟುಬಿಡು. ಧರ್ಮತಃ ನಾನು ಯಾರೆಂಬುದನ್ನು ನಾನು ಚೆನ್ನಾಗಿ ತಿಳಿದುಕೊಂಡಿರುತ್ತೇನೆ."

ಆಗ ಚಾಂಡಾಲನು ದೃಢವಾಗಿ ಹೇಳುತ್ತಾನೆ :

ನೈವೋತ್ಸಹೇ ಭವತೋ ದಾತುಮೇತಾಂ
ನೋಪೇಕ್ಷಿತುಂ ಹ್ರಿಯಮಾಣಂ ಸ್ವಮನ್ನಮ್ ।
ಉಭೌ ಸ್ಯಾವಃ ಪಾಪಲೋಕಾವಲಿಪ್ತೌ
ದಾತಾ ಚಾಹಂ ಬ್ರಾಹ್ಮಣಸ್ತ್ವಂ ಪ್ರತೀಚ್ಛನ್ ।।೮೫।।

"ಬ್ರಾಹ್ಮಣೋತ್ತಮ! ಈ ಅಭಕ್ಷ್ಯವಸ್ತುವನ್ನು ನಿನಗೆ ಕೊಡಲು ನಾನು ಉತ್ಸಾಹಿಯಾಗಿಲ್ಲ. ನನ್ನ ಅನ್ನವನ್ನು ನೀನು ಅಪಹರಿಸಿಕೊಂಡು ಹೋಗುವುದನ್ನು ಉಪೇಕ್ಷಿಸುವ ಇಚ್ಛೆಯೂ ನನಗಿಲ್ಲ. (ನೀನಿದನ್ನು ಒಯ್ಯುವುದನ್ನು ನಾನು ಪ್ರತಿಭಟಿಸುತ್ತೇನೆ.) ಇದಕ್ಕೆ ಕಾರಣವಿಷ್ಟೆ. ಮಾಂಸವನ್ನು ಒಪ್ಪಿಸುವ ನಾನು, ಪ್ರತಿಗ್ರಹಿಸುವ ನೀನು–ಇಬ್ಬರೂ ಪಾಪ ಲಿಪ್ತರಾಗಿ ನರಕದಲ್ಲಿ ಬೀಳುತ್ತೇವೆ. ಈ ಕಾರಣದಿಂದ ಮಾಂಸವನ್ನು ಅಪಹರಿಸದಂತೆ ನಿನ್ನನ್ನು ತಡೆಯುವುದು ನನ್ನ ಕರ್ತವ್ಯವೇ ಆಗಿದೆ."

ಮುನಿಯು ಮಾತಂಗನನ್ನು ಸಂತಯಿಸುತ್ತಾ ಹೇಳುತ್ತಾನೆ :

ಅದ್ಯಾಹಮೇತದ್ವೃಜಿನಂ ಕರ್ಮ ಕೃತ್ವಾ
ಜೀವಂಶ್ಚರಿಷ್ಯಾಮಿ ಮಹಾಪವಿತ್ರಮ್ ।
ಸ ಪೂತಾತ್ಮಾ ಧರ್ಮಮೇವಾಭಿಪತ್ಸ್ಯೇ
ಯದೇತಯೋರ್ಗುರು ತದ್ವೈ ಬ್ರವೀಹಿ ।।೮೬।।

"ಮಾತಂಗ! ನಾನೀಗ ಪ್ರಾಣರಕ್ಷಣೆಗಾಗಿ ಶ್ವಮಾಂಸಭಕ್ಷಣಾರೂಪ ವಾದ ಪಾಪವನ್ನೇ ಮಾಡಿದರೂ ಇದರಿಂದ ನಾನು ಬದುಕಿದ್ದೇ ಆದರೆ-ಪರಮ ಪವಿತ್ರವಾದ ಧರ್ಮಾನುಷ್ಠಾನವನ್ನು ಮಾಡುತ್ತೇನೆ. ಇದರಿಂದ ನಾನು ಪೂತಾತ್ಮನಾಗಿ ಪುಣ್ಯಫಲವನ್ನೇ ಪಡೆದುಕೊಳ್ಳುತ್ತೇನೆ. ನಾಯಿಯ ಮಾಂಸ ವನ್ನಾದರೂ ಭಕ್ಷಿಸಿ ಪ್ರಾಣವುಳಿಸಿಕೊಂಡು ಧರ್ಮಕಾರ್ಯಗಳನ್ನು ಮಾಡು ವುದು ; ಪ್ರಾಣವುಳಿಸಿಕೊಳ್ಳುವುದಕ್ಕಾಗಿ ಅಭಕ್ಷ್ಯವನ್ನು ತಿನ್ನದೆ ಉಪವಾಸ

ವನ್ನೇ ಮುಂದುವರಿಸಿ ಪ್ರಾಣತ್ಯಾಗಮಾಡುವುದು–ಈ ಎರಡರಲ್ಲಿ ಯಾವುದು ಉತ್ತಮವೆಂಬುದನ್ನು ನೀನೇ ಯೋಚಿಸಿ ಹೇಳು."

ಮಾತಂಗನು ಹೇಳುತ್ತಾನೆ :

ಆತ್ಮೈವ ಸಾಕ್ಷೀ ಕುಲಧರ್ಮಕೃತ್ಯೇ
ತ್ವಮೇವ ಜಾನಾಸಿ ಯದತ್ರ ದುಷ್ಕೃತಮ್ ।
ಯೋ ಹ್ಯಾದ್ರಿಯಾದ್ಭಕ್ಷ್ಯಮಿತಿ ಶ್ವಮಾಂಸಂ
ಮನ್ಯೇ ನ ತಸ್ಯಾಸ್ತಿ ವಿವರ್ಜನೀಯಮ್ ॥೮೭॥

"ಯಾವ ಕುಲದಲ್ಲಿ ಹುಟ್ಟಿದವನಿಗೆ ಯಾವ ಕಾರ್ಯವು ಧರ್ಮ ವೆಂಬುದಕ್ಕೆ ಅವನವನ ಆತ್ಮವೇ ಸಾಕ್ಷಿಯಾಗಿರುತ್ತದೆ. ಈ ಅಭಕ್ಷ್ಯಭಕ್ಷಣದಲ್ಲಿ ಎಂತಹ ದುಃಖಕರವಾದ ಪಾಪವಡಗಿರುವುದೆಂಬುದನ್ನು ನೀನೇ ತಿಳಿದಿರುವೆ. ನಾಯಿಯ ಮಾಂಸವೂ ಭಕ್ಷಣೀಯವೆಂದು ಹೇಳುತ್ತಾ ಯಾವನು ಅದನ್ನು ಆದರಿಸುತ್ತಾನೆಯೋ (ಆದರದಿಂದ ಪ್ರತಿಗ್ರಹಿಸುತ್ತಾನೆಯೋ)–ಅವನಿಗೆ ಈ ಜಗತ್ತಿನಲ್ಲಿ ತ್ಯಾಜ್ಯವಾದ ಪದಾರ್ಥವೇ ಇಲ್ಲವೆಂಬುದು ನನ್ನ ಅಭಿಮತವಾಗಿದೆ."

ಮಹರ್ಷಿಯು ತನ್ನ ಅಭಿಪ್ರಾಯವನ್ನು ಹೇಳುತ್ತಾನೆ :

ಉಪಾದಾನೇ ಖಾದನೇ ಚಾಸ್ತಿ ದೋಷಃ
ಕಾರ್ಯಾತ್ಯಯೇ ನಿತ್ಯಮತ್ರಾಪವಾದಃ ।
ಯಸ್ಮಿನ್ನಿಂಸಾ ನಾನೃತಂ ವಾಚ್ಯಲೇಶೋಽ-
ಭಕ್ಷ್ಯಕ್ರಿಯಾ ಯತ್ರ ನ ತದ್ಗರೀಯಃ ॥೮೮॥

" ಮಾತಂಗ! ಈ ವಿಷಯದಲ್ಲಿ ನನ್ನ ಅಭಿಪ್ರಾಯವು ಹೀಗಿದೆ : ನಿನ್ನಿಂದ ಶ್ವಮಾಂಸವನ್ನು ತೆಗೆದುಕೊಳ್ಳುವುದರಲ್ಲಿ, ಅದನ್ನು ನಾನು ಭಕ್ಷಿಸು ವುದರಲ್ಲಿ ದೋಷವಿದೆ. ನಿನ್ನಿಂದ ಶ್ವಮಾಂಸವನ್ನು ತೆಗೆದುಕೊಂಡು ನಾನು ಅದನ್ನು ಭಕ್ಷಿಸಬಾರದು. ಇದು ಸಾಧಾರಣನಿಯಮ. ಆದರೆ ಪ್ರಾಣಾಪತ್ತಿ ನಲ್ಲಿ ಈ ಸಾಧಾರಣನಿಯಮಕ್ಕೆ ಅಪವಾದವಿದೆ. ಪ್ರಾಣವು ಹೋಗಿಬಿಡು ವುದೆಂದು ತಿಳಿದಾಗ ಇಂತಹ ಸಾಧಾರಣನಿಯಮಗಳನ್ನು ಅನುಸರಿಸಬಾರದು. ನಾನು ಮಾಡಲಿಚ್ಛಿಸಿರುವ ಈ ಕಾರ್ಯದಲ್ಲಿ ಅಭಕ್ಷ್ಯಭಕ್ಷಣವೊಂದರ

ಹೊರತಾಗಿ ಹಿಂಸೆಯಾಗಲೀ–ಅಸತ್ಯವಾಗಲೀ ಇರುವುದಿಲ್ಲ. ಅಭಕ್ಷ್ಯಭಕ್ಷಣ ಮಾಡಿದೆನೆಂಬ ದೋಷಲೇಶವಿದೆ. ಆದುದರಿಂದ ಪ್ರಾಣಾಪತ್ತಿನಲ್ಲಿಯೂ ಅಭಕ್ಷ್ಯವನ್ನು ಭಕ್ಷಿಸಬಾರದೆಂಬ ನಿಷೇಧವಚನವಿರುವುದಾದರೆ ಆ ವಚನವು ಆದರಣೀಯವಲ್ಲ."

ಆ ವಾದವನ್ನು ಒಪ್ಪದೇ ಮಾತಂಗನು ಹೇಳುತ್ತಾನೆ :

ಯದ್ಯೇಷ ಹೇತುಸ್ತವ ಖಾದನೇ ಸ್ಯಾ-
ನ್ನ ತೇ ವೇದಃ ಕಾರಣಂ ನಾರ್ಯಧರ್ಮಃ ।
ತಸ್ಮಾದ್ಭಕ್ಷ್ಯೇಽಭಕ್ಷಣೇ ವಾ ದ್ವಿಜೇನ್ದ್ರ
ದೋಷಂ ನ ಪಶ್ಯಾಮಿ ಯಥೇದಮತ್ರ ॥೮೯॥

"ದ್ವಿಜಶ್ರೇಷ್ಠನೇ! ಅಭಕ್ಷ್ಯವಸ್ತುವನ್ನು ಭಕ್ಷಿಸುವುದರಲ್ಲಿ ನಿನಗೆ ಪ್ರಾಣರಕ್ಷಣೆಯೇ ಮುಖ್ಯಕಾರಣವಾಗಿದೆ. ನಿನ್ನ ಅಭಿಪ್ರಾಯದಲ್ಲಿ ವೇದಗಳಾಗಲೀ–ಶ್ರೇಷ್ಠಪುರುಷರ ಆಚರಣೆಗಳಾಗಲೀ ಪ್ರಮಾಣಗಳಲ್ಲ. ವೇದಗಳನ್ನೂ ಮತ್ತು ಹಿರಿಯರ ಆಚರಣೆಯನ್ನೂ ನೀನು ಪ್ರಮಾಣವನ್ನಾಗಿ ಅಂಗೀಕರಿಸಿದ್ದರೆ–ಪ್ರಾಣಾಪತ್ತಿನಲ್ಲಿಯೂ ಅಭಕ್ಷ್ಯವನ್ನು ಭಕ್ಷಿಸುತ್ತಿರಲಿಲ್ಲ. ನಿನ್ನ ಈ ಆಚರಣೆಯಿಂದ ನಾನು ಭಕ್ಷ್ಯವನ್ನು ಭಕ್ಷಿಸದೇ ಇರುವುದರಲ್ಲಿಯೂ ಅಭಕ್ಷ್ಯವನ್ನು ಭಕ್ಷಿಸುವುದರಲ್ಲಿಯೂ–ಯಾವ ದೋಷವನ್ನೂ ಕಾಣುತ್ತಿಲ್ಲ. (ಪ್ರಾಣರಕ್ಷಣೆಯನ್ನೇ ವ್ಯಾಜವನ್ನಾಗಿಟ್ಟುಕೊಂಡು ಯಾವುದನ್ನು ಬೇಕಾದರೂ ಭಕ್ಷಿಸಬಹುದಲ್ಲವೇ?–ಸ್ವೇಚ್ಛಾಚಾರಿಯಾಗಬಹುದಲ್ಲವೇ?")

ಅದಕ್ಕೆ ಸಮಾಧಾನ ಹೇಳುತ್ತಾ ಮುನಿಯು ಹೇಳುತ್ತಾನೆ :

ನೈವಾತಿಪಾಪಂ ಭಕ್ಷ್ಯಮಾಣಸ್ಯ ದೃಷ್ಟಂ
ಸುರಾಂ ತು ಪೀತ್ವಾ ಪತತೀತಿ ಶಬ್ದಃ ।
ಅನ್ಯೋನ್ಯಕಾರ್ಯಾಣಿ ಯಥಾ ತಥೈವ
ನ ಪಾಪಮಾತ್ರೇಣ ಕೃತಂ ಹಿನಸ್ತಿ ॥೯೦॥

"ಮಾತಂಗ! ಅಭಕ್ಷ್ಯವಾದ ಪದಾರ್ಥವನ್ನು ಭಕ್ಷಣೆಮಾಡುವುದರಿಂದ ಬ್ರಹ್ಮಹತ್ಯವೇ ಮೊದಲಾದುವುಗಳಿಂದ ಪ್ರಾಪ್ತವಾಗುವ ಮಹಾ

ಪಾತಕಗಳು ಸಂಘಟಿಸುವುದೆಂಬ ವಾಕ್ಯವು ಯಾವ ಶಾಸ್ತ್ರದಲ್ಲಿಯೂ ಇರುವುದು ಕಂಡುಬರುವುದಿಲ್ಲ. ಆದರೆ ಸುರೆಯನ್ನು ಕುಡಿದರೆ ಬ್ರಾಹ್ಮಣನು ಪತಿತನಾಗುವನೆಂಬ ಶಾಸ್ತ್ರವಾಕ್ಯವಿದೆ. ಆದುದರಿಂದ ಸುರಾಪಾನವನ್ನು ಅವಶ್ಯವಾಗಿ ತ್ಯಜಿಸಬೇಕು. ಶಾಸ್ತ್ರದಲ್ಲಿ ಸಂಧ್ಯಾಕಾಲಗಳಲ್ಲಿ ಮಲಗುವುದು, ತಿಷ್ಠನ್ಮೂತ್ರ-ಧಾವನ್ಮೂತ್ರಾದಿಗಳು, ಸೂರ್ಯೋದಯವಾದ ಮೇಲೆ ಏಳುವುದು-ಇತ್ಯಾದಿಗಳನ್ನು ನಿಷೇಧಿಸಿರುವಂತೆ ಇಂತಹವುಗಳು ಅಭಕ್ಷ್ಯವಾದ ವಸ್ತುಗಳೆಂದು ಹೇಳಿ ಅವುಗಳನ್ನು ಬ್ರಾಹ್ಮಣನು ತಿನ್ನಬಾರದೆಂದು ನಿಷೇಧಿಸಿದ್ದಾರೆ. ಆಪತ್ಕಾಲದಲ್ಲಿ ಇಂತಹ ನಿಷಿದ್ಧ ಪದಾರ್ಥಗಳನ್ನು ಭಕ್ಷಿಸುವುದರಿಂದ ಸ್ವಲ್ಪ ಪಾಪಸಂಘಟನೆಯಾದರೂ ಆ ಪಾಪವು ಹುಟ್ಟಿದಾರಭ್ಯ ಮಾಡಿರುವ ಪುಣ್ಯಕಾರ್ಯವನ್ನು ಖಂಡಿತವಾಗಿಯೂ ವಿನಾಶಗೊಳಿಸುವುದಿಲ್ಲ."

ಮಾತಂಗನು ಹೇಳುತ್ತಾನೆ :

ಅಸ್ಥಾನತೋ ಹೀನತಃ ಕುತ್ಸಿತಾದ್ವಾ
ತದ್ವಿದ್ವಾಂಸಂ ಬಾಧತೇ ಸಾಧುವೃತ್ತಮ್ ।
ಶ್ವಾನಂ ಪುನರ್ಯೋ ಲಭತೇಽಭಿಷಜ್ಯಾ-
ತ್ತೇನಾಪಿ ದಣ್ಡಃ ಸಹಿತವ್ಯ ಏವ ॥೯೧॥

"ದ್ವಿಜಶ್ರೇಷ್ಠನೇ! ಅಯೋಗ್ಯವಾದ ಸ್ಥಾನದಿಂದ (ಚಾಂಡಾಲರು ವಾಸಿಸುವ ಮನೆಯಿಂದ) ಅನುಚಿತವಾದ ಕರ್ಮದಿಂದ (ಕಳ್ಳತನದಿಂದ) ಹೀನನಾದ ಪುರುಷನಿಂದ (ನನ್ನಿಂದ) ಅಭಕ್ಷ್ಯವಾದ ವಸ್ತುವನ್ನು (ಶ್ವಮಾಂಸವನ್ನು) ಪಡೆದುಕೊಳ್ಳಬೇಕೆಂಬ ಇಚ್ಛೆಯು ಸಚ್ಚರಿತ್ರನಾದ ವಿದ್ವಾಂಸನನ್ನು ಬಾಧೆಪಡಿಸುತ್ತದೆ. ಯಾವನು ಆಗ್ರಹಪೂರ್ವಕವಾಗಿ ಪುನಃ ಪುನಃ ಒತ್ತಾಯಿಸಿ ಅಭಕ್ಷ್ಯವೆನಿಸಿದ ಶ್ವಮಾಂಸವನ್ನು ಪಡೆದುಕೊಳ್ಳುವನೋ-ಅಂತಹವನು ಅಭಕ್ಷ್ಯಭಕ್ಷಣಕ್ಕೆ ತಕ್ಕುದಾದ ಶಿಕ್ಷೆಯನ್ನು ಅನುಭವಿಸಲೇಬೇಕು."

ಯುಧಿಷ್ಠಿರ! ಮಾತಂಗನು ಹೀಗೆ ಹೇಳಿ ವಿಶ್ವಾಮಿತ್ರನನ್ನು ಮಾಂಸಾಪಹರಣದಿಂದ ಪ್ರತಿಬಂಧಿಸುವುದನ್ನು ನಿಲ್ಲಿಸಿದನು. ಶ್ವಮಾಂಸಾಪಹರಣದಲ್ಲಿಯೇ ಅತ್ಯಾತುರನಾಗಿದ್ದ ವಿಶ್ವಾಮಿತ್ರನು ಮಾತಂಗನ ಮನೆ

ಯಲ್ಲಿದ್ದ ನಾಯಿಯ ಸೊಂಟದ ಮಾಂಸವನ್ನು ಅಪಹರಿಸಿಕೊಂಡೇ ಹೋದನು. ಜೀವಂತನಾಗಿರಲು ಇಚ್ಛಿಸಿದ್ದ ಮಹಾಮುನಿಯಾದ ವಿಶ್ವಾಮಿತ್ರನು ನಾಯಿಯ ಸೊಂಟದ ಭಾಗವನ್ನು ತೆಗೆದುಕೊಂಡು ಅದನ್ನು ಅರಣ್ಯಕ್ಕೆ ಕೊಂಡೊಯ್ದು ಅಲ್ಲದನ್ನು ಪತ್ನೀಸಹಿತನಾಗಿ ಭಕ್ಷಿಸಲು ಇಚ್ಛಿಸಿದನು.* ಅಷ್ಟರಲ್ಲಿಯೇ ಅವನಿಗೆ ಮತ್ತೊಂದು ವಿಧವಾದ ಬುದ್ಧಿಯುಂಟಾಯಿತು. 'ಈ ನಾಯಿಯ ಸೊಂಟದ ಮಾಂಸವನ್ನು ದೇವತೆಗಳಿಗೆ ವಿಧಿಪೂರ್ವಕವಾಗಿ ಸಮರ್ಪಿಸಿ, ಅವರನ್ನು ಸಂತೃಪ್ತಿಗೊಳಿಸಿ, ಅನಂತರ ದೇವತಾಪ್ರಸಾದರೂಪವಾದ ಈ ಮಾಂಸವನ್ನು ನನ್ನ ಇಚ್ಛಾನುಸಾರವಾಗಿ ತಿನ್ನುತ್ತೇನೆ.'–ವಿಶ್ವಾಮಿತ್ರನು ಹೀಗೆ ನಿಶ್ಚಯಿಸಿ ವೇದೋಕ್ತರೀತಿಯಲ್ಲಿ ವಿಧಿವತ್ತಾಗಿ ಅಗ್ನಿಯನ್ನು ಪ್ರತಿಷ್ಠಾಪಿಸಿ ಐಂದ್ರಾಗ್ನವಿಧಿಯಿಂದ (ಇಂದ್ರ ಮತ್ತು ಅಗ್ನಿದೇವತೆಗಳನ್ನು ಉದ್ದೇಶಿಸಿ) ಚರುವನ್ನು (ಶ್ವಮಾಂಸವನ್ನು) ಅಗ್ನಿಯಲ್ಲಿ ಪಕ್ವಮಾಡಿದನು. ಬಳಿಕ ವಿಶ್ವಾಮಿತ್ರನು ದೇವಕರ್ಮವನ್ನೂ ಮತ್ತು ಪಿತೃಕರ್ಮವನ್ನೂ ಅನುಕ್ರಮವಾಗಿ ಪ್ರಾರಂಭಿಸಿದನು. ಇಂದ್ರನೇ ಮೊದಲಾದ ದೇವತೆಗಳನ್ನು ಮಂತ್ರಪೂರ್ವಕವಾಗಿ ಆಹ್ವಾನಿಸಿ ಅವರೆಲ್ಲರಿಗೂ ವಿಧ್ಯನುಕ್ರಮವಾಗಿ ವಿಭಾಗಗಳನ್ನು ಮಾಡಿ ವಷಟ್ಕಾರಪೂರ್ವಕವಾಗಿ ಯಜ್ಞೇಶ್ವರನಲ್ಲಿ ಹೋಮಮಾಡಿದನು.

ಅದೇ ಸಮಯಕ್ಕೆ ಸರಿಯಾಗಿ ಇಂದ್ರನು ಧಾರಾಕಾರವಾಗಿ ಮಳೆಗರೆದನು. ಪ್ರಜೆಗಳೆಲ್ಲರನ್ನೂ ಉಜ್ಜೀವನಗೊಳಿಸುತ್ತಾ ಪ್ರಜೆಗಳಿಗೆ ಬೇಕಾಗುವ ಎಲ್ಲ ಸಸ್ಯಗಳೂ ಮೊಳೆಯುವಂತೆ ಮಾಡಿದನು. ಭಗವಾನ್ ವಿಶ್ವಾಮಿತ್ರನೂ ತಪಸ್ಸಿನಿಂದ ತನ್ನ ಪಾಪಗಳೆಲ್ಲವನ್ನೂ ಕಳೆದುಕೊಂಡು ಬಹಳ ಕಾಲವು ಕಳೆದನಂತರ ಪರಮಾದ್ಭುತವಾದ ಸಿದ್ಧಿಯನ್ನು ಪಡೆದನು. ದ್ವಿಜಶ್ರೇಷ್ಠನಾದ ವಿಶ್ವಾಮಿತ್ರನು ಹೋಮಕರ್ಮವನ್ನು ಪೂರ್ಣಗೊಳಿಸಿ ಹವಿಃಶೇಷವನ್ನು ಭಕ್ಷಿಸದೆಯೇ ದೇವತೆಗಳನ್ನೂ ಪಿತೃಗಳನ್ನೂ ಸಂತುಷ್ಟಿಗೊಳಿಸಿದನು.

---

* ಪಾಠಾಂತರದಲ್ಲಿ ವಿಶ್ವಾಮಿತ್ರನು ಶ್ವಮಾಂಸವನ್ನು ಇಂದ್ರಾದಿ ದೇವತೆಗಳಿಗೆ ಅರ್ಪಿಸಿದ ಪ್ರಕರಣವಿಲ್ಲ. ಇದಕ್ಕೆ ಸಂಬಂಧಿಸಿದಂತೆ ಇರುವ ೯೪-೯೫ ಮತ್ತು ೯೬ನೆಯ ಶ್ಲೋಕಗಳು ಈ ಪ್ರಕರಣದಲ್ಲಿ ಹೆಚ್ಚು ಪಾಠವೆಂದೇ ಕಾಣುತ್ತದೆ.

ಯುಧಿಷ್ಠಿರ! ಹೀಗೆ ಆಪತ್ತಿನಲ್ಲಿ ಸಿಕ್ಕಿಕೊಂಡಿರುವ, ಜೀವವನ್ನು ರಕ್ಷಿಸಿಕೊಳ್ಳಲು ಇಚ್ಛಿಸಿರುವ ಉಪಾಯಜ್ಞನಾದ ವಿದ್ವಾಂಸನು ಸ್ವಲ್ಪವೂ ಧೈರ್ಯಗೆಡದೇ ಸಕಲವಿಧವಾದ ಉಪಾಯಗಳಿಂದಲೂ ದೀನಾವಸ್ಥೆಯಲ್ಲಿರುವ ತನ್ನನ್ನು ಉದ್ಧರಿಸಿಕೊಳ್ಳಬೇಕು. ವಿಶ್ವಾಮಿತ್ರನ ಬುದ್ಧಿಯನ್ನೇ ಅನುಸರಿಸಿ ಎಂತಹ ಆಪತ್ಕಾಲದಲ್ಲಿಯೂ ಜೀವಂತನಾಗಿರಲು ಪ್ರಯತ್ನಿಸಬೇಕು. ಜೀವಿಸಿದ್ದರೆ ಮನುಷ್ಯನು ಪುಣ್ಯಕರ್ಮಗಳನ್ನು ಮಾಡುವ ಅವಕಾಶವನ್ನು ಪಡೆದುಕೊಳ್ಳುತ್ತಾನೆ. ತತ್ಫಲವಾಗಿ ಕಲ್ಯಾಣವನ್ನೂ ಅನುಭವಿಸುತ್ತಾನೆ.

ಕೌಂತೇಯ! ಧರ್ಮಾಧರ್ಮಗಳ ವಿವೇಚನೆಯಲ್ಲಿ ಜಿತೇಂದ್ರಿಯನಾದ ವಿದ್ವಾಂಸನು ತನ್ನ ಪರಿಶುದ್ಧವಾದ ಬುದ್ಧಿಯನ್ನು ಆಶ್ರಯಿಸಿ ಯಥಾಯೋಗ್ಯವಾಗಿ ವ್ಯವಹರಿಸಬೇಕು.”

ಶರಿಗಿನೆಯ ಅಧ್ಯಾಯವು ಮುಗಿಯಿತು.

ಗಳಿ೨ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಆಪತ್ಕಾಲದಲ್ಲಿ ರಾಜಧರ್ಮದ ನಿಶ್ಚಯ ಮತ್ತು ಬ್ರಾಹ್ಮಣರ ಸೇವೆಮಾಡಲು ಯುಧಿಷ್ಠಿರನಿಗೆ ಭೀಷ್ಮನ ಆದೇಶ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಿ ಘೋರಂ ಸಮುದ್ದಿಷ್ಟಮಶ್ರದ್ಧೇಯಮಿವಾನೃತಮ್ ।
ಅಸ್ತಿ ಸ್ವಿದ್ದಸ್ಯುಮರ್ಯಾದಾ ಯಾಮಹಂ ಪರಿವರ್ಜಯೇ ॥೧॥

“ಪಿತಾಮಹ! ಮಹಾಪುರುಷರಿಗೂ ಆಪತ್ಕಾಲದಲ್ಲಿ ಸುಳ್ಳಿನಂತೆಯೇ ಅಶ್ರದ್ಧೇಯವಾದ ಘೋರಕರ್ಮವೂ ಕರ್ತವ್ಯವೇ ಆದರೆ, ದಸ್ಯುಗಳು ಮಾಡಬಾರದ ಕಾರ್ಯಕ್ಕೆ ಯಾವ ಮಿತಿಯನ್ನು ತಾನೇ ಕಲ್ಪಿಸಲು ಸಾಧ್ಯವಾಗುತ್ತದೆ? (ಮಹಾಪುರುಷರೇ ಆಪತ್ಕಾಲದಲ್ಲಿ ದಸ್ಯುಗಳ ದುಷ್ಕಾರ್ಯಗಳನ್ನೂ ಮೀರಿಸುವ ಕಾರ್ಯಗಳನ್ನು ಮಾಡಬಹುದಾದರೆ ಅದೇ ಆಪತ್ಕಾಲದಲ್ಲಿ ದಸ್ಯುಗಳ ದುಷ್ಕಾರ್ಯವನ್ನು ಸೀಮಿತಗೊಳಿಸುವುದೆಂತು?) ಅಂತಹ ಆಪತ್ಕಾಲದ ಮರ್ಯಾದೆಯನ್ನು ನಾನು ಖಂಡಿತವಾಗಿಯೂ ಪರಿತ್ಯಜಿಸು

ತ್ತೇನೆ. (ಆಪತ್ಕಾಲದಲ್ಲಿ ಧರ್ಮಾತಿಕ್ರಮಣಕ್ಕೆ ಅವಕಾಶವಿದ್ದರೂ ನಾನು ಹಾಗೆ ನಡೆದುಕೊಳ್ಳುವುದಿಲ್ಲ.)

ಸಮ್ಮುಹ್ಯಾಮಿ ವಿಷೀದಾಮಿ ಧರ್ಮೋ ಮೇ ಶಿಥಿಲೀಕೃತಃ ।
ಉದ್ಯಮಂ ನಾಧಿಗಚ್ಛಾಮಿ ಕದಾಚಿತ್ಪರಿಸಾನ್ತ್ವಯನ್ ॥೨॥

ಪಿತಾಮಹ! ನಾನು ನಿನ್ನಿಂದ ಈ ಉಪಾಖ್ಯಾನವನ್ನು ಕೇಳಿ ಮೋಹಾಭಿಭೂತನಾಗಿದ್ದೇನೆ. ಅತ್ಯಂತ ವಿಷಣ್ಣನೂ ಆಗಿದ್ದೇನೆ. ಕಟ್ಟುನಿಟ್ಟಾಗಿ ಧರ್ಮಾಚರಣೆಯನ್ನು ಮಾಡಬೇಕೆನ್ನುವ ನನ್ನ ಉತ್ಸಾಹವೇ ಶೈಥಿಲ್ಯವನ್ನು ಹೊಂದಿದೆ. (ಕುಗ್ಗಿಹೋಗಿದೆ.) ನಾನೆಷ್ಟೇ ಸಮಾಧಾನ ಮಾಡಿಕೊಳ್ಳುತ್ತಿದ್ದರೂ ಒಮ್ಮೆಯೂ ನನಗೆ ಇಂತಹ ಧರ್ಮಾಚರಣೆಯಲ್ಲಿ ಉತ್ಸಾಹವೇ ಹುಟ್ಟುತ್ತಿಲ್ಲ. ಏಕೆಂದರೆ : ಆಪತ್ಕಾಲದಲ್ಲಿಯೇ ಆದರೂ ಈ ವಿಧವಾದ ಧರ್ಮವನ್ನು ಅನುಸರಿಸಲು ನನಗೆ ಸಾಧ್ಯವಾಗುವುದೇ ಇಲ್ಲ."

ಭೀಷ್ಮನು ಹೇಳುತ್ತಾನೆ :

ನೈತಚ್ಛ್ರುತ್ವಾಗಮಾದೇವ ತವ ಧರ್ಮಾನುಶಾಸನಮ್ ।
ಪ್ರಜ್ಞಾಸಮವಹಾರೋಽಯಂ ಕವಿಭಿಃ ಸಮ್ಭೃತಂ ಮಧು ॥೩॥

"ಯುಧಿಷ್ಠಿರ! ನಾನು ವೇದ-ಶಾಸ್ತ್ರಪ್ರತಿಪಾದ್ಯವಾದ ಧರ್ಮಗಳಷ್ಟನ್ನೇ ಹಿರಿಯರಿಂದ ಕೇಳಿ ನಿನಗೆ ಉಪದೇಶ ಮಾಡುತ್ತಿಲ್ಲ. ವಿದ್ವಾಂಸರು ನಾನಾಪ್ರಕಾರವಾಗಿ ವಿಚಾರಮಾಡಿ ನಿಶ್ಚಯಿಸಿರುವ ಈ ವಿಷಯವು ಜೇನು ಹುಳುಗಳು ಬಗೆ-ಬಗೆಯ ಹೂಗಳಿಂದ ಸಂಗ್ರಹಿಸಿರುವ ಜೇನುತುಪ್ಪದಂತೆ ಸರ್ವಗ್ರಾಹ್ಯವಾಗಿದೆ. ಹೀಗೆ ಸಂಗ್ರಹಿಸಿರುವ ವೈಚಾರಿಕವಿಷಯಗಳೂ ಆಪತ್ಕಾಲದಲ್ಲಿ ಕೆಲವರಿಗಾದರೂ ಪ್ರಯೋಜನಕ್ಕೆ ಬರುತ್ತವೆ. ಇಂತಹ ವಿಷಯಗಳನ್ನು ಅವರೆಲ್ಲರೂ ಆಚರಿಸಲೇಬೇಕೆಂಬ ಭಾವನೆಯಿಂದ ಸಂಗ್ರಹಿಸಿರುವುದಿಲ್ಲ. ಆದುದರಿಂದ ಹಿಂದೆ ಹೇಳಿರುವ ಉಪಾಖ್ಯಾನದಂತೆಯೇ ನೀನು ನಡೆದುಕೊಳ್ಳಬೇಕೆಂಬ ಕಡ್ಡಾಯವೇನೂ ಇಲ್ಲ. ಅದನ್ನು ಕೇಳಿದುದಕ್ಕಾಗಿ ನೀನು ವಿಷಾದಿಸಬೇಕಾಗಿಯೂ ಇಲ್ಲ.

ಬಹ್ವ್ಯಃ ಪ್ರತಿವಿಧಾತವ್ಯಾಃ ಪ್ರಜ್ಞಾ ರಾಜ್ಞಾ ತತಸ್ತತಃ ।
ನೈಕಶಾಖೇನ ಧರ್ಮೇಣ ಯಾತ್ರೈಷಾ ಸಮ್ಪ್ರವರ್ತತೇ ॥೪॥

ರಾಜನಾದವನು ಹಲವಾರು ಕಡೆಗಳಿಂದ ಹಲವಾರು ಜನರಿಂದ ಅನೇಕ ಪ್ರಕಾರವಾದ ಜ್ಞಾನವನ್ನು ಸಂಗ್ರಹಿಸಬೇಕು. (ಕೋಕಿಲ, ವರಾಹ, ವೃಕ, ಸಿಂಹಾದಿಗಳಿಂದಲೂ ಗುಣಗಳನ್ನು ಸಂಗ್ರಹಿಸಬೇಕು.) ಒಂದೇ ಶಾಖೆಯುಳ್ಳ (ಒಂದೇ ಅಭಿಪ್ರಾಯವಿರುವ) ಧರ್ಮವನ್ನೇ ಹಿಡಿದುಕೊಂಡು ಕುಳಿತುಕೊಳ್ಳಬಾರದು. ರಾಜನು ಆಪತ್ತಿನಲ್ಲಿ ಸಿಕ್ಕಿಹಾಕಿಕೊಂಡಾಗ ಹಲವಾರು ಕಡೆಗಳಿಂದ ಸಂಗ್ರಹಿಸಿದ ಲೋಕವ್ಯವಹಾರಜ್ಞಾನವು ಪ್ರಯೋಜನಕ್ಕೆ ಬರುತ್ತದೆ. ಆತ್ಮರಕ್ಷಣೆಗೆ ಉಪಾಯವೂ ಹೊಳೆಯುತ್ತದೆ.

ಬುದ್ಧಿಸಂಜನನೋ ಧರ್ಮ ಆಚಾರಶ್ಚ ಸತಾಂ ಸದಾ ।
ಜ್ಞೇಯೋ ಭವತಿ ಕೌರವ್ಯ ಸದಾ ತದ್ವಿದ್ಧಿ ಮೇ ವಚಃ ॥೫॥

ಕೌರವ್ಯನೇ! ಧರ್ಮವೂ ಮತ್ತು ಸತ್ಪುರುಷರ ಆಚಾರಗಳೂ ಯಾವಾಗಲೂ ಜ್ಞಾನವನ್ನು ಉದ್ಬೋಧಗೊಳಿಸತಕ್ಕುವುಗಳು. ಆದುದರಿಂದ ಧರ್ಮವನ್ನೂ–ಸದಾಚಾರವನ್ನೂ ತಿಳಿದುಕೊಳ್ಳಬೇಕು. ನಾನು ಹೇಳುವ ಈ ಮಾತನ್ನು ಚೆನ್ನಾಗಿ ಮನದಟ್ಟು ಮಾಡಿಕೊ.

ಬುದ್ಧಿಶ್ರೇಷ್ಠಾ ಹಿ ರಾಜಾನಶ್ಚರನ್ತಿ ವಿಜಯೈಷಿಣಃ ।
ಧರ್ಮಃ ಪ್ರತಿವಿಧಾತವ್ಯೋ ಬುದ್ಧ್ಯಾ ರಾಜ್ಞಾ ತತಸ್ತತಃ ॥೬॥

ಶ್ರೇಷ್ಠವಾದ ಬುದ್ಧಿಯನ್ನು ಹೊಂದಿರುವ ರಾಜರು ವಿಜಯೇಚ್ಛುಗಳಾಗಿ ಸರ್ವತ್ರ ಸಂಚರಿಸುತ್ತಾರೆ. ಆದುದರಿಂದ ರಾಜನು ಹಲವಾರು ಕಡೆಗಳಿಂದ, ಹಲವಾರು ಜನರಿಂದ ಸಂಗ್ರಹಿಸಿದ ತಿಳಿವಳಿಕೆಯಿಂದ ಧರ್ಮಾಚರಣೆಯನ್ನು ಮಾಡಬೇಕು.

ನೈಕಶಾಖೇನ ಧರ್ಮೇಣ ರಾಜ್ಞೋ ಧರ್ಮೋ ವಿಧೀಯತೇ ।
ದುರ್ಬಲಸ್ಯ ಕುತಃ ಪ್ರಜ್ಞಾ ಪುರಸ್ತಾದನುಪಾಹೃತಾ ॥೭॥

ಏಕದೇಶೀಯವಾದ ಧರ್ಮದಿಂದ ರಾಜನು ರಾಜಧರ್ಮವನ್ನು ಪರಿಪಾಲಿಸುವುದಕ್ಕಾಗುವುದಿಲ್ಲ. ಅಧ್ಯಯನಕಾಲದಲ್ಲಿ ಅಶಿಕ್ಷಿತನಾದ ದುರ್ಬಲ ರಾಜನಿಗೆ ಪ್ರಜ್ಞೆಯು ಹೇಗೆತಾನೇ ಉಂಟಾದೀತು?

ಅದ್ವೈಧಜ್ಞಃ ಪಥಿ ದ್ವೈಧೇ ಸಂಶಯಂ ಪ್ರಾಪ್ತುಮರ್ಹತಿ ।
ಬುದ್ಧಿದ್ವೈಧಂ ವೇದಿತವ್ಯಂ ಪುರಸ್ತಾದೇವ ಭಾರತ ॥೮॥

ಒಂದೇ ಧರ್ಮವು ಅಥವಾ ಕರ್ಮವು ಕೆಲವು ಸಮಯಗಳಲ್ಲಿ ಧರ್ಮವಾಗಿಯೂ ಕೆಲವು ಸಮಯಗಳಲ್ಲಿ ಅಧರ್ಮವಾಗಿಯೂ ಕಾಣುತ್ತದೆ. ಎರಡು ಪ್ರಕಾರವಾದ ಈ ಸ್ಥಿತಿಯು ಇರುವುದಕ್ಕೆ–'ದ್ವೈಧ'–ಎಂದು ಹೆಸರು. ಯಾವನಿಗೆ ದ್ವೈಧಮಾರ್ಗವು ತಿಳಿಯದೋ–ಅವನು ಆ ಮಾರ್ಗದಲ್ಲಿ ಪ್ರವೇಶಿಸಿದಾಗ ಸಂಶಯಗ್ರಸ್ತನಾಗುತ್ತಾನೆ. ಆದುದರಿಂದ ದ್ವೈಧದ ಸ್ವರೂಪವನ್ನು ಬುದ್ಧಿವಂತನಾದವನು ಮೊದಲೇ ತಿಳಿದುಕೊಳ್ಳಬೇಕು. ಹಾಗಿಲ್ಲದಿದ್ದರೆ ಯಾವುದೇ ಕಾರ್ಯಮಾಡುವಾಗಲೂ ಸಂಶಯಗ್ರಸ್ತನೇ ಆಗುತ್ತಾನೆ. (ಕಳ್ಳನಿಗೆ ಶಿಕ್ಷೆ ಕೊಡುವಾಗಲೂ ಪ್ರಾಣಿಹಿಂಸೆಯಾಗುವುದೆಂಬ ಸಂಶಯವು ಬರಬಹುದು. ನಡೆಯುವಾಗಲೂ ಎಷ್ಟೋ ಪ್ರಾಣಿಗಳು ಹತವಾಗಿ ಹೋಗುವುವೆಂಬ ಭಯವುಂಟಾಗಬಹುದು. ಆದುದರಿಂದ ದ್ವೈಧೀಭಾವವನ್ನು ಮೊದಲು ತಿಳಿದುಕೊಳ್ಳಬೇಕು.)

ಪಾರ್ಶ್ವತಃ ಕರಣಂ ಪ್ರಾಜ್ಞೋ ವಿಷ್ಟಮ್ಭಿತ್ವಾ ಪ್ರಕಾರಯೇತ್ ।
ಜನಸ್ತಚ್ಚರಿತಂ ಧರ್ಮಂ ವಿಜಾನಾತ್ಯನ್ಯಥಾನ್ಯಥಾ ॥೯॥

ಪ್ರಾಜ್ಞನಾದ ರಾಜನು ಮುಂದೆ ರಾಜ್ಯದಲ್ಲಿ ಆಗಬೇಕಾದುದನ್ನು ಮೊದಲೇ ನಿಶ್ಚಯಿಸಿ ಆಪತ್ಕಾಲವು ಬಂದಾಗ ಪ್ರಜೆಗಳಿಂದ ಹೆಚ್ಚು ತೆರಿಗೆಗಳನ್ನು ಬಲಾತ್ಕಾರವಾಗಿ ತೆಗೆದುಕೊಳ್ಳಬೇಕು. ರಾಜನು ಆಪತ್ಕಾಲದಲ್ಲಿ ಹೀಗೆ ಮಾಡಿದರೆ ಜನರು ಅದನ್ನು ಧರ್ಮವೆಂದೇ ತಿಳಿಯುತ್ತಾರೆ. ಮೂರ್ಖರಾದವರು ಮಾತ್ರವೇ ಬೇರೆ ವಿಧವಾಗಿ ಭಾವಿಸುತ್ತಾರೆ. (ಈ ಶ್ಲೋಕದಲ್ಲಿರುವ ಪದಗಳಿಗೆ ಇದು ನೇರವಾದ ಅರ್ಥವಲ್ಲವಾದರೂ ವ್ಯಾಖ್ಯಾನಕಾರರ ವ್ಯಾಖ್ಯೆಯನ್ನು ಅನುಸರಿಸಿ ಅರ್ಥಮಾಡಲಾಗಿದೆ. **ಪಾರ್ಶ್ವತಃ ಪಶ್ಚಾತ್ಕರಣಂ** = ಕರಣೀಯಂ–ಮುಂದೆ ಮಾಡುವುದನ್ನು. ವಿಷ್ಟಮ್ಭಿತ್ವಾ = ನಿಶ್ಚಿತ್ಯ – ನಿಶ್ಚಯಿಸಿ **ಅಗ್ರಿಮವರ್ಷೇ ಪ್ರಜಾಭ್ಯಃ ಷಡ್ಭಾಗಸ್ಯಾರ್ಧಂ ಅಂಶಮಾತ್ರಂ ವಾ ಗ್ರಹೀಷ್ಯಾಮಿ ಇತ್ಯಭಿಸಂಧಾಯ** – ಮುಂದಿನ ವರ್ಷದಲ್ಲಿ ಪ್ರಜೆಗಳಿಂದ ನನಗೆ ಸಲ್ಲಬೇಕಾಗಿರುವ ಆರನೆಯ ಒಂದು ಭಾಗದಲ್ಲಿ ಅಂಶಮಾತ್ರವನ್ನು ತೆಗೆದುಕೊಳ್ಳುತ್ತೇನೆ–ಎಂಬುದಾಗಿ ಹೇಳಿ (ಪ್ರಜೆಗಳೊಡನೆ) ಸಂಧಾನಮಾಡಿಕೊಂಡು **ಪ್ರಕಾರಯೇತ್ = ಆಪತ್ಕಾಲೇ**

ತಮೇವ ಷಡ್ಭಾಗಂ ಸಾರ್ಧಗುಣಂ ಸಪಾದಗುಣಂ ವಾ ಪ್ರಕರ್ಷೇಣ ಗೃಹ್ಣೀಯಾತ್ ರಾಜಾದಾಯದ ಒಂದಕ್ಕೆ ಒಂದೂವರೆಯಷ್ಟು ಅಥವಾ ಒಂದೂಕಾಲರಷ್ಟು ದ್ರವ್ಯವನ್ನು ತೆಗೆದುಕೊಳ್ಳಬೇಕು. **ತತ್ಕುರ್ವನ್ಮೂಢ ದೃಷ್ಟ್ಯಾ ಅಧರ್ಮೀ ಭವತಿ**– ಹೀಗೆ ಮಾಡಿದರೆ ಮೂಢರ ದೃಷ್ಟಿಯಿಂದ ರಾಜನು ಅಧರ್ಮಿಯಾಗುತ್ತಾನೆ. **ನ ತು ಪ್ರಾಜ್ಞದೃಷ್ಟ್ಯಾ** – ಪ್ರಾಜ್ಞರ ದೃಷ್ಟಿಯಿಂದ ರಾಜನು ಅಧರ್ಮಿಯಾಗುವುದಿಲ್ಲ.)

ಅಮಿಥ್ಯಾಜ್ಞಾನಿನಃ ಕೇಚಿನ್ಮಿಥ್ಯಾವಿಜ್ಞಾನಿನಃ ಪರೇ ।
ತದ್ವೈ ಯಥಾಯಥಂ ಬುದ್ಧ್ವಾ ಜ್ಞಾನಮಾದದತೇ ಸತಾಮ್ ॥೧೦॥

ಲೋಕದಲ್ಲಿ ಕೆಲವರು ಯಥಾರ್ಥವಾದ ಜ್ಞಾನಿಗಳೂ ಆಗಿರುತ್ತಾರೆ : ಕೆಲವರು ಮಿಥ್ಯಾಜ್ಞಾನಿಗಳೂ (ಕಪಟಜ್ಞಾನಿಗಳೂ–ವಿಪರೀತಜ್ಞಾನಿಗಳೂ) ಆಗಿರುತ್ತಾರೆ. ಈ ವಿಷಯವನ್ನು ರಾಜನು ಯಥಾವತ್ತಾಗಿ ತಿಳಿದುಕೊಂಡು ಸತ್ಯಜ್ಞಾನಸಂಪನ್ನರಾದ ಸತ್ಪುರುಷರಿಂದಲೇ ಸುಜ್ಞಾನವನ್ನು ಗ್ರಹಿಸಬೇಕು.

ಪರಿಮುಷ್ಣನ್ತಿ ಶಾಸ್ತ್ರಾಣಿ ಧರ್ಮಸ್ಯ ಪರಿಪನ್ಥಿನಃ ।
ವೈಷಮ್ಯಮರ್ಥವಿದ್ಯಾನಾಂ ನಿರರ್ಥಾಃ ಖ್ಯಾಪಯನ್ತಿ ತೇ ॥೧೧॥

ಧರ್ಮದ್ರೋಹಿಗಳಾದ ನಿರ್ಧನರಾದ ಕೆಲವರು ಧರ್ಮಶಾಸ್ತ್ರಗಳಿಗೆ ವಿಪರೀತಾರ್ಥವನ್ನು ಕಲ್ಪಿಸಿ ಅವುಗಳು ಅಗ್ರಾಹ್ಯವೆಂದು ಹೇಳುತ್ತಾರೆ. (ಇಂತಹವರ ದೃಷ್ಟಿಯಲ್ಲಿ ಅರ್ಥವು ಯಾವಾಗಲೂ ಧರ್ಮಕ್ಕೆ ವಿರುದ್ಧವಾದುದು.) ಅರ್ಥವಿದ್ಯೆಗಳು ಅಪ್ರಮಾಣವೆಂದೂ (ಅಧರ್ಮಯುಕ್ತವೆಂದೂ) ಪ್ರಚಾರಮಾಡುತ್ತಾರೆ.

ಅಜಿಜೀವಿಷವೋ ವಿದ್ಯಾಂ ಯಶಃಕಾಮೌ ಸಮನ್ತತಃ ।
ತೇ ಸರ್ವೇ ನೃಪ ಪಾಪಿಷ್ಠಾ ಧರ್ಮಸ್ಯ ಪರಿಪನ್ಥಿನಃ ॥೧೨॥

ಯಾರು ಜೀವಿಕೆಗಾಗಿಯೇ ವಿದ್ಯೆಯನ್ನು ಕಲಿತು ಆ ವಿದ್ಯೆಯ ಬಲದಿಂದಲೇ ಸರ್ವತ್ರ ಯಶಸ್ಸನ್ನು ಗಳಿಸಲು ಇಚ್ಛಿಸುವರೋ ಮತ್ತು ಮನೋವಾಂಛಿತವಾದ ಪದಾರ್ಥಗಳನ್ನು ಸಂಗ್ರಹಿಸಲು ಆಸಕ್ತರಾಗಿರು

ವರೋ–ಅಂತಹವರೆಲ್ಲರೂ ಪಾಪಾತ್ಮರೂ ಮತ್ತು ಧರ್ಮದ್ರೋಹಿಗಳೂ ಆಗಿರುತ್ತಾರೆ.

ಅಪಕ್ವಮತಯೋ ಮನ್ದಾ ನ ಜಾನನ್ತಿ ಯಥಾತಥಮ್ ।
ಯಥಾ ಹ್ಯಶಾಸ್ತ್ರಕುಶಲಾಃ ಸರ್ವತ್ರಾಯುಕ್ತಿನಿಷ್ಠಿತಾಃ ॥೧೩॥

ಪರಿಪಕ್ವವಾಗದೇ ಇರುವ ಬುದ್ಧಿಯುಳ್ಳ ಮಂದಮತಿಗಳಾದ ಮೂಢರು ತತ್ತ್ವವನ್ನು ಯಥಾವತ್ತಾಗಿ ತಿಳಿದುಕೊಂಡಿರುವುದಿಲ್ಲ. ಶಾಸ್ತ್ರಜ್ಞಾನದಲ್ಲಿ ನಿಪುಣರಲ್ಲದ ಅವರು ಸರ್ವತ್ರ ಅಸಂಗತವಾದ ಯುಕ್ತಿಯನ್ನೇ ಅವಲಂಬಿಸಿರುತ್ತಾರೆ.

ಪರಿಮುಷ್ಣನ್ತಿ ಶಾಸ್ತ್ರಾಣಿ ಶಾಸ್ತ್ರದೋಷಾನುದರ್ಶಿನಃ ।
ವಿಜ್ಞಾನಮರ್ಥವಿದ್ಯಾನಾಂ ನ ಸಮ್ಯಗಿತಿ ವರ್ತತೇ ॥೧೪॥

ನಿರಂತರವೂ ಶಾಸ್ತ್ರಗಳಲ್ಲಿ ದೋಷವನ್ನೇ ಕಾಣುವ, ಸರ್ವತ್ರ ಛಿದ್ರಾನ್ವೇಷಿಗಳಾದ ಧರ್ಮದ್ರೋಹಿಗಳು ಶಾಸ್ತ್ರಗಳನ್ನು ಕದಿಯುತ್ತಾರೆ. (ಅಪಾರ್ಥಮಾಡುತ್ತಾರೆ.) ಅರ್ಥವಿದ್ಯೆಗಳ ವಿಜ್ಞಾನವನ್ನು ಸಮೀಚೀನ ವಲ್ಲವೆಂದು ತೆಗಳುತ್ತಾರೆ.

ನಿನ್ದಯಾ ಪರವಿದ್ಯಾನಾಂ ಸ್ವವಿದ್ಯಾಂ ಖ್ಯಾಪಯನ್ತಿ ಚ ।
ವಾಗಸ್ತ್ರಾ ವಾಕ್ಛುರೀಭೂತಾ ದುಗ್ಧವಿದ್ಯಾಫಲಾ ಇವ ॥೧೫॥

ವಿದ್ಯಾಫಲವನ್ನೇ ಅರೆದು ಕುಡಿದಿರುವರೋ–ಎಂಬಂತೆ ಮಾತನ್ನೇ ಅಸ್ತ್ರ-ಬಾಣಗಳನ್ನಾಗಿ ಪರಿವರ್ತಿಸಿಕೊಂಡಿರುವ ಮೂರ್ಖರು, ಇತರರಲ್ಲಿ ರುವ ವಿದ್ಯೆಯನ್ನು ದೂಷಣೆಮಾಡಿ ತಮ್ಮಲ್ಲಿರುವ ವಿದ್ಯೆಯೇ ಶ್ರೇಷ್ಠವೆಂದು ಪ್ರಚಾರಗೊಳಿಸುತ್ತಾರೆ.

ತಾನ್ವಿದ್ಯಾವಣಿಜೋ ವಿದ್ಧಿ ರಾಕ್ಷಸಾನಿವ ಭಾರತ ।
ವ್ಯಾಜೇನ ಸದ್ಭಿರ್ವಿಹಿತೋ ಧರ್ಮಸ್ತೇ ಪರಿಹಾಸ್ಯತಿ ॥೧೬॥

ಅಂತಹವರನ್ನು ವಿದ್ಯೆಯ ವ್ಯಾಪಾರಿಗಳೆಂದೂ–ರಾಕ್ಷಸರಂತಿರುವ ರೆಂದೂ ತಿಳಿ. ಸತ್ಪುರುಷರಿಂದ ವಿಹಿತವಾದ ಧರ್ಮವು ವ್ಯಾಜದಿಂದ ಆಚರಿಸಲ್ಪಟ್ಟರೆ ಹಾಳಾಗಿಹೋಗುತ್ತದೆ.

ನ ಧರ್ಮವಚನಂ ವಾಚಾ ನೈವ ಬುದ್ಧ್ಯೇತಿ ನಃ ಶ್ರುತಮ್ ।
ಇತಿ ಬಾರ್ಹಸ್ಪತಂ ಜ್ಞಾನಂ ಪ್ರೋವಾಚ ಮಘವಾ ಸ್ವಯಮ್ ॥೧೭॥

ಕೇವಲ ಶಾಸ್ತ್ರವಚನದಿಂದಾಗಲೀ ಅಥವಾ ಕೇವಲ ಬುದ್ಧಿಯಿಂದಾಗಲೀ (ತರ್ಕದಿಂದಾಗಲೀ) ಧರ್ಮದ ನಿರ್ಣಯವಾಗುವುದಿಲ್ಲವೆಂಬುದನ್ನು ನಾವು ಕೇಳಿದ್ದೇವೆ. ಶಾಸ್ತ್ರವಚನ ಮತ್ತು ತರ್ಕ–ಈ ಎರಡರ ಸಮುಚ್ಚಯದಿಂದಲೇ ಧರ್ಮದ ನಿರ್ಣಯವಾಗುತ್ತದೆ. ಇದು ಬೃಹಸ್ಪತಿಯ ಮತವಾಗಿದೆ. ಈ ವಿಷಯವನ್ನು ಇಂದ್ರನೇ ಸ್ವತಃ ಹೇಳಿದ್ದಾನೆ.

ನ ತ್ವೇವ ವಚನಂ ಕಿಂಚಿದನಿಮಿತ್ತಾದಿಹೋಚ್ಯತೇ ।
ಸುವಿನೀತೇನ ಶಾಸ್ತ್ರೇಣ ನ ವ್ಯವಸ್ಯನ್ತ್ಯಥಾಪರೇ ॥೧೮॥

ಶಾಸ್ತ್ರವು ನಿಷ್ಕಾರಣವಾಗಿ ಯಾವ ಮಾತನ್ನೂ ಹೇಳುವುದಿಲ್ಲ. ಆದರೆ ಕೆಲವರು ಯುಕ್ತಿಯುಕ್ತವಾದ ಶಾಸ್ತ್ರದಿಂದ ನಿರ್ದೇಶಿಸಲ್ಪಟ್ಟಿರುವುದನ್ನೂ ಮಾಡುವುದಿಲ್ಲ. (ಇದು ಈ ಶ್ಲೋಕಕ್ಕೆ ಸಾಮಾನ್ಯವಾದ ಅರ್ಥ. ವ್ಯಾಖ್ಯಾನಕಾರರು ಇದನ್ನು ಬಹಳವಾಗಿ ವಿವರಿಸಿ ಹೇಳಿದ್ದಾರೆ. ಅದರ ತಾತ್ಪರ್ಯವು ಹೀಗಿದೆ. **ಆತತಾಯೀ ಬ್ರಾಹ್ಮಣೋಽಪಿ** ಹನ್ತವ್ಯಃ ಆತತಾಯಿಯಾದವನು (ಶಸ್ತ್ರವನ್ನು ಹಿಡಿದು ಕೊಲ್ಲಲು ಬರುವವನು) ಬ್ರಾಹ್ಮಣನೇ ಆಗಿದ್ದರೂ ಅವನನ್ನು ಕೊಲ್ಲಬೇಕು–ಎಂಬ ಶಾಸ್ತ್ರವಚನವಿದೆ. ಅದಕ್ಕೆ ಪ್ರತಿಯಾಗಿ– **ಕಾಮತಃ ಬ್ರಾಹ್ಮಣಂ ಹನ್ತುಃ ಪ್ರಾಯಶ್ಚಿತ್ತಂ ನ ವಿದ್ಯತೇ** – ಇಚ್ಛಾಪೂರ್ವಕವಾಗಿ ಮಾಡಿದ ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವೇ ಇಲ್ಲ–ಎಂಬ ಶಾಸ್ತ್ರವಾಕ್ಯವೂ ಇದೆ. ಆದುದರಿಂದ–**ಆತತಾಯೀ ಬ್ರಾಹ್ಮಣೋಽಪಿ ಹನ್ತವ್ಯಃ**– ಎಂಬ ವಾಕ್ಯದ ಉದ್ದೇಶ ಆತತಾಯಿಯನ್ನು ಸರ್ವಥಾ ಕೊಲ್ಲಬೇಕು–ಎಂಬ ಅಭಿಪ್ರಾಯದಿಂದಲೇ ಹೊರತು ಬ್ರಾಹ್ಮಣನನ್ನು ಕೊಲ್ಲಬೇಕು ಎಂಬ ಅಭಿಪ್ರಾಯದಿಂದಲ್ಲ. ಬ್ರಾಹ್ಮಣನಲ್ಲದ ಆತತಾಯಿಯನ್ನು ಕೊಲ್ಲಬೇಕು. ಬ್ರಾಹ್ಮಣನಿಂದ ರಕ್ಷಣೆಯನ್ನು ಮಾಡಿಕೊಳ್ಳಬೇಕು. ಆ ಬ್ರಾಹ್ಮಣನಿಗೆ ತಕ್ಕ ದಂಡವನ್ನೂ ವಿಧಿಸಬೇಕು. ಆದರೆ ಯುಕ್ತಿಯುಕ್ತವಾದ ಈ ಶಾಸ್ತ್ರವಾಕ್ಯವನ್ನೂ ಕೆಲವರು ಮಾನ್ಯಮಾಡುವುದಿಲ್ಲ. **‘ಅಹಿಂಸಾ ಪರಮೋ ಧರ್ಮಃ’** – ಎಂಬ ಶಾಸ್ತ್ರವಾಕ್ಯವನ್ನೇ ಮುಖ್ಯ

ಪ್ರಮಾಣವನ್ನಾಗಿಟ್ಟುಕೊಂಡು ಅಹಿಂಸಾಶಾಸ್ತ್ರಾನುಯಾಯಿಗಳು ಆತತಾಯಿಯನ್ನು ಕೊಲ್ಲಕೂಡದು ಎನ್ನುತ್ತಾರೆ. ಆತತಾಯಿಯು ಕತ್ತಿಯನ್ನೆತ್ತಿಕೊಂಡು ಬಂದರೆ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕೇ ಹೊರತು ಅವನನ್ನು ಸಂಹಾರಮಾಡಕೂಡದು ಎಂಬುದು ಅಹಿಂಸಾವಾದಿಗಳ ಅಭಿಪ್ರಾಯವಾಗಿರುತ್ತದೆ. ಈ ವಾಕ್ಯಗಳೆಲ್ಲವೂ ಅಶಾಸ್ತ್ರೀಯ.)

ಲೋಕಯಾತ್ರಾಮಿಹೈಕೇ ತು ಧರ್ಮಂ ಪ್ರಾಹುರ್ಮನೀಷಿಣಃ ।
ಸಮುದ್ದಿಷ್ಟಂ ಸತಾಂ ಧರ್ಮಂ ಸ್ವಯಮೂಹೇತ ಪಣ್ಡಿತಃ ॥೧೯॥

ಈ ಲೋಕದಲ್ಲಿ ಕೆಲವು ವಿದ್ವಾಂಸರು ಶಿಷ್ಟಪುರುಷರಿಂದ ಪ್ರಚಲಿತವಾದ ಲೋಕಯಾತ್ರೆಗೆ (ಪ್ರಪಂಚಸ್ಥಿತಿಯು ಸರಿಯಾಗಿ ನಡೆಯುವುದಕ್ಕೆ) ಸಾಧನವಾಗುವುದನ್ನೇ ಧರ್ಮವೆನ್ನುತ್ತಾರೆ. ಆದರೆ ಪಂಡಿತನಾದವನು ಸತ್ಪುರುಷರಿಂದ ಉಪದಿಷ್ಟವಾದ ಧರ್ಮವನ್ನು ಕೂಡ ಸ್ವತಃ ಊಹಿಸಬೇಕು. (ಯುಕ್ತಿಯಿಂದ ನಿರ್ಣಯಿಸಬೇಕು.) (ಹಾಗೆ ನಿರ್ಣಯಿಸಿದ ನಂತರವೇ ಸತ್ಪುರುಷರಿಂದ ಉಪದಿಷ್ಟವಾದ ಧರ್ಮವನ್ನು ಆಚರಿಸಬೇಕು.)

ಅಮರ್ಷಾಚ್ಛಾಸ್ತ್ರಸಮ್ಮೋಹಾದವಿಜ್ಞಾನಾಚ್ಚ ಭಾರತ ।
ಶಾಸ್ತ್ರಂ ಪ್ರಾಜ್ಞಸ್ಯ ವದತಃ ಸಮೂಹೇ ಯಾತ್ಯದರ್ಶನಮ್ ॥೨೦॥

ಭರತನಂದನ! ಅಸಹನೆಯಿಂದಲೂ, ಶಾಸ್ತ್ರವಚನಗಳ ವಿಷಯದಲ್ಲಿ ಭ್ರಾಂತಿಯಿಂದಲೂ, ಚೆನ್ನಾಗಿ ತಿಳಿದುಕೊಳ್ಳದೇ ಇರುವುದರಿಂದಲೂ ಶಾಸ್ತ್ರಪ್ರವಚನವನ್ನು ಮಾಡುವ ಪಂಡಿತನ ಮಾತುಗಳು ಶ್ರೋತೃಗಳ ಸಮೂಹ ದಲ್ಲಿ ಅದೃಶ್ಯವಾಗುತ್ತವೆ. (ಯಾವ ವಿಧವಾದ ಪ್ರಭಾವವನ್ನೂ ಉಂಟು ಮಾಡುವುದಿಲ್ಲ.)

ಆಗತಾಗಮಯಾ ಬುದ್ಧ್ಯಾ ವಚನೇನ ಪ್ರಶಸ್ಯತೇ ।
ಅಜ್ಞಾನಾಜ್ಞಾನಹೇತುತ್ವಾದ್ವಚನಂ ಸಾಧು ಮನ್ಯತೇ ॥೨೧॥

ವೇದ-ಶಾಸ್ತ್ರಗಳಿಂದ ಪರಿಪೂರ್ಣವಾದ ಮತ್ತು ತರ್ಕಯುಕ್ತವಾದ ಬುದ್ಧಿಯಿಂದ ಹೇಳುವ ಶಾಸ್ತ್ರವಚನಗಳು ಎಲ್ಲರಿಂದಲೂ ಪ್ರಶಂಸಿಸಲ್ಪಡುತ್ತವೆ. ಶಾಸ್ತ್ರವಚನವು ಅಜ್ಞಾತವಾದ ವಿಷಯವನ್ನು ಜ್ಞಾಪಕಕ್ಕೆ ತರುವುದರಿಂದ

ಆ ಶಾಸ್ತ್ರವಾಕ್ಯವನ್ನೇ ಶ್ರೇಷ್ಠವಾದುದೆಂದು ಕೆಲವರು ಹೇಳುತ್ತಾರೆ. ಹೀಗೆ ಹೇಳುವುದು ಅವರ ಅಜ್ಞಾನಕ್ಕೆ ದ್ಯೋತಕವಾಗಿದೆ.

'ಶಾಸ್ತ್ರವು ಅಜ್ಞಾನಜ್ಞಾಪಕ [ತಿಳಿಯದೇ ಇರುವುದನ್ನು ತಿಳಿಸುತ್ತದೆ.] ಅದು ಸ್ವತಃಪ್ರಮಾಣ. ಅದಕ್ಕೆ ತರ್ಕದ ಯುಕ್ತಿಯಾಗಲೀ ಅಥವಾ ಮತ್ತೊಂದರ ಬೆಂಬಲವಾಗಲೀ ಬೇಕಾಗಿಲ್ಲ'–ಎಂದು ಹೇಳುವುದು ಅಜ್ಞಾನಮೂಲವಾದುದು. ಹಾಗೆಯೇ–'ಈ ಶಾಸ್ತ್ರವು ಯುಕ್ತಿವಿರುದ್ಧ ವಾದುದು. ಆದುದರಿಂದ ಇದು ಸರಿಯಲ್ಲ'–ಎಂದು ತರ್ಕಕ್ಕೇ ಪ್ರಾಧಾನ್ಯ ಕೊಡುವುದೂ ಅಜ್ಞಾನಮೂಲವಾದುದು. ಯಾವುದು ಶಾಸ್ತ್ರವಿಹಿತವೂ, ತರ್ಕಸಮ್ಮತವೂ ಆಗಿರುವುದೋ ಅದೇ ಪ್ರಶಸ್ತವಾದುದು–ಇದು ಈ ಶ್ಲೋಕದ ಒಟ್ಟು ಅಭಿಪ್ರಾಯ.

ಅನಯಾ ಹತಮೇವೇದಮಿತಿ ಶಾಸ್ತ್ರಮಪಾರ್ಥಕಮ್ ।
ದೈತೇಯಾನುಶನಾ ಪ್ರಾಹ ಸಂಶಯಚ್ಛೇದನಂ ಪುರಾ ॥೨೨॥

ಕೆಲವರು ತರ್ಕಕ್ಕೇ ಪ್ರಾಧಾನ್ಯವನ್ನು ಕೊಟ್ಟು–' ಈ ತರ್ಕಸರಣಿಯಿಂದ ಈ ಶಾಸ್ತ್ರಪಂಕ್ತಿಯು ವಿಧ್ವಸ್ತವಾಗಿದೆ. ಶಾಸ್ತ್ರವು ಅಪಾರ್ಥದಿಂದ ಕೂಡಿದೆ'–ಎಂದೆನ್ನುತ್ತಾರೆ. ಅದೂ ಅಜ್ಞಾನಮೂಲವಾದುದೇ. ಕೇವಲ ತರ್ಕದಿಂದಲೇ ಶಾಸ್ತ್ರದ ನಿರ್ಣಯವಾಗುವುದಿಲ್ಲ. ತರ್ಕ ಮತ್ತು ಆಗಮ ವಾಕ್ಯಗಳಿಂದ ಸಾಮಂಜಸ್ಯಪೂರ್ಣವಾದ ಬುದ್ಧಿಯ ಮೂಲಕವಾಗಿ ಶಾಸ್ತ್ರಾರ್ಥವನ್ನು ನಿರ್ಣಯಿಸಬೇಕಾಗಿದೆ. ಪೂರ್ವಕಾಲದಲ್ಲಿ ಈ ಸಂಶಯ ನಾಶಕವಾದ ಮಾತನ್ನು ಶುಕ್ರಾಚಾರ್ಯರೇ ದೈತ್ಯರೊಡನೆ ಹೇಳಿರುತ್ತಾರೆ.

ಜ್ಞಾನಮಪ್ಯಪದಿಶ್ಯಂ ಹಿ ಯಥಾ ನಾಸ್ತಿ ತಥೈವ ತತ್ ।
ತಂ ತಥಾ ಛಿನ್ನಮೂಲೇನ ಸನ್ನೋದಯಿತುಮರ್ಹಸಿ ॥೨೩॥

ಸಂಶಯಾತ್ಮಕವಾದ ಜ್ಞಾನವು ಇದ್ದರೂ ಇಲ್ಲದಂತೆಯೇ ಸರಿ. ಅದ ರಿಂದ ಯಾವ ಪ್ರಯೋಜನವೂ ಇಲ್ಲ. ಆದುದರಿಂದ ಸಂಶಯಾತ್ಮಕವಾದ ಈ ನಿನ್ನ ಜ್ಞಾನವನ್ನು ಮೂಲೋಚ್ಛೇದಮಾಡುವುದು ಯೋಗ್ಯವಾಗಿದೆ. (ಸಂಶಯರಹಿತವಾದ ಜ್ಞಾನಕ್ಕೆ ಆಶ್ರಯವನ್ನು ನೀಡು.)

ಅನವ್ಯವಹಿತಂ ಯೋ ವಾ ನೇದಂ ವಾಕ್ಯಮುಪಾಶ್ನುತೇ ।
ಉಗ್ರಾಯೈವ ಹಿ ಸೃಷ್ಟೋऽಸಿ ಕರ್ಮಣೇ ನ ತ್ವಮೀಕ್ಷಸೇ ॥೨೪॥

ಯುಧಿಷ್ಠಿರ! ನೀನು ನನ್ನ ಈ ನೀತಿಯುಕ್ತವಾದ ಮಾತುಗಳನ್ನು ಪರಿಗ್ರಹಿಸದೇ ಇರುವುದು ಯುಕ್ತವಲ್ಲ. ಏಕೆಂದರೆ : ಕ್ರೂರವಾದ ಕರ್ಮಗಳನ್ನು ಮಾಡಲೆಂದೇ ನೀನು ಬ್ರಹ್ಮನಿಂದ ಕ್ಷತ್ರಿಯನಾಗಿ ಸೃಷ್ಟಿಸಲ್ಪಟ್ಟಿರುವೆ. ಈ ವಿಷಯವನ್ನು ನೀನು ಗಮನಿಸಿರುವುದಿಲ್ಲ.

ಅಙ್ಗ ಮಾಮನ್ವವೇಕ್ಷಸ್ವ ರಾಜನ್ಯಾಯ ಬುಭೂಷತೇ ।
ಯಥಾ ಪ್ರಮುಚ್ಯತೇ ತ್ವನ್ಯೋ ಯದರ್ಥಂ ನ ಪ್ರಮೋದತೇ ॥೨೫॥

ವತ್ಸ! ಯುಧಿಷ್ಠಿರ! ನನ್ನ ವಿಷಯವನ್ನೇ ಪರಿಶೀಲಿಸು. ಹಿಂದೆ ನಾನೇನು ಮಾಡಿದೆನೆಂಬುದನ್ನು ಕೇಳು. ರಾಜ್ಯಾಪೇಕ್ಷಿಗಳಾಗಿದ್ದ ರಾಜರೊಡನೆ ಯುದ್ಧಮಾಡಿ ಅವರೆಲ್ಲರನ್ನೂ ಸಂಸಾರಬಂಧನದಿಂದ ಮುಕ್ತರನ್ನಾಗಿ ಮಾಡಿದೆನು. ನನ್ನ ಆ ಕಾರ್ಯವನ್ನು ಬೇರೆಯವರು ಅನುಮೋದಿ ಸುತ್ತಿರಲಿಲ್ಲ. ನನ್ನನ್ನು ರಾಜಹಿಂಸಕನೆಂದೂ, ಕ್ರೂರಿಯೆಂದೂ ನಿಂದಿಸು ತ್ತಿದ್ದರು. ಅವರುಗಳ ಮಾತನ್ನು ಲೆಕ್ಕಿಸದೇ ನಾನು ನನ್ನ ಕರ್ತವ್ಯವನ್ನು ಮಾಡುತ್ತಿದ್ದೆನು. ಹಾಗೆಯೇ ಕ್ಷತ್ರಿಯನಾಗಿ ಹುಟ್ಟಿರುವ ನೀನೂ ನಿನ್ನ ಕರ್ತವ್ಯವನ್ನು ಮಾಡು.

ಅಜೋऽಶ್ವಃ ಕ್ಷತ್ರಮಿತ್ಯೇತತ್ಸದೃಶಂ ಬ್ರಹ್ಮಣಾ ಕೃತಮ್ ।
ತಸ್ಮಾದಭೀಕ್ಷ್ಣಂ ಭೂತಾನಾಂ ಯಾತ್ರಾ ಕಾಚಿತ್ಪ್ರಸಿಧ್ಯತಿ ॥೨೬॥

ಆಡು, ಕುದುರೆ ಮತ್ತು ಕ್ಷತ್ರಿಯ–ಈ ಮೂವರನ್ನೂ ಬ್ರಹ್ಮನು ಒಂದೇ ಉದ್ದೇಶದಿಂದ ನಿರ್ಮಿಸಿರುವನು. ಈ ಮೂವರ ಮೂಲಕವಾಗಿಯೇ ಪ್ರಪಂಚದಲ್ಲಿರುವ ಸಕಲಪ್ರಾಣಿಗಳಿಗೂ ಯಾವುದಾದರೂ ರೀತಿಯಲ್ಲಿ ಜೀವನಯಾತ್ರೆಯು ಸತತವಾಗಿ ನಡೆಯುತ್ತಿರುತ್ತದೆ. ಪ್ರಜೆಗಳಿಗೆ ಪ್ರಯೋಜನವಾಗುತ್ತಿರುತ್ತದೆ. ಆಡುಗಳು ಯಜ್ಞಕ್ಕಾಗಿ, ಕುದುರೆಗಳೂ ಮತ್ತು ಕ್ಷತ್ರಿಯರೂ ಯುದ್ಧಕ್ಕಾಗಿ ಸೃಷ್ಟಿಸಲ್ಪಟ್ಟಿದ್ದಾರೆ.

ಯಸ್ತ್ವವಧ್ಯವಧೇ ದೋಷಃ ಸ ವಧ್ಯಸ್ಯಾವಧೇ ಸ್ಮೃತಃ ।
ಸಾ ಚೈವ ಖಲು ಮರ್ಯಾದಾ ಯಾಮಯಂ ಪರಿವರ್ಜಯೇತ್ ॥

ಅವಧ್ಯನಾದ ಮನುಷ್ಯನನ್ನು ವಧೆಮಾಡುವುದರಿಂದ ಯಾವ ದೋಷ ವುಂಟಾಗುವುದೋ ವಧಿಸಲು ಅರ್ಹನಾದವನನ್ನು ವಧಿಸದಿದ್ದರೂ ಅದೇ ದೋಷವೇ ಪ್ರಾಪ್ತವಾಗುತ್ತದೆ. ವಧಾರ್ಹನನ್ನು ವಧಿಸದೇ ಇರುವ ದೋಷವು ಮಾಡಬೇಕಾದ ಕರ್ತವ್ಯವನ್ನು ಮಾಡದೇ ಇರುವುದರ ಅಂತಿಮ ಘಟ್ಟವಾಗಿದೆ. ಅಂತಹ ಅಕರ್ತವ್ಯತ್ವವನ್ನು ರಾಜನು ಪರಿತ್ಯಜಿಸಬೇಕು.

ತಸ್ಮಾತ್ತೀಕ್ಷ್ಣಃ ಪ್ರಜಾ ರಾಜಾ ಸ್ವಧರ್ಮೇ ಸ್ಥಾಪಯೇತ್ತತಃ ।
ಅನ್ಯೋನ್ಯಂ ಭಕ್ಷಯನ್ತೋ ಹಿ ಪ್ರಚರೇಯುರ್ವೃಕಾ ಇವ ॥೨೮॥

ಆದುದರಿಂದ (ಸಮಯದಲ್ಲಿ) ಕ್ರೂರಸ್ವಭಾವದವನಾದ ರಾಜನೇ ಪ್ರಜೆಗಳನ್ನು ಅವರವರ ವರ್ಣಾಶ್ರಮಧರ್ಮದಲ್ಲಿರುವಂತೆ ಮಾಡಬಲ್ಲನು. ರಾಜನು ಸಾಧುಸ್ವಭಾವದವನಾಗಿದ್ದರೆ ಅವನ ಅಂಕೆಗೆ ಒಳಪಡದ ಪ್ರಜೆಗಳು ತೋಳಗಳಂತೆ ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ತಿಂದುಹಾಕುತ್ತಾ (ಕಚ್ಚಾಡುತ್ತಾ) ಸ್ವೇಚ್ಛಾಚಾರಿಗಳಾಗುತ್ತಿದ್ದರು.

ಯಸ್ಯ ದಸ್ಯುಗಣಾ ರಾಷ್ಟ್ರೇ ಧ್ವಾಂಕ್ಷಾ ಮತ್ಸ್ಯಾಞ್ಜಲಾದಿವ ।
ವಿಹರನ್ತಿ ಪರಸ್ವಾನಿ ಸ ವೈ ಕ್ಷತ್ರಿಯಪಾಂಸನಃ ॥೨೯॥

ಯಾವ ರಾಜನ ರಾಜ್ಯದಲ್ಲಿ–ಕಾಗೆಗಳು ನೀರಿನಿಂದ ಮೀನುಗಳನ್ನು ಎತ್ತಿಕೊಂಡು ಹೋಗುವಂತೆ–ದರೋಡೆಕಾರರು ಇತರರ ಐಶ್ವರ್ಯವನ್ನು ದೋಚಿಕೊಂಡು ಹೋಗುವರೋ–ಅಂತಹ ರಾಜ್ಯದ ರಾಜನು ಕ್ಷತ್ರಿಯಕುಲ ಕಳಂಕನೇ ಸರಿ.

ಕುಲೀನಾನ್ಸಚಿವಾನ್ಕೃತ್ವಾ ವೇದವಿದ್ಯಾಸಮನ್ವಿತಾನ್ ।
ಪ್ರಶಾಧಿ ಪೃಥಿವೀಂ ರಾಜನ್ಪ್ರಜಾ ಧರ್ಮೇಣ ಪಾಲಯನ್ ॥೩೦॥

ಮಹಾರಾಜ! ಸತ್ಕುಲಪ್ರಸೂತರಾದ ವೇದವಿದ್ಯಾಸಂಪನ್ನರಾದ ಪುರುಷರನ್ನು ಮಂತ್ರಿಗಳನ್ನಾಗಿ ಮಾಡಿಕೊಂಡು ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುತ್ತಾ ಭೂಮಂಡಲವನ್ನು ಅನುಶಾಸನಮಾಡು.

ವಿಹೀನಂ ಕರ್ಮಣಾ ನ್ಯಾಯಂ ಯಃ ಪ್ರಗೃಹ್ಣಾತಿ ಭೂಮಿಪಃ ।
ಉಪಾಯಸ್ಯಾವಿಶೇಷಜ್ಞಂ ತದ್ವೈ ಕ್ಷತ್ರಂ ನಪುಂಸಕಮ್ ॥೩೧॥

ಯಾವ ರಾಜನು–ಸತ್ಕರ್ಮಗಳಿಂದ ರಹಿತನಾದ, ನ್ಯಾಯಶೂನ್ಯನಾದ, ರಾಜಕಾರ್ಯಗಳನ್ನು ಸಾಧಿಸತಕ್ಕ ಉಪಾಯಗಳನ್ನು ತಿಳಿಯದಿರುವ ಪುರುಷನನ್ನು ಸಚಿವನನ್ನಾಗಿ ನಿಯಮಿಸಿಕೊಳ್ಳುತ್ತಾನೆಯೋ–ಅವನು ನಪುಂಸಕ ಕ್ಷತ್ರಿಯನೇ ಸರಿ. (ವ್ಯಾಖ್ಯಾನಕಾರರು ಈ ಶ್ಲೋಕಕ್ಕೆ ಹೀಗೆ ವಿವರಣೆ ನೀಡಿದ್ದಾರೆ: **ಅನ್ಯಾಯಂ ಕರಂ [ಷಡ್ಭಾಗಾದಧಿಕಂ]** – ಆದಾಯದ ಆರನೆಯ ಒಂದು ಭಾಗಕ್ಕಿಂತಲೂ ಹೆಚ್ಚಾಗಿ ಯಾವ ಕ್ಷತ್ರವು [ಕ್ಷತ್ರಿಯನು] ಅನ್ಯಾಯದ ರಾಜಾದಾಯವನ್ನು ತೆಗೆದುಕೊಳ್ಳುವುದೋ, **ಕರ್ಮಣಾ ಪಾಲನೇನ ಹೀನಂ ಚ ಯದ್ಭವತಿ**–ಪ್ರಜಾಪಾಲನಧರ್ಮದಿಂದ ಯಾವುದು ಹೀನವಾಗಿರುವುದೋ, **ಉಪಾಯಸ್ಯಾವಿಶೇಷಜ್ಞಂ**– ರಾಜಕಾರ್ಯಗಳನ್ನು ಸಾಧಿಸುವುದಕ್ಕೆ ತಕ್ಕುದಾದ ಉಪಾಯಗಳನ್ನು ಯಾವುದು ತಿಳಿದುಕೊಂಡಿಲ್ಲವೋ–ಆ ಕ್ಷತ್ರವು [ಆ ಕ್ಷತ್ರಿಯನು] ನಪುಂಸಕವು (ನು.)

ನೈವೋಗ್ರಂ ನೈವ ಚಾನುಗ್ರಂ ಧರ್ಮೇಣೇಹ ಪ್ರಶಸ್ಯತೇ ।
ಉಭಯಂ ನ ವ್ಯತಿಕ್ರಾಮೇದುಗ್ರೋ ಭೂತ್ವಾ ಮೃದುರ್ಭವ ॥೩೨॥

ರಾಜಧರ್ಮವು–ರಾಜನು ಅತ್ಯುಗ್ರನಾಗಿರುವುದನ್ನು ಪ್ರಶಂಸಿಸುವುದಿಲ್ಲ; ಅತಿಮೃದುವಾಗಿರುವುದನ್ನೂ ಪ್ರಶಂಸಿಸುವುದಿಲ್ಲ. ಉಗ್ರತ್ವವನ್ನಾಗಲೀ, ಮೃದುತ್ವವನ್ನಾಗಲೀ–ಪರಿತ್ಯಾಗಮಾಡಬಾರದು. ಯುಧಿಷ್ಠಿರ! ಆದುದರಿಂದ ನೀನು ಸಮಯೋಚಿತವಾಗಿ ಉಗ್ರನೂ ಆಗು ; ಮೃದುವೂ ಆಗು.

ಕಷ್ಟಃ ಕ್ಷತ್ರಿಯಧರ್ಮೋಽಯಂ ಸೌಹೃದಂ ತ್ವಯಿ ಮೇ ಸ್ಥಿತಮ್ ।
ಉಗ್ರಕರ್ಮಣಿ ಸೃಷ್ಟೋಽಸಿ ತಸ್ಮಾದ್ರಾಜ್ಯಂ ಪ್ರಶಾಧಿ ವೈ ॥೩೩॥

ಧರ್ಮಜ! ಈ ಕ್ಷತ್ರಿಯಧರ್ಮವು ಅತ್ಯಂತ ಕಷ್ಟಸಾಧ್ಯವಾದುದು. ನಿನ್ನಲ್ಲಿ ನನಗೆ ಬಹಳವಾದ ಸ್ನೇಹಭಾವವಿದೆ. ಆದುದರಿಂದಲೇ ನಿನಗೆ ಈ ವಿಷಯಗಳನ್ನು ಪುನಃ ಪುನಃ ಹೇಳುತ್ತಲೇ ಇದ್ದೇನೆ. ಉಗ್ರವಾದ ಕಾರ್ಯವನ್ನು ಮಾಡಲೆಂದೇ ವಿಧಾತನು ನಿನ್ನನ್ನು ಸೃಷ್ಟಿಸಿದ್ದಾನೆ. ಈಗ ಅದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ನೀನು ಸಮಯವರಿತು ಉಗ್ರನಾಗಿಯೂ–ಮೃದುವಾಗಿಯೂ ಇರುತ್ತಾ ರಾಜ್ಯವನ್ನು ಶಾಸನಮಾಡು.

ಅಶಿಷ್ಟನಿಗ್ರಹೋ ನಿತ್ಯಂ ಶಿಷ್ಟಸ್ಯ ಪರಿಪಾಲನಮ್ ।
ಏವಂ ಶುಕ್ರೋಽಬ್ರವೀದ್ಧೀಮಾನಾಪತ್ಸು ಭರತರ್ಷಭ ॥೩೪॥

ಭರತರ್ಷಭನೇ! ಆಪತ್ಕಾಲದಲ್ಲಿಯೂ ಕೂಡ ರಾಜನು ದುಷ್ಟಶಿಕ್ಷಣದಲ್ಲಿಯೂ–ಶಿಷ್ಟಪರಿಪಾಲನೆಯಲ್ಲಿಯೂ ಸರ್ವದಾ ನಿರತನಾಗಿರಬೇಕೆಂದು ಧೀಮಂತರಾದ ಆಚಾರ್ಯರಾದ ಶುಕ್ರರೇ ಹೇಳಿದ್ದಾರೆ."

ಯುಧಿಷ್ಠಿರನು ಹೇಳುತ್ತಾನೆ :

ಅಸ್ತಿ ಚೇದಿಹ ಮರ್ಯಾದಾ ಯಾಮನ್ಯೋ ನಾಭಿಲಙ್ಘಯೇತ್ ।
ಪೃಚ್ಛಾಮಿ ತ್ವಾಂ ಸತಾಂ ಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೩೫॥

"ಸತ್ಪುರುಷರಲ್ಲಿ ಶ್ರೇಷ್ಠನಾದವನೇ! ಪಿತಾಮಹ! ಈ ಜಗತ್ತಿನಲ್ಲಿ ಬೇರೆ ಯಾರೂ ಉಲ್ಲಂಘಿಸಲು ಸಾಧ್ಯವಾಗದಂತಹ ಯಾವುದಾದರೂ ಮರ್ಯಾದೆಯು (ಎಲ್ಲೆಯು) ಇರುವುದೇ? ಈ ನನ್ನ ಪ್ರಶ್ನೆಗೆ ಕೃಪೆ ಮಾಡಿ ಉತ್ತರಿಸು."

ಭೀಷ್ಮನು ಹೇಳುತ್ತಾನೆ :

ಬ್ರಾಹ್ಮಣಾನೇನ ಸೇವೇತ ವಿದ್ಯಾವೃದ್ಧಾಂಸ್ತಪಸ್ವಿನಃ ।
ಶ್ರುತಚಾರಿತ್ರವೃತ್ತಾಢ್ಯಾನ್ಪವಿತ್ರಂ ಹ್ಯೇತದುತ್ತಮಮ್ ॥೩೬॥

"ಯುಧಿಷ್ಠಿರ! ವಿದ್ಯೆಯಲ್ಲಿ ವೃದ್ಧರಾಗಿರುವ (ವಿದ್ಯಾಸಂಪನ್ನರಾಗಿರುವ), ತಪಸ್ವಿಗಳಾದ, ಶಾಸ್ತ್ರಜ್ಞಾನ-ಉತ್ತಮಚಾರಿತ್ರ್ಯ ಮತ್ತು ಸದಾಚಾರಗಳಿಂದ ಸಂಪನ್ನರಾಗಿರುವ ಬ್ರಾಹ್ಮಣರನ್ನೇ ಸೇವಿಸಬೇಕು. ಇದು ಉತ್ತಮೋತ್ತಮವೂ ಪರಮಪವಿತ್ರವೂ ಆದ ಕಾರ್ಯವಾಗಿದೆ.

ಯಾ ದೇವತಾಸು ವೃತ್ತಿಸ್ತೇ ಸಾಸ್ತು ವಿಪ್ರೇಷು ನಿತ್ಯದಾ ।
ಕ್ರುದ್ಧೈರ್ಹಿ ವಿಪ್ರೈಃ ಕರ್ಮಾಣಿ ಕೃತಾನಿ ಬಹುಧಾ ನೃಪ ॥೩೭॥

ನೀನು ದೇವತೆಗಳ ವಿಷಯದಲ್ಲಿ ಹೇಗೆ ವ್ಯವಹರಿಸುವೆಯೋ–ಹಾಗೆಯೇ ಬ್ರಾಹ್ಮಣರ ವಿಷಯದಲ್ಲಿಯೂ ಸರ್ವಕಾಲಗಳಲ್ಲಿಯೂ ವ್ಯವಹರಿಸಬೇಕು. ಏಕೆಂದರೆ : ಬ್ರಾಹ್ಮಣರು ಕ್ರುದ್ಧರಾಗಿ ಅನೇಕ ಪ್ರಕಾರವಾದ ಅದ್ಭುತಕರ್ಮಗಳನ್ನು ಮಾಡಿರುತ್ತಾರೆ.

ಪ್ರೀತ್ಯಾ ಯಶೋ ಭವೇನ್ಮುಖ್ಯಮಪ್ರೀತ್ಯಾ ಪರಮಂ ಭಯಮ್ ।
ಪ್ರೀತ್ಯಾ ಹ್ಯಮೃತವದ್ವಿಪ್ರಾಃ ಕ್ರುದ್ಧಾಶ್ಚೈವ ವಿಷಂ ಯಥಾ ॥೩೮॥

ಬ್ರಾಹ್ಮಣರು ಪ್ರಸನ್ನರಾದರೆ ಯಶಸ್ಸು ವಿಸ್ತಾರಗೊಳ್ಳುತ್ತದೆ. ಅಪ್ರಸನ್ನರಾದರೆ ಮಹಾಭಯವುಂಟಾಗುತ್ತದೆ. ಸುಪ್ರೀತರಾದ ಬ್ರಾಹ್ಮಣರು ಅಮೃತಪ್ರಾಯರಾಗುತ್ತಾರೆ. ಕ್ರುದ್ಧರಾದ ಬ್ರಾಹ್ಮಣರು ವಿಷಪ್ರಾಯರಾಗು ತ್ತಾರೆ. (ಯಾರೂ ಉಲ್ಲಂಘಿಸಕೂಡದಂತಹ ಮರ್ಯಾದೆಯು ಇದೇ ಆಗಿದೆ.)"

೧೪೨ನೆಯ ಅಧ್ಯಾಯವು ಮುಗಿಯಿತು.

೧೪೩ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಶರಣಾಗತನ ರಕ್ಷಣೆಯ ವಿಷಯದಲ್ಲಿ
ವ್ಯಾಧ-ಕಪೋತಗಳ ಪ್ರಸಂಗ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಶರಣಂ ಪಾಲಯಾನಸ್ಯ ಯೋ ಧರ್ಮಸ್ತಂ ವದಸ್ವ ಮೇ ॥೧॥

"ಮಹಾಪ್ರಾಜ್ಞನೇ! ಸರ್ವಶಾಸ್ತ್ರವಿಶಾರದನೇ! ಪಿತಾಮಹ! ಶರಣಾಗತರನ್ನು ರಕ್ಷಿಸುವವನಿಗೆ ಯಾವ ಧರ್ಮವು ಪ್ರಾಪ್ತವಾಗುತ್ತದೆಂಬು ದನ್ನು ಹೇಳು."

ಭೀಷ್ಮನು ಹೇಳುತ್ತಾನೆ :

ಮಹಾನ್ಧರ್ಮೋ ಮಹಾರಾಜ ಶರಣಾಗತಪಾಲನೇ ।
ಅರ್ಹಃ ಪ್ರಷ್ಟುಂ ಭವಾಂಶ್ಚೈವ ಪ್ರಶ್ನಂ ಭರತಸತ್ತಮ ॥೨॥

"ಭರತಶ್ರೇಷ್ಠನೇ! ಶರಣಾಗತರ ರಕ್ಷಣೆಯಲ್ಲಿ ಮಹತ್ತಾದ ಧರ್ಮವಿರು ವುದು. ನೀನು ಇಂತಹ ಪ್ರಶ್ನೆಯನ್ನು ಕೇಳಲು ಅಧಿಕಾರಿಯೂ ಆಗಿರುವೆ.

ಶಿಬಿಯೇ ಮೊದಲಾದ ಮಹಾತ್ಮರಾದ ರಾಜರು ಶರಣಾಗತರನ್ನು ಪರಿಪಾಲಿಸಿ (ಶರಣಾಗತರಿಗೆ ರಕ್ಷಣೆಯನ್ನು ನೀಡಿ) ಪರಮಸಿದ್ಧಿಯನ್ನು ಪಡೆದಿರುವರು. ಒಂದು ಕಪೋತವು, ರಕ್ಷಣೆಯನ್ನು ಅಪೇಕ್ಷಿಸಿ ಬಂದ ಶತ್ರು

ವಿಗೆ ಯಥಾಯೋಗ್ಯವಾದ ಸತ್ಕಾರವನ್ನು ಮಾಡಿದುದಲ್ಲದೇ, ತನ್ನ ಮಾಂಸವನ್ನೇ ತಿನ್ನಲೂ ಆಹ್ವಾನಿಸಿತೆಂಬ ಆಖ್ಯಾನವನ್ನು ನಾವು ಕೇಳಿದ್ದೇವೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ಕಪೋತೇನ ಪುರಾ ಶತ್ರುಃ ಶರಣಮಾಗತಃ ।
ಸ್ವಮಾಂಸಂ ಭೋಜಿತುಂ ಕಾಂ ಚ ಗತಿಂ ಲೇಭೇ ಸ ಭಾರತ ॥೩॥

"ಭರತನಂದನ! ಹಿಂದೆ ಶರಣಾಗತನಾದ ಶತ್ರುವಿಗೆ ಕಪೋತವು ತನ್ನ ಮಾಂಸವನ್ನು ಹೇಗೆ ತಿನ್ನಿಸಿತು? ಹೀಗೆ ಮಾಡಿದುದರಿಂದ ಅದಕ್ಕೆ ಎಂತಹ ಸದ್ಗತಿಯು ಲಭಿಸಿತು?"

ಪಿತಾಮಹನು ಹೇಳುತ್ತಾನೆ :

"ಯುಧಿಷ್ಠಿರ! ಹಿಂದೆ ಭಗವಾನ್ ಪರಶುರಾಮನು ಮುಚುಕುಂದ ಮಹಾರಾಜನಿಗೆ ಹೇಳಿದ್ದ, ಶ್ರವಣಮಾತ್ರದಿಂದಲೇ ಸರ್ವಪಾಪಗಳನ್ನೂ ಪರಿಹರಿಸುವ ದಿವ್ಯವಾದ ಈ ಕಥೆಯನ್ನು ಕೇಳು :

ಪುರುಷರ್ಷಭನೇ! ಹಿಂದೆ ಮುಚುಕುಂದರಾಜನು ಪರಶುರಾಮನನ್ನು ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಇದೇ ವಿಧವಾದ ಪ್ರಶ್ನೆಯನ್ನೇ ಕೇಳಿದನು. ಉತ್ತರವನ್ನು ತಿಳಿಯಲು ಬಹಳ ಉತ್ಸುಕನಾಗಿದ್ದ ಮುಚುಕುಂದರಾಜನಿಗೆ ಪೂಜ್ಯನಾದ ಪರಶುರಾಮನು ಕಪೋತಪಕ್ಷಿಗೆ ಸದ್ಗತಿಯು ಪ್ರಾಪ್ತವಾದ ಈ ಕಥೆಯನ್ನು ಹೇಳತೊಡಗಿದನು :

"ಮಹಾಬಾಹುವೇ! ಧರ್ಮದ ನಿರ್ಣಯದಿಂದ ಕೂಡಿರುವ, ಅರ್ಥದಿಂದಲೂ, ಕಾಮದಿಂದಲೂ ಸಂಪನ್ನವಾಗಿರುವ, ನಾನು ಹೇಳಲಿರುವ ಈ ಕಥೆಯನ್ನು ಏಕಾಗ್ರಚಿತ್ತನಾಗಿ ಕೇಳು :

ದೊಡ್ಡದಾದೊಂದು ಕಾಡಿನಲ್ಲಿ ಭಯಂಕರನಾದೊಬ್ಬ ಬೇಡನು ನಾಲ್ಕು ದಿಕ್ಕುಗಳಲ್ಲಿಯೂ ಸುತ್ತಾಡುತ್ತಿದ್ದನು. ಅವನು ಅತ್ಯಂತದುರಾಚಾರಿಯಾಗಿದ್ದನು. ಪೃಥ್ವಿಯಲ್ಲವನು ಅಂತಕನಿಗೆ ಸಮಾನನಾಗಿಯೇ ಇದ್ದನು. ಕೋಲಜಾತಿಯ ಕಾಗೆಯಂತೆ ಅವನು ಕಪ್ಪಾದ ಶರೀರಕಾಂತಿಯಿಂದ ಕೂಡಿದ್ದನು. ರಕ್ತಾಕ್ಷನಾಗಿದ್ದನು. ಸಾಕ್ಷಾತ್ ಕಾಲಪುರುಷನಂತಿದ್ದನು. ಅವನಿಗೆ ದೀರ್ಘವಾದ ಮೊಣಕಾಲುಗಳಿದ್ದುವು. ಹೆಜ್ಜೆಗಳು ಸಣ್ಣದಾಗಿ

ದ್ದುವು. ವಿಶಾಲವಾದ ಮುಖವಿದ್ದಿತು. ಅಗಲವಾದ ದವಡೆಯಿದ್ದಿತು. ಅವನಿಗೆ ಸ್ನೇಹಿತರಾಗಲೀ ಸಂಬಂಧಿಗಳಾಗಲೀ ಯಾರೂ ಇರಲಿಲ್ಲ. ಅವನು ಮಹಾಕ್ರೂರಕರ್ಮಿಯಾಗಿದ್ದುದರಿಂದ ಸುಹೃದ್ಬಂಧುಗಳೆಲ್ಲರೂ ಅವನನ್ನು ಪರಿತ್ಯಜಿಸಿದ್ದರು.

ನರಃ ಪಾಪಸಮಾಚಾರಸ್ತ್ಯಕ್ತವ್ಯೋ ದೂರತೋ ಬುಧೈಃ ।
ಆತ್ಮಾನಂ ಯೋಽಭಿಸಂಧತ್ತೇ ಸೋಽನ್ಯಸ್ಯ ಸ್ಯಾತ್ಕಥಂ ಹಿತಃ ॥೧೩॥

ವಿದ್ವಾಂಸರು ಪಾಪಕರ್ಮಿಗಳನ್ನು ಬಹಳ ದೂರದಿಂದಲೇ ಪರಿತ್ಯಜಿಸಬೇಕು. ತನ್ನನ್ನೇ ವಂಚನೆಮಾಡಿಕೊಳ್ಳತಕ್ಕವನು ಬೇರೆಯವರಿಗೆ ಹಿತವನ್ನು ಹೇಗೆತಾನೇ ಉಂಟುಮಾಡುವನು?

ಯೇ ನೃಶಂಸಾ ದುರಾತ್ಮಾನಃ ಪ್ರಾಣಿಪ್ರಾಣಹರಾ ನರಾಃ ।
ಉದ್ವೇಜನೀಯಾ ಭೂತಾನಾಂ ವ್ಯಾಲಾ ಇವ ಭವನ್ತಿ ತೇ ॥೧೪॥

ಕ್ರೂರಿಗಳಾದ, ದುರಾತ್ಮರಾದ, ಪ್ರಾಣಿಗಳ ಪ್ರಾಣಗಳನ್ನು ಹರಣಮಾಡುವುದರಲ್ಲಿಯೇ ಆಸಕ್ತರಾದ ಮನುಷ್ಯರು ಸರ್ಪಗಳಂತೆ ಯಾವಾಗಲೂ ಸಮಸ್ತಪ್ರಾಣಿಗಳಿಗೂ ಉದ್ವೇಗವನ್ನೇ (ಭಯವನ್ನೇ) ಉಂಟುಮಾಡುತ್ತಿರುತ್ತಾರೆ.

ಮಹಾಕ್ರೂರಿಯಾದ ಆ ಬೇಡನು ಅನುದಿನವೂ ಪಕ್ಷಿಗಳನ್ನು ಹಿಡಿಯುವ ಬಲೆಯನ್ನು ತೆಗೆದುಕೊಂಡು ಅರಣ್ಯಕ್ಕೆ ಹೋಗಿ ನೂರಾರು ಪಕ್ಷಿಗಳನ್ನು ಹಿಡಿದು ವಿಕ್ರಯಿಸುತ್ತಿದ್ದನು. ಅದು ಅವನ ದಿನನಿತ್ಯದ ಕೆಲಸವಾಗಿದ್ದಿತು. ದುರಾತ್ಮನಾದ ಬೇಡನಿಗೆ ಅದೇ ವೃತ್ತಿಯಲ್ಲಿಯೇ ಬಹಳ ಕಾಲವು ಕಳೆದುಹೋಯಿತು. ಆದರೂ ಆ ಕ್ರೂರಿಯು ತಾನು ಮಾಡುತ್ತಿರುವುದು ಅಧರ್ಮದ ಕಾರ್ಯವೆಂಬುದನ್ನು ಮಾತ್ರ ಮನಗಾಣಲಿಲ್ಲ. ಸದಾಕಾಲದಲ್ಲಿಯೂ ಪತ್ನಿಯೊಡನೆ ಪಕ್ಷಿಗಳ ಬೇಟೆಗಾಗಿ ಅರಣ್ಯದಲ್ಲಿ ಸಂಚರಿಸುತ್ತಿದ್ದ, ದೈವಯೋಗದಿಂದ ವಿಮೂಢನಾಗಿದ್ದ ಅವನಿಗೆ ಆ ಕ್ರೂರ ವೃತ್ತಿಯನ್ನು ಬಿಟ್ಟು ಬೇರೆಯ ವೃತ್ತಿಯಲ್ಲಿ ಆಸಕ್ತಿಯೇ ಹುಟ್ಟಲಿಲ್ಲ. ಅವನೊಮ್ಮೆ ಹೀಗೆಯೇ ಅರಣ್ಯದಲ್ಲಿ ಸಂಚರಿಸುತ್ತಿರುವಾಗ–ಅರಣ್ಯದಲ್ಲಿರುವ

ವೃಕ್ಷಗಳೆಲ್ಲವನ್ನೂ ಬುಡಮೇಲುಮಾಡಿಬಿಡುವಂತಹ ಪ್ರಚಂಡವಾದ ಬಿರುಗಾಳಿಯು ಬೀಸತೊಡಗಿತು. ಆಕಾಶವು ಕಾರ್ಮುಗಿಲುಗಳಿಂದ ತುಂಬಿಹೋಗಿ, ಮಿಂಚುಗಳ ಸಮೂಹದಿಂದ ಪ್ರಕಾಶಮಾನವಾಗಿದ್ದಿತು. ಸಮುದ್ರವು ನೌಕೆಗಳ ಸಮುದಾಯದಿಂದ ತುಂಬಿಹೋಗುವಂತೆ–ಆಕಾಶವು ಕ್ಷಣಮಾತ್ರದಲ್ಲಿ ನೀಲಮೇಘಗಳಿಂದ ತುಂಬಿಹೋಯಿತು. ನೀರಿನ ಧಾರೆಗಳ ಸಮೂಹಗಳೊಡನೆ ಆಕಾಶವನ್ನು ಪ್ರವೇಶಿಸಿದ ದೇವೇಂದ್ರನು ಕ್ಷಣಮಾತ್ರ ದಲ್ಲಿ ಭೂಮಂಡಲವನ್ನು ನೀರಿನಿಂದ ತುಂಬಿಬಿಟ್ಟನು. ಜಲಧಾರೆಗಳಿಂದ ವ್ಯಾಪ್ತವಾಗಿದ್ದ ಆ ಕಾಲದಲ್ಲಿ ಶೀತದಿಂದ ಪೀಡಿತನಾದ ಬೇಡನು ಬುದ್ಧಿಗೆಟ್ಟು ವ್ಯಾಕುಲಹೃದಯನಾಗಿ ಆ ಅರಣ್ಯದಲ್ಲಿ ಸುತ್ತಾಡುತ್ತಿದ್ದನು. ಬೇಡನು ನಡೆದುಹೋಗುತ್ತಿದ್ದ ಅರಣ್ಯಮಾರ್ಗವು ನೀರಿನಿಂದ ಸಂಪೂರ್ಣವಾಗಿ ಮುಚ್ಚಿಹೋಗಿದ್ದುದರಿಂದ ಅವನಿಗೆ ತಾನು ಹೋಗುತ್ತಿರುವ ಮಾರ್ಗದಲ್ಲಿ ಹಳ್ಳವೆಲ್ಲಿದೆ–ತಿಟ್ಟೆಲ್ಲಿದೆ?–ಎಂಬುದಾವುದೂ ತಿಳಿಯುತ್ತಿರಲಿಲ್ಲ. ಮಳೆಯ ರಭಸದಿಂದ ಅನೇಕಪಕ್ಷಿಗಳು ಅಪ್ಪಳಿಸಲ್ಪಟ್ಟುವುಗಳಾಗಿ ಗೂಡುಗಳಲ್ಲಿ ಅಡಗಿಕೊಂಡುವು. ಮೃಗ-ಸಿಂಹ-ವರಾಹಗಳು ನೀರಿಲ್ಲದ ಎತ್ತರವಾದ ಸ್ಥಳವನ್ನಾಶ್ರಯಿಸಿ ಮಲಗಿದ್ದುವು. ಮಹತ್ತರವಾದ ಗಾಳಿಯಿಂದಲೂ ಮತ್ತು ಮಳೆಯ ವೇಗದಿಂದಲೂ ಅರಣ್ಯದಲ್ಲಿದ್ದ ಪ್ರಾಣಿಗಳು ಭಯಗೊಂಡುವು. ಅರಣ್ಯದಲ್ಲಿದ್ದ ಪ್ರಾಣಿಗಳೆಲ್ಲವೂ ಭಯದಿಂದಲೂ ಮತ್ತು ಹಸಿವಿನಿಂದಲೂ ಪೀಡಿಸಲ್ಪಟ್ಟುವುಗಳಾಗಿ ಹಿಂಡು-ಹಿಂಡಾಗಿ (ಒಂದು ಕಡೆಯಿಂದ ಮತ್ತೊಂದು ಕಡೆಗೆ) ಸುತ್ತುತ್ತಿದ್ದುವು.

ಚಳಿಯಿಂದ ಪೀಡಿತವಾದ ಅವಯವಗಳಿಂದ ಕೂಡಿದ್ದ, ಕ್ರೂರಿಯಾದ ಆ ಬೇಡನಿಗೆ ಮುಂದೆ ಹೋಗಲೂ ಸಾಧ್ಯವಾಗಲಿಲ್ಲ ; ನಿಂತಲ್ಲಿಯೇ ನಿಲ್ಲಲೂ ಸಾಧ್ಯವಾಗಲಿಲ್ಲ. ಆ ಸಮಯದಲ್ಲವನು ನೆಲದ ಮೇಲೆ ಬಿದ್ದಿದ್ದ, ಚಳಿಯಿಂದ ನಡುಗುತ್ತಿದ್ದ ಒಂದು ಹೆಣ್ಣು ಕಪೋತಪಕ್ಷಿಯನ್ನು ನೋಡಿದನು. ಪಾಪಿಷ್ಠನಾದ ಆ ಬೇಡನು ತಾನೂ ಚಳಿಯಿಂದ ನಡುಗುತ್ತಿದ್ದರೂ ಗಡ-ಗಡನೆ ನಡುಗುತ್ತಿದ್ದ ಆ ಕಪೋತಪಕ್ಷಿಯನ್ನು ಹಿಡಿದೆತ್ತಿ ಪಂಜರದಲ್ಲಿರಿಸಿಕೊಂಡನು. ತಾನು ದುಃಖದಿಂದ ಪೀಡಿತನಾಗಿದ್ದರೂ ಆ ಬೇಡನು ಇತರರಿಗೂ (ಕಪೋತಕ್ಕೂ) ದುಃಖವನ್ನೇ ಉಂಟುಮಾಡಿದನು. ಸರ್ವದಾ

ಪಾಪಕಾರ್ಯದಲ್ಲಿಯೇ ನಿರತನಾಗಿದ್ದ ಆ ಪಾಪಿಷ್ಠನು ಆ ಸಮಯದಲ್ಲಿಯೂ ಪಾಪಕಾರ್ಯವನ್ನೇ ಮಾಡಿದನು.

ಅನಂತರ ಬೇಡನು ಅರಣ್ಯದಲ್ಲಿದ್ದ ವೃಕ್ಷಗಳ ಸಮೂಹದಲ್ಲಿ ಮೇಘ ದಂತೆ ದಟ್ಟವಾಗಿಯೂ ನೀಲವರ್ಣದ್ದಾಗಿಯೂ ಇದ್ದ ವಿಶಾಲವಾದ ವೃಕ್ಷ ವೊಂದನ್ನು ನೋಡಿದನು. ನೆಳಲನ್ನೂ, ವಾಸಸ್ಥಳವನ್ನೂ ಮತ್ತು ಹಣ್ಣು ಗಳನ್ನೂ ಅಪೇಕ್ಷಿಸಿ ಅನೇಕ ಪಕ್ಷಿಗಳು ಆ ವೃಕ್ಷವನ್ನು ಆಶ್ರಯಿಸಿಕೊಂಡಿದ್ದುವು. ಪರೋಪಕಾರಾರ್ಥವಾಗಿಯೇ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಸಾಧುವಿನಂತೆ ಆ ಮಹಾವೃಕ್ಷವಿದ್ದಿತು.

ಮತ್ತೊಂದು ಕ್ಷಣದಲ್ಲಿಯೇ ಗಾಳಿ-ಮಳೆಗಳು ನಿಂತುವು. ಆಕಾಶದಲ್ಲಿದ್ದ ಮೋಡಗಳು ಕರಗಿದುವು. ವಿಕಸಿತವಾದ ಕುಮುದಪುಷ್ಪಗಳಿಂದ ಶೋಭಾಯಮಾನವಾಗಿ ಕಾಣುವ ಸರೋವರದಂತೆ ನಿರ್ಮಲವಾದ ಆಕಾಶವು ನಕ್ಷತ್ರಗಳಿಂದ ಕೂಡಿ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಶೀತದಿಂದ ವಿಹ್ವಲನಾಗಿದ್ದ ಬೇಡನು ಆಕಾಶವು ಮೋಡಗಳಿಂದ ರಹಿತ ವಾದುದನ್ನೂ ಗಾಢವಾದ ಅಂಧಕಾರವು ಆವರಿಸಿರುವುದನ್ನೂ ಗಮನಿಸಿ ನಾಲ್ಕು ದಿಕ್ಕುಗಳನ್ನೂ ನೋಡುತ್ತಾ–ಆ ಸ್ಥಳದಿಂದ ತನ್ನ ಮನೆಯು ಬಹಳ ದೂರದಲ್ಲಿದೆ ಎಂಬುದನ್ನು ಮನಗಂಡು–ಆ ರಾತ್ರಿಯನ್ನು ದೊಡ್ಡದಾಗಿದ್ದ ಆ ವೃಕ್ಷದ ಬುಡದಲ್ಲಿಯೇ ಕಳೆಯಲು ನಿಶ್ಚಯಿಸಿದನು. ಬದ್ಧಾಂಜಲಿಯಾಗಿ ನಮಸ್ಕಾರ ಮಾಡಿ ಆ ಮಹಾವೃಕ್ಷವನ್ನು ಉದ್ದೇಶಿಸಿ ಹೇಳಿದನು :

ಶರಣಂ ಯಾಮಿ ಯಾನ್ಯಸ್ಮಿನ್ದೈವತಾನಿ ವನಸ್ಪತೌ ॥೩೨॥

"ಈ ವೃಕ್ಷದಲ್ಲಿರುವ ದೇವತೆಗಳೆಲ್ಲರಿಗೂ ನಾನು ಶರಣಾಗತ ನಾಗುತ್ತೇನೆ."

ಅನಂತರ ಅತ್ಯಂತ ದುಃಖಿತನಾಗಿದ್ದ ಆ ಬೇಡನು ತಲೆಯಡಿಗೆ ಒಂದು ಕಲ್ಲನ್ನಿಟ್ಟುಕೊಂಡು ತರಗೆಲೆಗಳನ್ನೇ ದಟ್ಟವಾಗಿ ಹರಡಿಕೊಂಡು ನೆಲದ ಮೇಲೆ ಮಲಗಿದನು."

೧೪೩ನೆಯ ಅಧ್ಯಾಯವು ಮುಗಿಯಿತು.

ಕಪೋತದಿಂದ ತನ್ನ ಪತ್ನಿಯ ಗುಣಗಾನ : ಪತಿವ್ರತಾಸ್ತ್ರೀಯ ಪ್ರಶಂಸೆ

ಪಾರಿಕ್ಷಿತ! ಭೀಷ್ಮನು, ಭಗವಂತನಾದ ಪರಶುರಾಮನು ಮುಚುಕುಂದನಿಗೆ ಹೇಳಿದ ಕಥೆಯನ್ನು ಮುಂದುವರಿಸುತ್ತಾ ಹೇಳುತ್ತಾನೆ :

"ಮಹಾರಾಜ! ಅದೇ ಮರದ ರೆಂಬೆಯ ಮೇಲೆ ಬಹಳ ದಿವಸ ಗಳಿಂದ ಒಂದು ಕಪೋತವು ತನ್ನ ಸಂಗಾತಿಗಳೊಡನೆ ವಾಸಮಾಡಿಕೊಂಡಿದ್ದಿತು. ಅದರ ರೆಕ್ಕೆಗಳು ಚಿತ್ರ-ವಿಚಿತ್ರವಾಗಿದ್ದುವು. ಆಹಾರವನ್ನು ತರುವ ಸಲುವಾಗಿ ಮುಂಜಾನೆ ಹೋಗಿದ್ದ ಆ ಕಪೋತದ ಪತ್ನಿಯು ರಾತ್ರಿಯಾದರೂ ಹಿಂದಿರುಗಲೇ ಇಲ್ಲ. ಗಾಢವಾದ ರಾತ್ರಿಯು ಸನ್ನಿಹಿತವಾದುದನ್ನು ನೋಡಿ ರೆಂಬೆಯ ಮೇಲೆ ಕುಳಿತಿದ್ದ ಗಂಡು ಕಪೋತವು ಪರಿತಪಿಸತೊಡಗಿತು. 'ಅಯ್ಯೋ! ಇಂದು ದೊಡ್ಡ ಬಿರುಗಾಳಿಯೂ ಎದ್ದಿದ್ದಿತು. ವಿಶ್ವವನ್ನೇ ಕೊಚ್ಚಿಕೊಂಡು ಹೋಗುವಂತಹ ಮಳೆಯೂ ಸುರಿಯಿತು. ಬೆಳಿಗ್ಗೆ ಹೋಗಿದ್ದ ನನ್ನ ಪತ್ನಿಯು ಇನ್ನೂ ಹಿಂದಿರುಗಲೇ ಇಲ್ಲ. ಇದುವರೆಗೂ ಅವಳು ಹಿಂದಿರುಗದಿರಲು ಕಾರಣವೇನಿರಬಹುದು? ಈ ಮಹಾರಣ್ಯದಲ್ಲಿ ನನ್ನ ಭಾರ್ಯೆಯು ನಿಜವಾಗಿಯೂ ಕ್ಷೇಮದಿಂದಿರುವಳೇ? ಅವಳಿಲ್ಲದಿರುವ ಈ ಮನೆಯು ನನಗೆ ಶೂನ್ಯವಾಗಿ ಕಾಣುತ್ತಿದೆ.

ಪುತ್ರಪೌತ್ರವಧೂಭೃತ್ಯೈರಾಕೀರ್ಣಮಪಿ ಸರ್ವತಃ ।
ಭಾರ್ಯಾಹೀನಂ ಗೃಹಸ್ಥಸ್ಯ ಶೂನ್ಯಮೇವ ಗೃಹಂ ಭವೇತ್ ॥೫॥

ಗೃಹಸ್ಥನ ಮನೆಯು ಸರ್ವತ್ರ ಮಗ-ಮೊಮ್ಮಗ-ಸೊಸೆ ಮತ್ತು ಸೇವಕರಿಂದ ತುಂಬಿದ್ದರೂ ಭಾರ್ಯೆಯಿಂದ ರಹಿತವಾಗಿದ್ದರೆ ಅದೊಂದು ಶೂನ್ಯಗೃಹವೇ ಸರಿ.

ನ ಗೃಹಂ ಗೃಹಮಿತ್ಯಾಹುರ್ಗೃಹಿಣೀ ಗೃಹಮುಚ್ಯತೇ ।
ಗೃಹಂ ತು ಗೃಹಿಣೀಹೀನಮರಣ್ಯಸದೃಶಂ ಮತಮ್ ॥೬॥

ವಾಸ್ತವವಾಗಿ ಗೃಹವನ್ನು ' ಗೃಹ ' ಎಂದು ಯಾರೂ ಹೇಳುವುದಿಲ್ಲ.

ಮನೆಯಲ್ಲಿರುವ ಗೃಹಿಣಿಯನ್ನೇ 'ಗೃಹ' ಎನ್ನುತ್ತಾರೆ. (ಗೃಹಿಣಿಯು ಮನೆಯಲ್ಲಿದ್ದರೆ ಅಂತಹ ಮನೆಗೆ 'ಗೃಹ' ಎಂಬ ಪೂರ್ಣಾರ್ಥವು ಬರುತ್ತದೆ.) ಗೃಹಿಣಿಯಿಂದ ವಿಹೀನವಾದ ಗೃಹವು ಅರಣ್ಯಕ್ಕೆ ಸಮಾನವೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. (ಗೃಹಿಣಿಯಿದ್ದರೆ ಮನೆಯು ಗೃಹವೆನಿಸಿಕೊಳ್ಳುತ್ತದೆ. ಗೃಹಿಣಿಯಿಲ್ಲವಾದರೆ ಅದೊಂದು ಮಹಾಸೌಧವೇ ಆಗಿದ್ದರೂ–ಅರಣ್ಯವೆನಿಸಿಕೊಳ್ಳುತ್ತದೆ.)

ಕೆಂಪಾದ ಕಡೆಗಣ್ಣುಗಳಿಂದ ಕೂಡಿರುವ, ಚಿತ್ರಿತವಾದ ಶರೀರವುಳ್ಳ, ಮಧುರವಾದ ಧ್ವನಿಯಿಂದ ಕೂಡಿರುವ ನನ್ನ ಪತ್ನಿಯು ಇಂದೇನಾದರೂ ಬಾರದಿದ್ದರೆ ನನ್ನ ಬದುಕಿಗೆ ಪ್ರಯೋಜನವೇನಿದೆ?

ನ ಭುಙ್ಕ್ತೇ ಮಯ್ಯಭುಕ್ತೇ ಯಾ ನಾಸ್ನಾತೇ ಸ್ನಾತಿ ಸುವ್ರತಾ ।
ನಾತಿಷ್ಠತ್ಯುಪತಿಷ್ಠೇತ ಶೇತೇ ಚ ಶಯಿತೇ ಮಯಿ ॥೮॥

ಯಾವಳು ನಾನು ಭೋಜನಮಾಡದಿದ್ದರೆ ತಾನೂ ಭೋಜನಮಾಡುತ್ತಿರಲಿಲ್ಲವೋ, ನಾನು ಸ್ನಾನಮಾಡದಿದ್ದರೆ ತಾನೂ ಸ್ನಾನಮಾಡುತ್ತಿರಲಿಲ್ಲವೋ, ನಾನು ಕುಳಿತಿರದಿದ್ದರೆ ತಾನೂ ಕುಳಿತುಕೊಳ್ಳುತ್ತಿರಲಿಲ್ಲವೋ, ನಾನು ಮಲಗಿದ ಬಳಿಕವೇ ತಾನೂ ಮಲಗುತ್ತಿದ್ದಳೋ–ಅಂತಹ ನನ್ನ ಕಾಂತೆಯು ಇಂದು ಬಾರದಿದ್ದರೆ ನಾನು ಬದುಕಿದ್ದೂ ಪ್ರಯೋಜನವೇನು?

ಹೃಷ್ಟೇ ಭವತಿ ಸಾ ಹೃಷ್ಟಾ ದುಃಖಿತೇ ಮಯಿ ದುಃಖಿತಾ ।
ಪ್ರೋಷಿತೇ ದೀನವದನಾ ಕ್ರುದ್ಧೇ ಚ ಪ್ರಿಯವಾದಿನೀ ॥೯॥

ನನ್ನ ಆ ಪ್ರೇಯಸಿಯು ನಾನು ಸಂತೋಷದಿಂದಿದ್ದರೆ ತಾನೂ ಸಂತೋಷದಿಂದಿರುತ್ತಿದ್ದಳು. ನಾನು ದುಃಖದಿಂದಿದ್ದರೆ ತಾನೂ ದುಃಖಿಸುತ್ತಿದ್ದಳು. ನಾನೇನಾದರೂ ಹೊರಗೆ ಹೋದೆನೆಂದರೆ ಕುಂದಿದ ಮುಖವುಳ್ಳವಳಾಗುತ್ತಿದ್ದಳು. ನಾನೇನಾದರೂ ಕೋಪಗೊಂಡರೆ ಪ್ರಿಯವಾದ ಮಾತು ಗಳನ್ನು ಹೇಳುತ್ತಿದ್ದಳು. ಅಂತಹ ನನ್ನ ಪ್ರಿಯಪತ್ನಿಯು ಬಾರದಿದ್ದರೆ ನನ್ನ ಜೀವಿತಕ್ಕೆ ಸಾರ್ಥಕತೆಯೇ ಇಲ್ಲ.

ಪತಿವ್ರತಾ ಪತಿಗತಿಃ ಪತಿಪ್ರಿಯಹಿತೇ ರತಾ ।
ಯಸ್ಯ ಸ್ಯಾತ್ತಾದೃಶೀ ಭಾರ್ಯಾ ಧನ್ಯಃ ಸ ಪುರುಷೋ ಭುವಿ ॥೧೦॥

ಅವಳು ಮಹಾಪತಿವ್ರತೆಯಾಗಿದ್ದಳು. ಪತಿಯನ್ನೇ ಅವಳು ಆಶ್ರಯನನ್ನಾಗಿ ಹೊಂದಿದ್ದಳು. ಪತಿಗೆ ಪ್ರಿಯವನ್ನೂ–ಹಿತವನ್ನೂ ಉಂಟು ಮಾಡುವುದರಲ್ಲಿಯೇ ಯಾವಾಗಲೂ ನಿರತಳಾಗಿರುತ್ತಿದ್ದಳು. ಪ್ರಪಂಚದಲ್ಲಿ ಅಂತಹ ಪತ್ನಿಯು ಯಾವನಿಗಿರುವಳೋ–ಅಂತಹ ಪುರುಷನೇ ಧನ್ಯನು.

ಸಾ ಹಿ ಶ್ರಾನ್ತಂ ಕ್ಷುಧಾರ್ತಂ ಚ ಜಾನೀತೇ ಮಾಂ ತಪಸ್ವಿನೀ ।
ಅನುರಕ್ತಾ ಸ್ಥಿರಾ ಚೈವ ಭಕ್ತಾ ಸ್ನಿಗ್ಧಾ ಯಶಸ್ವಿನೀ ॥೧೧॥

ಪತಿಸೇವೆಯೆಂಬ ತಪಸ್ಸಿನಲ್ಲಿಯೇ ನಿರತಳಾಗಿದ್ದ ಅವಳು ನಾನು ಬಳಲಿರುವುದನ್ನೂ, ಹಸಿವಿನಿಂದ ಪೀಡಿತನಾಗಿರುವುದನ್ನೂ ತಿಳಿದಿರುತ್ತಾಳೆ. ಹೀಗಿದ್ದರೂ ಅವಳೇಕೆ ಇದುವರೆಗೂ ಬರಲಿಲ್ಲ? ನನ್ನ ವಿಷಯದಲ್ಲಿ ಅವಳು ಅತ್ಯಂತಾನುರಕ್ತಳು. ಸ್ಥಿರಬುದ್ಧಿಯವಳು. ಯಶಸ್ವಿನಿಯಾದ ಆ ನನ್ನ ಪತ್ನಿಯು ಸ್ನೇಹಪರಳಾಗಿದ್ದಳು. ನನ್ನ ಪರಮಭಕ್ತಳಾಗಿದ್ದಳು.

ವೃಕ್ಷಮೂಲೇಽಪಿ ದಯಿತಾ ಯಸ್ಯ ತಿಷ್ಠತಿ ತದ್ಗೃಹಮ್ ।
ಪ್ರಾಸಾದೋಽಪಿ ತಯಾ ಹೀನಃ ಕಾನ್ತಾರ ಇತಿ ನಿಶ್ಚಿತಮ್ ॥೧೨॥

ಪ್ರೀತಿಪಾತ್ರಳಾದ ಅಂತಹ ಪತ್ನಿಯು ವೃಕ್ಷದ ಬುಡದಲ್ಲಿದ್ದರೂ–ಆ ವೃಕ್ಷದ ಬುಡವೇ ಗೃಹವೆನಿಸಿಕೊಳ್ಳುತ್ತದೆ. ಪತ್ನಿಯಿಂದ ವಿಹೀನವಾಗಿರುವುದು ದೊಡ್ಡ ಪ್ರಾಸಾದವೇ ಆಗಿದ್ದರೂ–ಅದು ನಿಶ್ಚಯವಾಗಿಯೂ ಅರಣ್ಯವೇ ಆಗಿರುತ್ತದೆ.

ಧರ್ಮಾರ್ಥಕಾಮಕಾಲೇಷು ಭಾರ್ಯಾ ಪುಂಸಃ ಸಹಾಯಿನೀ ।
ವಿದೇಶಗಮನೇ ಚಾಸ್ಯ ಸೈವ ವಿಶ್ವಾಸಕಾರಿಕಾ ॥೧೩॥

ಪುರುಷರಿಗೆ ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳ ಸಾಧನೆಗೂ ಪತ್ನಿಯೇ ಸಹಾಯಕಳಾಗಿರುತ್ತಾಳೆ. ವಿದೇಶಪ್ರವಾಸಕಾಲದಲ್ಲಿಯೂ ಪತ್ನಿಯು ಪತಿಗೆ ನಂಬಿಕೆಗೆ ಪಾತ್ರನಾದ ಮಿತ್ರನ ಕಾರ್ಯವನ್ನು ನಿರ್ವಹಿಸುತ್ತಿರುತ್ತಾಳೆ.

ಭಾರ್ಯಾ ಹಿ ಪರಮೋ ಹ್ಯರ್ಥಃ ಪುರುಷಸ್ಯೇಹ ಪಠ್ಯತೇ ।
ಅಸಹಾಯಸ್ಯ ಲೋಕೇಽಸ್ಮಿಂಲ್ಲೋಕಯಾತ್ರಾಸಹಾಯಿನೀ ॥೧೪॥

ಪತ್ನಿಯೇ ಪುರುಷನಿಗೆ ಪರಮಶ್ರೇಷ್ಠವಾದ ಸಂಪತ್ತೆಂದು ಹೇಳಲ್ಪಟ್ಟಿರುವಳು. ಈ ಲೋಕಯಾತ್ರೆಯಲ್ಲಿ (ಸಂಸಾರದಲ್ಲಿ) ಅಸಹಾಯಕನಾಗಿ ಯಾವನಿರುವನೋ–ಅವನಿಗೆ ಸಹಾಯಕಳು ಅವನ ಪ್ರಿಯಪತ್ನಿಯೇ ಆಗಿದ್ದಾಳೆ.

ತಥಾ ರೋಗಾಭಿಭೂತಸ್ಯ ನಿತ್ಯಂ ಕೃಚ್ಛ್ರಗತಸ್ಯ ಚ ।
ನಾಸ್ತಿ ಭಾರ್ಯಾಸಮಂ ಕಿಂಚಿನ್ನರಸ್ಯಾರ್ತಸ್ಯ ಭೇಷಜಮ್ ॥೧೫॥

ರೋಗಪೀಡಿತನಾಗಿರುವ, ಬಹಳ ದಿನಗಳಿಂದಲೂ ಕಷ್ಟದಲ್ಲಿಯೇ ಬೇಯುತ್ತಿರುವ, ಆರ್ತನಾದ ಪತಿಗೆ–ಪತ್ನಿಗೆ ಸಮಾನವಾದ ಔಷಧವು ಬೇರೆ ಯಾವುದೂ ಇಲ್ಲ.

ನಾಸ್ತಿ ಭಾರ್ಯಾಸಮೋ ಬನ್ಧುರ್ನಾಸ್ತಿ ಭಾರ್ಯಾಸಮಾ ಗತಿಃ ।
ನಾಸ್ತಿ ಭಾರ್ಯಾಸಮೋ ಲೋಕೇ ಸಹಾಯೋ ಧರ್ಮಸಂಗ್ರಹೇ ॥

ಸಂಸಾರದಲ್ಲಿ ಪತ್ನಿಗೆ ಸಮಾನನಾದ ಬಂಧುವು ಬೇರೊಬ್ಬನಿಲ್ಲ. ಪತಿಗೆ ಪತ್ನಿಯು ಆಶ್ರಯನೀಡುವಂತೆ ಬೇರೆ ಯಾರೂ ಆಶ್ರಯವನ್ನು ನೀಡಲಾರರು. ಧರ್ಮಸಂಗ್ರಹದಲ್ಲಿಯೂ (ಧರ್ಮಕಾರ್ಯಗಳಲ್ಲಿಯೂ) ಪತ್ನಿಗೆ ಸಮಾನವಾಗಿ ಸಹಕರಿಸುವವರು ಬೇರೆ ಯಾರೂ ಇರುವುದಿಲ್ಲ.

ಯಸ್ಯ ಭಾರ್ಯಾ ಗೃಹೇ ನಾಸ್ತಿ ಸಾಧ್ವೀ ಚ ಪ್ರಿಯವಾದಿನೀ ।
ಅರಣ್ಯಂ ತೇನ ಗನ್ತವ್ಯಂ ಯಥಾರಣ್ಯಂ ತಥಾ ಗೃಹಮ್ ॥೧೭॥

ಸಾಧ್ವಿಯಾದ, ಪ್ರಿಯವಾದ ಮಾತುಗಳನ್ನಾಡುವ ಪತ್ನಿಯು ಯಾವನ ಮನೆಯಲ್ಲಿಲ್ಲವೋ–ಅವನು ಅರಣ್ಯಕ್ಕೆ ಹೋಗುವುದೇ ಒಳ್ಳೆಯದು. ಏಕೆಂದರೆ : ಗೃಹಿಣಿಯಿಲ್ಲದ ಅಂತಹ ಗೃಹವು ಅರಣ್ಯಕ್ಕೆ ಸಮಾನವೇ ಆಗಿರುತ್ತದೆ.”

ಎಳಳನೆಯ ಅಧ್ಯಾಯವು ಮುಗಿಯಿತು.

೧೪೫ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಕಪೋತಿಯು ಶರಣಾಗತನಾದ ವ್ಯಾಧನಿಗೆ ಸೇವೆಮಾಡಲು ಕಪೋತವನ್ನು ಪ್ರಾರ್ಥಿಸಿದುದು

ಮಹಾರಾಜ! ಪೂಜ್ಯನಾದ ಪರಶುರಾಮನು ಮುಚುಕುಂದನಿಗೆ ಹೇಳಿದ ಕಥೆಯನ್ನು ಭೀಷ್ಮನು ಮುಂದುವರಿಸಿ ಹೇಳುತ್ತಾನೆ :

"ಯುಧಿಷ್ಠಿರ! ಹೀಗೆ ಭಾರ್ಯೆಯ ವಿಷಯವಾಗಿ ಬಹಳ ದೈನ್ಯದಿಂದ ವಿಲಪಿಸುತ್ತಿದ್ದ ಕಪೋತದ ಮಾತನ್ನು ಕೇಳಿ ಪಕ್ಷಿಹಂತಕನಾದ ಬೇಡನ ಪಂಜರದಲ್ಲಿದ್ದ ಕಪೋತಿಯು ಹೇಳಿತು :

ಅಹೋಽತೀವ ಸುಭಾಗ್ಯಾಹಂ ಯಸ್ಯಾ ಮೇ ದಯಿತಃ ಪತಿಃ ।
ಅಸತೋ ವಾ ಸತೋ ವಾಪಿ ಗುಣಾನೇವಂ ಪ್ರಭಾಷತೇ ॥೨॥

"ಆಶ್ಚರ್ಯ! ನಿಶ್ಚಯವಾಗಿಯೂ ನಾನು ಭಾಗ್ಯಶಾಲಿನಿಯೇ ಸರಿ. ನನ್ನಲ್ಲಿ ಅಂತಹ ಉತ್ತಮಗುಣಗಳು ಇವೆಯೋ–ಇಲ್ಲವೋ? ನನ್ನ ಪತಿಯು ಹೀಗೆ ನನ್ನ ಗುಣಗಳನ್ನು ಹೊಗಳುತ್ತಿದ್ದಾನೆ.

ನ ಸಾ ಸ್ತ್ರೀ ಹ್ಯಭಿಮನ್ತವ್ಯಾ ಯಸ್ಯಾಂ ಭರ್ತಾ ನ ತುಷ್ಯತಿ ।
ತುಷ್ಟೇ ಭರ್ತರಿ ನಾರೀಣಾಂ ತುಷ್ಟಾಃ ಸ್ಯುಃ ಸರ್ವದೇವತಾಃ ॥೩॥

ಯಾವಳಲ್ಲಿ ಪತಿಯು ಅಸಂತುಷ್ಟನಾಗಿರುವನೋ–ಅಂತಹ ಸ್ತ್ರೀಯನ್ನು ಹೆಂಗಸೆಂದೇ ತಿಳಿಯಬಾರದು. (ಗೌರವಿಸಬಾರದು.) ಸ್ತ್ರೀಯರ ವಿಷಯದಲ್ಲಿ ಪತಿಯು ಸಂತುಷ್ಟನಾಗಿದ್ದುದಾದರೆ–ಎಲ್ಲ ದೇವತೆಗಳೂ ಅಂತಹ ಸ್ತ್ರೀಯರ ವಿಷಯದಲ್ಲಿ ಸಂತುಷ್ಟರಾಗಿರುತ್ತಾರೆ.

ಅಗ್ನಿಸಾಕ್ಷಿಕಮಿತ್ಯೇವ ಭರ್ತಾ ವೈ ದೈವತಂ ಪರಮ್ ।
ದಾವಾಗ್ನಿನೇವ ನಿರ್ದಗ್ಧಾ ಸಪುಷ್ಪಸ್ತಬಕಾ ಲತಾ ।
ಭಸ್ಮೀಭವತಿ ಸಾ ನಾರೀ ಯಸ್ಯಾ ಭರ್ತಾ ನ ತುಷ್ಯತಿ ॥೪॥

ಅಗ್ನಿಯನ್ನು ಸಾಕ್ಷಿಯನ್ನಾಗಿಟ್ಟುಕೊಂಡು ಯಾವನು ವಿವಾಹಮಾಡಿ ಕೊಳ್ಳುವನೋ–ಅವನೇ ಅವಳಿಗೆ ಪತಿಯಾಗುತ್ತಾನೆ. ಅಗ್ನಿಸಾಕ್ಷಿಕವಾಗಿ ಕೈಹಿಡಿದ ಪತಿಯೇ ಹೆಂಗಸಿಗೆ ಶ್ರೇಷ್ಠನಾದ ದೈವ. ಅಗ್ನಿಸಾಕ್ಷಿಯಾಗಿ

ಕೈಹಿಡಿದ ಪತಿಯು–ಯಾವ ತನ್ನ ಪತ್ನಿಯಲ್ಲಿ ಸಂತುಷ್ಟನಾಗುವುದಿಲ್ಲವೋ ಅಂತಹ ಸ್ತ್ರೀಯು ದಾವಾಗ್ನಿಯಿಂದ ಭಸ್ಮವಾಗಿಹೋದ ಪುಷ್ಪಗುಚ್ಛದಿಂದ ಕೂಡಿರುವ ಲತೆಯಂತೆ-ಭಸ್ಮವಾಗಿ ಹೋಗುತ್ತಾಳೆ. (ವಿನಾಶಹೊಂದುತ್ತಾಳೆ.)"

ದುಃಖದಿಂದ ಪೀಡಿತನಾಗಿದ್ದ ವ್ಯಾಧನ ಪಂಜರದಲ್ಲಿ ಬಂಧಿತವಾಗಿದ್ದ ಕಪೋತಿಯು ಈ ರೀತಿಯಲ್ಲಿ ಯೋಚಿಸಿ ದುಃಖಿತನಾದ ಪತಿಯನ್ನು ಕುರಿತು ಹೇಳಿತು :

ಹನ್ತ ವಕ್ಷ್ಯಾಮಿ ತೇ ಶ್ರೇಯಃ ಶ್ರುತ್ವಾ ತು ಕುರು ತತ್ತಥಾ ।
ಶರಣಾಗತಸಂತ್ರಾತಾ ಭವ ಕಾನ್ತ ವಿಶೇಷತಃ ॥೬॥

"ಪ್ರಾಣನಾಥ! ನಾನು ನಿನಗೆ ಶ್ರೇಯಃಸ್ಸಾಧಕವಾದ ಮಾತನ್ನು ಹೇಳುತ್ತೇನೆ. ನನ್ನ ಮಾತನ್ನು ಕೇಳಿದನಂತರ ನಾನು ಹೇಳಿದಂತೆಯೇ ಮಾಡು. ಈ ಸಮಯದಲ್ಲಿ ನೀನು ವಿಶೇಷವಾಗಿ ಶರಣಾಗತನಿಗೆ ರಕ್ಷಕನಾಗು.

ಏಷ ಶಾಕುನಿಕಃ ಶೇತೇ ತವ ವಾಸಂ ಸಮಾಶ್ರಿತಃ ।
ಶೀತಾರ್ತಶ್ಚ ಕ್ಷುಧಾರ್ತಶ್ಚ ಪೂಜಾಮಸ್ಮೈ ಸಮಾಚರ ॥೭॥

ಈ ವ್ಯಾಧನು ಚಳಿಯಿಂದಲೂ ಹಸಿವಿನಿಂದಲೂ ಪೀಡಿತನಾಗಿ ನಿನ್ನ ನಿವಾಸಸ್ಥಾನವನ್ನು (ವೃಕ್ಷವನ್ನು) ಆಶ್ರಯಿಸಿ ಇಲ್ಲಿಯೇ ಮಲಗಿದ್ದಾನೆ. ಅವನಿಗೆ ಯಥೋಚಿತವಾದ ಸತ್ಕಾರವನ್ನು ಮಾಡು.

ಯೋ ಹಿ ಕಶ್ಚಿದ್ದ್ವಿಜಂ ಹನ್ಯಾದ್ಗಾಂ ಚ ಲೋಕಸ್ಯ ಮಾತರಮ್ ।
ಶರಣಾಗತಂ ಚ ಯೋ ಹನ್ಯಾತ್ತುಲ್ಯಂ ತೇಷಾಂ ಚ ಪಾತಕಮ್ ॥೮॥

ಯಾವ ಮನುಷ್ಯನು ಬ್ರಾಹ್ಮಣನನ್ನು ಕೊಲ್ಲುವನೋ–ಯಾವ ಮನುಷ್ಯನು ಲೋಕಮಾತೆಯಾದ ಗೋವನ್ನು ಕೊಲ್ಲುವನೋ–ಯಾವ ಮನುಷ್ಯನು ಶರಣಾಗತನಾಗಿ ಬಂದವನನ್ನು ಸಂಹರಿಸುವನೋ–ಅಂತಹ ಮೂವರ ಪಾಪವೂ ಸಮಾನವಾದುದು. ಬ್ರಹ್ಮಹತ್ಯೆ-ಗೋಹತ್ಯೆ- ಶರಣಾಗತ ಹತ್ಯೆಗಳನ್ನು ಮಾಡಿದವರಿಗೆ ಒಂದೇ ರೀತಿಯ ಮಹಾಪಾಪವು ಪ್ರಾಪ್ತವಾಗುವುದು.

ಅಸ್ಮಾಕಂ ವಿಹಿತಾ ವೃತ್ತಿಃ ಕಾಪೋತೀ ಜಾತಿಧರ್ಮತಃ ।
ಸಾ ನ್ಯಾಯ್ಯಾತ್ಮವತಾ ನಿತ್ಯಂ ತ್ವದ್ವಿಧೇನಾನುವರ್ತಿತುಮ್ ॥೯॥

ಜಾತಿಧರ್ಮದ ಪ್ರಕಾರ ನಮಗೆ ಕಾಪೋತೀವೃತ್ತಿಯು* ವಿಹಿತವಾಗಿದೆ. ನಿನ್ನ ಹಾಗೆ ಜಿತೇಂದ್ರಿಯನಾಗಿರತಕ್ಕವನು ನಿರಂತರವಾಗಿ ಈ ವೃತ್ತಿಯನ್ನು ಅನುಸರಿಸುವುದೇ ಯುಕ್ತವಾಗಿದೆ.

ಯಸ್ತು ಧರ್ಮಂ ಯಥಾಶಕ್ತಿ ಗೃಹಸ್ಥೋ ಹ್ಯನುವರ್ತತೇ ।
ಸ ಪ್ರೇತ್ಯ ಲಭತೇ ಲೋಕಾನಕ್ಷಯಾನಿತಿ ಶುಶ್ರುಮ ॥೧೦॥

ಯಾವ ಗೃಹಸ್ಥನು ಯಥಾಶಕ್ತಿ ತನ್ನ ಆಶ್ರಮೋಕ್ತವಾದ ಧರ್ಮಗಳನ್ನು ಪರಿಪಾಲನೆಮಾಡುವನೋ–ಅಂತಹ ಗೃಹಸ್ಥನು ಅವಸಾನಾನಂತರದಲ್ಲಿ ನಾಶರಹಿತವಾದ ಪುಣ್ಯಲೋಕಗಳನ್ನು ಹೊಂದುವನೆಂಬುದನ್ನು ಕೇಳಿದ್ದೇವೆ.

ಸ ತ್ವಂ ಸಂತಾನವಾನದ್ಯ ಪುತ್ರವಾನಸಿ ಚ ದ್ವಿಜ ।
ತತ್ಸ್ವದೇಹೇ ದಯಾಂ ತ್ಯಕ್ತ್ವಾ ಧರ್ಮಾರ್ಥೌ ಪರಿಗೃಹ್ಯ ಚ ।
ಪೂಜಾಮಸ್ಮೈ ಪ್ರಯುಂಕ್ಷ್ವ ತ್ವಂ ಪ್ರೀಯೇತಾಸ್ಯ ಮನೋ ಯಥಾ ॥೧೨॥

ನಿನಗೆ ಸಂತಾನವಾಗಿದೆ ; ಮೇಲಾಗಿ ನಿನಗೆ ವಂಶೋದ್ಧಾರಕರಾದ ಪುತ್ರರೂ ಹುಟ್ಟಿದ್ದಾರೆ. ಆದುದರಿಂದ ಈಗ ನೀನು ನಿನ್ನ ದೇಹಾಭಿಮಾನವನ್ನು ಸಂಪೂರ್ಣವಾಗಿ ತೊರೆದು, ಧರ್ಮಾರ್ಥಗಳ ಸಾಧನೆಯನ್ನೇ ಮುಖ್ಯವಾದ ಗುರಿಯನ್ನಾಗಿ ಪರಿಗ್ರಹಿಸಿ, ಈ ವ್ಯಾಧನ ಮನಸ್ಸು ತೃಪ್ತಿಹೊಂದುವ ರೀತಿಯಲ್ಲಿ ಇವನಿಗೆ ಸತ್ಕಾರವನ್ನು ಮಾಡು.

ಮತ್ಕೃತೇ ಮಾ ಚ ಸಂತಾಪಂ ಕುರ್ವೀಥಾಸ್ತ್ವಂ ವಿಹಙ್ಗಮ ।
ಶರೀರಯಾತ್ರಾಕೃತ್ಯರ್ಥಮನ್ಯಾನ್ದಾರಾನುಪೈಷ್ಯಸಿ ॥೧೩॥

ಆಕಾಶಗನೇ! ನನ್ನ ಸಲುವಾಗಿ (ನನ್ನನ್ನು ವ್ಯಾಧನು ಬಂಧಿಸಿರುವುದಕ್ಕಾಗಿ) ನೀನು ಸಂತಾಪಪಡಬೇಡ. ಶರೀರಯಾತ್ರೆಯ (ಜೀವನ

---

* ಕಾಪೋತೀವೃತ್ತಿಃ : ಉಂಛವೃತ್ತಿ. ಕಪೋತಗಳು ಹೊಲ-ಗದ್ದೆಗಳಲ್ಲಿ ಬಿದ್ದಿರುವ ಕಾಳುಗಳನ್ನು ಆರಿಸಿ ತಿನ್ನುವುವು ಮತ್ತು ಸ್ವಲ್ಪ ಮಾತ್ರ ಕೂಡಿಸಿ ಇಟ್ಟುಕೊಳ್ಳುವುವು. ಅದರಂತೆ ಮನುಷ್ಯನೂ ನಡೆದುಕೊಂಡರೆ ಅದು ಕಪೋತ ವೃತ್ತಿಯೆನಿಸುವುದು.

ಯಾತ್ರೆಯ) ನಿರ್ವಹಣೆಗಾಗಿ ಬೇರೊಬ್ಬಳನ್ನು ನೀನು ಪರಿಗ್ರಹಿಸ ಬಹುದಾಗಿದೆ."

ಯುಧಿಷ್ಠಿರ! ಬಹಳವಾದ ದುಃಖದಿಂದ ಕೂಡಿದ್ದ, ವ್ಯಾಧನ ಪಂಜರದಲ್ಲಿದ್ದ, ಪಾತಿವ್ರತ್ಯವೆಂಬ ತಪಸ್ಸಿನಲ್ಲಿಯೇ ನಿರತವಾಗಿದ್ದ ಶೋಚನೀಯ ಸ್ಥಿತಿಯಲ್ಲಿದ್ದ ಆ ಕಪೋತಿಯು ಪತಿಯೊಡನೆ ಹೀಗೆ ಹೇಳಿ, ರೆಂಬೆಯ ಮೇಲಿದ್ದ ಪತಿಯನ್ನು ಪಂಜರದಿಂದಲೇ ತಲೆಯೆತ್ತಿ ಎವೆಯಿಕ್ಕದೇ ನೋಡುತ್ತಿದ್ದಿತು"

೧೪೫ನೆಯ ಅಧ್ಯಾಯವು ಮುಗಿಯಿತು.

೧೪೬ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಕಪೋತವು ಆತ್ಮಾರ್ಪಣೆಯನ್ನು ಮಾಡಿ ಅತಿಥಿಯನ್ನು ಸತ್ಕರಿಸಿದುದು

ಜನಮೇಜಯ! ಭಗವಾನ್ ಪರಶುರಾಮನು ಮುಚುಕುಂದನಿಗೆ ಹೇಳಿದ ಕಥೆಯನ್ನು ಭೀಷ್ಮನು ಮುಂದುವರಿಸಿ ಹೇಳುತ್ತಾನೆ :

"ಯುಧಿಷ್ಠಿರ! ಧರ್ಮದಿಂದಲೂ ಯುಕ್ತಿಯಿಂದಲೂ ಕೂಡಿದ್ದ, ಪತ್ನಿಯು ಹೇಳಿದ ಮಾತುಗಳನ್ನು ಕೇಳಿ ಅಶ್ರುವ್ಯಾಕುಲಿತವಾದ ಕಣ್ಣುಗಳಿಂದ ಕೂಡಿದ್ದ ಕಪೋತವು ಬಹಳವಾಗಿ ಸಂತೋಷಗೊಂಡಿತು.

ತಾನು ನಿವಾಸಿಸುತ್ತಿದ್ದ ವೃಕ್ಷವನ್ನೇ ಆಶ್ರಯಿಸಿ ಮಲಗಿದ್ದ ವ್ಯಾಧನನ್ನು ಗಮನಿಸಿದ ಕಪೋತವು ಶಾಸ್ತ್ರವಿಧಿಗೆ ಅನುಸಾರವಾಗಿ ಪಕ್ಷಿಜೀವಿಯಾದ ಬೇಡನನ್ನು ಪ್ರಯತ್ನಪೂರ್ವಕವಾಗಿ ಸತ್ಕರಿಸಿತು.

ಉವಾಚ ಸ್ವಾಗತಂ ತೇಽದ್ಯ ಬ್ರೂಹಿ ಕಿಂ ಕರವಾಣಿ ತೇ ।
ಸಂತಾಪಶ್ಚ ನ ಕರ್ತವ್ಯಃ ಸ್ವಗೃಹೇ ವರ್ತತೇ ಭವಾನ್ ॥೩॥

ಕಪೋತವು ವ್ಯಾಧನನ್ನು ಕುರಿತು ಹೇಳಿತು :

"ವ್ಯಾಧನೇ! ಈಗ ನಾನು ನಿನಗೆ ಸ್ವಾಗತವನ್ನು ಬಯಸುತ್ತೇನೆ. ನಿನಗೆ ನಾನು ಏನು ಮಾಡಬೇಕೆಂಬುದನ್ನು ಹೇಳು. ಇಲ್ಲಿ ನೀನು ಸಂತಾಪಪಡುವ ಕಾರಣವಿಲ್ಲ. ನಿನ್ನ ಮನೆಯಲ್ಲಿರುವಂತೆಯೇ ಭಾವಿಸು.

ತದ್ಬ್ರವೀತು ಭವಾನ್ ಕ್ಷಿಪ್ರಂ ಕಿಂ ಕರೋಮಿ ಕಿಮಿಚ್ಛಸಿ ।
ಪ್ರಣಯೇನ ಬ್ರವೀಮಿ ತ್ವಾಂ ತ್ವಂ ಹಿ ನಃ ಶರಣಾಗತಃ ॥೪॥

ನಾನು ನಿನ್ನ ಸಲುವಾಗಿ ಏನು ಮಾಡಲಿ? ನೀನು ಏನನ್ನು ಅಪೇಕ್ಷಿಸುವೆ?–ಎಂಬುದನ್ನು ಶೀಘ್ರವಾಗಿ ಹೇಳು. ನಾನು ಪ್ರೇಮಪೂರ್ವಕವಾಗಿ ನಿನಗೆ ಈ ಮಾತುಗಳನ್ನು ಹೇಳುತ್ತಿದ್ದೇನೆ. ಏಕೆಂದರೆ : ನೀನು ನಮ್ಮ ಮನೆಗೆ ರಕ್ಷಣೆಯನ್ನು ಅಪೇಕ್ಷಿಸಿ ಬಂದಿರುವೆ.

ಅರಾವಪ್ಯುಚಿತಂ ಕಾರ್ಯಮಾತಿಥ್ಯಂ ಗೃಹಮಾಗತೇ ।
ಛೇತ್ತುಮಪ್ಯಾಗತೇ ಛಾಯಾಂ ನೋಪಸಂಹರತೇ ದ್ರುಮಃ ॥೫॥

ರಕ್ಷಣೆಯನ್ನು ಅಪೇಕ್ಷಿಸಿ ಮನೆಗೆ ಬಂದಿರುವವನು ಶತ್ರುವೇ ಆಗಿದ್ದರೂ ಅವನಿಗೆ ಅತಿಥಿಸತ್ಕಾರವನ್ನು ಮಾಡಬೇಕಾದುದು ಗೃಹಸ್ಥನ ಕರ್ತವ್ಯವಾಗಿದೆ. ತನ್ನನ್ನೇ ಕಡಿದುಹಾಕಲು ಬಂದವನಿಂದಲೂ ಕೂಡ ವೃಕ್ಷವು ತನ್ನ ನೆಳಲನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ವೃಕ್ಷವು ತನ್ನ ನೆಳಲಿನ ಮೂಲಕವಾಗಿ ಮರಕಟುಕನ ದಣಿವನ್ನು ನಿವಾರಿಸಿ ಕಡಿಯುವ ಉತ್ಸಾಹವನ್ನು ಉಜ್ಜ್ವಲಗೊಳಿಸುತ್ತದೆ. ಅತಿಥಿಸತ್ಕಾರದ ವಿಷಯದಲ್ಲಿ ನಾವು ಆಶ್ರಯಿಸಿರುವ ಈ ವೃಕ್ಷವೇ ನಮಗೆ ಆದರ್ಶವಾಗಿದೆ.

ಶರಣಾಗತಸ್ಯ ಕರ್ತವ್ಯಮಾತಿಥ್ಯಂ ಹಿ ಪ್ರಯತ್ನತಃ ।
ಪಞ್ಚಯಜ್ಞಪ್ರವೃತ್ತೇನ ಗೃಹಸ್ಥೇನ ವಿಶೇಷತಃ ॥೬॥

ಶರಣಾಗತನಾಗಿ ಬಂದವನಿಗೆ ಪ್ರಯತ್ನಪೂರ್ವಕವಾಗಿ ಆತಿಥ್ಯವನ್ನು ನೀಡಬೇಕು. ಅದರಲ್ಲಿಯೂ ಪಂಚಯಜ್ಞಗಳನ್ನು ಮಾಡುವ ಪ್ರವೃತ್ತಿಯಿರುವ ಗೃಹಸ್ಥನು ವಿಶೇಷವಾಗಿ ಅತಿಥಿಸತ್ಕಾರವನ್ನು ಮಾಡಲೇಬೇಕು. ಇದು ಅವನ ಮುಖ್ಯಧರ್ಮವಾಗಿದೆ.

ಪಞ್ಚಯಜ್ಞಾಂಸ್ತು ಯೋ ಮೋಹಾನ್ನ ಕರೋತಿ ಗೃಹಾಶ್ರಮೇ ।
ತಸ್ಯ ನಾಯಂ ನ ಚ ಪರೋ ಲೋಕೋ ಭವತಿ ಧರ್ಮತಃ ॥೭॥

ಗೃಹಸ್ಥಾಶ್ರಮಿಯಾದ ಯಾವನು ಮೋಹವಶನಾಗಿ ದೇವಯಜ್ಞ-ಪಿತೃಯಜ್ಞಾದಿ ಪಂಚಮಹಾಯಜ್ಞಗಳನ್ನು ಮಾಡುವುದಿಲ್ಲವೋ–ಅಂತಹ

ವನಿಗೆ ಧರ್ಮಶಾಸ್ತ್ರಾನುಸಾರವಾಗಿ ಈ ಲೋಕದಲ್ಲಿಯೂ ಸುಖವು ಲಭಿಸುವುದಿಲ್ಲ. ಮರಣಾನಂತರದಲ್ಲಿ ಶ್ರೇಷ್ಠವಾದ ಲೋಕವೂ ಲಭಿಸುವುದಿಲ್ಲ.

ತದ್ಬ್ರೂಹಿ ಮಾಂ ಸುವಿಶ್ರಬ್ಧೋ ಯತ್ತ್ವಂ ವಾಚಾ ವದಿಷ್ಯಸಿ ।
ತತ್ಕರಿಷ್ಯಾಮ್ಯಹಂ ಸರ್ವಂ ಮಾ ತ್ವಂ ಶೋಕೇ ಮನಃ ಕೃಥಾಃ ॥೮॥

ವ್ಯಾಧನೇ! ಆದುದರಿಂದ ನೀನು ನನ್ನಲ್ಲಿ ಸಂಪೂರ್ಣವಾದ ವಿಶ್ವಾಸವನ್ನಿಟ್ಟು ನಿನಗೇನು ಬೇಕೆಂಬುದನ್ನು ಹೇಳು. ನಿನ್ನ ಅಪೇಕ್ಷೆಯನ್ನು ತಿಳಿಸು. ನಿನ್ನ ಮುಖದಿಂದ ಯಾವ ಮಾತು ಹೊರಬರುವುದೋ ಅದರಂತೆ ನಾನು ನಿನ್ನ ಅಭೀಷ್ಟಗಳೆಲ್ಲವನ್ನೂ ನೆರವೇರಿಸಿಕೊಡುತ್ತೇನೆ. ಶೋಕದಲ್ಲಿ ಮನಸ್ಸನ್ನು ತೊಡಗಿಸಬೇಡ. ಮರೆಮಾಚದೇ ನಿನ್ನ ಅಪೇಕ್ಷೆಯೇನೆಂಬುದನ್ನು ಹೇಳು."

ಧರ್ಮಜ! ಕಪೋತವು ಹೇಳಿದ ಮಾತನ್ನು ಕೇಳಿ ವ್ಯಾಧನು ಹೇಳಿದನು:

ಬಾಧತೇ ಖಲು ಮೇ ಶೀತಂ ಸಂತ್ರಾಣಂ ಹಿ ವಿಧೀಯತಾಮ್ ॥೯॥

"ನನ್ನನ್ನು ಚಳಿಯು ಬಹಳವಾಗಿ ಬಾಧೆಪಡಿಸುತ್ತಿದೆ. ಶೀತನಿವಾರಣೆಗೆ ಯಾವುದಾದರೂ ಉಪಾಯವನ್ನು ಮಾಡು."

ಯುಧಿಷ್ಠಿರ! ವ್ಯಾಧನು ಹೀಗೆ ಹೇಳುತ್ತಲೇ ಕಪೋತವು ಶೀಘ್ರವಾಗಿ ಸುತ್ತ-ಮುತ್ತಲೂ ಇದ್ದ ತರಗೆಲೆಗಳನ್ನು ಒಂದು ಕಡೆಯಲ್ಲಿ ಗುಡ್ಡೆಹಾಕಿತು. ಬೆಂಕಿಯನ್ನು ತರಲು ತನ್ನ ರೆಕ್ಕೆಗಳಿಗೆ ಶಕ್ತಿಯಿದ್ದಷ್ಟು ವೇಗವಾಗಿ ಹಾರಿಕೊಂಡು ಕಮ್ಮಾರನ ಮನೆಗೆ ಹೋಯಿತು.

ಕಪೋತವು ಅತಿಶೀಘ್ರವಾಗಿ ಕಮ್ಮಾರನ ಮನೆಗೆ ಹೋಗಿ ಬೆಂಕಿಯನ್ನು ತೆಗೆದುಕೊಂಡು ಕ್ಷಣಮಾತ್ರದಲ್ಲಿ ವ್ಯಾಧನಿದ್ದ ಸ್ಥಳಕ್ಕೆ ಆಗಮಿಸಿತು. ಒಂದು ಕಡೆ ಒಟ್ಟುಗೂಡಿಸಿಟ್ಟಿದ್ದ ತರಗೆಲೆಗಳ ಮೇಲೆ ಬೆಂಕಿಯನ್ನಿಟ್ಟು ಹೊತ್ತಿಸಿತು. ಹೀಗೆ ತರಗೆಲೆಗಳ ರಾಶಿಗೆ ಬೆಂಕಿಯನ್ನಿಟ್ಟು ಹೊತ್ತಿಸಿ ಅದು ಜಾಜ್ವಲ್ಯಮಾನವಾಗಿ ಉರಿಯಲು ಪ್ರಾರಂಭಿಸಿದನಂತರ ಶರಣಾಗತನಾಗಿ ತನ್ನ ಮನೆಗೆ ಬಂದಿದ್ದ ವ್ಯಾಧನನ್ನು ಕುರಿತು ಹೇಳಿತು :

ಪ್ರತಾಪಯ ಸುವಿಶ್ರಬ್ಧಃ ಸ್ವಗಾತ್ರಾಣ್ಯಕುತೋಭಯಃ ॥೧೨॥

"ವ್ಯಾಧನೇ! ನೀನು ಸ್ವಲ್ಪವೂ ಭಯಗೊಳ್ಳದೇ ನಿಶ್ಚಿಂತನಾಗಿ ಈ ಬೆಂಕಿಯಲ್ಲಿ ನಿನ್ನ ಶರೀರವನ್ನು ಕಾಯಿಸಿ ಶೀತವನ್ನು ಪರಿಹರಿಸಿಕೋ."

ಕೌಂತೇಯ! ವ್ಯಾಧನು 'ಹಾಗೆಯೇ ಆಗಲಿ' ಎಂದು ಹೇಳಿ ಪ್ರಜ್ವಲಿಸುತ್ತಿದ್ದ ಅಗ್ನಿಯಲ್ಲಿ ತನ್ನ ಶರೀರವನ್ನು ಕಾಯಿಸಿಕೊಂಡನು. ಬೆಂಕಿಯಲ್ಲಿ ಕಾಯಿಸಿಕೊಂಡುದರ ಪರಿಣಾಮವಾಗಿ ಪ್ರಾಣವನ್ನುಳಿಸಿಕೊಂಡ ವ್ಯಾಧನು ಕಪೋತವನ್ನು ಕುರಿತು ಹೇಳತೊಡಗಿದನು. ವ್ಯಾಧನು ಆ ಸಮಯದಲ್ಲಿ ಅತ್ಯಂತಹರ್ಷಯುಕ್ತನಾಗಿದ್ದನು. ಅವನ ಕಣ್ಣುಗಳು ಅರಳಿದ್ದುವು. ವಿಧ್ಯುಕ್ತವಾದ ರೀತಿಯಲ್ಲಿ ತನ್ನನ್ನು ಸತ್ಕರಿಸಿದ ಕಪೋತವನ್ನು ನೋಡಿ ಹೇಳಿದನು :

ದತ್ತಮಾಹಾರಮಿಚ್ಛಾಮಿ ತ್ವಯಾ ಕ್ಷುದ್ಬಾಧತೇ ಹಿ ಮಾಮ್ ॥

"ಕಪೋತನೇ! ಹಸಿವು ನನ್ನನ್ನು ಬಹಳವಾಗಿ ಬಾಧೆಪಡಿಸುತ್ತಿದೆ. ಆದುದರಿಂದ ಈ ಸಮಯದಲ್ಲಿ ನೀನು ಕೊಡುವ ಆಹಾರವನ್ನು ಪ್ರತಿಗ್ರಹಿಸುತ್ತೇನೆ."

ಮಹಾರಾಜ! ವ್ಯಾಧನು ಹೇಳಿದ ಮಾತನ್ನು ಕೇಳಿ ಕಪೋತವು ಹೇಳಿತು:

ನ ಮೇಽಸ್ತಿ ವಿಭವೋ ಯೇನ ನಾಶಯೇಯಂ ಕ್ಷುಧಾಂ ತವ ।
ಉತ್ಪನ್ನೇನ ಹಿ ಜೀವಾಮೋ ವಯಂ ನಿತ್ಯಂ ವನೌಕಸಃ ।
ಸಂಚಯೋ ನಾಸ್ತಿ ಚಾಸ್ಮಾಕಂ ಮುನೀನಾಮಿವ ಭೋಜನೇ ॥೧೬॥

"ಬೇಡರವನೇ! ನಿನ್ನ ಹಸಿವನ್ನು ಇಂಗಿಸುವಷ್ಟು ನನ್ನಲ್ಲಿ ಐಶ್ವರ್ಯವಿಲ್ಲ. (ಆಹಾರವಿಲ್ಲ). ಅರಣ್ಯವಾಸಿಗಳಾದ ನಾವು ಅಂದಂದು ಸಂಗ್ರಹಿಸಿದುದನ್ನು ಅಂದಂದೇ ತಿಂದು ಜೀವನನಿರ್ವಹಣೆಯನ್ನು ಮಾಡುತ್ತೇವೆ. ಅರಣ್ಯವಾಸಿಗಳಾದ ಮುನಿಗಳಂತೆ ನಮ್ಮಲ್ಲಿಯೂ ಭೋಜನಸಾಮಗ್ರಿಗಳ ಸಂಗ್ರಹವಿರುವುದಿಲ್ಲ."

ಕಪೋತವು ಹೀಗೆ ಹೇಳಿ–'ಅತಿಥಿಯು ಅಪೇಕ್ಷಿಸಿದುದನ್ನು ಕೊಡಲು ಸಾಧ್ಯವಾಗಲಿಲ್ಲವಲ್ಲಾ!'–ಎಂಬ ದುಃಖದಿಂದ ಮುಖವನ್ನು ಸಪ್ಪಗೆ ಮಾಡಿಕೊಂಡಿತು. (ಬಾಡಿದ ಮುಖವುಳ್ಳದ್ದಾಯಿತು). 'ಈ ಸಮಯದಲ್ಲಿ

ಅತಿಥಿಯ ಅಪೇಕ್ಷೆಯನ್ನು ನೆರವೇರಿಸಲು ಏನು ಮಾಡಲಿ?'–ಎಂದು ಬಹಳವಾಗಿ ಚಿಂತಿಸಿತು. ಅರ್ಥಸಂಗ್ರಹಕ್ಕೆ ವಿರುದ್ಧವಾಗಿದ್ದ ತನ್ನ ಕಾಪೋತೀವೃತ್ತಿಯನ್ನೇ ನಿಂದಿಸಿತು. ಒಂದೆರಡು ಕ್ಷಣಗಳು ಕಳೆಯುತ್ತಲೇ ಆ ಕಪೋತಕ್ಕೆ ಉಪಾಯವೊಂದರ ಸ್ಫುರಣೆಯಾಯಿತು. ಒಡನೆಯೇ ಪಕ್ಷಿಯು



ವ್ಯಾಧನಿಗೆ–ನಿನ್ನನ್ನು ತೃಪ್ತಿಗೊಳಿಸುವೆನೆಂದೂ ಸ್ವಲ್ಪಹೊತ್ತು ಹಸಿವನ್ನು ತಾಳಿಕೊಂಡಿರಬೇಕೆಂದೂ ಹೇಳಿತು.

ಬಳಿಕ ಆ ಕಪೋತವು ಮತ್ತಷ್ಟು ತರಗೆಲೆಗಳನ್ನು ಆರಿಸಿ ತಂದು ಬೆಂಕಿಯಲ್ಲಿ ಹಾಕಿ ಯಜ್ಞೇಶ್ವರನನ್ನು ಧಗ-ಧಗಿಸುವಂತೆ ಮಾಡಿ ಅತ್ಯಂತ ಸಂತೋಷದಿಂದ ವ್ಯಾಧನೊಡನೆ ಈ ಮಾತನ್ನು ಹೇಳಿತು :

ಋಷೀಣಾಂ ದೇವತಾನಾಂ ಚ ಪಿತೄಣಾಂ ಚ ಮಹಾತ್ಮನಾಮ್ ।
ಶ್ರುತಃ ಪೂರ್ವಂ ಮಯಾ ಧರ್ಮೋ ಮಹಾನತಿಥಿಪೂಜನೇ ॥೨೧॥

"ವ್ಯಾಧನೇ! ಅತಿಥಿಸತ್ಕಾರದಲ್ಲಿ ಮಹಾಧರ್ಮವಿರುವುದೆಂದು ನಾನು ಹಿಂದೆ ಋಷಿಗಳೂ, ದೇವತೆಗಳೂ, ಪಿತೃಗಳೂ ಮತ್ತು ಮಹಾತ್ಮರೂ ಹೇಳಿರುವ ಮಾತುಗಳನ್ನು ಕೇಳಿರುತ್ತೇನೆ.

ಕುರುಷ್ವಾನುಗ್ರಹಂ ಸೌಮ್ಯ ಸತ್ಯಮೇತದ್ಬ್ರವೀಮಿ ತೇ ।
ನಿಶ್ಚಿತಾ ಖಲು ಮೇ ಬುದ್ಧಿರತಿಥಿಪ್ರತಿಪೂಜನೇ ॥೨೨॥

ಸೌಮ್ಯನೇ! ಅತಿಥಿಯನ್ನು ಹೇಗಾದರೂ ಮಾಡಿ ಸತ್ಕರಿಸಿಯೇ ತೀರಬೇಕೆಂಬುದರಲ್ಲಿ ನನ್ನ ಬುದ್ಧಿಯು ನಿಶ್ಚಿತವಾಗಿದೆ. ಈ ಮಾತನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ. ನನ್ನನ್ನು ಅನುಗ್ರಹಿಸು."

ಹೀಗೆ, ಯಾವುದೇ ರೀತಿಯಿಂದಲಾದರೂ ಅತಿಥಿಸತ್ಕಾರವನ್ನು ಮಾಡಿಯೇ ತೀರುವೆನೆಂದು ಪ್ರತಿಜ್ಞೆಮಾಡಿದ ಮಹಾಮತಿಯಾದ ಆ ಪಕ್ಷಿಯು ನಗು-ನಗುತ್ತಲೇ ಧಗ-ಧಗನೆ ಪ್ರಜ್ವಲಿಸುತ್ತಿದ್ದ ಯಜ್ಞೇಶ್ವರನನ್ನು ಮೂರು ಬಾರಿ ಪ್ರದಕ್ಷಿಣೆಮಾಡಿ ಬೆಂಕಿಯಲ್ಲಿ ಹಾರಿತು. ಬೇಡನು ಬೆಂಕಿಯ ಮಧ್ಯದಲ್ಲಿ ಬಿದ್ದ ಪಕ್ಷಿಯನ್ನು ನೋಡಿ 'ನಾನು ಎಂತಹ ಹೇಯವಾದ ಕಾರ್ಯವನ್ನು ಮಾಡಿಬಿಟ್ಟೆನು!'–ಎಂಬುದಾಗಿ ಯೋಚಿಸತೊಡಗಿದನು :

ಅಹೋ ಮಮ ನೃಶಂಸಸ್ಯ ಗರ್ಹಿತಸ್ಯ ಸ್ವಕರ್ಮಣಾ ।
ಅಧರ್ಮಃ ಸುಮಹಾನ್ಘೋರೋ ಭವಿಷ್ಯತಿ ನ ಸಂಶಯಃ ॥೨೩॥

"ಅಯ್ಯೋ! ಕ್ರೂರವಾದ, ನನ್ನ ಕ್ರೂರಕರ್ಮಗಳಿಂದಲೇ ಅತಿನಿಂದ್ಯನಾಗಿರುವ ನನಗೆ ಘೋರವಾದ ಮಹಾಪಾಪವು ಸಂಘಟಿಸುತ್ತದೆ. ಇದರಲ್ಲಿ ಲೇಶಮಾತ್ರವೂ ಸಂಶಯವಿಲ್ಲ."

ಹೀಗೆ ಆ ಬೇಡನು–ತನ್ನನ್ನು ಸತ್ಕರಿಸುವ ಸಲುವಾಗಿ–ತನ್ನ ಹಸಿವನ್ನು ನೀಗುವ ಸಲುವಾಗಿ–ಬೆಂಕಿಯಲ್ಲಿ ಬಿದ್ದ ಆ ಕಪೋತವನ್ನು ನೋಡುತ್ತಾ ತನ್ನ ಕ್ರೂರಕರ್ಮಗಳನ್ನು ನೆನೆದು ನಿಂದಿಸಿಕೊಳ್ಳುತ್ತಾ ಬಹಳವಾಗಿ ಗೋಳಾಡಿದನು."

ಗಳ೬ನೆಯ ಅಧ್ಯಾಯವು ಮುಗಿಯಿತು.

೧೪೭ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ವ್ಯಾಧನ ವೈರಾಗ್ಯ

ಪಾರಿಕ್ಷಿತ! ಭೀಷ್ಮನು ಭಗವಾನ್ ಪರಶುರಾಮನು ಮುಚುಕುಂದನಿಗೆ ಹೇಳಿದ್ದ ಕಥೆಯನ್ನು ಮುಂದುವರಿಸುತ್ತಾ ಹೇಳುತ್ತಾನೆ :

"ಯುಧಿಷ್ಠಿರ! ಹಸಿವಿನಿಂದ ವ್ಯಾಕುಲಗೊಂಡಿದ್ದ ಆ ಬೇಡನು ಕಪೋತವು ಅಗ್ನಿಯಲ್ಲಿ ಬೆಂದುದನ್ನು ನೋಡಿ ಹೇಳಿದನು :

ಕಿಮೀದೃಶಂ ನೃಶಂಸೇನ ಮಯಾ ಕೃತಮಬುದ್ಧಿನಾ ।
ಭವಿಷ್ಯತಿ ಹಿ ಮೇ ನಿತ್ಯಂ ಪಾತಕಂ ಕೃತಜೀವಿನಃ ॥೨॥

"ಬುದ್ಧಿಹೀನನಾದ ಮತ್ತು ಕ್ರೂರಿಯಾದ ನಾನು ಎಂತಹ ಕಾರ್ಯವನ್ನು ಮಾಡಿಬಿಟ್ಟೆನು? ದುಷ್ಕರ್ಮದಿಂದಲೇ ಜೀವನವನ್ನು ನಡೆಸುತ್ತಿರುವ ನನಗೆ ನಿತ್ಯವೂ ಪಾಪದ ಸಂಘಟನೆಯಾಗುತ್ತಿರುತ್ತದೆ."

ವ್ಯಾಧನು ಬಾರಿ-ಬಾರಿಗೂ ಆತ್ಮನಿಂದನೆಯನ್ನು ಮಾಡಿಕೊಳ್ಳುತ್ತಾ ಪುನಃ ಪುನಃ ಹೇಳಿದುದನ್ನೇ ಹೇಳುತ್ತಿದ್ದನು :

ಅವಿಶ್ವಾಸ್ಯಃ ಸುದುರ್ಬುದ್ಧಿಃ ಸದಾ ನಿಕೃತಿನಿಶ್ಚಯಃ ।
ಶುಭಂ ಕರ್ಮ ಪರಿತ್ಯಜ್ಯ ಸೋಽಹಂ ಶಕುನಿಲುಬ್ಧಕಃ ॥೩॥
ನೃಶಂಸಸ್ಯ ಮಮಾದ್ಯಾಯಂ ಪ್ರತ್ಯಾದೇಶೋ ನ ಸಂಶಯಃ ।
ದತ್ತಃ ಸ್ವಮಾಂಸಂ ದಹತಾ ಕಪೋತೇನ ಮಹಾತ್ಮನಾ ॥೪॥

"ನಾನು ದುಷ್ಟಬುದ್ಧಿಯವನಾಗಿದ್ದೇನೆ. ನಾನು ಯಾರ ವಿಶ್ವಾಸಕ್ಕೂ ಯೋಗ್ಯನಲ್ಲ. ಯಾವಾಗಲೂ ಇತರರನ್ನು ವಂಚಿಸಿಯೇ ಜೀವನನಡೆಸುವ ಪ್ರಕೃತಿಯವನಾಗಿದ್ದೇನೆ. ಶುಭಾವಹವಾದ ಕಾರ್ಯಗಳನ್ನು ಬಿಟ್ಟು ಪಕ್ಷಿಗಳನ್ನು ಹಿಡಿಯುವುದರಲ್ಲಿಯೇ ಆಸಕ್ತನಾಗಿಬಿಟ್ಟಿದ್ದೇನೆ. ಮಹಾತ್ಮರ ಗುಣವನ್ನು ಹೊಂದಿರುವ ಈ ಕಪೋತವು ತನ್ನ ಶರೀರವನ್ನೇ ಆಹುತಿಯನ್ನಾಗಿ ಅರ್ಪಿಸಿ ಮಾಂಸವನ್ನು ನನಗೆ ಕೊಟ್ಟಿತು. ಕಪೋತವು ಮಾಡಿದ ಈ ಅದ್ಭುತವಾದ ಪ್ರಾಣಾರ್ಪಣೆಯು ಕ್ರೂರಿಯಾದ ನನಗೆ ಧಿಕ್ಕಾರರೂಪವಾಗಿದೆ. ಇದರಲ್ಲಿ ಸಂಶಯವೇ ಇಲ್ಲ.

ಸೋಽಹಂ ತ್ಯಕ್ಷ್ಯೇ ಪ್ರಿಯಾನ್ಪ್ರಾಣಾನ್ಪುತ್ರಾನ್ದಾರಾಂಸ್ತಥೈವ ಚ ।
ಉಪದಿಷ್ಟೋ ಹಿ ಮೇ ಧರ್ಮಃ ಕಪೋತೇನ ಮಹಾತ್ಮನಾ ॥೫॥

ಪಾಪಭೂಯಿಷ್ಠನಾಗಿರುವ ನಾನೀಗ ಪುತ್ರರನ್ನೂ ಪತ್ನಿಯನ್ನೂ ಎಲ್ಲಕ್ಕಿಂತಲೂ ಮಿಗಿಲಾಗಿ ನನ್ನ ಪ್ರಿಯವಾದ ಪ್ರಾಣಗಳನ್ನೂ ಪರಿತ್ಯಜಿಸುತ್ತೇನೆ. ಮಹಾತ್ಮರ ಗುಣಗಳನ್ನು ಹೊಂದಿರುವ ಕಪೋತವು ನನಗೆ ಅತ್ಯಂತಶ್ರೇಷ್ಠವಾದ ಧರ್ಮವನ್ನು ತನ್ನ ಆಚರಣೆಯ ಮೂಲಕವಾಗಿ ಉಪದೇಶಿಸಿದೆ.

ಅದ್ಯಪ್ರಭೃತಿ ದೇಹಂ ಸ್ವಂ ಸರ್ವಭೋಗೈರ್ವಿವರ್ಜಿತಮ್ ।
ಯಥಾ ಸ್ವಲ್ಪಂ ಸರೋ ಗ್ರೀಷ್ಮೇ ಶೋಷಯಿಷ್ಯಾಮ್ಯಹಂ ತಥಾ ॥೬॥

ಯಾವ ರೀತಿಯಲ್ಲಿ ಗ್ರೀಷ್ಮರ್ತುವಿನಲ್ಲಿ ಸ್ವಲ್ಪವೇ ನೀರಿರುವ ಸರೋವರವನ್ನು ಸೂರ್ಯನ ತಾಪವು ಶೋಷಿಸುತ್ತದೆಯೋ–ಅದೇ ರೀತಿಯಲ್ಲಿ ನನ್ನ ಶರೀರವನ್ನು ಇಂದು ಮೊದಲ್ಗೊಂಡು ಸರ್ವಸುಖೋಪಭೋಗಗಳಿಂದಲೂ ವರ್ಜಿತವನ್ನಾಗಿ ಮಾಡಿ ಶೋಷಿಸಿಬಿಡುತ್ತೇನೆ.

ಕ್ಷುತ್ಪಿಪಾಸಾತಪಸಹಃ ಕೃಶೋ ಧಮನಿಸಂತತಃ ।
ಉಪವಾಸೈರ್ಬಹುವಿಧೈಶ್ಚರಿಷ್ಯೇ ಪಾರಲೌಕಿಕಮ್ ॥೭॥

ಹಸಿವು, ಬಾಯಾರಿಕೆ ಮತ್ತು ಬಿಸಿಲುಗಳನ್ನು ಸಹಿಸಿಕೊಳ್ಳುತ್ತಾ ದೇಹವನ್ನು ಸಂಪೂರ್ಣವಾಗಿ ಕೃಶಗೊಳಿಸಿ, ನರಗಳು ಮಾತ್ರವೇ ಕಾಣುವಂತೆ ಮಾಡುತ್ತೇನೆ. ನಾನಾವಿಧವಾದ ಉಪವಾಸವ್ರತಾದಿಗಳ ಮೂಲಕವಾಗಿ ಪರಲೋಕಸಾಧನವಾದ ಪುಣ್ಯಕಾರ್ಯಗಳನ್ನು ಮಾಡುತ್ತೇನೆ.

ಅಹೋ ದೇಹಪ್ರದಾನೇನ ದರ್ಶಿತಾತಿಥಿಪೂಜನಾ ।
ತಸ್ಮಾದ್ಧರ್ಮಂ ಚರಿಷ್ಯಾಮಿ ಧರ್ಮೋ ಹಿ ಪರಮಾ ಗತಿಃ ।
ದೃಷ್ಟೋ ಧರ್ಮೋ ಹಿ ಧರ್ಮಿಷ್ಠೇ ಯಾದೃಶೋ ವಿಹಗೋತ್ತಮೇ ॥೮॥

ಆಶ್ಚರ್ಯವೇ ಸರಿ! ಕಪೋತವು ತನ್ನ ಶರೀರವನ್ನೇ ನನಗಾಗಿ ಅರ್ಪಿಸಿ ಅತಿಥಿಸತ್ಕಾರವನ್ನು ಹೇಗೆ ಮಾಡಬೇಕೆಂಬುದನ್ನು ತೋರಿಸಿಕೊಟ್ಟಿದೆ. ಆದರಿಂದ ಉಪದೇಶವನ್ನು ಪಡೆದ ನಾನೂ ಧರ್ಮವನ್ನು

ಆಚರಿಸುತ್ತೇನೆ. ಧರ್ಮವೇ ಶ್ರೇಷ್ಠವಾದ ಆಶ್ರಯಸ್ಥಾನವಾಗಿದೆ. ಪಕ್ಷಿಗಳಲ್ಲಿಯೇ ಶ್ರೇಷ್ಠವಾದ, ಧರ್ಮನಿಷ್ಠವಾದ ಕಪೋತದಲ್ಲಿ ನಾನು ಯಾವ ವಿಧವಾದ ಧರ್ಮವನ್ನು ಕಂಡೆನೋ–ಅಂತಹುದೇ ಧರ್ಮವನ್ನು ಆಚರಿಸುವ ಅಭಿಲಾಷೆಯು ನನಗೂ ಉಂಟಾಗಿದೆ.”

ಯುಧಿಷ್ಠಿರ! ಕ್ರೂರಕರ್ಮನಾಗಿದ್ದ ಆ ಬೇಡನು ಹೀಗೆ ಧರ್ಮಾಚರಣೆಯನ್ನು ಮಾಡಲು ನಿಶ್ಚಯಿಸಿ ಕಠೋರವ್ರತವನ್ನು ಕೈಗೊಂಡು ಮಹಾಪ್ರಸ್ಥಾನದ ಮಾರ್ಗವನ್ನು ಆಶ್ರಯಿಸಿ ಹೊರಟುಹೋದನು. ಹೊರಡುವ ಸಮಯದಲ್ಲಿ ಆ ಬೇಡನು ಪಂಜರದಲ್ಲಿ ಬಂಧಿಸಿದ್ದ ಕಪೋತಿ ಯನ್ನು ಬಿಡುಗಡೆಮಾಡಿ, ತನ್ನ ಬಳಿಯಲ್ಲಿದ್ದ ದೊಣ್ಣೆಯನ್ನೂ, ಸಲಾಕಿ ಯನ್ನೂ, ಬಲೆಯನ್ನೂ, ಪಂಜರವನ್ನೂ ಬಿಸಾಡಿದನು.”

೧೪೭ನೆಯ ಅಧ್ಯಾಯವು ಮುಗಿಯಿತು.

೧೪೮ನೆಯ ಅಧ್ಯಾಯ — ಆಪದ್ಧರ್ಮಪರ್ವ (ಮುಂದುವರಿದಿದೆ.)

ಕಪೋತಿಯ ವಿಲಾಪ : ಅಗ್ನಿಪ್ರವೇಶ :
ಕಪೋತೀ–ಕಪೋತಗಳಿಗೆ ಸ್ವರ್ಗಲೋಕಪ್ರಾಪ್ತಿ

ಮಹಾರಾಜ! ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಬೇಡನು ಕಪೋತಿಯನ್ನು ಬಿಡುಗಡೆಮಾಡಿ ಹೊರಟು ಹೋದನಂತರ ಪತಿಯನ್ನು ಬಾರಿ-ಬಾರಿಗೂ ಸ್ಮರಿಸುತ್ತಾ ಶೋಕಾಭಿಭೂತವಾಗಿದ್ದ ಅತಿದುಃಖಿತವಾಗಿದ್ದ ಕಪೋತಿಯು ರೋದನಮಾಡುತ್ತಾ ಹೇಳಿತು :

ನಾಹಂ ತೇ ವಿಪ್ರಿಯಂ ಕಾನ್ತ ಕದಾಚಿದಪಿ ಸಂಸ್ಮರೇ ।

“ಪ್ರಾಣಕಾಂತ! ನಿನಗೆ ಅಪ್ರಿಯವಾದ ಯಾವ ಕಾರ್ಯವನ್ನೂ ಮಾಡಿರುವುದು ನನಗೆ ಜ್ಞಾಪಕದಲ್ಲಿಲ್ಲ.

ಸರ್ವಾಪಿ ವಿಧವಾ ನಾರೀ ಬಹುಪುತ್ರಾಪಿ ಶೋಚತೇ ।
ಶೋಚ್ಯಾ ಭವತಿ ಬನ್ಧೂನಾಂ ಪತಿಹೀನಾ ತಪಸ್ವಿನೀ ॥೨॥

ಎಲ್ಲ ನಾರಿಯರೂ ಪತಿಯು ಮರಣಹೊಂದಿದರೆ ದುಃಖಪಡುತ್ತಾರೆ.

ಎಷ್ಟೇ ಮಕ್ಕಳಿದ್ದರೂ ವೈಧವ್ಯದ ದುಃಖವನ್ನು ಅವರಿಗೆ ತಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಪತಿಹೀನೆಯಾದ, ತಪಸ್ವಿನಿಯಾದ ನಾರಿಯು ಬಂಧುಗಳಿಗೂ ಶೋಚನೀಯಳಾಗುತ್ತಾಳೆ.

ಲಾಲಿತಾಹಂ ತ್ವಯಾ ನಿತ್ಯಂ ಬಹುಮಾನಾಚ್ಚ ಪೂಜಿತಾ ॥೩॥

ವಚನೈರ್ಮಧುರೈಃ ಸ್ನಿಗ್ಧೈರಸಂಕ್ಲಿಷ್ಟಮನೋಹರೈಃ ।
ಕನ್ದರೇಷು ಚ ಶೈಲಾನಾಂ ನದೀನಾಂ ನಿರ್ಝರೇಷು ಚ ॥೪॥

ದ್ರುಮಾಗ್ರೇಷು ಚ ರಮ್ಯೇಷು ರಮಿತಾಹಂ ತ್ವಯಾ ಸಹ ।
ಆಕಾಶಗಮನೇ ಚೈವ ವಿಹೃತಾಹಂ ತ್ವಯಾ ಸುಖಮ್ ॥೫॥

ರಮಾಮಿ ಸ್ಮ ಪುರಾ ಕಾನ್ತ ತನ್ಮೇ ನಾಸ್ತ್ಯದ್ಯ ಕಿಞ್ಚನ ।

ಪತಿದೇವ! ನೀನು ನನ್ನನ್ನು ಸುಮಧುರವಾದ, ಸ್ನೇಹಪೂರ್ಣವಾದ, ಸುಖದಾಯಕವಾದ ಮತ್ತು ಮನೋಹರವಾದ ಮಾತುಗಳಿಂದ ಬಹಳವಾಗಿ ಲಾಲಿಸುತ್ತಿದ್ದೆ. ಬಹಳ ಗೌರವದಿಂದ ಕಾಣುತ್ತಿದ್ದೆ ಮತ್ತು ಬಹಳವಾಗಿ ಆದರಿಸುತ್ತಲೂ ಇದ್ದೆ. ಪರ್ವತಗಳ ಗುಹೆಗಳಲ್ಲಿಯೂ, ನದಿಗಳ ಪ್ರದೇಶಗಳಲ್ಲಿಯೂ, ರಮ್ಯವಾದ ವೃಕ್ಷಗಳ ಅಗ್ರಭಾಗಗಳಲ್ಲಿಯೂ ನಿನ್ನೊಡನೆ ನಾನು ರಮಿಸುತ್ತಿದ್ದೆನು. ಆಕಾಶಮಾರ್ಗದಲ್ಲಿಯೂ ನಾನು ನಿನ್ನೊಡನೆ ಸುಖವಾಗಿ ಹಾರಾಡಿಕೊಂಡು ಹೋಗುತ್ತಿದ್ದೆನು. ಪ್ರಾಣಕಾಂತನೇ! ಹಿಂದೆ ನಾನು ಯಾವ ರೀತಿಯಲ್ಲಿ ನಿನ್ನೊಡನೆ ಆನಂದವಾಗಿ ವಿಹರಿಸುತ್ತಾ ಸುಖಪಡುತ್ತಿದ್ದೆನೋ–ಆ ಸುಖವು ಈಗ ನನಗೆ ಕಿಂಚಿತ್ತಾದರೂ ಇಲ್ಲವಾಗಿದೆ.

ಮಿತಂ ದದಾತಿ ಹಿ ಪಿತಾ ಮಿತಂ ಭ್ರಾತಾ ಮಿತಂ ಸುತಃ ।
ಅಮಿತಸ್ಯ ಹಿ ದಾತಾರಂ ಭರ್ತಾರಂ ಕಾ ನ ಪೂಜಯೇತ್ ॥೬॥

ತಂದೆಯಾಗಲೀ, ಸೋದರನಾಗಲೀ, ಮಗನೇ ಆಗಲೀ–ನಾರಿಗೆ ಪರಿಮಿತವಾದ ಸುಖವನ್ನು ಕೊಡುತ್ತಾರೆ. ಪತಿಯಾದವನು ಮಾತ್ರವೇ ಪತ್ನಿಗೆ ಅಪರಿಮಿತವಾದ ಸುಖವನ್ನು ಕೊಡುತ್ತಾನೆ. ಅಪರಿಮಿತಸುಖದಾಯಕನಾದ ಪತಿಯನ್ನು ಯಾವ ಸ್ತ್ರೀಯು ತಾನೇ ಪೂಜಿಸುವುದಿಲ್ಲ?

(ಸಾಧ್ವಿಯರಾದ ಎಲ್ಲ ಸ್ತ್ರೀಯರೂ ಅಮಿತಸುಖಪ್ರದನಾದ ಪತಿಯನ್ನು ಗೌರವಿಸಿಯೇ ತೀರುತ್ತಾರೆ.)

ನಾಸ್ತಿ ಭರ್ತೃಸಮೋ ನಾಥೋ ನಾಸ್ತಿ ಭರ್ತೃಸಮಂ ಸುಖಮ್ ।
ವಿಸೃಜ್ಯ ಧನಸರ್ವಸ್ವಂ ಭರ್ತಾ ವೈ ಶರಣಂ ಸ್ತ್ರಿಯಾಃ ॥೭॥

ಸ್ತ್ರೀಯರಿಗೆ ಪತಿಗೆ ಸಮಾನನಾದ ರಕ್ಷಕನು ಬೇರೆ ಯಾರೂ ಇರುವುದಿಲ್ಲ. ಪತಿಯ ಸಹವಾಸಸುಖಕ್ಕಿಂತಲೂ ಮಿಗಿಲಾದ ಸುಖವು ಬೇರೆ ಯಾವುದೂ ಇಲ್ಲ. ಧನವನ್ನೂ, ಒಡವೆ-ವಸ್ತುಗಳನ್ನೂ, ಸರ್ವಸ್ವವನ್ನೂ ತ್ಯಾಗಮಾಡಿದರೂ ನಾರಿಗೆ ಪತಿಯೇ ಆಶ್ರಯನು. (ಸಕಲವನ್ನೂ ತ್ಯಾಗ ಮಾಡಿಯಾದರೂ ಪತಿಯನ್ನೇ ಆಶ್ರಯಿಸಬೇಕು.)

ನ ಕಾರ್ಯಮಿಹ ಮೇ ನಾಥ ಜೀವಿತೇನ ತ್ವಯಾ ವಿನಾ ।
ಪತಿಹೀನಾ ತು ಕಾ ನಾರೀ ಸತೀ ಜೀವಿತುಮುತ್ಸಹೇತ್ ॥೮॥

ಪ್ರಾಣನಾಥ! ನೀನಿಲ್ಲದೆ ನಾನು ಈ ಪ್ರಪಂಚದಲ್ಲಿ ಜೀವಿಸಿರುವುದರಿಂದ ಯಾವ ಪ್ರಯೋಜನವೂ ಇಲ್ಲ. ಯಾವ ಪತಿವ್ರತೆಯು ತಾನೇ ಪತಿಹೀನಳಾದ ಬಳಿಕವೂ ಜೀವಿಸಿರಲು ಉತ್ಸುಕಳಾಗುತ್ತಾಳೆ?"

ಯುಧಿಷ್ಠಿರ! ಅತ್ಯಂತದುಃಖಗೊಂಡಿದ್ದ, ಪತಿವ್ರತೆಯಾಗಿದ್ದ ಆ ಕಪೋತಿಯು ಬಹಳ ಹೊತ್ತಿನವರೆಗೂ ಕರುಣಾಜನಕವಾದ ರೀತಿಯಲ್ಲಿ ಗೋಳಿಡುತ್ತಿದ್ದು ಕಟ್ಟಕಡೆಗೆ ಧಗ-ಧಗನೆ ಉರಿಯುತ್ತಿದ್ದ ತನ್ನ ಗಂಡನು ಪ್ರವೇಶಿಸಿದ ಅಗ್ನಿಯಲ್ಲಿಯೇ ತಾನೂ ಧುಮುಕಿದಳು.

ಬಳಿಕ ದಿವ್ಯಶರೀರವನ್ನು ಧರಿಸಿದ ಆ ಕಪೋತಿಯು ವಿಚಿತ್ರವಾದ ಅಂಗದಗಳನ್ನು ಧರಿಸಿದ್ದ, ವಿಮಾನಸ್ಥನಾಗಿದ್ದ, ಪುಣ್ಯವಂತರಾದ ಮಹಾತ್ಮರಿಂದ ಪೂಜಿಸಲ್ಪಡುತ್ತಿದ್ದ ತನ್ನ ಪತಿಯನ್ನು ನೋಡಿದಳು. ವಿಚಿತ್ರವಾದ ಮಾಲೆಯನ್ನೂ–ವಸ್ತ್ರಗಳನ್ನೂ ಧರಿಸಿದ್ದ, ಎಲ್ಲ ವಿಧವಾದ ಆಭರಣಗಳಿಂದಲೂ ವಿಭೂಷಿತನಾಗಿದ್ದ, ಪುಣ್ಯಪುರುಷರಿಂದ ಯುಕ್ತವಾಗಿದ್ದ ಕೋಟಿ-ಕೋಟಿ ವಿಮಾನಗಳಿಂದ ಪರಿವೃತನಾಗಿದ್ದ ಪತಿಯನ್ನು ಕಪೋತಿಯು ನೋಡಿದಳು. ಪತಿಯ ನಿರ್ದೇಶದಂತೆ ತಾನೂ ಅದೇ ವಿಮಾನದಲ್ಲಿಯೇ ಕುಳಿತುಕೊಂಡಳು. ಶ್ರೇಷ್ಠವಾದ ವಿಮಾನದಲ್ಲಿ ಭಾರ್ಯೆಯೊಡನೆ ಕುಳಿತಿದ್ದ ಆ ಕಪೋತವು

ಸ್ವರ್ಗಲೋಕಕ್ಕೆ ಹೋಯಿತು. ಅಲ್ಲಿ ತಾನು ಮಾಡಿದ ಸತ್ಕರ್ಮದ ಫಲವಾಗಿ ದೇವತೆಗಳಿಂದಲೂ ಸತ್ಕೃತವಾಗಿ ಭಾರ್ಯೆಯೊಡನೆ ಆನಂದವಾಗಿದ್ದಿತು."

೧೪೬ನೆಯ ಅಧ್ಯಾಯವು ಮುಗಿಯಿತು.

೧೪೯ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಬೇಡನಿಗೂ ಸ್ವರ್ಗಲೋಕಪ್ರಾಪ್ತಿ

ಜನಮೇಜಯ! ಪರಶುರಾಮನು ಮುಚುಕುಂದನಿಗೆ ಹೇಳಿದ ಕಥೆಯನ್ನು ಭೀಷ್ಮನು ಮುಂದುವರಿಸುತ್ತಾ ಹೇಳುತ್ತಾನೆ :

"ಯುಧಿಷ್ಠಿರ! ಮಹಾಪ್ರಸ್ಥಾನದ ಮಾರ್ಗದಲ್ಲಿದ್ದ ವ್ಯಾಧನು ವಿಮಾನದಲ್ಲಿ ಹೋಗುತ್ತಿದ್ದ ಆ ಪಕ್ಷಿದಂಪತಿಗಳನ್ನು ನೋಡಿ ಆ ದೇವಮಾರ್ಗದ ವಿಷಯವಾಗಿ ಚಿಂತಿಸತೊಡಗಿದನು. 'ಇಂತಹುದೇ ತಪಸ್ಸಿನಿಂದ ನಾನೂ ಪಕ್ಷಿದಂಪತಿಗಳಂತೆ ಪರಮಶ್ರೇಷ್ಠವಾದ ಸದ್ಗತಿಯನ್ನು ಹೊಂದುತ್ತೇನೆ'–ಹೀಗೆ ಮನಸ್ಸಿನಲ್ಲಿ ನಿಶ್ಚಯಿಸಿ ಪಕ್ಷಿಜೀವಿಯಾದ ವ್ಯಾಧನು ಮಹಾಪ್ರಸ್ಥಾನವನ್ನು* ಆಶ್ರಯಿಸಿ ಹೊರಟನು. ಸ್ವರ್ಗವನ್ನು ಪಡೆದುಕೊಳ್ಳಬೇಕೆಂಬ ಆಕಾಂಕ್ಷೆಯಿಂದ ಆ ವ್ಯಾಧನು ಯಾವುದೇ ಕರ್ಮದಲ್ಲಿಯೂ ಆಸಕ್ತಿಯನ್ನು ವಹಿಸದೇ ನಿಶ್ಚೇಷ್ಟನಾಗಿ ವಾಯುಭಕ್ಷನಾಗಿ ಅಹಂಕಾರ-ಮಮಕಾರಗಳನ್ನು ತ್ಯಜಿಸಿದನು. ಹೀಗೆಯೇ ಮಹಾಪ್ರಸ್ಥಾನಮಾರ್ಗವನ್ನು ಆಶ್ರಯಿಸಿ ಹೋಗುತ್ತಿರಲಾಗಿ ವಿಶಾಲವಾಗಿದ್ದ, ಮನೋಹರವಾಗಿದ್ದ, ಕಮಲಪುಷ್ಪಗಳಿಂದ ಸಮಲಂಕೃತವಾಗಿದ್ದ, ನಾನಾವಿಧವಾದ ಪಕ್ಷಿಗಳಿಂದ ಸಮಾಕುಲವಾಗಿದ್ದ, ಶೀತಜಲದಿಂದ ಕೂಡಿದ್ದ, ಶುಭಾವಹವಾದ ಸರೋವರವನ್ನು ನೋಡಿದನು.

ಯಾರೇ ಆಗಲೀ ಬಾಯಾರಿಕೆಯಿಂದ ಎಷ್ಟೇ ಬಳಲಿದ್ದರೂ ಆ ದಿವ್ಯ ಸರೋವರವನ್ನು ನೋಡಿದೊಡನೆಯೇ ತೃಪ್ತರಾಗಿಬಿಡುತ್ತಿದ್ದರು. ಆ ದಿವ್ಯ ಸರೋವರವನ್ನು ನೋಡಿದ ಮಾತ್ರದಿಂದಲೇ ಬಾಯಾರಿಕೆಯ ದಣಿವು

* ಮಹಾಪ್ರಸ್ಥಾನವೆಂದರೆ : ಆಹಾರವನ್ನೂ–ನೀರನ್ನೂ ಬಿಟ್ಟು ಸಾಯುವವರೆಗೂ ಮುಂದೆ ಮುಂದೆ ನಡೆದುಹೋಗುತ್ತಲೇ ಇರುವುದು.

ನಿಃಸಂಶಯವಾಗಿ ನಿವಾರಣೆಯಾಗುತ್ತಿದ್ದಿತು. ವ್ಯಾಧನು ಬಹಳ ದಿವಸಗಳ ಉಪವಾಸದಿಂದಾಗಿ ಅತ್ಯಂತಕೃಶನಾಗಿದ್ದರೂ ಅದರ ಕಡೆಗೆ ಲಕ್ಷ್ಯವನ್ನೇ ಕೊಡದೇ ಸ್ವರ್ಗವನ್ನು ಹೊಂದಲೇಬೇಕೆಂದು ದೃಢವಾಗಿ ನಿಶ್ಚಯಿಸಿ ಪರಮಹೃಷ್ಟನಾಗಿಯೇ ಹಿಂಸ್ರಮೃಗಗಳಿಂದ ವ್ಯಾಪ್ತವಾಗಿದ್ದ ಅರಣ್ಯವನ್ನು ಪ್ರವೇಶಿಸಿದನು. ಅವನು ಆ ಅರಣ್ಯವನ್ನು ಪ್ರವೇಶಿಸುತ್ತಿದ್ದಂತೆಯೇ ಅವನ ಶರೀರಾದ್ಯಂತವಾಗಿ ಮುಳ್ಳುಗಳು ಚುಚ್ಚಿಕೊಂಡುವು. ಮುಳ್ಳುಗಳಿಂದ ಛಿನ್ನ-ಭಿನ್ನವಾದ ಶರೀರವುಳ್ಳವನಾಗಿದ್ದ ವ್ಯಾಧನು ರಕ್ತದಿಂದ ನೆನೆಸಲ್ಪಟ್ಟವ ನಾಗಿ ಕೆಂಪಾದ ಕಾಂತಿಯಿಂದ ಪ್ರಕಾಶಿಸಿದನು. ವ್ಯಾಧನು ಅದಾವುದನ್ನೂ ಲೆಕ್ಕಿಸದೆ ನಾನಾವಿಧವಾದ ಮೃಗಗಳಿಂದ ಸಮಾಕುಲವಾಗಿದ್ದ, ನಿರ್ಜನ ವಾಗಿದ್ದ ಆ ಅರಣ್ಯದಲ್ಲಿ ಸಂಚರಿಸುತ್ತಿದ್ದನು. ಆ ವೇಳೆಗೆ ಸರಿಯಾಗಿ ಆ ಅರಣ್ಯದಲ್ಲಿ ಪ್ರಚಂಡವಾದ ಗಾಳಿಯು ಬೀಸುತ್ತಿದ್ದು ವೃಕ್ಷಗಳ ಪರಸ್ಪರ ಸಂಘರ್ಷವುಂಟಾಗಿ ಕಾಡುಗಿಚ್ಚು ಹೊತ್ತಿಕೊಂಡಿತು. ಪ್ರಳಯಕಾಲದ ಅಗ್ನಿಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ಕ್ರುದ್ಧನಾಗಿದ್ದ ಯಜ್ಞೇ ಶ್ವರನು–ವೃಕ್ಷಗಳಿಂದಲೂ ಲತಾಗುಲ್ಮಗಳಿಂದಲೂ ಸಮಾಕುಲವಾಗಿದ್ದ ಆ ಅರಣ್ಯವನ್ನು ಭಸ್ಮಮಾಡಿದನು. ಗಾಳಿಯಿಂದ ಉದ್ಭೂತವಾದ ಜ್ವಾಲೆ ಗಳಿಂದಲೂ, ಕಿಡಿಗಳಿಂದಲೂ ಯಜ್ಞೇಶ್ವರನು ಸರ್ವತ್ರವ್ಯಾಪ್ತನಾಗಿ ಮೃಗ ಗಳಿಂದಲೂ, ಪಕ್ಷಿಗಳಿಂದಲೂ ಸಮಾಕುಲವಾಗಿದ್ದ ಆ ಮಹಾರಣ್ಯವನ್ನು ಸಂಪೂರ್ಣವಾಗಿ ದಹಿಸತೊಡಗಿದನು. ದಾವಾಗ್ನಿಯನ್ನು ನೋಡಿದೊಡ ನೆಯೇ ಬೇಡನು ಅತ್ಯಂತ ಸಂತೋಷಗೊಂಡ ಮನಸ್ಸಿನಿಂದ ಕೂಡಿದವನಾಗಿ ದೇಹಬಂಧನದಿಂದ ಮುಕ್ತನಾಗಲು ಕ್ಷಣ-ಕ್ಷಣಕ್ಕೂ ವೃದ್ಧಿಹೊಂದುತ್ತಿದ್ದ ಯಜ್ಞೇಶ್ವರನ ಕಡೆಗೆ ಧಾವಿಸಿ ಅಗ್ನಿಯನ್ನು ಪ್ರವೇಶಿಸಿದನು. ದಾವಾಗ್ನಿಯಿಂದ ಕ್ಷಣಮಾತ್ರದಲ್ಲಿಯೇ ದಗ್ಧನಾಗಿ ತಾನು ಮಾಡಿದ್ದ ಪಾಪಗಳೆಲ್ಲವನ್ನೂ ಕಳೆದುಕೊಂಡು ಶ್ರೇಷ್ಠವಾದ ಸಿದ್ಧಿಯನ್ನು ಪಡೆದುಕೊಂಡನು. ಸ್ವಲ್ಪ ಹೊತ್ತಿನಲ್ಲಿಯೇ ಅವನಿಗೆ ತಾನು ಯಾವ ವಿಧವಾದ ಭಯವೂ ಇಲ್ಲದೇ ಸ್ವರ್ಗದಲ್ಲಿ ಯಕ್ಷ-ಗಂಧರ್ವ-ಸಿದ್ಧರ ಮಧ್ಯದಲ್ಲಿ ಸಾಕ್ಷಾತ್ ಇಂದ್ರನಂತೆಯೇ ವಿರಾಜಮಾನನಾಗಿ ಕುಳಿತಿರುವುದರ ಅರಿವಾಯಿತು. ಹೀಗೆ ಪತಿವ್ರತೆಯಾದ

ಕಪೋತೀ ಮತ್ತು ಕಪೋತಗಳು ತಾವು ಮಾಡಿದ ಪುಣ್ಯಕರ್ಮಗಳ ಫಲವಾಗಿ ಬೇಡನೊಡನೆ ಸ್ವರ್ಗಕ್ಕೆ ಹೋದುವು.

ಯಾಪಿ ಚೈವಂವಿಧಾ ನಾರೀ ಭರ್ತಾರಮನುವರ್ತತೇ ।
ವಿರಾಜತೇಹಿ ಸಾ ಕ್ಷಿಪ್ರಂ ಕಪೋತೀವ ದಿವಿ ಸ್ಥಿತಾ ॥೧೫॥

ಹೀಗೆ ಯಾವ ಸ್ತ್ರೀಯು ತನ್ನ ಪತಿಯನ್ನು ಅನುಸರಿಸಿ ಹೋಗುವಳೋ ಅವಳು ಪತಿವ್ರತೆಯಾದ ಕಪೋತಿಯಂತೆ ಬಹಳ ಬೇಗ ಸ್ವರ್ಗದಲ್ಲಿ ವಿರಾಜಿಸುತ್ತಾಳೆ.

ಯುಧಿಷ್ಠಿರ! ಹಿಂದೆ ಇದು ಹೀಗೆಯೇ ನಡೆಯಿತು. ಮಹಾತ್ಮರ ಸದ್ಗುಣಗಳಿಂದ ಸಂಪನ್ನವಾಗಿದ್ದ ಕಪೋತಯುಗ್ಮವೂ ಮತ್ತು ವ್ಯಾಧನೂ ತಮ್ಮ-ತಮ್ಮ ಪುಣ್ಯಕರ್ಮಗಳ ಪ್ರಭಾವದಿಂದ ಧರ್ಮಾತ್ಮರು ಪಡೆಯುವ ಸದ್ಗತಿಯನ್ನೇ ಪಡೆದುಕೊಂಡರು.

ಯಶ್ಚೇದಂ ಶೃಣುಯಾನ್ನಿತ್ಯಂ ಯಶ್ಚೇದಂ ಪರಿಕೀರ್ತಯೇತ್ ।
ನಾಶುಭಂ ವಿದ್ಯತೇ ತಸ್ಯ ಮನಸಾಪಿ ಪ್ರಮಾದತಃ ॥೧೭॥

ಯಾರು ಈ ದಿವ್ಯವಾದ ಉಪಾಖ್ಯಾನವನ್ನು ನಿತ್ಯವೂ ಕೇಳುವರೋ ಮತ್ತು ಯಾರು ನಿತ್ಯವೂ ಕೀರ್ತನಮಾಡುವರೋ–ಅಂತಹವರ ಮನಸ್ಸಿನಲ್ಲಿಯೂ ಕೂಡ ಪ್ರಮಾದದಿಂದ ಹುಟ್ಟುವ ಅಶುಭಗಳು ಸಂಭವಿಸುವುದಿಲ್ಲ.

ಯುಧಿಷ್ಠಿರ ಮಹಾನೇಷ ಧರ್ಮೋ ಧರ್ಮಭೃತಾಂ ವರ ।
ಗೋಘ್ನೇಷ್ವಪಿ ಭವೇದಸ್ಮಿನ್ನಿಷ್ಕೃತೀ ಪಾಪಕರ್ಮಣಃ ॥೧೮॥

ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಯುಧಿಷ್ಠಿರ! ಶರಣಾಗತ ಪಾಲನೆಯೆಂಬುದು ಶ್ರೇಷ್ಠವಾದ ಮಹಾಧರ್ಮವಾಗಿದೆ. ಶರಣಾಗತ ರಕ್ಷಣೆಯೆಂಬ ಈ ಧರ್ಮವು ಗೋಹತ್ಯೆಯನ್ನು ಮಾಡಿದ ಪಾಪಕರ್ಮಿ ಗಳಿಗೂ ಪ್ರಾಯಶ್ಚಿತ್ತರೂಪವಾಗಿದೆ. (ಶರಣಾಗತಪರಿಪಾಲನೆಯಿಂದ ಗೋಹತ್ಯಾ ಪಾಪವನ್ನೂ ಕಳೆದುಕೊಳ್ಳಬಹುದಾಗಿದೆ.)

ನ ನಿಷ್ಕೃತಿರ್ಭವೇತ್ತಸ್ಯ ಯೋ ಹನ್ಯಾಚ್ಛರಣಾಗತಮ್ ।

ಶರಣಾಗತರನ್ನು ರಕ್ಷಿಸಿ ಗೋಹತ್ಯಾಪಾಪವನ್ನಾದರೂ ಕಳೆದುಕೊಳ್ಳ

ಬಹುದು. ಆದರೆ ಶರಣಾಗತರನ್ನು ಯಾವನು ಸಂಹರಿಸುವನೋ–ಅವನಿಗೆ ಪ್ರಾಯಶ್ಚಿತ್ತವೇ ಇಲ್ಲ. ಶರಣಾಗತಹಂತಕನ ಪಾಪವನ್ನು ಯಾವುದೇ ಧರ್ಮಾಚರಣೆಯಿಂದಲೂ ಹೋಗಲಾಡಿಸಿಕೊಳ್ಳಲು ಸಾಧ್ಯವೇ ಆಗುವುದಿಲ್ಲ.

ಇತಿಹಾಸಮಿಮಂ ಶ್ರುತ್ವಾ ಪುಣ್ಯಂ ಪಾಪಪ್ರಣಾಶನಮ್ ।
ನ ದುರ್ಗತಿಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ ॥೧೯॥

ಪಾಪನಾಶಕವಾದ, ಪುಣ್ಯಪ್ರದವಾದ ಈ ಇತಿಹಾಸವನ್ನು ಕೇಳುವುದರಿಂದ ಮನುಷ್ಯನು ಯಾವುದೇ ಕಾರಣದಿಂದಲೂ ದುರ್ಗತಿಯನ್ನು ಹೊಂದುವುದಿಲ್ಲ. ಅವಸಾನಾನಂತರದಲ್ಲಿ ಸ್ವರ್ಗವನ್ನೇ ಸೇರುತ್ತಾನೆ."

ನೂರನಲವತ್ತೊಂಬತ್ತನೆಯ ಅಧ್ಯಾಯವು ಮುಗಿಯಿತು.

೧೫೦ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಇಂದ್ರೋತಮುನಿಯು ಜನಮೇಜಯಮಹಾರಾಜನನ್ನು ನಿಂದಿಸಿದುದು

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಬುದ್ಧಿಪೂರ್ವಂ ಯತ್ಪಾಪಂ ಕುರ್ಯಾದ್ಭರತಸತ್ತಮ ।
ಮುಚ್ಯತೇ ಸ ಕಥಂ ತಸ್ಮಾದೇತತ್ಸರ್ವಂ ವದಸ್ವ ಮೇ ॥೧॥

"ಭರತಶ್ರೇಷ್ಠನೇ! ಅಜ್ಞಾನದ ಕಾರಣದಿಂದ ತಿಳಿಯದೆ ಒಬ್ಬನು ಪಾಪವನ್ನು ಮಾಡಿದರೆ–ಅವನು ಆ ಪಾಪದಿಂದ ಹೇಗೆ ವಿಮುಕ್ತನಾಗುತ್ತಾನೆ? ಇದಕ್ಕೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನೂ ನನಗೆ ತಿಳಿಸು."

"ಯುಧಿಷ್ಠಿರ! ಈ ವಿಷಯದಲ್ಲಿ ಋಷಿಗಳ ಪ್ರಶಂಸೆಗೂ ಪಾತ್ರವಾಗಿರುವ ಒಂದು ಪ್ರಾಚೀನೇತಿಹಾಸವನ್ನು ನಿನಗೆ ಹೇಳುತ್ತೇನೆ. ಇದೇ ವಿಷಯವಾಗಿಯೇ ಶುನಕವಂಶೀಯನಾದ ಇಂದ್ರೋತನೆಂಬ ಬ್ರಾಹ್ಮಣನು ಜನಮೇಜಯರಾಜನೊಡನೆ ಏನು ಹೇಳಿದನೆಂಬುದನ್ನು ಕೇಳು :

ಹಿಂದೆ * ಪರೀಕ್ಷಿತನ ಮಗನಾದ ಜನಮೇಜಯನೆಂಬ ರಾಜನಿದ್ದನು.

---

* ಇಲ್ಲಿ ಬಂದಿರುವ ಪರೀಕ್ಷಿತ ಮತ್ತು ಜನಮೇಜಯರು ಅರ್ಜುನನ ಪೌತ್ರ-ಪ್ರಪೌತ್ರರಲ್ಲ.

ಅವನು ಮಹಾಪರಾಕ್ರಮಿಯಾಗಿದ್ದನು. ಅವನೊಮ್ಮೆ ತನಗೆ ಅರಿವಿಲ್ಲದಂತೆಯೇ ಬ್ರಹ್ಮಹತ್ಯಾಪಾಪಕ್ಕೆ ಗುರಿಯಾದನು. (ಬ್ರಾಹ್ಮಣನೆಂಬುದನ್ನು ತಿಳಿಯದೇ ಹತ್ಯೆಮಾಡಿಬಿಟ್ಟನು.) ಪುರೋಹಿತರೇ ಆದಿಯಾಗಿ ಎಲ್ಲ ಬ್ರಾಹ್ಮಣರೂ ಜನಮೇಜಯನನ್ನು ಪರಿತ್ಯಜಿಸಿದರು. ಅದರ ಪರಿಣಾಮವಾಗಿ ರಾಜನು ಹಗಲು-ರಾತ್ರಿಗಳೆನ್ನದೇ ಚಿಂತೆಯೆಂಬ ಅಗ್ನಿಯನ್ನು ಹೃದಯದಲ್ಲಿಟ್ಟುಕೊಂಡು ಅದರಿಂದ ದಹಿಸಲ್ಪಡುತ್ತಾ ಅರಣ್ಯಕ್ಕೆ ಹೊರಟುಹೋದನು. ಪ್ರಜೆಗಳಿಂದಲೂ ತಿರಸ್ಕೃತನಾದ ಆ ರಾಜನು ಅರಣ್ಯದಲ್ಲಿದ್ದುಕೊಂಡೇ ಅನೇಕ ಪುಣ್ಯಕಾರ್ಯಗಳಲ್ಲಿ ತೊಡಗಿದನು. ದುಃಖದಿಂದ ದಹಿಸಲ್ಪಡುತ್ತಿದ್ದ ಜನಮೇಜಯನು ಬಹಳ ಕಾಲದವರೆಗೆ ತಪಸ್ಸುಮಾಡಿದನು. ಅನಂತರ ಆ ರಾಜನು ಸಮಸ್ತ ಭೂಮಂಡಲದಲ್ಲಿ ಯೂ ಸಂಚಾರಮಾಡುತ್ತಾಂದೊಂದು ದೇಶಕ್ಕೂ ಹೋಗಿ ಅಲ್ಲಿರುತ್ತಿದ್ದ ಬ್ರಾಹ್ಮಣರನ್ನು ಬ್ರಹ್ಮಹತ್ಯಾಪಾಪದ ನಿವಾರಣೆಗಾಗಿ ಉಪಾಯವೇನೆಂದು ಪ್ರಶ್ನಿಸುತ್ತಿದ್ದನು.

ಧರ್ಮಜ! ಅಲ್ಲಿ ನಡೆದ, ಧರ್ಮವನ್ನು ವೃದ್ಧಿಗೊಳಿಸುವ ಒಂದು ಇತಿಹಾಸವನ್ನು ಹೇಳುತ್ತೇನೆ ; ಕೇಳು : ತಾನು ಮಾಡಿದ ಪಾಪಕೃತ್ಯಕ್ಕಾಗಿ ಪರಿತಪಿಸುತ್ತಿದ್ದ ಜನಮೇಜಯನು ಭೂಮಂಡಲದಲ್ಲಿ ಪರ್ಯಟನಮಾಡುತ್ತಿದ್ದಾಗ–ಕಠೋರವ್ರತನಿಷ್ಠನಾದ ಶುನಕವಂಶೀಯನಾದ ಇಂದ್ರೋತನ ಬಳಿಗೆ ಹೋದನು. ಅಲ್ಲಿಗೆ ಹೋದೊಡನೆಯೇ ಜನಮೇಜಯನು ಇಂದ್ರೋತನ ಎರಡು ಪಾದಗಳನ್ನೂ ಭದ್ರವಾಗಿ ಹಿಡಿದುಕೊಂಡನು. ಒಡನೆಯೇ ಋಷಿಯು ತನ್ನೆರಡು ಪಾದಗಳನ್ನೂ ಬಿಡಿಸಿಕೊಂಡು ಸಮೀಪ ದಲ್ಲಿ ವಿನೀತನಾಗಿ ನಿಂತಿದ್ದ ರಾಜನನ್ನು ನೋಡಿ ಅವನನ್ನು ಬಹಳವಾಗಿ ನಿಂದಿಸತೊಡಗಿದನು :

ಕರ್ತಾ ಪಾಪಸ್ಯ ಮಹತೋ ಭ್ರೂಣಹಾ ಕಿಮಿಹಾಗತಃ ।
ಕಿಂ ತ್ವಯಾಸ್ಮಾಸು ಕರ್ತವ್ಯಂ ಮಾ ಮಾಂ ಸ್ಪ್ರಾಕ್ಷೀಃ ಕಥಂಚನ ।
ಗಚ್ಛ ಗಚ್ಛ ನ ತೇ ಸ್ಥಾನಂ ಪ್ರೀಣಾತ್ಯಸ್ಮಾನಿತಿ ಬ್ರುವನ್ ॥೧೦॥

"ಮಹಾಪಾಪವನ್ನು ಮಾಡಿರುವ ಭ್ರೂಣಹಂತಕನಾದ ನೀನು ಇಲ್ಲಿಗೇಕೆ ಬಂದೆ? ನಿನ್ನಿಂದ ನಮಗೆ ಯಾವ ಕಾರ್ಯವಾಗಬೇಕಾಗಿದೆ? ಯಾವುದೇ ಕಾರಣದಿಂದಲೂ ನೀನು ನನ್ನನ್ನು ಮುಟ್ಟಬೇಡ. ಈಗಲೇ ಹೊರಟುಹೋಗು. ನೀನಿಲ್ಲಿರುವುದು ನಮಗೆ ಇಷ್ಟವಿಲ್ಲ.

ರುಧಿರಸ್ಯೇವ ತೇ ಗನ್ಧಃ ಶವಸ್ಯೇವ ಚ ದರ್ಶನಮ್ ।
ಅಶಿವಃ ಶಿವಸಂಕಾಶೋ ಮೃತೋ ಜೀವನ್ನಿವಾಟಸಿ ॥೧೧॥



ನಿನ್ನ ಶರೀರದಿಂದ ಹೊರಸೂಸುತ್ತಿರುವ ವಾಸನೆಯು ರಕ್ತದ ವಾಸನೆಯಂತಿದೆ. ನಿನ್ನ ದರ್ಶನವು ಹೆಣದ ದರ್ಶನವನ್ನು ಹೋಲುತ್ತದೆ. (ಶವದಂತೆಯೇ ನೀನಿರುವೆ) ನೀನು ನೋಡುವುದಕ್ಕೆ ಮಂಗಳಸ್ವರೂಪನಾಗಿರುವೆ. ಆದರೆ ವಸ್ತುತಃ ನೀನು ಅಮಂಗಳಸ್ವರೂಪನು. ಮಹಾಪಾಪವನ್ನು ಮಾಡಿರುವ ಕಾರಣದಿಂದಾಗಿ ನೀನು ಸತ್ತವನೇ ಆಗಿದ್ದರೂ ಜೀವಿಸಿರುವವನಂತೆ ಅರಣ್ಯದಲ್ಲಿ ಸುತ್ತಾಡುತ್ತಿರುವೆ.

ಬ್ರಹ್ಮಮೃತ್ಯುರಶುದ್ಧಾತ್ಮಾ ಪಾಪಮೇವಾನುಚಿನ್ತಯನ್ ।
ಪ್ರಬುಧ್ಯಸೇ ಪ್ರಸ್ವಪಿಷಿ ವರ್ತಸೇ ಪರಮೇ ಸುಖೇ ॥೧೨॥

ನೀನು ಬ್ರಾಹ್ಮಣನ ಮರಣಕ್ಕೆ ಕಾರಣನಾಗಿರುವೆ. ನಿನ್ನ ಅಂತಃಕರಣವು ಅಪವಿತ್ರವಾಗಿದೆ. ನೀನು ಮಾಡಿರುವ ಪಾಪವನ್ನು ಸ್ಮರಣೆಮಾಡುತ್ತಲೇ ಹಗಲಾದಾಗ ಏಳುತ್ತಾ ; ರಾತ್ರಿಯಾದಾಗ ಮಲಗುತ್ತಾ–ಕಾಲ ಕಳೆಯುತ್ತಿರುವೆ. ಇದೇ ಸುಖವೆಂದೂ ಭಾವಿಸಿರುವೆ.

ಮೋಘಂ ತೇ ಜೀವಿತಂ ರಾಜನ್ಪರಿಕ್ಲಿಷ್ಟಂ ಚ ಜೀವಸಿ ।
ಪಾಪಾಯೈವ ಹಿ ಸೃಷ್ಟೋಽಸಿ ಕರ್ಮಣೇ ಹಿ ಯವೀಯಸೇ ॥೧೩॥

ಮಹಾರಾಜ! ನಿನ್ನ ಜೀವನವು ವ್ಯರ್ಥವೂ ಮತ್ತು ಕ್ಲೇಶಮಯವೂ ಆಗಿದೆ. ಪಾಪಕರ್ಮಗಳನ್ನೂ ಮತ್ತು ಹೀನಕರ್ಮಗಳನ್ನೂ ಮಾಡುವ ಸಲುವಾಗಿಯೇ ನೀನು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿರುವೆ.

ಬಹು ಕಲ್ಯಾಣಮಿಚ್ಛನ್ತಿ ಈಹನ್ತೇ ಪಿತರಃ ಸುತಾನ್ ।
ತಪಸಾ ದೈವತೇಜ್ಯಾಭಿರ್ವನ್ದನೇನ ತಿತಿಕ್ಷಯಾ ॥೧೪॥

ತಂದೆ-ತಾಯಿಗಳು ತಪಸ್ಸಿನಿಂದಲೂ, ದೇವತೆಗಳ ಪೂಜೆಯಿಂದಲೂ, ಗುರು-ಹಿರಿಯರಿಗೆ ಮಾಡುವ ಅಭಿವಾದನಗಳಿಂದಲೂ, ಕಷ್ಟ-ಸಹನಶೀಲತೆಗಳಿಂದಲೂ ಪುತ್ರರನ್ನು ಪಡೆದುಕೊಳ್ಳುತ್ತಾರೆ ಮತ್ತು ಹಾಗೆ ಪಡೆದುಕೊಂಡ ಮಕ್ಕಳಿಂದ ಬಹಳವಾದ ಕಲ್ಯಾಣವನ್ನು ಅಪೇಕ್ಷಿಸುತ್ತಾರೆ.

ಪಿತೃವಂಶಮಿಮಂ ಪಶ್ಯ ತ್ವತ್ಕೃತೇ ನರಕಂ ಗತಮ್ ।
ನಿರರ್ಥಾಃ ಸರ್ವ ಏವೈಷಾಮಾಶಾಬನ್ಧಾಸ್ತ್ವದಾಶ್ರಯಾಃ ॥೧೫॥

ನಿನ್ನ ಸಲುವಾಗಿ (ನೀನು ಮಾಡಿದ ಪಾಪದ ಕಾರಣದಿಂದಾಗಿ) ನರಕಕ್ಕೆ ಹೋಗಿರುವ ಈ ಪಿತೃಗಳನ್ನು ಕಣ್ಣುಬಿಟ್ಟು ನೋಡು. (ನಿನ್ನ ವಂಶದ ಪೂರ್ವಜರೆಲ್ಲರೂ ನರಕಕ್ಕೆ ಹೋಗಿದ್ದಾರೆ.) ನಿನ್ನನ್ನೇ ಆಶ್ರಯಿಸಿದ್ದ ಅವರ ಆಶಾಬಂಧಗಳೆಲ್ಲವೂ ನಿರರ್ಥಕವಾಗಿ ಹೋದುವು.

ಯಾನ್ಪೂಜಯನ್ತೋ ವಿನ್ದನ್ತಿ ಸ್ವರ್ಗಮಾಯುರ್ಯಶಃ ಪ್ರಜಾಃ ।
ತೇಷು ತ್ವಂ ಸತತಂ ದ್ವೇಷ್ಟಾ ಬ್ರಾಹ್ಮಣೇಷು ನಿರರ್ಥಕಃ ॥೧೬॥

ಯಾರನ್ನು ಪೂಜಾದಿಗಳಿಂದ ಸತ್ಕರಿಸಿ ಮಾನವರು ಸ್ವರ್ಗ, ಆಯುಷ್ಯ, ಯಶಸ್ಸು ಮತ್ತು ಸಂತಾನಗಳನ್ನು ಪಡೆದುಕೊಳ್ಳುವರೋ–ಅಂತಹ ಬ್ರಾಹ್ಮಣರಲ್ಲಿ ನೀನು ಸತತವಾಗಿ ದ್ವೇಷಭಾವದಿಂದಿರುವೆ. ಆದುದರಿಂದ ನಿನ್ನ ಜೀವನವು ಸಂಪೂರ್ಣವಾಗಿ ವ್ಯರ್ಥವೇ ಸರಿ.

ಇಮಂ ಲೋಕಂ ವಿಮುಚ್ಯ ತ್ವಮವಾಙ್ಮೂರ್ಧಾ ಪತಿಷ್ಯಸಿ ।
ಅಶಾಶ್ವತೀಃ ಶಾಶ್ವತೀಶ್ಚ ಸಮಾಃ ಪಾಪೇನ ಕರ್ಮಣಾ ॥೧೭॥

ಈ ಲೋಕವನ್ನು ಬಿಟ್ಟುಹೋದನಂತರ ನೀನು ಮಾಡಿರುವ ಪಾಪ ಕರ್ಮದ ಫಲವಾಗಿ ಮಿತಿಯಿರುವಷ್ಟು ಮತ್ತು ಮಿತಿಯಿಲ್ಲದಷ್ಟು (ಅನಂತ) ವರ್ಷಗಳ ಪರ್ಯಂತವಾಗಿ ಅಧಃಶಿರನಾಗಿ ನರಕದಲ್ಲಿ ಬಿದ್ದಿರುವೆ.

ಅರ್ದ್ಯಮಾನೋ ಯತ್ರ ಗೃಧ್ರೈಃ ಶಿತಿಕಣ್ಠೈರಯೋಮುಖೈಃ ।
ತತಶ್ಚ ಪುನರಾವೃತ್ತಃ ಪಾಪಯೋನಿಂ ಗಮಿಷ್ಯಸಿ ॥೧೮॥

ಲೋಹಮಯವಾದ ಕೊಕ್ಕುಗಳುಳ್ಳ ಹದ್ದುಗಳಿಂದಲೂ ಮತ್ತು ನವಿಲುಗಳಿಂದಲೂ ಪೀಡಿಸಲ್ಪಡುತ್ತಾ ಅನೇಕವರ್ಷಗಳವರೆಗೆ ನರಕದಲ್ಲಿದ್ದು ಅನಂತರ ಪುನಃ ಭೂಲೋಕಕ್ಕೆ ಹಿಂದಿರುಗಿ ಪಾಪ (ನೀಚ) ಯೋನಿ ಯಲ್ಲಿಯೇ ಜನ್ಮವನ್ನು ತಾಳುವೆ.

ಯದಿದಂ ಮನ್ಯಸೇ ರಾಜನ್ನಾಯಮಸ್ತಿ ಕುತಃ ಪರಃ ।
ಪ್ರತಿಸ್ಮಾರಯಿತಾರಸ್ತ್ವಾಂ ಯಮದೂತಾ ಯಮಕ್ಷಯೇ ॥೧೯॥

ಮಹಾರಾಜ! 'ಈ ಲೋಕದಲ್ಲಿ ಪಾಪದ ಫಲವನ್ನು ಅನುಭವಿಸುವುದಿಲ್ಲವೆಂದಮೇಲೆ ಪರಲೋಕವೆಂಬುದೆಲ್ಲಿದೆ? ಪರಲೋಕದಲ್ಲಿ ಈ ಲೋಕದ ಕರ್ಮಫಲವನ್ನು ಅನುಭವಿಸುವುದಾದರೂ ಹೇಗೆ? ಅದಕ್ಕೆ ಪ್ರಮಾಣವಾದರೂ ಏನು?"–ಎಂದು ಭಾವಿಸುವೆಯಾದರೆ–ಯಮನ ಅರಮನೆಯಲ್ಲಿ ಯಮದೂತರು ನಿನಗೆ ಈ ಎಲ್ಲವನ್ನೂ ಜ್ಞಾಪಕಕ್ಕೆ ತರುತ್ತಾರೆ."

೧೫೦ನೆಯ ಅಧ್ಯಾಯವು ಮುಗಿಯಿತು.

ಜನಮೇಜಯನು ಇಂದ್ರೋತಮುನಿಗೆ ಶರಣಾಗತನಾದುದು : ಬ್ರಾಹ್ಮಣದ್ರೋಹವನ್ನು ಮಾಡುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿಸಿಕೊಂಡು ಇಂದ್ರೋತನು ಜನಮೇಜಯನಿಗೆ ಆಶ್ರಯವನ್ನು ನೀಡಿದುದು

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಇಂದ್ರೋತಮುನಿಯಿಂದ ಹೀಗೆ ನಿಂದಿತನಾದ ಜನಮೇಜಯನು ಮುನಿಗೆ ಹೇಳಿದನು :

ಗರ್ಹ್ಯಂ ಭವಾನ್ಗರ್ಹಯತೇ ನಿನ್ದ್ಯಂ ನಿನ್ದತಿ ಮಾಂ ಪುನಃ ।
ಧಿಕ್ಕಾರ್ಯಂ ಮಾಂ ಧಿಕ್ಕುರುತೇ ತಸ್ಮಾತ್ತ್ವಾಹಂ ಪ್ರಸಾದಯೇ ॥೧॥

"ಭಗವನ್! ತಿರಸ್ಕಾರಕ್ಕೆ ಯೋಗ್ಯನಾದವನನ್ನು ನೀವು ತಿರಸ್ಕರಿಸುತ್ತಿರುವಿರಿ. ನಿಂದೆಗೆ ಪಾತ್ರನಾದವನನ್ನು ನಿಂದಿಸುತ್ತಿರುವಿರಿ. ಧಿಕ್ಕಾರಕ್ಕೆ ಯೋಗ್ಯನಾದವನನ್ನು ಧಿಕ್ಕರಿಸುತ್ತಿರುವಿರಿ. ನಾನು ಇಷ್ಟೊಂದು ಅಯೋಗ್ಯನಾಗಿರುವುದರಿಂದಲೇ ನಾನು ಮಾಡಿರುವ ಪಾಪಪರಿಹಾರಕ್ಕಾಗಿ ನಿಮ್ಮನ್ನು ಪ್ರಸನ್ನಗೊಳಿಸಲು ಪ್ರಯತ್ನಿಸುತ್ತಿದ್ದೇನೆ.

ಸರ್ವಂ ಹೀದಂ ದುಷ್ಕೃತಂ ಮೇ ಜ್ವಲಾಮ್ಯಗ್ನಾವಿವಾಹಿತಃ ।
ಸ್ವಕರ್ಮಾಣ್ಯಭಿಸಂಧಾಯ ನಾಭಿನನ್ದತಿ ಮೇ ಮನಃ ॥೨॥

ನೀವು ಹೇಳಿರುವ ಎಲ್ಲ ದುಷ್ಕೃತ್ಯಗಳನ್ನೂ ನಾನು ಮಾಡಿದ್ದೇನೆ. ಅದಕ್ಕಾಗಿ ನಾನು ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಬಿದ್ದಿರುವವನಂತೆ–ಪರಿತಪಿಸುತ್ತಿದ್ದೇನೆ. ನಾನು ಇದುವರೆಗೆ ಮಾಡಿರುವ ದುಷ್ಕರ್ಮಗಳೆಲ್ಲವನ್ನೂ ಸ್ಮರಿಸುತ್ತಿದ್ದಂತೆಲ್ಲಾ ನನ್ನ ಮನಸ್ಸು ಪ್ರಸನ್ನವಾಗಿರುವುದಿಲ್ಲ. ತೊಳಲುತ್ತಿರುತ್ತದೆ.

ಪ್ರಾಪ್ಯ ಘೋರಂ ಭಯಂ ನೂನಂ ಮಯಾ ವೈವಸ್ವತಾದಪಿ ।
ತತ್ತು ಶಲ್ಯಮನಿರ್ಹೃತ್ಯ ಕಥಂ ಶಕ್ಷ್ಯಾಮಿ ಜೀವಿತುಮ್ ।
ಸರ್ವಂ ಮನ್ಯುಂ ವಿನೀಯತ್ವಮಭಿ ಮಾಂ ವದ ಶೌನಕ ॥೩॥

ಮುಂದೆ ಯಮನಿಂದಲೂ ಘೋರವಾದ ಭಯವು ನನಗೆ ಒದಗಿಯೇ

ತೀರುತ್ತದೆ. ನನ್ನ ಹೃದಯದಲ್ಲಿ ನಾಟಿಕೊಂಡಿರುವ ಭಯವೆಂಬ ಶಲ್ಯವನ್ನು ಕೀಳದೇ ನಾನು ಹೇಗೆತಾನೇ ಜೀವಿಸಲು ಸಮರ್ಥನಾಗುತ್ತೇನೆ? ಶೌನಕರೇ! ನಿಮಗೆ ನನ್ನ ಮೇಲೆ ಉಂಟಾಗಿರುವ ಎಲ್ಲ ಕೋಪವನ್ನೂ ದೂರಮಾಡಿ ನನ್ನನ್ನು ಉದ್ಧರಿಸಲು ಯಾವುದಾದರೂ ಉಪಾಯವನ್ನು ಹೇಳಿರಿ.

ಮಹಾನಾಸಂ ಬ್ರಾಹ್ಮಣಾನಾಂ ಭೂಯೋ ವಕ್ಷ್ಯಾಮಿ ಸಾಮ್ಪ್ರತಮ್ ।
ಅಸ್ತು ಶೇಷಂ ಕುಲಸ್ಯಾಸ್ಯ ಮಾ ಪರಾಭೂದಿದಂ ಕುಲಮ್ ॥೫॥

ನಾನು ಬ್ರಾಹ್ಮಣರಿಗೆ ಮಹಾಭಕ್ತನಾಗಿದ್ದೆನು. (ಅವರನ್ನು ದ್ವೇಷಿಸುತ್ತಿರಲಿಲ್ಲ.) ನಾನು ಈ ಸಮಯದಲ್ಲಿ ನಿಮಗೆ ಪುನಃ ಎಲ್ಲ ವಿಷಯ ಗಳನ್ನೂ ಹೇಳುತ್ತೇನೆ. ಏಕೆಂದರೆ : ಪವಿತ್ರವಾದ ನನ್ನ ಕುಲದ ಶೇಷವಾದರೂ ಉಳಿಯಬೇಕು. ನಾನು ಮಾಡಿರುವ ಪಾಪದ ಕಾರಣದಿಂದ ನನ್ನ ಕುಲವೇ ಸಂಪೂರ್ಣವಾಗಿ ವಿನಾಶವನ್ನು ಹೊಂದಬಾರದು.

ನ ಹಿ ನೋ ಬ್ರಹ್ಮಶಪ್ತಾನಾಂ ಶೇಷಂ ಭವಿತುಮರ್ಹತಿ ।
ಸ್ತುತೀರಲಭಮಾನಾನಾಂ ಸಂವಿದಂ ವೇದನಿಶ್ಚಿತಾನ್ ॥೬॥

ನಿರ್ವಿದ್ಯಮಾನಃ ಸುಭೃಶಂ ಭೂಯೋ ವಕ್ಷ್ಯಾಮಿ ಸಾಮ್ಪ್ರತಮ್ ।
ಭೂಯಶ್ಚೈವಾಭಿರಕ್ಷನ್ತು ನಿರ್ಧನಾನ್ನಿರ್ಜನಾ ಇವ ॥೭॥

ಬ್ರಾಹ್ಮಣರ ಶಾಪಕ್ಕೆ ಒಳಗಾಗಿ (ಬ್ರಾಹ್ಮಣನನ್ನು ಹಿಂಸಿಸಿ) ನಮ್ಮ ವಂಶದ ಶೇಷವು ಉಳಿದುಕೊಳ್ಳಲಾರದು. ಪಾಪಮಾಡಿದ ಕಾರಣದಿಂದಾಗಿ ಸಮಾಜದಲ್ಲಿ ನಾನು ಯಾವ ವಿಧವಾದ ಗೌರವವನ್ನೂ ಸ್ತುತಿಗಳನ್ನೂ ಹೊಂದುತ್ತಿಲ್ಲ. ಬಂಧುಗಳೊಡನೆ ಸೇರುತ್ತಲೂ ಇಲ್ಲ. (ಬಹಿಷ್ಕೃತನಾಗಿ ದ್ದೇನೆ) ಅತ್ಯಂತಖೇದಗೊಂಡಿರುವ ನಾನು ವೇದಗಳಲ್ಲಿ ನಿಶ್ಚಯಾತ್ಮಕ ಜ್ಞಾನ ವುಳ್ಳ ನಿಮ್ಮೊಡನೆ ಪುನಃ ನನ್ನ ವಿಷಯಗಳೆಲ್ಲವನ್ನೂ ಹೇಳುತ್ತೇನೆ. ನಿರ್ಜನ ಸ್ಥಾನದಲ್ಲಿರುವ ಯೋಗಿಗಳು ದೀನರನ್ನು ರಕ್ಷಿಸುವಂತೆ ನೀವು ದಯಾ ಪೂರ್ಣರಾಗಿ ನಮ್ಮಂತಹ ದುಃಖಿಗಳನ್ನು ರಕ್ಷಿಸಿರಿ. (ನಿರ್ಧನಾನ್ ಎಂಬು ದಕ್ಕೂ ನಿರ್ಜನಾ ಇವ ಎಂಬುದಕ್ಕೂ ವ್ಯಾಖ್ಯಾನಕಾರರು ವಿಶೇಷಾರ್ಥ ವನ್ನು ಮಾಡಿದ್ದಾರೆ. ಅವರ ವ್ಯಾಖ್ಯೆಗೆ ಅನುಸಾರವಾಗಿ ನಿರ್ಜನಾ ಇವ ಎಂಬುದಕ್ಕೆ ಯೋಗಿಗಳಂತೆ ಎಂದು ಭಾಷಾಂತರಿಸಲಾಗಿದೆ. ನಿರ್ಜನಾಃ =

ನಿಷ್ಪರಿಗ್ರಹಾಃ – ಪ್ರತಿಗ್ರಹಿಸದೇ ಇರುವವರು. ನಿರ್ಧನಾನ್ = ದೀನಾನ್ – ದೀನರನ್ನು ಎಂದು ವ್ಯಾಖ್ಯಾನಮಾಡಿದ್ದಾರೆ. ಆದರೆ ನಿರ್ಜನಾಃ ಎಂಬುದಕ್ಕೆ ಯೋಗಿಗಳು ಎಂಬ ಅರ್ಥವು ಸ್ವಾಭಾವಿಕವಾದ ಅರ್ಥವಾಗುವುದಿಲ್ಲ. ನಿರ್ಜನಪ್ರದೇಶಗಳು ಎಂದು ಸ್ವಾಭಾವಿಕವಾದ ಅರ್ಥವನ್ನು ತೆಗೆದುಕೊಂಡರೆ ಸಮನ್ವಯವಾಗುವುದಿಲ್ಲವಾದುದರಿಂದ ವ್ಯಾಖ್ಯಾನಕಾರರ ವ್ಯಾಖ್ಯೆಯನ್ನೇ ಅವಲಂಬಿಸಿ ಅರ್ಥಮಾಡಬೇಕಾಗಿದೆ. ನಿರ್ಧನಾನ್ನಿರ್ಜರಾ ಇವ ಎಂದಿದ್ದರೆ ಸರಿಹೋಗುತ್ತಿತ್ತು. ದೇವತೆಗಳು ದರಿದ್ರರನ್ನು ರಕ್ಷಿಸುವಂತೆ–ಎಂದಾಗುತ್ತದೆ. ಲಿಪಿಕಾರರ ಬರವಣಿಗೆಯಲ್ಲಿ ತಪ್ಪಾಗಿ ರೇಫಕ್ಕೆ ನಕಾರವು ಬಿದ್ದಿರಬಹುದೆಂದೂ ಊಹಿಸಬಹುದಾಗಿದೆ.)

ನ ಹ್ಯಯಜ್ವಾ ಅಮುಂ ಲೋಕಂ ಪ್ರಾಪ್ನುವನ್ತಿ ಕಥಞ್ಚನ ।
ಆಪಾತಾನ್ಪ್ರತಿತಿಷ್ಠನ್ತಿ ಪುಲಿನ್ದಶಬರಾ ಇವ ॥೮॥

ಯಜ್ಞವನ್ನು ಮಾಡದೇ ಇರತಕ್ಕ ಕ್ಷತ್ರಿಯರು ಪುನಃ ಈ ಲೋಕವನ್ನು ಯಾವುದೇ ಕಾರಣದಿಂದಲೂ ಹೊಂದುವುದಿಲ್ಲ. ಪುಲಿಂದ-ಶಬರರಂತೆ (ಮ್ಲೇಚ್ಛರಂತೆ) ನರಕಗಳಲ್ಲಿಯೇ ಶಾಶ್ವತವಾಗಿ ಪ್ರತಿಷ್ಠಿತರಾಗುತ್ತಾರೆ.

ಅವಿಜ್ಞಾಯೈವ ಮೇ ಪ್ರಜ್ಞಾಂ ಬಾಲಸ್ಯೇವ ಸುಪಣ್ಡಿತಃ ।
ಬ್ರಹ್ಮನ್ಪಿತೇವ ಪುತ್ರಸ್ಯ ಪ್ರೀತಿಮಾನ್ಭವ ಶೌನಕ ॥೯॥

ಬ್ರಾಹ್ಮಣೋತ್ತಮರೇ! ನೀವು ಒಳ್ಳೆಯ ವಿದ್ವಾಂಸರಾಗಿರುವಿರಿ. ಬಾಲಕನ (ಮೂರ್ಖನ) ಬುದ್ಧಿಯಂತೆಯೇ ಇರುವ–ನನ್ನ ಪ್ರಜ್ಞೆಯನ್ನು (ದುಷ್ಟಪ್ರಜ್ಞೆಯನ್ನು) ಗಮನಕ್ಕೆ ತೆಗೆದುಕೊಳ್ಳದೇ ತಂದೆಯು ಪುತ್ರನ ವಿಷಯದಲ್ಲಿ (ತಪ್ಪುಮಾಡಿದರೂ) ಪ್ರೀತಿಯುಕ್ತನಾಗಿರುವಂತೆ ನೀವು ನನ್ನ ವಿಷಯದಲ್ಲಿ ಪ್ರಸನ್ನರಾಗಿರಿ. (ಅಜ್ಞಾನದಿಂದ ಮಾಡಿದ ಬ್ರಹ್ಮಹತ್ಯೆಯನ್ನು ಗಮನಿಸದೆ ಅನುಗ್ರಹಿಸಿರಿ.”)

ಬ್ರಹ್ಮನ್! ತ್ವಂ ಸುಪಣ್ಡಿತಃ । ಬಾಲಸ್ಯೇವ ಮೇ ಪ್ರಜ್ಞಾಂ (ಅಪ್ರಜ್ಞಾಂ) ಅವಿಜ್ಞಾಯೈವ ಪುತ್ರಸ್ಯ ಪಿತೇವ ಪ್ರೀತಿಮಾನ್ ಭವ–ಎಂದು ಅನ್ವಯಿಸಿ ಈ ಶ್ಲೋಕಕ್ಕೆ ಅರ್ಥಮಾಡಲಾಗಿದೆ. ಸ ಪಣ್ಡಿತಃ ಎಂಬುದನ್ನು ಪಾಠಾಂತರದ ಪ್ರಕಾರ ಸುಪಣ್ಡಿತಃ ಎಂದು ಮಾಡಿಕೊಳ್ಳ

ಲಾಗಿದೆ. ಆದರೆ ವ್ಯಾಖ್ಯಾನಕಾರರು ಈ ಶ್ಲೋಕಕ್ಕೆ ವಿಶೇಷಾರ್ಥವನ್ನು ಕಲ್ಪಿಸಿರುತ್ತಾರೆ. **ಸ ಪಣ್ಡಿತಃ ಯಃ ಮದ್ದೋಷಾನ್ ಜಾನಾತಿ** = ಯಾವ ಪಂಡಿತನು ನಾನು ಬಹಿರಂಗದಲ್ಲಿ ಮಾಡಿರುವ ದೋಷಗಳನ್ನು ಮಾತ್ರವೇ ತಿಳಿದಿರುವನೋ, **ನ ತು ಅನ್ತಸ್ಥಾಂ ಪ್ರಜ್ಞಾಂ, ಶರಣಾಗತೋಽಹ ಮಿತ್ಯೇವಂ ರೂಪಾಂ** – ನನ್ನ ಹೃದಯದಲ್ಲಿರುವ ಶರಣಾಗತರೂಪವಾದ ಪ್ರಜ್ಞೆಯನ್ನು ತಿಳಿದಿರುವುದಿಲ್ಲವೋ, **ಸ ತು ಅಪಣ್ಡಿತಃ** ಅವನು ಪಂಡಿತನೇ ಅಲ್ಲ. ಎಂಬುದಾಗಿ ವ್ಯಾಖ್ಯಾನ ಮಾಡಿರುತ್ತಾರೆ. **ಅಪಣ್ಡಿತಃ** ಎಂಬುದು ಶ್ಲೋಕದಲ್ಲಿಲ್ಲ. ಅಧ್ಯಾಹಾರಮಾಡಿಕೊಂಡಿರುತ್ತಾರೆ.)

ಇಂದ್ರೋತಮುನಿಯು ಹೇಳುತ್ತಾನೆ :

ಕಿಮಾಶ್ಚರ್ಯಂ ಯದಪ್ರಾಜ್ಞೋ
ಬಹು ಕುರ್ಯಾದಸಾಮ್ಪ್ರತಮ್ ।
ಇತಿ ವೈ ಪಣ್ಡಿತೋ ಭೂತ್ವಾ
ಭೂತಾನಾಂ ನಾನುಕುಪ್ಯತೇ ॥೧೦॥

"ಅಜ್ಞಾನಿಯಾದ ಮನುಷ್ಯನು ಅನೇಕವಾಗಿ ಅಕಾರ್ಯಗಳನ್ನು ಮಾಡುವನೆಂಬುದರಲ್ಲಿ ಆಶ್ಚರ್ಯವೇನಿದೆ? ಈ ರಹಸ್ಯವನ್ನು ತಿಳಿದು ಬುದ್ಧಿವಂತನಾದ ಮನುಷ್ಯನು (ಪಂಡಿತನು) ಪ್ರಾಣಿಗಳ ವಿಷಯದಲ್ಲಿ ಕೋಪಗೊಳ್ಳುವುದಿಲ್ಲ. (ವ್ಯಾಖ್ಯಾನಕಾರರ ಪಾಠದಲ್ಲಿ **ಯದಪ್ರಾಜ್ಞಃ** ಎಂಬು ದಕ್ಕೆ **ತತಃ ಪ್ರಾಜ್ಞಃ** ಎಂದೂ **ಬಹು** = ಎಂಬುದಕ್ಕೆ 'ಬ್ರಹ್ಮ' ಎಂಬುದಾಗಿಯೂ ಇದೆ. ಅವರು ಹೀಗೆ ವ್ಯಾಖ್ಯೆ ಮಾಡಿದ್ದಾರೆ. **ಬ್ರಹ್ಮ = ಬ್ರಾಹ್ಮಣ ಜಾತಿಃ** = ಬ್ರಾಹ್ಮಣ ಜಾತಿಯು, **ಕುಪಿತಾ ಸತೀ** = ಕೋಪಗೊಳ್ಳಲಾಗಿ, **ಅಸಾಮ್ಪ್ರತಮಪಿ** = ಅಯುಕ್ತವಾದ ಕಾರ್ಯವನ್ನೂ, **ಕುರ್ಯಾತ್** = ಮಾಡೀತು. **ಅತ್ರ** = ಈ ವಿಷಯದಲ್ಲಿ **ಕಿಮಾಶ್ಚರ್ಯಂ** = ಆಶ್ಚರ್ಯವೇನಿದೆ? ಆಶ್ಚರ್ಯವೇನಿಲ್ಲ. **ಅತಃ** = ಆದುದರಿಂದ **ಪ್ರಾಜ್ಞಃ** = **ಬುದ್ಧಿಮಾನ್** - ಬುದ್ಧಿವಂತನು, **ಇತಿ** = **ಏವಂ ಪ್ರಕಾರೇಣ** – ಹೀಗೆ **ಪಣ್ಡಿತೋ ಭೂತ್ವಾ** = **ವಿವೇಕವಾನ್ ಭೂತ್ವಾ** – ವಿವೇಕವಂತನಾಗಿ

ಭೂತಾನಾಂ – ಪ್ರಾಣಿಗಳ ವಿಷಯದಲ್ಲಿ, ನಾನುಕುಪ್ಯತೇ = ಅನುಕೋಪಂ ನ ಕರೋತಿ ಕೋಪಗೊಳ್ಳುವುದಿಲ್ಲ. ಬ್ರಾಹ್ಮಣರೇ ಕುಪಿತರಾದಾಗ ಅಯುಕ್ತವಾದ ಕಾರ್ಯವನ್ನೇ ಮಾಡುವಾಗ ಸಾಮಾನ್ಯಮನುಷ್ಯರು ಕೋಪಗೊಂಡು–ತಪ್ಪು ಮಾಡಿದರೂ ಪಂಡಿತನಾದವನು ಕೋಪಗೊಳ್ಳುವುದಿಲ್ಲ–ಎಂಬುದು ತಾತ್ಪರ್ಯ.)

ಪ್ರಜ್ಞಾಪ್ರಾಸಾದಮಾರುಹ್ಯ ಅಶೋಚ್ಯಃ ಶೋಚತೇ ಜನಾನ್ ।
ಜಗತೀಸ್ಥಾನಿವಾದ್ರಿಸ್ಥಃ ಪ್ರಜ್ಞಯಾ ಪ್ರತಿಪತ್ಸ್ಯತಿ ॥೧೧॥

ವಿಶುದ್ಧವಾದ ಬುದ್ಧಿಯೆಂಬ ಪ್ರಾಸಾದವನ್ನು ಹತ್ತಿ–ಪ್ರಜ್ಞಾಬಲದಿಂದ ಶೋಕರಹಿತನಾಗಿ–ದುಃಖಿಗಳಾದ ಇತರ ಜನರ ಸಲುವಾಗಿ ಶೋಕಿಸುತ್ತಾನೆ. ಅವನು ತನ್ನ ಜ್ಞಾನಬಲದಿಂದ–ಪರ್ವತದ ಮೇಲಿರುವವನು ಭೂಮಿಯ ಮೇಲೆ ಇರುವವರನ್ನು ಸ್ಪಷ್ಟವಾಗಿ ನೋಡುವಂತೆ–ಲೋಕದ ಜನರನ್ನು ನೋಡಿ ಎಲ್ಲವನ್ನೂ ತಿಳಿದುಕೊಳ್ಳುತ್ತಾನೆ.

ನ ಚೋಪಲಭ್ಯತೇ ತೇನ ನ ಚಾಶ್ಚರ್ಯಾಣಿ ಕುರ್ವತೇ ।
ನಿರ್ವಿಣ್ಣಾತ್ಮಾ ಪರೋಕ್ಷೋ ವಾ ಧಿಕ್ಕೃತಃ ಪೂರ್ವಸಾಧುಷು ॥೧೨॥

ಪ್ರಾಚೀನರಾದ ಸಾಧುಗಳ ವಿಷಯದಲ್ಲಿ ಯಾವನು ವಿರಕ್ತನಾಗಿರುವನೋ, ಆ ಸಾಧುಗಳ ದೃಷ್ಟಿಪಥದಿಂದ ದೂರವಿರುವನೋ, ಅವರ ಧಿಕ್ಕಾರಕ್ಕೆ ಪಾತ್ರನಾಗಿರುವನೋ – ಅಂತಹವನಿಗೆ ಜ್ಞಾನವು ಲಭ್ಯವಾಗುವುದಿಲ್ಲ. ಅಂತಹ ಪುರುಷನ ವಿಷಯದಲ್ಲಿ ಜನರು ಆಶ್ಚರ್ಯವನ್ನೂ ವ್ಯಕ್ತಪಡಿಸುವುದಿಲ್ಲ.

ವಿದಿತಂ ಭವತೋ ವೀರ್ಯಂ ಮಾಹಾತ್ಮ್ಯಂ ವೇದ ಆಗಮೇ ।
ಕುರುಷ್ವೇಹ ಯಥಾಶಾನ್ತಿ ಬ್ರಹ್ಮಾ ಶರಣಮಸ್ತು ತೇ ॥೧೩॥

ನಿನಗೆ ಬ್ರಾಹ್ಮಣರ ಶಕ್ತಿಯು ಎಷ್ಟೆಂಬುದು ತಿಳಿದಿದೆ. ಬ್ರಾಹ್ಮಣರ ಮಾಹಾತ್ಮ್ಯವು ವೇದ-ಶಾಸ್ತ್ರಗಳಲ್ಲಿಯೂ ಕೀರ್ತಿಸಲ್ಪಟ್ಟಿದೆ. ಆದುದರಿಂದ ನೀನು ಶಾಂತಿಪೂರ್ವಕವಾಗಿ ಬ್ರಾಹ್ಮಣರನ್ನು ಪ್ರಸನ್ನಗೊಳಿಸಲು ಪ್ರಯತ್ನಿಸು. ಬ್ರಾಹ್ಮಣರು ನಿನಗೆ ಶರಣ್ಯರಾಗಲಿ.

ತದ್ವೈ ಪಾರತ್ರಿಕಂ ತಾತ ಬ್ರಾಹ್ಮಣಾನಾಮಕುಪ್ಯತಾಮ್ ।
ಅಥವಾ ತಪ್ಯಸೇ ಪಾಪೇ ಧರ್ಮಮೇವಾನುಪಶ್ಯ ವೈ ॥೧೪॥

ಕ್ರೋಧರಹಿತರಾದ ಬ್ರಾಹ್ಮಣರಿಗೆ ನೀನು ಮಾಡುವ ಸೇವೆಯು ಪರಲೋಕಪ್ರಾಪ್ತಿಗೆ ಸಾಧಕವಾಗುತ್ತದೆ. ಅಥವಾ ನೀನು ಮಾಡಿರುವ ಪಾಪಕ್ಕೆ ಪಶ್ಚಾತ್ತಾಪಪಡುವೆಯಾದರೆ ಧರ್ಮದ ಮೇಲೆಯೇ ನಿರಂತರವಾಗಿ ದೃಷ್ಟಿಯನ್ನಿಡು. (ಯಾವಾಗಲೂ ಧರ್ಮಕಾರ್ಯಗಳನ್ನೇ ಆಚರಿಸುತ್ತಿರು.)"

ಜನಮೇಜಯನು ಹೇಳುತ್ತಾನೆ :

ಅನುತಪ್ಯೇ ಚ ಪಾಪೇನ ನ ಚ ಧರ್ಮಂ ವಿಲೋಪಯೇ ।
ಬುಭೂಷುಂ ಭಜಮಾನಂ ಚ ಪ್ರೀತಿಮಾನ್ಭವ ಶೌನಕ ॥೧೫॥

"ಶೌನಕರೇ! ನಾನು ಮಾಡಿರುವ ಪಾಪಕಾರ್ಯಕ್ಕಾಗಿ ಪಶ್ಚಾತ್ತಾಪ ಪಡುತ್ತಿದ್ದೇನೆ. ಧರ್ಮಕ್ಕೆ ಲೋಪವನ್ನು ನಾನಿನ್ನೆಂದಿಗೂ ಮಾಡುವುದಿಲ್ಲ. ಶ್ರೇಯೋಭಿಲಾಷಿಯೂ ನಿಮ್ಮ ಭಕ್ತನೂ ಆಗಿರುವ ನನ್ನ ವಿಷಯದಲ್ಲಿ ಪ್ರಸನ್ನರಾಗಿರಿ."

ಇಂದ್ರೋತಮುನಿಯು ಹೇಳುತ್ತಾನೆ :

ಛಿತ್ತ್ವಾ ದಮ್ಭಂ ಚ ಮಾನಂ ಚ ಪ್ರೀತಿಮಿಚ್ಛಾಮಿ ತೇ ನೃಪ ।
ಸರ್ವಭೂತಹಿತೇ ತಿಷ್ಠ ಧರ್ಮಂ ಚೈವ ಪ್ರತಿಸ್ಮರನ್ ॥೧೬॥

"ಮಹಾರಾಜ! ನಾನು ನಿನ್ನಲ್ಲಿರುವ ದಂಭವನ್ನೂ–ಅಭಿಮಾನವನ್ನೂ ವಿನಾಶಗೊಳಿಸಿ ಅನಂತರ ನಿನಗೆ ಪ್ರಿಯವನ್ನುಂಟುಮಾಡಬೇಕೆನ್ನುವ ಆಶಯದಿಂದಿದ್ದೇನೆ. ನೀನು ನಿರಂತರವಾಗಿ ಧರ್ಮವನ್ನೇ ಸ್ಮರಿಸುತ್ತಾ ಸರ್ವ ಪ್ರಾಣಿಗಳ ಹಿತದಲ್ಲಿಯೂ ಆಸಕ್ತನಾಗಿರು.

ನ ಭಯಾನ್ನ ಚ ಕಾರ್ಪಣ್ಯಾನ್ನ ಲೋಭಾತ್ತ್ವಾಮುಪಾಹ್ವಯೇ ।
ತಾಂ ಮೇ ದೈವೀಂ ಗಿರಂ ಸತ್ಯಾಂ ಶೃಣು ತ್ವಂ ಬ್ರಾಹ್ಮಣೈಃ ಸಹ ॥

ಮಹಾರಾಜ! ನಾನು ಭಯದಿಂದಾಗಲೀ, ಕಾರ್ಪಣ್ಯದಿಂದಾಗಲೀ, ಲೋಭದಿಂದಾಗಲೀ–ನಿನ್ನನ್ನು ನನ್ನ ಬಳಿಗೆ ಆಹ್ವಾನಿಸುತ್ತಿಲ್ಲ. ನೀನು ಈ ಬ್ರಾಹ್ಮಣರೊಡನೆ ದೈವವಾಣಿಗೆ ಸಮಾನವಾದ ನನ್ನ ಈ ಸತ್ಯವಚನವನ್ನು ಕೇಳು.

ಸೋಽಹಂ ನ ಕೇನಚಿಚ್ಚಾರ್ಥೀ ತ್ವಾಂ ಚ ಧರ್ಮಾದುಪಾಹ್ವಯೇ ।
ಕ್ರೋಶತಾಂ ಸರ್ವಭೂತಾನಾಂ ಹಾಹಾ ಧಿಗಿತಿ ಜಲ್ಪತಾಮ್ ॥೧೮॥

ಮಹಾರಾಜ! ನಿನ್ನಿಂದ ಯಾವ ವಸ್ತುವನ್ನೂ ತೆಗೆದುಕೊಳ್ಳುವ ಅಪೇಕ್ಷೆಯೂ ನನಗಿಲ್ಲ. ಸರ್ವಪ್ರಾಣಿಗಳೂ–'ಅಯ್ಯೋ! ಅಯ್ಯೋ! ಶೌನಕನು ಪಾಪಿಷ್ಠನನ್ನು ಹತ್ತಿರಕ್ಕೆ ಕರೆದುಕೊಳ್ಳುತ್ತಿದ್ದಾನೆ. ಇವನಿಗೆ ಧಿಕ್ಕಾರವಿರಲಿ!'–ಎಂದು ಕೂಗಿಕೊಳ್ಳುತ್ತಿರುವಾಗ ಕೇವಲ ಧರ್ಮದ ಕಾರಣದಿಂದಾಗಿ ನಿನ್ನನ್ನು ನನ್ನ ಹತ್ತಿರಕ್ಕೆ ಬರಲು ಆಹ್ವಾನಿಸುತ್ತಿದ್ದೇನೆ.

ವಕ್ಷ್ಯನ್ತಿ ಮಾಮಧರ್ಮಜ್ಞಂ ತ್ಯಕ್ಷ್ಯನ್ತಿ ಸುಹೃದೋ ಜನಾಃ ।
ತಾ ವಾಚಃ ಸುಹೃದಃ ಶ್ರುತ್ವಾ ಸಂಜ್ವರಿಷ್ಯನ್ತಿ ಮೇ ಭೃಶಮ್ ॥೧೯॥

ನಿನ್ನನ್ನು ಆಹ್ವಾನಿಸುವ ಕಾರಣಕ್ಕಾಗಿ ನನ್ನನ್ನು ಜನರು ಅಧರ್ಮಜ್ಞನೆಂದು ಹೇಳುತ್ತಾರೆ. ನನ್ನ ಸುಹೃದರೇ ನನ್ನನ್ನು ಪರಿತ್ಯಾಗಮಾಡುತ್ತಾರೆ. ನಾನು ನಿನಗೆ ಧರ್ಮೋಪದೇಶಮಾಡುವೆನೆಂಬ ಮಾತುಗಳನ್ನು ಕೇಳಿ ದೊಡನೆಯೇ ನನ್ನ ಸ್ನೇಹಿತರು ಬಹಳ ಬೇಗ ನನ್ನ ಮೇಲೆ ಸಿಟ್ಟಾಗುತ್ತಾರೆ.

ಕೇಚಿದೇವ ಮಹಾಪ್ರಾಜ್ಞಾಃ ಪ್ರತಿಜ್ಞಾಸ್ಯನ್ತಿ ತತ್ತ್ವತಃ ।
ಜಾನೀಹಿ ಮತ್ಕೃತಂ ತಾತ ಬ್ರಾಹ್ಮಣಾನ್ಪ್ರತಿ ಭಾರತ ॥೨೦॥

ಮಹಾಪ್ರಾಜ್ಞರಾದ ಕೆಲವರು ಮಾತ್ರವೇ ನನ್ನ ಅಭಿಪ್ರಾಯವನ್ನು ಯಥಾವತ್ತಾಗಿ ತಿಳಿದುಕೊಳ್ಳುತ್ತಾರೆ. ಬ್ರಾಹ್ಮಣರಿಗೆ ಒಳ್ಳೆಯದನ್ನು ಮಾಡಬೇಕೆಂಬುದೇ ನನ್ನ ಪರಮೋದ್ದೇಶವಾಗಿದೆ. ಈ ವಿಷಯವನ್ನು ನೀನೂ ಚೆನ್ನಾಗಿ ತಿಳಿದುಕೊಳ್ಳಬೇಕು.

ಯಥಾ ತೇ ಮತ್ಕೃತೇ ಕ್ಷೇಮಂ ಲಭನ್ತೇ ತೇ ತಥಾ ಕುರು ।
ಪ್ರತಿಜಾನೀಹಿ ಚಾದ್ರೋಹಂ ಬ್ರಾಹ್ಮಣಾನಾಂ ನರಾಧಿಪ ॥೨೧॥

ನರಾಧಿಪನೇ! ನನ್ನ ಕಾರಣದಿಂದಾಗಿ ಯಾವ ರೀತಿಯಲ್ಲಿ ಬ್ರಾಹ್ಮಣರು ಕುಶಲವನ್ನು ಹೊಂದುವರೋ–ಆ ರೀತಿಯಲ್ಲಿ ನೀನು ಕಾರ್ಯಮಾಡಬೇಕು. ಬ್ರಾಹ್ಮಣರಿಗೆ ಯಾವುದೇ ಕಾರಣದಿಂದಲೂ ದ್ರೋಹ ಮಾಡುವುದಿಲ್ಲವೆಂದು ನನ್ನ ಸಾನ್ನಿಧ್ಯದಲ್ಲಿ ಪ್ರತಿಜ್ಞೆಯನ್ನು ಮಾಡು."

ಜನಮೇಜಯನು ಹೇಳುತ್ತಾನೆ :

ನೈವ ವಾಚಾ ನ ಮನಸಾ ಪುನರ್ಜಾತು ನ ಕರ್ಮಣಾ ।
ದ್ರೋಗ್ಧಾಸ್ಮಿ ಬ್ರಾಹ್ಮಣಾನ್ವಿಪ್ರ ಚರಣಾವಪಿ ತೇ ಸ್ಪೃಶೇ ॥೨೨॥

"ವಿಪ್ರೋತ್ತಮರೇ! ನಾನು ನಿಮ್ಮೆರಡು ಚರಣಗಳನ್ನೂ ಮುಟ್ಟಿ ಶಪಥಮಾಡಿ ಹೇಳುತ್ತೇನೆ. ಮಾತಿನಿಂದಾಗಲೀ, ಮನಸ್ಸಿನಿಂದಾಗಲೀ, ಕರ್ಮದಿಂದಾಗಲೀ–ನಾನು ಯಾವಾಗಲೂ ಬ್ರಾಹ್ಮಣರಿಗೆ ದ್ರೋಹಮಾಡುವುದಿಲ್ಲ."

೧೫೧ನೆಯ ಅಧ್ಯಾಯವು ಮುಗಿಯಿತು.

೧೫೨ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಇಂದ್ರೋತನು ಜನಮೇಜಯನಿಗೆ ಧರ್ಮೋಪದೇಶವನ್ನು ಮಾಡಿ ಅವನಿಂದ ಅಶ್ವಮೇಧಯಾಗವನ್ನು ಮಾಡಿಸಿದುದು : ಬ್ರಹ್ಮಹತ್ಯಾಪಾಪವನ್ನು ಕಳೆದುಕೊಂಡ ರಾಜನು ಪಟ್ಟಣವನ್ನು ಪ್ರವೇಶಿಸಿದುದು

ಪಾರಿಕ್ಷಿತ! ಭೀಷ್ಮನು ಪ್ರವಚನವನ್ನು ಮುಂದುವರಿಸಿ ಧರ್ಮಜನಿಗೆ ಹೇಳುತ್ತಾನೆ :

"ಯುಧಿಷ್ಠಿರ! ಶೌನಕನು ಜನಮೇಜಯನಿಗೆ ಹೇಳುತ್ತಾನೆ :

"ಜನಮೇಜಯ! ನೀನು ಶ್ರೀಮಂತನಾಗಿರುವೆ. ಮಹಾಬಲಿಷ್ಠನಾಗಿರುವೆ. ಸಂತುಷ್ಟಚಿತ್ತನಾಗಿರುವೆ. ಧರ್ಮದ ಮೇಲೆ ದೃಷ್ಟಿಯುಳ್ಳವನಾಗಿರುವೆ. ಆದುದರಿಂದ ಪಾಪಾಚರಣೆಯಿಂದ ನಿವೃತ್ತನಾಗಿ ಧರ್ಮದಲ್ಲಿಯೇ ನಿಶ್ಚಿತವಾದ ಬುದ್ಧಿಯುಳ್ಳ ನಿನಗೆ ಧರ್ಮೋಪದೇಶವನ್ನು ಮಾಡುತ್ತೇನೆ.

ಪುರಸ್ತಾದ್ದಾರುಣೋ ಭೂತ್ವಾ ಸುಚಿತ್ರತರಮೇವ ತತ್ ।
ಅನುಗೃಹ್ಣಾತಿ ಭೂತಾನಿ ಸ್ವೇನ ವೃತ್ತೇನ ಪಾರ್ಥಿವಃ ॥೨॥

ರಾಜನು ಮೊದಲು ಕಠೋರಸ್ವಭಾವದವನಾಗಿ ಅನಂತರ ಮೃದುಭಾವವನ್ನು ಆಶ್ರಯಿಸಿ ತನ್ನ ಸದ್ವ್ಯವಹಾರಗಳಿಂದ ಪ್ರಾಣಿಗಳನ್ನು (ಪ್ರಜೆಗಳನ್ನು) ಅನುಗ್ರಹಿಸುತ್ತಾನೆಂಬುದು ಆಶ್ಚರ್ಯಕರವಾದ ಸಂಗತಿಯಾಗಿದೆ.

ಕೃತ್ಸ್ನಂ ನೂನಂ ಸ ದಹತಿ ಇತಿ ಲೋಕೋ ವ್ಯವಸ್ಯತಿ ।
ಯತ್ರ ತ್ವಂ ತಾದೃಶೋ ಭೂತ್ವಾ ಧರ್ಮಮೇವಾನುಪಶ್ಯತಿ ॥೩॥

ಬಹಳ ಕಾಲದವರೆಗೆ ತೀಕ್ಷ್ಣಸ್ವಭಾವವನ್ನೇ ಆಶ್ರಯಿಸುವ ರಾಜನು ನಿಶ್ಚಯವಾಗಿಯೂ ಸಮಸ್ತವನ್ನೂ ಸುಟ್ಟುಬಿಡುವನೆಂದು ಲೋಕವು ಭಾವಿಸುತ್ತದೆ. ಆದರೆ ನೀನು ಬಹಳ ಕಾಲದಿಂದ ಕ್ರೂರಸ್ವಭಾವವನ್ನೇ ಆಶ್ರಯಿಸಿದ್ದರೂ ಧರ್ಮದ ಕಡೆಗೇ ದೃಷ್ಟಿಯುಳ್ಳವನಾಗಿರುವೆಯೆಂಬುದು ಆಶ್ಚರ್ಯದ ವಿಷಯವಾಗಿದೆ.

ಹಿತ್ವಾ ತು ಸುಚಿರಂ ಭಕ್ಷ್ಯಂ ಭೋಜ್ಯಾಂಶ್ಚ ತಪ ಆಸ್ಥಿತಃ ।
ಇತ್ಯೇತದಭಿಭೂತಾನಾಮದ್ಭುತಂ ಜನಮೇಜಯ ॥೪॥

ಜನಮೇಜಯ! ಬಹಳ ಕಾಲದಿಂದಲೂ ರಾಜಯೋಗ್ಯವಾದ ಭಕ್ಷ್ಯ-ಭೋಜ್ಯಗಳೆಲ್ಲವನ್ನೂ ತ್ಯಾಗಮಾಡಿ ತಪಸ್ಸಿನಲ್ಲಿಯೇ ನಿರತನಾಗಿದ್ದೆಯೆಂಬುದೂ ಪಾಪಾಭಿಭೂತರಾದವರಿಗೆ ಅದ್ಭುತವಾಗಿಯೇ ಕಾಣುತ್ತದೆ.

ಯೋಽದುರ್ಲಭೋ ಭವೇದ್ದಾತಾ ಕೃಪಣೋ ವಾ ತಪೋಧನಃ ।
ಅನಾಶ್ಚರ್ಯಂ ತದಿತ್ಯಾಹುರ್ನಾತಿದೂರೇಣ ವರ್ತತೇ ॥೫॥

ಐಶ್ವರ್ಯಸಂಪನ್ನನು–ದಾನಿಯಾಗಬಹುದು. ಕೃಪಣನೂ, ದರಿದ್ರನೂ–ತಪೋಧನನೂ ಆಗಬಹುದು. ಇದು ಆಶ್ಚರ್ಯಕ್ಕೆ ಅಷ್ಟಾಗಿ ವಿಷಯವಾಗುವುದಿಲ್ಲ. ಏಕೆಂದರೆ : ಐಶ್ವರ್ಯಸಂಪನ್ನನಿಗೆ ದಾನವೂ, ದರಿದ್ರನಿಗೆ ತಪಸ್ಸೂ ಹೆಚ್ಚು ದೂರವಿರುವುದಿಲ್ಲ. (ಹೆಚ್ಚು ಕಷ್ಟವಾಗುವುದಿಲ್ಲ.) ಆದರೆ ದರಿದ್ರನಿಗೆ ದಾನವೂ–ಐಶ್ವರ್ಯಸಂಪನ್ನನಿಗೆ ತಪಸ್ಸೂ ಕಷ್ಟಕರವಾಗುತ್ತದೆ.

ಏತದೇವ ಹಿ ಕಾರ್ಪಣ್ಯಂ ಸಮಗ್ರಮಸಮೀಕ್ಷಿತಮ್ ।
ಯಚ್ಚೇತ್ಸಮೀಕ್ಷಯೈವ ಸ್ಯಾದ್ಭವೇತ್ತಸ್ಮಿಂಸ್ತತೋ ಗುಣಃ ॥೬॥

ಕಾರ್ಯವನ್ನು ಸಮಗ್ರವಾಗಿ ಪರಿಶೀಲಿಸದೇ ಪ್ರಾರಂಭಿಸುವುದೇ ಕಾರ್ಪಣ್ಯ. (ಕರ್ತವ್ಯಜ್ಞಾನವಿಲ್ಲದೆ ಕಷ್ಟದ ನಿವೃತ್ತ್ಯುಪಾಯವನ್ನು ತಿಳಿಯದಿರುವಿಕೆಯೇ ಕಾರ್ಪಣ್ಯ) ಕಾರ್ಯವನ್ನು ಚೆನ್ನಾಗಿ ಪರಿಶೀಲಿಸಿಯೇ ಮಾಡುವುದರಿಂದ ಆ ಸಮೀಕ್ಷೆಯೇ ಆ ಕಾರ್ಯದಲ್ಲಿ ಒಂದು ಗುಣವಾಗುತ್ತದೆ.

ಯಜ್ಞೋ ದಾನಂ ದಯಾ ವೇದಾಃ ಸತ್ಯಂ ಚ ಪೃಥಿವೀಪತೇ ।
ಪಞ್ಚೈತಾನಿ ಪವಿತ್ರಾಣಿ ಷಷ್ಠಂ ಸುಚರಿತಂ ತಪಃ ॥೭॥

ಯಜ್ಞ, ದಾನ, ದಯೆ, ವೇದಗಳು ಮತ್ತು ಸತ್ಯ–ಈ ಐದೂ ಪರಮ ಪವಿತ್ರವಾದುವುಗಳೆಂದು ಹೇಳಲ್ಪಟ್ಟಿವೆ. ಆರನೆಯದಾಗಿ ಸದಾಚಾರಸಂಪನ್ನತೆಯಿಂದ ಚೆನ್ನಾಗಿ ಆಚರಿಸುವ ತಪಸ್ಸೂ ಪವಿತ್ರವಾದುದು.

ತದೇವ ರಾಜ್ಞಾಂ ಪರಮಂ ಪವಿತ್ರಂ ಜನಮೇಜಯ ।
ತೇನ ಸಮ್ಯಗ್ಗೃಹೀತೇನ ಶ್ರೇಯಾಂಸಂ ಧರ್ಮಮಾಪ್ಸ್ಯಸಿ ॥೮॥

ಜನಮೇಜಯ! ರಾಜನಿಗೆ ಈ ಆರು ಧರ್ಮಗಳೂ ಪರಮಪವಿತ್ರಗಳಾಗಿವೆ. ಇವುಗಳನ್ನು ಚೆನ್ನಾಗಿ ಶ್ರದ್ಧೆಯಿಂದ ಆಚರಿಸುವುದರಿಂದ ನೀನು ಶ್ರೇಯಸ್ಕರವಾದ ಧರ್ಮ (ಧರ್ಮಫಲ) ವನ್ನು ಹೊಂದುವೆ.

ಪುಣ್ಯದೇಶಾಭಿಗಮನಂ ಪವಿತ್ರಂ ಪರಮಂ ಸ್ಮೃತಮ್ ।
ಅತ್ರಾಪ್ಯುದಾಹರನ್ತೀಮಾಂ ಗಾಥಾಂ ಗೀತಾಂ ಯಯಾತಿನಾ ॥೯॥

ಪುಣ್ಯಕ್ಷೇತ್ರಗಳ ಯಾತ್ರೆಮಾಡುವುದೂ ಪರಮಪವಿತ್ರವಾದ ಕಾರ್ಯವೆಂದು ಹೇಳಲ್ಪಟ್ಟಿದೆ. ತೀರ್ಥಯಾತ್ರೆಗಳ ವಿಷಯದಲ್ಲಿ ಯಯಾತಿಯು ಹೇಳಿರುವ ಈ ಶ್ಲೋಕವನ್ನು ಉದಾಹರಿಸುತ್ತಾರೆ :

ಯೋ ಮರ್ತ್ಯಃ ಪ್ರತಿಪದ್ಯೇತ ಆಯುರ್ಜೀವಿತಮಾತ್ಮನಃ ।
ಯಜ್ಞಮೇಕಾನ್ತತಃ ಕೃತ್ವಾ ತತ್ಸಂನ್ಯಸ್ಯ ತಪಶ್ಚರೇತ್ ॥೧೦॥

'ಯಾವ ಮನುಷ್ಯನು ದೀರ್ಘಾಯುಷ್ಯದ ಜೀವನವನ್ನು ಅಪೇಕ್ಷಿಸುವನೋ–ಅವನು ಪ್ರಯತ್ನಪೂರ್ವಕವಾಗಿ ಯಜ್ಞವನ್ನು ಮಾಡಬೇಕು. ಅನಂತರ ಅದನ್ನು ಬದಿಗೊತ್ತಿ ತಪಸ್ಸನ್ನು ಮಾಡಬೇಕು. (ತೀರ್ಥಯಾತ್ರೆಯನ್ನು ಮಾಡಬೇಕು.)'

ಪುಣ್ಯಮಾಹುಃ ಕುರುಕ್ಷೇತ್ರಂ ಕುರುಕ್ಷೇತ್ರಾತ್ಸರಸ್ವತೀಮ್ ।
ಸರಸ್ವತ್ಯಾಶ್ಚ ತೀರ್ಥಾನಿ ತೀರ್ಥೇಭ್ಯಶ್ಚ ಪೃಥೂದಕಮ್ ।
ಯತ್ರಾವಗಾಹ್ಯ ಪೀತ್ವಾ ಚ ನೈನಂ ಶ್ವೋಮರಣಂ ತಪೇತ್ ॥೧೧॥

ಕುರುಕ್ಷೇತ್ರವನ್ನು ಪುಣ್ಯಕ್ಷೇತ್ರವೆಂದು ಹೇಳುತ್ತಾರೆ. ಕುರುಕ್ಷೇತ್ರಕ್ಕಿಂತಲೂ ಸರಸ್ವತೀನದಿಯು ತೀರ್ಥಯಾತ್ರೆಗೆ ಶ್ರೇಷ್ಠವೆಂದು ಹೇಳುತ್ತಾರೆ.

ಸರಸ್ವತೀನದಿಯಲ್ಲಿರುವ ಪ್ರತ್ಯೇಕವಾದ ತೀರ್ಥಗಳು ಸರಸ್ವತೀನದಿಗಿಂತಲೂ ಹೆಚ್ಚು ಪುಣ್ಯಪ್ರಾಪಕವೆಂದು ಹೇಳುತ್ತಾರೆ. ಸರಸ್ವತೀನದಿಯ ತೀರದಲ್ಲಿರುವ ಪುಣ್ಯತೀರ್ಥಗಳ ಸಮುದಾಯದಲ್ಲಿ ಪೃಥೂದಕತೀರ್ಥವು ಅತ್ಯಂತ ಶ್ರೇಷ್ಠ ವಾದುದೆಂದು ಹೇಳುತ್ತಾರೆ.

ಪೃಥೂದಕದಲ್ಲಿ ಸ್ನಾನಮಾಡಿ ಅದರ ತೀರ್ಥವನ್ನು ಪಾನಮಾಡಿದ ಮನುಷ್ಯನಿಗೆ ನಾಳೆಯೇ ಮರಣವು ಸಂಭವಿಸಿದರೂ ಸಂತಾಪಗೊಳಿಸು ವುದಿಲ್ಲ. (ಅವನು ಮೃತ್ಯುವಿಗೆ ಭಯಪಡಬೇಕಾಗಿಲ್ಲ.)

ಮಹಾಸರಃ ಪುಷ್ಕರಾಣಿ ಪ್ರಭಾಸೋತ್ತರಮಾನಸೇ ॥೧೨॥

ಕಾಲೋದಕಂ ಚ ಗನ್ತಾಸಿ ಲಬ್ಧಾಯುರ್ಜೀವಿತೇ ಪುನಃ ।
ಸರಸ್ವತೀದೃಷದ್ವತ್ಯೋಃ ಸಂಗಮೋ ಮಾನಸಃ ಸರಃ ॥೧೩॥

ನೀನೇನಾದರೂ ಮಹಾಸರೋವರ, ಪುಷ್ಕರಗಳು, ಪ್ರಭಾಸ, ಉತ್ತರ ಮಾನಸಸರೋವರ, ಕಾಲೋದಕ, ದೃಷದ್ವತೀ ಮತ್ತು ಸರಸ್ವತೀನದಿಗಳ ಸಂಗಮಸ್ಥಾನ, ಮಾನಸಸರೋವರ–ಇವೇ ಮೊದಲಾದ ತೀರ್ಥಗಳಿಗೆ ಹೋಗಿ ಸ್ನಾನಮಾಡಿ ಅವುಗಳ ತೀರ್ಥವನ್ನು ಪ್ರಾಶನಮಾಡಿದರೆ ನೀನು ಪುನಃ ಪುಣ್ಯ ಜೀವನವನ್ನು ನಡೆಸಲು ದೀರ್ಘಾಯುಷ್ಯವನ್ನು ಪಡೆದುಕೊಳ್ಳುವೆ.

ಸ್ವಾಧ್ಯಾಯಶೀಲಃ ಸ್ಥಾನೇಷು ಸರ್ವೇಷು ಸಮುಪಸ್ಪೃಶೇತ್ ।
ತ್ಯಾಗಧರ್ಮಃ ಪವಿತ್ರಾಣಾಂ ಸಂನ್ಯಾಸಂ ಮನುರಬ್ರವೀತ್ ॥೧೪॥

ಸ್ವಾಧ್ಯಾಯಶೀಲನಾಗಿ ಎಲ್ಲ ತೀರ್ಥಕ್ಷೇತ್ರಗಳಲ್ಲಿಯೂ ಸ್ನಾನಮಾಡ ಬೇಕು. ಪವಿತ್ರವಾದ ಕಾರ್ಯಗಳಲ್ಲಿ ತ್ಯಾಗಧರ್ಮವು (ದಾನಧರ್ಮವು) ಪರಮಪವಿತ್ರವಾದುದೆಂದೂ ಸಂನ್ಯಾಸಧರ್ಮವು ಎಲ್ಲಕ್ಕಿಂತಲೂ ಪರಮ ಶ್ರೇಷ್ಠವಾದ ಧರ್ಮವೆಂದೂ ಮನುವು ಹೇಳಿದ್ದಾನೆ.

ಈ ವಿಷಯದಲ್ಲಿಯೂ ಸತ್ಯವಂತನು ರಚಿಸಿರುವ ಶ್ಲೋಕಗಳನ್ನು ಉದಾಹರಿಸುತ್ತಾರೆ.

ಯಥಾ ಕುಮಾರಃ ಸತ್ಯೋ ವೈ ನೈವ ಪುಣ್ಯೋ ನ ಪಾಪಕೃತ್ ॥

ಯಾವ ರೀತಿಯಲ್ಲಿ ಬಾಲಕನು ರಾಗ-ದ್ವೇಷಶೂನ್ಯನಾಗಿರುವುದರಿಂದ

ಸತ್ಯಸ್ವರೂಪನೇ ಆಗಿರುವನೋ, ಪುಣ್ಯ-ಪಾಪಗಳೆರಡನ್ನೂ ಮಾಡುವುದಿಲ್ಲವೋ–ಹಾಗೆಯೇ ಇರಬೇಕಾದುದು ಸಂನ್ಯಾಸಿಗಳ ಧರ್ಮವಾಗಿದೆ.

ನ ಹ್ಯಸ್ತಿ ಸರ್ವಭೂತೇಷು ದುಃಖಮಸ್ಮಿನ್ಕುತಃ ಸುಖಮ್ ।

ಏವಂ ಪ್ರಕೃತಿಭೂತಾನಾಂ ಸರ್ವಸಂಸರ್ಗಯಾಯಿನಾಮ್ ।
ತ್ಯಜತಾಂ ಜೀವಿತಂ ಶ್ರೇಯೋ ನಿವೃತ್ತೇ ಪುಣ್ಯಪಾಪಕೇ ॥೧೭॥

ಈ ಪ್ರಪಂಚದಲ್ಲಿರುವ ಸರ್ವಪ್ರಾಣಿಗಳಲ್ಲಿಯೂ ದುಃಖವೆಂಬುದೇ ಇಲ್ಲ–ಎಂದಾಗಿಬಿಟ್ಟರೆ ಈ ಪ್ರಾಣಿಗಳಲ್ಲಿ ಸುಖವೆಲ್ಲಿರುತ್ತದೆ? (ಎಂದರೆ ಭೋಜನದ ಸುಖವನ್ನು ಅನುಭವಿಸಬೇಕಾದರೆ ಹಸಿವಿನ ದುಃಖವನ್ನೂ ಅನುಭವಿಸಿರಬೇಕು. ದುಃಖವಿಲ್ಲದಿದ್ದರೆ ಸುಖವೂ ಇಲ್ಲ. ಸುಖ-ದುಃಖ ಗಳೆಂಬ ದ್ವಂದ್ವಗಳು ಸ್ವಕಲ್ಪಿತಗಳೇ. ಗೀತೆಯಲ್ಲಿ ಹೇಳಿರುವಂತೆ ದ್ವಂದ್ವಾತೀತನಾಗಬೇಕು.) ಸುಖ-ದುಃಖಗಳೆರಡೂ ಕಲ್ಪಿತವಾದುವುಗಳು. ಸಕಲ ವಿಧವಾದ ಸಂಪರ್ಕಗಳನ್ನೂ ಹೊಂದಿದ್ದರೂ ಇಂತಹ ಸ್ವಭಾವವನ್ನು ಹೊಂದಿ (ಬ್ರಹ್ಮಜ್ಞಾನಿಯಾಗಿ) ಪುಣ್ಯ-ಪಾಪಗಳೆರಡರಿಂದಲೂ ನಿವೃತ್ತವಾಗಿರುವ (ಸುಖ-ದುಃಖಗಳು ಕಲ್ಪಿತವಾದುವುಗಳೆಂದು ತಿಳಿದಿರುವ) ಅಹಂಕಾರ-ಮಮಕಾರಗಳನ್ನು ಪರಿತ್ಯಜಿಸಿರುವ ಸಂನ್ಯಾಸಿಗಳ ಜೀವನವು ಅತ್ಯಂತ ಶ್ರೇಯಸ್ಕರವಾದುದು.

ಯತ್ತ್ವೇವ ರಾಜ್ಞೋ ಜ್ಯಾಯಿಷ್ಠಂ ಕಾರ್ಯಾಣಾಂ ತದ್ಬ್ರವೀಮಿ ತೇ ।
ಬಲೇನ ಸಂವಿಭಾಗೈಶ್ಚ ಜಯ ಸ್ವರ್ಗಂ ಜನೇಶ್ವರ ।
ಯಸ್ಯೈವ ಬಲಮೋಜಶ್ಚ ಸ ಧರ್ಮಸ್ಯ ಪ್ರಭುರ್ನರಃ ॥೧೮॥

ಮಹಾರಾಜ! ಈಗ ನಾನು ರಾಜಕಾರ್ಯಗಳಲ್ಲಿ ಯಾವುದು ಪರಮಶ್ರೇಷ್ಠವೆಂಬುದನ್ನು ಹೇಳುತ್ತೇನೆ. ಜನೇಶ್ವರ! ನೀನು ಬಲದಿಂದಲೂ ಮತ್ತು ದಾನಗಳಿಂದಲೂ ಸ್ವರ್ಗಲೋಕವನ್ನು ಜಯಿಸು. ಯಾವನಿಗೆ ಬಲವೂ ಮತ್ತು ಓಜಸ್ಸೂ ಇರುವುವೋ ಅವನು ಧರ್ಮಕ್ಕೆ ಪ್ರಭುವಾಗಿರುತ್ತಾನೆ. (ಧರ್ಮಾಚರಣೆಯಲ್ಲಿ ಸಮರ್ಥನಾಗುತ್ತಾನೆ.)

ಬ್ರಾಹ್ಮಣಾನಾಂ ಸುಖಾರ್ಥಂ ಹಿ ತ್ವಂ ಪಾಹಿ ವಸುಧಾಂ ನೃಪ ।
ಯಥೈವೈತಾನ್ಪುರಾಕ್ಷೈಪ್ಸೀಸ್ತಥೈವೈತಾನ್ಪ್ರಸಾದಯ ॥೧೯॥

ಬ್ರಾಹ್ಮಣರಿಗೆ ಸುಖವನ್ನುಂಟುಮಾಡುವ ಸಲುವಾಗಿ ನೀನು ಈ ಭೂಮಂಡಲವನ್ನು ಪರಿಪಾಲಿಸು. ಹಿಂದೆ ನೀನು ಅವರನ್ನು ಆಕ್ಷೇಪಿಸುತ್ತಿದ್ದೆ. ಈಗ ಹಾಗೆ ಮಾಡಬೇಡ. ಈಗ ನೀನು ನಿನ್ನ ಸದ್ವೃತ್ತಿಯಿಂದ ಅವರನ್ನು ಪ್ರಸನ್ನಗೊಳಿಸು.

ಅಪಿ ಧಿಕ್ಕ್ರಿಯಮಾಣೋಽಪಿ ತ್ಯಜ್ಯಮಾನೋಽಪ್ಯನೇಕಧಾ ।
ಆತ್ಮನೋ ದರ್ಶನಾದ್ವಿಪ್ರಾನ್ನ ಹನ್ತಾಸ್ಮೀತಿ ಮಾರ್ಗಯ ।
ಘಟಮಾನಃ ಸ್ವಕಾರ್ಯೇಷು ಕುರು ನಿಃಶ್ರೇಯಸಂ ಪರಮ್ ॥೨೦॥

ಬ್ರಾಹ್ಮಣರಿಂದ ನೀನು ಧಿಕ್ಕರಿಸಲ್ಪಟ್ಟರೂ, ಹಲವು ಬಾರಿ ಪರಿತ್ಯಜಿಸಲ್ಪಟ್ಟರೂ – ಆತ್ಮೌಪಮ್ಯದಿಂದ (ಅವರಲ್ಲಿ ಆತ್ಮದೃಷ್ಟಿಯನ್ನಿಟ್ಟು) ಬ್ರಾಹ್ಮಣರನ್ನು ಸಂಹರಿಸುವುದಿಲ್ಲವೆಂದು ನಿಶ್ಚಯಿಸು. ನಿನ್ನ ಕರ್ತವ್ಯ ಪರಿಪಾಲನೆಯಲ್ಲಿಯೇ ಸಂಪೂರ್ಣವಾಗಿ ತೊಡಗಿದ್ದು ಶ್ರೇಷ್ಠವಾದ ಕಲ್ಯಾಣವನ್ನು ಸಾಧಿಸು.

ಹಿಮಾಗ್ನಿಘೋರಸದೃಶೋ ರಾಜಾ ಭವತಿ ಕಶ್ಚನ ।
ಲಾಂಗಲಾಶನಿಕಲ್ಪೋ ವಾ ಭವೇದನ್ಯಃ ಪರಂತಪ ॥೨೧॥

ಒಬ್ಬ ರಾಜನು ಹಿಮದಂತೆ ಶೀತಲ (ಸಾಧು) ಸ್ವಭಾವದವನಾಗಿರುತ್ತಾನೆ. ಒಬ್ಬ ರಾಜನು ಅಗ್ನಿಯಂತೆ ತಾಪದಾಯಕನಾಗಿರುತ್ತಾನೆ. ಒಬ್ಬ ರಾಜನು ಯಮನಂತೆ ಘೋರನಾಗಿಯೂ, ಗುಣ-ದೋಷಗಳ ವಿಚಾರಕನಾಗಿಯೂ, ನಿಷ್ಪಕ್ಷಪಾತಿಯಾಗಿಯೂ ಇರುತ್ತಾನೆ. ಒಬ್ಬ ರಾಜನು ನೇಗಿಲಿನಂತೆ (ನೇಗಿಲು ಆಳದವರೆಗೂ ಹೋಗಿ ಕಳೆಗಳನ್ನು ಬುಡಮೇಲು ಮಾಡುವಂತೆ) ಶತ್ರುಗಳ ಮೂಲೋತ್ಪಾಟಕನಾಗಿರುತ್ತಾನೆ. ಒಬ್ಬ ರಾಜನು ಶತ್ರುಗಳ ಮೇಲೆ ಸಿಡಿಲಿನಂತೆ ಆಕಸ್ಮಿಕವಾಗಿ ಬೀಳುತ್ತಾನೆ.

ನ ವಿಶೇಷೇಣ ಗನ್ತವ್ಯಮವಿಚ್ಛಿನ್ನೇನ ವಾ ಪುನಃ ।
ನ ಜಾತು ನಾಹಮಸ್ಮೀತಿ ಸುಪ್ರಸಕ್ತಮಸಾಧುಷು ॥೨೨॥

'ಯಾವಾಗಲೂ ನಾನು ಇಲ್ಲದೇ ಇರುವುದಿಲ್ಲ. (ಇದ್ದೇ ಇರುತ್ತೇನೆ')–ಎಂದು ಭಾವಿಸಿಕೊಂಡು ದುಷ್ಟಪುರುಷರೊಡನೆ ಸಂಗವನ್ನು ಮಾಡಲೇಬಾರದು. ಅವನಲ್ಲಿ ವಿಶೇಷಗುಣವಿರುವುದೆಂಬ ಕಾರಣದಿಂದಲೂ

ದುಷ್ಟನ ಬಳಿಗೆ ಹೋಗಬಾರದು. ಅವಿಚ್ಛಿನ್ನವಾದ ಸಂಬಂಧವಿರುವುದೆಂಬ ಕಾರಣದಿಂದಲೂ (ವರ್ಣಸಂಬಂಧವಾದ ಅಭಿಮಾನದಿಂದಲೂ) ಅಸತ್ಪುರುಷನ ಬಳಿಗೆ ಹೋಗಬಾರದು.

ವಿಕರ್ಮಣಾ ತಪ್ಯಮಾನಃ ಪಾಪಾದ್ವಿಪರಿಮುಚ್ಯತೇ ।
ನೈತತ್ಕಾರ್ಯಂ ಪುನರಿತಿ ದ್ವಿತೀಯಾತ್ಪರಿಮುಚ್ಯತೇ ॥೨೩॥

ಶಾಸ್ತ್ರವಿರುದ್ಧವಾದ ಕರ್ಮವನ್ನು ಮಾಡಿ ಬಳಿಕ ಅದಕ್ಕಾಗಿ ಪಶ್ಚಾತ್ತಾಪಪಡುವವನು–ದುಷ್ಕರ್ಮಸಂಬಂಧವಾದ ಪಾಪದಿಂದ ವಿಮುಕ್ತನಾಗುತ್ತಾನೆ. ಎರಡನೆಯ ಬಾರಿಯೂ ಅದೇ ದುಷ್ಕರ್ಮವನ್ನು ಮಾಡಿದಲ್ಲಿ–'ಇಂತಹ ಕಾರ್ಯವನ್ನು ನಾನು ಇನ್ನು ಮುಂದೆ ಮಾಡುವುದಿಲ್ಲ'–ಎಂದು ಶಪಥಮಾಡಿದರೆ ಆಗಲೂ ಎರಡನೆಯ ಬಾರಿಗೆ ಮಾಡಿದ ಆ ಪಾಪದಿಂದ ವಿಮುಕ್ತನಾಗುತ್ತಾನೆ.

ಕರಿಷ್ಯೇ ಧರ್ಮಮೇವೇತಿ ತೃತೀಯಾತ್ಪರಿಮುಚ್ಯತೇ ।
ಶುಚಿಸ್ತೀರ್ಥಾನ್ಯನುಚರನ್ಬಹುತ್ವಾತ್ಪರಿಮುಚ್ಯತೇ ॥೨೪॥

ಶಪಥಮಾಡಿದನಂತರವೂ ಮೂರನೆಯ ಬಾರಿಗೆ ಅಂತಹುದೇ ದುಷ್ಕರ್ಮವನ್ನು ಮಾಡಿದರೆ–"ನಾನು ಇನ್ನು ಮುಂದೆ ಧರ್ಮಕಾರ್ಯಗಳನ್ನೇ ಮಾಡುತ್ತೇನೆ"–ಎಂಬ ನಿಯಮವನ್ನು ಕೈಗೊಂಡು ಅದರಂತೆ ನಡೆದುಕೊಂಡರೆ–ಮೂರನೆಯ ಬಾರಿ ಮಾಡಿದ ಪಾಪದಿಂದಲೂ ವಿಮುಕ್ತನಾಗುತ್ತಾನೆ. ಶುಚಿಯಾಗಿದ್ದು ಅನೇಕತೀರ್ಥಯಾತ್ರೆಗಳನ್ನು ಮಾಡುವವನು–ಹಲವಾರು ಬಾರಿ ಮಾಡಿರುವ ಅಪಾರವಾದ ಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ಕಲ್ಯಾಣಮನುಕರ್ತವ್ಯಂ ಪುರುಷೇಣ ಬುಭೂಷತಾ ।
ಯೇ ಸುಗನ್ಧೀನಿ ಸೇವನ್ತೇ ತಥಾ ಗನ್ಧಾ ಭವನ್ತಿ ತೇ ॥೨೫॥
ಯೇ ದುರ್ಗನ್ಧೀನಿ ಸೇವನ್ತೇ ತಥಾ ಗನ್ಧಾ ಭವನ್ತಿ ತೇ ।
ತಪಶ್ಚರ್ಯಾಪರಃ ಸದ್ಯಃ ಪಾಪಾದ್ವಿಪರಿಮುಚ್ಯತೇ ॥೨೬॥

ಸುಖವನ್ನು ಪಡೆದುಕೊಳ್ಳಬೇಕೆಂಬ ಅಭಿಲಾಷೆಯಿರುವವನು–ಎಲ್ಲರಿಗೂ ಕಲ್ಯಾಣವಾಗುವಂತಹ ಕಾರ್ಯಗಳನ್ನೇ ಮಾಡಬೇಕು. ಯಾವನು

ಸುಗಂಧದ ಪದಾರ್ಥಗಳನ್ನು ಸೇವಿಸುತ್ತಾನೆಯೋ (ಗಂಧಾದಿಗಳನ್ನು ಪೂಸಿಕೊಳ್ಳುತ್ತಾನೆಯೋ) ಅಂತಹವನ ಶರೀರದಿಂದ ಸುಗಂಧವೇ ಹೊರ ಸೂಸುತ್ತದೆ. ಯಾವನು ದುರ್ಗಂಧಪದಾರ್ಥಗಳನ್ನು ಸೇವಿಸುತ್ತಾನೆಯೋ (ಈರುಳ್ಳಿ-ಬೆಳ್ಳುಳ್ಳಿ ಮೊದಲಾದುವುಗಳನ್ನು ತಿನ್ನುವನೋ) ಅಂತಹವನ ಶರೀರದಿಂದ ದುರ್ಗಂಧವೇ ಹೊರಹೊಮ್ಮುತ್ತದೆ. ಅದೇ ರೀತಿಯಲ್ಲಿ ಕಲ್ಯಾಣಕರವಾದ ಕಾರ್ಯಗಳನ್ನು ಮಾಡಿದವನು ಕಲ್ಯಾಣವನ್ನು ಪಡೆಯು ತ್ತಾನೆ. ಅಮಂಗಳಕರವಾದ ದುಷ್ಕಾರ್ಯಗಳನ್ನು ಮಾಡಿದವನು ದುಷ್ಫಲ ಗಳನ್ನೇ ಪಡೆದುಕೊಳ್ಳುತ್ತಾನೆ. ತಪಸ್ಸಿನಲ್ಲಿ ನಿರತನಾದವನು ಒಡನೆಯೇ ಪಾಪದಿಂದ ವಿಮುಕ್ತನಾಗುತ್ತಾನೆ.

ಸಂವತ್ಸರಮುಪಾಸ್ಯಾಗ್ನಿಮಭಿಶಸ್ತಃ ಪ್ರಮುಚ್ಯತೇ ।
ತ್ರೀಣಿ ವರ್ಷಾಣ್ಯುಪಾಸ್ಯಾಗ್ನಿಂ ಭ್ರೂಣಹಾ ವಿಪ್ರಮುಚ್ಯತೇ ॥೨೭॥

ಮಿಥ್ಯಾಪವಾದಕ್ಕೆ ಗುರಿಯಾಗಿ ಕಳಂಕಿತನಾದವನು ಎಡೆಬಿಡದೇ ಒಂದು ವರ್ಷಪರ್ಯಂತವಾಗಿ ಅಗ್ನಿಹೋತ್ರವನ್ನು ಮಾಡಿದರೆ ಮಿಥ್ಯಾಪ ವಾದದಿಂದ ವಿಮುಕ್ತನಾಗುತ್ತಾನೆ. ಭ್ರೂಣಹತ್ಯೆಯನ್ನು ಮಾಡಿದವನು ಮೂರುವರ್ಷಗಳ ಪರ್ಯಂತವಾಗಿ ಅಗ್ನಿಹೋತ್ರವನ್ನು ಮಾಡಿದರೆ ಆ ಪಾಪದಿಂದ ವಿಮುಕ್ತನಾಗುತ್ತಾನೆ.

ಮಹಾಸರಃ ಪುಷ್ಕರಾಣಿ ಪ್ರಭಾಸೋತ್ತರಮಾನಸೇ ।
ಅಭ್ಯೇತ್ಯ ಯೋಜನಶತಂ ಭ್ರೂಣಹಾ ವಿಪ್ರಮುಚ್ಯತೇ ॥೨೮॥

ಭ್ರೂಣಹತ್ಯೆಯನ್ನು ಮಾಡಿದವನು–ಮಹಾಸರೋವರ, ಪುಷ್ಕರ ಗಳು, ಪ್ರಭಾಸತೀರ್ಥ, ಉತ್ತರಮಾನಸಸರೋವರ ತೀರ್ಥಗಳಿಗೆ ಯಾತ್ರೆ ಹೊರಟು ನೂರು ಯೋಜನಗಳಷ್ಟು ದೂರ ಪಾದಚಾರಿಯಾಗಿ ಹೋಗುವುದರಿಂದ ಆ ಮಹಾಪಾಪವನ್ನು ಕಳೆದುಕೊಳ್ಳುತ್ತಾನೆ.

ಯಾವತಃ ಪ್ರಾಣಿನೋ ಹನ್ಯಾತ್ತಜ್ಜಾತೀಯಾಂಸ್ತು ತಾವತಃ ।
ಪ್ರಮೀಯಮಾನಾನುನ್ಮೋಚ್ಯ ಪ್ರಾಣಿಹಾ ವಿಪ್ರಮುಚ್ಯತೇ ॥೨೯॥

ಪ್ರಾಣಿಹಂತಕನು ತಾನು ಎಷ್ಟು ಪ್ರಾಣಿಗಳನ್ನು ಕೊಂದಿರುವನೋ ಆಯಾ ಜಾತಿಗಳ ಅಷ್ಟೇ ಸಂಖ್ಯೆಯ ಪ್ರಾಣಿಗಳು ಮರಣಹೊಂದುವ ಸ್ಥಿತಿ

ಯಲ್ಲಿರುವಾಗ ಅವುಗಳನ್ನು ವಿಮೋಚನಗೊಳಿಸಿದರೆ– ಪ್ರಾಣಿಹತ್ಯಾಪಾಪದಿಂದ ವಿಮುಕ್ತನಾಗುತ್ತಾನೆ.

ಅಪಿ ಚಾಪ್ಸು ನಿಮಜ್ಜೇತ ಜಪಂಸ್ತ್ರಿರಘಮರ್ಷಣಮ್ ।
ಯಥಾಶ್ವಮೇಧಾವಭೃಥಸ್ತಥಾ ತನ್ಮನುರಬ್ರವೀತ್ ॥೩೦॥

ಮನುಷ್ಯನು ನೀರಿನಲ್ಲಿ ಅವಗಾಹನಮಾಡುತ್ತಾ ಮೂರು ಬಾರಿ ಅಘಮರ್ಷಣಸೂಕ್ತವನ್ನು ಜಪಿಸಿದರೆ ಅಶ್ವಮೇಧಯಜ್ಞದ ಅವಭೃಥಸ್ನಾನ ಮಾಡಿದ ಫಲವು ಲಭಿಸುವುದೆಂದು ಮನುವು ಹೇಳಿದ್ದಾನೆ.

ತತ್ಕ್ಷಿಪ್ರಂ ನುದತೇ ಪಾಪಂ ಸತ್ಕಾರಂ ಲಭತೇ ತಥಾ ।
ಅಪಿ ಚೈನಂ ಪ್ರಸೀದನ್ತಿ ಭೂತಾನಿ ಜಡಮೂಕವತ್ ॥೩೧॥

ಹೀಗೆ ಅಘಮರ್ಷಣಸೂಕ್ತವನ್ನು ಜಪಮಾಡಿದವನು ತಾನು ಮಾಡಿರಬಹುದಾದ ಎಲ್ಲ ಪಾಪಗಳನ್ನೂ ಹೋಗಲಾಡಿಸಿಕೊಳ್ಳುತ್ತಾನೆ. ಅವನು ಸರ್ವತ್ರ ಸಮ್ಮಾನಿತನಾಗುತ್ತಾನೆ. ಎಲ್ಲ ಪ್ರಾಣಿಗಳೂ ಜಡ ಮತ್ತು ಮೂಕ ಪ್ರಾಣಿಗಳಂತೆ ಅಘಮರ್ಷಣಮಂತ್ರವನ್ನು ಜಪಿಸಿದವನಲ್ಲಿ ಪ್ರಸನ್ನತೆಯನ್ನು ಹೊಂದುತ್ತವೆ.

ಬೃಹಸ್ಪತಿಂ ದೇವಗುರುಂ ಸುರಾಸುರಾಃ
ಸರ್ವೇ ಸಮೇತ್ಯಾಭ್ಯನುಯುಜ್ಯ ರಾಜನ್ ।
ಧರ್ಮ್ಯಂ ಫಲಂ ವೇತ್ಥ ಫಲಂ ಮಹರ್ಷೇ
ತಥೈವ ತಸ್ಮಿನ್ನರಕೇ ಪಾರಲೋಕ್ಯೇ ॥೩೨॥

ಉಭೇ ತು ಯಸ್ಯ ಸದೃಶೇ ಭವೇತಾಂ
ಕಿಂಸ್ವಿತ್ತಯೋಸ್ತತ್ರ ಜಯೋಽಥ ನ ಸ್ಯಾತ್ ।
ಆಚಕ್ಷ್ವ ನಃ ಪುಣ್ಯಫಲಂ ಮಹರ್ಷೇ
ಕಥಂ ಪಾಪಂ ನುದತೇ ಧರ್ಮಶೀಲಃ ॥೩೩॥

ಮಹಾರಾಜ! ಒಮ್ಮೆ ಎಲ್ಲ ದೇವತೆಗಳೂ ಮತ್ತು ಅಸುರರೂ ಒಟ್ಟುಗೂಡಿಕೊಂಡು ದೇವಗುರುವಾದ ಬೃಹಸ್ಪತಿಯ ಬಳಿಗೆ ಹೋಗಿ ಅವನನ್ನು ಪ್ರಶ್ನಿಸಿದರು :

“ಮಹರ್ಷೇ! ನೀನು ಧರ್ಮದ ಫಲವನ್ನು ತಿಳಿದಿರುವೆ. ಅದೇ

ರೀತಿಯಲ್ಲಿ ಪಾಪಿಗಳಾದವರು ಪರಲೋಕದಲ್ಲಿರುವ ನರಕದಲ್ಲಿ ಎಷ್ಟು ಕಷ್ಟವನ್ನು ಅನುಭವಿಸುವರೆಂಬ ವಿಷಯವೂ ನಿನಗೆ ತಿಳಿದಿದೆ. ಸುಖ-ದುಃಖ ಗಳೆರಡೂ ಯಾವ ಯೋಗಿಗೆ ಸಮಾನವೋ–ಆ ಯೋಗಿಯು ಸುಖ-ದುಃಖ ಗಳಿಗೆ ಕಾರಣವಾದ ಪುಣ್ಯ-ಪಾಪಗಳೆರಡನ್ನೂ ಜಯಿಸಿರುವನೇ? ಅಥವಾ ಇಲ್ಲವೇ? ದೇವಗುರುವೇ! ಪುಣ್ಯದ ಫಲವನ್ನೂ ಮತ್ತು ಧರ್ಮಶೀಲ ನಾದವನು ಪಾಪವನ್ನು ಹೇಗೆ ಕಳೆದುಕೊಳ್ಳುವನೆಂಬುದನ್ನೂ ಹೇಳು."

ಬೃಹಸ್ಪತಿಯು ಹೇಳುತ್ತಾನೆ :

ಕೃತ್ವಾ ಪಾಪಂ ಪೂರ್ವಮಬುದ್ಧಿಪೂರ್ವಂ
ಪುಣ್ಯಾನಿ ಚೇತ್ಕುರುತೇ ಬುದ್ಧಿಪೂರ್ವಮ್ ।
ಸ ತತ್ಪಾಪಂ ನುದತೇ ಕರ್ಮಶೀಲೋ
ವಾಸೋ ಯಥಾ ಮಲಿನಂ ಕ್ಷಾರಯುಕ್ತಮ್ ॥೩೪॥

"ಯಾವನು ಮೊದಲು ಅಬುದ್ಧಿಪೂರ್ವಕವಾಗಿ (ತಿಳಿಯದೇ) ಪಾಪ ಕರ್ಮವನ್ನು ಮಾಡಿ ಬಳಿಕ ಬುದ್ಧಿಪೂರ್ವಕವಾಗಿ ಪುಣ್ಯಕರ್ಮಗಳನ್ನು ಮಾಡುವನೋ–ಅಂತಹ ಸತ್ಕರ್ಮಪರಾಯಣನಾದ ಪುರುಷನು–ಚೌಳುಪ್ಪಿ ನಿಂದ ಸಂಸ್ಕೃತವಾದ ಬಟ್ಟೆಯು ಕೊಳೆಯನ್ನು ಹೊರಹಾಕುವಂತೆ–ಅಬುದ್ಧಿ ಪೂರ್ವಕವಾಗಿ ಮಾಡಿದ ಪಾಪಗಳನ್ನು ಕಳೆದುಕೊಳ್ಳುತ್ತಾನೆ.

ಪಾಪಂ ಕೃತ್ವಾಭಿಮನ್ಯೇತ ನಾಹಮಸ್ಮೀತಿ ಪೂರುಷಃ ।
ತಚ್ಚಿಕೀರ್ಷತಿ ಕಲ್ಯಾಣಂ ಶ್ರದ್ದಧಾನೋಽನಸೂಯಕಃ ॥೩೫॥

ಮನುಷ್ಯನು ಪಾಪಕಾರ್ಯವನ್ನು ಮಾಡಿ ನಾನು ಇಂತಹ ಪಾಪ ಕಾರ್ಯವನ್ನು ಮಾಡಿರುವೆನೆಂದು ಹೇಳಿಕೊಂಡು ಅಹಂಕಾರವನ್ನು ಪ್ರಕಟಿಸ ಬಾರದು. ಪಾಪಕಾರ್ಯಮಾಡಿದುದಕ್ಕಾಗಿ ನಾಚಬೇಕು ಮತ್ತು ಪಶ್ಚಾ ತ್ತಾಪಪಡಬೇಕು. ಪಾಪಪರಿಹಾರಕ್ಕಾಗಿ ಶ್ರದ್ಧಾವಂತನಾಗಿ, ಅಸೂಯಾ ರಹಿತನಾಗಿ ಶುಭಕರವಾದ ಧರ್ಮಕಾರ್ಯಗಳನ್ನು ಮಾಡುವ ಇಚ್ಛೆಯುಳ್ಳವ ನಾಗಬೇಕು.

ಛಿದ್ರಾಣಿ ವಿವೃತಾನ್ಯೇವ ಸಾಧೂನಾಂ ಚಾವೃಣೋತಿ ಯಃ ।
ಯಃ ಪಾಪಂ ಪುರುಷಃ ಕೃತ್ವಾ ಕಲ್ಯಾಣಮಭಿಪದ್ಯತೇ ॥೩೬॥

ಸಾಧುಪುರುಷರಲ್ಲಿ ಇರಬಹುದಾದ ನ್ಯೂನತೆಗಳನ್ನು ಯಾವನು ಮುಚ್ಚಿಡಲು ಪ್ರಯತ್ನಿಸುವನೋ, ಸಾಧುಗಳಲ್ಲಿರುವ ಸತ್ಕರ್ಮಗಳನ್ನೇ ದೊಡ್ಡದುಮಾಡಿ ಹೇಳುವನೋ ಮತ್ತು ಯಾವನು ತಿಳಿದೋ ತಿಳಿಯದೆಯೋ ಪಾಪವನ್ನು ಮಾಡಿ, ಅನಂತರ ಪಾಪಕರ್ಮದಿಂದ ವಿರತನಾಗಿ ಕಲ್ಯಾಣಕರವಾದ ಧರ್ಮಕಾರ್ಯಗಳನ್ನೇ ಮಾಡುವನೋ–ಅವನು ಪಾಪರಹಿತನಾಗುತ್ತಾನೆ.

ಯಥಾದಿತ್ಯಃ ಪ್ರಾತರುದ್ಯಂಸ್ತಮಃ ಸರ್ವಂ ವ್ಯಪೋಹತಿ ।
ಕಲ್ಯಾಣಮಾಚರನ್ನೇವ ಸರ್ವಪಾಪಂ ವ್ಯಪೋಹತಿ ॥೩೭॥

ಯಾವ ರೀತಿಯಲ್ಲಿ ಸೂರ್ಯನು ಪ್ರಾತಃಕಾಲವಾಗುತ್ತಲೇ ಉದಯಿಸಿ ಕತ್ತಲೆಯೆಲ್ಲವನ್ನೂ ಸಂಪೂರ್ಣವಾಗಿ ಹೋಗಲಾಡಿಸುವನೋ–ಅದೇ ರೀತಿಯಲ್ಲಿ ಮನುಷ್ಯನು ಕಲ್ಯಾಣಕರ್ಮಗಳನ್ನೇ ಮಾಡುತ್ತಾ ಎಲ್ಲ ಪಾಪಗಳನ್ನೂ ಹೋಗಲಾಡಿಸಿಕೊಳ್ಳುತ್ತಾನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಶುನಕವಂಶೀಯನಾದ ಇಂದ್ರೋತಮುನಿಯು ಜನಮೇಜಯರಾಜನಿಗೆ ಹೀಗೆ ಹೇಳಿ, ಅವನಿಂದ ವಿಧಿವತ್ತಾಗಿ ಅಶ್ವಮೇಧ ಯಾಗವನ್ನು ಮಾಡಿಸಿದನು. ಅಶ್ವಮೇಧಯಾಗವನ್ನು ವಿಧಿವತ್ತಾಗಿ ಮಾಡಿ ಸಕಲಪಾಪಗಳನ್ನೂ ಕಳೆದುಕೊಂಡು ಪ್ರಜ್ವಲಿಸುವ ಅಗ್ನಿಗೆ ಸದೃಶವಾದ ಮತ್ತು ತೇಜೋಮಯವಾದ ರೂಪವನ್ನು ಹೊಂದಿದ್ದ, ಶ್ರೇಯಸ್ಸಿನಿಂದ ಯುಕ್ತನಾಗಿದ್ದ, ಶತ್ರುಸೂದನನಾದ ಜನಮೇಜಯನು–ಪೂರ್ಣಬಿಂಬದಿಂದ ಕೂಡಿರುವ ಚಂದ್ರನು ಆಕಾಶಮಂಡಲವನ್ನು ಪ್ರವೇಶಿಸುವಂತೆ–ತನ್ನ ರಾಜ್ಯವನ್ನು ಪ್ರವೇಶಿಸಿದನು.”

೧೫೨ನೆಯ ಅಧ್ಯಾಯವು ಮುಗಿಯಿತು.

ಮೃತನ ಪುನರ್ಜೀವನಪ್ರಾಪ್ತಿಯ ವಿಷಯದಲ್ಲಿ ಸತ್ತುಹೋಗಿದ್ದ ಬ್ರಾಹ್ಮಣಬಾಲಕನು ಪುನಃ ಜೀವಿಸಿದ ವೃತ್ತಾಂತ

ಜನಮೇಜಯ! ಯುಧಿಷ್ಠಿರನು ಭೀಷ್ಮನನ್ನು ಪ್ರಶ್ನಿಸುತ್ತಾನೆ :

ಕಚ್ಚಿತ್ಪಿತಾಮಹೇನಾಸೀಚ್ಛ್ರುತಂ ವಾ ದೃಷ್ಟಮೇವ ಚ ।
ಕಚ್ಚಿನ್ಮರ್ತ್ಯೋ ಮೃತೋ ರಾಜನ್ಪುನರುಜ್ಜೀವಿತೋಽಭವತ್ ॥೧॥

"ಪಿತಾಮಹ! ಮನುಷ್ಯನು ಮರಣಹೊಂದಿದನಂತರ ಪುನಃ ಬದುಕಿರುವುದನ್ನು ಪಿತಾಮಹನಾದ ನೀನೇನಾದರೂ ನೋಡಿರುವೆಯಾ ಅಥವಾ ಕೇಳಿರುವೆಯಾ? ಹಾಗೇನಾದರೂ ಸತ್ತವನು ಬದುಕಿರುವುದನ್ನು ನೀನು ನೋಡಿದ್ದರೆ ಅಥವಾ ಕೇಳಿದ್ದರೆ ಆ ವೃತ್ತಾಂತವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

"ಕುಂತೀಪುತ್ರ! ಹಿಂದೆ ನೈಮಿಷಾರಣ್ಯದಲ್ಲಿ ರಣಹದ್ದಿಗೂ ಮತ್ತು ನರಿಗೂ ನಡೆದ ಐತಿಹಾಸಿಕವಾದ ಸಂಭಾಷಣೆಯನ್ನು ಕೇಳು :

ಒಬ್ಬಾನೊಬ್ಬ ಬ್ರಾಹ್ಮಣನು ಬಹಳ ಕಷ್ಟದಿಂದ (ಅನೇಕ ವಿಧವಾದ ವ್ರತೋಪವಾಸಾದಿಗಳನ್ನು ಮಾಡಿ ದೈವಾನುಗ್ರಹದಿಂದ) ಒಬ್ಬನೇ ಒಬ್ಬ ಮಗನನ್ನು ಪಡೆದುಕೊಂಡಿದ್ದನು. ವಿಶಾಲವಾದ ಕಣ್ಣುಗಳಿಂದ ಕೂಡಿದ್ದ ಆ ಬಾಲಕನು ಬಹಳ ಸುಂದರನಾಗಿದ್ದನು. ದುರದೃಷ್ಟವಶದಿಂದ ಆ ಬಾಲಕನು ಬಾಲಗ್ರಹಪೀಡಿತನಾಗಿ ಬಾಲ್ಯಾವಸ್ಥೆಯಲ್ಲಿಯೇ ಅಸುನೀಗಿದನು.

ಆ ಬಾಲಕನ ಬಂಧುಗಳಲ್ಲಿ ಕೆಲವರು–ಯೌವನದ ಹೊಸ್ತಿಲನ್ನೂ ತುಳಿಯದೇ ಇದ್ದ (ಕುಮಾರನಾದ), ಕುಲಕ್ಕೆ ಸರ್ವಸ್ವನಾಗಿದ್ದ (ವಂಶಾಭಿವೃದ್ಧಿಗೆ ಏಕಮಾತ್ರಬಾಲಕನಾಗಿದ್ದ) ಆ ಬಾಲಕನನ್ನು ಎತ್ತಿ ಕೊಂಡು ಶೋಕಾಕುಲರಾಗಿ, ಅತ್ಯಂತದುಃಖಿತರಾಗಿ ರೋದಿಸತೊಡಗಿದರು. ಅನಂತರ ಸತ್ತುಹೋಗಿದ್ದ ಆ ಬಾಲಕನನ್ನೆತ್ತಿಕೊಂಡು ಶ್ಮಶಾನಕ್ಕೆ ಅಭಿಮುಖ ವಾಗಿ ತೆರಳಿದರು. ಶ್ಮಶಾನಕ್ಕೆ ಹೋದನಂತರವೂ ದುಃಖಿತರಾಗಿದ್ದ ಬಾಲಕನ ಬಂಧುಗಳು ಬಾಲಕನನ್ನು ತೊಡೆಯ ಮೇಲೆಯೇ ಮಲಗಿಸಿ

ಕೊಂಡು ಗಟ್ಟಿಯಾಗಿ ಅಳತೊಡಗಿದರು. ಬಾಲಕನ ತಂದೆ-ತಾಯಿಗಳೂ ಮತ್ತು ಬಂಧು-ಬಳಗದವರೂ ಹಿಂದೆ ಆ ಹುಡುಗನು ಆಡುತ್ತಿದ್ದ ಮುದ್ದು-ಮುದ್ದು ಮಾತುಗಳನ್ನು ಜ್ಞಾಪಿಸಿಕೊಳ್ಳುತ್ತಾ ರೋದನ ಮಾಡುತ್ತಿದ್ದರು. ಅತಿಯಾದ ವಾತ್ಸಲ್ಯದ ಕಾರಣದಿಂದ ಸತ್ತುಹೋಗಿದ್ದ ಆ ಬಾಲಕನನ್ನು ಶ್ಮಶಾನಭೂಮಿಯಲ್ಲಿಟ್ಟು ಹಿಂದಿರುಗಲು ಅವರಿಗೆ ಸಾಧ್ಯ ವಾಗಲೇ ಇಲ್ಲ. ಬಾಲಕನ ಬಂಧುಗಳು ಗೋಳಿಡುತ್ತಿರುವುದನ್ನು ಕೇಳಿ ರಣಹದ್ದೊಂದು ಅವರ ಸಮೀಪಕ್ಕೆ ಬಂದು ಅವರನ್ನು ಕುರಿತು ಹೇಳಿತು :

ಏಕಾತ್ಮಜಮಿಮಂ ಲೋಕೇ ತ್ಯಕ್ತ್ವಾ ಗಚ್ಛತ ಮಾ ಚಿರಮ್ ।
ಇಹಂ ಪುಂಸಾಂ ಸಹಸ್ರಾಣಿ ಸ್ತ್ರೀಸಹಸ್ರಾಣಿ ಚೈವ ಹ ।
ಸಮಾನೀತಾನಿ ಕಾಲೇನ ಹಿತ್ವಾ ವೈ ಯಾನ್ತಿ ಬಾನ್ಧವಾಃ ॥೮॥

“ಮೃತನಾಗಿರುವ ನಿಮ್ಮ ಏಕಮಾತ್ರಪುತ್ರನನ್ನು ಈ ಶ್ಮಶಾನ ಭೂಮಿಯಲ್ಲಿ ಪರಿತ್ಯಜಿಸಿ ಹೊರಟುಹೋಗಿರಿ. ಸಾವಕಾಶಮಾಡಬೇಡಿರಿ. ಕಾಲಪುರುಷನು ಈ ಶ್ಮಶಾನಭೂಮಿಗೆ ಸಾವಿರಾರು ಪುರುಷರನ್ನೂ ಸಾವಿರಾರು ಸ್ತ್ರೀಯರನ್ನೂ ತರುತ್ತಲೇ ಇರುತ್ತಾನೆ. ಮೃತರ ಬಂಧುಗಳೆಲ್ಲರೂ ಅವರನ್ನು ಇಲ್ಲಿಯೇ ಬಿಟ್ಟು ಹೊರಟುಹೋಗುತ್ತಾರೆ.

ಸಮ್ಪಶ್ಯತ ಜಗತ್ಸರ್ವಂ ಸುಖದುಃಖೈರಧಿಷ್ಠಿತಮ್ ।
ಸಂಯೋಗೋ ವಿಪ್ರಯೋಗಶ್ಚ ಪರ್ಯಾಯೇಣೋಪಲಭ್ಯತೇ ॥೯॥

ನೋಡಿರಿ. ಈ ಸಮಸ್ತಪ್ರಪಂಚವೂ ಸುಖ-ದುಃಖಗಳಿಂದ ವ್ಯಾಪ್ತ ವಾಗಿರುವುದು. ಇಲ್ಲಿ ಸೇರುವಿಕೆ ಮತ್ತು ಅಗಲುವಿಕೆಗಳು ಪರ್ಯಾಯವಾಗಿ ಸಂಭವಿಸುತ್ತಲೇ ಇರುತ್ತವೆ. (ಇಂದು ನಮ್ಮ ಬಂಧುಗಳಲ್ಲಿ ಒಬ್ಬರು ಮೃತ ರಾಗಿ ನಮ್ಮನ್ನು ಅಗಲುತ್ತಾರೆ. ನಾಳೆ ನಮ್ಮ ಬಂಧುಗಳಲ್ಲೊಬ್ಬರಿಗೆ ಸಂತಾನವಾಗುತ್ತದೆ. ಹೀಗೆ ಒಬ್ಬರನ್ನು ಅಗಲುತ್ತೇವೆ. ಒಬ್ಬರೊಡನೆ ಸೇರಿಕೊಳ್ಳುತ್ತೇವೆ. ಇದು ಒಂದಾದ ಮೇಲೆ ಮತ್ತೊಂದು ಆಗುತ್ತಲೇ ಇರುತ್ತದೆ.)

ಗೃಹೀತ್ವಾ ಯೇ ಚ ಗಚ್ಛನ್ತಿ ಯೇ ನ ಯಾನ್ತಿ ಚ ತಾನ್ಮೃತಾನ್ ।
ತೇಽಪ್ಯಾಯುಷಃ ಪ್ರಮಾಣೇನ ಸ್ವೇನ ಗಚ್ಛನ್ತಿ ಜನ್ತವಃ ॥೧೦॥

ಇಂದು ಯಾರು ಮೃತರಾದವರನ್ನೆತ್ತಿಕೊಂಡು ಶ್ಮಶಾನಕ್ಕೆ ಹೋಗುತ್ತಾರೆಯೋ ಮತ್ತು ಮೃತರಾದವರನ್ನು ಅನುಸರಿಸಿ ಶ್ಮಶಾನಕ್ಕೆ ಹೋಗುವುದಿಲ್ಲವೋ–ಆ ಎಲ್ಲ ಜೀವಜಂತುಗಳೂ ಅವರವರ ಆಯುಃಪ್ರಮಾಣಗಳಿಗೆ ಅನುಸಾರವಾಗಿ ಶ್ಮಶಾನಕ್ಕೆ ಬೇರೆಯವರಿಂದ ಒಯ್ಯಲ್ಪಡುತ್ತಾರೆ.

ಅಲಂ ಸ್ಥಿತ್ವಾ ಶ್ಮಶಾನೇಽಸ್ಮಿನ್ಗೃಧ್ರಗೋಮಾಯುಸಂಕುಲೇ ।
ಕಙ್ಕಾಲಬಹುಲೇ ರೌದ್ರೇ ಸರ್ವಪ್ರಾಣಿಭಯಙ್ಕರೇ ॥೧೧॥

ರಣಹದ್ದುಗಳಿಂದಲೂ, ನರಿಗಳಿಂದಲೂ ಸಮಾಕುಲವಾಗಿರುವ, ಅಸ್ಥಿಪಂಜರಗಳಿಂದ ತುಂಬಿರುವ, ಸರ್ವಪ್ರಾಣಿಗಳಿಗೂ ಭಯಂಕರವಾದ, ರೌದ್ರವಾದ ಈ ಶ್ಮಶಾನದಲ್ಲಿ ಇದುವರೆಗೆ ಇದ್ದುದು ಸಾಕು. ಎಷ್ಟು ಹೊತ್ತು ಇದ್ದರೂ ಯಾವ ಪ್ರಯೋಜನವೂ ಇಲ್ಲ. ಆದುದರಿಂದ ಮೃತಬಾಲಕನನ್ನು ಬಿಟ್ಟು ಎಲ್ಲರೂ ಕೂಡಲೇ ಹಿಂದಿರುಗಿರಿ.

ನ ಪುನರ್ಜೀವಿನಃ ಕಶ್ಚಿತ್ಕಾಲಧರ್ಮಮುಪಾಗತಃ ।
ಪ್ರಿಯೋ ವಾ ಯದಿ ವಾ ದ್ವೇಷ್ಯಃ ಪ್ರಾಣಿನಾಂ ಗತಿರೀದೃಶೀ ॥೧೨॥

ನಮಗೆ ಪ್ರಿಯನೇ ಆಗಿರಲಿ ; ಶತ್ರುವೇ ಆಗಿರಲಿ–ಕಾಲಧರ್ಮವನ್ನೈದಿದನಂತರ (ಮೃತ್ಯುವಶನಾದನಂತರ) ಯಾವನೂ ಕೂಡ ಪುನಃ ಜೀವಂತನಾಗಿಲ್ಲ. ಪ್ರಪಂಚದಲ್ಲಿರುವ ಸಮಸ್ತಪ್ರಾಣಿಗಳಿಗೂ ಇಂತಹ ಗತಿಯೇ ಒದಗುತ್ತದೆ.

ಸರ್ವೇಣ ಖಲು ಮರ್ತವ್ಯಂ ಮರ್ತ್ಯಲೋಕೇ ಪ್ರಸೂಯತಾ ।
ಕೃತಾನ್ತವಿಹಿತೇ ಮಾರ್ಗೇ ಮೃತಂ ಕೋ ಜೀವಯಿಷ್ಯತಿ ॥೧೩॥

ಮರ್ತ್ಯಲೋಕದಲ್ಲಿ ಹುಟ್ಟಿದನಂತರ ಎಂದಾದರೊಂದು ದಿನ ಹುಟ್ಟಿದವರೆಲ್ಲರೂ ಸಾಯಲೇಬೇಕು. ಕಾಲಪುರುಷನಿಂದ ನಿಶ್ಚಿತವಾಗಿರುವ ಈ ಮಾರ್ಗದಲ್ಲಿ ಮೃತನಾದವನನ್ನು ಯಾರು ತಾನೇ ಬದುಕಿಸಬಲ್ಲರು?

ಕರ್ಮಾನ್ತವಿರತೇ ಲೋಕೇ ಅಸ್ತಂ ಗಚ್ಛತಿ ಭಾಸ್ಕರೇ ।
ಗಮ್ಯತಾಂ ಸ್ವಮಧಿಷ್ಠಾನಂ ಸುತಸ್ನೇಹಂ ವಿಸೃಜ್ಯ ವೈ ॥೧೪॥

ಸೂರ್ಯನು ಅಸ್ತಂಗತನಾಗುತ್ತಿರುವನು. ಜಗತ್ತಿನ ಜನರೆಲ್ಲರೂ ದೈನಿಕಕಾರ್ಯಗಳನ್ನು ಮುಗಿಸಿ ವಿರಮಿಸುವ ಈ ಸಮಯದಲ್ಲಿ ಇಲ್ಲಿ ಹೆಚ್ಚು ಹೊತ್ತು ನಿಲ್ಲಬೇಡಿರಿ. ಮಗನ ಮೇಲಿನ ವ್ಯಾಮೋಹವನ್ನು ತೊರೆದು ನಿಮ್ಮ ನಿಮ್ಮ ಮನೆಗಳಿಗೆ ತೆರಳಿರಿ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ರಣಹದ್ದು ಹೇಳಿದ ಈ ಮಾತನ್ನು ಕೇಳಿ ಬಾಲಕನ ತಾಯಿ-ತಂದೆ-ಬಂಧು-ಬಳಗದವರೆಲ್ಲರೂ ಗಟ್ಟಿಯಾಗಿ ರೋದನಮಾಡಿದರು. ಬಳಿಕ ಮೃತಬಾಲಕನನ್ನು ಶ್ಮಶಾನದ ಭೂಮಿಯಲ್ಲಿಯೇ ಬಿಟ್ಟು ಮನೆಯ ಕಡೆಗೆ ಹೊರಟರು. ಸತ್ತವನು ಪುನಃ ಬದುಕಿಬರುವುದಿಲ್ಲವೆಂದು ಅವರೂ ನಿಶ್ಚಯಿಸಿದರು. ನಮ್ಮ ಪ್ರಿಯಪುತ್ರನು ಸತ್ತುಹೋದನು–ಎಂದುಕೊಂಡು ಅವನ ಪುನರ್ದರ್ಶನದಲ್ಲಿ ನಿರಾಶರಾಗಿ ಆಗಿಂದಾಗ್ಗೆ ರೋದನಮಾಡುತ್ತಾ ಎಲ್ಲರೂ ತಮ್ಮ-ತಮ್ಮ ಮನೆಗಳಿಗೆ ಹೊರಡಲನುವಾದರು. ಬಾಲಕನಿನ್ನು ಬದುಕಿಬರುವುದಿಲ್ಲವೆಂದು ನಿಶ್ಚಯಿಸಿದವರಾಗಿ, ಅವನ ಜೀವಿತದಲ್ಲಿ ಸಂಪೂರ್ಣವಾದ ನಿರಾಶೆಯನ್ನು ಹೊಂದಿ, ತಮ್ಮ ಮಗನನ್ನು ಶ್ಮಶಾನಭೂಮಿಯಲ್ಲಿಯೇ ಪರಿತ್ಯಾಗಮಾಡಿ ಮನೆಗಳಿಗೆ ಹೋಗುವ ದಾರಿಯನ್ನು ಹಿಡಿದು ಹೊರಟರು. ಆ ಸಮಯಕ್ಕೆ ಸರಿಯಾಗಿ ಕಾಗೆಯ ರೆಕ್ಕೆಯಂತೆ ಕಪ್ಪಾದ ಬಣ್ಣವುಳ್ಳ ನರಿಯೊಂದು ತನ್ನ ಗೂಡಿನಿಂದ ಹೊರಬಂದು ಮನೆಯ ಕಡೆಗೆ ಹೊರಟು ನಿಂತಿದ್ದ ಮೃತಬಾಲಕನ ಬಂಧುಗಳನ್ನು ಕುರಿತು ಹೇಳಿತು :

“ಮಾನವರೇ! ನೀವು ಅತ್ಯಂತನಿರ್ದಯರು. ಮೂರ್ಖರೇ! ಸೂರ್ಯಾಸ್ತವಿನ್ನೂ ಆಗಿರುವುದಿಲ್ಲ. ಹೆದರಬೇಡಿರಿ. ಇಷ್ಟು ದಿವಸಗಳೂ ಸಾಕಿ-ಸಲಹಿದ ಕುಮಾರನ ವಿಷಯದಲ್ಲಿ ಇನ್ನೂ ಸ್ವಲ್ಪಹೊತ್ತು ಸ್ನೇಹದಿಂದಲೇ ಇರಿ. ಮುಹೂರ್ತಗಳು ಅನೇಕ ಪ್ರಕಾರವಾಗಿರುತ್ತವೆ. ಅಮೃತ

ಘಳಿಗೆಯು ಪುನಃ ಬಂದರೂ ಬರಬಹುದು. ಅಂತಹ ಶುಭಮುಹೂರ್ತದಲ್ಲಿ ನಿಮ್ಮ ಬಾಲಕನು ಬದುಕಿದರೂ ಬದುಕಬಹುದು.

ಯೂಯಂ ಭೂಮೌ ವಿನಿಕ್ಷಿಪ್ಯ ಪುತ್ರಸ್ನೇಹವಿನಾಕೃತಾಃ ।
ಶ್ಮಶಾನೇ ಸುತಮುತ್ಸೃಜ್ಯ ಕಸ್ಮಾದ್ಗಚ್ಛತ ನಿರ್ಘೃಣಾಃ ॥೨೦॥

ನಿರ್ದಯರಾದ ನೀವು ನಿಮ್ಮ ಪುತ್ರನ ವಿಷಯದಲ್ಲಿ ಸ್ವಲ್ಪವಾದರೂ ಪ್ರೀತಿಯೇ ಇಲ್ಲದೆ ಅವನನ್ನು ಶ್ಮಶಾನಭೂಮಿಯಲ್ಲಿಟ್ಟು ಪರಿತ್ಯಜಿಸಿ ಏಕೆ ಹೋಗುತ್ತಿರುವಿರಿ?

ನ ವೋಽಸ್ತ್ಯಸ್ಮಿನ್ಸುತೇ ಸ್ನೇಹೋ ಬಾಲೇ ಮಧುರಭಾಷಿಣಿ ।
ಯಸ್ಯ ಭಾಷಿತಮಾತ್ರೇಣ ಪ್ರಸಾದಮಧಿಗಚ್ಛತ ॥೨೧॥

ಯಾವ ಬಾಲಕನ ಮಧುರವಾದ ತೊದಲುನುಡಿಗಳಿಂದ ನಿಮ್ಮ ಹೃದಯಗಳು ಆನಂದದಿಂದ ತುಂಬಿಹೋಗುತ್ತಿದ್ದುವೋ–ಅಂತಹ ಮಧುರ ಭಾಷಿಯಾದ ಈ ಬಾಲಕನ ವಿಷಯದಲ್ಲಿ ಈಗ ನಿಮಗೆ ಸ್ವಲ್ಪವಾದರೂ ಪ್ರೀತಿಯೇ ಇಲ್ಲವೆಂದು ತೋರುತ್ತದೆ.

ತೇ ಪಶ್ಯತ ಸುತಸ್ನೇಹೋ ಯಾದೃಶಃ ಪಶುಪಕ್ಷಿಣಾಮ್ ।
ನ ತೇಷಾಂ ಧಾರಯಿತ್ವಾ ತಾನ್ಕಶ್ಚಿದಸ್ತಿ ಫಲಾಗಮಃ ॥೨೨॥

ಚತುಷ್ಪಾತ್ಪಕ್ಷಿಕೀಟಾನಾಂ ಪ್ರಾಣಿನಾಂ ಸ್ನೇಹಸಙ್ಗಿನಾಮ್ ।
ಪರಲೋಕಗತಿಸ್ಥಾನಾಂ ಮುನಿಯಜ್ಞಕ್ರಿಯಾ ಇವ ॥೨೩॥

ಪಶು-ಪಕ್ಷಿಗಳಲ್ಲಿಯೂ ಸುತಸ್ನೇಹವು ಹೇಗಿರುವುದೆಂಬುದನ್ನಾದರೂ ನೀವುಗಳೇ ನೋಡಿರಿ. ಮೃಗ-ಪಕ್ಷಿಗಳು ಮನುಷ್ಯರಂತೆ ಫಲಾಪೇಕ್ಷೆಯಿಂದ ಅವುಗಳ ಮರಿಗಳನ್ನು ಸಾಕುವುದಿಲ್ಲ. ಮರಿಗಳನ್ನು ಲಾಲಿಸಿ-ಪೋಷಿಸುವುದ ರಿಂದ ಪಶು-ಪಕ್ಷಿಗಳಿಗೆ ಯಾವ ಫಲವೂ ಇಲ್ಲ. ನಿಷ್ಕಾಮದಿಂದ ಮುನಿಗಳು ಮಾಡುವ ಯಜ್ಞಕ್ರಿಯೆಗಳಿಗೆ ಉತ್ತಮಲೋಕಗಳು ಪ್ರಾಪ್ತವಾಗು ವಂತೆ–ಮರಿಗಳ ವಿಷಯದಲ್ಲಿ ಸ್ನೇಹಾಸಕ್ತವಾದ, ಪಶು-ಪಕ್ಷಿ-ಕೀಟಾದಿ ಪ್ರಾಣಿಗಳಿಗೆ–ಅವುಗಳ ಮರಿಗಳ ಲಾಲನ-ಪೋಷಣಮಾಡುವುದರಿಂದ ಅವಸಾನಾನಂತರದಲ್ಲಿ ಪಾರಲೌಕಿಕವಾದ ಯಾವ ಫಲವೂ ಸಿಕ್ಕುವುದಿಲ್ಲ.

ತೇಷಾಂ ಪುತ್ರಾಭಿರಾಮಾಣಾಮಿಹಲೋಕೇ ಪರತ್ರ ಚ ।
ನ ಗುಣೋ ದೃಶ್ಯತೇ ಕಶ್ಚಿತ್ಪ್ರಜಾಃ ಸಂಧಾರಯನ್ತಿ ಚ ॥೨೪॥

ಮರಿಗಳ ವಿಷಯದಲ್ಲಿ ಹೆಚ್ಚು ಮಮತೆಯನ್ನಿಟ್ಟುಕೊಂಡಿರುವ ಪಶು-ಪಕ್ಷಿ-ಕೀಟಗಳಿಗೆ ಇಹಲೋಕದಲ್ಲಾಗಲೀ, ಪರಲೋಕದಲ್ಲಾಗಲೀ–ಯಾವ ಪ್ರಯೋಜನವೂ ಕಾಣುತ್ತಿಲ್ಲ. ಆದರೂ ಮೃಗ-ಪಕ್ಷಿ-ಕೀಟಗಳು ಅವುಗಳ ಮರಿಗಳನ್ನು ಚೆನ್ನಾಗಿಯೇ ರಕ್ಷಿಸುತ್ತವೆ.

ಅಪಶ್ಯತಾಂ ಪ್ರಿಯಾನ್ಪುತ್ರಾಂಸ್ತೇಷಾಂ ಶೋಕೋ ನ ತಿಷ್ಠತಿ ।
ನ ಚ ಪುಷ್ಣನ್ತಿ ಸಂವೃದ್ಧಾಸ್ತೇ ಮಾತಾಪಿತರೌ ಕ್ವಚಿತ್ ॥೨೫॥

ಮರಿಗಳು ದೊಡ್ಡದಾದ ಮೇಲೆ ಪ್ರಿಯವಾಗಿದ್ದ ಮಕ್ಕಳನ್ನು ಕಾಣದೇ ಇರುವುದರಿಂದ ಮೃಗ-ಪಕ್ಷಿಗಳಿಗೆ ಯಾವ ವಿಧವಾದ ಶೋಕವೂ ಉಂಟಾಗುವುದಿಲ್ಲ. ಮೇಲಾಗಿ ದೊಡ್ಡವುಗಳಾದ ಮೃಗ-ಪಕ್ಷಿಗಳೂ ಕೂಡ ಅವುಗಳ ತಂದೆ-ತಾಯಿಗಳನ್ನು ಯಾವಾಗಲೂ ಸಾಕಿ-ಸಲಹುವುದಿಲ್ಲ. (ಇದು ಪಶು-ಪಕ್ಷಿಗಳ ಸ್ವಭಾವವಾಗಿರುತ್ತದೆ.)

ಮಾನುಷಾಣಾಂ ಕುತಃ ಸ್ನೇಹೋ ಯೇಷಾಂ ಶೋಕೋ ಭವಿಷ್ಯತಿ ।
ಇಮಂ ಕುಲಕರಂ ಪುತ್ರಂ ತ್ಯಕ್ತ್ವಾ ಕ್ವ ನು ಗಮಿಷ್ಯಥ ॥೨೬॥

ಮನುಷ್ಯರಲ್ಲಿ ಮಕ್ಕಳು ಮುಂದೆ ತಮ್ಮ ತಂದೆ-ತಾಯಿಗಳನ್ನು ಸಾಕುತ್ತಾರೆ. ಆದುದರಿಂದ ಅಂತಹ ತಮ್ಮ ಮಕ್ಕಳು ಸತ್ತರೆ ದುಃಖವಾಗುವುದು ಸಹಜ. ಆದರೆ ಈಗ ಈ ಮಗುವನ್ನು ಬಿಟ್ಟುಹೋಗುತ್ತಿರುವ ಮನುಷ್ಯರಾದ ನಿಮ್ಮ ಸ್ನೇಹವೆಲ್ಲಿ ಹೋಯಿತು? ಅಯ್ಯೋ! ಇಂತಹ ವಂಶವರ್ಧಕನಾದ ಮಗನನ್ನು ಬಿಟ್ಟು ನೀವು ಎಲ್ಲಿಗೆ ಹೋಗುವಿರಿ?

ಚಿರಂ ಮುಞ್ಚತ ಬಾಷ್ಪಂ ಚ ಚಿರಂ ಸ್ನೇಹೇನ ಪಶ್ಯತ ।
ಏವಂವಿಧಾನಿ ಹೀಷ್ಟಾನಿ ದುಸ್ತ್ಯಜಾನಿ ವಿಶೇಷತಃ ॥೨೭॥

ನಿಮ್ಮ ಈ ಮಗನಿಗಾಗಿ ಬಹಳ ಹೊತ್ತಿನವರೆಗೂ ಕಣ್ಣೀರು ಸುರಿಸಿರಿ. ಬಹಳ ಹೊತ್ತಿನವರೆಗೂ ಇಲ್ಲಿಯೇ ಇದ್ದು ಸ್ನೇಹಪೂರ್ಣವಾದ ದೃಷ್ಟಿಯಿಂದ ಇವನನ್ನು ನೋಡುತ್ತಿರಿ. ಏಕೆಂದರೆ ; ಪರಮಪ್ರಿಯವಾದ ವಸ್ತು

ಗಳನ್ನು ಅದರಲ್ಲಿಯೂ ವಿಶೇಷವಾಗಿ ವಂಶವರ್ಧಕನಾದ ಪುತ್ರನನ್ನು ಬಿಟ್ಟುಹೋಗುವುದು ಬಹಳ ಕಷ್ಟವೇ ಸರಿ.

ಕ್ಷೀಣಸ್ಯಾರ್ಥಾಭಿಯುಕ್ತಸ್ಯ ಶ್ಮಶಾನಾಭಿಮುಖಸ್ಯ ಚ ।
ಬಾನ್ಧವಾ ಯತ್ರ ತಿಷ್ಠನ್ತಿ ತತ್ರಾನ್ಯೋ ನಾಧಿತಿಷ್ಠತಿ ॥೨೮॥

ರೋಗಪೀಡಿತನಾಗಿ ಕ್ಷೀಣಶರೀರನಾಗಿರುವವನ ಬಳಿಯಲ್ಲಿ, ಆರ್ಥಿಕವಾಗಿ ಅಪರಾಧಮಾಡಿರುವವನ ಬಳಿಯಲ್ಲಿ, ಶ್ಮಶಾನಾಭಿಮುಖನಾಗಿರುವವನ ಬಳಿಯಲ್ಲಿ (ಮೃತನಾದವನ ಬಳಿಯಲ್ಲಿ)–ಬಂಧುಗಳೂ, ಸ್ನೇಹಿತರೂ ಇರುತ್ತಾರಲ್ಲದೇ–ಬೇರೆಯವರು ಯಾರೂ ಇರುವುದಿಲ್ಲ.

ಸರ್ವಸ್ಯ ದಯಿತಾಃ ಪ್ರಾಣಾಃ ಸರ್ವಃ ಸ್ನೇಹಂ ಚ ವಿನ್ದತಿ ।
ತಿರ್ಯಗ್ಯೋನಿಷ್ವಪಿ ಸತಾಂ ಸ್ನೇಹಂ ಪಶ್ಯತ ಯಾದೃಶಮ್ ॥೨೯॥

ಎಲ್ಲರಿಗೂ ಅವರವರ ಪ್ರಾಣಗಳು ಬಹಳ ಪ್ರಿಯವಾಗಿರುತ್ತವೆ. ಎಲ್ಲರೂ ಪರಸ್ಪರವಾಗಿ ಸ್ನೇಹವನ್ನು ಬಯಸುತ್ತಾರೆ. (ಪರಸ್ಪರವಾಗಿ ಒಬ್ಬರನ್ನೊಬ್ಬರು ಪ್ರೀತಿಸುತ್ತಾರೆ.) ತಿರ್ಯಗ್ಯೋನಿಗಳಲ್ಲಿಯೂ (ಪಶು-ಪಕ್ಷಿ-ಕೀಟಾದಿಗಳಲ್ಲಿಯೂ) ಅವುಗಳ ಮರಿಗಳ ಮೇಲೆ ಎಷ್ಟರಮಟ್ಟಿನ ಪ್ರೀತಿಯಿರುವುದೆಂಬುದನ್ನು ನೀವೇ ನೋಡಿರಿ.

ತ್ಯಕ್ತ್ವಾ ಕಥಂ ಗಚ್ಛಥೇಮಂ ಪದ್ಮಲೋಲಾಯತಾಕ್ಷಿಕಮ್ ।
ಯಥಾ ನವೋದ್ವಾಹಕೃತಂ ಸ್ನಾನಮಾಲ್ಯವಿಭೂಷಿತಮ್ ॥೩೦॥

ಕಮಲದಂತೆ ಚಂಚಲವಾಗಿಯೂ ವಿಶಾಲವಾಗಿಯೂ ಇರುವ ಕಣ್ಣುಗಳನ್ನು ಹೊಂದಿರುವ, ಸ್ನಾನಮಾಡಿ ಪುಷ್ಪಮಾಲೆಯೇ ಮೊದಲಾದ ಆಭರಣಗಳಿಂದ ವಿಭೂಷಿತನಾದ, ಈಗ ತಾನೇ ವಿವಾಹವಾದ ಮದುಮಗನಂತೆಯೇ ಕಾಣುತ್ತಿರುವ ಈ ಬಾಲಕನನ್ನು ಬಿಟ್ಟು ನೀವು ಹೇಗೆತಾನೇ ಹೋಗುವಿರಿ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಕರುಣಾಜನಕವಾಗಿ ವಿಲಪಿಸುತ್ತಿದ್ದ ನರಿಯ ಮಾತುಗಳನ್ನು ಕೇಳಿ ಮೃತಬಾಲಕನ ತಂದೆ-ತಾಯಿಗಳೂ ಮತ್ತು ಬಂಧುಗಳೂ ಬಾಲಕನ ಶವವನ್ನು ಪುನಃ ನೋಡುವ ಅಪೇಕ್ಷೆಯಿಂದ ಶ್ಮಶಾನಕ್ಕೆ

ಹಿಂದಿರುಗಿದರು. ಅವರೆಲ್ಲರೂ ಶ್ಮಶಾನಕ್ಕೆ ಪುನಃ ಹಿಂದಿರುಗಿದುದನ್ನು ನೋಡಿ ರಣಹದ್ದು ಹೇಳಿತು :

ಅಹೋ ಬತ ನೃಶಂಸೇನ ಜಮ್ಬುಕೇನಾಲ್ಪಮೇಧಸಾ ।
ಕ್ಷುದ್ರೇಣೋಕ್ತಾ ಹೀನಸತ್ತ್ವಾ ಮಾನುಷಾಃ ಕಿಂ ನಿವರ್ತಥ ॥೩೨॥

"ಮಾನವರೇ! ನೀವು ಬಹಳ ಬಲಹೀನರಾಗಿರುವಿರಿ. ಕ್ರೂರ ಸ್ವಭಾವದ, ಮಂದಬುದ್ಧಿಯ, ಕ್ಷುದ್ರವಾದ ಈ ನರಿಯು ಹೇಳಿದ ಮಾತುಗಳನ್ನು ಕೇಳಿ ನೀವೇಕೆ ಪುನಃ ಶ್ಮಶಾನಕ್ಕೆ ಹಿಂದಿರುಗುತ್ತಿರುವಿರಿ?

ಪಞ್ಚೇನ್ದ್ರಿಯಪರಿತ್ಯಕ್ತಂ ಶುಷ್ಕಂ ಕಾಷ್ಠತ್ವಮಾಗತಮ್ ।
ಕಸ್ಮಾಚ್ಛೋಚಥ ತಿಷ್ಠನ್ತಮಾತ್ಮಾನಂ ಕಿಂ ನ ಶೋಚಥ ॥೩೩॥

ಈ ಬಾಲಕನೀಗ ಗತಪ್ರಾಣನಾಗಿ ಪಂಚೇಂದ್ರಿಯಗಳಿಂದಲೂ ಪರಿತ್ಯಕ್ತನಾಗಿದ್ದಾನೆ. ಒಣಗಿಹೋದ ಕಟ್ಟಿಗೆಯಂತೆಯೇ ಇದ್ದಾನೆ. ಇಂತಹವನಿಗಾಗಿ ನೀವೇಕೆ ಶೋಕಪಡುತ್ತಿರುವಿರಿ? ಮುಂದೊಂದು ದಿನ ನಿಮಗೂ ಇಂತಹ ಅವಸ್ಥೆಯೇ ಪ್ರಾಪ್ತವಾಗುತ್ತದೆ. ಆದುದರಿಂದ ನಿಮಗಾಗಿಯೇ ನೀವು ಏಕೆ ಶೋಕಪಡುತ್ತಿಲ್ಲ?

ತಪಃ ಕುರುತ ವೈ ತೀವ್ರಂ ಮುಚ್ಯಧ್ವಂ ಯೇನ ಕಿಲ್ಬಿಷಾತ್ ।
ತಪಸಾ ಲಭ್ಯತೇ ಸರ್ವಂ ವಿಲಾಪಃ ಕಿಂ ಕರಿಷ್ಯತಿ ॥೩೪॥

ಹೀಗೆ ಸತ್ತುಹೋದವನ ಮುಂದೆ ಕುಳಿತು ಅಳುವುದಕ್ಕೆ ಬದಲಾಗಿ ನೀವೆಲ್ಲರೂ ತೀವ್ರವಾದ ತಪಸ್ಸನ್ನಾದರೂ ಮಾಡಿರಿ. ಹಾಗೆ ತಪಸ್ಸನ್ನು ಮಾಡಿದರೆ ನೀವೆಲ್ಲರೂ ಪಾಪಗಳಿಂದ ಮುಕ್ತರಾಗುವಿರಿ. ತಪಸ್ಸು ಮಾಡುವುದರಿಂದ ಸಕಲಕಾಮನೆಗಳೂ ಸಿದ್ಧಿಸುತ್ತವೆ. ನಿಮ್ಮ ವ್ಯರ್ಥ ವಿಲಾಪವು ಏನು ಮಾಡಬಲ್ಲುದು?

ಅನಿಷ್ಟಾನಿ ಚ ಭಾಗ್ಯಾನಿ ಜಾತಾನಿ ಸಹ ಮೂರ್ತಿನಾ ।
ಯೇನ ಗಚ್ಛತಿ ಬಾಲೋಽಯಂ ದತ್ತ್ವಾ ಶೋಕಮನನ್ತಕಮ್ ॥೩೫॥

ಅನಿಷ್ಟಗಳೂ–ಕಲ್ಯಾಣಗಳೂ ಮಗುವು ಹುಟ್ಟುವಾಗಲೇ ಶರೀರದ ಜೊತೆಯಲ್ಲಿಯೇ ಬಂದಿರುತ್ತವೆ. ಆ ಕಾರಣದಿಂದಲೇ ಈ ಬಾಲಕನು

ನಿಮಗೆ ನಿರಂತರವಾದ ಶೋಕವನ್ನು ಕೊಟ್ಟು ಹೊರಟುಹೋಗಿರುವನು. (ಅಲ್ಪಾಯುವಾಗಿ ಹುಟ್ಟಿದ ಕಾರಣದಿಂದ ಇವನು ನಿಮ್ಮನ್ನು ಶೋಕಸಾಗರದಲ್ಲಿ ಮುಳುಗಿಸಿ ಹೋಗಿದ್ದಾನೆ. ಅವನಿಗಾಗಿ ಈಗ ಶೋಕಿಸಿ ಯಾವ ಪ್ರಯೋಜನವೂ ಇಲ್ಲ.)

ಧನಂ ಗಾವಃ ಸುವರ್ಣಂ ಚ ಮಣಿರತ್ನಮಥಾಪಿ ಚ ।
ಅಪತ್ಯಂ ಚ ತಪೋಮೂಲಂ ತಪೋಯೋಗಾಚ್ಚ ಲಭ್ಯತೇ ॥೩೬॥

ಧನ, ಹಸುಗಳು, ಚಿನ್ನ, ಮಣಿ, ರತ್ನ, ಪುತ್ರ–ಇವುಗಳೆಲ್ಲಕ್ಕೂ ತಪಸ್ಸೇ ಮೂಲಕಾರಣವಾಗಿರುತ್ತದೆ. ತಪೋಯೋಗದಿಂದಲೇ ಇವುಗಳೆಲ್ಲವೂ ಲಭಿಸತಕ್ಕುವುಗಳು.

ಯಥಾಕೃತಾ ಚ ಭೂತೇಷು ಪ್ರಾಪ್ಯತೇ ಸುಖದುಃಖಿತಾ ।
ಗೃಹೀತ್ವಾ ಜಾಯತೇ ಜನ್ತುರ್ದುಃಖಾನಿ ಚ ಸುಖಾನಿ ಚ ॥೩೭॥

ಎಲ್ಲ ಪ್ರಾಣಿಗಳಿಗೂ ಸುಖ-ದುಃಖಗಳು ಕರ್ಮಾನುಸಾರವಾಗಿಯೇ ಪ್ರಾಪ್ತವಾಗುತ್ತವೆ. ಜೀವವು ತನ್ನ ಪೂರ್ವಕರ್ಮಫಲಾನುಸಾರವಾಗಿ ಸುಖ-ದುಃಖಗಳನ್ನು ಜೊತೆಯಲ್ಲಿಯೇ ತೆಗೆದುಕೊಂಡು ಜನ್ಮಪಡೆಯುತ್ತದೆ.

ನ ಕರ್ಮಜಾ ಪಿತುಃ ಪುತ್ರಃ ಪಿತಾ ವಾ ಪುತ್ರಕರ್ಮಣಾ ।
ಮಾರ್ಗೇಣಾನ್ಯೇನ ಗಚ್ಛನ್ತಿ ಬದ್ಧಾಃ ಸುಕೃತದುಷ್ಕೃತೈಃ ॥೩೮॥

ತಂದೆಯು ಮಾಡಿದ ಕರ್ಮದಿಂದ ಮಗನೂ ಪ್ರಭಾವಿತನಾಗುವುದಿಲ್ಲ. ಮಗನು ಮಾಡಿದ ಕರ್ಮದಿಂದ ತಂದೆಯೂ ಪ್ರಭಾವಿತನಾಗುವುದಿಲ್ಲ. ತಂದೆ-ಮಕ್ಕಳಾಗಿಯೇ ಹುಟ್ಟಿದ್ದರೂ ಅವರವರ ಕರ್ಮಾನುಸಾರವಾಗಿ ಅವರ ವ್ಯವಹಾರಗಳು ನಡೆಯುತ್ತಿರುತ್ತವೆ. ನಡೆ-ನುಡಿ-ಕೃತಿಗಳೂ ಬೇರೆಯಾಗಿಯೇ ಇರುತ್ತವೆ. ಇವುಗಳೆಲ್ಲವೂ ಕರ್ಮದ ಫಲಗಳು. ಅವರವರು ಮಾಡಿದ ಪಾಪ-ಪುಣ್ಯಗಳಿಂದ ಬದ್ಧರಾದ ಅವರು ಬೇರೆ-ಬೇರೆಯ ಮಾರ್ಗಗಳಿಂದಲೇ ಹೋಗುತ್ತಿರುತ್ತಾರೆ.

ಧರ್ಮಂ ಚರತ ಯತ್ನೇನ ನ ಚಾಧರ್ಮೇ ಮನಃ ಕೃಥಾಃ ।
ವರ್ತಧ್ವಂ ಚ ಯಥಾಕಾಲಂ ದೈವತೇಷು ದ್ವಿಜೇಷು ಚ ॥೩೯॥

ಪ್ರಯತ್ನಪೂರ್ವಕವಾಗಿ ಧರ್ಮಾಚರಣೆಯನ್ನು ಮಾಡಿರಿ. ಅಧರ್ಮದಲ್ಲಿ ಮನಸ್ಸನ್ನು ತೊಡಗಿಸಬೇಡಿರಿ. ಸಾಧ್ಯವಾದ ಮಟ್ಟಿಗೂ ದೇವ-ಬ್ರಾಹ್ಮಣರ ಸೇವೆಯಲ್ಲಿಯೇ ಸಮಯವನ್ನು ಕಳೆಯಿರಿ.

ಶೋಕಂ ತ್ಯಜತ ದೈನ್ಯಂ ಚ ಸುತಸ್ನೇಹಾನ್ನಿವರ್ತತ ।
ತ್ಯಜ್ಯತಾಮಯಮಾಕಾಶೇ ತತಃ ಶೀಘ್ರಂ ನಿವರ್ತತ ॥೪೦॥

ಶೋಕವನ್ನೂ ದೈನ್ಯವನ್ನೂ ದೂರಮಾಡಿರಿ. ಸತ್ತುಹೋಗಿರುವ ಬಾಲಕನಲ್ಲಿ ಇನ್ನೂ ಪ್ರೀತಿಯನ್ನಿಟ್ಟುಕೊಳ್ಳಬೇಡಿರಿ. ನಿರ್ಜನವಾದ ಈ ಪ್ರದೇಶದಲ್ಲಿ ಬಾಲಕನ ಶವವನ್ನು ಬಿಟ್ಟು ಶೀಘ್ರವಾಗಿ ಹೊರಟುಹೋಗಿರಿ.

ಯತ್ಕರೋತಿ ಶುಭಂ ಕರ್ಮ ತಥಾ ಕರ್ಮ ಸುದಾರುಣಮ್ ।
ತತ್ಕರ್ತೈವ ಸಮಶ್ನಾತಿ ಬಾನ್ಧವಾನಾಂ ಕಿಮತ್ರ ಹ ॥೪೧॥

ಯಾವ ಪ್ರಾಣಿಯೇ ಆಗಲಿ–ಪುಣ್ಯಕರ್ಮವನ್ನು ಮಾಡಿದರೆ ಅಥವಾ ಸುದಾರುಣವಾದ ಪಾಪಕರ್ಮವನ್ನು ಮಾಡಿದರೆ–ಅವುಗಳ ಫಲವನ್ನು ಅದೇ ಅನುಭವಿಸುತ್ತದೆ. ಬಾಲಕನು ತಾನು ಮಾಡಿದ ಕರ್ಮದ ಫಲವಾಗಿ ದೇಹತ್ಯಾಗಮಾಡಿದ್ದಾನೆ. ಇದರಲ್ಲಿ ಬಂಧುಗಳ ಸಂಬಂಧವೇನಿದೆ?

ಇಹ ತ್ಯಕ್ತ್ವಾ ನ ತಿಷ್ಠನ್ತಿ ಬಾನ್ಧವಾ ಬಾನ್ಧವಂ ಪ್ರಿಯಮ್ ।
ಸ್ನೇಹಮುತ್ಸೃಜ್ಯ ಗಚ್ಛನ್ತಿ ಬಾಷ್ಪಪೂರ್ಣಾವಿಲೇಕ್ಷಣಾಃ ॥೪೨॥

ಮೃತನಾದವನ ಬಂಧುಗಳು ಈ ಶ್ಮಶಾನಭೂಮಿಗೆ ಬಂದು ತಮಗೆ ಪ್ರಿಯನಾಗಿದ್ದ ಬಂಧುವನ್ನು ತ್ಯಜಿಸಿದ ಬಳಿಕ ಪುನಃ ಇಲ್ಲಿ ನಿಲ್ಲುವುದಿಲ್ಲ. ತಾವು ಅದುವರೆಗೂ ಬೆಳೆಸಿಕೊಂಡಿದ್ದ ಸ್ನೇಹವನ್ನು ಪರಿತ್ಯಜಿಸಿ ಕಂಬನಿ ದುಂಬಿದ ಕಣ್ಣುಗಳುಳ್ಳವರಾಗಿ ಹೊರಟುಹೋಗುತ್ತಾರೆ.

ಪ್ರಾಜ್ಞೋ ವಾ ಯದಿ ವಾ ಮೂರ್ಖಃ ಸಧನೋ ನಿರ್ಧನೋಽಪಿ ವಾ।
ಸರ್ವಃ ಕಾಲವಶಂ ಯಾತಿ ಶುಭಾಶುಭಸಮನ್ವಿತಃ ॥೪೩॥

ಪಂಡಿತನಾಗಲೀ–ಮೂರ್ಖನಾಗಲೀ, ಧನಿಕನಾಗಲೀ–ದರಿದ್ರನಾಗಲೀ– ಎಲ್ಲರೂ ತಾವು ಮಾಡಿದ ಪುಣ್ಯ-ಪಾಪಕರ್ಮಗಳನ್ನು ಹೊತ್ತುಕೊಂಡೇ ಕಾಲಾಧೀನರಾಗುತ್ತಾರೆ.

ಕಿಂ ಕರಿಷ್ಯಥ ಶೋಚಿತ್ವಾ ಮೃತಂ ಕಿಮನುಶೋಚಥ ।
ಸರ್ವಸ್ಯ ಹಿ ಪ್ರಭುಃ ಕಾಲೋ ಧರ್ಮತಃ ಸಮದರ್ಶನಃ ॥೪೪॥

ನೀವು ನಿರಂತರವೂ ದುಃಖಿಸಿ ಏನು ಮಾಡುವಿರಿ? ಅತ್ತರೆ ಅವನು ಎದ್ದು ಬರುವನೇ? ನೀವು ಎಷ್ಟೇ ರೋದನಮಾಡಿದರೂ ಅವನು ಎದ್ದು ಬರುವುದಿಲ್ಲ. ಆದುದರಿಂದ ಸತ್ತವನಿಗೆ ಅಳುವುದೇಕೆ? ಹುಟ್ಟು-ಸಾವುಗಳಿ ಗೆಲ್ಲಕ್ಕೂ ಕಾಲನೇ ಸ್ವಾಮಿಯಾಗಿದ್ದಾನೆ. ಅವನು ಧರ್ಮತಃ ಎಲ್ಲರನ್ನೂ ಸಮದೃಷ್ಟಿಯಿಂದಲೇ ಕಾಣುತ್ತಾನೆ.

ಯೌವನಸ್ಥಾಂಶ್ಚ ಬಾಲಾಂಶ್ಚ ವೃದ್ಧಾನ್ಗರ್ಭಗತಾನಪಿ ।
ಸರ್ವಾನಾವಿಶತೇ ಮೃತ್ಯುರೇವಂಭೂತಮಿದಂ ಜಗತ್ ॥೪೫॥

ಮೃತ್ಯುಸ್ವರೂಪನಾದ ಕಾಲನು ಯುವಕರನ್ನೂ, ಬಾಲಕರನ್ನೂ, ವೃದ್ಧರನ್ನೂ, ಗರ್ಭದಲ್ಲಿರುವ ಭ್ರೂಣವನ್ನೂ (ಶಿಶುವನ್ನೂ) ಪ್ರವೇಶಿಸು ತ್ತಾನೆ. ಅವನಿಗೆ ಯಾರಲ್ಲಿಯೂ ಯಾವ ವಿಧವಾದ ತಾರತಮ್ಯವೂ ಇಲ್ಲ. ಪ್ರಪಂಚವು ಈ ಪ್ರಕಾರವಾಗಿಯೇ ಇದೆ.”

ರಣಹದ್ದು ಹೇಳಿದುದನ್ನು ಕೇಳಿ ನರಿಯು ಬಾಲಕನ ಬಂಧುಗಳೊಡನೆ ಪುನಃ ಹೇಳಿತು :

ಅಹೋ ಮನ್ದೀಕೃತಃ ಸ್ನೇಹೋ ಗೃಧ್ರೇಣೇಹಾಲ್ಪಬುದ್ಧಿನಾ ।
ಪುತ್ರಸ್ನೇಹಾಭಿಭೂತಾನಾಂ ಯುಷ್ಮಾಕಂ ಶೋಚತಾಂ ಭೃಶಮ್ ॥೪6॥

“ಅಯ್ಯೋ! ಪುತ್ರಪ್ರೇಮದಿಂದ ಅಭಿಭೂತರಾಗಿರುವ, ಈ ಕಾರಣ ದಿಂದಲೇ ಅನವರತವಾಗಿ ಶೋಕಪಡುತ್ತಿರುವ ನಿಮ್ಮ ಪುತ್ರವಾತ್ಸಲ್ಯವನ್ನು ಮಂದಬುದ್ಧಿಯಿಂದ ಕೂಡಿರುವ ಈ ರಣಹದ್ದು ಶಿಥಿಲಗೊಳಿಸುತ್ತಿದೆ.

ಸಮ್ಯೈಃ ಸಮ್ಯಕ್ಪ್ರಯುಕ್ತೈಶ್ಚ ವಚನೈಃ ಪ್ರತ್ಯಯೋತ್ತರೈಃ ।
ಯದ್ಗಚ್ಛತಿ ಜನಶ್ಚಾಯಂ ಸ್ನೇಹಮುತ್ಸೃಜ್ಯ ದುಸ್ತ್ಯಜಮ್ ॥೪೭॥

ಋಜುವಾದ, ಯುಕ್ತಿಯುಕ್ತವಾದ, ಸುಪ್ರಯುಕ್ತವಾದ, ನಂಬಿಕೆಗೆ ಅರ್ಹವಾದ ಮಾತುಗಳಂತೆ ತೋರುವ ಈ ರಣಹದ್ದಿನ ಮಾತಿನಿಂದ ಪ್ರಭಾ ವಿತರಾಗಿ, ಪರಿತ್ಯಜಿಸಲು ದುಸ್ಸಾಧ್ಯವಾದ ಪುತ್ರಸ್ನೇಹವನ್ನೂ ಪರಿತ್ಯಜಿಸಿ

ಪ್ರಿಯಪುತ್ರನನ್ನು ನಿರ್ಜನವಾದ ಈ ಶ್ಮಶಾನದಲ್ಲಿ ಬಂಧುಜನರು ಬಿಟ್ಟು ಹೋಗುತ್ತಿರುವರೆಂಬುದು ಎಂತಹ ಆಚ್ಚರಿಯ ವಿಷಯವಾಗಿದೆ!

ಅಹೋ ಪುತ್ರವಿಯೋಗೇನ ಮೃತಶೂನ್ಯೋಪಸೇವನಾತ್ ।
ಕ್ರೋಶತಾಂ ಸುಭೃಶಂ ದುಃಖಂ ವಿವತ್ಸಾನಾಂ ಗವಾಮಿವ ॥೪೮॥

ಅದ್ಯ ಶೋಕಂ ವಿಜಾನಾಮಿ ಮಾನುಷಾಣಾಂ ಮಹೀತಲೇ ।
ಸ್ನೇಹಂ ಹಿ ಕಾರಣಂ ಕೃತ್ವಾ ಮಮಾಪ್ಯಶ್ರೂಣ್ಯಥಾಪತನ್ ॥೪೯॥

ಅಯ್ಯೋ! ಈ ಪ್ರಪಂಚದಲ್ಲಿ ಸತ್ತವರನ್ನು ಶೂನ್ಯವಾದ ಈ ಶ್ಮಶಾನಭೂಮಿಗೆ ಹೊತ್ತುತಂದು–ಕರುಗಳನ್ನು ಕಳೆದುಕೊಂಡ ಹಸುಗಳಂತೆ–ಪುತ್ರಶೋಕದ ಪ್ರಖರತೆಯೇನೆಂಬುದನ್ನು ಈಗ ನಾನು ಕಂಡುಕೊಂಡಿರುತ್ತೇನೆ. ಇವರೊಡನೆ ಸ್ವಲ್ಪಕಾಲವೇ ಮಾಡಿಕೊಂಡ ಸ್ನೇಹದ ಕಾರಣದಿಂದಾಗಿ ನನ್ನ ಕಣ್ಣುಗಳಿಂದಲೂ ಅಶ್ರುಬಿಂದುಗಳು ಉದುರುತ್ತಿವೆ.

ಯತ್ನೋ ಹಿ ಸತತಂ ಕಾರ್ಯಸ್ತತೋ ದೈವೇನ ಸಿದ್ಧ್ಯತಿ ।
ದೈವಂ ಪುರುಷಕಾರಶ್ಚ ಕೃತಾನ್ತೇನೋಪಪದ್ಯತೇ ॥೫೦॥

ನಮ್ಮ ಅಭೀಷ್ಟವನ್ನು ಸಿದ್ಧಿಸಿಕೊಳ್ಳಬೇಕಾದರೆ ಸತತವಾಗಿ ಪ್ರಯತ್ನವನ್ನು ಮಾಡುತ್ತಲೇ ಇರಬೇಕು. ಹೀಗೆ ಪ್ರಯತ್ನಮಾಡುತ್ತಿದ್ದರೆ ಮಾತ್ರ ನಮ್ಮ ಕಾರ್ಯವು ದೈವಯೋಗದಿಂದ ಸಿದ್ಧಿಯಾಗುತ್ತದೆ. ಪುರುಷ ಪ್ರಯತ್ನವೂ ಮತ್ತು ದೈವಯೋಗವೂ ಕಾಲಾನುಗುಣವಾಗಿ ಒಂದುಗೂಡಿ ಕಾರ್ಯದ ಸಿದ್ಧಿಯಾಗುತ್ತದೆ.

ಅನಿರ್ವೇದಃ ಸದಾ ಕಾರ್ಯೋ ನಿರ್ವೇದಾದ್ಧಿ ಕುತಃ ಸುಖಮ್ ।
ಪ್ರಯತ್ನಾತ್ಪ್ರಾಪ್ಯತೇ ಹ್ಯರ್ಥಃ ಕಸ್ಮಾದ್ಗಚ್ಛತ ನಿರ್ದಯಮ್ ॥೫೧॥

ಆಯಾಸವಿಲ್ಲದೇ, ಖೇದವಿಲ್ಲದೇ ಯಾವಾಗಲೂ ಕಾರ್ಯವನ್ನು ಮಾಡುತ್ತಲೇ ಇರಬೇಕು. ಖೇದದಿಂದ ಎದೆಗುಂದಿದರೆ ಸುಖವೆಲ್ಲಿಂದ ಪ್ರಾಪ್ತವಾಗುತ್ತದೆ? ಅಭಿಲಷಿತವಾದ ಅರ್ಥವು ಪ್ರಯತ್ನದಿಂದಲೇ ಪ್ರಾಪ್ತವಾಗುತ್ತದೆ. ಆದುದರಿಂದ ಸತ್ತುಹೋಗಿರುವ ಬಾಲಕನನ್ನು ಬದುಕಿಸಿ

ಕೊಳ್ಳಲು ಪ್ರಯತ್ನಿಸಿರಿ. ಹಾಗೆ ಮಾಡದೇ ನಿರ್ದಯರಾಗಿ ಮುದ್ದುಕಂದ ನನ್ನು ಶೂನ್ಯವಾದ ಶ್ಮಶಾನದಲ್ಲಿಟ್ಟು ಏಕೆ ಹೊರಟುಹೋಗುತ್ತಿರುವಿರಿ?

ಆತ್ಮಮಾಂಸೋಪವೃತ್ತಂ ಚ ಶರೀರಾರ್ಧಮಯೀಂ ತನುಮ್ ।
ಪಿತೄಣಾಂ ವಂಶಕರ್ತಾರಂ ವನೇ ತ್ಯಕ್ತ್ವಾ ಕ್ವ ಯಾಸ್ಯಥ ॥೫೨॥

ಈ ಬಾಲಕನು ನಿಮ್ಮ (ತಾಯಿ-ತಂದೆಗಳ) ರಕ್ತ-ಮಾಂಸಗಳಲ್ಲಿ ಪಾಲು ತೆಗೆದುಕೊಂಡು ಹುಟ್ಟಿರುವನು. ಆದುದರಿಂದ ಇವನ ಶರೀರವು ನಿಮ್ಮ ಶರೀರದ ಅರ್ಧವೇ ಆಗಿದೆ. ಮೇಲಾಗಿ ಇವನು ಪಿತೃಗಳ ವಂಶೋ ದ್ಧಾರಕನಾಗಿರುತ್ತಾನೆ. ಇಂತಹವನನ್ನು ಈ ಘೋರಾರಣ್ಯದಲ್ಲಿ ಪರಿತ್ಯಜಿಸಿ ನೀವೆಲ್ಲಿಗೆ ಹೋಗುವಿರಿ?

ಅಥವಾಸ್ತಂಗತೇ ಸೂರ್ಯೇ ಸಂಧ್ಯಾಕಾಲ ಉಪಸ್ಥಿತೇ ।
ತತೋ ನೇಷ್ಯಥ ವಾ ಪುತ್ರಮಿಹಸ್ಥಾ ವಾ ಭವಿಷ್ಯಥ ॥೫೩॥

ಅಥವಾ ಹೀಗಾದರೂ ಮಾಡಿರಿ. ಸಂಧ್ಯಾಕಾಲವು ಸನ್ನಿಹಿತವಾಗುವ ವರೆಗೂ ಮತ್ತು ಸೂರ್ಯನು ಅಸ್ತಂಗತನಾಗುವವರೆಗೂ ನೀವು ಇಲ್ಲಿಯೇ ಇರಿ. ಅನಂತರ ಈ ನಿಮ್ಮ ಪುತ್ರನನ್ನು ಎತ್ತಿಕೊಂಡಾದರೂ ಹೋಗಿರಿ. ಇವನೊಡನೆ ಇಲ್ಲಾದರೂ ಕುಳಿತಿರಿ. ಆದರೆ ಸೂರ್ಯನು ಮುಳುಗುವ ಮೊದಲು ನಿಮ್ಮ ಪ್ರಿಯಪುತ್ರನನ್ನು ಬಿಟ್ಟು ನೀವು ಇಲ್ಲಿಂದ ಹೊರಡುವುದು ಖಂಡಿತವಾಗಿಯೂ ಉಚಿತವಲ್ಲ."

ನರಿಯ ಮಾತನ್ನು ಕೇಳಿ ರಣಹದ್ದು ಪುನಃ ಬಾಲಕನ ಬಂಧುಗಳನ್ನು ಕುರಿತು ಹೇಳತೊಡಗಿತು :

ಅದ್ಯ ವರ್ಷಸಹಸ್ರಂ ಮೇ ಸಾಗ್ರಂ ಜಾತಸ್ಯ ಮಾನುಷಾಃ ।
ನ ಚ ಪಶ್ಯಾಮಿ ಜೀವನ್ತಂ ಮೃತಂ ಸ್ತ್ರೀಪುನ್ನಪುಂಸಕಮ್ ॥೫೪॥

"ಮಾನವರೇ! ನಾನು ಹುಟ್ಟಿ ಇಂದಿಗೆ ಸಾವಿರ ವರ್ಷಗಳಿಗೂ ಅಧಿಕ ವಾಗಿದೆ. ಅಷ್ಟು ವರ್ಷಗಳಿಂದಲೂ ನಾನು ಇಲ್ಲಿಯೇ ಇದ್ದೇನೆ. ಸ್ತ್ರೀಯಾಗಲೀ, ಪುರುಷನಾಗಲೀ, ನಪುಂಸಕನಾಗಲೀ–ಸತ್ತನಂತರ ಬದುಕಿರುವುದನ್ನು ನಾನು ಇದುವರೆಗೂ ಕಂಡಿಲ್ಲ.

ಮೃತಾ ಗರ್ಭೇಷು ಜಾಯನ್ತೇ ಜಾತಮಾತ್ರಾ ಮ್ರಿಯನ್ತಿ ಚ ।
ಚಜ ಮನ್ತೋ ಮ್ರಿಯನ್ತೇ ಚ ಯೌವನಸ್ಥಾಸ್ತಥಾ ಪರೇ ॥೫೫॥

ಕೆಲವು ಶಿಶುಗಳು ಗರ್ಭದಲ್ಲಿಯೇ ಸತ್ತು ಹುಟ್ಟುತ್ತವೆ. ಕೆಲವು ಹುಟ್ಟಿದೊಡನೆಯೇ ಸಾಯುತ್ತವೆ. ಕೆಲವು ಮಕ್ಕಳು ಅಡಿಯಿಡಲು ಪ್ರಾರಂಭಿಸಿದೊಡನೆಯೇ ಸಾಯುತ್ತವೆ. ಕೆಲವು ಯೌವನಾವಸ್ಥೆಯಲ್ಲಿ ಸಾಯುತ್ತವೆ.

ಅನಿತ್ಯಾನೀಹ ಭಾಗ್ಯಾನಿ ಚತುಷ್ಪಾತ್ಪಕ್ಷಿಣಾಮಪಿ ।
ಜಙ್ಗಮಾನಾಂ ನಗಾನಾಂ ವಾಪ್ಯಾಯುರಗ್ರೇಽವತಿಷ್ಠತೇ ॥೫೬॥

ಈ ಪ್ರಪಂಚದಲ್ಲಿ ಮೃಗ-ಪಕ್ಷಿಗಳಿಗೂ ಭಾಗ್ಯಫಲಗಳು ಅನಿತ್ಯವಾಗಿರುತ್ತವೆ. (ಶಾಶ್ವತವಾಗಿರುವುದಿಲ್ಲ.) ಸ್ಥಾವರಗಳಿಗೇ ಆಗಲೀ, ಜಂಗಮಗಳಿಗೇ ಆಗಲೀ–ಆಯುಷ್ಯವೇ ಪ್ರಧಾನವಾಗಿರುತ್ತದೆ.

ಇಷ್ಟದಾರವಿಯುಕ್ತಾಶ್ಚ ಪುತ್ರಶೋಕಾನ್ವಿತಾಸ್ತಥಾ ।
ದಹ್ಯಮಾನಾಃ ಸ್ಮ ಶೋಕೇನ ಗೃಹಂ ಗಚ್ಛನ್ತಿ ನಿತ್ಯಶಃ ॥೫೭॥

ಪ್ರಿಯಪತ್ನಿಯನ್ನು ಕಳೆದುಕೊಂಡವರೂ ಮತ್ತು ಪ್ರಿಯಪುತ್ರರನ್ನು ಕಳೆದುಕೊಂಡು ಪುತ್ರಶೋಕದಿಂದ ಪರಿತಪಿಸುವವರೂ–ಮೃತರಾದ ತಮ್ಮ ಪತ್ನೀ-ಪುತ್ರರನ್ನು ಇಲ್ಲಿಗೆ ತಂದು, ಶೋಕಾಗ್ನಿಯಿಂದ ದಹಿಸಲ್ಪಟ್ಟವರಾಗಿ, ಹೊತ್ತು ತಂದ ಪತ್ನೀ-ಪುತ್ರರನ್ನೂ ಇಲ್ಲಿಯೇ ಬಿಟ್ಟು ತಮ್ಮ-ತಮ್ಮ ಮನೆಗಳಿಗೆ ಅನುದಿನವೂ ಹೋಗುತ್ತಲೇ ಇರುತ್ತಾರೆ. (ಯಾರೇ ಆದರೂ ಬಹಳ ಹೊತ್ತಿನವರೆಗೆ ರೋದಿಸುತ್ತಾ ಇಲ್ಲಿಯೇ ಕುಳಿತುಕೊಳ್ಳುವುದಿಲ್ಲ.)

ಅನಿಷ್ಟಾನಾಂ ಸಹಸ್ರಾಣಿ ತಥೇಷ್ಟಾನಾಂ ಶತಾನಿ ಚ ।
ಉತ್ಸೃಜ್ಯೇಹ ಪ್ರಯಾತಾ ವೈ ಬಾನ್ಧವಾ ಭೃಶದುಃಖಿತಾಃ ॥೫೮॥

ಅತ್ಯಂತ ದುಃಖಿತರಾದ ಎಷ್ಟೋ ಬಂಧುಗಳು, ಶೂನ್ಯವಾದ ಈ ಶ್ಮಶಾನಭೂಮಿಯಲ್ಲಿ ಇದುವರೆಗೆ ಸಾವಿರಾರು ಅಪ್ರಿಯರಾದ, ನೂರಾರು ಪರಮಪ್ರಿಯರಾದ ತಮ್ಮ ಮೃತಬಂಧುಗಳನ್ನು ಪರಿತ್ಯಜಿಸಿ ಹೊರಟು ಹೋಗಿದ್ದಾರೆ.

ತ್ಯಜ್ಯತಾಮೇಷ ನಿಸ್ತೇಜಾಃ ಶೂನ್ಯಃ ಕಾಷ್ಠತ್ವಮಾಗತಃ ।
ಅನ್ಯದೇಹವಿಷಕ್ತಂ ಹಿ ಶಾವಂ ಕಾಷ್ಠತ್ವಮಾಗತಮ್ ॥೫೯॥

ತ್ಯಕ್ತಜೀವಸ್ಯ ಚೈವಾಸ್ಯ ಕಸ್ಮಾದ್ಧಿತ್ವಾ ನ ಗಚ್ಛತ ।
ನಿರರ್ಥಕೋ ಹ್ಯಯಂ ಸ್ನೇಹೋ ನಿಷ್ಫಲಶ್ಚ ಪರಿಶ್ರಮಃ ॥೬೦॥

ಮೃತನಾಗಿರುವ ಈ ಬಾಲಕನು ತೇಜೋಹೀನನಾಗಿ ಪ್ರಾಣಶೂನ್ಯನಾಗಿ ಕಟ್ಟಿಗೆಯಂತೆ ಬಿದ್ದಿದ್ದಾನೆ. ಈ ಶವವನ್ನು ಪರಿತ್ಯಜಿಸಿ ನೀವು ಹೊರಟುಹೋಗಿರಿ. ಇದಕ್ಕೆ ಪ್ರಾಣವು ಪುನಃ ಬರುವುದೆಂದು ಭ್ರಾಂತರಾಗಬೇಡಿರಿ. ಈ ಬಾಲಕನ ಪ್ರಾಣವಾಗಲೇ ಬೇರೊಂದು ದೇಹದಲ್ಲಿ ಸೇರಿಕೊಳ್ಳಲು ಆಸಕ್ತವಾಗಿದೆ. ಪ್ರಾಣಹೋಗಿರುವ ಈ ಬಾಲಕನ ಶವವು ಈಗ ಕಟ್ಟಿಗೆಗೆ ಸಮಾನವಾಗಿದೆ. ಜೀವವಿಲ್ಲದಿರುವ, ಕಟ್ಟಿಗೆಗೆ ಸಮಾನವಾಗಿರುವ ಈ ದೇಹವನ್ನು ನೀವೇಕೆ ಬಿಟ್ಟು ಹೋಗುತ್ತಿಲ್ಲ? ಪ್ರಾಣವಿಲ್ಲದ ಈ ಬಾಲಕನ ಮೇಲೆ ನೀವಿಟ್ಟಿರುವ ಪ್ರೀತಿಯು ನಿರರ್ಥಕವಾದುದು. ಬಾಲಕನನ್ನುಳಿಸಿಕೊಳ್ಳಬೇಕೆನ್ನುವ ಭ್ರಾಂತಿಯಿಂದ ನೀವು ಮಾಡುತ್ತಿರುವ ರೋದನರೂಪವಾದ ಪರಿಶ್ರಮವೂ ನಿಷ್ಫಲವಾದುದು.

ಚಕ್ಷುರ್ಭ್ಯಾಂ ನ ಚ ಕರ್ಣಾಭ್ಯಾಂ ಸಂಶೃಣೋತಿ ಸಮೀಕ್ಷತೇ ।
ಕಸ್ಮಾದೇನಂ ಸಮುತ್ಸೃಜ್ಯ ನ ಗೃಹಾನ್ಗಚ್ಛತಾಶು ವೈ ॥೬೧॥

ವಿಯೋಗದಿಂದ ನೀವು ವಿಷಣ್ಣವದನರಾಗಿರುವುದನ್ನು ಮೃತನಾಗಿ ರುವ ಈ ಬಾಲಕನು ನೋಡುತ್ತಿಲ್ಲ. ದುಃಖಾಧಿಕ್ಯದಿಂದ ರೋದಿಸುತ್ತಿರು ವುದನ್ನೂ ಕೇಳುತ್ತಿಲ್ಲ. ಹೀಗಿರುವಾಗ ಕಟ್ಟಿಗೆಯಂತೆಯೇ ಇರುವ ಈ ಶವ ವನ್ನು ಇಲ್ಲಿಯೇ ಬಿಟ್ಟು ನೀವೇಕೆ ಶೀಘ್ರವಾಗಿ ನಿಮ್ಮ ಮನೆಗಳಿಗೆ ಹೋಗುತ್ತಿಲ್ಲ?

ಮೋಕ್ಷಧರ್ಮಾಶ್ರಿತೈರ್ವಾಕ್ಯೈರ್ಹೇತುಮದ್ಭಿಃ ಸನಿಷ್ಠುರೈಃ ।
ಮಯೋಕ್ತಾ ಗಚ್ಛತ ಕ್ಷಿಪ್ರಂ ಸ್ವಂ ಸ್ವಮೇವ ನಿವೇಶನಮ್ ॥೬೨॥

ನಾನು ಹೇಳುತ್ತಿರುವ ಈ ಮಾತುಗಳು ನಿಮ್ಮ ಕಿವಿಗಳಿಗೆ ಬಹಳ ನಿಷ್ಠುರವಾಗಿ ಕೇಳುತ್ತಿರಬಹುದು. ಆದರೆ ನಾನು ಹೇಳುತ್ತಿರುವ ಮಾತುಗಳು ಸಕಾರಣಗಳಾಗಿವೆ. ಮೋಕ್ಷಧರ್ಮವನ್ನು ಆಶ್ರಯಿಸಿ ನಾನು ಈ

ಮಾತುಗಳನ್ನು ಹೇಳುತ್ತಿದ್ದೇನೆ. ಆದುದರಿಂದ ನನ್ನ ಮಾತನ್ನು ಗೌರವಿಸಿ ನೀವೀಗಲೇ ಇಲ್ಲಿಂದ ಹೊರಟುಹೋಗಿರಿ. ಸಾಧ್ಯವಾದಷ್ಟು ಬೇಗ ನಿಮ್ಮನಿಮ್ಮ ಮನೆಗಳನ್ನು ಸೇರಿಕೊಳ್ಳಿರಿ.

ಪ್ರಜ್ಞಾವಿಜ್ಞಾನಯುಕ್ತೇನ ಬುದ್ಧಿಸಂಜ್ಞಾಪ್ರದಾಯಿನಾ ।
ವಚನಂ ಶ್ರಾವಿತಾ ನೂನಂ ಮಾನುಷಾಃ ಸಂನಿವರ್ತತ ।
ಶೋಕೋ ದ್ವಿಗುಣತಾಂ ಯಾತಿ ದೃಷ್ಟ್ವಾ ಸ್ಮೃತ್ವಾ ಚ ಚೇಷ್ಟಿತಮ್ ॥೬೩॥

ಮಾನವರೇ! ಜ್ಞಾನ-ವಿಜ್ಞಾನಗಳಿಂದಲೂ ಸಂಪನ್ನನಾಗಿರುವ, ಇತರರಿಗೂ ತಿಳಿವಳಿಕೆಯನ್ನೂ–ಒಳ್ಳೆಯ ಜ್ಞಾನವನ್ನೂ ಉಪದೇಶಿಸುವ ನಾನು ನಿಮಗೂ ವಿವೇಕವನ್ನುಂಟುಮಾಡುವ ಅನೇಕವಿಧವಾದ ಮಾತುಗಳನ್ನು ಯುಕ್ತಿಯುಕ್ತವಾಗಿಯೂ ಮೋಕ್ಷಧರ್ಮಾನುಸಾರವಾಗಿಯೂ ಹೇಳಿರುತ್ತೇನೆ. ಆದುದರಿಂದ ನಾನು ಹೇಳಿದಂತೆ ನೀವೀಗಲೇ ನಿಮ್ಮಮನೆಗಳಿಗೆ ಹಿಂದಿರುಗಿರಿ. ಗತಪ್ರಾಣನಾಗಿರುವ ಈ ಬಾಲಕನನ್ನು ಪುನಃ ಪುನಃ ನೋಡುವುದರಿಂದಲೂ ಮತ್ತು ಇವನ ಆಟ-ಪಾಟಗಳನ್ನು ಸ್ಮರಿಸಿಕೊಳ್ಳುವುದರಿಂದಲೂ ಶೋಕವು ಇಮ್ಮಡಿಯಾಗುತ್ತದೆ. ಆದರೆ ಹೀಗೆ ವೃಥಾ ದುಃಖಿಸುತ್ತಲೇ ಇರುವುದರಿಂದ ಯಾವ ಪ್ರಯೋಜನವೂ ಇಲ್ಲ."

ರಣಹದ್ದು ಹೇಳಿದ ಯುಕ್ತಿಯುಕ್ತವಾದ ಈ ಮಾತುಗಳನ್ನು ಕೇಳಿ ಬಾಲಕನ ಬಂಧುಗಳು ತಮ್ಮ-ತಮ್ಮ ಮನೆಗಳ ಕಡೆಗೆ ತಿರುಗಿದರು. ಅಷ್ಟರಲ್ಲಿಯೇ ನರಿಯು ಬಹಳ ಶೀಘ್ರವಾಗಿ ಮುಂದೆ ಬಂದು ಗತಪ್ರಾಣನಾಗಿ ನೆಲದ ಮೇಲೆ ಬಿದ್ದಿದ್ದ ಬಾಲಕನನ್ನು ನೋಡುತ್ತಾ ಬಂಧುಗಳನ್ನು ಕುರಿತು ಹೇಳತೊಡಗಿತು :

ಇಮಂ ಕನಕವರ್ಣಾಭಂ ಭೂಷಣೈಃ ಸಮಲಂಕೃತಮ್ ।
ಗೃಧ್ರವಾಕ್ಯಾತ್ಕಥಂ ಪುತ್ರಂ ತ್ಯಜಧ್ವಂ ಪಿತೃಪಿಣ್ಡದಮ್ ॥೬೪॥

"ಬಾಲಕನ ಪ್ರಿಯಬಂಧುಗಳೇ! ಚಿನ್ನದ ಬಣ್ಣದಂತೆ ಪ್ರಕಾಶಮಾನನಾಗಿರುವ, ಅನೇಕವಿಧವಾದ ಆಭರಣಗಳಿಂದ ಸಮಲಂಕೃತನಾಗಿರುವ, ಪಿತೃ

ಗಳಿಗೆ ಪಿಂಡದಾಯಕನಾದ ಇಂತಹ ಸುಂದರಬಾಲಕನನ್ನು ಮುದಿಹದ್ದಿನ ಮಾತಿಗೆ ಮರುಳಾಗಿ ಏಕೆ ಬಿಟ್ಟುಹೋಗುತ್ತಿರುವಿರಿ?

ನ ಸ್ನೇಹಸ್ಯ ಚ ವಿಚ್ಛೇದೋ ವಿಲಾಪರುದಿತಸ್ಯ ಚ ।
ಮೃತಸ್ಯಾಸ್ಯ ಪರಿತ್ಯಾಗಾತ್ತಾಪೋ ವೈ ಭವಿತಾ ಧ್ರುವಮ್ ॥೬೬॥

ಈ ಬಾಲಕನನ್ನು ನೀವು ಪರಿತ್ಯಾಗಮಾಡಿ ಹೊರಟುಹೋಗುವುದರಿಂದ ಈ ಬಾಲಕನ ಮೇಲಿನ ಪ್ರೀತಿಯೇನೂ ಕಡಿದುಹೋಗುವುದಿಲ್ಲ. ನಿಮ್ಮ ರೋದನವೂ ನಿಂತುಹೋಗುವುದಿಲ್ಲ. (ಮನೆಗೆ ಹೋದರೂ ನೀವು ಪ್ರಿಯಬಾಲಕನನ್ನು ನೆನೆಸಿಕೊಳ್ಳುವಿರಿ ಮತ್ತು ರೋದನವನ್ನೂ ಮಾಡುವಿರಿ.) ಇವನನ್ನು ಈ ನಿರ್ಜನಪ್ರದೇಶದಲ್ಲಿ ಬಿಟ್ಟುಹೋಗುವುದರಿಂದ ನಿಮ್ಮ ಪರಿತಾಪವು ಮತ್ತಷ್ಟು ಅಧಿಕವಾಗುವುದಂತೂ ನಿಜ. (ಆದುದರಿಂದ ನೀವು ಇಲ್ಲಿಯೇ ಇದ್ದು ರೋದನಮಾಡುತ್ತಿದ್ದರೆ ಈ ಬಾಲಕನು ಬದುಕಿದರೂ ಬದುಕಬಹುದು. ಸತ್ತವರು ಬದುಕುವುದೇ ಇಲ್ಲ–ಎಂಬ ನಿಶ್ಚಯವೇನೂ ಇಲ್ಲ. ಸತ್ತೂ ಬದುಕಿದ ಅನೇಕದೃಷ್ಟಾಂತಗಳಿವೆ.)

ಶ್ರೂಯತೇ ಶಮ್ಬುಕೇ ಶೂದ್ರೇ ಹತೇ ಬ್ರಾಹ್ಮಣದಾರಕಃ ।
ಜೀವಿತೋ ಧರ್ಮಮಾಸಾದ್ಯ ರಾಮಾತ್ಸತ್ಯಪರಾಕ್ರಮಾತ್ ॥೬೭॥

ಸತ್ಯಪರಾಕ್ರಮಿಯಾದ ಶ್ರೀರಾಮನು ಶಂಬುಕನೆಂಬ ಹೆಸರಿನ ಶೂದ್ರನನ್ನು ಸಂಹರಿಸಿದನಂತರ ಸತ್ತುಹೋಗಿದ್ದ ಬ್ರಾಹ್ಮಣಬಾಲಕನೊಬ್ಬನನ್ನು ಧರ್ಮದ ಪ್ರಭಾವದಿಂದ ಬದುಕಿಸಿದನೆಂಬುದನ್ನು ಕೇಳಿದ್ದೇವೆ.

ತಥಾ ಶ್ವೇತಸ್ಯ ರಾಜರ್ಷೇರ್ಬಾಲೋ ದೃಷ್ಟಾನ್ತಮಾಗತಃ ।
ಶ್ವೇತೇನ ಧರ್ಮನಿಷ್ಠೇನ ಮೃತಃ ಸಂಜೀವಿತಃ ಪುನಃ ॥೬೮॥

ಅದೇ ರೀತಿಯಲ್ಲಿ ರಾಜರ್ಷಿಯಾದ ಶ್ವೇತನ ಮಗನೂ ಮರಣ ಹೊಂದಿದನು. ಆದರೆ ಧರ್ಮನಿಷ್ಠನಾದ ಶ್ವೇತನು ಮೃತನಾಗಿದ್ದ ತನ್ನ ಮಗನನ್ನು ಬದುಕಿಸಿಕೊಂಡನು.

ತಥಾ ಕಶ್ಚಿಲ್ಲಭೇತ್ಸಿದ್ಧೋ ಮುನಿರ್ವಾ ದೇವತಾಪಿ ವಾ ।
ಕೃಪಣಾನಾಮನುಕ್ರೋಶಂ ಕುರ್ಯಾದ್ವೋ ರುದತಾಮಿಹ ॥೬೯॥

ಹಾಗೆಯೇ ಇಲ್ಲಿಗೆ ಒಬ್ಬ ಸಿದ್ಧನಾಗಲೀ, ಮುನಿಯಾಗಲೀ, ದೇವತೆಯಾಗಲೀ–ಬರಬಹುದು. ರೋದನಮಾಡುತ್ತಿರುವ ಮತ್ತು ಅತ್ಯಂತದೀನರಾಗಿರುವ ನಿಮ್ಮ ವಿಷಯದಲ್ಲಿ ದಯೆಯನ್ನು ತೋರಬಹುದು. ಆದುದರಿಂದ ಪ್ರಿಯಪುತ್ರನನ್ನು ಪರಿತ್ಯಜಿಸಿ ಖಂಡಿತವಾಗಿಯೂ ಹೋಗಬೇಡಿರಿ.”

ನರಿಯು ಹೇಳಿದ ಮಾತುಗಳನ್ನು ಕೇಳಿ ಪುತ್ರವತ್ಸಲರಾದ ಬಾಲಕನ ಬಂಧುಗಳೆಲ್ಲರೂ ಶೋಕಪೀಡಿತರಾಗಿ ಹಿಂದಿರುಗಿ ಬಾಲಕನು ಮಲಗಿದ್ದ ಸ್ಥಳಕ್ಕೆ ಬಂದು ಅವನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ಗಟ್ಟಿಯಾಗಿ ಅಳತೊಡಗಿದರು. ಮನೆಗಳ ಕಡೆಗೆ ಹೊರಟಿದ್ದವರು ಪುನಃ ಶ್ಮಶಾನಭೂಮಿಗೆ ಬಂದು ಗಟ್ಟಿಯಾಗಿ ರೋದನಮಾಡುತ್ತಿರುವುದನ್ನು ಕೇಳಿ ರಣ ಹದ್ದು ಮುಂದೆ ಬಂದು ಪುನಃ ಹೇಳತೊಡಗಿತು :

ಅಶ್ರುಪಾತಪರಿಕ್ಲಿನ್ನಃ ಪಾಣಿಸ್ಪರ್ಶಪ್ರಪೀಡಿತಃ ।
ಧರ್ಮರಾಜಪ್ರಯೋಗಾಚ್ಚ ದೀರ್ಘನಿದ್ರಾಂ ಪ್ರವೇಶಿತಃ ॥೭೧॥

“ಬಾಲಕನ ಬಂಧುಗಳೇ! ನೀವು ಯಾವ ಬಾಲಕನನ್ನು ನಿಮ್ಮ ಕಣ್ಣೀರುಗಳಿಂದ ತೋಯಿಸುತ್ತಿರುವಿರೋ, ಹಸ್ತಸ್ಪರ್ಶದಿಂದ ಪೀಡಿಸುತ್ತಿರುವಿರೋ–ಈ ನಿಮ್ಮ ಬಾಲಕನು ಯಮಧರ್ಮರಾಜನ ಆಜ್ಞೆಯಂತೆ ಚಿರ ನಿದ್ರಿತನಾಗಿದ್ದಾನೆ. ಇವನಿನ್ನು ಎಚ್ಚರಗೊಳ್ಳುವ ಸಂಭವವೇ ಇಲ್ಲ.

ತಪಸಾಪಿ ಹಿ ಸಂಯುಕ್ತಾ ಧನವನ್ತೋ ಮಹಾಧಿಯಃ ।
ಸರ್ವೇ ಮೃತ್ಯುವಶಂ ಯಾನ್ತಿ ತದಿದಂ ಪ್ರೇತಪತ್ತನಮ್ ॥೭೨॥

ತಪಸ್ಸಿನಿಂದ ಯುಕ್ತರಾದವರೂ (ಮಹಾಮಹಾತಪಸ್ವಿಗಳೂ), ಧನವಂತರೂ, ಮಹಾಬುದ್ಧಿವಂತರೂ–ಎಲ್ಲರೂ ಮೃತ್ಯುವಶರಾಗುತ್ತಾರೆ. ಇದು ಪ್ರೇತಗಳ ನಗರವೇ ಆಗಿದೆ.

ಬಾಲವೃದ್ಧಸಹಸ್ರಾಣಿ ಸದಾ ಸಂತ್ಯಜ್ಯ ಬಾನ್ಧವಾಃ ।
ದಿನಾನಿ ಚೈವ ರಾತ್ರೀಶ್ಚ ದುಃಖಂ ತಿಷ್ಠನ್ತಿ ಭೂತಲೇ ॥೭೩॥

ಅಲಂ ನಿರ್ಬನ್ಧಮಾಗತ್ಯ ಶೋಕಸ್ಯ ಪರಿಧಾರಣೇ ।

ಬಂಧು-ಬಾಂಧವರು, ಸಾವಿರಾರು ಬಾಲಕರನ್ನೂ ಸಾವಿರಾರು ವೃದ್ಧರನ್ನೂ ಈ ಶ್ಮಶಾನಭೂಮಿಯಲ್ಲಿಯೇ ಪರಿತ್ಯಜಿಸಿ ಹಗಲು-ರಾತ್ರಿಗಳೆನ್ನದೇ ದುಃಖಿಸುತ್ತಾ ಪ್ರಪಂಚದಲ್ಲಿ ಬದುಕಿದ್ದಾರೆ. ನಿರ್ಬಂಧಕ್ಕೆ ಒಳಗಾಗಿ ಪುನಃ ಪುನಃ ಸತ್ತವನ ಬಳಿಗೆ ಬಂದು ಶೋಕಿಸುವುದನ್ನು ಸಾಕುಮಾಡಿರಿ.

ಅಪ್ರತ್ಯಯಂ ಕುತೋ ಹ್ಯಸ್ಯ ಪುನರದ್ಯೇಹ ಜೀವಿತಮ್ ।
ಮೃತಸ್ಯೋತ್ಸೃಷ್ಟದೇಹಸ್ಯ ಪುನರ್ದೇಹೋ ನ ವಿದ್ಯತೇ ॥೭೪॥

ಈ ಬಾಲಕನು ಪುನಃ ಜೀವಿಸುವನೆಂಬ ನಂಬಿಕೆಯೆಲ್ಲಿದೆ? ಇವನು ಬದುಕುವನೆಂಬ ನರಿಯ ಮಾತಿನಲ್ಲಿ ಹೇಗೆ ವಿಶ್ವಾಸವನ್ನಿಡುವಿರಿ? ಮೃತನಾದವನಿಗೆ, ಅದೇ ಕಾರಣದಿಂದಲೇ ದೇಹವನ್ನು ಪರಿತ್ಯಾಗಮಾಡಿರುವ ಚೇತನನಿಗೆ, ಪುನಃ ತನ್ನ ಹಿಂದಿನ ದೇಹವು ಲಭ್ಯವಾಗುವುದಿಲ್ಲ.

ನೈವ ಮೂರ್ತಿಪ್ರದಾನೇನ ಜಮ್ಬುಕಸ್ಯ ಶತೈರಪಿ ।
ಶಕ್ಯಂ ಜೀವಯಿತುಂ ಹ್ಯೇಷ ಬಾಲೋ ವರ್ಷಶತೈರಪಿ ॥೭೫॥

ನೂರಾರು ವರ್ಷಗಳ ಪರ್ಯಂತವಾಗಿ ಈ ಜಂಬುಕದಂತಹ ನೂರಾರು ನರಿಗಳು ಪ್ರಾಣಾರ್ಪಣೆಮಾಡಿದರೂ ಈ ಬಾಲಕನನ್ನು ಬದುಕಿಸಲು ಸಾಧ್ಯವಾಗುವುದಿಲ್ಲ.

ಅಥ ರುದ್ರಃ ಕುಮಾರೋ ವಾ ಬ್ರಹ್ಮಾ ವಾ ವಿಷ್ಣುರೇವ ಚ ।
ವರಮಸ್ಮೈ ಪ್ರಯಚ್ಛೇಯುಸ್ತತೋ ಜೀವೇದಯಂ ಶಿಶುಃ ॥೭೬॥

ಈ ಶಿಶುವು ಬದುಕಲೇನೋ ಒಂದು ಮಾರ್ಗವಿದೆ. ಅದನ್ನು ನಾನೂ ಹೇಳುತ್ತೇನೆ. ಮಹಾರುದ್ರನೋ, ಕುಮಾರಸ್ವಾಮಿಯೋ, ಪೂಜ್ಯನಾದ ಬ್ರಹ್ಮನೋ, ಮಹಾವಿಷ್ಣುವೋ–ಈ ಬಾಲಕನಿಗೆ ವರಪ್ರದಾನಮಾಡಿದರೆ ಆಗ ಈ ಮಗುವು ಬದುಕಿದರೂ ಬದುಕಬಹುದು.

ನೈವ ಬಾಷ್ಪವಿಮೋಕ್ಷೇಣ ನ ವಾ ಶ್ವಾಸಕೃತೇನ ಚ ।
ನ ದೀರ್ಘರುದಿತೇನಾಯಂ ಪುನರ್ಜೀವಂ ಗಮಿಷ್ಯತಿ ॥೭೭॥

ಆದರೆ ಜಂಬುಕನು ಹೇಳುವ ಹಾಗೆ ನೀವು ಈಗ ಮಾಡುತ್ತಿರುವಂತೆ

ಕಣ್ಣೀರುಸುರಿಸುವುದರಿಂದಾಗಲೀ, ನಿಟ್ಟುಸಿರುಬಿಡುವುದರಿಂದಾಗಲೀ, ಸುದೀರ್ಘವಾಗಿ ರೋದನಮಾಡುವುದರಿಂದಾಗಲೀ–ಈ ಬಾಲಕನು ಕಳೆದು ಹೋಗಿರುವ ಪ್ರಾಣಗಳನ್ನು ಖಂಡಿತವಾಗಿಯೂ ಹೊಂದುವುದಿಲ್ಲ. (ಜೀವಂತನಾಗುವುದಿಲ್ಲ.)

ಅಹಂ ಚ ಕ್ರೋಷ್ಟುಕಶ್ಚೈವ ಯೂಯಂ ಯೇ ಚಾಸ್ಯ ಬಾನ್ಧವಾಃ ।
ಧರ್ಮಾಧರ್ಮೌ ಗೃಹೀತ್ವೇವ ಸರ್ವೇ ವರ್ತಾಮಹೇಽಧ್ವನಿ ॥೭೮॥

ನಾನು, ಈ ನರಿ, ನೀವು ಮತ್ತು ಈ ಬಾಲಕನ ಬಂಧುಗಳು–ಎಲ್ಲರೂ ನಾವು ಮಾಡಿದ ಪುಣ್ಯ-ಪಾಪಗಳನ್ನು ಜೊತೆಯಲ್ಲಿಯೇ ತೆಗೆದುಕೊಂಡು ಪರಲೋಕದ ಮಾರ್ಗದಲ್ಲಿಯೇ ಇದ್ದೇವೆ.

ಅಪ್ರಿಯಂ ಪರುಷಂ ಚಾಪಿ ಪರದ್ರೋಹಂ ಪರಸ್ತ್ರಿಯಮ್ ।
ಅಧರ್ಮಮನೃತಂ ಚೈವ ದೂರಾತ್ಪ್ರಾಜ್ಞೋ ವಿವರ್ಜಯೇತ್ ॥೭೯॥

ಪ್ರಾಜ್ಞನಾದವನು–ಅಪ್ರಿಯವಾದ ಆಚರಣೆಯನ್ನೂ, ಕಠೋರವಾದ ಮಾತುಗಳನ್ನೂ, ಮತ್ತೊಬ್ಬರಿಗೆ ದ್ರೋಹಮಾಡುವುದನ್ನೂ, ಪರಸ್ತ್ರೀಸಂಗ ವನ್ನೂ, ಅಧರ್ಮವನ್ನೂ, ಅಸತ್ಯಭಾಷಣವನ್ನೂ–ದೂರದಿಂದಲೇ ಪರಿತ್ಯಾಗ ಮಾಡಬೇಕು.

ಧರ್ಮಂ ಸತ್ಯಂ ಶ್ರುತಂ ನ್ಯಾಯ್ಯಂ ಮಹತೀಂ ಪ್ರಾಣಿನಾಂ ದಯಾಮ್ ।
ಅಜಿಹ್ಮತ್ವಮಶಾಠ್ಯಂ ಚ ಯತ್ನತಃ ಪರಿಮಾರ್ಗತ ॥೮೦॥

ನೀವೆಲ್ಲರೂ–ಧರ್ಮ, ಸತ್ಯ, ಶಾಸ್ತ್ರಜ್ಞಾನ, ನ್ಯಾಯಪೂರ್ಣವಾದ ವ್ಯವಹಾರ, ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ಅಪಾರವಾದ ದಯೆ ತೋರುವುದು, ಕುಟಿಲತೆಯಿಲ್ಲದಿರುವಿಕೆ, ಉದ್ಧಟತನವಿಲ್ಲದಿರುವಿಕೆ–ಈ ಸದ್ಗುಣಗಳೆಲ್ಲವನ್ನೂ ಪ್ರಯತ್ನಪೂರ್ವಕವಾಗಿ ಅನುಸರಣೆಮಾಡಿರಿ.

ಮಾತರಂ ಪಿತರಂ ವಾಪಿ ಬಾನ್ಧವಾನ್ಸುಹೃದಸ್ತಥಾ ।
ಜೀವತೋ ಯೇ ನ ಪಶ್ಯನ್ತಿ ತೇಷಾಂ ಧರ್ಮವಿಪರ್ಯಯಃ ॥೮೧॥

ಯಾರು ಜೀವಂತರಾಗಿರುವ ತಾಯಿ-ತಂದೆಗಳನ್ನೂ, ಬಂಧುಗಳನ್ನೂ,

ಸುಹೃದರನ್ನೂ ಚೆನ್ನಾಗಿ ನೋಡಿಕೊಳ್ಳುವುದಿಲ್ಲವೋ–ಅವರಿಗೆ ಧರ್ಮದ ಹಾನಿಯುಂಟಾಗುತ್ತದೆ. (ಅವರ ಪುಣ್ಯವು ವಿನಾಶಹೊಂದುತ್ತದೆ.)

ಯೋ ನ ಪಶ್ಯತಿ ಚಕ್ಷುರ್ಭ್ಯಾಂ ನೇಙ್ಗತೇ ಚ ಕಥಞ್ಚನ ।
ತಸ್ಯ ನಿಷ್ಠಾವಸಾನಾನ್ತೇ ರುದನ್ತಃ ಕಿಂ ಕರಿಷ್ಯಥ ॥೮೨॥

ಯಾವ ಬಾಲಕನು ಕಣ್ಣುಗಳಿಂದ ನೋಡುತ್ತಿಲ್ಲವೋ, ಶರೀರಾವಯವಗಳಿಂದ ಯಾವ ಚೇಷ್ಟೆಯನ್ನೂ ಸ್ವಲ್ಪವಾದರೂ ಮಾಡುತ್ತಿಲ್ಲವೋ– ಅಂತಹ ಬಾಲಕನ ಜೀವನವು ಅಂತ್ಯವಾದ ನಂತರ ನೀವು ಅವನ ಮುಂದೆ ಕುಳಿತು ಅತ್ತುಕೊಂಡು ಏನು ಮಾಡುವಿರಿ?”

ಯುಧಿಷ್ಠಿರ! ರಣಹದ್ದು ಹೀಗೆ ಹೇಳಿದನಂತರ ಶೋಕಸಾಗರದಲ್ಲಿ ಮುಳುಗಿಹೋಗಿದ್ದ ಆ ಬಾಲಕನ ಬಂಧುಗಳು ಮೃತಬಾಲಕನನ್ನು ರುದ್ರಭೂಮಿಯಲ್ಲಿಯೇ ಬಿಟ್ಟು ಪುತ್ರಸ್ನೇಹದಿಂದ ಬೆಂದುಹೋದವರಾಗಿ ತಮ್ಮ ಮನೆಗಳಿಗೆ ಹೊರಟರು. ಬಾಲಕನ ಬಂಧುಗಳಿನ್ನೂ ಹೊರಡುವುದರಲ್ಲಿದ್ದಾಗಲೇ ನರಿಯು ಮುಂದೆ ಬಂದು ಪುನಃ ಹೇಳತೊಡಗಿತು :

ದಾರುಣೋ ಮರ್ತ್ಯಲೋಕೋಽಯಂ ಸರ್ವಪ್ರಾಣಿವಿನಾಶನಃ ।
ಇಷ್ಟಬನ್ಧುವಿಯೋಗಶ್ಚ ತಥೇಹಾಲ್ಪಂ ಚ ಜೀವಿತಮ್ ॥೮೪॥

“ಅಯ್ಯೋ! ಈ ಮನುಷ್ಯಲೋಕವು ಅತ್ಯಂತದಾರುಣವಾದುದು. ಈ ಲೋಕವು ಸಮಸ್ತಪ್ರಾಣಿಗಳನ್ನೂ ವಿನಾಶಗೊಳಿಸುವುದಾಗಿದೆ. ಪ್ರಿಯ ಬಂಧುಗಳ ವಿಯೋಗವೂ ಈ ಮನುಷ್ಯಲೋಕದಲ್ಲುಂಟಾಗುತ್ತದೆ. ಇಲ್ಲಿಯ ಜೀವನವಂತೂ ಅತ್ಯಲ್ಪವಾದುದು.

ಬಹ್ವಲೀಕಮಸತ್ಯಂ ಚಾಪ್ಯತಿವಾದಾಪ್ರಿಯಂವದಮ್ ।
ಇಮಂ ಪ್ರೇಕ್ಷ್ಯ ಪುನರ್ಭಾವಂ ದುಃಖಶೋಕವಿವರ್ಧನಮ್ ।
ನ ಮೇ ಮಾನುಷಲೋಕೋಽಯಂ ಮುಹೂರ್ತಮಪಿ ರೋಚತೇ ॥

ಈ ಮಾನುಷಲೋಕವು ಅನೇಕವಾದ ಅಪ್ರಿಯಘಟನೆಗಳಿಂದಲೂ, ಅಸತ್ಯದಿಂದಲೂ ತುಂಬಿಹೋಗಿದೆ. ವ್ಯರ್ಥಾಲಾಪಮಾಡುವವರೂ, ಅಪ್ರಿಯವಾದ ಮಾತುಗಳನ್ನಾಡುವವರೂ ಇಲ್ಲಿ ಅನೇಕರಿದ್ದಾರೆ. ಪ್ರಿಯವಾದ

ಮತ್ತು ಹಿತವಾದ ಮಾತುಗಳನ್ನು ಯಾರೂ ಹೇಳುವುದಿಲ್ಲ. ಇಲ್ಲಿಯವರ ಸ್ವಭಾವವು ದುಃಖವನ್ನೂ ಶೋಕವನ್ನೂ ಹೆಚ್ಚಿಸುವುದೇ ಆಗಿದೆ. ಇದನ್ನು ನೋಡುತ್ತಿರುವ ನನಗೆ ಈ ಮನುಷ್ಯಲೋಕದಲ್ಲಿ ಕ್ಷಣಕಾಲವಾದರೂ ಇರುವ ಮನಸ್ಸೇ ಇಲ್ಲವಾಗಿದೆ. ನನಗೆ ಈ ಮನುಷ್ಯಲೋಕವು ಸ್ವಲ್ಪವಾದರೂ ರುಚಿಸುತ್ತಿಲ್ಲ.

ಅಹೋ ಧಿಗ್ಗೃಧ್ರವಾಕ್ಯೇನ ಯಥೈವಾಬುದ್ಧಯಸ್ತಥಾ ।
ಕಥಂ ಗಚ್ಛತ ನಿಃಸ್ನೇಹಾಃ ಸುತಸ್ನೇಹಂ ವಿಸೃಜ್ಯ ಚ ॥೮೬॥

ಅಯ್ಯೋ! ನಿಷ್ಕರುಣೆಗಳಾದ ನಿಮಗೆ ಧಿಕ್ಕಾರವಿರಲಿ! ನೀವು ಈ ರಣಹದ್ದಿನ ಮಾತಿನಿಂದ ಪ್ರೇರಿತರಾಗಿ ಮೂರ್ಖರಂತೆ ಪುತ್ರಸ್ನೇಹವನ್ನೂ ಪರಿತ್ಯಜಿಸಿ ಪ್ರೇಮಶೂನ್ಯರಾಗಿ ಈ ಶ್ಮಶಾನವನ್ನು ಬಿಟ್ಟು ಹೇಗೆ ಹೋಗುತ್ತಿರುವಿರಿ?

ಪ್ರದೀಪ್ತಾಃ ಪುತ್ರಶೋಕೇನ ಸಂನಿವರ್ತತ ಮಾನುಷಾಃ ।
ಶ್ರುತ್ವಾ ಗೃಧ್ರಸ್ಯ ವಚನಂ ಪಾಪಸ್ಯೇಹಾಕೃತಾತ್ಮನಃ ॥೮೭॥

ಮಾನವರೇ! ಈ ರಣಹದ್ದು ಪಾಪಭೂಯಿಷ್ಠವಾದುದು. ಕಲ್ಮಷ ಚಿತ್ತದಿಂದ ಕೂಡಿದೆ. ಇದರ ಮಾತನ್ನು ಕೇಳಿ ಪುತ್ರಶೋಕದಿಂದ ಬೆಂದು ಹೋಗುತ್ತಿರುವ ಹೃದಯವುಳ್ಳ ನೀವು ಪ್ರಿಯಪುತ್ರನನ್ನು ಇಲ್ಲಿಯೇ ಬಿಟ್ಟು ಮನೆಗಳಿಗೇಕೆ ಹೋಗುತ್ತಿರುವಿರಿ? ಹಿಂದಿರುಗಿರಿ.

ಸುಖಸ್ಯಾನನ್ತರಂ ದುಃಖಂ ದುಃಖಸ್ಯಾನನ್ತರಂ ಸುಖಮ್ ।
ಸುಖದುಃಖಾವೃತೇ ಲೋಕೇ ನೇಹಾಸ್ತ್ಯೇಕಮನನ್ತರಮ್ ॥೮೮॥

ಸುಖದ ಅನಂತರ ದುಃಖವು ಬರುತ್ತದೆ. ದುಃಖದ ಅನಂತರ ಸುಖವು ಬರುತ್ತದೆ. ಸುಖ-ದುಃಖಗಳಿಂದಲೇ ಸಮಾವೃತವಾಗಿರುವ ಈ ಲೋಕದಲ್ಲಿ ನಿರಂತರವಾಗಿ ಸುಖವೇ ಆಗಲೀ–ದುಃಖವೇ ಆಗಲೀ ಇರುವುದಿಲ್ಲ.

ಇಮಂ ಕ್ಷಿತಿತಲೇ ತ್ಯಕ್ತ್ವಾ ಬಾಲಂ ರೂಪಸಮನ್ವಿತಮ್ ॥೮೯॥

ಕುಲಶೋಭಾಕರಂ ಮೂಢಾಃ ಪುತ್ರಂ ತ್ಯಕ್ತ್ವಾ ಕ್ವ ಯಾಸ್ಯಥ ।
ರೂಪಯೌವನಸಮ್ಪನ್ನಂ ದ್ಯೋತಮಾನಮಿವ ಶ್ರಿಯಾ ॥೯೦॥

ಮೂರ್ಖಮಾನವರೇ! ರೂಪಸಂಪನ್ನನಾಗಿರುವ, ವಂಶಕ್ಕೇ ಶೋಭೆಯನ್ನುಂಟುಮಾಡುವ, ರೂಪ-ಯೌವನಸಂಪನ್ನನಾದ, ತನ್ನ ಕಾಂತಿಯಿಂದ ಬೆಳಗುತ್ತಿರುವನೋ ಎಂಬಂತಿರುವ, ನಿಜಪುತ್ರನಾದ ಈ ಬಾಲಕನನ್ನು ಭೂಮಿಯಲ್ಲಿ ವಿಸರ್ಜಿಸಿ ಎಲ್ಲಿಗೆ ಹೋಗುತ್ತಿರುವಿರಿ?

ಜೀವನ್ತಮೇವ ಪಶ್ಯಾಮಿ ಮನಸಾ ನಾತ್ರ ಸಂಶಯಃ ।
ವಿನಾಶೋ ನಾಸ್ಯ ನ ಹಿ ವೈ ಸುಖಂ ಪ್ರಾಪ್ಸ್ಯಥ ಮಾನುಷಾಃ ॥೯೧॥

ನಿಷ್ಕರುಣೆಗಳಾದ ಮಾನವರೇ! ನನ್ನ ಮನಸ್ಸಿಗೆ ಇವನು ಜೀವಂತನಾಗಿಯೇ ಇರುವನೆಂಬ ಭಾವನೆಯುಂಟಾಗಿದೆ. ಇವನು ಇನ್ನೂ ಜೀವಿಸಿರುವುದರಲ್ಲಿ ನನಗೆ ಸಂಶಯವೇ ಇಲ್ಲ. ಇವನು ಸತ್ತಿಲ್ಲ. ಸಾಯುವುದೂ ಇಲ್ಲ. ಆದುದರಿಂದ ನೀವು ಇಲ್ಲಿಯೇ ಇದ್ದು ರೋದನಮಾಡುತ್ತಿದ್ದರೆ ಖಂಡಿತವಾಗಿಯೂ ನಿಮ್ಮ ಬಾಲಕನನ್ನು ಪಡೆದುಕೊಂಡು ಸುಖಿಗಳಾಗುವಿರಿ.

ಪುತ್ರಶೋಕಾಭಿತಪ್ತಾನಾಂ ಮೃತಾನಾಮದ್ಯ ವಃ ಕ್ಷಮಮ್ ।
ಸುಖಸಮ್ಭಾವನಂ ಕೃತ್ವಾ ಧಾರಯಿತ್ವಾ ಸುಖಂ ಸ್ವಯಮ್ ।
ತ್ಯಕ್ತ್ವಾ ಗಮಿಷ್ಯಥ ಕ್ವಾದ್ಯ ಸಮುತ್ಸೃಜ್ಯಾಲ್ಪಬುದ್ಧಿವತ್ ॥೯೨॥

ಪುತ್ರಶೋಕದಿಂದ ಸಂತಪ್ತರಾಗಿರುವ ನೀವೂ ಮೃತಪ್ರಾಯರೇ ಆಗಿರುವಿರಿ. ಆದುದರಿಂದ ನೀವು ಪುತ್ರನನ್ನು ಬಿಟ್ಟು ಹಿಂದಿರುಗುವುದು ಉಚಿತವಲ್ಲ. ಬಾಲಕನಿಗೆ ಸುಖವಾಗುವುದೆಂದು (ಬಾಲಕನು ಜೀವಂತನಾಗುವನೆಂದು) ಭಾವಿಸಿಕೊಳ್ಳಿರಿ. ಹೀಗೆ ಭಾವಿಸಿಕೊಂಡು ನೀವೂ ಸುಖಪಡಿರಿ. ಹೀಗೆ ಮಾಡದೇ ಅಲ್ಪಬುದ್ಧಿಯವರಂತೆ ಈ ಬಾಲಕನನ್ನು ಇಲ್ಲಿಯೇ ಬಿಟ್ಟು ಈಗ ಎಲ್ಲಿಗೆ ಹೋಗುವಿರಿ?"

ಭೀಷ್ಮನು ಧರ್ಮರಾಜನಿಗೆ ಹೇಳುತ್ತಾನೆ :

"ಯುಧಿಷ್ಠಿರ! ಆ ನರಿಯು ಸದಾಕಾಲದಲ್ಲಿಯೂ ಶ್ಮಶಾನದಲ್ಲಿಯೇ ಇರುತ್ತಿದ್ದಿತು. ಶ್ಮಶಾನಕ್ಕೆ ಬರುತ್ತಿದ್ದ ಹೆಣಗಳೆಲ್ಲವನ್ನೂ ಕಿತ್ತು ತಿನ್ನುವುದೇ ಅದರ ಕೆಲಸವಾಗಿದ್ದಿತು. ಅದಕ್ಕಾಗಿ ಅದು ರಾತ್ರಿಯಾಗುವುದನ್ನು ನಿರೀಕ್ಷಿಸುತ್ತಿದ್ದಿತು. ಆ ಕಾರಣದಿಂದಲೇ ನರಿಯು ಧರ್ಮಕ್ಕೆ ವಿರುದ್ಧವಾದ, ಅಸತ್ಯವೇ ಆಗಿದ್ದರೂ ಕಿವಿಗಳಿಗೆ ಪ್ರಿಯಕರವಾಗಿದ್ದ, ಅಮೃತೋಪಮವಾದ

ಮಾತುಗಳಿಂದ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಲು ಬಾಲಕನ ಬಂಧುಗಳನ್ನು ಪುನಃ ಶ್ಮಶಾನದ ಮಧ್ಯಕ್ಕೆ ಕರೆತಂದಿತು. ಬಾಲಕನ ಬಂಧುಗಳಿಗೆ ರಣಹದ್ದಿನ ಮಾತನ್ನು ಕೇಳಿ ಶ್ಮಶಾನದಿಂದ ಹೋಗಲೂ ಸಾಧ್ಯವಾಗಲಿಲ್ಲ. ನರಿಯ ಮಾತನ್ನು ಕೇಳಿ ಶ್ಮಶಾನದಲ್ಲಿ ಇರಲು ಸಾಧ್ಯವಾಗಲಿಲ್ಲ. ನರಿಯ ಮಾತಿನ ಪ್ರಭಾವದಿಂದಾಗಿ ಬಾಲಕನ ಬಂಧುಗಳು ಪುನಃ ಅಲ್ಲಿಯೇ ನಿಂತರು. ಅದನ್ನು ಗಮನಿಸಿದ ರಣಹದ್ದು ಪುನಃ ತನ್ನ ಪ್ರವಚನವನ್ನು ಪ್ರಾರಂಭಿಸಿತು:

ಅಯಂ ಪ್ರೇತಸಮಾಕೀರ್ಣೋ ಯಕ್ಷರಾಕ್ಷಸಸೇವಿತಃ ।
ದಾರುಣಃ ಕಾನನೋದ್ದೇಶಃ ಕೌಶಿಕೈರಭಿನಾದಿತಃ ॥೯೫॥

"ಮಾನವರೇ! ಈ ಅರಣ್ಯಪ್ರದೇಶವು ಪ್ರೇತಗಳಿಂದ ವ್ಯಾಪ್ತವಾಗಿದೆ. ಇಲ್ಲಿ ಅನೇಕ ಯಕ್ಷ-ರಾಕ್ಷಸರು ವಾಸಮಾಡುತ್ತಿದ್ದಾರೆ. ಹಲವಾರು ಗೂಬೆಗಳ ಧ್ವನಿಯಿಂದ ನಿನಾದಿತವಾಗಿರುವ ಈ ಅರಣ್ಯಪ್ರದೇಶವು ಮಹಾಭಯಂಕರ ವಾಗಿದೆ.

ಭೀಮಃ ಸುಘೋರಶ್ಚ ತಥಾ ನೀಲಮೇಘಸಮಪ್ರಭಃ ।
ಅಸ್ಮಿಂಛವಂ ಪರಿತ್ಯಜ್ಯ ಪ್ರೇತಕಾರ್ಯಾಣ್ಯುಪಾಸತ ॥೯೬॥

ಈ ಶ್ಮಶಾನಪ್ರದೇಶವು (ವೃಕ್ಷಪೂರ್ಣವಾಗಿರುವುದರಿಂದ) ದಟ್ಟವಾದ ಕಾರ್ಮುಗಿಲಿನ ಪ್ರಭೆಯಂತೆ ಪ್ರಭೆಯುಳ್ಳದ್ದಾಗಿದೆ. ಮಹಾ ಭಯಂಕರವಾಗಿಯೂ ಘೋರವಾಗಿಯೂ ಇದೆ. ಆದುದರಿಂದ ನೀವು ಹೆಚ್ಚುಕಾಲ ಇಲ್ಲಿ ನಿಲ್ಲುವುದು ಯೋಗ್ಯವಲ್ಲ. ನೀವು ಕುಳಿತಿರುವ ಸ್ಥಳದಲ್ಲಿಯೇ ಬಾಲಕನ ಶವವನ್ನಿಟ್ಟು ಹೊರಟುಹೋಗಿರಿ. ಬಾಲಕನ ಸದ್ಗತಿಗಾಗಿ ಪ್ರೇತಕಾರ್ಯಗಳನ್ನು ಆಚರಿಸಿರಿ.

ಭಾನುರ್ಯಾವನ್ನಯಾತ್ಯಸ್ತಂ ಯಾವಚ್ಚ ವಿಮಲಾ ದಿಶಃ ।
ತಾವದೇನಂ ಪರಿತ್ಯಜ್ಯ ಪ್ರೇತಕಾರ್ಯಾಣ್ಯುಪಾಸತ ॥೯೭॥

ಸೂರ್ಯನು ಅಸ್ತಂಗತನಾಗುವುದರೊಳಗಾಗಿ, ದಿಕ್ಕುಗಳು ಸ್ವಚ್ಛ ವಾಗಿಯೂ ಪ್ರಕಾಶಮಾನವಾಗಿಯೂ ಗೋಚರಿಸುತ್ತಿರುವಾಗಲೇ ನೀವು ಈ ಬಾಲಕನ ಶವವನ್ನು ಇಲ್ಲಿಯೇ ಬಿಟ್ಟು ಮನೆಗಳಿಗೆ ಹೋಗಿ ಪ್ರೇತ ಕಾರ್ಯಗಳನ್ನು ಆಚರಿಸಿರಿ.

ನದನ್ತಿ ಪರುಷಂ ಶ್ಯೇನಾಃ ಶಿವಾಃ ಕ್ರೋಶನ್ತಿ ದಾರುಣಮ್ ।
ಮೃಗೇನ್ದ್ರಾಃ ಪ್ರತಿನನ್ದನ್ತಿ ರವಿರಸ್ತಂ ಚ ಗಚ್ಛತಿ ॥೯೮॥

ಈ ಅರಣ್ಯದಲ್ಲಿ ಗಿಡಗಹಕ್ಕಿಗಳು ಕರ್ಣಕಠೋರವಾಗಿ ಧ್ವನಿಮಾಡುತ್ತಿವೆ. ಗುಳ್ಳೇನರಿಗಳು ಭಯಂಕರವಾಗಿ ಕಿರುಚಿಕೊಳ್ಳುತ್ತಿವೆ. ಅದಕ್ಕೆ ಪ್ರತಿಯಾಗಿ ಸಿಂಹಗಳು ಗರ್ಜನೆಯ ಮೂಲಕವಾಗಿ ಅಭಿನಂದಿಸುತ್ತಿವೆ. ಸೂರ್ಯನೂ ಅಸ್ತಮಿಸುತ್ತಿದ್ದಾನೆ.

ಚಿತಾಧೂಮೇನ ನೀಲೇನ ಸಂರಜ್ಯನ್ತೇ ಚ ಪಾದಪಾಃ ।
ಶ್ಮಶಾನೇ ಚ ನಿರಾಹಾರಃ ಪ್ರತಿನರ್ದನ್ತಿ ದೇಹಿನಃ ॥೯೯॥

ಇಲ್ಲಿರುವ ವೃಕ್ಷಗಳೆಲ್ಲವೂ ಚಿತೆಗಳಿಂದ ಹೊರಬರುವ ಕಪ್ಪಾದ ಹೊಗೆಯಿಂದಲೇ ಮುಚ್ಚಿಹೋಗಿ ಕಪ್ಪುಬಣ್ಣದಿಂದ ಪ್ರಕಾಶಿಸುತ್ತಿವೆ. ಈ ಶ್ಮಶಾನಭೂಮಿಯಲ್ಲಿ ನಿರಾಹಾರಿಗಳಾದ ಕ್ರೂರಪ್ರಾಣಿಗಳು ಗರ್ಜಿಸುತ್ತಿವೆ.

ಸರ್ವೇ ವಿಕೃತದೇಹಾಶ್ಚಾಪ್ಯಸ್ಮಿನ್ದೇಶೇ ಸುದಾರುಣೇ ।
ಯುಷ್ಮಾನ್ಪ್ರಧರ್ಷಯಿಷ್ಯನ್ತಿ ವಿಕೃತಾ ಮಾಂಸಭೋಜಿನಃ ॥೧೦೦॥

ಮಹಾಭಯದಿಂದ ಕೂಡಿರುವ ಈ ಶ್ಮಶಾನಪ್ರದೇಶದಲ್ಲಿರುವ ಪ್ರಾಣಿಗಳೆಲ್ಲವೂ ಕರಾಳವಾದ ದೇಹಗಳನ್ನು ಹೊಂದಿವೆ. ಮಾಂಸಾಶಿಗಳಾದ ಮತ್ತು ವಕ್ರ-ವಕ್ರವಾದ ಅಂಗಗಳಿಂದ ಕೂಡಿರುವ ಈ ಪ್ರಾಣಿಗಳು ನಿಮ್ಮ ಮೇಲೆ ಬೀಳುತ್ತವೆ.

ಕ್ರೂರಶ್ಚಾಯಂ ವನೋದ್ದೇಶೋ ಭಯಮದ್ಯ ಭವಿಷ್ಯತಿ ।
ತ್ಯಜ್ಯತಾಂ ಕಾಷ್ಠಭೂತೋಽಯಂ ಮೃಷ್ಯತಾಂ ಜಾಮ್ಬುಕಂ ವಚಃ ॥೧೦೧॥

ಅರಣ್ಯದ ಈ ಪ್ರದೇಶವು ಕ್ರೂರವಾದ ಪ್ರಾಣಿಗಳಿಂದ ನಿಬಿಡವಾಗಿದೆ. ನೀವು ಇಲ್ಲಿಯೇ ಇರುವುದಾದರೆ ಅತ್ಯಂತಭಯಾನಕವಾದ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ನಿಶ್ಚಯವಾಗಿಯೂ ಈ ನಿಮ್ಮ ಬಾಲಕನು ಗತಪ್ರಾಣನಾಗಿ ಕಟ್ಟಿಗೆಯಂತೆಯೇ ಆಗಿಬಿಟ್ಟಿದ್ದಾನೆ. ಈ ಶವವನ್ನು

ಈ ಕ್ಷಣದಲ್ಲಿಯೇ ತ್ಯಜಿಸಿ ಹೊರಟುಹೋಗಿರಿ. ನರಿಯ ಮಾತುಗಳನ್ನು ಮರೆತುಬಿಡಿ–ನರಿಯು ಹೇಳಿದ ಮಾತುಗಳನ್ನು ಸುಳ್ಳೆಂದು ಭಾವಿಸಿರಿ.

ಯದಿ ಜಮ್ಬುಕವಾಕ್ಯಾನಿ ನಿಷ್ಫಲಾನ್ಯನೃತಾನಿ ಚ ।
ಶ್ರೋಷ್ಯಥ ಭ್ರಷ್ಟವಿಜ್ಞಾನಾಸ್ತತಃ ಸರ್ವೇ ವಿನಂಕ್ಷ್ಯಥ ॥೧೦೨॥

ಒಂದು ವೇಳೆ ವಿವೇಕದಿಂದ ಭ್ರಷ್ಟರಾಗಿ ನೀವು ನರಿಯ ನಿಷ್ಫಲವಾದ ಮತ್ತು ಸುಳ್ಳಿನ ಮಾತುಗಳನ್ನು ಕೇಳುತ್ತಲೇ ಇದ್ದರೆ ನೀವೆಲ್ಲರೂ ವಿನಾಶ ಹೊಂದುವಿರಿ.”

ರಣಹದ್ದು ಈಗ ಭೇದೋಪಾಯವನ್ನು ಆಶ್ರಯಿಸಿತು. ಹಿಂದಿನಂತೆ ಸಾಂತ್ವನದ ಮಾತುಗಳಿಲ್ಲ. ಧರ್ಮಪ್ರವಚನವೂ ಇಲ್ಲ. ಬಾಲಕನ ಬಂಧುಗಳ ಮನಸ್ಸಿನಲ್ಲಿ ಭಯವನ್ನು ಹುಟ್ಟಿಸಿ ಓಡಿಸುವುದೇ ರಣಹದ್ದಿನ ಈ ಮಾತುಗಳ ಉದ್ದೇಶವಾಗಿತ್ತು. ರಣಹದ್ದಿನ ಮಾತುಗಳನ್ನು ಕೇಳಿ ಬಾಲಕನ ಬಂಧುಗಳು ಮುಂದೇನು ಮಾಡಬೇಕೆಂಬುದನ್ನು ಯೋಚಿಸುತ್ತಿದ್ದಾಗಲೇ ನರಿಯು ಪುನಃ ಹೇಳತೊಡಗಿತು :

ಸ್ಥೀಯತಾಂ ನೇಹ ಭೇತವ್ಯಂ ಯಾವತ್ತಪತಿ ಭಾಸ್ಕರಃ ।
ತಾವದಸ್ಮಿನ್ಸುತೇ ಸ್ನೇಹಾದನಿರ್ವೇದೇನ ವರ್ತತ ॥೧೦೩॥

ಸ್ವೈರಂ ರುದನ್ತೋ ವಿಶ್ರಬ್ಧಾಶ್ಚಿರಂ ಸ್ನೇಹೇನ ಪಶ್ಯತ ।
ಸ್ಥೀಯತಾಂ ಯಾವದಾದಿತ್ಯಃ ಕಿಂ ಚ ಕ್ರವ್ಯಾದಭಾಷಿತೈಃ ॥೧೦೪॥

“ಬಾಲಕನ ಬಂಧುಗಳೇ! ನೀವಿಲ್ಲಿ ಸ್ವಲ್ಪವಾದರೂ ಭಯಪಡಬೇಕಾದ ಕಾರಣವಿಲ್ಲ. ಸೂರ್ಯನು ಬೆಳಗುವವರೆಗೂ ನೀವು ಇಲ್ಲಿಯೇ ಇರಿ. ಅಲ್ಲಿಯವರೆಗೂ ನೀವು ಈ ನಿಮ್ಮ ಪುತ್ರನ ವಿಷಯದಲ್ಲಿ ಖೇದಗೊಳ್ಳದೆ ಸ್ನೇಹಭಾವದಿಂದ ವರ್ತಿಸಿರಿ. ನಿರ್ಭಯವಾಗಿದ್ದುಕೊಂಡು ಸ್ವೇಚ್ಛೆಯಿಂದ ರೋದನ ಮಾಡಿರಿ. ಬಹಳ ಹೊತ್ತಿನವರೆಗೂ ನಿಮ್ಮ ಮಗನನ್ನು ಸ್ನೇಹದೃಷ್ಟಿಯಿಂದ ನೋಡಿರಿ. ಸೂರ್ಯನು ಅಸ್ತಮಿಸುವವರೆಗೂ ನೀವು ಇಲ್ಲಿಯೇ ನಿಮ್ಮ ಬಾಲಕನ ಜೊತೆಯಲ್ಲಿಯೇ ಇರಿ. ಮಾಂಸಾಶಿಯಾದ ಈ ರಣಹದ್ದಿನ ಮಾತುಗಳನ್ನು ಕಟ್ಟಿಕೊಂಡು ನಿಮಗೇನಾಗಬೇಕಾಗಿದೆ?

ಯದಿ ಗೃಧ್ರಸ್ಯ ವಾಕ್ಯಾನಿ ತೀವ್ರಾಣಿ ರಭಸಾನಿ ಚ ।
ಗೃಹ್ಣೀತ ಮೋಹಿತಾತ್ಮಾನಃ ಸುತೋ ವೋ ನ ಭವಿಷ್ಯತಿ ॥೧೦೫॥

ನೀವೇನಾದರೂ ಮೋಹಗೊಂಡ ಬುದ್ಧಿಯುಳ್ಳವರಾಗಿ ಮಾಂಸಾಶಿಯಾದ ಈ ರಣಹದ್ದಿನ ತೀವ್ರವಾದ ಮತ್ತು ರಭಸಯುಕ್ತವಾದ (ಭಯಾವಹವಾದ) ಮಾತುಗಳನ್ನು ಪರಿಗ್ರಹಿಸಿದ್ದೇ ಆದರೆ (ಪರಿಗ್ರಹಿಸಿ ಇಲ್ಲಿಂದ ಹೊರಟುದೇ ಆದರೆ) ನಿಮ್ಮ ಭಾಗಕ್ಕೆ ಈ ಬಾಲಕನಿಲ್ಲ. (ನೀವು ಈ ಬಾಲಕನನ್ನು ಕಳೆದುಕೊಂಡಂತೆಯೇ ಸರಿ.)"

ಭೀಷ್ಮನು ಧರ್ಮರಾಜನಿಗೆ ಹೇಳುತ್ತಾನೆ :

"ಯುಧಿಷ್ಠಿರ! ವಾಸ್ತವವಾಗಿ ರಣಹದ್ದೂ ಮತ್ತು ನರಿಯೂ ಹಸಿದಿದ್ದುವು. ಅವೆರಡಕ್ಕೂ ಆಹಾರವಾಗಿದ್ದುದು ಬಾಲಕನ ಶವವೊಂದೇ. ನರಿಗೆ ತಪ್ಪಿಸಿ ತಾನು ಆಗಲೇ ಭಕ್ಷಿಸಬೇಕೆಂಬುದು ರಣಹದ್ದಿನ ಹವಣಿಕೆ. ರಣಹದ್ದಿಗೆ ತಪ್ಪಿಸಿ ತಾನೇ ತಿನ್ನಬೇಕೆಂಬುದು ನರಿಯ ಹವಣಿಕೆ. ರಾತ್ರಿಯಾಗಿಬಿಟ್ಟರೆ ರಣಹದ್ದು ತಿನ್ನಲು ಬರುವುದಿಲ್ಲವೆಂಬುದು ನರಿಯ ಅನಿಸಿಕೆ. ಆದುದರಿಂದಲೇ ಸೂರ್ಯನು ಮುಳುಗುವುದರೊಳಗಾಗಿ ತಿನ್ನಬೇಕೆಂಬುದು ರಣಹದ್ದಿನ ಯೋಜನೆ.

ಹೀಗೆ ಹಸಿವಿನಿಂದ ಕೂಡಿದ್ದ ಎರಡು ಪ್ರಾಣಿಗಳೂ ಸ್ವಾರ್ಥದ ಸಾಧನೆಗಾಗಿ ಮೃತಬಾಲಕನ ಬಂಧುಗಳಿಗೆ ಎರಡು ಪ್ರಕಾರವಾಗಿ ಧರ್ಮೋಪದೇಶ ಮಾಡುತ್ತಿದ್ದುವು. ಕಾಲವು ಕ್ರಮಿಸಿದಂತೆ ರಣಹದ್ದು–'ಸೂರ್ಯನು ಅಸ್ತಮಿಸಿದನು. ನೀವಿನ್ನು ಹೊರಡಿರಿ'–ಎಂದು ಬಾಲಕನ ಬಂಧುಗಳನ್ನು ಬಲಾತ್ಕರಿಸುತ್ತಿದ್ದಿತು. ಇದಕ್ಕೆ ಪ್ರತಿಯಾಗಿ ನರಿಯು–'ಸೂರ್ಯನಿನ್ನೂ ಅಸ್ತಂಗತನಾಗಿರುವುದಿಲ್ಲ. ಪುತ್ರನನ್ನು ಬಿಟ್ಟು ಹೋಗಬೇಡಿರಿ. ರೋದನ ಮಾಡುತ್ತಲೇ ಇರಿ. ಅದರಿಂದ ಪ್ರಯೋಜನವಿದೆ'–ಎಂದು ಮತ್ತೆ ಮತ್ತೆ ಹೇಳುತ್ತಿದ್ದಿತು. ಮಹಾರಾಜ! ರಣಹದ್ದೂ ಮತ್ತು ನರಿಯೂ ಸ್ವಕಾರ್ಯವನ್ನು ಸಾಧಿಸಿಕೊಳ್ಳಲು ಸೊಂಟಕಟ್ಟಿ ನಿಂತಿದ್ದುವು. ಹಸಿವು-ಬಾಯಾರಿಕೆಗಳಿಂದ ಬಳಲಿದ್ದ ಅವುಗಳು ಶಾಸ್ತ್ರವನ್ನಾಶ್ರಯಿಸಿ ಮಾತನಾಡುತ್ತಿದ್ದುವು. ಆ ಎರಡು ಪ್ರಾಣಿಗಳಲ್ಲಿ ಒಂದು ಪಶುವಾಗಿದ್ದಿತು ; ಮತ್ತೊಂದು ಪಕ್ಷಿ

ಯಾಗಿದ್ದಿತು. ಎರಡು ಪ್ರಾಣಿಗಳೂ ವಿಜ್ಞಾನವನ್ನು (ಶಾಸ್ತ್ರವನ್ನು) ಚೆನ್ನಾಗಿ ತಿಳಿದುಕೊಂಡಿದ್ದುವು. ಅಮೃತಕ್ಕೆ ಸಮಾನವಾದ ಅವುಗಳ ಮಾತುಗಳಿಂದ ಪ್ರಭಾವಿತರಾದ ಬಾಲಕನ ಬಂಧುಗಳು ಒಮ್ಮೆ ಶ್ಮಶಾನದಿಂದ ಹೊರಡು ತ್ತಿದ್ದರು. ಮತ್ತೊಮ್ಮೆ ಶ್ಮಶಾನಕ್ಕೆ ಹಿಂದಿರುಗಿ ಬಂದು ಬಾಲಕನ ಬಳಿಯಲ್ಲಿ ಕುಳಿತುಕೊಳ್ಳುತ್ತಿದ್ದರು.

ಶೋಕದಿಂದಲೂ ದೈನ್ಯದಿಂದಲೂ ಸಮಾಕುಲರಾಗಿದ್ದ ಆ ಬಾಲಕನ ಬಂಧುಗಳು ರೋದನಮಾಡುತ್ತಾ ಶ್ಮಶಾನದಲ್ಲಿಯೇ ಇದ್ದರು. ಸ್ವಕಾರ್ಯವನ್ನು ಸಿದ್ಧಿಸಿಕೊಳ್ಳುವುದರಲ್ಲಿ ಕೌಶಲ್ಯವನ್ನು ಹೊಂದಿದ್ದ ಆ ಎರಡು ಪ್ರಾಣಿಗಳ ನಿಪುಣತೆಯ ಪರಿಣಾಮವಾಗಿ ಬಾಲಕನ ಬಂಧುಗಳು ವ್ಯರ್ಥವಾಗಿ ಇಲ್ಲಿಂದಲ್ಲಿಗೂ-ಅಲ್ಲಿಂದಿಲ್ಲಿಗೂ ಸುತ್ತಾಡುತ್ತಿದ್ದರು.

ಜ್ಞಾನ-ವಿಜ್ಞಾನಗಳನ್ನು ತಿಳಿದಿದ್ದ ಜಂಬುಕ-ಗೃಧ್ರಗಳು ಹೀಗೆ ಪರ ಸ್ಪರವಾಗಿ ವಾದಮಾಡುತ್ತಿದ್ದಾಗ, ಬಾಲಕನ ಬಂಧುಗಳು ಕರ್ತವ್ಯಶೂನ್ಯರಾಗಿ ಎರಡು ಪ್ರಾಣಿಗಳೂ ಹೇಳುತ್ತಿದ್ದ ಮಾತುಗಳನ್ನೇ ಕೇಳುತ್ತಾ ನಿಂತಿದ್ದಾಗ, ಪಾರ್ವತೀದೇವಿಯಿಂದ ಪ್ರಚೋದಿತನಾದ, ಕಾರುಣ್ಯದಿಂದ ಹನಿಗೂಡಿದ ಕಣ್ಣುಗಳಿಂದ ಕೂಡಿದ್ದ ಭಗವಾನ್ ಶಂಕರನು ಪ್ರತ್ಯಕ್ಷನಾಗಿ ಬಾಲಕನ ಬಂಧುಗಳನ್ನು ಕುರಿತು ಹೇಳಿದನು :

'ವರದೋಽಸ್ಮಿ'–"ನಾನು ನಿಮಗೆ ವರವನ್ನು ಕೊಡುವವನಾಗಿದ್ದೇನೆ. ನಿಮಗೆ ಬೇಕಾದ ವರವನ್ನು ಕೇಳಿರಿ."

ದುಃಖತಪ್ತರಾಗಿದ್ದ ಬಾಲಕನ ಬಂಧುಗಳೆಲ್ಲರೂ ಒಡನೆಯೇ ದೇವ ದೇವನಾದ ಶಂಕರನಿಗೆ ಸಾಷ್ಟಾಂಗಪ್ರಣಾಮಮಾಡಿ ನಿಂತು ಈ ಮಾತನ್ನು ಹೇಳಿದರು :

ಏಕಪುತ್ರವಿಹೀನಾನಾಂ ಸರ್ವೇಷಾಂ ಜೀವಿತಾರ್ಥಿನಾಮ್ ।
ಪುತ್ರಸ್ಯ ನೋ ಜೀವದಾನಾಜ್ಜೀವಿತಂ ದಾತುಮರ್ಹಸಿ ॥೧೧೨॥

"ವರದನೇ! ನಾವು ಈ ಏಕಮಾತ್ರಪುತ್ರನಿಂದಲೂ ವಿಹೀನರಾಗಿ ಮೃತಪ್ರಾಯರಾಗಿದ್ದೇವೆ. ನೀನು ಈ ನಮ್ಮ ಮಗನನ್ನು ಬದುಕಿಸಿಕೊಟ್ಟು ಜೀವನಾರ್ಥಿಗಳಾದ ನಮ್ಮೆಲ್ಲರಿಗೂ ಜೀವದಾನವನ್ನು ಕೊಡುವ ಕೃಪೆ ಮಾಡು."

ಬಾಲಕನ ಬಂಧುಗಳು ಭಗವಾನ್ ಶ್ರೀಶಂಕರನೊಡನೆ ಹೀಗೆ ಹೇಳಲಾಗಿ, ಪರಮದಯಾಳುವಾದ ಉಮಾಪತಿಯು ಕಾರುಣ್ಯದಿಂದ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದವನಾಗಿ ಬಾಲಕನನ್ನು ಬದುಕಿಸಿದುದೂ ಅಲ್ಲದೇ ಶತಾಯುಷ್ಯವನ್ನೂ ಅನುಗ್ರಹಿಸಿದನು. ಹಾಗೆಯೇ ಎಲ್ಲ ಪ್ರಾಣಿಗಳ



ಹಿತದಲ್ಲಿಯೂ ಆಸಕ್ತನಾದ ಪಿನಾಕಿಯು ಜಂಬುಕ-ಗೃಧ್ರಗಳಿಗೂ ಕೂಡ ಅವುಗಳ ಹಸಿವು ನಿವಾರಣೆಯಾಗುವಂತೆ ವರವನ್ನು ದಯಪಾಲಿಸಿದನು. ಬಳಿಕ ಎಲ್ಲರೂ ಕೃತಕೃತ್ಯರಾಗಿ ಮತ್ತು ಹರ್ಷಯುಕ್ತರಾಗಿ ಮಹಾದೇವನಿಗೆ ಪ್ರಣಾಮಮಾಡಿ, ಸುಖ-ಸಂತೋಷಗಳಿಂದ ಕೂಡಿದವರಾಗಿ ಆ ಶ್ಮಶಾನ ಭೂಮಿಯನ್ನು ಬಿಟ್ಟು ಹೊರಟುಹೋದರು.

ಅನಿರ್ವೇದೇನ ದೀರ್ಘೇಣ ನಿಶ್ಚಯೇನ ಧ್ರುವೇಣ ಚ ।
ದೇವದೇವಪ್ರಸಾದಾಚ್ಚ ಕ್ಷಿಪ್ರಂ ಫಲಮವಾಪ್ಯತೇ ॥೧೧೬॥

ಮನುಷ್ಯನು ಯಾವುದೇ ಕಾರಣದಿಂದಲೂ ಖೇದಗೊಳ್ಳದೇ ದೃಢತೆಯಿಂದಲೂ, ಪ್ರಬಲವಾದ ನಿಶ್ಚಯದಿಂದಲೂ, ದೀರ್ಘಕಾಲದವರೆಗೆ ಸತತವಾಗಿ ಪ್ರಯತ್ನಿಸುವುದರಿಂದಲೂ ಮತ್ತು ದೇವದೇವನಾದ ಶಂಕರನ ಅನುಗ್ರಹದಿಂದಲೂ ಬಹಳ ಬೇಗ ಫಲವನ್ನು ಪಡೆದುಕೊಳ್ಳುತ್ತಾನೆ.

ಯುಧಿಷ್ಠಿರ! ದೈವಯೋಗವನ್ನೂ ಬಾಲಕನ ಬಂಧುಗಳ ದೃಢನಿಶ್ಚಯವನ್ನೂ ನೋಡು. ದೀನರಾಗಿ ಅಳುತ್ತಿದ್ದ ಆ ಬಾಲಕನ ಬಂಧುಗಳು ಬಾಲಕನ ಸಲುವಾಗಿ ಕಣ್ಣೀರು ಕೋಡಿಯನ್ನೇ ಹರಿಸಿದರು. ನಿಶ್ಚಯಪೂರ್ವಕವಾದ ಅನ್ವೇಷಣದ ಫಲವಾಗಿ ಅವರಿಗೆ ಅತ್ಯಲ್ಪಕಾಲದಲ್ಲಿಯೇ ಫಲವೂ ಲಭಿಸಿತು. ದುಃಖಿತರಾಗಿದ್ದ ಬಾಲಕನ ಬಂಧುಗಳು ಶ್ರೀಶಂಕರನ ವರಪ್ರಸಾದವನ್ನು ಪಡೆದು ಸುಖಿಗಳಾದರು. ಶ್ರೀಶಂಕರನ ವರಪ್ರಸಾದದಿಂದಾಗಿ ತಮ್ಮ ಬಾಲಕನು ಪುನಃ ಬದುಕಿದುದನ್ನು ನೋಡಿ ಅವರು ಆಶ್ಚರ್ಯಭರಿತರೂ ಮತ್ತು ಪ್ರಹೃಷ್ಟರೂ ಆದರು. ಭರತಶ್ರೇಷ್ಠನೇ! ಶಂಕರಭಗವಂತನ ಕೃಪೆಯಿಂದ ಬಾಲಕನ ಬಂಧುಗಳೆಲ್ಲರೂ ಬಾಲಕನ ಮರಣದಿಂದುಂಟಾದ ಶೋಕವನ್ನು ಸಂಪೂರ್ಣವಾಗಿ ತ್ಯಜಿಸಿ ಪ್ರಸನ್ನಚಿತ್ತರಾಗಿ ಜೀವಂತನಾದ ತಮ್ಮ ಪುತ್ರನೊಡನೆ ತ್ವರೆಯಿಂದ ತಮ್ಮ ಊರಿಗೆ ತೆರಳಿದರು.

ಧರ್ಮಜ! ಚಾತುರ್ವರ್ಣ್ಯದಲ್ಲಿ ಹುಟ್ಟಿರುವ ಸಮಸ್ತಜನರಿಗೂ ಜಂಬುಕ-ಗೃಧ್ರಗಳ ಈ ಬುದ್ಧಿಯು ನಿದರ್ಶನರೂಪವಾಗಿದೆ. ಮನುಷ್ಯರು ಧರ್ಮಾರ್ಥ-ಮೋಕ್ಷಯುಕ್ತವಾದ, ಶುಭಾವಹವಾದ ಈ ಇತಿಹಾಸವನ್ನು ಕೇಳಿದರೆ ಇಹ-ಪರಗಳೆರಡರಲ್ಲಿಯೂ ಆನಂದವನ್ನು ಅನುಭವಿಸುತ್ತಾರೆ.”

೧೫೩ನೆಯ ಅಧ್ಯಾಯವು ಮುಗಿಯಿತು.

೧೫೪ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ನಾರದಮಹರ್ಷಿಯು ಬೂರುಗದ ಮರವನ್ನು ಪ್ರಶ್ನಿಸಿದುದು

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಬಲಿನಃ ಪ್ರತ್ಯಮಿತ್ರಸ್ಯ ನಿತ್ಯಮಾಸನ್ನವರ್ತಿನಃ ।
ಉಪಕಾರಾಪಕಾರಾಭ್ಯಾಂ ಸಮರ್ಥಸ್ಯೋದ್ಯತಸ್ಯ ಚ ॥೧॥

ಮೋಹಾದ್ವಿಕತ್ಥನಾಮಾತ್ರೈರಸಾರೋಽಲ್ಪಬಲೋ ಲಘುಃ ।
ವಾಗ್ಭಿರಪ್ರತಿರೂಪಾಭಿರಭಿದ್ರುಹ್ಯ ಪಿತಾಮಹ ॥೨॥

ಆತ್ಮನೋ ಬಲಮಾಸ್ಥಾಯ ಕಥಂ ವರ್ತೇತ ಮಾನವಃ ।
ಆಗಚ್ಛತೋಽತಿಕ್ರುದ್ಧಸ್ಯ ತಸ್ಯೋದ್ಧರಣಕಾಮ್ಯಯಾ ॥೩॥

"ಪಿತಾಮಹ! ಒಬ್ಬ ಶತ್ರುವು ಮಹಾಬಲಿಷ್ಠನಾಗಿರುತ್ತಾನೆ. ನಿಕಟ ವರ್ತಿಯಾಗಿರುತ್ತಾನೆ. ಜನರಿಗೆ ಉಪಕಾರಮಾಡುವುದರಲ್ಲಿಯೂ–ಅಪಕಾರ ಮಾಡುವುದರಲ್ಲಿಯೂ ಸಮರ್ಥನಾಗಿರುತ್ತಾನೆ. ನಿತ್ಯವೂ ಉದ್ಯೋಗ ಶೀಲನೂ ಆಗಿರುತ್ತಾನೆ. ಮತ್ತೊಬ್ಬನು ಆತ್ಮಪ್ರಶಂಸೆಯಲ್ಲಿ ಮಾತ್ರವೇ ಸಮರ್ಥನಾಗಿರುತ್ತಾನೆ. ಅವನಲ್ಲಿ ಸಾರವೇ ಇರುವುದಿಲ್ಲ. ಅಲ್ಪಬಲ ನಾಗಿರುತ್ತಾನೆ. ಲೋಕದ ದೃಷ್ಟಿಯಿಂದಲೂ ಅತ್ಯಂತನಿಕೃಷ್ಟನಾಗಿರುತ್ತಾನೆ. ಅವನನ್ನು ಯಾರೂ ಲೆಕ್ಕಿಸುವುದಿಲ್ಲ. ಆದರೆ ಆ ಅಲ್ಪಬಲನೇ ಮೋಹಪರವಶನಾಗಿ, ಬಲಿಷ್ಠನಾದ ಶತ್ರುವಿನ ವಿಷಯದಲ್ಲಿ ಅಯೋಗ್ಯ ವಾದ ಮಾತುಗಳನ್ನಾಡಿ ದ್ರೋಹವೆಸಗಿ, ಅವನೊಡನೆ ದ್ವೇಷವನ್ನು ಕಟ್ಟಿಕೊಳ್ಳುತ್ತಾನೆ. ಬಲಿಷ್ಠನಾದ ಶತ್ರುವು ಕುಪಿತನಾಗಿ ದುರ್ಬಲನನ್ನು ನಿರ್ಮೂಲಗೊಳಿಸಬೇಕೆಂದು ಇಚ್ಛಿಸಿ ಬಂದಲ್ಲಿ–ದುರ್ಬಲನಾದ ಆ ಮನುಷ್ಯನು ತನ್ನ ಬಲವನ್ನೇ ಅವಲಂಬಿಸಿ ಬಲಿಷ್ಠನಾದ ಶತ್ರುವಿನೊಡನೆ ಹೇಗೆ ವ್ಯವಹರಿಸಬೇಕು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ವಾಯುವಿಗೂ ಮತ್ತು

ಬೂರುಗದ ಮರಕ್ಕೂ ನಡೆದ ಪುರಾತನೇತಿಹಾಸವನ್ನು ಹಿರಿಯರು ಉದಾಹರಿಸುತ್ತಾರೆ. ಅದನ್ನು ತಿಳಿಸುತ್ತೇನೆ, ಕೇಳು :

ಹಿಮವತ್ಪರ್ವತದ ತಪ್ಪಲಿನಲ್ಲಿ ಒಂದು ದೊಡ್ಡ ಮರವಿದ್ದಿತು. ಹಲವಾರು ವರ್ಷಗಳವರೆಗೆ ಆ ಮರವು ಸಂವರ್ಧಿಸಿ ದಪ್ಪವಾದ ಬುಡದಿಂದಲೂ, ಹಲವು ರೆಂಬೆಗಳಿಂದಲೂ ಮತ್ತು ಎಲೆಗಳಿಂದಲೂ ಸಮೃದ್ಧವಾಯಿತು. ಆ ವೃಕ್ಷದ ನೆಳಲಿನಲ್ಲಿ ಬಿಸಿಲಿನ ತಾಪದಿಂದ ಪೀಡಿತವಾದ ಮತ್ತು ಪರಿಶ್ರಮದಿಂದ ಬಳಲಿದ ಮದಿಸಿದ ಆನೆಗಳೂ ಮತ್ತು ಇತರ ಮೃಗಗಳೂ ವಿಶ್ರಾಂತಿ ಪಡೆದುಕೊಳ್ಳುತ್ತಿದ್ದುವು. ಆ ವೃಕ್ಷವು ನಾಲ್ಕುನೂರು ಮೊಳಗಳಷ್ಟು ವಿಶಾಲವಾಗಿದ್ದಿತು. ಎಲೆಗಳಿಂದಲೂ ರೆಂಬೆಗಳಿಂದಲೂ ಸಮೃದ್ಧವಾಗಿದ್ದುದರಿಂದ ಆ ವೃಕ್ಷದ ನೆಳಲು ಬಹಳ ದಟ್ಟವಾಗಿರುತ್ತಿದ್ದಿತು. ಆ ವೃಕ್ಷವು ಸಾರಿಕಾ (ಮೈನಾ) ಪಕ್ಷಿಗಳಿಂದಲೂ–ಗಿಳಿಗಳಿಂದಲೂ ಸೇವಿಸಲ್ಪಡುತ್ತಿದ್ದಿತು. ಫಲ-ಪುಷ್ಪಸಮೃದ್ಧವಾಗಿಯೂ ಇದ್ದಿತು. ಗುಂಪುಕಟ್ಟಿಕೊಂಡು ಪ್ರಯಾಣ ಮಾಡುವ ವರ್ತಕರೂ, ಅರಣ್ಯವಾಸಿಗಳಾದ ತಪಸ್ವಿಗಳೂ ಮತ್ತು ಇತರ ದಾರಿಹೋಕರೂ ಸುರಮ್ಯವಾದ ಮತ್ತು ಶ್ರೇಷ್ಠವಾದ ಆ ವೃಕ್ಷದ ಬುಡದಲ್ಲಿ ತಂಗುತ್ತಿದ್ದರು.

ಆ ವೃಕ್ಷದ ವಿಸ್ತಾರವಾದ ರೆಂಬೆಗಳನ್ನೂ, ಬಹಳ ದಪ್ಪವಾದ ಕಾಂಡವನ್ನೂ ನೋಡಿ ನಾರದರು ಆ ವೃಕ್ಷದ ಬಳಿಗೆ ಹೋಗಿ ಹೇಳಿದರು :

ಅಹೋ ನು ರಮಣೀಯಸ್ತ್ವಮಹೋ ಚಾಸಿ ಮನೋಹರಃ ।
ಪ್ರೀಯಾಮಹೇ ತ್ವಯಾ ನಿತ್ಯಂ ತರುಪ್ರವರ ಶಾಲ್ಮಲೇ ॥೧೦॥

"ತರುಶ್ರೇಷ್ಠನೇ! ಶಾಲ್ಮಲಿಯೇ! ನೀನು ರಮಣೀಯನೂ ಮನೋಹರನೂ ಆಗಿರುವೆ. ನಿನ್ನ ವಿಷಯದಲ್ಲಿ ನಾವು ಯಾವಾಗಲೂ ಪ್ರಸನ್ನರಾಗಿರುತ್ತೇವೆ. ವೃಕ್ಷರಾಜ! ನಿನ್ನ ರೆಂಬೆಗಳ ಮೇಲೆ ಅನೇಕ ಜಾತಿಗಳ ಪಕ್ಷಿಗಳು ಯಾವಾಗಲೂ ಆನಂದದಿಂದ ಚಿಲಿಪಿಲಿಗುಟ್ಟುತ್ತಿರುತ್ತವೆ. ನಿನ್ನ ಬುಡದಲ್ಲಿ ನೂರಾರು ಆನೆಗಳೂ ಮನೋಹರವಾದ ಅನೇಕ ಮೃಗಗಳೂ ಸುಹೃಷ್ಟವಾದ ಮನಸ್ಸಿನಿಂದ ಕೂಡಿದುವುಗಳಾಗಿ ವಾಸಮಾಡುತ್ತಿವೆ.

ಮಹಾಶಾಖೆಗಳಿಂದ ಸುಶೋಭಿತನಾಗಿರುವವನೇ! ನಿನ್ನ ರೆಂಬೆಗಳನ್ನಾಗಲೀ ನಿನ್ನ ವಿಪುಲವಾದ ಕಾಂಡಗಳನ್ನಾಗಲೀ ವಾಯುದೇವನು ಯಾವುದೇ ಕಾರಣದಿಂದಲೂ ಭಗ್ನಗೊಳಿಸಿರುವುದನ್ನು ನಾನು ಕಂಡಿಲ್ಲ. ವತ್ಸ! ಯಾವುದಾದರೂ ಕಾರಣವಿಶೇಷದಿಂದ ನಿನ್ನ ಮೇಲೆ ವಾಯುದೇವನು ಪ್ರಸನ್ನತೆಯಿಂದಿರುವನೇ? ಅಥವಾ ಅವನು ನಿನ್ನ ಸುಹೃದನೇ? ಯಾವ ಕಾರಣದಿಂದ ವಾಯುದೇವನು ನಿನ್ನನ್ನು ಈ ಅರಣ್ಯದಲ್ಲಿ ಶಾಶ್ವತವಾಗಿ ರಕ್ಷಣೆ ಮಾಡುತ್ತಿದ್ದಾನೆ? ಮಹಾವೇಗವಂತನಾದ ವಾಯುದೇವನು ಅನೇಕ ಪ್ರಕಾರವಾದ ದೊಡ್ಡ-ದೊಡ್ಡ ವೃಕ್ಷಗಳನ್ನೂ ಪರ್ವತಗಳ ಶಿಖರಗಳನ್ನೂ ಅವುಗಳಿರುವ ಸ್ಥಾನಗಳಿಂದ ಭ್ರಷ್ಟಗೊಳಿಸುತ್ತಾನೆ. ಗಂಧವನ್ನೊಯ್ಯುವ ಪವಿತ್ರನಾದ ವಾಯುದೇವನು ಪಾತಾಳವನ್ನೂ, ಸರೋವರಗಳನ್ನೂ, ನದಿಗಳನ್ನೂ, ಸಮುದ್ರಗಳನ್ನೂ ಶೋಷಿಸಿಬಿಡುತ್ತಾನೆ. ನಿಶ್ಚಯವಾಗಿಯೂ ವಾಯುದೇವನು ಮಿತ್ರತ್ವದ ಕಾರಣದಿಂದಲೇ ನಿನ್ನನ್ನು ಸಂರಕ್ಷಿಸುತ್ತಿದ್ದಾನೆ. ಇದರಲ್ಲಿ ಸಂಶಯವೇ ಇಲ್ಲ. ಆದುದರಿಂದಲೇ ನೀನು ಅನಂತವಾದ ರೆಂಬೆಗಳಿಂದಲೂ ಸಂಪನ್ನನಾಗಿರುವೆ. ಫಲ-ಪುಷ್ಪಗಳಿಂದಲೂ ಸಮೃದ್ಧನಾಗಿರುವೆ. ವನಸ್ಪತಿಯೇ! ಆನಂದಭರಿತವಾದ ಈ ಪಕ್ಷಿಗಳು ನಿನ್ನಲ್ಲಿ ಗೂಡು ಮಾಡಿಕೊಂಡು ವಿಹರಿಸುತ್ತಿವೆ. ಪಕ್ಷಿಗಳ ಸಹಯೋಗದಿಂದ ನಿನ್ನ ರಮಣೀಯತೆಯೂ ಹೆಚ್ಚು ಪ್ರಕಾಶಮಾನವಾಗಿ ಕಾಣುತ್ತಿದೆ. ವಸಂತರ್ತುವಿನಲ್ಲಿ ಅತ್ಯಂತ ಮನೋಹರವಾಗಿ ನಿನಾದಮಾಡುವ ಈ ಪಕ್ಷಿಗಳ ಸಾಮೂಹಿಕವಾದ ಮತ್ತು ಪ್ರತ್ಯೇಕ-ಪ್ರತ್ಯೇಕವಾದ ಮಧುರನಿನಾದಗಳು ಕೇಳಿಬರುತ್ತಿವೆ. ಶಾಲ್ಮಲಿಯೇ! ತಮ್ಮ ಕುಲಸಮೂಹದಲ್ಲಿ ಶೋಭಾಯಮಾನವಾಗಿ ಕಾಣುವ ಈ ಆನೆಗಳು ಬಿಸಿಲಿನ ಝಳದಿಂದ ಪೀಡಿಸಲ್ಪಟ್ಟುವುಗಳಾಗಿ ಗರ್ಜನೆ ಮಾಡುತ್ತಾ ನಿನ್ನ ಬಳಿಗೆ ಬಂದು ನಿನ್ನ ದಟ್ಟವಾದ ನೆಳಲಿನಲ್ಲಿ ಸುಖವನ್ನು ಪಡೆದುಕೊಳ್ಳುತ್ತಿವೆ. ಆನೆಗಳು ನಿನ್ನನ್ನು ಆಶ್ರಯಿಸಿ ಸುಖಪಡುವಂತೆಯೇ ಇತರ ಜಾತಿಗಳ ಮೃಗಗಳೂ ನಿನ್ನನ್ನೇ ಆಶ್ರಯಿಸಿ ಆನಂದಪಡುತ್ತಿವೆ. ಅವುಗಳ ಸಾನ್ನಿಧ್ಯದಿಂದಾಗಿ ನೀನು ಬಹಳ ಶೋಭಾಯಮಾನವಾಗಿ ಕಾಣುತ್ತಿರುವೆ. ನೀನು ಪಶು-ಪಕ್ಷಿಗಳಿಗೂ, ತಪಸ್ವಿಗಳಿಗೂ ಮತ್ತು ಎಲ್ಲರಿಗೂ ಆಶ್ರಯದಾತನಾಗಿರುವುದರಿಂದ ಮಹಾಮೇರುಪರ್ವತದಂತೆಯೇ ಶೋಭಾಯ

ಮಾನನಾಗಿರುವೆ. ಬ್ರಾಹ್ಮಣರಿಂದಲೂ, ತಪಸ್ಸಿನಿಂದ ಪೂತರಾಗಿರುವ ಸಿದ್ಧರಿಂದಲೂ ಮತ್ತು ಶ್ರಮಣರಿಂದಲೂ ಆಶ್ರಯಿಸಲ್ಪಟ್ಟಿರುವ ಈ ನಿನ್ನ ಸ್ಥಾನವು ಸ್ವರ್ಗಲೋಕಕ್ಕೆ ಸಮಾನವಾಗಿರುವುದೆಂದು ನಾನು ಭಾವಿಸುತ್ತೇನೆ.

೧೫೪ನೆಯ ಅಧ್ಯಾಯವು ಮುಗಿಯಿತು.

೧೫೫ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ನಾರದರು ಬೂರುಗಮರದ ಅಹಂಕಾರವನ್ನು ಖಂಡಿಸಿದುದು

ಯುಧಿಷ್ಠಿರ! ನಾರದರು ಮುಂದುವರಿದು ಹೇಳುತ್ತಾರೆ :

“ಶಾಲ್ಮಲಿಯೇ! ಭಯಂಕರನಾದ, ಸರ್ವತ್ರ ಸಂಚರಿಸುವ ವಾಯು ದೇವನು ಬಂಧುತ್ವದಿಂದಲೋ–ಮಿತ್ರತ್ವದಿಂದಲೋ ನಿನ್ನನ್ನು ಸತತವಾಗಿ ಪಾಲಿಸುತ್ತಿದ್ದಾನೆ. ಇದರಲ್ಲಿ ಸಂದೇಹವೇ ಇಲ್ಲ.

ನೃಗ್ಭಾವಂ ಪರಮಂ ವಾಯೋಃ ಶಾಲ್ಮಲೇ ತ್ವಮುಪಾಗತಃ ।
ತವಾಹಮಸ್ಮೀತಿ ಸದಾ ಯೇನ ರಕ್ಷತಿ ಮಾರುತಃ ॥೨॥

ಶಾಲ್ಮಲಿಯೇ! ನಿಶ್ಚಯವಾಗಿಯೂ ನೀನು ವಾಯುವಿಗೆ ಅತ್ಯಂತ ವಿನೀತನಾಗಿಬಿಟ್ಟಿರುವೆ. ‘ನಾನು ನಿನ್ನವನಾಗಿದ್ದೇನೆ ; ನನ್ನನ್ನು ಸಂರಕ್ಷಿಸು’– ಎಂದು ಯಾವಾಗಲೂ ನೀನು ಅವನನ್ನು ಬೇಡಿಕೊಳ್ಳುತ್ತಿರುವೆ. ಈ ಕಾರಣದಿಂದಲೇ ವಾಯುದೇವನು ನಿನ್ನನ್ನು ಸಂರಕ್ಷಿಸುತ್ತಿದ್ದಾನೆ.

ಈ ಪ್ರಪಂಚದಲ್ಲಿ ನಾನು ವಾಯುದೇವನಿಂದ ಭಗ್ನಗೊಳಿಸಲ್ಪಡದಿರುವ ವೃಕ್ಷವನ್ನಾಗಲೀ, ಪರ್ವತವನ್ನಾಗಲೀ, ಮನೆಯನ್ನಾಗಲೀ–ಇದುವರೆಗೂ ನೋಡಿಯೇ ಇಲ್ಲ. ವಾಯುವಿನಿಂದ ಭಗ್ನವಾಗದೇ ಇರುವ ವಸ್ತುವೇ ಪ್ರಪಂಚದಲ್ಲಿ ಇಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಯಾವುದೋ ಪ್ರಬಲವಾದ ಕಾರಣಗಳಿಂದಾಗಿ ಸಪರಿವಾರನಾದ ನೀನು ವಾಯುವಿನಿಂದ ರಕ್ಷಿಸಲ್ಪಡುತ್ತಿರುವೆ. ಇದು ನಿಶ್ಚಯ. ಆದರಿಂದಲೇ ನೀನು ನಿರ್ಭಯನಾಗಿ ಸ್ಥಿರನಾಗಿ ನಿಂತಿರುವೆ.”

ಶಾಲ್ಮಲಿಯು ಹೇಳುತ್ತದೆ :

ನ ಮೇ ವಾಯುಃ ಸಖಾ ಬ್ರಹ್ಮನ್ನ ಬನ್ಧುರ್ನ ಚ ಮೇ ಸುಹೃತ್ ।
ಪರಮೇಷ್ಠೀ ತಥಾ ನೈವ ಯೇನ ರಕ್ಷತಿ ವಾನಿಲಃ ॥೫॥

"ಬ್ರಾಹ್ಮಣೋತ್ತಮರೇ! ವಾಯುವು ನನಗೆ ಮಿತ್ರನೂ ಅಲ್ಲ ; ಬಂಧುವೂ ಅಲ್ಲ ; ಸುಹೃದನೂ ಅಲ್ಲ. ನನ್ನನ್ನು ರಕ್ಷಿಸಲು ಅವನೇನು ಬ್ರಹ್ಮನೇ ? ಅವನು ಬ್ರಹ್ಮನಾದರೂ ಆಗಿದ್ದರೆ ಎಲ್ಲರನ್ನೂ ರಕ್ಷಿಸುವಂತೆಯೇ ನನ್ನನ್ನೂ ರಕ್ಷಿಸುತ್ತಾನೆಂದು ಹೇಳಬಹುದಾಗಿದ್ದಿತು. ಆದರೆ ವಾಯುವು ಬ್ರಹ್ಮನೂ ಅಲ್ಲ.

ಮಮ ತೇಜೋ ಬಲಂ ಭೀಮಂ ವಾಯೋರಪಿ ಹಿ ನಾರದ ।
ಕಲಾಮಷ್ಟಾದಶೀಂ ಪ್ರಾಣೈರ್ನ ಮೇ ಪ್ರಾಪ್ನೋತಿ ಮಾರುತಃ ॥೬॥

ನಾರದರೇ! ನನ್ನ ತೇಜೋಬಲಗಳು ವಾಯುವಿನ ತೇಜೋಬಲಗಳಿಗಿಂತಲೂ ಭಯಂಕರವಾಗಿವೆ. ನನ್ನ ಪ್ರಾಣಶಕ್ತಿಯ ಹದಿನೆಂಟನೆಯ ಒಂದು ಭಾಗದಷ್ಟು ಪ್ರಾಣಶಕ್ತಿಯೂ ವಾಯುವಿನಲ್ಲಿಲ್ಲ.

ಆಗಚ್ಛನ್ಪರುಷೋ ವಾಯುರ್ಮಯಾ ವಿಷ್ಟಮ್ಭಿತೋ ಬಲಾತ್ ।
ಭಞ್ಜನ್ದ್ರುಮಾನ್ಪರ್ವತಾಂಶ್ಚ ಯಚ್ಚಾನ್ಯದಪಿ ಕಿಂಚನ ॥೭॥

ವಾಯುವು ನನ್ನನ್ನೂ ಬುಡಮೇಲು ಮಾಡಲು ಪ್ರಯತ್ನಿಸದೇ ಇರಲಿಲ್ಲ. ವೃಕ್ಷಗಳನ್ನೂ, ಪರ್ವತಶಿಖರಗಳನ್ನೂ, ಹಾದಿಯಲ್ಲಿ ಸಿಕ್ಕುತ್ತಿದ್ದ ಇನ್ನೂ ಅನೇಕ ವಸ್ತುಗಳನ್ನೂ ಧ್ವಂಸಮಾಡುತ್ತಾ ನನ್ನ ಬಳಿಗೂ ಬರುತ್ತಿದ್ದನು. ಆದರೆ ನಾನು ನನ್ನ ಬಲಾತಿಶಯದಿಂದ ವಾಯುದೇವನ ಗತಿಯನ್ನು ತಡೆದು ನಿಲ್ಲಿಸುತ್ತಿದ್ದೆನು.

ಸ ಮಯಾ ಬಹುಶೋ ಭಗ್ನಃ ಪ್ರಭಞ್ಜನ್ವೈ ಪ್ರಭಞ್ಜನಃ ।
ತಸ್ಮಾನ್ನ ಬಿಭ್ಯೇ ದೇವರ್ಷೇ ಕ್ರುದ್ಧಾದಪಿ ಸಮೀರಣಾತ್ ॥೮॥

ದೇವರ್ಷಿಗಳೇ! ನನ್ನನ್ನು ಮುರಿದುಹಾಕಲು ವೇಗದಿಂದ ಬರುತ್ತಿದ್ದ ವಾಯುವಿನ ಪ್ರಯತ್ನವನ್ನು ಒಮ್ಮೆಯಲ್ಲ ; ಹಲವಾರು ಬಾರಿ ನಾನು ಭಗ್ನಗೊಳಿಸಿದ್ದೇನೆ. ಆದುದರಿಂದ ವಾಯುದೇವನು ಎಷ್ಟೇ ಕೋಪಗೊಂಡರೂ ಅವನಿಂದ ನಾನಂತೂ ಸ್ವಲ್ಪವೂ ಭಯಪಡುವುದಿಲ್ಲ."

ನಾರದರು ಹೇಳುತ್ತಾರೆ :

"ಶಾಲ್ಮಲಿಯೇ! ಈ ವಿಷಯದಲ್ಲಿ ನಿನ್ನ ತಿಳಿವಳಿಕೆಯು ವಿಪರೀತ ವಾಗಿದೆ. ಇದರಲ್ಲಿ ಸಂಶಯವೇ ಇಲ್ಲ. ವಾಯುವಿನ ಬಲಕ್ಕೆ ಸಮಾನವಾದ ಬಲವಿರುವ ಪ್ರಾಣಿಯೇ ಈ ಜಗತ್ತಿನಲ್ಲಿ ಎಲ್ಲಿಯೂ ಇರುವುದಿಲ್ಲ. ಇಂದ್ರ ನಾಗಲೀ, ಯಮನಾಗಲೀ, ಕುಬೇರನಾಗಲೀ, ಜಲೇಶ್ವರನಾದ ವರುಣನೇ ಆಗಲೀ–ಇವರಲ್ಲಿ ಯಾರೂ ವಾಯುವಿನ ಬಲಕ್ಕೆ ಸದೃಶವಾದ ಬಲವನ್ನು ಹೊಂದಿರುವುದಿಲ್ಲ. ಹೀಗಿರುವಾಗ ನಿನ್ನಂತಹ ಸಾಧಾರಣವಾದ ವೃಕ್ಷದ ವಿಷಯವಾಗಿ ಹೇಳತಕ್ಕದ್ದೇನಿದೆ? ಈ ಪ್ರಪಂಚದಲ್ಲಿರುವ ಯಾವುದೇ ಪ್ರಾಣಿಯಾದರೂ ಯಾವುದೇ ಚೇಷ್ಟೆಯನ್ನು ಮಾಡಿದರೂ ಆ ಚೇಷ್ಟೆಗೆ ಶಕ್ತಿದಾತನು ವಾಯುವೇ ಆಗಿದ್ದಾನೆ ಮತ್ತು ಸರ್ವಪ್ರಾಣಿಗಳಿಗೂ ಜೀವ ದಾಯಕನೂ ಪ್ರಭುವಾದ ವಾಯುವೇ ಆಗಿದ್ದಾನೆ.

ವಾಯುವು ಯಾವಾಗ ಪ್ರಾಣಾದಿಗಳ ರೂಪದಲ್ಲಿ ಪ್ರಾಣಿಗಳ ಶರೀರದಲ್ಲಿ ವ್ಯವಸ್ಥಿತವಾಗಿ ವ್ಯಾಪಿಸಿಕೊಳ್ಳುವುದೋ–ಆಗ ಪ್ರಾಣಿಗಳನ್ನು ವಾಯುವು ವ್ಯವಸ್ಥಿತವಾದ ರೀತಿಯಲ್ಲಿ ವ್ಯವಹರಿಸುವಂತೆ ಮಾಡುತ್ತದೆ. ವಾಯುವೇನಾದರೂ ಅವ್ಯವಸ್ಥಿತವಾದ ರೀತಿಯಲ್ಲಿ ಪ್ರಾಣಿಗಳ ಶರೀರದಲ್ಲಿ ಇದ್ದುದೇ ಆದರೆ ಪ್ರಾಣಿಗಳ ಶರೀರದಲ್ಲಿ (ವಾಯುವು) ವಿಕಾರವನ್ನುಂಟು ಮಾಡುತ್ತದೆ. ಅಂತಹ ಸತ್ತ್ವಸಂಪನ್ನನಾದ, ಸರ್ವಬಲಿಷ್ಠರಲ್ಲಿಯೂ ಶ್ರೇಷ್ಠನಾಗಿರುವ, ಪೂಜ್ಯನಾದ ವಾಯುದೇವನನ್ನು ಪೂಜಿಸದೇ ಇರುವುದಕ್ಕೆ ನಿನ್ನಲ್ಲಿರುವ ಅಲ್ಪಬುದ್ಧಿಯೇ ಕಾರಣವಲ್ಲದೇ ಬೇರಾವ ಕಾರಣವಿದೆ? ಶಾಲ್ಮಲಿಯೇ! ನೀನು ಸತ್ತ್ವಹೀನನೂ ದುರ್ಬುದ್ಧಿಯವನೂ ಆಗಿರುವೆ. ಅತಿಯಾಗಿ ಮಾತನಾಡುತ್ತಿರುವೆ. ಕ್ರೋಧವೇ ಮೊದಲಾದ ದುರ್ಗುಣ ಗಳಿಂದ ಯುಕ್ತನಾಗಿರುವ ನೀನು ಸುಳ್ಳನ್ನು ಹೇಳುತ್ತಿರುವೆ. ನಿನ್ನೊಡನೆ ಹೀಗೆ ಸಂಭಾಷಿಸುತ್ತಿರುವ ನನಗೇ ನಿನ್ನ ವಿಷಯದಲ್ಲಿ ಮಹಾಕೋಪವುಂಟಾಗಿದೆ. ನಾನೇ ವಾಯುವಿನ ಸಮೀಪಕ್ಕೆ ಹೋಗಿ ನೀನು ಅವನ ವಿಷಯದಲ್ಲಿ ಹೇಳಿರುವ ದುರ್ವಚನಗಳೆಲ್ಲವನ್ನೂ ಅವನೊಡನೆ ಹೇಳುತ್ತೇನೆ. ಚಂದನ, ನೆಮ್ಮಿ, ಶಾಲ, ಸರಲ, ದೇವದಾರು, ಬೆತ್ತ, ಧನ್ವನ–ಇವೇ ಮೊದಲಾದ ವೃಕ್ಷಗಳೂ ಮತ್ತು ಈ ವೃಕ್ಷಗಳಿಗಿಂತಲೂ ಬಲವತ್ತರವಾದ ಮತ್ತು

ಮಹಾವೃಕ್ಷಗಳೆಂದು ಹೆಸರು ಪಡೆದಿರುವ ವೃಕ್ಷಗಳೂ ವಾಯುದೇವನನ್ನು ಈಗ ನೀನು ನಿಂದಿಸುತ್ತಿರುವಂತೆ ಯಾವಾಗಲೂ ನಿಂದಿಸಿರುವುದಿಲ್ಲ. ದುರ್ಬುದ್ಧಿಯಿಂದ ಕೂಡಿರುವ ಶಾಲ್ಮಲಿಯೇ! ವಾಯುವಿನ ಬಲ ವೆಷ್ಟೆಂಬುದೂ ಆ ವೃಕ್ಷಗಳಿಗೆ ತಿಳಿದಿದೆ. ಆ ಕಾರಣದಿಂದಲೇ ಶ್ರೇಷ್ಠವಾದ ಆ ವೃಕ್ಷಗಳು ವಾಯುವು ರಭಸದಿಂದ ಬಂದೊಡನೆಯೇ ಅವನಿಗೆ ತಲೆಬಾಗಿ ನಮಸ್ಕರಿಸುತ್ತವೆ. ನೀನು ಮೋಹಾವಿಷ್ಟನಾಗಿರುವುದರಿಂದ ವಾಯುವಿನ ಅಪರಿಮಿತವಾದ ಬಲವನ್ನು ತಿಳಿದವನಾಗಿಲ್ಲ. ಅವನ ಬಲವು ಎಷ್ಟೆಂಬು ದನ್ನು ನಿನಗೆ ತಿಳಿಯಪಡಿಸುವ ಸಲುವಾಗಿಯೇ ನಾನು ವಾಯುದೇವನ ಬಳಿಗೆ ಹೋಗುತ್ತೇನೆ.”

೧೫೫ನೆಯ ಅಧ್ಯಾಯವು ಮುಗಿಯಿತು.

೧೫೬ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ನಾರದರ ಮಾತನ್ನು ಕೇಳಿ ವಾಯುವು ಬೂರುಗದ ವೃಕ್ಷದ ಬಳಿಗೆ ಬಂದು ಅದನ್ನು ನಿಂದಿಸಿದುದು

ಪಾರಿಕ್ಷಿತ! ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

“ಯುಧಿಷ್ಠಿರ! ಬ್ರಾಹ್ಮಣಶ್ರೇಷ್ಠರಾದ ನಾರದರು ಶಾಲ್ಮಲಿಗೆ ಹೀಗೆ ಹೇಳಿ ವಾಯುದೇವನ ಬಳಿಗೆ ಹೋಗಿ ಶಾಲ್ಮಲಿಯು ಹೇಳಿದುದೆಲ್ಲವನ್ನೂ ವಾಯುದೇವನಿಗೆ ತಿಳಿಸಿದರು.

“ವಾಯುದೇವ! ಹಿಮವತ್ಪರ್ವತದ ತಪ್ಪಲಿನಲ್ಲಿ ಪರಿವಾರದಿಂದ ಕೂಡಿರುವ ಒಂದು ಶಾಲ್ಮಲೀ ವೃಕ್ಷವಿದೆ. ಅದರ ಮೂಲವೂ ಬಹಳ ದೊಡ್ಡ ದಾಗಿದೆ ; ನೆಳಲೂ ದಟ್ಟವಾಗಿದೆ. ಆ ವೃಕ್ಷವು ನಿನ್ನನ್ನು ಅವಮಾನಿಸುತ್ತಿದೆ. ನಿನ್ನ ವಿಷಯದಲ್ಲಿ ಅವಮಾನಕರವಾದ ಮಾತುಗಳನ್ನು ಆಡುತ್ತಿದೆ. ಆ ವೃಕ್ಷವು ನಿನ್ನ ವಿಷಯದಲ್ಲಿ ಆಕ್ಷೇಪಗಳಿಂದ ಕೂಡಿದ ಹಲವು ಮಾತುಗಳನ್ನೇ ಹೇಳಿತು. ಆದರೆ ಆ ಮಾತುಗಳೆಲ್ಲವನ್ನೂ ಯಥಾವತ್ತಾಗಿ ನಿನ್ನ ಮುಂದೆ ಹೇಳುವುದು ಯುಕ್ತವೆನಿಸುವುದಿಲ್ಲ. ಸಮಸ್ತ ಪ್ರಾಣಧಾರಿಗಳಲ್ಲಿಯೂ ನಿನ್ನನ್ನು ಶ್ರೇಷ್ಠನೆಂದೂ, ಘನತೆಯುಳ್ಳವನೆಂದೂ, ಕ್ರೋಧದಲ್ಲಿ ಯಮಧರ್ಮನಿಗೆ ಸಮಾನನಾದವನೆಂದೂ ನಾನು ತಿಳಿದುಕೊಂಡಿರುತ್ತೇನೆ.”

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ನಾರದರು ಹೇಳಿದ ಮಾತನ್ನು ಕೇಳಿ ವಾಯುದೇವನು ಕ್ರುದ್ಧನಾಗಿ ಶಾಲ್ಮಲಿವೃಕ್ಷದ ಸಮೀಪಕ್ಕೆ ಹೋಗಿ ಹೇಳಿದನು :

"ಶಾಲ್ಮಲಿಯೇ! ನೀನು ಇತ್ತ ಕಡೆಯಿಂದ ಹೋಗುತ್ತಿದ್ದ ನಾರದರೊಡನೆ ನನ್ನನ್ನು ಬಹಳವಾಗಿ ನಿಂದಿಸಿರುವೆ. ನಾನು ವಾಯುದೇವ. ನಿನಗೆ ನಾನೀಗ ನನ್ನ ಪ್ರಭಾವವನ್ನೂ ಬಲವನ್ನೂ ತೋರಿಸುತ್ತೇನೆ. ಬೂರುಗವೇ! ನೀನು ಯಾರೆಂಬುದನ್ನು ನಾನು ಬಲ್ಲೆ. ನಿನ್ನ ವಿಷಯವನ್ನೂ ಚೆನ್ನಾಗಿ ತಿಳಿದುಕೊಂಡಿರುತ್ತೇನೆ. ಪ್ರಭುವಾದ ಪಿತಾಮಹನು ಪ್ರಜೆಗಳನ್ನು ಸೃಷ್ಟಿಸುವ ಕಾಲದಲ್ಲಿ ನಿನ್ನ ನೆಳಲಿನಲ್ಲಿ ವಿಶ್ರಾಂತಿಯನ್ನು ಹೊಂದಿದ್ದನು. ಪಿತಾಮಹನು ನಿನ್ನ ನೆಳಲಿನಲ್ಲಿ ವಿಶ್ರಾಂತಿಯನ್ನು ಹೊಂದಿದ ಕಾರಣದಿಂದಲೇ ನಾನು ನಿನ್ನ ವಿಷಯದಲ್ಲಿ ಕೃಪಾವಿಷ್ಟನಾಗಿದ್ದೆನು. ದುರ್ಬುದ್ಧಿಯೇ! ದ್ರುಮಾಧಮನೇ! ಆ ಕಾರಣದಿಂದಲೇ ನೀನು ನನ್ನಿಂದ ರಕ್ಷಿಸಲ್ಪಡುತ್ತಿರುವೆ. ನಿನ್ನ ಬಲದಿಂದ ನೀನು ರಕ್ಷಿಸಲ್ಪಡುತ್ತಿಲ್ಲ. ನೀನು ಸಾಮಾನ್ಯಮನುಷ್ಯರನ್ನು ಅವಮಾನಗೊಳಿಸುವಂತೆ ನನ್ನನ್ನೂ ಅಪಮಾನಗೊಳಿಸಿರುವೆ. ನೀನು ಪುನಃ ನನ್ನನ್ನು ಅಪಮಾನಗೊಳಿಸಲಾಗದ ರೀತಿಯಲ್ಲಿ ನನ್ನ ಸ್ವರೂಪವನ್ನು ನಿನಗೆ ತೋರಿಸುತ್ತೇನೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ವಾಯುದೇವನು ಹೀಗೆ ಹೇಳಿದನಂತರ ಶಾಲ್ಮಲಿಯು ನಗುತ್ತಿರುವನೋ ಎಂಬಂತೆ ತೋರ್ಪಡಿಸಿಕೊಳ್ಳುತ್ತಾ ವಾಯುವನ್ನು ಕುರಿತು ಹೇಳಿತು :

"ವಾಯುದೇವ! ನೀನು ಕ್ರುದ್ಧನಾಗಿ ನಿನ್ನಲ್ಲಿರುವ ಸಂಪೂರ್ಣ ಶಕ್ತಿಯನ್ನು ಪ್ರದರ್ಶಿಸು. ನಿನ್ನಲ್ಲಿರುವ ಕೋಪವೆಲ್ಲವನ್ನೂ ನನ್ನ ಮೇಲೆಯೇ ಸುರಿದುಬಿಡು. ಕ್ರುದ್ಧನಾಗಿ ನನ್ನನ್ನೇನು ಮಾಡಬಲ್ಲೆ? ಯದ್ಯಪಿ ನೀನು ಮಹಾಪ್ರಭಾವಶಾಲಿಯೇ ಆಗಿದ್ದರೂ ನಾನು ನಿನಗೆ ಭಯಪಡುವುದಿಲ್ಲ. ನಾನು ನಿನಗಿಂತಲೂ ಬಲದಲ್ಲಿ ಅಧಿಕನಾಗಿದ್ದೇನೆ. ಆದುದರಿಂದ ನಿನಗೆ ನಾನು ಭಯಪಡಬೇಕಾದ ಕಾರಣವಿಲ್ಲ ; ಮೇಲಾಗಿ :

ಯೇ ತು ಬುದ್ಧ್ಯಾಹಿ ಬಲಿನಸ್ತೇ ಭವನ್ತಿ ಬಲೀಯಸಃ ।
ಪ್ರಾಣಮಾತ್ರಬಲಾ ಯೇ ವೈ ನೈವ ತೇ ಬಲಿನೋ ಮತಾಃ ॥೧೨॥

ಯಾರು ಬುದ್ಧಿಯಿಂದ ಬಲಿಷ್ಠರಾಗಿರುವರೋ–ಅವರೇ ಮಹಾ ಬಲಿಷ್ಠರೆಂದು ಪರಿಗಣಿತರಾಗುತ್ತಾರೆ. ಶರೀರಬಲಮಾತ್ರವಿರುವವರು ಬಲಿಷ್ಠರೆಂದು ಪರಿಗಣಿತರಾಗುವುದಿಲ್ಲ.”

ಯುಧಿಷ್ಠಿರ! ಶಾಲ್ಮಲಿಯು ವಾಯುದೇವನನ್ನು ಕುರಿತು ಹೀಗೆ ಹೇಳಿದನಂತರ ವಾಯುದೇವನು–“ನಾಳೆ ನಾನು ನಿನಗೆ ನನ್ನ ಪರಾಕ್ರಮವನ್ನು ತೋರಿಸುತ್ತೇನೆ”–ಎಂದು ಹೇಳಿ ಹೊರಟುಹೋದನು. ರಾತ್ರಿಯಾಯಿತು. ಶಾಲ್ಮಲಿಯು ವಾಯುದೇವನು ಮಾಡಿದ್ದ ಅನೇಕಸಾಹಸಕಾರ್ಯಗಳನ್ನು ಮನಸ್ಸಿನಲ್ಲಿಯೇ ಸ್ಮರಿಸುತ್ತಾ, ವಾಯುವಿನ ಬಲಕ್ಕೂ ತನ್ನಲ್ಲಿರುವ ಬಲಕ್ಕೂ ಬಹಳವಾದ ಅಂತರವಿದೆಯೆಂಬುದನ್ನು ನಿಶ್ಚಯಿಸಿತು. ಮನಸ್ಸಿನಲ್ಲಿಯೇ ಹೀಗೆ ಯೋಚಿಸಿತು :

“ನಾರದರೊಡನೆ ನಾನು ಹೇಳಿದುದೆಲ್ಲವೂ ಮಿಥ್ಯೆಯೇ ಸರಿ. ಬಲದಿಂದ ವಾಯುವನ್ನು ಎದುರಿಸಲು ನಾನು ಖಂಡಿತವಾಗಿಯೂ ಅಸಮರ್ಥನು. ನಿಶ್ಚಯವಾಗಿಯೂ ಅವನು ನನಗಿಂತಲೂ ಮಹಾಬಲಿಷ್ಠನೇ ಆಗಿದ್ದಾನೆ. ನಾರದರು ಹೇಳಿದಂತೆ ವಾಯುದೇವನು ಸರ್ವಕಾಲದಲ್ಲಿಯೂ ಬಲಿಷ್ಠನೇ ಸರಿ. ನಾನು ಇತರ ವೃಕ್ಷಗಳಿಗಿಂತಲೂ ಅತ್ಯಂತದುರ್ಬಲನಾಗಿದ್ದೇನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಆದರೆ ಬುದ್ಧಿಯಲ್ಲಿ ನನಗೆ ಸಮಾನವಾದ ವೃಕ್ಷವು ಬೇರೊಂದಿಲ್ಲ. ಆದುದರಿಂದ ನಾನು ಈ ಸಮಯದಲ್ಲಿ ನನ್ನ ಬುದ್ಧಿಯನ್ನೇ ಅವಲಂಬಿಸಿ ವಾಯುವಿನಿಂದ ಉಂಟಾಗಬಹುದಾದ ಭಯವನ್ನು ನಿವಾರಿಸಿಕೊಳ್ಳುತ್ತೇನೆ. ಒಂದು ವೇಳೆ ಈ ಅರಣ್ಯದಲ್ಲಿರುವ ಇತರ ವೃಕ್ಷಗಳೆಲ್ಲವೂ ಬುದ್ಧಿಯನ್ನೇ ಆಶ್ರಯಿಸಿ ಇರುವುದಾದರೆ–ಅವುಗಳಿಗೂ ಕೋಪಗೊಂಡ ವಾಯುವಿನಿಂದ ಯಾವ ವಿಧವಾದ ತೊಂದರೆಯೂ ಉಂಟಾಗುವುದಿಲ್ಲ. ಅವುಗಳೂ ಕ್ಷೇಮದಿಂದಲೇ ಇರುತ್ತವೆ. ಇದರಲ್ಲಿ ಸಂದೇಹವೇ ಇಲ್ಲ. ಆದರೆ ಮೂರ್ಖತ್ವದಿಂದ ಕೂಡಿರುವ ಆ ವೃಕ್ಷಗಳು–ಕುಪಿತನಾದ ವಾಯುದೇವನು ಹೇಗೆ ಮತ್ತು ಯಾವ ಕಾರಣದಿಂದ ನಮ್ಮನ್ನು ಬುಡಮೇಲು

ಮಾಡುವನೆಂಬುದನ್ನು–ನಾನು ತಿಳಿದುಕೊಂಡಿರುವಂತೆ ತಿಳಿದುಕೊಂಡಿರುವುದಿಲ್ಲ.”

೧೫೬ನೆಯ ಅಧ್ಯಾಯವು ಮುಗಿಯಿತು.

೧೫೭ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಬೂರುಗದ ಮರವು ಸೋಲನ್ನೊಪ್ಪಿಕೊಂಡುದು : ಬಲಿಷ್ಠರೊಡನೆ ವೈರವನ್ನು ಕಟ್ಟಿಕೊಳ್ಳಕೂಡದೆಂಬುದರ ಉಪದೇಶ

ಜನಮೇಜಯ! ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಕ್ಷುಭಿತವಾದ ಶಾಲ್ಮಲಿವೃಕ್ಷವು ವಾಯುವನ್ನು ಎದುರಿಸಲು ಮಾಡಬೇಕಾದ ಉಪಾಯವನ್ನು ಮನಸ್ಸಿನಲ್ಲಿಯೇ ಬುದ್ಧಿಪೂರ್ವಕವಾಗಿ ನಿಶ್ಚಯಿಸಿ ತನ್ನ ದೊಡ್ಡ-ದೊಡ್ಡ ರೆಂಬೆಗಳನ್ನೂ, ಕಾಂಡಗಳನ್ನೂ, ಚಿಕ್ಕ ರೆಂಬೆಗಳನ್ನೂ ತಾನಾಗಿಯೇ ಕೆಳಕ್ಕೆ ಬೀಳಿಸಿತು. ಶಾಲ್ಮಲಿಯು ತನ್ನಲ್ಲಿ ಸೊಂಪಾಗಿ ಬೆಳೆದಿದ್ದ ರೆಂಬೆಗಳನ್ನೂ, ಎಲೆಗಳನ್ನೂ, ಕುಸುಮಗಳನ್ನೂ ಪರಿತ್ಯಜಿಸಿ ಬೆಳಗಾಗುತ್ತಲೇ ವಾಯುವಿನ ಆಗಮನವನ್ನು ಪ್ರತೀಕ್ಷಿಸುತ್ತಿದ್ದಿತು. ಕ್ರುದ್ಧನಾದ ವಾಯುದೇವನು ನಿಟ್ಟುಸಿರುಬಿಡುತ್ತಾ (ದೀರ್ಘವಾಗಿ ಬೀಸುತ್ತಾ) ಆ ಅರಣ್ಯದಲ್ಲಿದ್ದ ಎಲ್ಲ ವೃಕ್ಷಗಳನ್ನೂ ಕೆಳಕ್ಕೆ ಬೀಳಿಸುತ್ತಾ ರಭಸದಿಂದ ಶಾಲ್ಮಲಿವೃಕ್ಷವಿದ್ದ ಸ್ಥಳಕ್ಕೂ ಆಗಮಿಸಿದನು. ಎಲೆಗಳಿಂದಲೂ, ಪುಷ್ಪಗಳಿಂದಲೂ, ರೆಂಬೆಗಳಿಂದಲೂ ವಿಹೀನವಾಗಿದ್ದ ಶಾಲ್ಮಲಿವೃಕ್ಷವನ್ನು ನೋಡಿ ಸಂತೋಷಭರಿತನಾದ ವಾಯುದೇವನು ನಸುನಗುತ್ತಾ, ಈ ಹಿಂದೆ ಭಯಂಕರವಾದ ರೆಂಬೆಗಳಿಂದ ಯುಕ್ತವಾಗಿದ್ದ ಶಾಲ್ಮಲಿಯನ್ನು ಕುರಿತು ಹೇಳಿದನು :

“ಶಾಲ್ಮಲಿಯೇ! ಬಹಳ ಕಷ್ಟದಿಂದ ನೀನಾಗಿಯೇ ನಿನ್ನ ರೆಂಬೆಗಳನ್ನು ಅಪಕರ್ಷಣಮಾಡಿಕೊಂಡಿರುವೆ. (ಹಿಂದಕ್ಕೆ ತೆಗೆದುಕೊಂಡಿರುವೆ.) ಕೋಪದಿಂದ ಉದ್ದೀಪ್ತನಾಗಿದ್ದ ನಾನು ಕೂಡ ನಿನ್ನನ್ನು ಹೀಗೆಯೇ (ರೆಂಬೆಗಳಿಂದ ವಿಹೀನನನ್ನಾಗಿ) ಮಾಡಬೇಕೆಂದಿದ್ದೆನು. ಈಗ ನೀನು ಪುಷ್ಪಗಳಿಂದಲೂ ರೆಂಬೆಗಳ ಅಗ್ರಭಾಗಗಳಿಂದಲೂ ವಿಹೀನನಾಗಿರುವೆ. ನಿನ್ನಲ್ಲಿ

ಶೋಭಿಸುತ್ತಿದ್ದ ಎಲೆಗಳೂ ಅಂಕುರಗಳೂ ಹಾಳಾಗಿಹೋಗಿವೆ. ನೀನು ನಿನ್ನ ದುರ್ಮಂತ್ರಿತದಿಂದಲೇ ಈ ಅವಸ್ಥೆಗೆ ಬಂದಿರುವೆ. ನೀನೀಗ ನನ್ನ ಬಲ-ಪರಾಕ್ರಮಗಳಿಗೆ ಅಧೀನನೇ ಆಗಿರುವೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ವಾಯುವಿನ ಮಾತನ್ನು ಕೇಳಿ ಶಾಲ್ಮಲಿವೃಕ್ಷವು ಲಜ್ಜೆಗೊಂಡಿತು. ನಾರದರು ಹೇಳಿದ್ದ ಮಾತುಗಳನ್ನು ಸ್ಮರಿಸಿಕೊಂಡು ಪರಿತಪಿಸಿತು. ರಾಜಶಾರ್ದೂಲನೇ! ಹೀಗೆ ಮೂರ್ಖನಾದ ಮನುಷ್ಯನು ಸ್ವಯಂ ದುರ್ಬಲನಾಗಿದ್ದರೂ ಬಲಿಷ್ಠನೊಡನೆ ವೈರವನ್ನು ಕಟ್ಟಿಕೊಂಡು ಕಡೆಯಲ್ಲಿ ಬೂರುಗದ ಮರದಂತೆ ಸರ್ವಸ್ವವನ್ನೂ ಕಳೆದುಕೊಂಡು ಪಶ್ಚಾತ್ತಾಪಪಡುತ್ತಾನೆ.

ತಸ್ಮಾದ್ವೈರಂ ನ ಕುರ್ವೀತ ದುರ್ಬಲೋ ಬಲವತ್ತರೈಃ ।
ಶೋಚೇದ್ಧಿ ವೈರಂ ಕುರ್ವಾಣೋ ಯಥಾ ವೈ ಶಾಲ್ಮಲಿಸ್ತಥಾ ॥೯॥

ಆದುದರಿಂದ ದುರ್ಬಲನಾದವನು ಬಲಿಷ್ಠರೊಡನೆ ವೈರವನ್ನು ಕಟ್ಟಿಕೊಳ್ಳಲೇಬಾರದು. ಹಾಗೇನಾದರೂ ಮೌರ್ಖ್ಯದಿಂದ ವೈರವನ್ನು ಕಟ್ಟಿಕೊಂಡುದೇ ಆದರೆ ಶಾಲ್ಮಲಿವೃಕ್ಷವು ಸರ್ವಸ್ವವನ್ನೂ ಕಳೆದುಕೊಂಡು ಶೋಕಿಸಿದಂತೆ ಶೋಕಪಡಬೇಕಾಗುತ್ತದೆ.

ನ ಹಿ ವೈರಂ ಮಹಾತ್ಮಾನೋ ವಿವೃಣ್ವನ್ತ್ಯಪಕಾರಿಷು ।
ಶನೈಃ ಶನೈರ್ಮಹಾರಾಜ ದರ್ಶಯನ್ತಿ ಸ್ಮ ತೇ ಬಲಮ್ ॥೧೦॥

ಮಹಾರಾಜ! ಮಹಾತ್ಮರಾದವರು ತಮಗೆ ಅಪಕಾರಮಾಡಿದವರ ವಿಷಯದಲ್ಲಿ ವೈರಭಾವವನ್ನು ಪ್ರಕಟಿಸುವುದಿಲ್ಲ. ಆದರೆ ಅವರು ಮೆಲ್ಲ-ಮೆಲ್ಲನೆ ತಮ್ಮ ಬಲವನ್ನು ಪ್ರದರ್ಶಿಸುತ್ತಾರೆ.

ವೈರಂ ನ ಕುರ್ವೀತ ನರೋ ದುರ್ಬುದ್ಧಿರ್ಬುದ್ಧಿಜೀವಿನಾ ।
ಬುದ್ಧಿರ್ಬುದ್ಧಿಮತೋ ಯಾತಿ ತೃಣೇಷ್ವಿವ ಹುತಾಶನಃ ॥೧೧॥

ದುರ್ಬುದ್ಧಿಯಿಂದ ಕೂಡಿರುವ ಮನುಷ್ಯನು ಬುದ್ಧಿಜೀವಿಯೊಡನೆ ವೈರವನ್ನು ಕಟ್ಟಿಕೊಳ್ಳಬಾರದು. ಏಕೆಂದರೆ : ಹುಲ್ಲಿನಲ್ಲಿ ಸೇರಿಕೊಂಡ

ಅಗ್ನಿಯು ಸರ್ವತ್ರ ವ್ಯಾಪಿಸುವಂತೆ–ಬುದ್ಧಿವಂತರ ಬುದ್ಧಿಯು ಸರ್ವತ್ರ ವ್ಯಾಪಿಸಿರುತ್ತದೆ.

ನ ಹಿ ಬುದ್ಧ್ಯಾ ಸಮಂ ಕಿಂಚಿದ್ವಿದ್ಯತೇ ಪುರುಷೇ ನೃಪ ।
ತಥಾ ಬಲೇನ ರಾಜೇನ್ದ್ರ ನ ಸಮೋಽಸ್ತೀಹ ಕಶ್ಚನ ॥೧೨॥

ನರೇಶ್ವರ! ಪುರುಷನಲ್ಲಿ ಬುದ್ಧಿಗೆ ಸಮಾನವಾದ ವಸ್ತುವು ಬೇರೊಂದಿಲ್ಲ. ಹಾಗೆಯೇ ಪ್ರಪಂಚದಲ್ಲಿ ಬಲದಿಂದ ಯುಕ್ತನಾದವನಿಗೆ ಸಮಾನನಾದವನು ಬೇರೆ ಯಾರೂ ಇರುವುದಿಲ್ಲ.

ತಸ್ಮಾತ್ಕ್ಷಮೇತ ಬಾಲಾಯ ಜಡಾನ್ಧಬಧಿರಾಯ ಚ ।
ಬಲಾಧಿಕಾಯ ರಾಜೇನ್ದ್ರ ತದ್ದೃಷ್ಟಂ ತ್ವಯಿ ಶತ್ರುಹನ್ ॥೧೩॥

ಶತ್ರುಹಂತಕನೇ! ರಾಜೇಂದ್ರ! ಇದೇ ಕಾರಣದಿಂದ ಬಾಲಕ, ಜಡ, ಕುರುಡ, ಕಿವುಡ ಮತ್ತು ಬಲದಲ್ಲಿ ತನಗಿಂತಲೂ ಅಧಿಕನಾದವನು–ಇವರು ಮಾಡುವ ಕಾರ್ಯವು ತನಗೆ ಪ್ರತಿಕೂಲವಾಗಿಯೇ ಇದ್ದರೂ ಅದನ್ನು ಸಹಿಸಿಕೊಳ್ಳಬೇಕು. ಈ ಕ್ಷಮಾಭಾವವನ್ನೂ ನಿನ್ನಲ್ಲಿ ಕಾಣಬಹುದಾಗಿದೆ.

ಅಕ್ಷೌಹಿಣ್ಯೋ ದಶೈಕಾ ಚ ಸಪ್ತ ಚೈವ ಮಹಾದ್ಯುತೇ ।
ಬಲೇನ ನ ಸಮಾ ರಾಜನ್ನರ್ಜುನಸ್ಯ ಮಹಾತ್ಮನಃ ॥೧೪॥

ಮಹಾದ್ಯುತಿಮಂತನೇ! ಹದಿನೆಂಟು ಅಕ್ಷೌಹಿಣೀ ಸೈನ್ಯಗಳ ಬಲವೂ ಮಹಾತ್ಮನಾದ ಅರ್ಜುನನೊಬ್ಬನ ಬಲಕ್ಕೆ ಸಮಾನವಲ್ಲ.

ನಿಹತಾಶ್ಚೈವ ಭಗ್ನಾಶ್ಚ ಪಾಣ್ಡವೇನ ಯಶಸ್ವಿನಾ ।
ಚರತಾ ಬಲಮಾಸ್ಥಾಯ ಪಾಕಶಾಸನಿನಾ ಮೃಧೇ ॥೧೫॥

ಬಲವನ್ನೇ ಆಶ್ರಯಿಸಿ ರಣರಂಗದಲ್ಲಿ ಸಂಚರಿಸುತ್ತಿದ್ದ ಯಶೋವಂತನಾದ ಅರ್ಜುನನು ಕೌರವರ ಸಮಸ್ತ ಸೈನ್ಯವನ್ನೂ ಭಗ್ನಗೊಳಿಸುತ್ತಾ ಸಂಹಾರಮಾಡಿದನು.

(ಈ ಎರಡು ಶ್ಲೋಕಗಳ ತಾತ್ಪರ್ಯವನ್ನು ಹೀಗೆ ವಿವರಿಸಬಹುದಾಗಿದೆ. ದುರ್ಯೋಧನನಲ್ಲಿ ಹನ್ನೊಂದು ಅಕ್ಷೌಹಿಣೀ ಸೈನ್ಯಗಳಿದ್ದುವು. ನಿನ್ನಲ್ಲಿ ಏಳು ಅಕ್ಷೌಹಿಣೀ ಸೈನ್ಯಗಳು ಮಾತ್ರವೇ ಇದ್ದುವು. ನೀನೇನೋ

ದುರ್ಯೋಧನನು ಮಾಡಿದ ಅಪರಾಧವನ್ನು ಸಹಿಸಿಕೊಂಡೆ. ಆದರೂ ಯುದ್ಧವು ಸಂಭವಿಸಿತು. ಯುದ್ಧದಲ್ಲಿ ನೀನು ಜಯಗಳಿಸಲು ಅರ್ಜುನನೇ ಕಾರಣ. ದುರ್ಯೋಧನನ ಹನ್ನೊಂದು ಅಕ್ಷೌಹಿಣೀಸೈನ್ಯಗಳ ಬಲವೂ ಅರ್ಜುನನೊಬ್ಬನ ಬಲಕ್ಕೆ ಸಮಾನವಾಗಿರಲಿಲ್ಲ. ಯುದ್ಧರಂಗದಲ್ಲಿ ಸಂಚರಿಸುತ್ತಿದ್ದ ಅರ್ಜುನನಿಂದ ಶತ್ರುಸೈನ್ಯವು ಭಗ್ನವಾಗಿ ಹೋಯಿತು.)

ಭರತನಂದನ! ನಾನು ನಿನಗೆ ರಾಜಧರ್ಮಗಳನ್ನೂ ಮತ್ತು ಆಪದ್ಧರ್ಮಗಳನ್ನೂ ವಿಶದವಾಗಿ ಹೇಳಿದ್ದೇನೆ. ಪುನಃ ಯಾವ ವಿಷಯವನ್ನು ಕೇಳಲು ಇಚ್ಛಿಸಿರುವೆ?"

೧೫೭ನೆಯ ಅಧ್ಯಾಯವು ಮುಗಿಯಿತು.

೧೫೮ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಸಮಸ್ತವಾದ ಅನರ್ಥಗಳಿಗೂ ಲೋಭವೇ ಕಾರಣ : ಲೋಭದಿಂದುಂಟಾಗುವ ಸಮಸ್ತಪಾಪಗಳ ನಿರೂಪಣೆ : ಮಹಾಪುರುಷರ ಲಕ್ಷಣ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಪಾಪಸ್ಯ ಯದಧಿಷ್ಠಾನಂ ಯತಃ ಪಾಪಂ ಪ್ರವರ್ತತೇ ।
ಏತದಿಚ್ಛಾಮ್ಯಹಂ ಶ್ರೋತುಂ ತತ್ತ್ವೇನ ಭರತರ್ಷಭ ॥೧॥

"ಭರತಕುಲಶ್ರೇಷ್ಠನೇ! ಪಾಪಕ್ಕೆ ಆಶ್ರಯಸ್ಥಾನವು ಯಾವುದು? ಯಾವುದರಿಂದ ಪಾಪಕಾರ್ಯದಲ್ಲಿ ಪ್ರವೃತ್ತಿಯುಂಟಾಗುತ್ತದೆ? ಈ ವಿಷಯವನ್ನು ನಾನು ಯಥಾವತ್ತಾಗಿ ನಿನ್ನಿಂದ ತಿಳಿಯಬೇಕೆಂದಿರುತ್ತೇನೆ ; ದಯಮಾಡಿ ಹೇಳು."

ಭೀಷ್ಮನು ಹೇಳುತ್ತಾನೆ :

"ನರಾಧಿಪನೇ! ಪಾಪಕ್ಕೆ ಯಾವುದು ಆಶ್ರಯಸ್ಥಾನವೆಂಬುದನ್ನು ಹೇಳುವೆನು ಕೇಳು :

ಏಕೋ ಲೋಭೋ ಮಹಾಗ್ರಾಹೋ ಲೋಭಾತ್ಪಾಪಂ ಪ್ರವರ್ತತೇ ।

ದೊಡ್ಡದಾದ ಮೊಸಳೆಯ ರೂಪದಲ್ಲಿರುವ ಲೋಭವೊಂದೇ ಪಾಪಕ್ಕೆ ಆಶ್ರಯಸ್ಥಾನವಾಗಿದೆ. ಲೋಭದಿಂದಲೇ ಪಾಪಕರ್ಮದಲ್ಲಿ ಪ್ರವೃತ್ತಿಯುಂಟಾಗುತ್ತದೆ.

ಅತಃ ಪಾಪಮಧರ್ಮಶ್ಚ ತಥಾ ದುಃಖಮನುತ್ತಮಮ್ ।
ನಿಕೃತ್ಯಾ ಮೂಲಮೇತದ್ಧಿ ಯೇನ ಪಾಪಕೃತೋ ಜನಾಃ ॥೩॥

ಲೋಭದಿಂದಲೇ ಪಾಪವೂ, ಅಧರ್ಮವೂ ಮತ್ತು ಅತ್ಯಂತವಾದ ದುಃಖವೂ ಹುಟ್ಟಿಕೊಳ್ಳುತ್ತವೆ. ವಂಚನೆ-ಮೋಸಗಳಿಗೂ ಲೋಭವೇ ಮೂಲಸ್ಥಾನವಾಗಿದೆ. ಲೋಭದ ಕಾರಣದಿಂದಲೇ ಮನುಷ್ಯರು ಪಾಪಚಾರಿಗಳಾಗುತ್ತಾರೆ.

ಲೋಭಾತ್ಕ್ರೋಧಃ ಪ್ರಭವತಿ ಲೋಭಾತ್ಕಾಮಃ ಪ್ರವರ್ತತೇ ।
ಲೋಭಾನ್ಮೋಹಶ್ಚ ಮಾಯಾ ಚ ಮಾನಃ ಸ್ತಮ್ಭಃ ಪರಾಸುತಾ ॥೪॥

ಲೋಭದಿಂದಲೇ ಕ್ರೋಧವು ಹುಟ್ಟುತ್ತದೆ. ಲೋಭದಿಂದಲೇ ಕಾಮದಲ್ಲಿ ಪ್ರವೃತ್ತಿಯುಂಟಾಗುತ್ತದೆ. ಲೋಭದಿಂದಲೇ ವಂಚನೆ, ವ್ಯಾಮೋಹ, ದುರಭಿಮಾನ, ಔದ್ಧತ್ಯ, ಪ್ರಾಣಪರಾಧೀನತೆಗಳೆಂಬ (ಪ್ರಾಣ ಬಿಡುವಿಕೆಗಳೆಂಬ) ದೋಷಗಳು ಹುಟ್ಟಿಕೊಳ್ಳುತ್ತವೆ.

ಅಕ್ಷಮಾ ಹ್ರೀಪರಿತ್ಯಾಗಃ ಶ್ರೀನಾಶೋ ಧರ್ಮಸಂಕ್ಷಯಃ ।
ಅಭಿಧ್ಯಾಪ್ರಖ್ಯತಾ ಚೈವ ಸರ್ವಂ ಲೋಭಾತ್ಪ್ರವರ್ತತೇ ॥೫॥

ಅಸಹನಶೀಲತೆ, ನಿರ್ಲಜ್ಜೆ, ಸಂಪತ್ತಿನ ವಿನಾಶ, ಧರ್ಮಕ್ಷಯ, ಇತರರ ಸ್ವತ್ತನ್ನು ಅಪಹರಿಸುವ ಆಸೆ, ಅಪಯಶಸ್ಸು–ಈ ಎಲ್ಲವೂ ಲೋಭದಿಂದಲೇ ಸಂಭವಿಸುತ್ತವೆ.

ಅತ್ಯಾಗಶ್ಚಾತಿತರ್ಷಶ್ಚ ವಿಕರ್ಮಸು ಚ ಯಾಃ ಕ್ರಿಯಾಃ ।
ಕುಲವಿದ್ಯಾಮದಶ್ಚೈವ ರೂಪೈಶ್ವರ್ಯಮದಸ್ತಥಾ ॥೬॥
ಸರ್ವಭೂತೇಷ್ವಭಿದ್ರೋಹಃ ಸರ್ವಭೂತೇಷ್ವಸತ್ಕೃತಿಃ ।
ಸರ್ವಭೂತೇಷ್ವವಿಶ್ವಾಸಃ ಸರ್ವಭೂತೇಷ್ವನಾರ್ಜವಮ್ ॥೭॥

ಲೋಭದಿಂದಲೇ ಕೃಪಣತೆ, ಅತ್ಯಾಸೆ, ಶಾಸ್ತ್ರವಿರುದ್ಧವಾದ ಕರ್ಮಗಳಲ್ಲಿ ಪ್ರವೃತ್ತಿ, ಕುಲದ ವಿಷಯವಾಗಿಯೂ ವಿದ್ಯೆಯ ವಿಷಯವಾಗಿಯೂ

ದುರಭಿಮಾನ, ರೂಪ ಮತ್ತು ಐಶ್ವರ್ಯಗಳ ಮದ, ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ದ್ರೋಹವನ್ನೆಣಿಸುವುದು, ಸರ್ವಪ್ರಾಣಿಗಳ ವಿಷಯ ದಲ್ಲಿಯೂ ತಿರಸ್ಕಾರಭಾವನೆ, ಸರ್ವಪ್ರಾಣಿಗಳ ವಿಷಯದಲ್ಲಿಯೂ ವಿಶ್ವಾಸ ವನ್ನಿಡದೇ ಇರುವುದು, ಸರ್ವಪ್ರಾಣಿಗಳ ವಿಷಯದಲ್ಲಿಯೂ ಋಜುತ್ವವಿಲ್ಲದ ವ್ಯವಹಾರ–ಇವುಗಳೆಲ್ಲವೂ ಲೋಭದಿಂದಲೇ ಉಂಟಾಗುತ್ತವೆ.

ಹರಣಂ ಪರವಿತ್ತಾನಾಂ ಪರದಾರಾಭಿಮರ್ಶನಮ್ ।
ವಾಗ್ವೇಗೋ ಮನಸೋ ವೇಗೋ ನಿನ್ದಾವೇಗಸ್ತಥೈವ ಚ ॥೮॥

ಉಪಸ್ಥೋದರಯೋರ್ವೇಗೋ ಮೃತ್ಯುವೇಗಶ್ಚ ದಾರುಣಃ ।
ಈರ್ಷ್ಯಾವೇಗಶ್ಚ ಬಲವಾನ್ಮಿಥ್ಯಾವೇಗಶ್ಚ ದುರ್ಜಯಃ ॥೯॥

ರಸವೇಗಶ್ಚ ದುರ್ವಾರ್ಯಃ ಶ್ರೋತ್ರವೇಗಶ್ಚ ದುಃಸಹಃ ।
ಕುತ್ಸಾ ವಿಕತ್ಥಾ ಮಾತ್ಸರ್ಯಂ ಪಾಪಂ ದುಷ್ಕರಕಾರಿತಾ ।
ಸಾಹಸಾನಾಂ ಚ ಸರ್ವೇಷಾಮಕಾರ್ಯಾಣಾಂ ಕ್ರಿಯಾಸ್ತಥಾ ॥೧೦॥

ಇತರರ ಧನವನ್ನು ಅಪಹರಿಸುವುದು, ಪರಪತ್ನೀ ಸಂಬಂಧವನ್ನು ಮಾಡುವುದು, ಮಾತಿನಲ್ಲಿ ವೇಗ, ಮನಸ್ಸಿನಲ್ಲಿ ವೇಗ, ಪರನಿಂದೆಯಲ್ಲಿ ವೇಗ, ಜನನೇಂದ್ರಿಯದಲ್ಲಿ ವೇಗ, ಹೊಟ್ಟೆಗೆ ಹಾಕಿಕೊಳ್ಳುವುದರಲ್ಲಿ ಅವಸರ, ದಾರುಣವಾದ ಮೃತ್ಯುವಿನ ದವಡೆಗೆ ಸಿಕ್ಕಿಕೊಳ್ಳುವುದರಲ್ಲಿ ವೇಗ (ಆತ್ಮಹತ್ಯೆ ಮುಂತಾದುವು), ಉತ್ಕಟವಾದ ಅಸೂಯೆ, ಜಯಿಸಲಾರದ ಸುಳ್ಳಿನ ವೇಗ, ಅನಿವಾರ್ಯವಾದ ರಸನೇಂದ್ರಿಯದ ವೇಗ, ದುಃಸಹವಾದ ಶ್ರೋತ್ರೇಂದ್ರಿಯಗಳ ವೇಗ, ಪರನಿಂದನೆ, ಆತ್ಮಪ್ರಶಂಸೆ, ಮಾತ್ಸರ್ಯ, ಪಾಪ, ದುಷ್ಕರ್ಮಗಳಲ್ಲಿ ಪ್ರವೃತ್ತಿ, ಮಾಡಬಾರದ ಕಾರ್ಯಗಳನ್ನು ಮಾಡುವುದು, ಸಾಹಸಕಾರ್ಯಗಳಲ್ಲಿ ಪ್ರವೃತ್ತಿ–ಈ ಎಲ್ಲವೂ ಲೋಭದ ಪರಿಣಾಮಗಳೇ ಆಗಿವೆ.

ಜಾತೌ ಬಾಲ್ಯೇ ಚ ಕೌಮಾರೇ ಯೌವನೇ ಚಾಪಿ ಮಾನವಾಃ ।
ನ ಸಂತ್ಯಜನ್ತ್ಯಾತ್ಮಕರ್ಮ ಯೋ ನ ಜೀರ್ಯತಿ ಜೀರ್ಯತಃ ॥೧೧॥

ಯೋ ನ ಪೂರಯಿತುಂ ಶಕ್ಯೋ ಲೋಭಃ ಪ್ರಾಪ್ತ್ಯಾ ಕುರೂದ್ವಹ ।
ನಿತ್ಯಂ ಗಮ್ಭೀರತೋಯಾಭಿರಾಪಗಾಭಿರಿವೋದಧಿಃ ॥೧೨॥

ಮನುಷ್ಯರು ಹುಟ್ಟಿದಾಗಲೂ, ಬಾಲ್ಯಾವಸ್ಥೆಯಲ್ಲಿದ್ದಾಗಲೂ, ಕೌಮಾರಾವಸ್ಥೆಯಲ್ಲಿದ್ದಾಗಲೂ, ತಾರುಣ್ಯದಲ್ಲಿದ್ದಾಗಲೂ–ಲೋಭಮೂಲವಾದ ಮೇಲಿನ ಅಕಾರ್ಯಗಳನ್ನು ಬಿಡುವುದಿಲ್ಲ. ದೇಹವು ಜೀರ್ಣವಾದರೂ ಲೋಭವು ಮಾತ್ರ ಜೀರ್ಣವಾಗುವುದಿಲ್ಲ. ನಿತ್ಯವೂ ಹರಿಯುವ ಗಂಭೀರವಾದ ಜಲರಾಶಿಯಿಂದ ಕೂಡಿರುವ ನದಿಗಳಿಂದ ಸಮುದ್ರವನ್ನು ಪೂರ್ಣಮಾಡಲು ಸಾಧ್ಯವಾಗದಂತೆ–ವಸ್ತುವಿನ ಪ್ರಾಪ್ತಿಯಿಂದಾಗಿ ಲೋಭವನ್ನು ಪೂರ್ಣಗೊಳಿಸಲು ಶಕ್ಯವಿಲ್ಲ. (ಒಂದು ವಸ್ತುವು ಪ್ರಾಪ್ತವಾದೊಡನೆಯೇ ಮತ್ತೊಂದು ವಸ್ತುವಿನ ಮೇಲೆ ಅಪೇಕ್ಷೆಯುಂಟಾಗುತ್ತದೆ. ಅದೇ ಲೋಭ.)

ನ ಪ್ರಹೃಷ್ಯತಿ ಯೋ ಲಾಭೈಃ ಕಾಮೈರ್ಯಶ್ಚ ನ ತೃಪ್ಯತಿ ॥೧೩॥
ಯೋ ನ ದೇವೈರ್ನ ಗನ್ಧರ್ವೈರ್ನಾಸುರೈರ್ನ ಮಹೋರಗೈಃ ।
ಜ್ಞಾಯತೇ ನೃಪ ತತ್ತ್ವೇನ ಸರ್ವೈರ್ಭೂತಗಣೈಸ್ತದಾ ॥೧೪॥

ಲೋಭಿಯಾದವನು ಬಹಳವಾದ ಲಾಭವನ್ನು ಪಡೆದರೂ ಸಂತುಷ್ಟನಾಗುವುದಿಲ್ಲ. ಅಪರಿಮಿತವಾದ ಕಾಮೋಪಭೋಗಗಳಿಂದಲೂ ತೃಪ್ತಿಯನ್ನು ಹೊಂದುವುದಿಲ್ಲ. ದೇವ-ಗಂಧರ್ವಾಸುರರಿಂದಾಗಲೀ, ಮಹೋರಗಗಳಿಂದಾಗಲೀ, ಸಮಸ್ತವಾದ ಪ್ರಾಣಿಗಳ ಸಮೂಹಗಳಿಂದಾಗಲೀ–ಲೋಭದ ಸ್ವರೂಪವನ್ನು ಯಥಾರ್ಥವಾಗಿ ತಿಳಿಯಲು ಸಾಧ್ಯವಾಗಿಲ್ಲ.

ಸ ಲೋಭಃ ಸಹ ಮೋಹೇನ ವಿಜೇತವ್ಯೋ ಜಿತಾತ್ಮನಾ ।
ದಮ್ಭೋ ದ್ರೋಹಶ್ಚ ನಿನ್ದಾ ಚ ಪೈಶುನ್ಯಂ ಮತ್ಸರಸ್ತಥಾ ।
ಭವನ್ತ್ಯೇತಾನಿ ಕೌರವ್ಯ ಲುಬ್ಧಾನಾಮಕೃತಾತ್ಮನಾಮ್ ॥೧೫॥

ಜಿತೇಂದ್ರಿಯರಾದವರು ಮೋಹದ ಜೊತೆಯಲ್ಲಿಯೇ ಲೋಭವನ್ನೂ ಜಯಿಸಬೇಕು. ಕುರುನಂದನ! ಜಿತೇಂದ್ರಿಯರಲ್ಲದ ಲೋಭಿಗಳಲ್ಲಿ ದಂಭ, ದ್ರೋಹ, ನಿಂದೆ ಚಾಡಿಹೇಳುವುದು, ಮಾತ್ಸರ್ಯ–ಇತ್ಯಾದಿ ದುರ್ಗುಣಗಳೆಲ್ಲವೂ ಇರುತ್ತವೆ.

ಸುಮಹಾನ್ತ್ಯಪಿ ಶಾಸ್ತ್ರಾಣಿ ಧಾರಯನ್ತಿ ಬಹುಶ್ರುತಾಃ ।
ಛೇತ್ತಾರಃ ಸಂಶಯಾನಾಂ ಚ ಕ್ಲಿಶ್ಯನ್ತೀಹಾಲ್ಪಬುದ್ಧಯಃ ॥೧೬॥

ಬಹುಶ್ರುತರಾದವರು (ಪಂಡಿತರು) ದೊಡ್ಡ-ದೊಡ್ಡ ಶಾಸ್ತ್ರಗಳನ್ನೂ

ಕಂಠಪಾಠಮಾಡಿಕೊಂಡಿರುತ್ತಾರೆ. ಶಾಸ್ತ್ರಾರ್ಥಗಳ ವಿಷಯದಲ್ಲಿ, ಧರ್ಮಾಚರಣೆಯ ವಿಷಯದಲ್ಲಿ ಯಾವುದೇ ಸಂಶಯಗಳಿದ್ದರೂ ಪರಿಹರಿಸುತ್ತಾರೆ. ಆದರೆ ಅಂತಹವರೂ ಲೋಭಪರವಶರಾಗಿ ಅಲ್ಪವಾದ ಬುದ್ಧಿಯುಳ್ಳವರಾಗಿ ಕ್ಲೇಶಪಡುತ್ತಾರೆ. (ಲೋಭವು ಬುದ್ಧಿಯನ್ನು ವಿಶಾಲಗೊಳಿಸುವುದಿಲ್ಲ. ಸಂಕೋಚಗೊಳಿಸುತ್ತದೆ.)

ದ್ವೇಷಕ್ರೋಧಪ್ರಸಕ್ತಾಶ್ಚ ಶಿಷ್ಟಾಚಾರಬಹಿಷ್ಕೃತಾಃ ।
ಅನ್ತಃಕ್ರೂರಾ ವಾಙ್ಮಧುರಾಃ ಕೂಪಾಶ್ಛನ್ನಾಸ್ತೃಣೈರಿವ ।
ಧರ್ಮವೈತಂಸಿಕಾಃ ಕ್ಷುದ್ರಾ ಮುಷ್ಣನ್ತಿ ಧ್ವಜಿನೋ ಜಗತ್ ॥೧೮॥

ಲೋಭಿಗಳಾದವರು–ದ್ವೇಷದಿಂದಲೂ, ಕ್ರೋಧದಿಂದಲೂ ಯುಕ್ತರಾಗಿರುತ್ತಾರೆ. ಶಿಷ್ಟಾಚಾರಗಳನ್ನು ಪರಿತ್ಯಜಿಸುತ್ತಾರೆ. ಲೋಭಿಗಳು ಅಂತರಂಗದಲ್ಲಿ ಕ್ರೂರಿಗಳಾಗಿಯೂ–ಬಹಿರಂಗದಲ್ಲಿ ಅಮೃತೋಪಮವಾದ ಮಾತುಗಳನ್ನಾಡುತ್ತಲೂ ಇರುತ್ತಾರೆ. ಹಸಿಹುಲ್ಲಿನಿಂದ ಆಚ್ಛಾದಿತವಾದ ಬಾವಿಗಳೋಪಾದಿಯಲ್ಲಿ ಧರ್ಮವನ್ನು ಜನರಲ್ಲಿ ಪ್ರದರ್ಶನಮಾತ್ರಕ್ಕೆ ಇಟ್ಟುಕೊಂಡಿರುವ ಧರ್ಮಧ್ವಜಿಗಳಾದ ಇಂತಹ ಕ್ಷುದ್ರರು ಜಗತ್ತನ್ನೇ ಕೊಳ್ಳೆ ಹೊಡೆಯುತ್ತಾರೆ.

ಕುರ್ವತೇ ಚ ಬಹೂನ್ಮಾರ್ಗಾಂಸ್ತಾನ್ಹೇತುಬಲಮಾಶ್ರಿತಾಃ ।
ಸತಾಂ ಮಾರ್ಗಾನ್ವಿಲುಮ್ಪನ್ತಿ ಲೋಭಾಜ್ಞಾನೇಷು ನಿಷ್ಠಿತಾಃ ॥೧೯॥

ಯುಕ್ತಿಯ ಬಲವನ್ನಾಶ್ರಯಿಸಿ ಅನೇಕವಿಧವಾದ ದುರ್ಮಾರ್ಗಗಳನ್ನು ಸೃಷ್ಟಿಸುತ್ತಾರೆ. ಲೋಭದಲ್ಲಿಯೂ ಅಜ್ಞಾನದಲ್ಲಿಯೂ ನಿಷ್ಠೆಯುಳ್ಳವರಾಗಿ ಸತ್ಪುರುಷರ ಮಾರ್ಗವನ್ನು ವಿನಾಶಗೊಳಿಸುತ್ತಾರೆ.

ಧರ್ಮಸ್ಯ ಹ್ರಿಯಮಾಣಸ್ಯ ಲೋಭಗ್ರಸ್ತೈರ್ದುರಾತ್ಮಭಿಃ ।
ಯಾ ಯಾ ವಿಕ್ರಿಯತೇ ಸಂಸ್ಥಾ ತತಃ ಸಾಪಿ ಪ್ರಪದ್ಯತೇ ॥೨೦॥

ಲೋಭಗ್ರಸ್ತರಾದ ದುರಾತ್ಮರಿಂದ ಅಪಹರಿಸಲ್ಪಟ್ಟ (ವಿಕೃತಗೊಳಿಸಲ್ಪಟ್ಟ) ಧರ್ಮವು ಯಾವ ಸ್ಥಿತಿಯಲ್ಲಿರುತ್ತದೆಯೋ–ಅದು ಹಾಗೆಯೇ ಪ್ರಸಿದ್ಧಿಯನ್ನೂ ಹೊಂದುತ್ತದೆ. (ಸನಾತನಧರ್ಮಕ್ಕೆ ವಿರುದ್ಧವಾದ ಪಂಥ ಗಳು ಹುಟ್ಟಿಕೊಳ್ಳುತ್ತವೆ.)

ದರ್ಪಃ ಕ್ರೋಧೋ ಮದಃ ಸ್ವಪ್ನೋ ಹರ್ಷಃ ಶೋಕೋऽತಿಮಾನಿತಾ ।
ಏತ ಏವ ಹಿ ಕೌರವ್ಯ ದೃಶ್ಯನ್ತೇ ಲುಬ್ಧಬುದ್ಧಿಷು ॥೨೧॥

ಕೌರವ್ಯನೇ! ಯಾರ ಬುದ್ಧಿಯು ಲೋಭದಲ್ಲಿಯೇ ಲೀನವಾಗಿರುವುದೋ–ಅವರಲ್ಲಿ ದರ್ಪ, ಕ್ರೋಧ, ಮದ, ದುಃಸ್ವಪ್ನ, ಅತಿಯಾದ ಹರ್ಷ, ಅತಿಯಾದ ಶೋಕ, ಅತಿಯಾದ ಸ್ವಾಭಿಮಾನ–ಈ ದೋಷಗಳು ಕಂಡು ಬರುತ್ತವೆ.

ಏತಾನಶಿಷ್ಟಾನ್ಬುಧ್ಯಸ್ವ ನಿತ್ಯಂ ಲೋಭಸಮನ್ವಿತಾನ್ ।
ಶಿಷ್ಟಾಂಸ್ತು ಪರಿಪೃಚ್ಛೇಥಾ ಯಾನ್ವಕ್ಷ್ಯಾಮಿ ಶುಚಿವ್ರತಾನ್ ॥೨೨॥

ನಿತ್ಯಲೋಭಿಗಳಾಗಿರುವ ಇಂತಹ ದರ್ಪ-ಕ್ರೋಧಾದಿಗುಣಸಂಪನ್ನರನ್ನು ನೀನು ಅಶಿಷ್ಟರೆಂದು ತಿಳಿದುಕೊ. ಹಾಗಾದರೆ ಶಿಷ್ಟರು ಯಾರೆಂದು ನೀನು ಪ್ರಶ್ನಿಸಬಹುದು. ಶುಚಿವ್ರತರಾದ ಶಿಷ್ಟರ ಗುಣಗಳನ್ನೂ ಹೇಳುತ್ತೇನೆ.

ಯೇಷ್ವಾವೃತ್ತಿಭಯಂ ನಾಸ್ತಿ ಪರಲೋಕಭಯಂ ನ ಚ ।
ನಾಮಿಷೇಷು ಪ್ರಸಙ್ಗೋऽಸ್ತಿ ನ ಪ್ರಿಯೇಷ್ವಪ್ರಿಯೇಷು ಚ ॥೨೩॥

ಈ ಪ್ರಪಂಚದಲ್ಲಿ ಪುನಃ ಹುಟ್ಟಬೇಕಾಗುವುದೆಂಬ ಭಯವು ಯಾರಲ್ಲಿಲ್ಲವೋ, ಪರಲೋಕದ ವಿಷಯವಾಗಿಯೂ ಯಾರಲ್ಲಿ ಯಾವ ವಿಧವಾದ ಭಯವೂ ಇಲ್ಲವೋ, ಯಾರಿಗೆ ಭೋಗಗಳಲ್ಲಿ ಆಸಕ್ತಿಯೇ ಇಲ್ಲವೋ, ಪ್ರಿಯವಸ್ತುಗಳಲ್ಲಿ ಪ್ರೀತಿಯಾಗಲೀ ಅಪ್ರಿಯವಸ್ತುಗಳಲ್ಲಿ ದ್ವೇಷವಾಗಲೀ ಇಲ್ಲವೋ–ಅವರೇ ಶಿಷ್ಟರು.

ಶಿಷ್ಟಾಚಾರಃ ಪ್ರಿಯೋ ಯೇಷು ದಮೋ ಯೇಷು ಪ್ರತಿಷ್ಠಿತಃ ।
ಸುಖಂ ದುಃಖಂ ಸಮಂ ಯೇಷಾಂ ಸತ್ಯಂ ಯೇಷಾಂ
ಪರಾಯಣಮ್ ॥೨೪॥

ಯಾರಿಗೆ ಶಿಷ್ಟಾಚಾರವು ಪ್ರಿಯವಾಗಿರುವುದೋ, ಇಂದ್ರಿಯ ಸಂಯಮವು ಯಾರಲ್ಲಿ ಪ್ರತಿಷ್ಠಿತವಾಗಿರುವುದೋ, ಸುಖ-ದುಃಖಗಳೆರಡೂ ಯಾರಿಗೆ ಸಮಾನವಾಗಿರುವುವೋ, ಯಾರಿಗೆ ಸತ್ಯವೇ ಆಶ್ರಯಸ್ಥಾನವಾಗಿರುವುದೋ–ಅವರೇ ಶಿಷ್ಟರು.

ದಾತಾರೋ ನ ಗೃಹೀತಾರೋ ದಯಾವನ್ತಸ್ತಥೈವ ಚ ।
ಪಿತೃದೇವಾತಿಥೇಯಾಶ್ಚ ನಿತ್ಯೋದ್ಯುಕ್ತಾಸ್ತಥೈವ ಚ ॥೨೫॥

ಯಾರು ದಾನವನ್ನು ಕೊಡುವರೋ, ದಾನವನ್ನು ಪ್ರತಿಗ್ರಹಿಸುವುದಿಲ್ಲವೋ, ದಯಾವಂತರಾಗಿರುವರೋ, ದೇವತೆಗಳು, ಪಿತೃಗಳು ಮತ್ತು ಅತಿಥಿಗಳು–ಇವರ ಪೂಜೆಗಳಲ್ಲಿಯೇ ಸರ್ವದಾ ನಿರತರಾಗಿರುವರೋ, ಸತ್ಕರ್ಮಗಳನ್ನು ಮಾಡುವುದರಲ್ಲಿಯೇ ನಿತ್ಯವೂ ಉದ್ಯುಕ್ತರಾಗಿರುವರೋ– ಅವರೇ ಶಿಷ್ಟರು.

ಸರ್ವೋಪಕಾರಿಣೋ ವೀರಾಃ ಸರ್ವಧರ್ಮಾನುಪಾಲಕಾಃ ।
ಸರ್ವಭೂತಹಿತಾಶ್ಚೈವ ಸರ್ವದೇಯಾಶ್ಚ ಭಾರತ ॥೨೬॥

ಯಾರು ಎಲ್ಲರಿಗೂ ಉಪಕಾರಮಾಡುವರೋ, ಸರ್ವಧರ್ಮಗಳನ್ನೂ ಪರಿಪಾಲಿಸುವರೋ, ಸರ್ವಪ್ರಾಣಿಗಳಿಗೂ ಹಿತೈಷಿಗಳಾಗಿರುವರೋ, ಪರಹಿತಕ್ಕಾಗಿ ತಮ್ಮಲ್ಲಿರುವ ಸರ್ವಸ್ವವನ್ನೂ ತ್ಯಾಗಮಾಡುವರೋ–ಅವರೇ ಶಿಷ್ಟರು.

ನ ತೇ ಚಾಲಯಿತುಂ ಶಕ್ಯಾ ಧರ್ಮವ್ಯಾಪಾರಕಾರಿಣಃ ।
ನ ತೇಷಾಂ ಭಿದ್ಯತೇ ವೃತ್ತಂ ಯತ್ಪುರಾ ಸಾಧುಭೀ ಕೃತಮ್ ॥೨೭॥

ಶಿಷ್ಟರನ್ನು ಸತ್ಕರ್ಮಗಳಿಂದ ವಿಚಲಿತರನ್ನಾಗಿ ಮಾಡಲು ಸಾಧ್ಯವಾಗುವುದಿಲ್ಲ. ಅವರು ಯಾವಾಗಲೂ ಧರ್ಮಾನುಷ್ಠಾನದಲ್ಲಿಯೇ ತತ್ಪರರಾಗಿರುತ್ತಾರೆ. ಹಿಂದಿನ ಸತ್ಪುರುಷರು ಯಾವ ಮಾರ್ಗವನ್ನು ಅನುಸರಿಸುತ್ತಿದ್ದರೋ–ಅದೇ ಮಾರ್ಗವನ್ನೇ ಶಿಷ್ಟರು ಅನುಸರಣೆಮಾಡುತ್ತಾರೆ. ಶಿಷ್ಟರಾದವರು ಹಿಂದಿನವರ ಆಚಾರ-ವ್ಯವಹಾರಗಳನ್ನು ಯಾವಾಗಲೂ ಉಲ್ಲಂಘಿಸುವುದಿಲ್ಲ.

ನ ತ್ರಾಸಿನೋ ನ ಚಪಲಾ ನ ರೌದ್ರಾಃ ಸತ್ಪಥೇ ಸ್ಥಿತಾಃ ।
ತೇ ಸೇವ್ಯಾಃ ಸಾಧುಭಿರ್ನಿತ್ಯಂ ಯೇಷ್ವಹಿಂಸಾ ಪ್ರತಿಷ್ಠಿತಾ ॥೨೮॥

ಶಿಷ್ಟರು ಯಾವಾಗಲೂ ಭಯಪಡತಕ್ಕವರಲ್ಲ. ಚಪಲಚಿತ್ತರಲ್ಲ. ರೌದ್ರಸ್ವಭಾವದವರಾಗಿ ಬೇರೆಯವರನ್ನು ಭಯಪಡಿಸುವವರೂ ಅಲ್ಲ. ಯಾವಾಗಲೂ ಸನ್ಮಾರ್ಗದಲ್ಲಿಯೇ ಇರತಕ್ಕವರು. ಅಹಿಂಸಾಮಾರ್ಗಿಗಳು.

ಅಹಿಂಸೆಯೆಂಬುದು ಇವರಲ್ಲಿ ನೆಲೆಸಿದೆ. ಸಾಧುಪುರುಷರು ಇಂತಹ ಶಿಷ್ಟರನ್ನು ನಿತ್ಯವೂ ಸೇವಿಸಬೇಕು.

ಕಾಮಕ್ರೋಧವ್ಯಪೇತಾ ಯೇ ನಿರ್ಮಮಾ ನಿರಹಂಕೃತಾಃ ।
ಸುವ್ರತಾಃ ಸ್ಥಿರಮರ್ಯಾದಾಸ್ತಾನುಪಾಸ್ವ ಚ ಪೃಚ್ಛ ಚ ॥೨೯॥

ಶಿಷ್ಟರು ಕಾಮ-ಕ್ರೋಧಗಳಿಂದ ಹೊರತಾಗಿರುವವರು ಅಹಂಕಾರ-ಮಮಕಾರಗಳಿಲ್ಲದವರು. ಉತ್ತಮವಾದ ವ್ರತಗಳನ್ನು ಪಾಲಿಸತಕ್ಕವರು. ಧರ್ಮದ ಮರ್ಯಾದೆಯಲ್ಲಿ ಸ್ಥಿರವಾಗಿರತಕ್ಕವರು. ಧರ್ಮಜ! ಅಂತಹ ಶಿಷ್ಟರನ್ನು ನೀನು ಸೇವಿಸು ಮತ್ತು ಧರ್ಮದ ವಿಷಯವಾಗಿ ಅಂತಹವರನ್ನು ಪ್ರಶ್ನಿಸಿ ನಿನ್ನ ಸಂದೇಹಗಳನ್ನು ನಿವಾರಣೆಮಾಡಿಕೊ.

ನ ಧನಾರ್ಥಂ ಯಶೋಽರ್ಥಂ ವಾ ಧರ್ಮಸ್ತೇಷಾಂ ಯುಧಿಷ್ಠಿರ ।
ಅವಶ್ಯಂ ಕಾರ್ಯ ಇತ್ಯೇವ ಶರೀರಸ್ಯ ಕ್ರಿಯಾಸ್ತಥಾ ॥೩೦॥

ಯುಧಿಷ್ಠಿರ! ಶಿಷ್ಟರು ಧನಸಂಗ್ರಹಕ್ಕಾಗಲೀ, ಯಶಸ್ಸನ್ನು ಪಡೆಯುವ ಅಭಿಲಾಷೆಯಿಂದಾಗಲೀ ಧರ್ಮಾಚರಣೆಯನ್ನು ಮಾಡುವುದಿಲ್ಲ. ಕರ್ತವ್ಯದೃಷ್ಟಿಯಿಂದ ಮಾಡುತ್ತಾರೆ. ಶರೀರಪಾಲನೆಗೆ ಆಹಾರಸಂಗ್ರಹಾದಿ ಕ್ರಿಯೆಗಳು ಎಷ್ಟು ಅವಶ್ಯಕವೋ ಅಷ್ಟು ಕ್ರಿಯೆಗಳನ್ನು ಆವಶ್ಯಕವಾಗಿ ಮಾಡಲೇಬೇಕಾದ ಕಾರ್ಯವೆಂದು ಭಾವಿಸಿ ಮಾಡುತ್ತಾರೆ.

ನ ಭಯಂ ಕ್ರೋಧಚಾಪಲ್ಯೇ ನ ಶೋಕಸ್ತೇಷು ವಿದ್ಯತೇ ।
ನ ಧರ್ಮಧ್ವಜಿನಶ್ಚೈವ ನ ಗುಹ್ಯಂ ಕಶ್ಚಿದಾಸ್ಥಿತಾಃ ॥೩೧॥

ಶಿಷ್ಟರಿಗೆ ಭಯವೆಂಬುದಿಲ್ಲ. ಕ್ರೋಧವಾಗಲೀ, ಚಪಲತೆಯಾಗಲೀ, ಶೋಕವಾಗಲೀ ಅವರಲ್ಲಿರುವುದಿಲ್ಲ. ಲೋಕದ ಮೆಚ್ಚುಗೆಗಾಗಿ ಅವರು ಧರ್ಮಕಾರ್ಯಗಳನ್ನು ಮಾಡುವುದಿಲ್ಲ. ಅವರಲ್ಲಿ ಮುಚ್ಚಿಡಲ್ಪಡಬೇಕಾದುದು ಯಾವುದೂ ಇರುವುದಿಲ್ಲ. ರಹಸ್ಯದಲ್ಲಿ ವೇದಬಾಹಿರವಾದ ಧರ್ಮವನ್ನು ಅವರೆಂದಿಗೂ ಆಶ್ರಯಿಸತಕ್ಕವರಲ್ಲ.

ಯೇಷ್ವಲೋಭಸ್ತಥಾಮೋಹೋ ಯೇ ಚ ಸತ್ಯಾರ್ಜವೇ ಸ್ಥಿತಾಃ ।
ತೇಷು ಕೌನ್ತೇಯ ರಜ್ಯೇಥಾ ಯೇಷಾಂ ನ ಭ್ರಶ್ಯತೇ ಪುನಃ ॥೩೨॥

ಕೌಂತೇಯ! ಯಾರಲ್ಲಿ ಲೋಭ-ಮೋಹಗಳಿಲ್ಲವೋ, ಯಾರು ಸತ್ಯ ಮತ್ತು ಋಜುತ್ವಗಳಲ್ಲಿಯೇ ಪ್ರತಿಷ್ಠಿತರಾಗಿರುವರೋ, ಸದಾಚಾರ-ಸದ್ವ್ಯವಹಾರಗಳಿಂದ ಭ್ರಷ್ಟರಾಗುವುದಿಲ್ಲವೋ—ಅಂತಹ ಶಿಷ್ಟರೊಡನೆ ನೀನು ಅನುರಾಗವನ್ನು ಬೆಳೆಸು.

ಯೇ ನ ಹೃಷ್ಯನ್ತಿ ಲಾಭೇಷು ನಾಲಾಭೇಷು ವ್ಯಥನ್ತಿ ಚ ।
ನಿರ್ಮಮಾ ನಿರಹಂಕಾರಾಃ ಸತ್ತ್ವಸ್ಥಾಃ ಸಮದರ್ಶಿನಃ ॥೩೩॥

ಯಾರು ಪರ್ಯಾಯವಾಗಿ ಬರುವ ಲಾಭಗಳಲ್ಲಿ ಸಂತೋಷಪಡುವುದಿಲ್ಲವೋ, ನಷ್ಟಗಳಲ್ಲಿ ದುಃಖಪಡುವುದಿಲ್ಲವೋ, ಅಹಂಕಾರ-ಮಮಕಾರರಹಿತರಾಗಿರುವರೋ, ಸತ್ತ್ವಗುಣಸಂಪನ್ನರಾಗಿರುವರೋ, ದ್ವಂದ್ವಗಳಲ್ಲಿ ಸಮಾನವಾದ ದೃಷ್ಟಿಯುಳ್ಳವರೋ—ಅಂತಹ ಶಿಷ್ಟರೊಡನೆ ನೀನು ವಿಶ್ವಾಸವನ್ನು ಬೆಳೆಸು.

ಲಾಭಾಲಾಭೌ ಸುಖದುಃಖೇ ಚ ತಾತ
ಪ್ರಿಯಾಪ್ರಿಯೇ ಮರಣಂ ಜೀವಿತಂ ಚ ।
ಸಮಾನಿ ಯೇಷಾಂ ಸ್ಥಿರವಿಕ್ರಮಾಣಾಂ
ಬುಭುತ್ಸತಾಂ ಸತ್ತ್ವಪಥೇ ಸ್ಥಿತಾನಾಮ್ ॥೩೪॥

ವತ್ಸ! ಧರ್ಮಜ! ಲಾಭಾಲಾಭಗಳೂ, ಸುಖ-ದುಃಖಗಳೂ, ಪ್ರಿಯಾಪ್ರಿಯಗಳೂ, ಜನನ-ಮರಣಗಳೂ—ಯಾರಿಗೆ ಸಮಾನವಾಗಿರುವುವೋ, ಯಾರು ಸುದೃಢವಿಕ್ರಮಿಗಳೋ, ಆಧ್ಯಾತ್ಮಿಕವಾದ ಔನ್ನತ್ಯವನ್ನು ಇಚ್ಛಿಸುವರೋ, ಸಾತ್ತ್ವಿಕವಾದ ಮಾರ್ಗದಲ್ಲಿಯೇ ಸ್ಥಿರವಾಗಿರುವರೋ—ಅಂತಹ ಶಿಷ್ಟರೊಡನೆ ನೀನು ಅನುರಾಗವನ್ನು ಬೆಳೆಸು.

ಧರ್ಮಪ್ರಿಯಾಂಸ್ತಾನ್ಸುಮಹಾನುಭಾವಾ-
ನ್ನಾದನ್ತೋಽಪ್ರಮತ್ತಶ್ಚ ಸಮರ್ಚಯೇಥಾಃ ।
ದೈವಾತ್ಸರ್ವೇ ಗುಣವನ್ತೋ ಭವನ್ತಿ
ಶುಭಾಶುಭೇ ವಾಕ್ಪ್ರಲಾಪಾಸ್ತಥಾನ್ಯೇ ॥೩೫॥

ಧರ್ಮಪ್ರಿಯರಾದ, ಮಹಾನುಭಾವರಾದ ಅಂತಹ ಶಿಷ್ಟರನ್ನು ನೀನು

ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಪ್ರಮಾದರಹಿತನಾಗಿ ಸಂಪೂಜಿಸಬೇಕು. ಶುಭಸ್ವರೂಪನೇ! ಯುಧಿಷ್ಠಿರ! ದೈವಾನುಗ್ರಹದಿಂದ ಮಾತ್ರವೇ ಎಲ್ಲ ಪ್ರಲಾಪಗಳೂ (ಪ್ರವಚನಗಳೂ) ಗುಣಯುಕ್ತವಾಗಿರುತ್ತವೆ. (ಸತ್ತ್ವಯುಕ್ತವಾಗಿರುತ್ತವೆ.) ದೈವಾನುಗ್ರಹವಿಲ್ಲದ ಇತರ ಪ್ರಲಾಪಗಳು ಅಶುಭಕರವಾಗುತ್ತವೆ. ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. (ಭೀಷ್ಮರು ತಾವು ಮಾಡುತ್ತಿರುವ ಪ್ರವಚನದ ವಿಷಯವಾಗಿಯೇ ಈ ಮಾತನ್ನು ಹೇಳಿದ್ದಾರೆಂದು ಆಧುನಿಕ ವಿಮರ್ಶಕರೊಬ್ಬರ ಅಭಿಪ್ರಾಯವಾಗಿದೆ. ಈ ಶ್ಲೋಕದ ಉತ್ತರಾರ್ಧವನ್ನು ಸಮನ್ವಯಮಾಡಿ ಅರ್ಥ ಹೇಳುವುದು ಸ್ವಲ್ಪ ಕಷ್ಟವೇ ಸರಿ. ಅರ್ಥವನ್ನು ಹೊಂದಿಸಿ ಹೇಳಲು ಎಲ್ಲರೂ ಕಷ್ಟಪಟ್ಟಿದ್ದಾರೆ. ನಾವು ವ್ಯಾಖ್ಯಾನವನ್ನೇ ಆಶ್ರಯಿಸಿ ಅರ್ಥ ಮಾಡಿರುತ್ತೇವೆ. ವ್ಯಾಖ್ಯಾನಕಾರರು ಶುಭಾಶುಭೇ ಎಂಬ ಪದದಲ್ಲಿನ 'ಶುಭ' ಎಂಬ ಪದವನ್ನು ಸಂಬೋಧನೆಯೆಂದು ಕಲ್ಪಿಸಿ ಅರ್ಥಮಾಡಿರುತ್ತಾರೆ. "ಹೇ ಶುಭ! ಹೇ ಭದ್ರ! ಮಂಗಳಸ್ವರೂಪನೇ! ಧರ್ಮ ರಾಜ! **ಸರ್ವೇ ವಾಕ್ಪ್ರಲಾಪಾಃ ಗುಣವನ್ತೋ ಭವನ್ತಿ ತಾನ್ ದೈವಾನ್ ಪ್ರಧಾನಾನ್ ಶಿಷ್ಟಾನ್ ಸಮರ್ಚಯೇಥಾಃ ಅನ್ಯೇ ತು ಮೂಢಾನಾಂ ವಾಕ್ಪ್ರಲಾಪಾಃ ಅಶುಭೇ ಅಶುಭಾರ್ಥಮೇವ ಭವನ್ತಿ** – ಶಿಷ್ಟರ ಎಲ್ಲ ಮಾತುಗಳೂ ಗುಣಯುಕ್ತವಾಗಿಯೇ ಇರುತ್ತವೆ. ಸಿದ್ಧಿಯ ಮಹತ್ತ್ವವನ್ನು ಹೊಂದಿರುತ್ತವೆ. ಮೂಢನ ಮಾತುಗಳು ಅಶುಭವಾದ ಅರ್ಥವುಳ್ಳದ್ದಾಗಿರುತ್ತವೆ. ನಿಷ್ಪ್ರಯೋಜಕಗಳಾಗಿರುತ್ತವೆ. ಸತ್ತ್ವಹೀನವಾಗಿರುತ್ತವೆ. ಹಿಂದೀ ಅನುವಾದಕಾರರು **ದೈವಾತ್**–ಎಂಬುದಕ್ಕೆ ಸ್ವಭಾವ ಎಂದು ಅರ್ಥಮಾಡಿರುತ್ತಾರೆ. 'ಏ ಸಬ್ ಮಹಾಪುರುಷ್ ಸ್ವಭಾವಸೇ ಹೀ ಬಡೇ ಗುಣವಾನ್ ಹೋತೇ ಹೈ–ಈ ಎಲ್ಲ ಮಹಾಪುರುಷರೂ ಸ್ವಭಾವದಿಂದಲೇ ಒಳ್ಳೆಯ ಗುಣವಂತರಾಗಿರುತ್ತಾರೆ. ಶುಭ್ ಔರ್ ಅಶುಭಕೇ ವಿಷಯಮೇ ಉನಕೀ ವಾಣೀ ಯಥಾರ್ಥ್ ಹೋತೀ ಹೈ – ಶುಭಾಶುಭಗಳ ವಿಷಯದಲ್ಲಿ ಇವರ ಮಾತು ಯಥಾರ್ಥವಾಗಿರುತ್ತದೆ. ದೂಸರೇ ಲೋಗ್ ತೋ ಕೇವಲ್ ಬಾತೇ ಬನಾನೇವಾಲೇ ಹೋತೇ ಹೈ– ಬೇರೆಯವರು ಕೇವಲ ಮಾತನಾಡುವವರು ಮಾತ್ರವೇ ಆಗಿರುತ್ತಾರೆ.

ಅವರ ಮಾತು ಯಥಾರ್ಥವಾಗಿರುವುದಿಲ್ಲ. ನಾಲ್ಕನೆಯ ಪಾದಕ್ಕೆ ಪಾಠಾಂತ ರವು ಹೀಗಿದೆ : ಶುಭಾಶುಭವಾಕ್ಪ್ರಲಾಪಾ ಯಥೈವ.'')

೧೫೮ನೆಯ ಅಧ್ಯಾಯವು ಮುಗಿಯಿತು.

೧೫೯ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಅನ್ಯೋನ್ಯಾಶ್ರಯಿಗಳಾದ ಅಜ್ಞಾನ ಮತ್ತು ಲೋಭಗಳೇ ಸಮಸ್ತದೋಷಗಳಿಗೂ ಕಾರಣವೆಂಬುದರ ವಿವರಣೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅನರ್ಥಾನಾಮಧಿಷ್ಠಾನಮುಕ್ತೋ ಲೋಭಃ ಪಿತಾಮಹ ।
ಅಜ್ಞಾನಮಪಿ ವೈ ತಾತ ಶ್ರೋತುಮಿಚ್ಛಾಮಿ ತತ್ತ್ವತಃ ॥೧॥

"ಪಿತಾಮಹ! ಎಲ್ಲ ವಿಧವಾದ ಅನರ್ಥಗಳಿಗೂ ಲೋಭವೇ ಆಶ್ರಯಸ್ಥಾನವೆಂಬುದಾಗಿ ನೀನು ಹೇಳಿದೆ. ಈಗ ಅಜ್ಞಾನದ ಸ್ವರೂಪವನ್ನೂ ಯಥಾವತ್ತಾಗಿ ನಿನ್ನಿಂದ ಕೇಳಿ ತಿಳಿಯಬೇಕೆಂದಿದ್ದೇನೆ."

ಭೀಷ್ಮನು ಹೇಳುತ್ತಾನೆ :

ಕರೋತಿ ಪಾಪಂ ಯೋಽಜ್ಞಾನಾನ್ನಾತ್ಮನೋ ವೇತ್ತಿ ಚ ಕ್ಷಯಮ್ ।
ಪ್ರದ್ವೇಷ್ಟಿ ಸಾಧುವೃತ್ತಾಂಶ್ಚ ಸ ಲೋಕಸ್ಯೈತಿ ವಾಚ್ಯತಾಮ್ ॥೨॥

"ಯುಧಿಷ್ಠಿರ! ಯಾವನು ಅಜ್ಞಾನವಶನಾಗಿ ಪಾಪವನ್ನು ಮಾಡುವನೋ–ಅವನು ಆ ಪಾಪದಿಂದ ತನಗುಂಟಾಗುವ ಹಾನಿಯನ್ನು ತಿಳಿದುಕೊಳ್ಳುವುದಿಲ್ಲ. ಸತ್ಪುರುಷರ ಆಚರಣೆಗಳನ್ನು ದ್ವೇಷಿಸುತ್ತಾನೆ. ಅದರಿಂದ ಅವನು ಲೋಕನಿಂದೆಗೆ ಪಾತ್ರನಾಗುತ್ತಾನೆ.

ಅಜ್ಞಾನಾನ್ನಿರಯಂ ಯಾತಿ ತಥಾಜ್ಞಾನೇನ ದುರ್ಗತಿಮ್ ।
ಅಜ್ಞಾನಾತ್ಕ್ಲೇಶಮಾಪ್ನೋತಿ ತಥಾಪತ್ಸು ನಿಮಜ್ಜತಿ ॥೩॥

ಅಜ್ಞಾನದಿಂದ ಮನುಷ್ಯನು ನರಕಕ್ಕೆ ಹೋಗುತ್ತಾನೆ. ಅಜ್ಞಾನದಿಂದ ದುರ್ಗತಿಯನ್ನು ಹೊಂದುತ್ತಾನೆ. ಅಜ್ಞಾನದಿಂದಲೇ ಅನೇಕ ವಿಧವಾದ ಕಷ್ಟಗಳನ್ನು ಅನುಭವಿಸುತ್ತಾನೆ. ಅನೇಕವಿಧವಾದ ಆಪತ್ತುಗಳೆಂಬ ಸಮುದ್ರಗಳಲ್ಲಿಯೂ ಮುಳುಗುತ್ತಾನೆ."

ಯುಧಿಷ್ಠಿರನು ಹೇಳುತ್ತಾನೆ :

ಅಜ್ಞಾನಸ್ಯ ಪ್ರವೃತ್ತಿಂ ಚ ಸ್ಥಾನಂ ವೃದ್ಧಿಂ ಕ್ಷಯೋದಯೌ ।
ಮೂಲಂ ಯೋಗಂ ಗತಿಂ ಕಾಲಂ ಕಾರಣಂ ಹೇತುಮೇವ ಚ ॥೪॥

"ಪಿತಾಮಹ! ಅಜ್ಞಾನದ ಪ್ರವೃತ್ತಿ, ಸ್ಥಿತಿ, ವೃದ್ಧಿ, ಕ್ಷಯ, ಉತ್ಪತ್ತಿ, ಮೂಲ, ಯೋಗ, ಗತಿ, ಕಾಲ, ಕಾರಣ ಮತ್ತು ಹೇತುಗಳನ್ನು ಹೇಳು.

ಶ್ರೋತುಮಿಚ್ಛಾಮಿ ತತ್ತ್ವೇನ ಯಥಾವದಿಹ ಪಾರ್ಥಿವ ।
ಅಜ್ಞಾನಪ್ರಸವಂ ಹೀದಂ ಯದ್ದುಃಖಮುಪಲಭ್ಯತೇ ॥೫॥

ನಾನು ಈ ವಿಷಯದಲ್ಲಿ ಯಥಾವತ್ತಾದ ತತ್ತ್ವವನ್ನು ತಿಳಿಯ ಬೇಕೆಂದಿರುತ್ತೇನೆ. ಏಕೆಂದರೆ : ಸಂಭವಿಸುವ ದುಃಖಗಳೆಲ್ಲವೂ ಅಜ್ಞಾನ ಮೂಲವೇ ಆಗಿರುತ್ತವೆ."

ಭೀಷ್ಮನು ಹೇಳುತ್ತಾನೆ :

ರಾಗೋ ದ್ವೇಷಸ್ತಥಾ ಮೋಹೋ ಹರ್ಷಃ ಶೋಕೋಽಭಿಮಾನಿತಾ ।
ಕಾಮಃ ಕ್ರೋಧಶ್ಚ ದರ್ಪಶ್ಚ ತನ್ದ್ರೀ ಚಾಲಸ್ಯಮೇವ ಚ ॥೬॥

ಇಚ್ಛಾ ದ್ವೇಷಸ್ತಥಾ ತಾಪಃ ಪರವೃದ್ಧ್ಯುಪತಾಪಿತಾ ।
ಅಜ್ಞಾನಮೇತನ್ನಿರ್ದಿಷ್ಟಂ ಪಾಪಾನಾಂ ಚೈವ ಯಾಃ ಕ್ರಿಯಾಃ ॥೭॥

"ಯುಧಿಷ್ಠಿರ! ರಾಗ, ದ್ವೇಷ, ಮೋಹ, ಹರ್ಷ, ಶೋಕ, ಅಭಿಮಾನ, ಕಾಮ, ಕ್ರೋಧ, ದರ್ಪ, ಶ್ರಮದಿಂದ ಉಂಟಾದ ಜಡತೆ, ಆಲಸ್ಯ, ಇಚ್ಛೆ, ವೈರ, ತಾಪ, ಇತರರ ಉನ್ನತಿಯನ್ನು ನೋಡಿ ಪರಿತಾಪಪಡುವುದು ಮತ್ತು ಎಲ್ಲ ವಿಧವಾದ ಪಾಪಕಾರ್ಯಗಳು–ಇವುಗಳೆಲ್ಲವೂ ಅಜ್ಞಾನದ ಕಾರ್ಯ ಗಳೆಂದು ಹೇಳಲ್ಪಟ್ಟಿವೆ.

ಅಜ್ಞಾನದ ಪ್ರವೃತ್ತಿ, ವೃದ್ಧಿ, ಸ್ಥಾನ–ಮೊದಲಾದುವುಗಳ ವಿಷಯ ವಾಗಿಯೂ ನೀನು ಪ್ರಶ್ನಿಸಿರುವೆ. ವಿಶೇಷತಃ ಅಜ್ಞಾನದ ವಿಷಯದಲ್ಲಿ ವಿಸ್ತಾರವಾಗಿಯೇ ಎಲ್ಲವನ್ನೂ ಹೇಳುವೆನು ; ಕೇಳು :

ಉಭಾವೇತೌ ಸಮಫಲೌ ಸಮದೋಷೌ ಚ ಭಾರತ ।
ಅಜ್ಞಾನಂ ಚಾತಿಲೋಭಶ್ಚಾಪ್ಯೇಕಂ ಜಾನೀಹಿ ಪಾರ್ಥಿವ ॥೮॥

ಯುಧಿಷ್ಠಿರ! ಅಜ್ಞಾನ ಮತ್ತು ಅತಿಲೋಭ–ಇವೆರಡೂ ಒಂದೇ ಎಂದು ಭಾವಿಸು. ಏಕೆಂದರೆ : ಎರಡರ ಪರಿಣಾಮಗಳೂ ಮತ್ತು ದೋಷಗಳೂ ಸಮಾನವಾಗಿಯೇ ಇರುತ್ತವೆ.

ಲೋಭಪ್ರಭವಮಜ್ಞಾನಂ ವೃದ್ಧಂ ಭೂಯಃ ಪ್ರವರ್ಧತೇ ।
ಸ್ಥಾನೇ ಸ್ಥಾನಂ ಕ್ಷಯೇ ಕ್ಷೈಣ್ಯಮುಪೈತಿ ವಿವಿಧಾಂ ಗತಿಮ್ ॥೧೦॥

ಲೋಭದಿಂದ ಹುಟ್ಟಿರುವ ಅಜ್ಞಾನವು ಲೋಭವು ಹೆಚ್ಚಿದಂತೆಲ್ಲಾ ಹೆಚ್ಚುತ್ತಲೇ ಹೋಗುತ್ತದೆ. ಎಲ್ಲಿಯವರೆಗೆ ಲೋಭವಿರುವುದೋ ಅಲ್ಲಿಯ ವರೆಗೂ ಅಜ್ಞಾನವೂ ಇರುತ್ತದೆ. ಲೋಭವು ಕ್ಷಯಿಸಿದಾಗ ಅಜ್ಞಾನವೂ ಕ್ಷಯಿಸುತ್ತದೆ. ಅಜ್ಞಾನ ಅಥವಾ ಲೋಭವೇ ದುಃಖ-ಸಂತಾಪ-ಮೋಹ ರೂಪವಾದ ನಾನಾವಿಧವಾದ ಗತಿಯನ್ನು (ಯೋನಿಗಳಲ್ಲಿ ಜನ್ಮವನ್ನು) ಜೀವನಿಗೆ ಹೊಂದಿಸುತ್ತದೆ.

ಮೂಲಂ ಲೋಭಸ್ಯ ಮೋಹೋ ವೈ ಕಾಲಾತ್ಮಗತಿರೇವ ಚ ।
ಛಿನ್ನೇ ಭಿನ್ನೇ ತಥಾ ಲೋಭೇ ಕಾರಣಂ ಕಾಲ ಏವ ಚ ॥೧೧॥

ಅಜ್ಞಾನಾತ್ಮಕವಾದ ಲೋಭಕ್ಕೆ ಮೋಹವೇ (ಕಾರ್ಯಾಕಾರ್ಯ ವಿವೇಕವಿಲ್ಲದಿರುವುದೇ) ಮೂಲಕಾರಣ. ಆದುದರಿಂದ ಮೋಹಸಂಯೋಗವೇ ಅಜ್ಞಾನಯೋಗ. ಕಾಲರೂಪದ ನಿಮಿತ್ತದಿಂದ ಮೋಹಾತ್ಮಕವಾದ ಅಜ್ಞಾನವು ಮನುಷ್ಯನ ದುರ್ಗತಿಗಳಿಗೆ ಕಾರಣವಾಗುತ್ತದೆ. ಲೋಭವು ಛಿನ್ನವಾದಲ್ಲಿ, ಭಿನ್ನವಾದಲ್ಲಿ (ಅಪೇಕ್ಷಿಸಿದ ವಸ್ತುವನ್ನು ಪಡೆದುಕೊಳ್ಳಲು ವಿಘ್ನವುಂಟಾದಲ್ಲಿ)–ಲೋಭಕ್ಕೆ ಕಾರಣವಾದ ಕಾಲವೇ ಮೋಹರೂಪವಾದ ಅಜ್ಞಾನಕ್ಕೂ ಕಾರಣವಾಗುತ್ತದೆ.

ತಸ್ಮಾಜ್ಞಾನಾದ್ಧಿ ಲೋಭೋ ಹಿ ಲೋಭಾದಜ್ಞಾನಮೇವ ಚ ।
ಸರ್ವದೋಷಾಸ್ತಥಾ ಲೋಭಾತ್ತಸ್ಮಾಲ್ಲೋಭಂ ವಿವರ್ಜಯೇತ್ ॥೧೨॥

ಮೂಢನಾದವನಿಗೆ ಅಜ್ಞಾನದಿಂದ ಲೋಭವೂ–ಲೋಭದಿಂದ ಅಜ್ಞಾನವೂ ಉಂಟಾಗುತ್ತದೆ. ಸಕಲವಿಧವಾದ ದೋಷಗಳೂ ಲೋಭದಿಂದಲೇ ಉಂಟಾಗುತ್ತವೆ. ಆದುದರಿಂದ ಲೋಭವನ್ನು ವಿಸರ್ಜಿಸಬೇಕು.

(ಅಜ್ಞಾನವು ಲೋಭಕ್ಕೆ ಕಾರಣ ; ಲೋಭವು ಅಜ್ಞಾನದ ಫಲ ;

ಹಾಗೆಯೇ ಲೋಭವು ಅಜ್ಞಾನಕ್ಕೆ ಕಾರಣ ; ಅಜ್ಞಾನವು ಲೋಭದ ಫಲ– ಹೀಗೆ ಧರ್ಮರಾಜನ ಹನ್ನೆರಡು ಪ್ರಶ್ನೆಗಳಿಗೂ ಭೀಷ್ಮನು ಉತ್ತರವನ್ನು ಕೊಟ್ಟಿರುತ್ತಾನೆ.)

ಯುಧಿಷ್ಠಿರ! ಜನಕ, ಯುವನಾಶ್ವ, ವೃಷಾದರ್ಭಿ, ಪ್ರಸೇನಜಿತ್ ಮತ್ತು ಇತರ ಅನೇಕ ರಾಜರೂ ಲೋಭವನ್ನು ನಾಶಗೊಳಿಸಿಕೊಂಡು ಸ್ವರ್ಗಲೋಕಕ್ಕೆ ಹೋಗಿರುವರು. ನೀನೂ ಕೂಡ ಸಂಪೂರ್ಣವಾಗಿ ಪ್ರಯತ್ನಮಾಡಿ ಪ್ರತ್ಯಕ್ಷವಾಗಿಯೇ ಕಾಣುತ್ತಿರುವ ಈ ಲೋಭವನ್ನು ವಿಸರ್ಜಿಸು. ಲೋಭವನ್ನು ಪರಿತ್ಯಜಿಸಿದನಂತರ ಈ ಲೋಕದಲ್ಲಿಯೂ ಸುಖವಾಗಿದ್ದು ಅವಸಾನಾನಂತರದಲ್ಲಿ ಪರಲೋಕದಲ್ಲಿಯೂ ಆನಂದದಿಂದ ವಿಹರಿಸುವೆ."

ಗಿ೫೯ನೆಯ ಅಧ್ಯಾಯವು ಮುಗಿಯಿತು.

೧೬೦ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಮನಸ್ಸು ಮತ್ತು ಇಂದ್ರಿಯಗಳಿಗೆ ಸಂಯಮರೂಪವಾದ ದಮದ ಮಾಹಾತ್ಮ್ಯ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸ್ವಾಧ್ಯಾಯೇ ಕೃತಯತ್ನಸ್ಯ ನರಸ್ಯ ಚ ಪಿತಾಮಹ ।
ಧರ್ಮಕಾಮಸ್ಯ ಧರ್ಮಾತ್ಮನ್ಕಿಂ ನು ಶ್ರೇಯ ಇಹೋಚ್ಯತೇ ॥೧॥

"ಧರ್ಮಾತ್ಮನೇ! ಪಿತಾಮಹ! ಒಬ್ಬ ಮನುಷ್ಯನು ಅಧ್ಯಯನಮಾಡಲು ಪ್ರಯತ್ನಿಸುತ್ತಿರುತ್ತಾನೆ. (ಅಧ್ಯಯನಶೀಲನಾಗಿರುತ್ತಾನೆ.) ಧರ್ಮದ ಕಾರ್ಯಗಳನ್ನೇ ಮಾಡಬೇಕೆಂಬ ಅಭಿಲಾಷೆಯುಳ್ಳವನಾಗಿರುತ್ತಾನೆ. ಅಂತಹ ಮನುಷ್ಯನಿಗೆ ಪ್ರಪಂಚದಲ್ಲಿ ಯಾವುದು ಶ್ರೇಯಸ್ಕರ?

ಬಹುಧಾ ದರ್ಶನೇ ಲೋಕೇ ಶ್ರೇಯೋ ಯದಿಹ ಮನ್ಯಸೇ ।
ಅಸ್ಮಿನ್ಲೋಕೇ ಪರೇ ಚೈವ ತನ್ಮೇ ಬ್ರೂಹಿ ಪಿತಾಮಹ ॥೨॥

ಈ ಜಗತ್ತಿನಲ್ಲಿ ಶ್ರೇಯಸ್ಸನ್ನು ಪ್ರತಿಪಾದಿಸುವ ಅನೇಕದರ್ಶನಗಳಿವೆ. (ಅನೇಕ ಮತಗಳಿವೆ.) ಆದರೆ ಇಹ-ಪರಗಳೆರಡರಲ್ಲಿಯೂ ಕಲ್ಯಾಣಕರ

ವಾದ ಶ್ರೇಯಸ್ಸು ಯಾವುದೆಂದು ನೀನು ಭಾವಿಸುವೆಯೋ–ಅಂತಹ ಶ್ರೇಯಸ್ಸಿನ ವಿಷಯವಾಗಿ ನನಗೆ ಹೇಳು.

ಮಹಾನಯಂ ಧರ್ಮಪಥೋ ಬಹುಶಾಖಶ್ಚ ಭಾರತ ।
ಕಿಂಸ್ವಿದೇವೇಹ ಧರ್ಮಾಣಾಮನುಷ್ಠೇಯತಮಂ ಮತಮ್ ॥೩॥

ಧರ್ಮದ ಈ ಮಾರ್ಗವು ಬಹಳ ವಿಸ್ತಾರವಾಗಿದೆ. ಮೇಲಾಗಿ ಈ ಮಾರ್ಗದಲ್ಲಿ ಅನೇಕ ಕವಲುದಾರಿಗಳೂ ಒಡೆದುಕೊಂಡಿವೆ. ಈ ಅಮಿತ ವಾದ ಧರ್ಮಗಳಲ್ಲಿ ಸರ್ವೋತ್ತಮವಾದ, ಅವಶ್ಯವಾಗಿ ಪಾಲಿಸಲೇಬೇಕಾದ ಧರ್ಮವು ಯಾವುದೆಂಬುದನ್ನು ಹೇಳು.

ಧರ್ಮಸ್ಯ ಮಹತೋ ರಾಜನ್ಬಹುಶಾಖಸ್ಯ ತತ್ತ್ವತಃ ।
ಯನ್ಮೂಲಂ ಪರಮಂ ತಾತ ತತ್ಸರ್ವಂ ಬ್ರೂಹ್ಯಶೇಷತಃ ॥೪॥

ಅನೇಕ ಶಾಖೆಗಳನ್ನೊಳಗೊಂಡಿರುವ ಈ ಮಹಾಧರ್ಮಕ್ಕೆ ವಾಸ್ತವವಾಗಿ ಶ್ರೇಷ್ಠವಾದ ಮೂಲವು ಯಾವುದು? ಈ ಎಲ್ಲ ವಿಷಯ ಗಳನ್ನೂ ನನಗೆ ಸಂಪೂರ್ಣವಾಗಿ ತಿಳಿಸು.?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ನಾನು ನಿನಗೆ ಯಾವ ಧರ್ಮಾನುಸರಣೆಯಿಂದ ಇಹ-ಪರಗಳೆರಡರಲ್ಲಿಯೂ ಕಲ್ಯಾಣಕರವಾದ ಶ್ರೇಯಸ್ಸು ಲಭಿಸುವುದೆಂಬು ದನ್ನು ಅತ್ಯಂತ ಸಂತೋಷದಿಂದ ಹೇಳುತ್ತೇನೆ. ಅಮೃತವನ್ನು ಕುಡಿದು ತೃಪ್ತಿಹೊಂದುವಂತೆ–ನೀನು ಈ ಜ್ಞಾನಾಮೃತವನ್ನು ಕುಡಿದು ಜ್ಞಾನಿಯಾಗಿ ತೃಪ್ತಿಯನ್ನು ಹೊಂದುವೆ.

ಧರ್ಮಸ್ಯ ವಿಧಯೋ ನೈಕೇ ಯೇ ವೈ ಪ್ರೋಕ್ತಾ ಮಹರ್ಷಿಭಿಃ ।
ಸ್ವಂ ಸ್ವಂ ವಿಜ್ಞಾನಮಾಶ್ರಿತ್ಯ ದಮಸ್ತೇಷಾಂ ಪರಾಯಣಮ್ ॥೬॥

ಯುಧಿಷ್ಠಿರ! ನೀನು ಹೇಳಿದಂತೆ ಧರ್ಮದ ವಿಧಿಗಳು ಒಂದೇ ಇರುವು ದಿಲ್ಲ. ಹಲವಾರು ಪ್ರಕಾರಗಳಾಗಿವೆ. ತಮ್ಮ-ತಮ್ಮ ಅನುಭವಗಳನ್ನೂ, ವಿಜ್ಞಾನವನ್ನೂ ಆಶ್ರಯಿಸಿ ಮಹರ್ಷಿಗಳು ಅನೇಕಪ್ರಕಾರವಾಗಿ ಧಾರ್ಮಿಕ ವಿಧಿಗಳನ್ನು ಹೇಳಿದ್ದಾರೆ. ಆದರೆ ಇಂದ್ರಿಯಸಂಯಮವೊಂದೇ (ದಮವೇ)

ಎಲ್ಲ ಧರ್ಮಗಳಿಗೂ ಆಶ್ರಯಭೂತವಾಗಿದೆ. ಎಲ್ಲ ಧರ್ಮಗಳೂ ದಮ ಧರ್ಮದಲ್ಲಿಯೇ ಅಂತರ್ಭೂತವಾಗಿವೆ. (ಇಂದ್ರಿಯಸಂಯಮವೇ ಎಲ್ಲ ಧರ್ಮಗಳಿಗೂ ಆಧಾರ.)

ದಮಂ ನಿಃಶ್ರೇಯಸಂ ಪ್ರಾಹುರ್ವೃದ್ಧಾ ನಿಶ್ಚಿತದರ್ಶಿನಃ ।
ಬ್ರಾಹ್ಮಣಸ್ಯ ವಿಶೇಷೇಣ ದಮೋ ಧರ್ಮಃ ಸನಾತನಃ ॥೭॥

ಧರ್ಮದ ಸಿದ್ಧಾಂತವನ್ನು ತಿಳಿದಿರುವ ವೃದ್ಧರು ದಮವನ್ನು ನಿಃಶ್ರೇಯಸವೆಂದು (ಪರಮಕಲ್ಯಾಣಗುಣವೆಂದು) ಹೇಳುತ್ತಾರೆ. ಅದ ರಲ್ಲಿಯೂ ವಿಶೇಷವಾಗಿ ಬ್ರಾಹ್ಮಣನಿಗೆ ದಮವು ಸನಾನತಧರ್ಮವೇ ಆಗಿದೆ.

ದಮಾತ್ತಸ್ಯ ಕ್ರಿಯಾಸಿದ್ಧಿರ್ಯಥಾವದುಪಲಭ್ಯತೇ ।
ದಮೋ ದಾನಂ ತಥಾ ಯಜ್ಞಾನಧೀತಂ ಚಾತಿವರ್ತತೇ ॥೮॥

ದಮದಿಂದಲೇ (ಇಂದ್ರಿಯನಿಗ್ರಹದಿಂದಲೇ) ಯಥಾವತ್ತಾಗಿ ಬ್ರಾಹ್ಮಣನ ಕಾರ್ಯಸಿದ್ಧಿಯಾಗುತ್ತದೆ. ದಮವು ದಾನವನ್ನೂ, ಯಜ್ಞಗಳನ್ನೂ, ವೇದಾಧ್ಯಯನವನ್ನೂ ಮೀರಿಸಿರುತ್ತದೆ. (ದಾನ-ಯಜ್ಞಾ ಧ್ಯಯನಗಳಿಗಿಂತಲೂ ದಮವೇ ಶ್ರೇಷ್ಠವಾದುದು.)

ದಮಸ್ತೇಜೋ ವರ್ಧಯತಿ ಪವಿತ್ರಂ ಚ ದಮಃ ಪರಮ್ ।
ವಿಪಾಪ್ಮಾ ತೇಜಸಾ ಯುಕ್ತಃ ಪುರುಷೋ ವಿನ್ದತೇ ಮಹತ್ ॥೯॥

ದಮವು ತೇಜಸ್ಸನ್ನು ಹೆಚ್ಚಿಸುತ್ತದೆ. ದಮವು ಕಾರ್ಯಸಿದ್ಧಿಗೆ ಪರಮಪವಿತ್ರವಾದ ಸ್ಥಾನವಾಗಿದೆ. ಪುರುಷನು ಇಂದ್ರಿಯಗಳ ನಿಗ್ರಹದಿಂದ ಪಾಪರಹಿತನಾಗಿ, ತೇಜಸ್ಸಿನಿಂದಲೂ ಯುಕ್ತನಾಗಿ ಪರಮಪದಪ್ರಾಪ್ತಿಯೆಂಬ ಮಹತ್ತಾದ ಫಲವನ್ನು ಹೊಂದುತ್ತಾನೆ.

ದಮೇನ ಸದೃಶಂ ಧರ್ಮಂ ನಾನ್ಯಂ ಲೋಕೇಷು ಶುಶ್ರುಮ ।
ದಮೋ ಹಿ ಪರಮೋ ಲೋಕೇ ಪ್ರಶಸ್ತಃ ಸರ್ವಧರ್ಮಿಣಾಮ್ ॥೧೦॥

ಈ ಪ್ರಪಂಚದಲ್ಲಿ ದಮಕ್ಕೆ ಸಾಟಿಯಾದ ಬೇರೊಂದು ಧರ್ಮವಿರುವು ದೆಂಬುದನ್ನೇ ನಾವು ಕೇಳಿಲ್ಲ. ಈ ಪ್ರಪಂಚದಲ್ಲಿರುವ ಎಲ್ಲ ಧರ್ಮಗಳವರಿಗೂ ದಮವೇ ಶ್ರೇಷ್ಠವೂ ಮತ್ತು ಪ್ರಶಸ್ತವೂ ಆಗಿರುವುದು.

ಪ್ರೇತ್ಯ ಚಾತ್ರ ಮನುಷ್ಯೇನ್ದ್ರ ಪರಮಂ ವಿನ್ದತೇ ಸುಖಮ್ ।
ದಮೇನ ಹಿ ಸಮಾಯುಕ್ತೋ ಮಹಾನ್ತಂ ಧರ್ಮಮಶ್ನುತೇ ॥೧೧॥

ಮನುಷ್ಯೇಂದ್ರನೇ! ದಮದಿಂದ ಅರ್ಥಾತ್ ಇಂದ್ರಿಯಗಳ ಮತ್ತು ಮನಸ್ಸಿನ ಸಂಯಮದಿಂದ ಮನುಷ್ಯನು ಮಹತ್ತರವಾದ ಧರ್ಮವನ್ನು ಹೊಂದುತ್ತಾನೆ. ದಾಂತನಾದವನು ಇಹ-ಪರಗಳೆರಡರಲ್ಲಿಯೂ ಪರಮ ಸುಖವನ್ನು ಪಡೆಯುತ್ತಾನೆ.

ಸುಖಂ ದಾನ್ತಃ ಪ್ರಸ್ವಪಿತಿ ಸುಖಂ ಚ ಪ್ರತಿಬುಧ್ಯತೇ ।
ಸುಖಂ ಪರ್ಯೇತಿ ಲೋಕಾಂಶ್ಚ ಮನಶ್ಚಾಸ್ಯ ಪ್ರಸೀದತಿ ॥೧೨॥

ಮನಸ್ಸನ್ನೂ ಇಂದ್ರಿಯಗಳನ್ನೂ ಹತೋಟಿಯಲ್ಲಿಟ್ಟುಕೊಂಡಿರುವವನು–ಸುಖವಾಗಿ ಮಲಗುತ್ತಾನೆ. ಸುಖದಿಂದ ಎಚ್ಚರಗೊಳ್ಳುತ್ತಾನೆ. ಸುಖವಾಗಿ ಲೋಕಗಳನ್ನು ಪರ್ಯಟನಮಾಡುತ್ತಾನೆ. ದಾಂತನ ಮನಸ್ಸು ಯಾವಾಗಲೂ ಪ್ರಸನ್ನವಾಗಿಯೇ ಇರುತ್ತದೆ.

ಅದಾನ್ತಃ ಪುರುಷಃ ಕ್ಲೇಶಮಭೀಕ್ಷ್ಣಂ ಪ್ರತಿಪದ್ಯತೇ ।
ಅನರ್ಥಾಂಶ್ಚ ಬಹೂನನ್ಯಾನ್ಪ್ರಸೃಜತ್ಯಾತ್ಮದೋಷಜಾನ್ ॥೧೩॥

ಯಾವನಿಗೆ ಮನಸ್ಸೂ ಮತ್ತು ಇಂದ್ರಿಯಗಳೂ ಅಧೀನವಾಗಿಲ್ಲವೋ ಅವನು ಕ್ಲೇಶಗಳನ್ನು ಪದೇ-ಪದೇ ಪಡೆದುಕೊಳ್ಳುತ್ತಲೇ ಇರುತ್ತಾನೆ. ಅವನು ತನ್ನ ದೋಷಗಳಿಂದಲೇ ಹುಟ್ಟಿದ ಅನೇಕವಿಧವಾದ ಅನರ್ಥಗಳನ್ನೂ ಸೃಷ್ಟಿಮಾಡುತ್ತಿರುತ್ತಾನೆ. (ಮನಸ್ಸು ಹತೋಟಿಯಲ್ಲಿಲ್ಲದಿದ್ದರೆ ಅದು ಸ್ವೇಚ್ಛೆಯಿಂದ ಹಲವು ಕಡೆಗಳಿಗೆ ಹರಿದುಹೋಗುತ್ತಿರುತ್ತದೆ. ಮನುಷ್ಯನನ್ನು ಕೋತಿಯಂತೆ ಆಡಿಸುತ್ತದೆ. ಮನಸ್ಸನ್ನೂ ಇಂದ್ರಿಯಗಳನ್ನೂ ಹತೋಟಿಯಲ್ಲಿ ಇಟ್ಟುಕೊಳ್ಳದ ಮನುಷ್ಯನು ಅವುಗಳ ತೃಪ್ತಿಗಾಗಿ ಅನೇಕ ವಿಧವಾದ ಪಾಪಕಾರ್ಯಗಳನ್ನು ಮಾಡುತ್ತಾನೆ.)

ಆಶ್ರಮೇಷು ಚತುರ್ಷ್ವಾಹುರ್ದಮಮೇವೋತ್ತಮಂ ವ್ರತಮ್ ।
ತಸ್ಯ ಲಿಙ್ಗಾನಿ ವಕ್ಷ್ಯಾಮಿ ಯೇಷಾಂ ಸಮುದಯೋ ದಮಃ ॥೧೪॥

ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ–ಈ ನಾಲ್ಕು

ಆಶ್ರಮಿಗಳಿಗೂ ದಮವೇ ಶ್ರೇಷ್ಠವಾದ ವ್ರತವೆಂದು ಹೇಳಿದ್ದಾರೆ. ಈಗ ನಾನು ಮನೋನಿಗ್ರಹ ಮತ್ತು ಇಂದ್ರಿಯನಿಗ್ರಹಗಳ ಲಕ್ಷಣಗಳನ್ನು ಹೇಳುತ್ತೇನೆ. ಈ ಲಕ್ಷಣಗಳ ಸಮುದಾಯಕ್ಕೇ ದಮವೆಂದು ಹೆಸರು.

ಕ್ಷಮಾ ಧೃತಿರಹಿಂಸಾ ಚ ಸಮತಾ ಸತ್ಯಮಾರ್ಜವಮ್ ।
ಇನ್ದ್ರಿಯಾಭಿಜಯೋ ದಾಕ್ಷ್ಯಂ ಮಾರ್ದವಂ ಹ್ರೀರಚಾಪಲಮ್ ॥೧೫॥

ಅಕಾರ್ಪಣ್ಯಮಸಂರಮ್ಭಃ ಸಂತೋಷಃ ಪ್ರಿಯವಾದಿತಾ ।
ಅವಿಹಿಂಸಾನಸೂಯಾ ಚಾಪ್ಯೇಷಾಂ ಸಮುದಯೋ ದಮಃ ॥೧೬॥

ಕ್ಷಮೆ, ಧೈರ್ಯ, ಅಹಿಂಸೆ, ಸಮತ್ವ, ಸತ್ಯನಿಷ್ಠೆ, ಸರಳತೆ, ಇಂದ್ರಿಯ ವಿಜಯ, ದಕ್ಷತೆ, ಮೃದುತ್ವ, ಲಜ್ಜೆ, ಚಪಲತೆಯಿಲ್ಲದಿರುವುದು, ಉದಾರತೆ, ಕೋಪವಿಲ್ಲದಿರುವುದು, ಸಂತೋಷ, ಪ್ರಿಯವಾದ ಮಾತುಗಳನ್ನಾಡುವುದು, ಯಾವ ಪ್ರಾಣಿಗೂ ಕಷ್ಟಕೊಡದಿರುವುದು, ಅಸೂಯೆಪಡದಿರುವುದು (ಇತರರಲ್ಲಿ ದೋಷವನ್ನು ಹುಡುಕದೇ ಇರುವುದು)–ಈ ಗುಣಗಳ ಸಮೂಹವೇ 'ದಮ'. ಈ ಎಲ್ಲ ಗುಣಗಳೂ ದಮದ ಲಕ್ಷಣಗಳಾಗಿವೆ ಅಥವಾ ಅಂಗಗಳಾಗಿವೆ.

ಗುರುಪೂಜಾ ಚ ಕೌರವ್ಯ ದಯಾ ಭೂತೇಷ್ವಪೈಶುನಮ್ ।
ಜನವಾದಂ ಮೃಷಾವಾದಂ ಸ್ತುತಿನಿನ್ದಾವಿಸರ್ಜನಮ್ ॥೧೭॥

ಕಾಮಂ ಕ್ರೋಧಂ ಚ ಲೋಭಂ ಚ ದರ್ಪಂ ಸ್ತಮ್ಭಂ ವಿಕತ್ಥನಮ್ ।
ರೋಷಮೀರ್ಷ್ಯಾವಮಾನಂ ಚ ನೈವ ದಾನ್ತೋ ನಿಷೇವತೇ ॥೧೮॥

ಕುರುನಂದನ! ದಾಂತನಿಗೆ–ಗುರುಜನರನ್ನು ಗೌರವಿಸಿ ಪೂಜಿಸುವ ಸ್ವಭಾವವಿರುತ್ತದೆ. ಪ್ರಾಣಿಗಳ ವಿಷಯದಲ್ಲಿ ದಯಾವಂತನಾಗಿರುತ್ತಾನೆ. ಚಾಡಿಯನ್ನು ಹೇಳುವ ಸ್ವಭಾವವಿರುವುದಿಲ್ಲ. ದಾಂತನು ಲೋಕನಿಂದೆಯನ್ನು ಮಾಡುವುದಿಲ್ಲ. ಸುಳ್ಳನ್ನು ಹೇಳುವುದಿಲ್ಲ. ಯಾರನ್ನೂ ಸ್ತುತಿಸುವುದೂ ಇಲ್ಲ ; ನಿಂದಿಸುವುದೂ ಇಲ್ಲ. ಕಾಮ, ಕ್ರೋಧ, ಲೋಭ, ದರ್ಪ, ಅವಿನಯ ಅಥವಾ ಜಡತೆ, ವ್ಯರ್ಥಪ್ರಲಾಪ, ರೋಷ, ಈರ್ಷ್ಯೆ, ಬೇರೆಯವ

ರಿಗೆ ಅವಮಾನಮಾಡುವುದು–ಈ ಗುಣಗಳನ್ನು ದಾಂತನಾದವನು ಯಾವುದೇ ಕಾರಣದಿಂದಲೂ ಆಶ್ರಯಿಸುವುದಿಲ್ಲ.

ಅನಿನ್ದಿತೋ ಹ್ಯಕಾಮಾತ್ಮಾ ನಾಲ್ಪೇಷ್ವರ್ಥ್ಯನಸೂಯಕಃ ।
ಸಮುದ್ರಕಲ್ಪಃ ಸ ನರೋ ನ ಕಥಂಚನ ಪೂರ್ಯತೇ ॥೧೯॥

ಇಂದ್ರಿಯಗಳನ್ನೂ ಮತ್ತು ಮನಸ್ಸನ್ನೂ ವಶಪಡಿಸಿಕೊಂಡಿರುವ ದಾಂತನನ್ನು ಯಾರೂ ನಿಂದಿಸುವುದಿಲ್ಲ. ಮನಸ್ಸನ್ನು ಜಯಿಸಿರುವುದರಿಂದಾಗಿ ಅವನ ಮನಸ್ಸಿನಲ್ಲಿ ಯಾವ ವಿಧವಾದ ಕಾಮನೆಗಳೂ ಇರುವುದಿಲ್ಲ. ಅತ್ಯಲ್ಪವಾದ ಪ್ರಯೋಜನಕ್ಕಾಗಿಯಾದರೂ ಅವನು ಬೇರೆಯವರ ಮುಂದೆ ಕೈಯೊಡ್ಡುವುದಿಲ್ಲ. ಅಥವಾ ತುಚ್ಛವಾದ ವಿಷಯಸುಖಗಳನ್ನು ಆಶಿಸುವುದಿಲ್ಲ. ಇತರರಲ್ಲಿ ದೋಷವೆಣಿಸುವುದಿಲ್ಲ. ದಾಂತನು ಸಮುದ್ರ ಸದೃಶನಾಗಿ ಗಾಂಭೀರ್ಯದಿಂದಿರುತ್ತಾನೆ. ಅನಂತಜಲರಾಶಿಯನ್ನು ಹೊಂದಿಯೂ ಸಮುದ್ರವು ಪೂರ್ಣವಾಗದಿರುವಂತೆ–ನಿರಂತರವಾದ ಧರ್ಮಸಂಚಯದಿಂದಲೂ ದಾಂತನು ತೃಪ್ತನಾಗುವುದಿಲ್ಲ.

ಅಹಂ ತ್ವಯಿ ಮಯಿ ತ್ವಂ ಚ ಮಯಿ ತೇ ತೇಷು ಚಾಪ್ಯಹಮ್ ।
ಪೂರ್ವಸಮ್ಬನ್ಧಿಸಂಯೋಗಂ ನೈತದ್ದಾನ್ತೋ ನಿಷೇವತೇ ॥೨೦॥

'ನಾನು ನಿನ್ನವನಾಗಿದ್ದೇನೆ ; ನೀನು ನನ್ನವನಾಗಿರುವೆ. ನನ್ನಲ್ಲಿ ಅವರು ಅನುರಕ್ತರಾಗಿದ್ದಾರೆ. ಅವರಲ್ಲಿ ನಾನು ಅನುರಕ್ತನಾಗಿದ್ದೇನೆ'–ಇವೇ ಮುಂತಾಗಿ ಹೇಳಿಕೊಳ್ಳುವ ಪೂರ್ವಸಂಬಂಧಿಗಳ ಸಹವಾಸವನ್ನೂ ದಾಂತನಾದವನು ಆಶ್ರಯಿಸುವುದಿಲ್ಲ. (ದಾಂತನು ಅಹಂಕಾರ-ಮಮಕಾರಗಳನ್ನು ತೊರೆದವನಾದುದರಿಂದ ಅವನಿಗೆ ಇವರು ನಮ್ಮವರು–ಅವರು ಬೇರೆಯವರು ಎಂಬ ಭೇದಭಾವನೆಯೇ ಇರುವುದಿಲ್ಲ.)

ಸರ್ವಾ ಗ್ರಾಮ್ಯಾಸ್ತಥಾರಣ್ಯಾ ಯಾಶ್ಚ ಲೋಕೇ ಪ್ರವೃತ್ತಯಃ ।
ನಿನ್ದಾಂ ಚೈವ ಪ್ರಶಂಸಾಂ ಚ ಯೋ ನಾಶ್ರಯತಿ ಮುಚ್ಯತೇ ॥೨೧॥

ಪ್ರಪಂಚದಲ್ಲಿ ಗ್ರಾಮವಾಸಿಗಳ ಮತ್ತು ಅರಣ್ಯವಾಸಿಗಳ ಯಾವ ಪ್ರವೃತ್ತಿಯಿರುವುದೋ–ಆ ಪ್ರವೃತ್ತಿಯನ್ನು ದಾಂತನಾದವನು ಆಶ್ರಯಿಸುವುದಿಲ್ಲ. ಇತರರ ನಿಂದೆಯನ್ನೂ–ಪ್ರಶಂಸೆಯನ್ನೂ ಗಣನೆಗೆ ತೆಗೆದು

ಕೊಳ್ಳುವುದಿಲ್ಲ. (ಪರನಿಂದೆಯನ್ನೂ ಪರಪ್ರಶಂಸೆಯನ್ನೂ ಮಾಡುವುದಿಲ್ಲ.) ಅಂತಹ ದಾಂತನು ಸಕಲಪಾಪಗಳಿಂದಲೂ ಮುಕ್ತನಾಗುತ್ತಾನೆ.

ಮೈತ್ರೋಽಥ ಶೀಲಸಮ್ಪನ್ನಃ ಪ್ರಸನ್ನಾತ್ಮಾತ್ಮವಿಚ್ಚ ಯಃ ।
ಮುಕ್ತಸ್ಯ ವಿವಿಧೈಃ ಸಙ್ಗೈಸ್ತಸ್ಯ ಪ್ರೇತ್ಯ ಫಲಂ ಮಹತ್ ॥೨೨॥

ಯಾವನು ಎಲ್ಲರ ವಿಷಯದಲ್ಲಿಯೂ ಮಿತ್ರಭಾವದಿಂದಿರುವನೋ, ಶೀಲಸಂಪನ್ನನೋ, ಯಾವಾಗಲೂ ಪ್ರಸನ್ನವಾದ ಮನಸ್ಸಿನಿಂದ ಕೂಡಿರುವನೋ, ನಾನಾಪ್ರಕಾರವಾದ ಆಸಕ್ತಿಗಳಿಂದ ಮುಕ್ತನಾಗಿರುವನೋ, ಆತ್ಮಜ್ಞಾನಿಯೋ–ಅಂತಹವನು ಮರಣಾನಂತರದಲ್ಲಿ ಮೋಕ್ಷರೂಪವಾದ ಮಹಾಫಲವನ್ನು ಪಡೆದುಕೊಳ್ಳುತ್ತಾನೆ.

ಸುವೃತ್ತಃ ಶೀಲಸಮ್ಪನ್ನಃ ಪ್ರಸನ್ನಾತ್ಮಾತ್ಮವದ್ಬುಧಃ ।
ಪ್ರಾಪ್ಯೇಹ ಲೋಕೇ ಸತ್ಕಾರಂ ಸುಗತಿಂ ಪ್ರತಿಪದ್ಯತೇ ॥೨೩॥

ಯಾರು ಸದಾಚಾರಸಂಪನ್ನನೋ, ಶೀಲಸಂಪನ್ನನೋ, ಪ್ರಸನ್ನಚಿತ್ತನೋ, ಆತ್ಮತತ್ತ್ವವನ್ನು ತಿಳಿದಿರುವನೋ–ಅಂತಹ ದಾಂತನಾದ ವಿದ್ವಾಂಸನು ಈ ಲೋಕದಲ್ಲಿ ಸಕಲರಿಂದಲೂ ಸತ್ಕೃತನಾಗಿ ಅವಸಾನಾನಂತರದಲ್ಲಿ ಸದ್ಗತಿಯನ್ನು ಹೊಂದುತ್ತಾನೆ.

ಕರ್ಮ ಯಚ್ಛುಭಮೇವೇಹ ಸದ್ಭಿರಾಚರಿತಂ ಚ ಯತ್ ।
ತದೇವ ಜ್ಞಾನಯುಕ್ತಸ್ಯ ಮುನೇರ್ವರ್ತ್ಮ ನ ಹೀಯತೇ ॥೨೪॥

ಈ ಪ್ರಪಂಚದಲ್ಲಿ ಯಾವುದು ಶುಭಕರ್ಮವೋ, ಸತ್ಪುರುಷರಿಂದ ಆಚರಿಸಲ್ಪಡುತ್ತಿರುವುದೋ–ಆ ಶುಭಕರ್ಮವೇ ಜ್ಞಾನಯುಕ್ತನಾದ ಮುನಿಯ ಜೀವನಮಾರ್ಗವಾಗಿರುತ್ತದೆ. ಸ್ವಾಭಾವಿಕವಾಗಿಯೇ ಅವನು ಆ ಶುಭಕರ್ಮಗಳನ್ನು ಮಾಡುತ್ತಿರುತ್ತಾನೆ. ಆ ಶುಭಕರ್ಮಗಳಿಂದ ಅವನು ಯಾವಾಗಲೂ ಚ್ಯುತನಾಗುವುದಿಲ್ಲ.

ನಿಷ್ಕ್ರಮ್ಯ ವನಮಾಸ್ಥಾಯ ಜ್ಞಾನಯುಕ್ತೋ ಜಿತೇನ್ದ್ರಿಯಃ ।
ಕಾಲಾಕಾಂಕ್ಷೀ ಚರತ್ಯೇವಂ ಬ್ರಹ್ಮಭೂಯಾಯ ಕಲ್ಪತೇ ॥೨೫॥

ಜ್ಞಾನಸಂಪನ್ನನಾದ, ಜಿತೇಂದ್ರಿಯನಾದ ಪುರುಷನು ಮನೆಯಿಂದ ಹೊರಟು ಅರಣ್ಯವನ್ನು ಆಶ್ರಯಿಸಿ, ಮೃತ್ಯುವು ಬರುವ ಕಾಲವನ್ನು

ಪ್ರತೀಕ್ಷಿಸುತ್ತಾ ಏಕಾಕಿಯಾಗಿ ಸಂಚರಿಸುತ್ತಿರುತ್ತಾನೆ. ಹೀಗಿರುವ ಅವನು ಬ್ರಹ್ಮಭಾವವನ್ನು ಹೊಂದಲು ಸಮರ್ಥನಾಗುತ್ತಾನೆ.

ಅಭಯಂ ಯಸ್ಯ ಭೂತೇಭ್ಯೋ ಭೂತಾನಾಮಭಯಂ ಯತಃ ।
ತಸ್ಯ ದೇಹಾದ್ವಿಮುಕ್ತಸ್ಯ ಭಯಂ ನಾಸ್ತಿ ಕುತಶ್ಚನ ॥೨೬॥

ಯಾವನಿಗೆ ಇತರ ಪ್ರಾಣಿಗಳಿಂದ ಭಯವಿಲ್ಲವೋ, ಯಾವನಿಂದ ಇತರ ಪ್ರಾಣಿಗಳಿಗೂ ಭಯವಿಲ್ಲವೋ–ಅಂತಹ ದೇಹಾಭಿಮಾನದಿಂದ ರಹಿತನಾದ ದಾಂತನಿಗೆ ಯಾವ ಕಡೆಯಿಂದಲೂ ಭಯವಿರುವುದಿಲ್ಲ.

ಅವಾಚಿನೋತಿ ಕರ್ಮಾಣಿ ನ ಚ ಸಮ್ಪ್ರಚಿನೋತಿ ಹ ।
ಸಮಃ ಸರ್ವೇಷು ಭೂತೇಷು ಮೈತ್ರಾಯಣಗತಿಶ್ಚರೇತ್ ॥೨೭॥

ದಾಂತನು ಪ್ರಾರಬ್ಧಕರ್ಮಗಳೆಲ್ಲವನ್ನೂ ಅನುಭವಿಸಿ ಕರ್ಮವನ್ನು ಕಳೆದುಕೊಳ್ಳುತ್ತಾನೆ. ಕರ್ತೃತ್ವಾಭಿಮಾನದಿಂದಲೂ ಮತ್ತು ಫಲಾಸಕ್ತಿಯಿಂದಲೂ ರಹಿತನಾಗಿದ್ದು ಹೊಸದಾದ ಶುಭಾಶುಭಕರ್ಮಗಳ ಸಂಚಯನವನ್ನು ಮಾಡಿಕೊಳ್ಳುವುದಿಲ್ಲ. ಸರ್ವಪ್ರಾಣಿಗಳಲ್ಲಿಯೂ ಸಮಾನವಾದ ದೃಷ್ಟಿಯುಳ್ಳವನಾಗಿರುತ್ತಾ, ಮಿತ್ರನಂತೆ ಎಲ್ಲ ಪ್ರಾಣಿಗಳಿಗೂ ಅಭಯದಾನ ಮಾಡುತ್ತಾ ಲೋಕದಲ್ಲಿ ಸಂಚರಿಸುತ್ತಿರುತ್ತಾನೆ.

ಶಕುನೀನಾಮಿವಾಕಾಶೇ ಜಲೇ ವಾರಿಚರಸ್ಯ ಚ ।
ಯಥಾ ಗತಿರ್ನ ದೃಶ್ಯೇತ ತಥಾ ತಸ್ಯ ನ ಸಂಶಯಃ ॥೨೮॥

ಆಕಾಶದಲ್ಲಿ ಹಾರುವ ಪಕ್ಷಿಗಳ ಮತ್ತು ನೀರಿನಲ್ಲಿ ಸಂಚರಿಸುವ ಮೀನು ಮುಂತಾದ ಜಲಚರಗಳ ಪದಚಿಹ್ನೆಗಳು ಹೇಗೆ ಅದೃಶ್ಯವಾಗಿರುತ್ತದೆಯೋ–ಹಾಗೆಯೇ ಜ್ಞಾನಿಯ ಮಾರ್ಗವೂ ಅದೃಶ್ಯವಾಗಿಯೇ ಇರುತ್ತದೆ. ಜ್ಞಾನಿಯ ಮಾರ್ಗವನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಲ್ಲಿ ಸಂಶಯವೇ ಇಲ್ಲ.

ಗೃಹಾನುತ್ಸೃಜ್ಯ ಯೋ ರಾಜನ್ಮೋಕ್ಷಮೇವಾಭಿಪದ್ಯತೇ ।
ಲೋಕಾಸ್ತೇಜೋಮಯಾಸ್ತಸ್ಯ ಕಲ್ಪನ್ತೇ ಶಾಶ್ವತೀಃ ಸಮಾಃ ॥೨೯॥

ಸಂನ್ಯಸ್ಯ ಸರ್ವಕರ್ಮಾಣಿ ಸಂನ್ಯಸ್ಯ ವಿಧಿವತ್ತಪಃ ।
ಸಂನ್ಯಸ್ಯ ವಿವಿಧಾ ವಿದ್ಯಾಃ ಸರ್ವಂ ಸಂನ್ಯಸ್ಯ ಚೈವ ಹ ॥೩೦॥

ಯುಧಿಷ್ಠಿರ! ಯಾವ ಆತ್ಮಜ್ಞಾನಿಯಾದ ಪುರುಷನು ಎಲ್ಲ ಕರ್ಮಗಳನ್ನೂ, ತಪಸ್ಸನ್ನೂ, ನಾನಾವಿಧವಾದ ವಿದ್ಯೆಗಳನ್ನೂ ವಿಧಿವತ್ತಾಗಿ ಸಂನ್ಯಾಸಮಾಡಿ (ಸರ್ವಸಂಗಪರಿತ್ಯಾಗಿಯಾದ ಸಂನ್ಯಾಸಿಯಾಗಿ) ಮನೆ-ಮಠಗಳನ್ನು ಬಿಟ್ಟು ಮೋಕ್ಷಮಾರ್ಗವನ್ನೇ ಆಶ್ರಯಿಸುವನೋ–ಅಂತಹವನಿಗೆ ಅನಂತವರ್ಷಗಳವರೆಗೂ ದಿವ್ಯವಾದ, ತೇಜೋಮಯವಾದ ಲೋಕಗಳು ಸಿದ್ಧವಾಗಿರುತ್ತವೆ.

ಕಾಮೇ ಶುಚಿರನಾವೃತ್ತಃ ಪ್ರಸನ್ನಾತ್ಮಾತ್ಮವಿಚ್ಛುಚಿಃ ।
ಪ್ರಾಪ್ಯೇಹ ಲೋಕೇ ಸತ್ಕಾರಂ ಸ್ವರ್ಗಂ ಸಮಭಿಪದ್ಯತೇ ॥೩೧॥

ಯಾವನ ಆಚಾರ-ವಿಚಾರಗಳು ಶುದ್ಧವಾಗಿರುವುವೋ, ಅಂತಃಕರಣವು ನಿರ್ಮಲವಾಗಿರುವುದೋ, ಯಾವನು ಶುದ್ಧವಾದ ಕಾಮನೆಗಳುಳ್ಳವನಾಗಿರುವನೋ, ಭೋಗಗಳಿಂದ ಪರಾಙ್ಮುಖನಾಗಿರುವನೋ–ಅಂತಹ ಆತ್ಮವಿದನಾದ ಪುರುಷನು ಈ ಲೋಕದಲ್ಲಿ ಸರ್ವರಿಂದಲೂ ಸತ್ಕೃತನಾಗಿ ಅವಸಾನಾನಂತರದಲ್ಲಿ ಸ್ವರ್ಗವನ್ನು ಪಡೆದುಕೊಳ್ಳುತ್ತಾನೆ.

ಯಚ್ಚ ಪೈತಾಮಹಂ ಸ್ಥಾನಂ ಬ್ರಹ್ಮರಾಶಿಸಮುದ್ಭವಮ್ ।
ಗುಹಾಯಾಂ ಪಿಹಿತಂ ನಿತ್ಯಂ ತದ್ದಮೇನಾಭಿಗಮ್ಯತೇ ॥೩೨॥

ಬ್ರಹ್ಮರಾಶಿಯಿಂದ ಉತ್ಪನ್ನವಾಗಿರುವ ಪಿತಾಮಹನಾದ ಬ್ರಹ್ಮನ ಯಾವ ಸ್ಥಾನವಿದೆಯೋ–ಅದು ಹೃದಯಗುಹೆಯಲ್ಲಿ ಅಡಗಿಕೊಂಡಿದೆ. ಹೃದಯದಲ್ಲಡಗಿರುವ ಆ ಪರಬ್ರಹ್ಮವಸ್ತುವು ದಮದಿಂದಲೇ (ಇಂದ್ರಿಯ ಸಂಯಮದಿಂದಲೂ–ಮನೋನಿಗ್ರಹದಿಂದಲೂ) ಪ್ರಾಪ್ತವಾಗುತ್ತದೆ.

ಜ್ಞಾನಾರಾಮಸ್ಯ ಬುದ್ಧಸ್ಯ ಸರ್ವಭೂತಾವಿರೋಧಿನಃ ।
ನಾವೃತ್ತಿಭಯಮಸ್ತೀಹ ಪರಲೋಕಭಯಂ ಕುತಃ ॥೩೩॥

ಯಾವನಿಗೆ ಯಾವ ಪ್ರಾಣಿಯ ವಿಷಯದಲ್ಲಿಯೂ ವಿರೋಧವಿಲ್ಲವೋ ಮತ್ತು ಯಾವನು ಜ್ಞಾನಸ್ವರೂಪನಾದ ಆತ್ಮನಲ್ಲಿಯೇ ರಮಿಸುತ್ತಿರುವನೋ–ಅಂತಹ ಜ್ಞಾನಿಗೆ ಈ ಲೋಕದಲ್ಲಿ ಪುನಃ ಜನ್ಮವನ್ನು ಪಡೆಯುವ ಭಯವಿರುವುದಿಲ್ಲವೆಂದ ಮೇಲೆ ಅಂತಹವನಿಗೆ ಪರಲೋಕದ ಭಯವು ತಾನೇ ಎಲ್ಲಿದ್ದೀತು?

ಏಕ ಏವ ದಮೇ ದೋಷೋ ದ್ವಿತೀಯೋ ನೋಪಪದ್ಯತೇ ।
ಯದೇನಂ ಕ್ಷಮಯಾ ಯುಕ್ತಮಶಕ್ತಂ ಮನ್ಯತೇ ಜನಃ ॥೩೪॥

ದಮದಲ್ಲಿ ಒಂದೇ ಒಂದು ದೋಷವಿದೆ. ಎರಡನೆಯ ದೋಷವೇ ಇಲ್ಲ. ದಾಂತನಾದವನು ಸ್ವಾಭಾವಿಕವಾಗಿಯೇ ಕ್ಷಮಾಶೀಲನಾಗಿರುವುದ ರಿಂದ ಅವನ ಕ್ಷಮಾಗುಣವನ್ನು ನೋಡಿದ ಜನರು ಅವನನ್ನು ಅಶಕ್ತನೆಂದು ತಿಳಿಯುತ್ತಾರೆ.

ಏಕೋಽಸ್ಯ ಸುಮಹಾಪ್ರಾಜ್ಞ ದೋಷಃ ಸ್ಯಾತ್ಸುಮಹಾನ್ಗುಣಃ ।
ಕ್ಷಮಯಾ ವಿಪುಲಾ ಲೋಕಾಃ ಸುಲಭಾ ಹಿ ಸಹಿಷ್ಣುತಾ ॥೩೫॥

ಮಹಾಪ್ರಾಜ್ಞನಾದ ಯುಧಿಷ್ಠಿರನೇ! ದಮದ ಈ ಒಂದು ದೋಷವೇ ಮಹಾಗುಣವಾಗಿಯೂ ಪರಿಣಮಿಸಬಹುದು. ಹೇಗೆಂದರೆ : ಕ್ಷಮಾವಂತ ನಾದವನಿಗೆ ಅನೇಕ ಪುಣ್ಯಲೋಕಗಳು ಸುಲಭವಾಗಿ ಲಭಿಸುತ್ತವೆ. ಮೇಲಾಗಿ ಕ್ಷಮೆಯಿಂದ ಸಹಿಷ್ಣುತೆಯೂ ಉಂಟಾಗುತ್ತದೆ.

ದಾನ್ತಸ್ಯ ಕಿಮರಣ್ಯೇನ ತಥಾದಾನ್ತಸ್ಯ ಭಾರತ ।
ಯತ್ರೈವ ನಿವಸೇದ್ದಾನ್ತಸ್ತದರಣ್ಯಂ ಸ ಚಾಶ್ರಮಃ ॥೩೬॥

ದಾಂತನಾದವನಿಗೆ ಅರಣ್ಯದಿಂದೇನು ಪ್ರಯೋಜನವಿದೆ? ದಾಂತ ನಾದವನು ಅರಣ್ಯಕ್ಕೆ ಹೋಗಬೇಕಾದ ಅವಶ್ಯಕತೆಯಿಲ್ಲ. ಅದಾಂತನಿಗೂ (ಅಜಿತೇಂದ್ರಿಯನಿಗೂ) ಅರಣ್ಯವಾಸದಿಂದ ಯಾವ ಲಾಭವೂ ಇಲ್ಲ. ಏಕೆಂದರೆ ದಾಂತನು ಎಲ್ಲಿ ವಾಸಮಾಡುವನೋ–ಅದೇ ಅರಣ್ಯಪ್ರಾಯ ವಾಗಿರುತ್ತದೆ ಮತ್ತು ಅದೇ ಆಶ್ರಮವಾಗಿರುತ್ತದೆ. (ದಾಂತನಿಗೆ ಯಾವ ವಿಧವಾದ ಕಾಮನೆಗಳೂ ಇರುವುದಿಲ್ಲವಾದುದರಿಂದ ಭೋಗಸಾಮಗ್ರಿ ಗಳೆಲ್ಲವೂ ದಾಂತನ ದೃಷ್ಟಿಯಲ್ಲಿ ಕಲ್ಲು-ಮಣ್ಣು-ಹೆಂಟೆಗಳೇ ಆಗಿರುತ್ತವೆ. ಅರಣ್ಯವಾಸಕ್ಕೂ ಗ್ರಾಮವಾಸಕ್ಕೂ ಯಾವ ವಿಧವಾದ ವ್ಯತ್ಯಾಸವೂ ಅವನ ದೃಷ್ಟಿಯಿಂದ ಇರುವುದಿಲ್ಲ. ಆದುದರಿಂದ ಅವನಿರುವ ಸ್ಥಳವೇ ಅರಣ್ಯ. ಅವನು ವಾಸಮಾಡುವ ಸ್ಥಳವೇ ಆಶ್ರಮ")

ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ :

ಜನಮೇಜಯಮಹಾರಾಜ! ಭೀಷ್ಮನ ಮಾತುಗಳನ್ನು ಕೇಳಿ

ಯುಧಿಷ್ಠಿರನು ಪ್ರಹೃಷ್ಟನಾದನು ಮತ್ತು ಅಮೃತಪಾನಮಾಡಿದವನಂತೆ ಸಂಪೂರ್ಣವಾದ ತೃಪ್ತಿಯನ್ನು ಹೊಂದಿದನು. ಪುನಃ ಯುಧಿಷ್ಠಿರನು ಧರ್ಮಾತ್ಮರಲ್ಲಿ ಶ್ರೇಷ್ಠನಾದ ಭೀಷ್ಮನನ್ನು ಕುರಿತು ತಪಸ್ಸಿನ ವಿಷಯವಾಗಿ ಪ್ರಶ್ನಿಸಿದನು. ಭೀಷ್ಮನು ಯುಧಿಷ್ಠಿರನಿಗೆ ತಪಸ್ಸಿನ ಸಂಬಂಧವಾಗಿ ಎಲ್ಲ ವಿಷಯಗಳನ್ನೂ ಸವಿಸ್ತರವಾಗಿ ಹೇಳತೊಡಗಿದನು."

೧೬೦ನೆಯ ಅಧ್ಯಾಯವು ಮುಗಿಯಿತು.

೧೬೧ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ತಪಸ್ಸಿನ ಮಹಿಮೆ

ಭೀಷ್ಮನು ಹೇಳುತ್ತಾನೆ :

ಸರ್ವಮೇತತ್ತಪೋಮೂಲಂ ಕವಯಃ ಪರಿಚಕ್ಷತೇ ।
ನ ಹ್ಯತಪ್ತತಪಾ ಮೂಢಃ ಕ್ರಿಯಾಫಲಮವಾಪ್ನುತೇ ॥೧॥

"ಯುಧಿಷ್ಠಿರ! ಈ ಸಂಪೂರ್ಣಜಗತ್ತಿನ ಸೃಷ್ಟಿಗೆ ಮೂಲಕಾರಣವು ತಪಸ್ಸೇ ಆಗಿದೆಯೆಂದು ವಿದ್ವಾಂಸರು ಹೇಳುತ್ತಾರೆ. ತಪಸ್ಸನ್ನು ಮಾಡದಿರುವ ಮೂಢನು ಶುಭಕರ್ಮಗಳ ಫಲಗಳನ್ನು ಹೊಂದುವುದಿಲ್ಲ.

ಪ್ರಜಾಪತಿರಿದಂ ಸರ್ವಂ ತಪಸೈವಾಸೃಜತ್ಪ್ರಭುಃ ।
ತಥೈವ ವೇದಾನೃಷಯಸ್ತಪಸಾ ಪ್ರತಿಪೇದಿರೇ ॥೨॥

ಪ್ರಭುವಾದ ಪ್ರಜಾಪತಿಯು ಈ ಸಕಲಜಗತ್ತನ್ನೂ ತಪಸ್ಸಿನಿಂದಲೇ ಸೃಷ್ಟಿಸಿದನು. ಋಷಿಗಳು ವೇದಗಳನ್ನು ತಪಸ್ಸಿನಿಂದಲೇ ಪಡೆದುಕೊಂಡರು.

ತಪಸೈವ ಸಸರ್ಜಾನ್ನಂ ಫಲಮೂಲಾನಿ ಯಾನಿ ಚ ।
ತ್ರೀನ್ಲ್ಲೋಕಾಂಸ್ತಪಸಾ ಸಿದ್ಧಾಃ ಪಶ್ಯನ್ತಿ ಸುಸಮಾಹಿತಾಃ ॥೩॥

ಬ್ರಹ್ಮನು ತಪಸ್ಸಿನಿಂದಲೇ ಅನ್ನವನ್ನೂ ಫಲ-ಮೂಲಾದಿಗಳನ್ನೂ ಸೃಷ್ಟಿಸಿದನು. ತಪಃಪ್ರಭಾವದಿಂದಲೇ ಸಂಸಿದ್ಧರಾದ ಮಹಾತ್ಮರು ಮೂರು ಲೋಕಗಳನ್ನೂ ಏಕಾಗ್ರಚಿತ್ತರಾಗಿ ಪ್ರತ್ಯಕ್ಷವಾಗಿಯೇ ನೋಡುತ್ತಾರೆ.

ಔಷಧಾನ್ಯಗದಾದೀನಿ ಕ್ರಿಯಾಶ್ಚ ವಿವಿಧಾಸ್ತಥಾ ।
ತಪಸೈವ ಹಿ ಸಿದ್ಧ್ಯನ್ತಿ ತಪೋಮೂಲಂ ಹಿ ಸಾಧನಮ್ ॥೪॥

ರೋಗವನ್ನು ಪರಿಹರಿಸುವ ಮೂಲಿಕೆಗಳೇ ಮೊದಲಾದ ಔಷಧಗಳು, ಸಾಧಾರಣ ಪ್ರಯತ್ನಗಳಿಂದ ಸಾಧ್ಯವಾಗದ ನಾನಾವಿಧವಾದ ಕಾರ್ಯಗಳೂ– ತಪಸ್ಸಿನಿಂದಲೇ ಸಿದ್ಧಿಸುತ್ತವೆ. ದುಸ್ತರವಾದ ವಿವಿಧಕಾರ್ಯಗಳ ಸಾಧನೆಗೂ ತಪಸ್ಸೇ ಮೂಲವಾಗಿದೆ.

ಯದ್ದುರಾಪಂ ಭವೇತ್ಕಿಂಚಿತ್ತತ್ಸರ್ವಂ ತಪಸೋ ಭವೇತ್ ।
ಐಶ್ವರ್ಯಮೃಷಯಃ ಪ್ರಾಪ್ತಾಸ್ತಪಸೈವ ನ ಸಂಶಯಃ ॥೫॥

ಪ್ರಪಂಚದಲ್ಲಿ ಸಾಧಾರಣಪ್ರಯತ್ನಗಳಿಂದ ಪಡೆದುಕೊಳ್ಳಲು ಸಾಧ್ಯವಾಗದಂತಹ, ದುರ್ಲಭವಾದ ಯಾವ ವಸ್ತುಗಳಿವೆಯೋ, ಸಾಧಿಸಲು ಸಾಧ್ಯವಾಗದ ಯಾವ ಕಾರ್ಯಗಳಿವೆಯೋ–ಅವುಗಳೆಲ್ಲವನ್ನೂ ತಪಸ್ಸಿನಿಂದಲೇ ಸುಲಭವಾಗಿ ಪಡೆದುಕೊಳ್ಳಬಹುದು ಮತ್ತು ಸಾಧಿಸಿಕೊಳ್ಳಬಹುದು. ಋಷಿಗಳು ತಪಸ್ಸಿನಿಂದಲೇ ಅಣಿಮಾದಿ ಅಷ್ಟೈಶ್ವರ್ಯಗಳನ್ನೂ ಸಿದ್ಧಿಸಿಕೊಂಡರೆಂಬುದರಲ್ಲಿ ಸಂಶಯವೇ ಇಲ್ಲ.

ಸುರಾಪೋಽಸಮ್ಮತಾದಾಯೀ ಭ್ರೂಣಹಾ ಗುರುತಲ್ಪಗಃ ।
ತಪಸೈವ ಸುತಪ್ತೇನ ನರಃ ಪಾಪಾತ್ಪ್ರಮುಚ್ಯತೇ ॥೬॥

ಸುರೆಯನ್ನು ಪಾನಮಾಡಿದವನು, ಅನುಮತಿಯಿಲ್ಲದೇ ಪರರ ವಸ್ತುವನ್ನು ಅಪಹರಿಸಿದವನು (ಕಳ್ಳನು), ಭ್ರೂಣಹತ್ಯೆಮಾಡಿದವನು, ಗುರುಪತ್ನೀ ಸಮಾಗಮಮಾಡಿದವನು–ಇವರೆಲ್ಲರೂ ಚೆನ್ನಾಗಿ ವಿಧಿವತ್ತಾಗಿ ಮಾಡುವ ತಪಸ್ಸಿನಿಂದ ಪಾಪವಿಮುಕ್ತರಾಗುತ್ತಾರೆ.

ತಪಸೋ ಬಹುರೂಪಸ್ಯ ತೈಸ್ತೈರ್ದ್ವಾರೈಃ ಪ್ರವರ್ತತಃ ।
ನಿವೃತ್ತಾವರ್ತಮಾನಸ್ಯ ತಪೋ ನಾನಶನಾತ್ಪರಮ್ ॥೭॥

ತಪಸ್ಸುಗಳು ಅನೇಕರೂಪವಾಗಿವೆ. ಭಿನ್ನ-ಭಿನ್ನ ಸಾಧನೆಗಳ ಮೂಲಕವಾಗಿ ಮನುಷ್ಯರು ತಪಸ್ಸುಗಳಲ್ಲಿ ತೊಡಗುತ್ತಾರೆ. ಆದರೆ ನಿವೃತ್ತಿಮಾರ್ಗದಲ್ಲಿರುವವನಿಗೆ ಉಪವಾಸಕ್ಕಿಂತಲೂ ಹಿರಿದಾದ ಬೇರೆ ಯಾವ ತಪಸ್ಸೂ ಇರುವುದಿಲ್ಲ.

ಅಹಿಂಸಾ ಸತ್ಯವಚನಂ ದಾನಮಿನ್ದ್ರಿಯನಿಗ್ರಹಃ ।
ಏತೇಭ್ಯೋ ಹಿ ಮಹಾರಾಜ ತಪೋ ನಾನಶನಾತ್ಪರಮ್ ॥೮॥

ಅಹಿಂಸೆ, ಸತ್ಯವಚನ, ದಾನ, ಇಂದ್ರಿಯನಿಗ್ರಹ–ಮುಂತಾದ ತಪಸ್ಸುಗಳಿಗಿಂತಲೂ ಉಪವಾಸರೂಪವಾದ ತಪಸ್ಸೇ ಶ್ರೇಷ್ಠವಾದುದು.

ನ ದುಷ್ಕರತರಂ ದಾನಾನ್ಮಾತಿಮಾತರಮಾಶ್ರಮಃ ।
ತ್ರೈವಿದ್ಯೇಭ್ಯಃ ಪರಂ ನಾಸ್ತಿ ಸಂನ್ಯಾಸಃ ಪರಮಂ ತಪಃ ॥೯॥

ದಾನಮಾಡುವುದಕ್ಕಿಂತಲೂ ದುಷ್ಕರವಾದ ಧರ್ಮವು ಬೇರೊಂದಿಲ್ಲ. ತಾಯಿಯ ಸೇವೆಯನ್ನು ಬಿಟ್ಟು ಯಾವ ಆಶ್ರಮವೂ ಇಲ್ಲ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ–ಈ ಚತುರಾಶ್ರಮಿಗಳೂ ಅವಶ್ಯವಾಗಿ ತಾಯಿಯ ಸೇವೆಯನ್ನು ಮಾಡಲೇಬೇಕು. ಮೂರು ವೇದಗಳನ್ನೂ ಅಧ್ಯಯನ ಮಾಡಿರುವ ವಿದ್ವಾಂಸನಿಗಿಂತಲೂ ಶ್ರೇಷ್ಠನಾದ ವಿದ್ವಾಂಸನಿಲ್ಲ. ಎಲ್ಲ ತಪಸ್ಸುಗಳಿಗಿಂತಲೂ ಸಂನ್ಯಾಸವೇ (ಸರ್ವಸಂಗಪರಿತ್ಯಾಗವೇ) ಶ್ರೇಷ್ಠವಾದ ತಪಸ್ಸಾಗಿರುತ್ತದೆ.

ಇನ್ದ್ರಿಯಾಣೀಹ ರಕ್ಷನ್ತಿ ಸ್ವರ್ಗಧರ್ಮಾಭಿಗುಪ್ತಯೇ ।
ತಸ್ಮಾದರ್ಥೇ ಚ ಧರ್ಮೇ ಚ ತಪೋ ನಾನಶನಾತ್ಪರಮ್ ॥೧೦॥

ಪ್ರಪಂಚದಲ್ಲಿ ಧಾರ್ಮಿಕರಾದ ಪುರುಷರು ಸ್ವರ್ಗಕ್ಕೆ ಸಾಧನಭೂತವಾದ ಧರ್ಮದ ರಕ್ಷಣೆಗಾಗಿ ಇಂದ್ರಿಯಗಳನ್ನು ಸಂರಕ್ಷಿಸುತ್ತಾರೆ. (ಸ್ವಾಧೀನದಲ್ಲಿಟ್ಟುಕೊಳ್ಳುತ್ತಾರೆ.) ಧರ್ಮಾರ್ಥಗಳ ಸಿದ್ಧಿಗೆ ಉಪವಾಸರೂಪವಾದ ತಪಸ್ಸೇ ಶ್ರೇಷ್ಠವಾದುದು. (ಈ ಶ್ಲೋಕದಲ್ಲಿ ಪೂರ್ವಾರ್ಧ ಮತ್ತು ಉತ್ತರಾರ್ಧಗಳು ಸರಿಯಾಗಿ ಹೊಂದಿಕೊಳ್ಳುವುದಿಲ್ಲ. ಇನ್ದ್ರಿಯಾಣೀಹ **ರಕ್ಷನ್ತಿ ಧನಧಾನ್ಯಾಭಿಗುಪ್ತಯೇ ।** ಎಂದು ಪಾಠಾಂತರವಿದೆ. ಧನ-ಧಾನ್ಯಾದಿಗಳ ರಕ್ಷಣೆಗಾಗಿಯೇ ಇಂದ್ರಿಯಗಳನ್ನು ಪೋಷಿಸುತ್ತಾರೆ. ಆದರೆ ಧರ್ಮಾರ್ಥಸಿದ್ಧಿಗೆ–ವಿಷಯಾ ವಿನಿವರ್ತನ್ತೇ ನಿರಾಹಾರಸ್ಯ ದೇಹಿನಃ । ಎಂದು ಹೇಳಿರುವಂತೆ ಇಂದ್ರಿಯಗಳನ್ನು ಹತೋಟಿಯಲ್ಲಿಡುವ ಉಪವಾಸವೆಂಬ ತಪಸ್ಸೇ ಮುಖ್ಯಸಾಧನವಾಗಿದೆ–ಎಂದು ಅರ್ಥಮಾಡಬಹುದು.)

ಋಷಯಃ ಪಿತರೋ ದೇವಾ ಮನುಷ್ಯಾ ಮೃಗಪಕ್ಷಿಣಃ ।
ಯಾನಿ ಚಾನ್ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ॥೧೧॥

ತಪಃಪರಾಯಣಾಃ ಸರ್ವೇ ಸಿಧ್ಯನ್ತಿ ತಪಸಾ ಚ ತೇ ।
ಇತ್ಯೇವಂ ತಪಸಾ ದೇವಾ ಮಹತ್ತ್ವಂ ಪ್ರತಿಪೇದಿರೇ ॥೧೨॥

ಋಷಿಗಳೂ, ಪಿತೃಗಳೂ, ದೇವತೆಗಳೂ, ಮನುಷ್ಯರೂ, ಮೃಗ-ಪಕ್ಷಿಗಳೂ, ಇತರ ಪ್ರಾಣಿಗಳೂ, ಸ್ಥಾವರ-ಜಂಗಮಗಳೂ–ಈ ಎಲ್ಲರೂ ತಪಸ್ಸನ್ನೇ ಶ್ರೇಷ್ಠವಾದ ಗತಿಯೆಂದು ನಂಬಿದವರಾಗಿ ತಪಸ್ಸಿನಿಂದಲೇ ಸಿದ್ಧಿಯನ್ನು ಪಡೆದುಕೊಳ್ಳುತ್ತಾರೆ. ಹೀಗೆಯೇ ದೇವತೆಗಳೂ ತಪಸ್ಸನ್ನೇ ಆಶ್ರಯಿಸಿ ಮಹತ್ತ್ವಪೂರ್ಣವಾದ ಸ್ಥಾನವನ್ನು ಪಡೆದುಕೊಂಡಿರುವರು.

ಇಮಾನೀಷ್ಟವಿಭಾಗಾನಿ ಫಲಾನಿ ತಪಸಃ ಸದಾ ।
ತಪಸಾ ಶಕ್ಯತೇ ಪ್ರಾಪ್ತುಂ ದೇವತ್ವಮಪಿ ನಿಶ್ಚಯಾತ್ ॥೧೩॥

ಭಿನ್ನ-ಭಿನ್ನವಾದ ಅಭೀಷ್ಟವಾದ ಫಲಗಳೆಲ್ಲವೂ ಸರ್ವದಾ ತಪಸ್ಸಿನಿಂದಲೇ ಸಿದ್ಧಿಸುತ್ತವೆ. ನಿಶ್ಚಯವಾಗಿ ಹೇಳುವುದಾದರೆ ದೇವತ್ವವನ್ನು ಕೂಡ ತಪಸ್ಸಿನಿಂದಲೇ ಪಡೆದುಕೊಳ್ಳಬಹುದು.”

ಇ೬೧ನೆಯ ಅಧ್ಯಾಯವು ಮುಗಿಯಿತು.

ಇ೬೨ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಸತ್ಯದ ಲಕ್ಷಣ, ಸ್ವರೂಪ ಮತ್ತು ಮಹಿಮೆಗಳ ವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಸತ್ಯಂ ಧರ್ಮಂ ಪ್ರಶಂಸನ್ತಿ ವಿಪ್ರರ್ಷಿಪಿತೃದೇವತಾಃ ।
ಸತ್ಯಮಿಚ್ಛಾಮ್ಯಹಂ ಶ್ರೋತುಂ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹ! ಬ್ರಾಹ್ಮಣರೂ, ಋಷಿಗಳೂ, ಪಿತೃದೇವತೆಗಳೂ ಮತ್ತು ದೇವತೆಗಳೂ ಸತ್ಯಭಾಷಣರೂಪವಾದ ಧರ್ಮವನ್ನು ಪ್ರಶಂಸೆಮಾಡುತ್ತಾರೆ. ಆದುದರಿಂದ ನಾನು ಸತ್ಯದ ಮಹತ್ತ್ವವನ್ನು ತಿಳಿಯಲು ಇಚ್ಛಿಸಿದ್ದೇನೆ. ದಯಮಾಡಿ ತಿಳಿಸು.

ಸತ್ಯಂ ಕಿಂಲಕ್ಷಣಂ ರಾಜನ್ಕಥಂ ವಾ ತದವಾಪ್ಯತೇ ।
ಸತ್ಯಂ ಪ್ರಾಪ್ಯ ಭವೇತ್ಕಿಂ ಚ ಕಥಂ ಚೈವ ತದುಚ್ಯತಾಮ್ ॥೨॥

ಗಾಂಗೇಯ! ಸತ್ಯದ ಲಕ್ಷಣವೇನು? ಅದನ್ನು ಪಡೆದುಕೊಳ್ಳುವ ಬಗೆಯು ಯಾವುದು? ಸತ್ಯದ ಪರಿಪಾಲನೆಯಿಂದ ಬರುವ ಲಾಭವೇನು? ಹೇಗೆ ಲಭಿಸುತ್ತದೆ?–ಈ ಎಲ್ಲ ವಿಷಯಗಳನ್ನೂ ವಿಶದವಾಗಿ ತಿಳಿಸು."

ಭೀಷ್ಮನು ಹೇಳುತ್ತಾನೆ :

ಚಾತುರ್ವರ್ಣ್ಯಸ್ಯ ಧರ್ಮಾಣಾಂ ಸಂಕರೋ ನ ಪ್ರಶಸ್ಯತೇ ।
ಅವಿಕಾರಿತಮಂ ಸತ್ಯಂ ಸರ್ವವರ್ಣೇಷು ಭಾರತ ॥೩॥

"ಭಾರತ! ಬ್ರಾಹ್ಮಣರೇ ಮೊದಲಾದ ನಾಲ್ಕು ವರ್ಣದವರಿಗೂ ಯಾವ ಧರ್ಮಗಳಿವೆಯೋ–ಆ ಧರ್ಮಗಳ ಪರಸ್ಪರಸಂಕರವನ್ನು ವಿದ್ವಾಂಸರು ಪ್ರಶಂಸೆಮಾಡುವುದಿಲ್ಲ. (ಅರ್ಥಾತ್ ಬ್ರಾಹ್ಮಣರು ಕ್ಷತ್ರಿಯಧರ್ಮವನ್ನು ಪರಿಪಾಲಿಸುವುದು ; ಕ್ಷತ್ರಿಯರು ಬ್ರಾಹ್ಮಣಧರ್ಮವನ್ನು ಪರಿಪಾಲಿಸುವುದು–ಇತ್ಯಾದಿ.) ಆದರೆ ಯಾವ ವಿಧವಾದ ವಿಕಾರವೂ ಇಲ್ಲದ ಸತ್ಯವು ಮಾತ್ರ ಸರ್ವವರ್ಣದವರಲ್ಲಿಯೂ ಪ್ರತಿಷ್ಠಿತವಾಗಿದೆ. ಸತ್ಯವು ಬ್ರಾಹ್ಮಣನಿಗೆ ಬೇರೆ, ಕ್ಷತ್ರಿಯನಿಗೆ ಬೇರೆ–ಎಂಬುದೇನಿಲ್ಲ. ನಾಲ್ಕು ವರ್ಣದವರಿಗೂ ಸತ್ಯವು ಒಂದೇ ಆಗಿರುತ್ತದೆ.

ಸತ್ಯಂ ಸತ್ಸು ಸದಾ ಧರ್ಮಃ ಸತ್ಯಂ ಧರ್ಮಃ ಸನಾತನಃ ।
ಸತ್ಯಮೇವ ನಮಸ್ಯೇತ ಸತ್ಯಂ ಹಿ ಪರಮಾ ಗತಿಃ ॥೪॥

ಸತ್ಪುರುಷರು ಯಾವಾಗಲೂ ಸತ್ಯರೂಪವಾದ ಧರ್ಮವನ್ನೇ ಪರಿಪಾಲಿಸುತ್ತಾರೆ. ಸತ್ಯವೇ ಸನಾತನಧರ್ಮವಾಗಿದೆ. ಸತ್ಯಕ್ಕೆ ತಲೆಬಾಗಿ ನಮಸ್ಕರಿಸಬೇಕು. ಏಕೆಂದರೆ : ಸತ್ಯವೇ ಜೀವನಕ್ಕೆ ಶ್ರೇಷ್ಠವಾದ ಆಶ್ರಯವಾಗಿದೆ.

ಸತ್ಯಂ ಧರ್ಮಸ್ತಪೋ ಯೋಗಃ ಸತ್ಯಂ ಬ್ರಹ್ಮ ಸನಾತನಮ್ ।
ಸತ್ಯಂ ಯಜ್ಞಃ ಪರಃ ಪ್ರೋಕ್ತಃ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥೫॥

ಸತ್ಯವೇ ಧರ್ಮವೂ, ತಪಸ್ಸೂ ಮತ್ತು ಯೋಗವೂ ಆಗಿದೆ. ಸತ್ಯವೇ

ಸನಾತನವಾದ ಬ್ರಹ್ಮವಸ್ತುವಾಗಿದೆ. ಸತ್ಯವನ್ನೇ ಶ್ರೇಷ್ಠವಾದ ಯಜ್ಞವೆಂದೂ ಹೇಳುತ್ತಾರೆ. ಎಲ್ಲವೂ ಸತ್ಯದಲ್ಲಿಯೇ ಪ್ರತಿಷ್ಠಿತವಾಗಿದೆ.

ಧರ್ಮಜ! ಈಗ ನಾನು ಕ್ರಮವಾಗಿ ಸತ್ಯದ ಆಚಾರಗಳನ್ನೂ ಮತ್ತು ಲಕ್ಷಣಗಳನ್ನೂ ಆನುಪೂರ್ವಿಯಿಂದ ಹೇಳುತ್ತೇನೆ. ಸತ್ಯವು ಹೇಗೆ ಲಭ್ಯ ವಾಗುತ್ತದೆ?–ಎಂಬುದನ್ನೂ ನೀನು ತಿಳಿದುಕೊ. ಸತ್ಯವು ಹದಿಮೂರು ವಿಧಗಳಲ್ಲಿರುವುದೆಂದು ಎಲ್ಲ ಲೋಕಗಳಲ್ಲಿಯೂ ಪ್ರಸಿದ್ಧವಾಗಿದೆ.

ಸತ್ಯಂ ಚ ಸಮತಾ ಚೈವ ದಮಶ್ಚೈವ ನ ಸಂಶಯಃ ।
ಅಮಾತ್ಸರ್ಯಂ ಕ್ಷಮಾ ಚೈವ ಹ್ರೀಸ್ತಿತಿಕ್ಷಾನಸೂಯತಾ ॥೮॥

ತ್ಯಾಗೋ ಧ್ಯಾನಮಥಾರ್ಯತ್ವಂ ಧೃತಿಶ್ಚ ಸತತಂ ಸ್ಥಿರಾ ।
ಅಹಿಂಸಾ ಚೈವ ರಾಜೇನ್ದ್ರ ಸತ್ಯಾಕಾರಾಸ್ತ್ರಯೋದಶ ॥೯॥

ಸತ್ಯ, ಸಮತೆ, ದಮ, ಮತ್ಸರವಿಲ್ಲದಿರುವುದು, ಕ್ಷಮೆ, ಲಜ್ಜೆ, ತಿತಿಕ್ಷೆ (ತಾಳ್ಮೆ), ಅಸೂಯೆಯಿಲ್ಲದೇ ಇರುವುದು, ತ್ಯಾಗ, ಪರಮಾತ್ಮನ ಧ್ಯಾನ, ಆರ್ಯತ್ವ (ಶ್ರೇಷ್ಠವಾದ ಆಚರಣೆ), ನಿರಂತರವಾಗಿರುವ ಧೈರ್ಯ ಮತ್ತು ಅಹಿಂಸೆ–ಈ ಹದಿಮೂರು ಸತ್ಯದ ಆಕಾರಗಳು.

ಸತ್ಯಂ ನಾಮಾವ್ಯಯಂ ನಿತ್ಯಮವಿಕಾರಿ ತಥೈವ ಚ ।
ಸರ್ವಧರ್ಮಾವಿರುದ್ಧೇನ ಯೋಗೇನೈತದವಾಪ್ಯತೇ ॥೧೦॥

ಅನವರತವೂ ಅವಿನಾಶಿಯಾಗಿ ಮತ್ತು ವಿಕಾರರಹಿತವಾಗಿರುವುದೇ ಸತ್ಯದ ಲಕ್ಷಣವಾಗಿದೆ. ಸರ್ವಧರ್ಮಾನುಕೂಲವಾದ ಕರ್ತವ್ಯಪರಿಪಾಲನೆ ಯೆಂಬ ಯೋಗದ ಮೂಲಕವಾಗಿ ಸತ್ಯದ ಪ್ರಾಪ್ತಿಯಾಗುತ್ತದೆ.

ಆತ್ಮನೀಷ್ಟೇ ತಥಾನಿಷ್ಟೇ ರಿಪೌ ಚ ಸಮತಾ ತಥಾ ।
ಇಚ್ಛಾದ್ವೇಷಕ್ಷಯಂ ಪ್ರಾಪ್ಯ ಕಾಮಕ್ರೋಧಕ್ಷಯಂ ತಥಾ ॥೧೧॥

ತನ್ನಲ್ಲಿ, ತನಗೆ ಬೇಕಾದವನಲ್ಲಿ, ಬೇಡದವನಲ್ಲಿ ಮತ್ತು ಶತ್ರುವಿನಲ್ಲಿ ಸಮಭಾವದಿಂದಿರುವುದೇ ' ಸಮತೆ '. ಇಚ್ಛೆ (ರಾಗ), ದ್ವೇಷ, ಕಾಮ ಮತ್ತು ಕ್ರೋಧಗಳನ್ನು ಪರಿತ್ಯಜಿಸುವುದೇ 'ಸಮತೆ'ಯನ್ನು ಸಾಧಿಸುವ ಉಪಾಯ ವಾಗಿದೆ.

ದಮೋ ನಾನ್ಯಸ್ಪೃಹಾ ನಿತ್ಯಂ ಗಾಮ್ಭೀರ್ಯಂ ಧೈರ್ಯಮೇವ ಚ ।
ಅಭಯಂ ರೋಗಶಮನಂ ಜ್ಞಾನೇನೈತದವಾಪ್ಯತೇ ॥೧೨॥

ಇತರರ ವಸ್ತುಗಳ ಮೇಲೆ ಆಸೆಪಡದೇ ಇರುವುದು, ಗಾಂಭೀರ್ಯದಿಂದಿರುವುದು, ಧೈರ್ಯದಿಂದಿರುವುದು, ಭಯರಹಿತನಾಗಿರುವುದು, ಎಲ್ಲ ಪ್ರಾಣಿಗಳಿಗೂ ಅಭಯವನ್ನು ಕೊಡುವುದು, ಮನೋರೋಗವನ್ನು ಉಪಶಮನಗೊಳಿಸುವುದು–ಇವುಗಳು 'ದಮ'ದ ಲಕ್ಷಣಗಳಾಗಿವೆ. ಜ್ಞಾನದಿಂದ ಇದರ ಪ್ರಾಪ್ತಿಯಾಗುತ್ತದೆ.

ಅಮಾತ್ಸರ್ಯಂ ಬುಧಾಃ ಪ್ರಾಹುರ್ದಾನೇ ಧರ್ಮೇ ಚ ಸಂಯಮಃ ।
ಅವಸ್ಥಿತೇನ ನಿತ್ಯಂ ಚ ಸತ್ಯೇನಾಮತ್ಸರೀ ಭವೇತ್ ॥೧೩॥

ದಾನ-ಧರ್ಮಗಳನ್ನು ಮಾಡುವ ಸಮಯದಲ್ಲಿ ಮನಸ್ಸನ್ನು ಸಂಯಮಗೊಳಿಸುವುದಕ್ಕೆ ಅಮಾತ್ಸರ್ಯವೆಂದು ವಿದ್ವಾಂಸರು ಹೇಳುತ್ತಾರೆ. ದಾನ-ಧರ್ಮಗಳನ್ನು ಮಾಡುವಾಗ ಅಹಂಕಾರ-ಮಮಕಾರಗಳಿಲ್ಲದೇ ಮಾಡಬೇಕು. ಒಬ್ಬನ ಮೇಲೆ ಪೈಪೋಟಿಯಿಂದ ದಾನ-ಧರ್ಮಗಳನ್ನು ಮಾಡಬಾರದು. ಸದಾಕಾಲದಲ್ಲಿಯೂ ಸತ್ಯವನ್ನು ಪರಿಪಾಲಿಸುವ ಮನುಷ್ಯನು ಮಾತ್ಸರ್ಯರಹಿತನಾಗುತ್ತಾನೆ.

ಅಕ್ಷಮಾಯಾಃ ಕ್ಷಮಾಯಾಶ್ಚ ಪ್ರಿಯಾಣೀಹಾಪ್ರಿಯಾಣಿ ಚ ।
ಕ್ಷಮತೇ ಸಮ್ಮತಃ ಸಾಧುಃ ಸಾಧ್ವಾಪ್ನೋತಿ ಚ ಸತ್ಯವಾಕ್ ॥೧೪॥

ಯಾವನು ಸಹನೆಗೆ ಯೋಗ್ಯವಾದ ಮತ್ತು ಅಸಹನೆಯನ್ನುಂಟು ಮಾಡುವ ವ್ಯವಹಾರಗಳನ್ನೂ, ಪ್ರಿಯವಾದ ಮತ್ತು ಅಪ್ರಿಯವಾದ ಮಾತುಗಳನ್ನೂ ಸಮಾನವಾಗಿ ಭಾವಿಸುವನೋ–ಅವನು ಸರ್ವಸಮ್ಮತನಾದ ಕ್ಷಮಾಶೀಲನಾದ ಶ್ರೇಷ್ಠಪುರುಷನೆನಿಸಿಕೊಳ್ಳುತ್ತಾನೆ. ಸತ್ಯವಾದಿಗೆ ಉತ್ತಮವಾದ ರೀತಿಯಲ್ಲಿ ಕ್ಷಮಾಭಾವವು ಪ್ರಾಪ್ತವಾಗುತ್ತದೆ.

ಕಲ್ಯಾಣಂ ಕುರುತೇ ಬಾಢಂ ಧೀಮಾನ್ನ ಗ್ಲಾಯತೇ ಕ್ವಚಿತ್ ।
ಪ್ರಶಾನ್ತವಾಙ್ಮನಾ ನಿತ್ಯಂ ಹ್ರೀಸ್ತು ಧರ್ಮಾದವಾಪ್ಯತೇ ॥೧೫॥

ಬುದ್ಧಿವಂತನಾದ ಮನುಷ್ಯನು ಇತರರಿಗೆ ಕಲ್ಯಾಣಪ್ರದವಾದ ಕಾರ್ಯ

ವನ್ನು ಸುವ್ಯವಸ್ಥಿತವಾಗಿ ಮಾಡಿಕೊಟ್ಟು ಅನಂತರ ಹಾಗೆ ಮಾಡಿಕೊಟ್ಟುದ ಕ್ಕಾಗಿ ಖೇದಗೊಳ್ಳದಿರುವುದಕ್ಕೆ ಮತ್ತು ಮಾತೂ ಮತ್ತು ಮನಸ್ಸೂ ಸರ್ವದಾ ಪ್ರಶಾಂತವಾಗಿರುವುದಕ್ಕೆ ' ಹ್ರೀ ' ಅಥವಾ ' ಲಜ್ಜೆ ' ಎನ್ನುತ್ತಾರೆ. ನಿರಂತರ ಧರ್ಮಾಚರಣೆಯಿಂದ ಲಜ್ಜಾಶೀಲತ್ವವು ಪ್ರಾಪ್ತವಾಗುತ್ತದೆ.

ಧರ್ಮಾರ್ಥಹೇತೋಃ ಕ್ಷಮತೇ ತಿತಿಕ್ಷಾಕ್ಷಾನ್ತಿರುಚ್ಯತೇ ।
ಲೋಕಸಂಗ್ರಹಣಾರ್ಥಂ ವೈ ಸಾ ತು ಧೈರ್ಯೇಣ ಲಭ್ಯತೇ ॥೧೬॥

ಧರ್ಮಾರ್ಥಗಳ ಸಾಧನೆಯಲ್ಲಿ ಉಂಟಾಗಬಹುದಾದ ಕಷ್ಟವನ್ನು ಸಹಿಸಿಕೊಳ್ಳುವುದಕ್ಕೆ ' ತಿತಿಕ್ಷಾ ' ಎಂದು ಹೆಸರು. ಲೋಕಸಂಗ್ರಹಣಾರ್ಥ ವಾಗಿ ತಿತಿಕ್ಷಾಧರ್ಮವನ್ನು ಪರಿಪಾಲಿಸಬೇಕು. ತಿತಿಕ್ಷೆಯು ಧೈರ್ಯದಿಂದ ಪ್ರಾಪ್ತವಾಗುತ್ತದೆ. (ಇತರರಲ್ಲಿ ದೋಷವನ್ನೆಣಿಸದಿರುವುದಕ್ಕೆ 'ಅನಸೂಯಾ' ಎಂದು ಹೆಸರು.)

ತ್ಯಾಗಃ ಸ್ನೇಹಸ್ಯ ಯತ್ತ್ಯಾಗೋ ವಿಷಯಾಣಾಂ ತಥೈವ ಚ ।
ರಾಗದ್ವೇಷಪ್ರಹೀಣಸ್ಯ ತ್ಯಾಗೋ ಭವತಿ ನಾನ್ಯಥಾ ॥೧೭॥

ವಿಷಯಾಸಕ್ತಿಗಳ ಯಾವ ತ್ಯಾಗವಿದೆಯೋ ಅದಕ್ಕೇ ತ್ಯಾಗವೆಂದು ಹೆಸರು. ರಾಗ-ದ್ವೇಷಗಳಿಂದ ವಿಹೀನನಾಗಿರುವವನಿಗೆ ಮಾತ್ರವೇ ತ್ಯಾಗವು ಸಿದ್ಧಿಸುತ್ತದೆ. ಇಲ್ಲದಿದ್ದರೆ ಸರ್ವಥಾ ಸಿದ್ಧಿಸುವುದಿಲ್ಲ. (ಏಕಾಗ್ರಮನಸ್ಸಿನಿಂದ ಕೂಡಿದ ಪರಮಾತ್ಮಚಿಂತನೆಗೆ ಧ್ಯಾನವೆಂದು ಹೆಸರು.)

ಆರ್ಯತಾ ನಾಮ ಭೂತಾನಾಂ ಯಃ ಕರೋತಿ ಪ್ರಯತ್ನತಃ ।
ಶುಭಂ ಕರ್ಮ ನಿರಾಕಾರೋ ವೀತರಾಗಸ್ತಥೈವ ಚ ॥೧೮॥

ತನ್ನನ್ನು ಪ್ರಕಟಿಸಿಕೊಳ್ಳದೇ ಪ್ರಯತ್ನಪೂರ್ವಕವಾಗಿ ಪ್ರಾಣಿಗಳಿಗೆ ಒಳ್ಳೆಯದನ್ನು ಮಾಡುವುದಕ್ಕೆ 'ಆರ್ಯತಾ' ಎಂದು ಹೆಸರು. ರಾಗ-ದ್ವೇಷಗಳಿಂದ ವಿಹೀನನಾದವನಿಗೆ ಇದು ಸಿದ್ಧಿಸುತ್ತದೆ.

ಧೃತಿರ್ನಾಮ ಸುಖೇ ದುಃಖೇ ಯಥಾ ನಾಪ್ನೋತಿ ವಿಕ್ರಿಯಾಮ್ ।
ತಾಂ ಭಜೇತ ಸದಾ ಪ್ರಾಜ್ಞೋ ಯ ಇಚ್ಛೇದ್ಭೂತಿಮಾತ್ಮನಃ ॥೧೯॥

ಸುಖವಾಗಲೀ, ದುಃಖವಾಗಲೀ ಪ್ರಾಪ್ತವಾದಾಗ ಮನಸ್ಸಿನಲ್ಲಿ

ಯಾವ ವಿಧವಾದ ವಿಕಾರವನ್ನೂ ಹೊಂದದೇ ಇರುವುದಕ್ಕೆ 'ಧೃತಿ' ಎಂದು ಹೆಸರು. ಔನ್ನತ್ಯವನ್ನು ಅಭಿಲಾಷಿಸುವ ಪ್ರಾಜ್ಞನು ಧೃತಿಯನ್ನು ಸರ್ವದಾ ಆಶ್ರಯಿಸಬೇಕು.

ಸರ್ವಥಾ ಕ್ಷಮಿಣಾ ಭಾವ್ಯಂ ತಥಾ ಸತ್ಯಪರೇಣ ಚ ।
ವೀತಹರ್ಷಭಯಕ್ರೋಧೋ ಧೃತಿಮಾಪ್ನೋತಿ ಪಣ್ಡಿತಃ ॥೨೦॥

ಧೃತಿಯನ್ನು ಸಿದ್ಧಿಸಿಕೊಳ್ಳಬೇಕಾದರೆ ಮನುಷ್ಯನು ಸದಾ ಕ್ಷಮಾಶೀಲನಾಗಿಯೂ–ಸತ್ಯನಿಷ್ಠನಾಗಿಯೂ ಇರಬೇಕು. ಹರ್ಷ-ಭಯ-ಕ್ರೋಧಗಳನ್ನು ಪರಿತ್ಯಜಿಸಿದ ಪಂಡಿತನು ಧೃತಿಯನ್ನು ಹೊಂದುತ್ತಾನೆ.

ಅದ್ರೋಹಃ ಸರ್ವಭೂತೇಷು ಕರ್ಮಣಾ ಮನಸಾ ಗಿರಾ ।
ಅನುಗ್ರಹಶ್ಚ ದಾನಂ ಚ ಸತಾಂ ಧರ್ಮಃ ಸನಾತನಃ ॥೨೧॥

ಮನಸ್ಸು, ಮಾತು ಮತ್ತು ಕ್ರಿಯೆಗಳಿಂದ ಯಾವುದೇ ಪ್ರಾಣಿಗೂ ದ್ರೋಹವನ್ನೆಸಗದಿರುವುದೂ, ಅನುಗ್ರಹ ಮತ್ತು ದಾನ–ಇವುಗಳೂ ಸತ್ಪುರುಷರಿಗೆ ಸನಾತನ ಧರ್ಮವಾಗಿದೆ.

ಏತೇ ತ್ರಯೋದಶಾಕಾರಾಃ ಪೃಥಕ್ಸತ್ಯೈಕಲಕ್ಷಣಾಃ ।
ಭಜನ್ತೇ ಸತ್ಯಮೇವೇಹ ಬೃಂಹಯನ್ತೇ ಚ ಭಾರತ ॥೨೨॥

ಈ ಹದಿಮೂರು ಪ್ರಕಾರಗಳು ಸತ್ಯದ ಪ್ರತ್ಯೇಕ-ಪ್ರತ್ಯೇಕವಾದ ಲಕ್ಷಣಗಳಾಗಿವೆ. ಈ ಲಕ್ಷಣಗಳು ಸತ್ಯವನ್ನೇ ಆಶ್ರಯಿಸಿವೆ ಮತ್ತು ಸತ್ಯವನ್ನೇ ಅಭಿವೃದ್ಧಿಗೊಳಿಸುತ್ತವೆ.

ನಾನ್ತಃ ಶಕ್ಯೋ ಗುಣಾನಾಂ ಚ ವಕ್ತುಂ ಸತ್ಯಸ್ಯ ಪಾರ್ಥಿವ ।
ಅತಃ ಸತ್ಯಂ ಪ್ರಶಂಸನ್ತಿ ವಿಪ್ರಾಃ ಸಪಿತೃದೇವತಾಃ ॥೨೩॥

ಯುಧಿಷ್ಠಿರ! ಸತ್ಯದ ಗುಣಗಳಿಗೆ ಕೊನೆಯೇ ಇಲ್ಲ. ಈ ಕಾರಣದಿಂದಲೇ ಪಿತೃಗಳಿಂದಲೂ ದೇವತೆಗಳಿಂದಲೂ ಸಹಿತರಾದ ಬ್ರಾಹ್ಮಣರು ಸತ್ಯವನ್ನು ಪ್ರಶಂಸಿಸುತ್ತಾರೆ.

ನಾಸ್ತಿ ಸತ್ಯಾತ್ಪರೋ ಧರ್ಮೋ ನಾನೃತಾತ್ಪಾತಕಂ ಪರಮ್ ।
ಸ್ಥಿತಿರ್ಹಿ ಸತ್ಯಂ ಧರ್ಮಸ್ಯ ತಸ್ಮಾತ್ಸತ್ಯಂ ನ ಲೋಪಯೇತ್ ॥೨೪॥

ಸತ್ಯಕ್ಕಿಂತಲೂ ಶ್ರೇಷ್ಠವಾದ ಬೇರೆಯ ಧರ್ಮವಿಲ್ಲ. ಸುಳ್ಳಿಗಿಂತಲೂ ದೊಡ್ಡದಾದ ಬೇರೆ ಪಾಪಕರ್ಮವಿಲ್ಲ. ಸತ್ಯವೇ ಧರ್ಮಕ್ಕೆ ಆಧಾರಸ್ಥಾನವಾಗಿದೆ. ಆದುದರಿಂದ ಸತ್ಯವನ್ನು ಲೋಪಮಾಡಬಾರದು.

ಉಪೈತಿ ಸತ್ಯಾದ್ದಾನಂ ಹಿ ತಥಾ ಯಜ್ಞಾಃ ಸದಕ್ಷಿಣಾಃ ।
ತ್ರೇತಾಗ್ನಿಹೋತ್ರಂ ವೇದಾಶ್ಚ ಯೇ ಚಾನ್ಯೇ ಧರ್ಮನಿಶ್ಚಯಾಃ ॥೨೫॥

ದಾನ, ಸದಕ್ಷಿಣಾಕವಾದ ಯಜ್ಞ, ತ್ರೇತಾಗ್ನಿಸಾಧ್ಯವಾದ ಅಗ್ನಿಹೋತ್ರ, ವೇದಾಧ್ಯಯನ, ಇವುಗಳೇ ಅಲ್ಲದೇ ಧರ್ಮಗಳೆಂದು ನಿಶ್ಚಯಿಸಲ್ಪಟ್ಟ ಬೇರೆ ಅನೇಕ ಕರ್ಮಗಳು–ಇವುಗಳೆಲ್ಲದರಿಂದಲೂ ಪಡೆಯಬಹುದಾದ ಫಲವನ್ನು ಮನುಷ್ಯನು ಸತ್ಯನಿಷ್ಠೆಯೊಂದರಿಂದಲೇ ಪಡೆದುಕೊಳ್ಳುತ್ತಾನೆ.

ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವ ವಿಶಿಷ್ಯತೇ ॥೨೬॥

ಸಾವಿರ ಅಶ್ವಮೇಧಗಳನ್ನು ಮಾಡುವುದರಿಂದ ಪ್ರಾಪ್ತವಾಗಬಹುದಾದ ಫಲವನ್ನೂ–ಸತ್ಯನಿಷ್ಠೆಯಿಂದ ಪ್ರಾಪ್ತವಾಗಬಹುದಾದ ಫಲವನ್ನೂ ತಕ್ಕಡಿಯ ಎರಡು ತಟ್ಟೆಗಳಲ್ಲಿಟ್ಟು ತೂಗಿದರೆ–ಅಶ್ವಮೇಧಸಹಸ್ರದಿಂದ ಪ್ರಾಪ್ತವಾಗುವ ಫಲಕ್ಕಿಂತಲೂ ಸತ್ಯನಿಷ್ಠೆಯಿಂದ ಪ್ರಾಪ್ತವಾಗುವ ಫಲವೇ ಹೆಚ್ಚು ತೂಗುತ್ತದೆ.”

ಂ೬೨ನೆಯ ಅಧ್ಯಾಯವು ಮುಗಿಯಿತು.

ಂ೬೩ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಕಾಮ–ಕ್ರೋಧಗಳೇ ಮೊದಲಾದ ಹದಿಮೂರು ದೋಷಗಳ ನಿರೂಪಣೆ ಮತ್ತು ಅವುಗಳ ವಿನಾಶೋಪಾಯ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯತಃ ಪ್ರಭವತಿ ಕ್ರೋಧಃ ಕಾಮೋ ವಾ ಭರತರ್ಷಭ ।
ಶೋಕಮೋಹೌ ವಿಧಿತ್ಸಾ ಚ ಪರಾಸುತ್ವಂ ತಥಾ ಮದಃ ॥೧॥

ಲೋಭೋ ಮಾತ್ಸರ್ಯಮೀರ್ಷ್ಯಾ ಚ ಕುತ್ಸಾಸೂಯಾ ಕೃಪಾ ತಥಾ ।
ಏತತ್ಸರ್ವಂ ಮಹಾಪ್ರಾಜ್ಞ ಯಾಥಾತಥ್ಯೇನ ಮೇ ವದ ॥೨॥

“ಮಹಾಪ್ರಾಜ್ಞನೇ! ಪಿತಾಮಹ! ಕ್ರೋಧ, ಕಾಮ, ಶೋಕ, ಮೋಹ, ವಿಧಿತ್ಸಾ (ಶಾಸ್ತ್ರಕ್ಕೆ ವಿರುದ್ಧವಾದ ಕಾರ್ಯಗಳನ್ನು ಮಾಡುವ ಇಚ್ಛೆ), ಪರಾಸುತಾ (ಇತರರನ್ನು ಕೊಲ್ಲುವ ಇಚ್ಛೆ), ಮದ, ಲೋಭ, ಮಾತ್ಸರ್ಯ, ಈರ್ಷ್ಯೆ, ನಿಂದೆ, ದೋಷದೃಷ್ಟಿ, ಕೃಪೆ (ದೈನ್ಯಭಾವ) ಈ ಎಲ್ಲ ದೋಷಗಳೂ ಎಲ್ಲಿಂದ ಹುಟ್ಟುತ್ತವೆ? ಈ ಎಲ್ಲವನ್ನೂ ನನಗೆ ಯಥಾವತ್ತಾಗಿ ಹೇಳು.”

ಭೀಷ್ಮನು ಹೇಳುತ್ತಾನೆ :

ತ್ರಯೋದಶೈತೇಽತಿಬಲಾಃ ಶತ್ರವಃ ಪ್ರಾಣಿನಾಂ ಸ್ಮೃತಾಃ ।
ಉಪಾಸನ್ತೇ ಮಹಾರಾಜ ಸಮನ್ತಾತ್ಪುರುಷಾನಿಹ ॥೩॥

“ಯುಧಿಷ್ಠಿರ! ನೀನು ಹೇಳಿದ ಈ ಹದಿಮೂರು ದೋಷಗಳೂ ಪ್ರಾಣಿವರ್ಗಕ್ಕೆ ಅತಿಬಲಿಷ್ಠವಾದ ಶತ್ರುಗಳು. ಈ ದೋಷಗಳು ಮನುಷ್ಯರನ್ನು ಎಲ್ಲ ಕಡೆಗಳಿಂದಲೂ ಆಕ್ರಮಿಸಿಕೊಂಡಿವೆ.

ಏತೇ ಪ್ರಮತ್ತಂ ಪುರುಷಮಪ್ರಮತ್ತಾಸ್ತುದನ್ತಿ ಚ ।
ವೃಕಾ ಇವ ವಿಲುಮ್ಪನ್ತಿ ದೃಷ್ಟ್ವೈವ ಪುರುಷಂ ಬಲಾತ್ ॥೪॥

ತೋಳಗಳು ಮನುಷ್ಯನನ್ನು ನೋಡಿದೊಡನೆಯೇ ಮೇಲೆ ಬೀಳುವಂತೆ–ಈ ದೋಷಗಳು ಯಾವಾಗಲೂ ಜಾಗರೂಕತೆಯಿಂದಿರುತ್ತಾ ಅಜಾಗರೂಕನಾದ ಪುರುಷನ ಮೇಲೆ ಬೀಳುತ್ತವೆ.

ಏಭ್ಯಃ ಪ್ರವರ್ತತೇ ದುಃಖಮೇಭ್ಯಃ ಪಾಪಂ ಪ್ರವರ್ತತೇ ।
ಇತಿ ಮರ್ತ್ಯೋ ವಿಜಾನೀಯಾತ್ಸತತಂ ಪುರುಷರ್ಷಭ ॥೫॥

ಪುರುಷಶ್ರೇಷ್ಠನೇ! ‘ಈ ಹದಿಮೂರು ದೋಷಗಳಿಂದಲೇ ಎಲ್ಲರಿಗೂ ದುಃಖವು ಪ್ರಾಪ್ತವಾಗುತ್ತದೆ. ಈ ಹದಿಮೂರು ದೋಷಗಳಿಂದಲೇ ಪಾಪಕರ್ಮಗಳಲ್ಲಿ ಪ್ರವೃತ್ತಿಯುಂಟಾಗುತ್ತದೆ’–ಎಂಬುದಾಗಿ ಮನುಷ್ಯನು ಸತತವಾಗಿ ಮನನಮಾಡುತ್ತಲೇ ಇರಬೇಕು.

ಏತೇಷಾಮುದಯಂ ಸ್ಥಾನಂ ಕ್ಷಯಂ ಚ ಪೃಥಿವೀಪತೇ ।

ಹನ್ತ ತೇ ಕಥಯಿಷ್ಯಾಮಿ ಕ್ರೋಧಸ್ಯೋತ್ಪತ್ತಿಮಾದಿತಃ ।
ಯಥಾತತ್ತ್ವಂ ಕ್ಷಿತಿಪತೇ ತದಿಹೈಕಮನಾಃ ಶೃಣು ॥೬॥

ಮಹಾರಾಜ! ಈ ಹದಿಮೂರು ದೋಷಗಳ ಉತ್ಪತ್ತಿಯು ಹೇಗಾಗುವುದೆಂಬುದನ್ನೂ, ಅವುಗಳ ಸ್ಥಾನವನ್ನೂ ಮತ್ತು ಅವುಗಳ ವಿನಾಶ ವನ್ನೂ ನಿನಗೆ ವಿಶದವಾಗಿ ಹೇಳುತ್ತೇನೆ. ಕೋಪದ ಉತ್ಪತ್ತಿಯು ಹೇಗಾಯಿ ತೆಂಬುದನ್ನು ನಿನಗೆ ನಾನು ಮೊದಲು ಯಥಾವತ್ತಾಗಿ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಲೋಭಾತ್ಕ್ರೋಧಃ ಪ್ರಭವತಿ ಪರದೋಷೈರುದೀರ್ಯತೇ ।
ಕ್ಷಮಯಾ ತಿಷ್ಠತೇ ರಾಜನ್ಕ್ಷಮಯಾ ವಿನಿವರ್ತತೇ ॥೭॥

ಲೋಭದಿಂದ ಕ್ರೋಧವು ಹುಟ್ಟುತ್ತದೆ. ಇತರರಲ್ಲಿ ದೋಷವನ್ನು ಕಾಣುವುದರಿಂದ ಕೋಪವು ವೃದ್ಧಿಸುತ್ತದೆ. ಕ್ಷಮಾಗುಣಪ್ರಯೋಗದಿಂದ ಸ್ಥಗಿತವಾಗುತ್ತದೆ. ಕ್ಷಮೆಯನ್ನೇ ನಿರಂತರವಾಗಿ ಆಶ್ರಯಿಸುವುದರಿಂದ ಕ್ರೋಧವು ವಿನಾಶಹೊಂದುತ್ತದೆ.

ಸಙ್ಕಲ್ಪಾಜ್ಜಾಯತೇ ಕಾಮಃ ಸೇವ್ಯಮಾನೋ ವಿವರ್ಧತೇ ।
ಯದಾ ಪ್ರಾಜ್ಞೋ ವಿರಮತೇ ತದಾ ಸದ್ಯಃ ಪ್ರಣಶ್ಯತಿ ॥೮॥

ಸಂಕಲ್ಪದಿಂದ ಕಾಮವು ಉತ್ಪತ್ತಿಯಾಗುತ್ತದೆ. ಸಂಕಲ್ಪಿಸಿದ ವಸ್ತುವನ್ನು ಸಾಧಿಸಿ ಅನುಭವಿಸತೊಡಗಿದರೆ ಕಾಮವು ವೃದ್ಧಿಯನ್ನು ಹೊಂದುತ್ತದೆ. ಪ್ರಾಜ್ಞನಾದವನು ಸಂಕಲ್ಪವನ್ನೇ ಮಾಡದೇ ಕಾಮನಾವಸ್ತುಗಳ ಉಪಭೋಗವನ್ನೂ ನಿಲ್ಲಿಸಿದರೆ ಆಗ ಕಾಮವು ವಿನಾಶ ಹೊಂದುತ್ತದೆ.

ಪರಾಸೂಯಾ ಕ್ರೋಧಲೋಭಾವನ್ತರಾ ಪ್ರತಿಮುಚ್ಯತೇ ।
ದಯಯಾ ಸರ್ವಭೂತಾನಾಂ ನಿರ್ವೇದಾದ್ವಿನಿವರ್ತತೇ ।
ಅವದ್ಯದರ್ಶನಾದೇತಿ ತತ್ತ್ವಜ್ಞಾನಾಚ್ಚ ಧೀಮತಾಮ್ ॥೧೦॥

ಕ್ರೋಧದಿಂದಲೂ, ಲೋಭದಿಂದಲೂ ಪರಾಸೂಯಾ (ಇತರರಲ್ಲಿ ದೋಷವನ್ನು ಕಾಣುವ) ದೋಷವು ಹುಟ್ಟುತ್ತದೆ. ಸಕಲಪ್ರಾಣಿಗಳ

ಲ್ಲಿಯೂ ದಯೆಯನ್ನು ತೋರುವುದರಿಂದಲೂ ಮತ್ತು ವೈರಾಗ್ಯದಿಂದಲೂ ಪರಾಸೂಯಾದೋಷವು ನಿವಾರಣೆಯಾಗುತ್ತದೆ. ಇತರರಲ್ಲಿ ದೋಷವನ್ನು ಕಾಣುವುದರಿಂದ ಇದರ ಉತ್ಪತ್ತಿಯಾಗುತ್ತದೆ. ಬುದ್ಧಿವಂತರ ತತ್ತ್ವಜ್ಞಾನದಿಂದ ಇದು ವಿನಾಶಹೊಂದುತ್ತದೆ.

ಅಜ್ಞಾನಪ್ರಭವೋ ಮೋಹಃ ಪಾಪಾಭ್ಯಾಸಾತ್ಪ್ರವರ್ತತೇ ।
ಯದಾ ಪ್ರಾಜ್ಞೇಷು ರಮತೇ ತದಾ ಸದ್ಯಃ ಪ್ರಣಶ್ಯತಿ ॥೧೧॥

ಮೋಹವು ಅಜ್ಞಾನದಿಂದ ಹುಟ್ಟುತ್ತದೆ. ಪಾಪದ ಕಾರ್ಯಗಳನ್ನು ಮಾಡುತ್ತಲೇ ಇರುವುದರಿಂದ ಇದು ವೃದ್ಧಿಹೊಂದುತ್ತದೆ. ಯಾವಾಗ ಮನುಷ್ಯನು ಪ್ರಾಜ್ಞರೊಡನೆ ಅನುರಾಗವನ್ನಿಟ್ಟುಕೊಳ್ಳುವನೋ (ಪ್ರಾಜ್ಞರ ಸಹವಾಸವನ್ನು ಮಾಡುವನೋ)–ಆಗ ತತ್ಕ್ಷಣದಲ್ಲಿಯೇ ಮೋಹವು ವಿನಾಶಹೊಂದುತ್ತದೆ.

ವಿರುದ್ಧಾನೀಹ ಶಾಸ್ತ್ರಾಣಿ ಯೇ ಪಶ್ಯನ್ತಿ ಕುರೂದ್ವಹ ।
ವಿಧಿತ್ಸಾ ಜಾಯತೇ ತೇಷಾಂ ತತ್ತ್ವಜ್ಞಾನಾನ್ನಿವರ್ತತೇ ॥೧೨॥

ಕೌರವ! ವೇದವಿರುದ್ಧವಾದ ಶಾಸ್ತ್ರಗಳನ್ನು ಯಾರು ಪ್ರಮಾಣವೆಂದು ಭಾವಿಸುವರೋ–ಅಂತಹವರ ಮನಸ್ಸಿನಲ್ಲಿ ಅನುಚಿತವಾದ ಕರ್ಮಗಳನ್ನು ಮಾಡಬೇಕೆನ್ನುವ ಇಚ್ಛೆಯುಂಟಾಗುತ್ತದೆ. ಅದಕ್ಕೆ 'ವಿಧಿತ್ಸಾ' ಎಂದು ಹೆಸರು. ತತ್ತ್ವಜ್ಞಾನದಿಂದ ವಿಧಿತ್ಸೆಯು ನಿವೃತ್ತಿಹೊಂದುತ್ತದೆ.

ಪ್ರೀತ್ಯಾಶೋಕಃ ಪ್ರಭವತಿ ವಿಯೋಗಾತ್ತಸ್ಯ ದೇಹಿನಃ ।
ಯದಾ ನಿರರ್ಥಕಂ ವೇತ್ತಿ ತದಾ ಸದ್ಯಃ ಪ್ರಣಶ್ಯತಿ ॥೧೩॥

ಯಾವ ದೇಹಿಯ ಮೇಲೆ ಅಥವಾ ಮನುಷ್ಯನ ಮೇಲೆ ಅತಿಯಾದ ಪ್ರೀತಿಯಿರುವುದೋ–ಆ ದೇಹಿಯ ವಿಯೋಗದಿಂದಾಗಿ ಶೋಕವು ಹುಟ್ಟುತ್ತದೆ. ಯಾವಾಗ ಮನುಷ್ಯನು ತಾನು ಪಡುತ್ತಿರುವ ಶೋಕವು ವ್ಯರ್ಥವೆಂದೂ ಅದರಿಂದ ಯಾವ ಲಾಭವೂ ಇಲ್ಲವೆಂದೂ ತಿಳಿಯುತ್ತಾನೆಯೋ (ಮನದಟ್ಟುಮಾಡಿಕೊಳ್ಳುತ್ತಾನೆಯೋ)–ಆ ಕೂಡಲೇ ಶೋಕವು ನಾಶಹೊಂದುತ್ತದೆ.

ಪರಾಸುತಾ ಕ್ರೋಧಲೋಭಾದಭ್ಯಾಸಾಚ್ಚ ಪ್ರವರ್ತತೇ ।
ದಯಯಾ ಸರ್ವಭೂತಾನಾಂ ನಿರ್ವೇದಾತ್ಸಾ ನಿವರ್ತತೇ ॥೧೪॥

ಕ್ರೋಧದಿಂದಲೂ, ಲೋಭದಿಂದಲೂ ಮತ್ತು ಅಭ್ಯಾಸದಿಂದಲೂ ಪರಾಸುತಾ (ಇತರರನ್ನು ಕೊಲ್ಲುವ ಅಥವಾ ಅತ್ಯಂತಹೀನವಾದ ಕಾರ್ಯವನ್ನು ಮಾಡುವ ಇಚ್ಛೆ) ದೋಷವು ಹುಟ್ಟುತ್ತದೆ. ಸಕಲಪ್ರಾಣಿಗಳಲ್ಲಿಯೂ ದಯೆತೋರುವುದರಿಂದಲೂ ಮತ್ತು ವೈರಾಗ್ಯದಿಂದಲೂ ಪರಾಸುತಾ ದೋಷದ ನಿವಾರಣೆಯಾಗುತ್ತದೆ.*

ಸತ್ಯತ್ಯಾಗಾತ್ತು ಮಾತ್ಸರ್ಯಮಹಿತಾನಾಂ ಚ ಸೇವಯಾ ।
ಏತತ್ತು ಕ್ಷೀಯತೇ ತಾತ ಸಾಧೂನಾಮುಪಸೇವನಾತ್ ॥೧೫॥

ಸತ್ಯದ ತ್ಯಾಗದಿಂದಲೂ–ದುಷ್ಟರ ಸೇವೆಮಾಡುವುದರಿಂದಲೂ ಮಾತ್ಸರ್ಯದೋಷವು ಉತ್ಪತ್ತಿಯಾಗುತ್ತದೆ. ಸತ್ಪುರುಷರನ್ನು ಸೇವಿಸುವುದರಿಂದಲೂ ಅವರ ಸಹವಾಸಮಾಡುವುದರಿಂದಲೂ ಈ ದೋಷದ ನಿವೃತ್ತಿಯಾಗುತ್ತದೆ.

ಕುಲಾಜ್ಜ್ಞಾನಾತ್ತಥೈಶ್ವರ್ಯಾನ್ಮದೋ ಭವತಿ ದೇಹಿನಾಮ್ ।
ಏಭಿರೇವ ತು ವಿಜ್ಞಾತೈಃ ಸ ಚ ಸದ್ಯಃ ಪ್ರಣಶ್ಯತಿ ॥೧೬॥

ತಾನು ಉತ್ತಮಕುಲದಲ್ಲಿ ಹುಟ್ಟಿರುವೆನೆಂಬ ಅಭಿಮಾನದಿಂದಲೂ, ತಾನೇ ಮಹಾಜ್ಞಾನಿಯೆಂಬ ಅಭಿಮಾನದಿಂದಲೂ, ತಾನೇ ಐಶ್ವರ್ಯವಂತನೆಂಬ ಭಾವನೆಯಿಂದಲೂ–ದೇಹಾಭಿಮಾನಿಗಳಾದ ಮನುಷ್ಯರಿಗೆ ಮದವೆಂಬ ದೋಷವು ಪ್ರಾಪ್ತವಾಗುತ್ತದೆ. ಆದರೆ ಇವುಗಳ ಯಾಥಾರ್ಥ್ಯವನ್ನು ತಿಳಿದುಕೊಂಡರೆ (ಕುಲವಾಗಲೀ, ದುರಭಿಮಾನವಾಗಲೀ, ಲೌಕಿಕಜ್ಞಾನವಾಗಲೀ, ಐಶ್ವರ್ಯವಾಗಲೀ–ಶಾಶ್ವತವಲ್ಲ. ಅಥವಾ ತನಗೆ ಜ್ಞಾನ-ವೈರಾಗ್ಯಗಳನ್ನು ಕೊಡುವುದಿಲ್ಲವೆಂಬುದನ್ನು ತಿಳಿದುಕೊಂಡರೆ) ಆ ಮದವು ತತ್ಕ್ಷಣದಲ್ಲಿಯೇ ವಿನಾಶಹೊಂದುತ್ತದೆ.

---

* ಒಂದು ಪುಸ್ತಕದಲ್ಲಿ ಈ ಅಧ್ಯಾಯದ ೧೦ನೆಯ ಶ್ಲೋಕವೂ–೧೪ನೆಯ ಶ್ಲೋಕವೂ ಅರ್ಧಶ್ಲೋಕವನ್ನು ಬಿಟ್ಟು ಒಂದೇ ಆಗಿರುತ್ತದೆ. ಮತ್ತೊಂದು ಪುಸ್ತಕದಲ್ಲಿ ಸ್ವಲ್ಪ ವ್ಯತ್ಯಾಸದೊಡನೆ ಬಂದಿರುತ್ತದೆ. ಅದನ್ನೇ ನಾವೂ ಅನುಸರಿಸಿದ್ದೇವೆ. ಭಂ.ರಿ. ಇನ್‌ಸ್ಟಿಟ್ಯೂಟ್‌ನವರ ಪುಸ್ತಕದಲ್ಲಿ ಒಂದು ಕಡೆ ಮಾತ್ರವೇ ಶ್ಲೋಕವಿದೆ.

ಈರ್ಷ್ಯಾ ಕಾಮಾತ್ಪ್ರಭವತಿ ಸಂಹರ್ಷಾಚ್ಚೈವ ಜಾಯತೇ ।
ಇತರೇಷಾಂ ತು ಸತ್ತ್ವಾನಾಂ ಪ್ರಜ್ಞಯಾ ಸಾ ಪ್ರಣಶ್ಯತಿ ॥೧೭॥

ಮನಸ್ಸಿನಲ್ಲಿ ಕಾಮನೆಗಳಿರುವುದರಿಂದಲೂ, ಇತರ ಪ್ರಾಣಿಗಳ ಸುಖ-ಸಂತೋಷಗಳನ್ನು ನೋಡುವುದರಿಂದಲೂ ಈರ್ಷ್ಯೆಯೆಂಬ ದೋಷವು ಹುಟ್ಟುತ್ತದೆ. ವಿವೇಕವುಳ್ಳ ಬುದ್ಧಿಯ ಮೂಲಕವಾಗಿ ಈರ್ಷ್ಯೆಯು ವಿನಾಶ ಹೊಂದುತ್ತದೆ.

ವಿಭ್ರಮಾಲ್ಲೋಕಬಾಹ್ಯಾನಾಂ ದ್ವೇಷ್ಯೈರ್ವಾಕ್ಯೈರಸಮ್ಮತೈಃ ।
ಕುತ್ಸಾ ಸಂಜಾಯತೇ ರಾಜಲ್ಲೋಕಾನ್ಪ್ರೇಕ್ಷ್ಯಾಭಿಶಾಮ್ಯತಿ ॥೧೮॥

ಸಮಾಜದಲ್ಲಿ ಬಹಿಷ್ಕೃತರಾದ ನೀಚಪುರುಷರ ದ್ವೇಷಪೂರಿತವಾದ ಮತ್ತು ಅಪ್ರಾಮಾಣಿಕವಾದ ಮಾತುಗಳನ್ನು ಕೇಳುವುದರಿಂದ ಭ್ರಮೆಯುಂಟಾಗಿ 'ಕುತ್ಸಾ' ಅಥವಾ 'ನಿಂದೆ' ಎಂಬ ದೋಷವು ಹುಟ್ಟಿಕೊಳ್ಳುತ್ತದೆ. ಈ ದೋಷವು ಲೋಕದಲ್ಲಿನ ಸತ್ಪುರುಷರ ನಡವಳಿಕೆಗಳ ದರ್ಶನದಿಂದ ಪರಿಹಾರವಾಗುತ್ತದೆ.

ಪ್ರತಿಕರ್ತುಂ ನ ಶಕ್ತಾ ಯೇ ಬಲಸ್ಥಾಯಾಪಕಾರಿಣೇ ।
ಅಸೂಯಾ ಜಾಯತೇ ತೀವ್ರಾ ಕಾರುಣ್ಯಾದ್ವಿನಿವರ್ತತೇ ॥೧೯॥

ತನಗೆ ಅಪಕಾರಮಾಡಿದ ಬಲಿಷ್ಠನಾದ ಶತ್ರುವಿಗೆ ಪ್ರತೀಕಾರಮಾಡಲು ಅಸಮರ್ಥನಾದಾಗ 'ಅಸೂಯಾ' ಎಂಬ ದೋಷವು ಹುಟ್ಟಿಕೊಳ್ಳುತ್ತದೆ. ದಯಾಭಾವವು ಜಾಗ್ರತವಾದೊಡನೆಯೇ ಅಸೂಯಾ ದೋಷವು ನಾಶ ಹೊಂದುತ್ತದೆ.

ಕೃಪಣಾನ್ಸತತಂ ದೃಷ್ಟ್ವಾ ತತಃ ಸಂಜಾಯತೇ ಕೃಪಾ ।
ಧರ್ಮನಿಷ್ಠಾಂ ಯದಾ ವೇತ್ತಿ ತದಾ ಶಾಮ್ಯತಿ ಸಾ ಕೃಪಾ ॥೨೦॥

ಮಹತ್ತಾದ ಕಷ್ಟದಲ್ಲಿ ಸಿಕ್ಕಿಕೊಂಡಿರುವವರನ್ನು ಸತತವಾಗಿ ನೋಡುತ್ತಿದ್ದರೆ 'ಕೃಪೆ' ಅಥವಾ 'ಮರುಕ' ಎಂಬ ದೋಷವುಂಟಾಗುತ್ತದೆ. ಇದು ಧರ್ಮದ ನಿಶ್ಚಯವೆಂದು ಯಾವಾಗ ತಿಳಿಯುತ್ತಾನೆಯೋ ಆಗ ಕೃಪೆಯು ಉಪಶಮನವನ್ನು ಹೊಂದುತ್ತದೆ. (ಕೆಲವರ ಕಷ್ಟಗಳು ಅಪರಿಹಾರ್ಯ. ಅವರ ಕಷ್ಟಗಳನ್ನು ನೋಡಿ ಮರುಕಪಟ್ಟು ಎಷ್ಟೇ ಸಹಾಯ

ಮಾಡುತ್ತಾ ಹೋದರೂ ಅವರಿಗೆ ಕಷ್ಟಗಳು ಹೆಚ್ಚುತ್ತಿರುತ್ತವೆಯೇ ಹೊರತು ಕಷ್ಟಗಳು ಪರಿಹಾರವಾಗುವುದಿಲ್ಲ. ಇಂತಹ ನೂರಾರು ನಿದರ್ಶನಗಳಿವೆ. ಅಂತಹ ಸಮಯದಲ್ಲಿ, ಅವನು ಕಷ್ಟಪಡಬೇಕಾದುದು ಧರ್ಮದ ನಿಶ್ಚಯ ಅಥವಾ ವಿಧಿಯ ನಿಯಮ ಎಂದು ತಿಳಿದುಕೊಂಡರೆ ದೈವೇಚ್ಛೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ–ಎಂದು ತನ್ನ ಸೋಲನ್ನು ಒಪ್ಪಿಕೊಂಡರೆ ಕೃಪೆಯು ಉಪಶಮನಹೊಂದುತ್ತದೆ. ಅಪರಾಧಮಾಡಿ ಶಿಕ್ಷೆಗೆ ಗುರಿಯಾದವನನ್ನು ನೋಡಿದಾಗಲೂ 'ಕೃಪೆ'ಯು ಅಂಕುರಿಸಬಹುದು. ಆಗ ಅದು ಧರ್ಮದ ಶಾಸನವೆಂದು ತಿಳಿದು ಸಮಾಧಾನಹೊಂದಬೇಕು.)

ಅಜ್ಞಾನಪ್ರಭವೋ ಲೋಭೋ ಭೂತಾನಾಂ ದೃಶ್ಯತೇ ಸದಾ ।
ಅಸ್ಥಿರತ್ವಂ ಚ ಭೋಗಾನಾಂ ದೃಷ್ಟ್ವಾ ಜ್ಞಾತ್ವಾ ನಿವರ್ತತೇ ॥೨೧॥

ಪ್ರಾಣಿಗಳಲ್ಲಿ (ಮನುಷ್ಯರಲ್ಲಿ) ಪ್ರಾಪಂಚಿಕವಾದ ಭೋಗಗಳ ವಿಷಯದಲ್ಲಿ ಯಾವ ಲೋಭವುಂಟಾಗುವುದೋ–ಆ ಲೋಭವು ಅಜ್ಞಾನದಿಂದ ಹುಟ್ಟಿದುದು. ಭೋಗಗಳು ಅಸ್ಥಿರವೆಂಬುದನ್ನು ಪ್ರತ್ಯಕ್ಷವಾಗಿ ನೋಡಿ ಮತ್ತು ಶಾಸ್ತ್ರಗಳ ಮೂಲಕವಾಗಿ ತಿಳಿದರೆ ಆ ಲೋಭವು ನಾಶವಾಗುತ್ತದೆ.

ಏತಾನ್ಯೇವ ಜಿತಾನ್ಯಾಹುಃ ಪ್ರಶಮಾಚ್ಚ ತ್ರಯೋದಶ ।
ಏತೇ ಹಿ ಧಾರ್ತರಾಷ್ಟ್ರಾಣಾಂ ಸರ್ವೇ ದೋಷಾಸ್ತ್ರಯೋದಶ ।
ತ್ವಯಾ ಸತ್ಯಾರ್ಥಿನಾ ನಿತ್ಯಂ ವಿಜಿತಾ ಜ್ಯೇಷ್ಠಸೇವನಾತ್ ॥೨೨॥

ಸಂಪೂರ್ಣಶಾಂತಿಯನ್ನು ಧಾರಣೆಮಾಡುವುದರಿಂದ (ಮನಸ್ಸನ್ನೂ ಇಂದ್ರಿಯಗಳನ್ನೂ ಶಾಂತಗೊಳಿಸುವುದರಿಂದ) ಈ ಹದಿಮೂರು ಶತ್ರುಗಳನ್ನೂ ಜಯಿಸಬಹುದೆಂದು ಹೇಳುತ್ತಾರೆ. ಧೃತರಾಷ್ಟ್ರನ ಮಕ್ಕಳಲ್ಲಿ ಈ ಹದಿಮೂರು ದೋಷಗಳೂ ಇದ್ದುವು. ಸತ್ಯಾನ್ವೇಷಣೆಯಲ್ಲಿಯೇ ನಿರತನಾದ ನೀನು ಹಿರಿಯರ ಸೇವೆಯನ್ನು ಮಾಡುತ್ತಿದ್ದ ಕಾರಣ ಈ ಹದಿಮೂರು ದೋಷಗಳನ್ನೂ ಜಯಿಸಿರುವೆ."

ಂ೬೩ನೆಯ ಅಧ್ಯಾಯವು ಮುಗಿಯಿತು.

೧೬೪ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ನೀಚಪುರುಷರ ಲಕ್ಷಣ

ಯುಧಿಷ್ಠಿರನು ಹೇಳುತ್ತಾನೆ :

ಆನೃಶಂಸ್ಯಂ ವಿಜಾನಾಮಿ ದರ್ಶನೇನ ಸತಾಂ ಸದಾ ।
ನೃಶಂಸಾನ್ನ ವಿಜಾನಾಮಿ ತೇಷಾಂ ಕರ್ಮ ಚ ಭಾರತ ॥೧॥

"ಭರತನಂದನನೇ! ಸದಾಕಾಲದಲ್ಲಿಯೂ ಸತ್ಪುರುಷರ ದರ್ಶನ-ಶುಶ್ರೂಷೆಗಳಿಂದ ದಯಾಳುತ್ವವೆಂದರೇನೆಂಬುದನ್ನು ತಿಳಿದುಕೊಂಡಿದ್ದೇನೆ. ಆದರೆ ಕ್ರೂರಿಗಳಾರೆಂಬುದನ್ನು ನಾನು ತಿಳಿದುಕೊಂಡಿಲ್ಲ. ಅವರ ಕರ್ಮಗಳೇನೆಂಬುದೂ ನನಗೆ ತಿಳಿಯದು.

ಕಣ್ಟಕಾನ್ಕೂಪಮಗ್ನಿಂ ಚ ವರ್ಜಯನ್ತಿ ಯಥಾ ನರಾಃ ।
ತಥಾ ನೃಶಂಸಕರ್ಮಾಣಂ ವರ್ಜಯನ್ತಿ ನರಾ ನರಮ್ ॥೨॥

ಯಾವ ರೀತಿಯಲ್ಲಿ ಮನುಷ್ಯರು ಹಾದಿಯಲ್ಲಿ ಸಿಕ್ಕುವ ಮುಳ್ಳುಗಳನ್ನೂ, ಬಾವಿಯನ್ನೂ, ಬೆಂಕಿಯನ್ನೂ ಪರಿಹರಿಸಿಕೊಂಡು ಬೇರೆಡೆಯಲ್ಲಿ ಹೋಗುವರೋ–ಅದೇ ರೀತಿಯಲ್ಲಿ ಕ್ರೂರಕರ್ಮಿಯಾದ ಮನುಷ್ಯನನ್ನೂ ದೂರದಿಂದಲೇ ವರ್ಜಿಸುತ್ತಾರೆ.

ನೃಶಂಸೋ ದಹ್ಯತೇ ನಿತ್ಯಂ ಪ್ರೇತ್ಯ ಚೇಹ ಚ ಭಾರತ ।
ತಸ್ಮಾತ್ತ್ವಂ ಬ್ರೂಹಿ ಕೌರವ್ಯ ತಸ್ಯ ಧರ್ಮವಿನಿಶ್ಚಯಮ್ ॥೩॥

ಕ್ರೂರಿಯಾದ ಮನುಷ್ಯನು ಇಹಲೋಕದಲ್ಲಿಯೂ–ಪರಲೋಕದಲ್ಲಿಯೂ ಕಷ್ಟವೆಂಬ ಅಗ್ನಿಯಿಂದ ದಹಿಸಲ್ಪಡುತ್ತಿರುತ್ತಾನೆ. ಆದುದರಿಂದ ನೀನು ಕ್ರೂರಿಯ ಧರ್ಮ-ಕರ್ಮಗಳನ್ನು ಯಥಾವತ್ತಾಗಿ ತಿಳಿಸು."

ಭೀಷ್ಮನು ಹೇಳುತ್ತಾನೆ :

ಸ್ಪೃಹಾ ಸ್ಯಾದ್ಗರ್ಹಿತಾ ಚೈವ ವಿಧಿತ್ಸಾ ಚೈವ ಕರ್ಮಣಾಮ್ ।
ಅಕ್ರೋಷ್ಟಾ ಕ್ರುಶ್ಯತೇ ಚೈವ ವಞ್ಚಿತೋ ಬುಧ್ಯತೇ ಸ ಚ ॥೪॥

ದತ್ತಾನುಕೀರ್ತಿರ್ವಿಷಮಃ ಕ್ಷುದ್ರೋ ನೈಕೃತಿಕಃ ಶಠಃ ।
ಅಸಂವಿಭಾಗೀ ಮಾನೀ ಚ ತಥಾ ಸಙ್ಗೀ ವಿಕತ್ಥನಃ ॥೫॥

ಸರ್ವಾತಿಶಙ್ಕೀ ಪರುಷೋ ಬಲೀಶಃ ಕೃಪಣೋಽಥವಾ ।
ವರ್ಗಪ್ರಶಂಸೀ ಸತತಮಾಶ್ರಮದ್ವೇಷಸಂಕರೀ ॥೬॥

ಹಿಂಸಾವಿಹಾರಃ ಸತತಮವಿಶೇಷಗುಣಾಗುಣಃ ।
ಬಹ್ವಲೀಕೋಽಮನಸ್ವೀ ಚ ಲುಬ್ಧೋಽತ್ಯರ್ಥಂ ನೃಶಂಸಕೃತ್ ॥೭॥

"ಧರ್ಮಜ! ಯಾವನ ಮನಸ್ಸಿನಲ್ಲಿ ಅತಿನಿಂದ್ಯವಾದ ಅಪೇಕ್ಷೆಗಳೇ ಇರುವುವೋ, ಯಾವನು ಹಿಂಸಾಪ್ರಧಾನವಾದ ಕುತ್ಸಿತಕರ್ಮಗಳನ್ನೇ ಮಾಡಲು ಇಚ್ಛಿಸುವನೋ, ಇತರರನ್ನು ನಿಂದಿಸುವನೋ, ಇತರರ ನಿಂದೆಗೆ ಪಾತ್ರನಾಗುವನೋ, ದೈವವೇ ತನ್ನನ್ನು ವಂಚಿಸಿದೆಯೆಂದು ಭಾವಿಸುವನೋ, ತಾನು ಕೊಟ್ಟ ದಾನವನ್ನು ಪದೇ-ಪದೇ ಉದ್ಘೋಷಿಸುವನೋ, ಯಾವನ ಮನಸ್ಸಿನಲ್ಲಿ ಯಾವಾಗಲೂ ವಿಷಮತೆಯೇ ತುಂಬಿರುವುದೋ (ಯಾವನು ಎಲ್ಲರನ್ನೂ ದ್ವೇಷಿಸುವನೋ,) ಯಾವನು ಕ್ಷುದ್ರನೋ (ನೀಚವಾದ ಕಾರ್ಯವನ್ನೇ ಮಾಡುವನೋ,) ಇತರರ ಜೀವನವನ್ನು ನಾಶಗೊಳಿಸುವನೋ, ಮೋಸಗಾರನೋ, ಭೋಗ್ಯವಸ್ತುಗಳನ್ನು ಇತರರಿಗೆ ಹಂಚಿ ಕೊಡದೇ ತಾನೊಬ್ಬನೇ ಉಪಭೋಗಿಸುವನೋ, ದುರಭಿಮಾನಿಯೋ, ವಿಷಯಾಸಕ್ತನೋ, ಆತ್ಮಪ್ರಶಂಸಕನೋ, ಎಲ್ಲರನ್ನೂ ಸಂಶಯದೃಷ್ಟಿಯಿಂದಲೇ ನೋಡುವನೋ, ಕಠಿಣವಾದ ಮಾತುಗಳನ್ನಾಡುವನೋ, ಕಾಗೆಯಂತೆ ವಕ್ರದೃಷ್ಟಿಯುಳ್ಳವನೋ, ಜಿಪುಣನೋ, ತನ್ನ ಮತವೇ ಹೆಚ್ಚೆಂದು ಹೊಗಳಿಕೊಳ್ಳುವನೋ, (ಮತಾಂಧನೋ,) ವರ್ಣಾಶ್ರಮದ್ವೇಷಿಯೋ, ವರ್ಣಸಂಕರಿಯೋ, ಪರಹಿಂಸೆಯಿಂದಲೇ ಆನಂದಪಡುವನೋ, ಗುಣಾವಗುಣಗಳಲ್ಲಿ ತಾರತಮ್ಯವಿಲ್ಲವೆಂದು ಭಾವಿಸುವನೋ, ಯಾವಾಗಲೂ ಸುಳ್ಳನ್ನೇ ಹೇಳುವ ಸ್ವಭಾವದವನೋ, ಅಜಿತೇಂದ್ರಿಯನೋ, ಕಡು ಲೋಭಿಯೋ–ಇಂತಹ ಮನುಷ್ಯನು ಯಾವಾಗಲೂ ನೃಶಂಸಕರ್ಮಗಳನ್ನೇ ಮಾಡುವನೆಂದು ಹೇಳುತ್ತಾರೆ. ಇಂತಹವರೇ ನೃಶಂಸರು.

ಧರ್ಮಶೀಲಂ ಗುಣೋಪೇತಂ ಪಾಪಮಿತ್ಯವಗಚ್ಛತಿ ।
ಆತ್ಮಶೀಲಪ್ರಮಾಣೇನ ನ ವಿಶ್ವಸಿತಿ ಕಸ್ಯಚಿತ್ ॥೮॥

ಯಾವನು ಧರ್ಮಶೀಲನನ್ನೂ, ಸದ್ಗುಣಸಂಪನ್ನನನ್ನೂ ಪಾಪಿಷ್ಠನೆಂದು ಭಾವಿಸುವನೋ, ತನ್ನ ಶೀಲವನ್ನೇ ಆದರ್ಶವನ್ನಾಗಿಟ್ಟುಕೊಂಡು ತನ್ನಂತೆಯೇ ಬೇರೆಯವರೂ ಇರುವರೆಂದು ಭಾವಿಸಿ (ತಾನು ಕಳ್ಳ, ಪರರನ್ನು ನಂಬ–ಎಂಬಂತೆ) ಯಾರೊಬ್ಬರನ್ನೂ ನಂಬುವುದಿಲ್ಲವೋ–ಅವನೇ ನೃಶಂಸನು.

ಪರೇಷಾಂ ಯತ್ರ ದೋಷಃ ಸ್ಯಾತ್ತದ್ಗುಹ್ಯಂ ಸಮ್ಪ್ರಕಾಶಯೇತ್ ।
ಸಮಾನೇಷ್ವೇವ ದೋಷೇಷು ವೃತ್ತ್ಯರ್ಥಮುಪಘಾತಯೇತ್ ॥೯॥

ಇತರರಲ್ಲೇನಾದರೂ ಅಲ್ಪ-ಸ್ವಲ್ಪ ದೋಷವಿದ್ದು ಅದು ಯಾರಿಗೂ ತಿಳಿಯದೇ ಇದ್ದು ಗುಪ್ತವಾಗಿದ್ದರೆ ಅದನ್ನು ಪ್ರಕಾಶಗೊಳಿಸುವುದು ನೃಶಂಸನ ಸ್ವಭಾವವಾಗಿರುತ್ತದೆ. ತನ್ನಲ್ಲಿಯೂ ಇತರರಲ್ಲಿರುವ ದೋಷಕ್ಕೆ ಸಮಾನವಾದ ದೋಷಗಳೇ ಇದ್ದರೂ ಅವನ್ನು ಬಹಿರಂಗಗೊಳಿಸಲು ಅವಕಾಶ ಕೊಡದೇ, ತನ್ನ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಬೇಕೆನ್ನುವ ಇಚ್ಛೆಯಿಂದ ತನ್ನಂತೆಯೇ ಇರುವ ಮತ್ತೊಬ್ಬ ಅಪರಾಧಿಯನ್ನು ಧ್ವಂಸಮಾಡುವುದು ನೃಶಂಸನ ಸ್ವಭಾವ.

ತಥೋಪಕಾರಿಣಂ ಚೈವ ಮನ್ಯತೇ ವಞ್ಚಿತಂ ಪರಮ್ ।
ದತ್ತ್ವಾಪಿ ಚ ಧನಂ ಕಾಲೇ ಸಂತಪತ್ಯುಪಕಾರಿಣೇ ॥೧೦॥

ನೃಶಂಸನು ತನಗೆ ಉಪಕಾರಮಾಡಿದವನನ್ನು ವಂಚಿತನಾದವನೆಂದೂ (ತನ್ನಿಂದ ಮೋಸಗೊಳಿಸಲ್ಪಟ್ಟವನೆಂದೂ, ಅವನು ತನ್ನ ಬಲೆಯಲ್ಲಿ ಬಿದ್ದನೆಂದೂ) ಭಾವಿಸುತ್ತಾನೆ. ಉಪಕಾರಮಾಡಿದವನಿಗೆ ಯಾವಾಗಲಾದರೂ ಅಲ್ಪ-ಸ್ವಲ್ಪ ಹಣವನ್ನು ಕೊಟ್ಟುಬಿಟ್ಟರೆ ಅದಕ್ಕಾಗಿ ನೃಶಂಸನು ಯಾವಾಗಲೂ ಪರಿತಪಿಸುತ್ತಿರುತ್ತಾನೆ.

ಭಕ್ಷ್ಯಂ ಪೇಯಮಥಾಲೇಹ್ಯಂ ಯಚ್ಚಾನ್ಯತ್ಸಾಧು ಭೋಜನಮ್ ।
ಪ್ರೇಕ್ಷಮಾಣೇಷು ಯೋಽಶ್ನೀಯಾನ್ನೃಶಂಸಮಿತಿ ತಂ ವದೇತ್ ॥೧೧॥

ಯಾವ ಮನುಷ್ಯನು ಹಲವಾರು ಮಂದಿ ನೋಡುತ್ತಿರುವಾಗ

ತಾನೊಬ್ಬನೇ ಭಕ್ಷ್ಯ, ಪಾನೀಯ, ಲೇಹ್ಯ–ಮೊದಲಾದ ಸ್ವಾದುಪದಾರ್ಥಗಳಿಂದ ಕೂಡಿದ ಮೃಷ್ಟಾನ್ನವನ್ನು ಭೋಜನಮಾಡುತ್ತಿರುತ್ತಾನೆಯೋ–ಅಂತಹ ಮನುಷ್ಯನನ್ನು ನೃಶಂಸನೆಂದು ತಿಳಿಯಬೇಕು.

ಬ್ರಾಹ್ಮಣೇಭ್ಯಃ ಪ್ರದಾಯಾಗ್ರಂ ಯಃ ಸುಹೃದ್ಭಿಃ ಸಹಾಶ್ನುತೇ ।
ಸ ಪ್ರೇತ್ಯ ಲಭತೇ ಸ್ವರ್ಗಮಿಹ ಚಾನನ್ತ್ಯಮಶ್ನುತೇ ॥೧೨॥

ಮೊದಲು ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ಅನಂತರ ಸುಹೃದರೊಡನೆ ಭೋಜನವನ್ನು ಮಾಡುವವನು ಈ ಲೋಕದಲ್ಲಿ ಅನಂತವಾದ ಸುಖೋಪಭೋಗಗಳನ್ನು ಅನುಭವಿಸಿ ಅವಸಾನಾನಂತರದಲ್ಲಿ ಸ್ವರ್ಗಲೋಕಕ್ಕೆ ಹೋಗುತ್ತಾನೆ.

ಯುಧಿಷ್ಠಿರ! ನಿನ್ನ ಪ್ರಶ್ನೆಗೆ ಅನುಸಾರವಾಗಿ ನೃಶಂಸರ ಪರಿಚಯವನ್ನು ಮಾಡಿಕೊಟ್ಟಿರುತ್ತೇನೆ. ವಿದ್ವಾಂಸನಾದವನು ಯಾವಾಗಲೂ ನೃಶಂಸರನ್ನು ಬಹಳ ದೂರದಿಂದಲೇ ವರ್ಜಿಸಬೇಕು."

ಂ೬೪ನೆಯ ಅಧ್ಯಾಯವು ಮುಗಿಯಿತು.

೧೬೫ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ನಾನಾವಿಧವಾದ ಪಾಪಗಳು ಮತ್ತು ಅವುಗಳ ನಿರಸನಕ್ಕಾಗಿ ವಿಧಿಸಿರುವ ಪ್ರಾಯಶ್ಚಿತ್ತಗಳ ವಿವರಣೆ

ಭೀಷ್ಮನು ಮುಂದುವರಿಸುತ್ತಾ ಪ್ರಾಯಶ್ಚಿತ್ತಾದಿಗಳನ್ನು ಹೇಳುತ್ತಾನೆ :

ಹೃತಾರ್ಥೋ ಯಕ್ಷ್ಯಮಾಣಶ್ಚ ಸರ್ವವೇದಾನ್ತಗಶ್ಚ ಯಃ ।
ಆಚಾರ್ಯಪಿತೃಕಾರ್ಯಾರ್ಥಂ ಸ್ವಾಧ್ಯಾಯಾರ್ಥಮಥಾಪಿ ಚ ॥೧॥

ಏತೇ ವೈ ಸಾಧವೋ ದೃಷ್ಟಾ ಬ್ರಾಹ್ಮಣಾ ಧರ್ಮಭಿಕ್ಷವಃ ।
ನಿಃಸ್ವೇಭ್ಯೋ ದೇಯಮೇತೇಭ್ಯೋ ದಾನಂ ವಿದ್ಯಾ ಚ ಭಾರತ ॥೨॥

"ಯುಧಿಷ್ಠಿರ! ವೇದ-ವೇದಾಂಗಪಾರಂಗತನಾದ ಮತ್ತು ಯಜ್ಞಮಾಡಬೇಕೆಂದಿರುವ ಬ್ರಾಹ್ಮಣನ ಸಂಪತ್ತನ್ನು ಕಳ್ಳರೇನಾದರೂ ಅಪಹರಿಸಿದರೆ–ಅಂತಹ ಬ್ರಾಹ್ಮಣನಿಗೆ ಆಚಾರ್ಯದಕ್ಷಿಣಾರೂಪವಾಗಿ ರಾಜನು

ಧನವನ್ನು ಕೊಡಬೇಕು. ಆಚಾರ್ಯದಕ್ಷಿಣೆಯನ್ನು ಕೊಡಬೇಕೆಂದಿರುವ ಬ್ರಹ್ಮಚಾರಿಗೂ ಹಣವನ್ನು ಕೊಡಬೇಕು. ಪಿತೃಗಳಿಗೆ ಶ್ರಾದ್ಧಾದಿಗಳನ್ನು ಮಾಡಲೂ ಮತ್ತು ವೇದ-ಶಾಸ್ತ್ರಗಳನ್ನು ಅಧ್ಯಯನಮಾಡಲೂ ಧನವನ್ನು ಕೊಡಬೇಕು. ಸತ್ಪುರುಷರಾದ ಅಂತಹ ಬ್ರಾಹ್ಮಣರು ಪ್ರಾಯಶಃ ಧರ್ಮ ಕಾರ್ಯಗಳನ್ನು ಮಾಡುವ ಸಲುವಾಗಿಯೇ ಧನದ ಭಿಕ್ಷೆಯನ್ನು ಬೇಡುವುದು ಕಂಡುಬಂದಿದೆ. ನಿರ್ಧನರಾದ ಅಂತಹ ಬ್ರಾಹ್ಮಣರಿಗೆ ದಾನವನ್ನೂ, ವಿದ್ಯೆಗಳ ಅಧ್ಯಯನಕ್ಕಾಗಿ ಧನವನ್ನೂ ಕೊಡಬೇಕು.

ಅನ್ಯತ್ರ ದಕ್ಷಿಣಾದಾನಂ ದೇಯಂ ಭರತಸತ್ತಮ ।
ಅನ್ಯೇಭ್ಯೋಽಪಿ ಬಹಿರ್ವೇದಿ ಚಾಕೃತಾನ್ನಂ ವಿಧೀಯತೇ ॥೩॥

ಹಿಂದೆ ಹೇಳಿದುದಕ್ಕಿಂತಲೂ ಭಿನ್ನಪರಿಸ್ಥಿತಿಗಳಲ್ಲಿ ಬ್ರಾಹ್ಮಣನಿಗೆ ದಕ್ಷಿಣೆಯನ್ನು ಮಾತ್ರವೇ ಕೊಡಬೇಕು. ಬ್ರಾಹ್ಮಣೇತರರಿಗೂ ಕೂಡ ಯಜ್ಞವೇದಿಯ ಹೊರಭಾಗದಲ್ಲಿ ಪಕ್ವವಾಗದಿರುವ ಹಸಿಯಾದ ಆಹಾರ ಪದಾರ್ಥಗಳನ್ನು ಕೊಡಬಹುದು.

ಸರ್ವರತ್ನಾನಿ ರಾಜಾ ಹಿ ಯಥಾರ್ಹಂ ಪ್ರತಿಪಾದಯೇತ್ ।
ಬ್ರಾಹ್ಮಣಾ ಏವ ವೇದಾಶ್ಚ ಯಜ್ಞಾಶ್ಚ ಬಹುದಕ್ಷಿಣಾಃ ।
ಅನ್ಯೋನ್ಯಂ ವಿಭವಾಚಾರಾ ಯಜನ್ತೇ ಗುಣತಃ ಸದಾ ॥೪॥

ರಾಜನು ತನ್ನಲ್ಲಿರುವ ಸರ್ವರತ್ನಗಳನ್ನೂ ಬ್ರಾಹ್ಮಣರ ಅರ್ಹತೆಗೆ ಅನುಸಾರವಾಗಿ ದಾನಮಾಡಬೇಕು. ಏಕೆಂದರೆ : ಬ್ರಾಹ್ಮಣರು ವೇದ ಸ್ವರೂಪರು. ಬಹುದಕ್ಷಿಣಾಕವಾದ ಯಜ್ಞಸ್ವರೂಪರು. ತಮ್ಮಲ್ಲಿರುವ ಸಂಪತ್ತಿಗೆ ಅನುಸಾರವಾಗಿ ಸಮಸ್ತಕಾರ್ಯಗಳನ್ನೂ ವ್ಯವಸ್ಥೆಗೊಳಿಸುವ ಬ್ರಾಹ್ಮಣರು ಪರಸ್ಪರವಾಗಿ ಸಂಘಟಿಸಿ ಗುಣಯುಕ್ತವಾದ ಯಜ್ಞಗಳ ಅನುಷ್ಠಾನವನ್ನು ಮಾಡುತ್ತಾರೆ.

ಯಸ್ಯ ತ್ರೈವಾರ್ಷಿಕಂ ಭಕ್ತಂ ಪರ್ಯಾಪ್ತಂ ಭೃತ್ಯವೃತ್ತಯೇ ।
ಅಧಿಕಂ ಚಾಪಿ ವಿದ್ಯೇತ ಸ ಸೋಮಂ ಪಾತುಮರ್ಹತಿ ॥೫॥

ಯಾವ ಬ್ರಾಹ್ಮಣನ ಬಳಿಯಲ್ಲಿ ತನ್ನ ಕುಟುಂಬವರ್ಗದವರನ್ನು ಪಾಲಿಸಿ-ಪೋಷಿಸಲು ಮೂರು ವರ್ಷಗಳಿಗೆ ಸಾಕಾಗುವಷ್ಟು ಧನವಿರುವುದೋ

ಅಥವಾ ಅದಕ್ಕಿಂತಲೂ ಹೆಚ್ಚಿನ ಧನವಿರುವುದೋ–ಅಂತಹ ಬ್ರಾಹ್ಮಣನು ಸೋಮರಸವನ್ನು ಪಾನಮಾಡಲು (ಸೋಮಯಾಗವನ್ನು ಮಾಡಲು) ಅರ್ಹನಾಗುತ್ತಾನೆ.

ಯಜ್ಞಶ್ಚೇತ್ಪ್ರತಿರುದ್ಧಃ ಸ್ಯಾದಂಶೇನೈಕೇನ ಯಜ್ವನಃ ।
ಬ್ರಾಹ್ಮಣಸ್ಯ ವಿಶೇಷೇಣ ಧಾರ್ಮಿಕೇ ಸತಿ ರಾಜನಿ ॥೬॥

ಯೋ ವೈಶ್ಯಃ ಸ್ಯಾದ್ಬಹುಪಶುರ್ಹೀನಕ್ರತುರಸೋಮಪಃ ।
ಕುಟುಮ್ಬಾತ್ತಸ್ಯ ತದ್ವಿತ್ತಂ ಯಜ್ಞಾರ್ಥಂ ಪಾರ್ಥಿವೋ ಹರೇತ್ ॥೭॥

ಧರ್ಮಾತ್ಮನಾದ ರಾಜನು ರಾಜ್ಯವಾಳುತ್ತಿರುವಾಗ ಬ್ರಾಹ್ಮಣನೊಬ್ಬನು ಆರಂಭಿಸಿದ ಯಜ್ಞವು ಧನದ ಅಭಾವದಿಂದ ಪೂರ್ಣವಾಗದೇ ಒಂದಂಶವು ಮಾತ್ರವೇ ಉಳಿದಿದ್ದರೆ–ಅಂತಹ ಸಂದರ್ಭದಲ್ಲಿ ರಾಜನು ತನ್ನ ರಾಜ್ಯದಲ್ಲಿ ಸಾವಿರಾರು ಹಸುಗಳನ್ನಿಟ್ಟುಕೊಂಡು ಸಂಪತ್ತಿನಿಂದ ಸಮೃದ್ಧನಾಗಿರುವ ಮತ್ತು ಸೋಮಯಾಗವನ್ನು ಮಾಡದಿರುವ ವೈಶ್ಯನ ಕುಟುಂಬದಿಂದ ಯಜ್ಞವನ್ನು ಪೂರ್ಣಮಾಡಲು ಬೇಕಾಗುವಷ್ಟು ಧನವನ್ನು ತೆಗೆದುಕೊಳ್ಳಬೇಕು.

ಆಹರೇದಥ ನೋ ಕಿಞ್ಚಿತ್ಕಾಮಂ ಶೂದ್ರಸ್ಯ ವೇಶ್ಮನಃ ।
ನ ಹಿ ಯಜ್ಞೇಷು ಶೂದ್ರಸ್ಯ ಕಿಞ್ಚಿದಸ್ತಿ ಪರಿಗ್ರಹಃ ॥೮॥

ಆದರೆ ರಾಜನು ಸ್ವೇಚ್ಛೆಯಿಂದ ಶೂದ್ರನ ಮನೆಯಿಂದ ಸ್ವಲ್ಪವಾದರೂ ಧನವನ್ನು ಯಜ್ಞಾರ್ಥವಾಗಿ ತರಬಾರದು. ಏಕೆಂದರೆ : ಯಜ್ಞಗಳಲ್ಲಿ ಶೂದ್ರನಿಗೆ ಕಿಂಚಿನ್ಮಾತ್ರವೂ ಅಧಿಕಾರವಿಲ್ಲ.

ಯೋಽನಾಹಿತಾಗ್ನಿಃ ಶತಗುರಯಜ್ವಾ ಚ ಸಹಸ್ರಗುಃ ।
ತಯೋರಪಿ ಕುಟುಮ್ಬಾಭ್ಯಾಮಾಹರೇದವಿಚಾರಯನ್ ॥೯॥

ಯಾವ ವೈಶ್ಯನು ನೂರು ಹಸುಗಳಿಗೆ ಒಡೆಯನಾಗಿರುವನೋ ಮತ್ತು ಆಹಿತಾಗ್ನಿಯಲ್ಲವೋ (ಅಗ್ನಿಹೋತ್ರವನ್ನು ಮಾಡುವುದಿಲ್ಲವೋ,) ಯಾವ ವೈಶ್ಯನು ಸಾವಿರ ಹಸುಗಳಿಗೆ ಒಡೆಯನಾಗಿರುವನೋ ಮತ್ತು ಅಯಜ್ವನೋ (ಯಜ್ಞವನ್ನು ಮಾಡಿಲ್ಲವೋ)–ಅಂತಹ ವೈಶ್ಯರಿಬ್ಬರ ಕುಟುಂಬಗಳಿಂದಲೂ

ರಾಜನು ಯಾವ ವಿಚಾರವನ್ನೂ ಮಾಡದೆ ಯಜ್ಞಾರ್ಥವಾಗಿ ಧನವನ್ನು ತರಬಹುದು.

ಅದಾತೃಭ್ಯೋ ಹರೇದ್ವಿತ್ತಂ ವಿಖ್ಯಾಪ್ಯ ನೃಪತಿಃ ಸದಾ ।
ತಥೈವಾಚರತೋ ಧರ್ಮೋ ನೃಪತೇಃ ಸ್ಯಾದಥಾಖಿಲಃ ॥೧೦॥

ಧನಿಕರಾಗಿದ್ದರೂ ಯಾರು ದಾನಶೀಲರಲ್ಲವೋ–ಅಂತಹವರ ದಾನ ಮಾಡದಿರುವ ದೋಷವನ್ನು ಪ್ರಚುರಪಡಿಸಿ ಅವರಲ್ಲಿರುವ ಧನವನ್ನು ಧರ್ಮಕಾರ್ಯಾರ್ಥವಾಗಿ ತೆಗೆದುಕೊಳ್ಳಬೇಕು. ಹೀಗೆ ಮಾಡುವುದರಿಂದ ರಾಜನಿಗೆ ಧರ್ಮಾಭಿವೃದ್ಧಿಯಾಗುತ್ತದೆ.

ತಥೈವ ಶೃಣು ಮೇ ಭಕ್ತಂ ಭಕ್ತಾನಿ ಷಡನಶ್ನತಃ ।
ಅಶ್ವಸ್ತನವಿಧಾನೇನ ಹರ್ತವ್ಯಂ ಹೀನಕರ್ಮಣಃ ॥೧೧॥

ಧರ್ಮಜ! ಇದೇ ರೀತಿಯಲ್ಲಿ ನಾನು ಆಹಾರದ ಸಂಬಂಧವಾಗಿ ಹೇಳುವ ಮಾತುಗಳನ್ನು ಕೇಳು : ಬ್ರಾಹ್ಮಣನು ಅನ್ನಾಭಾವದಿಂದ ಆರು ಭೋಜನಗಳ ಕಾಲದವರೆಗೂ (ಮೂರು ದಿವಸಗಳವರೆಗೂ) ಉಪವಾಸ ವಿರಬೇಕಾದ ಸಂದರ್ಭವು ಒದಗಿಬಂದಾಗ ನಿಕೃಷ್ಟವಾದ ಕಾರ್ಯವನ್ನು ಮಾಡುವವನ ಮನೆಯಿಂದಾದರೂ ಅಶ್ವಸ್ತನವಿಧಾನದಿಂದ ಆಹಾರವನ್ನು ಅಪಹರಿಸಬಹುದು. (ಅಶ್ವಸ್ತನವಿಧಾನವೆಂದರೆ ಒಂದು ದಿನದ ಭೋಜನಕ್ಕೆ ಸಾಕಾಗುವಷ್ಟನ್ನು ಮಾತ್ರವೇ ತೆಗೆದುಕೊಳ್ಳಬೇಕು. ನಾಳೆಗೆ ಉಳಿಯುವಂತೆ ತೆಗೆದುಕೊಳ್ಳಬಾರದು.)

ಖಲಾತ್ಕ್ಷೇತ್ರಾತ್ತಥಾರಾಮಾದ್ಯತೋ ವಾಪ್ಯುಪಪದ್ಯತೇ ।
ಆಖ್ಯಾತವ್ಯಂ ನೃಪಾಯೈತತ್ಪೃಚ್ಛತೇಽಪೃಚ್ಛತೇಽಪಿ ವಾ ॥೧೨॥

ಧಾನ್ಯವನ್ನು ಒಕ್ಕುವ ಕಣದಿಂದಾಗಲೀ, ಕಾಳುಗಳು ಉದುರಿರುವ ಗದ್ದೆಯಿಂದಾಗಲೀ, ತೋಟದಿಂದಾಗಲೀ ಅಥವಾ ಆಹಾರವು ಸಿಕ್ಕುವ ಯಾವುದೇ ಸ್ಥಳದಿಂದಾಗಲೀ–ಹಸಿದಿರುವ ಬ್ರಾಹ್ಮಣನು ಒಂದು ದಿನಕ್ಕೆ ಸಾಕಾಗುವಷ್ಟು ಆಹಾರವನ್ನು ಅಪಹರಿಸಬಹುದು. ರಾಜನು ಪ್ರಶ್ನಿಸಲಿ–ಪ್ರಶ್ನಿಸದಿರಲಿ ತಾನು ಮಾಡಿದ ಕಾರ್ಯವನ್ನು ರಾಜನಿಗೆ ತಿಳಿಸಿಬಿಡಬೇಕು.

ನ ತಸ್ಮೈ ಧಾರಯೇದ್ದಣ್ಡಂ ರಾಜಾ ಧರ್ಮೇಣ ಧರ್ಮವಿತ್ ।
ಕ್ಷತ್ರಿಯಸ್ಯ ತು ಬಾಲಿಶ್ಯಾದ್ಬ್ರಾಹ್ಮಣಃ ಕ್ಲಿಶ್ಯತೇ ಕ್ಷುಧಾ ॥೧೩॥

ಮೂರು ದಿವಸಗಳ ಉಪವಾಸದಿಂದ ಬಳಲಿದ ಬ್ರಾಹ್ಮಣನು ಒಂದು ಹೊತ್ತಿಗೆ ಸಾಕಾಗುವಷ್ಟು ಅನ್ನವನ್ನು ಕದ್ದುದಕ್ಕಾಗಿ ಧರ್ಮವಿದನಾದ ರಾಜನು ಧರ್ಮಾನುಸಾರವಾಗಿ ಆ ಬ್ರಾಹ್ಮಣನಿಗೆ ದಂಡವನ್ನು ವಿಧಿಸಬಾರದು. ಏಕೆಂದರೆ : ಕ್ಷತ್ರಿಯರಾಜನ ಅವಿವೇಕದ ಪರಿಣಾಮವಾಗಿಯೇ ಬ್ರಾಹ್ಮಣನು ಹಸಿವಿನಿಂದ ಕ್ಲೇಶಪಡುತ್ತಾನೆ.

ಶ್ರುತಶೀಲೇ ಸಮಾಜ್ಞಾಯ ವೃತ್ತಿಮಸ್ಯ ಪ್ರಕಲ್ಪಯೇತ್ ।
ಅಥೈನಂ ಪರಿರಕ್ಷೇತ ಪಿತಾ ಪುತ್ರಮಿವೌರಸಮ್ ॥೧೪॥

ರಾಜನು ಹಸಿವಿನಿಂದ ಬಳಲಿರುವ ಬ್ರಾಹ್ಮಣನ ವಿದ್ಯೆಯನ್ನೂ, ಸ್ವಭಾವವನ್ನೂ ತಿಳಿದುಕೊಂಡು ಅವನ ಜೀವಿಕೆಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ತಂದೆಯು ಔರಸಪುತ್ರನನ್ನು ರಕ್ಷಿಸುವಂತೆ–ರಾಜನು ಆ ಬ್ರಾಹ್ಮಣನನ್ನು ರಕ್ಷಿಸಬೇಕು.

ಇಷ್ಟಿಂ ವೈಶ್ವಾನರೀಂ ನಿತ್ಯಂ ನಿರ್ವಪೇದಬ್ದಪರ್ಯಯೇ ।
ಅನುಕಲ್ಪಃ ಪರೋ ಧರ್ಮೋ ಧರ್ಮವಾದೈಸ್ತು ಕೇವಲಮ್ ॥೧೫॥

ಪ್ರತಿವರ್ಷವೂ ಆಚರಿಸಬೇಕಾದ ಆಗ್ರಯಣವೇ ಮೊದಲಾದ ಯಾಗಗಳನ್ನು ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಅದಕ್ಕೆ ಪ್ರತಿಯಾಗಿ ವೈಶ್ವಾನರೇಷ್ಟಿಯನ್ನಾದರೂ ಮಾಡಬೇಕು. ಮಾಡಬೇಕಾದ ಮುಖ್ಯಕರ್ಮದ ಸ್ಥಾನದಲ್ಲಿ ಗೌಣಕರ್ಮವನ್ನು ಮಾಡಿದರೆ ಅದಕ್ಕೆ ಅನುಕಲ್ಪವೆಂದು ಹೆಸರು. ಧರ್ಮಜ್ಞರಾದವರು ಹೇಳಿರುವ ಆಪತ್ಕಾಲೋಚಿತವಾದ ಈ ಅನುಕಲ್ಪ ಧರ್ಮವೂ ಶ್ರೇಷ್ಠವಾದ ಧರ್ಮವೇ ಆಗಿರುತ್ತದೆ.

ವಿಶ್ವೈರ್ದೇವೈಶ್ಚ ಸಾಧ್ಯೈಶ್ಚ ಬ್ರಾಹ್ಮಣೈಶ್ಚ ಮಹರ್ಷಿಭಿಃ ।
ಆಪತ್ಸು ಮರಣಾದ್ಭೀತೈರ್ವಿಧಿಃ ಪ್ರತಿನಿಧೀಕೃತಃ ॥೧೬॥

ಆಪತ್ಕಾಲದಲ್ಲಿ ಮೃತ್ಯುವಿಗೆ ಹೆದರಿದ ವಿಶ್ವೇದೇವತೆಗಳೂ, ಸಾಧ್ಯರೂ, ಬ್ರಾಹ್ಮಣರೂ ಮತ್ತು ಮಹರ್ಷಿಗಳೂ ನಿಯತವಾದ ವಿಧಿಗಳಿಗೆ ಬದಲಾಗಿ ಅನುಕಲ್ಪಗಳನ್ನು ಪ್ರತಿನಿಧಿಗಳನ್ನಾಗಿ ಕಲ್ಪಿಸಿರುವರು.

ಪ್ರಭುಃ ಪ್ರಥಮಕಲ್ಪಸ್ಯ ಯೋಽನುಕಲ್ಪೇನ ವರ್ತತೇ ।
ನ ಸಾಮ್ಪರಾಯಿಕಂ ತಸ್ಯ ದುರ್ಮತೇರ್ವಿದ್ಯತೇ ಫಲಮ್ ॥೧೭॥

ಮುಖ್ಯವಿಧಿಗೆ ಅನುಸಾರವಾಗಿ ಕರ್ಮಮಾಡಲು ಸಮರ್ಥನಾಗಿದ್ದರೂ ಯಾವನು ಗೌಣವಿಧಿಯಿಂದ (ಅನುಕಲ್ಪವಿಧಿಯಿಂದ) ಕರ್ಮವನ್ನು ಮಾಡುವನೋ–ಅಂತಹ ದುರ್ಬುದ್ಧಿಯಿಂದ ಕೂಡಿದ ಮನುಷ್ಯನಿಗೆ ಪಾರಲೌಕಿಕವಾದ ಫಲವು ಸಿಕ್ಕುವುದಿಲ್ಲ.

ನ ಬ್ರಾಹ್ಮಣೋ ನಿವೇದೇತ ಕಿಂಚಿದ್ರಾಜನಿ ವೇದವಿತ್ ।
ಸ್ವವೀರ್ಯಾದ್ರಾಜವೀರ್ಯಾಚ್ಚ ಸ್ವವೀರ್ಯಂ ಬಲವತ್ತರಮ್ ॥೧೮॥

ವೇದವಿದನಾದ ಬ್ರಾಹ್ಮಣನು ತನ್ನ ಕಷ್ಟ-ಸುಖಗಳನ್ನು ರಾಜನಲ್ಲಿ ಹೇಳಿಕೊಳ್ಳಬಾರದು. ಏಕೆಂದರೆ : ತನ್ನ ಬ್ರಹ್ಮಶಕ್ತಿಯನ್ನೂ ರಾಜನ ಕ್ಷಾತ್ರ ಶಕ್ತಿಯನ್ನೂ ತುಲನೆಮಾಡಿದರೆ ರಾಜನ ಕ್ಷಾತ್ರಶಕ್ತಿಗಿಂತಲೂ ತನ್ನಲ್ಲಿರುವ ಬ್ರಹ್ಮಶಕ್ತಿಯೇ ಬಲವಾದುದು. ಹೆಚ್ಚು ಬಲವಿರುವವನು ಸಾಮಾನ್ಯಬಲ ವಿರುವವರನ್ನು ಬೇಡಲು ಹೋಗದಂತೆ–ಅಧಿಕಬ್ರಹ್ಮಬಲವನ್ನು ಹೊಂದಿರುವ ಬ್ರಾಹ್ಮಣನು ತನಗಿಂತಲೂ ಕಡಿಮೆ ಬಲವುಳ್ಳ ಕ್ಷತ್ರಿಯರನ್ನು ಬೇಡಲು ಹೋಗಬಾರದು.

ತಸ್ಮಾದ್ರಾಜ್ಞಃ ಸದಾ ತೇಜೋ ದುಃಸಹಂ ಬ್ರಹ್ಮವಾದಿನಾಮ್ ।
ಕರ್ತಾ ಶಾಸ್ತಾ ವಿಧಾತಾ ಚ ಬ್ರಾಹ್ಮಣೋ ದೇವ ಉಚ್ಯತೇ ॥೧೯॥

ಆದುದರಿಂದ ಬ್ರಹ್ಮವಾದಿಗಳ ತೇಜಸ್ಸು ರಾಜರಿಗೆ ಯಾವಾಗಲೂ ದುಸ್ಸಹವಾದುದು. ಬ್ರಾಹ್ಮಣನು ಈ ಜಗತ್ತಿಗೆ ಕರ್ತೃವೂ, ಶಾಸಕನೂ, ಧಾರಣ-ಪೋಷಣೆಗಳನ್ನು ಮಾಡುವವನೂ ಮತ್ತು ದೇವತೆಯೂ ಆಗಿದ್ದಾನೆ.

ತಸ್ಮಿನ್ನಾಕುಶಲಂ ಬ್ರೂಯಾನ್ನ ಶುಷ್ಕಾಮೀರಯೇದ್ಗಿರಮ್ ।
ಕ್ಷತ್ರಿಯೋ ಬಾಹುವೀರ್ಯೇಣ ತರೇದಾಪದಮಾತ್ಮನಃ ।
ಧನೈರ್ವೈಶ್ಯಶ್ಚ ಶೂದ್ರಶ್ಚ ಮನ್ತ್ರೈರ್ಹೋಮೈಶ್ಚ ವೈ ದ್ವಿಜಃ ॥೨೦॥

ಆದುದರಿಂದ ಬ್ರಾಹ್ಮಣನ ವಿಷಯದಲ್ಲಿ ಅಮಂಗಲವಾದ ಮಾತನ್ನಾಡ ಬಾರದು. ಕಠಿಣವಾದ ಮಾತುಗಳನ್ನೂ ಆಡಬಾರದು. ಆಪತ್ಕಾಲದಲ್ಲಿ ಕ್ಷತ್ರಿಯನು ಬಾಹುವೀರ್ಯದಿಂದಲೂ, ವೈಶ್ಯ-ಶೂದ್ರರು ಧನದಿಂದಲೂ ಬ್ರಾಹ್ಮಣನು ಮಂತ್ರ-ಹೋಮಗಳಿಂದಲೂ ವಿಪತ್ತುಗಳಿಂದ ಪಾರಾಗುತ್ತಾರೆ.

ನೈವ ಕನ್ಯಾ ನ ಯುವತಿರ್ನಾಮನ್ತ್ರಜ್ಞೋ ನ ಬಾಲಿಶಃ ।
ಪರಿವೇಷ್ಟಾಗ್ನಿಹೋತ್ರಸ್ಯ ಭವೇನ್ನಾಸಂಸ್ಕೃತಸ್ತಥಾ ॥೨೧॥

ಕನ್ಯೆಯಾಗಲೀ, ಯುವತಿಯಾಗಲೀ, ಮಂತ್ರವನ್ನು ತಿಳಿಯದೇ ಇರುವವನಾಗಲೀ, ಮೂರ್ಖನಾಗಲೀ, ಸಂಸ್ಕಾರಹೀನನಾದ ಪುರುಷನಾಗಲೀ–ಅಗ್ನಿಹೋತ್ರದಲ್ಲಿ ಆಹುತಿಯನ್ನು ಕೊಡಲು ಅಧಿಕಾರಿಗಳಲ್ಲ.*

ನರಕಂ ನಿಪತನ್ತ್ಯೇತೇ ಜುಹ್ವಾನಾಃ ಸ ಚ ಯಸ್ಯ ತತ್ ।
ತಸ್ಮಾದ್ವೈತಾನಕುಶಲೋ ಹೋತಾ ಸ್ಯಾದ್ವೇದಪಾರಗಃ ॥೨೨॥

ಅವರೇನಾದರೂ ಅಗ್ನಿಹೋತ್ರಾಗ್ನಿಯಲ್ಲಿ ಹೋಮಗಳನ್ನು ಮಾಡಿದ್ದೇ ಆದರೆ ಮಾಡಿದವರೂ ನರಕಕ್ಕೆ ಹೋಗುತ್ತಾರೆ. ಆ ಯಜ್ಞವು ಯಾರದೋ ಆ ಯಜ್ಞದೀಕ್ಷಿತನೂ ನರಕಕ್ಕೆ ಹೋಗುತ್ತಾನೆ. ಆದುದರಿಂದ ಯಜ್ಞಕರ್ಮದಲ್ಲಿ ಕುಶಲನಾದ ವೇದ-ವೇದಾಂಗಪಾರಂಗತನಾದ ವಿದ್ವಾಂಸನೇ ಹೋತೃವಾಗಲು ಯೋಗ್ಯನಾಗಿರುತ್ತಾನೆ.

ಪ್ರಾಜಾಪತ್ಯಮದತ್ತ್ವಾಶ್ವಮಗ್ನ್ಯಾಧೇಯಸ್ಯ ದಕ್ಷಿಣಾಮ್ ।
ಅನಾಹಿತಾಗ್ನಿರಿತಿ ಸ ಪ್ರೋಚ್ಯತೇ ಧರ್ಮದರ್ಶಿಭಿಃ ॥೨೩॥

ಯಾವನು ಅಗ್ನ್ಯಾಧಾನವನ್ನು ಮಾಡಿ ಪ್ರಜಾಪತಿದೇವತೆಯ ಪ್ರೀತ್ಯರ್ಥವಾಗಿ ಅಶ್ವರೂಪವಾದ ದಕ್ಷಿಣಾದಾನವನ್ನು ಮಾಡುವುದಿಲ್ಲವೋ–ಅವನನ್ನು ಅನಾಹಿತಾಗ್ನಿಯೆಂದು ಧರ್ಮದರ್ಶಿಗಳು ಹೇಳುತ್ತಾರೆ.

ಪುಣ್ಯಾನಿ ಯಾನಿ ಕುರ್ವೀತ ಶ್ರದ್ದಧಾನೋ ಜಿತೇನ್ದ್ರಿಯಃ ।
ಅವಾಪ್ತದಕ್ಷಿಣೈರ್ಯಜ್ಞೈರ್ನ ಯಜೇತ ಕಥಞ್ಚನ ॥೨೪॥

ಮನುಷ್ಯನು ಯಾವುದೇ ಪುಣ್ಯಕರ್ಮವನ್ನು ಮಾಡಿದರೂ ಜಿತೇಂದ್ರಿಯನಾಗಿ ಶ್ರದ್ಧಾಪೂರ್ವಕವಾಗಿ ಮಾಡಬೇಕು. ಪರ್ಯಾಪ್ತವಾದ

---

* ಇಲ್ಲಿ ಹೇಳಿರುವುದು ಯಜ್ಞಕ್ಕೆ ಸಂಬಂಧಿಸಿದ ಹೋಮ. ಆದರೆ ಸ್ಮಾರ್ತಾಗ್ನಿ ಹೋಮದಲ್ಲಿ ಸ್ತ್ರೀಯರೂ ಹೋಮಮಾಡಬಹುದೆಂದು ಆಶ್ವಲಾಯನರು ಹೇಳಿರುತ್ತಾರೆ. 'ಸ್ವಯಂ ಪತ್ನ್ಯಪಿ ವಾ ಪುತ್ರಃ ಕುಮಾರ್ಯನ್ತೇವಾಸೀ ವಾ' ಅಹಿತಾಗ್ನಿಯು ಪ್ರವಾಸಾದಿಗಳಲ್ಲಿರುವಾಗ ಆ ದ್ವಿಜನ ಪತ್ನಿಯಾಗಲೀ, ಪುತ್ರನಾಗಲೀ, ಪುತ್ರಿಯಾಗಲೀ, ಶಿಷ್ಯನಾಗಲೀ–ಕಾಲಕ್ಕೆ ಸರಿಯಾಗಿ ಅಗ್ನಿಹೋತ್ರವನ್ನು ಮಾಡಬಹುದು.

ದಕ್ಷಿಣೆಗಳನ್ನು ಕೊಡದೇ (ಕೊಡಲು ಸಾಧ್ಯವಾಗದಿದ್ದರೆ) ಯಾವ ವಿಧವಾದ ಯಜ್ಞಗಳನ್ನೂ ಮಾಡಲೇಬಾರದು.

ಪ್ರಜಾಃ ಪಶೂಂಶ್ಚ ಸ್ವರ್ಗಂ ಚ ಹನ್ತಿ ಯಜ್ಞೋ ಹ್ಯದಕ್ಷಿಣಃ ।
ಇನ್ದ್ರಿಯಾಣಿ ಯಶಃ ಕೀರ್ತಿಮಾಯುಶ್ಚಾಪ್ಯವಕೃನ್ತತಿ ॥೨೫॥

ಯಜ್ಞವನ್ನು ಮಾಡಿ ಪರ್ಯಾಪ್ತವಾದ (ವಿಧ್ಯುಕ್ತವಾದ ರೀತಿಯಲ್ಲಿ) ದಕ್ಷಿಣೆಗಳನ್ನು ಕೊಡದಿದ್ದರೆ–ಅಂತಹ ಯಜ್ಞವು ಮನೋಭಿಲಷಿತವಾದ ಕಾಮನೆಗಳನ್ನು ಕೊಡುವುದಕ್ಕೆ ಬದಲಾಗಿ ಪ್ರಜೆಗಳನ್ನೂ, ಪಶುಗಳನ್ನೂ ನಾಶಗೊಳಿಸುತ್ತದೆ. ಸ್ವರ್ಗಪ್ರಾಪ್ತಿಗೆ ವಿಘ್ನವನ್ನುಂಟುಮಾಡುತ್ತದೆ. ಇಂದ್ರಿಯ ಗಳನ್ನೂ, ಯಶಸ್ಸನ್ನೂ, ಕೀರ್ತಿಯನ್ನೂ ಮತ್ತು ಆಯುಷ್ಯವನ್ನೂ ಕ್ಷೀಣಗೊಳಿಸುತ್ತದೆ.

ಉದಕ್ಯಾಮಾಸತೇ ಯೇ ಚ ದ್ವಿಜಾಃ ಕೇಚಿದನಗ್ನಯಃ ।
ಹೋಮಂ ಚಾಶ್ರೋತ್ರಿಯಂ ಯೇಷಾಂ ತೇ ಸರ್ವೇ ಪಾಪಕರ್ಮಿಣಃ ॥೨೬॥

ಯಾವ ಬ್ರಾಹ್ಮಣನು ರಜಸ್ವಲಾಸ್ತ್ರೀಯೊಡನೆ ಸಮಾಗಮಮಾಡು ವನೋ, ಯಾವ ಬ್ರಾಹ್ಮಣನ ಮನೆಯಲ್ಲಿ ಆಹಿತಾಗ್ನಿಗಳಿಲ್ಲವೋ ಮತ್ತು ಯಾರ ಹೋಮವನ್ನು ಅಶ್ರೋತ್ರಿಯರು ಮಾಡುವರೋ–ಅವರೆಲ್ಲರೂ ಪಾಪಕರ್ಮಿಗಳು.

ಉದಪಾನೋದಕೇ ಗ್ರಾಮೇ ಬ್ರಾಹ್ಮಣೋ ವೃಷಲೀಪತಿಃ ।
ಉಷಿತ್ವಾ ದ್ವಾದಶಸಮಾಃ ಶೂದ್ರಕರ್ಮೈವ ಗಚ್ಛತಿ ॥೨೭॥

ಶೂದ್ರಸ್ತ್ರೀಯರನ್ನು ಮದುವೆಯಾದ ಬ್ರಾಹ್ಮಣನು, ಒಂದೇ ಬಾವಿ ಯಿರುವ (ಪವಿತ್ರವಾದ ನದ್ಯಾದಿಗಳಿಲ್ಲದಿರುವ) ಗ್ರಾಮದಲ್ಲಿ ಹನ್ನೆರಡು ವರ್ಷಗಳ ಪರ್ಯಂತವಾಗಿ ವಾಸಮಾಡಿದರೆ ಶೂದ್ರನೇ ಆಗುತ್ತಾನೆ.

ಅಭಾರ್ಯಾಂ ಶಯನೇ ಬಿಭ್ರಚ್ಛೂದ್ರಂ ವೃದ್ಧಂ ಚ ವೈ ದ್ವಿಜಃ ।
ಅಬ್ರಾಹ್ಮಣಂ ಮನ್ಯಮಾನಸ್ತೃಣೇಷ್ವಾಸೀತ ಪೃಷ್ಠತಃ ।
ತಥಾ ಸಂಶುಧ್ಯತೇ ರಾಜಞ್ಶೃಣು ಚಾತ್ರ ವಚೋ ಮಮ ॥೨೮॥

ಯಾವ ಬ್ರಾಹ್ಮಣನು ತನ್ನನ್ನು ಅಬ್ರಾಹ್ಮಣನೆಂದು ತಿಳಿದುಕೊಂಡು

ಭಾರ್ಯೆಯಲ್ಲದವಳೊಡನೆ ಸಮಾಗಮಮಾಡುವನೋ–ಅಥವಾ ವೃದ್ಧನಾದ ಶೂದ್ರನನ್ನು ಸೇವಿಸುವನೋ ಅಂತಹವನು ಹುಲ್ಲಿನ ಮೇಲೆ (ಸೂರ್ಯನಿಗೆ ಬೆನ್ನು ತಿರುಗಿಸಿ) ಕುಳಿತುಕೊಳ್ಳಬೇಕು. ಹೀಗೆ ಮಾಡಿದರೆ ಆ ಪಾಪಪರಿಹಾರ ವಾಗುತ್ತದೆ. ಈ ವಿಷಯದಲ್ಲಿ ನನ್ನ ಇನ್ನೂ ಕೆಲವು ಮಾತುಗಳನ್ನು ಕೇಳು :

(ವೃದ್ಧನಾದ ಶೂದ್ರನನ್ನೂ, ಬ್ರಾಹ್ಮಣರಲ್ಲದ ವೃದ್ಧರಾದ ಕ್ಷತ್ರಿಯ-ವೈಶ್ಯರನ್ನೂ ತನಗಿಂತಲೂ ದೊಡ್ಡವರೆಂದು ಭಾವಿಸಿ ಅವರನ್ನು ಉಚ್ಚಾಸನ ದಲ್ಲಿ ಕುಳ್ಳಿರಿಸಿ ತಾನು ಅವರ ಹಿಂಬದಿಯಲ್ಲಿ ಹುಲ್ಲಿನ ಮೇಲೆ ಕುಳಿತುಕೊಳ್ಳು ವನೋ–ಅಂತಹ ಬ್ರಾಹ್ಮಣನು ಬ್ರಾಹ್ಮಣತ್ವದಿಂದ ಭ್ರಷ್ಟನಾಗುತ್ತಾನೆ. ಅಂತಹವನು ಹೇಗೆ ಪರಿಶುದ್ಧನಾಗುವನೆಂಬುದನ್ನು ಹೇಳುವೆನು, ಕೇಳು.

ಇದು ವ್ಯಾಖ್ಯಾನಕಾರರ ವ್ಯಾಖ್ಯಾನವನ್ನು ಅನುಸರಿಸಿ ಮಾಡಿರುವ ಅರ್ಥವಾಗಿದೆ. ಸಾಮಾನ್ಯವಾಗಿ ಎಲ್ಲರೂ ಇದೇ ರೀತಿಯಲ್ಲಿ ಅರ್ಥಮಾಡಿ ದ್ದಾರೆ.

ಅಭಾರ್ಯಾಂ ಅಪರಿಣೀತಾಂ ಶಯನೇ ಬಿಭ್ರದ್ಬ್ರಾಹ್ಮಣಃ ತಥಾ ಶೂದ್ರಂ ವೃದ್ಧಂ ಮಹಾನಿತಿ ಮನ್ಯಮಾನಃ ತಥಾ ಅಬ್ರಾಹ್ಮಣಂ ಕ್ಷತ್ರಿಯಂ ವೈಶ್ಯಂ ವಾ ವೃದ್ಧಂ ಮನ್ಯಮಾನಃ ತೃಣೇಷು ಯದ್ಯಾಸೀತ ಉಪವಿಷ್ಟಃ ಸ ಯಥಾ ಸಂಶುಧ್ಯತೇ॥ ತಥಾ ಶೃಣು ಇತಿಸಾರ್ಧಾರ್ಥಃ

ಹೀಗೆ ವ್ಯಾಖ್ಯಾನಮಾಡಲು ವ್ಯಾಖ್ಯಾನಕಾರರು ಅನೇಕಪದಗಳನ್ನು ಅಧ್ಯಾಹಾರಮಾಡಿಕೊಂಡಿರುತ್ತಾರೆ. ಕಡೆಯಲ್ಲಿ ತಥಾ ಎಂದಿರುವುದಕ್ಕೆ ಯಥಾ ಎಂದೂ ವ್ಯತ್ಯಾಸಮಾಡಿರುತ್ತಾರೆ. ಯಾವ ಅಧ್ಯಾಹಾರವನ್ನೂ ಮಾಡಿಕೊಳ್ಳದೇ ಯಥಾವತ್ತಾಗಿಯೇ ಅರ್ಥವನ್ನು ಹೀಗೆ ಮಾಡಬಹುದಾಗಿದೆ: ಭಾರ್ಯೆಯಲ್ಲದವಳೊಡನೆ ಸಮಾಗಮಮಾಡಿದ ಮತ್ತು ವೃದ್ಧ ಶೂದ್ರನನ್ನು ಜೊತೆಗೂಡಿದ (ಸೇವಿಸಿದ) ಬ್ರಾಹ್ಮಣನು ತನ್ನನ್ನು ಅಬ್ರಾಹ್ಮಣನೆಂದು ಭಾವಿಸಿ....

ಈ ಶ್ಲೋಕಕ್ಕೆ ಪಾಠಾಂತರವು ಹೀಗಿದೆ :

ಅನಾರ್ಯಾಂ ಶಯನೇ ಬಿಭ್ರದುಜ್ಝನ್ಬಿಭ್ರುಚ್ಚ ಯೋ ದ್ವಿಜಾಮ್ ।

ಅಬ್ರಾಹ್ಮಣಂ ಮನ್ಯಮಾನಸ್ತೃಣೇಷ್ವಾಸೀತ ಪೃಷ್ಠತಃ ।
ತಥಾ ಸ ಶುಧ್ಯತೇ ರಾಜಞ್ಶೃಣು ಚಾತ್ರ ವಚೋ ಮಮ ॥

'ಅನಾರ್ಯೆಯ ಸಮಾಗಮವನ್ನು ಮಾಡಿ ಪುನಃ ಅವಳನ್ನು ಬಿಟ್ಟು ಬ್ರಾಹ್ಮಣಸ್ತ್ರೀಯೊಡನೆ ಸೇರುವನೋ–ಅಂತಹ ಬ್ರಾಹ್ಮಣನು ತನ್ನನ್ನು ಅಬ್ರಾಹ್ಮಣನೆಂದು ತಿಳಿದುಕೊಂಡು (ಬ್ರಾಹ್ಮಣತ್ವದಿಂದ ಭ್ರಷ್ಟನಾದೆನೆಂದು ತಿಳಿದುಕೊಂಡು) ಹುಲ್ಲಿನ ಮೇಲೆ ಸೂರ್ಯನಿಗೆ ಬೆನ್ನುತಿರುಗಿಸಿಕೊಂಡು ಕುಳಿತುಕೊಳ್ಳಬೇಕು. ಅವನು ಹಾಗೆ ಮಾಡಿದರೆ ಶುದ್ಧಿಯನ್ನು ಹೊಂದುತ್ತಾನೆ. ಈ ವಿಷಯದಲ್ಲಿ ನಾನು ಹೇಳುವ ಇನ್ನೂ ಕೆಲವು ಮಾತುಗಳನ್ನು ಕೇಳು."

ಇದೇ ವಿಷಯವಾಗಿ ಆಪಸ್ತಂಬಧರ್ಮಸೂತ್ರದಲ್ಲಿ ಹೀಗೆ ಹೇಳಿದ್ದಾರೆ:

ಅನಾರ್ಯಾಂ ಶಯನೇ ಬಿಭ್ರದ್ದದದ್ವೃದ್ಧಿಂ ಕಷಾಯಪಃ ।
ಅಬ್ರಾಹ್ಮಣ ಇವ ವನ್ದಿತ್ವಾ ತೃಣೇಷ್ವಾಸೀತ ಪೃಷ್ಠತಪ್ ॥

ಬ್ರಾಹ್ಮಣನು ಒಳ್ಳೆಯ ನಡತೆಯಿಲ್ಲದವಳೊಡನೆ ಸಮಾಗಮ ಮಾಡಿ ದರೆ, ಬಡ್ಡಿಯನ್ನು ತೆಗೆದುಕೊಂಡು ಜೀವಿಸುತ್ತಿದ್ದರೆ, ಕಷಾಯಪಾನಮಾಡು ತ್ತಿದ್ದರೆ, ಬ್ರಾಹ್ಮಣನಲ್ಲದವನಂತೆ ಬೇರೆಯವರನ್ನು ಹೊಗಳುತ್ತಿದ್ದರೆ–ಅವನು ಹುಲ್ಲಿನ ಮೇಲೆ ಬಿಸಿಲಿನಲ್ಲಿ ಸೂರ್ಯನ ಕಡೆಗೆ ಬೆನ್ನುಮಾಡಿಕೊಂಡು ಕುಳಿತಿರಬೇಕು. ಬೆನ್ನು ಚೆನ್ನಾಗಿ ಕಾಯುವಂತಾದರೆ ಅವನ ಪಾಪವು ಪರಿಹಾರವಾಗುತ್ತದೆ.)

ಯದೇಕರಾತ್ರೇಣ ಕರೋತಿ ಪಾಪಂ
ನಿಕೃಷ್ಟವರ್ಣಂ ಬ್ರಾಹ್ಮಣಃ ಸೇವಮಾನಃ ।
ಸ್ಥಾನಾಸನಾಭ್ಯಾಂ ವಿಹರನ್ವ್ರತೀ ಸ
ತ್ರಿಭಿರ್ವರ್ಷೈಃ ಶಮಯೇದಾತ್ಮಪಾಪಮ್ ॥೨೯॥

ಒಂದೇ ಒಂದು ದಿನವಾದರೂ ಬ್ರಾಹ್ಮಣನಾದವನು ನೀಚವರ್ಣದವರ ಸೇವೆಯನ್ನು ಮಾಡಿದರೆ ಮತ್ತು ಅವನ ಜೊತೆಯಲ್ಲಿ ಒಂದೇ ಸ್ಥಳದಲ್ಲಿದ್ದರೆ, ಅವನೊಡನೆ ಒಂದೇ ಆಸನದಲ್ಲಿ ಕುಳಿತರೆ–ಮೂರು ವರ್ಷಗಳ ಕಾಲ ವ್ರತಸ್ಥ

ನಾಗಿದ್ದುಕೊಂಡು ದೇಶಪರ್ಯಟನೆಮಾಡಿ ಆ ಪಾಪವನ್ನು ಕಳೆದುಕೊಳ್ಳ ಬೇಕು.

(ಪಾಠಾಂತರದಲ್ಲಿ ನಿಕೃಷ್ಟವರ್ಣಂ ಎಂಬುವುದಕ್ಕೆ ಬದಲಾಗಿ ಕೃಷ್ಣಂ ವರ್ಣಂ ಎಂಬುದಾಗಿದೆ. ಮೂರು ಪಾದಗಳಲ್ಲಿಯೂ ಹನ್ನೊಂದು ಅಕ್ಷರ ಗಳಿರುವುದರಿಂದ ಈ ಎರಡನೆಯ ಪಾದದಲ್ಲಿಯೂ ಹನ್ನೊಂದು ಅಕ್ಷರವೇ ಇರಬೇಕು. ಆದುದರಿಂದ ಕೃಷ್ಣಂವರ್ಣಂ ಎಂಬುದೇ ಶುದ್ಧಪಾಠವೆಂದು ತೋರುತ್ತದೆ. ಆಪಸ್ತಂಬಧರ್ಮಸೂತ್ರದಲ್ಲಿಯೂ ಈ ಶ್ಲೋಕವು ಸ್ವಲ್ಪ ವ್ಯತ್ಯಾಸವಾಗಿ ಬಂದಿದೆ.

ಯದೇಕರಾತ್ರೇಣ ಕರೋತಿ ಪಾಪಂ
ಕೃಷ್ಣಂ ವರ್ಣಂ ಬ್ರಾಹ್ಮಣಃ ಸೇವಮಾನಃ ।
ಚತುರ್ಥಕಾಲ ಉದಕಾಭ್ಯವಾಹೀ
ತ್ರಿಭಿರ್ವರ್ಷೈಸ್ತದಪಹನ್ತಿ ಪಾಪಮ್ ॥

ನಾಲ್ಕನೆಯ ಹೊತ್ತು ಊಟಮಾಡುತ್ತಾ, ದಿನಕ್ಕೆ ಮೂರು ಬಾರಿ ಸ್ನಾನಮಾಡುತ್ತಾ ಮೂರು ವರ್ಷಗಳು ವ್ರತನಿಷ್ಠನಾಗಿದ್ದರೆ ಆ ಪಾಪದ ಪರಿಹಾರವಾಗುತ್ತದೆ. ನೀಚಸ್ತ್ರೀಸಮಾಗಮವನ್ನು ಮಾಡಿ ಅವಳಲ್ಲಿ ಗರ್ಭೋತ್ಪತ್ತಿಯಾದರೆ ಈ ಪ್ರಾಯಶ್ಚಿತ್ತವೆಂಬ ಮತ್ತೊಂದು ಪಕ್ಷವೂ ಇದೆ. ಇದೇ ಸಾಧುವಾಗಿ ಕಾಣುತ್ತದೆ.)

ನ ನರ್ಮಯುಕ್ತಮನೃತಂ ಹಿನಸ್ತಿ
ನ ಸ್ತ್ರೀಷು ರಾಜನ್ನ ವಿವಾಹಕಾಲೇ ।
ನ ಗುರ್ವರ್ಥೇ ನಾತ್ಮನೋ ಜೀವಿತಾರ್ಥೇ
ಪಞ್ಚಾನೃತಾನ್ಯಾಹುರಪಾತಕಾನಿ ॥೩೦॥

ಪರಿಹಾಸದೊಡನೆ ಸೇರಿದ ಸುಳ್ಳು ವಕ್ತೃವಿನ ವಿನಾಶಕ್ಕೆ ಕಾರಣ ವಾಗುವುದಿಲ್ಲ. ವಿನೋದದ ಸಮಯದಲ್ಲಿ, ಸ್ತ್ರೀಯರೊಡನೆ ಸಂಭಾಷಣೆ ಯಲ್ಲಿ, ವಿವಾಹಕಾಲದಲ್ಲಿ, ಆಚಾರ್ಯನ ಸಲುವಾಗಿ ಮತ್ತು ತನ್ನ ಪ್ರಾಣ ರಕ್ಷಣೆಗಾಗಿ ಹೇಳುವ ಈ ಐದು ಬಗೆಯಾದ ಸುಳ್ಳುಗಳು ಪಾಪವನ್ನುಂಟು ಮಾಡತಕ್ಕುವುಗಳಲ್ಲವೆಂದು ಹಿರಿಯರು ಹೇಳುತ್ತಾರೆ.

ಶ್ರದ್ದಧಾನಃ ಶುಭಾಂ ವಿದ್ಯಾಂ ಹೀನಾದಪಿ ಸಮಾಪ್ನುಯಾತ್ ।
ಸುವರ್ಣಮಪಿ ಚಾಮೇಧ್ಯಾದಾದದೀತಾವಿಚಾರಯನ್ ॥೩೧॥

ನೀಚವರ್ಣದವರಿಂದಲೂ (ಲೌಕಿಕವಾದ) ಉತ್ತಮವಾದ ವಿದ್ಯೆಯನ್ನು ಶ್ರದ್ಧಾಯುಕ್ತನಾಗಿ ಕಲಿಯಬೇಕು. ಚಿನ್ನವು ಅಪವಿತ್ರವಾದ ಸ್ಥಳದಲ್ಲಿಯೇ ಇದ್ದರೂ ಸ್ವಲ್ಪವೂ ವಿಚಾರಮಾಡದೇ ಅದನ್ನು ತೆಗೆದು ಕೊಳ್ಳಬೇಕು.

ಸ್ತ್ರೀ ರತ್ನಂ ದುಷ್ಕುಲಾಚ್ಚಾಪಿ ವಿಷಮಾದಮೃತಂ ಪಿಬೇತ್ ।
ಅದೂಷ್ಯಾ ಹಿ ಸ್ತ್ರಿಯೋ ರತ್ನಮಾಪ ಇತ್ಯೇವ ಧರ್ಮತಃ ॥೩೨॥

ಉತ್ತಮಳಾದ ಸ್ತ್ರೀಯು ನೀಚಕುಲದಲ್ಲಿಯೇ ಇದ್ದರೂ ಅವಳನ್ನು ಪರಿಗ್ರಹಿಸಬಹುದು. ರತ್ನವು ಎಲ್ಲಿಯೇ ಇದ್ದರೂ ಯಾರಲ್ಲಿಯೇ ಇದ್ದರೂ ಪಡೆದುಕೊಳ್ಳಬಹುದು. ಅಮೃತವು (ನೀರು) ಹೀನಸ್ಥಳದಲ್ಲಿದ್ದರೂ ಅದನ್ನು ಕುಡಿಯಬಹುದು. ಏಕೆಂದರೆ : ಸ್ತ್ರೀಯರು, ರತ್ನ ಮತ್ತು ನೀರು– ಇವುಗಳು ಯಾವಾಗಲೂ ಧರ್ಮತಃ ದೂಷಣೀಯಗಳಲ್ಲ.

ಗೋಬ್ರಾಹ್ಮಣಹಿತಾರ್ಥಂ ಚ ವರ್ಣಾನಾಂ ಸಂಕರೇಷು ಚ ।
ವೈಶ್ಯೋ ಗೃಹ್ಣೀತ ಶಸ್ತ್ರಾಣಿ ಪರಿತ್ರಾಣಾರ್ಥಮಾತ್ಮನಃ ॥೩೩॥

ಗೋ-ಬ್ರಾಹ್ಮಣಹಿತಾರ್ಥವಾಗಿಯೂ, ವರ್ಣಸಾಂಕರ್ಯವನ್ನು ತಡೆಯುವುದಕ್ಕಾಗಿಯೂ, ತನ್ನನ್ನು ರಕ್ಷಿಸಿಕೊಳ್ಳುವ ಸಲುವಾಗಿಯೂ ವೈಶ್ಯನೂ ಶಸ್ತ್ರವನ್ನು ಹಿಡಿಯಬೇಕು.

ಸುರಾಪಾನಂ ಬ್ರಹ್ಮಹತ್ಯಾ ಗುರುತಲ್ಪಮಥಾಪಿ ವಾ ।
ಅನಿರ್ದೇಶ್ಯಾನಿ ಮನ್ಯಂತೇ ಪ್ರಾಣಾನ್ತಮಿತಿ ಧಾರಣಾ ॥೩೪॥

ಸುರಾಪಾನ, ಬ್ರಹ್ಮಹತ್ಯೆ, ಗುರುಪತ್ನೀಸಮಾಗಮ–ಈ ಮಹಾಪಾಪಗಳಿಂದ ಪಾರಾಗಲು ಯಾವುದೇ ಪ್ರಾಯಶ್ಚಿತ್ತವೂ ಹೇಳಲ್ಪಟ್ಟಿರುವುದಿಲ್ಲ. ಯಾವುದಾದರೂ ಉಪಾಯದಿಂದ ಪ್ರಾಣಗಳನ್ನು ಕಳೆದುಕೊಳ್ಳುವುದೇ ಈ ಮಹಾಪಾಪಗಳಿಗೆ ತಕ್ಕುದಾದ ಪ್ರಾಯಶ್ಚಿತ್ತವಾಗಿರುವುದೆಂದು ವಿದ್ವಾಂಸರ ಗ್ರಹಿಕೆಯಾಗಿದೆ.

(ಅನಿರ್ದೇಶ್ಯಾನಿ ಎಂಬುದಕ್ಕೆ ವ್ಯಾಖ್ಯಾನಕಾರರು **ಬುದ್ಧಿಪೂರ್ವಕಾನಿ ಕೃತಾನಿ ಚೇತ್** ಎಂದು ಅರ್ಥಮಾಡಿರುತ್ತಾರೆ. ಅಬುದ್ಧಿಪೂರ್ವಕವಾಗಿ

(ತಿಳಿಯದೆ) ಮಾಡಿದರೆ ಪ್ರಾಯಶ್ಚಿತ್ತವುಂಟು. ಬುದ್ಧಿಪೂರ್ವಕವಾಗಿ (ತಿಳಿದೂ) ಮಾಡಿದರೆ ಮರಣಾಂತವಾದ ಪ್ರಾಯಶ್ಚಿತ್ತ.)

ಸುವರ್ಣಹರಣಂ ಸ್ತೈನ್ಯಂ ವಿಪ್ರಸ್ವಂ ಚೇತಿ ಪಾತಕಮ್ ।
ವಿಹರನ್ಮದ್ಯಪಾನಾಚ್ಚ ಅಗಮ್ಯಾಗಮನಾದಪಿ ॥೩೫॥

ಪತಿತೈಃ ಸಮ್ಪ್ರಯೋಗಾಚ್ಚ ಬ್ರಾಹ್ಮಣೀಯೋನಿತಸ್ತಥಾ ।
ಅಚಿರೇಣ ಮಹಾರಾಜ ಪತಿತೋ ವೈ ಭವತ್ಯುತ ॥೩೬॥

ಸುವರ್ಣಹರಣ, ಅಮೂಲ್ಯವಸ್ತುಗಳ ಕಳ್ಳತನ, ಬ್ರಾಹ್ಮಣಧನಾಪಹರಣ–ಇವುಗಳು ಮಹಾಪಾತಕಗಳು, ಮದ್ಯಪಾನ, ಸಮಾಗಮಕ್ಕೆ ಅಯೋಗ್ಯಳಾದ ಸ್ತ್ರೀಯೊಡನೆ ಸಮಾಗಮ, ಪತಿತರೊಡನೆ ಸಂಪರ್ಕ, ಬ್ರಾಹ್ಮಣೇತರನಾಗಿದ್ದುಕೊಂಡು ಬ್ರಾಹ್ಮಣಸ್ತ್ರೀಯೊಡನೆ ಸಮಾಗಮ ಮಾಡುವುದು–ಈ ವಿಧವಾದ ಸ್ವೇಚ್ಛಾಚಾರಗಳನ್ನು ಮಾಡುವ ಮನುಷ್ಯನು ಬಹಳ ಬೇಗ ಪತಿತನಾಗುತ್ತಾನೆ.

ಸಂವತ್ಸರೇಣ ಪತತಿ ಪತಿತೇನ ಸಹಾಚರನ್ ।
ಯಾಜನಾಧ್ಯಾಪನಾದ್ಯೌನಾನ್ನ ತು ಯಾನಾಸನಾಶನಾತ್ ॥೩೭॥

ಒಂದು ವರ್ಷಪರ್ಯಂತವಾಗಿ ಪತಿತನೊಡನೆ ಸಹವಾಸ ಮಾಡುವುದರಿಂದ (ಒಂದೇ ಯಾನದಲ್ಲಿ ಪ್ರಯಾಣಮಾಡುವುದರಿಂದ, ಒಟ್ಟಿಗೆ ಕುಳಿತುಕೊಂಡು ಭೋಜನ ಮಾಡುವುದರಿಂದ) ಮನುಷ್ಯನು ಪತಿತನಾಗುತ್ತಾನೆ. ಅವನಿಗೆ ಯಜ್ಞಮಾಡಿಸುವುದರಿಂದ, ವೇದವನ್ನು ಅಧ್ಯಯನ ಮಾಡಿಸುವುದರಿಂದ, ಪತಿತನ ಸಂತಾನನೊಡನೆ ತನ್ನ ಸಂತಾನದ ವಿವಾಹ ಕಾರ್ಯವನ್ನು ಮಾಡುವುದರಿಂದ (ತನ್ನ ಮಗಳನ್ನು ಪತಿತನ ಮಗನಿಗಾಗಲೀ ಪತಿತನ ಮಗಳನ್ನು ತನ್ನ ಮಗನಿಗಾಗಲೀ ಕೊಟ್ಟು ತಂದು ಮಾಡುವುದರಿಂದ) ಒಡನೆಯೇ ಪತಿತನಾಗುತ್ತಾನೆ.

ಏತಾನಿ ಹಿತ್ವಾತೋಽನ್ಯಾನಿ ನಿರ್ದೇಶ್ಯಾನೀತಿ ಭಾರತ ।
ನಿರ್ದೇಶ್ಯಾನೇನ ವಿಧಿನಾ ಕಾಲೇನಾವ್ಯಸನೀ ಭವೇತ್ ॥೩೮॥

ಮೇಲೆ ಹೇಳಿದ ಪಾಪಗಳು ಪ್ರಾಯಶ್ಚಿತ್ತರಹಿತಗಳೆಂದು ಹೇಳಲ್ಪಟ್ಟಿವೆ. (ಇವುಗಳಿಗೆ ಪ್ರಾಯಶ್ಚಿತ್ತವೇ ಇಲ್ಲ. ಈ ಮಹಾಪಾಪಗಳನ್ನು

ಹೋಗಲಾಡಿಸುವ ಸಾಧ್ಯತೆಯೇ ಇಲ್ಲ.) ಇವುಗಳನ್ನು ಬಿಟ್ಟು ಉಳಿದ ಪಾಪಗಳು ನಿರ್ದೇಶ್ಯಗಳು. ಶಾಸ್ತ್ರದಲ್ಲಿ ಅವುಗಳಿಗೆ ಪ್ರಾಯಶ್ಚಿತ್ತಗಳನ್ನು ಹೇಳಿದ್ದಾರೆ. ಶಾಸ್ತ್ರಾನುಸಾರವಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಪಾಪವ್ಯಸನದಿಂದ ಮುಕ್ತನಾಗುತ್ತಾನೆ. ಪುನಃ ಆ ಪಾಪಗಳನ್ನು ಮಾಡದಿದ್ದರೆ ಶುದ್ಧನಾಗುತ್ತಾನೆ.

ಅನ್ನಂ ವೀರ್ಯಂ ಗ್ರಹೀತವ್ಯಂ ಪ್ರೇತಕರ್ಮಣ್ಯಪಾತಿತೇ ।
ತ್ರಿಷು ತ್ವೇತೇಷು ಪೂರ್ವೇಷು ನ ಕುರ್ವೀತ ವಿಚಾರಣಾಮ್ ॥೩೯॥

ಹಿಂದೆ ಹೇಳಿದ ಸುರಾಪಾನ, ಬ್ರಹ್ಮಹತ್ಯೆ ಮತ್ತು ಗುರುಪತ್ನೀಗಮನ ಇವುಗಳನ್ನು ಮಾಡಿದ ಮಹಾಪಾತಕಿಯು ಮರಣಹೊಂದಿದ ಕೂಡಲೇ ದಾಹಾದಿ ಪ್ರೇತಕರ್ಮಗಳನ್ನು ಮಾಡದಿದ್ದರೂ ರಾಜನು ಅವನ ಅನ್ನವನ್ನೂ (ಅವನ ಮನೆಯಲ್ಲಿರಬಹುದಾದ ಆಹಾರಪದಾರ್ಥಗಳನ್ನೂ) ಬೆಳ್ಳಿಯನ್ನೂ ತೆಗೆದುಕೊಳ್ಳಬೇಕು. ಈ ವಿಷಯದಲ್ಲಿ ತೆಗೆದುಕೊಳ್ಳಬಹುದೇ? ಕೂಡದೇ?–ಎಂದು ವಿಚಾರಮಾಡುವ ಆವಶ್ಯಕತೆಯೇ ಇಲ್ಲ. (ಇಂತಹ ಪತಿತನ ಬಂಧುಗಳಿಗೆ ಆಶೌಚವೂ ಇಲ್ಲ; ಪ್ರೇತಕರ್ಮಗಳೂ ಇಲ್ಲ–ಎಂಬುದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.)

ಅಮಾತ್ಯಾನ್ವಾ ಗುರೂನ್ವಾಪಿ ಜಹ್ಯಾದ್ಧರ್ಮೇಣ ಧಾರ್ಮಿಕಃ ।
ಪ್ರಾಯಶ್ಚಿತ್ತಮಕುರ್ವಾಣೈರ್ನೃಪೈರರ್ಹತಿ ಸಂವಿದಮ್ ॥೪೦॥

ಧಾರ್ಮಿಕನಾದ ರಾಜನು ತನ್ನ ಅಮಾತ್ಯ–ಪುರೋಹಿತರೇ ಪತಿತರಾದರೂ ಧರ್ಮಾನುಸಾರವಾಗಿ ಅವರನ್ನೂ ಪರಿತ್ಯಾಗಮಾಡಬೇಕು. ಅವರು ತಾವು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತಮಾಡಿಕೊಳ್ಳುವವರೆಗೂ ಅವರೊಡನೆ ಸಂಭಾಷಣೆಯನ್ನೂ ಮಾಡಬಾರದು. (ಯಾವ ವ್ಯವಹಾರವನ್ನೂ ಇಟ್ಟುಕೊಳ್ಳಬಾರದು.)

ಅಧರ್ಮಕಾರೀ ಧರ್ಮೇಣ ತಪಸಾ ಹನ್ತಿ ಕಿಲ್ಬಿಷಮ್ ।

ಪಾಪವನ್ನು ಮಾಡಿದ ಮನುಷ್ಯನು ಧರ್ಮಾಚರಣೆಯಿಂದಲೂ, ತಪಸ್ಸಿನಿಂದಲೂ ತಾನು ಮಾಡಿದ ಪಾಪವನ್ನು ಕಳೆದುಕೊಳ್ಳುತ್ತಾನೆ.

ಬ್ರುವಂಸ್ತೇನ ಇತಿ ಸ್ತೇನಂ ತಾವತ್ಪ್ರಾಪ್ನೋತಿ ಕಿಲ್ಬಿಷಮ್ ॥೪೧॥
ಅಸ್ತೇನಂ ಸ್ತೇನ ಇತ್ಯುಕ್ತ್ವಾ ದ್ವಿಗುಣಂ ಪಾಪಮಾಪ್ನುಯಾತ್ ।

ಕಳ್ಳನನ್ನು ತೋರಿಸಿ ' ಇವನು ಕಳ್ಳ '–ಎಂದು ಹೇಳಿದ ಮಾತ್ರಕ್ಕೇ ಹಾಗೆ ಹೇಳಿದವನು ಕಳ್ಳನ ಪಾಪಕ್ಕೆ ಸಮನಾದ ಪಾಪವನ್ನೇ ಹೊಂದುತ್ತಾನೆ. ಯಾವನು ಕಳ್ಳನಲ್ಲವೋ ಅವನನ್ನು 'ಕಳ್ಳ' ಎಂದು ಹೇಳುವುದರಿಂದ ಕಳ್ಳನ ಪಾಪಕ್ಕಿಂತಲೂ ಇಮ್ಮಡಿಯಾದ ಪಾಪಕ್ಕೆ ಭಾಗಿಯಾಗುತ್ತಾನೆ.

ತ್ರಿಭಾಗಂ ಬ್ರಹ್ಮಹತ್ಯಾಯಾಃ ಕನ್ಯಾ ಪ್ರಾಪ್ನೋತಿ ದುಷ್ಯತೀ ॥೪೨॥
ಯಸ್ತು ದೂಷಯಿತಾ ತಸ್ಯಾಃ ಶೇಷಂ ಪ್ರಾಪ್ನೋತಿ ಪಾಪ್ಮನಃ ।

ಕುಮಾರಿಯಾದವಳು ಸ್ವೇಚ್ಛೆಯಿಂದ ಚಾರಿತ್ರ್ಯಭ್ರಷ್ಟಳಾದರೆ ಬ್ರಹ್ಮ ಹತ್ಯಾಪಾಪದ ನಾಲ್ಕನೆಯ ಮೂರು ಭಾಗ ಪಾಪವನ್ನು ಪಡೆದುಕೊಳ್ಳುತ್ತಾಳೆ. ಕನ್ಯೆಯಾಗಿದ್ದವಳನ್ನು ಕೆಡಿಸಿದವನು ಬ್ರಹ್ಮಹತ್ಯಾಪಾಪದಲ್ಲಿ ಉಳಿದ ನಾಲ್ಕನೆಯ ಒಂದು ಭಾಗ ಪಾಪವನ್ನು ಪಡೆದುಕೊಳ್ಳುತ್ತಾನೆ.

ಬ್ರಾಹ್ಮಣಾನವಗರ್ಹ್ಯೇಹ ಸ್ಪೃಷ್ಟ್ವಾ ಗುರುತರಂ ಭವೇತ್ ॥೪೩॥

ವರ್ಷಾಣಾಂ ಹಿ ಶತಂ ತಾವತ್ಪ್ರತಿಷ್ಠಾಂ ನಾಧಿಗಚ್ಛತಿ ।
ಸಹಸ್ರಂ ಚೈವ ವರ್ಷಾಣಾಂ ನಿಪತ್ಯ ನರಕಂ ವಸೇತ್ ॥೪೪॥

ಈ ಪ್ರಪಂಚದಲ್ಲಿ ಬ್ರಾಹ್ಮಣರನ್ನು ನಿಂದೆಮಾಡಿದವನು ಮತ್ತು ಅವರ ಮೇಲೆ ಕೈಮಾಡಿದವನು ಗುರುತರವಾದ ಪಾಪಕ್ಕೆ ಭಾಗಿಯಾಗುತ್ತಾನೆ. ಬ್ರಾಹ್ಮಣರನ್ನು ನಿಂದೆಮಾಡಿದವನು ಅವಸಾನಾನಂತರದಲ್ಲಿ ನೂರು ವರ್ಷಗಳ ಕಾಲ ಪ್ರೇತಾವಸ್ಥೆಯಲ್ಲಿಯೇ ಇದ್ದು ನಿಂತಲ್ಲಿ ನಿಲ್ಲದೇ ಅಲೆದಾಡುತ್ತಿರಬೇಕಾಗುತ್ತದೆ. ಅವರ ಮೇಲೆ ಕೈಮಾಡಿದವನು ನರಕದಲ್ಲಿ ಬಿದ್ದು ಸಹಸ್ರ ವರ್ಷಗಳ ಕಾಲ ಅಲ್ಲಿಯೇ ವಾಸಮಾಡಬೇಕಾಗುತ್ತದೆ. (**ಯೋಽಪಗುರಾತೈ ಶತೇನ ಯಾತಯಾತ್ । ಯೋ ನಿಹನತ್ಸಹಸ್ರೇಣ ಯಾತಯಾತ್** ಎಂದು ಶ್ರುತಿಯು ಇದನ್ನೇ ಹೇಳುತ್ತದೆ.)

ತಸ್ಮಾನ್ನೈವಾವಗೂರ್ಯಾದ್ಧಿ ನೈವ ಜಾತು ನಿಪಾತಯೇತ್ ।
ಶೋಣಿತಂ ಯಾವತಃ ಪಾಂಸೂನ್ಸಂಗೃಹ್ಣೀಯಾದ್ದ್ವಿಜಕ್ಷತಾತ್ ।
ತಾವತೀಃ ಸ ಸಮಾ ರಾಜನ್ನರಕೇ ಪ್ರತಿಪದ್ಯತೇ ॥೪೫॥

ಆದುದರಿಂದ ಬ್ರಾಹ್ಮಣನನ್ನು ನಿಂದಿಸಬಾರದು ಮತ್ತು ಅವನನ್ನು ಹೊಡೆದು ಕೆಳಕ್ಕೂ ಬೀಳಿಸಬಾರದು. ಬ್ರಾಹ್ಮಣನಿಗೆ ಪೆಟ್ಟುಕೊಟ್ಟ ನಂತರ ಅವನ ಶರೀರದಿಂದ ರಕ್ತವು ಹರಿದು–ಆ ರಕ್ತವು ನೆಲದ ಮೇಲಿರುವ ಎಷ್ಟು ಸಂಖ್ಯೆಯ ಧೂಳಿನ ಕಣಗಳನ್ನು ಆವರಿಸಿಕೊಳ್ಳುವುದೋ–ಅಷ್ಟು ಸಂಖ್ಯೆಯ ವರ್ಷಗಳನ್ನು ಬ್ರಾಹ್ಮಣಘಾತುಕನು ನರಕದಲ್ಲಿ ಕಳೆಯಬೇಕಾಗುತ್ತದೆ.

ಭ್ರೂಣಹಾಹವಮಧ್ಯೇ ತು ಶುಧ್ಯತೇ ಶಸ್ತ್ರಪಾತತಃ ।
ಆತ್ಮಾನಂ ಜುಹುಯಾದಗ್ನೌ ಸಮಿದ್ಧೇ ತೇನ ಶುಧ್ಯತೇ ॥೪೬॥

ಭ್ರೂಣಹತ್ಯೆಯನ್ನು ಮಾಡಿದವನು ಯುದ್ಧದಲ್ಲಿ ಶಸ್ತ್ರಪ್ರಹಾರದಿಂದ ಮೃತನಾದಲ್ಲಿ ಶುದ್ಧನಾಗುತ್ತಾನೆ. ಅಥವಾ ಪ್ರಜ್ವಲಿತವಾದ ಅಗ್ನಿಯಲ್ಲಿ ಆತ್ಮಾರ್ಪಣೆಯನ್ನು ಮಾಡುವುದರಿಂದಲೂ ಶುದ್ಧನಾಗುತ್ತಾನೆ.

ಸುರಾಪೋ ವಾರುಣೀಮುಷ್ಣಾಂ ಪೀತ್ವಾ ಪಾಪಾದ್ವಿಮುಚ್ಯತೇ ।
ತಯಾ ಸ ಕಾಯೇ ನಿರ್ದಗ್ಧೇ ಮೃತ್ಯುಂ ವಾ ಪ್ರಾಪ್ಯ ಶುಧ್ಯತಿ ।
ಲೋಕಾಂಶ್ಚ ಲಭತೇ ವಿಪ್ರೋ ನಾನ್ಯಥಾ ಲಭತೇ ಹಿ ಸಃ ॥೪೮॥

ಮದ್ಯಪಾನವನ್ನು ಮಾಡಿದವನು ಕುದಿಯುತ್ತಿರುವ ಮದ್ಯವನ್ನು ಕುಡಿಯುವುದರಿಂದ ಮದ್ಯಪಾನಮಾಡಿದ ದೋಷದಿಂದ ವಿಮುಕ್ತನಾಗುತ್ತಾನೆ ಅಥವಾ ಕುದಿಯುತ್ತಿರುವ ಮದ್ಯವನ್ನು ಪಾನಮಾಡಿದುದರ ಫಲವಾಗಿ ಹೃದಯವು ಬೆಂದು ಹೋಗಿ ಮರಣವನ್ನಪ್ಪಿದರೂ ಅದರಿಂದವನು ಶುದ್ಧನಾಗುತ್ತಾನೆ. ಹೀಗೆ ಮೃತ್ಯುವನ್ನಪ್ಪಿದ ಬ್ರಾಹ್ಮಣನು ಉತ್ತಮಲೋಕಗಳನ್ನು ಪಡೆದುಕೊಳ್ಳುತ್ತಾನೆ. ಮದ್ಯಪಾನದ ಪಾಪದ ಪರಿಹಾರಕ್ಕೆ ಬೇರೆಯ ಯಾವ ಮಾರ್ಗವೂ ಇಲ್ಲ. ಈ ಮಾರ್ಗವನ್ನು ಬಿಟ್ಟರೆ ಅವನು ಸದ್ಗತಿಯನ್ನೇ ಹೊಂದಲಾರನು.

ಗುರುತಲ್ಪಮಧಿಷ್ಠಾಯ ದುರಾತ್ಮಾ ಪಾಪಚೇತನಃ ।
ಸೂರ್ಮೀಂ ಜ್ವಲಂತೀಮಾಶ್ಲಿಷ್ಯ ಮೃತ್ಯುನಾ ಸೋಽಭಿಶುಧ್ಯತಿ ॥೪೯॥

ಗುರುಪತ್ನಿಯೊಡನೆ ಸಮಾಗಮಮಾಡಿದ ಪಾಪಪೂರ್ಣವಾದ ಬುದ್ಧಿಯುಳ್ಳ ದುರಾತ್ಮನಾದ ಪುರುಷನು ಕೆಂಪಗೆ ಕಾದ ಲೋಹದ ಸ್ತ್ರೀ ಪ್ರತಿಮೆ

ಯನ್ನು ಆಲಿಂಗಿಸಿಕೊಂಡು ಮೃತ್ಯುವಶನಾದರೆ–ಗುರುತಲ್ಪಗಮನದ ಮಹಾ ಪಾಪದಿಂದ ಪರಿಶುದ್ಧನಾಗುತ್ತಾನೆ.

ಅಥವಾ ಶಿಶ್ನವೃಷಣಾವಾದಾಯಾಞ್ಜಲಿನಾ ಸ್ವಯಮ್ ।
ನೈರ್ಋತೀಂ ದಿಶಮಾಸ್ಥಾಯ ನಿಪತೇತ್ಸ ತ್ವಜಿಹ್ಮಗಃ ।
ಬ್ರಾಹ್ಮಣಾರ್ಥೇಽಪಿ ವಾ ಪ್ರಾಣಾನ್ಸಂತ್ಯಜೇತ್ತೇನ ಶುದ್ಧ್ಯತಿ ॥೫೧॥

ಅಥವಾ ಶಿಶ್ನ-ವೃಷಣಗಳೆರಡನ್ನೂ ಕತ್ತರಿಸಿ ಬೊಗಸೆಯಲ್ಲಿಟ್ಟುಕೊಂಡು ಪ್ರಾಣವು ಹೋಗುವವರೆಗೂ ನೈಋತ್ಯದಿಕ್ಕಿನ ಕಡೆಗೆ ನೇರವಾಗಿ ನಡೆದು ಹೋಗುತ್ತಾ ಬಿದ್ದುಹೋಗಬೇಕು. ಹಾಗೆ ಮಾಡಿದಲ್ಲಿ ಶುದ್ಧನಾಗುತ್ತಾನೆ. ಅಥವಾ ಬ್ರಾಹ್ಮಣನ ಸಂರಕ್ಷಣಾರ್ಥವಾಗಿ ಪ್ರಾಣಗಳನ್ನು ತೊರೆದರೂ ಗುರುತಲ್ಪಗನು ಶುದ್ಧನಾಗುತ್ತಾನೆ.

ಅಶ್ವಮೇಧೇನ ವಾಪೀಷ್ಟ್ವಾ ಅಥವಾ ಗೋಸವೇನ ವಾ ।
ಅಗ್ನಿಷ್ಟೋಮೇನ ವಾ ಸಮ್ಯಗಿಹ ಪ್ರೇತ್ಯ ಚ ಪೂಜ್ಯತೇ ॥೫೨॥

ಅಥವಾ ಶ್ರದ್ಧೆಯಿಂದ ಅಶ್ವಮೇಧಯಜ್ಞವನ್ನು ಮಾಡಿದರೂ, ಗೋಸವಯಜ್ಞವನ್ನು ಮಾಡಿದರೂ, ಅಗ್ನಿಷ್ಟೋಮಯಾಗವನ್ನು ಮಾಡಿ ದರೂ ಗುರುತಲ್ಪಗಮನಪಾಪದಿಂದ ಮುಕ್ತನಾಗಿ ಇಹಲೋಕ-ಪರಲೋಕ ಗಳೆರಡರಲ್ಲಿಯೂ ಪೂಜಿತನಾಗುತ್ತಾನೆ.

ತಥೈವ ದ್ವಾದಶಸಮಾಃ ಕಪಾಲೀ ಬ್ರಹ್ಮಹಾ ಭವೇತ್ ।
ಬ್ರಹ್ಮಚಾರೀ ಭವೇನ್ನಿತ್ಯಂ ಸ್ವಕರ್ಮ ಖ್ಯಾಪಯನ್ಮುನಿಃ ।
ಏವಂ ವಾ ತಪಸಾ ಯುಕ್ತೋ ಬ್ರಹ್ಮಹಾ ಸವನೀ ಭವೇತ್ ॥೫೩॥

ಅದೇ ರೀತಿಯಲ್ಲಿ ಬ್ರಹ್ಮಹತ್ಯೆಯನ್ನು ಮಾಡಿದವನು ತಾನು ಹತ್ಯೆ ಮಾಡಿದ ಬ್ರಾಹ್ಮಣನ ಕಪಾಲವನ್ನು ಹಿಡಿದುಕೊಂಡು–'ನಾನು ಬ್ರಹ್ಮ ಘಾತೀ'–ಎಂದು ಲೋಕದಲ್ಲಿ ಸಾರುತ್ತಾ ಹನ್ನೆರಡು ವರ್ಷಗಳ ಪರ್ಯಂತ ವಾಗಿ ಬೆಳಿಗ್ಗೆ-ಮಧ್ಯಾಹ್ನ-ಸಾಯಂಕಾಲಗಳಲ್ಲಿ ಸ್ನಾನಮಾಡುತ್ತಾ ಬ್ರಹ್ಮ ಚರ್ಯವ್ರತಾನುಷ್ಠಾನವನ್ನು ಮಾಡುತ್ತಿರಬೇಕು. ಹೀಗೆ ಮಾಡುವುದರಿಂದ ಅಥವಾ ಕಠಿಣವಾದ ತಪಸ್ಸುಮಾಡುವುದರಿಂದ ಬ್ರಹ್ಮಘಾತಕನು ಆ ಮಹಾಪಾಪದಿಂದ ಮುಕ್ತನಾಗಿ ಶುದ್ಧನಾಗುತ್ತಾನೆ.

ಏವಂ ತು ಸಮಭಿಜ್ಞಾತಾಮಾತ್ರೇಯೀಂ ವಾ ನಿಪಾತಯೇತ್ ।
ದ್ವಿಗುಣಾ ಬ್ರಹ್ಮಹತ್ಯಾ ವೈ ಆತ್ರೇಯೀನಿಧನೇ ಭವೇತ್ ॥೫೪॥

ಯಾವನು ತಿಳಿದೂ ತಿಳಿದೂ ಗರ್ಭಿಣಿಯಾದ ಸ್ತ್ರೀಯನ್ನು ಕೊಲೆ ಮಾಡುವನೋ ಅವನಿಗೆ ಬ್ರಹ್ಮಹತ್ಯಾಪಾಪಕ್ಕೆ ಎರಡು ಪಟ್ಟು ಹೆಚ್ಚಿನ ಪಾಪವು ಆ ಗರ್ಭಿಣಿಯ ನಿಧನದಿಂದ ಪ್ರಾಪ್ತವಾಗುತ್ತದೆ.

ಸುರಾಪೋ ನಿಯತಾಹಾರೋ ಬ್ರಹ್ಮಚಾರೀ ಕ್ಷಿತೀಶಯಃ ।
ಊರ್ಧ್ವಂ ತ್ರಿಭ್ಯೋಽಪಿ ವರ್ಷೇಭ್ಯೋ ಯಜೇತಾಗ್ನಿಷ್ಟುತಾ ಪರಮ್ ।
ಋಷಭೈಕಸಹಸ್ರಂ ವಾ ಗಾ ದತ್ವಾ ಶೌಚಮಾಪ್ನುಯಾತ್ ॥೫೬॥

ಮದ್ಯಪಾನಮಾಡಿದವನು ಮಿತಾಹಾರಿಯಾಗಿ ನೆಲದ ಮೇಲೆಯೇ ಮಲಗುತ್ತಾ ಮೂರು ವರ್ಷಗಳ ಪರ್ಯಂತವಾಗಿ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಿದ್ದು ಅನಂತರ ಅಗ್ನಿಷ್ಟುದ್ಯಾಗವನ್ನು ಮಾಡಬೇಕು. ಯಜ್ಞದ ದಕ್ಷಿಣೆಯಾಗಿ ಒಂದು ಸಾವಿರ ಎತ್ತುಗಳನ್ನಾಗಲೀ–ಒಂದು ಸಾವಿರ ಹಸುಗಳನ್ನಾಗಲೀ ದಾನಮಾಡಬೇಕು. ಹೀಗೆ ಮಾಡುವುದರಿಂದ ಮದ್ಯಪಾನ ಮಾಡಿದ ಪಾಪವು ಪರಿಹಾರವಾಗುತ್ತದೆ. (ಕುದಿಯುವ ಮದ್ಯವನ್ನು ಕುಡಿದು ಪ್ರಾಣಬಿಡುವ ಬದಲಾಗಿ ಈ ಪ್ರಾಯಶ್ಚಿತ್ತವನ್ನಾದರೂ ಮಾಡಿಕೊಳ್ಳಬಹುದು.)

ವೈಶ್ಯಂ ಹತ್ವಾ ತು ವರ್ಷೇ ದ್ವೇ ಋಷಭೈಕಶತಂ ಚ ಗಾಃ ।
ಶೂದ್ರಂ ಹತ್ವಾಬ್ದಮೇವೈಕಮೃಷಭಂ ಚ ಶತಂ ಚ ಗಾಃ ॥೫೭॥

ವೈಶ್ಯನನ್ನು ಕೊಂದವನು ಹೀಗೆಯೇ ಮಿತಾಹಾರಿಯಾಗಿ ನೆಲದ ಮೇಲೆ ಮಲಗುತ್ತಾ ಎರಡು ವರ್ಷಗಳ ಪರ್ಯಂತವಾಗಿ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಿದ್ದು ಅನಂತರ ಅಗ್ನಿಷ್ಟುದ್ಯಾಗವನ್ನು ಮಾಡಿ ನೂರು ಎತ್ತುಗಳನ್ನೂ ನೂರು ಹಸುಗಳನ್ನೂ ದಾನಮಾಡಬೇಕು. ಶೂದ್ರನನ್ನು ಕೊಂದವನು ಇದೇ ನಿಯಮದಿಂದಲೇ ಇರುತ್ತಾ ಒಂದು ವರ್ಷಪರ್ಯಂತವಾಗಿ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಿದ್ದು ಅನಂತರ ಅಗ್ನಿಷ್ಟುದ್ಯಾಗವನ್ನು ಮಾಡಿ ಒಂದು ಎತ್ತನ್ನೂ ಒಂದು ನೂರು ಹಸುಗಳನ್ನೂ ದಾನ

ವಾಗಿ ಕೊಡಬೇಕು. ಹೀಗೆ ಮಾಡುವುದರಿಂದ ಕ್ರಮವಾಗಿ ವೈಶ್ಯಹತ್ಯಾ-ಶೂದ್ರಹತ್ಯಾ ಪಾಪಗಳಿಂದ ವಿಮುಕ್ತರಾಗುತ್ತಾರೆ.

ಶ್ವವರಾಹಖರಾನ್ಹತ್ವಾ ಶೌದ್ರಮೇವ ವ್ರತಂ ಚರೇತ್ ।
ಮಾರ್ಜಾರಚಾಷಮಣ್ಡೂಕಾನ್ಕಾಕಂ ವ್ಯಾಲಂ ಚ ಮೂಷಿಕಮ್ ।
ಉಕ್ತಃ ಪಶುಸಮೋ ದೋಷೋ ರಾಜನ್ಪ್ರಾಣಿನಿಪಾತನಾತ್ ॥೫೮॥

ನಾಯಿ, ಹಂದಿ, ಕತ್ತೆಗಳನ್ನು ಕೊಂದರೂ ಶೂದ್ರವಧೆಯ ಪ್ರಾಯಶ್ಚಿತ್ತದಂತೆಯೇ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಬೆಕ್ಕು, ನವಿಲು, ಕಪ್ಪೆ, ಕಾಗೆ, ಹಾವು, ಇಲಿ–ಇವುಗಳನ್ನು ಕೊಂದರೂ ಪಶುವಧೆಗೆ (ನಾಯಿ, ಹಂದಿ, ಕತ್ತೆಗಳ ವಧೆಗೆ) ಸಮಾನವಾದ ಪಾಪವೇ ಪ್ರಾಪ್ತವಾಗುತ್ತದೆ. (ಅವುಗಳಿಗೂ ಶೂದ್ರವಧೆಗೆ ಉಕ್ತವಾಗಿರುವ ಪ್ರಾಯಶ್ಚಿತ್ತವನ್ನೇ ಮಾಡಿಕೊಳ್ಳಬೇಕು.)

ಪ್ರಾಯಶ್ಚಿತ್ತಾನ್ಯಥಾನ್ಯಾನಿ ಪ್ರವಕ್ಷ್ಯಾಮ್ಯಾನುಪೂರ್ವಶಃ ।
ಅಲ್ಪೇ ಪಾಪ್ಯಥ ಶೋಚೇತ ಪೃಥಕ್ಸಂವತ್ಸರಂ ಚರೇತ್ ।
ತ್ರೀಣಿ ಶ್ರೋತ್ರಿಯಭಾರ್ಯಾಯಾಂ ಪರದಾರೇ ಚ ದ್ವೇ ಸ್ಮೃತೇ ॥

ಕಾಲೇ ಚತುರ್ಥೇ ಭುಞ್ಜಾನೋ ಬ್ರಹ್ಮಚಾರೀ ವ್ರತೀ ಭವೇತ್ ।
ಸ್ಥಾನಾಸನಾಭ್ಯಾಂ ವಿಹರೇತ್ತ್ರಿರಹ್ನಾಭ್ಯುಪಯನ್ನೃಪಃ ।
ಏವಮೇವ ನಿರಾಕರ್ತಾ ಯಶ್ಚಾಗ್ನೀನಪವಿಧ್ಯತಿ ॥೬೦॥

ಯುಧಿಷ್ಠಿರ! ಇತರ ಪ್ರಾಯಶ್ಚಿತ್ತಗಳನ್ನೂ ನಿನಗೆ ಅನುಕ್ರಮವಾಗಿ ಹೇಳುತ್ತೇನೆ. ಇರುವೆಗಳು, ಗೊದ್ದಗಳು–ಇತ್ಯಾದಿಗಳು ಕಾಲಿನ ತುಳಿತಕ್ಕೆ ಸಿಕ್ಕಿ ಸತ್ತರೆ ಅಂತಹ ಪಾಪವು ಕೇವಲ ಪಶ್ಚಾತ್ತಾಪದಿಂದ ಪರಿಹಾರವಾಗುತ್ತದೆ. ಗೋವಧೆಯನ್ನು ಬಿಟ್ಟು ಉಳಿದಂತೆ ಹಾವು, ಬೆಕ್ಕು ಮೊದಲಾದ ಪ್ರಾಣಿಗಳನ್ನು ವಧೆಮಾಡಿದರೆ ಹಿಂದೆ ಹೇಳಿದಂತೆ ಒಂದು ವರ್ಷಪರ್ಯಂತವಾಗಿ ವ್ರತಾಚರಣೆಯಿಂದಿದ್ದು ಅದರ ಪಾಪವನ್ನೂ ಹೋಗಲಾಡಿಸಿಕೊಳ್ಳಬಹುದು. ಶ್ರೋತ್ರಿಯನ ಪತ್ನಿಯೊಡನೆ ಸಮಾಗಮಮಾಡಿದರೆ ಮೂರು ವರ್ಷಗಳೂ, ಪರಸ್ತ್ರೀಯೊಡನೆ ಸಮಾಗಮಮಾಡಿದರೆ ಎರಡು ವರ್ಷಗಳೂ ಬ್ರಹ್ಮಚರ್ಯ ವ್ರತದಿಂದಿದ್ದು ದಿನದ ನಾಲ್ಕನೆಯ ಯಾಮದಲ್ಲಿ ಒಮ್ಮೆ ಮಾತ್ರ ಭೋಜನ ಮಾಡಬೇಕು. ತನಗಾಗಿ ಪ್ರತ್ಯೇಕವಾದ ಸ್ಥಾನಾಸನಗಳನ್ನು ಕಲ್ಪಿಸಿಕೊಂಡು

ಪ್ರಪಂಚಪರ್ಯಟನಮಾಡುತ್ತಿರಬೇಕು, ದಿನಕ್ಕೆ ಮೂರು ಬಾರಿ ನೀರಿನಲ್ಲಿ ಸ್ನಾನಮಾಡಬೇಕು. ಹೀಗೆ ಮಾಡುವುದರಿಂದಲೇ ಅವನು ಮೇಲೆ ಹೇಳಿದ ಪಾಪಗಳನ್ನು ನಿವಾರಣೆಮಾಡಿಕೊಳ್ಳಬಹುದು. ಯಾವನು ಅಗ್ನಿಯನ್ನು ಅಪವಿತ್ರಗೊಳಿಸುವನೋ (ತ್ಯಜಿಸುವನೋ) – ಅಂತಹವನಿಗೂ ಇದೇ ಪ್ರಾಯಶ್ಚಿತ್ತವು ಹೇಳಿದೆ. (ಆಪಸ್ತಂಬಧರ್ಮಸೂತ್ರದಲ್ಲಿ ಕಾಲೇ ಚತುರ್ಥೇ– ಎಂಬುದಕ್ಕೆ ನಾಲ್ಕನೆಯ ಭೋಜನ ಕಾಲದಲ್ಲಿ ಎಂದರೆ ಇಂದು ಮಧ್ಯಾಹ್ನ ಊಟಮಾಡಿದರೆ ಇಂದು ರಾತ್ರಿ ನಾಳೆ ಮಧ್ಯಾಹ್ನ ಬಿಟ್ಟು ನಾಳಿನ ರಾತ್ರಿಯಲ್ಲಿ ಭೋಜನ ಮಾಡುವುದು. ಹೀಗೆಯೇ ಎರಡನೆಯ ಮೂರನೆಯ ಕಾಲಗಳ ಭೋಜನಗಳನ್ನು ಮಾಡದೆ ನಾಲ್ಕನೆಯ ವೇಳೆಯ ಭೋಜನವನ್ನೇ ಮಾಡುತ್ತಾ ಹೋಗುವುದು ಎಂದೂ, ಸ್ಥಾನಾಸನಾಭ್ಯಾಂ–ಎಂಬುದಕ್ಕೆ ಹಗಲಿನಲ್ಲಿ ನಿಂತಿರುವುದು ರಾತ್ರಿಯಲ್ಲಿ ಕುಳಿತಿರುವುದೂ–ಎಂದೂ ವ್ಯಾಖ್ಯಾನ ಮಾಡಿರುತ್ತಾರೆ.)

ತ್ಯಜತ್ಯಕಾರಣೇ ಯಶ್ಚ ಪಿತರಂ ಮಾತರಂ ಗುರುಮ್ ।
ಪತಿತಃ ಸ್ಯಾತ್ಸ ಕೌರವ್ಯ ಯಥಾ ಧರ್ಮೇಷು ನಿಶ್ಚಯಃ ।
ಗ್ರಾಸಾಚ್ಛಾದನಮಾತ್ರಂ ತು ದದ್ಯಾದಿತಿ ನಿದರ್ಶನಮ್ ॥೬೨॥

ಯಾವನು ನಿಷ್ಕಾರಣವಾಗಿ ತಂದೆಯನ್ನೂ, ತಾಯಿಯನ್ನೂ, ಆಚಾರ್ಯನನ್ನೂ ಪರಿತ್ಯಜಿಸುವನೋ– ಅವನೂ ಪತಿತನಾಗುತ್ತಾನೆ. ಅಂತಹವನಿಗೆ ತಂದೆಯ ಆಸ್ತಿಯಲ್ಲಿ ಅನ್ನ ಮತ್ತು ಬಟ್ಟೆಗೆ ಸಾಕಾಗುವಷ್ಟು ಆಸ್ತಿಯನ್ನು ಮಾತ್ರವೇ ಕೊಡಬೇಕೆಂದು ಧರ್ಮಶಾಸ್ತ್ರದಲ್ಲಿ ನಿಶ್ಚಯಿಸ ಲ್ಪಟ್ಟಿದೆ.

ಭಾರ್ಯಾಯಾಂ ವ್ಯಭಿಚಾರಿಣ್ಯಾಂ ನಿರುದ್ಧಾಯಾಂ ವಿಶೇಷತಃ ।
ಯತ್ಪುಂಸಃ ಪರದಾರೇಷು ತದೇನಾಂ ಚಾರಯೇದ್ವ್ರತಮ್ ॥೬೩॥

ಭಾರ್ಯೆಯು ವ್ಯಭಿಚಾರಿಣಿಯಾದರೆ ಅದರಲ್ಲಿಯೂ ವಿಶೇಷವಾಗಿ ವ್ಯಭಿಚಾರದಿಂದ ಅವಳು ನಿರೋಧಿಸಲ್ಪಟ್ಟರೆ (ಅವಳು ಮುಂದೆ ವ್ಯಭಿಚಾರ ವನ್ನು ನಿಲ್ಲಿಸಿದರೆ) ಪರಸ್ತ್ರೀಸಮಾಗಮಮಾಡಿದ ಪುರುಷನಿಗೆ ಯಾವ ಪ್ರಾಯಶ್ಚಿತ್ತವು ಹೇಳಿರುವುದೋ ಅದೇ ಪ್ರಾಯಶ್ಚಿತ್ತವನ್ನೇ ವ್ಯಭಿಚಾರಮಾಡಿದ ಭಾರ್ಯೆಯಿಂದಲೂ ಮಾಡಿಸಬೇಕು.

ಶ್ರೇಯಾಂಸಂ ಶಯನಂ ಹಿತ್ವಾ ಯಾನ್ಯಂ ಪಾಪಂ ನಿಗಚ್ಛತಿ ।
ಶ್ವಭಿಸ್ತಾಮರ್ದಯೇದ್ರಾಜಾ ಸಂಸ್ಥಾನೇ ಬಹುವಿಸ್ತರೇ ॥೬೪॥

ಯುವತಿಯೊಬ್ಬಳು ಅಗ್ನಿಸಾಕ್ಷಿಯಾಗಿ ವಿವಾಹಿತನಾದ ಪತಿಯನ್ನು ಪರಿತ್ಯಜಿಸಿ ಬೇರೆಯ ಪಾಪಿಷ್ಠನೊಬ್ಬನೊಡನೆ ಶಯ್ಯಾಸುಖವನ್ನು ಅನುಭವಿಸಿದರೆ ಅಂತಹವಳನ್ನು ರಾಜನಾದವನು ವಿಶಾಲವಾದ ಮೈದಾನದಲ್ಲಿ ನಿಲ್ಲಿಸಿ ನಾಯಿಗಳಿಂದ ಕಚ್ಚಿಸಬೇಕು.

ಪುಮಾಂಸಮುನ್ನಯೇತ್ಪ್ರಾಜ್ಞಃ ಶಯನೇ ತಪ್ತ ಆಯಸೇ ।
ಅಪ್ಯಾದಧೀತ ದಾರೂಣಿ ತತ್ರ ದಹ್ಯೇತ ಪಾಪಕೃತ್ ॥೬೫॥

ಏಷ ದಣ್ಡೋ ಮಹಾರಾಜ ಸ್ತ್ರೀಣಾಂ ಭರ್ತೃವ್ಯತಿಕ್ರಮಾತ್ ।
ಸಂವತ್ಸರಾಭಿಶಸ್ತಸ್ಯ ದುಷ್ಟಸ್ಯ ದ್ವಿಗುಣೋ ಭವೇತ್ ॥೬೬॥

ದ್ವೇ ತಸ್ಯ ತ್ರೀಣಿ ವರ್ಷಾಣಿ ಚತ್ವಾರಿ ಸಹಸೇವಿನಿ ।
ಕುಚರಃ ಪಞ್ಚ ವರ್ಷಾಣಿ ಚರೇದ್ಭೈಕ್ಷ್ಯಂ ಮುನಿವ್ರತಃ ॥೬೭॥

ಪ್ರಾಜ್ಞನಾದ ರಾಜನು–ಹೀಗೆಯೇ ವ್ಯಭಿಚಾರಮಾಡಿದ ಪುರುಷನನ್ನು ಕೆಂಪಗೆ ಕಾಯಿಸಿದ ಲೋಹದ ಮಂಚದಲ್ಲಿ ಮಲಗಿಸಿ ಅವನ ಮೇಲೆ ಕಟ್ಟಿಗೆಗಳನ್ನಿಟ್ಟು ಬೆಂಕಿಯನ್ನು ಹೊತ್ತಿಸಿ ಆ ಪಾಪಕರ್ಮಿಯನ್ನು ಸುಟ್ಟುಹಾಕಬೇಕು. ಪತಿಯನ್ನು ತಿರಸ್ಕರಿಸಿ ಪರಪುರುಷನೊಡನೆ ಸೇರುವ ಹೆಂಗಸಿಗೂ ಇದೇ ಶಿಕ್ಷೆಯೇ ವಿಹಿತವಾಗಿದೆ. ಮೇಲೆ ಹೇಳಿದ ಪಾಪಿಷ್ಠರಲ್ಲಿ ಯಾರಾದರೂ ಒಂದು ವರ್ಷದವರೆಗೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ದ್ವಿಗುಣವಾದ ಪ್ರಾಯಶ್ಚಿತ್ತವನ್ನು ಅವರು ಮಾಡಿಕೊಳ್ಳಬೇಕು. ಎರಡು ವರ್ಷಗಳ ಕಾಲ, ಮೂರು ವರ್ಷಗಳ ಕಾಲ, ನಾಲ್ಕು ವರ್ಷಗಳ ಕಾಲ, ಐದು ವರ್ಷಗಳ ಕಾಲ ಪತಿತನ ಸಹವಾಸದಲ್ಲಿದ್ದವನು–ಅಷ್ಟೇ ವರ್ಷಗಳ ಪರ್ಯಂತವಾಗಿ ಮುನಿವ್ರತನಾಗಿ ಭೂಮಿಯಲ್ಲಿ ಅಲೆದಾಡುತ್ತಾ ಭಿಕ್ಷಾಟನೆಯನ್ನು ಮಾಡಬೇಕು.

ಪರಿವಿತ್ತಿಃ ಪರಿವೇತ್ತಾ ಯಾ ಚೈವ ಪರಿವಿದ್ಯತೇ ।
ಪಾಣಿಗ್ರಹಸ್ಯಧರ್ಮೇಣ ಸರ್ವೇ ತೇ ಪತಿತಾಃ ಸ್ಮೃತಾಃ ॥೬೮॥

ಜ್ಯೇಷ್ಠಭ್ರಾತೃವಿಗೆ ವಿವಾಹವಾಗುವುದಕ್ಕೆ ಮೊದಲೇ ತಮ್ಮನು

ಅಧರ್ಮದಿಂದ ವಿವಾಹಿತನಾದರೆ ಜ್ಯೇಷ್ಠಭ್ರಾತೃವನ್ನು ಪರಿವಿತ್ತಿಃ – ಎಂದೂ ತಮ್ಮನನ್ನು ಪರಿವೇತ್ತಾ – ಎಂದೂ ಕರೆಯುತ್ತಾರೆ. ತಮ್ಮನ ಪತ್ನಿಯನ್ನು ಪರಿವೇದನೀಯಾ ಎಂದೂ ಕರೆಯುತ್ತಾರೆ. ಧರ್ಮತಃ ಇವರೆಲ್ಲರೂ ಪತಿತರೇ ಆಗುತ್ತಾರೆ.

ಚರೇಯುಃ ಸರ್ವ ಏವೈತೇ ವೀರಹಾ ಯದ್ವ್ರತಂ ಚರೇತ್ ।
ಚಾನ್ದ್ರಾಯಣಂ ಚರೇನ್ಮಾಸಂ ಕೃಚ್ಛ್ರಂ ವಾ ಪಾಪಶುದ್ಧಯೇ ॥೬೯॥

ಈ ಮೂವರೂ ಪ್ರತ್ಯೇಕ-ಪ್ರತ್ಯೇಕವಾಗಿ, ಯಜ್ಞಹೀನನಾದ ಬ್ರಾಹ್ಮಣನಿಗೆ ಯಾವ ಪ್ರಾಯಶ್ಚಿತ್ತವು ಹೇಳಲ್ಪಟ್ಟಿರುವುದೋ ಆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು ಅಥವಾ ಒಂದು ಮಾಸದವರೆಗೆ ಚಾಂದ್ರಾಯಣವ್ರತವನ್ನಾಗಲೀ–ಕೃಚ್ಛ್ರವ್ರತವನ್ನಾಗಲೀ ಆಚರಿಸಬೇಕು.

ಪರಿವೇತ್ತಾ ಪ್ರಯಚ್ಛೇತ ತಾಂ ಸ್ನುಷಾಂ ಪರಿವಿತ್ತಯೇ ।
ಜ್ಯೇಷ್ಠೇನ ತ್ವಭ್ಯನುಜ್ಞಾತೋ ಯವೀಯಾನಪ್ಯನನ್ತರಮ್ ।
ಏವಂ ಚ ಮೋಕ್ಷಮಾಪ್ನೋತಿ ತೌ ಚ ಸಾ ಚೈವ ಧರ್ಮತಃ ॥೭೦॥

ಪರಿವೇತ್ತನು (ತಮ್ಮನು) ಪರಿವೇತ್ತಿಗೆ (ಅಣ್ಣನಿಗೆ) ತಾನು ಪಾಣಿಗ್ರಹಣಮಾಡಿಕೊಂಡ ಭಾರ್ಯೆಯನ್ನು ಸೊಸೆಯ ರೂಪದಲ್ಲಿ ಅರ್ಪಿಸಬೇಕು. ಅನಂತರ ಜ್ಯೇಷ್ಠಭ್ರಾತೃವಿನ ಅನುಮತಿಯನ್ನು ಪಡೆದು ಪರಿವೇತ್ತನು ಅವಳನ್ನು ಪತ್ನಿಯನ್ನಾಗಿ ಪರಿಗ್ರಹಿಸಬೇಕು. ಹೀಗೆ ಮಾಡಿದರೆ ಆ ಮೂವರೂ ಧರ್ಮಾನುಸಾರವಾಗಿ ಪಾಪದಿಂದ ವಿಮುಕ್ತರಾಗುತ್ತಾರೆ.

ಅಮಾನುಷೀಷು ಗೋವರ್ಜ್ಯಮನಾವೃಷ್ಟಿರ್ನ* ದುಷ್ಯತಿ ।
ಅಧಿಷ್ಠಾತಾರಮತ್ತಾರಂ ಪಶೂನಾಂ ಪುರುಷಂ ವಿದುಃ ॥೭೧॥

ಪ್ರಾಣಿಜಾತಿಯಲ್ಲಿ ಹಸುವೊಂದನ್ನು ಬಿಟ್ಟು ಉಳಿದ ಪ್ರಾಣಿಗಳಿಗೆಹಿಂಸೆಯನ್ನು ಮಾಡಿದರೂ ಮನುಷ್ಯನು ಪಾಪಿಷ್ಠನಾಗುವುದಿಲ್ಲ. ಏಕೆಂದರೆ :

---

* ಅನಾವೃಷ್ಟಿಃ – ಎಂದರೆ ಮಳೆಯಾಗದೇ ಇರುವುದು. ಆದರೆ ವ್ಯಾಖ್ಯಾನಕಾರರು ಸಂದರ್ಭಾನುಸಾರವಾಗಿ ಅನಾವೃಷ್ಟಿಃ = ಅಜೀವನಂ–ಹಿಂಸೇತ್ಯರ್ಥಃ ಜೀವನವಿಲ್ಲದ ಸ್ಥಿತಿ ; ಅಹಿಂಸೆ – ಎಂದು ಅರ್ಥಮಾಡಿರುತ್ತಾರೆ.

ಪ್ರಾಣಿಗಳಿಗೆ ಮನುಷ್ಯನೇ ಆಶ್ರಯದಾತನೆಂದೂ ಮತ್ತು ಅವುಗಳ ಭಕ್ಷಕನೆಂದೂ ವಿದ್ವಾಂಸರು ತಿಳಿಯುತ್ತಾರೆ.

ಪರಿಧಾಯೋರ್ಧ್ವವಾಲಂ ತು ಪಾತ್ರಮಾದಾಯ ಮೃಣ್ಮಯಮ್ ।
ಚರೇತ್ಸಪ್ತಗೃಹಾನ್ನಿತ್ಯಂ ಸ್ವಕರ್ಮ ಪರಿಕೀರ್ತಯನ್ ॥೭೨॥

ತತ್ರೈವ ಲಬ್ಧಭೋಜೀ ಸ್ಯಾದ್ದ್ವಾದಶಾಹಾತ್ಸಶುದ್ಧ್ಯತಿ ।
ಚರೇತ್ಸಂವತ್ಸರಂ ಚಾಪಿ ತದ್ವ್ರತಂ ಯೇನ ಕೃನ್ತತಿ ॥೭೩॥

ಗೋವಧೆಯನ್ನು ಮಾಡಿದವನು ಚಮರೀಮೃಗದ ಪುಚ್ಛವನ್ನು ಊರ್ಧ್ವಮುಖವಾಗಿ ಕಟ್ಟಿಕೊಂಡು, ಮಣ್ಣಿನ ಮಡಿಕೆಯನ್ನು ಹಿಡಿದು ಕೊಂಡು 'ನಾನು ಗೋವಧೆಮಾಡಿದವನು'–ಎಂದು ಹೇಳಿಕೊಳ್ಳುತ್ತಾ ಏಳು ಮನೆಗಳಿಗೆ ಭಿಕ್ಷೆಗೆ ಹೋಗಬೇಕು. ಏಳು ಮನೆಗಳಲ್ಲಿ ಎಷ್ಟು ಭಿಕ್ಷೆಯು ಸಿಕ್ಕುವುದೋ ಅಷ್ಟನ್ನೇ ಊಟಮಾಡಬೇಕು. ಹೀಗೆ ಹನ್ನೆರಡು ದಿವಸಗಳವರೆಗೆ ಮಾಡಿದರೆ ಗೋಘ್ನನು ಆ ಮಹಾಪಾಪದಿಂದ ವಿಮುಕ್ತನಾಗುತ್ತಾನೆ. ಪಾಪವು ಬಹಳ ಘೋರವಾಗಿದ್ದರೆ (ಒಂದಕ್ಕಿಂತ ಹೆಚ್ಚು ಹಸುಗಳನ್ನು ವಧೆಮಾಡಿದ್ದರೆ) ಒಂದು ವರ್ಷಪರ್ಯಂತವಾಗಿ ಹೀಗೆ ವ್ರತಾನುಷ್ಠಾನ ಮಾಡುವುದರಿಂದ ಪಾಪಮುಕ್ತನಾಗುತ್ತಾನೆ.

ಭವೇತ್ತು ಮಾನುಷೇಷ್ವೇವಂ ಪ್ರಾಯಶ್ಚಿತ್ತಮನುತ್ತಮಮ್ ।
ದಾನಂ ವಾ ದಾನಶಕ್ತೇಷು ಸರ್ವಮೇತತ್ಪ್ರಕಲ್ಪಯೇತ್ ॥೭೪॥

ಇದು ಮನುಷ್ಯರಲ್ಲಿ ಪರಮಶ್ರೇಷ್ಠವಾದ ಪ್ರಾಯಶ್ಚಿತ್ತವಿಧಾನವಾಗಿದೆ. ದಾನಕೊಡಲು ಸಮರ್ಥರಾದವರಿಗೆ ಮಹಾದಾನಗಳ ಮೂಲಕವಾಗಿ ಪಾಪಗಳನ್ನು ಪರಿಹರಿಸಿಕೊಳ್ಳುವ ವಿಧಿಯೂ ಇದೆ. ಆದರೆ ಈ ಎಲ್ಲ ಪ್ರಾಯಶ್ಚಿತ್ತಗಳನ್ನೂ ವಿಚಾರಪೂರ್ವಕವಾಗಿ ಮಾಡಿಕೊಳ್ಳಬೇಕಾಗುತ್ತದೆ.

ಅನಾಸ್ತಿಕೇಷು ಗೋಮಾತ್ರಂ ದಾನಮೇಕಂ ಪ್ರಚಕ್ಷತೇ ।
ಶ್ವವರಾಹಮನುಷ್ಯಾಣಾಂ ಕುಕ್ಕುಟಸ್ಯ ಖರಸ್ಯ ಚ ।
ಮಾಂಸಂ ಮೂತ್ರಂ ಪುರೀಷಂ ಚ ಪ್ರಾಶ್ಯ ಸಂಸ್ಕಾರಮರ್ಹತಿ ॥

ಆಸ್ತಿಕರಾದವರು ಒಂದು ಗೋವನ್ನು ದಾನವಾಗಿ ಕೊಡುವುದರಿಂದಲೇ ಗೋವಧೆಯ ಪ್ರಾಯಶ್ಚಿತ್ತವನ್ನು ಮಾಡಿಕೊಂಡಂತಾಗುತ್ತದೆ. ನಾಯಿ,

ಹಂದಿ, ಮನುಷ್ಯ, ಕೋಳಿ, ಕತ್ತೆ–ಇವುಗಳ ಮಾಂಸ-ಮೂತ್ರ-ಪುರೀಷ ಗಳನ್ನು ತಿಂದು-ಕುಡಿದ ಬ್ರಾಹ್ಮಣನು ಪುನಃ ಉಪನಯನಸಂಸ್ಕಾರವನ್ನು ಮಾಡಿಕೊಳ್ಳಬೇಕು.

ಬ್ರಾಹ್ಮಣಸ್ತು ಸುರಾಪಸ್ಯ ಗನ್ಧಮಾದಾಯ ಸೋಮಪಃ ।
ಅಪಸ್ತ್ರ್ಯಹಂ ಪಿಬೇದುಷ್ಣಂ ತ್ರ್ಯಹಮುಷ್ಣಂ ಪಯಃ ಪಿಬೇತ್ ।
ತ್ರ್ಯಹಮುಷ್ಣಂ ಪಯಃ ಪೀತ್ವಾ ವಾಯುಭಕ್ಷೋ ಭವೇತ್ತ್ರ್ಯಹಮ್ ॥೭೭॥

ಏವಮೇತತ್ಸಮುದ್ದಿಷ್ಟಂ ಪ್ರಾಯಶ್ಚಿತ್ತಂ ಸನಾತನಮ್ ।
ಬ್ರಾಹ್ಮಣಸ್ಯ ವಿಶೇಷೇಣ ಯದಜ್ಞಾನೇನ ಸಮ್ಭವೇತ್ ॥೭೮॥

ಸೋಮಯಾಗಮಾಡಿ ಸೋಮಪಾನವನ್ನು ಮಾಡಲು ಯೋಗ್ಯನಾದ ಬ್ರಾಹ್ಮಣನು ಮದ್ಯಪನ ವಾಸನೆಯನ್ನು ಆಘ್ರಾಣಿಸಿದರೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಮೂರು ದಿವಸಗಳು ಬಿಸಿಯಾದ ನೀರನ್ನು ಕುಡಿಯಬೇಕು. ಮೂರು ದಿವಸಗಳು ಬಿಸಿಯಾದ ಹಾಲನ್ನು ಕುಡಿಯಬೇಕು. ಮೂರು ದಿವಸಗಳು ಬಿಸಿಯಾದ ಹಾಲನ್ನು ಕುಡಿದನಂತರ ಮೂರು ದಿವಸಗಳು ವಾಯುಭಕ್ಷನಾಗಿರಬೇಕು ಅರ್ಥಾತ್ ಉಪವಾಸಮಾಡಬೇಕು.

ಎಲ್ಲರಿಗೂ ಸಾಮಾನ್ಯವಾಗಿ ಸನಾತನವಾದ ಈ ಪ್ರಾಯಶ್ಚಿತ್ತಗಳು ಹೇಳಲ್ಪಟ್ಟಿವೆ. ಅದರಲ್ಲಿಯೂ ತಿಳಿಯದೇ ಪಾಪಕರ್ಮಮಾಡಿದ ಬ್ರಾಹ್ಮಣ ನಿಗೆ ವಿಶೇಷವಾದ ಈ ಪ್ರಾಯಶ್ಚಿತ್ತವು ಧರ್ಮಶಾಸ್ತ್ರಗಳಲ್ಲಿ ಉಕ್ತವಾಗಿದೆ.”

ಇ೬೫ನೆಯ ಅಧ್ಯಾಯವು ಮುಗಿಯಿತು.

೧೬೬ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಖಡ್ಗದ ಉತ್ಪತ್ತಿ ಮತ್ತು ಅದರ ಪರಂಪರಾಮಹಿಮೆಯ ವರ್ಣನೆ

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ಕಥಾಪ್ರಸಂಗದ ಸಮಾಪ್ತಿಯ ಸಮಯದಲ್ಲಿ ಖಡ್ಗಯುದ್ಧವಿಶಾರದನಾದ ನಕುಲನು ಶರತಲ್ಪದಲ್ಲಿ ಮಲಗಿದ್ದ ಭೀಷ್ಮನನ್ನು ಪ್ರಶ್ನಿಸುತ್ತಾನೆ :

"ಪಿತಾಮಹ! ಯದ್ಯಪಿ ಈ ಪ್ರಪಂಚದಲ್ಲಿ ಧನುಸ್ಸೇ ಅತ್ಯಂತಶ್ರೇಷ್ಠವಾದ ಪ್ರಹರಣವೆಂದು ಪರಿಗಣಿತವಾಗಿದ್ದರೂ ತೀಕ್ಷ್ಣವಾದ ಕತ್ತಿಯೇ ಶ್ರೇಷ್ಠವಾದ ಆಯುಧವೆಂಬುದು ನನ್ನ ಅಭಿಪ್ರಾಯವಾಗಿದೆ. ಶತ್ರುಗಳಿಂದ ಧನುಸ್ಸು ಕತ್ತರಿಸಲ್ಪಟ್ಟರೂ, ರಥದ ಕುದುರೆಗಳು ನಷ್ಟವಾದರೂ ಯುದ್ಧಸ್ಥಳದಲ್ಲಿ ಖಡ್ಗದ ಮೂಲಕವಾಗಿ ತನ್ನನ್ನು ಚೆನ್ನಾಗಿ ರಕ್ಷಿಸಿಕೊಳ್ಳಲು ಶಕ್ಯವಿದೆ. ಖಡ್ಗವನ್ನು ಹಿಡಿದಿರುವ ವೀರನೊಬ್ಬನೇ ಧನುರ್ಬಾಣ-ಗದಾ-ಶಕ್ತಿಗಳನ್ನು ಧರಿಸಿರುವ ಅನೇಕವೀರರನ್ನೂ ಎದುರಿಸಲು ಸಮರ್ಥನಾಗುತ್ತಾನೆ.

ಪಿತಾಮಹ! ಇಲ್ಲಿ ನನಗೊಂದು ಸಂಶಯವಿದೆ. ಈ ಸಂಶಯವನ್ನು ನಿವಾರಿಸಿಕೊಳ್ಳಬೇಕೆಂಬ ಕುತೂಹಲವೂ ಇದೆ. ಎಲ್ಲ ಯುದ್ಧಗಳಲ್ಲಿಯೂ ಯಾವ ವಿಧವಾದ ಆಯುಧವು ಶ್ರೇಷ್ಠವಾದುದು? ನಾನು ಭಾವಿಸಿರುವಂತೆ ಆ ಶ್ರೇಷ್ಠವಾದ ಆಯುಧವು ಖಡ್ಗವೇ ಆಗಿರುವುದಾದರೆ–ಖಡ್ಗದ ಉತ್ಪತ್ತಿಯು ಹೇಗಾಯಿತು? ಯಾವ ಪ್ರಯೋಜನಕ್ಕೋಸ್ಕರ ಖಡ್ಗದ ಉತ್ಪತ್ತಿಯಾಯಿತು? ಯಾರಿಂದ ಉತ್ಪತ್ತಿಯಾಯಿತು? ಖಡ್ಗಯುದ್ಧಕ್ಕೆ ಮೊದಲನೆಯ ಆಚಾರ್ಯರು ಯಾರು?–ಈ ಎಲ್ಲ ವಿಷಯಗಳನ್ನೂ ನನಗೆ ತಿಳಿಯಪಡಿಸು."

ಜನಮೇಜಯ! ಮಾದ್ರಿಯ ಪುತ್ರನಾದ, ಪ್ರಾಜ್ಞನಾದ ನಕುಲನ ಕೌಶಲಯುಕ್ತವಾಗಿಯೂ, ಸೂಕ್ಷ್ಮವಾಗಿಯೂ, ವಿಚಿತ್ರಾರ್ಥಯುಕ್ತವಾಗಿಯೂ ಇದ್ದ ಮಾತುಗಳನ್ನು ಕೇಳಿ–ಶರತಲ್ಪದಲ್ಲಿ ಮಲಗಿದ್ದ ಧನುರ್ವೇದ ಪಾರಂಗತನಾದ, ಧರ್ಮಜ್ಞನಾದ ಭೀಷ್ಮನು ಉತ್ತಮಶಿಕ್ಷಣದಿಂದ ಸಂಪನ್ನನಾಗಿದ್ದ, ದ್ರೋಣರ ಶಿಷ್ಯನಾಗಿದ್ದ ನಕುಲನಿಗೆ ಸುಂದರವಾದ ಸ್ವರ-ವರ್ಣಗಳಿಂದ ಯುಕ್ತವಾಗಿದ್ದ ಈ ಮಾತುಗಳನ್ನು ಉತ್ತರರೂಪದಲ್ಲಿ ಹೇಳಿದನು :

"ಮಾದ್ರೀಪುತ್ರ! ನೀನು ಯಾವ ಖಡ್ಗದ ವಿಷಯವಾಗಿ ಪ್ರಶ್ನಿಸಿರುವೆಯೋ–ಆ ಖಡ್ಗದ ತತ್ತ್ವವೇನೆಂಬುದನ್ನು ಹೇಳುವೆನು ; ಕೇಳು. ಗೈರಿಕಾದಿ ಧಾತುಗಳಿಂದ ಕೂಡಿರುವ ಕೆಂಪುಬಣ್ಣದ ಪರ್ವತದಂತೆ ನಾನೀಗ ರಕ್ತದಿಂದ ತೋಯ್ದು ಈ ಶರತಲ್ಪದಲ್ಲಿ ಮಲಗಿದ್ದೇನೆ. ಆದರೂ ನಿನ್ನ ಈ ಪ್ರಶ್ನೆಯಿಂದ ನಾನು ಎಚ್ಚರಗೊಳಿಸಲ್ಪಟ್ಟಿದ್ದೇನೆ.

ಪೂರ್ವಕಾಲದಲ್ಲಿ ಈ ಸಕಲಜಗತ್ತೂ ಜಲಮಯವಾಗಿದ್ದು ಒಂದು ಮಹಾಸಾಗರದಂತೆಯೇ ಇದ್ದಿತು. ಆ ಸಮಯದಲ್ಲಿ ಜಗತ್ತಿನಲ್ಲಿ ಯಾವ ವಿಧವಾದ ಕಂಪನವೂ ಇರಲಿಲ್ಲ. ಆಕಾಶವೂ ಇರಲಿಲ್ಲ. ಭೂಮಿಯು ಎಲ್ಲಿರುವುದೆಂಬುದನ್ನು ನಿರ್ದೇಶಿಸಿ ಹೇಳುವುದಕ್ಕೂ ಸಾಧ್ಯವಿರಲಿಲ್ಲ. ಸಕಲವೂ ಅಂಧಕಾರಮಯವಾಗಿದ್ದಿತು. (ಮಹಾತಮಸ್ಸೆಂಬ ಮೂಲಕಾರಣವೊಂದೇ ಇದ್ದಿತು.) ಶಬ್ದ-ಸ್ಪರ್ಶಗಳ ಅನುಭವವೂ ಇರಲಿಲ್ಲ. ಎಲ್ಲವೂ ಜಲಮಯವಾಗಿಯೇ ಇದ್ದು ಬಹಳ ಭಯಂಕರವಾಗಿ ಕಾಣುತ್ತಿದ್ದಿತು. ಆ ಜಲರಾಶಿಗೆ ಎಲ್ಲೆಯೇ ಇರಲಿಲ್ಲ. ಆ ಸಮಯದಲ್ಲಿ ಪಿತಾಮಹನು (ವಿಷ್ಣುವಿನ ನಾಭಿಕಮಲದಿಂದ) ಹುಟ್ಟಿದನು. ವೀರ್ಯವಂತನಾದ ಪಿತಾಮಹನು ವಾಯ್ವಗ್ನಿ-ಸೂರ್ಯರನ್ನೂ, ಮೇಲ್ಭಾಗದಲ್ಲಿ ಆಕಾಶವನ್ನೂ, ಕೆಳಭಾಗದಲ್ಲಿ ಭೂಮಿಯನ್ನೂ, ರಾಕ್ಷಸರ ಸಮೂಹವನ್ನೂ ಸೃಷ್ಟಿಸಿದನು. ಚಂದ್ರ ಮತ್ತು ತಾರೆಗಳಿಂದ ಯುಕ್ತವಾದ ಆಕಾಶವನ್ನೂ, ನಕ್ಷತ್ರಗಳನ್ನೂ, ಸಂವತ್ಸರಗಳನ್ನೂ, ಋತುಗಳನ್ನೂ, ಮಾಸ-ಪಕ್ಷಗಳನ್ನೂ, ಲವ ಮತ್ತು ಕ್ಷಣಗಳನ್ನೂ ಸೃಷ್ಟಿಸಿದನು. ಬಳಿಕ ಭಗವಾನ್ ಪಿತಾಮಹನು ಲೌಕಿಕಶರೀರವನ್ನು ಧರಿಸಿ, ಶ್ರೇಷ್ಠವಾದ ತೇಜಸ್ಸಿನಿಂದ ಕೂಡಿದ್ದ ಋಷಿಗಳಾದ ಮರೀಚಿ, ಅತ್ರಿ, ಪುಲಸ್ತ್ಯ, ಕ್ರತು, ವಸಿಷ್ಠ, ಅಂಗಿರಸ, ಪ್ರಭುವಾದ ಮತ್ತು ಐಶ್ವರ್ಯಸಂಪನ್ನನಾದ ರುದ್ರ–ಇವರನ್ನು ಪುತ್ರರನ್ನಾಗಿ ಪಡೆದುಕೊಂಡನು. ಪ್ರಚೇತನ ಮಗನಾದ ದಕ್ಷನು ಅರುವತ್ತು ಮಂದಿ ಕನ್ಯೆಯರಿಗೆ ಜನ್ಮವಿತ್ತನು. ಪ್ರಜೆಗಳ ಉತ್ಪತ್ತಿಗಾಗಿ ಆ ಅರುವತ್ತು ಮಂದಿ ದಕ್ಷಕನ್ಯೆಯರನ್ನೂ ಮರೀಚ್ಯಾದಿ ಎಂಟು ಮಂದಿ ಬ್ರಹ್ಮರ್ಷಿಗಳು ಪತ್ನಿಯರ ರೂಪದಲ್ಲಿ ಪರಿಗ್ರಹಿಸಿದರು. ಈ ಋಷಿಪತ್ನಿಯರಿಂದಲೇ ಸಮಸ್ತಪ್ರಾಣಿಗಳೂ, ದೇವತೆಗಳೂ, ಪಿತೃಗಳೂ, ಗಂಧರ್ವರೂ, ಅಪ್ಸರೆಯರೂ, ನಾನಾವಿಧವಾದ ರಾಕ್ಷಸರೂ, ಪಶು-ಪಕ್ಷಿ-ಮತ್ಸ್ಯ-ವಾನರಗಳೂ, ದೊಡ್ಡ-ದೊಡ್ಡ ಸರ್ಪಗಳೂ, ನೀರಿನಲ್ಲಿ ಮತ್ತು ಭೂಮಿಯಲ್ಲಿ ವಿಹರಿಸುವ ನಾನಾವಿಧವಾದ ಪಕ್ಷಿಗಳೂ, ಉದ್ಭಿಜ್ಜ, ಸ್ವೇದಜ, ಅಂಡಜ ಮತ್ತು ಜರಾಯುಜಪ್ರಾಣಿಗಳೂ ಹುಟ್ಟಿದುವು. ಹೀಗೆ ಸ್ಥಾವರ-ಜಂಗಮಾತ್ಮಕವಾದ ಈ ಭೂಮಂಡಲದ ಸೃಷ್ಟಿಯಾಯಿತು.

ಸರ್ವಲೋಕಪಿತಾಮಹನಾದ ಬ್ರಹ್ಮನು ಸಮಸ್ತಪ್ರಾಣಿಗಳನ್ನೂ ಸೃಷ್ಟಿಸಿ, ವೇದೋಕ್ತವಾದ ಸನಾತನಧರ್ಮಕ್ಕೇ ಈ ಎಲ್ಲ ಪ್ರಾಣಿಗಳನ್ನೂ ಒಳಪಡಿಸಿದನು. ಆಚಾರ್ಯ-ಪುರೋಹಿತಸಹಿತರಾದ ದೇವತೆಗಳೂ, ಆದಿತ್ಯ-ವಸು-ರುದ್ರ-ಸಾಧ್ಯ-ಮರುದ್ಗಣಗಳೂ ಮತ್ತು ಅಶ್ವಿನೀಕುಮಾರರೂ ವೇದೋಕ್ತವಾದ ಆ ಸನಾತನಧರ್ಮದಲ್ಲಿ ಪ್ರತಿಷ್ಠಿತರಾದರು. ಭೃಗು-ಅತ್ರಿ-ಅಂಗಿರಸರೂ, ಸಿದ್ಧರೂ, ತಪೋಧನರಾದ ಕಶ್ಯಪರೂ ಮತ್ತು ಅವರ ಮಕ್ಕಳೂ, ವಸಿಷ್ಠರೂ, ಗೌತಮರೂ, ಅಗಸ್ತ್ಯರೂ, ದೇವರ್ಷಿಗಳಾದ ನಾರದರೂ, ಪರ್ವತರೂ, ವಾಲಖಿಲ್ಯಮಹರ್ಷಿಗಳೂ, ಪ್ರಭಾಸ-ಸಿಕತ-ಘೃತಪರೂ, ಸೋಮಪ-ವಾಯವ್ಯರೂ, ಮರೀಚಿಪರೂ, ವೈಶ್ವಾನರರೂ, ಅಕೃಷ್ಟಪಚ್ಯರೂ, ಹಂಸರೂ, ಅಗ್ನಿಯಿಂದ ಹುಟ್ಟಿದ ಋಷಿಗಳೂ, ವಾನಪ್ರಸ್ಥರೂ ಮತ್ತು ಪೃಶ್ನಿಗಳೂ—ಬ್ರಹ್ಮನ ಆಜ್ಞಾನುಸಾರವಾಗಿ ವೇದೋಕ್ತವಾದ ಸನಾತನಧರ್ಮದ ಪಾಲಕರಾಗಿದ್ದರು. ಆದರೆ ಕ್ರೋಧ-ಲೋಭಾಭಿಭೂತರಾದ ರಾಕ್ಷಸೇಂದ್ರರು ಪಿತಾಮಹನ ಶಾಸನವನ್ನು ಅತಿಕ್ರಮಿಸಿ ಧರ್ಮಕ್ಕೆ ಹಾನಿಯನ್ನುಂಟುಮಾಡಲು ಪ್ರಾರಂಭಿಸಿದರು. ಹಿರಣ್ಯಕಶಿಪು, ಹಿರಣ್ಯಾಕ್ಷ, ವಿರೋಚನ, ಶಂಬರ, ವಿಪ್ರಚಿತ್ತಿ, ವಿರಾಧ, ನಮುಚಿ ಮತ್ತು ಬಲ—ಇವರೇ ಮೊದಲಾದ ಅನೇಕದೈತ್ಯ-ದಾನವರು ತಮ್ಮ ಅನುಯಾಯಿಗಳೊಡನೆ ಧರ್ಮದ ಮರ್ಯಾದೆಯನ್ನು ಉಲ್ಲಂಘಿಸಿ ಅಧರ್ಮವನ್ನೇ ಸರ್ವತ್ರ ಹರಡಬೇಕೆಂದು ನಿಶ್ಚಯಿಸಿದವರಾಗಿ ಧರ್ಮಮಾರ್ಗಿಗಳಾದ ಋಷಿಗಳನ್ನೂ ಬ್ರಾಹ್ಮಣರನ್ನೂ ಹಿಂಸೆಮಾಡುತ್ತಾ ಆಮೋದ-ಪ್ರಮೋದಗಳಿಂದ ಕಾಲಕಳೆಯುತ್ತಿದ್ದರು.

ಸರ್ವೇ ತುಲ್ಯಾಭಿಜಾತೀಯಾ ಯಥಾ ದೇವಾಸ್ತಥಾ ವಯಮ್ ।

'ನಾವೂ ಮತ್ತು ದೇವತೆಗಳೂ ಒಂದೇ ಜಾತಿಗೆ ಸೇರಿದವರಾಗಿದ್ದೇವೆ. ಆದುದರಿಂದ ದೇವತೆಗಳಂತೆಯೇ ನಾವೂ ಇದ್ದೇವೆ. (ದೇವತೆಗಳನ್ನು ಪೂಜಿಸುವಂತೆಯೇ ನೀವು ನಮ್ಮನ್ನೂ ಪೂಜಿಸಬೇಕು.)' ಎಂಬುದಾಗಿ ಹೇಳುತ್ತಾ ಜಾತೀಯಧರ್ಮವನ್ನು ಆಶ್ರಯಿಸಿ ದೇವರ್ಷಿಗಳೊಡನೆ ಆ ರಾಕ್ಷಸನಾಯಕರು ಸ್ಪರ್ಧಿಸುತ್ತಿದ್ದರು. ಅವರು ಪ್ರಾಣಿಗಳ ವಿಷಯದಲ್ಲಿ ಯಾವ ವಿಧವಾದ ಪ್ರೀತಿಯನ್ನಾಗಲೀ ಅನುಕಂಪವನ್ನಾಗಲೀ ತೋರಿಸು

ತ್ತಿರಲಿಲ್ಲ. ಸಾಮ, ದಾನ, ಭೇದ–ಈ ಮೂರು ಉಪಾಯಗಳನ್ನೂ ಅತಿಕ್ರಮಿಸಿ ದಂಡೋಪಾಯವನ್ನೇ ಆಶ್ರಯಿಸಿ ಪ್ರಜೆಗಳನ್ನು ಪೀಡಿಸುತ್ತಿದ್ದರು. ಆದರಿಂದಾಗಿ ಪ್ರಜೆಗಳೆಲ್ಲರೂ ಗೋಳಿಡುತ್ತಿದ್ದರು. ಆ ರಾಕ್ಷಸಶ್ರೇಷ್ಠರು ಮಹಾದರ್ಪಿಷ್ಠರಾಗಿದ್ದುದರಿಂದ ಮಾನವರೊಡನೆ ಮಾತನ್ನೂ ಆಡುತ್ತಿರಲಿಲ್ಲ.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಬ್ರಹ್ಮನು ಬ್ರಹ್ಮರ್ಷಿಗಳ ಸಮೇತನಾಗಿ ಹಿಮಾಲಯದ ಸುರಮ್ಯವಾದ ಶಿಖರದಲ್ಲಿ ಉಪಸ್ಥಿತನಾಗಿದ್ದನು. ಆಕಾಶದಲ್ಲಿರುವ ನಕ್ಷತ್ರಗಳು ವಿಕಸಿತವಾದ ಕಮಲಪುಷ್ಪಗಳಂತೆ ಶಿಖರದ ಮೇಲೆ ಕಂಗೊಳಿಸುತ್ತಿದ್ದುವು. ಶಿಖರವು ನೂರು ಯೋಜನ ವಿಸ್ತೀರ್ಣವುಳ್ಳದ್ದಾಗಿದ್ದಿತು. ಮಣಿರತ್ನಗಳ ಸಮೂಹಗಳಿಂದ ಸಮಲಂಕೃತವಾಗಿದ್ದಿತು. ನಕುಲ! ಶ್ರೇಷ್ಠವಾದ ಆ ಶಿಖರದಲ್ಲಿದ್ದ ಸುಪುಷ್ಪಿತವಾದ ವೃಕ್ಷಗಳನ್ನೊಳಗೊಂಡಿದ್ದ ಅರಣ್ಯದಲ್ಲಿ ದೇವಶ್ರೇಷ್ಠನಾದ ಬ್ರಹ್ಮನು ಜಗತ್ತಿನ ಕಾರ್ಯಸಿದ್ಧಿಗಾಗಿ ನೆಲೆಸಿದನು.

ಒಂದು ಸಾವಿರ ವರ್ಷಗಳು ಕಳೆದನಂತರ ಭಗವಾನ್ ಬ್ರಹ್ಮನು ಶಾಸ್ತ್ರವಿಧಿಗೆ ಅನುಸಾರವಾಗಿ ಒಂದು ಮಹಾಯಜ್ಞವನ್ನು ಆರಂಭಿಸಿದನು. ಯಜ್ಞಕುಶಲರಾದ ಮಹರ್ಷಿಗಳೂ ಇತರ ಯಜ್ಞಕಾರ್ಯನಿರ್ವಾಹಕರೂ ಯಥಾವತ್ತಾದ ವಿಧಿಗೆ ಅನುಸಾರವಾಗಿ ಯಜ್ಞಕರ್ಮಗಳಲ್ಲಿ ಭಾಗವಹಿಸಿದ್ದರು. ಯಜ್ಞವೇದಿಯು ನಾನಾವಿಧವಾದ ಸಮಿತ್ತುಗಳಿಂದ ಪರಿಪೂರ್ಣವಾಗಿದ್ದಿತು. ಪ್ರದೀಪ್ತವಾದ ಅಗ್ನಿಗಳಿಂದ ಪ್ರಜ್ವಲಿಸುತ್ತಿದ್ದಿತು. ಥಳ-ಥಳಿಸುತ್ತಿದ್ದ ಸುವರ್ಣಮಯವಾದ ಯಜ್ಞಪಾತ್ರೆಗಳಿಂದ ಸಮಲಂಕೃತವಾಗಿದ್ದಿತು. ಆ ಯಜ್ಞಭೂಮಿಯು ಶ್ರೇಷ್ಠರಾದ ದೇವತೆಗಳಿಂದಲೂ, ಬ್ರಹ್ಮರ್ಷಿಗಳಿಂದಲೂ, ಸದಸ್ಯರಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದಿತು.

ಆ ಸಮಯದಲ್ಲಿ ಒಂದು ಭಯಂಕರವಾದ ಘಟನೆಯು ನಡೆಯಿತೆಂಬ ವಿಷಯವನ್ನು ನಾನು ಋಷಿಗಳ ಬಾಯಿಂದಲೇ ಕೇಳಿದ್ದೇನೆ. ಯಾವ ರೀತಿಯಲ್ಲಿ ತಾರೆಗಳು ಉದಯಿಸಿದನಂತರ ವಿಮಲಾಕಾಶದಲ್ಲಿ ಚಂದ್ರನು ಉದಯಿಸುವನೋ- ಅದೇ ರೀತಿಯಲ್ಲಿ ಯಜ್ಞಕುಂಡದಲ್ಲಿದ್ದ ಅಗ್ನಿಯನ್ನು ಸರ್ವತ್ರ ಎರಚುತ್ತಾ ಕುಂಡದ ಮಧ್ಯಭಾಗದಿಂದ ಮಹಾಭೂತವೊಂದು ಪ್ರಾದುರ್ಭವಿಸಿತೆಂದೂ ಪ್ರತ್ಯಕ್ಷದರ್ಶಿಗಳಾದ ಋಷಿಗಳು ನನಗೆ ಹೇಳಿದರು.

ನೀಲೋತ್ಪಲಸವರ್ಣಾಭಂ ತೀಕ್ಷ್ಣದಂಷ್ಟ್ರಂ ಕೃಶೋದರಮ್ ।
ಪ್ರಾಂಶುಂ ಸುದುರ್ಧರ್ಷತರಂ ತಥೈವ ಹ್ಯಮಿತೌಜಸಮ್ ॥೩೯॥

ಆ ಮಹಾಭೂತದ ಶರೀರವು ನೀಲಕಮಲದಂತೆ ಶ್ಯಾಮಲವರ್ಣವಾಗಿದ್ದಿತು. ಅದಕ್ಕೆ ತೀಕ್ಷ್ಣವಾದ ಕೋರೆದಾಡೆಗಳಿದ್ದುವು. ಅದರ ಹೊಟ್ಟೆಯು ತೆಳ್ಳಗಿದ್ದಿತು. ಅದು ಬಹಳ ಎತ್ತರವಾಗಿದ್ದಿತು. ಮಹಾತೇಜಸ್ಸಿನಿಂದ ಕೂಡಿದ್ದ ಆ ಮಹಾಭೂತವು ಎದುರಿಸಲು ಅಸಾಧ್ಯವಾಗಿ ಕಾಣುತ್ತಿದ್ದಿತು. ಆ ಮಹಾಭೂತವು ಯಜ್ಞಕುಂಡದಿಂದ ಪ್ರಾದುರ್ಭವಿಸುತ್ತಲೇ ಭೂಮಂಡಲವೇ ನಡುಗಿತು. ದೊಡ್ಡ-ದೊಡ್ಡ ಅಲೆಗಳಿಂದಲೂ, ಸುಳಿಗಳಿಂದಲೂ ಕೂಡಿದ್ದ ಮಹೋದಧಿಯು ಅಲ್ಲೋಲ-ಕಲ್ಲೋಲವಾಯಿತು. ಆಕಾಶದಿಂದ ಉಲ್ಕೆಗಳು ಬೀಳತೊಡಗಿದುವು. ಮಹೋತ್ಪಾತಗಳು ಕಾಣಿಸಿಕೊಂಡುವು. ವೃಕ್ಷಗಳು ತಾವೇ-ತಾವಾಗಿ ಅವುಗಳಲ್ಲಿದ್ದ ರೆಂಬೆಗಳನ್ನು ಕಳಚಿ ಕೆಳಕ್ಕೆ ಹಾಕಿದುವು. ಎಲ್ಲ ದಿಕ್ಕುಗಳಲ್ಲಿಯೂ ಅಶಾಂತಿಯು ತಲೆದೋರಿತು. ಅಮಂಗಲಸೂಚಕವಾದ ರೀತಿಯಲ್ಲಿ ಗಾಳಿಯು ಸರ್ವತ್ರ ಬೀಸತೊಡಗಿತು. ಪ್ರಾಣಿಗಳೆಲ್ಲವೂ ಭಯಪಟ್ಟು ಬಾರಿ-ಬಾರಿಗೂ ಸಂಕಟಪಡುತ್ತಿದ್ದುವು. ಅಂತಹ ಭಯಾನಕವಾದ ಭೂತವು ಪ್ರಾದುರ್ಭವಿಸಿದುದನ್ನು ನೋಡಿ ಪಿತಾಮಹನು ಮಹರ್ಷಿಗಳನ್ನೂ, ದೇವತೆಗಳನ್ನೂ ಮತ್ತು ಗಂಧರ್ವರನ್ನೂ ಕುರಿತು ಹೇಳಿದನು :

ಮಯ್ಯೈವಂ ಚಿನ್ತಿತಂ ಭೂತಮಸಿರ್ನಾಮ್ನೈಷ ವೀರ್ಯವಾನ್ ।
ರಕ್ಷಣಾರ್ಥಾಯ ಲೋಕಸ್ಯ ವಧಾಯ ಚ ಸುರದ್ವಿಷಾಮ್ ॥೪೩॥

"ಇಂತಹ ಭೂತವು ಪ್ರಾದುರ್ಭವಿಸಬೇಕೆಂದು ನಾನೇ ಚಿಂತಿಸಿದ್ದೆನು. ವೀರ್ಯೋತ್ಕರ್ಷದಿಂದ ಕೂಡಿರುವ ಈ ಭೂತಕ್ಕೆ 'ಅಸಿ' ಎಂದು ಹೆಸರು. ಲೋಕದ ರಕ್ಷಣಾರ್ಥವಾಗಿಯೂ–ದೇವದ್ವೇಷಿಗಳಾದ ರಾಕ್ಷಸರನ್ನು ಸಂಹರಿಸುವ ಸಲುವಾಗಿಯೂ ಇದು ಆವಿರ್ಭವಿಸಿದೆ."

ಬ್ರಹ್ಮನು ಹೀಗೆ ಹೇಳಿದನಂತರ ಆ ಮಹಾಭೂತವು ತನ್ನ ಆ ಭಯಂಕರರೂಪವನ್ನು ಪರಿತ್ಯಜಿಸಿ (ಮೂವತ್ತು ಅಂಗುಲಗಳಿಗಿಂತಲೂ ಉದ್ದವಾದ) ಕತ್ತಿಯಾಗಿ ಪ್ರಕಾಶಿಸಿತು. ತೀಕ್ಷ್ಣವಾದ ಅಲುಗಿನಿಂದ

ಕೂಡಿದ್ದ ಮತ್ತು ಫಳ-ಫಳಿಸುತ್ತಿದ್ದ ಆ ಖಡ್ಗವು ಪ್ರಳಯಕಾಲದ ಯಮನಂತೆಯೇ ಕಾಣುತ್ತಿದ್ದಿತು. ಬಳಿಕ ಬ್ರಹ್ಮನು–ಅಧರ್ಮವನ್ನು ತೊಡೆದು ಹಾಕುವ ಸಾಮರ್ಥ್ಯದಿಂದ ಕೂಡಿದ್ದ, ಬಹುತೀಕ್ಷ್ಣವಾಗಿದ್ದ ಆ ಖಡ್ಗವನ್ನು ಋಷಭಧ್ವಜನಾದ, ಶಿತಿಕಂಠನಾದ ರುದ್ರನಿಗೆ ಕೊಟ್ಟನು. ಖಡ್ಗಪ್ರದಾನದ ಸಮಯದಲ್ಲಿ ಮಹರ್ಷಿಗಳೆಲ್ಲರೂ ಭಗವಾನ್ ರುದ್ರನನ್ನು ಬಹಳವಾಗಿ ಸ್ತೋತ್ರಮಾಡಿದರು. ಅಪ್ರಮೇಯಸ್ವರೂಪನಾದ ಭಗವಾನ್ ರುದ್ರನು ಬ್ರಹ್ಮದತ್ತವಾದ ಖಡ್ಗವನ್ನು ಹಿಡಿದುಕೊಂಡು ಮತ್ತೊಂದು ರೂಪವನ್ನು ತಾಳಿದನು. ನೂತನವಾದ ಆ ಅವತಾರದಲ್ಲಿ ನಾಲ್ಕು ಭುಜಗಳನ್ನು ಹೊಂದಿದ್ದ ರುದ್ರನು ಭೂಮಿಯ ಮೇಲೆ ನಿಂತಿದ್ದರೂ ತಲೆಯಿಂದ ಸೂರ್ಯನನ್ನು ಸ್ಪರ್ಶಿಸುತ್ತಿದ್ದನು. ಆಗಿನ ಅವನ ಆ ರೌದ್ರರೂಪವು ಅಷ್ಟು ಅಗಾಧವಾಗಿದ್ದಿತು. ಮಹಾಲಿಂಗಾಕಾರನಾಗಿದ್ದ ಶಿವನು ಊರ್ಧ್ವದೃಷ್ಟಿಯುಳ್ಳವನಾಗಿದ್ದನು. ಮುಖದಿಂದ ಅಗ್ನಿಜ್ವಾಲೆಗಳನ್ನು ಉಗುಳುತ್ತಿದ್ದನು. ಕಪ್ಪು, ಬಿಳಿ ಮತ್ತು ಕೆಂಪು ಇವೇ ಮೊದಲಾದ ಹಲವು ಬಣ್ಣಗಳನ್ನು ಪ್ರಕಟಿಸುತ್ತಿದ್ದನು. (ಕೆಲವೊಮ್ಮೆ ಕಪ್ಪುಬಣ್ಣದವನಾಗಿಯೂ, ಕೆಲವೊಮ್ಮೆ ಕೆಂಪುಬಣ್ಣದವನಾಗಿಯೂ, ಕೆಲವೊಮ್ಮೆ ಬಿಳಿಯ ಬಣ್ಣದವನಾಗಿಯೂ ಕಾಣುತ್ತಿದ್ದನು.) ರುದ್ರದೇವನು ಆ ಸಮಯದಲ್ಲಿ ಕೃಷ್ಣಾಜಿನವನ್ನೇ ವಸ್ತ್ರರೂಪದಲ್ಲಿ ಧರಿಸಿದ್ದನು. ಆ ಕೃಷ್ಣಾಜಿನವು ಸುವರ್ಣಮಯವಾದ ತಾರೆಗಳಿಂದ ಕೂಡಿದ್ದಿತು. ಸೂರ್ಯನಿಗೆ ಸದೃಶವಾದ ಒಂದು ಕಣ್ಣನ್ನು ಹಣೆಯಲ್ಲಿ ಧರಿಸಿದ್ದನು. ಉಳಿದೆರಡು ಕಣ್ಣುಗಳೂ ಕಪ್ಪು ಮತ್ತು ಕಂದುಹಳದೀಬಣ್ಣಗಳಿಂದ ಮಿಶ್ರವಾದ ಬಣ್ಣಗಳಿಂದ ಕೂಡಿದ್ದು ನಿರ್ಮಲವಾಗಿ ಪ್ರಕಾಶಿಸುತ್ತಿದ್ದುವು.

ಬಳಿಕ ಭಗನೇತ್ರಾಪಹಾರಕನಾದ, ಮಹಾಬಲ-ಪರಾಕ್ರಮಸಂಪನ್ನನಾದ, ದೇವದೇವನಾದ, ಶೂಲಪಾಣಿಯಾದ ಮಹಾದೇವನು, ಪ್ರಳಯಕಾಲದ ಅಗ್ನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಖಡ್ಗವನ್ನೂ, ಮಿಂಚಿನಿಂದ ಕೂಡಿರುವ ಮೇಘದಂತಿದ್ದ ಮತ್ತು ಮೂರು ಕೋನಗಳನ್ನು ಹೊಂದಿದ್ದ ಗುರಾಣಿಯನ್ನೂ ಹಿಡಿದು ಯುದ್ಧಮಾಡುವ ಇಚ್ಛೆಯಿಂದ

ಝಳಪಿಸುತ್ತಿದ್ದ ಕತ್ತಿಯನ್ನು ವರಸೆವರಸೆಯಾಗಿ ತಿರುಗಿಸುತ್ತಾ ನಾನಾ ವಿಧವಾದ ಮಾರ್ಗಗಳಲ್ಲಿ (ನಾನಾವಿಧವಾದ ನಡಿಗೆಗಳಲ್ಲಿ) ಸಂಚರಿಸಿದನು. ಆ ಸಮಯದಲ್ಲಿ ಗಟ್ಟಿಯಾಗಿ ಗರ್ಜಿಸುತ್ತಾ ಅಟ್ಟಹಾಸದಿಂದ ಸಂಚರಿಸುತ್ತಿದ್ದ ರುದ್ರನ ರೂಪವು ಅತ್ಯಂತಭಯಂಕರವಾಗಿ ಕಾಣಿಸುತ್ತಿದ್ದಿತು. ಭಯಂಕರವಾದ ಸಂಹಾರಕರ್ಮವನ್ನು ಮಾಡಬೇಕೆಂದು ಇಚ್ಛಿಸಿದ್ದ ಮತ್ತು ಭಯಂಕರವಾದ ರೂಪವನ್ನು ಧರಿಸಿದ್ದ ರುದ್ರನನ್ನು ನೋಡಿದೊಡನೆಯೇ ಎಲ್ಲ ದಾನವರೂ ಹರ್ಷೋತ್ಸಾಹಭರಿತರಾಗಿ ಅವನ ಮೇಲೆರಗಿದರು. ಕೆಲವು ದಾನವರು ರುದ್ರನ ಮೇಲೆ ಕಲ್ಲಿನ ಮಳೆಗರೆದರು. ಕೆಲವರು ಪ್ರಜ್ವಲಿಸುತ್ತಿದ್ದ ಪಂಜುಗಳನ್ನೇ ರುದ್ರನ ಮೇಲೆ ಸುರಿಸಿದರು. ಕೆಲವರು ಸುಘೋರವಾದ ಅಸ್ತ್ರ-ಶಸ್ತ್ರಗಳಿಂದ ಶಿವನನ್ನು ಪ್ರಹರಿಸಿದರು. ಮತ್ತೆ ಕೆಲವರು ತೀಕ್ಷ್ಣವಾದ ಅಲುಗಿನಿಂದ ಕೂಡಿದ್ದ ಲೋಹನಿರ್ಮಿತವಾದ ಆಯುಧಗಳಿಂದ ರುದ್ರನನ್ನು ಪ್ರಹರಿಸಿದರು. ಆದರೆ ಅವುಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ. ಅವರ ಮುಂದಿದ್ದ ರುದ್ರನು ಸ್ವಲ್ಪವೂ ವಿಚಲಿತನಾಗಲಿಲ್ಲ. ಬಳಿಕ ದಾನವಸೈನಿಕರು–ದೇವಸೇನಾಪತ್ಯದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ನಿಶ್ಚಲವಾಗಿ ನಿಂತಿದ್ದ ಮಹಾಬಲಿಷ್ಠನಾದ ರುದ್ರನನ್ನು ನೋಡಿ ಸಂಭ್ರಾಂತರಾಗಿ ವಿಚಲಿತರಾದರು. ಬಹಳ ಶೀಘ್ರವಾಗಿ ವಿಚಿತ್ರಗತಿಗಳಿಂದ ಹೆಜ್ಜೆಗಳನ್ನಿಡುತ್ತಾ ಖಡ್ಗಪಾಣಿಯಾಗಿ ಸಂಚರಿಸುತ್ತಿದ್ದ ರುದ್ರನು ಒಬ್ಬನೇ ಇದ್ದರೂ ಸಾವಿರ ರುದ್ರರು ತಮ್ಮನ್ನು ಎದುರಿಸಿ ನಿಂತಿರುವರೆಂದು ರಾಕ್ಷಸರೆಲ್ಲರೂ ಭಾವಿಸಿದರು. ಪೊದರಿನಲ್ಲಿ ಸೇರಿಕೊಂಡ ಕಾಡುಗಿಚ್ಚು ಅರಣ್ಯದಲ್ಲಿರುವ ಸಮಸ್ತವೃಕ್ಷಗಳನ್ನೂ ದಹಿಸುತ್ತಾ ಹರಡಿಕೊಳ್ಳುವಂತೆ– ರುದ್ರನು ರಾಕ್ಷಸಸೈನಿಕರನ್ನು ಛಿದ್ರಮಾಡುತ್ತಾ, ದಾನವರ ತಲೆಗಳನ್ನು ಒಡೆದುಹಾಕುತ್ತಾ, ಶರೀರಗಳನ್ನು ಗಾಯಗೊಳಿಸುತ್ತಾ, ತುಂಡುಗಳಾಗಿ ಕತ್ತರಿಸುತ್ತಾ, ಸೀಳುತ್ತಾ, ಕಾಲುಗಳಿಂದ ಹೊಸಕಿಹಾಕುತ್ತಾ ವೈರಿಗಳ ಸಮೂಹದಲ್ಲಿ ಸಂಚರಿಸುತ್ತಿದ್ದನು. ರುದ್ರದೇವನ ಕತ್ತಿಯ ವೇಗದಿಂದಾಗಿ ರಾಕ್ಷಸಸೈನಿಕರೆಲ್ಲರೂ ಭಗ್ನರಾಗಿಹೋದರು. ಅನೇಕರ ತೋಳುಗಳೂ ತೊಡೆಗಳೂ ಕತ್ತರಿಸಲ್ಪಟ್ಟುವು. ಕೆಲವರ ವಕ್ಷಸ್ಥಳಗಳು ಸೀಳಿಹೋದುವು.

ಕೆಲವರ ಶರೀರಗಳಿಂದ ಕರುಳುಗಳೇ ಹೊರಬಂದಿದ್ದುವು. ಹೀಗೆ ಮಹಾ ಬಲಿಷ್ಠರಾದ ರಾಕ್ಷಸರು ಅಪಾರಸಂಖ್ಯೆಯಲ್ಲಿ ಮಡಿದು ಭೂಮಿಯಲ್ಲಿ ಉರುಳಿದರು. ಅಳಿದುಳಿದ ಕೆಲವರು ರುದ್ರನ ಕತ್ತಿಯ ಪ್ರಹಾರಗಳಿಂದ ಗಾಯಗೊಂಡು ಭಗ್ನರಾಗಿ ಭೀಕರವಾಗಿ ಗರ್ಜನೆಮಾಡುತ್ತಾ ಎಲ್ಲ ದಿಕ್ಕು ಗಳಿಗೂ ಪಲಾಯನಮಾಡಿದರು. ಕೆಲವರು ಪರ್ವತಗಳನ್ನು ಸೇರಿದರು. ಕೆಲವರು ಆಕಾಶಕ್ಕೆ ಹೋದರು. ಇನ್ನೂ ಕೆಲವರು ಸಮುದ್ರದೊಳಗೆ ಸೇರಿಕೊಂಡರು. ರುದ್ರ-ದಾನವರ ಆ ಮಹಾಸಂಗ್ರಾಮವು ಅತ್ಯಂತ ಭಯಂಕರವಾಗಿ ನಡೆದುದರ ಪರಿಣಾಮವಾಗಿ ಭೂಮಿಯು ಮಾಂಸ ಮತ್ತು ರಕ್ತಗಳಿಂದ ಸಮ್ಮಿಶ್ರವಾದ ಕೆಸರಿನಿಂದ ವ್ಯಾಪ್ತವಾಗಿ ಅತ್ಯಂತಭಯಂಕರವಾಗಿ ಕಾಣುತ್ತಿದ್ದಿತು. ಮಹಾಬಾಹುವೇ! ನಕುಲ! ರಕ್ತದಿಂದ ತೋಯ್ದುಹೋಗಿದ್ದು ಕೆಳಕ್ಕೆ ಬಿದ್ದಿದ್ದ ದಾನವರ ಶರೀರಗಳಿಂದ ವ್ಯಾಪ್ತವಾಗಿದ್ದ ಭೂಮಿಯು–ಮುತ್ತುಗದ ಮರಗಳಿಂದ ಸಮಾವೃತವಾದ ಪರ್ವತ ಶಿಖರಗಳಿಂದ ಆಚ್ಛಾದಿಸಲ್ಪಟ್ಟಿರುವುದೋ–ಎಂಬಂತೆ ಕಾಣುತ್ತಿದ್ದಿತು. ಹೀಗೆ ರುದ್ರನು ದಾನವರೆಲ್ಲರನ್ನೂ ಸಂಹರಿಸಿ ಪ್ರಪಂಚವನ್ನು ಧರ್ಮಪ್ರಧಾನವನ್ನಾಗಿ ಮಾಡಿ ಅನಂತರ ಆ ಭಯಂಕರರೂಪವನ್ನು ಪರಿತ್ಯಜಿಸಿ ಮಂಗಳಕರವಾದ ರೂಪವನ್ನು ಧರಿಸಿ ಶಿವನಾದನು.

ಅನಂತರ ಎಲ್ಲ ಮಹರ್ಷಿಗಳೂ ಎಲ್ಲ ದೇವತೆಗಳೂ ಪರಮಾದ್ಭುತ ವಾದ ಆ ವಿಜಯದಿಂದ ಸಂತುಷ್ಟರಾಗಿ ವಿಜಯಕ್ಕೆ ಕಾರಣನಾದ ದೇವದೇವ ನಾದ ಪರಶಿವನನ್ನು ಆರಾಧಿಸಿದರು.

ಬಳಿಕ ಭಗವಾನ್ ರುದ್ರನು ದಾನವರ ರಕ್ತದಿಂದ ತೋಯ್ದು ಹೋಗಿದ್ದ, ಧರ್ಮದ ರಕ್ಷಣೆಗಾಗಿಯೇ ಪ್ರಾದುರ್ಭವಿಸಿದ್ದ ಆ ಖಡ್ಗವನ್ನು ಸತ್ಕಾರಪೂರ್ವಕವಾಗಿ ವಿಷ್ಣುವಿಗೆ ಸಮರ್ಪಿಸಿದನು. ಭಗವಾನ್ ವಿಷ್ಣುವು ರುದ್ರದತ್ತವಾದ ಆ ಖಡ್ಗವನ್ನು ಮರೀಚಿಗೆ ಕೊಟ್ಟನು. ಮರೀಚಿಯು ಅದನ್ನು ಮಹರ್ಷಿಗಳಿಗೆ ಕೊಟ್ಟನು. ಮಹರ್ಷಿಗಳು ಆ ಖಡ್ಗವನ್ನು ಇಂದ್ರನಿಗೆ ಕೊಟ್ಟರು. ಮಹೇಂದ್ರನು ಲೋಕಪಾಲಕರಿಗೂ, ಲೋಕ ಪಾಲಕರು ಸೂರ್ಯಪುತ್ರನಾದ ಮನುವಿಗೂ ಆ ಖಡ್ಗವನ್ನು ಕೊಟ್ಟರು.

ಲೋಕಪಾಲಕರು ಮನುವಿಗೆ ಖಡ್ಗವನ್ನು ಕೊಡುವಾಗ ಈ ಮಾತುಗಳನ್ನು ಹೇಳಿದರು :

"ಮನುವೇ! ನೀನು ಮನುಷ್ಯರೆಲ್ಲರಿಗೂ ಈಶ್ವರನಾಗಿರುವೆ. ಧರ್ಮವನ್ನೇ ಗರ್ಭದಲ್ಲಿ ಧರಿಸಿರುವ ಈ ಖಡ್ಗದಿಂದ ಪ್ರಜೆಗಳನ್ನು ಸಂರಕ್ಷಿಸು.

ಧರ್ಮಸೇತುಮತಿಕ್ರಾನ್ತಾಃ ಸ್ಥೂಲಸೂಕ್ಷ್ಮಾತ್ಮಕಾರಣಾತ್ ।
ವಿಭಜ್ಯ ದಣ್ಡಂ ರಕ್ಷ್ಯಾಸ್ತು ಧರ್ಮತೋ ನ ಯದೃಚ್ಛಯಾ ।
ದುರ್ವಾಚಾ ನಿಗ್ರಹೋ ದಣ್ಡೋ ಹಿರಣ್ಯಬಹುಲಸ್ತಥಾ ॥೭೦॥

ವ್ಯಙ್ಗತಾ ಚ ಶರೀರಸ್ಯ ವಧೋ ವಾನಲ್ಪಕಾರಣಾತ್ ।
ಅಸೇರೇತಾನಿ ರೂಪಾಣಿ ದುರ್ವಾರಾದೀನಿ ನಿರ್ದಿಶೇತ್ ॥೭೧॥

ಯಾರು ಸ್ಥೂಲವಾದ ಶರೀರದ ಮತ್ತು ಸೂಕ್ಷ್ಮವಾದ ಮನಸ್ಸಿನ ಸುಖಕ್ಕಾಗಿ ಧರ್ಮದ ಮರ್ಯಾದೆಯನ್ನು ಉಲ್ಲಂಘಿಸುವರೋ–ಅಂತಹವರಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಪ್ರತಿಯೊಂದು ತಪ್ಪಿಗೂ ನ್ಯಾಯಪೂರ್ವಕವಾದ ಶಿಕ್ಷೆಯನ್ನು ವಿಧಿಸಬೇಕು. ಧರ್ಮಪೂರ್ವಕವಾಗಿ ಎಲ್ಲ ಪ್ರಾಣಿಗಳನ್ನೂ ರಕ್ಷಿಸಬೇಕು. ಯಾರ ವಿಷಯದಲ್ಲಿಯೇ ಆಗಲೀ ಸ್ವೇಚ್ಛೆಯಿಂದ ನಡೆದುಕೊಳ್ಳಬಾರದು. ಕಠೋರವಾದ ಮಾತುಗಳಿಂದ ಅಪರಾಧಿಯನ್ನು ದಂಡಿಸುವುದಕ್ಕೆ ವಾಗ್ದಂಡವೆನ್ನುತ್ತಾರೆ. ಅಪರಾಧಿಯಿಂದ ಸುವರ್ಣವನ್ನು ಶಿಕ್ಷಾರೂಪವಾಗಿ ತೆಗೆದುಕೊಳ್ಳುವುದಕ್ಕೆ ಅರ್ಥದಂಡವೆನ್ನುತ್ತಾರೆ. ಶರೀರದಲ್ಲಿರುವ ಯಾವುದಾದರೂ ಅಂಗವನ್ನು ವಿಚ್ಛೇದಿಸುವುದಕ್ಕೆ ಕಾಯದಂಡವೆನ್ನುತ್ತಾರೆ. ಮಹಾಪರಾಧದ ಕಾರಣದಿಂದಾಗಿ ಅಪರಾಧಿಯನ್ನು ವಧಿಸುವುದಕ್ಕೆ ಪ್ರಾಣದಂಡವೆನ್ನುತ್ತಾರೆ. ಈ ನಾಲ್ಕು ದಂಡಗಳೂ ಎದುರಿಸಲು ಅಸಾಧ್ಯವಾದ ಕತ್ತಿಯ ರೂಪಗಳಾಗಿವೆ. ಈ ವಿಷಯವನ್ನು ನೀನು ಸಮಸ್ತ ಪ್ರಜೆಗಳಿಗೂ ತಿಳಿಯಪಡಿಸಬೇಕು.

ಅಸೇರೇವಂ ಪ್ರಮಾಣಾನಿ ಪರಿಪಾಲ್ಯ ವ್ಯತಿಕ್ರಮಾತ್ ।

ಯಾವಾಗ ಪ್ರಜೆಗಳಿಂದ ಧರ್ಮದ ಉಲ್ಲಂಘನೆಯಾಗುವುದೋ-ಆಗ

ಖಡ್ಗದ ಮೂಲಕವಾಗಿ ಸಾಧಿಸಬಹುದಾದ ಪ್ರಾಮಾಣಿಕವಾದ ಈ ನಾಲ್ಕು ದಂಡಗಳನ್ನೂ ಯಥಾಯೋಗ್ಯವಾಗಿ ಪ್ರಯೋಗಿಸಿ ಧರ್ಮದ ರಕ್ಷಣೆಯನ್ನು ಮಾಡಬೇಕು."

ನಕುಲ! ಲೋಕಪಾಲರು ಹೀಗೆ ಹೇಳಿ ಸೂರ್ಯನ ಮಗನಾದ, ಪ್ರಜಾಪಾಲಕನಾದ ಮನುವಿಗೆ ಖಡ್ಗವನ್ನಿತ್ತು ಕಳುಹಿಸಿಕೊಟ್ಟರು. ಬಳಿಕ ಮನುವು ಪ್ರಜೆಗಳ ರಕ್ಷಣಾರ್ಥವಾಗಿ ಆ ಖಡ್ಗವನ್ನು ಪುತ್ರನಾದ ಕ್ಷುಪನಿಗೆ ಕೊಟ್ಟನು. ಕ್ಷುಪನಿಂದ ಇಕ್ಷ್ವಾಕುವೂ, ಇಕ್ಷ್ವಾಕುವಿನಿಂದ ಪುರೂರವನೂ ಆ ಖಡ್ಗವನ್ನು ಪಡೆದುಕೊಂಡರು. ಹಲವಾರು ವರ್ಷಗಳನಂತರ ಪುರೂರವ ನಿಂದ ಆಯುವೂ, ಆಯುವಿನಿಂದ ನಹುಷನೂ, ನಹುಷನಿಂದ ಯಯಾ ತಿಯೂ, ಯಯಾತಿಯಿಂದ ಪೂರುವೂ ಆ ಖಡ್ಗವನ್ನು ಪಡೆದರು. ಪೂರುವಿ ನಿಂದ ಅಮೂರ್ತರಯಸನೂ, ಅಮೂರ್ತರಯಸನಿಂದ ಭೂಮಿಶಯ ರಾಜನೂ, ಭೂಮಿಶಯನಿಂದ ದುಷ್ಯಂತನ ಮಗನಾದ ಭರತನೂ ಆ ಖಡ್ಗ ವನ್ನು ಪಡೆದರು. ಭರತನಿಂದ ಧರ್ಮಜ್ಞನಾದ ಐಲವಿಲನೂ, ಐಲವಿಲನಿಂದ ನರೇಶ್ವರನಾದ ದುಂಧುಮಾರನೂ ಆ ಕತ್ತಿಯನ್ನು ಪಡೆದರು. ದುಂಧುಮಾರ ನಿಂದ ಕಾಂಬೋಜನೂ, ಕಾಂಬೋಜನಿಂದ ಮುಚುಕುಂದನೂ, ಮುಚು ಕುಂದನಿಂದ ಮರುತ್ತನೂ, ಮರುತ್ತನಿಂದ ರೈವತನೂ, ರೈವತನಿಂದ ಯುವ ನಾಶ್ವನೂ, ಯುವನಾಶ್ವನಿಂದ ಇಕ್ಷ್ವಾಕುವಂಶೀಯನಾದ ರಘುವೂ, ರಘುವಿನಿಂದ ಪ್ರತಾಪವಂತನಾದ ಹರಿಣಾಶ್ವನೂ, ಹರಿಣಾಶ್ವನಿಂದ ಶುನ ಕನೂ, ಶುನಕನಿಂದ ಧರ್ಮಾತ್ಮನಾದ ಉಶೀನರನೂ, ಉಶೀನರನಿಂದ ಯದುವಂಶೀಯನಾದ ಭೋಜನೂ, ಯದುವಂಶೀಯರಿಂದ ಶಿಬಿಯೂ, ಶಿಬಿಯಿಂದ ಪ್ರತರ್ದನನೂ, ಪ್ರತರ್ದನನಿಂದ ಅಷ್ಟಕನೂ, ಅಷ್ಟಕನಿಂದ ಪೃಷದಶ್ವನೂ, ಪೃಷದಶ್ವನಿಂದ ಭರದ್ವಾಜವಂಶೀಯರಾದ ದ್ರೋಣರೂ, ದ್ರೋಣರಿಂದ ಕೃಪರೂ ಆ ಖಡ್ಗವನ್ನು ಪಡೆದುಕೊಂಡರು. ಅದೇ ಖಡ್ಗವನ್ನೇ ಭ್ರಾತೃಗಳಿಂದ ಯುಕ್ತನಾದ ನೀನು ಕೃಪರಿಂದ ಪಡೆದುಕೊಂಡಿರುವೆ.

ಕೃತ್ತಿಕಾನ್ತಸ್ಯ ನಕ್ಷತ್ರಮಸೇರಗ್ನಿಶ್ಚ ದೈವತಮ್ ।
ರೋಹಿಣೀ ಗೋತ್ರಮಸ್ಯಾಥ ರುದ್ರಶ್ಚ ಗುರುರುತ್ತಮಃ ॥೮೨॥

ಆ ಖಡ್ಗದ ಜನ್ಮನಕ್ಷತ್ರವು ಕೃತ್ತಿಕೆಯಾಗಿದೆ. ಅದರ ಅಧಿದೇವತೆಯು ಅಗ್ನಿಯಾಗಿದೆ. ಗೋತ್ರವು ರೋಹಿಣಿಯಾಗಿದೆ. ರುದ್ರನೇ ಈ ಖಡ್ಗದ ಶ್ರೇಷ್ಠನಾದ ಆಚಾರ್ಯನಾಗಿದ್ದಾನೆ.

ಪಾಂಡವೇಯ! ಖಡ್ಗಕ್ಕೆ ಎಂಟು ಗುಪ್ತನಾಮಗಳಿವೆ. ಅವುಗಳನ್ನು ಹೇಳುವೆನು ; ಕೇಳು. ಅಸಿಯ ಆ ಎಂಟು ನಾಮಗಳನ್ನು ಸದಾ ಪಠಿಸುವವನು ಯುದ್ಧದಲ್ಲಿ ವಿಜಯಿಯಾಗುತ್ತಾನೆ.

ಅಸಿರ್ವಿಶಸನಃ ಖಡ್ಗಸ್ತೀಕ್ಷ್ಣಧಾರೋ ದುರಾಸದಃ ।
ಶ್ರೀಗರ್ಭೋ ವಿಜಯಶ್ಚೈವ ಧರ್ಮಪಾಲಸ್ತಥೈವ ಚ ॥೮೪॥

ಅಸಿ, ವಿಶಸನ, ಖಡ್ಗ, ತೀಕ್ಷ್ಣಧಾರ, ದುರಾಸದ, ಶ್ರೀಗರ್ಭ, ವಿಜಯ ಮತ್ತು ಧರ್ಮಪಾಲ–ಇವುಗಳೇ ಕತ್ತಿಯ ಪವಿತ್ರವಾದ ಎಂಟು ನಾಮಗಳು.

ಮಾದ್ರೇಯ! ಖಡ್ಗವು ನೀನು ಭಾವಿಸಿರುವಂತೆಯೇ ಆಯುಧಗಳಲ್ಲಿಯೇ ಶ್ರೇಷ್ಠವಾದುದು. ಅದು ಮಹೇಶ್ವರಪ್ರಣೀತವಾದುದು. ಪುರಾಣಗಳಲ್ಲಿ ಕತ್ತಿಯ ಶ್ರೇಷ್ಠತೆಯು ನಿರ್ಧಾರಿತವಾಗಿದೆ. ಅರಿಂದಮನಾದ ಪೃಥುವು ಎಲ್ಲರಿಗಿಂತಲೂ ಮೊದಲೇ ಧನುಸ್ಸನ್ನು ಸೃಷ್ಟಿಸಿದನು. ಅವನು ಆ ಧನುಸ್ಸಿನ ಸಹಾಯದಿಂದ ಗೋರೂಪಳಾಗಿದ್ದ ಪೃಥ್ವಿಯನ್ನು ಕರೆದು ಅನೇಕ ವಿಧವಾದ ಮತ್ತು ಅಪಾರವಾದ ಸಸ್ಯಗಳನ್ನೂ ಪಡೆದುಕೊಂಡನು. ವೇನನ ಮಗನಾದ ಪೃಥುವು ಹಿಂದಿನವರಂತೆಯೇ ಈ ಭೂಮಂಡಲವನ್ನು ಪರಿಪಾಲನೆ ಮಾಡುತ್ತಿದ್ದನು.

ಅಸೇಶ್ಚ ಪೂಜಾ ಕರ್ತವ್ಯಾ ಸದಾ ಯುದ್ಧವಿಶಾರದೈಃ ॥೮೭॥

ಯುದ್ಧವಿಶಾರದರು ಸರ್ವದಾ ಕತ್ತಿಯ ಪೂಜೆಯನ್ನು ಅವಶ್ಯವಾಗಿ ಮಾಡಲೇಬೇಕು. ಇದು ಋಷಿಗಳ ಅಭಿಮತವಾಗಿದೆ. ನೀನು ಕೂಡ ಈ ಮಾತನ್ನು ಪ್ರಮಾಣವನ್ನಾಗಿ ಭಾವಿಸಿ ಕತ್ತಿಯ ಪೂಜೆಯನ್ನು ಸದಾಕಾಲದಲ್ಲಿಯೂ ಮಾಡುತ್ತಿರು.

ಭರತಶ್ರೇಷ್ಠನೇ! ಹೀಗೆ ನಾನು ಖಡ್ಗದ ಉತ್ಪತ್ತಿಪ್ರಸಂಗವನ್ನು ನಿನಗೆ ಸವಿಸ್ತರವಾಗಿ ಯಥಾವತ್ತಾಗಿ ಹೇಳಿರುತ್ತೇನೆ. ಇದರಿಂದ ಎಲ್ಲ

ಆಯುಧಗಳಿಗೂ ಕತ್ತಿಯೇ ಶ್ರೇಷ್ಠವಾದ ಮತ್ತು ಮೊದಲನೆಯ ಆಯುಧವೆಂಬುದು ಸ್ಪಷ್ಟವಾಗಿದೆ.

ಸರ್ವಥೈತದಿದಂ ಶ್ರುತ್ವಾ ಖಡ್ಗಸಾಧನಮುತ್ತಮಮ್ ।
ಲಭತೇ ಪುರುಷಃ ಕೀರ್ತಿಂ ಪ್ರೇತ್ಯ ಚಾನನ್ತ್ಯಮಶ್ನುತೇ ॥೮೯॥

ಖಡ್ಗಪ್ರಾಪ್ತಿಯ ಈ ಉತ್ತಮಪ್ರಸಂಗವನ್ನು ಸಂಪೂರ್ಣವಾಗಿ ಕೇಳಿದ ಪುರುಷನು ಇಹದಲ್ಲಿ ಕೀರ್ತಿಯನ್ನೂ, ಅವಸಾನಾನಂತರದಲ್ಲಿ ಅಕ್ಷಯವಾದ ಪುಣ್ಯಲೋಕಗಳನ್ನೂ ಖಂಡಿತವಾಗಿಯೂ ಪಡೆದುಕೊಳ್ಳುತ್ತಾನೆ.”

ಗ೬೬ನೆಯ ಅಧ್ಯಾಯವು ಮುಗಿಯಿತು.

ಗ೬೭ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಧರ್ಮಾರ್ಥ-ಕಾಮಗಳ ವಿಷಯದಲ್ಲಿ ವಿದುರ-ಪಾಂಡವರ ಬಗೆ-ಬಗೆಯ ಅಭಿಪ್ರಾಯಗಳು : ಧರ್ಮಜನ ನಿರ್ಣಯ

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ಕತ್ತಿಯ ಇತಿಹಾಸವನ್ನು ಹೇಳಿ ಭೀಷ್ಮನು ವಿರಮಿಸಲಾಗಿ, ಯುಧಿಷ್ಠಿರನು ಅರಮನೆಗೆ ಹೋಗಿ ತನ್ನ ನಾಲ್ವರು ಸಹೋದರರನ್ನೂ ಮತ್ತು ವಿದುರನನ್ನೂ ಪ್ರಶ್ನಿಸಿದನು :

ಧರ್ಮೇ ಚಾರ್ಥೇ ಚ ಕಾಮೇ ಚ ಲೋಕವೃತ್ತಿಃ ಸಮಾಹಿತಾ ।
ತೇಷಾಂ ಗರೀಯಾನ್ಕತಮೋ ಮಧ್ಯಮಃ ಕೋ ಲಘುಶ್ಚ ಕಃ ॥೨॥

“ಜನರ ಪ್ರವೃತ್ತಿಯು ಸಾಮಾನ್ಯವಾಗಿ ಧರ್ಮ, ಅರ್ಥ ಮತ್ತು ಕಾಮಗಳಲ್ಲಿಯೇ ನೆಲೆಗೊಂಡಿರುವುದು. ಈ ಮೂರರಲ್ಲಿ ಗರಿಷ್ಠವಾದುದು ಯಾವುದು? ಎರಡನೆಯದು ಯಾವುದು? ಕನಿಷ್ಠವಾದುದು ಯಾವುದು?

ಕಸ್ಮಿಂಶ್ಚಾತ್ಮಾ ನಿಧಾತವ್ಯಸ್ತ್ರಿವರ್ಗವಿಜಯಾಯ ವೈ ।
ಸಂಹೃಷ್ಟಾ ನೈಷ್ಠಿಕಂ ವಾಕ್ಯಂ ಯಥಾವದ್ವಕ್ತುಮರ್ಹಥ ॥೩॥

ಕಾಮ-ಕ್ರೋಧ-ಲೋಭಗಳೆಂಬ ತ್ರಿವರ್ಗಗಳನ್ನು ಜಯಿಸಲು ಇಚ್ಛಿ

ಯಿರುವವನು ಈ ಮೂರರಲ್ಲಿ ಯಾವುದರ ಮೇಲೆ ಮನಸ್ಸನ್ನಿಡಬೇಕು? ಯಾವುದರ ಸಾಧನೆಗಾಗಿ ಮನಸ್ಸನ್ನು ಯೋಜಿಸಬೇಕು? ಹರ್ಷೋತ್ಸಾಹ ಗಳಿಂದ ಕೂಡಿರುವ ನೀವು ಈ ವಿಷಯದಲ್ಲಿ ಅಂತಿಮವಾದ ಅಭಿಪ್ರಾಯ ಗಳನ್ನು ತಿಳಿಸಿರಿ."

ಜನಮೇಜಯ! ಧರ್ಮರಾಜನು ಹೀಗೆ ಪ್ರಶ್ನಿಸಲಾಗಿ, ಅರ್ಥಸಿದ್ಧಿಯ ತತ್ತ್ವವನ್ನು ಸಂಪೂರ್ಣವಾಗಿ ತಿಳಿದಿದ್ದ, ಪ್ರತಿಭಾವಂತನಾದ ವಿದುರನು ಧರ್ಮಶಾಸ್ತ್ರಗಳನ್ನು ಸ್ಮರಿಸಿಕೊಳ್ಳುತ್ತಾ ಎಲ್ಲರಿಗಿಂತಲೂ ಮೊದಲು ಈ ಮಾತನ್ನು ಹೇಳಿದನು :

ಬಾಹುಶ್ರುತ್ಯಂ ತಪಸ್ತ್ಯಾಗಃ ಶ್ರದ್ಧಾ ಯಜ್ಞಕ್ರಿಯಾ ಕ್ಷಮಾ ।
ಭಾವಶುದ್ಧಿರ್ದಯಾ ಸತ್ಯಂ ಸಂಯಮಶ್ಚಾತ್ಮಸಮ್ಪದಃ ॥೫॥

"ಧರ್ಮಜ! ಅನೇಕಶಾಸ್ತ್ರಗಳ ಅಧ್ಯಯನ, ತಪಸ್ಸು (ಸ್ವಧರ್ಮಾ ಚರಣೆ,) ತ್ಯಾಗ (ದಾನ,) ಶ್ರದ್ಧೆ (ಆಸ್ತಿಕತೆ,) ಯಜ್ಞಕರ್ಮ, ಕ್ಷಮೆ, ಭಾವಶುದ್ಧಿ (ನಿಷ್ಕಾಪಟ್ಯ,) ದಯೆ, ಸತ್ಯ (ಯಥಾರ್ಥವಚನ) ಮತ್ತು ಸಂಯಮ (ಇಂದ್ರಿಯನಿಗ್ರಹ)—ಇವುಗಳೆಲ್ಲವೂ ಆತ್ಮದ ಸಂಪತ್ತುಗಳಾಗಿವೆ.

ಏತದೇವಾಭಿಪದ್ಯಸ್ವ ಮಾ ತೇಽಭೂಚ್ಚಲಿತಂ ಮನಃ ।
ಏತನ್ಮೂಲೌ ಹಿ ಧರ್ಮಾರ್ಥಾವೇತದೇಕಪದಂ ಹಿ ಮೇ ॥೬॥

ಯುಧಿಷ್ಠಿರ! ನೀನು ಇವುಗಳನ್ನೇ ಸಾಧಿಸು. ಇವುಗಳಿಂದ ನಿನ್ನ ಮನಸ್ಸು ವಿಚಲಿತವಾಗದಿರಲಿ. ಬಾಹುಶ್ರುತ್ಯ-ತಪಸ್ತ್ಯಾಗ-ಶ್ರದ್ಧಾದಿಗಳೇ ಧರ್ಮಾರ್ಥಗಳಿಗೆ ಮೂಲಕಾರಣಗಳಾಗಿವೆ. ನನ್ನ ಅಭಿಪ್ರಾಯದಲ್ಲಿ ಈ ಒಂದು ಮಾರ್ಗವೇ ಅತ್ಯುತ್ತಮವಾದುದು.

ಧರ್ಮೇಣೈವರ್ಷಯಸ್ತೀರ್ಣಾ ಧರ್ಮೇ ಲೋಕಾಃ ಪ್ರತಿಷ್ಠಿತಾಃ ।
ಧರ್ಮೇಣ ದೇವಾ ವವೃಧುರ್ಧರ್ಮೇ ಚಾರ್ಥಃ ಸಮಾಹಿತಃ ॥೭॥

ಋಷಿಗಳು ಧರ್ಮವನ್ನೇ ಆಶ್ರಯಿಸಿ ಸಂಸಾರಸಮುದ್ರವನ್ನೂ ದಾಟಿರುವರು. ಧರ್ಮದಲ್ಲಿಯೇ ಸಕಲಲೋಕಗಳೂ ಪ್ರತಿಷ್ಠಿತವಾಗಿವೆ.

ಧರ್ಮವನ್ನೇ ಆಶ್ರಯಿಸಿ ದೇವತೆಗಳೂ ಔನ್ನತ್ಯವನ್ನು ಹೊಂದಿದ್ದಾರೆ. ಧರ್ಮದಲ್ಲಿಯೇ ಅರ್ಥವೂ ಅಡಕವಾಗಿದೆ.

ಧರ್ಮೋ ರಾಜನ್ಗುಣಃ ಶ್ರೇಷ್ಠೋ ಮಧ್ಯಮೋ ಹ್ಯರ್ಥ ಉಚ್ಯತೇ ।
ಕಾಮೋ ಯವೀಯಾನಿತಿ ಚ ಪ್ರವದನ್ತಿ ಮನೀಷಿಣಃ ॥೮॥

ಧರ್ಮವೇ ಅರ್ಥ-ಕಾಮಗಳಿಗಿಂತಲೂ ಶ್ರೇಷ್ಠವಾದ ಗುಣವೆಂದೂ, ಅರ್ಥವು ಮಧ್ಯಮವೆಂದೂ, ಕಾಮವು ಧರ್ಮಾರ್ಥಗಳಿಗಿಂತಲೂ ಕಿರಿಯದೆಂದೂ ವಿದ್ವಾಂಸರು ಹೇಳುತ್ತಾರೆ.

ತಸ್ಮಾದ್ಧರ್ಮಪ್ರಧಾನೇನ ಭವಿತವ್ಯಂ ಯತಾತ್ಮನಾ ।
ತಥಾ ಚ ಸರ್ವಭೂತೇಷು ವರ್ತಿತವ್ಯಂ ಯಥಾತ್ಮನಿ ॥೯॥

ಆದುದರಿಂದ ಮನಸ್ಸನ್ನು ಸಂಯಮದಲ್ಲಿಟ್ಟುಕೊಂಡಿರುವ ರಾಜನು ಧರ್ಮವನ್ನೇ ಪ್ರಧಾನವನ್ನಾಗಿಟ್ಟುಕೊಂಡು ವ್ಯವಹರಿಸಬೇಕು. ತನ್ನ ಯೋಗ-ಕ್ಷೇಮಗಳಲ್ಲಿ ಎಷ್ಟು ಆಸಕ್ತಿಯುಳ್ಳವನಾಗಿರುವನೋ–ಸಕಲಪ್ರಾಣಿಗಳ ಯೋಗ-ಕ್ಷೇಮಗಳಲ್ಲಿಯೂ ಅಷ್ಟೇ ಆಸಕ್ತಿಯುಳ್ಳವನಾಗಿರಬೇಕು."

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ವಿದುರನು ಹೀಗೆ ತನ್ನ ಮಾತನ್ನು ಮುಗಿಸಲಾಗಿ, ಅರ್ಥಶಾಸ್ತ್ರವಿಶಾರದನಾದ, ಧರ್ಮತತ್ತ್ವಜ್ಞನಾದ ಪಾರ್ಥನು ಧರ್ಮರಾಜನಿಂದ ಪ್ರಚೋದಿತನಾಗಿ ಈ ಮಾತನ್ನು ಹೇಳಿದನು :

ಕರ್ಮಭೂಮಿರಿಯಂ ರಾಜನ್ನಿಹ ವಾರ್ತಾ ಪ್ರಶಸ್ಯತೇ ।
ಕೃಷಿರ್ವಾಣಿಜ್ಯಗೋರಕ್ಷಂ ಶಿಲ್ಪಾನಿ ವಿವಿಧಾನಿ ಚ ॥೧೧॥

"ಮಹಾರಾಜ! ಇದು ಕರ್ಮಭೂಮಿಯಾಗಿದೆ. ಇಲ್ಲಿ ಜೀವಿಕೆಗೆ ಸಾಧನಭೂತಗಳಾದ ಕರ್ಮಗಳನ್ನು ಮಾಡುವುದೇ ಪ್ರಶಸ್ತವಾಗಿದೆ. ಕೃಷಿ, ವ್ಯಾಪಾರ, ಗೋವುಗಳ ಸಂರಕ್ಷಣೆ, ವಿಧ-ವಿಧವಾದ ಶಿಲ್ಪಗಳು–ಇವುಗಳೆಲ್ಲವೂ ಅರ್ಥಪ್ರಾಪ್ತಿಗೆ ಸಾಧನಗಳಾಗಿವೆ.

ಅರ್ಥ ಇತ್ಯೇವ ಸರ್ವೇಷಾಂ ಕರ್ಮಣಾಮವ್ಯತಿಕ್ರಮಃ ।
ನ ಹ್ಯೃತೇಽರ್ಥೇನ ವರ್ತೇತೇ ಧರ್ಮಕಾಮಾವಿತಿ ಶ್ರುತಿಃ ॥೧೨॥

ಅರ್ಥವೇ ಪ್ರಪಂಚದಲ್ಲಿ ಎಲ್ಲ ಕರ್ಮಗಳ ಮರ್ಯಾದೆಯನ್ನೂ ಪಾಲಿಸಲು ಸಹಾಯಕವಾಗಿದೆ. (ಕರ್ಮಗಳು ವ್ಯತಿಕ್ರಮವಾಗದಂತೆ–ಕರ್ಮಗಳು ಯಥೋಚಿತವಾಗಿ ಮುಗಿದು ಫಲದಾಯಕಗಳಾಗುವಂತೆ ಮಾಡಲು ಅರ್ಥವೇ ಮುಖ್ಯಸಾಧನ.) ಅರ್ಥದ ಆಸರೆಯಿಲ್ಲದೇ ಧರ್ಮ-ಕಾಮಗಳು ಸಿದ್ಧಿಸಲಾರವೆಂದು ಶ್ರುತಿಗಳು ಸಾರುತ್ತವೆ.

ವಿಷಯೈರರ್ಥವಾನ್ಧರ್ಮಮಾರಾಧಯಿತುಮುತ್ತಮಮ್ ।
ಕಾಮಂ ಚ ಚರಿತುಂ ಶಕ್ತೋ ದುಷ್ಪ್ರಾಪಮಕೃತಾತ್ಮಭಿಃ ॥೧೩॥

ಧನವಂತನಾದ ಮನುಷ್ಯನೇ ಧನದ ಮೂಲಕವಾಗಿ ಶ್ರೇಷ್ಠವಾದ ಧರ್ಮದ ಪಾಲನೆಯನ್ನು ಮಾಡಬಲ್ಲನು. ಜಿತೇಂದ್ರಿಯರಲ್ಲದವರಿಂದ ಪಡೆದುಕೊಳ್ಳಲು ಅಸಾಧ್ಯವಾದ ಕಾಮನೆಗಳನ್ನೂ ಧನಿಕನಾದವನು ಧನಬಲದಿಂದಲೇ ಪಡೆದುಕೊಳ್ಳಲು ಸಮರ್ಥನಾಗುತ್ತಾನೆ.

ಅರ್ಥಸ್ಯಾವಯವಾವೇತೌ ಧರ್ಮಕಾಮಾವಿತಿ ಶ್ರುತಿಃ ।
ಅರ್ಥಸಿದ್ಧ್ಯಾವಿನಿರ್ವೃತ್ತಾವುಭಾವೇತೌ ಭವಿಷ್ಯತಃ ॥೧೪॥

ಧರ್ಮ-ಕಾಮಗಳೆರಡೂ ಅರ್ಥದ ಎರಡು ಅವಯವಗಳೆಂದು ಶ್ರುತಿಯು ಹೇಳುತ್ತದೆ. ಅರ್ಥಸಿದ್ಧಿಯಿಂದಲೇ ಧರ್ಮ-ಕಾಮಗಳೆರಡರ ಸಿದ್ಧಿಯೂ ಆಗುತ್ತದೆ.

ತದ್ಗತಾರ್ಥಂ ಹಿ ಪುರುಷಂ ವಿಶಿಷ್ಟತರಯೋನಯಃ ।
ಬ್ರಹ್ಮಾಣಮಿವ ಭೂತಾನಿ ಸತತಂ ಪರ್ಯುಪಾಸತೇ ॥೧೫॥

ಯಾವ ರೀತಿಯಲ್ಲಿ ಎಲ್ಲ ಪ್ರಾಣಿಗಳೂ ಸತತವಾಗಿ ಬ್ರಹ್ಮನನ್ನೇ ಉಪಾಸನೆಮಾಡುತ್ತಿರುತ್ತವೆಯೋ–ಅದೇ ರೀತಿಯಲ್ಲಿ ಉತ್ತಮಕುಲದ ಮನುಷ್ಯರೂ ಸರ್ವಕಾಲದಲ್ಲಿಯೂ ಧನವಂತನನ್ನೇ ಉಪಾಸನೆಮಾಡುತ್ತಾರೆ. (ಆಶ್ರಯಿಸುತ್ತಾರೆ.)

ಜಟಾಜಿನಧರಾ ದಾನ್ತಾಃ ಪಙ್ಕದಿಗ್ಧಾ ಜಿತೇನ್ದ್ರಿಯಾಃ ।
ಮುಣ್ಡಾ ನಿಸ್ತನ್ತವಶ್ಚಾಪಿ ವಸನ್ತ್ಯರ್ಥಾರ್ಥಿನಃ ಪೃಥಕ್ ॥೧೬॥

ಜಟೆಗಳನ್ನು ಬಿಟ್ಟು ಕೃಷ್ಣಾಜಿನಗಳನ್ನು ಧರಿಸಿರುವವರು,

ಬಹಿರಿಂದ್ರಿಯಗಳನ್ನು ನಿಗ್ರಹಿಸಿರುವವರು, ಶರೀರಾದ್ಯಂತವಾಗಿ ಕೇಸರನ್ನು ಬಳಿದುಕೊಂಡಿರುವವರು, ಸಂನ್ಯಾಸಿಗಳು ಅಥವಾ ನೈಷ್ಠಿಕಬ್ರಹ್ಮಚಾರಿಗಳು- ಇವರೆಲ್ಲರೂ ಧನದ ಮೇಲೆ ಅಭಿಲಾಷೆಯುಳ್ಳವರಾಗಿ ಪ್ರತ್ಯೇಕ- ಪ್ರತ್ಯೇಕವಾದ ಆಶ್ರಮಗಳನ್ನು ಕಲ್ಪಿಸಿಕೊಂಡಿರುತ್ತಾರೆ. (ಶಿಷ್ಯರನ್ನು ಸಂಗ್ರಹಿಸುತ್ತಾ ಅರ್ಥಸಂಗ್ರಹತತ್ಪರರೇ ಆಗಿರುತ್ತಾರೆ.)

ಕಾಷಾಯವಸನಾಶ್ಚಾನ್ಯೇ ಶ್ಮಶ್ರುಲಾ ಹ್ರೀನಿಷೇವಿಣಃ ।
ವಿದ್ವಾಂಸಶ್ಚೈವ ಶಾನ್ತಾಶ್ಚ ಮುಕ್ತಾಃ ಸರ್ವಪರಿಗ್ರಹೈಃ ॥೧೭॥

ಅರ್ಥಾರ್ಥಿನಃ ಸನ್ತಿ ಕೇಚಿದಪರೇ ಸ್ವರ್ಗಕಾಂಕ್ಷಿಣಃ ।
ಕುಲಪ್ರತ್ಯಾಗಮಾಶ್ಚೈಕೇ ಸ್ವಂ ಸ್ವಂ ಧರ್ಮಮನುಷ್ಠಿತಾಃ ॥೧೮॥

ಎಲ್ಲ ವಿಧವಾದ ಪರಿಗ್ರಹಗಳಿಂದಲೂ ಮುಕ್ತರಾದ (ಯಾವುದನ್ನೂ ಪರಿಗ್ರಹಿಸಕೂಡದೆಂಬ ಧರ್ಮವನ್ನು ಆಶ್ರಯಿಸಿರುವ,) ಸಂಕೋಚಶೀಲ ರಾದ, ಶಾಂತರಾದ, ಕಾಷಾಯವಸ್ತ್ರಧಾರಿಗಳಾದ, ಗಡ್ಡ-ಮೀಸೆಗಳನ್ನು ಬೆಳೆಸಿರುವ ವಿದ್ವಾಂಸರೂ ಕೂಡ ಹಣದ ಸಂಪಾದನೆಯಲ್ಲಿಯೇ ಆಸಕ್ತ ರಾಗಿರುತ್ತಾರೆ. ಮತ್ತೆ ಕೆಲವರು ಸ್ವರ್ಗವನ್ನು ಪಡೆಯುವ ಅಭಿಲಾಷೆ ಯುಳ್ಳವರಾಗಿರುತ್ತಾರೆ. ಕುಲಪರಂಪರಾಗತವಾದ ನಿಯಮಗಳನ್ನು ಪಾಲಿಸು ತ್ತಿದ್ದು ತಮ್ಮ-ತಮ್ಮ ವರ್ಣಾಶ್ರಮಗಳ ಧರ್ಮಗಳನ್ನು ಪರಿಪಾಲಿಸುತ್ತಿರುತ್ತಾರೆ. ಇವರೆಲ್ಲರೂ ಧನಾರ್ಥಿಗಳೇ ಆಗಿರುತ್ತಾರೆ.

ಆಸ್ತಿಕಾ ನಾಸ್ತಿಕಾಶ್ಚೈವ ನಿಯತಾಃ ಸಂಯಮೇ ಪರೇ ।
ಅಪ್ರಜ್ಞಾನಂ ತಮೋಭೂತಂ ಪ್ರಜ್ಞಾನಂ ತು ಪ್ರಕಾಶಿತಾ ॥೧೯॥

ನಾಸ್ತಿಕರೂ ಹಲವರಿದ್ದಾರೆ. ಆಸ್ತಿಕರೂ ಹಲವರಿದ್ದಾರೆ. ಸಂಯಮ-ನಿಯಮಪರಾಯಣರಾಗಿರುವವರೂ ಇದ್ದಾರೆ. ಅವರೆಲ್ಲರೂ ಧನಾಭಿಲಾಷಿಗಳೇ ಆಗಿದ್ದಾರೆ. ನನ್ನ ಅಭಿಪ್ರಾಯದಲ್ಲಿ : ಅರ್ಥದ ಪ್ರಾಧಾನ್ಯ ವನ್ನು ಮನಗಾಣದಿರುವುದು ತಮೋಮಯವಾದ ಅಜ್ಞಾನ. ಅರ್ಥದ ಪ್ರಾಧಾನ್ಯವನ್ನು ಮನಗಾಣುವುದೇ ಪ್ರಕಾಶಮಯವಾದ ಸುಜ್ಞಾನ.

ಭೃತ್ಯಾನ್ಭೋಗೈರ್ದ್ವಿಷೋ ದಣ್ಡೈರ್ಯೋ ಯೋಜಯತಿ
ಸೋಽರ್ಥವಾನ್ ।
ಏತನ್ಮತಿಮತಾಂ ಶ್ರೇಷ್ಠ ಮತಂ ಮಮ ಯಥಾತಥಮ್ ।
ಅನಯೋಸ್ತು ನಿಬೋಧ ತ್ವಂ ವಚನಂ ವಾಕ್ಯಕಣ್ಠಯೋಃ ॥೨೦॥

ಯಾವನು ಭೃತ್ಯರನ್ನು ಭೋಗೋಪಭೋಗಗಳಿಂದ ಸಲಹುವನೋ, ಶತ್ರುಗಳನ್ನು ದಂಡಪ್ರಯೋಗದಿಂದ ತನ್ನ ಅಧೀನರನ್ನಾಗಿ ಮಾಡಿಕೊಳ್ಳುವನೋ–ಅವನೇ ಧನವಂತನು. (ಧನವಂತನೇ ಸೇವಕರನ್ನು ಸಾಕಬಲ್ಲನು ; ಶತ್ರುಗಳನ್ನೂ ದಂಡಿಸಬಲ್ಲನು.) ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ಇದು ನನ್ನ ಯಥಾವತ್ತಾದ ಅಭಿಪ್ರಾಯವಾಗಿದೆ. ಈಗ ನಿನ್ನ ಈ ಇಬ್ಬರು ತಮ್ಮಂದಿರು ಮಾತನಾಡಲು ಕುತೂಹಲವುಳ್ಳವರಾಗಿದ್ದಾರೆ. ಅವರ ಮಾತುಗಳು ಈಗಾಗಲೇ ಕಂಠದವರೆಗೂ ಬಂದುಬಿಟ್ಟಿವೆ. ಅವರು ಹೇಳುವ ಮಾತುಗಳನ್ನೂ ಲಾಲಿಸು."

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಬಳಿಕ ಧರ್ಮಾರ್ಥಕುಶಲರಾದ, ಮಾದ್ರಿಯ ಮಕ್ಕಳಾದ ನಕುಲ-ಸಹದೇವರು ಉತ್ತಮವಾದ ಈ ಮಾತುಗಳನ್ನು ಹೇಳಿದರು :

ಆಸೀನಶ್ಚ ಶಯಾನಶ್ಚ ವಿಚರನ್ನಪಿ ವಾ ಸ್ಥಿತಃ ।
ಅರ್ಥಯೋಗಂ ದೃಢಂ ಕುರ್ಯಾದ್ಯೋಗೈರುಚ್ಚಾವಚೈರಪಿ ॥೨೨॥

"ಅಗ್ರಜ! ಮನುಷ್ಯನು ಕುಳಿತಿರುವಾಗಲೂ, ಮಲಗಿರುವಾಗಲೂ, ತಿರುಗಾಡುತ್ತಿರುವಾಗಲೂ, ನಿಂತಿರುವಾಗಲೂ– ಎಲ್ಲ ಸಮಯಗಳಲ್ಲಿಯೂ ಬಗೆ-ಬಗೆಯ ಮಾರ್ಗಗಳಿಂದ ಧನದ ಸಂಗ್ರಹವನ್ನೇ ದೃಢವಾಗಿ ಮಾಡುತ್ತಿರಬೇಕು.

ಅಸ್ಮಿಂಸ್ತು ವೈ ವಿನಿರ್ವೃತ್ತೇ ದುರ್ಲಭೇ ಪರಮಪ್ರಿಯೇ ।
ಇಹ ಕಾಮಾನವಾಪ್ನೋತಿ ಪ್ರತ್ಯಕ್ಷಂ ನಾತ್ರ ಸಂಶಯಃ ॥೨೩॥

ಧನವು ಜನರಿಗೆ ಅತ್ಯಂತಪ್ರಿಯವಾದುದು. ಆದರೆ ಅದು ಸುದುರ್ಲಭ. ಅಷ್ಟು ಸುಲಭವಾಗಿ ಸಿಕ್ಕುವುದಿಲ್ಲ. ಅಂತಹ ಧನದ ಸಿದ್ಧಿಯಾದರೆ ಅಥವಾ

ಪ್ರಾಪ್ತಿಯಾದರೆ ಮನುಷ್ಯನು ಎಲ್ಲ ವಿಧವಾದ ಕಾಮನೆಗಳನ್ನೂ ಪಡೆದು ಕೊಳ್ಳುತ್ತಾನೆ. ಇದು ಎಲ್ಲರ ಪ್ರತ್ಯಕ್ಷವಾದ ಅನುಭವವೇ ಆಗಿದೆ. ಇದರಲ್ಲಾವ ಸಂಶಯವೂ ಇಲ್ಲ.

ಯೋಽರ್ಥೋ ಧರ್ಮೇಣ ಸಂಯುಕ್ತೋ ಧರ್ಮೋ ಯಶ್ಚಾರ್ಥ-
ಸಂಯುತಃ ।
ತದ್ಧಿ ತ್ವಾಮೃತಸಂವಾದಂ ತಸ್ಮಾದೇತೌ ಮತಾವಿಹ ॥೨೪॥

ಧನವು ಧರ್ಮದಿಂದ ಯುಕ್ತವಾಗಿರಲಿ ; ಧರ್ಮವಾದರೂ ಧನದಿಂದ ಯುಕ್ತವಾಗಿರಲಿ–ಅದು ನಿನಗೆ ಅಮೃತಪ್ರಾಯವೇ ಆಗಿರುತ್ತದೆ. ಆದುದ ರಿಂದ ಅರ್ಥ-ಧರ್ಮಗಳೆರಡೂ ಮುಖ್ಯವಾದುವೆಂಬುದು ನಮ್ಮ ಅಭಿಪ್ರಾಯವಾಗಿದೆ.

ಅನರ್ಥಸ್ಯ ನ ಕಾಮೋಽಸ್ತಿ ತಥಾರ್ಥೋಽಧರ್ಮಿಣಃ ಕುತಃ ।
ತಸ್ಮಾದುದ್ವಿಜತೇ ಲೋಕೋ ಧರ್ಮಾರ್ಥಾದ್ಯೋ ಬಹಿಷ್ಕೃತಃ ॥೨೫॥

ನಿರ್ಧನನಾದ ಮನುಷ್ಯನಿಗೆ ಕಾಮನೆಗಳಾವುವೂ ಪೂರ್ಣವಾಗುವು ದಿಲ್ಲ. ಹಾಗೆಯೇ ಧರ್ಮಹೀನನಾದವನಿಗೆ ಅರ್ಥವಾದರೂ ಹೇಗೆ ಲಭಿ ಸುವುದು? ಯಾವನು ಲೋಕದಲ್ಲಿ ಧರ್ಮಯುಕ್ತವಾದ ಐಶ್ವರ್ಯದಿಂದ ವಂಚಿತನಾಗಿರುವನೋ–ಅಂತಹವನ ವಿಷಯದಲ್ಲಿ ಲೋಕವೇ ಉದ್ವಿಗ್ನ ವಾಗುತ್ತದೆ. (ಧರ್ಮಾರ್ಥಗಳಿಲ್ಲದ ನಾಸ್ತಿಕನನ್ನು ಕಂಡರೆ ಲೋಕವು ಭಯಪಡುತ್ತದೆ)

ತಸ್ಮಾದ್ಧರ್ಮಪ್ರಧಾನೇನ ಸಾಧ್ಯೋಽರ್ಥಃ ಸಂಯತಾತ್ಮನಾ ।
ವಿಶ್ವಸ್ತೇಷು ಹಿ ಭೂತೇಷು ಕಲ್ಪತೇ ಸರ್ವಮೇವ ಹಿ ॥೨೬॥

ಆದುದರಿಂದ ಮನುಷ್ಯನು ತನ್ನ ಮನಸ್ಸನ್ನು ಹತೋಟಿಯಲ್ಲಿಟ್ಟು ಕೊಂಡು ಜೀವನದಲ್ಲಿ ಧರ್ಮಕ್ಕೆ ಪ್ರಾಧಾನ್ಯವನ್ನು ಕೊಟ್ಟು ಧರ್ಮಾಚರಣೆ ಗಳನ್ನು ಮಾಡುತ್ತಾ ಅರ್ಥಸಂಗ್ರಹಣದಲ್ಲಿ ತೊಡಗಬೇಕು. ಧರ್ಮಪರಾ ಯಣನಾದವನಲ್ಲಿಯೇ ಎಲ್ಲ ಪ್ರಾಣಿಗಳೂ ವಿಶ್ವಾಸದಿಂದಿರುತ್ತವೆ. ಎಲ್ಲ ಪ್ರಾಣಿಗಳ ವಿಶ್ವಾಸವನ್ನೂ ಗಳಿಸಿದನಂತರ ಮನುಷ್ಯನು ಎಲ್ಲ ಇಷ್ಟಾರ್ಥ ಗಳನ್ನೂ ಸಾಧಿಸಿಕೊಳ್ಳಬಹುದು.

ಧರ್ಮಂ ಸಮಾಚರೇತ್ಪೂರ್ವಂ ತತೋಽರ್ಥಂ ಧರ್ಮಸಂಯುತಮ್ ।
ತತಃ ಕಾಮಂ ಚರೇತ್ಪಶ್ಚಾತ್ಸಿದ್ಧಾರ್ಥಂ ಸ ಹಿ ತತ್ಪರಮ್ ॥೨೭॥

ಎಲ್ಲಕ್ಕಿಂತಲೂ ಮೊದಲು ಧರ್ಮಾಚರಣೆಯನ್ನು ಶ್ರದ್ಧೆಯಿಂದ ಮಾಡಬೇಕು. ಬಳಿಕ ಧರ್ಮಾನುಕೂಲವಾಗಿ ಅರ್ಥವನ್ನು ಸಂಪಾದಿಸಬೇಕು. ಬಳಿಕ ಧರ್ಮಾರ್ಥಗಳ ಆನುಕೂಲ್ಯದಿಂದ ಮನೋಭಿಲಷಿತಗಳಾದ ಕಾಮನೆಗಳನ್ನು ಪೂರೈಸಿಕೊಳ್ಳಬೇಕು. ಹೀಗೆ ತ್ರಿವರ್ಗವನ್ನೂ ಸಂಗ್ರಹಿಸುವುದರಿಂದ ಮನುಷ್ಯನು ಸಿದ್ಧಾರ್ಥನಾಗುತ್ತಾನೆ."

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಅಶ್ವಿನೀದೇವತೆಗಳ ಮಕ್ಕಳಾದ ನಕುಲ-ಸಹದೇವರು ಹೀಗೆ ಹೇಳಿ ವಿರಮಿಸಿದನಂತರ ಭೀಮಸೇನನು ತನ್ನ ಅಭಿಪ್ರಾಯವನ್ನು ಹೇಳತೊಡಗಿದನು :

ನಾಕಾಮಃ ಕಾಮಯತ್ಯರ್ಥಂ ನಾಕಾಮೋ ಧರ್ಮಮಿಚ್ಛತಿ ।
ನಾಕಾಮಃ ಕಾಮಯಾನೋಽಸ್ತಿ ತಸ್ಮಾತ್ಕಾಮೋ ವಿಶಿಷ್ಯತೇ ॥೨೯॥

"ಧರ್ಮಜ! ಯಾವನ ಮನಸ್ಸಿನಲ್ಲಿ ಯಾವ ಕಾಮನೆಯೂ ಇಲ್ಲವೋ–ಅವನು ಅರ್ಥವನ್ನೂ ಅಪೇಕ್ಷಿಸುವುದಿಲ್ಲ ; ಧರ್ಮವನ್ನೂ ಅಪೇಕ್ಷಿಸುವುದಿಲ್ಲ. ಯಾವ ವಿಧವಾದ ಕಾಮನೆಗಳನ್ನೂ ಅಪೇಕ್ಷಿಸುವುದಿಲ್ಲ. ಧರ್ಮ, ಅರ್ಥ ಮತ್ತು ಕಾಮಗಳಿಗೆ ಮೂಲಕಾರಣವು ಮನಸ್ಸಿನ ಕಾಮನೆಯೇ ಆಗಿದೆ. ಧರ್ಮಕಾರ್ಯವನ್ನು ಮಾಡಬೇಕಾದರೂ ಮನಸ್ಸಿನಲ್ಲಿ ಆ ಆಸೆಯು ಮೂಡಬೇಕು. ಅರ್ಥವನ್ನು ಸಂಪಾದಿಸಬೇಕಾದರೂ ಮನಸ್ಸಿನಲ್ಲಿ ಧನದ ಆಸೆಯು ಮೂಡಬೇಕು. 'ಆಸೆ' ಎಂಬುದೇ ಇಲ್ಲದಿದ್ದರೆ ಯಾವ ಕಾರ್ಯವನ್ನೂ ಯಾರೂ ಮಾಡುವುದಿಲ್ಲ. ಆದುದರಿಂದ ಕಾಮ ಅಥವಾ ಆಸೆ ಎಂಬುದೇ ಧರ್ಮಾರ್ಥಗಳಿಗಿಂತಲೂ ಶ್ರೇಷ್ಠವಾದುದು. ಮೇಲಾಗಿ ಧರ್ಮಾರ್ಥಗಳ ಉಗಮಸ್ಥಾನವೇ ಕಾಮವಾಗಿದೆ.

ಕಾಮೇನ ಯುಕ್ತಾ ಋಷಯಸ್ತಪಸ್ಯೇವ ಸಮಾಹಿತಾಃ ।
ಪಲಾಶಫಲಮೂಲಾದಾ ವಾಯುಭಕ್ಷಾಃ ಸುಸಂಯತಾಃ ॥೩೦॥

ಯಾವುದಾದರೂ ಕಾಮನೆಯನ್ನು ಪೂರ್ಣಗೊಳಿಸಿಕೊಳ್ಳುವ ಸಲುವಾಗಿಯೇ ಋಷಿಗಳೂ ತಪಸ್ಸಿನಲ್ಲಿ ತೊಡಗುತ್ತಾರೆ. ಫಲ-ಮೂಲಗಳನ್ನೂ, ತರಗೆಲೆಗಳನ್ನೂ ತಿನ್ನುತ್ತಾ ಘೋರವಾದ ತಪಸ್ಸನ್ನು ಮಾಡುತ್ತಾರೆ. ವಾಯುವನ್ನೇ ಆಹಾರವನ್ನಾಗಿ ಸೇವಿಸುತ್ತಾ ಜಿತೇಂದ್ರಿಯರಾಗಿರುತ್ತಾರೆ. ತಪಸ್ಸು ಮಾಡುವುದು, ಜಿತೇಂದ್ರಿಯತೆ–ಇವುಗಳು ಧರ್ಮದ ಅಂಗಗಳು. ಆದರೆ ಧರ್ಮಾಚರಣೆಯನ್ನು ಮಾಡಬೇಕಾದರೆ ಸಂಕಲ್ಪವೊಂದಿರುತ್ತದೆ. ಆ ಸಂಕಲ್ಪವೇ ಕಾಮ. ಸಂಕಲ್ಪವೇ ಇಲ್ಲದಿದ್ದರೆ ತಪಸ್ಸೂ ಇಲ್ಲ ; ಜಿತೇಂದ್ರಿಯತೆಯೂ ಇಲ್ಲ. ಆದುದರಿಂದ ಧರ್ಮಕಾರ್ಯಗಳಿಗೂ ಕಾಮವೇ ಮೂಲವಾಗಿರುತ್ತದೆ.

ವೇದೋಪವೇದೇಷ್ವಪರೇ ಯುಕ್ತಾಃ ಸ್ವಾಧ್ಯಾಯಪಾರಗಾಃ ।
ಶ್ರಾದ್ಧಯಜ್ಞಕ್ರಿಯಾಯಾಂ ಚ ತಥಾ ದಾನಪ್ರತಿಗ್ರಹೇ ॥೩೧॥

(ಸ್ವರ್ಗ) ಕಾಮನೆಯಿಂದಲೇ ಕೆಲವರು ವೇದೋಪವೇದಗಳನ್ನು ಅಧ್ಯಯನಮಾಡುತ್ತಾರೆ ಮತ್ತು ಅದರಲ್ಲಿ ಪಾರಂಗತರೂ ಆಗುತ್ತಾರೆ. ಕಾಮನೆಗಳಿಂದಾಗಿಯೇ ಜನರು ಶ್ರಾದ್ಧಕರ್ಮವನ್ನೂ, ಯಜ್ಞಕರ್ಮವನ್ನೂ ದಾನ-ಪ್ರತಿಗ್ರಹಗಳನ್ನೂ ಮಾಡುತ್ತಾರೆ. ಯಜ್ಞ-ದಾನಗಳೆಲ್ಲವೂ ಧರ್ಮಕಾರ್ಯಗಳೇ ಆಗಿವೆ. ಆದರೆ ಹಿನ್ನೆಲೆಯಲ್ಲಿ 'ಕಾಮ'ವಿಲ್ಲದಿದ್ದರೆ ಯಜ್ಞಗಳಾಗಲೀ, ಶ್ರಾದ್ಧವಾಗಲೀ ನಡೆಯುವುದೇ ಇಲ್ಲ.

ವಣಿಜಃ ಕರ್ಷಕಾ ಗೋಪಾಃ ಕಾರವಃ ಶಿಲ್ಪಿನಸ್ತಥಾ ।
ದೇವಕರ್ಮಕೃತಶ್ಚೈವ ಯುಕ್ತಾಃ ಕಾಮೇನ ಕರ್ಮಸು ॥೩೨॥

ಅರ್ಥಪ್ರಧಾನರಾದ ವ್ಯಾಪಾರಿಗಳು, ಕೃಷೀವಲರು, ಗೋಪಾಲಕರು, ಕಾರ್ಮಿಕರು, ಶಿಲ್ಪಿಗಳು, ದೇವಸಂಬಂಧವಾದ ಕರ್ಮಗಳನ್ನು ಮಾಡುವವರು–ಇವರೆಲ್ಲರೂ ಮನಸ್ಸಿನಲ್ಲಿ ಅರ್ಥಸಂಗ್ರಹಣೆಯ ಕಾಮನೆಗಳನ್ನಿಟ್ಟುಕೊಂಡೇ ಆ ಕಾರ್ಯಗಳಲ್ಲಿ ಪ್ರವೃತ್ತರಾಗುತ್ತಾರೆ. ಹಾಗೆ ಕಾಮನೆಯೇ ಇಲ್ಲದಿದ್ದರೆ ಅವರಾರೂ ಯಾವ ಕಾರ್ಯವನ್ನೂ ಮಾಡುತ್ತಲೇ ಇರಲಿಲ್ಲ.

ಸಮುದ್ರಂ ವಾ ವಿಶನ್ತ್ಯನ್ಯೇ ನರಾಃ ಕಾಮೇನ ಸಂಯುತಾಃ ।
ಕಾಮೋ ಹಿ ವಿವಿಧಾಕಾರಃ ಸರ್ವಂ ಕಾಮೇನ ಸಂತತಮ್ ॥೩೩॥

ಕಾಮನೆಗಳಿಂದ ಯುಕ್ತರಾದ ಕೆಲವು ಮನುಷ್ಯರು ಸಮುದ್ರದಲ್ಲಿಯೂ ಮುಳುಗುತ್ತಾರೆ. ಕಾಮನೆಯಲ್ಲಿ ಅನೇಕರೂಪಗಳಿವೆ. ಆದರೆ ಪ್ರಪಂಚದಲ್ಲಿ ನಡೆಯುವ ಎಲ್ಲ ಕಾರ್ಯಗಳೂ ಕಾಮದಿಂದಲೇ ವ್ಯಾಪ್ತವಾಗಿವೆ.

ನಾಸ್ತಿ ನಾಸೀನ್ನಾಭವಿಷ್ಯದ್ಭೂತಂ ಕಾಮಾತ್ಮಕಾತ್ಪರಮ್ ।
ಏತತ್ಸಾರಂ ಮಹಾರಾಜ ಧರ್ಮಾರ್ಥಾವತ್ರ ಸಂಸ್ಥಿತೌ ॥೩೪॥

ಕಾಮನೆಯಿಲ್ಲದ ಮನಸ್ಸಿನಿಂದ ಕೂಡಿರುವ ಪ್ರಾಣಿಯು ಈ ಪ್ರಪಂಚ ದಲ್ಲಿ ಈಗಲೂ ಇಲ್ಲ ; ಹಿಂದೆಯೂ ಇರಲಿಲ್ಲ ; ಮುಂದೆಯೂ ಅಂತಹ ಪ್ರಾಣಿಗಳು ಹುಟ್ಟುವುದೂ ಇಲ್ಲ. ಆದುದರಿಂದ ತ್ರಿವರ್ಗದಲ್ಲಿ ಕಾಮವೇ ಸಾರಭೂತವಾಗಿದೆ. ಧರ್ಮಾರ್ಥಗಳೆರಡೂ ಕಾಮದಲ್ಲಿಯೇ ಅಡಕವಾಗಿವೆ.

ನವನೀತಂ ಯಥಾ ದಧ್ನಸ್ತಥಾ ಕಾಮೋಽರ್ಥಧರ್ಮತಃ ।
ಶ್ರೇಯಸ್ತೈಲಂ ಹಿ ಪಿಣ್ಯಾಕಾದ್ಘೃತಂ ಶ್ರೇಯ ಉದಶ್ವಿತಃ ।
ಶ್ರೇಯಃ ಪುಷ್ಪಫಲಂ ಕಾಷ್ಠಾತ್ಕಾಮೋ ಧರ್ಮಾರ್ಥಯೋರ್ವರಃ ॥೩೫॥

ಬೆಣ್ಣೆಯು ಹೇಗೆ ಮೊಸರಿನ ಸಾರವಾಗಿರುವುದೋ–ಹಾಗೆಯೇ ಕಾಮವು ಧರ್ಮಾರ್ಥಗಳ ಸಾರವಾಗಿದೆ. ಎಣ್ಣೆಯು ಹೇಗೆ ಹಿಂಡಿಗಿಂತಲೂ ಶ್ರೇಷ್ಠವೋ, ತುಪ್ಪವು ಹೇಗೆ ಮಜ್ಜಿಗೆಗಿಂತಲೂ ಶ್ರೇಷ್ಠವೋ, ಕಟ್ಟಿಗೆಗಳಿ ಗಿಂತಲೂ ಫಲ-ಪುಷ್ಪಗಳು ಹೇಗೆ ಶ್ರೇಷ್ಠವೋ–ಹಾಗೆಯೇ ಕಾಮವು ಧರ್ಮಾರ್ಥಗಳಿಗಿಂತಲೂ ಶ್ರೇಷ್ಠವಾದುದು.

ಪುಷ್ಪತೋ ಮಧ್ವಿವ ರಸಃ ಕಾಮ ಆಭ್ಯಾಂ ತಥಾ ಸ್ಮೃತಃ ।
ಕಾಮೋ ಧರ್ಮಾರ್ಥಯೋರ್ಯೋನಿಃ ಕಾಮಶ್ಚಾಥ ತದಾತ್ಮಕಃ ॥೩೬॥

ಪುಷ್ಪಕ್ಕಿಂತಲೂ ಅದರಲ್ಲಿರುವ ಜೇನುತುಪ್ಪಕ್ಕೆ ಸಮಾನವಾದ ಪುಷ್ಪ ರಸವೇ ಹೇಗೆ ಶ್ರೇಷ್ಠವೋ- ಹಾಗೆಯೇ ಧರ್ಮಾರ್ಥಗಳಿಗಿಂತಲೂ ಕಾಮವೇ ಶ್ರೇಷ್ಠವಾದುದು. (ಜೇನುತುಪ್ಪವು ಹೂವಿನ ಸಾರವಾಗಿರುವಂತೆ ಕಾಮವು ಧರ್ಮಾರ್ಥಗಳ ಸಾರವಾಗಿದೆ.) ಕಾಮವೇ ಧರ್ಮಾರ್ಥಗಳಿಗೆ ಮೂಲಕಾರಣ

ವಾಗಿದೆ. (ಕಾಮದಿಂದಲೇ ಧರ್ಮಾರ್ಥಗಳು ಹುಟ್ಟಿವೆ.) ಆದುದರಿಂದ ಕಾಮವು ಧರ್ಮಾರ್ಥರೂಪವಾಗಿದೆ.

ನಾಕಾಮತೋ ಬ್ರಾಹ್ಮಣಾಃ ಸ್ವನ್ನಮರ್ಥಾ-
ನ್ನಾಕಾಮತೋ ದದತಿ ಬ್ರಾಹ್ಮಣೇಭ್ಯಃ ।
ನಾಕಾಮತೋ ವಿವಿಧಾ ಲೋಕಚೇಷ್ಟಾ
ತಸ್ಮಾತ್ಕಾಮಃ ಪ್ರಾಕ್ತ್ರಿವರ್ಗಸ್ಯ ದೃಷ್ಟಃ ॥೩೭॥

ಕಾಮನೆಯ ಹೊರತಾಗಿ ಬ್ರಾಹ್ಮಣರು ಒಳ್ಳೆಯ ಭೋಜನವನ್ನು ಮಾಡುವುದಿಲ್ಲ. ಕಾಮನೆಯ ಹೊರತಾಗಿ ಯಾರೂ ಬ್ರಾಹ್ಮಣರಿಗೆ ಧನಾದಿಗಳನ್ನು ದಾನಮಾಡುವುದಿಲ್ಲ. ಕಾಮನೆಯ ಹೊರತಾಗಿ ಹಲವು ಬಗೆಯ ಲೋಕವ್ಯಾಪಾರಗಳೂ ನಡೆಯುವುದಿಲ್ಲ. ಈ ಎಲ್ಲ ಕಾರಣ ಗಳಿಂದಲೂ ಧರ್ಮಾರ್ಥ-ಕಾಮಗಳಲ್ಲಿ ಕಾಮಕ್ಕೇ ಅಗ್ರಸ್ಥಾನವನ್ನು ಕೊಟ್ಟಿರು ವುದು ಕಂಡುಬಂದಿದೆ.

ಸುಚಾರುವೇಷಾಭಿರಲಂಕೃತಾಭಿ-
ರ್ಮದೋತ್ಕಟಾಭಿಃ ಪ್ರಿಯದರ್ಶನಾಭಿಃ ।
ರಮಸ್ವ ಯೋಷಾಭಿರುಪೇತ್ಯ ಕಾಮಂ
ಕಾಮೋ ಹಿ ರಾಜನ್ಪರಮೋ ಭವೇನ್ನಃ ॥೩೮॥

ಧರ್ಮಜ! ಆದುದರಿಂದ ನೀನು ಕಾಮವನ್ನೇ ಆಶ್ರಯಿಸಿ ಸುಂದರ ವಾದ ವೇಷ-ಭೂಷಣಗಳನ್ನು ಧರಿಸಿರುವ. ಅನೇಕವಿಧವಾದ ಆಭರಣ ಗಳಿಂದ ಸಮಲಂಕೃತರಾದ, ನೋಡಲು ಕಡುಚೆಲುವೆಯರಾದ, ಮದೋ ತ್ಕಟೆಯರಾದ ಯುವತಿಯರೊಡನೆ ಯಥೇಚ್ಛವಾಗಿ ವಿಹರಿಸು, ಧರ್ಮಾರ್ಥ ಗಳಿಗಿಂತಲೂ ಕಾಮವೇ ನಮಗೆ ಪರಮಶ್ರೇಷ್ಠವಾದ ಪುರುಷಾರ್ಥವಾಗಲಿ.

ಬುದ್ಧಿರ್ಮಮೈಷಾ ಪರಿಖಾಸ್ಥಿತಸ್ಯ
ಮಾ ಭೂದ್ವಿಚಾರಸ್ತವ ಧರ್ಮಪುತ್ರ ।
ಸ್ಯಾತ್ಸಂಹಿತಂ ಸದ್ಭಿರಫಲ್ಗುಸಾರಂ
ಸಮೇತಿ ವಾಕ್ಯಂ ಪರಮಾನೃಶಂಸ್ಯಮ್ ॥೩೯॥

ಧರ್ಮನಂದನ! ನಾನು ಬಹಳ ಆಳವಾಗಿ ಯೋಚಿಸಿ ಈ ನಿಶ್ಚಯಕ್ಕೆ

ಬಂದಿರುತ್ತೇನೆ. ನೀನು ಈ ವಿಷಯದಲ್ಲಿ ಪುನಃ ವಿಚಾರಮಾಡಬೇಕಾದ ಅವಶ್ಯಕತೆಯೇ ಇಲ್ಲ. ನನ್ನ ಈ ಮಾತು ಉತ್ತಮೋತ್ತಮವಾದುದು. ಕೋಮಲವಾದುದು ; ಶ್ರೇಷ್ಠವಾದುದು ; ಸತ್ತ್ವಯುಕ್ತವಾದುದು ; ಸಾರಯುಕ್ತವಾದುದು ; ನಿಷ್ಠುರತೆಯಿಂದ ವಿಹೀನವಾದುದು. ಶ್ರೇಷ್ಠ ಪುರುಷರೂ ಈ ಮಾತನ್ನು ಅಂಗೀಕರಿಸಬಹುದಾಗಿದೆ.

ಧರ್ಮಾರ್ಥಕಾಮಾಃ ಸಮಮೇವ ಸೇವ್ಯಾ
ಯೋ ಹ್ಯೇಕಭಕ್ತಃ ಸ ನರೋ ಜಘನ್ಯಃ ।
ದ್ವಯೋಽಸ್ತು ದಾಕ್ಷ್ಯಂ ಪ್ರವದನ್ತಿ ಮಧ್ಯಂ
ಸ ಉತ್ತಮೋ ಯೋಽಭಿರತಸ್ತ್ರಿವರ್ಗೇ ॥೪೦॥

ಅಗ್ರಜ! ನನ್ನ ಅಭಿಪ್ರಾಯದಲ್ಲಿ ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳನ್ನೂ ಸಮಾನವಾಗಿಯೇ ಆಚರಿಸಬೇಕು. ಯಾವನು ಒಂದೇ ಪುರುಷಾರ್ಥದಲ್ಲಿ ಆಸಕ್ತನಾಗಿರುವನೋ ಅವನು ಅಧಮನು. ಧರ್ಮಾರ್ಥಗಳಲ್ಲಿ ದಾಕ್ಷ್ಯವು (ಸಾಮರ್ಥ್ಯವು) ಅರ್ಥಕ್ಕೆ ಕಾರಣವಾದುದರಿಂದ ಅದು ಮಧ್ಯಮವು. ಅರ್ಥಕ್ಕಿಂತಲೂ ಕಾಮವು ಶ್ರೇಷ್ಠ ವೆಂಬುದು ಸಿದ್ಧವಾಗಿಯೇ ಇದೆ. ಎರಡು ಪುರುಷಾರ್ಥಗಳಲ್ಲಿ ಆಸಕ್ತ ನಾದವನು ಮಧ್ಯಮನು. ಮೂರು ಪುರುಷಾರ್ಥಗಳಲ್ಲಿಯೂ ಸಮಾನವಾದ ಆಸಕ್ತಿಯಿರುವವನು ಉತ್ತಮ ಪುರುಷನು."

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಪ್ರಾಜ್ಞನಾದ, ಸುಹೃದನಾದ, ಚಂದನದಸಾರದಿಂದ ಲೇಪಿತನಾಗಿದ್ದ, ವಿಚಿತ್ರವಾದ ಪುಷ್ಪಮಾಲಿಕೆಗಳಿಂದಲೂ–ಆಭರಣ ಗಳಿಂದಲೂ ಸಮಲಂಕೃತನಾಗಿದ್ದ ಭೀಮಸೇನನು–ಅಲ್ಲಿದ್ದ ವೀರಸಹೋದರ ರೊಡನೆ ಧರ್ಮಾರ್ಥ-ಕಾಮಗಳ ವಿಷಯವನ್ನು ಸಂಕ್ಷೇಪವಾಗಿಯೂ ವಿಸ್ತಾರ ವಾಗಿಯೂ ಹೇಳಿ ವಿರಮಿಸಿದನು. ಬಳಿಕ ಮಹಾತ್ಮರಿಂದ ಧರ್ಮೋಪದೇಶ ವನ್ನು ಪಡೆದುಕೊಂಡಿದ್ದ ಧರ್ಮಾತ್ಮರಲ್ಲಿಯೇ ಶ್ರೇಷ್ಠನಾದ ಯುಧಿಷ್ಠಿರನು ಮುಹೂರ್ತಕಾಲದವರೆಗೆ ಸುಮ್ಮನಿದ್ದು ಧರ್ಮಾರ್ಥ-ಕಾಮಗಳ ವಿಷಯ ವಾಗಿ ಮಾತನಾಡಿದ ತನ್ನ ಅನುಜರ ಮತ್ತು ವಿದುರನ ಮಾತುಗಳೆಲ್ಲವನ್ನೂ

ಮನಸ್ಸಿನಲ್ಲಿಯೇ ವಿಮರ್ಶಿಸಿ ಮುಗುಳ್ನಗೆಯನ್ನು ಬೀರುತ್ತಾ ಯಥಾರ್ಥವಾದ ಈ ಮಾತುಗಳನ್ನು ಹೇಳಿದನು :

ನಿಃಸಂಶಯಃ ನಿಶ್ಚಿತಧರ್ಮಶಾಸ್ತ್ರಾಃ
ಸರ್ವೇ ಭವನ್ತೋ ವಿದಿತಪ್ರಮಾಣಾಃ ।
ವಿಜ್ಞಾತುಕಾಮಸ್ಯ ಮಮೇಹ ವಾಕ್ಯ-
ಮುಕ್ತಂ ಯದ್ವೈ ನೈಷ್ಠಿಕಂ ತಚ್ಛ್ರುತಂ ಮೇ ।
ಇದಂ ತ್ವವಶ್ಯಂ ಗದತೋ ಮಮಾಪಿ
ವಾಕ್ಯಂ ನಿಬೋಧಧ್ವಮನನ್ಯಭಾವಾಃ ॥೪೩॥

"ಬಂಧುಗಳೇ! ನೀವೆಲ್ಲರೂ ಧರ್ಮಶಾಸ್ತ್ರಗಳ ಸಿದ್ಧಾಂತವನ್ನು ನಿಶ್ಚಿತವಾದ ರೀತಿಯಲ್ಲಿ ತಿಳಿದಿರುವಿರಿ. ನಿಮಗೆ ಧರ್ಮದ ನಿರ್ಣಯ ವೇನೆಂಬುದೂ ಸಂಪೂರ್ಣವಾಗಿ ತಿಳಿದಿದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ನಾನು ಧರ್ಮಾರ್ಥ-ಕಾಮಗಳ ವಿಷಯದಲ್ಲಿ ನಿಮ್ಮ ನಿಶ್ಚಿತವಾದ ಅಭಿಪ್ರಾಯವನ್ನು ತಿಳಿಯಬೇಕೆಂದಿದ್ದೆನು. ಅದರಂತೆ ನೀವೆಲ್ಲರೂ ನಿಮ್ಮನಿಮ್ಮ ಅಭಿಪ್ರಾಯಗಳನ್ನು ಖಚಿತಪಡಿಸಿರುವಿರಿ. ಅವೆಲ್ಲವನ್ನೂ ನಾನು ಕೇಳಿದೆನು. ನಾನು ಇದೇ ವಿಷಯವನ್ನು ಕುರಿತು ಕೆಲವು ಮಾತುಗಳನ್ನು ಹೇಳಲಿರುವೆನು. ನೀವೆಲ್ಲರೂ ಅನನ್ಯಚಿತ್ತರಾಗಿ ಕೇಳಿರಿ.

ಯೋ ವೈ ನ ಪಾಪೇ ನಿರತೋ ನ ಪುಣ್ಯೇ
ನಾರ್ಥೇ ನ ಧರ್ಮೇ ಮನುಜೋ ನ ಕಾಮೇ ।
ವಿಮುಕ್ತದೋಷಃ ಸಮಲೋಷ್ಟಕಾಞ್ಚನೋ
ವಿಮುಚ್ಯತೇ ದುಃಖಸುಖಾರ್ಥಸಿದ್ಧೇಃ ॥೪೪॥

ಯಾವ ಮನುಷ್ಯನು ಪಾಪಕಾರ್ಯದಲ್ಲಾಗಲೀ, ಪುಣ್ಯಕಾರ್ಯ ದಲ್ಲಾಗಲೀ ನಿರತನಾಗಿಲ್ಲವೋ, ಧರ್ಮದಲ್ಲಾಗಲೀ, ಅರ್ಥದಲ್ಲಾಗಲೀ, ಕಾಮದಲ್ಲಾಗಲೀ ತತ್ಪರನಾಗಿಲ್ಲವೋ–ಅಂತಹ ಮನುಷ್ಯನು ಸಕಲವಿಧವಾದ ದೋಷಗಳಿಂದಲೂ ಮುಕ್ತನಾಗುತ್ತಾನೆ. ಮಣ್ಣಿನ ಹೆಂಟೆಯನ್ನೂ, ಕಲ್ಲನ್ನೂ ಮತ್ತು ಚಿನ್ನದ ಗಟ್ಟಿಯನ್ನೂ ಸಮಾನವಾಗಿ ತಿಳಿಯುವ ಅವನು ದುಃಖ-ಸುಖದಾಯಕವಾದ ಅರ್ಥಸಿದ್ಧಿಯಿಂದಲೂ ಮುಕ್ತನಾಗುತ್ತಾನೆ.

ಭೂತಾನಿ ಜಾತಿಸ್ಮರಣಾತ್ಮಕಾನಿ
ಜರಾವಿಕಾರೈಶ್ಚ ಸಮನ್ವಿತಾನಿ ।
ಭೂಯಶ್ಚ ತೈಸ್ತೈಃ ಪ್ರತಿಬೋಧಿತಾನಿ
ಮೋಕ್ಷಂ ಪ್ರಶಂಸನ್ತಿ ನ ತಂ ಚ ವಿದ್ಮಃ ॥೪೫॥

ಯಾರು ಪೂರ್ವಜನ್ಮದ ವೃತ್ತಾಂತಗಳನ್ನು ಸ್ಮರಣೆಯಲ್ಲಿಟ್ಟು ಕೊಂಡಿರುವರೋ–ವಾರ್ಧಕ್ಯವಿಕಾರದಿಂದಲೂ, ಸಾಂಸಾರಿಕದುಃಖ ಗಳಿಂದಲೂ ಪೀಡಿಸಲ್ಪಡುತ್ತಿರುವರೋ ಮತ್ತು ಅವುಗಳಿಂದ ಎಚ್ಚರಗೊಳಿಸ ಲ್ಪಡುತ್ತಿರುತ್ತಾರೆಯೋ–ಅಂತಹವರು ಮೋಕ್ಷವನ್ನೇ ಪ್ರಶಂಸೆಮಾಡುತ್ತಾರೆ. ಆದರೆ ಆ ಮೋಕ್ಷವೆಂತಹುದೆಂಬುದು ನಮಗೂ ತಿಳಿಯದುದಾಗಿದೆ.

ಸ್ನೇಹೇನ ಯುಕ್ತಸ್ಯ ನ ಚಾಸಿ ಮುಕ್ತಿ-
ರಿತಿ ಸ್ವಯಮ್ಭೂರ್ಭಗವಾನುವಾಚ ।
ಬುಧಾಶ್ಚ ನಿರ್ವಾಣಪರಾ ಭವನ್ತಿ
ತಸ್ಮಾನ್ನ ಕುರ್ಯಾತ್ಪ್ರಿಯಮಪ್ರಿಯಂ ಚ ॥೪೬॥

ಯಾವನ ಮನಸ್ಸಿನಲ್ಲಿ 'ಸ್ನೇಹ' (ಆಸಕ್ತಿ)– ಎಂಬುದಿರುವುದೋ ಅವನಿಗೆ ಮುಕ್ತಿಯೇ ಇಲ್ಲವೆಂದು ಭಗವಾನ್ ಸ್ವಯಂಭೂಬ್ರಹ್ಮನೇ ಹೇಳಿರು ತ್ತಾನೆ. ಸ್ನೇಹಶೂನ್ಯರಾದ ಜ್ಞಾನಿಗಳು ಮೋಕ್ಷವನ್ನು ಹೊಂದುತ್ತಾರೆ. ಆದುದರಿಂದ ಮೋಕ್ಷಾರ್ಥಿಗಳು ಯಾರಿಗೂ ಪ್ರಿಯವನ್ನಾಗಲೀ, ಅಪ್ರಿಯ ವನ್ನಾಗಲೀ ಮಾಡಬಾರದು. (ಯಾರನ್ನೂ ಪ್ರಿಯನೆಂದಾಗಲೀ ಅಪ್ರಿಯ ನೆಂದಾಗಲೀ ಭಾವಿಸಬಾರದು.)

ಏತತ್ಪ್ರಧಾನಂ ಚ ನ ಕಾಮಕಾರೋ
ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ।
ಭೂತಾನಿ ಸರ್ವಾಣಿ ವಿಧಿರ್ನಿಯುಙ್ಕ್ತೇ
ವಿಧಿರ್ಬಲೀಯಾನಿತಿ ವಿತ್ತ ಸರ್ವೇ ॥೪೭॥

ಹೀಗೆ ವಿಚಾರಮಾಡುವುದೇ ಮೋಕ್ಷಪ್ರಾಪ್ತಿಗೆ ಪ್ರಧಾನವಾದ ಉಪಾಯವಾಗಿದೆ. ಪ್ರಾಣಿಯು ತನ್ನ ಇಚ್ಛೆಯಂತೆಯೇ ನಡೆಯಲು ಸಾಧ್ಯ ವಿಲ್ಲ. ಬ್ರಹ್ಮನು ನನ್ನನ್ನು ಯಾವ ಕಾರ್ಯದಲ್ಲಿ ನಿಯೋಜಿಸಿದ್ದಾನೆಯೋ– ಅದೇ ಕಾರ್ಯವನ್ನೇ ನಾನು ಶ್ರದ್ಧೆಯಿಂದ ಮಾಡುತ್ತೇನೆ. ವಿಧಿಯು ಎಲ್ಲ

ಪ್ರಾಣಿಗಳನ್ನೂ ಒಂದೊಂದು ಭಿನ್ನ-ಭಿನ್ನ ಕಾರ್ಯಗಳಲ್ಲಿ ನಿಯೋಜಿಸಿರುತ್ತಾನೆ. ಆದುದರಿಂದ ನೀವೆಲ್ಲರೂ ವಿಧಿಯೇ (ಬ್ರಹ್ಮನೇ) ಪ್ರಬಲನಾದವ ನೆಂದು ತಿಳಿಯಬೇಕು.

ನ ಕರ್ಮಣಾಪ್ನೋತ್ಯನವಾಪ್ಯಮರ್ಥಂ
ಯದ್ಭಾವಿ ತದ್ವೈ ಭವತೀತಿ ವಿತ್ತ।
ತ್ರಿವರ್ಗಹೀನೋಽಪಿ ಹಿ ವಿನ್ದತೇಽರ್ಥಂ
ತಸ್ಮಾದಹೋ ಲೋಕಹಿತಾಯ ಗುಹ್ಯಮ್ ॥೪೮॥

ಮನುಷ್ಯನು ಯಾವುದೇ ಕಾರ್ಯವನ್ನು ಮಾಡಿದರೂ ಪಡೆದು ಕೊಳ್ಳಲು ಸಾಧ್ಯವಾಗದೇ ಇರುವ (ವಿಧಿಯಿಂದ ಕೊಡಲ್ಪಡದಿರುವ) ಅರ್ಥ ವನ್ನು ಖಂಡಿತವಾಗಿಯೂ ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ವಿಧಿನಿಯಮದಂತೆ ಯಾವುದು ಹೇಗೆ ಆಗಬೇಕೆಂದಿರುವುದೋ–ಅದು ಹಾಗೆಯೇ ಆಗುವುದೆಂಬುದನ್ನು ನೀವೆಲ್ಲರೂ ತಿಳಿದುಕೊಳ್ಳಿರಿ. ಪ್ರಯೋಜನ ವನ್ನು ಪಡೆಯಲು ಧರ್ಮಾರ್ಥ-ಕಾಮಗಳನ್ನು ಆಶ್ರಯಿಸಬೇಕೆಂದೇನೂ ಇಲ್ಲ. ಧರ್ಮಾರ್ಥ-ಕಾಮಗಳನ್ನು ಆಶ್ರಯಿಸದೇ ಇರುವವನೂ ವಿಧಿಯ ಅನುಗ್ರಹವಿದ್ದರೆ ಅರ್ಥವನ್ನು ಪಡೆದುಕೊಳ್ಳಬಲ್ಲನು. ಆದುದರಿಂದ ಅತ್ಯಂತ ನಿಗೂಢವಾದ ಮೋಕ್ಷಮಾರ್ಗವನ್ನು ಲೋಕಹಿತಕ್ಕಾಗಿ ಆಶ್ರಯಿಸಬೇಕು.”

(ಈ ಶ್ಲೋಕಕ್ಕೆ ವ್ಯಾಖ್ಯಾನಕಾರರು ಮೋಕ್ಷಪರವಾಗಿಯೇ ಅರ್ಥ ಮಾಡಿರುತ್ತಾರೆ. ಅರ್ಥ ಎಂಬುದಕ್ಕೆ ಮೋಕ್ಷವೆಂದೂ, ಲೋಕಹಿತಾಯ– ಎಂಬುದಕ್ಕೆ ಮೋಕ್ಷಾಯ–ಎಂದೂ ವ್ಯಾಖ್ಯಾನಿಸಿದ್ದಾರೆ. ಯಾವುದೇ ಕರ್ಮಮಾಡಿದರೂ ಪಡೆದುಕೊಳ್ಳಲು ಅಸಾಧ್ಯವಾದ ಮೋಕ್ಷವನ್ನು ಪಡೆದು ಕೊಳ್ಳಲು ಸಾಧ್ಯವಾಗುವುದಿಲ್ಲ. ಮೋಕ್ಷಕ್ಕಾಗಿ ಧರ್ಮಾರ್ಥ-ಕಾಮಗಳಿಂದ ಹೀನನಾದವನೇ ರಹಸ್ಯವಾದ ಜ್ಞಾನವನ್ನು ಹೊಂದುತ್ತಾನೆ. **ಅರ್ಥಂ= ಮೋಕ್ಷಂ ವಿತ್ತ। ಲೋಕಹಿತಾಯ = ಮೋಕ್ಷಾಯ, ತ್ರಿವರ್ಗ ಹೀನೋಽಪಿ ಗುಹ್ಯಮರ್ಥಂ ರಹಸ್ಯಂ, ವಿನ್ದತೇ ಲಭತೇ ಪೂರ್ವೋಕ್ತಾಧಿಕಾರೀ ।)**

ವೈಶಂಪಾಯನರು ಹೇಳುತ್ತಾರೆ :

“ ಜನಮೇಜಯ! ಯುಧಿಷ್ಠಿರರಾಜನು ಹೇಳಿದ ಮಾತು ಉತ್ತ

ಮೋತ್ತಮವಾಗಿದ್ದಿತು. ಮನಸ್ಸಿಗೆ ಹಿಡಿಸುವುದಾಗಿದ್ದಿತು. ಯುಕ್ತಿಯುಕ್ತವಾಗಿಯೂ ಇದ್ದಿತು. ಆ ಮಾತನ್ನು ಕೇಳಿ ಅದರ ಸಂಪೂರ್ಣತತ್ತ್ವವನ್ನು ತಿಳಿದುಕೊಂಡ ಭೀಮಾದಿಗಳು ಹರ್ಷೋದ್ಗಾರಗಳನ್ನು ಮಾಡುತ್ತಾ ಬದ್ಧಾಂಜಲಿಗಳಾಗಿ ಕುರುಕುಲಪ್ರಮುಖನಾದ ಯುಧಿಷ್ಠಿರನನ್ನು ಪ್ರಣಮಿಸಿದರು. ಮನೋಜ್ಞವಾದ ಸ್ವರ-ವ್ಯಂಜನಗಳಿಂದ ಸುಮನೋಹರವಾಗಿ ಅಲಂಕರಿಸಲ್ಪಟ್ಟಿದ್ದ, ಮನಸ್ಸನ್ನು ಮುಟ್ಟುವುದಾಗಿದ್ದ, ದೋಷರಹಿತವಾಗಿದ್ದ, ಯುಧಿಷ್ಠಿರರಾಜನು ಹೇಳಿದ ಮಾತನ್ನು ಅಲ್ಲಿ ನೆರೆದಿದ್ದ ರಾಜರೆಲ್ಲರೂ ಬಹಳವಾಗಿ ಪ್ರಶಂಸಿಸಿದರು.

ನ ಚಾಪಿ ತಾನ್ಧರ್ಮಸುತೋ ಮಹಾಮನಾ-
ಸ್ತದಾ ಪ್ರತೀತಾನ್ಪ್ರಶಶಂಸ ವೀರ್ಯವಾನ್ ।
ಪುನಶ್ಚ ಪಪ್ರಚ್ಛಸರಿದ್ವರಾಸುತಂ
ತತಃ ಪರಂ ಧರ್ಮಮಹೀನಚೇತಸಮ್ ॥೫೧॥

ಮಹಾಪರಾಕ್ರಮಿಯಾದ, ಯಮಧರ್ಮನ ಮಗನಾದ, ಮಹಾತ್ಮನಾದ ಯುಧಿಷ್ಠಿರನು ಪ್ರಖ್ಯಾತರಾದ ಆ ರಾಜರನ್ನು ತಾನೂ ಪ್ರಶಂಸೆ ಮಾಡಿದನು. ಮರುದಿನ ಗಂಗಾಪುತ್ರನಾದ, ಮಹಾಸತ್ತ್ವಶಾಲಿಯಾದ ಭೀಷ್ಮನನ್ನು ಧರ್ಮದ ರಹಸ್ಯವನ್ನು ತಿಳಿಯಲು ಪುನಃ ಪ್ರಶ್ನಿಸಿದನು."

೧೬೭ನೆಯ ಅಧ್ಯಾಯವು ಮುಗಿಯಿತು.

೧೬೮ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಮೈತ್ರಿಯನ್ನು ಬೆಳೆಸಲು ಯೋಗ್ಯರಾದವರ ಮತ್ತು ಅಯೋಗ್ಯರಾದವರ ಗುಣ-ಲಕ್ಷಣಗಳು : ಕೃತಘ್ನನಾದ ಗೌತಮನ ಕಥಾಪ್ರಾರಂಭ

ಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

"ಕುರುಕುಲದ ಪ್ರೀತಿಯನ್ನು ಹೆಚ್ಚಿಸುವ ಮಹಾಪ್ರಾಜ್ಞನಾದ ಪಿತಾಮಹನೇ! ನಾನು ಮತ್ತೊಂದು ಪ್ರಶ್ನೆಯನ್ನು ಕೇಳಬೇಕೆಂದಿರುತ್ತೇನೆ. ನೀನು ಆ ಪ್ರಶ್ನೆಯ ವಿಷಯವಾಗಿ ವ್ಯಾಖ್ಯಾನಿಸಲು (ವಿವರಣೆ ನೀಡಲು) ಸಮರ್ಥನಾಗಿರುವೆ.

ಕೀದೃಶಾ ಮಾನವಾಃ ಸೌಮ್ಯಾಃ ಕೈಃ ಪ್ರೀತಿಃ ಪರಮಾ ಭವೇತ್ ।
ಆಯುತ್ಯಾಂ ಚ ತದಾತ್ವೇ ಚ ಕೇ ಕ್ಷಮಾಸ್ತಾನ್ವದಸ್ವ ಮೇ ॥೨॥

ಸೌಮ್ಯಸ್ವಭಾವದ ಮನುಷ್ಯರು ಹೇಗಿರುತ್ತಾರೆ? ಯಾರೊಡನೆ ಪ್ರೀತಿಯುಳ್ಳವನಾಗಿರುವುದರಿಂದ ಉತ್ತಮವಾದ ಫಲವು ಪ್ರಾಪ್ತವಾಗುತ್ತದೆ? ಭವಿಷ್ಯದಲ್ಲಿಯೂ ಮತ್ತು ಪ್ರಸಕ್ತಸಂದರ್ಭದಲ್ಲಿಯೂ ಎಂತಹ ಮನುಷ್ಯರು ಉಪಕಾರಮಾಡಲು ಸಮರ್ಥರಾಗುತ್ತಾರೆ?–ಈ ಎಲ್ಲ ವಿಷಯಗಳನ್ನೂ ನನಗೆ ತಿಳಿಸು.

ನ ಹಿ ತತ್ರ ಧನಂ ಸ್ಫೀತಂ ನ ಚ ಸಮ್ಬನ್ಧಿಬಾನ್ಧವಾಃ ।
ತಿಷ್ಠನ್ತಿ ಯತ್ರ ಸುಹೃದಸ್ತಿಷ್ಠನ್ತೀತಿ ಮತಿರ್ಮಮ ॥೩॥

ಎಂತಹ ಕಷ್ಟಪರಿಸ್ಥಿತಿಯಲ್ಲಿ ಸುಹೃದರು ಆಶ್ರಯದಾತರಾಗಿರುವರೋ–ಅಂತಹ ಕಷ್ಟಪರಿಸ್ಥಿತಿಯಲ್ಲಿ ಅಪಾರವಾದ ಹಣವೂ ಪ್ರಯೋಜನಕ್ಕೆ ಬರುವುದಿಲ್ಲ. ಸಂಬಂಧಿಗಳಾಗಲೀ, ಬಂಧುಗಳಾಗಲೀ ಸುಹೃದರಂತೆ ಆಸರೆಯನ್ನಿತ್ತು ನಿಲ್ಲಲಾರರೆಂಬುದು ನನ್ನ ಅಭಿಪ್ರಾಯವಾಗಿದೆ. (ಸ್ನೇಹಿತರು ಮಾಡುವ ಸಹಾಯವನ್ನು ಸಂಬಂಧಿಗಳೂ ಮಾಡುವುದಿಲ್ಲ. ಅಪಾರವಾದ ಹಣವನ್ನು ವೆಚ್ಚಮಾಡಿದರೂ ಸ್ನೇಹಿತರು ಮಾಡುವ ಉಪಕಾರವನ್ನು ಇತರರಿಂದ ಪಡೆದುಕೊಳ್ಳುವುದಕ್ಕಾಗುವುದಿಲ್ಲ. ಸ್ನೇಹಿತರೇ ಸ್ವಾರ್ಥವನ್ನು ತ್ಯಾಗಮಾಡಿ ತಮ್ಮ ಪ್ರಿಯಮಿತ್ರನಿಗೆ ಸಹಾಯಮಾಡತಕ್ಕವರು.)

ದುರ್ಲಭೋಹಿ ಸುಹೃಚ್ಛ್ರೋತಾ ದುರ್ಲಭಶ್ಚ ಹಿತಃ ಸುಹೃತ್ ।
ಏತದ್ಧರ್ಮಭೃತಾಂ ಶ್ರೇಷ್ಠ ಸರ್ವಂ ವ್ಯಾಖ್ಯಾತುಮರ್ಹಸಿ ॥೪॥

ಆದರೆ ಹಿತಕರವಾದ ಮಾತುಗಳನ್ನು ಕೇಳುವ ಸುಹೃದನೂ ಸಿಕ್ಕುವುದು ಕಷ್ಟ. ಸ್ನೇಹಿತನಿಗೆ ಹಿತವನ್ನೇ ಉಂಟುಮಾಡಬೇಕೆನ್ನುವ ಸುಹೃದನೂ ದುರ್ಲಭನೇ ಸರಿ. ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಪಿತಾಮಹ! ಈ ಎಲ್ಲ ವಿಷಯಗಳನ್ನೂ ವಿಶದವಾಗಿ ತಿಳಿಯಪಡಿಸು."

ಭೀಷ್ಮನು ಹೇಳುತ್ತಾನೆ :

ಸಂಧೇಯಾನ್ಪುರುಷಾನ್ರಾಜನ್ನ ಸಂಧೇಯಾಂಶ್ಚ ತತ್ತ್ವತಃ ।
ವದತೋ ಮೇ ನಿಬೋಧ ತ್ವಂ ನಿಖಿಲೇನ ಯುಧಿಷ್ಠಿರ ॥೫॥

"ಯುಧಿಷ್ಠಿರ! ಯಾರೊಡನೆ ಸಂಧಿಯನ್ನು (ಮೈತ್ರಿಯನ್ನು) ಮಾಡಿಕೊಳ್ಳಬಹುದು ಮತ್ತು ಯಾರೊಡನೆ ಮೈತ್ರಿಯನ್ನು ಮಾಡಿಕೊಳ್ಳ ಬಾರದು–ಎಂಬುದನ್ನು ನಿನಗೆ ಯಥಾವತ್ತಾಗಿ ವಿವರಿಸಿ ಹೇಳುತ್ತೇನೆ. ಎಲ್ಲವನ್ನೂ ಸಾವಧಾನಚಿತ್ತನಾಗಿ ಕೇಳು.

ಲುಬ್ಧಃ ಕ್ರೂರಸ್ತ್ಯಕ್ತಧರ್ಮಾ ನಿಕೃತಿಃ ಶಠ ಏವ ಚ ।
ಕ್ಷುದ್ರಃ ಪಾಪಸಮಾಚಾರಃ ಸರ್ವಶಙ್ಕೀ ತಥಾಲಸಃ ॥೬॥
ದೀರ್ಘಸೂತ್ರೋಽನೃಜುಃ ಕ್ರುಷ್ಟೋ ಗುರುದಾರಪ್ರಧರ್ಷಕಃ ।
ವ್ಯಸನೇ ಯಃ ಪರಿತ್ಯಾಗೀ ದುರಾತ್ಮಾ ನಿರಪತ್ರಪಃ ॥೭॥
ಸರ್ವತಃ ಪಾಪದರ್ಶೀ ಚ ನಾಸ್ತಿಕೋ ವೇದನಿನ್ದಕಃ ।
ಸಮ್ಪ್ರಕೀರ್ಣೇನ್ದ್ರಿಯೋ ಲೋಕೇ ಯಃ ಕಾಮಂ ನಿರತಶ್ಚರೇತ್ ॥೮॥
ಅಸತ್ಯೋ ಲೋಕವಿದ್ವಿಷ್ಟಃ ಸಮಯೇ ಚಾನವಸ್ಥಿತಃ ।
ಪಿಶುನೋಽಥಾಕೃತಪ್ರಜ್ಞೋ ಮತ್ಸರೀ ಪಾಪನಿಶ್ಚಯಃ ॥೯॥
ದುಃಶೀಲೋಽಥಾಕೃತಾತ್ಮಾ ಚ ನೃಶಂಸಃ ಕಿತವಸ್ತಥಾ ।
ಮಿತ್ರೈರಪಕೃತಿರ್ನಿತ್ಯಮಿಚ್ಛತೇಽರ್ಥಂ ಪರಸ್ಯ ಯಃ ॥೧೦॥
ದದತಶ್ಚ ಯಥಾಶಕ್ತಿ ಯೋ ನ ತುಷ್ಯತಿ ಮನ್ದಧೀಃ ।
ಅಧೈರ್ಯಮಪಿ ಯೋ ಯುಙ್ಕ್ತೇ ಸದಾ ಮಿತ್ರಂ ನರರ್ಷಭ ॥೧೧॥
ಅಸ್ಥಾನಕ್ರೋಧನೋಽಯುಕ್ತೋ ಯಶ್ಚಾಕಸ್ಮಾದ್ವಿರುಧ್ಯತೇ ।
ಸುಹೃದಶ್ಚೈವ ಕಲ್ಯಾಣಾನಾಶು ತ್ಯಜತಿ ಕಿಲ್ಬಿಷೀ ॥೧೨॥
ಅಲ್ಪೇಽಪ್ಯಪಕೃತೇ ಮೂಢಸ್ತಥಾಜ್ಞಾನಾತ್ಕೃತೇಽಪಿ ಚ ।
ಕಾರ್ಯಸೇವೀ ಚ ಮಿತ್ರೇಷು ಮಿತ್ರದ್ವೇಷೀ ನರಾಧಿಪ ॥೧೩॥
ಶತ್ರುರ್ಮಿತ್ರಮುಖೋ ಯಶ್ಚ ಜಿಹ್ಮಪ್ರೇಕ್ಷೀ ವಿಲೋಚನಃ ।
ನ ವಿರಜ್ಯತಿ ಕಲ್ಯಾಣೇ ಯಸ್ತ್ಯಜೇತ್ತಾದೃಶಂ ನರಮ್ ॥೧೪॥
ಪಾನಪೋ ದ್ವೇಷಣಃ ಕ್ರೋಧೀ ನಿರ್ಘೃಣಃ ಪರುಷಸ್ತಥಾ ।
ಪರೋಪತಾಪೀ ಮಿತ್ರಧ್ರುಕ್ತಥಾ ಪ್ರಾಣಿವಧೇ ರತಃ ॥೧೫॥
ಕೃತಘ್ನಶ್ಚಾಧಮೋ ಲೋಕೇ ನ ಸಂಧೇಯಃ ಕದಾಚನ ।
ಛಿದ್ರಾನ್ವೇಷೀ ಹ್ಯಸಂಧೇಯಃ ಸಂಧೇಯಾನಪಿ ಮೇ ಶೃಣು ॥೧೬॥

ಯಾವನು ಲೋಭಿಯಾಗಿರುವನೋ, ಕ್ರೂರಿಯಾಗಿರುವನೋ, ಧರ್ಮವನ್ನು ತ್ಯಜಿಸಿರುವನೋ, ಕಪಟಿಯಾಗಿರುವನೋ, ವಂಚಕನಾಗಿರುವನೋ, ಕ್ಷುದ್ರನಾಗಿರುವನೋ, ಪಾಪಕೃತ್ಯಗಳನ್ನು ಮಾಡುವುದರಲ್ಲಿಯೇ ಆಸಕ್ತನಾಗಿರುವನೋ, ಎಲ್ಲರನ್ನೂ ಸಂದೇಹಿಸುವನೋ, ಅಲಸನೋ (ಸೋಮಾರಿಯೋ,) ದೀರ್ಘಸೂತ್ರನೋ (ಬಹಳ ನಿಧಾನವಾಗಿ ಕಾರ್ಯಗಳನ್ನು ಮಾಡುವನೋ), ಕುಟಿಲಸ್ವಭಾವದವನೋ, ನಿಂದಿತನೋ, ಗುರುಪತ್ನಿಯ ಸಮಾಗಮವನ್ನು ಮಾಡುವನೋ, ಮಿತ್ರನಿಗೆ ಕಷ್ಟವು ಬಂದಾಗ ಪರಿತ್ಯಜಿಸಿ ಹೊರಟುಹೋಗುವನೋ, ದುಷ್ಟವಾದ ಮನಸ್ಸಿನಿಂದ ಕೂಡಿರುವನೋ, ನಾಚಿಕೆಯಿಲ್ಲದವನೋ, ಎಲ್ಲವನ್ನೂ ಪಾಪದೃಷ್ಟಿಯಿಂದಲೇ ನೋಡುವನೋ, ನಾಸ್ತಿಕನೋ, ವೇದಗಳನ್ನು ನಿಂದಿಸುವನೋ, ಇಂದ್ರಿಯಗಳ ಸ್ವೇಚ್ಛಾಪ್ರವರ್ತನೆಗೆ ಅವಕಾಶವನ್ನಿತ್ತು ಸ್ವಚ್ಛಂದದಿಂದ ಪ್ರಪಂಚದಲ್ಲಿ ವಿಹರಿಸುವನೋ, ಅನೃತವಾದಿಯೋ, ಎಲ್ಲರ ದ್ವೇಷಕ್ಕೂ ಪಾತ್ರನಾಗಿರುವನೋ, ಪ್ರತಿಜ್ಞಾನುಸಾರವಾಗಿ ನಡೆದುಕೊಳ್ಳುವುದಿಲ್ಲವೋ, ಚಾಡಿಕೋರನೋ, ಅಪವಿತ್ರವಾದ ಬುದ್ಧಿಯುಳ್ಳವನೋ, ಪಾಪಕಾರ್ಯಗಳನ್ನು ಮಾಡುವುದರಲ್ಲಿಯೇ ಸ್ಥಿರವಾದ ಬುದ್ಧಿಯುಳ್ಳವನೋ, ದುಷ್ಟವಾದ ಸ್ವಭಾವವುಳ್ಳವನೋ, ಮನಸ್ಸನ್ನು ವಶಪಡಿಸಿಕೊಳ್ಳದೇ ಇರುವನೋ, ನೃಶಂಸನೋ, ಧೂರ್ತನೋ (ಜೂಜುಕೋರನೋ), ಮಿತ್ರರಿಗೆ ದ್ರೋಹವನ್ನೆಸಗುವನೋ, ಯಾವಾಗಲೂ ಇತರರ ಸ್ವತ್ತನ್ನು ಅಪಹರಿಸುವುದರಲ್ಲಿಯೇ ಆಸಕ್ತಿಯುಳ್ಳವನೋ, ಯಥಾಶಕ್ತಿ ದಾನಪಡೆದುದರಿಂದ ಸಂತುಷ್ಟನಾಗಲಾರನೋ, ಮಂದವಾದ ಬುದ್ಧಿಯುಳ್ಳವನೋ, ಮಿತ್ರಹೃದಯದಲ್ಲಿ ಯಾವಾಗಲೂ ಅಧೈರ್ಯವನ್ನೇ ತುಂಬುವನೋ (ಮಿತ್ರನನ್ನು ಧೈರ್ಯಗೆಡಿಸುವನೋ–ಸಮಯದಲ್ಲಿ ಮಿತ್ರನಿಗೆ ಧೈರ್ಯವನ್ನು ಹೇಳುವುದಿಲ್ಲವೋ), ಕಾರಣವೇ ಇಲ್ಲದೇ ಕೋಪಗೊಳ್ಳಬಾರದ ಸ್ಥಳದಲ್ಲಿ ಕೋಪಗೊಳ್ಳುವನೋ, ಅಜಾಗರೂಕನೋ, ಅಕಸ್ಮಾತ್ತಾಗಿ ವಿರೋಧಿಯಾಗುವನೋ, ಒಳ್ಳೆಯದನ್ನೇ ಮಾಡುವ ಸ್ವಭಾವವುಳ್ಳ–ತಿಳಿಯದೇ ಅಲ್ಪಾಪರಾಧವನ್ನು ಮಾಡಿದ ಮಿತ್ರರನ್ನು ಪರಿತ್ಯಜಿಸುವನೋ, ಪಾಪಿಷ್ಠನೋ, ವಸ್ತುತಃ ಮಿತ್ರರನ್ನು ದ್ವೇಷಿಸುವನೇ ಆಗಿದ್ದು ತನ್ನ ಕಾರ್ಯವನ್ನು ಪೂರೈಸಿಕೊಳ್ಳುವವರೆಗೆ ಮಾತ್ರ ಮಿತ್ರತ್ವ

ವನ್ನು ಹೊಂದಿರುವನೋ, ಹೊರಗೆ ಮಾತ್ರ ಸುಮಧುರವಾದ ಮೈತ್ರಿಯ ಮಾತುಗಳನ್ನಾಡುತ್ತಾ ಆಂತರ್ಯದಲ್ಲಿ ಶತ್ರುಭಾವವನ್ನೇ ಇಟ್ಟುಕೊಂಡಿರುವನೋ, ಎಲ್ಲರನ್ನೂ ಕುಟಿಲದೃಷ್ಟಿಯಿಂದಲೇ ನೋಡುವನೋ, ವಿಕಾರವಾದ ಕಣ್ಣುಗಳುಳ್ಳವನೋ, ಯಾವಾಗಲೂ ಒಳ್ಳೆಯದನ್ನು ಮಾಡುವುದರಲ್ಲಿಯೇ ನಿರತನಾಗಿರುವ ಮಿತ್ರನನ್ನೂ ವ್ಯಾಜಾಂತರದಿಂದ ಪರಿತ್ಯಾಗಮಾಡುವನೋ, ಮದ್ಯಾಪಾಯಿಯೋ, ಎಲ್ಲರನ್ನೂ ದ್ವೇಷಿಸುವನೋ, ಯಾವಾಗಲೂ ಕ್ರೋಧವಶನಾಗಿಯೇ ಇರುವನೋ, ನಿರ್ದಯನೋ, ಕ್ರೂರಿಯೋ, ಇತರರನ್ನು ಯಾವಾಗಲೂ ಪರಿತಾಪಪಡಿಸುವುದರಲ್ಲಿಯೇ ಆಸಕ್ತನಾಗಿರುವನೋ, ಮಿತ್ರದ್ರೋಹಿಯೋ, ಪ್ರಾಣಿಗಳನ್ನು ಹಿಂಸಿಸುವುದರಲ್ಲಿ ಆಸಕ್ತನಾಗಿರುವನೋ, ಮಾಡಿದ ಉಪಕಾರವನ್ನು ಸ್ಮರಿಸದವನೋ, ನೀಚನೋ–ಅಂತಹವರೊಡನೆ ಯಾವುದೇ ಕಾರಣದಿಂದಲೂ ಸಂಧಿಯನ್ನು (ಮೈತ್ರಿಯನ್ನು) ಮಾಡಿಕೊಳ್ಳಬಾರದು. ಯಾರು ಇತರರಲ್ಲಿರುವ ನ್ಯೂನತೆಯನ್ನೇ ಯಾವಾಗಲೂ ಹುಡುಕುತ್ತಿರುವರೋ (ಛಿದ್ರಾನ್ವೇಷಿಗಳೋ)–ಅಂತಹವರೊಡನೆಯೂ ಮೈತ್ರಿಯನ್ನು ಬೆಳೆಸಬಾರದು.

ಯುಧಿಷ್ಠಿರ! ಮುಂದೆ ನಾನು ಯಾರೊಡನೆ ಸ್ನೇಹವನ್ನು ಮಾಡಿಕೊಳ್ಳಬಹುದು ಮತ್ತು ಮಿತ್ರತ್ವಕ್ಕೆ ಯಾರು ಯೋಗ್ಯರು?–ಎಂಬುದನ್ನು ವಿವರಿಸಿ ಹೇಳುತ್ತೇನೆ.

ಕುಲೀನಾ ವಾಕ್ಯಸಮ್ಪನ್ನಾ ಜ್ಞಾನವಿಜ್ಞಾನಕೋವಿದಾಃ ।
ರೂಪವನ್ತೋ ಗುಣೋಪೇತಾಸ್ತಥಾಲುಬ್ಧಾ ಜಿತಶ್ರಮಾಃ ॥೧೭॥

ಸನ್ಮಿತ್ರಾಶ್ಚ ಕೃತಜ್ಞಾಶ್ಚ ಸರ್ವಜ್ಞಾ ಲೋಭವರ್ಜಿತಾಃ ।
ಮಾಧುರ್ಯಗುಣಸಮ್ಪನ್ನಾಃ ಸತ್ಯಸಂಧಾ ಜಿತೇನ್ದ್ರಿಯಾಃ ॥೧೮॥

ವ್ಯಾಯಾಮಶೀಲಾಃ ಸತತಂ ಕುಲಪುತ್ರಾಃ ಕುಲೋದ್ವಹಾಃ ।
ದೋಷೈಃ ಪ್ರಮುಕ್ತಾಃ ಪ್ರಥಿತಾಸ್ತೇ ಗ್ರಾಹ್ಯಾಃ ಪಾರ್ಥಿವೈರ್ನರಾಃ ॥೧೯॥

ಯಾರು ಸತ್ಕುಲಪ್ರಸೂತರೋ, ವಾಕ್ಪಟುಗಳೋ, ಜ್ಞಾನ-ವಿಜ್ಞಾನ ಕುಶಲರೋ, ರೂಪವಂತರೋ, ಗುಣವಂತರೋ, ಅಲೋಭಿಗಳೋ, ಕಾರ್ಯ

ಮಾಡುವುದರಲ್ಲಿ ಆಲಸ್ಯವಿಲ್ಲದವರೋ, ಸನ್ಮಿತ್ರರನ್ನು ಹೊಂದಿರುವರೋ, ಮಾಡಿದ ಉಪಕಾರವು ಅಲ್ಪವೇ ಆಗಿದ್ದರೂ ಪದೇ-ಪದೇ ಸ್ಮರಿಸುವರೋ, ಲೋಕವ್ಯವಹಾರಗಳನ್ನು ಸಂಪೂರ್ಣವಾಗಿ ತಿಳಿದಿರುವರೋ, ಲೋಭವನ್ನು ಸಂಪೂರ್ಣವಾಗಿ ಪರಿತ್ಯಜಿಸಿರುವರೋ, ಮಧುರಸ್ವಭಾವದವರೋ, ಸತ್ಯ ನಿಷ್ಠರೋ, ಜಿತೇಂದ್ರಿಯರೋ, ಸದಾ ಕಾರ್ಯದಲ್ಲಿಯೇ ಆಸಕ್ತರಾಗಿರು ವರೋ, ಸತ್ಕುಲಪ್ರಸೂತರೋ, ತಮ್ಮ ಕುಲದ (ಸಂಸಾರದ) ಭಾರವನ್ನು ನಿರ್ವಹಿಸುವುದರಲ್ಲಿ ಸಮರ್ಥರೋ, ದೋಷಶೂನ್ಯರೋ, ಲೋಕವಿಖ್ಯಾ ತರೋ–ಅಂತಹವರನ್ನು ರಾಜನಾದವನು ತನ್ನ ಮಿತ್ರರನ್ನಾಗಿ ಮಾಡಿಕೊಳ್ಳ ಬೇಕು.

ಯಥಾಶಕ್ತಿ ಸಮಾಚಾರಾಃ ಸನ್ತುಷ್ಯನ್ತಿ ಹಿ ಪ್ರಭೋ ।
ನಾಸ್ಥಾನೇ ಕ್ರೋಧವನ್ತಶ್ಚ ನ ಚಾಕಸ್ಮಾದ್ವಿರಾಗಿಣಃ ।
ವಿರಕ್ತಾಶ್ಚ ನ ದುಷ್ಯನ್ತಿ ಮನಸಾಪ್ಯರ್ಥಕೋವಿದಾಃ ॥೨೦॥

ಆತ್ಮಾನಂ ಪೀಡಯಿತ್ವಾಪಿ ಸುಹೃತ್ಕಾರ್ಯಪರಾಯಣಾಃ ।
ವಿರಜನ್ತಿ ನ ಮಿತ್ರೇಭ್ಯೋ ವಾಸೋ ರಕ್ತಮಿವಾವಿಕಮ್ ॥೨೧॥

ಕ್ರೋಧಾಚ್ಚ ಲೋಭಮೋಹಾಭ್ಯಾಂ ನಾನರ್ಥೇ ಯುವತೀಷು ಚ ।
ನ ದರ್ಶಯನ್ತಿ ಸುಹೃದೋ ವಿಶ್ವಸ್ತಾ ಧರ್ಮವತ್ಸಲಾಃ ॥೨೨॥

ಲೋಷ್ಟಕಾಞ್ಚನತುಲ್ಯಾರ್ಥಾಃ ಸುಹೃತ್ಸು ದೃಢಬುದ್ಧಯಃ ।
ಯೇ ಚರನ್ತ್ಯಭಿಮಾನಾನಿ ಸೃಷ್ಟಾರ್ಥಮನುಷಙ್ಗಿಣಃ ॥೨೩॥

ಸಂಗೃಹ್ಣನ್ತಃ ಪರಿಜನಂ ಸ್ವಾಮ್ಯರ್ಥಪರಮಾಃ ಸದಾ ।
ಈದೃಶೈಃ ಪುರುಷಶ್ರೇಷ್ಠೈರ್ಯಃ ಸಂಧಿಂ ಕುರುತೇ ನೃಪಃ ।
ತಸ್ಯ ವಿಸ್ತೀರ್ಯತೇ ರಾಜ್ಯಂ ಜ್ಯೋತ್ಸ್ನಾ ಗ್ರಹಪತೇರಿವ ॥೨೪॥

ಯುಧಿಷ್ಠಿರ! ಯಾರು ತಮ್ಮ ಶಕ್ತಿಗೆ ಅನುಸಾರವಾಗಿ ಕರ್ತವ್ಯಗಳನ್ನು ಪರಿಪಾಲಿಸುವರೋ, ಯಾವಾಗಲೂ ಸಂತುಷ್ಟರಾಗಿರುವರೋ, ಕೋಪಗೊಳ್ಳಬಾರದ ಸ್ಥಳದಲ್ಲಿ ಯಾರು ಕೋಪಗೊಳ್ಳುವುದಿಲ್ಲವೋ (ಕಾರಣವಿಲ್ಲದೆ ಕೋಪಮಾಡಿಕೊಳ್ಳುವುದಿಲ್ಲವೋ,) ಅಕಸ್ಮಾತ್ತಾಗಿ ಸಂಭವಿ ಸುವ ದೋಷದಿಂದ ನಿಷ್ಕಾರಣವಾಗಿ ಸ್ನೇಹವನ್ನು ಪರಿತ್ಯಾಗಮಾಡುವು

ದಿಲ್ಲವೋ, ಒಬ್ಬನ ವಿಷಯದಲ್ಲಿ ಔದಾಸೀನ್ಯವಿದ್ದರೂ ಅವನಿಗೆ ಕೇಡನ್ನು ಮಾಡುವ ಅಭಿಪ್ರಾಯದಿಂದಿರುವುದಿಲ್ಲವೋ, ಅರ್ಥತತ್ತ್ವವನ್ನು ಚೆನ್ನಾಗಿ ತಿಳಿದಿರುವರೋ, ತಮಗೆ ಕಷ್ಟವನ್ನು ತಂದುಕೊಂಡಾದರೂ ಸುಹೃದರ ಕಾರ್ಯಸಿದ್ಧಿಗಾಗಿ ಪರಿಶ್ರಮಿಸುವರೋ, ಕೆಂಪಾಗಿರುವ ಉಣ್ಣೆಬಟ್ಟೆಯು ಕೆಂಪುಬಣ್ಣವನ್ನು ಕಳೆದುಕೊಳ್ಳದಂತೆ–ಯಾವುದೇ ಕಾರಣದಿಂದಲೂ ಮಿತ್ರತ್ವವನ್ನು ಕಳೆದುಕೊಳ್ಳುವುದಿಲ್ಲವೋ, ಕ್ರೋಧವಶರಾಗಿ ಮಿತ್ರನಿಗೆ ಅನರ್ಥವನ್ನುಂಟುಮಾಡಲು (ಕೇಡುಮಾಡಲು) ಪ್ರವೃತ್ತರಾಗುವುದಿಲ್ಲವೋ, ಲೋಭ-ಮೋಹವಶರಾಗಿ ಮಿತ್ರರ ಯುವತಿಯರಲ್ಲಿ ಆಸಕ್ತರಾಗುವುದಿಲ್ಲವೋ, ಮಿತ್ರರಲ್ಲಿ ನಂಬಿಕೆಯನ್ನಿಟ್ಟಿರುವರೋ, ಧರ್ಮವತ್ಸಲರಾಗಿಯೂ ಇರುವರೋ, ಯಾರ ದೃಷ್ಟಿಯಲ್ಲಿ ಮಣ್ಣುಹೆಂಟೆ ಮತ್ತು ಸುವರ್ಣಗಳು ಸಮಾನವೋ, ಸುಹೃದನ ವಿಷಯದಲ್ಲಿ ಸ್ಥಿರವಾದ ಬುದ್ಧಿಯು ಯಾರಿಗಿರುವುದೋ, ಯಾರು ಪ್ರಮಾಣಭೂತವಾದ ಶಾಸ್ತ್ರಗಳಿಗೆ ಅನುಸಾರವಾಗಿ ನಡೆಯುವರೋ, ದೈವಾಯತ್ತವಾದ ಧನದಿಂದಲೇ ತೃಪ್ತರಾಗಿರುವರೋ, ಪರಿಜನರನ್ನು ಸಂಗ್ರಹಿಸುತ್ತಾ ಸುಹೃದರ ಅಥವಾ ಪ್ರಭುವಿನ ಅರ್ಥಸಿದ್ಧಿಯಲ್ಲಿಯೇ ನಿರತರಾಗಿರುವರೋ–ಅಂತಹ ಶ್ರೇಷ್ಠಪುರುಷರೊಡನೆ ರಾಜನು ಸ್ನೇಹವನ್ನು ಬೆಳೆಸಬೇಕು. ಅಂತಹ ರಾಜನ ರಾಜ್ಯವು–ಶುಕ್ಲಪಕ್ಷದ ಚಂದ್ರನ ಬೆಳದಿಂಗಳು ದಿನ-ದಿನಕ್ಕೂ ವೃದ್ಧಿಹೊಂದುವಂತೆ ಅಭಿವೃದ್ಧಿ ಹೊಂದುತ್ತದೆ.

ಶಾಸ್ತ್ರನಿತ್ಯಾ ಜಿತಕ್ರೋಧಾ ಬಲವನ್ತೋ ರಣೇ ಸದಾ ।
ಜನ್ಮಶೀಲಗುಣೋಪೇತಾಃ ಸಂಧೇಯಾಃ ಪುರುಷೋತ್ತಮಾಃ ॥೨೬॥

ಯಾರು ಪ್ರತಿನಿತ್ಯವೂ ವೇದ-ಶಾಸ್ತ್ರಗಳನ್ನು ಅಧ್ಯಯನಮಾಡುವರೋ, ಕೋಪವನ್ನು ಜಯಿಸಿರುವರೋ, ಯುದ್ಧದಲ್ಲಿ ಪ್ರಬಲವಾಗಿರುವರೋ, ಕುಲ-ಶೀಲ-ಗುಣಸಂಪನ್ನರಾಗಿರುವರೋ–ಅಂತಹ ಪುರುಷಶ್ರೇಷ್ಠರೊಡನೆ ರಾಜನು ಸ್ನೇಹವನ್ನು ಮಾಡಬೇಕು.

ಯೇ ಚ ದೋಷಸಮಾಯುಕ್ತಾ ನರಾಃ ಪ್ರೋಕ್ತಾ ಮಯಾನಘ ।
ತೇಷಾಮಪ್ಯಧಮಾ ರಾಜನ್ಕೃತಘ್ನಾ ಮಿತ್ರಘಾತಕಾಃ ।
ತ್ಯಕ್ತವ್ಯಾಸ್ತು ದುರಾಚಾರಾಃ ಸರ್ವೇಷಾಮಿತಿ ನಿಶ್ಚಯಃ ॥೨೭॥

ಅನಘನೇ! ನಾನು ಹಿಂದೆ ಹೇಳಿರುವ ದೋಷಿಗಳಿಗಿಂತಲೂ ಕೃತಘ್ನರು (ಮಾಡಿದ ಉಪಕಾರವನ್ನು ಸ್ಮರಿಸದೇ ಇರುವವರು) ಅಧಮರೆನಿಸಿಕೊಳ್ಳುತ್ತಾರೆ. ಕೃತಘ್ನರು ಮಿತ್ರರನ್ನು ಸಂಹರಿಸಲೂ ಹೇಸುವುದಿಲ್ಲ. ಅಂತಹ ದುರಾಚಾರಿಗಳಾದ ನರಾಧಮರನ್ನು ಎಲ್ಲರೂ ಪರಿತ್ಯಾಗಮಾಡಬೇಕು. ಇದು ಧರ್ಮದ ನಿಶ್ಚಯವಾಗಿದೆ."

ಯುಧಿಷ್ಠಿರನು ಹೇಳುತ್ತಾನೆ :

ವಿಸ್ತರೇಣಾಥ ಸಮ್ಬನ್ಧಂ ಶ್ರೋತುಮಿಚ್ಛಾಮಿ ತತ್ತ್ವತಃ ।
ಮಿತ್ರದ್ರೋಹೀ ಕೃತಘ್ನಶ್ಚ ಯಃ ಪ್ರೋಕ್ತಸ್ತದ್ವದಸ್ವ ಮೇ ॥೨೮॥

"ಪಿತಾಮಹ! ನೀನು ಮಿತ್ರದ್ರೋಹಿಗಳ ಮತ್ತು ಕೃತಘ್ನರ ವಿಷಯವಾಗಿ ಹೇಳಿರುವೆ. ಅವರ ಯಥಾರ್ಥವಾದ ಇತಿಹಾಸವನ್ನು ನಾನು ವಿಸ್ತಾರವಾಗಿಯೇ ಕೇಳುವ ಇಚ್ಛೆಯಿಂದಿದ್ದೇನೆ. ದಯಮಾಡಿ ಹೇಳು."

ಭೀಷ್ಮನು ಹೇಳುತ್ತಾನೆ :

"ನರೇಶ್ವರ! ನಾನು ಸಂತೋಷದಿಂದಲೇ ನಿನಗೆ ಹಿಂದಿನ ಒಂದು ಇತಿಹಾಸವನ್ನು ಹೇಳುತ್ತೇನೆ. ಆ ಘಟನೆಯು ಉತ್ತರದಿಕ್ಕಿನಲ್ಲಿನ ಒಂದು ಮ್ಲೇಚ್ಛದೇಶದಲ್ಲಿ ನಡೆಯಿತು. ಮಧ್ಯದೇಶಕ್ಕೆ ಸೇರಿದ ಗೌತಮನೆಂಬ ಬ್ರಾಹ್ಮಣನೊಬ್ಬನಿದ್ದನು. ಬ್ರಾಹ್ಮಣನಾಗಿದ್ದರೂ ಅವನು ವೇದಾಧ್ಯಯನವನ್ನು ಮಾಡಿರಲಿಲ್ಲ. ಸಂಪದ್ಭರಿತವಾಗಿದ್ದ ಗ್ರಾಮವೊಂದನ್ನು ನೋಡಿ ಭಿಕ್ಷೆಬೇಡುವುದಕ್ಕಾಗಿ ಆ ಗ್ರಾಮವನ್ನು ಪ್ರವೇಶಿಸಿದನು. ಆ ಗ್ರಾಮದಲ್ಲಿ ಧನವಂತನಾದ ಒಬ್ಬ ದರೋಡೆಕಾರನಿದ್ದನು. ಅವನು ಎಲ್ಲ ವರ್ಣಗಳ ವಿಶೇಷಗಳನ್ನೂ (ಧರ್ಮಗಳನ್ನೂ) ತಿಳಿದವನಾಗಿದ್ದನು. ಬ್ರಾಹ್ಮಣಪ್ರಿಯನಾಗಿದ್ದನು. ಸತ್ಯಸಂಧನಾಗಿದ್ದನು. ದಾನಮಾಡುವುದರಲ್ಲಿಯೇ ಸದಾ ನಿರತನಾಗಿದ್ದನು. ಬ್ರಾಹ್ಮಣನು ಆ ಧನಿಕದಸ್ಯುವಿನ ಮನೆಗೆ ಹೋಗಿ ಭಿಕ್ಷೆಯನ್ನು ಯಾಚಿಸಿದನು. ಬ್ರಾಹ್ಮಣಪ್ರಿಯನಾದ ಆ ದರೋಡೆಕಾರನು ಭಿಕ್ಷೆಬೇಡಿದ ಬ್ರಾಹ್ಮಣನಿಗೆ ವಾಸಮಾಡಲು ಒಂದು ಮನೆಯನ್ನೂ–ವರ್ಷಕ್ಕೆ ಸಾಕಾಗುವಷ್ಟು ಆಹಾರಪದಾರ್ಥಗಳನ್ನೂ ಒದಗಿಸಿಕೊಟ್ಟನು. ಬ್ರಾಹ್ಮಣನುಡಲು ಯೋಗ್ಯವಾದ ನೂತನವಸ್ತ್ರಗಳನ್ನೂ ಕೊಟ್ಟುದಲ್ಲದೇ ಅವನ

ಸೇವೆಗಾಗಿ ಪತಿಯಿಂದ ವಿಹೀನಳಾಗಿದ್ದ ಯುವತಿಯಾದ ದಾಸಿಯೊಬ್ಬಳನ್ನೂ ನಿಯಮಿಸಿದನು.

ದರೋಡೆಕಾರನಿಂದ ಆ ಎಲ್ಲ ವಸ್ತುಗಳನ್ನೂ ಪಡೆದ ಗೌತಮನು ಪರಮಹೃಷ್ಟನಾದನು. ಸುಂದರವಾದ ಗೃಹದಲ್ಲಿ ಗೌತಮನು ದಾಸಿಯೊಡನೆ ಆನಂದದಿಂದ ಕಾಲಕಳೆಯುತ್ತಿದ್ದನು. ದಾಸಿಯ ಕುಟುಂಬಕ್ಕೂ ಗೌತಮನು ಅಲ್ಪ-ಸ್ವಲ್ಪ ಸಹಾಯವನ್ನು ಮಾಡತೊಡಗಿದನು. ಹೀಗೆ ಆ ಬ್ರಾಹ್ಮಣನು ಶಬರಗ್ರಾಮದಲ್ಲಿ ಅನೇಕವರ್ಷಗಳವರೆಗೆ ವಾಸವಾಗಿದ್ದನು. ವರ್ಷಗಳು ಕಳೆದಂತೆಲ್ಲಾ ಬೇಡರ ಎಲ್ಲಾ ಗುಣ-ಕರ್ಮಗಳೇ ಆ ಬ್ರಾಹ್ಮಣನಲ್ಲಿ ಮೈಗೂಡಿಕೊಂಡುವು. ಬಾಣಬಿಡುವುದನ್ನೂ, ಲಕ್ಷ್ಯವನ್ನು ಭೇದಿಸುವುದನ್ನೂ ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಿದನು. ಬೇಡರಂತೆಯೇ ಗೌತಮನೂ ಪ್ರತಿನಿತ್ಯವೂ ಅರಣ್ಯಕ್ಕೆ ಹೋಗಿ ಎಲ್ಲ ಕಡೆಗಳಲ್ಲಿಯೂ ಸುತ್ತಾಡಿ ಹಂಸಪಕ್ಷಿಗಳನ್ನು ಬೇಟೆಯಾಡಿ ತರುತ್ತಿದ್ದನು. ಹೀಗೆ ಅವನು ದಿನಗಳು ಕಳೆದಂತೆ ಪ್ರಾಣಿಹಿಂಸೆಯಲ್ಲಿ ಪ್ರವೀಣನಾದನು. ನಿರಂತರವಾಗಿ ಪ್ರಾಣಿವಧೆಯಲ್ಲಿಯೇ ನಿರತನಾಗಿರುತ್ತಿದ್ದ ಗೌತಮನು ದಯಾಶೂನ್ಯನಾಗಿ ಅತ್ಯಂತಕ್ರೂರಿಯೂ ಆದನು. ದಸ್ಯುಗಳ ಆ ಗ್ರಾಮದಲ್ಲಿ ಸುಖದಿಂದ ವಾಸಮಾಡುತ್ತಿದ್ದ ಗೌತಮನು ಅವರ ನಿಕಟವಾದ ಸಹವಾಸದಿಂದಾಗಿ ಅವರಿಗೆ ಸಮಾನನೇ ಆದನು. ಅನುದಿನವೂ ಕಾಡಿಗೆ ಹೋಗಿ ಅನೇಕಾನೇಕ ಪಕ್ಷಿಗಳನ್ನು ಕೊಲ್ಲುತ್ತಿದ್ದ ಗೌತಮನು ಹಲವಾರು ತಿಂಗಳುಗಳನ್ನು ಹಾಗೆಯೇ ಕಳೆದನು.

ಹೀಗೆಯೇ ಇರುತ್ತಿರಲಾಗಿ ಒಮ್ಮೆ ಮತ್ತೊಬ್ಬ ಬ್ರಾಹ್ಮಣನು ಅದೇ ದಸ್ಯುವಿನ ಗ್ರಾಮಕ್ಕೆ ಆಗಮಿಸಿದನು. ಅವನು ಜಟೆಯನ್ನು ಬಿಟ್ಟಿದ್ದನು. ನಾರುಬಟ್ಟೆಯನ್ನೂ–ಕೃಷ್ಣಾಜಿನವನ್ನೂ ಧರಿಸಿದ್ದನು. ವೇದಾಧ್ಯಯನ ಪರಾಯಣನಾಗಿದ್ದನು. ಶುಚಿಯಾಗಿಯೂ, ವಿನೀತನಾಗಿಯೂ, ನಿಯತ ವಾದ ಆಹಾರವುಳ್ಳವನಾಗಿಯೂ, ಬ್ರಾಹ್ಮಣಪ್ರಿಯನಾಗಿಯೂ, ವೇದ-ವೇದಾಂಗಪಾರಂಗತನಾಗಿಯೂ ಇದ್ದನು. ಆ ಬ್ರಹ್ಮಚಾರಿಯೂ ಗೌತಮ ನಂತೆಯೇ ಮಧ್ಯದೇಶದವನೇ ಆಗಿದ್ದು ಗೌತಮನಿಗೆ ಪರಮಪ್ರಿಯನಾದ ಮಿತ್ರನೂ ಆಗಿದ್ದನು. ಆ ಬ್ರಹ್ಮಚಾರಿಯೇ ಗೌತಮನು ವಾಸಮಾಡು

ತ್ತಿದ್ದ ದಸ್ಯುಗ್ರಾಮಕ್ಕೇ ಕಾಲಕರ್ಮಸಂಯೋಗದಿಂದ ಆಗಮಿಸಿದನು. ಬ್ರಹ್ಮಚಾರಿಯು ಶೂದ್ರಾನ್ನವನ್ನು ತಿನ್ನುತ್ತಿರಲಿಲ್ಲ. ದಸ್ಯುಗಳಿಂದಲೇ ವ್ಯಾಪ್ತವಾಗಿದ್ದ ಆ ಗ್ರಾಮದಲ್ಲಿ ಬ್ರಾಹ್ಮಣರ ಮನೆಯನ್ನು ಹುಡುಕಿಕೊಂಡು ಎಲ್ಲ ಕಡೆಗಳಲ್ಲಿಯೂ ತಿರುಗಾಡಿದನು. ಆ ಗ್ರಾಮದಲ್ಲಿ ಒಂದೇ ಒಂದು ಬ್ರಾಹ್ಮಣರ ಮನೆಯಿದ್ದಿತು. ಅದೇ ಗೌತಮನ ಮನೆ. ಅವರಿವರನ್ನು ಕೇಳಿಕೊಂಡು ಬ್ರಾಹ್ಮಣಶ್ರೇಷ್ಠನಾದ ಬ್ರಹ್ಮಚಾರಿಯು ಗೌತಮನ ಮನೆಯನ್ನು ಪ್ರವೇಶಿಸಿದನು. ಆ ವೇಳೆಗೆ ಸರಿಯಾಗಿ ಗೌತಮನೂ ಪಕ್ಷಿಗಳ ಬೇಟೆಯನ್ನು ಮುಗಿಸಿಕೊಂಡು ಮನೆಗೆ ಬಂದಿದ್ದನು. ಪೂರ್ವಮಿತ್ರರು ಒಬ್ಬರನ್ನೊಬ್ಬರು ಭೇಟಿಯಾದರು. ಆ ಸಮಯದಲ್ಲಿ ಗೌತಮನು ಬೇಟೆಯಾಡಿ ಕೊಂದಿದ್ದ ಹಂಸಪಕ್ಷಿಗಳನ್ನು ಹೆಗಲಮೇಲೆ ಹೊತ್ತಿದ್ದನು. ಕೈಯಲ್ಲಿ ಧನುಸ್ಸನ್ನೂ ಅಂಬನ್ನೂ ಹಿಡಿದಿದ್ದನು. ಶರೀರವೆಲ್ಲವೂ ಹಂಸಪಕ್ಷಿಗಳ ರಕ್ತದಿಂದ ತೋಯ್ದುಹೋಗಿದ್ದಿತು. ಮನೆಯ ಬಾಗಿಲಿಗೆ ಬಂದ ಗೌತಮನು ನರಭಕ್ಷಕನಾದ ರಾಕ್ಷಸನಂತೆಯೇ ಕಾಣುತ್ತಿದ್ದನು. ಬ್ರಾಹ್ಮಣತ್ವದಿಂದ ಸಂಪೂರ್ಣವಾಗಿ ಭ್ರಷ್ಟನಾಗಿದ್ದನು. ಅಂತಹ ಅವಸ್ಥೆಯಲ್ಲಿ ಮನೆಗೆ ಆಗಮಿಸಿದ ಗೌತಮನನ್ನು ಬ್ರಹ್ಮಚಾರಿಯು ಹಿಂದಿನ ತನ್ನ ಸ್ನೇಹಿತನೇ ಎಂದು ಗುರುತಿಸಿದನು. ಬಳಿಕ ಬ್ರಹ್ಮಚಾರಿಯು ಬಹಳವಾಗಿ ನಾಚುತ್ತಾ ಗೌತಮ ನೊಡನೆ ಈ ಮಾತನ್ನು ಹೇಳಿದನು :

ಕಿಮಿದಂ ಕುರುಷೇ ಮೋಹಾದ್ವಿಪ್ರಸ್ತ್ವಂ ಹಿ ಕುಲೋದ್ವಹಃ ।
ಮಧ್ಯದೇಶಪರಿಜ್ಞಾತೋ ದಸ್ಯುಭಾವಂ ಗತಃ ಕಥಮ್ ॥೪೬॥

"ಅಯ್ಯೋ ಬ್ರಾಹ್ಮಣನೇ! ಮೋಹಪರವಶನಾಗಿ ನೀನೆಂತಹ ಅಕಾರ್ಯವನ್ನು ಮಾಡುತ್ತಿರುವೆ? ಮಧ್ಯದೇಶದ ವಿಖ್ಯಾತನಾದ ಕುಲೀನ ಬ್ರಾಹ್ಮಣವಂಶಜನು ನೀನು. ಅಂತಹ ನೀನು ಈ ದಸ್ಯುಭಾವವನ್ನು ಹೊಂದಿದುದು ಹೇಗೆ?

ಪೂರ್ವಾನ್ಸ್ಮರ ದ್ವಿಜ ಜ್ಞಾತೀನ್ಪ್ರಖ್ಯಾತಾನ್ವೇದಪಾರಗಾನ್ ।
ತೇಷಾಂ ವಂಶೇಽಭಿಜಾತಸ್ತ್ವಮೀದೃಶಃ ಕುಲಪಾಂಸನಃ ॥೪೭॥

ದ್ವಿಜನೇ! ನೀನು ಸುವಿಖ್ಯಾತರಾಗಿದ್ದ, ವೇದ-ವೇದಾಂಗಪಾರಂಗತ

ರಾಗಿದ್ದ ನಿನ್ನ ಪೂರ್ವಜರನ್ನು ಸ್ಮರಿಸಿಕೋ. ಅವರ ಆ ಮಹಾವಂಶದಲ್ಲಿ ಹುಟ್ಟಿರುವ ನೀನು ಇಂತಹ ದಸ್ಯುಕಾರ್ಯದಲ್ಲಿ ಪ್ರವೃತ್ತನಾಗಿ ನಿನ್ನ ಕುಲಕ್ಕೇ ಕಳಂಕಪ್ರಾಯನಾಗಿರುವೆಯಲ್ಲವೇ ?

ಅವಬುಧ್ಯಾತ್ಮನಾತ್ಮಾನಂ ಸತ್ತ್ವಂ ಶೀಲಂ ಶ್ರುತಂ ದಮಮ್ ।
ಅನುಕ್ರೋಶಂ ಚ ಸಂಸ್ಮೃತ್ಯ ತ್ಯಜ ವಾಸಮಿಮಂ ದ್ವಿಜ ॥೪೮॥

ದ್ವಿಜನೇ! ಈಗಲಾದರೂ ನೀನು ಯಾರೆಂಬುದನ್ನು ಮನಗಾಣು. ನೀನು ಬ್ರಾಹ್ಮಣನಾಗಿರುವೆ. ಆದುದರಿಂದ ಬ್ರಾಹ್ಮಣೋಚಿತವಾದ ಸತ್ತ್ವ, ಶೀಲ, ಶಾಸ್ತ್ರಜ್ಞಾನ, ಸಂಯಮ ಮತ್ತು ದಯಾಭಾವಗಳನ್ನು ಸ್ಮರಿಸಿಕೊಂಡು ಈ ಕ್ಷಣದಲ್ಲಿಯೇ ಈ ಮನೆಯನ್ನು ತ್ಯಾಗಮಾಡು.”

ಯುಧಿಷ್ಠಿರ! ಹಿತೈಷಿಯಾದ ಮತ್ತು ಸುಹೃದನಾದ ಬ್ರಹ್ಮಚಾರಿಯು ಹೇಳಿದುದನ್ನು ಕೇಳಿ ಗೌತಮನು ಮನಸ್ಸಿನಲ್ಲಿಯೇ ನಿರ್ಧಾರವೊಂದನ್ನು ಮಾಡಿ ಅತ್ಯಂತದುಃಖಪೀಡಿತನಾದವನೋ ಎಂಬಂತೆ ತೋರ್ಪಡಿಸಿಕೊಳ್ಳುತ್ತಾ ಬ್ರಹ್ಮಚಾರಿಯೊಡನೆ ಹೇಳಿದನು :

ನಿರ್ಧನೋಽಸ್ಮಿ ದ್ವಿಜಶ್ರೇಷ್ಠ ನಾಪಿ ವೇದವಿದಪ್ಯಹಮ್ ।
ವಿತ್ತಾರ್ಥಮಿಹ ಸಮ್ಪ್ರಾಪ್ತಂ ವಿದ್ಧಿ ಮಾಂ ದ್ವಿಜಸತ್ತಮ ॥೫೦॥

“ದ್ವಿಜಶ್ರೇಷ್ಠನೇ! ನಾನು ಅತ್ಯಂತದರಿದ್ರನಾಗಿದ್ದೇನೆ. ನಿನ್ನಂತೆ ವೇದವನ್ನೂ ಅಧ್ಯಯನಮಾಡಲಿಲ್ಲ. ಧನವನ್ನು ಸಂಪಾದಿಸುವ ಸಲುವಾಗಿ ನಾನು ಇಲ್ಲಿಗೆ ಬಂದಿರುವೆನೆಂಬುದನ್ನು ನಿನಗೆ ತಿಳಿಸಬಯಸುತ್ತೇನೆ.

ತ್ವದ್ದರ್ಶನಾತ್ತು ವಿಪ್ರೇನ್ದ್ರ ಕೃತಾರ್ಥೋಽಸ್ಮ್ಯದ್ಯ ವೈ ದ್ವಿಜ ।
ಆವಾಂ ಹಿ ಸಹ ಯಾಸ್ಯಾವಃ ಶ್ವೋ ವಸಸ್ವಾದ್ಯ ಶರ್ವರೀಮ್ ॥೫೧॥

ವಿಪ್ರಶ್ರೇಷ್ಠನೇ! ನಿನ್ನ ದರ್ಶನದಿಂದಾಗಿ ನಾನು ಕೃತಾರ್ಥನಾಗಿದ್ದೇನೆ. ನಾಳೆಯೇ ನಾವಿಬ್ಬರೂ ಇಲ್ಲಿಂದ ಹೊರಟುಹೋಗೋಣ. ಈ ರಾತ್ರಿಯಲ್ಲಿ ನೀನು ಈ ನನ್ನ ಮನೆಯಲ್ಲಿಯೇ ತಂಗಿರು.”

ಯುಧಿಷ್ಠಿರ! ಬ್ರಹ್ಮಚಾರಿಯು ಬಹಳ ದಯಾಳುವಾಗಿದ್ದನು. ಗೌತಮನ ಅನುರೋಧದಿಂದಾಗಿ ಆ ರಾತ್ರಿಯನ್ನು ಅವನ ಮನೆಯಲ್ಲಿಯೇ ಕಳೆಯಲು ಬ್ರಹ್ಮಚಾರಿಯು ಒಪ್ಪಿದನು. ಆದರೆ ಅಲ್ಲಿದ್ದ ಯಾವ ಪದಾರ್ಥ

ವನ್ನೂ ಬ್ರಹ್ಮಚಾರಿಯು ಮುಟ್ಟಲಿಲ್ಲ. ಬ್ರಹ್ಮಚಾರಿಯೂ ಬಹಳವಾಗಿ ಹಸಿದಿದ್ದನು. ಗೌತಮನೂ ಬ್ರಹ್ಮಚಾರಿಯನ್ನು ಊಟಮಾಡುವಂತೆ ನಯ-ವಿನಯಗಳಿಂದ ಬಹಳವಾಗಿ ಪ್ರಾರ್ಥಿಸಿದರೂ ಬ್ರಹ್ಮಚಾರಿಯು ಗೌತಮನ ಮನೆಯಲ್ಲಿ ಭೋಜನಮಾಡಲು ಸಮ್ಮತಿಸಲಿಲ್ಲ."

೧೬೮ನೆಯ ಅಧ್ಯಾಯವು ಮುಗಿಯಿತು.

೧೬೯ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಸಮುದ್ರದ ಕಡೆಗೆ ಗೌತಮನ ಪ್ರಯಾಣ : ಸಾಯಂಕಾಲ ರಾಜಧರ್ಮವೆಂಬ ಬಕಪಕ್ಷಿಯ ನಿವಾಸಕ್ಕೆ ಆಗಮನ

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ರಾತ್ರಿಯು ಕಳೆದು ಬೆಳಗಾಗುತ್ತಲೇ ಬ್ರಹ್ಮಚಾರಿಯು ತನ್ನ ಮಾರ್ಗವನ್ನು ಹಿಡಿದು ಹೊರಟುಹೋದನಂತರ ಗೌತಮನೂ ಮನೆಯನ್ನು ಬಿಟ್ಟು ಸಮುದ್ರದ ಕಡೆಗೆ ಪ್ರಯಾಣಮಾಡಿದನು. ಹಾಗೆ ಪ್ರಯಾಣಮಾಡುತ್ತಿದ್ದಾಗ ಸಮುದ್ರದ ಸಮೀಪದಲ್ಲಿ ವ್ಯಾಪಾರಿಗಳಾದ ಅನೇಕವೈಶ್ಯರು ತಾನು ಹೋಗುತ್ತಿದ್ದ ಹಾದಿಯಲ್ಲಿಯೇ ಇದ್ದುದನ್ನು ಗೌತಮನು ನೋಡಿದನು. ಗೌತಮನೂ ವರ್ತಕರ ಸಮೂಹದೊಡನೆ ಸೇರಿಕೊಂಡು ಪ್ರಯಾಣಮಾಡಿದನು. ಸಾಗರದ ಕಡೆಗೆ ವೈಶ್ಯರ ಆ ಸಮೂಹವು ಬಹಳ ದೂರದವರೆಗೆ ಹೋದನಂತರ ಒಂದು ಪರ್ವತದ ತಪ್ಪಲಿನಲ್ಲಿ ವಿಶ್ರಮಿಸಿಕೊಳ್ಳಲು ಉಳಿದುಕೊಂಡಿತು. ಅದೇ ಸಮಯಕ್ಕೆ ಸರಿಯಾಗಿ ಮದಿಸಿದ ಆನೆಯೊಂದು ಅವರ ಮೇಲೆ ನುಗ್ಗಿ ಸಮೂಹದಲ್ಲಿದ್ದ ಅನೇಕ ವೈಶ್ಯರನ್ನು ಧ್ವಂಸಮಾಡಿಬಿಟ್ಟಿತು. ಆದರೆ ಆ ಸಮೂಹದಲ್ಲಿಯೇ ಇದ್ದ ಗೌತಮನು ಮಾತ್ರ ಯಾವುದೋ ರೀತಿಯಲ್ಲಿ ಆನೆಯ ಆಕ್ರಮಣದಿಂದ ತಪ್ಪಿಸಿಕೊಂಡನು. ಆದರೂ ಮುಂದೇನು ಮಾಡಬೇಕೆಂಬುದು ಅವನಿಗೆ ತಿಳಿಯದೇ ಹೋಯಿತು. ಅಲ್ಲಿಯೇ ನಿಲ್ಲಲಂತೂ ಸಾಧ್ಯವೇ ಇರಲಿಲ್ಲ. ಹೇಗಾದರೂ ಮಾಡಿ ಪ್ರಾಣವನ್ನು ಉಳಿಸಿಕೊಳ್ಳಬೇಕೆಂಬ ಅಪೇಕ್ಷೆಯಿಂದ ಉತ್ತರದಿಕ್ಕಿನ ಕಡೆಗೆ ಓಡಿ

ಹೋದನು. ವೈಶ್ಯರ ಸಮೂಹದಿಂದ ಪರಿಭ್ರಷ್ಟನಾಗಿ ಆ ಪ್ರದೇಶದಿಂದ ತಪ್ಪಿಸಿಕೊಂಡು ಬಂದ ಗೌತಮನು ಏಕಾಕಿಯಾಗಿ ಅರಣ್ಯದಲ್ಲಿ ಕಿಂಪುರುಷನು ಸಂಚರಿಸುವಂತೆಯೇ ಸಂಚರಿಸುತ್ತಿದ್ದನು. ಹೀಗೆಯೇ ಸಂಚರಿಸುತ್ತಿದ್ದಾಗ ಸಮುದ್ರದ ಕಡೆಗೆ ಹೋಗುವ ಹಾದಿಯೊಂದು ಗೌತಮನಿಗೆ ಗೋಚರಿಸಿತು. ಗೌತಮನು ಆ ಹಾದಿಯನ್ನೇ ಹಿಡಿದು ಸಮುದ್ರದ ಕಡೆಗೆ ಹೋಗುತ್ತಿದ್ದಾಗ ರಮ್ಯವಾದ ಮತ್ತು ದಿವ್ಯವಾದ, ಪುಷ್ಪವೃಕ್ಷಗಳಿಂದ ಸಂಪನ್ನವಾಗಿದ್ದ ಅರಣ್ಯಕ್ಕೆ ಆಗಮಿಸಿದನು. ಆ ವನವು ಸರ್ವರ್ತುಗಳಲ್ಲಿಯೂ ಫಲಗಳಿಂದ ಕೂಡಿರುತ್ತಿದ್ದ ಮಾವಿನ ಮರಗಳಿಂದ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಯಕ್ಷರಿಂದಲೂ, ಕಿನ್ನರರಿಂದಲೂ ಸಂಸೇವ್ಯಮಾನವಾಗಿದ್ದ ಆ ಸುಂದರವಾದ ವನವು ಇಂದ್ರನ ನಂದನವನದಂತೆಯೇ ಕಾಣುತ್ತಿದ್ದಿತು. ಆ ಅರಣ್ಯವು ಶಾಲ-ತಾಲ-ತಮಾಲವೃಕ್ಷಗಳಿಂದಲೂ, ಕರೀಅಗುರು ಮರಗಳಿಂದಲೂ, ಚಂದನವೃಕ್ಷಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿದ್ದಿತು. ರಮಣೀಯವಾದ, ಸುಗಂಧಿತವಾದ ಮತ್ತು ರಮ್ಯವಾದ ಪರ್ವತದ ತಪ್ಪಲುಗಳಲ್ಲಿ ಎಲ್ಲ ಕಡೆಗಳಿಂದಲೂ ಉತ್ತಮಜಾತಿಯ ಪಕ್ಷಿಗಳು ಕಲರವಗಳನ್ನು ಮಾಡುತ್ತಿದ್ದುವು. ಮನುಷ್ಯನ ಮುಖವನ್ನು ಹೊಂದಿದ್ದ 'ಭಾರುಂಡ' ಎಂದು ವಿಖ್ಯಾತವಾಗಿದ್ದ ಪಕ್ಷಿಗಳು ಆ ಸುಂದರವಾದ ಅರಣ್ಯ ದಲ್ಲಿ ಧ್ವನಿಮಾಡುತ್ತಿದ್ದುವು. ಪರ್ವತದ ತಪ್ಪಲುಗಳಲ್ಲಿಯೂ ಮತ್ತು ಸಮುದ್ರದ ತೀರಪ್ರದೇಶಗಳಲ್ಲಿಯೂ ವಾಸಮಾಡುವ ಭೂಲಿಂಗಪಕ್ಷಿಗಳೂ ಮತ್ತು ಇತರ ಅನೇಕಪಕ್ಷಿಗಳೂ ಆ ಅರಣ್ಯದಲ್ಲಿ ಚಿಲಿ-ಪಿಲಿ ಶಬ್ದಮಾಡುತ್ತಿದ್ದುವು. ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತಿದ್ದ, ರಮಣೀಯವಾಗಿದ್ದ ಪಕ್ಷಿಗಳ ಕಿಲ-ಕಿಲಧ್ವನಿಗಳನ್ನು ಕೇಳುತ್ತಾ ಗೌತಮನು ಮುಂದೆ-ಮುಂದೆ ಹೋಗುತ್ತಿದ್ದನು. ಹಾಗೆಯೇ ಹೋಗುತ್ತಿದ್ದಾಗ ಗೌತಮನಿಗೆ ಸುರಮ್ಯವಾದ ಒಂದು ಸ್ಥಳವು ಸಿಕ್ಕಿತು. ಆ ಸ್ಥಳವು ಸುವರ್ಣಮಯವಾದ ಮಳಲಿನ ರಾಶಿಯಿಂದ ಸಮಾವೃತವಾಗಿದ್ದಿತು. ಸಮತಲವಾಗಿದ್ದಿತು. ಸುಖದಾಯಕ ವಾಗಿದ್ದಿತು. ವಿಚಿತ್ರವಾಗಿಯೂ, ಸ್ವರ್ಗಲೋಕಕ್ಕೆ ಸಮಾನವಾಗಿಯೂ ಇದ್ದಿತು. ಆ ಸ್ಥಳದಲ್ಲಿ ಗೌತಮನು ಮಂಡಲಾಕಾರವಾಗಿದ್ದ, ಅತ್ಯಂತಕಾಂತಿ ಯುಕ್ತವಾಗಿದ್ದ, ದೊಡ್ಡದಾಗಿದ್ದ ಆಲದಮರವನ್ನು ನೋಡಿದನು. ಆ

ಆಲದಮರವು ತನ್ನ ಗಾತ್ರಕ್ಕೆ ಅನುರೂಪವಾದ ದೊಡ್ಡ-ದೊಡ್ಡ ರೆಂಬೆಗಳಿಂದ ಸಮಾವೃತವಾಗಿದ್ದು ಬಿಡಿಸಿ ನಿಲ್ಲಿಸಿರುವ ಛತ್ರಿಯಂತೆಯೇ ಕಾಣುತ್ತಿದ್ದಿತು. ಆ ವೃಕ್ಷದ ಮೂಲಪ್ರದೇಶವು ಶ್ರೇಷ್ಠವಾದ ಚಂದನಮಿಶ್ರಿತವಾದ ನೀರಿನಿಂದ ನೆನೆಸಲ್ಪಟ್ಟಿದ್ದಿತು.

ಬ್ರಹ್ಮನ ಸಭೆಯಂತೆ ಶೋಭಾಯಮಾನವಾಗಿದ್ದ ಆ ಆಲದಮರವು ದಿವ್ಯವಾದ ಹೂಗಳಿಂದ ತುಂಬಿದ್ದು ಕಾಂತಿಯುಕ್ತವಾಗಿದ್ದಿತು. ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತಿದ್ದ, ಉತ್ತಮೋತ್ತಮವಾದ ಆ ವೃಕ್ಷವನ್ನು ನೋಡಿ ಗೌತಮನು ಸಂತುಷ್ಟನಾದನು. ಸುಪುಷ್ಪಿತವಾಗಿದ್ದ ವೃಕ್ಷಗಳಿಂದ ಸಮಾವೃತವಾಗಿದ್ದ ಆಲದಮರವು ಪವಿತ್ರವಾದ ದೇವಗೃಹಕ್ಕೆ ಸಮಾನ ವಾಗಿದ್ದಿತು. ಗೌತಮನು ಆ ವೃಕ್ಷದ ಸಮೀಪಕ್ಕೆ ಬಂದು ಆಶ್ಚರ್ಯ ಪೂರ್ವಕವಾಗಿ ನೋಡುತ್ತಾ ಅದರ ಕೆಳಭಾಗದಲ್ಲಿ ಕುಳಿತನು.

ಯುಧಿಷ್ಠಿರ! ಗೌತಮನು ಅಲ್ಲಿ ಕುಳಿತೊಡನೆಯೇ ಶುಭಕರನಾದ, ಸುಖಕರನಾದ, ಶಿವಕರನಾದ ವಾಯುದೇವನು ವೃಕ್ಷದಲ್ಲಿದ್ದ ಹೂಗಳನ್ನು ಸ್ಪರ್ಶಿಸಿ ಗೌತಮನ ಸರ್ವಾಂಗಗಳನ್ನೂ ಆಹ್ಲಾದಗೊಳಿಸುತ್ತಾ ಮಂದವಾಗಿ ಅವನ ಮೇಲೆ ಬೀಸತೊಡಗಿದನು. ಪವಿತ್ರನಾದ ವಾಯುದೇವನಿಂದ ಸಂಸ್ಪೃಷ್ಟನಾದ ಗೌತಮನು ತೃಪ್ತಿಹೊಂದಿದನು. ಸುಖಕರವಾದ ವಾತಾ ವರಣದ ಆನಂದವನ್ನು ಅನುಭವಿಸುತ್ತಾ ಹಾಗೆಯೇ ಮಲಗಿಬಿಟ್ಟನು. ಆ ವೇಳೆಗೆ ಸೂರ್ಯನೂ ಮುಳುಗಿದನು. ಸೂರ್ಯನು ಮುಳುಗಿ ಸಾಯಂಕಾ ಲವು ಸನ್ನಿಹಿತವಾಗಲಾಗಿ ಶ್ರೇಷ್ಠವಾದ ಒಂದು ಪಕ್ಷಿಯು ಬ್ರಹ್ಮಲೋಕ ದಿಂದ ತನ್ನ ವಾಸಸ್ಥಾನವಾದ ಆ ಆಲದಮರಕ್ಕೆ ಆಗಮಿಸಿತು. ಬಕಪಕ್ಷಿಗಳಿಗೆ ರಾಜನಾಗಿದ್ದ ಆ ಪಕ್ಷಿಯು ನಾಡೀಜಂಘವೆಂಬ ಹೆಸರಿನಿಂದ ಪ್ರಖ್ಯಾತ ವಾಗಿದ್ದಿತು. ಕಶ್ಯಪಮಹರ್ಷಿಗಳ ಪುತ್ರನಾದ, ಮಹಾಪ್ರಾಜ್ಞನಾಗಿದ್ದ ಆ ನಾಡೀಜಂಘವು ಬ್ರಹ್ಮನಿಗೆ ಅತ್ಯಂತಪ್ರಿಯನಾದ ಗೆಳೆಯನೂ ಆಗಿದ್ದಿತು. ಅನುಪಮವಾದ ಕಾಂತಿಯಿಂದ ಕೂಡಿದ್ದ ನಾಡೀಜಂಘವು ರಾಜಧರ್ಮದಲ್ಲಿ ನಿಷ್ಣಾತವಾಗಿದ್ದುದರಿಂದ 'ರಾಜಧರ್ಮಾ' ಎಂಬ ಅನ್ವರ್ಥನಾಮದಿಂದಲೇ ಭೂಲೋಕದಲ್ಲಿ ವಿಖ್ಯಾತವಾಗಿದ್ದಿತು. ದೇವಕನ್ಯೆಯ ಹೊಟ್ಟೆಯಲ್ಲಿ ಹುಟ್ಟಿದ್ದ, ವಿವೇಕಶಾಲಿಯಾಗಿದ್ದ ಆ ಪಕ್ಷಿಯು ದೇವತೆಗಳ ಪ್ರಭೆಗೆ ಸಮಾನ

ವಾದ ಪ್ರಭೆಯಿಂದಲೇ ಕಂಗೊಳಿಸುತ್ತಿದ್ದಿತು. ಸೂರ್ಯಕಿರಣಗಳಂತೆ ಥಳ-ಥಳಿಸುತ್ತಿದ್ದ ಭೂಷಣಗಳಿಂದ ಅಂಗಾಂಗಗಳಲ್ಲಿಯೂ ಭೂಷಿತನಾಗಿದ್ದ, ದೇವಗರ್ಭನಾಗಿದ್ದ (ದೇವಕನ್ಯೆಯಲ್ಲಿ ಜನ್ಮವನ್ನು ತಳೆದಿದ್ದ) ಆ ರಾಜ



ಧರ್ಮನು ವಿಶುದ್ಧವಾದ ಆಭರಣಗಳಿಂದ ಸಂಪನ್ನನಾಗಿ ದೇದೀಪ್ಯಮಾನವಾದ ಕಾಂತಿಯಿಂದ ಪ್ರಜ್ವಲಿಸುತ್ತಿದ್ದನು.

ಸರ್ವಾಂಗಸುಂದರನಾದ ಪಕ್ಷಿರಾಜನು ಬಂದುದನ್ನು ನೋಡಿ ಗೌತಮನು ಆಶ್ಚರ್ಯಚಕಿತನಾಗಿ ಮೇಲೆದ್ದು ಕುಳಿತನು. ಹಸಿವು-ಬಾಯಾರಿಕೆಗಳಿಂದಲೂ ಮಾರ್ಗಾಯಾಸದಿಂದಲೂ ಬಳಲಿದ್ದ ಗೌತಮನು ರಾಜಧರ್ಮನನ್ನು ಕೊಲ್ಲುವ ಇಚ್ಛೆಯಿಂದ ಪಕ್ಷಿಯ ಕಡೆಗೆ ವೀಕ್ಷಿಸಿದನು.

ಗೌತಮನು ಹೀಗೆ ಯೋಚಿಸುತ್ತಿದ್ದಾಗಲೇ ಪಕ್ಷಿಯು ಅವನ ಸಮೀಪಕ್ಕೆ ಹೋಗಿ ಹೇಳಿತು :

ಸ್ವಾಗತಂ ಭವತೋ ವಿಪ್ರ ದಿಷ್ಟ್ಯಾ ಪ್ರಾಪ್ತೋಽಸಿ ಮೇ ಗೃಹಮ್ ।
ಅಸ್ತಂ ಚ ಸವಿತಾ ಯಾತಃ ಸಂಧ್ಯೇಯಂ ಸಮುಪಾಸ್ಥಿತಾ ॥೨೩॥

"ವಿಪ್ರಶ್ರೇಷ್ಠನೇ! ನಿನಗೆ ಸುಸ್ವಾಗತವು. (ನಿನ್ನನ್ನು ಆದರದಿಂದ ಸ್ವಾಗತಿಸುತ್ತೇನೆ.) ಇದು ನನ್ನ ಗೃಹವಾಗಿದೆ. ಸೌಭಾಗ್ಯವಶದಿಂದ ನೀನಿಂದು ಈ ನನ್ನ ಮನೆಗೆ ಆಗಮಿಸಿರುವೆ. ಸೂರ್ಯನು ಮುಳುಗಿದ್ದಾನೆ. ಸಂಧ್ಯಾಕಾಲವು ಉಪಸ್ಥಿತವಾಗಿದೆ.

ಮಮ ತ್ವಂ ನಿಲಯಂ ಪ್ರಾಪ್ತಃ ಪ್ರಿಯಾತಿಥಿರನಿನ್ದಿತಃ ।
ಪೂಜಿತೋ ಯಾಸ್ಯಸಿ ಪ್ರಾತರ್ವಿಧಿದೃಷ್ಟೇನ ಕರ್ಮಣಾ ॥೨೪॥

ನನ್ನ ಮನೆಗೆ ಆಗಮಿಸಿರುವ ನಿಷ್ಕಳಂಕನಾಗಿರುವ ನೀನು ನನಗೆ ಅತ್ಯಂತಪ್ರಿಯನಾದ ಅತಿಥಿಯಾಗಿರುವೆ. ಶಾಸ್ತ್ರವಿಧಿಗೆ ಅನುಸಾರವಾಗಿ ನಾನು ನಿನ್ನನ್ನು ಸತ್ಕರಿಸುತ್ತೇನೆ. ಈ ರಾತ್ರಿಯಲ್ಲಿ ನೀನು ನನ್ನ ಆತಿಥ್ಯವನ್ನು ಸ್ವೀಕರಿಸಿ, ಬೆಳಗಾಗುತ್ತಲೇ ಇಲ್ಲಿಂದ ಪ್ರಯಾಣಮಾಡಬಹುದು."

೧೬೯ನೆಯ ಅಧ್ಯಾಯವು ಮುಗಿಯಿತು.

೧೭೦ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ರಾಜಧರ್ಮನಿಂದ ಗೌತಮನಿಗೆ ಸತ್ಕಾರ : ರಾಕ್ಷಸರಾಜನಾದ ವಿರೂಪಾಕ್ಷನ ಭವನಕ್ಕೆ ಗೌತಮನ ಪ್ರಯಾಣ

ಪಾರಿಕ್ಷಿತ! ಭೀಷ್ಮನು ಯುಧಿಷ್ಠಿರನನ್ನು ಕುರಿತು ಹೇಳುತ್ತಾನೆ :

"ಯುಧಿಷ್ಠಿರ! ಪಕ್ಷಿಯು ಹೇಳಿದ ಸುಮಧುರವಾದ ಮಾತನ್ನು ಕೇಳಿ ಗೌತಮನಿಗೆ ಆಶ್ಚರ್ಯವಾಯಿತು. ಕುತೂಹಲಪೂರ್ಣನಾಗಿ ರಾಜಧರ್ಮ ಪಕ್ಷಿಯನ್ನು ನೋಡುತ್ತಲೇ ಇದ್ದನು.

ಪುನಃ ಪಕ್ಷಿಯೇ ಹೇಳಿತು :

ಭೋಃ ಕಶ್ಯಪಸ್ಯ ಪುತ್ರೋಽಹಂ ಮಾತಾ ದಾಕ್ಷಾಯಣೀ ಚ ಮೇ ।
ಅತಿಥಿಸ್ತ್ವಂ ಗುಣೋಪೇತಃ ಸ್ವಾಗತಂ ತೇ ದ್ವಿಜೋತ್ತಮ ॥೨॥

"ಭೋ ಬ್ರಾಹ್ಮಣ! ನಾನು ಕಶ್ಯಪನ ಪುತ್ರನು. ದಕ್ಷಪ್ರಜಾಪತಿಯ ಮಗಳಾದ ದಾಕ್ಷಾಯಿಣೀ ಎಂಬುವಳೇ ನನ್ನ ತಾಯಿ. ನೀನು ಗುಣವಂತನಾದ ಅತಿಥಿಯಾಗಿರುವೆ. ಆದುದರಿಂದ ನಿನಗೆ ಸ್ವಾಗತವನ್ನು ಬಯಸುತ್ತೇನೆ."

ಯುಧಿಷ್ಠಿರ! ಹೀಗೆ ಹೇಳಿದನಂತರ ಆ ಪಕ್ಷಿಯು ಶಾಸ್ತ್ರವಿಧಿಗೆ ಅನುಸಾರವಾಗಿ ಬ್ರಾಹ್ಮಣನನ್ನು ಸತ್ಕರಿಸಿತು. ಶಾಲಪುಷ್ಪಗಳಿಂದಲೇ ದಿವ್ಯವಾದ ಆಸನವನ್ನು ಸಿದ್ಧಪಡಿಸಿತು. ಭಗೀರಥಮಹಾರಾಜನ ರಥದಿಂದ ಆಕ್ರಾಂತವಾದ, ಗಂಗೆಯು ಪ್ರವಹಿಸುತ್ತಿರುವ ಪ್ರದೇಶದಲ್ಲಿ ಯಾವ ಮೀನುಗಳು ವಾಸಿಸುತ್ತವೆಯೋ ಅಂತಹ ಮಹಾಮತ್ಸ್ಯಗಳನ್ನೇ ಪಕ್ಷಿಯು ತಂದು ಬ್ರಾಹ್ಮಣನ ಭೋಜನಕ್ಕೆ ವ್ಯವಸ್ಥೆಯನ್ನು ಮಾಡಿತು. ಗೌತಮನು ಕಾಯಿಸಿಕೊಳ್ಳಲು ಪಕ್ಷಿಯು ಅಗ್ನಿಯನ್ನು ಸಿದ್ಧಗೊಳಿಸಿತು ಮತ್ತು ದೊಡ್ಡ-ದೊಡ್ಡದಾಗಿದ್ದ ಮೀನುಗಳನ್ನೂ ಅತಿಥಿಯಾದ ಗೌತಮನಿಗೆ ಸಮರ್ಪಿಸಿತು. ಬ್ರಾಹ್ಮಣನು ಭೋಜನಮಾಡಿ ಸಂತೃಪ್ತನಾದನಂತರ ಮಹಾತಪಸ್ವಿಯಾದ ರಾಜಧರ್ಮಪಕ್ಷಿಯು ಬ್ರಾಹ್ಮಣನ ಆಯಾಸಪರಿಹಾರಕ್ಕಾಗಿ ತನ್ನ ರೆಕ್ಕೆಗಳಿಂದಲೇ ಗಾಳಿಯನ್ನು ಬೀಸತೊಡಗಿತು. ಗೌತಮನು ಸಂಪೂರ್ಣವಾಗಿ ವಿಶ್ರಾಂತಿಯನ್ನು ತೆಗೆದುಕೊಂಡು ಸುಖಾಸೀನನಾದನಂತರ ಪಕ್ಷಿಯು ಗೌತಮನ ಕುಲ-ಗೋತ್ರಗಳನ್ನು ಪ್ರಶ್ನಿಸಿತು. ಅದಕ್ಕೆ ಉತ್ತರವಾಗಿ ಬ್ರಾಹ್ಮಣನು 'ನಾನು ಗೌತಮಗೋತ್ರನಾಗಿದ್ದೇನೆ. ನನ್ನ ಹೆಸರು ಗೌತಮ. ಜಾತಿಯಿಂದ ನಾನೊಬ್ಬ ಬ್ರಾಹ್ಮಣ'–ಇಷ್ಟು ಹೇಳಿದನೇ ಹೊರತು ಬೇರೆ ಯಾವ ವಿಷಯವನ್ನೂ ಹೇಳಲಿಲ್ಲ. ಅನಂತರ ಬ್ರಾಹ್ಮಣನಿಗೆ ಆ ಪಕ್ಷಿಯು ಹಸಿರೆಲೆಗಳಿಂದಲೇ ದಿವ್ಯವಾದ ಹಾಸಿಗೆಯನ್ನು ಸಿದ್ಧಗೊಳಿಸಿತು. ಆ ಪರ್ಣಶಯನವು ದಿವ್ಯವಾದ ಕುಸುಮಗಳಿಂದ ಸುವಾಸನಾಯುಕ್ತವಾಗಿ

ಮಾಡಲ್ಪಟ್ಟಿದ್ದಿತು. ಅಂತಹ ಸುಗಂಧಯುಕ್ತವಾದ ಹಾಸಿಗೆಯಲ್ಲಿ ಗೌತಮನು ಸುಖವಾಗಿ ಮಲಗಿದನು.

ಸ್ವಲ್ಪಕಾಲಾನಂತರ ಎದ್ದು ಹಾಸಿಗೆಯ ಮೇಲೆ ಕುಳಿತಿದ್ದ ಗೌತಮನನ್ನು ಕುರಿತು ವಾಗ್ಮಿಯಾದ ಕಶ್ಯಪನ ಮಗನಾದ ರಾಜಧರ್ಮಪಕ್ಷಿಯು ಗೌತಮನು ಅಲ್ಲಿಗೆ ಆಗಮಿಸಿದುದರ ಕಾರಣವನ್ನು ಪುನಃ ಪ್ರಶ್ನಿಸಿತು. ಆ ಪ್ರಶ್ನೆಗೆ ಉತ್ತರವಾಗಿ ಗೌತಮನು 'ಮಹಾಮತೇ!' ಎಂದು ಪಕ್ಷಿಯನ್ನು ಸಂಬೋಧಿಸಿ ತಾನು ಬಹಳ ದರಿದ್ರನೆಂದೂ, ದ್ರವ್ಯಾರ್ಥವಾಗಿ ಸಮುದ್ರದ ಬಳಿಗೆ ಹೋಗುವ ಆಕಾಂಕ್ಷೆಯುಳ್ಳವನಾಗಿರುವೆನೆಂದೂ ಹೇಳಿದನು.

ಬ್ರಾಹ್ಮಣನ ಮಾತನ್ನು ಕೇಳಿ ಅನುಕಂಪಗೊಂಡ ಪಕ್ಷಿಯು ಪ್ರಸನ್ನವಾದ ಮನಸ್ಸಿನಿಂದ ಹೇಳಿತು :

"ಬ್ರಾಹ್ಮಣೋತ್ತಮ! ನೀನು ಈ ವಿಷಯದಲ್ಲಿ ತವಕಪಡಬೇಕಾಗಿಲ್ಲ. ನೀನು ಇಲ್ಲಿಂದಲೇ ಕೃತಕೃತ್ಯನಾಗಿ ದ್ರವ್ಯಸಹಿತನಾಗಿ ಮನೆಯನ್ನು ಸೇರುವೆ. ಬೃಹಸ್ಪತಿಯ ಮತಾನುಸಾರವಾಗಿ ಅರ್ಥಸಿದ್ಧಿಯು ನಾಲ್ಕು ಪ್ರಕಾರಗಳಿಂದ ಆಗುತ್ತದೆ.

ಪಾರಮ್ಪರ್ಯಂ ತಥಾ ದೈವಂ ಕಾಮ್ಯಂ ಮೈತ್ರಮಿತಿ ಪ್ರಭೋ ।

ವಂಶಪಾರಂಪರ್ಯದಿಂದ ಅರ್ಥಸಿದ್ಧಿಯಾಗುತ್ತದೆ. (ಇಂತಹ ಧನ ವಂತರನ್ನು 'ಆಗರ್ಭಶ್ರೀಮಂತರು' ಎನ್ನುತ್ತಾರೆ.) ದೈವಯೋಗದಿಂದ ಆಕಸ್ಮಿಕವಾಗಿ ಅರ್ಥಸಿದ್ಧಿಯಾಗುತ್ತದೆ. ಧನಾರ್ಥವಾಗಿಯೇ ಮಾಡುವ ಕಾಮ್ಯಕರ್ಮಗಳಿಂದ ಅರ್ಥದ ಸಿದ್ಧಿಯಾಗುತ್ತದೆ. ನಾಲ್ಕನೆಯದಾಗಿ ಮಿತ್ರನ ಸಹಯೋಗದಿಂದಲೂ ಅರ್ಥದ ಸಿದ್ಧಿಯಾಗುತ್ತದೆ.

ವಿಪ್ರವರ! ನಾನೀಗ ನಿನಗೆ ಮಿತ್ರನಾಗಿಬಿಟ್ಟಿದ್ದೇನೆ. ನಿನ್ನ ವಿಷಯದಲ್ಲಿ ನಾನು ಸುಹೃದ್ಭಾವವನ್ನೇ ಹೊಂದಿರುವೆನು. ಆದುದರಿಂದ ನೀನು ಧನವಂತನಾಗುವಂತೆ ಸಂಪೂರ್ಣವಾಗಿ ಪ್ರಯತ್ನಮಾಡುತ್ತೇನೆ." ಪಕ್ಷಿಯು ಹೀಗೆ ಹೇಳಿದನಂತರ ಬ್ರಾಹ್ಮಣನು ಪರ್ಣಶಯ್ಯೆಯಲ್ಲಿ ಪುನಃ ಮಲಗಿ ನಿದ್ರೆಹೋದನು.

ಬೆಳಗಾಗುತ್ತಲೇ ಸುಖಸುಪ್ತನಾಗಿ ಎಚ್ಚರಗೊಂಡಿದ್ದ ಬ್ರಾಹ್ಮಣನನ್ನು ನೋಡಿ ಪಕ್ಷಿಯು ಹೇಳಿತು :

"ಸೌಮ್ಯನೇ! ನೀನು ಈ ಮಾರ್ಗವನ್ನೇ ಹಿಡಿದು ಹೋಗು. ಕೃತ ಕೃತ್ಯನಾಗುವೆ. ಇಲ್ಲಿಂದ ಮೂರು ಯೋಜನಗಳಷ್ಟು ದೂರದವರೆಗೆ ಇದೇ ಹಾದಿಯಲ್ಲಿ ಹೋದರೆ ಅಲ್ಲೊಂದು ನಗರವು ಸಿಕ್ಕುತ್ತದೆ. ಅಲ್ಲಿಯೇ ಮಹಾ ಬಲಿಷ್ಠನಾದ ವಿರೂಪಾಕ್ಷನೆಂದು ವಿಖ್ಯಾತನಾದ ರಾಕ್ಷಸರಾಜನಿದ್ದಾನೆ. ಅವನು ನನಗೆ ಮಹಾಮಿತ್ರನು. ನೀನು ಅವನ ಬಳಿಗೆ ಹೋಗು. ನನ್ನ ಮಾತಿನಿಂದ ಪ್ರೋತ್ಸಾಹಿತನಾದ ಅವನು ನಿನ್ನ ಅಭೀಷ್ಟವಾದ ಕಾಮನೆಗಳೆಲ್ಲವನ್ನೂ ಪೂರ್ಣಗೊಳಿಸುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ರಾಜಧರ್ಮಪಕ್ಷಿಯು ಹೀಗೆ ಹೇಳಿದೊಡನೆಯೇ ಆಯಾಸದಿಂದ ರಹಿತನಾಗಿದ್ದ ಗೌತಮನು ಪಕ್ಷಿಯು ತೋರಿಸಿದ ಹಾದಿ ಯನ್ನೇ ಹಿಡಿದು ಹೊರಟನು. ಮಾರ್ಗದಲ್ಲಿ ಅವನು ಅಮೃತಸದೃಶವಾದ ನಾನಾವಿಧವಾದ ಫಲಗಳನ್ನು ಭಕ್ಷಿಸುತ್ತಾ, ಅಗುರು ಮತ್ತು ಚಂದನವೃಕ್ಷಗಳೇ ವಿಶೇಷವಾಗಿದ್ದ, ಲವಂಗದ ಗಿಡಗಳಿಂದ ಕೂಡಿದ್ದ ವನಗಳಲ್ಲಿ ವಿಶ್ರಮಿಸಿ ಕೊಳ್ಳುತ್ತಾ ಬಹಳ ಬೇಗ ರಾಕ್ಷಸರಾಜನ ನಗರದ ಬಳಿಗೆ ಹೋದನು. ಮೇರುವ್ರಜವೆಂಬ ಹೆಸರಿನ ಆ ರಾಕ್ಷಸನ ಪಟ್ಟಣವು ಪರ್ವತವೇ ತೋರಣ ವುಳ್ಳದ್ದಾಗಿದ್ದಿತು. (ಪರ್ವತವೇ ಆ ಪಟ್ಟಣದ ಹೊರಬಾಗಿಲಾಗಿದ್ದಿತು.) ಪರ್ವತಗಳೇ ಆ ಪಟ್ಟಣದ ಪ್ರಾಕಾರದ ಗೋಡೆಗಳಾಗಿದ್ದುವು. ನಗರ ರಕ್ಷಣೆಗಾಗಿ ಸ್ಥಾಪಿಸಲ್ಪಟ್ಟಿದ್ದ ಅನೇಕಯಂತ್ರಗಳಿಂದಲೂ ಆ ಪಟ್ಟಣವು ತುಂಬಿದ್ದಿತು.

ಧೀಮಂತನಾದ ರಾಕ್ಷಸೇಂದ್ರನಿಗೆ ತನ್ನ ಮಿತ್ರನು ಪ್ರಿಯನಾದ ಅತಿಥಿ ಯೊಬ್ಬನನ್ನು ತನ್ನ ಬಳಿಗೆ ಕಳುಹಿಸಿರುವನೆಂಬ ವಿಷಯವು ತಿಳಿಯಿತು. ಅದರಿಂದ ಆ ರಾಕ್ಷಸನು ಪರಮಹೃಷ್ಟನಾದನು. ಸೇವಕರನ್ನು ಕರೆದು ನಗರದ ಮಹಾದ್ವಾರದಲ್ಲಿ ಗೌತಮನೆಂಬ ಬ್ರಾಹ್ಮಣನಿರುವನೆಂದೂ ಅವನನ್ನು ಶೀಘ್ರವಾಗಿ ಕರೆತರಬೇಕೆಂದೂ ಆಜ್ಞಾಪಿಸಿದನು. ರಾಜಾಜ್ಞೆಯಾದೊಡ ನೆಯೇ ರಾಜಪುರುಷರು ಗಿಡಗಹಕ್ಕಿಯಂತೆ ಕುಪ್ಪಳಿಸುತ್ತಾ 'ಗೌತಮ!

ಗೌತಮ!'– ಎಂದು ಕೂಗುತ್ತಾ ಪಟ್ಟಣದ ಮಹಾದ್ವಾರಕ್ಕೆ ಬಂದರು. ಮಹಾದ್ವಾರದಲ್ಲಿದ್ದ ಬ್ರಾಹ್ಮಣನನ್ನು ಕುರಿತು ರಾಜಸೇವಕರು ಹೇಳಿದರು :

ತ್ವರಸ್ವ ತೂರ್ಣಮಾಗಚ್ಛ ರಾಜಾ ತ್ವಾಂ ದ್ರಷ್ಟುಮಿಚ್ಛತಿ ॥೨೩॥

"ಬ್ರಾಹ್ಮಣೋತ್ತಮ! ತ್ವರೆಮಾಡು! ಬೇಗ ಬಾ! ನಮ್ಮ ರಾಜನು ನಿನ್ನನ್ನೀಗಲೇ ನೋಡಬೇಕೆಂದಿದ್ದಾನೆ.

ರಾಕ್ಷಸಾಧಿಪತಿರ್ವೀರೋ ವಿರೂಪಾಕ್ಷ ಇತಿ ಶ್ರುತಃ ।
ಸ ತ್ವಾಂ ತ್ವರತಿ ವೈ ದ್ರಷ್ಟುಂ ತತ್ಕ್ಷಿಪ್ರಂ ಸಂವಿಧೀಯತಾಮ್ ॥೨೪॥

ವಿರೂಪಾಕ್ಷ–ಎಂಬ ಹೆಸರಿನಿಂದ ಪ್ರಸಿದ್ಧನಾಗಿರುವ ವೀರನಾದ ರಾಕ್ಷಸೇಂದ್ರನು ನಿನ್ನನ್ನು ನೋಡಲು ಕಾತರಿಸುತ್ತಿದ್ದಾನೆ. ಆದುದರಿಂದ ಬೇಗನೆ ಹೊರಡು."

ಯುಧಿಷ್ಠಿರ! ರಾಜಸೇವಕರ ಆ ಮಾತನ್ನು ಕೇಳುತ್ತಲೇ ಗೌತಮನಿಗೆ ದಾರಿನಡೆದ ಆಯಾಸವೆಲ್ಲವೂ ಪರಿಹಾರವಾಯಿತು. ವಿಸ್ಮಿತನಾದ ಗೌತಮನು ರಾಕ್ಷಸರಾಜನ ಅರಮನೆಯ ಕಡೆಗೆ ಧಾವಿಸಿದನು. ವಿರೂಪಾಕ್ಷರಾಜನ ವೈಭವವನ್ನು ಕಂಡು ಗೌತಮನಿಗೆ ಪರಮಾಶ್ಚರ್ಯವಾಯಿತು. ದ್ವಿಜಶ್ರೇಷ್ಠನಾದ ಗೌತಮನು ರಾಕ್ಷಸೇಂದ್ರನಾದ ವಿರೂಪಾಕ್ಷನ ದರ್ಶನಾಕಾಂಕ್ಷಿಯಾಗಿ ರಾಜಸೇವಕರೊಡನೆಯೇ ಬಹಳ ಬೇಗ ರಾಜನ ಅರಮನೆಗೆ ಧಾವಿಸಿದನು."

೧೭೦ನೆಯ ಅಧ್ಯಾಯವು ಮುಗಿಯಿತು.

೧೭೧ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಗೌತಮನು ರಾಕ್ಷಸನ ಅರಮನೆಯಿಂದ ಸುವರ್ಣರಾಶಿಯನ್ನೇ ತೆಗೆದುಕೊಂಡು ಹಿಂದಿರುಗಿದುದು : ತನ್ನನ್ನು ಪರಮಮಿತ್ರನೆಂದು ಭಾವಿಸಿದ್ದ ಬಕಪಕ್ಷಿಯನ್ನೇ ಗೌತಮನು ಕೊಲ್ಲಲು ಯೋಚಿಸಿದುದು

ಜನಮೇಜಯ! ಭೀಷ್ಮನು ಮುಂದುವರಿದು ಹೇಳುತ್ತಾನೆ :

" ಯುಧಿಷ್ಠಿರ! ಬ್ರಾಹ್ಮಣನು ತನ್ನ ಅರಮನೆಯ ಸಮೀಪಕ್ಕೆ

ಬಂದಿರುವನೆಂಬ ವಿಷಯವು ರಾಕ್ಷಸೇಂದ್ರನಿಗೆ ತಿಳಿಯಿತು. ಗೌತಮನು ರಾಜಗೃಹವನ್ನು ಪ್ರವೇಶಿಸಿ ವಿರೂಪಾಕ್ಷನಿಂದ ಸತ್ಕೃತನಾಗಿ ಶ್ರೇಷ್ಠವಾದ ಆಸನದಲ್ಲಿ ಕುಳಿತುಕೊಂಡನು. ವಿರೂಪಾಕ್ಷನು ಪ್ರಹೃಷ್ಟನಾಗಿ ಕುಳಿತಿದ್ದ ಗೌತಮನ ಗೋತ್ರ-ಶಾಖೆಗಳನ್ನೂ ಬ್ರಹ್ಮಚರ್ಯಪಾಲನಪೂರ್ವಕವಾದ ವೇದಾಧ್ಯಯನದ ವಿಷಯವನ್ನೂ ಪ್ರಶ್ನಿಸಿದನು. ಆದರೆ ಬ್ರಾಹ್ಮಣನು ತನ್ನ ಗೋತ್ರವೊಂದನ್ನು ಬಿಟ್ಟು ಮತ್ತಾವ ವಿಷಯವನ್ನೂ ಹೇಳಲಿಲ್ಲ. ಬ್ರಹ್ಮವರ್ಚಸ್ಸಿನಿಂದಲೂ ಹೀನನಾಗಿದ್ದ, ಅಧ್ಯಯನ-ಅಧ್ಯಾಪನಗಳಿಂದಲೂ ವಿರತನಾಗಿದ್ದ, ಗೋತ್ರವು (ಜಾತಿಯು) ಯಾವುದೆಂಬುದನ್ನು ಮಾತ್ರವೇ ತಿಳಿಸಿದ ಬ್ರಾಹ್ಮಣನನ್ನು ಕುರಿತು ವಿರೂಪಾಕ್ಷನು ನಿವಾಸಸ್ಥಾನವು ಯಾವುದೆಂದು ಕೇಳಿದನು.

ಕ್ವ ತೇ ನಿವಾಸಃ ಕಲ್ಯಾಣ ಕಿಂ ಗೋತ್ರಾ ಬ್ರಾಹ್ಮಣೀ ಚ ತೇ ।
ತತ್ತ್ವಂ ಬ್ರೂಹಿ ನ ಭೀಃ ಕಾರ್ಯಾ ವಿಶ್ವಸಸ್ವ ಯಥಾಸುಖಮ್ ॥

"ಕಲ್ಯಾಣಪುರುಷನೇ! ನಿನ್ನ ನಿವಾಸವು (ಮನೆಯು) ಯಾವ ಊರಿನಲ್ಲಿದೆ? ನಿನ್ನ ಪತ್ನಿಯು ಯಾವ ಗೋತ್ರದ ಕನ್ಯೆಯು? ಈ ವಿಷಯ ಗಳನ್ನು ನನಗೆ ಯಥಾವತ್ತಾಗಿ ಹೇಳು. ಭಯಪಡಬೇಕಾದ ಕಾರಣವಿಲ್ಲ. ನನ್ನ ಮೇಲೆ ವಿಶ್ವಾಸವನ್ನಿಡು. ನೀನು ಸುಖವಾಗಿರು."

ಗೌತಮನು ಹೇಳುತ್ತಾನೆ :

ಮಧ್ಯದೇಶಪ್ರಸೂತೋಽಹಂ ವಾಸೋ ಮೇ ಶಬರಾಲಯೇ ।
ಶೂದ್ರಾ ಪುನರ್ಭೂರ್ಭಾರ್ಯಾ ಮೇ ಸತ್ಯಮೇತದ್ಬ್ರವೀಮಿ ತೇ ॥

"ರಾಕ್ಷಸೇಂದ್ರನೇ! ನಾನು ಮಧ್ಯದೇಶದಲ್ಲಿ ಹುಟ್ಟಿದವನು. ಬೇಡರ ಗ್ರಾಮದಲ್ಲಿ ಬೇಡರ ಮನೆಯಲ್ಲಿ ವಾಸಮಾಡುತ್ತಿದ್ದೇನೆ. ಮತ್ತೊಬ್ಬನ ಪತ್ನಿಯಾಗಿದ್ದು ವಿಧವೆಯಾದ ಶೂದ್ರಸ್ತ್ರೀಯು ನನ್ನ ಪತ್ನಿಯಾಗಿದ್ದಾಳೆ. ಈ ವಿಷಯವನ್ನು ನಾನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ."

ಭೀಷ್ಮನು ಹೇಳುತ್ತಾನೆ :

" ಯುಧಿಷ್ಠಿರ! ಬ್ರಾಹ್ಮಣನು ಹೇಳಿದ ಮಾತುಗಳನ್ನು ಕೇಳಿ

ರಾಕ್ಷಸನು ವಿಮರ್ಶಿಸತೊಡಗಿದನು. "ಈ ಕಾರ್ಯವು ನನ್ನಿಂದ ಹೇಗೆ ಸಾಧಿತವಾಗುತ್ತದೆ? ಇಂತಹ ಬ್ರಾಹ್ಮಣನಿಗೆ ದಾನಕೊಡುವುದರಿಂದ ನನಗೆ ಪುಣ್ಯವಾದರೂ ಹೇಗೆ ಲಭಿಸುತ್ತದೆ?"–ಇವೇ ಮುಂತಾಗಿ ಆ ರಾಕ್ಷಸ ರಾಜನು ಬಹಳವಾಗಿ ಯೋಚಿಸಿದನು.

ಅಯಂ ವೈ ಜನ್ಮನಾ ವಿಪ್ರಃ ಸುಹೃತ್ತಸ್ಯ ಮಹಾತ್ಮನಃ ।
ಸಮ್ಪ್ರೇಷಿತಸ್ಯ ತೇನಾಯಂ ಕಾಶ್ಯಪೇನ ಮಮಾನ್ತಿಕಮ್ ॥೭॥

ತಸ್ಯ ಪ್ರಿಯಂ ಕರಿಷ್ಯಾಮಿ ಸ ಹಿ ಮಾಮಾಶ್ರಿತಃ ಸದಾ ।
ಭ್ರಾತಾ ಮೇ ಬಾನ್ಧವಶ್ಚಾಸೌ ಸಖಾ ಚ ಹೃದಯಙ್ಗಮಃ ॥೮॥

ರಾಕ್ಷಸನು ತನ್ನ ಮನಸ್ಸಿನಲ್ಲಿಯೇ ಹೀಗೆ ನಿರ್ಧರಿಸಿದನು :

" ಈ ಗೌತಮನು ಹುಟ್ಟಿನಿಂದ ಮಾತ್ರವೇ ಬ್ರಾಹ್ಮಣನಾಗಿದ್ದಾನೆ. ಆದರೆ ಮಹಾತ್ಮನಾದ ರಾಜಧರ್ಮನ ಮಿತ್ರನಾಗಿದ್ದಾನೆ. ಕಶ್ಯಪಸಂಭೂತನಾದ ಆ ರಾಜಧರ್ಮನೇ ಈ ಗೌತಮನನ್ನು ನನ್ನ ಸಮೀಪಕ್ಕೆ ಕಳುಹಿಸಿದ್ದಾನೆ. ಆದುದರಿಂದ ರಾಜಧರ್ಮನಿಗೆ ಪ್ರಿಯವಾದ ಕಾರ್ಯವನ್ನು ನಾನು ಮಾಡುತ್ತೇನೆ. ರಾಜಧರ್ಮನು ಯಾವಾಗಲೂ ನನ್ನನ್ನೇ ಆಶ್ರಯಿಸಿರತಕ್ಕವನು. ನನ್ನ ಸಹೋದರನೂ, ಪ್ರಿಯಬಂಧುವೂ, ಮನಸ್ಸಿಗೆ ಸಂತೋಷವನ್ನುಂಟುಮಾಡುವ ಸ್ನೇಹಿತನೂ ಆಗಿದ್ದಾನೆ.

ಕಾರ್ತಿಕ್ಯಾಮದ್ಯ ಭೋಕ್ತಾರಃ ಸಹಸ್ರಂ ಮೇ ದ್ವಿಜೋತ್ತಮಾಃ ।
ತತ್ರಾಯಮಪಿ ಭೋಕ್ತಾ ಚ ದೇಯಮಸ್ಮೈ ಚ ಮೇ ಧನಮ್ ॥೯॥

ಸ ಚಾದ್ಯ ದಿವಸಃ ಪುಣ್ಯೋ ಹ್ಯತಿಥಿಶ್ಚಾಯಮಾಗತಃ ।
ಸಂಕಲ್ಪಿತಂ ಚೈವ ಧನಂ ಕಿಂ ವಿಚಾರ್ಯಮತಃ ಪರಮ್ ॥೧೦॥

ಇಂದು ಕಾರ್ತಿಕಮಾಸದ ಹುಣ್ಣಿಮೆಯಾಗಿದೆ. ಒಂದು ಸಾವಿರ ಬ್ರಾಹ್ಮಣಶ್ರೇಷ್ಠರು ಇಂದು ನನ್ನ ಮನೆಯಲ್ಲಿ ಭೋಜನಮಾಡುತ್ತಾರೆ. ಅವರ ಜೊತೆಯಲ್ಲಿಯೇ ಇವನೂ ಭೋಜನಮಾಡಲಿ. ಅವರಿಗೆ ಧನವನ್ನು ದಾನಮಾಡುವಂತೆಯೇ ಇವನಿಗೂ ನಾನು ಧನವನ್ನು ದಾನವಾಗಿ ಕೊಡುತ್ತೇನೆ. ಇಂದು ಅತ್ಯಂತ ಪುಣ್ಯದಿವಸವಾಗಿದೆ. ಈ ಬ್ರಾಹ್ಮಣನೂ

ಅತಿಥಿಯ ರೂಪದಲ್ಲಿ ಬಂದಿರುತ್ತಾನೆ. ಈ ಪುಣ್ಯದಿನದಲ್ಲಿ ಧನವನ್ನು ದಾನ ಮಾಡಬೇಕೆಂದು ಸಂಕಲ್ಪವನ್ನು ಮಾಡಿಬಿಟ್ಟಿದ್ದೇನೆ. ಹೀಗಿರುವಾಗ ಪುನಃ ವಿಚಾರಮಾಡತಕ್ಕದ್ದೇನಿದೆ?"

ಯುಧಿಷ್ಠಿರ! ರಾಕ್ಷಸರಾಜನು ಹೀಗೆ ನಿಶ್ಚಯಿಸಿ ಗೌತಮನಿಗೆ ಧನವನ್ನು ದಾನವಾಗಿ ಕೊಡಲು ನಿರ್ಧರಿಸಿದನು. ಬಳಿಕ ಭೋಜನದ ವೇಳೆಯಲ್ಲಿ ವಿದ್ವಾಂಸರಾದ ಒಂದು ಸಾವಿರ ಬ್ರಾಹ್ಮಣರು ಸ್ನಾನಮಾಡಿ ರೇಷ್ಮೆಯ ವಸ್ತ್ರವನ್ನುಟ್ಟು ಶರೀರವನ್ನು ಗಂಧ-ಮಾಲ್ಯಾದಿಗಳಿಂದ ಸಿಂಗರಿಸಿಕೊಂಡು ರಾಕ್ಷಸೇಂದ್ರನ ಅರಮನೆಗೆ ಆಗಮಿಸಿದರು. ಹಾಗೆ ಆಗಮಿಸಿದ ಬ್ರಾಹ್ಮಣರನ್ನು ವಿರೂಪಾಕ್ಷನು ಶಾಸ್ತ್ರವಿಧಿಗೆ ಅನುಸಾರವಾಗಿ ಯಥಾಯೋಗ್ಯವಾಗಿ ಸ್ವಾಗತಿಸಿ ಸತ್ಕರಿಸಿದನು. ರಾಕ್ಷಸೇಂದ್ರನ ಆಜ್ಞೆಯಂತೆ ರಾಜಸೇವಕರು ಆ ಬ್ರಾಹ್ಮಣರೆಲ್ಲರಿಗೂ ಕುಶಾಸನಗಳನ್ನು ನೆಲದ ಮೇಲೆ ಹಾಸಿದರು. ಆ ಕುಶಾಸನಗಳ ಮೇಲೆ ಸಾಲಾಗಿ ಕುಳಿತ ಬ್ರಾಹ್ಮಣರನ್ನು ವಿರೂಪಾಕ್ಷನು ತಿಲ, ದರ್ಭೆ ಮತ್ತು ಉದಕಗಳಿಂದ ಶಾಸ್ತ್ರವಿಧಿಗೆ ಅನುಸಾರವಾಗಿ ಪೂಜಿಸಿದನು. ರಾಜನು ಆ ಬ್ರಾಹ್ಮಣರಲ್ಲಿ ಪಿತೃಗಳಿಂದೊಡಗೂಡಿದ ವಿಶ್ವೇದೇವತೆಗಳನ್ನೂ ಅಗ್ನಿಯನ್ನೂ ಆವಾಹಿಸಿದನು. ಎಲ್ಲರಿಗೂ ಚಂದನವನ್ನು ಪೂಸಿದನು. ಪುಷ್ಪಮಾಲಿಕೆಗಳನ್ನು ಹಾಕಿದನು. ಶ್ಲಾಘ್ಯವಾದ ಮಾತುಗಳನ್ನು ಹೇಳಿದನು. ಹೀಗೆ ರಾಕ್ಷಸೇಂದ್ರನು ಆ ಬ್ರಾಹ್ಮಣರನ್ನು ಚೆನ್ನಾಗಿ ಪೂಜಿಸಿ ಗೌರವಿಸಿದನು. ರಾಜನಿಂದ ಸಮರ್ಚಿತರಾದ ಬ್ರಾಹ್ಮಣರೆಲ್ಲರೂ ಆ ಸಮಯದಲ್ಲಿ ನಕ್ಷತ್ರಗಳಿಗೆ ಒಡೆಯನಾದ ಚಂದ್ರನಂತೆಯೇ ವಿರಾಜಿಸುತ್ತಿದ್ದರು.

ಅನಂತರ ರಾಕ್ಷಸೇಂದ್ರನು ಮಧು-ಘೃತಗಳಿಂದ ನೆನೆಸಲ್ಪಟ್ಟ ಶ್ರೇಷ್ಠ ವಾದ ಅನ್ನದಿಂದ ಪೂರ್ಣವಾಗಿದ್ದ, ವಜ್ರಖಚಿತವಾಗಿದ್ದ, ಶುದ್ಧವಾಗಿಯೂ ಮಂಗಳಕರವಾಗಿಯೂ ಇದ್ದ ಸುವರ್ಣಮಯವಾದ ಪಾತ್ರೆಗಳನ್ನು ಬ್ರಾಹ್ಮಣರೆಲ್ಲರಿಗೂ ದಾನಮಾಡಿದನು.

ಆ ರಾಕ್ಷಸನ ಅರಮನೆಯಲ್ಲಿ ಆಷಾಢ ಮತ್ತು ಮಾಘಮಾಸಗಳ ಹುಣ್ಣಿಮೆಗಳಲ್ಲಿ ಬಹಳ ಮಂದಿ ಬ್ರಾಹ್ಮಣರು ಯಥೇಚ್ಛವಾದ ಮೃಷ್ಟಾನ್ನ ಭೋಜನವನ್ನೂ ಸತ್ಕಾರವನ್ನೂ ರಾಕ್ಷಸರಾಜನಿಂದ ಪಡೆದುಕೊಳ್ಳುತ್ತಿದ್ದರು.

ಅದರಲ್ಲಿಯೂ ವಿಶೇಷವಾಗಿ ಶರದೃತುವಿನ ಕಡೆಯಲ್ಲಿ ಕಾರ್ತಿಕಮಾಸದ ಹುಣ್ಣಿಮೆಯಂದು ಆ ರಾಕ್ಷಸರಾಜನು ಬ್ರಾಹ್ಮಣರಿಗೆ ಹೇರಳವಾದ ರತ್ನಗಳನ್ನು ದಾನಮಾಡುತ್ತಿದ್ದನೆಂಬುದನ್ನು ನಾವೂ ಕೇಳಿದ್ದೇವೆ. ಭೋಜನವಾದನಂತರ ರಾಕ್ಷಸರಾಜನು ಚಿನ್ನವನ್ನೂ, ಬೆಳ್ಳಿಯನ್ನೂ, ಮಣಿಗಳನ್ನೂ, ಮುತ್ತುಗಳನ್ನೂ, ಬಹುಮೂಲ್ಯವಾದ ವಜ್ರಗಳನ್ನೂ, ವೈಡೂರ್ಯಮಣಿಗಳನ್ನೂ, ರಂಕುಮೃಗದ ಚರ್ಮಗಳನ್ನೂ, ರತ್ನರಾಶಿಗಳನ್ನೂ ದಕ್ಷಿಣಾರ್ಥವಾಗಿ ಬ್ರಾಹ್ಮಣರ ಮುಂದಿಟ್ಟು ಹೇಳಿದನು :

ಗೃಹ್ಣೀತ ರತ್ನಾನ್ಯೇತಾನಿ ಯಥೋತ್ಸಾಹಂ ಯಥೇಷ್ಟತಃ ।
ಯೇಷು ಯೇಷು ಚ ಭಾಣ್ಡೇಷು ಭುಕ್ತಂ ವೋ ದ್ವಿಜಸತ್ತಮಾಃ ।
ತಾನ್ಯೇವಾದಾಯ ಗಚ್ಛಧ್ವಂ ಸ್ವವೇಶ್ಮಾನೀತಿ ಭಾರತ ॥೨೨॥

"ಬ್ರಾಹ್ಮಣಶ್ರೇಷ್ಠರೇ! ನಿಮ್ಮ ಅಪೇಕ್ಷೆ ಮತ್ತು ಉತ್ಸಾಹಗಳಿಗೆ ಅನುಸಾರವಾಗಿ ಈ ರತ್ನರಾಶಿಗಳನ್ನು ತೆಗೆದುಕೊಳ್ಳಿರಿ ಮತ್ತು ನೀವು ಯಾವ ಯಾವ ಸುವರ್ಣಪಾತ್ರೆಗಳಲ್ಲಿ ಭೋಜನಮಾಡಿರುವಿರೋ– ಆ ಸುವರ್ಣಪಾತ್ರೆಗಳನ್ನೂ ತೆಗೆದುಕೊಂಡು ನಿಮ್ಮ ನಿಮ್ಮ ಮನೆಗಳಿಗೆ ಹೋಗಿರಿ."

ಮಹಾತ್ಮನಾದ ರಾಕ್ಷಸೇಂದ್ರನು ಈ ಮಾತನ್ನು ಹೇಳಿದನಂತರ ಬ್ರಾಹ್ಮಣರು ತಮ್ಮ ಇಚ್ಛಾನುಸಾರವಾಗಿ ಆ ರತ್ನಗಳನ್ನು ತೆಗೆದುಕೊಂಡರು. ಬಳಿಕ ಶುಭಕರವಾದ ಮತ್ತು ಮಹಾಮೌಲ್ಯವಾದ ರತ್ನಗಳಿಂದ ಸಂಪೂಜಿತ ರಾದ, ಉಜ್ಜ್ವಲವಾದ ವಸ್ತ್ರಗಳನ್ನು ಧರಿಸಿದ್ದ ಆ ಎಲ್ಲ ಬ್ರಾಹ್ಮಣರೂ ಸುಪ್ರೀತರಾದರು. ವಿರೂಪಾಕ್ಷನು ಬ್ರಾಹ್ಮಣರನ್ನು ಹಿಂಸಿಸದಂತೆ ನಾನಾ ದೇಶಗಳಿಂದ ಬಂದಿದ್ದ ರಾಕ್ಷಸರನ್ನು ಪ್ರತಿರೋಧಿಸುತ್ತಾ ಬ್ರಾಹ್ಮಣಶ್ರೇಷ್ಠರನ್ನು ಕುರಿತು ಪುನಃ ಹೇಳಿದನು :

ಅದ್ಯೈಕಂ ದಿವಸಂ ವಿಪ್ರಾ ನ ವೋಽಸ್ತೀಹ ಭಯಂ ಕ್ವಚಿತ್ ।
ರಾಕ್ಷಸೇಭ್ಯಃ ಪ್ರಮೋದಧ್ವಮಿಷ್ಟತೋ ಯಾತ ಮಾ ಚಿರಮ್ ॥

"ವಿಪ್ರಶ್ರೇಷ್ಠರೇ! ಈ ಒಂದು ದಿವಸ ನಿಮಗೆ ರಾಕ್ಷಸರ ಕಡೆಯಿಂದ ಯಾವ ವಿಧವಾದ ಭಯವೂ ಇರುವುದಿಲ್ಲ. ಆದುದರಿಂದ ಆನಂದವಾಗಿರಿ. ಇಚ್ಛೆಯಿದ್ದೆಡೆಗೆ ಬೇಗನೆ ಹೊರಟುಹೋಗಿರಿ. ಸಾವಕಾಶಮಾಡಬೇಡಿರಿ."

ವಿರೂಪಾಕ್ಷರಾಜನು ಹೀಗೆ ಹೇಳಿದೊಡನೆಯೇ ಬ್ರಾಹ್ಮಣಸಮೂಹವು ಎಲ್ಲ ಕಡೆಗಳಿಗೂ ಓಡತೊಡಗಿತು. ಗೌತಮನೂ ಸುವರ್ಣದ ಭಾರವನ್ನು ಬಹಳ ಕಷ್ಟದಿಂದ ಹೊತ್ತುಕೊಂಡು ರಾಜಧರ್ಮನ ನಿವಾಸಸ್ಥಾನವಾದ ಆಲದಮರದ ಬಳಿಗೆ ತ್ವರೆಯಿಂದಲೇ ಬಂದನು. ಆ ವೇಳೆಗೆ ಅವನು ಅತ್ಯಂತ ಆಯಾಸಗೊಂಡಿದ್ದನು. ಹಸಿವಿನಿಂದಲೂ ಬಹಳವಾಗಿ ಬಳಲಿದ್ದನು.

ಅನಂತರ ಪಕ್ಷಿಶ್ರೇಷ್ಠನಾದ, ಮಿತ್ರವತ್ಸಲನಾದ ರಾಜಧರ್ಮನು ಗೌತಮನ ಸಮೀಪಕ್ಕೆ ಬಂದು ಅವನನ್ನು ಸ್ವಾಗತಿಸಿ ಅಭಿನಂದಿಸಿದನು. ರಾಜಧರ್ಮಪಕ್ಷಿಯು ರೆಕ್ಕೆಗಳ ಅಗ್ರಭಾಗಗಳನ್ನು ಅಳ್ಳಾಡಿಸುತ್ತಾ ಗಾಳಿಯನ್ನು ಬೀಸಿ ಗೌತಮನ ಆಯಾಸವನ್ನು ಪರಿಹರಿಸಿತು. ಅನಂತರ ಶಾಸ್ತ್ರವಿಧಿಗೆ ಅನುಸಾರವಾಗಿ ಗೌತಮನನ್ನು ಸಂಪೂಜಿಸಿ ಅವನಿಗೆ ಭೋಜನವನ್ನೂ ಸಿದ್ಧಪಡಿಸಿತು.

ಗೌತಮನು ಚೆನ್ನಾಗಿ ಊಟಮಾಡಿದನು. ವಿಶ್ರಾಂತಿಯನ್ನೂ ಪಡೆದು ಕೊಂಡನು. ವಿಶ್ರಾಂತಿಸುಖವನ್ನು ಅನುಭವಿಸುತ್ತಿದ್ದಾಗ ಹೀಗೆ ಚಿಂತಿಸ ತೊಡಗಿದನು :

“ಅಯ್ಯೋ! ನಾನು ಲೋಭ-ಮೋಹಗಳಿಂದ ಪ್ರೇರಿತನಾಗಿ ಅತ್ಯಂತ ಭಾರವಾಗಿರುವ ಈ ಸುಂದರ ಸುವರ್ಣವನ್ನು ರಾಕ್ಷಸನ ನಗರದಿಂದ ಹೊತ್ತು ತಂದಿದ್ದೇನೆ. ನಾನು ಇನ್ನೂ ಬಹಳ ದೂರದವರೆಗೆ ಪ್ರಯಾಣ ಮಾಡಬೇಕಾಗಿದೆ. ಹಸಿವನ್ನು ಹಿಂಗಿಸಿಕೊಳ್ಳಲು ಮತ್ತು ಪ್ರಾಣಗಳನ್ನು ರಕ್ಷಿಸಿಕೊಳ್ಳಲು ಹಾದಿಯಲ್ಲಿ ನನಗೆ ತಿನ್ನಲು ಯಾವ ಆಹಾರವೂ ಸಿಕ್ಕುವುದಿಲ್ಲ. ನಾನು ಯಾವ ಉಪಾಯದಿಂದ ಶಬರಾಲಯಕ್ಕೆ ಹೋಗುವವರೆಗೂ ಪ್ರಾಣವನ್ನು ಧಾರಣೆಮಾಡಿಕೊಳ್ಳಲಿ? ಹೇಗೆ ಮಾಡಿದರೆ ನಾನು ಪ್ರಾಣ ಸಹಿತನಾಗಿ ಮತ್ತು ಈ ಬಹುಭಾರವಾದ ಚಿನ್ನವನ್ನು ಹೊತ್ತುಕೊಂಡು ನನ್ನ ಊರಿಗೆ ಹೋಗಬಲ್ಲೆನು?” ಎಷ್ಟೇ ಯೋಚಿಸಿದರೂ ಗೌತಮನಿಗೆ ದಾರಿಯಲ್ಲಿ ತಿನ್ನಲು ಯಾವ ಆಹಾರವೂ ಸಿಕ್ಕುವುದಾಗಿ ಕಂಡುಬರಲಿಲ್ಲ. ಅಷ್ಟರಲ್ಲಿಯೇ ಕೃತಘ್ನನಾದ ಗೌತಮನ ಮನಸ್ಸಿನಲ್ಲಿ ಒಂದು ಉಪಾಯವು ಹೊಳೆಯಿತು.

ಅಯಂ ಬಕಪತಿಃ ಪಾರ್ಶ್ವೇ ಮಾಂಸರಾಶಿಃ ಸ್ಥಿತೋ ಮಹಾನ್ ।
ಇಮಂ ಹತ್ವಾ ಗೃಹೀತ್ವಾ ಚ ಯಾಸ್ಯೇಽಹಂ ಸಮಭಿದ್ರುತಮ್ ॥

ಬಕಪಕ್ಷಿಗಳಿಗೆ ರಾಜನಾದ ಈ ರಾಜಧರ್ಮಪಕ್ಷಿಯು ನನ್ನ ಪಕ್ಕದಲ್ಲಿಯೇ ಮಲಗಿದೆ. ವಸ್ತುತಃ ಇದೊಂದು ಮಾಂಸದ ಮುದ್ದೆಯೇ ಆಗಿದೆ. ಈ ಪಕ್ಷಿಯನ್ನೇ ಕೊಂದು ಮಾರ್ಗಮಧ್ಯದ ಆಹಾರಾರ್ಥವಾಗಿ ಇದನ್ನೇ ಎತ್ತಿಕೊಂಡು ಶೀಘ್ರವಾಗಿ ಇಲ್ಲಿಂದ ಹೊರಟುಹೋಗುತ್ತೇನೆ."

೧೭೧ನೆಯ ಅಧ್ಯಾಯವು ಮುಗಿಯಿತು.

೧೭೨ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ಕೃತಘ್ನನಾದ ಗೌತಮನಿಂದ ಬಕಪಕ್ಷಿಯ ವಧೆ : ಅದಕ್ಕೆ ಪ್ರತಿಯಾಗಿ ವಿರೂಪಾಕ್ಷನಿಂದ ಗೌತಮನ ಸಂಹಾರ : ಕೃತಘ್ನನ ಮಾಂಸವು ಅಭಕ್ಷ್ಯವೆಂದು ಪರಿತ್ಯಾಗ

ಮಹಾರಾಜ! ಭೀಷ್ಮನು ಗೌತಮನ ಕಥೆಯನ್ನು ಮುಂದುವರಿಸಿ ಹೇಳುತ್ತಾನೆ :

"ಯುಧಿಷ್ಠಿರ! ಬಕಪಕ್ಷಿಯು ತನ್ನ ಮಿತ್ರನಾದ ಗೌತಮನ ರಕ್ಷಣಾರ್ಥವಾಗಿ (ಶೀತನಿವಾರಣಾರ್ಥವಾಗಿ) ಸಮೀಪದಲ್ಲಿಯೇ ವಾತಸಾರಥಿಯಾದ, ಮಹಾಜ್ವಾಲೆಗಳಿಂದ ಕೂಡಿದ್ದ ಯಜ್ಞೇಶ್ವರನನ್ನು ಪ್ರತಿಷ್ಠಾಪಿಸಿತು. ಬಳಿಕ ಮಿತ್ರನ ವಿಷಯದಲ್ಲಿ ಅತ್ಯಂತವಿಶ್ವಾಸವನ್ನಿಟ್ಟಿದ್ದ ಬಕಪಕ್ಷಿಗಳ ರಾಜನಾದ ರಾಜಧರ್ಮಪಕ್ಷಿಯು ಗೌತಮನ ಪಕ್ಕದಲ್ಲಿಯೇ ಮಲಗಿತು. ಕೃತಘ್ನನಾದ, ದುಷ್ಟಾತ್ಮನಾದ ಗೌತಮನು ಮಾರ್ಗದ ಆಹಾರಕ್ಕಾಗಿ ವಿಶ್ವಾಸದಿಂದ ಮಲಗಿದ್ದ ಆ ಬಕಪಕ್ಷಿಯನ್ನು ಕೊಲ್ಲಲಿಚ್ಛಿಸಿ ಮೇಲೆದ್ದು ಬಕಪಕ್ಷಿಯ ಮುಂದೆಯೇ ಇದ್ದ ಪ್ರದೀಪ್ತವಾದ ಕೊಳ್ಳಿಯಿಂದ–ವಿಶ್ವಾಸವನ್ನಿಟ್ಟುಕೊಂಡು ಮಲಗಿದ್ದ ಪಕ್ಷಿಯನ್ನು ಪ್ರಹರಿಸಿ ಕೊಂದುಹಾಕಿದನು. ಪ್ರಯಾಣಕಾಲದಲ್ಲಿ ಭಕ್ಷಣಾರ್ಥವಾಗಿ ಒಳ್ಳೆಯ ಆಹಾರವು ಸಿಕ್ಕಿದುದರ ಕಾರಣದಿಂದ ಗೌತಮನಿಗೆ ಅತ್ಯಾನಂದವೇ ಆಯಿತು. ಮಿತ್ರನ ವಧೆಯಿಂದ ಪಾಪಬರುವುದೆಂಬುದನ್ನೇ ಕ್ರೂರಿಯಾದ ಗೌತಮನು ಮನಗಾಣಲಿಲ್ಲ. ಸತ್ತುಬಿದ್ದಿದ್ದ ಆ ಪಕ್ಷಿಯ ರೆಕ್ಕೆಗಳನ್ನೂ ಪುಕ್ಕಗಳನ್ನೂ ಕಿತ್ತು ಎಸೆದು

ಮಾಂಸವನ್ನು ಅಗ್ನಿಯಲ್ಲಿ ಪಕ್ವಮಾಡಿದನು. ಪಕ್ವವಾದ ಪಕ್ಷಿಯ ಮಾಂಸವನ್ನೂ ಮತ್ತು ರಾಕ್ಷಸನಿತ್ತಿದ್ದ ಸುವರ್ಣವನ್ನೂ ಹೊತ್ತುಕೊಂಡು ಶಬರಾಲಯದ ಕಡೆಗೆ ಶೀಘ್ರವಾಗಿ ಪ್ರಯಾಣಮಾಡಿದನು.

ರಾಜಧರ್ಮಪಕ್ಷಿಯು ಪ್ರತಿನಿತ್ಯವೂ ಅದರ ಮಿತ್ರನಾದ ವಿರೂಪಾಕ್ಷ ರಾಕ್ಷಸನ ಬಳಿಗೆ ಹೋಗಿಬರುತ್ತಿದ್ದಿತು. ಆ ದಿನ ಪಕ್ಷಿಯು ಬರಲೇ ಇಲ್ಲ. ಮಾರನೆಯ ದಿನವೂ ಬರಲಿಲ್ಲ. ಆಗ ವಿರೂಪಾಕ್ಷನು ತನ್ನ ಮಗನಿಗೆ ಹೇಳಿದನು:

"ಪುತ್ರ! ನನ್ನ ಪ್ರಿಯಮಿತ್ರನಾದ ಪಕ್ಷಿಶ್ರೇಷ್ಠನಾದ ರಾಜಧರ್ಮ ಪಕ್ಷಿಯನ್ನು ನಾನು ಕಾಣಲೇ ಇಲ್ಲ. ಆ ಪಕ್ಷಿಯು ಅನುದಿನವೂ ಪ್ರಾತಃ ಕಾಲವಾದೊಡನೆಯೇ ಬ್ರಹ್ಮನಿಗೆ ಅಭಿವಾದನಮಾಡುವ ಸಲುವಾಗಿ ಹೋಗು ತ್ತಿದ್ದಿತು. ಅಭಿವಾದನವನ್ನು ಮಾಡಿದನಂತರ ನನ್ನನ್ನು ನೋಡದೇ ಆ ಪಕ್ಷಿಯು ಎಂದೂ ತನ್ನ ನಿವಾಸಕ್ಕೆ ಹೋಗುತ್ತಿರಲಿಲ್ಲ. ಆದರೆ ಈಗ ಎರಡು ಸಾಯಂಸಂಧ್ಯೆಗಳು ಕಳೆದುಹೋದರೂ ಆ ಪಕ್ಷಿಯು ನನ್ನನ್ನು ಕಾಣಲು ಬರಲೇ ಇಲ್ಲ. ನನ್ನ ಮನಸ್ಸಿನಲ್ಲಿ ಕಳವಳವುಂಟಾಗಿದೆ. ಆದುದರಿಂದ ನೀನೀಗಲೇ ಹೋಗಿ ನನ್ನ ಮಿತ್ರನ ವಿಷಯವನ್ನು ತಿಳಿದು ಬಾ. ದ್ವಿಜಾಧಮನಾದ ಗೌತಮನು ಸ್ವಾಧ್ಯಾಯಶೂನ್ಯನಾಗಿದ್ದನು. ಬ್ರಹ್ಮವರ್ಚಸ್ಸೆಂಬುದೇ ಅವನಲ್ಲಿರಲಿಲ್ಲ. ಹಿಂಸಾಪ್ರವೃತಿಯಾಗಿದ್ದನು. ಅವನೇನಾದರೂ ನನ್ನ ಮಿತ್ರನನ್ನು ಕೊಂದಿರಬಹುದೇ ಎಂಬ ಶಂಕೆಯು ನನಗುಂಟಾಗಿದೆ. ಅವನ ಚೇಷ್ಟೆ ಗಳಿಂದಲೂ ಮತ್ತು ಮುಖಭಾವದಿಂದಲೂ ಅವನು ದುರಾಚಾರನೆಂಬು ದನ್ನೂ–ದುರ್ಬುದ್ಧಿಯುಳ್ಳವನೆಂಬುದನ್ನೂ ನಾನು ಗಮನಿಸಿದೆನು. ಅವನು ನಿರ್ದಯನಾಗಿದ್ದನು. ಭಯಂಕರನಾಗಿ ಕಾಣುತ್ತಿದ್ದನು. ಬಹಳ ದುಷ್ಟ ನಾಗಿದ್ದನು. ಕಳ್ಳನಂತೆ ಅಧಮನಾಗಿ ಕಾಣುತ್ತಿದ್ದನು. ಆ ಪಾಪಿಷ್ಠನು ಇಲ್ಲಿಂದ ಚಿನ್ನದ ರಾಶಿಯನ್ನು ಹೊತ್ತುಕೊಂಡು ರಾಜಧರ್ಮನಿದ್ದೆಡೆಗೇ ಹೋದನು. ಅದರಿಂದ ನನ್ನ ಮನಸ್ಸು ಬಹಳ ಉದ್ವಿಗ್ನವಾಗಿದೆ. ಪುತ್ರ! ನೀನೀಗಲೇ ಶೀಘ್ರವಾಗಿ ರಾಜಧರ್ಮನ ನಿವಾಸಕ್ಕೆ ಹೋಗಿ ವಿಶುದ್ಧಾತ್ಮನಾದ ಆ ನನ್ನ ಪ್ರಿಯಮಿತ್ರನು ಬದುಕಿರುವನೇ ಇಲ್ಲವೇ?–ಎಂಬುದನ್ನು ತಿಳಿದು ಬಾ. ಬೇಗ ಹೋಗು. ಸಾವಕಾಶಮಾಡಬೇಡ."

ಯುಧಿಷ್ಠಿರ! ತಂದೆಯ ಆಜ್ಞೆಯಂತೆ ರಾಕ್ಷಸಪುತ್ರನು ಹಲವಾರು ರಾಕ್ಷಸರ ಸಮೇತನಾಗಿ ಅತ್ಯಂತತ್ವರೆಯಿಂದ ರಾಜಧರ್ಮನ ನಿವಾಸಸ್ಥಾನವಾದ ವಟವೃಕ್ಷದ ಸಮೀಪಕ್ಕೆ ಹೋದನು. ಅಲ್ಲವನು ರಾಜಧರ್ಮಪಕ್ಷಿಯ ರೆಕ್ಕೆಗಳನ್ನೂ, ಮೂಳೆಗಳನ್ನೂ ನೋಡಿದನು. ಧೀಮಂತನಾದ ರಾಕ್ಷಸೇಂದ್ರನ ಪುತ್ರನು ರಾಜಧರ್ಮಪಕ್ಷಿಯ ಆ ಅವಸ್ಥೆಯನ್ನು ಕಂಡು ಬಹಳವಾಗಿ ಗೋಳಾಡಿದನು ಮತ್ತು ತ್ವರೆಯಿಂದ ಶಬರಾಲಯದ ಮಾರ್ಗವನ್ನು ಹಿಡಿದು ಹೋಗುತ್ತಿದ್ದ ಗೌತಮನನ್ನು ಹಿಡಿಯಲು ಪ್ರಯತ್ನಿಸಿದನು. ಸ್ವಲ್ಪದೂರ ಹೋಗುವುದರೊಳಗಾಗಿಯೇ ರಾಕ್ಷಸರು ಗೌತಮನನ್ನು ಹಿಡಿದರು. ಹಾಗೆಯೇ ಗೌತಮನ ಬಳಿಯಲ್ಲಿದ್ದ, ರೆಕ್ಕೆಗಳಿಂದಲೂ ಮೂಳೆಗಳಿಂದಲೂ ಮತ್ತು ಕಾಲುಗಳಿಂದಲೂ ವಿಹೀನವಾಗಿದ್ದ ರಾಜಧರ್ಮಪಕ್ಷಿಯ ಶರೀರವನ್ನೂ ತೆಗೆದುಕೊಂಡರು. ರಾಕ್ಷಸರು ಗೌತಮನನ್ನೂ ಹಿಡಿದುಕೊಂಡು ಬಹಳ ಬೇಗ ರಾಕ್ಷಸನ ರಾಜಧಾನಿಯಾದ ಮೇರುವ್ರಜಕ್ಕೆ ಹೋದರು. ವಿರೂಪಾಕ್ಷರಾಜನಿಗೆ ರಾಜಧರ್ಮಪಕ್ಷಿಯ ಶರೀರವನ್ನೂ ಕೃತಘ್ನನಾದ ಮಹಾಪಾಪಿಷ್ಠನಾದ ಗೌತಮನನ್ನೂ ತೋರಿಸಿದರು. ತನ್ನ ಪ್ರಿಯಮಿತ್ರನಿಗೆ ಉಂಟಾದ ದುಃಸ್ಥಿತಿಯನ್ನು ನೋಡಿ ರಾಜನು ಅಮಾತ್ಯ- ಪುರೋಹಿತರ ಸಮೇತನಾಗಿ ರೋದನಮಾಡಿದನು. ಅವನ ಅರಮನೆಯಲ್ಲಿ ದೊಡ್ಡ ಆರ್ತನಾದವು ಸರ್ವತ್ರ ಕೇಳಿಬರುತ್ತಿದ್ದಿತು. ಆ ಪಟ್ಟಣದಲ್ಲಿದ್ದ ಸ್ತ್ರೀಯರು ಮಕ್ಕಳಾದಿಯಾಗಿ ಎಲ್ಲರೂ ರಾಜಧರ್ಮಪಕ್ಷಿಯ ಮರಣವಾರ್ತೆಯನ್ನು ಕೇಳಿ ಅಸ್ವಸ್ಥಚಿತ್ತರಾದರು.

ದುಃಖತಪ್ತನಾಗಿದ್ದ ರಾಕ್ಷಸರಾಜನು ತನ್ನ ಮಗನನ್ನು ಕುರಿತು ಹೇಳಿದನು:

"ಪುತ್ರ! ಈ ಪಾಪಿಷ್ಠನನ್ನು ಈಗಲೇ ಸಂಹರಿಸು. ಇವನ ಮಾಂಸದಿಂದ (ಮಾಂಸವನ್ನು ತಿಂದು) ಈ ಎಲ್ಲ ರಾಕ್ಷಸರೂ ಯಥೇಚ್ಛವಾಗಿ ವಿಹರಿಸಲಿ. ರಾಕ್ಷಸರೇ! ಪಾಪಾಚಾರಿಯಾದ, ಪಾಪಕರ್ಮನಾದ, ಪಾಪಾತ್ಮನಾದ, ಪಾಪಸಾಧನನಾದ ಈ ಗೌತಮನನ್ನು ನೀವೇ ಸಂಹರಿಸಬೇಕೆಂಬುದು ನನ್ನ ಅಭಿಮತವಾಗಿದೆ."

ಯುಧಿಷ್ಠಿರ! ವಿರೂಪಾಕ್ಷನಿಂದ ಹೀಗೆ ಹೇಳಲ್ಪಟ್ಟ ಘೋರ ಪರಾಕ್ರಮಿಗಳಾದ ರಾಕ್ಷಸರು ಗೌತಮನು ಮಹಾಪಾಪಕರ್ಮಿಯಾಗಿದ್ದುದರಿಂದ ಅವನ ಮಾಂಸವನ್ನು ತಿನ್ನಲು ಇಚ್ಛೆಪಡಲಿಲ್ಲ.

"ಮಹಾರಾಜ! ಈ ಪುರುಷಾಧಮನನ್ನು ದರೋಡೆಕಾರರಿಗೆ ತಿನ್ನಲುಕೊಟ್ಟುಬಿಡುವುದೇ ಸಾಧುವಾಗಿದೆ. ಇವನ ಪಾಪವನ್ನು ಭಕ್ಷಿಸಲು ನೀನು ನಮಗೆ ಇವನನ್ನು ಒಪ್ಪಿಸುವುದು ಯೋಗ್ಯವಲ್ಲ"–ಎಂಬುದಾಗಿ ನಿಶಾಚರರು ತಲೆಬಾಗಿ ನಮಸ್ಕರಿಸುತ್ತಾ ರಾಕ್ಷಸೇಂದ್ರನಾದ ವಿರೂಪಾಕ್ಷನನ್ನು ಪ್ರಾರ್ಥಿಸಿಕೊಂಡರು.

ರಾಕ್ಷಸರ ಪ್ರಾರ್ಥನೆಗೆ ಮನ್ನಣೆಯನ್ನಿತ್ತು ವಿರೂಪಾಕ್ಷನು–'ಏವಮಸ್ತು' 'ಹಾಗೆಯೇ ಆಗಲಿ'– ಎಂದು ಹೇಳಿ– 'ಈ ಕೃತಘ್ನನನ್ನು ಈಗಲೇ ನೀವು ದಸ್ಯುಗಳಿಗೆ ಒಪ್ಪಿಸಿಬಿಡಿರಿ'– ಎಂದು ರಾಕ್ಷಸರಿಗೆ ಆಜ್ಞಾಪಿಸಿದನು. ರಾಕ್ಷಸರಾಜನು ಹೀಗೆ ಹೇಳಿದೊಡನೆಯೇ ಶೂಲ-ಪಟ್ಟಿಶಾಯುಧಗಳನ್ನು ಹಿಡಿದಿದ್ದ ರಾಕ್ಷಸರು ಪುರುಷಾಧಮನಾದ ಗೌತಮನನ್ನು ಚೂರು-ಚೂರಾಗಿ ಕತ್ತರಿಸಿ ದಸ್ಯುಗಳಿಗೆ ಭಕ್ಷಿಸಲು ಕೊಟ್ಟುಬಿಟ್ಟರು. ಆದರೆ ಮಹಾಪಾಪಿಷ್ಠನಾದ ಆ ಗೌತಮನ ಮಾಂಸವನ್ನು ತಿನ್ನಲು ದಸ್ಯುಗಳೂ ಇಚ್ಛೆಪಡಲಿಲ್ಲ. ಅಷ್ಟೇಕೆ! ಮಾಂಸಾಶಿಗಳಾದ ವನ್ಯಪ್ರಾಣಿಗಳೂ ಕೃತಘ್ನನಾದ ಗೌತಮನ ಮಾಂಸವನ್ನು ಮುಟ್ಟಲಿಲ್ಲ.

ಬ್ರಹ್ಮಘ್ನೇ ಚ ಸುರಾಪೇ ಚ ಚೌರೇ ಭಗ್ನವ್ರತೇ ತಥಾ ।
ನಿಷ್ಕೃತಿರ್ವಿಹಿತಾ ರಾಜನ್ಕೃತಘ್ನೇ ನಾಸ್ತಿ ನಿಷ್ಕೃತಿಃ ॥೨೫॥

ಮಹಾರಾಜ! ಬ್ರಹ್ಮಹತ್ಯೆಯನ್ನು ಮಾಡಿದವನಿಗೆ, ಮದ್ಯಪಾನವನ್ನು ಮಾಡಿದವನಿಗೆ, ಕಳ್ಳತನವನ್ನು ಮಾಡಿದವನಿಗೆ, ವ್ರತದಿಂದ ಭ್ರಷ್ಟನಾದವನಿಗೆ–ಶಾಸ್ತ್ರಗಳಲ್ಲಿ ಪ್ರಾಯಶ್ಚಿತ್ತದ ವಿಧಾನಗಳನ್ನು ಹೇಳಿದೆ. ಆದರೆ ಕೃತಘ್ನನಿಗೆ ಪಾಪವನ್ನು ಪರಿಹರಿಸಿಕೊಳ್ಳಲು ಯಾವ ಪ್ರಾಯಶ್ಚಿತ್ತವನ್ನೂ ಹೇಳಿಲ್ಲ.

ಮಿತ್ರದ್ರೋಹಿ, ಕ್ರೂರಿ, ನರಾಧಮ, ಕೃತಘ್ನ– ಇಂತಹ (ಗೌತಮನಂತಹ) ವ್ಯಕ್ತಿಗಳ ಮಾಂಸವನ್ನು ಮಾಂಸಾಶಿಗಳಾದ ಪ್ರಾಣಿಗಳಾಗಲೀ, ಕ್ರಿಮಿಗಳಾಗಲೀ ಭಕ್ಷಿಸುವುದಿಲ್ಲ."

ಒ೭೨ನೆಯ ಅಧ್ಯಾಯವು ಮುಗಿಯಿತು.

೧೭೩ನೆಯ ಅಧ್ಯಾಯ ಆಪದ್ಧರ್ಮಪರ್ವ (ಮುಂದುವರಿದಿದೆ.)

ರಾಜಧರ್ಮಪಕ್ಷಿಯೂ ಮತ್ತು ಗೌತಮನೂ ಪುನಃ ಜೀವಂತರಾದುದು

ಜನಮೇಜಯಮಹಾರಾಜ! ಭೀಷ್ಮನು ಗೌತಮನ ಕಥೆಯನ್ನು ಮುಂದುವರಿಸುತ್ತಾ ಹೇಳುತ್ತಾನೆ :

"ಯುಧಿಷ್ಠಿರ! ರಾಕ್ಷಸೇಶ್ವರನಾದ ವಿರೂಪಾಕ್ಷನು ರಾಜಧರ್ಮಪಕ್ಷಿಗೆ ರತ್ನಗಳಿಂದಲೂ, ಗಂಧದ ಕಾಷ್ಠಗಳಿಂದಲೂ, ಅನೇಕವಿಧವಾದ ವಸ್ತ್ರ ಗಳಿಂದಲೂ ಸಮಲಂಕೃತವಾಗಿದ್ದ ಚಿತೆಯನ್ನು ಸಿದ್ಧಗೊಳಿಸಿದನು. ಪ್ರತಾಪ ವಂತನಾದ ವಿರೂಪಾಕ್ಷರಾಜನು ಚಿತೆಯನ್ನು ತಾನೇ ಹೊತ್ತಿಸಿ ಪಕ್ಷಿರಾಜನ ಪ್ರೇತಕಾರ್ಯಗಳನ್ನು ವಿಧಿವತ್ತಾಗಿ ನೆರವೇರಿಸಿದನು. ಆ ಸಮಯಕ್ಕೆ ಸರಿ ಯಾಗಿ ದಕ್ಷನ ಮಗಳಾದ, ಪಯಸ್ವಿನಿಯಾದ (ಕೆಚ್ಚಲಿನಲ್ಲಿ ಹಾಲನ್ನು ತುಂಬಿಕೊಂಡಿದ್ದ) ಸುರಭಿದೇವಿಯು ಆ ಚಿತೆಯ ಮೇಲ್ಭಾಗದಲ್ಲಿ ನಿಂತು ಕೊಂಡಳು. ಹಾಲಿನಿಂದ ಮಿಶ್ರವಾದ ನೊರೆಯು ಅವಳ ಬಾಯಿಂದ ಜಾರಿ ರಾಜಧರ್ಮಪಕ್ಷಿಯಿದ್ದ ಚಿತೆಯ ಮೇಲೆ ಬಿದ್ದಿತು. ಆ ಹಾಲಿನ ನೊರೆಯ ಪ್ರಭಾವದಿಂದಾಗಿ ಅಗ್ನಿಯಲ್ಲಿ ಬೆಂದುಹೋಗಿದ್ದ ರಾಜಧರ್ಮಪಕ್ಷಿಯು ಜೀವಂತವಾಯಿತು. ಒಡನೆಯೇ ಆ ಪಕ್ಷಿಯು ಹಾರಿಕೊಂಡು ವಿರೂಪಾಕ್ಷನ ಬಳಿಗೆ ಹೋಯಿತು. ಅನಂತರ ದೇವರಾಜನಾದ ಇಂದ್ರನು ವಿರೂಪಾಕ್ಷನ ನಗರಕ್ಕೆ ಆಗಮಿಸಿ ವಿರೂಪಾಕ್ಷನನ್ನು ಕುರಿತು– "ರಾಕ್ಷಸೇಂದ್ರ! ಸೌಭಾಗ್ಯ ವಶದಿಂದ ನೀನು ರಾಜಧರ್ಮಪಕ್ಷಿಯನ್ನು ಬದುಕಿಸಿದೆ"–ಎಂಬುದಾಗಿ ಹೇಳಿ ಹಿಂದೆ ಬ್ರಹ್ಮನು ರಾಜಧರ್ಮನಿಗೆ ಶಾಪವನ್ನು ಕೊಟ್ಟಿದ್ದ ಪುರಾತನವಾದ ಇತಿಹಾಸವನ್ನು ಹೇಳಿದನು :

"ರಾಜಧರ್ಮಪಕ್ಷಿಯು ಅನುದಿನವೂ ತಪ್ಪದೇ ಬ್ರಹ್ಮನ ಸಭೆಗೆ ಹೋಗುತ್ತಿದ್ದಿತು. ಒಂದು ದಿನ ಬಕರಾಜನಿಗೆ ಬ್ರಹ್ಮಸಭೆಗೆ ಹೋಗಲು ಸಾಧ್ಯವಾಗಲೇ ಇಲ್ಲ. ಅದರಿಂದ ಕೋಪಗೊಂಡ ಬ್ರಹ್ಮನು ಪಕ್ಷಿರಾಜನಿಗೆ ಶಾಪಕೊಡುತ್ತಾ ಹೀಗೆ ಹೇಳಿದನು :

ಯಸ್ಮಾನ್ಮೂಢೋ ಮಮ ಸಭಾಂ ನಾಗತೋಽಸೌ ಬಕಾಧಮಃ ।
ತಸ್ಮಾದ್ವಧಂ ಸ ದುಷ್ಟಾತ್ಮಾ ನಾಚಿರಾತ್ಸಮವಾಪ್ಸ್ಯತಿ ॥೯॥

'ಮೂಢನಾದ, ದುಷ್ಟಾತ್ಮನಾದ ಆ ಬಕಾಧಮನು ನನ್ನ ಈ ಸಭೆಗೆ ಬಾರದಿರುವ ಕಾರಣ ಅತಿಶೀಘ್ರದಲ್ಲಿಯೇ ವಧಿಸಲ್ಪಡುತ್ತಾನೆ.'

ವಿರೂಪಾಕ್ಷ! ಬ್ರಹ್ಮನಿತ್ತ ಆ ಶಾಪದ ಪ್ರಭಾವದಿಂದಾಗಿ ಗೌತಮನಿಂದ ರಾಜಧರ್ಮನು ಹತನಾದನು. ಬ್ರಹ್ಮನೇ ಸುರಭಿದೇವಿಯ ಮೂಲಕವಾಗಿ ರಾಜಧರ್ಮಪಕ್ಷಿಯ ಚಿತೆಯ ಮೇಲೆ ಹಾಲಿನ ನೊರೆಯ ರೂಪವಾದ ಅಮೃತವನ್ನು ಸುರಿಸಿ ರಾಜಧರ್ಮಪಕ್ಷಿಯನ್ನು ಜೀವಂತಗೊಳಿಸಿದನು."

ಯುಧಿಷ್ಠಿರ! ಇಂದ್ರನು ವಿರೂಪಾಕ್ಷನೊಡನೆ ಹೀಗೆ ಹೇಳಿದನಂತರ ವಿರೂಪಾಕ್ಷನ ಪಕ್ಕದಲ್ಲಿಯೇ ಇದ್ದ ಬಕವು ಇಂದ್ರನಿಗೆ ಪ್ರಣಾಮಮಾಡಿ ಪ್ರಾರ್ಥಿಸಿಕೊಂಡಿತು :

ಯದಿ ತೇಽನುಗ್ರಹಕೃತಾ ಮಯಿ ಬುದ್ಧಿಃ ಸುರೇಶ್ವರ ।
ಸಖಾಯಂ ಮೇ ಸುದಯಿತಂ ಗೌತಮಂ ಜೀವಯೇತ್ಯುತ ॥೧೦॥

"ಸುರೇಶ್ವರನೇ! ನನ್ನ ವಿಷಯದಲ್ಲಿ ನಿನಗೆ ಅನುಗ್ರಹಬುದ್ಧಿಯೇ ಇರುವುದಾದರೆ ನನಗೆ ಅತ್ಯಂತಪ್ರಿಯಸಖನಾದ ಗೌತಮನನ್ನು ಬದುಕಿಸಿ ಕೊಡು."

ಯುಧಿಷ್ಠಿರ! ಇಂದ್ರನು ರಾಜಧರ್ಮಪಕ್ಷಿಯ ಪ್ರಾರ್ಥನೆಯನ್ನು ಅಂಗೀಕರಿಸಿ ಖಂಡ-ಖಂಡಗಳಾಗಿ ಬಿದ್ದಿದ್ದ ಗೌತಮನ ಶರೀರದ ಮೇಲೆ ಅಮೃತವನ್ನು ಚುಮುಕಿಸಿ ಜೀವಂತನನ್ನಾಗಿ ಮಾಡಿದನು. ರಾಜಧರ್ಮ ಪಕ್ಷಿಯು–ಭೋಜನಪಾತ್ರೆ, ಸುವರ್ಣ ಇವೇ ಮೊದಲಾದ ಐಶ್ವರ್ಯಗಳಿಂದ ಯುಕ್ತನಾಗಿದ್ದ ಗೌತಮನನ್ನು ಸಮೀಪಿಸಿ ಅವನನ್ನು ಆಲಿಂಗಿಸಿಕೊಂಡು ಪರಮಸಂತುಷ್ಟವಾಯಿತು. ಬಳಿಕ ಬಕರಾಜನಾದ ರಾಜಧರ್ಮಪಕ್ಷಿಯು ಮಹಾಪಾಪಿಷ್ಠನಾದ ಗೌತಮನನ್ನು ಐಶ್ವರ್ಯಸಹಿತವಾಗಿ ಬೀಳ್ಕೊಟ್ಟು ತನ್ನ ಆಲಯವನ್ನು ಸೇರಿತು. ಬಳಿಕ ಬಕಪಕ್ಷಿಯು ಹಿಂದಿನಂತೆಯೇ

ಬ್ರಹ್ಮನ ಸಭೆಗೆ ಹೋಯಿತು. ಬ್ರಹ್ಮನು ಮಹಾತ್ಮನಾದ ರಾಜಧರ್ಮನನ್ನು ಯಥೋಚಿತವಾದ ಆತಿಥ್ಯದಿಂದ ಸತ್ಕರಿಸಿದನು.

ಇತ್ತ ಗೌತಮನೂ ಹೊರಲಾಗದ ಐಶ್ವರ್ಯದೊಡನೆ ಶಬರಾಲಯ ವನ್ನು ಸೇರಿದನು. ವಿಧವೆಯಾಗಿದ್ದ ಶೂದ್ರಸ್ತ್ರೀಯಲ್ಲಿ ಪಾಪಾಚಾರಿಗಳಾದ ಅನೇಕಪುತ್ರರನ್ನು ಪಡೆದುಕೊಂಡನು. ಅದರಿಂದ ಕುಪಿತರಾದ ದೇವತೆಗಳು ಗೌತಮನನ್ನು ಶಪಿಸುತ್ತಾ ಹೇಳಿದರು :

ಕುಕ್ಷೌ ಪುನರ್ಭ್ವಾಃ ಪಾಪೋऽಯಂ ಜನಯಿತ್ವಾ ಚಿರಾತ್ಸುತಾನ್ ।
ನಿರಯಂ ಪ್ರಾಪ್ಸ್ಯತಿ ಮಹತ್ಕೃತಘ್ನೋऽಯಮಿತಿ ಪ್ರಭೋ ॥೧೮॥

"ಈ ಪಾಪಿಷ್ಠನು ಪತಿಹೀನಳಾದ ಶೂದ್ರಸ್ತ್ರೀಯಲ್ಲಿ ಬಹಳ ದಿವಸ ಗಳಿಂದಲೂ ಸಂತಾನವನ್ನು ಪಡೆದುಕೊಳ್ಳುತ್ತಲೇ ಇದ್ದಾನೆ. ಕೃತಘ್ನನಾದ ಈ ಗೌತಮನು ತಾನು ಮಾಡಿರುವ ಮಹಾಪಾಪಗಳಿಗಾಗಿ ಘೋರವಾದ ನರಕದಲ್ಲಿ ಬೀಳುತ್ತಾನೆ."

ಯುಧಿಷ್ಠಿರ! ಹಿಂದೆ ನಾರದರು ನನಗೆ ಈ ಆಖ್ಯಾನವನ್ನು ಸಂಪೂರ್ಣವಾಗಿ ಹೇಳಿದ್ದರು. ಅದನ್ನೇ ನಾನು ಸ್ಮರಿಸಿಕೊಂಡು ಅವರು ಹೇಗೆ ಹೇಳಿದ್ದರೋ ಹಾಗೆಯೇ ನಿನಗೆ ಎಲ್ಲವನ್ನೂ ಹೇಳಿರುತ್ತೇನೆ.

ಕುತಃ ಕೃತಘ್ನಸ್ಯ ಯಶಃ ಕುತಃ ಸ್ಥಾನಂ ಕುತಃ ಸುಖಮ್ ।
ಅಶ್ರದ್ಧೇಯಃ ಕೃತಘ್ನೋ ಹಿ ಕೃತಘ್ನೇ ನಾಸ್ತಿ ನಿಷ್ಕೃತಿಃ ॥೨೦॥

ಕೃತಘ್ನನಿಗೆ ಯಶಸ್ಸೆಲ್ಲಿಯದು? ಲೋಕದಲ್ಲಿ ಯಾವ ಸ್ಥಾನವು ತಾನೇ ಅವನಿಗೆ ಲಭಿಸುತ್ತದೆ? ಅವನಿಗೆ ಸುಖವೆಲ್ಲಿಯದು? ಕೃತಘ್ನನು ವಿಶ್ವಾಸಕ್ಕೆ ಯೋಗ್ಯನಲ್ಲ. ಕೃತಘ್ನನ ಪಾಪನಿವಾರಣೆಗೆ ಶಾಸ್ತ್ರಗಳಲ್ಲಿ ಯಾವ ಪ್ರಾಯ ಶ್ಚಿತ್ತವೂ ಉಕ್ತವಾಗಿಲ್ಲ.

ಮಿತ್ರದ್ರೋಹೋ ನ ಕರ್ತವ್ಯಃ ಪುರುಷೇಣ ವಿಶೇಷತಃ ।
ಮಿತ್ರಧ್ರುಙ್ನರಕಂ ಘೋರಮನನ್ತಂ ಪ್ರತಿಪದ್ಯತೇ ॥೨೧॥

ಮನುಷ್ಯನು ಎಂತಹ ಸಂದರ್ಭದಲ್ಲಿಯೂ ಮಿತ್ರದ್ರೋಹವನ್ನು ಮಾಡಬಾರದು. ಮಿತ್ರದ್ರೋಹವನ್ನು ಮಾಡಿದವನು ಅನಂತಕಾಲದವರೆಗೂ ಘೋರವಾದ ನರಕದಲ್ಲಿ ಬೀಳುತ್ತಾನೆ.

ಕೃತಜ್ಞೇನ ಸದಾ ಭಾವ್ಯಂ ಮಿತ್ರಕಾಮೇನ ಚೈವ ಹ ।
ಮಿತ್ರಾಚ್ಚ ಲಭತೇ ಸರ್ವಂ ಮಿತ್ರಾತ್ಪೂಜಾಂ ಲಭೇತ ಚ ॥೨೨॥

ಮಾಡಿದ ಉಪಕಾರವನ್ನು ಸದಾ ಸ್ಮರಿಸುವವನಾಗಿರಬೇಕು ಮತ್ತು ಮಿತ್ರಕಾಮನಾಗಿರಬೇಕು. ಮಿತ್ರನಿಂದಲೇ ಎಲ್ಲವೂ ಲಭ್ಯವಾಗುತ್ತದೆ. ಮಿತ್ರನಿಂದ ಪುರಸ್ಕಾರವೂ ಸಿಕ್ಕುತ್ತದೆ.

ಮಿತ್ರಾದ್ಭೋಗಾಂಶ್ಚ ಭುಞ್ಜೀತ ಮಿತ್ರೇಣಾಪತ್ಸು ಮುಚ್ಯತೇ ।
ಸತ್ಕಾರೈರುತ್ತಮೈರ್ಮಿತ್ರಂ ಪೂಜಯೇತ ವಿಚಕ್ಷಣಃ ॥೨೩॥

ಮಿತ್ರರ ಸಹಾಯದಿಂದ ಸಕಲವಿಧವಾದ ಭೋಗಗಳೂ ಲಭಿಸುತ್ತವೆ. ಆಪತ್ಕಾಲಗಳಲ್ಲಿ ಮಿತ್ರನು ಎಲ್ಲ ಆಪತ್ತುಗಳಿಂದಲೂ ಬಿಡುಗಡೆ ಮಾಡಿಸುತ್ತಾನೆ. ವಿಚಕ್ಷಣನಾದವನು ಉತ್ತಮವಾದ ಸತ್ಕಾರಗಳಿಂದ ಮಿತ್ರನನ್ನು ಗೌರವಿಸಬೇಕು.

ಪರಿತ್ಯಾಜ್ಯೋ ಬುಧೈಃ ಪಾಪಃ ಕೃತಘ್ನೋ ನಿರಪತ್ರಪಃ ।
ಮಿತ್ರದ್ರೋಹೀ ಕುಲಾಙ್ಗಾರಃ ಪಾಪಕರ್ಮಾ ನರಾಧಮಃ ॥೨೪॥

ವಿದ್ವಾಂಸರಾದವರು–ಮಿತ್ರದ್ರೋಹಿಯಾದ, ಕುಲಕಳಂಕನಾದ, ಲಜ್ಜಾರಹಿತನಾದ, ಪಾಪಕರ್ಮನಾದ, ನರಾಧಮನಾದ ಕೃತಘ್ನನನ್ನು ಸರ್ವಪ್ರಕಾರದಿಂದಲೂ ಪರಿತ್ಯಜಿಸಬೇಕು.

ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಯುಧಿಷ್ಠಿರ! ಹೀಗೆ ನಾನು ನಿನಗೆ ಪಾಪಿಯ, ಮಿತ್ರದ್ರೋಹಿಯ ಮತ್ತು ಕೃತಘ್ನನ ಪರಿಚಯವನ್ನು ಮಾಡಿಕೊಟ್ಟಿದ್ದೇನೆ. ಪುನಃ ನನ್ನಿಂದ ನೀನು ಯಾವ ವಿಷಯವನ್ನು ಕೇಳಬೇಕೆಂದಿರುವೆ?"

ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ :

"ಜನಮೇಜಯ! ಮಹಾತ್ಮನಾದ ಭೀಷ್ಮನು ಹೇಳಿದ ಮಾತನ್ನು ಕೇಳಿ ಯುಧಿಷ್ಠಿರನು ಪ್ರಸನ್ನಚಿತ್ತನಾದನು."

೧೭೩ನೆಯ ಅಧ್ಯಾಯವು ಮುಗಿಯಿತು.

ಆಪದ್ಧರ್ಮವೆಂಬ ಉಪಪರ್ವವು ಮುಗಿಯಿತು.

ವಿಶ್ಲೇಷಣೆ

ಶಾಂತಿಪರ್ವದಲ್ಲಿ ಎರಡನೆಯದಾದ ಆಪದ್ಧರ್ಮಪರ್ವವು ೧೩೧ನೆಯ ಅಧ್ಯಾಯದಿಂದ ಪ್ರಾರಂಭವಾಗಿ ೧೭೩ನೆಯ ಅಧ್ಯಾಯಕ್ಕೆ ಮುಗಿಯುತ್ತದೆ. ಯುಧಿಷ್ಠಿರನು ಪ್ರಶ್ನಿಸುವುದು, ಭೀಷ್ಮನು ಉತ್ತರಹೇಳುವುದು–ಇದು ಎಲ್ಲ ಪ್ರಕರಣಗಳಲ್ಲಿಯೂ ತಪ್ಪದೇ ಬರುತ್ತದೆ. ೧೬೪ನೆಯ ಅಧ್ಯಾಯದಲ್ಲಿ ಯುಧಿಷ್ಠಿರನು ನೀಚಪುರುಷರ ಲಕ್ಷಣಗಳನ್ನು ಪ್ರಶ್ನಿಸುತ್ತಾನೆ. ಹನ್ನೊಂದು ಶ್ಲೋಕಗಳಲ್ಲಿ ಭೀಷ್ಮನು ಕ್ರೂರಿಗಳ ಲಕ್ಷಣಗಳನ್ನು ಮನದಟ್ಟು ಮಾಡಿಕೊಡುತ್ತಾನೆ. ೧೩ ಶ್ಲೋಕಗಳಿಂದ ಆ ಅಧ್ಯಾಯವು ಮುಗಿಯುತ್ತದೆ. ೧೬೫ನೆಯ ಅಧ್ಯಾಯದಲ್ಲಿ ಯುಧಿಷ್ಠಿರನು ಪ್ರಶ್ನಿಸುವ ಪ್ರಸಂಗವಿಲ್ಲ. ಇದ್ದಕ್ಕಿದ್ದಂತೆಯೇ ಭೀಷ್ಮನು ಪ್ರಾಯಶ್ಚಿತ್ತಪ್ರಕರಣವನ್ನು ಪ್ರಾರಂಭಿಸುತ್ತಾನೆ. ಈ ಪ್ರಾಯಶ್ಚಿತ್ತಪ್ರಕರಣವು ಶಾಂತಿಪರ್ವದ ೩೪ ಮತ್ತು ೩೫ನೆಯ ಅಧ್ಯಾಯಗಳಲ್ಲಿಯೂ ಬಂದಿರುತ್ತದೆ. ಅಲ್ಲಿ ವ್ಯಾಸರು ಯುಧಿಷ್ಠಿರನಿಗೆ ಪ್ರಾಯಶ್ಚಿತ್ತಪ್ರಕರಣವನ್ನು ಹೇಳುತ್ತಾರೆ. ಪ್ರಾಯಶ್ಚಿತ್ತವಿಧಿಗಳಲ್ಲಿ ಅಲ್ಲಿ ಹೇಳಿರುವುದಕ್ಕೂ ಇಲ್ಲಿ ಹೇಳಿರುವುದಕ್ಕೂ ಕೆಲವು ವ್ಯತ್ಯಾಸಗಳು ಇವೆ. ಕೆಲವು ಅಲ್ಲಿ ಹೇಳಿರುವಂತೆಯೇ ಇಲ್ಲಿಯೂ ಇವೆ. ಈ ಅಧ್ಯಾಯವು ಮುಗಿದೊಡನೆಯೇ ನಕುಲನು ಖಡ್ಗದ ವಿಷಯವಾಗಿ ಭೀಷ್ಮನನ್ನು ಪ್ರಶ್ನಿಸುವ ಪ್ರಕರಣವಿದೆ. ೧೬೬ನೆಯ ಅಧ್ಯಾಯದಲ್ಲಿ ಖಡ್ಗದ ಇತಿಹಾಸವಿದೆ. ೧೬೭ನೆಯ ಅಧ್ಯಾಯದ ಮೊದಲನೆಯ ಶ್ಲೋಕದಲ್ಲಿ ಭೀಷ್ಮನು ಖಡ್ಗದ ಪ್ರಕರಣವನ್ನು ಹೇಳಿ ಮೌನಿಯಾದನಂತರ ಯುಧಿಷ್ಠಿರನು ಮನೆಗೆ ಹೋದನೆಂದೂ ಮತ್ತು ಅಲ್ಲಿ ತನ್ನ ನಾಲ್ವರು ಅನುಜರನ್ನೂ ಮತ್ತು ವಿದುರನನ್ನೂ ಧರ್ಮ-ಅರ್ಥ ಮತ್ತು ಕಾಮಗಳ ವಿಷಯವಾಗಿ ಪ್ರಶ್ನಿಸಿದನೆಂದೂ ಹೇಳಿದೆ. ಶ್ರೀಕೃಷ್ಣನು ಇವರೊಡನೆ ಹೋಗುವುದಿಲ್ಲ. ಇಲ್ಲಿ ಶ್ರೀಕೃಷ್ಣನ ಪ್ರಸ್ತಾಪವೇ ಬರುವುದಿಲ್ಲ. ವಿದುರನೇ ಮೊದಲಾದ ಐವರೂ ಧರ್ಮ-ಕಾಮಗಳ ವಿಷಯದಲ್ಲಿ ತಮ್ಮ-ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾರೆ. ಕಡೆಗೆ ಯುಧಿಷ್ಠಿರನು ತನ್ನ ಅಭಿಪ್ರಾಯವನ್ನೂ ತಿಳಿಯಪಡಿಸುತ್ತಾನೆ. ಅದನ್ನು ಎಲ್ಲರೂ ಶ್ಲಾಘಿಸುತ್ತಾರೆ. ಐವರು ಮಾತ್ರವೇ ಅಲ್ಲ ; ಗಿರಂ ನರೇನ್ದ್ರಾಃ ಪ್ರಶಶಂಸುರೇವ ತೇ– ಎಲ್ಲ ರಾಜರೂ ಯುಧಿಷ್ಠಿರನ ಮಾತನ್ನು ಪ್ರಶಂಸಿಸಿದರು–ಎಂದಿದೆ. ರಾಜರೆಲ್ಲರೂ

ಯುಧಿಷ್ಠಿರನೊಡನೆ ಮನೆಗೆ ಹೋಗಿದ್ದರೆಂಬ ವಿಷಯವು ಹಿಂದೆ ಬಂದಿಲ್ಲ. ಕಡೆಯಲ್ಲಿ ಯುಧಿಷ್ಠಿರನು ಪುನಃ ಮನೆಯಿಂದ ಭೀಷ್ಮನ ಬಳಿಗೆ ಬಂದನೆಂಬ ವಿಷಯವೂ ಇಲ್ಲ. ೧೬೭ನೆಯ ಅಧ್ಯಾಯದ ಕಡೆಯ ಶ್ಲೋಕದಲ್ಲಿ ಪುನಃ ಯುಧಿಷ್ಠಿರನು ಉದಾರಚಿತ್ತನಾದ ಗಂಗಾಪುತ್ರನಾದ ಭೀಷ್ಮನನ್ನು ಪ್ರಶ್ನಿಸಿದನು–ಎಂದಿದೆ. ೧೬೮ನೆಯ ಅಧ್ಯಾಯದಲ್ಲಿಯೂ ಯುಧಿಷ್ಠಿರನು ಭೀಷ್ಮನನ್ನು ಮೈತ್ರಿಗೆ ಯೋಗ್ಯರಾದ ಪುರುಷರ ಲಕ್ಷಣಗಳನ್ನು ಪ್ರಶ್ನಿಸಿದ್ದಾನೆ. ೧೬೪ನೆಯ ಅಧ್ಯಾಯದಲ್ಲಿ ಯುಧಿಷ್ಠಿರನು ನೀಚಪುರುಷರ ಲಕ್ಷಣಗಳನ್ನು ಕೇಳಿದ್ದನು. ೧೬೪ನೆಯ ಅಧ್ಯಾಯದೊಡನೆ ೧೬೮ನೆಯ ಅಧ್ಯಾಯವು ಯಥಾನುಕ್ರಮವಾಗಿ ಹೊಂದಿಕೊಳ್ಳುತ್ತದೆ. ಮಧ್ಯದ ೩ ಅಧ್ಯಾಯಗಳು ಅಸಂಗತವಾಗಿ ಸೇರಿಕೊಂಡಿರುವಂತೆ ಕಾಣುತ್ತದೆ. ಈ ಮೂರು ಅಧ್ಯಾಯಗಳೂ ಗ್ರಂಥದ ಎಲ್ಲ ಪಾಠಗಳಲ್ಲಿಯೂ ಇವೆ.

☆

ಮೋಕ್ಷಧರ್ಮಪರ್ವ

೧೭೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ

ಶೋಕಾಕುಲವಾದ ಮನಸ್ಸಿಗೆ ಶಾಂತಿಯನ್ನು ತಂದುಕೊಳ್ಳುವ ವಿಷಯದಲ್ಲಿ ಸೇನಜಿತನ ಮತ್ತು ಬ್ರಾಹ್ಮಣನ ಸಂವಾದಕಥನ

ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

ಧರ್ಮಾಃ ಪಿತಾಮಹೇನೋಕ್ತಾ ರಾಜಧರ್ಮಾಶ್ರಿತಾಃ ಶುಭಾಃ ।
ಧರ್ಮಮಾಶ್ರಮಿಣಾಂ ಶ್ರೇಷ್ಠಂ ವಕ್ತುಮರ್ಹಸಿ ಪಾರ್ಥಿವ ॥೧॥

"ಪಿತಾಮಹ! ನೀನು ಇದುವರೆಗೂ ರಾಜಧರ್ಮಸಂಬಂಧವಾದ, ರಾಜರಿಗೆ ಶುಭಕರವಾದ ಧರ್ಮಗಳನ್ನು ವಿವರಿಸಿ ಹೇಳಿರುವೆ. ಈಗ ನೀನು

ಚತುರಾಶ್ರಮಿಗಳಿಗೆ ಶ್ರೇಷ್ಠವಾದ ಧರ್ಮವು ಯಾವುದೆಂಬುದನ್ನು ತಿಳಿಯಪಡಿಸು."

ಭೀಷ್ಮನು ಹೇಳುತ್ತಾನೆ :

ಸರ್ವತ್ರ ವಿಹಿತೋ ಧರ್ಮಃ ಸ್ವರ್ಗ್ಯಃ ಸತ್ಯಫಲಂ ತಪಃ ।
ಬಹುದ್ವಾರಸ್ಯ ಧರ್ಮಸ್ಯ ನೇಹಾಸ್ತಿ ವಿಫಲಾ ಕ್ರಿಯಾ ॥೨॥

"ಯುಧಿಷ್ಠಿರ! ವೇದಗಳಲ್ಲಿ ಎಲ್ಲ ಆಶ್ರಮಿಗಳಿಗೂ ಸ್ವರ್ಗಫಲಸಾಧಕವಾದ ಧರ್ಮವು ಹೇಳಲ್ಪಟ್ಟಿದೆ. ಆದರೆ ಸದ್ವಸ್ತುವಿನ ಫಲವು ಸಿಕ್ಕಬೇಕಾದರೆ (ಆತ್ಮಸಾಕ್ಷಾತ್ಕಾರವಾಗಬೇಕಾದರೆ) ಶ್ರವಣ-ಮನನ-ನಿದಿಧ್ಯಾಸನಾತ್ಮಕವಾದ ತಪಸ್ಸನ್ನೇ ಮಾಡಬೇಕು. ಅನೇಕಮಾರ್ಗಗಳಿರುವ ಧರ್ಮದ ಸಾಧನೆಗಾಗಿ ಮಾಡುವ ಯಾವ ಕಾರ್ಯವೂ ವಿಫಲವಾಗುವುದಿಲ್ಲ. ಧರ್ಮಸಾಧನೆಗೆ (ಆತ್ಮಧರ್ಮಸಾಧನೆಗೆ) ಅನೇಕಮಾರ್ಗಗಳಿವೆ. ಒಬ್ಬೊಬ್ಬರೂ ಒಂದೊಂದು ಮಾರ್ಗವನ್ನು ಕಂಡುಕೊಂಡಿರುತ್ತಾರೆ. ಯಾವ ಮಾರ್ಗವೂ ತಪ್ಪಲ್ಲ. ಆತ್ಮಸಾಕ್ಷಾತ್ಕಾರಕ್ಕಾಗಿ ಮಾಡುವ ಯಾವ ಕಾರ್ಯವೂ ವ್ಯರ್ಥವಲ್ಲ. [ಎಲ್ಲ ವೇದಗಳಲ್ಲಿಯೂ ಸ್ವರ್ಗಸಾಧನವಾದ ಧರ್ಮವು ವಿಹಿತವಾಗಿದೆ. ಸತ್ಯವಾದ ಫಲವುಳ್ಳ ತಪಸ್ಸೂ ಹೇಳಲ್ಪಟ್ಟಿದೆ. ಹೀಗೆ ಧರ್ಮವು ಬಹುವಿಧವಾಗಿದೆ. ಧರ್ಮಾಚರಣೆಯು ಎಂದೂ ವಿಫಲವಾಗುವುದಿಲ್ಲ.] (**ಸ್ವರ್ಗ್ಯಃ ಸತ್ಯಫಲಂ ತಪಃ**– ಎಂಬುವುದಕ್ಕೆ ಬದಲಾಗಿ ವ್ಯಾಖ್ಯಾನಕಾರರ ಪಾಠದಲ್ಲಿ **ಸತ್ಯಪ್ರೇತ್ಯ ತಪಃಫಲಮ್** ಎಂಬುದಾಗಿದೆ. ಇದಕ್ಕೆ ವ್ಯಾಖ್ಯಾನಕಾರರು **ಸತಿ ಸದ್ವಸ್ತುನಿ ವಿಷಯೇ, ತಪಃ ಆಲೋಚನಂ ಶ್ರವಣಮನನನಿದಿಧ್ಯಾಸನಾತ್ಮಕಂ, ತಸ್ಯ ಫಲಂ ಸಾಕ್ಷಾತ್ಕಾರಃ** ಸದ್ವಸ್ತುವಿನ ವಿಷಯದಲ್ಲಿ ಆಲೋಚನೆ, ಶ್ರವಣ, ಮನನ, ನಿದಿಧ್ಯಾಸನಗಳೇ ತಪಸ್ಸಾಗುತ್ತದೆ. ಅದರ ಫಲವು ಆತ್ಮಸಾಕ್ಷಾತ್ಕಾರ. **ಸ ಅಪ್ರೇತ್ಯ ಮರಣಾತ್ಪ್ರಾಗೇವ ಭವತಿ** = ಆತ್ಮಸಾಕ್ಷಾತ್ಕಾರವು ಮರಣಕ್ಕೆ ಮೊದಲೇ ಸಿದ್ಧಿಸುತ್ತದೆ– ಎಂಬುದಾಗಿ ಅರ್ಥಮಾಡಿರುತ್ತಾರೆ.)

ಯಸ್ಮಿನ್ಯಸ್ಮಿಂಸ್ತು ವಿಷಯೇ ಯೋ ಯೋ ಯಾತಿ ವಿನಿಶ್ಚಯಮ್ ।
ಸ ತಮೇವಾಭಿಜಾನಾತಿ ನಾನ್ಯಂ ಭರತಸತ್ತಮ ॥೩॥

ಭರತಸತ್ತಮನೇ! ಯಾರು-ಯಾರು ಯಾವ-ಯಾವ ವಿಷಯದಲ್ಲಿ ಪೂರ್ಣವಾದ ನಿಶ್ಚಯಕ್ಕೆ ಬಂದಿರುತ್ತಾರೆಯೋ (ಯಾವುದರ ಮೂಲಕವಾಗಿ ತಮ್ಮ ಅಭೀಷ್ಟದ ಸಿದ್ಧಿಯಾಗುವುದೆಂದು ನಿಶ್ಚಯಿಸಿರುತ್ತಾರೆಯೋ)– ಅವರು ಅದರಿಂದಲೇ ತಮಗೆ ಒಳ್ಳೆಯದಾಗುವುದೆಂದು ಭಾವಿಸುತ್ತಾರೆ. (ಒಬ್ಬನಿಗೆ ವಿದ್ಯೆಯನ್ನು ಕಲಿಯಬೇಕೆಂಬ ಆಸೆಯಿರುತ್ತದೆ. ಮತ್ತೊಬ್ಬನಿಗೆ ಅಪಾರವಾಗಿ ಧನಸಂಪಾದನೆಯನ್ನು ಮಾಡಬೇಕೆಂಬ ಆಸೆಯಿರುತ್ತದೆ. ಒಬ್ಬನು ಸ್ವರ್ಗಕಾಮನಾಗಿರುತ್ತಾನೆ. ಮತ್ತೊಬ್ಬನು ಪುತ್ರಕಾಮನಾಗಿರುತ್ತಾನೆ. ವಿದ್ಯೆಯನ್ನು ಸಂಪೂರ್ಣವಾಗಿ ಕಲಿತರೆ ಶ್ರೇಯಸ್ಸಾಗುವುದೆಂದು ಒಬ್ಬನು ಭಾವಿಸಿದರೆ ಮತ್ತೊಬ್ಬನು ಪುಷ್ಕಳವಾಗಿ ಹಣವನ್ನು ಗಳಿಸಿದರೆ ಶ್ರೇಯಸ್ಸಾಗುವುದೆಂದೂ ಭಾವಿಸುತ್ತಾನೆ. ಅರ್ಥ-ವಿದ್ಯೆಗಳ ಸಾಧನೆಗಾಗಿ ಒಬ್ಬೊಬ್ಬರೂ ಅದಕ್ಕೆ ಸಾಧಕವಾದ ಕಾರ್ಯಗಳನ್ನೇ ಮಾಡುತ್ತಿರುತ್ತಾರೆ. ಒಬ್ಬರು ಯಜ್ಞಾದಿಕರ್ಮಗಳ ಮೂಲಕವಾಗಿ ಮೋಕ್ಷವನ್ನು ಸಾಧಿಸಬಹುದೆಂದು ಭಾವಿಸಿದರೆ ಮತ್ತೊಬ್ಬರು ತಪಸ್ಸಿನಿಂದ ಸಾಧಿಸಬಹುದೆನ್ನುತ್ತಾರೆ. ಇನ್ನೊಬ್ಬರು ಯೋಗಮಾರ್ಗದಿಂದ ಮೋಕ್ಷವು ಸಾಧ್ಯವೆನ್ನುತ್ತಾರೆ. ಹೀಗೆ ಒಬ್ಬೊಬ್ಬರು ಒಂದೊಂದು ಮಾರ್ಗವನ್ನು ಹಿಡಿಯುತ್ತಾರೆ. ಬೇರೆ ಯಾವ ಮಾರ್ಗವನ್ನೂ ಅವರು ಹಿಡಿಯುವುದಿಲ್ಲ.)

ಯಥಾ ಯಥಾ ಚ ಪರ್ಯೇತಿ ಲೋಕತನ್ತ್ರಮಸಾರವತ್ ।
ತಥಾ ತಥಾ ವಿರಾಗೋಽತ್ರ ಜಾಯತೇ ನಾತ್ರ ಸಂಶಯಃ ॥೪॥

ಮನುಷ್ಯನು (ಅನೇಕವಿಧವಾದ ಅನುಭವಗಳಿಂದ) ಲೌಕಿಕವಾದ ಸಾಧನೆಗಳೆಲ್ಲವೂ ಸಾರಹೀನಗಳೆಂದು ತಿಳಿದಂತೆಲ್ಲಾ ಅವನಿಗೆ ಲೌಕಿಕವಾದ ಭೋಗಗಳಲ್ಲಿ ವೈರಾಗ್ಯವುಂಟಾಗುತ್ತದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಯುಧಿಷ್ಠಿರ! ಹೀಗೆ ಅನೇಕವಿಧವಾದ ದೋಷಗಳಿಂದ ಲೋಕವು ವ್ಯಾಪ್ತವಾಗಿರುವಾಗ ಬುದ್ಧಿವಂತನಾದ ಮನುಷ್ಯನು ತನ್ನ ಮೋಕ್ಷದ ಸಾಧನೆಗಾಗಿ ಪ್ರಯತ್ನಿಸಬೇಕು.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ನಷ್ಟೇ ಧನೇ ವಾ ದಾರೇ ವಾ ಪುತ್ರೇ ಪಿತರಿ ವಾ ಮೃತೇ ।
ಯಯಾ ಬುದ್ಧ್ಯಾನುದೇಚ್ಛೋಕಂ ತನ್ಮೇ ಬ್ರೂಹಿ ಪಿತಾಮಹ ॥೬॥

"ಪಿತಾಮಹನೇ! ಧನವು ನಷ್ಟವಾದರೆ, ಪತ್ನೀ-ಪುತ್ರ-ಮಾತಾ-ಪಿತೃಗಳು ಸತ್ತುಹೋದರೆ–ಆ ದುಃಖವನ್ನು ಯಾವ ವಿಧವಾದ ಬುದ್ಧಿಯನ್ನಾಶ್ರಯಿಸಿ ಕಳೆದುಕೊಳ್ಳಬೇಕು?– ಎಂಬುದನ್ನು ನನಗೆ ತಿಳಿಸು."

ಭೀಷ್ಮನು ಹೇಳುತ್ತಾನೆ :

ನಷ್ಟೇ ಧನೇ ವಾ ದಾರೇ ವಾ ಪುತ್ರೇ ಪಿತರಿ ವಾ ಮೃತೇ ।
ಅಹೋ ದುಃಖಮಿತಿ ಧ್ಯಾಯಞ್ಛೋಕಸ್ಯಾಪಚಿತಿಂ ಚರೇತ್ ॥೭॥

"ವತ್ಸ, ಧರ್ಮಜ! ಧನವು ನಷ್ಟವಾದರೆ, ಅತ್ಯಂತಪ್ರಿಯರಾದ ಪತ್ನೀ-ಪುತ್ರ-ಮಾತಾ-ಪಿತೃಗಳು ಮೃತರಾದರೆ– 'ಅಯ್ಯೋ! ಲೋಕವು ಎಷ್ಟು ದುಃಖಮಯವಾಗಿದೆ!'– ಎಂಬುದನ್ನೇ ಅನುಧ್ಯಾನಮಾಡುತ್ತಾ ಶೋಕವನ್ನು ಪರಿಹರಿಸಿಕೊಳ್ಳಬೇಕು. (ಪತ್ನೀ-ಪುತ್ರ-ಮಾತಾ-ಪಿತೃಗಳ ವಿಯೋಗವು ತನಗೊಬ್ಬನಿಗೆ ಮಾತ್ರವಲ್ಲ. ಪ್ರಪಂಚದಲ್ಲಿ ಹುಟ್ಟಿರುವ ಎಲ್ಲರೂ ಎಂದಾದರೊಂದು ದಿನ ವಿರಹಶೋಕವನ್ನು ಅನುಭವಿಸಲೇಬೇಕು. ಆದುದರಿಂದ ಪ್ರಪಂಚವು ದುಃಖಮಯವಾದುದು. **ಅತೋಽನ್ಯದಾರ್ತಮ್**– ಎಂಬ ಶ್ರುತ್ಯನುಸಾರವಾಗಿ ಆತ್ಮವೊಂದನ್ನು ಬಿಟ್ಟು ಉಳಿದೆಲ್ಲವೂ ದುಃಖಸ್ವರೂಪವೇ ಆಗಿವೆ. **ತರತಿ ಶೋಕಮಾತ್ಮವಿತ್** ಎಂಬ ಶ್ರುತಿಯಂತೆ ಆತ್ಮವಿದನಾಗಿ ಈ ಶೋಕಸಾಗರವನ್ನು ದಾಟಬೇಕು.)

ಯುಧಿಷ್ಠಿರ! ಈ ವಿಷಯದಲ್ಲಿ ಹಿತೈಷಿಯಾದೊಬ್ಬ ಬ್ರಾಹ್ಮಣನು ಸೇನಜಿತನ ಬಳಿಗೆ ಬಂದು ಅಮೂಲ್ಯವಾದ ಉಪದೇಶವನ್ನು ಮಾಡಿದ ಪುರಾತನೇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ತಿಳಿಸುವೆನು.

ಸೇನಜಿತರಾಜನ ಮಗನು ಮೃತ್ಯುವಶನಾದನು. ರಾಜನ ಶೋಕಕ್ಕೆ ಪಾರವೇ ಇಲ್ಲವಾಯಿತು. ಪುತ್ರವಿಯೋಗಶೋಕದಿಂದ ಪರಿತಪಿಸುತ್ತಿದ್ದ,

ಶೋಕವಿಹ್ವಲನಾಗಿದ್ದ, ವಿಷಣ್ಣವಾದ ಮನಸ್ಸಿನಿಂದ ಕೂಡಿದ್ದ ಸೇನಜಿತ ರಾಜನನ್ನು ನೋಡಿ ಬ್ರಾಹ್ಮಣನು ಈ ಮಾತುಗಳನ್ನು ಹೇಳಿದನು :

ಕಿಂ ನು ಮುಹ್ಯಸಿ ಮೂಢಸ್ತ್ವಂ ಶೋಚ್ಯಃ ಕಿಮನುಶೋಚಸಿ ।
ಯದಾ ತ್ವಾಮಪಿ ಶೋಚನ್ತಃ ಶೋಚ್ಯಾ ಯಾಸ್ಯನ್ತಿ ತಾಂ ಗತಿಮ್ ॥

"ಮಹಾರಾಜ! ಏಕೆ ಮೋಹವಶನಾಗಿರುವೆ? ನಿಶ್ಚಯವಾಗಿಯೂ ನೀನು ಮೂಢನೇ ಸರಿ. ನೀನೇ ಶೋಚ್ಯನಾಗಿರುವೆ. ಹೀಗಿರುವಾಗ ಬೇರೆಯವರಿಗಾಗಿ ನೀನೇಕೆ ಶೋಕಪಡುತ್ತಿರುವೆ? ನಿನ್ನ ಪುತ್ರನ ದೆಸೆಯನ್ನೇ ನೀನೂ ಹೊಂದಿದಾಗ ನಿನಗಾಗಿ ಶೋಕಪಡುವವರೂ ಮುಂದೆ ಕೆಲವು ದಿವಸಗಳಲ್ಲಿಯೇ ಶೋಚ್ಯರೇ ಆಗುತ್ತಾರೆ. ಅವರಿಗಾಗಿ ಮತ್ತೆ ಕೆಲವರು ದುಃಖಪಡಬೇಕಾಗುತ್ತದೆ. (ಸತ್ತವನಿಗಾಗಿ ಅಳುವವರಿಗೂ ಮೃತ್ಯುವು ತಪ್ಪಿದ್ದಲ್ಲ. ರಾಜನೂ ಒಂದು ದಿವಸ ಮೃತ್ಯುವಶನಾಗುತ್ತಾನೆ. ಆಗ ಅವನಿಗಾಗಿ ಮತ್ತೆ ಕೆಲವರು ಅಳುತ್ತಾರೆ. ಹಾಗೆ ರಾಜನಿಗಾಗಿ ಅಳುವವರಿಗೂ ಮೃತ್ಯುವು ತಪ್ಪಿದ್ದಲ್ಲ. ಹೀಗೆ ಮೃತ್ಯುವು ಹುಟ್ಟಿದವರೆಲ್ಲರಿಗೂ ಅನಿವಾರ್ಯವೇ ಆಗಿರುವಾಗ ಸತ್ತವರಿಗೇಕೆ ಅಳಬೇಕು?)

ತ್ವಂ ಚೈವಾಹಂ ಚ ಯೇ ಚಾನ್ಯೇ ತ್ವಾಮುಪಾಸನ್ತಿ ಪಾರ್ಥಿವ ।
ಸರ್ವೇ ತತ್ರ ಗಮಿಷ್ಯಾಮೋ ಯತ ಏವಾಗತಾ ವಯಮ್ ॥೧೧॥

ನೀನು, ನಾನು, ನಿನ್ನನ್ನೇ ಆಶ್ರಯಿಸಿಕೊಂಡಿರುವ ಇತರರು–ಈ ಎಲ್ಲರೂ ಎಲ್ಲಿಂದ ಬಂದಿರುವೆವೋ ಅಲ್ಲಿಗೇ ಹೊರಟುಹೋಗುತ್ತೇವೆ. ಯಾರೂ ಈ ಪ್ರಪಂಚದಲ್ಲಿ ಶಾಶ್ವತವಾಗಿ ಉಳಿದುಕೊಳ್ಳುವುದಿಲ್ಲ. ಎಲ್ಲಿಂದ ಬಂದಿದ್ದೇವೋ ಅಲ್ಲಿಗೇ ಹೊರಟುಹೋಗುತ್ತೇವೆ. (ಅವ್ಯಕ್ತದಿಂದ ಬಂದೆವು–ಅವ್ಯಕ್ತಕ್ಕೇ ಹೋಗುತ್ತೇವೆ. ಬಂದುದು ಎಲ್ಲಿಂದ?–ಎಂಬುದು ತಿಳಿಯದು. ಹೋಗುವುದು ಎಲ್ಲಿಗೆ?–ಎಂಬುದೂ ತಿಳಿಯದು. ಯಾವ ಅವ್ಯಕ್ತದಿಂದ ಬಂದಿದ್ದೇವೋ– ಆ ಅವ್ಯಕ್ತಕ್ಕೇ ಪುನಃ ಹೋಗುತ್ತೇವೆ.)"

ಸೇನಜಿತನು ಪ್ರಶ್ನಿಸುತ್ತಾನೆ :

ಕಾ ಬುದ್ಧಿಃ ಕಿಂ ತಪೋ ವಿಪ್ರ ಕಃ ಸಮಾಧಿಸ್ತಪೋಧನ ।
ಕಿಂ ಜ್ಞಾನಂ ಕಿಂ ಶ್ರುತಂ ಚೈವ ಯತ್ಪ್ರಾಪ್ಯ ನ ವಿಷೀದಸಿ ॥೧೨॥

"ತಪೋಧನನೇ! ಅತಿದುಃಖಸಮಯಗಳಲ್ಲಿಯೂ ವಿಷಾದಿಸದಿರಲು ನೀನು ಎಂತಹ ಬುದ್ಧಿಯನ್ನು ಹೊಂದಿರುವೆ? ಎಂತಹ ತಪಸ್ಸನ್ನು ಮಾಡಿರುವೆ? ಎಂತಹ ಸಮಾಧಿಯನ್ನು ಆಶ್ರಯಿಸಿರುವೆ? ಎಂತಹ ಜ್ಞಾನವನ್ನು ಪಡೆದಿರುವೆ? ಎಂತಹ ಶಾಸ್ತ್ರವನ್ನು ಅಧ್ಯಯನಮಾಡಿರುವೆ?" (ನಾವೂ ಒಂದು ದಿನ ಸಾಯುತ್ತೇವೆ–ಎಂಬುದು ಸ್ಪಷ್ಟವಾಗಿ ತಿಳಿದಿದ್ದರೂ ಪುತ್ರವಿಯೋಗದಂತಹ ಮಹಾದುಃಖವನ್ನು ತಡೆದುಕೊಳ್ಳುವುದು ಸಾಮಾನ್ಯ ವಿಷಯವಲ್ಲ. ಬುದ್ಧಿ, ತಪಸ್ಸು, ಸಮಾಧಿ (ಅಷ್ಟಾಂಗಯೋಗಸಾಧನೆ) ನಿಶ್ಚಯಜ್ಞಾನ ಮತ್ತು ಶಾಸ್ತ್ರಾಧ್ಯಯನ ಇವಿಷ್ಟೂ ಇರಬೇಕು.)

ಬ್ರಾಹ್ಮಣನು ಹೇಳುತ್ತಾನೆ :

ಪಶ್ಯ ಭೂತಾನಿ ದುಃಖೇನ ವ್ಯತಿಷಿಕ್ತಾನಿ ಸರ್ವಶಃ ।
ಉತ್ತಮಾಧಮಮಧ್ಯಾನಿ ತೇಷು ತೇಷ್ವಿಹ ಕರ್ಮಸು ॥೧೩॥

"ಮಹಾರಾಜ! ಪ್ರಪಂಚದಲ್ಲಿ ಉತ್ತಮ-ಮಧ್ಯಮಪ್ರಾಣಿಗಳು (ದೇವತೆಗಳು, ತಿರ್ಯಗ್ಜಂತುಗಳು ಮತ್ತು ಮನುಷ್ಯರು) ಭಿನ್ನ-ಭಿನ್ನವಾದ ಕರ್ಮಗಳಲ್ಲಿ ಆಸಕ್ತವಾಗಿ ಸರ್ವತ್ರ ದುಃಖದಿಂದ ವ್ಯಾಪ್ತವಾಗಿರುವುದನ್ನಾದರೂ ನೋಡು.

ಆತ್ಮಾಪಿ ಚಾಯಂ ನ ಮಮ ಸರ್ವಾ ವಾ ಪೃಥಿವೀ ಮಮ ।
ಯಥಾ ಮಮ ತಥಾನ್ಯೇಷಾಮಿತಿ ಚಿನ್ತ್ಯ ನ ಮೇ ವ್ಯಥಾ ।
ಏತಾಂ ಬುದ್ಧಿಮಹಂ ಪ್ರಾಪ್ಯ ನ ಪ್ರಹೃಷ್ಯೇ ನ ಚ ವ್ಯಥೇ ॥೧೪॥

'ಈ ಶರೀರವೂ ನನ್ನದಲ್ಲ;' 'ಈ ಎಲ್ಲ ಪೃಥಿವಿಯೂ ನನ್ನದಲ್ಲ' 'ಎಲ್ಲ ವಸ್ತುಗಳೂ ಹೇಗೆ ನನ್ನದಾಗಿವೆಯೋ ಹಾಗೆಯೇ ಇತರರದ್ದೂ ಆಗಿವೆ'– ಹೀಗೆ ಚಿಂತಿಸುವುದರಿಂದ ನನಗೆ ಯಾವ ವಿಧವಾದ ವ್ಯಥೆಯೂ ಉಂಟಾಗುವುದಿಲ್ಲ. ಇಂತಹ ಬುದ್ಧಿಯನ್ನೇ ಆಶ್ರಯಿಸಿರುವ ನಾನು

ಸಂತೋಷಪಡುವುದೂ ಇಲ್ಲ ; ದುಃಖಪಡುವುದೂ ಇಲ್ಲ. (‘ ಶರೀರವು ನನ್ನದಲ್ಲ ’ ಎಂಬ ನಿಶ್ಚಯಬುದ್ಧಿಯುಂಟಾಗಬೇಕಾದರೆ ದೇಹವೇ ಆತ್ಮ– ಎಂಬ ಭಾವನೆಯು ಹೋಗಬೇಕು. ದೇಹವೆಂಬುದು ಕವಚ. ಕವಚದೊಳಗಿರುವ ಚೈತನ್ಯನೇ ನಾನು– ಎಂಬ ಭಾವನೆಯುಂಟಾಗಬೇಕು. ‘ನಾನು’ ಎಂಬುದೂ ಚಿದ್ವಸ್ತುವಿನಲ್ಲಿ ಲೀನವಾಗಬೇಕು. ಅಂತಹ ಚಿದ್ವಸ್ತುವನ್ನೇ ಸರ್ವತ್ರ ಕಾಣಬೇಕು. **ಸರ್ವಂ ವಿಷ್ಣುಮಯಂ ಜಗತ್**– ಎಂಬುದನ್ನು ಅನುಸಂಧಾನದಿಂದ ನಿಶ್ಚಯಿಸಬೇಕು. ಆಗ ಎಲ್ಲ ಪೃಥ್ವಿಯೂ ಚಿದ್ವಸ್ತುವಿನದೇ ಆಗುತ್ತದೆ. ಚಿದ್ವಸ್ತುವನ್ನು ಬಿಟ್ಟು ಬೇರೆ ಯಾವುದೂ ಇರುವುದೇ ಇಲ್ಲ. ಅಂತಹ ಒಂದು ಅಪೂರ್ವವಾದ ಸ್ಥಿತಿಯದು. ಆ ಸಮಯದಲ್ಲಿ ‘ನನ್ನದು- ಇತರರದು’ ಎಂಬ ಭಾವನೆಯೇ ಅಳಿಸಿಹೋಗುತ್ತದೆ. ನಾನು- ನನ್ನದು ಎಂಬುದು ಇದ್ದರೆ ತಾನೇ ನನ್ನದು–ಇತರರದು ಎಂಬ ಭಾವನೆಯುಂಟಾಗುತ್ತದೆ? ನಾನು-ನನ್ನದು ಎಂಬ ದೇಹಾತ್ಮಭಾವವನ್ನು ತೊಲಗಿಸಿಬಿಟ್ಟರೆ ಇತರರು ಎಂಬ ಭಾವನೆಯೇ ಬರುವುದಿಲ್ಲ. ಎಲ್ಲವೂ ಬ್ರಹ್ಮರೂಪವಾಗಿಯೇ ಕಾಣುತ್ತದೆ. ದೇಹಾತ್ಮಭಾವವನ್ನು ತೊರೆದಿರುವವನಿಗೆ ವ್ಯಥೆಯೆಂಬುದೇ ಇಲ್ಲವಾಗಿದೆ. ಸುಖ-ಸಂತೋಷಗಳು ಶರೀರಕ್ಕೆ ಅಥವಾ ಶರೀರದ ವಾಸನೆಯಿಂದ ಕೂಡಿರುವ ಮನಸ್ಸಿಗೆ ಸಂಬಂಧಿಸಿದುವುಗಳು. ಇದಕ್ಕೆ ವಿಷಯಾಸಕ್ತಿ ಎಂದು ಹೆಸರು. ಸಚ್ಚಿದಾನಂದಸ್ವರೂಪಿಯಾದ ಪರಮಾತ್ಮನಿಗೆ ಸಂತೋಷವೂ ಇಲ್ಲ; ದುಃಖವೂ ಇಲ್ಲ. ಶರೀರವು ಕವಚವೆಂದು ತಿಳಿದು ಮನಸ್ಸನ್ನು ಬುದ್ಧಿಯಲ್ಲಿಯೂ–ಬುದ್ಧಿಯನ್ನು ಪರಮಾತ್ಮನಲ್ಲಿಯೂ ಲೀನಗೊಳಿಸಿದವನಿಗೆ ಸಂತೋಷವೂ ಇರುವುದಿಲ್ಲ ; ದುಃಖವೂ ಇರುವುದಿಲ್ಲ. ದ್ವಂದ್ವಾತೀತವಾದ ಆ ಸ್ಥಿತಿಯೇ ಬ್ರಹ್ಮಾನಂದ.)

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹೋದಧೌ ।
ಸಮೇತ್ಯ ಚ ವ್ಯಪೇಯಾತಾಂ ತದ್ವದ್ಭೂತಸಮಾಗಮಃ ॥೧೫॥

ಯಾವ ರೀತಿಯಲ್ಲಿ ಯಾವು ಯಾವುದೋ ನದಿಗಳ ಪ್ರವಾಹಗಳಲ್ಲಿ ತೇಲಿಕೊಂಡು ಬಂದ ಎರಡು ಮರದ ತುಂಡುಗಳು ಸಮುದ್ರದಲ್ಲಿ ಸೇರಿಕೊಳ್ಳುತ್ತವೆಯೋ, ಹಾಗೆ ಸೇರಿಕೊಂಡು ಸ್ವಲ್ಪದೂರ ತೇಲಿಕೊಂಡು ಹೋದ

ನಂತರ ಅಲೆಗಳ ರಭಸಕ್ಕೆ ಸಿಕ್ಕಿ ಪ್ರತ್ಯೇಕವಾಗುತ್ತವೆಯೋ–ಹಾಗೆಯೇ ಪ್ರಾಣಿಗಳೂ ಕೂಡ ಅವ್ಯಕ್ತದಿಂದ ಬಂದು ಈ ಪ್ರಪಂಚದಲ್ಲಿ ಸ್ವಲ್ಪ ಕಾಲ ಸೇರಿಕೊಂಡಿರುತ್ತವೆ. ಅನಂತರ ವಿಯೋಗವನ್ನು ಹೊಂದಿ ಪುನಃ ಅವ್ಯಕ್ತಕ್ಕೇ ಹೊರಟುಹೋಗುತ್ತವೆ. ಬಂಧುಗಳ ರೂಪದಲ್ಲಿರುವ ಈ ಸಮಾಗಮವು ಶಾಶ್ವತವಲ್ಲ.

ಏವಂ ಪುತ್ರಾಶ್ಚ ಪೌತ್ರಾಶ್ಚ ಜ್ಞಾತಯೋ ಬಾನ್ಧವಾಸ್ತಥಾ ।
ತೇಷಾಂ ಸ್ನೇಹೋ ನ ಕರ್ತವ್ಯೋ ವಿಪ್ರಯೋಗೋ ಧ್ರುವೋ ಹಿ ತೈಃ ॥೧೬॥

ಹೀಗೆಯೇ ಪುತ್ರರು, ಪೌತ್ರರು, ಜ್ಞಾತಿಗಳು, ನೆಂಟರಿಷ್ಟರೂ–ಕಾಲ ಕರ್ಮಸಂಯೋಗದಿಂದ ಒಂದೆಡೆಯಲ್ಲಿ ಸ್ವಲ್ಪಕಾಲ ಸೇರಿರುತ್ತಾರೆ. ಅನಂತರ ಒಬ್ಬೊಬ್ಬರಾಗಿ ಹೊರಟುಹೋಗುತ್ತಾರೆ. ಅವರೊಡನೆ ವಿಯೋಗವು ಆಗಿಯೇ ತೀರುತ್ತದೆ. ಆದುದರಿಂದ ಅವರ ವಿಷಯದಲ್ಲಿ ಹೆಚ್ಚಿನ ಸ್ನೇಹವನ್ನು ಇಟ್ಟುಕೊಳ್ಳುವುದು ಯೋಗ್ಯವಲ್ಲ.

ಅದರ್ಶನಾದಾಪತಿತಃ ಪುನಶ್ಚಾದರ್ಶನಂ ಗತಃ ।
ನ ತ್ವಾಸೌ ವೇದ ನ ತ್ವಂ ತಂ ಕಃ ಸನ್ಕಿಮನುಶೋಚಸಿ ॥೧೭॥

ನಿನ್ನ ಮಗನು ಅವ್ಯಕ್ತದಿಂದ ವ್ಯಕ್ತರೂಪಕ್ಕೆ ಬಂದು ನಿನ್ನ ಮಗನಾಗಿ ಸ್ವಲ್ಪಕಾಲವಿದ್ದು ಪುನಃ ಅವ್ಯಕ್ತಕ್ಕೇ ಹೊರಟುಹೋಗಿರುವನು. ಅವನಿಲ್ಲಿ ಹುಟ್ಟುವ ಮೊದಲು ಅವನಾರೆಂಬುದು ನಿನಗೂ ತಿಳಿದಿರಲಿಲ್ಲ. ಅವನಿಗೂ ನೀನಾರೆಂಬುದು ತಿಳಿದಿರಲಿಲ್ಲ. ಮುಂದೆ ಅವನು ಎಲ್ಲಿಗೆ ಹೋಗುವ ನೆಂಬುದೂ ನಿನಗೆ ತಿಳಿಯದು. ನೀನಾರು? ಅವನಾರು? ಅವನಿಗಾಗಿ ಏಕೆ ಶೋಕಪಡುತ್ತಿರುವೆ?

ತೃಷ್ಣಾರ್ತಿಪ್ರಭವಂ ದುಃಖಂ ದುಃಖಾರ್ತಿಪ್ರಭವಂ ಸುಖಮ್ ।
ಸುಖಾತ್ಸಂಜಾಯತೇ ದುಃಖಂ ದುಃಖಮೇವಂ ಪುನಃ ಪುನಃ ॥೧೮॥

ಕಾಮನಾವಸ್ತುಗಳನ್ನು ಅನುಭವಿಸಬೇಕೆನ್ನುವ ದಾಹದಿಂದಾಗಿ ಮನುಷ್ಯನಿಗೆ ದುಃಖವುಂಟಾಗುತ್ತದೆ. ಅಂತಹ ದುಃಖದ ಪೀಡಾನಂತರ

ಅದರಿಂದ ಸುಖವುಂಟಾಗುತ್ತದೆ. ಆ ಸುಖದ ಅನಂತರ ಪುನಃ ತೃಷ್ಣೆಯ ಪ್ರಭಾವದಿಂದಾಗಿ ದುಃಖವುಂಟಾಗುತ್ತದೆ. ಹೀಗೆ ಸಂಸಾರದಲ್ಲಿ ಸುಖ ವೆಂಬುದು ಮರೀಚಿಕೆಯ ರೂಪದಲ್ಲಿ ಕಾಣುತ್ತಿದ್ದರೂ ಸರ್ವದಾ ದುಃಖ ಮಯವಾಗಿಯೇ ಇರುತ್ತದೆ.

ಸುಖಸ್ಯಾನನ್ತರಂ ದುಃಖಂ ದುಃಖಸ್ಯಾನನ್ತರಂ ಸುಖಮ್ ।
ಸುಖದುಃಖೇ ಮನುಷ್ಯಾಣಾಂ ಚಕ್ರವತ್ಪರಿವರ್ತತಃ ॥೧೯॥

ಮನುಷ್ಯನಿಗೆ ಸುಖದ ಬಳಿಕ ದುಃಖವೂ–ದುಃಖದ ಬಳಿಕ ಸುಖವೂ ಪ್ರಾಪ್ತವಾಗುತ್ತಲೇ ಇರುತ್ತವೆ. ಸುಖ-ದುಃಖಗಳು ಮನುಷ್ಯರ ಜೀವನದಲ್ಲಿ ಚಕ್ರದಂತೆ ಸುತ್ತುತ್ತಿರುತ್ತವೆ.

ಸುಖಾತ್ತ್ವಂ ದುಃಖಮಾಪನ್ನಃ ಪುನರಾಪತ್ಸ್ಯಸೇ ಸುಖಮ್ ।
ನ ನಿತ್ಯಂ ಲಭತೇ ದುಃಖಂ ನ ನಿತ್ಯಂ ಲಭತೇ ಸುಖಮ್ ॥೨೦॥

ನಿನಗೆ ಪುತ್ರನು ಹುಟ್ಟಿದುದು ಅತ್ಯಂತ ಸಂತೋಷದಾಯಕವಾಗಿ ದ್ದಿತು. ಪುತ್ರೋತ್ಪತ್ತಿಯ ಸುಖವನ್ನು ಅನುಭವಿಸುತ್ತಿದ್ದ ನೀನು ಪುತ್ರನ ವಿಯೋಗದಿಂದಾಗಿ ದುಃಖವನ್ನು ಅನುಭವಿಸುತ್ತಿರುವೆ. ಮತ್ತೊಬ್ಬ ಮಗನೇ ನಾದರೂ ನಿನಗೆ ಹುಟ್ಟಿದಲ್ಲಿ ಪುನಃ ನೀನು ಸುಖಿಯೇ ಆಗುವೆ. ಯಾವ ಪ್ರಾಣಿಗೇ ಆದರೂ ಶಾಶ್ವತವಾದ ದುಃಖವಾಗಲೀ–ಶಾಶ್ವತವಾದ ಸುಖ ವಾಗಲೀ ಲಭಿಸುವುದಿಲ್ಲ.

ಶರೀರಮೇವಾಯತನಂ ಸುಖಸ್ಯ
ದುಃಖಸ್ಯ ಚಾಪ್ಯಾಯತನಂ ಶರೀರಮ್ ।
ಯದ್ಯಚ್ಛರೀರೇಣ ಕರೋತಿ ಕರ್ಮ
ತೇನೈವ ದೇಹೀ ಸಮುಪಾಶ್ನುತೇ ತತ್ ॥೨೧॥

ಈ ಶರೀರವು ಸುಖಕ್ಕೂ ನೆಲೆಯಾಗಿದೆ ; ದುಃಖಕ್ಕೂ ನೆಲೆಯಾಗಿದೆ. ದೇಹಾಭಿಮಾನಿಯಾದ ಪುರುಷನು ಯಾವ ಶರೀರದ ಮೂಲಕವಾಗಿ ಶುಭಾ ಶುಭಕರ್ಮಗಳನ್ನು ಮಾಡುವನೋ–ಶುಭಾಶುಭಕರ್ಮಗಳ ಫಲರೂಪವಾದ ಆ ಶರೀರದ ಮೂಲಕವಾಗಿಯೇ ಅವನು ಸುಖ-ದುಃಖಗಳನ್ನು ಅನುಭವಿಸುತ್ತಾನೆ.

ಜೀವಿತಂ ಚ ಶರೀರೇಣ ಜಾತ್ಯೈವ ಸಹ ಜಾಯತೇ ।
ಉಭೇ ಸಹ ವಿವರ್ತೇತೇ ಉಭೇ ಸಹ ವಿನಶ್ಯತಃ ॥೨೨॥

ಸ್ವಭಾವತಃ ಜೀವನವು ಶರೀರದೊಡನೆಯೇ ಹುಟ್ಟಿಕೊಳ್ಳುತ್ತದೆ. ಶೈಶವ-ಬಾಲ್ಯ-ಕೌಮಾರ್ಯ-ಯೌವನ-ವಾರ್ಧಕ್ಯಗಳೆಂಬ ವಿವಿಧರೂಪ ಗಳಲ್ಲಿದ್ದು ಕಡೆಯಲ್ಲಿ ಎರಡೂ ಜೊತೆಯಲ್ಲಿಯೇ ಹಿಂದಿರುಗಿ ನಷ್ಟವಾಗಿ ಹೋಗುತ್ತವೆ.

ಸ್ನೇಹಪಾಶೈರ್ಬಹುವಿಧೈರಾವಿಷ್ಟವಿಷಯಾ ಜನಾಃ ।
ಅಕೃತಾರ್ಥಾಶ್ಚ ಸೀದನ್ತೇ ಜಲೈಃ ಸೈಕತಸೇತವಃ ॥೨೩॥

ಮಾನವರು ನಾನಾವಿಧವಾದ ಸ್ನೇಹಪಾಶಗಳಿಂದ ಬಂಧಿಸಲ್ಪಟ್ಟು ಯಾವಾಗಲೂ ವಿಷಯಾಸಕ್ತರಾಗಿಯೇ ಇರುತ್ತಾರೆ. ಮಳಲಿನ ಒಡ್ಡುಗಳು ನೀರಿನ ವೇಗದಿಂದ ವಿನಾಶಹೊಂದುವಂತೆ–ನಾನಾವಿಧವಾದ ವಿಷಯ ಕಾಮನೆಗಳನ್ನು ಪೂರ್ಣಮಾಡಿಕೊಳ್ಳದೆಯೇ ವಿನಾಶಹೊಂದುತ್ತಾರೆ.

ಸ್ನೇಹೇನ ತಿಲವತ್ಸರ್ವಂ ಸರ್ಗಚಕ್ರೇ ನಿಪೀಡ್ಯತೇ ।
ತಿಲಪೀಡೈರಿವಾಕ್ರಮ್ಯ ಕ್ಲೇಶೈರಜ್ಞಾನಸಮ್ಭವೈಃ ॥೨೪॥

ಎಳ್ಳೆಣ್ಣೆಯನ್ನು ತೆಗೆಯುವವರಿಂದ (ಗಾಣಿಗರಿಂದ) ಸ್ನೇಹದ ಕಾರಣದಿಂದ (ಎಣ್ಣೆಯನ್ನು ತೆಗೆಯುವ ಸಲುವಾಗಿ) ಎಳ್ಳು ಗಾಣದಲ್ಲಿ ಹಾಕಿ ಅರೆಯಲ್ಪಡುವಂತೆ–ಸ್ನೇಹದ ಕಾರಣದಿಂದ ಎಲ್ಲ ಜನರೂ ಅಜ್ಞಾನ ಜನಿತವಾದ ಕ್ಲೇಶಗಳ ಮೂಲಕವಾಗಿ ಸೃಷ್ಟಿಚಕ್ರದಲ್ಲಿ ಅರೆಯಲ್ಪಡುತ್ತಾರೆ.

ಸಂಚಿನೋತ್ಯಶುಭಂ ಕರ್ಮ ಕಲತ್ರಾಪೇಕ್ಷಯಾ ನರಃ ।
ಏಕಃ ಕ್ಲೇಶಾನವಾಪ್ನೋತಿ ಪರತ್ರೇಹ ಚ ಮಾನವಃ ॥೨೫॥

ಪತ್ನೀ-ಪುತ್ರ-ಪುತ್ರಿಯರ ಭರಣಾರ್ಥವಾಗಿ ಮಾನವನು ಹಲವಾರು ಕೆಟ್ಟಕೆಲಸಗಳನ್ನು ಮಾಡಿ ಪಾಪವನ್ನು ಸಂಗ್ರಹಿಸಿಕೊಳ್ಳುತ್ತಾನೆ. ಆದರೆ ಸಂಸಾರಭರಣಾರ್ಥವಾಗಿ ಅವನು ಮಾಡಿದ ಪಾಪಕರ್ಮಗಳ ಫಲವಾಗಿ ಇಹದಲ್ಲಾಗಲೀ ಪರದಲ್ಲಾಗಲೀ ಅವನೊಬ್ಬನೇ ಕ್ಲೇಶಗಳನ್ನು ಅನುಭವಿಸು ತ್ತಾನೆ. (ಭಾರ್ಯಾ-ಪುತ್ರರೂ ಮತ್ತು ಇತರ ಬಂಧುಗಳೂ, ಯಜಮಾನನು

ಅರ್ಜಿಸಿದ ಐಶ್ವರ್ಯವನ್ನು ಉಪಭೋಗಿಸುವರೇ ಹೊರತು ದುರ್ಮಾರ್ಗದ ಮೂಲಕವಾಗಿ ಯಜಮಾನನು ಗಳಿಸಿದ ಪಾಪಕ್ಕೆ ಭಾಗಿಗಳಾಗುವುದಿಲ್ಲ. ಅಲ್ಲದೇ ದುರ್ಮಾರ್ಗದಿಂದ ಹಣವನ್ನು ಸಂಪಾದಿಸಿದುದರ ಫಲವಾಗಿ ಶಿಕ್ಷೆಯೇನಾದರೂ ಆದರೆ ಯಜಮಾನನೊಬ್ಬನೇ ಆ ಶಿಕ್ಷೆಯನ್ನು ಅನು ಭವಿಸುವನೇ ಹೊರತು ದುರಾರ್ಜಿತವಾದ ಐಶ್ವರ್ಯದಲ್ಲಿ ಪಾಲುಗೊಂಡು ಸುಖೋಪಭೋಗಗಳನ್ನು ಅನುಭವಿಸಿದ ಪತ್ನಿಯಾಗಲೀ ಪುತ್ರರಾಗಲೀ ಶಿಕ್ಷೆಯನ್ನು ಅನುಭವಿಸುವುದಿಲ್ಲ)

ಪುತ್ರದಾರಕುಟುಮ್ಬೇಷು ಪ್ರಸಕ್ತಾಃ ಸರ್ವಮಾನವಾಃ ।
ಶೋಕಪಙ್ಕಾರ್ಣವೇ ಮಗ್ನಾ ಜೀರ್ಣಾ ವನಗಜಾ ಇವ ॥೨೬॥

ಪುತ್ರರಿಂದಲೂ ಪತ್ನಿಯರಿಂದಲೂ ಸಮಾಕುಲವಾದ ಕುಟುಂಬ ದಲ್ಲಿಯೇ ಆಸಕ್ತರಾದ ಎಲ್ಲ ಮನುಷ್ಯರೂ–ಮುದಿಯಾದ ಕಾಡಾನೆಗಳು ಕೆಸರಿನಲ್ಲಿ ಬಿದ್ದು ನರಳುವಂತೆ–ಶೋಕವೆಂಬ ಕೆಸರುಳ್ಳ ಸಾಗರದಲ್ಲಿ ಮುಳುಗಿ ನರಳುತ್ತಿರುತ್ತಾರೆ.

ಪುತ್ರನಾಶೇ ವಿತ್ತನಾಶೇ ಜ್ಞಾತಿಸಮ್ಬನ್ಧಿನಾಮಪಿ ।
ಪ್ರಾಪ್ಯತೇ ಸುಮಹದ್ದುಃಖಂ ದಾವಾಗ್ನಿಪ್ರತಿಮಂ ವಿಭೋ ।
ದೈವಾಯತ್ತಮಿದಂ ಸರ್ವಂ ಸುಖದುಃಖೇ ಭವಾಭವೌ ॥೨೭॥

ಪ್ರಪಂಚದಲ್ಲಿ ಯಾರಿಗೇ ಆಗಲೀ–ಪುತ್ರನ ವಿಯೋಗವಾದರೂ, ವಿತ್ತದ ನಾಶವಾದರೂ, ಜ್ಞಾತಿ-ಸಂಬಂಧಿಗಳು ಮೃತರಾದರೂ ಕಾಡುಗಿಚ್ಚಿಗೆ ಸಮಾನವಾದ ಮಹಾದುಃಖವುಂಟಾಗುತ್ತದೆ. ಆದರೆ ಸುಖ-ದುಃಖಗಳೂ ಜನನ-ಮರಣಗಳೂ ದೈವಾಧೀನವಾಗಿವೆ.

ಅಸುಹೃತ್ಸಸುಹೃಚ್ಚಾಪಿ ಸಶತ್ರುರ್ಮಿತ್ರವಾನಪಿ ।
ಸಪ್ರಜ್ಞಃ ಪ್ರಜ್ಞಯಾ ಹೀನೋ ದೈವೇನ ಲಭತೇ ಸುಖಮ್ ॥೨೮॥

ಮನುಷ್ಯನು ಹಿತೈಷಿಯಾದ ಸುಹೃದರಿಂದೊಡಗೂಡಿರಲಿ–ಸುಹೃದ ರಿಲ್ಲದವನಾಗಿರಲಿ, ಶತ್ರುವಿನೊಡನಿರಲಿ–ಮಿತ್ರನೊಡನಿರಲಿ, ಬುದ್ಧಿವಂತ ನಾಗಿರಲಿ–ದಡ್ಡನಾಗಿರಲಿ, ದೈವಾನುಕೂಲವಿದ್ದರೆ ಸುಖವನ್ನೇ ಹೊಂದು ತ್ತಾನೆ. (ವ್ಯಾಖ್ಯಾನಕಾರರು ಮಿತ್ರ-ಸುಹೃದರ ಲಕ್ಷಣಗಳನ್ನು ಹೀಗೆ ಹೇಳಿದ್ದಾರೆ : **ಪ್ರತ್ಯುಪಕಾರಮನಪೇಕ್ಷ್ಯ = ಉಪಕಾರಕರ್ತಾ ಸುಹೃತ್–**

ಪ್ರತ್ಯುಪಕಾರವನ್ನು ಅಪೇಕ್ಷಿಸದೇ ಉಪಕಾರವನ್ನು ಮಾಡುವವನು ಸುಹೃದನು. **ಪ್ರತ್ಯುಪಕಾರಮಪೇಕ್ಷ್ಯ ಉಪಕಾರಕರ್ತಾ ಮಿತ್ರಂ** – ಪ್ರತ್ಯುಪಕಾರವನ್ನು ಅಪೇಕ್ಷಿಸಿ ಉಪಕಾರಮಾಡುವವನು ಮಿತ್ರನು.)

ನಾಲಂ ಸುಖಾಯ ಸುಹೃದೋ ನಾಲಂ ದುಃಖಾಯ ಶತ್ರವಃ ।
ನ ಚ ಪ್ರಜ್ಞಾಲಮರ್ಥಾನಾಂ ನ ಸುಖಾನಾಮಲಂ ಧನಮ್ ॥೨೯॥

(ದೈವಾನುಕೂಲವಿಲ್ಲದಿದ್ದರೆ) ಸುಹೃದರು ಸುಖವನ್ನುಂಟುಮಾಡಲೂ ಸಮರ್ಥರಾಗುವುದಿಲ್ಲ. ಶತ್ರುಗಳು ದುಃಖವನ್ನುಂಟುಮಾಡಲೂ ಸಮರ್ಥರಾಗುವುದಿಲ್ಲ. ಬುದ್ಧಿಯೂ ಅರ್ಥವನ್ನು ಸಂಗ್ರಹಿಸಲು ಸಮರ್ಥವಾಗುವುದಿಲ್ಲ. ಧನವೊಂದೇ ಸುಖವನ್ನುಂಟುಮಾಡಲೂ ಸಮರ್ಥವಾಗುವುದಿಲ್ಲ. ಧನವಿದ್ದ ಮಾತ್ರಕ್ಕೇ ಸುಖವು ಲಭಿಸುತ್ತದೆಂಬುದು ನಿಜವಲ್ಲ. (ದೈವಾನುಕೂಲವಿದ್ದರೆ ಸುಹೃದನು ಸುಖಕರನಾಗಬಹುದು. ಶತ್ರುವು ಬಾಧಿಸದೇ ಇರಬಹುದು. ಬುದ್ಧಿಯು ಧನವನ್ನು ಸಂಗ್ರಹಿಸಲು ಸಮರ್ಥವಾಗಬಹುದು. ಧನದಿಂದಲೂ ಸುಖವು ಲಭಿಸಬಹುದು.)

ನ ಬುದ್ಧಿರ್ಧನಲಾಭಾಯ ನ ಜಾಡ್ಯಮಸಮೃದ್ಧಯೇ ।
ಲೋಕಪರ್ಯಾಯವೃತ್ತಾನ್ತಂ ಪ್ರಾಜ್ಞೋ ಜಾನಾತಿ ನೇತರಃ ॥೩೦॥

ಬುದ್ಧಿಬಲವೇ ಧನಪ್ರಾಪ್ತಿಗೆ ಕಾರಣವಲ್ಲ. ಮೂರ್ಖತೆಯೇ ದಾರಿದ್ರ್ಯಕ್ಕೂ ಕಾರಣವಲ್ಲ. ಸಂಸಾರವೆಂಬ ಚಕ್ರದ ಪರಿಭ್ರಮಣ ವೃತ್ತಾಂತವನ್ನು ಜ್ಞಾನಿಯಾದ ಪುರುಷನು ಮಾತ್ರ ತಿಳಿಯಬಲ್ಲನು. ಇತರರಾರು ತಿಳಿಯಲಾರರು.

ಬುದ್ಧಿಮನ್ತಂ ಚ ಶೂರಂ ಚ ಮೂಢಂ ಭೀರುಂ ಜಡಂ ಕವಿಮ್ ।
ದುರ್ಬಲಂ ಬಲವನ್ತಂ ಚ ಭಾಗಿನಂ ಭಜತೇ ಸುಖಮ್ ॥೩೧॥

ದೈವಾನುಕೂಲವಿದ್ದರೆ ಬುದ್ಧಿವಂತ, ಶೂರ, ಮೂಢ, ಹೇಡಿ, ಜಡ (ಸೋಮಾರಿ), ವಿದ್ವಾಂಸ, ದುರ್ಬಲ, ಬಲಿಷ್ಠ–ಎಂಬ ಯಾವ ವಿಧವಾದ ತಾರತಮ್ಯವೂ ಇಲ್ಲದೇ ಯಾವ ವಿಧವಾದ ಪ್ರಯತ್ನವೂ ಇಲ್ಲದೇ ಮನುಷ್ಯರು ಭಾಗ್ಯಶಾಲಿಗಳಾಗುತ್ತಾರೆ ಮತ್ತು ಸುಖವನ್ನೂ ಅನುಭವಿಸುತ್ತಾರೆ.

ಧೇನುರ್ವತ್ಸಸ್ಯ ಗೋಪಸ್ಯ ಸ್ವಾಮಿನಸ್ತಸ್ಕರಸ್ಯ ಚ ।
ಪಯಃ ಪಿಬತಿ ಯಸ್ತಸ್ಯಾ ಧೇನುಸ್ತಸ್ಯೇತಿ ನಿಶ್ಚಯಃ ॥೩೨॥

ಹಾಲನ್ನು ಕರೆಯುವ ಹಸುವು ಯಾರದು? ಕರುವಿನದೂ ಆಗುತ್ತದೆ ; ಗೋಪಾಲನದೂ ಆಗುತ್ತದೆ ; ಯಜಮಾನನದೂ ಆಗುತ್ತದೆ. ಹಸುವನ್ನು ಕದ್ದೊಯ್ಯುವ ಕಳ್ಳನದೂ ಆಗಬಹುದು. ಕಡೆಗೆ ವಿದ್ವಾಂಸರು ಹೀಗೆ ನಿಶ್ಚಯಿಸಿದ್ದಾರೆ. ಆ ಹಸುವಿನ ಹಾಲನ್ನು ಯಾವನು ಕುಡಿಯುವನೋ ಆ ಹಸುವು ಅವನದೇ ಆಗಿರುತ್ತದೆ. (ಒಂದು ಹಸುವಿನ ಹಾಲನ್ನು ಯಾವನು ಕುಡಿಯುವನೋ ಆ ಹಸುವು ಅವನದೇ ಹೊರತು ಇತರರು ಆ ಹಸುವಿನ ಮೇಲಿಡುವ ಮಮತೆಯು ವ್ಯರ್ಥವೇ ಸರಿ. ಆದುದರಿಂದ ಅವಶ್ಯವಾದುದಕ್ಕಿಂತಲೂ ಹೆಚ್ಚು ಆಶೆಪಡಬಾರದು–ಎಂಬುದು ವ್ಯಾಖ್ಯಾನ ಕಾರರ ವಿವರಣೆಯಾಗಿದೆ.)

ಯೇ ಚ ಮೂಢತಮಾ ಲೋಕೇ ಯೇ ಚ ಬುದ್ಧೇಃ ಪರಂ ಗತಾಃ ।
ತೇ ನರಾಃ ಸುಖಮೇಧನ್ತೇ ಕ್ಲಿಶ್ಯತ್ಯನ್ತರಿತೋ ಜನಃ ॥೩೩॥

ಲೋಕದಲ್ಲಿ ಯಾರು ಅತ್ಯಂತಮೂಢರಾಗಿರುವರೋ ಮತ್ತು ಯಾರು ಬುದ್ಧಿಯ ಪಾರವನ್ನು ಹೊಂದಿರುವರೋ (ಆತ್ಮಜ್ಞಾನಿಗಳಾಗಿರುವರೋ) ಅವರು ಮಾತ್ರ ಸುಖಿಗಳಾಗುತ್ತಾರೆ. ಈ ಮಧ್ಯದಲ್ಲಿರುವ ಮೂಢರೂ ಅಲ್ಲದ, ಬುದ್ಧಿಯ ಪಾರವನ್ನೂ ಕಾಣದ ಎಲ್ಲ ಮನುಷ್ಯರೂ ನಾನಾವಿಧವಾದ ಕ್ಲೇಶಗಳನ್ನೇ ಅನುಭವಿಸುತ್ತಿರುತ್ತಾರೆ. (ಮೂಢನು ಅಲ್ಪತೃಪ್ತನು. ಗೋಪಾಳದವನು ಒಪ್ಪತ್ತಿಗೆ ಸಿಕ್ಕಿದ ತಿರುಪೆಯ ಅನ್ನದಿಂದಲೇ ತೃಪ್ತಿಯನ್ನು ಹೊಂದುತ್ತಾನೆ. ಅದೇ ಅವನಿಗೆ ಪರಮಸುಖವಾಗಿರುತ್ತದೆ. ಆತ್ಮಜ್ಞಾನಿಯು ನಿತ್ಯತೃಪ್ತನು. ಆಸೆಯನ್ನೇ ಜಯಿಸಿದವನು. ಆದುದರಿಂದ ಪ್ರಪಂಚದಲ್ಲಿ ಇವರಿಬ್ಬರೇ ಸುಖಿಗಳು.)

(ವ್ಯಾಖ್ಯಾನಕಾರರು **ಮೂಢತಮಾಃ** – ಎಂಬುದಕ್ಕೆ ಸುಷುಪ್ತಿಯಲ್ಲಿ ಇರುವವರು– ಎಂದೂ, **ಬುದ್ಧೇಃ ಪರಂ ಗತಾಃ** – ಎಂಬುದಕ್ಕೆ ಸಮಾಧಿ ಸ್ಥಿತಿಯಲ್ಲಿ ಇರುವವರು – ಎಂದೂ, **ಅನ್ತರಿತೋ ಜನಃ** – ಎಂಬುದಕ್ಕೆ ಭೇದಭಾವವನ್ನು ಕಾಣುವವರು – ಎಂದೂ ಅರ್ಥಮಾಡಿರುತ್ತಾರೆ.)

ಅನ್ತ್ಯೇಷು ರೇಮಿರೇ ಧೀರಾ ನ ತೇ ಮಧ್ಯೇಷು ರೇಮಿರೇ ।
ಅನ್ತ್ಯಪ್ರಾಪ್ತಿಂ ಸುಖಾಮಾಹುರ್ದುಃಖಮನ್ತರಮನ್ತ್ಯಯೋಃ ॥೩೪॥

ಜ್ಞಾನಿಗಳಾದವರು ಕಡೆಯದಾದ ಸಮಾಧಿಸ್ಥಿತಿಯಲ್ಲಿ ಆನಂದಪಡುತ್ತಾರೆ. ಮಧ್ಯವರ್ತಿಯಾದ ಸ್ಥಿತಿಯಲ್ಲಿ (ಸಾಂಸಾರಿಕ ವ್ಯಾಪಾರಗಳಲ್ಲಿ) ಅವರಿಗೆ ಆನಂದವಿರುವುದಿಲ್ಲ. ಅಂತಿಮಸ್ಥಿತಿಯನ್ನೇ (ಆತ್ಮದರ್ಶನವನ್ನೇ) ಸುಖಸ್ವರೂಪವೆಂದು ಹೇಳುತ್ತಾರೆ. ಮೌಢ್ಯಕ್ಕೂ–ಜ್ಞಾನಕ್ಕೂ ಮಧ್ಯದಲ್ಲಿರುವ ಸ್ಥಿತಿಯನ್ನು ದುಃಖದ ಸ್ವರೂಪವೆಂದು ಹೇಳುತ್ತಾರೆ.

ಯೇ ಚ ಬುದ್ಧಿಸುಖಂ ಪ್ರಾಪ್ತಾ ದ್ವನ್ದ್ವಾತೀತಾ ವಿಮತ್ಸರಾಃ ।
ತಾನ್ನೈವಾರ್ಥಾ ನ ಚಾನರ್ಥಾ ವ್ಯಥಯನ್ತಿ ಕದಾಚನ ॥೩೫॥

ಯಾರು ಜ್ಞಾನಜನಿತವಾದ ಸುಖವನ್ನು ಪಡೆದುಕೊಂಡಿರುವರೋ (ಆತ್ಮದರ್ಶಿಗಳಾಗಿರುವರೋ), ಶೀತೋಷ್ಣ, ಸುಖ-ದುಃಖ, ಲಾಭಾಲಾಭ, ಜಯಪಜಯಗಳೆಂಬ ದ್ವಂದ್ವಗಳಿಂದ ಅತೀತರಾಗಿರುವರೋ ಮತ್ತು ಮಾತ್ಸರ್ಯರಹಿತರಾಗಿರುವರೋ–ಅಂತಹವರನ್ನು ಅರ್ಥಗಳಾಗಲೀ, ಅನರ್ಥಗಳಾಗಲೀ–ಸಂತೋಷಪಡಿಸುವುದೂ ಇಲ್ಲ ; ದುಃಖಪಡಿಸುವುದೂ ಇಲ್ಲ.

ಅಥ ಯೇ ಬುದ್ಧಿಮಪ್ರಾಪ್ತಾ ವ್ಯತಿಕ್ರಾನ್ತಾಶ್ಚ ಮೂಢತಾಮ್ ।
ತೇಽತಿವೇಲಂ ಪ್ರಹೃಷ್ಯನ್ತಿ ಸಂತಾಪಮುಪಯಾನ್ತಿ ಚ ॥೩೬॥

ಯಾರು ಬುದ್ಧಿಯ ಪಾರವನ್ನು ಹೊಂದಿಲ್ಲವೋ, ಮೌಢ್ಯವನ್ನು ಅತಿಕ್ರಮಿಸಿರುವರೋ (ಮೂಢರಲ್ಲವೋ) ಅಂತಹವರು ಸುಖಸಮಯದಲ್ಲಿ ಮಿತಿಮೀರಿದ ಆನಂದವನ್ನು ಅನುಭವಿಸುತ್ತಾರೆ. ದುಃಖಸಮಯದಲ್ಲಿ ಮಿತಿಮೀರಿ ಶೋಕಪಡುತ್ತಾರೆ.

ನಿತ್ಯಂ ಪ್ರಮುದಿತಾ ಮೂಢಾ ದಿವಿ ದೇವಗಣಾ ಇವ ।
ಅವಲೇಪೇನ ಮಹತಾ ಪರಿಭೂತ್ವಾ ವಿಚೇತಸಃ ॥೩೭॥

ಬುದ್ಧಿಗೆಟ್ಟ, ವಿವೇಕಶೂನ್ಯರಾದ, ಸದಸದ್ವಿವೇಕಹೀನರಾದ ಮೂಢರು ಮಹಾಗರ್ವದಿಂದ ಕೂಡಿ ಪರಾಪಮಾನಮಾಡುತ್ತಾ ಸ್ವರ್ಗದಲ್ಲಿರುವ ದೇವತೆಗಳಂತೆಯೇ ಆನಂದಪಡುತ್ತಿರುತ್ತಾರೆ.

ಸುಖಂ ದುಃಖಾನ್ತಮಾಲಸ್ಯಂ ದುಃಖಂ ದಾಕ್ಷ್ಯಂ ಸುಖೋದಯಮ್ ।
ಭೂತಿಸ್ತ್ವೇವಂ ಶ್ರಿಯಾ ಸಾರ್ಧಂ ದಕ್ಷೇ ವಸತಿ ನಾಲಸೇ ॥೩೮॥

ಆಲಸ್ಯವೆಂಬುದು ಪ್ರಾರಂಭದಲ್ಲಿ ಸುಖದಂತೆಯೇ ಕಾಣುತ್ತದೆ. ಆದರೆ ಅದು ಕಡೆಯಲ್ಲಿ ಕರ್ತವ್ಯಗಳನ್ನು ಮಾಡಲು ಅವಕಾಶವೀಯುವುದಿಲ್ಲವಾದುದರಿಂದ ದುಃಖಾಂತವಾಗಿ ಪರಿಣಮಿಸುತ್ತದೆ. ದಕ್ಷತೆಯಿಂದ ಕಾರ್ಯವನ್ನು ಪ್ರಾರಂಭಿಸಿದಾಗ ಮೊದಲು ದುಃಖವಾಗಿಯೇ ಕಂಡರೂ ಕಡೆಯಲ್ಲಿ ಸುಖೋತ್ಪಾದಕವಾಗಿ ಪರಿಣಮಿಸುತ್ತದೆ. ಕಾರ್ಯಕುಶಲನಾದ ಮನುಷ್ಯನಲ್ಲಿಯೇ ಐಶ್ವರ್ಯವು ಲಕ್ಷ್ಮಿಯೊಡನೆ ನೆಲೆಸಿರುತ್ತದೆ. ಅಲಸನಲ್ಲಿ (ಸೋಮಾರಿಯಲ್ಲಿ) ಸರ್ವಥಾ ನೆಲೆಸುವುದಿಲ್ಲ.

ಸುಖಂ ವಾ ಯದಿ ವಾ ದುಃಖಂ ಪ್ರಿಯಂ ವಾ ಯದಿ ವಾಪ್ರಿಯಮ್ ।
ಪ್ರಾಪ್ತಂ ಪ್ರಾಪ್ತಮುಪಾಸೀತ ಹೃದಯೇನಾಪರಾಜಿತಃ ॥೩೯॥

ಸುಖವೇ ಉಂಟಾಗಲೀ, ದುಃಖವೇ ಉಂಟಾಗಲೀ, ಪ್ರಿಯವೇ ಆಗಲೀ, ಅಪ್ರಿಯವೇ ಆಗಲೀ–ಯಾವ-ಯಾವ ಕಾಲಕ್ಕೆ ಯಾವ-ಯಾವುದು ಪ್ರಾಪ್ತವಾಗುವುದೋ ಅದನ್ನು ಹೃದಯದೌರ್ಬಲ್ಯಕ್ಕೆ ಅವಕಾಶವನ್ನೀಯದೆ ಅನುಭವಿಸಬೇಕು.

ಶೋಕಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶನ್ತಿ ನ ಪಣ್ಡಿತಮ್ ॥೪೦॥

ಶೋಕದ ಮೂಲಗಳು ಸಾವಿರಾರು ಇವೆ. ಭಯದ ಮೂಲಗಳೂ ನೂರಾರಿವೆ. ಆದರೆ ಶೋಕ-ಭಯಗಳು ಅನುದಿನವೂ ಮೂರ್ಖನನ್ನು ಆವರಿಸುತ್ತಲೇ ಇರುತ್ತವೆ. ಶೋಕ-ಭಯಗಳು ವಿದ್ವಾಂಸನ ಹತ್ತಿರದಲ್ಲಿ ಸುಳಿಯುವುದೂ ಇಲ್ಲ. (ವ್ಯಾಖ್ಯಾನಕಾರರು : ಶೋಕಸ್ಥಾನಾನಿ ಶೋಕ ಮೂಲಾನಿ ಇಷ್ಟವಿಯೋಗಾದೀನಿ– ಇಷ್ಟರಾದವರ ವಿಯೋಗವೇ ಮೊದಲಾದುವುಗಳು : ಭಯಸ್ಥಾನಾನಿ ಭಯಕಾರಣಾನಿ ಅನಿಷ್ಟ ಸಂಯೋಗಾದೀನಿ–ಇಷ್ಟರಲ್ಲದವರ ಸಹವಾಸವೇ ಮೊದಲಾದುವುಗಳು– ಎಂದು ವ್ಯಾಖ್ಯಾನಮಾಡಿರುತ್ತಾರೆ.)

ಬುದ್ಧಿಮನ್ತಂ ಕೃತಪ್ರಜ್ಞಂ ಶುಶ್ರೂಷುಮನಸೂಯಕಮ್ ।
ದಾನ್ತಂ ಜಿತೇನ್ದ್ರಿಯಂ ಚಾಪಿ ಶೋಕೋ ನ ಸ್ಪೃಶತೇ ನರಮ್ ॥೪೧॥

ಬುದ್ಧಿವಂತನನ್ನೂ, ಸುಸಂಸ್ಕೃತವಾದ ಮತ್ತು ಪಕ್ವವಾದ ಪ್ರಜ್ಞೆಯಿರುವವನನ್ನೂ, ವಿವೇಕವನ್ನು ಕೇಳುವ ಇಚ್ಛೆಯಿರುವವನನ್ನೂ (ಗುರು-ಹಿರಿಯರ ಸೇವೆಮಾಡುವವನನ್ನೂ,) ಅಸೂಯೆಯಿಲ್ಲದವನನ್ನೂ, ಅಂತರ್ಬಹಿರಿಂದ್ರಿಯಗಳನ್ನು ನಿಗ್ರಹಿಸಿರುವವನನ್ನೂ * ಶೋಕವು ಸ್ಪರ್ಶಿಸುವುದಿಲ್ಲ.

ಏತಾಂ ಬುದ್ಧಿಂ ಸಮಾಸ್ಥಾಯ ಗುಪ್ತಚಿತ್ತಶ್ಚರೇದ್ಬುಧಃ ।
ಉದಯಾಸ್ತಮಯಜ್ಞಂ ಹಿ ನ ಶೋಕಃ ಸ್ಪ್ರಷ್ಟುಮರ್ಹತಿ ॥೪೨॥

ವಿದ್ವಾಂಸನಾದವನು ಇಂತಹ ಬುದ್ಧಿಯನ್ನು ಆಶ್ರಯಿಸಿ ಮನಸ್ಸನ್ನು ಕಾಮ-ಕ್ರೋಧಾದಿ ಅರಿಷಡ್ವರ್ಗಗಳಿಂದ ಸಂರಕ್ಷಿಸಿಕೊಳ್ಳುತ್ತಾ ಸದ್ವ್ಯವಹಾರಗಳಲ್ಲಿ ನಿರತನಾಗಿರಬೇಕು. ಉದಯಾಸ್ತಗಳನ್ನು (ಜಗತ್ತಿನ ಉತ್ಪತ್ತಿ ಮತ್ತು ಲಯಗಳನ್ನು) ತಿಳಿದವನನ್ನು (ಬ್ರಹ್ಮಜ್ಞಾನಿಯನ್ನು) ಶೋಕವು ಸ್ಪರ್ಶಿಸುವುದಿಲ್ಲ. 'ತರತಿ ಶೋಕಮಾತ್ಮವಿತ್' ಎಂಬ ಶ್ರುತಿವಾಕ್ಯವೂ ಇದನ್ನೇ ಹೇಳುತ್ತದೆ.

ಯನ್ನಿಮಿತ್ತಂ ಭವೇಚ್ಛೋಕಸ್ತಾಪೋ ವಾ ದುಃಖಮೇವ ಚ ।
ಆಯಾಸೋ ವಾ ಯತೋ ಮೂಲಮೇಕಾಙ್ಗಮಪಿ ತತ್ತ್ಯಜೇತ್ ॥

ಯಾವುದರ ನಿಮಿತ್ತದಿಂದ ಶೋಕ-ತಾಪ-ದುಃಖಗಳು ಉಂಟಾಗುತ್ತವೆಯೋ, ಯಾವುದರ ಕಾರಣದಿಂದ ಅಧಿಕವಾದ ಆಯಾಸವುಂಟಾಗುವುದೋ–ಅದು ಯದ್ಯಪಿ ಶರೀರದ ಒಂದು ಅಂಗವೇ ಆಗಿದ್ದರೂ–ಅದನ್ನು ತ್ಯಜಿಸಬೇಕು. (ಹೀಗಿರುವಾಗ ಶೋಕ-ತಾಪ-ದುಃಖಗಳಿಗೆ ಮೂಲಕಾರಣಗಳಾದ ಧನಾದಿಗಳನ್ನು ತ್ಯಜಿಸಬೇಕೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.)

---

* ಜಿತೇಂದ್ರಿಯನ ಲಕ್ಷಣವನ್ನು ಮನುವು ಹೀಗೆ ವಿವರಿಸಿದ್ದಾನೆ :
ಶ್ರುತ್ವಾ ಸ್ಪೃಷ್ಟ್ವಾಥ ದೃಷ್ಟ್ವಾ ಚ ಭುಕ್ತ್ವಾ ಘ್ರಾತ್ವಾ ಚ ಯೋ ನರಃ ।
ನ ಹೃಷ್ಯತಿ ಗ್ಲಾಯತಿ ವಾ ಸ ವಿಜ್ಞೇಯೋ ಜಿತೇನ್ದ್ರಿಯಃ ॥೨-೯೮॥

ಕಿಂಚಿದೇವ ಮಮತ್ವೇನ ಯದಾ ಭವತಿ ಕಲ್ಪಿತಮ್ ।
ತದೇವ ಪರಿತಾಪಾರ್ಥಂ ಸರ್ವಂ ಸಮ್ಪದ್ಯತೇ ತಥಾ ॥೪೪॥

ಮನುಷ್ಯನು ಯಾವಾಗ ಯಾವುದಾದರೂ ವಸ್ತುವಿನಲ್ಲಿ ಸ್ವಲ್ಪವಾದರೂ ಮಮತ್ವವನ್ನು ಕಲ್ಪಿಸುವನೋ–ಆ ಮಮಕಾರವೇ ಸಕಲವಿಧವಾದ ಪರಿತಾಪಗಳನ್ನೂ ಉಂಟುಮಾಡುತ್ತದೆ. (ಶೋಕ-ತಾಪ-ದುಃಖಗಳಿಗೆ ಮಮತ್ವವೇ ಕಾರಣ. ನಾನು, ನನ್ನದು–ಎಂಬ ಭಾವನೆಯನ್ನಿಟ್ಟುಕೊಂಡೇ ಮನುಷ್ಯನು ಸಂಸಾರಸಾಗರದಲ್ಲಿ ಬಿದ್ದು ತೊಳಲುತ್ತಾನೆ. ಶೋಕ-ದುಃಖ ಗಳನ್ನು ಅನುಭವಿಸುತ್ತಾನೆ. 'ನಾನು-ನನ್ನದು' ಎಂಬುದನ್ನು ಹೋಗ ಲಾಡಿಸಿಕೊಳ್ಳಬೇಕಾದರೆ ಶಾಸ್ತ್ರಜ್ಞಾನವಿರಬೇಕು. ಹಲವು ವೇಳೆ ಶಾಸ್ತ್ರ ಜ್ಞಾನದಿಂದ ಅಹಂಕಾರ-ಮಮಕಾರಗಳು ಹೆಚ್ಚುವುದುಂಟು. ಅದಕ್ಕಾಗಿ ಶಾಸ್ತ್ರಜ್ಞಾನದೊಡನೆ ಆಧ್ಯಾತ್ಮಿಕಸಾಧನೆಯೂ ಬೇಕು. ಗುರುವಿನ ಅನುಗ್ರಹದಿಂದ ಇಂದ್ರಿಯಗಳೆಲ್ಲವನ್ನೂ ಮನಸ್ಸಿನಲ್ಲಿಯೂ, ಮನಸ್ಸನ್ನು ಬುದ್ಧಿಯಲ್ಲಿಯೂ, ಬುದ್ಧಿಯನ್ನು ಹೃದಯಕಮಲದ ಮಧ್ಯದಲ್ಲಿರುವ ಪರಮಾತ್ಮನಲ್ಲಿಯೂ ಲೀನಗೊಳಿಸಿದಾಗ 'ನಾನು-ನನ್ನದು' ಎಂಬುದಾವುದೂ ಇರುವುದಿಲ್ಲ. ಅದು ಹೊರತಾಗಿ ಶಾಸ್ತ್ರಜ್ಞಾನದಿಂದಲೇ ಮಮಕಾರವನ್ನು ತೊಡೆದುಹಾಕುವುದು ಕಷ್ಟ.)

ಯದ್ಯತ್ತ್ಯಜತಿ ಕಾಮಾನಾಂ ತತ್ಸುಖಸ್ಯಾಭಿಪೂರ್ಯತೇ ।
ಕಾಮಾನುಸಾರೀ ಪುರುಷಃ ಕಾಮಾನನುವಿನಶ್ಯತಿ ॥೪೫॥

ಕಾಮನಾವಸ್ತುಗಳಲ್ಲಿ ಯಾವ-ಯಾವುದನ್ನು ಪರಿತ್ಯಾಗಮಾಡಿದರೂ ಅದು ಸುಖಕ್ಕೇ ಕಾರಣಭೂತವಾಗುತ್ತದೆ. ಪಂಚೇಂದ್ರಿಯಗಳು ಬಯಸುವ ಶಬ್ದ - ಸ್ಪರ್ಶ-ರೂಪ-ರಸ-ಗಂಧಾದಿಗಳಲ್ಲಿ ಒಂದೊಂದನ್ನು ತ್ಯಜಿಸಿದರೂ (ಎಂದರೆ ಅವುಗಳ ದಾಸರಾಗದಿದ್ದರೂ) ಅದರಿಂದ ಸುಖವೇ ಉಂಟಾಗು

ನಿಂದಾ-ಸ್ತುತಿಗಳನ್ನು ಕೇಳಿ, ಮೃದುವಾದ ಮತ್ತು ಕಠಿನವಾದ ವಸ್ತುಗಳನ್ನು ಸ್ಪರ್ಶಿಸಿ, ಮನೋಹರವಾದ ಸುಂದರರೂಪವನ್ನೂ ಕರಾಳರೂಪವನ್ನೂ ನೋಡಿ, ಕಹಿಯನ್ನೂ–ಸಿಹಿಯನ್ನೂ ತಿಂದು, ದುರ್ವಾಸನೆಯನ್ನೂ–ಸುವಾಸನೆಯನ್ನೂ ಆಘ್ರಾಣಿಸಿ ಯಾವ ಮನುಷ್ಯನು ಸಂತೋಷವನ್ನಾಗಲೀ, ದುಃಖವನ್ನಾಗಲೀ ಹೊಂದುವುದಿಲ್ಲವೋ–ಅವನೇ ಜಿತೇಂದ್ರಿಯನು.

ತ್ತದೆ. ಒಂದೊಂದನ್ನಾಗಿ ತ್ಯಜಿಸುವ ಅಭ್ಯಾಸವನ್ನು ಮಾಡಬೇಕು. ಕಡೆಗೆ ಎಲ್ಲವನ್ನೂ ತ್ಯಜಿಸಬೇಕು. ಇಂದ್ರಿಯಗಳನ್ನು ವಶಪಡಿಸಿಕೊಳ್ಳಬೇಕು. ಇದಕ್ಕೆ ಬದಲಾಗಿ ಇಂದ್ರಿಯಗಳಿಗೇ ದಾಸನಾಗಿ ಅವುಗಳ ಕಾಮನೆಗಳನ್ನೇ ಪೂರೈಸಲು ಶ್ರಮಿಸುವ ಮನುಷ್ಯನು ಕಾಮನೆಗಳ ಹಿಂದೆಯೇ ವಿನಾಶವನ್ನೂ ಹೊಂದುತ್ತಾನೆ. (ಇಂದ್ರಿಯಸಂಬಂಧವಾದ ಕಾಮನೆಗಳು ಹೆಚ್ಚುತ್ತಲೇ ಹೋಗುತ್ತವೆ. ಕಾಮನೆಗಳನ್ನು ಉಪಭೋಗಿಸಿದಂತೆಲ್ಲಾ ಅಗ್ನಿಗೆ ತುಪ್ಪವನ್ನು ಸುರಿದಂತೆ-ಕಾಮನೆಗಳು ಮತ್ತಷ್ಟು ವೃದ್ಧಿಯಾಗುತ್ತವೆ. ಕಡೆಗೆ ಮನುಷ್ಯನು ಆ ಕಾಮನೆಗಳಿಗೆ ದಾಸನಾಗುತ್ತಾನೆ.)

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥

ಮಹಾರಾಜ! ಈ ಪ್ರಪಂಚದಲ್ಲಿ ಯಾವ ಕಾಮೋಪಭೋಗಸುಖ ಗಳಿವೆಯೋ, ಸ್ವರ್ಗದಲ್ಲಿ ಯಾವ ಮಹತ್ಸುಖವಿರುವುದೋ–ಆ ಸುಖಗಳೆಲ್ಲವೂ ತೃಷ್ಣಾಕ್ಷಯಸುಖದ ಹದಿನಾರನೆಯ ಒಂದಂಶಕ್ಕೂ ಸಾಟಿಯಾಗಲಾರವು. (ತೃಷ್ಣಾಕ್ಷಯವೆಂದರೆ ಆಶೆಯನ್ನು ಕ್ಷಯಗೊಳಿಸುವುದು. ಯಾವ ವಸ್ತುವಿನ ಮೇಲೂ ಆಶೆಯನ್ನೇ ಇಟ್ಟುಕೊಳ್ಳದೇ ಇರುವುದು. ಆಶೆಗೆ ಮೂಲ ಕಾರಣಗಳಾದ ಪಂಚೇಂದ್ರಿಯಗಳನ್ನೂ ನಿಗ್ರಹಿಸುವುದು. ತೃಷ್ಣಾಕ್ಷಯವು ಆತ್ಮಸಾಕ್ಷಾತ್ಕಾರಕ್ಕೆ ಅತಿಮುಖ್ಯವಾದ ಒಂದು ಸಾಧನೆ. ಆತ್ಮಸಾಕ್ಷಾತ್ಕಾರ ಸುಖದ ದೃಷ್ಟಿಯಿಂದ ಪ್ರಾಪಂಚಿಕಸುಖೋಪಭೋಗಗಳೂ–ಸ್ವರ್ಗೀಯ ಸುಖೋಪಭೋಗಗಳೂ ಅತಿನಿಕೃಷ್ಟವಾದುವುಗಳು–ಎಂದು ತಾತ್ಪರ್ಯ.)

ಪೂರ್ವದೇಹಕೃತಂ ಕರ್ಮ ಶುಭಂ ವಾ ಯದಿ ವಾಶುಭಮ್ ।
ಪ್ರಾಜ್ಞಂ ಮೂಢಂ ತಥಾ ಶೂರಂ ಭಜತೇ ಯಾದೃಶಂ ಕೃತಮ್ ॥

ಮನುಷ್ಯನು ಬುದ್ಧಿವಂತನಾಗಲೀ, ಮೂಢನಾಗಲೀ, ಶೂರನಾಗಲೀ–ತಾನು ಹಿಂದಿನ ಜನ್ಮದಲ್ಲಿ ಮಾಡಿದ ಶುಭಾಶುಭಕರ್ಮಗಳಿಗೆ ಅನುಸಾರವಾಗಿ ಫಲಗಳನ್ನು ಅನುಭವಿಸುತ್ತಿರುತ್ತಾನೆ. (ಆಯಾಯಾ ಕರ್ಮಗಳು ಕರ್ತೃಗಳನ್ನು ತಾವಾಗಿಯೇ ಹುಡುಕಿಕೊಂಡು ಬರುತ್ತವೆ.)

ಏವಮೇವ ಕಿಲೈತಾನಿ ಪ್ರಿಯಾಣ್ಯೇವಾಪ್ರಿಯಾಣಿ ಚ ।
ಜೀವೇಷು ಪರಿವರ್ತನ್ತೇ ದುಃಖಾನಿ ಚ ಸುಖಾನಿ ಚ ॥೪೮॥

ಈ ಪ್ರಕಾರವಾಗಿ ಜೀವರುಗಳಲ್ಲಿ ಪ್ರಿಯಾಪ್ರಿಯಗಳೂ, ಸುಖ-ದುಃಖ ಗಳೂ ಪದೇ-ಪದೇ ಕ್ರಮವಾದ ಪರಿವರ್ತನೆಹೊಂದುತ್ತಲೇ ಇರುತ್ತವೆ.

ಏತಾಂ ಬುದ್ಧಿಂ ಸಮಾಸ್ಥಾಯ ಸುಖಮಾಸ್ತೇ ಗುಣಾನ್ವಿತಃ ।
ಸರ್ವಾನ್ಕಾಮಾನ್ಜುಗುಪ್ಸೇತ ಕಾಮಾನ್ಕುರ್ವೀತ ಪೃಷ್ಠತಃ ॥೪೯॥

ಈ ತೃಷ್ಣೆಯನ್ನು ಕ್ಷಯಿಸುವ ಬುದ್ಧಿಯನ್ನು ಆಶ್ರಯಿಸಿ ಶಮ- ದಮಾದಿ ಗುಣಗಳಿಂದ ಯುಕ್ತನಾದವನು ಸುಖವಾಗಿರುತ್ತಾನೆ. ಸಕಲವಿಧವಾದ ಕಾಮನೆಗಳನ್ನೂ ಜುಗುಪ್ಸೆಯಿಂದಲೇ ಕಾಣಬೇಕು. ಸಕಲವಿಧವಾದ ಕಾಮನೆಗಳನ್ನೂ ಹಿಂದಕ್ಕೆ ತಳ್ಳಬೇಕು. (ಕಾಮನೆಗಳಿಂದ ವಿಮುಖನಾಗಿರಬೇಕು.)

ವೃತ್ತ ಏಷ ಹೃದಿ ಪ್ರೌಢೋ ಮೃತ್ಯುರೇಷ ಮನೋಭವಃ ।
ಕ್ರೋಧೋ ನಾಮ ಶರೀರಸ್ಥೋ ದೇಹಿನಾಂ ಪ್ರೋಚ್ಯತೇ ಬುಧೈಃ ॥

ಮನಸ್ಸಿನಲ್ಲಿ ಹುಟ್ಟುವ ಕಾಮವು ಅಲ್ಲಿಯೇ ವೃದ್ಧಿಯನ್ನೂ ಹೊಂದಿ ಪ್ರೌಢವಾಗುತ್ತದೆ. ಬಳಿಕ ಅದೇ ಕಾಮವು ಮೃತ್ಯುರೂಪವನ್ನು ತಾಳುತ್ತದೆ. ಹೇಗೆಂದರೆ : ಕಾಮಕ್ಕೆ ಯಾವುದಾದರೂ ಕಾರಣದಿಂದ ತಡೆಯುಂಟಾದಾಗ ಹೃದಯದಲ್ಲಿ ಪ್ರೌಢವಾಗಿರುವ ಆ ಕಾಮವೇ ಕ್ರೋಧವೆಂಬ ಹೆಸರಿನಿಂದ ಪರಿವರ್ತನೆಯನ್ನು ಹೊಂದುತ್ತದೆ. ದೇಹಿಗಳಿಗೆ ಕ್ರೋಧವೇ ಮೃತ್ಯು ಸ್ವರೂಪವೆಂದು ವಿದ್ವಾಂಸರು ಹೇಳುತ್ತಾರೆ.

ಯದಾ ಸಂಹರತೇ ಕಾಮಾನ್ಕೂರ್ಮೋಽಙ್ಗಾನೀವ ಸರ್ವಶಃ ।
ತದಾತ್ಮಜ್ಯೋತಿರಾತ್ಮಾಯಮಾತ್ಮನ್ಯೇವ ಪ್ರಪಶ್ಯತಿ ॥೫೧॥

ಆಮೆಯು ತನ್ನ ಅಂಗಾಂಗಗಳೆಲ್ಲವನ್ನೂ ಒಳಕ್ಕೆ ಸೆಳೆದುಕೊಳ್ಳು ವಂತೆ–ಮನುಷ್ಯನು ಯಾವಾಗ ಇಂದ್ರಿಯಗಳೆಲ್ಲದರಿಂದಲೂ ಸಕಲವಿಧ ವಾದ ಕಾಮನೆಗಳನ್ನೂ ತನ್ನಲ್ಲಿಯೇ ಉಪಸಂಹರಿಸಿಕೊಳ್ಳುವನೋ–ಆಗ ಆ

ಮನುಷ್ಯನು ತನ್ನ ವಿಶುದ್ಧವಾದ ಅಂತಃಕರಣದಲ್ಲಿಯೇ ಜ್ಯೋತಿಸ್ವರೂಪವಾದ ಪರಮಾತ್ಮವಸ್ತುವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ನ ಬಿಭೇತಿ ಯದಾ ಚಾಯಂ ಯದಾ ಚಾಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಮ್ಪದ್ಯತೇ ತದಾ ॥೫೨॥

ಯಾವಾಗ ಶಮ-ದಮಾದಿ ಗುಣಾನ್ವಿತನಾದ ಮನುಷ್ಯನು ಇತರರಿಗೆ ಭಯಪಡುವುದಿಲ್ಲವೋ, ಆತನಿಂದಲೂ ಇತರರು ಯಾರೂ ಭಯ ಗೊಳ್ಳುವುದಿಲ್ಲವೋ, ಯಾರು ಎಲ್ಲರಿಗೂ ಅಭಯಪ್ರದನಾಗಿರುವನೋ, ಯಾವ ವಸ್ತುವನ್ನೂ ಅಪೇಕ್ಷಿಸುವುದಿಲ್ಲವೋ ಮತ್ತು ಯಾರನ್ನೂ ದ್ವೇಷಿಸು ವುದಿಲ್ಲವೋ–ಆಗ ಬ್ರಹ್ಮವೇ ಆಗುತ್ತಾನೆ.

ಉಭೇ ಸತ್ಯಾನೃತೇ ತ್ಯಕ್ತ್ವಾ ಶೋಕಾನನ್ದೌ ಭಯಾಭಯೇ ।
ಪ್ರಿಯಾಪ್ರಿಯೇ ಪರಿತ್ಯಜ್ಯ ಪ್ರಶಾನ್ತಾತ್ಮಾ ಭವಿಷ್ಯತಿ ॥೫೩॥

ಸಾಧಕನು–ಸತ್ಯಾನೃತಗಳನ್ನೂ, ಶೋಕಾನಂದಗಳನ್ನೂ ಭಯಾ ಭಯಗಳನ್ನೂ, ಪ್ರಿಯಾಪ್ರಿಯಗಳನ್ನೂ ಪರಿತ್ಯಜಿಸಿ ಶಾಂತಚಿತ್ತನಾಗುತ್ತಾನೆ. (ಇಲ್ಲಿ ಸತ್ಯಾನೃತಗಳನ್ನು ಪರಿತ್ಯಜಿಸುವುದೆಂದರೆ : ವ್ಯವಹಾರದಲ್ಲಿ ನಿಜವನ್ನೂ ಹೇಳಬಾರದು ; ಸುಳ್ಳನ್ನೂ ಹೇಳಬಾರದು ಎಂದು ಅರ್ಥವಲ್ಲ. ಬ್ರಾಹ್ಮೀಸ್ಥಿತಿಯಲ್ಲಿ ಈ ವ್ಯಾವಹಾರಿಕವಾದ ಸತ್ಯಾಸತ್ಯಗಳು ಯಾವುವೂ ಇರುವುದಿಲ್ಲ. ಅದು ಮೌನದ ಸ್ಥಿತಿ ಎಂದರ್ಥ. ಮನುಷ್ಯನಿಗೆ ಶೋಕವು ಬೇಡವಾದರೂ ಸಮಯಗಳಲ್ಲಿ ಉಂಟಾಗುವ ಶೋಕವನ್ನು ಪರಿತ್ಯಜಿಸುವುದಕ್ಕಾಗುವುದಿಲ್ಲ. ಶೋಕವನ್ನಾಗಲೀ, ಉಕ್ಕಿಬರುವ ಆನಂದ ವನ್ನಾಗಲೀ ತಡೆದುಕೊಳ್ಳಬೇಕಾದರೆ– ಮನಃಸ್ಥೈರ್ಯವಿರಬೇಕು. ಅಶಕ್ತವಾದ ಮನಸ್ಸಿಗೆ ಮಾತ್ರವೇ ಶೋಕಾನಂದಗಳುಂಟಾಗುತ್ತವೆ. ಪ್ರಾಪಂಚಿಕ ವ್ಯವಹಾರಗಳಲ್ಲಿ ಆಸಕ್ತಿಯನ್ನು ತೊರೆದರೆ ಶೋಕಾನಂದಗಳು ತಾವಾಗಿಯೇ ವಿನಾಶವಾಗುತ್ತವೆ. ಪ್ರಿಯವಾದುದನ್ನೂ ಅಪ್ರಿಯವಾದುದನ್ನೂ ತ್ಯಜಿಸ ಬೇಕು. ಅಪ್ರಿಯವಾದುದು ಬೇಡವಾದರೂ ಜೀವನದಲ್ಲಿ ಅಪ್ರಿಯವಾದ ಘಟನೆಗಳು ನೂರಾರು ನಡೆಯುತ್ತವೆ. ಪ್ರಿಯವಾದ ಘಟನೆಗಳೂ ನಡೆಯು

ತ್ತವೆ. ಘಟನೆಗಳನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಆದರೆ ಅವುಗಳನ್ನು ಪರಿತ್ಯಜಿಸುವುದೆಂದರೆ ಅವುಗಳಿಂದ ಮನಸ್ಸಿನ ಮೇಲೆ ಯಾವ ವಿಧವಾದ ವಿಕಾರವೂ ಆಗದಂತೆ ಸಮಚಿತ್ತನಾಗಿ ಇರುವುದು. ಪ್ರಿಯವಾದರೆ ಹಿಗ್ಗುವುದೂ–ಅಪ್ರಿಯವಾದರೆ ಕುಗ್ಗುವುದೂ ಸಾಮಾನ್ಯಮನುಷ್ಯನ ಸ್ವಭಾವವಾಗಿರುತ್ತದೆ. ಅಂತಹ ಸ್ವಭಾವದಿಂದ ಅತೀತನಾಗಿದ್ದರೆ ಪ್ರಿಯಾ ಪ್ರಿಯಗಳನ್ನು ಪರಿತ್ಯಜಿಸಿದಂತೆಯೇ ಆಗುತ್ತದೆ. ಭಯವನ್ನೂ ತ್ಯಜಿಸಬೇಕು. ಅಭಯವನ್ನೂ ತ್ಯಜಿಸಬೇಕು. ಹಿಂದಿನ ಶ್ಲೋಕದಲ್ಲಿ ಹೇಳಿರುವಂತೆ ಜ್ಞಾನಿಯು ಯಾರಿಗೂ ಭಯಪಡುವುದಿಲ್ಲ. ಜ್ಞಾನಿಯಾದವನಿಗೆ ಭಯವೆಂಬುದೇ ಇರುವುದಿಲ್ಲ. ಭಯವು ಮಾನಸಿಕವಾದ ಒಂದು ವಿಕಾರ. ಅದನ್ನು ತ್ಯಜಿಸಬೇಕು. ಅಭಯವೆಂದರೆ ಭಯವಿಲ್ಲದಿರುವಿಕೆ, ಭಯವಿಲ್ಲ ದಿರುವಿಕೆಯನ್ನು ತ್ಯಜಿಸುವುದು ಏಕೆ? ಎಂದರೆ–ಭಯವಿರಬೇಕೆಂದೇ ಆಗುತ್ತದೆ. ಯಾವ ಸಮಯದಲ್ಲಿ ಭಯವಿರಬೇಕು? * ಬ್ರಹ್ಮವಿಚ್ಛೇದಕ್ಕೆ (ಬ್ರಹ್ಮನ ಅಗಲಿಕೆಗೆ) ಭಯಪಡಬೇಕು. ಆ ವಿಷಯದಲ್ಲಿ ನಿರ್ಭಯ ವಾಗಿರಬಾರದು. ಗುರು-ಹಿರಿಯರ ಶುಶ್ರೂಷೆಮಾಡುವಾಗ, ದೇವ-ಪಿತೃ ಕರ್ಮಗಳನ್ನು ಮಾಡುವಾಗ ಭಯ-ಭಕ್ತಿಗಳಿಂದ ಮಾಡಬೇಕು.)

ಯದಾ ನ ಕುರುತೇ ಧೀರಃ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಮ್ಪದ್ಯತೇ ತದಾ ॥೫೪॥

ಯಾವಾಗ ಧೈರ್ಯಸಂಪನ್ನನಾದ ಪುರುಷನು ಯಾವುದೇ ಪ್ರಾಣಿಗಳ ವಿಷಯದಲ್ಲಾಗಲೀ ಕರ್ಮದಿಂದಲೂ, ಮನಸ್ಸಿನಿಂದಲೂ ಮತ್ತು ಮಾತಿ ನಿಂದಲೂ ಪಾಪಪೂರ್ಣವಾದ ನಿಂದಿತಕರ್ಮಗಳನ್ನು ಮಾಡುವುದಿಲ್ಲವೋ– ಆಗ ಆ ಪುರುಷನು ಪರಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

---

* ಉದರಮಂತರಂ ಕುರುತೇ । ಅಥ ತಸ್ಯ ಭಯಂ ಭವತಿ । ತತ್ತ್ವೇವ ಭಯಂ ವಿದುಷೋ ಮನ್ವಾನಸ್ಯ। ತನಗೂ ಬ್ರಹ್ಮನಿಗೂ ಕಿಂಚಿತ್ತಾದರೂ ವಿಚ್ಛೇದವನ್ನು ಮಾಡಿಕೊಂಡಾಗ ಭಯವುಂಟಾಗುತ್ತದೆ. ಜ್ಞಾನಿಯ ದೃಷ್ಟಿಯಿಂದ ಅದಕ್ಕೆ ತಾನೇ ಭಯವೆಂದು ಹೆಸರು?

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾನ್ತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ
ಸುಖಮ್ ॥೫೫॥

ದುರ್ಮತಿಗಳಿಂದ ಯಾವುದನ್ನು ತ್ಯಜಿಸಲು ಅಸಾಧ್ಯವೋ, ಮನುಷ್ಯನು ಜೀರ್ಣನಾದರೂ (ವೃದ್ಧನಾದರೂ) ಯಾವುದು ಜೀರ್ಣವಾಗುವುದಿಲ್ಲವೋ, ಯಾವುದು ಪ್ರಾಣಾಂತಿಕವಾದ ರೋಗವೇ ಆಗಿದೆಯೋ–ಅಂತಹ ತೃಷ್ಣೆಯನ್ನು (ಆಸೆಯನ್ನು) ತ್ಯಜಿಸುವವನಿಗೆ ಪರಮ ಸುಖವುಂಟಾಗುತ್ತದೆ.

ಮಹಾರಾಜ! ಈ ವಿಷಯದಲ್ಲಿ ಪಿಂಗಳೆಯು ಹಾಡಿರುವ ಶ್ಲೋಕಗಳು ಕರ್ಣಾಕರ್ಣಿಕವಾಗಿ ಕೇಳಿಬಂದಿವೆ. ಅವಳು ಅತ್ಯಂತಕಷ್ಟದಲ್ಲಿಯೇ ಇದ್ದರೂ ಸನಾತನವಾದ ಧರ್ಮವನ್ನು ಹೊಂದಿದಳು. (ಅನುಸರಿಸಿದಳು.)

ಒಮ್ಮೆ ಪಿಂಗಳಾ ಎಂಬ ವೇಶ್ಯೆಯು ಸಂಕೇತಸ್ಥಳದಲ್ಲಿ ಪ್ರಿಯತಮನನ್ನು ನಿರೀಕ್ಷಿಸುತ್ತಾ ಬಹಳ ಹೊತ್ತಿನವರೆಗೆ ಕುಳಿತಿದ್ದಳು. ಪ್ರಿಯತಮನು ಬಾರದಿರಲಾಗಿ ಪಿಂಗಳೆಯು ಬಹಳ ಕಷ್ಟಕ್ಕೆ ಗುರಿಯಾದಳು. ಆಗ ಹಿಂದೆ ಮಾಡಿದ ಶುಭಕರ್ಮಗಳ ಫಲೋದಯದ ಕಾರಣವಾಗಿ ಅವಳಲ್ಲಿ ವೈರಾಗ್ಯವು ಉತ್ಪನ್ನವಾಯಿತು. ಆದುದರಿಂದ ಶಾಂತಮನಸ್ಕಳಾಗಿಯೇ ಇದ್ದು ಹೀಗೆ ವಿಚಾರಮಾಡಿದಳು :

ಉನ್ಮತ್ತಾಹಮನುನ್ಮತ್ತಂ ಕಾನ್ತಮನ್ವವಸಂ ಚಿರಮ್ ।
ಅನ್ತಿಕೇ ರಮಣಂ ಸನ್ತಂ ನೈನಮಧ್ಯಗಮಂ ಪುರಾ ॥೫೭॥

"ನಿರ್ವಿಕಾರನಾದ, ಮನೋಹರನಾದ, ಯಾವಾಗಲೂ ಅಂತರಂಗದಲ್ಲಿಯೇ ಇರುವ ಕಾಂತನೊಡನೆ ನಾನು ಬಹಳಕಾಲದಿಂದಲೂ ಇದ್ದೇನೆ. ನಾನು ಉನ್ಮತ್ತಳಾಗಿದ್ದುದರಿಂದ ಇದುವರೆಗೂ ಅವನ ಇರುವಿಕೆಯನ್ನೇ ತಿಳಿದುಕೊಂಡಿರಲಿಲ್ಲ.

ಏಕಸ್ಥೂಣಂ ನವದ್ವಾರಮಪಿಧಾಸ್ಯಾಮ್ಯಗಾರಕಮ್ ।
ಕಾ ಹಿ ಕಾನ್ತಮಿಹಾಯಾನ್ತಮಯಂ ಕಾನ್ತೇತಿ ಮಂಸ್ಯತೇ ॥೫೮॥

ಅವಿದ್ಯೆಯೆಂಬ ಒಂದೇ ಸ್ತಂಭವನ್ನೇ ಆಶ್ರಯಿಸಿ ನಿಂತಿರುವ ಶರೀರ

ವೆಂಬ ಗೃಹದ ಒಂಬತ್ತು ಬಾಗಿಲುಗಳನ್ನೂ* ಹೊರಗಿನವರು (ಅರಿಷಡ್ವರ್ಗ ಗಳು) ಬರದಂತೆ ಜ್ಞಾನವೆಂಬ ಕೈಗಳಿಂದ ಮುಚ್ಚಿಬಿಡುತ್ತೇನೆ. ತನ್ನ ಅಂತಃಸ್ಥನಾಗಿರುವ ಜ್ಯೋತಿಃಸ್ವರೂಪನಾದ ಕಾಂತನನ್ನು ಬಿಟ್ಟು ಹೊರಗಿನಿಂದ ಬರುವವನನ್ನು ತನ್ನ ಪ್ರಾಣವಲ್ಲಭನೆಂದು ಯಾವ ಸ್ತ್ರೀಯು ತಾನೇ ಭಾವಿಸುತ್ತಾಳೆ?

ಅಕಾಮಾಂ ಕಾಮರೂಪೇಣ ಧೂರ್ತಾ ನರಕರೂಪಿಣಃ ।
ನ ಪುನರ್ವಞ್ಚಯಿಷ್ಯನ್ತಿ ಪ್ರತಿಬುದ್ಧಾಸ್ಮಿ ಜಾಗೃಮಿ ॥೬೦॥

ನಾನೀಗ ಅಜ್ಞಾನರೂಪವಾದ ಮೋಹನಿದ್ರೆಯಿಂದ ಎಚ್ಚರಗೊಂಡಿದ್ದೇನೆ. ಜಾಗರೂಕಳಾಗಿದ್ದೇನೆ. ಕಾಮಗಳಿಗೆ ಉಗಮಸ್ಥಾನಗಳಾಗಿರುವ ನವದ್ವಾರಗಳನ್ನೂ ಮುಚ್ಚಿ ಅಕಾಮಳಾಗಿರುವ ನನ್ನನ್ನು ನರಕರೂಪಿಗಳಾದ ಧೂರ್ತಮನುಷ್ಯರು ಕಾಮರೂಪವನ್ನು ಧರಿಸಿ ಪುನಃ ವಂಚಿಸಲಾರರು.

ಅನರ್ಥೋ ಹಿ ಭವೇದರ್ಥೋ ದೈವಾತ್ಪೂರ್ವಕೃತೇನ ವಾ ।
ಸಮ್ಬುದ್ಧಾಹಂ ನಿರಾಕಾರಾ ನಾಹಮದ್ಯಾಜಿತೇನ್ದ್ರಿಯಾ ॥೬೧॥

ಭಾಗ್ಯವಶದಿಂದ ಅಥವಾ ಹಿಂದೆ ಮಾಡಿದ ಶುಭಕರ್ಮಗಳ ಪ್ರಭಾವದಿಂದ ಕೆಲವೊಮ್ಮೆ ಅನರ್ಥಗಳೂ ಶುಭೋದಯಕ್ಕೆ ಕಾರಣವಾಗುತ್ತವೆ. ನರಕರೂಪನಾದ (ಮರ್ತ್ಯನಾದ) ಕಾಂತನಿಗಾಗಿ ಕಾದಿದ್ದು ನಿರಾಶಳಾದ ನಾನೀಗ ಉತ್ತಮಜ್ಞಾನದಿಂದ ಜಾಗ್ರತಳಾಗಿದ್ದೇನೆ. ನನ್ನಲ್ಲೀಗ ಯಾವ ವಿಕಾರಗಳೂ ಇಲ್ಲವಾಗಿವೆ. ನಾನೀಗ ಅಜಿತೇಂದ್ರಿಯಳಾಗಿಲ್ಲ. ಜಿತೇಂದ್ರಿಯಳಾಗಿದ್ದೇನೆ.

ಸುಖಂ ನಿರಾಶಃ ಸ್ವಪಿತಿ ನೈರಾಶ್ಯಂ ಪರಮಂ ಸುಖಮ್ ।
ಆಶಾಮನಾಶಾಂ ಕೃತ್ವಾ ಹಿ ಸುಖಂ ಸ್ವಪಿತಿ ಪಿಙ್ಗಲಾ ॥೬೨॥

ಯಾವನಿಗೆ ಯಾವ ವಿಧವಾದ ಆಶೆಯೂ ಇಲ್ಲವೋ–ಅವನು ಸುಖವಾಗಿ ಮಲಗಿ ನಿದ್ರಿಸುತ್ತಾನೆ. ಆಶೆಯಿಲ್ಲದಿರುವುದೇ ಪರಮಸುಖ. ಆಶೆ

---

* ಶರೀರದಲ್ಲಿರುವ ನವದ್ವಾರಗಳು : ಎರಡು ನೇತ್ರಗಳು, ಎರಡು ಕಿವಿಗಳು, ಎರಡು ನಾಸಾರಂಧ್ರಗಳು, ಬಾಯಿ, ಗುದ ಮತ್ತು ಉಪಸ್ಥ.

ಯಿಂದ ತುಂಬಿಹೋಗಿದ್ದ ಮನಸ್ಸನ್ನು ಆಶಾರಹಿತವನ್ನಾಗಿ ಪರಿವರ್ತಿಸಿ ಪಿಂಗಲೆಯು ಸುಖವಾಗಿ ನಿದ್ರಿಸುವಳು.”

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

“ಯುಧಿಷ್ಠಿರ! ಇವೇ ಮುಂತಾದ ಸಕಾರಣವಾದ ಬ್ರಾಹ್ಮಣನ ಮಾತುಗಳಿಂದ ಸೇನಜಿತನು ಚಿತ್ತಸ್ಥೈರ್ಯವನ್ನು ಹೊಂದಿದನು. ಪುತ್ರ ಶೋಕವನ್ನು ತೊರೆದು ಸುಖ-ಸಂತೋಷಗಳಿಂದಿದ್ದನು.”

ಗಿ೭೪ನೆಯ ಅಧ್ಯಾಯವು ಮುಗಿಯಿತು.

೧೭೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶ್ರೇಯಸ್ಸನ್ನು ಅಪೇಕ್ಷಿಸುವ ಮನುಷ್ಯನು ಮಾಡಬೇಕಾದ ಕರ್ತವ್ಯಗಳ ವಿಷಯದಲ್ಲಿ ಮಗನಿಂದ ತಂದೆಗೆ ಜ್ಞಾನೋಪದೇಶ

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಅತಿಕ್ರಾಮತಿ ಕಾಲೇಽಸ್ಮಿನ್ಸರ್ವಭೂತಕ್ಷಯಾವಹೇ ।
ಕಿಂ ಶ್ರೇಯಃ ಪ್ರತಿಪದ್ಯೇತ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹನೇ! ಸರ್ವಪ್ರಾಣಿಕ್ಷಯಕರವಾದ ಈ ಕಾಲವು ಕಳೆದು ಹೋಗುತ್ತಲೇ ಇದೆ. ಇಂತಹ ಪರಿಸ್ಥಿತಿಯಲ್ಲಿ ಮನುಷ್ಯನು ಏನು ಮಾಡು ವುದರಿಂದ ಶ್ರೇಯಸ್ಸನ್ನು ಪಡೆದುಕೊಳ್ಳುತ್ತಾನೆ? ಈ ವಿಷಯವನ್ನು ನನಗೆ ಹೇಳು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ತಂದೆಗೂ–ಮಗನಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂಭಾಷಣೆಯನ್ನು ಉದಾಹರಿಸು ತ್ತಾರೆ. ಅದನ್ನೇ ಹೇಳುವೆನು ; ಕೇಳು.

ಹಿಂದಿನ ಕಾಲದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನು ಯಾವಾ ಗಲೂ ವೇದ-ಶಾಸ್ತ್ರಗಳ ಅಧ್ಯಯನದಲ್ಲಿಯೇ ನಿರತನಾಗಿದ್ದನು. ಅವನಿಗೆ ಮೇಧಾವಿಯಾದೊಬ್ಬ ಮಗನು ಹುಟ್ಟಿದನು. ಹೆಸರಿನಿಂದಲೂ ಮೇಧಾ

ವಿಯೇ ಆಗಿದ್ದನು. ಮೋಕ್ಷ-ಧರ್ಮಾರ್ಥಗಳಲ್ಲಿ ಕುಶಲನಾಗಿದ್ದ ಆ ಮೇಧಾವಿಯು ಲೋಕತತ್ತ್ವದಲ್ಲಿಯೂ ಪಾರಂಗತನಾಗಿದ್ದು ಒಂದು ದಿನ ಸ್ವಾಧ್ಯಾಯದಲ್ಲಿಯೇ ನಿರತನಾಗಿದ್ದ ತನ್ನ ತಂದೆಯೊಡನೆ ಹೇಳಿದನು :

ಧೀರಃ ಕಿಂಸ್ವಿತ್ತಾತ ಕುರ್ಯಾತ್ಪ್ರಜಾನ-
ನ್ಕ್ಷಿಪ್ರಂ ಹ್ಯಾಯುರ್ಭ್ರಶ್ಯತೇ ಮಾನವಾನಾಮ್ ।
ಪಿತಸ್ತದಾಚಕ್ಷ್ವ ಯಥಾರ್ಥಯೋಗಂ
ಮಮಾನುಪೂರ್ವ್ಯಾ ಯೇನ ಧರ್ಮಂ ಚರೇಯಮ್ ॥

“ತಂದೆಯೇ! ಮನುಷ್ಯನ ಆಯುಷ್ಯವು ತೀವ್ರಗತಿಯಿಂದ ಕಳೆದು ಹೋಗುತ್ತಿದೆ. ಇದನ್ನು ಸರಿಯಾಗಿ ತಿಳಿದಿರುವ ಧೀರಪುರುಷನು (ಕಾಲಾ ತೀತನಾಗಲು) ಏನು ಮಾಡಬೇಕು? ಇದಕ್ಕೆ ನೀನು ಯಥಾರ್ಥವಾದ ಉಪಾಯವನ್ನು ನನಗೆ ತಿಳಿಸು. ನಿನ್ನ ಉಪದೇಶಾನುಸಾರವಾಗಿಯೇ ನಾನು ಧರ್ಮಾಚರಣೆಯನ್ನು ಮಾಡುತ್ತೇನೆ.”

ತಂದೆಯು ಹೇಳುತ್ತಾನೆ :

ವೇದಾನಧೀತ್ಯ ಬ್ರಹ್ಮಚರ್ಯೇಣ ಪುತ್ರ
ಪುತ್ರಾನಿಚ್ಛೇತ್ಪಾವನಾರ್ಥಂ ಪಿತೄಣಾಮ್ ।
ಅಗ್ನೀನಾಧಾಯ ವಿಧಿವಚ್ಚೇಷ್ಟಯಜ್ಞೋ
ವನಂ ಪ್ರವಿಶ್ಯಾಥ ಮುನಿರ್ಬುಭೂಷೇತ್ ॥೬॥

“ಮಗು! ಬ್ರಾಹ್ಮಣನಾದವನು ಉಪನೀತನಾಗಿ ಬ್ರಹ್ಮಚರ್ಯವ್ರತವನ್ನು ಪರಿಪಾಲನಮಾಡುತ್ತಾ ವೇದಗಳನ್ನು ಅಧ್ಯಯನಮಾಡಬೇಕು. ಬಳಿಕ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಪಿತೃಗಳ ಸದ್ಗತಿಗಾಗಿ ಮಕ್ಕಳನ್ನು ಪಡೆದುಕೊಳ್ಳಬೇಕು. ಅನಂತರ ವಿಧಿಪೂರ್ವಕವಾಗಿ ತ್ರೇತಾಗ್ನಿಗಳನ್ನು ಸ್ಥಾಪಿಸಿ ಯಜ್ಞಗಳನ್ನು ಮಾಡಬೇಕು. ಬಳಿಕ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಮುನಿಯಾಗಲು ಬಯಸಬೇಕು.”

ಮಗನು ಹೇಳುತ್ತಾನೆ :

ಏವಮಭ್ಯಾಹತೇ ಲೋಕೇ ಸಮನ್ತಾತ್ಪರಿವಾರಿತೇ ।
ಅಮೋಘಾಸು ಪತನ್ತೀಷು ಕಿಂ ಧೀರ ಇವ ಭಾಷಸೇ ॥೭॥

"ತಂದೆಯೇ! ಲೋಕವು ಹೀಗೆ ಮರ್ದಿಸಲ್ಪಡುತ್ತಿರಲಾಗಿ, ಎಲ್ಲ ಕಡೆಗಳಿಂದಲೂ ಆಕ್ರಮಿಸಲ್ಪಡುತ್ತಿರಲಾಗಿ, ಅಮೋಘವಾದ (ಶಕ್ತಿಗಳು) ತಲೆಯ ಮೇಲೆ ಬೀಳುತ್ತಿರಲಾಗಿ–ಇವುಗಳಾವುದನ್ನೂ ಗಮನಿಸದೇ ನೀನು ಧೀರನಂತೆ ಎಂತಹ ಮಾತುಗಳನ್ನಾಡುತ್ತಿರುವೆ?"

ತಂದೆಯು ಪ್ರಶ್ನಿಸುತ್ತಾನೆ :

ಕಥಮಭ್ಯಾಹತೋ ಲೋಕಃ ಕೇನ ವಾ ಪರಿವಾರಿತಃ ।
ಅಮೋಘಾಃ ಕಾ ಪತನ್ತೀಹ ಕಿಂ ನು ಭೀಷಯಸೀವ ಮಾಮ್ ॥೮॥

"ಮಗು! ನೀನು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ. ಲೋಕವು ಹೇಗೆ ಮರ್ದಿತವಾಗುತ್ತದೆ? ಆಕ್ರಮಣವನ್ನು ಯಾರು ಮಾಡಿದ್ದಾರೆ? ಅಮೋಘವಾದ ಯಾವ ಶಕ್ತಿಗಳು ತಲೆಯ ಮೇಲೆ ಬೀಳುತ್ತಿವೆ?– ಹೀಗೆಲ್ಲ ಹೇಳಿ ನನ್ನನ್ನೇನು ಭಯಪಡಿಸುತ್ತಿರುವೆಯಾ?"

ಪುತ್ರನು ಹೇಳುತ್ತಾನೆ :

ಮೃತ್ಯುನಾಭ್ಯಾಹತೋ ಲೋಕೋ ಜರಯಾ ಪರಿವಾರಿತಃ ।
ಅಹೋರಾತ್ರಾಃ ಪತನ್ತ್ಯೇತೇ ನನು ಕಸ್ಮಾನ್ನ ಬುಧ್ಯಸೇ ॥೯॥

"ತಂದೆಯೇ! ಲೋಕವೇ ಮೃತ್ಯುವಿನಿಂದ ಮರ್ದಿಸಲ್ಪಡುತ್ತಿದೆ. ಮುಪ್ಪಿನಿಂದ ಆಕ್ರಮಿಸಲ್ಪಟ್ಟಿದೆ. ಅಮೋಘವಾದ ಅಹೋರಾತ್ರಿಗಳು ಮನುಷ್ಯನ ಮೇಲೆ ಬೀಳುತ್ತಾ ಆತನ ಆಯುಷ್ಯವನ್ನು ನಿರಂತರವಾಗಿ ಕಬಳಿಸುತ್ತಲೇ ಇವೆ. ಈ ವಿಷಯವನ್ನು ನೀನೇಕೆ ಇದುವರೆಗೂ ತಿಳಿದುಕೊಂಡಿರುವುದಿಲ್ಲ?

ಅಮೋಘಾ ರಾತ್ರಯಶ್ಚಾಪಿ ನಿತ್ಯಮಾಯಾನ್ತಿ ಯಾನ್ತಿ ಚ ।
ಯದಾಹಮೇತಜ್ಜಾನಾಮಿ ನ ಮೃತ್ಯುಸ್ತಿಷ್ಠತೀತಿ ಹ ।
ಸೋಽಹಂ ಕಥಂ ಪ್ರತೀಕ್ಷಿಷ್ಯೇ ಜಾಲೇನಾಪಿ ಹಿತಶ್ಚರನ್ ॥೧೦॥

ಅಮೋಘವಾದ ರಾತ್ರಿಗಳು ನಿತ್ಯವೂ ಬರುತ್ತಲೇ ಇರುತ್ತವೆ ಮತ್ತು ಕಳೆದುಹೋಗುತ್ತಲೇ ಇರುತ್ತವೆ. 'ಮೃತ್ಯುವು ನಿಂತೆಡೆಯಲ್ಲಿಯೇ ನಿಂತಿರು

ವುದಿಲ್ಲ. ರಾತ್ರಿಗಳು ಕಳೆದಂತೆಲ್ಲಾ ಮೃತ್ಯುವು ನನ್ನ ಬಳಿಗೆ ಧಾವಿಸಿ ಬರುತ್ತಿರುತ್ತದೆ'–ಎಂಬುದನ್ನು ತಿಳಿದನಂತರ ಮೃತ್ಯುವಿನ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿರುವ ನಾನು ಮುಂದಿನ ದಿನಗಳನ್ನು ಹೇಗೆ ಪ್ರತೀಕ್ಷಿಸಲಿ? (ರಾತ್ರಿಗಳು ಕಳೆದಂತೆಲ್ಲಾ ಆಯುಷ್ಯವು ಕ್ಷೀಣಿಸುತ್ತಿರುತ್ತದೆ. ಮೃತ್ಯುವು ಸನ್ನಿಹಿತವಾಗುತ್ತಿರುತ್ತದೆ. ಹುಟ್ಟುತ್ತಲೇ ಮೃತ್ಯುವಿನ ಬಲೆಗೂ ಬಿದ್ದಾಗಿದೆ. ಆದುದರಿಂದ ಎಂದೋ ಮೃತ್ಯುವು ಬರುವುದೆಂದು ಪ್ರತೀಕ್ಷೆಮಾಡುತ್ತಾ ಹೇಗೆ ಕುಳಿತಿರುವುದು? ಮೃತ್ಯುವು ಇಂದೇ ಬರಬಹುದು. ಇಂದೇ ಬಂದರೂ ಹೋಗಲೂ ಸಿದ್ಧನಾಗಿ ನಿಂತಿರಬೇಕು. ಅದಕ್ಕೆ ತಕ್ಕಂತೆ ಅನುವು ಮಾಡಿಕೊಳ್ಳಬೇಕು.)

ರಾತ್ರ್ಯಾಂ ರಾತ್ರ್ಯಾಂ ವ್ಯತೀತಾಯಾಮಾಯುರಲ್ಪತರಂ ಯದಾ ।
ಗಾಧೋದಕೇ ಮತ್ಸ್ಯ ಇವ ಸುಖಂ ವಿನ್ದೇತ ಕಸ್ತದಾ ॥೧೧॥

ಒಂದೊಂದು ರಾತ್ರಿಯು ಕಳೆಯುತ್ತಿದ್ದಂತೆಯೇ ಆಯುಷ್ಯವೂ ಕಡಿಮೆಯಾಗುತ್ತಿರುವಾಗ–ಆಳವಿಲ್ಲದ ನೀರಿನಲ್ಲಿರುವ ಮೀನಿನಂತೆ ಯಾವನು ತಾನೇ ಸುಖವಾಗಿರುತ್ತಾನೆ?

ತದೈವ ವನ್ಧ್ಯಂ ದಿವಸಮಿತಿ ವಿದ್ಯಾದ್ವಿಚಕ್ಷಣಃ ।
ಅನವಾಪ್ತೇಷು ಕಾಮೇಷು ಮೃತ್ಯುರಭ್ಯೇತಿ ಮಾನವಮ್ ॥೧೨॥

ಕಳೆದುಹೋದ ದಿವಸವನ್ನು ವಿದ್ವಾಂಸರು ವ್ಯರ್ಥವಾಗಿ ಹೋದ ದಿವಸವೆಂದು ಭಾವಿಸಬೇಕು. ಮನುಷ್ಯನ ಕಾಮನೆಗಳು ಪೂರ್ಣವಾಗುವುದ ರೊಳಗಾಗಿಯೇ ಮೃತ್ಯುವು ಮಾನವನ ಸಮೀಪಕ್ಕೆ ಬಂದುಬಿಡುತ್ತದೆ.

ಶಷ್ಪಾಣೀವ ವಿಚಿನ್ವನ್ತಮನ್ಯತ್ರಗತಮಾನಸಮ್ ।
ವೃಕೀವೋರಣಮಾಸಾದ್ಯ ಮೃತ್ಯುರಾದಾಯ ಗಚ್ಛತಿ ॥೧೩॥

ಯಾವ ವಿಧವಾದ ಭೀತಿಯೂ ಇಲ್ಲದೇ ಎಳೆಗರಿಕೆಯನ್ನು ಹುಡುಕಾಡುತ್ತಿರುವ ಕುರಿಮರಿಯನ್ನು ಹೆಣ್ಣುತೋಳವು ಹಠಾತ್ತನೆ ಎತ್ತಿಕೊಂಡು ಹೋಗುವಂತೆ–ವಿಷಯಾಂತರಗಳಲ್ಲಿ ಮಗ್ನನಾಗಿರುವ ಮನುಷ್ಯನನ್ನು ಮೃತ್ಯುವು ಹಠಾತ್ತಾಗಿ ಎತ್ತಿಕೊಂಡು ಹೋಗುತ್ತದೆ.

ಅದ್ಯೈವ ಕುರು ಯಚ್ಛ್ರೇಯೋ ಮಾ ತ್ವಾಂ ಕಾಲೋऽತ್ಯ-
ಗಾದಯಮ್ ।
ಅಕೃತೇಷ್ವೇವ ಕಾರ್ಯೇಷು ಮೃತ್ಯುರ್ವೈ ಸಮ್ಪ್ರಕರ್ಷತಿ ॥೧೪॥

ಆದುದರಿಂದ ಶ್ರೇಯಸ್ಸಿಗೆ ಸಾಧನವಾದ ಕಾರ್ಯವನ್ನು ಈ ದಿನವೇ ಮಾಡಿಬಿಡು. ಈ ಕಾಲವು ನಿನ್ನನ್ನು ಅತಿಕ್ರಮಿಸಿಹೋಗದಿರಲಿ. ಎಲ್ಲ ಕಾರ್ಯಗಳೂ ಅಪೂರ್ಣವಾಗಿರುವಾಗಲೇ ಮೃತ್ಯುವು ನಿನ್ನನ್ನು ಸೆಳೆದು ಕೊಂಡು ಹೋಗುತ್ತದೆ. ಆದುದರಿಂದ ಶ್ರೇಯಸ್ಸಿಗೆ ಸಾಧಕವಾದ ಕಾರ್ಯವನ್ನು ಇಂದೇ ಪೂರ್ಣಗೊಳಿಸಬೇಕು.

ಶ್ವಃ ಕಾರ್ಯಮದ್ಯ ಕುರ್ವೀತ ಪೂರ್ವಾಹ್ಣೇ ಚಾಪರಾಹ್ಣಿಕಮ್ ।
ನ ಹಿ ಪ್ರತೀಕ್ಷತೇ ಮೃತ್ಯುಃ ಕೃತಮಸ್ಯ ನ ವಾ ಕೃತಮ್ ।
ಕೋ ಹಿ ಜಾನಾತಿ ಕಸ್ಯಾದ್ಯ ಮೃತ್ಯುಕಾಲೋ ಭವಿಷ್ಯತಿ ॥೧೫॥

ತಂದೆಯೇ! ನಾಳೆಯ ಕೆಲಸವನ್ನು ಇಂದೇ ಮಾಡಿಮುಗಿಸಬೇಕು. ಅಪರಾಹ್ಣದಲ್ಲಿ ಮಾಡಬೇಕಾಗಿರುವ ಕಾರ್ಯವನ್ನು ಪೂರ್ವಾಹ್ಣದಲ್ಲಿಯೇ ಮಾಡಬೇಕು. ಒಬ್ಬ ಮನುಷ್ಯನು ಮಾಡಬೇಕಾಗಿರುವ ಕಾರ್ಯವನ್ನು ಮಾಡಿರುವನೇ, ಇಲ್ಲವೇ?–ಎಂಬುದನ್ನು ಮೃತ್ಯುವು ನೋಡುತ್ತಾ ಕುಳಿತಿರುವುದಿಲ್ಲ. ಇಂದು ಯಾವನಿಗೆ ಮೃತ್ಯುವು ಸಂಭವಿಸುವುದೆಂದು ಯಾವನು ತಾನೇ ತಿಳಿದಿರುತ್ತಾನೆ?

ಯುವೈವ ಧರ್ಮಶೀಲಃ ಸ್ಯಾದನಿತ್ಯಂ ಖಲು ಜೀವಿತಮ್ ।
ಕೃತೇ ಧರ್ಮೇ ಭವೇತ್ಕೀರ್ತಿರಿಹ ಪ್ರೇತ್ಯ ಚ ವೈ ಸುಖಮ್ ॥೧೬॥

ಯುವಕನಾಗಿದ್ದಾಗಲೇ ಧರ್ಮಾಚರಣೆಯನ್ನು ಮಾಡಬೇಕು. (ಧರ್ಮಾಚರಣೆಯ ಕಾಲವಿನ್ನೂ ಸನ್ನಿಹಿತವಾಗಿಲ್ಲವೆಂದು ಉದಾಸೀನನಾಗ ಬಾರದು. ಧರ್ಮಾಚರಣೆಗೆ ಸರಿಯಾದ ಕಾಲವು ಯೌವನವೇ ಆಗಿದೆ.) ಜೀವನವು ಅನಿತ್ಯವಾದುದು. ಧರ್ಮಾಚರಣೆಯನ್ನು ಮಾಡಿದರೆ ಮಾನವನು ಇಹದಲ್ಲಿಯೂ ಕೀರ್ತಿವಂತನಾಗಿ ಪರದಲ್ಲಿಯೂ ಸುಖವನ್ನು ಹೊಂದು ತ್ತಾನೆ.

ಮೋಹೇನ ಹಿ ಸಮಾವಿಷ್ಟಃ ಪುತ್ರದಾರಾರ್ಥಮುದ್ಯತಃ ।
ಕೃತ್ವಾ ಕಾರ್ಯಮಕಾರ್ಯಂ ವಾ ಪುಷ್ಟಿಮೇಷಾಂ ಪ್ರಯಚ್ಛತಿ ॥೧೭॥

ಮೋಹಪರವಶನಾದ ಮಾನವನು ಮಡದಿ-ಮಕ್ಕಳಿಗಾಗಿ ಯೋಗ್ಯವಾದ ಕಾರ್ಯವನ್ನೋ–ಅಯೋಗ್ಯವಾದ ಕಾರ್ಯವನ್ನೋ ಮಾಡುತ್ತಾ ಅವರ ಭರಣ- ಪೋಷಣೆಗಳನ್ನು ಮಾಡುತ್ತಾನೆ.

ತಂ ಪುತ್ರಪಶುಸಮ್ಪನ್ನಂ ವ್ಯಾಸಕ್ತಮನಸಂ ನರಮ್ ।
ಸುಪ್ತಂ ವ್ಯಾಘ್ರೋ ಮೃಗಮಿವ ಮೃತ್ಯುರಾದಾಯ ಗಚ್ಛತಿ ॥೧೮॥

ಮಡದಿ-ಮಕ್ಕಳಿಂದಲೂ ಹಸು-ಕರು ಮುಂತಾದ ಪ್ರಾಣಿಗಳಿಂದಲೂ ಸಂಪನ್ನನಾಗಿ, ಸಂಸಾರದಲ್ಲಿ ಅತ್ಯಾಸಕ್ತವಾದ ಮನಸ್ಸನ್ನು ಹೊಂದಿರುವ ಆ ಮನುಷ್ಯನನ್ನು–ವ್ಯಾಘ್ರವು ಮಲಗಿರುವ ಜಿಂಕೆಯನ್ನು ಎತ್ತಿಕೊಂಡು ಹೋಗುವಂತೆ–(ಯಾರಿಗೂ ತಿಳಿಯದ ರೀತಿಯಲ್ಲಿ) ಮೃತ್ಯುವು ಎತ್ತಿಕೊಂಡು ಹೋಗುತ್ತದೆ.

ಸಂಚಿನ್ವಾನಕಮೇವೈನಂ ಕಾಮಾನಾಮವಿತೃಪ್ತಕಮ್ ।
ವ್ಯಾಘ್ರಃ ಪಶುಮಿವಾದಾಯ ಮೃತ್ಯುರಾದಾಯ ಗಚ್ಛತಿ ॥೧೯॥

ಕಾಮೋಪಭೋಗಗಳಲ್ಲಿ ತೃಪ್ತಿಯನ್ನು ಹೊಂದದೆ, ಸರ್ವಕಾಲದಲ್ಲಿಯೂ ಧನಾದಿ ಭೋಗವಸ್ತುಗಳ ಸಂಗ್ರಹದಲ್ಲಿಯೇ ಆಸಕ್ತನಾಗಿರುವ ಇಂತಹ ಮನುಷ್ಯನನ್ನು–ವ್ಯಾಘ್ರವು ಪಶುವನ್ನು ಎತ್ತಿಕೊಂಡು ಹೋಗುವಂತೆ–ಯಾರಿಗೂ ತಿಳಿಯದ ರೀತಿಯಲ್ಲಿ ಮೃತ್ಯುವು ಎತ್ತಿಕೊಂಡು ಹೋಗುತ್ತದೆ.

ಇದಂ ಕೃತಮಿದಂ ಕಾರ್ಯಮಿದಮನ್ಯತ್ಕೃತಾಕೃತಮ್ ।
ಏವಮೀಹಾಸುಖಾಸಕ್ತಂ ಕೃತಾನ್ತಃ ಕುರುತೇ ವಶೇ ॥೨೦॥

'ಈ ಕಾರ್ಯವನ್ನು ಮುಗಿಸಿದ್ದಾಯಿತು. ಇನ್ನು ಈ ಕಾರ್ಯವನ್ನು ಮಾಡಬೇಕಾಗಿದೆ. ಈ ಮತ್ತೊಂದು ಕಾರ್ಯವು ಪೂರ್ಣವಾಗದೆಯೇ ಉಳಿದಿದೆ' – ಹೀಗೆ ಆಶೆಯೆಂಬ ಸುಖದಲ್ಲಿಯೇ ಆಸಕ್ತನಾದ ಮನುಷ್ಯನನ್ನು ಯಾರಿಗೂ ತಿಳಿಯದಂತೆ ಯಮಧರ್ಮನು ತನ್ನ ವಶಕ್ಕೆ ತೆಗೆದುಕೊಂಡು ಬಿಡುತ್ತಾನೆ.

ಕೃತಾನಾಂ ಫಲಮಪ್ರಾಪ್ತಂ ಕರ್ಮಣಾಂ ಕರ್ಮಸಂಜ್ಞಿತಮ್ ।
ಕ್ಷೇತ್ರಾಪಣಗೃಹಾಸಕ್ತಂ ಮೃತ್ಯುರಾದಾಯ ಗಚ್ಛತಿ ॥೨೧॥

ಕೃಷಿ, ವಾಣಿಜ್ಯ ಇತ್ಯಾದಿ ಕರ್ಮಗಳ ಮೂಲಕವಾಗಿ (ಕೃಷಿಕ, ವಣಿಜ ಮುಂತಾಗಿ) ಹೆಸರನ್ನು ಪಡೆದಿರುವ, ಹೊಲ-ಗದ್ದೆ-ಅಂಗಡಿ ಮತ್ತು ಗೃಹಕೃತ್ಯಗಳಲ್ಲಿಯೇ ಆಸಕ್ತನಾಗಿರುವ ಮನುಷ್ಯನನ್ನು, ಅವನು ತಾನು ಮಾಡಿದ ಕರ್ಮಗಳಿಗೆ ಫಲವನ್ನು ಹೊಂದುವ ಮೊದಲೇ ಯಾರಿಗೂ ತಿಳಿಯದಂತೆ ಮೃತ್ಯುವು ಎತ್ತಿಕೊಂಡು ಹೋಗುತ್ತದೆ.

ದುರ್ಬಲಂ ಬಲವನ್ತಂ ಚ ಶೂರಂ ಭೀರುಂ ಜಡಂ ಕವಿಮ್ ।
ಅಪ್ರಾಪ್ತಂ ಸರ್ವಕಾಮಾರ್ಥಾನ್ಮೃತ್ಯುರಾದಾಯ ಗಚ್ಛತಿ ॥೨೨॥

ದುರ್ಬಲನನ್ನೂ, ಬಲಿಷ್ಠನನ್ನೂ, ಶೂರನನ್ನೂ, ಅಂಜುಬುರುಕನನ್ನೂ, ಮೂರ್ಖನನ್ನೂ, ವಿದ್ವಾಂಸನನ್ನೂ– ಅವರವರ ಕಾಮನೆಗಳು ಪೂರ್ಣವಾಗುವ ಮುನ್ನವೇ ಮೃತ್ಯುವು ಸ್ವಾಧೀನಪಡಿಸಿಕೊಳ್ಳುತ್ತದೆ.

ಮೃತ್ಯುರ್ಜರಾ ಚ ವ್ಯಾಧಿಶ್ಚ ದುಃಖಂ ಚಾನೇಕಕಾರಣಮ್ ।
ಅನುಷಕ್ತಂ ಯದಾ ದೇಹೇ ಕಿಂ ಸ್ವಸ್ಥ ಇವ ತಿಷ್ಠಸಿ ॥೨೩॥

ಜನಕನೇ! ಈ ದೇಹವನ್ನು ಮರಣ, ಮುಪ್ಪು, ರೋಗ ಮತ್ತು ಅನೇಕ ಕಾರಣಗಳಿಂದ ಉಂಟಾಗುವ ದುಃಖ–ಇವುಗಳು ಆಕ್ರಮಿಸಿಕೊಂಡಿರುವಾಗ ಯಾವ ವಿಧವಾದ ಆತಂಕವೂ ಇಲ್ಲದವನಂತೆ ಹೀಗೇಕೆ ಕುಳಿತಿರುವೆ?

ಜಾತಮೇವಾನ್ತಕೋಽನ್ತಾಯ ಜರಾ ಚಾನ್ವೇತಿ ದೇಹಿನಮ್ ।
ಅನುಷಕ್ತಾ ದ್ವಯೇನೈತೇ ಭಾವಾಃ ಸ್ಥಾವರಜಙ್ಗಮಾಃ ॥೨೪॥

ದೇಹಿಯು ಹುಟ್ಟುತ್ತಲೇ ಆ ಹುಟ್ಟಿದ ಜೀವನನ್ನು ಕಡೆಗಾಣಿಸಲು ಮುಪ್ಪು-ಸಾವುಗಳು ಅವನನ್ನು ಹಿಂಬಾಲಿಸುತ್ತವೆ. ಸಕಲಚರಾಚರಪ್ರಾಣಿ ಗಳೂ ಜರಾ-ಮರಣಗಳೆರಡರಿಂದಲೇ ಬಂಧಿಸಲ್ಪಟ್ಟಿವೆ.

ಮೃತ್ಯೋರ್ವಾ ಮುಖಮೇತದ್ವೈ ಯಾ ಗ್ರಾಮೇ ವಸತೋ ರತಿಃ ।
ದೇವಾನಾಮೇಷ ವೈ ಗೋಷ್ಠೋ ಯದರಣ್ಯಮಿತಿ ಶ್ರುತಿಃ ॥೨೫॥

ಗ್ರಾಮಗಳಲ್ಲಾಗಲೀ, ನಗರಗಳಲ್ಲಾಗಲೀ ವಾಸಮಾಡುತ್ತಾ ಸ್ತ್ರೀ-ಪುತ್ರ-ಗೃಹಾದಿಗಳಲ್ಲಿಯೇ ಆಸಕ್ತಿಯನ್ನು ಹೊಂದಿರುವುದೇ ಮೃತ್ಯುವಿನ ಮುಖಕ್ಕೆ ಸಮಾನವಾಗಿರುತ್ತದೆ. (ಅಂತಹ ಆಸಕ್ತಿಯೇ ಮನುಷ್ಯನನ್ನು

ಮೃತ್ಯುವಿನ ದವಡೆಗೆ ತಳ್ಳುತ್ತದೆ.) ಧ್ಯಾನಪರನಾಗಿ ವಾಸಿಸುವ ಅರಣ್ಯವು ಇಂದ್ರಿಯರೂಪಿಗಳಾದ ಗೋವುಗಳಿಗೆ ಬಂಧನಸ್ಥಳವಾದ ಗೋಶಾಲೆಯ ರೂಪದಲ್ಲಿರುತ್ತದೆ–ಹೀಗೆ ಶ್ರುತಿವಚನವಿದೆ. (ಅರಣ್ಯದಲ್ಲಿ ಧ್ಯಾನಾಸಕ್ತನಾದ ಮುನಿಯು ಇಂದ್ರಿಯಗಳನ್ನೂ–ಮನಸ್ಸನ್ನೂ ಬಂಧಿಸಿರುತ್ತಾನೆ. ಮೃತ್ಯುವನ್ನೂ ಜಯಿಸುತ್ತಾನೆ.)

ನಿಬನ್ಧನೀ ರಜ್ಜುರೇಷಾ ಯಾ ಗ್ರಾಮೇ ವಸತೋ ರತಿಃ ।
ಛಿತ್ವೈತಾಂ ಸುಕೃತೋ ಯಾನ್ತಿ ನೈನಾಂ ಛಿನ್ದನ್ತಿ ದುಷ್ಕೃತಃ ॥೨೬॥

ಗ್ರಾಮಗಳಲ್ಲಿ ವಾಸಮಾಡುತ್ತಾ ಸ್ತ್ರೀ-ಪುತ್ರ-ಗೃಹ-ಧನಾದಿಗಳಲ್ಲಿ ಆಸಕ್ತನಾಗಿರುವುದು ಮನುಷ್ಯನನ್ನು ಬಲವಾಗಿ ಕಟ್ಟಿಹಾಕಿರುವ ಒಂದು ಹಗ್ಗವೇ ಆಗಿದೆ. ಸುಕೃತಿಗಳಾದವರು ಇಂತಹ ಬಲವಾದ ಹಗ್ಗವನ್ನು ಕತ್ತರಿಸಿ ಸಂಸಾರಬಂಧನದಿಂದ ಪಾರಾಗುತ್ತಾರೆ. ದುಷ್ಕೃತಿಗಳು ಹಗ್ಗವನ್ನು ಕತ್ತರಿಸಲು ಅಸಮರ್ಥರಾಗಿ ಸಂಸಾರಸಾಗರದಲ್ಲಿಯೇ ಬಿದ್ದು ತೊಳಲುತ್ತಿರುತ್ತಾರೆ.

ನ ಹಿಂಸಯತಿ ಯೋ ಜನ್ತೂನ್ಮನೋವಾಕ್ಕಾಯಹೇತುಭಿಃ ।
ಜೀವಿತಾರ್ಥಾಪನಯನೈಃ ಪ್ರಾಣಿಭಿರ್ನ ಸ ಹಿಂಸ್ಯತೇ ॥೨೭॥

ಯಾವ ಮನುಷ್ಯನು ಮಾತು, ಮನಸ್ಸು ಮತ್ತು ಶರೀರಸಂಬಂಧ ವಾದ ಕ್ರಿಯೆಗಳೆಂಬ ಕಾರಣದಿಂದ ಪ್ರಾಣಿಗಳನ್ನು ಹಿಂಸಿಸುವುದಿಲ್ಲವೋ– ಅಂತಹ ಮನುಷ್ಯನನ್ನು–ಅವನ ಜೀವನ ಮತ್ತು ಅರ್ಥವನ್ನು ನಾಶಗೊಳಿಸುವುದರ ಮೂಲಕ ಹಿಂಸ್ರಪ್ರಾಣಿಗಳು ಹಿಂಸಿಸುವುದಿಲ್ಲ.

ನ ಮೃತ್ಯುಸೇನಾಮಾಯಾನ್ತೀಂ ಜಾತು ಕಶ್ಚಿತ್ಪ್ರಬಾಧತೇ ।
ಋತೇ ಸತ್ಯಮಸತ್ತ್ಯಾಜ್ಯಂ ಸತ್ಯೇ ಹ್ಯಮೃತಮಾಶ್ರಿತಮ್ ॥೨೮॥

ಯಾರೇ ಆಗಲಿ ಸತ್ಯದ ಹೊರತಾಗಿ–ಎದುರಾಗಿ ಬರುತ್ತಿರುವ ಮೃತ್ಯು ಸೈನ್ಯವನ್ನು ಎದುರಿಸಿ ನಿಲ್ಲಲಾರನು. ಆದುದರಿಂದ ಅನೃತವನ್ನು ತ್ಯಜಿಸಬೇಕು. ಏಕೆಂದರೆ : ಅಮೃತತ್ತ್ವವು ಸತ್ಯದಲ್ಲಿಯೇ ಪ್ರತಿಷ್ಠಿತವಾಗಿದೆ.

ತಸ್ಮಾತ್ಸತ್ಯವ್ರತಾಚಾರಃ ಸತ್ಯಯೋಗಪರಾಯಣಃ ।
ಸತ್ಯಾಗಮಃ ಸದಾ ದಾನ್ತಃ ಸತ್ಯೇನೈವಾನ್ತಕಂ ಜಯೇತ್ ॥೨೯॥

ಆದುದರಿಂದ ಮನುಷ್ಯನು ಯಾವಾಗಲೂ ಸತ್ಯವ್ರತದ ಆಚರಣೆ ಯುಳ್ಳವನಾಗಬೇಕು. (ಬ್ರಹ್ಮಪ್ರಾಪ್ತಿಗೆ ಸಾಧನಗಳಾದ ಯಮ-ನಿಯ ಮಾದಿವ್ರತಗಳನ್ನು ಆಚರಿಸಬೇಕು.) ಸತ್ಯಯೋಗವನ್ನೇ ಆಶ್ರಯಿಸಿ, ಶಾಸ್ತ್ರ ವಾಕ್ಯಗಳನ್ನು ಸತ್ಯವೆಂದು ನಿರ್ಧರಿಸಿ, ಮನಸ್ಸನ್ನೂ ಇಂದ್ರಿಯಗಳನ್ನೂ ನಿಗ್ರಹಿಸಿ ಸತ್ಯದಿಂದಲೇ ಮೃತ್ಯುವನ್ನು ಜಯಿಸಬೇಕು.

ಅಮೃತಂ ಚೈವ ಮೃತ್ಯುಶ್ಚ ದ್ವಯಂ ದೇಹೇ ಪ್ರತಿಷ್ಠಿತಮ್ ।
ಮೃತ್ಯುಮಾಪದ್ಯತೇ ಮೋಹಾತ್ಸತ್ಯೇನಾಪದ್ಯತೇಽಮೃತಮ್ ॥೩೦॥

ಅಮೃತ, ಮೃತ್ಯು–ಇವುಗಳೆರಡೂ ನಮ್ಮ ಶರೀರದಲ್ಲಿಯೇ ಪ್ರತಿಷ್ಠಿತ ವಾಗಿವೆ. ಮನುಷ್ಯನು ಮೋಹದಿಂದ ಮೃತ್ಯುವನ್ನು ಅಪ್ಪುತ್ತಾನೆ. ಸತ್ಯದಿಂದ ಅಮೃತತ್ತ್ವವನ್ನು ಹೊಂದುತ್ತಾನೆ.

ಸೋಽಹಂ ಹ್ಯಹಿಂಸ್ರಃ ಸತ್ಯಾರ್ಥೀ ಕಾಮಕ್ರೋಧಬಹಿಷ್ಕೃತಃ ।
ಸಮದುಃಖಸುಖಃ ಕ್ಷೇಮೀ ಮೃತ್ಯುಂ ಹಾಸ್ಯಾಮ್ಯಮರ್ತ್ಯವತ್ ॥೩೧॥

ಆದುದರಿಂದ ನಾನಾದರೋ ಹಿಂಸಾಕರ್ಮದಿಂದ ದೂರವಾಗಿದ್ದು, ಸತ್ಯವನ್ನೇ ಅರಸುತ್ತಾ (ಸತ್ಯಪರಾಯಣನಾಗಿ), ಕಾಮ-ಕ್ರೋಧಗಳನ್ನು ಬಹಿಷ್ಕರಿಸಿ, ಸುಖವನ್ನೂ ದುಃಖವನ್ನೂ ಸಮಭಾವದಿಂದ ಕಾಣುತ್ತಾ, ಎಲ್ಲರಿಗೂ ಕಲ್ಯಾಣವನ್ನು ಕೋರುತ್ತಾ ದೇವತೆಗಳಂತೆಯೇ ಮೃತ್ಯುವಿನ ಭಯದಿಂದ ಮುಕ್ತನಾಗುತ್ತೇನೆ.

ಶಾನ್ತಿಯಜ ರತೋ ದಾನ್ತೋ ಬ್ರಹ್ಮಯಜ್ಞೇ ಸ್ಥಿತೋ ಮುನಿಃ ।
ವಾಙ್ಮನಃಕರ್ಮಯಜ್ಞಶ್ಚ ಭವಿಷ್ಯಾಮ್ಯುದಗಾಯನೇ ॥೩೨॥

ನಿವೃತ್ತಿಪರಾಯಣನಾಗಿ, ಶಾಂತಿರೂಪವಾದ ಯಜ್ಞದಲ್ಲಿ ತತ್ಪರನಾಗಿ, ಜಿತೇಂದ್ರಿಯನಾಗಿ, ಉಪನಿಷತ್ತುಗಳ ಅರ್ಥವನ್ನು ಚಿಂತಿಸುತ್ತಾ ಮುನಿವೃತ್ತಿ ಯಲ್ಲಿರುತ್ತೇನೆ. ಉತ್ತರಾಯಣಮಾರ್ಗದಲ್ಲಿ ಅಥವಾ ದೇವಮಾರ್ಗದಲ್ಲಿ ಹೋಗುವ ಸಲುವಾಗಿ ಜಪ-ಸ್ವಾಧ್ಯಾಯರೂಪವಾದ ವಾಗ್ಯಜ್ಞವನ್ನೂ, ಧ್ಯಾನ ರೂಪವಾದ ಮನೋಯಜ್ಞವನ್ನೂ, ಅಗ್ನಿಹೋತ್ರ-ಗುರುಶುಶ್ರೂಷಾದಿ ರೂಪಗಳಾದ ಕರ್ಮಯಜ್ಞಗಳನ್ನೂ ಮಾಡುತ್ತೇನೆ.

ಪಶುಯಜ್ಞೈಃ ಕಥಂ ಹಿಂಸ್ರೈರ್ಮಾದೃಶೋ ಯಷ್ಟುಮರ್ಹತಿ ।
ಅನ್ತವದ್ಭಿರಿವ ಪ್ರಾಜ್ಞಃ ಕ್ಷೇತ್ರಯಜ್ಞೈಃ ಪಿಶಾಚವತ್ ॥೩೩॥

ನನ್ನಂತಹ ವಿದ್ವಾಂಸನು ಹಿಂಸಾಪ್ರಧಾನವಾದ ಪಶುಯಜ್ಞಗಳಿಂದ ಹೇಗೆ ತಾನೇ ದೇವತೆಗಳನ್ನು ಪೂಜಿಸುತ್ತಾನೆ? ಪಿಶಾಚಿಯಂತೆ ಪ್ರಾಣಿಗಳ ಶರೀರದ ಮೂಲಕವಾಗಿ ಮಾಡುವ, ಅನಿತ್ಯವಾದ ಫಲಗಳನ್ನು ಕೊಡುವ ತಾಮಸಯಜ್ಞಗಳನ್ನು ಪ್ರಾಜ್ಞನಾದವನು ಮಾಡುವುದಿಲ್ಲ. (ಪಿಶಾಚವತ್ ಎಂಬುದಕ್ಕೆ ವ್ಯಾಖ್ಯಾನಕಾರರು– '**ಕಶ್ಚಿತ್ಪಿಶಾಚಃ ಪ್ರಾಪ್ತಂ ಪ್ರಾಪ್ತಂ ಶರೀರಂ ಪೂರ್ವಪೂರ್ವವಾಸನಾವಶಾತ್**–ಒಂದು ಪಿಶಾಚಿಯು ಪ್ರಾಪ್ತವಾದ ಶರೀರವನ್ನು ಹಿಂದು-ಹಿಂದಿನ ವಾಸನೆಯ ಕಾರಣದಿಂದ **ವಿಷಾಗ್ನ್ಯುದ್ಬನ್ಧನಾದಿನಾ**– ವಿಷ, ಅಗ್ನಿ, ನೇಣುಹಾಕಿಕೊಳ್ಳುವುದು– ಇತ್ಯಾದಿಗಳ ಮೂಲಕವಾಗಿ, **ಪುನಃ ಪುನಃ ಹಿನಸ್ತಿ**– ಪುನಃ ಪುನಃ ಬಿಡುತ್ತದೆಯೋ **ತದ್ವದಹಂ ಪಶ್ವಾದಿಶರೀರಂ ಆತ್ಮದೇಹತ್ವೇನ ಪಶ್ಯನ್ಕಥಂ ನಾಶಯೇಯಂ** – ಅದೇ ರೀತಿಯಲ್ಲಿ ನಾನು ಪಶುವೇ ಮೊದಲಾದುವುಗಳ ಶರೀರವನ್ನು ನನ್ನ ದೇಹದಂತೆಯೇ ಕಾಣುತ್ತಿರುವಾಗ ಹೇಗೆ ತಾನೇ ಅವುಗಳನ್ನು ನಾಶಪಡಿಸಲಿ?'– ಎಂದು ಅರ್ಥೈಸಿದ್ದಾರೆ. ಎಂದರೆ ಪಿಶಾಚಿಯು– ತಾನು ಪಿಶಾಚಿಯಾಗುವ ಮೊದಲು ಮನುಷ್ಯನಾಗಿದ್ದಾಗ ನೇಣುಹಾಕಿಕೊಳ್ಳುವುದರ ಮೂಲಕವಾಗಿ ಶರೀರವನ್ನು ನಾಶಪಡಿಸಿಕೊಂಡಿದ್ದಿತು. ಆ ಹಿಂದಿನ ವಾಸನೆಯಿಂದಾಗಿ ಪಿಶಾಚಜನ್ಮಾಂತರ ಪಡೆಯುವ ತನ್ನ ಶರೀರವನ್ನು ಅಗ್ನಿಪತನ ಮತ್ತು ವಿಷಪಾನದ ಮೂಲಕವಾಗಿ ನಾಶಪಡಿಸಿಕೊಳ್ಳುತ್ತಲೇ ಇರುತ್ತದೆ. ಅಂತಹ ಪಿಶಾಚಿಯಂತೆ ನನ್ನ ದೇಹವನ್ನು ತಾಮಸಯಜ್ಞಗಳ ಮೂಲಕವಾಗಿ ನಾಶಪಡಿಸಿಕೊಳ್ಳುವುದಿಲ್ಲ. ಪಶುಗಳ ಶರೀರವನ್ನೂ ನಾಶಗೊಳಿಸುವುದಿಲ್ಲ. ಯಜ್ಞಪಶುಗಳ ಶರೀರಕ್ಕೂ ನನ್ನ ಶರೀರಕ್ಕೂ ನಾನು ಯಾವ ವಿಧವಾದ ವ್ಯತ್ಯಾಸವನ್ನೂ ಕಾಣುತ್ತಿಲ್ಲ. ಅವುಗಳ ಶರೀರವೂ ನನ್ನ ಶರೀರವೆಂದೇ ಭಾವಿಸುತ್ತೇನೆ. ಅವುಗಳಿಗೂ ಶರೀರತ್ಯಾಗದ ವಿಷಯದಲ್ಲಿ ಭಯವಿದ್ದೇ ಇರುತ್ತದೆ. ಅವುಗಳ ಶರೀರಗಳನ್ನು ವಿನಾಶಗೊಳಿಸುವುದೂ ನನ್ನ ಶರೀರವನ್ನು ವಿನಾಶಗೊಳಿಸಿಕೊಳ್ಳುವುದೂ ನನಗೆ ಒಂದೇ ಆಗಿರುತ್ತದೆ.' ಇಷ್ಟು ವಿವರಣೆಯನ್ನು ನೀಡಿದ್ದಾರೆ. ಪಿಶಾಚಿ

ಯಂತೆ ಅತಿಯಾಗಿ ಶರೀರವನ್ನು ದಂಡಿಸಿ ಕೃಶಗೊಳಿಸುವುದರ ಮೂಲಕ ಶರೀರವನ್ನೇ ಅಂತ್ಯಗೊಳಿಸುವ ಕ್ಷೇತ್ರಯಜ್ಞಗಳಿಂದ, ಶರೀರದ ಮಾಂಸವನ್ನೇ ತೆಗೆದು ಹೋಮಮಾಡುವ ತಾಮಸಯಜ್ಞಗಳಿಂದ ದೇವತೆಗಳನ್ನು ಪೂಜಿಸುವ ಇಚ್ಛೆಯು ನನಗಿಲ್ಲ– ಎಂದು ಹಿಂದೀವಿದ್ವಾಂಸರು ಅರ್ಥಮಾಡಿರುತ್ತಾರೆ. **ಕ್ಷತ್ರಯಜ್ಞೈಃ** – ಎಂದೂ ಪಾಠವಿದೆ. ಕ್ಷತ್ರಿಯರ ಯಜ್ಞರೂಪವಾದ ಯುದ್ಧಾದಿಗಳಿಂದ ಎಂದು ಅರ್ಥವಾಗುತ್ತದೆ. ಶರೀರಸಂಬಂಧವಾದ ಪಶುಯಜ್ಞವನ್ನು ಮಾಡುವುದು ಪೈಶಾಚಿಕಕ್ರಿಯೆ. ಪಿಶಾಚದಂತೆ (ವೃಕಾಸುರಾದಿಗಳಂತೆ) ಶರೀರವನ್ನೇ ಕಿತ್ತು ಮಾಡಬೇಕಾದ ಯಜ್ಞಗಳಿಂದ ದೇವತೆಗಳನ್ನು ಆರಾಧಿಸುವುದಿಲ್ಲ– ಹೀಗೂ ಅರ್ಥಮಾಡಬಹುದಾಗಿದೆ.)

ಯಸ್ಯ ವಾಙ್ಮನಸೀ ಸ್ಯಾತಾಂ ಸಮ್ಯಕ್ಪ್ರಣಿಹಿತೇ ಸದಾ ।
ತಪಸ್ತ್ಯಾಗಶ್ಚ ಸತ್ಯಂ ಚ ಸ ವೈ ಸರ್ವಮವಾಪ್ನುಯಾತ್ ॥೩೪॥

ಯಾವನ ಮಾತು ಮತ್ತು ಮನಸ್ಸುಗಳು ಸರ್ವಕಾಲದಲ್ಲಿಯೂ ಸಮೀಚೀನವಾಗಿ ಏಕಾಗ್ರವಾಗಿರುವುವೋ, ಯಾವನು ತಪಸ್ಸಿನಿಂದಲೂ, ತ್ಯಾಗದಿಂದಲೂ ಮತ್ತು ಸತ್ಯದಿಂದಲೂ ಸಂಪನ್ನನಾಗಿರುವನೋ–ಅಂತಹವನು ಸರ್ವಸಿದ್ಧಿಗಳನ್ನೂ ಪಡೆದುಕೊಳ್ಳುತ್ತಾನೆ.

ನಾಸ್ತಿ ವಿದ್ಯಾಸಮಂ ಚಕ್ಷುರ್ನಾಸ್ತಿ ಸತ್ಯಸಮಂ ತಪಃ ।
ನಾಸ್ತಿ ರಾಗಸಮಂ ದುಃಖಂ ನಾಸ್ತಿ ತ್ಯಾಗಸಮಂ ಸುಖಮ್ ॥೩೫॥

ವಿದ್ಯೆಗೆ (ಜ್ಞಾನಕ್ಕೆ) ಸಮಾನವಾದ ಕಣ್ಣಿಲ್ಲ. ಸತ್ಯನಿಷ್ಠೆಗೆ ಸಮಾನವಾದ ತಪಸ್ಸಿಲ್ಲ. ಅನುರಾಗಕ್ಕೆ (ಆಸಕ್ತಿಗೆ) ಸಮಾನವಾದ ದುಃಖವಿಲ್ಲ. ತ್ಯಾಗಕ್ಕೆ ಸಮಾನವಾದ ಸುಖವಿಲ್ಲ.

ಆತ್ಮನ್ಯೇವಾತ್ಮನಾ ಜಾತ ಆತ್ಮನಿಷ್ಠೋಽಪ್ರಜೋಽಪಿ ವಾ ।
ಆತ್ಮನ್ಯೇವ ಭವಿಷ್ಯಾಮಿ ನ ಮಾಂ ತಾರಯತಿ ಪ್ರಜಾ ॥೩೬॥

(ವಿವಾಹವಾಗದಿರುವುದರಿಂದ) ಸಂತಾನರಹಿತನಾದರೂ ನಾನು ಬ್ರಹ್ಮನಲ್ಲಿ ಬ್ರಹ್ಮರೂಪದಿಂದಲೇ ಹುಟ್ಟಿದವನಾಗಿದ್ದೇನೆ. ಬ್ರಹ್ಮನಿಷ್ಠ ನಾಗಿದ್ದೇನೆ. ಮುಂದೆಯೂ ಪರಮಾತ್ಮನಲ್ಲಿಯೇ ಲೀನನಾಗುತ್ತೇನೆ. ಸಂತಾನವು ನನ್ನನ್ನು ಉದ್ಧರಿಸುವುದಿಲ್ಲ.

ನೈತಾದೃಶಂ ಬ್ರಾಹ್ಮಣಸ್ಯಾಸ್ತಿ ವಿತ್ತಂ
ಯಥೈಕತಾ ಸಮತಾ ಸತ್ಯತಾ ಚ ।
ಶೀಲಂ ಸ್ಥಿತಿರ್ದಣ್ಡನಿಧಾನಮಾರ್ಜವಂ
ತತಸ್ತತಶ್ಚೋಪರಮಃ ಕ್ರಿಯಾಭ್ಯಃ ॥೩೭॥

ಏಕತೆ, ಸರ್ವಪ್ರಾಣಿಗಳಲ್ಲಿಯೂ ಸಮಭಾವ, ಸತ್ಯನಿಷ್ಠೆ, ಶೀಲ, ಬ್ರಹ್ಮನಿಷ್ಠೆ, ಮಾತು, ಮನಸ್ಸು ಮತ್ತು ಶರೀರಗಳಿಂದ ಹಿಂಸಾತ್ಯಾಗ, ಸರಳತೆ, ಸಕಲವಿಧವಾದ ಕಾಮ್ಯಕರ್ಮಗಳಿಂದಲೂ ದೂರವಿರುವುದು–ಇವುಗಳಿಗೆ ಸಮಾನವಾದ ಸಂಪತ್ತು ಬ್ರಾಹ್ಮಣನಿಗೆ ಬೇರೆ ಯಾವುದೂ ಇಲ್ಲ.

ಕಿಂ ತೇ ಧನೈರ್ಬಾನ್ಧವೈರ್ವಾಪಿ ಕಿಂ ತೇ
ಕಿಂ ತೇ ದಾರೈರ್ಬ್ರಾಹ್ಮಣ ಯೋ ಮರಿಷ್ಯಸಿ ।
ಆತ್ಮಾನಮನ್ವಿಚ್ಛ ಗುಹಾಂ ಪ್ರವಿಷ್ಟಂ
ಪಿತಾಮಹಾಸ್ತೇ ಕ್ವ ಗತಾಃ ಪಿತಾ ಚ ॥೩೮॥

ಬ್ರಾಹ್ಮಣಶ್ರೇಷ್ಠನೇ! ತಂದೆಯೇ! ಐಶ್ವರ್ಯಗಳಿಂದಾಗಲೀ, ಬಂಧುಗಳಿಂದಾಗಲೀ ನಿನಗೆ ಆಗಬೇಕಾದುದೇನಿದೆ? ಎಂದಾದರೊಂದು ದಿನ ಸಾಯಲಿರುವ ನಿನಗೆ ಪತ್ನಿಯರಿಂದ ಆಗಬೇಕಾದುದೇನಿದೆ? ಹೃದಯ ಗುಹಾಶಯನಾಗಿರುವ ಪರಮಾತ್ಮನನ್ನು ಹುಡುಕು. ಯಮ-ನಿಯಮಾದಿ ಸಾಧನೆಗಳಿಂದ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊ. ನಿನ್ನ ತಾತ-ಮುತ್ತಾತಂದಿರು ಎಲ್ಲಿಗೆ ಹೋಗಿದ್ದಾರೆ? ಅವರು ಮೃತ್ಯುವಶರಾದಂತೆಯೇ ನೀನೂ ಮೃತ್ಯುವಶನಾಗುವೆ. ಅದಕ್ಕೆ ಅವಕಾಶವಾಗದಂತೆ ಅಮೃತತ್ತ್ವವನ್ನು ಪಡೆಯಲು ಸಾಧನೆಯನ್ನು ಮಾಡು.”

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

“ಯುಧಿಷ್ಠಿರ! ಮೇಧಾವಿಯು ಹೇಳಿದ ಮಾತನ್ನು ಕೇಳಿ ತಂದೆಯು ಅದರಂತೆಯೇ ಮಾಡಿದನು. ಹಾಗೆಯೇ ನೀನೂ ಸತ್ಯಧರ್ಮಪರಾಯಣನಾಗಿ ಆಧ್ಯಾತ್ಮಿಕಚಿಂತನೆಯನ್ನು ಮಾಡುತ್ತಿರು.”

೧೭೫ನೆಯ ಅಧ್ಯಾಯವು ಮುಗಿಯಿತು.

೧೭೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ತ್ಯಾಗದ ಮಹಿಮೆಯ ವಿಷಯದಲ್ಲಿ ಶಂಪಾಕನೆಂಬ ಬ್ರಾಹ್ಮಣನ ಉಪದೇಶ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಧನಿನಶ್ಚಾಧನಾ ಯೇ ಚ ವರ್ತಯನ್ತೇ ಸ್ವತನ್ತ್ರಿಣಃ ।
ಸುಖದುಃಖಾಗಮಸ್ತೇಷಾಂ ಕಃ ಕಥಂ ವಾ ಪಿತಾಮಹ ॥೧॥

"ಪಿತಾಮಹನೇ! ಧನಿಕರೂ ಮತ್ತು ದರಿದ್ರರೂ ಪ್ರತ್ಯೇಕ-ಪ್ರತ್ಯೇಕವಾಗಿ ಸ್ವತಂತ್ರರಾಗಿಯೇ ವ್ಯವಹಾರಗಳನ್ನು ನಡೆಸುತ್ತಿರುತ್ತಾರೆ. ಅವರಿಗೆ ಒದಗಿಬರುವ ಸುಖ-ದುಃಖಗಳು ಎಂತಹವು? ಹೇಗೆ ಬರುತ್ತವೆ?– ಎಂಬುದನ್ನು ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಪರಮಶಾಂತಸ್ವಭಾವದವನಾದ, ಜೀವನ್ಮುಕ್ತನಾದ ಶಂಪಾಕನೆಂಬ ಬ್ರಾಹ್ಮಣನು ಹೇಳಿದ ಪುರಾತನವಾದ ಇತಿಹಾಸರೂಪವಾದ ಗೀತವನ್ನು ಉದಾಹರಿಸುತ್ತಾರೆ. ಹಿಂದೊಮ್ಮೆ ತ್ಯಾಗಧರ್ಮವನ್ನೇ ಆಶ್ರಯಿಸಿದ್ದ ಶಂಪಾಕನೆಂಬ ಬ್ರಾಹ್ಮಣನು ದುಷ್ಟಳಾದ ಪತ್ನಿಯಿಂದ ಪೀಡಿತನಾಗಿ, ಹರಿದುಹೋಗಿದ್ದ ಬಟ್ಟೆಗಳನ್ನುಟ್ಟು ಹಸಿವಿನಿಂದಲೂ ಬಳಲಿದವನಾಗಿ ನನ್ನ ಬಳಿಗೆ ಬಂದು ಹೇಳಿದನು :

ಉತ್ಪನ್ನಮಿಹ ಲೋಕೇ ವೈ ಜನ್ಮಪ್ರಭೃತಿ ಮಾನವಮ್ ।
ವಿವಿಧಾನ್ಯುಪವರ್ತನ್ತೇ ದುಃಖಾನಿ ಚ ಸುಖಾನಿ ಚ ॥೨॥

"ಸತ್ಯವ್ರತನೇ! ಈ ಪ್ರಪಂಚದಲ್ಲಿ ಹುಟ್ಟುವ ಮನುಷ್ಯನಿಗೆ (ಧನಿಕನೇ ಆಗಿರಲೀ ; ದರಿದ್ರನೇ ಆಗಿರಲೀ) ಹುಟ್ಟಿದಾಗಿನಿಂದಲೂ ವಿಧ-ವಿಧವಾದ ದುಃಖಗಳೂ ಸುಖಗಳೂ ಪ್ರಾಪ್ತವಾಗುತ್ತಲೇ ಇರುತ್ತವೆ.

ತಯೋರೇಕತರೇ ಮಾರ್ಗೇ ಯದೇನಮಭಿಸನ್ನಯೇತ್ ।
ನ ಸುಖಂ ಪ್ರಾಪ್ಯ ಸಂಹೃಷ್ಯೇನ್ನಾಸುಖಂ ಪ್ರಾಪ್ಯ ಸಂಜ್ವರೇತ್ ॥೩॥

ಬ್ರಹ್ಮನೇನಾದರೂ ಮಾನವನನ್ನು ಸುಖ ಮತ್ತು ದುಃಖ ಎಂಬೆರಡು

ಮಾರ್ಗಗಳಲ್ಲಿ–ಸಂಪೂರ್ಣವಾಗಿ ಸುಖಮಾರ್ಗದಿಂದಲೋ ಸಂಪೂರ್ಣ ವಾಗಿ ದುಃಖಮಾರ್ಗದಿಂದಲೋ ಒಯ್ದುಬಿಟ್ಟಿದ್ದರೆ–ಅಂತಹ ಮನುಷ್ಯನು (ಸುಖಮಾರ್ಗದಲ್ಲಿಯೇ ಇರುವವನು) ಸುಖವನ್ನು ಹೊಂದಿ ಸಂತೋಷ ಪಡುತ್ತಿರಲಿಲ್ಲ. (ದುಃಖಮಾರ್ಗದಲ್ಲಿಯೇ ಇರುವವನು) ಅಸುಖವನ್ನು ಅಥವಾ ದುಃಖವನ್ನು ಹೊಂದಿ ಪರಿತಾಪವನ್ನೂ ಪಡುತ್ತಿರಲಿಲ್ಲ ಸುಖದಲ್ಲಿ ಬೆಳೆದು ಯಾವಾಗಲೂ ಸುಖದಲ್ಲಿಯೇ ಇರುವವನಿಗೆ 'ಸುಖ'– ಎಂದರೇ ನೆಂಬ ನಿಶ್ಚಿತವಾದ ಅರಿವೇ ಇರುವುದಿಲ್ಲ. ಕಷ್ಟದಲ್ಲಿಯೇ ಬೆಳೆದು ಯಾವಾ ಗಲೂ ಕಷ್ಟದಲ್ಲಿಯೇ ಇರುವವನಿಗೆ ಕಷ್ಟ–ಎಂದರೆ ಏನೆಂಬ ನಿಶ್ಚಿತವಾದ ಅರಿವೇ ಇರುವುದಿಲ್ಲ. ಸುಖ-ದುಃಖಗಳ ಪರಿವರ್ತನೆಯಾಗುತ್ತಿದ್ದಾಗ ಮಾತ್ರ ಸುಖ ಎಂದರೇನು? ದುಃಖ ಎಂದರೇನು?–ಎಂಬುದರ ಅರಿವುಂಟಾಗುತ್ತದೆ. (ಹಸಿವಿನ ದುಃಖವಿದ್ದರಲ್ಲವೇ ಊಟದ ಸುಖವನ್ನು ಅನುಭವಿಸಬಹುದು!)

ನ ವೈ ಚರಸಿ ಯಚ್ಛ್ರೇಯ ಆತ್ಮನೋ ವಾ ಯದೀಶಿಷೇ ।
ಅಕಾಮಾತ್ಮಾಪಿ ಹಿ ಸದಾ ಧುರಮುದ್ಯಮ್ಯ ಚೈವ ಹ ॥೬॥

ನೀನು ಕಾಮನೆಗಳಿಂದ ರಹಿತನೇ ಆಗಿದ್ದರೂ, ಆತ್ಮಕಲ್ಯಾಣಕ್ಕೆ ಸಾಧನಗಳಾದ ಕಾರ್ಯಗಳನ್ನು ನೀನು ಮಾಡುತ್ತಿಲ್ಲ ಮತ್ತು ಮನಸ್ಸನ್ನೂ ನಿನ್ನ ವಶದಲ್ಲಿಟ್ಟುಕೊಂಡಿರುವುದಿಲ್ಲ. ಏಕೆಂದರೆ ನೀನು ನಿನ್ನ ರಾಜ್ಯದ ಭಾರವನ್ನು ಸಂಪೂರ್ಣವಾಗಿ ವಹಿಸಿಕೊಂಡಿರುವೆ.

ಅಕಿಂಚನಃ ಪರಿಪತನ್ಸುಖಮಾಸ್ವಾದಯಿಷ್ಯಸಿ ।
ಅಕಿಂಚನಃ ಸುಖಂ ಶೇತೇ ಸಮುತ್ತಿಷ್ಠತಿ ಚೈವ ಹ ॥೭॥

ಒಂದು ವೇಳೆ ನೀನು ನಿನ್ನಲ್ಲಿರುವುದೆಲ್ಲವನ್ನೂ ತ್ಯಾಗಮಾಡಿ ಅಕಿಂಚನ ನಾದರೆ ನಿಶ್ಚಿಂತೆಯಿಂದ ಎಲ್ಲ ಕಡೆಗಳಲ್ಲಿಯೂ ತಿರುಗುತ್ತಾ ಸುಖದ ಅನುಭವವನ್ನು ಪಡೆಯುವೆ. ಹೇಗೆಂದರೆ ಅಕಿಂಚನನ ಬಳಿ ಏನೂ ಇಲ್ಲದೇ ಇರುವುದರಿಂದಲೇ ಅವನು ಸುಖವಾಗಿ ಮಲಗುತ್ತಾನೆ ಮತ್ತು ಸುಖವಾಗಿ ಎಚ್ಚರಗೊಳ್ಳುತ್ತಾನೆ.

ಆಕಿಂಚನ್ಯಂ ಸುಖಂ ಲೋಕೇ ಪಥ್ಯಂ ಶಿವಮನಾಮಯಮ್ ।
ಅನಮಿತ್ರಪಥೋ ಹ್ಯೇಷ ದುರ್ಲಭಃ ಸುಲಭೋ ಮನಃ ॥೮॥

ಪ್ರಪಂಚದಲ್ಲಿ ಸರ್ವದ್ರವ್ಯಪರಿತ್ಯಾಗವು (ಏನೂ ಇಲ್ಲದಿರುವುದು) ಸುಖಕರವಾದುದು ; ಹಿತಕರವಾದುದು ; ಕಲ್ಯಾಣಕರವಾದುದು ; ಉಪದ್ರವ ರಹಿತವಾದುದು ; ಶತ್ರುಗಳೇ ಇಲ್ಲದಿರುವ ಮಾರ್ಗವಿದಾಗಿದೆ. ದುರ್ಲಭ ವಾದರೂ ಸುಲಭವೆಂದು ಹೇಳಲ್ಪಟ್ಟಿದೆ.

ಆಕಿಂಚನಸ್ಯ ಶುದ್ಧಸ್ಯ ಉಪಪನ್ನಸ್ಯ ಸರ್ವತಃ ।
ಅವೇಕ್ಷಮಾಣಸ್ತ್ರೀಲ್ಲೋಕಾನ್ನ ತುಲ್ಯಮಿಹ ಲಕ್ಷಯೇ ॥೯॥

ಮೂರು ಲೋಕಗಳನ್ನೂ ದೃಷ್ಟಿಯಿಟ್ಟು ನೋಡಿದರೂ ನಾನು ಶುದ್ಧ ನಾದ, ವೈರಾಗ್ಯಸಂಪನ್ನನಾದ ಅಕಿಂಚನನಿಗೆ ಸದೃಶನಾದ ಮನುಷ್ಯನನ್ನು ಇದುವರೆಗೂ ಕಂಡಿಲ್ಲ.

ಆಕಿಂಚನ್ಯಂ ಚ ರಾಜ್ಯಂ ಚ ತುಲಯಾ ಸಮತೋಲಯಮ್ ।
ಅತ್ಯರಿಚ್ಯತ ದಾರಿದ್ಯಂ ರಾಜ್ಯಾದಪಿ ಗುಣಾಧಿಕಮ್ ॥೧೦॥

ಆಕಿಂಚನ್ಯವನ್ನೂ ರಾಜ್ಯವನ್ನೂ ತಕ್ಕಡಿಯಲ್ಲಿಟ್ಟು ತೂಗಿದೆನು. ರಾಜ್ಯಕ್ಕಿಂತಲೂ ಆಕಿಂಚನ್ಯವೇ ಭಾರವೂ ಹೆಚ್ಚು ಗುಣವುಳ್ಳದ್ದೂ ಆಗಿದ್ದಿತು.

ಆಕಿಂಚನ್ಯೇ ಚ ರಾಜ್ಯೇ ಚ ವಿಶೇಷಃ ಸುಮಹಾನಯಮ್ ।
ನಿತ್ಯೋದ್ವಿಗ್ನೋ ಹಿ ಧನವಾನ್ಮೃತ್ಯೋರಸ್ಯಗತೋ ಯಥಾ ॥೧೧॥

ಆಕಿಂಚನ್ಯಕ್ಕೂ–ರಾಜ್ಯಕ್ಕೂ ಇರುವ ವಿಶೇಷವಾದ ಒಂದು ಅಂತರ ವೆಂದರೆ : ಧನವಂತನು ಮೃತ್ಯುವಿನ ಬಾಯಲ್ಲಿ ಬಿದ್ದವನಂತೆ ಯಾವಾಗಲೂ ಉದ್ವಿಗ್ನನಾಗಿಯೇ ಇರುತ್ತಾನೆ.

ನೈವಾಸ್ಯಾಗ್ನಿರ್ನ ಚಾರಿಷ್ಟೋ ನ ಮೃತ್ಯುರ್ನ ಚ ದಸ್ಯವಃ ।
ಪ್ರಭವನ್ತಿ ಧನತ್ಯಾಗಾದ್ವಿಮುಕ್ತಸ್ಯ ನಿರಾಶಿಷಃ ॥೧೨॥

ಆದರೆ ಯಾವ ಮನುಷ್ಯನು ಧನವನ್ನು ತ್ಯಾಗಮಾಡಿ ಧನ ಸಂಗ್ರಹಣೆಯ ಆಸಕ್ತಿಯಿಂದ ವಿಮುಕ್ತನಾಗಿರುವನೋ, ಮನಸ್ಸಿನಲ್ಲಿ ಯಾವ ವಿಧವಾದ ಕಾಮನೆಗಳೂ ಇಲ್ಲದೇ ನಿಷ್ಕಾಮನಾಗಿರುವನೋ–ಅಂತಹವನಿಗೆ ಅಗ್ನಿಯಿಂದಲೂ ಭಯವಿಲ್ಲ ; ಅಶುಭಗಳೂ ಇಲ್ಲ ; ಮೃತ್ಯುವಿನ ಭಯವೂ ಇಲ್ಲ ; ಕಳ್ಳರ ಭಯವೂ ಇಲ್ಲ.

ತಂ ವೈ ಸದಾ ಕಾಮಚರಮನುಪಸ್ತೀರ್ಣಶಾಯಿನಮ್ ।
ಬಾಹೂಪಧಾನಂ ಶಾಮ್ಯಂತಂ ಪ್ರಶಂಸನ್ತಿ ದಿವೌಕಸಃ ॥೧೩॥

ಸ್ವೇಚ್ಛೆಯಿಂದ ಮನಬಂದಂತೆ ಸಂಚರಿಸುವ, ಹಾಸಲು ಯಾವುದೇ ವಿಧವಾದ ಹಚ್ಚಡವಾಗಲೀ–ಹೊದೆಯಲು ಹೊದ್ದಿಕೆಯಾಗಲೀ ಇಲ್ಲದೇ ತೋಳುಗಳನ್ನೇ ತಲೆದಿಂಬನ್ನಾಗಿ ಇಟ್ಟುಕೊಂಡು ನೆಲದ ಮೇಲೆ ಮಲಗುವ ಶಾಂತಸ್ವಭಾವದ ಮನುಷ್ಯನನ್ನು ದೇವತೆಗಳೂ ಪ್ರಶಂಸಿಸುತ್ತಾರೆ.

ಧನವಾನ್ಕ್ರೋಧಲೋಭಾಭ್ಯಾಮಾವಿಷ್ಟೋ ನಷ್ಟಚೇತನಃ ।
ತಿರ್ಯಗೀಕ್ಷಃ ಶುಷ್ಕಮುಖಃ ಪಾಪಕೋ ಭ್ರುಕುಟೀಮುಖಃ ॥೧೪॥

ಧನವಂತನಾದವನು ಕ್ರೋಧ-ಲೋಭಗಳಿಂದ ಆವಿಷ್ಟನಾಗಿರುತ್ತಾನೆ. ಬುದ್ಧಿಗೆಟ್ಟಿರುತ್ತಾನೆ. ಯಾವಾಗಲೂ ಕುಟಿಲದೃಷ್ಟಿಯಿಂದಲೇ ಇತರರನ್ನು ನೋಡುತ್ತಾನೆ. ಅವನ ಮುಖವು ಯಾವಾಗಲೂ ಬಾಡಿಯೇ ಇರುತ್ತದೆ. ಹುಬ್ಬುಗಳನ್ನು ಗಂಟಿಕ್ಕಿಕೊಂಡಿರುತ್ತಾನೆ. ಯಾವಾಗಲೂ ಪಾಪಕಾರ್ಯಗಳಲ್ಲಿಯೇ ಮಗ್ನನಾಗಿರುತ್ತಾನೆ.

ನಿರ್ದಶನ್ನಧರೋಷ್ಠಂ ಚ ಕ್ರುದ್ಧೋ ದಾರುಣಭಾಷಿತಾ ।
ಕಸ್ತಮಿಚ್ಛೇತ್ಪರಿದ್ರಷ್ಟುಂ ದಾತುಮಿಚ್ಛತಿ ಚೇನ್ಮಹೀಮ್ ॥೧೫॥

ಕ್ರುದ್ಧನಾದ ಅಂತಹ ಧನವಂತನು ಯಾವಾಗಲೂ ಕೆಳತುಟಿಯನ್ನು ಕಡಿಯುತ್ತಲೇ ಇರುತ್ತಾನೆ. ಅತ್ಯಂತಕಠೋರವಾಗಿ ಮಾತನಾಡುತ್ತಾನೆ. ಅಂತಹ ಕ್ರೂರಿಯಾದ ಮನುಷ್ಯನು ಭೂಮಂಡಲವನ್ನೇ ದಾನವಾಗಿ ಕೊಡಲು ಮುಂದೆ ಬಂದರೂ ಅವನನ್ನು ನೋಡಲು ಕೂಡ ಯಾರು ತಾನೇ ಇಚ್ಛಿಸುತ್ತಾರೆ?

ಶ್ರಿಯಾ ಹ್ಯಭೀಕ್ಷ್ಣಂ ಸಂವಾಸೋ ಮೋಹಯತ್ಯವಿಚಕ್ಷಣಮ್ ।
ಸಾ ತಸ್ಯ ಚಿತ್ತಂ ಹರತಿ ಶಾರದಾಭ್ರಮಿವಾನಿಲಃ ॥೧೬॥

ಧನಸಂಪತ್ತಿಯ ನಿರಂತರಸಹವಾಸವು ಮೂರ್ಖನನ್ನು ವಿಮೋಹಗೊಳಿಸುತ್ತದೆ. ಗಾಳಿಯು ಶರತ್ಕಾಲದ ಮೇಘವನ್ನು ಚದುರಿಸಿಕೊಂಡು ಹೋಗುವಂತೆ–ಅಪಾರವಾದ ಸಂಪತ್ತಿಯು ಮೂರ್ಖನ ಬುದ್ಧಿಯನ್ನು ಅಪಹರಿಸಿಬಿಡುತ್ತದೆ.

ಅಥೈನಂ ರೂಪಮಾನಶ್ಚ ಧನಮಾನಶ್ಚ ವಿನ್ದತಿ ।
ಅಭಿಜಾತೋಽಸ್ಮಿ ಸಿದ್ಧೋಽಸ್ಮಿ ನಾಸ್ಮಿ ಕೇವಲಮಾನುಷಃ ॥೧೭॥

ಅನಂತರ ಅವನನ್ನು ರೂಪ-ಯೌವನಗಳ ಅಭಿಮಾನವೂ–ಧನ ಮದವೂ ಆವರಿಸುತ್ತದೆ. 'ನಾನು ಸತ್ಕುಲಪ್ರಸೂತನಾಗಿದ್ದೇನೆ. ಸಿದ್ಧಪುರುಷ ನಾಗಿದ್ದೇನೆ. ಸಾಧಾರಣಮನುಷ್ಯನಲ್ಲ'– ಇವೇ ಮುಂತಾದ ದುರಭಿಮಾನದ ಮಾತುಗಳನ್ನು ಅವನು ಹೇಳುತ್ತಿರುತ್ತಾನೆ.

ಇತ್ಯೇಭಿಃ ಕಾರಣೈಸ್ತಸ್ಯ ತ್ರಿಭಿಶ್ಚಿತ್ತಂ ಪ್ರಮಾದ್ಯತಿ ।
ಸಮ್ಪ್ರಸಕ್ತಮನಾ ಭೋಗಾನ್ವಿಸೃಜ್ಯ ಪಿತೃಸಂಚಿತಾನ್ ।
ಪರಿಕ್ಷೀಣಃ ಪರಸ್ವಾನಾಮಾದಾನಂ ಸಾಧು ಮನ್ಯತೇ ॥೧೮॥

ರೂಪ, ಧನ ಮತ್ತು ಕುಲ– ಈ ಮೂರರ ದುರಭಿಮಾನದಿಂದಾಗಿ ಅವನ ಮನಸ್ಸು ಎಚ್ಚರತಪ್ಪುತ್ತದೆ. ಅವನು ಭೋಗಾಸಕ್ತನಾಗಿ ದುಂದು ವೆಚ್ಚಮಾಡುತ್ತಾ ಪಿತ್ರಾರ್ಜಿತವಾದ ಸಂಪತ್ತನ್ನು ಸಂಪೂರ್ಣವಾಗಿ ಕಳೆದು ಕೊಂಡು ದರಿದ್ರನಾಗಿ, ಆ ಸಮಯದಲ್ಲಿ ಇತರರ ಸ್ವತ್ತನ್ನು ಅಪಹರಿಸುವುದೇ ಯೋಗ್ಯವೆಂದು ಭಾವಿಸುತ್ತಾನೆ.

ತಮತಿಕ್ರಾನ್ತಮರ್ಯಾದಮಾದದಾನಂ ತತಸ್ತತಃ ।
ಪ್ರತಿಷೇಧನ್ತಿ ರಾಜಾನೋ ಲುಬ್ಧಾ ಮೃಗಮಿವೇಷುಭಿಃ ॥೧೯॥

ಹೀಗೆ ಲೋಕಮರ್ಯಾದೆಯನ್ನೂ ಅತಿಕ್ರಮಿಸಿ ಅಲ್ಲಲ್ಲಿ ಕಳ್ಳತನ ಮಾಡಿ ಧನವನ್ನು ಸಂಪಾದಿಸಲು ಪ್ರಾರಂಭಿಸುವ ಅಂತಹ ಮನುಷ್ಯನನ್ನು– ಬೇಡರು ಜಿಂಕೆಯನ್ನು ಬಾಣಗಳಿಂದ ಪ್ರಹರಿಸುವಂತೆ–ರಾಜರು ದಂಡನೆಗಳಿಂದ ತಡೆಯುತ್ತಾರೆ. (ಶಿಕ್ಷಿಸುತ್ತಾರೆ.)

ಏವಮೇತಾನಿ ದುಃಖಾನಿ ತಾನಿ ತಾನೀಹ ಮಾನವಮ್ ।
ವಿವಿಧಾನ್ಯುಪಪದ್ಯನ್ತೇ ಗಾತ್ರಸಂಸ್ಪರ್ಶಜಾನ್ಯಪಿ ॥೨೦॥

ಹೀಗೆ ಮನಸ್ಸಿಗೆ ಪರಿತಾಪವನ್ನುಂಟುಮಾಡುವ ಮತ್ತು ಶರೀರಕ್ಕೂ ಘಾಸಿಯಾಗುವಂತಹ ವಿಧ-ವಿಧವಾದ ದುಃಖಗಳು ಮನುಷ್ಯನಿಗೆ ಉಂಟಾಗುತ್ತವೆ.

ತೇಷಾಂ ಪರಮದುಃಖಾನಾಂ ಬುದ್ಧ್ಯಾ ಭೈಷಜ್ಯಮಾಚರೇತ್ ।
ಲೋಕಧರ್ಮಮವಜ್ಞಾಯ ಧ್ರುವಾಣಾಮಧ್ರುವೈಃ ಸಹ ॥೨೧॥

ಆದುದರಿಂದ ಅನಿತ್ಯವಾದ ಶರೀರದೊಡನೆ ಸೇರಿಬಂದಿರುವ ಪುತ್ರೇಷಣಾ-ಧನೇಷಣಾದಿ ಲೋಕಧರ್ಮಗಳನ್ನು ಧಿಕ್ಕರಿಸಿ, ಶಾಶ್ವತವಾದ ಆ ಮಹಾದುಃಖಗಳಿಗೆ ಬುದ್ಧಿಯ ಮೂಲಕವಾಗಿ ಚಿಕಿತ್ಸೆಯನ್ನು ನಡೆಸಬೇಕು.

ನಾತ್ಯಕ್ತ್ವಾ ಸುಖಮಾಪ್ನೋತಿ ನಾತ್ಯಕ್ತ್ವಾ ವಿನ್ದತೇ ಪರಮ್ ।
ನಾತ್ಯಕ್ತ್ವಾ ಚಾಭಯಃ ಶೇತೇ ತ್ಯಕ್ತ್ವಾ ಸರ್ವಂ ಸುಖೀ ಭವ ॥೨೨॥

ಯಾವ ಮನುಷ್ಯನೇ ಆಗಲೀ- ತ್ಯಾಗಮಾಡದೇ ಸುಖವನ್ನು ಹೊಂದುವುದಿಲ್ಲ. ತ್ಯಾಗಮಾಡದೇ ಪರಮಪದವನ್ನೂ ಹೊಂದುವುದಿಲ್ಲ. ತ್ಯಾಗಮಾಡದೇ ಭಯರಹಿತನಾಗಿ ನಿದ್ರಿಸುವುದೂ ಇಲ್ಲ. ಆದುದರಿಂದ ಎಲ್ಲವನ್ನೂ ತ್ಯಾಗಮಾಡಿ ಸುಖವಾಗಿರು."

ಯುಧಿಷ್ಠಿರ! ಹಿಂದೆ ನಾನು ಹಸ್ತಿನಾಪುರದಲ್ಲಿದ್ದಾಗ ಶಂಪಾಕನೆಂಬ ಬ್ರಾಹ್ಮಣನು ತ್ಯಾಗದ ಮಹಿಮೆಯನ್ನು ನನ್ನೊಡನೆ ಹೀಗೆ ಹೇಳಿದ್ದನು. ಆದುದರಿಂದ ತ್ಯಾಗವೇ ಪರಮಶ್ರೇಷ್ಠವೆಂದು ನಿರ್ಧರಿಸಲ್ಪಟ್ಟಿದೆ."

ಗಿ೭೬ನೆಯ ಅಧ್ಯಾಯವು ಮುಗಿಯಿತು.

ಗಿ೭೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಧನಾದಿಗಳಲ್ಲಿ ತೃಷ್ಣೆಯೇ ದುಃಖ : ತೃಷ್ಣಾತ್ಯಾಗವೇ ಸುಖ ಎಂಬುದನ್ನು ಪ್ರತಿಪಾದಿಸುವ ಮಂಕಿಗೀತೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಈಹಮಾನಃ ಸಮಾರಮ್ಭಾನ್ಯದಿ ನಾಸಾದಯೇದ್ಧನಮ್ ।
ಧನತೃಷ್ಣಾಭಿಭೂತಶ್ಚ ಕಿಂ ಕುರ್ವನ್ಸುಖಮಾಪ್ನುಯಾತ್ ॥೧॥

"ಪಿತಾಮಹನೇ! ಒಬ್ಬ ಮನುಷ್ಯನು ಧನದಾಹದಿಂದ ಅನೇಕ ವಿಧವಾದ ಉದ್ಯೋಗಗಳನ್ನು ಮಾಡಿಯೂ ಅವನಿಗೆ ತಾನು ಅಪೇಕ್ಷಿಸಿದ ಧನವು ಸಿಕ್ಕದಿದ್ದರೆ ಮುಂದೆ ಏನು ಮಾಡುವುದರಿಂದ ಅವನಿಗೆ ಸುಖವು ಲಭಿಸುತ್ತದೆ?"

ಭೀಷ್ಮನು ಹೇಳುತ್ತಾನೆ :

ಸರ್ವಸಾಮ್ಯಮನಾಯಾಸಂ ಸತ್ಯವಾಕ್ಯಂ ಚ ಭಾರತ ।
ನಿರ್ವೇದಶ್ಚಾವಿಧಿತ್ಸಾಚ ಯಸ್ಯ ಸ್ಯಾತ್ಸ ಸುಖೀ ನರಃ ॥೨॥

"ಯುಧಿಷ್ಠಿರ! ಸರ್ವರಲ್ಲಿಯೂ ಸಮಭಾವ, ವ್ಯರ್ಥವಾದ ಪ್ರಾಪಂಚಿಕ ಸುಖೋಪಭೋಗಗಳಿಗಾಗಿ ಪರಿಶ್ರಮವನ್ನು ಮಾಡದೇ ಇರುವುದು, ಸತ್ಯಭಾಷಣ, ಸಂಸಾರದಲ್ಲಿ ವೈರಾಗ್ಯ, ಕಾಮ್ಯಕರ್ಮಗಳಲ್ಲಿ ನಿರಾಸಕ್ತಿ–ಈ ಐದು ಗುಣಗಳೂ ಯಾವನಲ್ಲಿರುವುವೋ ಅಂತಹ ಮನುಷ್ಯನೇ 'ಸುಖೀ' ಎನಿಸಿಕೊಳ್ಳುತ್ತಾನೆ.

ಏತಾನ್ಯೇವ ಪದಾನ್ಯಾಹುಃ ಪಞ್ಚ ವೃದ್ಧಾಃ ಪ್ರಶಾನ್ತಯೇ ।
ಏಷ ಸ್ವರ್ಗಶ್ಚ ಧರ್ಮಶ್ಚ ಸುಖಂ ಚಾನುತ್ತಮಂ ಮತಮ್ ॥೩॥

ಜ್ಞಾನವೃದ್ಧರಾದವರು ಈ ಐದು ನಿಯಮಗಳನ್ನೇ ಶಾಂತಿಗೆ ಸಾಧಕಗಳಾದ ಹೆಜ್ಜೆಗಳೆಂದು ಹೇಳುತ್ತಾರೆ. ಇದೇ ಸ್ವರ್ಗ, ಇದೇ ಧರ್ಮ ಮತ್ತು ಇದೇ ಪರಮಶ್ರೇಷ್ಠವಾದ ಸುಖವೆಂಬುದೂ ಅವರ ಅಭಿಮತವಾಗಿದೆ.

ಯುಧಿಷ್ಠಿರ! ಈ ವಿಷಯದಲ್ಲಿ ಮಂಕಿ ಎಂಬ ಮುನಿಯು ಭೋಗವಿರಕ್ತನಾಗಿ ಹೇಳಿರುವ ಪುರಾತನವಾದ ಮತ್ತು ಇತಿಹಾಸರೂಪವಾದ ಗೀತವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು ; ಕೇಳು. ಮಂಕಿ ಎಂಬುವನು ಹಣವನ್ನು ಸಂಪಾದಿಸಲು ಹಲವಾರು ರೀತಿಗಳಲ್ಲಿ ಬಹಳವಾಗಿ ಪ್ರಯತ್ನಿಸಿದನು. ಅವನು ಎಷ್ಟೇ ಪ್ರಯತ್ನಿಸಿದರೂ ಧನವನ್ನು ಸಂಪಾದಿಸಲು ಸಾಧ್ಯವಾಗಲಿಲ್ಲ. ಅವನ ಮನೋರಥವು ಮತ್ತೆ ಮತ್ತೆ ಭಗ್ನವಾಗಿ ಹೋಗುತ್ತಿದ್ದಿತು. ಉಳಿದಿದ್ದ ಸ್ವಲ್ಪ ಹಣದಿಂದಲೇ ಅವನು ಒಂದು ಜೊತೆ ಹೋರಿಗಳನ್ನೂ ನೊಗವನ್ನೂ ಕೊಂಡುಕೊಂಡನು. ಒಂದು ದಿನ ಮಂಕಿಯು ಆ ಎರಡು ಹೋರಿಗಳನ್ನೂ ನೊಗಕ್ಕೆ ಹೂಡಿ ಪಳಗಿಸಿಕೊಳ್ಳುವ ಸಲುವಾಗಿ ಗ್ರಾಮದಿಂದ ಹೊರಕ್ಕೆ ಹೊಡೆದುಕೊಂಡು ಹೋಗುತ್ತಿದ್ದನು. ನಡುದಾರಿಯಲ್ಲಿ ಕುಳಿತಿದ್ದ ಒಂದು ಒಂಟೆಯನ್ನು ಮಧ್ಯದಲ್ಲಿ ಬಿಟ್ಟುಕೊಂಡು ಎರಡು ಹೋರಿಗಳೂ ಬಹಳ ಬೇಗ ಮುಂದೆ ಹೋದುವು.

ಆ ಎರಡು ಹೋರಿಗಳೂ ಒಂಟೆಯ ಹೆಗಲಿನ ಪ್ರದೇಶವನ್ನು ಸಮೀಪಿಸು ತ್ತಲೇ ಕೋಪದಿಂದ ಒಂಟೆಯು ಮೇಲೆದ್ದಿತು. ಎರಡು ಹೋರಿಗಳನ್ನು ಕಟ್ಟಿದ್ದ ನೊಗವು ಒಂಟೆಯ ಕುತ್ತಿಗೆಯ ಮೇಲೆ ಕುಳಿತಿತ್ತು. ಮಂಕಿಯ ಆ ಹೋರಿಗಳನ್ನು ಒಂಟೆಯು ನೊಗಸಹಿತವಾಗಿಯೇ ಮೇಲಕ್ಕೆತ್ತಿ ಮಹಾವೇಗ ದಿಂದ ಓಡತೊಡಗಿತು. ಮಹಾಬಲಿಷ್ಠವಾದ ಒಂಟೆಯು ತನ್ನ ಎರಡು ಹೋರಿಗಳನ್ನೂ ಎಳೆದುಕೊಂಡು ಹೋಗುತ್ತಿರುವುದನ್ನು ನೋಡಿ ಸ್ವಲ್ಪ ಹೊತ್ತಿನಲ್ಲಿಯೇ ತನ್ನ ಹೋರಿಗಳು ಮರಣಹೊಂದುವುವೆಂಬುದನ್ನು ನಿಶ್ಚಯಿಸಿದ ಮಂಕಿಯು ಹೇಳಿದನು :

ನ ಚೈವಾವಿಹಿತಂ ಶಕ್ಯಂ ದಕ್ಷೇಣಾಪೀಹಿತುಂ ಧನಮ್ ।
ಯುಕ್ತೇನ ಶ್ರದ್ಧಯಾ ಸಮ್ಯಗೀಹಾಂ ಸಮನುತಿಷ್ಠತಾ ॥೯॥

"ಮನುಷ್ಯನು ಎಷ್ಟೇ ಚತುರನಾಗಿದ್ದರೂ, ಧನವನ್ನು ಸಂಪಾದಿಸುವ ಆಶೆಯಿಂದ ಅವನು ಎಷ್ಟೇ ಶ್ರದ್ಧೆಯಿಂದ ಪ್ರಯತ್ನಿಸಿದರೂ ದೈವದಿಂದ ಕೊಡಲ್ಪಡದ ಹಣವನ್ನು ಸಂಪಾದಿಸಲಾರನು.

ಕೃತಸ್ಯ ಪೂರ್ವಂ ಚಾನರ್ಥೈರ್ಯುಕ್ತಸ್ಯಾಪ್ಯನುತಿಷ್ಠತಃ ।
ಇಮಂ ಪಶ್ಯತ ಸಂಗತ್ಯಾ ಮಮ ದೈವಮುಪಪ್ಲವಮ್ ॥೧೦॥

ಹಿಂದೆ ನಾನು ಅರ್ಥಸಂಪಾದನೆಗಾಗಿ ಅನೇಕ ರೀತಿಗಳಲ್ಲಿ ಪ್ರಯತ್ನಿಸಿ ದೆನು. ಆದರೆ ನನ್ನ ಪ್ರಯತ್ನಗಳೆಲ್ಲವೂ ಅನರ್ಥದಲ್ಲಿಯೇ ಪರ್ಯವಸಾನ ಹೊಂದಿದುವು. ಆದರೂ ನಾನು ನಿರಾಶನಾಗದೇ ಧನಾರ್ಜನೆಯ ಪ್ರಯತ್ನ ವನ್ನು ಮುಂದುವರಿಸುತ್ತಲೇ ಇದ್ದೇನೆ. ಆದರೆ ಧನಸಂಪಾದನೆಗೆಂದು ತಂದ ಈ ಹೋರಿಗಳ ಸಹವಾಸದಿಂದ ನನಗಾದ ದೈವದ ಉಪದ್ರವವನ್ನಾದರೂ ನೋಡಿರಿ!

ಉದ್ಯಮ್ಯೋದ್ಯಮ್ಯ ಮೇ ದಮ್ಯೌ ವಿಷಮೇಣೈವ ಗಚ್ಛತಃ ।
ಉತ್ಕ್ಷಿಪ್ಯ ಕಾಕತಾಲೀಯಮುತ್ಪಥೇನೈವ ಧಾವತಃ ॥೧೧॥
ಮಣೀವೋಷ್ಟ್ರಸ್ಯ ಲಮ್ಬೇತೇ ಪ್ರಿಯೌ ವತ್ಸತರೌ ಮಮ ।
ಶುದ್ಧಂ ಹಿ ದೈವಮೇವೇದಂ ಹಠೇನೈವಾಸ್ತಿ ಪೌರುಷಮ್ ॥೧೨॥

ನಾನು ಪಳಗಿಸಬೇಕಾಗಿದ್ದ ಹೋರಿಗಳನ್ನು ಒಂಟೆಯು ಮೇಲಕ್ಕೆತ್ತಿಕೊಂಡು ಹಳ್ಳ-ತಿಟ್ಟಾಗಿರುವ ಮಾರ್ಗದಲ್ಲಿಯೇ ಹೋಗುತ್ತಿದೆ. ಕಾಕತಾಳೀಯನ್ಯಾಯದಂತೆ* ಹಾದಿಯಲ್ಲಿದ್ದ ಒಂಟೆಯನ್ನು ಮಧ್ಯದಲ್ಲಿ ಬಿಟ್ಟುಕೊಂಡು ನನ್ನ ಹೋರಿಗಳು ಮುನ್ನಡೆದುವು. ಒಡನೆಯೇ ಒಂಟೆಯು ಮೇಲೆದ್ದು ತನ್ನ ಕುತ್ತಿಗೆಯ ಬಳಿಗೆ ಬಂದ ನೊಗವನ್ನು ಮೇಲೆತ್ತಿ ನೊಗದೊಡನೆ ಎರಡು ಹೋರಿಗಳನ್ನೂ ಎತ್ತಿಕೊಂಡು ದಾರಿಯನ್ನು ಬಿಟ್ಟು ಮನಸ್ಸಿಗೆ ಬಂದಂತೆ ಓಡುತ್ತಿದೆ. ನನ್ನ ಅತ್ಯಂತ ಪ್ರಿಯಕರವಾದ ಹೋರಿಗಳು ಒಂಟೆಯ ಎರಡು ಕಿವಿಗಳಲ್ಲಿರುವ ಮಣಿಗಳಂತೆಯೇ ನೇತಾಡುತ್ತಿವೆ. ಇದು ನಿಶ್ಚಯವಾಗಿಯೂ ದೈವದ ಲೀಲೆಯೇ ಸರಿ. ಆದುದರಿಂದ ಹಠ ಪೂರ್ವಕವಾಗಿ ಮಾಡುವ ಪುರುಷಪ್ರಯತ್ನದಲ್ಲಿ ಯಾವ ಪ್ರಯೋಜನವೂ ಇಲ್ಲ.

ಯದಿ ವಾಪ್ಯುಪಪದ್ಯೇತ ಪೌರುಷಂ ನಾಮ ಕರ್ಹಿಚಿತ್ ।
ಅನ್ವಿಷ್ಯಮಾಣಂ ತದಪಿ ದೈವಮೇವಾವತಿಷ್ಠತೇ ॥೧೩॥

ಯಾವಾಗಲಾದರೊಮ್ಮೆ ಪುರುಷಪ್ರಯತ್ನವು ಸಫಲವಾದಂತೆ ಕಂಡುಬಂದರೂ ಫಲಿತಾಂಶದ ಕಾರಣವನ್ನು ಸಂಪೂರ್ಣವಾಗಿ ವಿವೇಚಿಸಿದ್ದೇ ಆದರೆ–ಅಲ್ಲಿಯೂ ದೈವದ ಸಹಯೋಗವಿರುವುದೇ ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ.

ತಸ್ಮಾನ್ನಿರ್ವೇದ ಏವೇಹ ಗನ್ತವ್ಯಃ ಸುಖಮಿಚ್ಛತಾ ।
ಸುಖಂ ಸ್ವಪಿತಿ ನಿರ್ವಿಣ್ಣೋ ನಿರಾಶಶ್ಚಾರ್ಥಸಾಧನೇ ॥೧೪॥

ಆದುದರಿಂದ ಸುಖವಾಗಿರಬೇಕೆಂಬ ಇಚ್ಛೆಯುಳ್ಳ ಮನುಷ್ಯನು ಧನಾದಿಗಳಿಂದ ವಿರಕ್ತಿಯನ್ನು ಹೊಂದಬೇಕು. ಧನೋಪಾರ್ಜನೆಯ ಪ್ರಯತ್ನಗಳಲ್ಲಿ ನಿರಾಶನಾಗಿ ಧನದ ವಿಷಯದಲ್ಲಿ ವಿರಕ್ತಿಯನ್ನು ಹೊಂದುವವನು ಸುಖವಾಗಿ ಮಲಗಿ ನಿದ್ರಿಸುತ್ತಾನೆ.

---

* ಕಾಕತಾಳೀಯನ್ಯಾಯ : ಒಂದು ತಾಳೆಯ ಮರದ ಕೆಳಗೆ ಪಥಿಕನು ಕುಳಿತಿರುತ್ತಾನೆ. ಕಾಗೆಯು ಎತ್ತಲಿಂದಲೋ ಬಂದು ಆ ವೃಕ್ಷದ ಮೇಲೆ ಕುಳಿತುಕೊಳ್ಳುತ್ತದೆ. ಅದು ಕುಳಿತುಕೊಳ್ಳುತ್ತಿದ್ದಂತೆಯೇ ಮಾಗಿದ ಒಂದು ತಾಳೇಹಣ್ಣು ಕೆಳಕ್ಕೆ ಬೀಳು ತ್ತದೆ. ಕಾಗೆಯು ಬರುವುದಕ್ಕೂ ಹಣ್ಣು ಬೀಳುವುದಕ್ಕೂ ಸರಿಹೋಗುತ್ತದೆ. ಪಥಿಕನು

ಎಲ್ಲ ಬಂಧನಗಳಿಂದಲೂ ಮುಕ್ತನಾದ ಶುಕದೇವಮುನಿಯು ತಂದೆಯವರಾದ ವ್ಯಾಸರ ಆಶ್ರಮದಿಂದ ಮಹಾರಣ್ಯಕ್ಕೆ ಹೋಗುವ ಸಮಯದಲ್ಲಿ ಈ ವಿಷಯವನ್ನೇ ಬಹಳ ಚೆನ್ನಾಗಿ ಪ್ರತಿಪಾದಿಸಿರುವನು :

ಯಃ ಕಾಮಾನಾಪ್ನುಯಾತ್ಸರ್ವಾನ್ಯಶ್ಚೈತಾನ್ಕೇವಲಾಂಸ್ತ್ಯಜೇತ್ ।
ಪ್ರಾಪಣಾತ್ಸರ್ವಕಾಮಾನಾಂ ಪರಿತ್ಯಾಗೋ ವಿಶಿಷ್ಯತೇ ॥೧೬॥

ನಾನ್ತಂ ಸರ್ವವಿಧಿತ್ಸಾನಾಂ ಗತಪೂರ್ವೋಽಸ್ತಿ ಕಶ್ಚನ ।
ಶರೀರೇ ಜೀವಿತೇ ಚೈವ ತೃಷ್ಣಾ ಮನ್ದಸ್ಯ ವರ್ಧತೇ ॥೧೭॥

'ಒಬ್ಬನು ಪ್ರಯತ್ನಮಾಡಿ ಎಲ್ಲ ಕಾಮನೆಗಳನ್ನೂ ಪಡೆದುಕೊಳ್ಳಬಹುದು. ಮತ್ತೊಬ್ಬನು ತನ್ನ ಕಾಮನೆಗಳೆಲ್ಲವನ್ನೂ ಪರಿತ್ಯಾಗಮಾಡಬಹುದು. ಈ ಎರಡರಲ್ಲಿ ಕಾಮನೆಗಳನ್ನು ಹೊಂದುವುದಕ್ಕಿಂತಲೂ ಸರ್ವ ಕಾಮನೆಗಳನ್ನೂ ಪರಿತ್ಯಾಗಮಾಡುವುದೇ ಶ್ರೇಷ್ಠವಾದುದು.

ಸಕಲವಿಧವಾದ ಕಾಮನೆಗಳ ಮತ್ತು ಕಾಮನೆಗಳ ಪೂರ್ತಿಗಾಗಿ ಮಾಡುವ ಪ್ರಯತ್ನಗಳ ಅಂತವನ್ನು (ಪರ್ಯಾಪ್ತಿಯನ್ನು) ಹೊಂದಿರುವವನು ಯಾವನೊಬ್ಬನೂ ಇರುವುದಿಲ್ಲ. ಮೂರ್ಖನಾದವನಿಗೆ ಯಾವಾಗಲೂ ಶರೀರದಲ್ಲಿ ಮತ್ತು ಜೀವಿತದಲ್ಲಿ ತೃಷ್ಣೆಯು ಅಧಿಕಗೊಳ್ಳುತ್ತಿರುತ್ತದೆ.”

ಮಂಕಿಯು ಹೇಳುತ್ತಾನೆ :

ನಿವರ್ತಸ್ವ ವಿಧಿತ್ಸಾಭ್ಯಃ ಶಾಮ್ಯ ನಿರ್ವಿದ್ಯ ಕಾಮುಕ ।
ಅಸಕೃಚ್ಚಾಪಿ ನಿಕೃತೋ ನ ಚ ನಿರ್ವಿದ್ಯಸೇ ತತಃ ॥೧೮॥

“ಕಾಮಾದಿಗಳಿಗೆ ದಾಸನಾಗಿರುವ ಮನಸ್ಸೇ! ಸಕಲವಿಧವಾದ ಕಾಮನೆಗಳಿಂದಲೂ ವಿರತನಾಗು. ವೈರಾಗ್ಯವನ್ನು ಹೊಂದಿ ಶಾಂತಿಯನ್ನು ಹೊಂದು. ನೀನು ಧನಸಂಗ್ರಹಕ್ಕೆ ಪ್ರಯತ್ನಪಟ್ಟು ಹಲವು ಬಾರಿ ವಂಚಿತನಾಗಿರುವೆ. ಹೀಗಿದ್ದರೂ ನಿನಗೆ ವೈರಾಗ್ಯವು ಬಂದಿರುವುದಿಲ್ಲ. ಧನಸಂಗ್ರಹದ ಪ್ರಯತ್ನವನ್ನು ಮಾತ್ರ ಮುಂದುವರಿಸುತ್ತಲೇ ಇರುವೆ.

ಕಾಗೆಯು ಕುಳಿತುದರಿಂದಲೇ ಹಣ್ಣು ಬಿದ್ದಿತೆಂದು ತಿಳಿಯುತ್ತಾನೆ. ಇದಕ್ಕೆ ಕಾಕತಾಳೀಯನ್ಯಾಯವೆಂದು ಹೆಸರು. ಅನಿರೀಕ್ಷಿತವಾಗಿ ಸಂಭವಿಸಬಹುದಾದ ಕಾರ್ಯದ ಫಲ. ನಿರೀಕ್ಷೆಯಿಲ್ಲದೇ ಅಕಸ್ಮಾತ್ತಾಗಿ ನಡೆಯುವ ಕಾರ್ಯದ ಬಗೆಗೆ ಒಂದು ನ್ಯಾಯ.

ಯದಿ ನಾಹಂ ವಿನಾಶ್ಯಸ್ತೇ ಯದ್ಯೇವಂ ರಮಸೇ ಮಯಾ ।
ಮಾ ಮಾಂ ಯೋಜಯ ಲೋಭೇನ ವೃಥಾ ತ್ವಂ ವಿತ್ತಕಾಮುಕ ॥

ವಿತ್ತಕಾಮುಕವಾದ ಮನಸ್ಸೇ! ನನ್ನನ್ನು ನಾಶಪಡಿಸುವ ಅಭಿಲಾಷೆಯು ನಿನಗಿಲ್ಲದಿದ್ದರೆ–ನನ್ನೊಡನೆ ಆನಂದವಾಗಿರಲು ಇಚ್ಛಿಸುವವನಾಗಿದ್ದರೆ–ನನ್ನನ್ನು ವೃಥಾ ಲೋಭದೊಡನೆ ಯೋಜಿಸಬೇಡ. (ನನ್ನನ್ನು ಲೋಭಿಯನ್ನಾಗಿ ಮಾಡಬೇಡ.)

ಸಂಚಿತಂ ಸಂಚಿತಂ ದ್ರವ್ಯಂ ನಷ್ಟಂ ತವ ಪುನಃ ಪುನಃ ।
ಕದಾಚಿನ್ಮೋಕ್ಷ್ಯಸೇ ಮೂಢ ಧನೇಹಾಂ ಧನಕಾಮುಕ ॥೨೦॥

ಧನಕಾಮನೆಯಿಂದ ಕೂಡಿರುವ ಮನಸ್ಸೇ! ನೀನು ಪದೇ-ಪದೇ ಧನಸಂಗ್ರಹವನ್ನು ಮಾಡುತ್ತಲೇ ಇರುವೆ. ಹಾಗೆಯೇ ನೀನು ಸಂಗ್ರಹಿಸಿದ ಧನವೂ ಪುನಃ ಪುನಃ ನಷ್ಟವಾಗುತ್ತಲೇ ಇದೆ. ಓ ಮೂಢಮನಸ್ಸೇ! ಈಗಲಾದರೂ ಈ ಧನದಾಹವನ್ನು ಪರಿತ್ಯಜಿಸುವೆಯಾ?

ಅಹೋ ನು ಮಮ ಬಾಲಿಶ್ಯಂ ಯೋಽಹಂ ಕ್ರೀಡನಕಸ್ತವ ।
ಕಿಂ ನೈವಂ ಜಾತು ಪುರುಷಃ ಪರೇಷಾಂ ಪ್ರೇಷ್ಯತಾಮಿಯಾತ್ ॥೨೧॥

ಅಯ್ಯೋ! ನಿಶ್ಚಯವಾಗಿಯೂ ನನ್ನದು ಇದೆಂತಹ ಮೂರ್ಖತನ! ಓ ಮನಸ್ಸೇ! ನೀನು ನನ್ನನ್ನು ಆಟದ ಗೊಂಬೆಯನ್ನಾಗಿ ಮಾಡಿಕೊಂಡಿರುವೆ. ತಕ-ತಕನೆ ಕುಣಿಸುವೆ. ಹೀಗಲ್ಲದಿದ್ದರೆ ವಿವೇಕಿಯಾದ ಪುರುಷನು ಯಾವಾಗಲಾದರೂ ಇತರರಿಗೆ ದಾಸನಾಗುತ್ತಿದ್ದನೇ?

ನ ಪೂರ್ವೇ ನಾಪರೇ ಜಾತು ಕಾಮಾನಾಮನ್ತಮಾಪ್ನುವನ್ ।
ತ್ಯಕ್ತ್ವಾ ಸರ್ವಸಮಾರಮ್ಭಾನ್ಪ್ರತಿಬುದ್ಧೋಽಸ್ಮಿ ಜಾಗೃಮಿ ॥೨೨॥

ಹಿಂದಿನ ಕಾಲದವರಾಗಲೀ, ಇಂದಿನವರಾಗಲೀ–ಯಾರೂ ಯಾವಾಗಲೂ ಕಾಮನೆಗಳಿಗೆ ಕೊನೆಯೆಂಬುದನ್ನು ಕಂಡುದೇ ಇಲ್ಲ. ಇದುವರೆಗೆ ಯಾರೂ ಕಾಮದಿಂದ ಪೂರ್ಣವಾದ ತೃಪ್ತಿಯನ್ನು ಹೊಂದಿಲ್ಲ. ಕಾಮನೆಗಳನ್ನು ಉಪಭೋಗಿಸುತ್ತಿದ್ದರೆ ಮತ್ತೂ ಉಪಭೋಗಿಸಬೇಕೆಂಬ ಆಶೆಯು ಹೆಚ್ಚುತ್ತಲೇ ಇರುತ್ತದೆ. ಆದುದರಿಂದ ನಾನು ಸಕಲವಾದ ವ್ಯವಹಾರ

ಗಳನ್ನೂ ಪರಿತ್ಯಜಿಸಿ ಎಚ್ಚರಗೊಂಡಿದ್ದೇನೆ ಮತ್ತು ಪುನಃ ಪುನಃ ಆಸೆಯು ತಲೆದೋರದಂತೆ ಜಾಗರೂಕನಾಗಿಯೂ ಇದ್ದೇನೆ.

ನೂನಂ ತೇ ಹೃದಯಂ ಕಾಮ ವಜ್ರಸಾರಮಯಂ ದೃಢಮ್ ।
ಯದನರ್ಥಶತಾವಿಷ್ಟಂ ಶತಧಾ ನ ವಿದೀರ್ಯತೇ ॥೨೩॥

ಕಾಮನೇ! ನಿಶ್ಚಯವಾಗಿಯೂ ನಿನ್ನ ಹೃದಯವು ವಜ್ರದ ಸಾರ ದಿಂದಲೇ ಮಾಡಲ್ಪಟ್ಟಿದೆ. ಅಷ್ಟು ದೃಢವಾಗಿದೆ. ಏಕೆಂದರೆ : ನಿನ್ನ ಹೃದಯವು ನೂರಾರು ಅನರ್ಥಪರಂಪರೆಗಳಿಂದ ಆವಿಷ್ಟವಾಗಿದ್ದರೂ ನೂರಾರು ಚೂರುಗಳಾಗಿ ಸೀಳಿಹೋಗಿಲ್ಲ. (ನೂರಾರು ಅನರ್ಥಪರಂಪರೆಗಳೇ ನಿನ್ನನ್ನು ಎದುರಿಸಿ ಬಂದರೂ ನೀನು ಎದೆಗುಂದದೇ ನಿನ್ನ ಪ್ರಭಾವವನ್ನು ಹೆಚ್ಚಿಸಿಕೊಂಡೇ ಹೋಗುತ್ತಿರುವೆ.)

ಜಾನಾಮಿ ಕಾಮ ತ್ವಾಂ ಚೈವ ಯಚ್ಚ ಕಿಂಚಿತ್ಪ್ರಿಯಂ ತವ ।
ತವಾಹಂ ಪ್ರಿಯಮನ್ವಿಚ್ಛನ್ನಾತ್ಮನ್ಯುಪಲಭೇ ಸುಖಮ್ ॥೨೪॥

ಕಾಮನೇ! ನಾನು ನಿನ್ನ ಸ್ವರೂಪವನ್ನೂ ತಿಳಿದಿದ್ದೇನೆ. ನಿನಗೆ ಯಾವುದರಿಂದ ಸಂತೋಷವಾಗುವುದೆಂಬುದನ್ನೂ ತಿಳಿದಿದ್ದೇನೆ. ಬಹಳ ಕಾಲದಿಂದ ನಿನಗೆ ಪ್ರಿಯವನ್ನುಂಟುಮಾಡಲು ಪ್ರಯತ್ನಿಸುತ್ತಲೇ ಇದ್ದೇನೆ. ಆದರೆ ನನ್ನ ಮನಸ್ಸಿಗೆ ಇದುವರೆಗೂ ಯಾವಾಗಲೂ ಸುಖಾನುಭವವೇ ಆಗಿಲ್ಲ.

ಕಾಮ ಜಾನಾಮಿ ತೇ ಮೂಲಂ ಸಂಕಲ್ಪಾತ್ಕಿಲ ಜಾಯಸೇ ।
ನ ತ್ವಾಂ ಸಂಕಲ್ಪಯಿಷ್ಯಾಮಿ ಸಮೂಲೋ ನ ಭವಿಷ್ಯಸಿ ॥೨೫॥

ಕಾಮನೇ! ನಿನ್ನ ಮೂಲವು ಯಾವುದೆಂಬುದನ್ನು ತಿಳಿದಿರುತ್ತೇನೆ. ಸಂಕಲ್ಪದಿಂದಲ್ಲವೇ ನೀನು ಹುಟ್ಟುವುದು? ನಾನಿನ್ನು ನಿನ್ನ ವಿಷಯದಲ್ಲಿ ಸಂಕಲ್ಪವನ್ನೇ ಮಾಡುವುದಿಲ್ಲ. ಅದರಿಂದ ನೀನು ಸಮೂಲವಾಗಿಯೇ ನಾಶಹೊಂದುವೆ.

ಈಹಾ ಧನಸ್ಯ ನ ಸುಖಾ ಲಬ್ಧ್ವಾ ಚಿನ್ತಾ ಚ ಭೂಯಸೀ ।
ಲಬ್ಧನಾಶೇ ಯಥಾಮೃತ್ಯುರ್ಲಬ್ಧಂ ಭವತಿ ವಾ ನ ವಾ ॥೨೬॥

ಧನವನ್ನು ಇಚ್ಛಿಸುವುದಾಗಲೀ, ಧನಸಂಗ್ರಹಕ್ಕಾಗಿ ಪ್ರಯತ್ನಿಸುವು

ದಾಗಲೀ–ಸುಖಕರವಲ್ಲ. ಮಾಡಿದ ಪ್ರಯತ್ನದಿಂದ ಧನವೇನಾದರೂ ಸಂಗ್ರಹವಾದರೆ ಅದರ ರಕ್ಷಣೆಯ ಚಿಂತೆಯು ಬಹಳವಾಗುತ್ತದೆ. ಸಂಗ್ರಹ ವಾದ ಧನವೇನಾದರೂ ನಷ್ಟವಾಗಿಬಿಟ್ಟರೆ ಸಾವನ್ನಪ್ಪಿದಷ್ಟೇ ಸಂಕಟವಾಗು ತ್ತದೆ. ಬಹಳವಾಗಿ ಪ್ರಯತ್ನಿಸಿದರೂ ಧನವು ಲಭಿಸಿದರೂ ಲಭಿಸ ಬಹುದು ; ಲಭಿಸದೆಯೂ ಇರಬಹುದು.

ಪರಿತ್ಯಾಗೇ ನ ಲಭತೇ ತತೋ ದುಃಖತರಂ ನು ಕಿಮ್ ।
ನ ಚ ತುಷ್ಯತಿ ಲಬ್ಧೇನ ಭೂಯ ಏವ ಚ ಮಾರ್ಗತಿ ॥೨೭॥

ಶರೀರವನ್ನೇ ತ್ಯಾಗಮಾಡಿದರೂ (ಪರಾಧೀನಮಾಡಿದರೂ) ಧನವು ಲಭಿಸಲಾರದೆಂದರೆ–ಅದಕ್ಕಿಂತಲೂ ದುಃಖತರವಾದುದು ಯಾವುದಿದೆ? ಆದರೆ ಸಿಕ್ಕಿದಷ್ಟರಿಂದಲೇ ಕಾಮಪೂರಿತವಾದ ಮನಸ್ಸು ತುಷ್ಟವಾಗುವುದಿಲ್ಲ ಪುನಃ ಅಧಿಕವಾದ ಧನಸಂಗ್ರಹಣಕ್ಕಾಗಿ ಮಾರ್ಗವನ್ನು ಹುಡುಕುತ್ತಲೇ ಇರುತ್ತದೆ.

ಅನುತರ್ಷುಲ ಏವಾರ್ಥಃ ಸ್ವಾದು ಗಾಙ್ಗಮಿವೋದಕಮ್ ।
ಮದ್ವಿಲಾಪನಮೇತತ್ತು ಪ್ರತಿಬುದ್ಧೋಽಸ್ಮಿ ಸಂತ್ಯಜ ॥೨೯॥

ಕಾಮನೇ! ರುಚಿಕರವಾದ ಗಂಗಾಜಲದಂತೆ ಅರ್ಥವು ಈ ಧನತೃಷ್ಣೆ ಯನ್ನು ನಿಜವಾಗಿಯೂ ವೃದ್ಧಿಗೊಳಿಸುತ್ತದೆ. ತೃಷ್ಣೆಯ ವೃದ್ಧಿಯು ನನ್ನ ವಿನಾಶಕ್ಕೇ ಕಾರಣವಾಗುವುದೆಂಬುದನ್ನು ನಾನು ಚೆನ್ನಾಗಿ ತಿಳಿದಿರುತ್ತೇನೆ. ಆದುದರಿಂದ ನನ್ನನ್ನು ತ್ಯಜಿಸಿ ಹೊರಟುಹೋಗು.

ಯ ಇಮಂ ಮಾಮಕಂ ದೇಹಂ ಭೂತಗ್ರಾಮಃ ಸಮಾಶ್ರಿತಃ ।
ಸ ಯಾತ್ವಿತೋ ಯಥಾಕಾಮಂ ವಸತಾಂ ವಾ ಯಥಾಸುಖಮ್ ॥

ಪಂಚಭೂತಗಳೂ ಈ ನನ್ನ ದೇಹವನ್ನು ಆಶ್ರಯಿಸಿಕೊಂಡಿವೆ. ಆ ಪಂಚಭೂತಗಳು ಇಚ್ಛೆಬಂದೆಡೆಗೆ ಸುಖವಾಗಿ ಈ ದೇಹವನ್ನು ಬಿಟ್ಟು ಹೊರಟುಹೋಗಲಿ. ಅಥವಾ ಈ ನನ್ನ ದೇಹದಲ್ಲಿಯೇ ಸುಖವಾಗಿ ವಾಸ ಮಾಡಿಕೊಂಡಿರಲಿ. ನನಗೆ ಅವುಗಳಲ್ಲಿ ಆಸೆ-ಆಸಕ್ತಿಗಳಿಲ್ಲ.

ನ ಯುಷ್ಮಾಸ್ವಿಹ ಮೇ ಪ್ರೀತಿಃ ಕಾಮಲೋಭಾನುಸಾರಿಷು ।
ತಸ್ಮಾದುತ್ಸೃಜ್ಯ ಕಾಮಾನ್ವೈ ಸತ್ತ್ವಮೇವಾಶ್ರಯಾಮ್ಯಹಮ್ ॥೩೦॥

ಪಂಚಭೂತಗಣಗಳೇ! ನಿಮ್ಮಮೇಲೂ ನನಗೆ ಪ್ರೀತಿಯಿಲ್ಲ. ಏಕೆಂದರೆ : ನೀವೆಲ್ಲರೂ ಕಾಮ-ಲೋಭಗಳನ್ನೇ ಅನುಸರಿಸಿ ಹೋಗುವಿರಿ. ಆದುದರಿಂದ ನಾನು ಸಕಲಕಾಮನೆಗಳನ್ನೂ ಸಂಪೂರ್ಣವಾಗಿ ತ್ಯಜಿಸಿ ಸತ್ತ್ವ ಗುಣವನ್ನೇ ಆಶ್ರಯಿಸುತ್ತೇನೆ.

ಸರ್ವಭೂತಾನ್ಯಹಂ ದೇಹೇ ಪಶ್ಯನ್ಮನಸಿ ಚಾತ್ಮನಃ ।
ಯೋಗೇ ಬುದ್ಧಿಂ ಶ್ರುತೇ ಸತ್ತ್ವಂ ಮನೋ ಬ್ರಹ್ಮಣಿ ಧಾರಯನ್ ॥

ವಿಹರಿಷ್ಯಾಮ್ಯನಾಸಕ್ತಃ ಸುಖೀ ಲೋಕಾನ್ನಿರಾಮಯಃ ।
ಯಯಾ ಮಾಂ ತ್ವಂ ಪುನರ್ನೈವಂ ದುಃಖೇಷು ಪ್ರಣಿಧಾಸ್ಯಸಿ ॥೩೨॥

ನಾನು ನನ್ನ ಶರೀರದಲ್ಲಿ ಮತ್ತು ಶರೀರಾಂತರ್ಗತವಾಗಿರುವ ಮನಸ್ಸಿನಲ್ಲಿ ಸಂಪೂರ್ಣಜೀವಿಗಳ ಸಮೂಹವನ್ನೂ ನೋಡುತ್ತಾ (ಸರ್ವಪ್ರಾಣಿಗಳನ್ನೂ ಸಮಭಾವದಿಂದ ಕಾಣುತ್ತಾ) ಯೋಗದಲ್ಲಿ ಬುದ್ಧಿಯನ್ನು ನಿಯೋಜಿಸಿ, ಶ್ರವಣ-ಮನನಾದಿಗಳಲ್ಲಿ ಏಕಾಗ್ರತೆಯನ್ನು ಹೊಂದಿದವನಾಗಿ, ಮನಸ್ಸನ್ನು ಬ್ರಹ್ಮದಲ್ಲಿ ಲೀನಗೊಳಿಸಿ, ಅನಾಸಕ್ತನಾಗಿ, ನೀರೋಗನಾಗಿ (ರಾಗ-ದ್ವೇಷಗಳಿಂದ ರಹಿತನಾಗಿ), ಸುಖಿಯಾಗಿ ಲೋಕಗಳಲ್ಲಿ ಸಂಚರಿಸುತ್ತೇನೆ. ಹೀಗೆ ಮಾಡುವುದರಿಂದ ನೀನು ಪುನಃ ನನ್ನನ್ನು ದುಃಖದಲ್ಲಿ ಮುಳುಗಿಸಲಾರೆ.

ತ್ವಯಾ ಹಿ ಮೇ ಪ್ರಣುನ್ನಸ್ಯ ಗತಿರನ್ಯಾ ನ ವಿದ್ಯತೇ ।
ತೃಷ್ಣಾಶೋಕಶ್ರಮಾಣಾಂ ಹಿ ತ್ವಂ ಕಾಮ ಪ್ರಭವಃ ಸದಾ ॥೩೩॥

ಕಾಮನೇ! ತೃಷ್ಣೆ, ಶೋಕ ಮತ್ತು ಪರಿಶ್ರಮಗಳಿಗೆ ನೀನು ಉತ್ಪತ್ತಿ ಸ್ಥಾನವಾಗಿರುವೆ. ಎಲ್ಲಿಯವರೆಗೆ ನಾನು ನಿನ್ನಿಂದ ಒಯ್ಯಲ್ಪಡುತ್ತಿರುವೆನೋ ಅಲ್ಲಿಯವರೆಗೂ (ನೀನು ಹೇಳಿದಂತೆ ಕೇಳಿಕೊಂಡು ನಿನ್ನ ದಾಸನಾಗಿರುವುದರ ಹೊರತಾಗಿ) ನನಗೆ ಬೇರೆ ಗತಿಯೇ ಇರುವುದಿಲ್ಲ.

ಧನನಾಶೇಽಧಿಕಂ ದುಃಖಂ ಮನ್ಯೇ ಸರ್ವಮಹತ್ತರಮ್ ।
ಜ್ಞಾತಯೋ ಹ್ಯವಮನ್ಯಂತೇ ಮಿತ್ರಾಣಿ ಚ ಧನಾಚ್ಚ್ಯುತಮ್ ॥೩೪॥

ಧನವನ್ನು ಸಂಪಾದಿಸುವಾಗ ಆಗುವ ದುಃಖಕ್ಕಿಂತಲೂ ಧನವು ನಷ್ಟವಾದಾಗ ಆಗುವ ದುಃಖವು ಅತ್ಯಂತಮಹತ್ತರವಾದುದು ಮತ್ತು ಅಧಿಕ

ವಾದುದೆಂದು ನಾನು ಭಾವಿಸುತ್ತೇನೆ. ಹಣವನ್ನು ಕಳೆದುಕೊಂಡವನನ್ನು ಜ್ಞಾತಿ-ಬಾಂಧವರೂ ಮತ್ತು ಮಿತ್ರರೂ ತಿರಸ್ಕರಿಸುತ್ತಾರೆ.

ಅವಜ್ಞಾನಸಹಸ್ರೈಸ್ತು ದೋಷಾಃ ಕಷ್ಟತರಾಧನೇ ।
ಧನೇ ಸುಖಕಲಾ ಯಾ ತು ಸಾಪಿ ದುಃಖೈರ್ವಿಧೀಯತೇ ॥೩೫॥

ದರಿದ್ರನಾದವನು ಸಾವಿರಾರು ಜನರ ತಿರಸ್ಕಾರಗಳನ್ನು ಸಹಿಸಿಕೊಳ್ಳ ಬೇಕಾಗುತ್ತದೆ. ಆದುದರಿಂದ ದಾರಿದ್ರ್ಯದಲ್ಲಿ (ಬಡವನಲ್ಲಿ) ಕಷ್ಟದಾಯಕ ವಾದ ಅನೇಕ ದೋಷಗಳಿರುವುದೇನೋ ನಿಜ. ಆದರೆ ಧನದಲ್ಲಿ ಸುಖ ಲೇಶವು ಕಂಡರೂ ಆ ಸುಖವು ಕೂಡ ಅನೇಕ ದುಃಖ-ಕಷ್ಟಗಳಿಂದಲೇ ಸಾಧಿಸಲ್ಪಡುತ್ತದೆ. (ಬಹಳವಾಗಿ ಕಷ್ಟಪಟ್ಟರೆ ಧನವನ್ನು ಸಂಗ್ರಹಿಸಬಹುದು. ಅಷ್ಟೊಂದು ಕಷ್ಟಗಳ ಹಿನ್ನೆಲೆಯಲ್ಲಿ ಲೇಶಮಾತ್ರವೇ ಸುಖವುಂಟಾಗುತ್ತದೆ.)

ಧನಮಸ್ಯೇತಿ ಪುರುಷಂ ಪುರೋ ನಿಘ್ನನ್ತಿ ದಸ್ಯವಃ ।
ಕ್ಲಿಶ್ಯನ್ತಿ ವಿವಿಧೈರ್ದಣ್ಡೈರ್ನಿತ್ಯಮುದ್ವೇಜಯನ್ತಿ ಚ ॥೩೬॥

ಒಬ್ಬನ ಬಳಿಯಲ್ಲಿ ಹಣವಿರುವುದೆಂದು ಸುಳಿವು ತಿಳಿದೊಡನೆಯೇ ಅವನ ಬಳಿಯಲ್ಲಿರುವ ಹಣವನ್ನು ಕೊಳ್ಳೆಹೊಡೆಯುವುದಕ್ಕಾಗಿ ದರೋಡೆ ಗಾರರು ಆ ಮನುಷ್ಯನನ್ನು ಪೀಡಿಸುತ್ತಾರೆ. ಕೆಲವೊಮ್ಮೆ ಕೊಲೆಯನ್ನೂ ಮಾಡುತ್ತಾರೆ. ಅಥವಾ ವಿಧ-ವಿಧವಾದ ಹಿಂಸೆಗಳನ್ನು ಕೊಡುತ್ತಾ ನಿತ್ಯವೂ ಆ ಧನಿಕನು ಉದ್ವಿಗ್ನನಾಗುವಂತೆ ಮಾಡುತ್ತಾರೆ. (ಧನಿಕನಿಗೆ ನಿರಾಳ ವಾಗಿರಲಂತೂ ಅವಕಾಶವನ್ನೇ ಕೊಡುವುದಿಲ್ಲ.)

ಅರ್ಥಲೋಲುಪತಾ ದುಃಖಮಿತಿ ಬುದ್ಧಂ ಚಿರಾನ್ಮಯಾ ।
ಯದ್ಯದಾಲಮ್ಬಸೇ ಕಾಮ ತತ್ತದೇವಾನುರುಧ್ಯಸೇ ॥೩೭॥

ಕಾಮನೇ! ಅರ್ಥಲೋಲುಪತೆಯು ದುಃಖಕ್ಕೆ ಕಾರಣವಾಗುವು ದೆಂಬುದು ನನಗೆ ಬಹಳ ಕಾಲದ ಮೇಲೆ ತಿಳಿಯಿತು. ನೀನು ಯಾವು-ಯಾವುದನ್ನು ಆಶ್ರಯಿಸುವೆಯೋ–ಅವುಗಳನ್ನೇ ಅನುಸರಿಸುವೆ. (ನೀನು ಆಶ್ರಯಿಸಿದುದನ್ನು (ಅಪೇಕ್ಷಿಸಿದುದನ್ನು) ಪಡೆದುಕೊಳ್ಳಲು ನನ್ನನ್ನು ಪ್ರೇರಿಸುವೆ.)

ಅತತ್ತ್ವಜ್ಞೋಽಸಿ ಬಾಲಶ್ಚ ದುಸ್ತೋಷೋಽಪೂರಣೋಽನಲಃ ।
ನೈವ ತ್ವಂ ವೇತ್ಥ ಸುಲಭಂ ನೈವ ತ್ವಂ ವೇತ್ಥ ದುರ್ಲಭಮ್ ॥೩೮॥

ಕಾಮನೇ! ನೀನು ತತ್ತ್ವಜ್ಞಾನದಿಂದ ರಹಿತನಾಗಿರುವೆ. ಬಾಲ ಬುದ್ಧಿಯವನಾಗಿರುವೆ. (ಮೂಢನಾಗಿರುವೆ.) ನಿನ್ನನ್ನು ಸಂತೋಷಗೊಳಿಸುವುದು ದುಸ್ತರ. ನೀನು ಅಗ್ನಿಯಂತೆ. ನಿನ್ನ ಹೊಟ್ಟೆಯನ್ನು ತುಂಬಿಸಲು ಸಾಧ್ಯವಾಗುವುದೇ ಇಲ್ಲ. ಯಾವ ವಸ್ತುವು ಪಡೆದುಕೊಳ್ಳಲು ಸುಲಭ ; ಯಾವ ವಸ್ತುವು ಪಡೆದುಕೊಳ್ಳಲು ದುರ್ಲಭ–ಎಂಬುದನ್ನು ನೀನು ತಿಳಿದವನಾಗಿಲ್ಲ. ಸುಲಭವಾದ ವಸ್ತುಗಳನ್ನೂ ಆಶಿಸುವೆ. ದುರ್ಲಭವಾದ ವಸ್ತುಗಳನ್ನೂ ಆಶಿಸುವೆ. ದೊರೆಯದ ವಸ್ತುವೇ ಆದರೂ ಮಹಾ ಕಷ್ಟದಿಂದಲಾದರೂ ತಂದೊಪ್ಪಿಸುವಂತೆ ಪ್ರೇರಿಸುವೆ.

ಪಾತಾಲ ಇವ ದುಷ್ಪೂರೋ ಮಾಂ ದುಃಖೈರ್ಯೋಕ್ತುಮಿಚ್ಛಸಿ ।
ನಾಹಮದ್ಯ ಸಮಾವೇಷ್ಟುಂ ಶಕ್ಯಃ ಕಾಮ ಪುನಸ್ತ್ವಯಾ ॥೩೯॥

ತುಂಬಲಾಗದ ಪಾತಾಳದಂತೆ ನಿನ್ನ ಆಶೆಯೆಲ್ಲವನ್ನೂ ಪೂರೈಸಿ ಕೊಡುವುದು ದುಸ್ಸಾಧ್ಯವೇ ಸರಿ. ಪುನಃ ಪುನಃ ನನ್ನನ್ನು ದುಃಖಕ್ಕೀಡುಮಾಡಲು ಇಚ್ಛಿಪಡುವೆ. ಕಾಮನೇ! ಆದರೆ ನೀನು ಪುನಃ ನನ್ನೊಳಗೆ ಸೇರಿಕೊಳ್ಳುವುದು ಸರ್ವಥಾ ಸಾಧ್ಯವಿಲ್ಲ.

ನಿರ್ವೇದಮಹಮಾಸಾದ್ಯ ದ್ರವ್ಯನಾಶಾದ್ಯದೃಚ್ಛಯಾ ।
ನಿರ್ವೃತಿಂ ಪರಮಾಂ ಪ್ರಾಪ್ಯ ನಾದ್ಯ ಕಾಮಾನ್ವಿಚಿನ್ತಯೇ ॥೪೦॥

ದೇವರ ಇಚ್ಛೆಯಂತೆ ಅಕಸ್ಮಾತ್ತಾಗಿ ದ್ರವ್ಯರೂಪವಾದ ಹೋರಿಗಳ ನಾಶವಾದುದರಿಂದ ವೈರಾಗ್ಯವುಂಟಾಗಿ ನನಗೆ ಪರಮಸುಖವು ಪ್ರಾಪ್ತವಾಗಿದೆ. ನಾನೀಗ ಪುನಃ ಸುಖೋಪಭೋಗಗಳನ್ನು ಕುರಿತು ಚಿಂತಿಸುವುದಿಲ್ಲ.

ಅತಿಕ್ಲೇಶಾನ್ಸಹಾಮೀಹ ನಾಹಂ ಬುದ್ಧ್ಯಾಮ್ಯಬುದ್ಧಿಮಾನ್ ।
ನಿಕೃತೋ ಧನನಾಶೇನ ಶಯೇ ಸರ್ವಾಙ್ಗವಿಜ್ವರಃ ॥೪೧॥

ನಾನು ಹಿಂದೆ ಬಹಳ ಕ್ಲೇಶಗಳನ್ನು ಸಹಿಸಿಕೊಳ್ಳುತ್ತಿದ್ದೆನು. ಮೂರ್ಖನಾದ ನಾನು ನಿನ್ನ ಪ್ರಭಾವದಿಂದಾಗಿ (ಧನದ ತೃಷ್ಣೆಯಿಂದಾಗಿ)

ಇಂತಹ ಕಷ್ಟಗಳನ್ನು ಅನುಭವಿಸಬೇಕಾಗಬಹುದೆಂಬುದನ್ನು ತಿಳಿದುಕೊಳ್ಳಲೇ ಇಲ್ಲ. ಹೋರಿಗಳ ನಾಶದಿಂದಾಗಿ ವಿಧಿಯಿಂದ ವಂಚಿಸಲ್ಪಟ್ಟವನಾಗಿ ಯಾವ ಅಂಗಗಳಲ್ಲಿಯೂ ಯಾವ ವಿಧವಾದ ಕ್ಲೇಶವೂ ಇಲ್ಲದೇ ಚಿಂತೆಯಿಂದ ಮುಕ್ತನಾಗಿ ಸುಖವಾಗಿ ನಿದ್ರಿಸುತ್ತೇನೆ.

ಪರಿತ್ಯಜಾಮಿ ಕಾಮ ತ್ವಾಂ ಹಿತ್ವಾ ಸರ್ವಮನೋಗತೀಃ ।
ನ ತ್ವಂ ಮಯಾ ಪುನಃ ಕಾಮ ವತ್ಸ್ಯಸೇ ನ ಚ ರಂಸ್ಯಸೇ ॥೪೨॥

ಕಾಮನೇ! ನಾನು ನನ್ನ ಎಲ್ಲ ವಿಧವಾದ ಮನೋವ್ಯಾಪಾರಗಳನ್ನೂ ಬಿಟ್ಟು ತನ್ಮೂಲಕವಾಗಿ ನಿನ್ನನ್ನು ಪರಿತ್ಯಜಿಸುತ್ತೇನೆ. ಇನ್ನು ಮುಂದೆ ನಿನಗೆ ನನ್ನೊಡನೆ ಇರಲು ಸಾಧ್ಯವಿಲ್ಲ. ರಮಿಸಲೂ ಸಾಧ್ಯವಿಲ್ಲ.

ಕ್ಷಮಿಷ್ಯೇ ಕ್ಷಿಪಮಾಣಾನಾಂ ನ ಹಿಂಸಿಷ್ಯೇ ವಿಹಿಂಸಿತಃ ।
ದ್ವೇಷ್ಯಮುಕ್ತಃ ಪ್ರಿಯಂ ವಕ್ಷ್ಯಾಮ್ಯನಾದೃತ್ಯ ತದಪ್ರಿಯಮ್ ॥೪೩॥

ಈಗ ನಾನು ನನ್ನನ್ನು ಆಕ್ಷೇಪಿಸುವವರನ್ನೂ ಅಥವಾ ತಿರಸ್ಕರಿಸುವವರನ್ನೂ ಕ್ಷಮಿಸಿಬಿಡುತ್ತೇನೆ. ನನ್ನನ್ನು ಯಾರಾದರೂ ಹಿಂಸಿಸಿದರೆ ನಾನು ಪ್ರತಿಯಾಗಿ ಅವರನ್ನು ಹಿಂಸಿಸುವುದಿಲ್ಲ. ದ್ವೇಷದಿಂದ ಮುಕ್ತನಾಗಿ ದ್ವೇಷಿಯಾದವನು ಹೇಳುವ ಅಪ್ರಿಯವಾದ ಮಾತುಗಳನ್ನೂ ಅಲಕ್ಷಿಸಿ ಅವನೊಡನೆ ಪ್ರಿಯವಾದ ಮಾತುಗಳನ್ನೇ ಆಡುತ್ತೇನೆ.

ತೃಪ್ತಃ ಸ್ವಸ್ಥೇನ್ದ್ರಿಯೋ ನಿತ್ಯಂ ಯಥಾಲಬ್ಧೇನ ವರ್ತಯನ್ ।
ನ ಸಕಾಮಂ ಕರಿಷ್ಯಾಮಿ ತ್ವಾಮಹಂ ಶತ್ರುಮಾತ್ಮನಃ ॥೪೪॥

ನಾನು ಸರ್ವದಾ ಸಂತುಷ್ಟನಾಗಿರುತ್ತಾ, ಶಾಂತವಾದ ಇಂದ್ರಿಯಗಳಿಂದ ಕೂಡಿದವನಾಗಿ, ಯಾವ ಹೊತ್ತಿಗೆ ಏನು ಸಿಕ್ಕುವುದೋ ಅಷ್ಟರಿಂದಲೇ ಜೀವನವನ್ನು ನಿರ್ವಹಿಸುತ್ತೇನೆ. ಕಾಮನೇ! ನನ್ನ ಶತ್ರುವಾಗಿರುವ ನಿನ್ನನ್ನು ಮಾತ್ರ ನಾನು ಸಕಾಮನನ್ನಾಗಿ ಮಾಡುವುದಿಲ್ಲ. (ನಿನ್ನ ನಾನಾವಿಧವಾದ ಇಚ್ಛೆಗಳನ್ನು ಪೂರ್ಣಗೊಳಿಸುವ ಪ್ರಯತ್ನವನ್ನು ಮಾಡುವುದಿಲ್ಲ.)

ನಿರ್ವೇದಂ ನಿರ್ವೃತಿಂ ತೃಪ್ತಿಂ ಸತ್ಯಂ ಶಾನ್ತಿಂ ದಮಂ ಕ್ಷಮಾಮ್ ।
ಸರ್ವಭೂತದಯಾಂ ಚೈವ ವಿದ್ಧಿ ಮಾಂ ಸಮುಪಾಗತಮ್ ॥೪೫॥

ಕಾಮನೇ! ನಾನೀಗ ವೈರಾಗ್ಯವನ್ನೂ, ಸುಖವನ್ನೂ, ತೃಪ್ತಿಯನ್ನೂ, ಶಾಂತಿಯನ್ನೂ, ಸತ್ಯವನ್ನೂ, ದಮವನ್ನೂ, ಕ್ಷಮೆಯನ್ನೂ ಮತ್ತು ಸಮಸ್ತಪ್ರಾಣಿಗಳಲ್ಲಿಯೂ ದಯಾಭಾವವನ್ನೂ ಹೊಂದಿರುವೆನೆಂಬುದನ್ನು ನೀನು ಸ್ಪಷ್ಟವಾಗಿ ತಿಳಿಯುವವನಾಗು.

ತಸ್ಮಾತ್ಕಾಮಶ್ಚ ಲೋಭಶ್ಚ ತೃಷ್ಣಾ ಕಾರ್ಪಣ್ಯಮೇವ ಚ ।
ತ್ಯಜನ್ತು ಮಾಂ ಪ್ರತಿಷ್ಠನ್ತಂ ಸತ್ತ್ವಸ್ಥೋ ಹ್ಯಸ್ಮಿ ಸಾಮ್ಪ್ರತಮ್ ॥೪೬॥

ಆದುದರಿಂದ ಕಾಮ-ಲೋಭ-ತೃಷ್ಣೆ ಮತ್ತು ಕಾರ್ಪಣ್ಯಗಳು–ಮೋಕ್ಷ ಮಾರ್ಗವನ್ನು ಹಿಡಿದು ಹೊರಡಲಿರುವ ನನ್ನನ್ನು ಬಿಟ್ಟು ಹೊರಟು ಹೋಗಲಿ. ನಾನೀಗ ಸತ್ತ್ವಗುಣದಲ್ಲಿಯೇ ಸ್ಥಿರಚಿತ್ತನಾಗಿದ್ದೇನೆ.

ಪ್ರಹಾಯ ಕಾಮಂ ಲೋಭಂ ಚ
ಸುಖಂ ಪ್ರಾಪ್ತೋಽಸ್ಮಿ ಸಾಮ್ಪ್ರತಮ್ ।
ನಾದ್ಯ ಲೋಭವಶಂ ಪ್ರಾಪ್ತೋ
ದುಃಖಂ ಪ್ರಾಪ್ಸ್ಯಾಮ್ಯನಾತ್ಮವಾನ್ ॥೪೭॥

ನಾನೀಗ ಕಾಮವನ್ನೂ ಲೋಭವನ್ನೂ ಪರಿತ್ಯಜಿಸಿ ಪರಮಸುಖಿಯಾಗಿದ್ದೇನೆ. ಅಜಿತೇಂದ್ರಿಯನಂತೆ ನಾನು ಪುನಃ ಲೋಭವಶನಾಗಿ ದುಃಖಕ್ಕೆ ಭಾಗಿಯಾಗುವುದಿಲ್ಲ.

ಯದ್ಯತ್ತ್ಯಜತಿ ಕಾಮಾನಾಂ ತತ್ಸುಖಸ್ಯಾಭಿಪೂರ್ಯತೇ ।
ಕಾಮಸ್ಯ ವಶಗೋ ನಿತ್ಯಂ ದುಃಖಮೇವ ಪ್ರಪದ್ಯತೇ ॥೪೮॥

ಮನುಷ್ಯನು ಯಾವ ಯಾವ ಕಾಮನೆಗಳನ್ನು ತ್ಯಜಿಸುವನೋ–ನಿರಸ್ತವಾದ ಆ ಕಾಮನೆಗಳು ಅವನಿಗೆ ಸುಖವಾಗಿಯೇ ಪರಿಣಮಿಸುತ್ತವೆ. ಕಾಮಕ್ಕೆ ವಶನಾದವನು ನಿತ್ಯವೂ ದುಃಖವನ್ನೇ ಅನುಭವಿಸುತ್ತಾನೆ.

ಕಾಮಾನುಬನ್ಧಂ ನುದತೇ ಯತ್ಕಿಂಚಿತ್ಪುರುಷೋ ರಜಃ ।
ಕಾಮಕ್ರೋಧೋದ್ಭವಂ ದುಃಖಮಹ್ರೀರರತಿರೇವ ಚ ॥೪೯॥

ಮನುಷ್ಯನು-ಕಾಮಕ್ಕೆ ಸಂಬಂಧಿಸಿದಂತೆ ತನ್ನಲ್ಲಿ ಅಲ್ಪ-ಸ್ವಲ್ಪ ವಾದರೂ ರಜೋಗುಣವಿದ್ದರೆ ಅವನ್ನು ದೂರೀಕರಿಸಬೇಕು. ದುಃಖ, ನಿರ್ಲಜ್ಜೆ ಮತ್ತು ಅಸಂತೋಷ–ಇವುಗಳೆಲ್ಲವೂ ಕಾಮ-ಕ್ರೋಧಗಳಿಂದಲೇ ಹುಟ್ಟಿಕೊಳ್ಳುವುವು.

(ಈ ಶ್ಲೋಕಕ್ಕೆ ವ್ಯಾಖ್ಯಾನಕಾರರ ವಿವರಣೆಯು ಹೀಗಿದೆ : ರಜಸ್ಸು ಪ್ರವೃತ್ತಿಗೆ ಕಾರಣವಾದ ಗುಣ. ಇದು ಕಾಮನಾಸಂಬಂಧವನ್ನು ಹೊಂದಿರುತ್ತದೆ. ಕಾಮ-ಕ್ರೋಧಗಳೇ ದುಃಖಕ್ಕೆ ಕಾರಣ. ಆದುದರಿಂದ ಪುರುಷನು ನಾಚಿಕೆಯನ್ನೂ–ಸಂಸಾರದಲ್ಲಿ ಆಸಕ್ತಿಯನ್ನೂ ಬಿಟ್ಟು ಸರ್ವಾನರ್ಥಮೂಲವಾದ ರಜೋಗುಣವು ಸ್ವಲ್ಪವೂ ಇಲ್ಲದಂತೆ ಅದನ್ನು ದೂರಮಾಡಬೇಕು.)

ಏಷ ಬ್ರಹ್ಮಪ್ರತಿಷ್ಠೋಽಹಂ ಗ್ರೀಷ್ಮೇ ಶೀತಮಿವ ಹ್ರದಮ್ ।
ಶಾಮ್ಯಾಮಿ ಪರಿನಿರ್ವಾಮಿ ಸುಖಂ ಮಾಮೇತಿ ಕೇವಲಮ್ ॥೫೦॥

ಯಾವ ರೀತಿಯಲ್ಲಿ ಜನರು ಗ್ರೀಷ್ಮರ್ತುವಿನ ಉರಿಬಿಸಿಲಿನಲ್ಲಿ ಶೀತಲವಾದ ಸರೋವರದಲ್ಲಿ ಪ್ರವೇಶಿಸಿ ಆನಂದಪಡುವರೋ ಹಾಗೆಯೇ ನಾನು ಸಂಸಾರದ ಬೇಗೆಯನ್ನು ತಪ್ಪಿಸಿಕೊಂಡು ಪರಬ್ರಹ್ಮದಲ್ಲಿ ಪ್ರತಿಷ್ಠಿತನಾಗಿದ್ದೇನೆ. ಕರ್ಮಗಳಲ್ಲಿ ಆಸಕ್ತಿರಹಿತನಾಗಿದ್ದೇನೆ. ಶಾಂತನಾಗಿದ್ದೇನೆ. ದುಃಖರಹಿತನಾಗಿದ್ದೇನೆ. ಈಗ ಕೇವಲ ಸುಖವೇ ನನಗೆ ಪ್ರಾಪ್ತವಾಗುತ್ತದೆ.

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥೫೧॥

ಈ ಲೋಕದಲ್ಲಿ ಯಾವ ವಿಷಯಸುಖಗಳಿವೆಯೋ, ಪರಲೋಕದಲ್ಲಿ ಯಾವ ಸ್ವರ್ಗ್ಯವಾದ ಮಹಾಸುಖವಿರುವುದೋ–ಆ ಎರಡು ವಿಧವಾದ ಸುಖಗಳೂ ತೃಷ್ಣೆಯ ವಿನಾಶದಿಂದ ಲಭಿಸುವ ಪರಮಸುಖದೊಡನೆ ಹೋಲಿಸಿದರೆ ಅದರ ಹದಿನಾರನೆಯ ಒಂದು ಭಾಗ ಸುಖಕ್ಕೂ ಸಾಟಿಯಾಗಲಾರವು.

ಆತ್ಮನಾ ಸಪ್ತಮಂ ಕಾಮಂ ಹತ್ವಾ ಶತ್ರುಮಿವೋತ್ತಮಮ್ ।
ಪ್ರಾಪ್ಯಾವಧ್ಯಂ ಬ್ರಹ್ಮಪುರಂ ರಾಜೇವ ಸ್ಯಾಮಹಂ ಸುಖೀ ॥೫೨॥

ಆತ್ಮನಿಂದ (ದೇಹದಿಂದ) ಏಳನೆಯವನಾದ ಅತ್ಯಂತಪ್ರಬಲನಾದ ಕಾಮವೆಂಬ ಶತ್ರುವನ್ನು ಸಂಹರಿಸಿ ಅವಿನಾಶಿಯಾದ ಬ್ರಹ್ಮಪುರವನ್ನು ಸೇರಿ ರಾಜನಂತೆ ಸುಖಿಯಾಗಿರುತ್ತೇನೆ. (**ಆತ್ಮನಾ ಸಪ್ತಮಂ** –ಎಂಬುದಕ್ಕೆ ವ್ಯಾಖ್ಯಾನಕಾರರು ಹೀಗೆ ವಿವರಿಸಿದ್ದಾರೆ : **ಆತ್ಮನಾ**–ಸ್ಥೂಲದೇಹೇನ **ಸಹ ಗಣನಾಯಾಂ** – ಸ್ಥೂಲದೇಹವನ್ನು ಸೇರಿಸಿ ಗಣನೆಮಾಡಿದರೆ, **ಸಪ್ತಮಃ ಕಾಮಃ** – ಏಳನೆಯವನು ಕಾಮನಾಗುತ್ತಾನೆ. ಹೇಗೆಂದರೆ :

ಅನ್ನಮಯ – ಪ್ರಾಣಮಯ – ಮನೋಮಯ – ವಿಜ್ಞಾನಮಯಾಶ್ಚತ್ವಾರಃ ಕೋಶಾಃ ಪ್ರವೃತ್ತಿಮತ್ತ್ವಾದ್ರಜಃಪ್ರಧಾನಾಃ – ಅನ್ನಮಯ – ಪ್ರಾಣಮಯ - ಮನೋಮಯ-ವಿಜ್ಞಾನಮಯಗಳೆಂಬ ನಾಲ್ಕು ಕೋಶಗಳು ಪ್ರವೃತ್ತಿಮಾರ್ಗವನ್ನು ಉತ್ತೇಜಿಸುವುದರಿಂದ ರಜೋಗುಣ ಪ್ರಧಾನವಾದುವುಗಳು. **ಆನನ್ದಮಯಃ ಆವರಣರೂಪತ್ವಾತ್ತಮಃ ಪ್ರಧಾನಃ ಪಞ್ಚಮಃ** = ಆನನ್ದಮಯಕೋಶವು ಆವರಣರೂಪವಾಗಿರುವುದರಿಂದ ತಮಃಪ್ರಧಾನವಾದುದು. ಅದು ಐದನೆಯದು. **ತತಃ ಶುದ್ಧಸತ್ತ್ವಪ್ರಾಧಾನ್ಯಾತ್ ಸಜೀವಸಮಾಧಿಃ ಆನನ್ದಾಖ್ಯಃ ಷಷ್ಠಃ** – ಶುದ್ಧ ಸತ್ತ್ವಪ್ರಧಾನವಾಗಿರುವ ಆನಂದ ಎಂಬ ಹೆಸರಿನ ಸಜೀವಸಮಾಧಿಯು ಆರನೆಯದು. **ತಸ್ಯಾಪಿ ಮೂಲಮಸ್ಮೀತಿ ಪ್ರತ್ಯಯಮಾತ್ರಶರೀರೋ ಮಹತ್ತತ್ತ್ವಾಖ್ಯಃ ಸರ್ವಾನರ್ಥಬೀಜಭೂತಃ ಚರಮಃ ಕಾಮಃ ಸಪ್ತಮಃ** = ಆನಂದಾಖ್ಯವಾದ ಸಜೀವಸಮಾಧಿಗೂ ಮೂಲವೆಂದು ಹೇಳಿಕೊಳ್ಳುವ ಅಸ್ಮಿ ಎಂಬ ಪ್ರತ್ಯಯಮಾತ್ರಶರೀರವನ್ನು ಹೊಂದಿರುವ, ಮಹತ್ತತ್ತ್ವವೆಂದು ಹೆಸರು ಪಡೆದಿರುವ, ಸಕಲವಿಧವಾದ ಅನರ್ಥಗಳಿಗೂ ಬೀಜಭೂತವಾದ ಕಡೆಯದಾದ ಕಾಮವೇ ಏಳನೆಯದು. ಸಾಮಾನ್ಯವಾಗಿ ಹೇಳುವ ಕಾಮ-ಕ್ರೋಧಾದಿಗಳಾದ ಅರಿಷಡ್ವರ್ಗಗಳನ್ನು ಹೇಳುವ ಸರಣಿಯಲ್ಲಿ ಕಾಮವೇ ಮೊದಲನೆಯದಾಗುತ್ತದೆ. ಇಲ್ಲಿ ಆತ್ಮನಿಂದ ಎಂದರೆ ದೇಹದಿಂದ ಕಾಮನು ಸಪ್ತಮನು–ಎಂದು ಹೇಳಿರುವುದರಿಂದ ವ್ಯಾಖ್ಯಾನಕಾರರು ಹೀಗೆ ವಿವರಿಸಿದ್ದಾರೆ. ಆದರೆ ಇದು ಕ್ಲಿಷ್ಟ ಕಲ್ಪನೆ. ಕಾಮವು ಸಮಾಧಿಯ ಆನಂದಕ್ಕೂ ಮೂಲವಾದುದು ಎಂದು ಹೇಳುವುದೂ ಸರಿಯಲ್ಲ. ಗೀತೆಯ “ವಿಷಯಾ ವಿನಿವರ್ತನ್ತೇ ನಿರಾಹಾರಸ್ಯ ದೇಹಿನಃ । **ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥ (II-59)** ಎಂಬ ಶ್ಲೋಕದಲ್ಲಿ ಇದಕ್ಕೆ ಸರಳವೂ ಸಾಧುವೂ ಆದ ಉತ್ತರವಿದೆ. ವಿಷಯಗಳು ಐದು. ಆರನೆಯದು ‘ ರಸ ’ ಎಂದು ಕರೆಯಲ್ಪಟ್ಟಿರುವವಾಗ. ‘ಆತ್ಮನಾ ಸಪ್ತಮಂ ಕಾಮಂ ’ (ಆತ್ಮನಾ = ಆತ್ಮನಾ ಸಹ) ಎಂಬಂತೆ ಆತ್ಮ (ದೇಹ) ವನ್ನೂ ಸೇರಿಸಿಕೊಂಡರೆ ಕಾಮವು ಏಳನೆಯದಾಗುತ್ತದೆ. ‘ಆತ್ಮನಾ’ ಎಂಬುದಕ್ಕೆ ದೇಹವಲ್ಲದೆ ‘ಆತ್ಮಾನಂ ವಿನಾ’

ಎಂಬ ಅಭಿಪ್ರಾಯವನ್ನು ಇಟ್ಟುಕೊಂಡರೂ ಕಾಮವು ಏಳನೆಯದಾಗುತ್ತದೆ. ಐದು ಇಂದ್ರಿಯಗಳು, ಆರನೆಯದು ಮನಸ್ಸು ಮತ್ತು ಏಳನೆಯದು ಇವುಗಳಿಗೆ ಮೂಲವಾದ ' ಕಾಮ ' ಅಥವಾ ' ರಸ '

ಆತ್ಮಶಬ್ದವನ್ನು ಅವರೋಹಣ ಕ್ರಮದಿಂದ ವ್ಯಾಖ್ಯಾನಿಸಿ 'ಪರಮಾತ್ಮ' ಎಂಬ ಅಭಿಪ್ರಾಯ ಹೇಳಿದರೂ ಕಾಮವು ಏಳನೆಯದಾಗುತ್ತದೆ. ಪರಮಾತ್ಮ ಜೀವ, ಪ್ರಕೃತಿ, ಮಹತ್ತು, ಅಹಂಕಾರ, ಮನಸ್ಸು ಮತ್ತು ಅದರಲ್ಲಿ ಜನಿಸಿದ ಕಾಮ– ಇವುಗಳಲ್ಲಿ ಮೊದಲನೆಯ ಕಲ್ಪವು ಸ್ವರಸವಾಗಿದೆ.)

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಮಂಕಿಯೂ ಇಂತಹ ಬುದ್ಧಿಯನ್ನೇ ಆಶ್ರಯಿಸಿ, ಸಕಲವಿಧವಾದ ಕಾಮನೆಗಳನ್ನೂ ಪರಿತ್ಯಜಿಸಿ ವೈರಾಗ್ಯವನ್ನು ಹೊಂದಿ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದು ಪರಮಸುಖಿಯಾದನು. ತಾನು ಪ್ರೀತಿಯಿಂದ ಸಾಕಿದ್ದ ಎತ್ತುಗಳ ವಿನಾಶದಿಂದಾಗಿ ಮಂಕಿಯು ಅಮೃತತ್ತ್ವವನ್ನೇ ಪಡೆದುಕೊಂಡನು. ಮಂಕಿಯು ಕಾಮದ ಮೂಲವನ್ನೇ ಕತ್ತರಿಸಿ ಹಾಕಿದನು. ಅದರಿಂದಲೇ ಅವನು ಮಹಾಸುಖವನ್ನೂ ಪಡೆದುಕೊಂಡನು."

೧೭೭ನೆಯ ಅಧ್ಯಾಯವು ಮುಗಿಯಿತು.

೧೭೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜನಕನ ಮಾತು : ನಹುಷನ ಪ್ರಶ್ನೆಗೆ ಉತ್ತರರೂಪವಾದ ಬೋಧ್ಯಗೀತೆ

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಇದೇ ವಿಷಯದಲ್ಲಿ ವಿದೇಹರಾಜನಾದ ಜನಕನು ಹೇಳಿರುವ ಪುರಾತನವಾದ ಇತಿಹಾಸರೂಪವಾದ ಗೀತವನ್ನೂ ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೂ ಹೇಳುವೆನು ಕೇಳು :

ಅನನ್ತಮಿವ ಮೇ ವಿತ್ತಂ ಯಸ್ಯ ಮೇ ನಾಸ್ತಿ ಕಿಞ್ಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಞ್ಚನ ॥೨॥

'ನಾನು ಭೌತಿಕವಾಗಿ ಏನೂ ಇಲ್ಲದ ದರಿದ್ರನು. ಆದರೆ ನನ್ನಲ್ಲಿ ಆಧ್ಯಾತ್ಮವೆಂಬ ಅನಂತವಾದ ಸಂಪತ್ತು ತುಂಬಿದೆ. ಮಿಥಿಲಾಪಟ್ಟಣವೇ ದಹಿಸಲ್ಪಟ್ಟರೂ ನನ್ನದೆಂಬುದು ಯಾವುದೂ ಸುಟ್ಟುಹೋಗುವುದಿಲ್ಲ.'

ಯುಧಿಷ್ಠಿರ! ಇದೇ ವಿಷಯದ (ವೈರಾಗ್ಯದ ವಿಷಯದಲ್ಲಿ) ಬೋಧ್ಯಮುನಿಯು ಹೇಳಿರುವ ಮಾತುಗಳನ್ನೂ ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೂ ಹೇಳುವೆನು ; ಕೇಳು :

ಹಿಂದೊಮ್ಮೆ ನಹುಷನ ಮಗನಾದ ಯಯಾತಿಯು ವೈರಾಗ್ಯದಿಂದ ಶಾಂತಭಾವವನ್ನು ಹೊಂದಿದ್ದ, ಶಾಸ್ತ್ರಗಳ ಉತ್ಕೃಷ್ಟಜ್ಞಾನದಿಂದ ತೃಪ್ತಿಯನ್ನು ಹೊಂದಿದ್ದ, ಶಾಂತನಾದ ಬೋಧ್ಯಮುನಿಯನ್ನು ಪ್ರಶ್ನಿಸಿದನು :

ಉಪದೇಶಂ ಮಹಾಪ್ರಾಜ್ಞ ಶಮಸ್ಯೋಪದಿಶಸ್ವ ಮೇ ।
ಕಾಂ ಬುದ್ಧಿಂ ಸಮನುಧ್ಯಾಯ ಶಾನ್ತಶ್ಚರಸಿ ನಿರ್ವೃತಃ ॥೫॥

"ಮಹಾಪ್ರಾಜ್ಞರೇ! ನನಗೆ ಶಮದ (ಶಾಂತಿಯ) ಉಪದೇಶವನ್ನು ನೀಡಿರಿ. ಸರ್ವದಾ ಶಾಂತನಾಗಿರಲು ಹೇಗೆ ವ್ಯವಹರಿಸಬೇಕೆಂಬುದನ್ನು ತಿಳಿಸಿರಿ. ನೀವು ಯಾವ ಬುದ್ಧಿಯನ್ನು ಆಶ್ರಯಿಸಿ ಶಾಂತಿಯಿಂದಲೂ ಸಂತೋಷದಿಂದಲೂ ಸಂಚರಿಸುತ್ತಿರುವಿರಿ?"

ಬೋಧ್ಯನು ಹೇಳುತ್ತಾನೆ :

ಉಪದೇಶೇನ ವರ್ತಾಮಿ ನಾನುಶಾಸ್ಮೀಹ ಕಂಚನ ।
ಲಕ್ಷಣಂ ತಸ್ಯ ವಕ್ಷ್ಯೇಽಹಂ ತತ್ಸ್ವಯಂ ಪರಿಮೃಶ್ಯತಾಮ್ ॥೬॥

"ಮಹಾರಾಜ! ನಾನು ಇತರರಿಗೆ ಉಪದೇಶಮಾಡುವವನಲ್ಲ. ಇತರರು ಮಾಡಿರುವ ಉಪದೇಶದಂತೆ ನಡೆದುಕೊಳ್ಳುತ್ತೇನೆ. ನಾನು ಯಾರಿಂದ ಉಪದೇಶವನ್ನು ಪಡೆದಿರುವೆನೋ ಆ ನನ್ನ ಗುರುಗಳ ಸಂಕೇತವನ್ನು ಮಾತ್ರವೇ ಹೇಳುತ್ತೇನೆ. ಅದರ ಮೇಲೆ ನೀನೇ ವಿಚಾರಮಾಡಿ ನಿರ್ಧರಿಸು.

ಪಿಙ್ಗಲಾ ಕುರರಃ ಸರ್ಪಃ ಸಾರಙ್ಗಾನ್ವೇಷಣಂ ವನೇ ।
ಇಷುಕಾರಃ ಕುಮಾರೀ ಚ ಷಡೇತೇ ಗುರವೋ ಮಮ ॥೭॥

ವೇಶ್ಯೆ, ಕುರರಪಕ್ಷಿ, ಸರ್ಪ, ಅರಣ್ಯದಲ್ಲಿ ಸಾರಂಗದ ಅನ್ವೇಷಣೆ, ಬಾಣವನ್ನು ತಯಾರುಮಾಡುವವನು ಮತ್ತು ಕುಮಾರೀ–ಇವರೇ ನನ್ನ ಆರು ಮಂದಿ ಗುರುಗಳು.”

ಭೀಷ್ಮನು ಹೇಳುತ್ತಾನೆ :

ಆಶಾ ಬಲವತೀ ರಾಜನ್ನೈರಾಶ್ಯಂ ಪರಮಂ ಸುಖಮ್ ।
ಆಶಾಂ ನಿರಾಶಾಂ ಕೃತ್ವಾ ತು ಸುಖಂ ಸ್ವಪಿತಿ ಪಿಙ್ಗಲಾ ॥೮॥

“ಯುಧಿಷ್ಠಿರ! ಬೋಧ್ಯನು ಯಯಾತಿಗೆ ಹೇಳಿದ ಆರು ಮಂದಿ ಗುರುಗಳು ತಮ್ಮ ಆದರ್ಶಗಳಿಂದ ಮಾಡಿರುವ ಉಪದೇಶಗಳ ಸಾರವು ಹೀಗಿದೆ.

ಆಶೆಯು ಬಹಳ ಬಲವತ್ತರವಾದುದು. ಎಲ್ಲರಿಗೂ ದುಃಖವನ್ನುಂಟು ಮಾಡತಕ್ಕುದು. ಆದುದರಿಂದ ಆಶಾರಾಹಿತ್ಯವೇ ಪರಮಸುಖವು. ಆಶೆ ಯನ್ನೇ ಭೋಗನೈರಾಶ್ಯವನ್ನಾಗಿ ಪರಿವರ್ತಿಸಿಕೊಂಡು ಪಿಂಗಲಾ ಎಂಬ ವೇಶ್ಯೆಯು ಸುಖವಾಗಿ ನಿದ್ರಿಸಿದಳು. ಅವಳ ಆದರ್ಶದಂತೆ ಆಶೆಯನ್ನು, ಭೋಗದಲ್ಲಿ ನಿರಾಶೆಯುಳ್ಳದ್ದನ್ನಾಗಿ ಮಾಡಬೇಕು. ಸಂಸಾರದಲ್ಲಿ ಆಶೆಯನ್ನು ತ್ಯಜಿಸಬೇಕು.

ಸಾಮಿಷಂ ಕುರರಂ ದೃಷ್ಟ್ವಾ ವಧ್ಯಮಾನಂ ನಿರಾಮಿಷೈಃ ।
ಆಮಿಷಸ್ಯ ಪರಿತ್ಯಾಗಾತ್ಕುರರಂ ಸುಖಮೇಧತೇ ॥೯॥

ಕೊಕ್ಕಿನಲ್ಲಿ ಮಾಂಸದ ತುಂಡೊಂದನ್ನು ಕಚ್ಚಿಕೊಂಡಿದ್ದ ಕ್ರೌಂಚ ಪಕ್ಷಿಯನ್ನು ನೋಡಿ ಮಾಂಸದ ತುಂಡನ್ನು ಕೊಕ್ಕಿನಲ್ಲಿ ಕಚ್ಚಿಕೊಳ್ಳದಿದ್ದ (ಹೊಂದಿರದಿದ್ದ) ಇತರ ಪಕ್ಷಿಗಳು ಆ ಕ್ರೌಂಚಪಕ್ಷಿಯನ್ನು ಆಕ್ರಮಿಸಿ ಪ್ರಹರಿಸತೊಡಗಿದುವು. ಆ ಸಮಯದಲ್ಲಿ ಕ್ರೌಂಚಪಕ್ಷಿಯು ಮಾಂಸದ ತುಂಡನ್ನು ತ್ಯಜಿಸಿಬಿಟ್ಟಿತು. ಮಾಂಸದ ತುಂಡಿಗಾಗಿ ಅದನ್ನು ಆಕ್ರಮಿಸಿದ್ದ ಪಕ್ಷಿಗಳೂ ಹೊರಟುಹೋದುವು. ಹೀಗೆ ಮಾಂಸವನ್ನು ತ್ಯಾಗಮಾಡಿದುದ ರಿಂದ ಕ್ರೌಂಚಪಕ್ಷಿಗೆ ಸುಖವಾಯಿತು. ಕ್ರೌಂಚಪಕ್ಷಿಯು ಭೋಗವನ್ನು

ತ್ಯಾಗಮಾಡಿದುದರಿಂದ ಸುಖವನ್ನು ಹೊಂದಿತೆಂಬುದರ ಆದರ್ಶವನ್ನು ತೆಗೆದುಕೊಳ್ಳಬೇಕು.

ಗೃಹಾರಮ್ಭೋ ಹಿ ದುಃಖಾಯ ನ ಸುಖಾಯ ಕದಾಚನ ।
ಸರ್ಪಃ ಪರಕೃತಂ ವೇಶ್ಮ ಪ್ರವಿಶ್ಯ ಸುಖಮೇಧತೇ ॥೧೦॥

ಮನೆಕಟ್ಟಿಕೊಳ್ಳುವುದು ಮಹಾದುಃಖಕ್ಕೆ ಕಾರಣವಾಗುತ್ತದೆ. ಅದರಿಂದ ಸುಖವೆಂದಿಗೂ ಆಗುವುದಿಲ್ಲ. ಸರ್ಪವೆಂದಿಗೂ ಮನೆಯನ್ನು ಕಟ್ಟಲು ಹೋಗುವುದೇ ಇಲ್ಲ. ಬೇರೆ ಪ್ರಾಣಿಗಳು ರಚಿಸಿದ ಗೂಡುಗಳಲ್ಲಿ ಸರ್ಪವು ಸೇರಿಕೊಂಡು ಸುಖವಾಗಿರುತ್ತದೆ. (ಪೂರ್ಣವಿರಾಗಿಗೆ ಗೃಹವೂ ಇರಕೂಡದೆಂಬುದಕ್ಕೆ ಸರ್ಪವು ನಿದರ್ಶನವಾಗಿದೆ. ಅನಿಕೇತನಾಗಿರಬೇಕು. ಮನೆ-ಮಠಗಳ ಬಂಧನವು ಇರಬಾರದು ಎಂಬುದೇ ಈ ನಿದರ್ಶನದ ತತ್ತ್ವವಾಗಿದೆ.)

ಸುಖಂ ಜೀವನ್ತಿ ಮುನಯೋ ಭೈಕ್ಷವೃತ್ತಿಂ ಸಮಾಶ್ರಿತಾಃ ।
ಅದ್ರೋಹೇಣೈವ ಭೂತಾನಾಂ ಸಾರಙ್ಗಾ ಇವ ಪಕ್ಷಿಣಃ ॥೧೧॥

ಸಾರಂಗಪಕ್ಷಿಗಳು (ಚಾತಕಪಕ್ಷಿಗಳು) ಯಾರಿಗೂ ದ್ರೋಹ ಮಾಡದೇ ಜೀವಿಕೆಯನ್ನು ನಡೆಸುವಂತೆ–ಮುನಿಗಳು ಭಿಕ್ಷಾವೃತ್ತಿಯನ್ನು ಅವಲಂಬಿಸಿ ಯಾವ ಪ್ರಾಣಿಗೇ ಆಗಲೀ ದ್ರೋಹವನ್ನೆಸಗದೇ ಸುಖವಾಗಿ ತಮ್ಮ ಜೀವಿಕೆಯನ್ನು ನಡೆಸುತ್ತಾರೆ. ಯಾರಿಗೂ ದ್ರೋಹಮಾಡದೆ ಜೀವಿಸಬಹುದೆಂಬುದಕ್ಕೆ ಚಾತಕಪಕ್ಷಿಗಳ ಜೀವನವು ಆದರ್ಶವಾಗಿದೆ. (ಸಾರಂಗಪಕ್ಷಿಗಳು ರೈತರು ಕಣಗಳಲ್ಲಿ ಬಿಟ್ಟುಹೋಗಿರುವ ಧಾನ್ಯದ ಕಾಳುಗಳನ್ನು ಸಂಗ್ರಹಿಸಿಕೊಂಡು ಜೀವಿಸುತ್ತವೆ.)

ಇಷುಕಾರೋ ನರಃ ಕಶ್ಚಿದಿಷಾವಾಸಕ್ತಮಾನಸಃ ।
ಸಮೀಪೇನಾಪಿ ಗಚ್ಛನ್ತಂ ರಾಜಾನಂ ನಾವಬುದ್ಧವಾನ್ ॥೧೨॥

ಇಷುಕಾರನೊಬ್ಬನು ಬಾಣವನ್ನು ಮಾಡುವುದರಲಿಯೇ ನೆಟ್ಟ ಮನಸ್ಸುಳ್ಳವನಾಗಿದ್ದನು. ಸಮೀಪದಲ್ಲಿಯೇ ರಾಜನು ವೈಭವದಿಂದ ಹೋಗುತ್ತಿದ್ದರೂ ಅವನು ರಾಜನನ್ನು ಗಮನಿಸಲಿಲ್ಲ. ಇಷುಕಾರನಂತೆ ಶಮಸಾಧಕನು ಏಕಾಗ್ರಚಿತ್ತನಾಗಿರಬೇಕು.

ಬಹೂನಾಂ ಕಲಹೋ ನಿತ್ಯಂ ದ್ವಯೋಃ ಸಂಕಥನಂ ಧ್ರುವಮ್ ।
ಏಕಾಕೀ ವಿಚರಿಷ್ಯಾಮಿ ಕುಮಾರೀಶಂಖಕೋ ಯಥಾ ॥೧೩॥

ಹಲವು ಜನರು ಒಂದೇ ಕಡೆಯಲ್ಲಿದ್ದರೆ ಯಾವುದಾದರೂ ಕಾರಣದಿಂದ ಜಗಳವಾಡುತ್ತಲೇ ಇರುತ್ತಾರೆ. ಇಬ್ಬರೇ ಇದ್ದರೂ ಪರಸ್ಪರವಾಗಿ ಸಂಭಾಷಣೆಗಳು ಆಗುತ್ತಲೇ ಇರುತ್ತವೆ. ಆದುದರಿಂದ ಕುಮಾರಿಯ ಹಸ್ತಗಳಲ್ಲಿರುವ ಒಂದೊಂದೇ ಬಳೆಯಂತೆ ಏಕಾಕಿಯಾಗಿ ಸಂಚರಿಸುತ್ತೇನೆ."

೧೭೮ನೆಯ ಅಧ್ಯಾಯವು ಮುಗಿಯಿತು.

೧೭೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪ್ರಹ್ಲಾದ ಮತ್ತು ಅವಧೂತರ ಸಂವಾದ : ಆಜಗರವೃತ್ತಿಯ ಪ್ರಶಂಸೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೇನ ವೃತ್ತೇನ ವೃತ್ತಜ್ಞ ವೀತಶೋಕಶ್ಚರೇನ್ಮಹೀಮ್ ।
ಕಿಞ್ಚ ಕುರ್ವನ್ನರೋ ಲೋಕೇ ಪ್ರಾಪ್ನೋತಿ ಗತಿಮುತ್ತಮಾಮ್ ॥೧॥

"ಸದಾಚಾರದ ಸ್ವರೂಪವನ್ನು ತಿಳಿದಿರುವ ಪಿತಾಮಹನೇ! ಮನುಷ್ಯನು ಯಾವ ವಿಧವಾದ ಆಚಾರ-ವ್ಯವಹಾರಗಳಿಂದ ಶೋಕರಹಿತನಾಗಿ ಪ್ರಪಂಚಪರ್ಯಟನಮಾಡಬಲ್ಲನು ಮತ್ತು ಯಾವ ವಿಧವಾದ ಕರ್ಮಗಳನ್ನು ಮಾಡುವುದರಿಂದ ಉತ್ತಮವಾದ ಗತಿಯನ್ನು ಹೊಂದಬಲ್ಲನು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಪ್ರಹ್ಲಾದನಿಗೂ ಮತ್ತು ಆಜಗರ

---

* ಒಬ್ಬ ಗೃಹಸ್ಥನ ಮನೆಗೆ ಕೆಲವು ಅತಿಥಿಗಳು ಆಗಮಿಸಿದರು. ಮನೆಯವರೆಲ್ಲರೂ ಎಲ್ಲಿಗೋ ಹೊರಟುಹೋಗಿದ್ದರು. ಕುಮಾರಿಯೊಬ್ಬಳು ಮಾತ್ರವೇ ಆ ಸಮಯದಲ್ಲಿ ಮನೆಯಲ್ಲಿದ್ದಳು. ಅತಿಥಿಗಳ ಸತ್ಕಾರದ ಹೊಣೆಯು ಕುಮಾರಿಯ ಮೇಲೆ ಬಿದ್ದಿತು. ಅವಳು ಅತಿಥಿಗಳಿಗೆ ಭೋಜನವನ್ನು ಸಿದ್ಧಗೊಳಿಸುವ ಸಲುವಾಗಿ ಧಾನ್ಯವನ್ನು ಕುಟ್ಟಲು ತೊಡಗಿದಳು. ಅವಳ ಕೈಲಿದ್ದ ಶಂಖದ ಬಳೆಗಳು ಘಣ-ಘಣ ಶಬ್ದಮಾಡತೊಡಗಿ

ವೃತ್ತಿಯಲ್ಲಿದ್ದ ಮುನಿಗೂ ನಡೆದ ಪುರಾತನವಾದ, ಇತಿಹಾಸರೂಪವಾದ ಸಂವಾದವನ್ನು ಉದಾಹರಿಸುತ್ತಾರೆ. ಬುದ್ಧಿವಂತನಾದ ಪ್ರಹ್ಲಾದರಾಜನು ಸುದೃಢಚಿತ್ತನಾದ, ದುಃಖ-ಶೋಕಗಳಿಂದ ರಹಿತನಾಗಿದ್ದ, ಬುದ್ಧಿಯಿಂದ ಜನರಿಗೆ ಸಮ್ಮತನಾಗಿದ್ದ ಒಬ್ಬ ಬ್ರಾಹ್ಮಣನನ್ನು ಪ್ರಶ್ನಿಸಿದನು :

ಸ್ವಸ್ಥಃ ಶಕ್ತೋ ಮೃದುರ್ದಾನ್ತೋ ನಿರ್ವಿಧಿತ್ಸೋಽನಸೂಯಕಃ ।
ಸುವಾಕ್ಪ್ರಗಲ್ಭೋ ಮೇಧಾವೀ ಪ್ರಾಜ್ಞಶ್ಚರಸಿ ಬಾಲವತ್ ॥೪॥

"ಭಗವನ್! ವಿಷಯಸುಖಗಳಿಂದ ಆಕೃಷ್ಟನಾಗದೆ ಶಕ್ತಿವಂತನಾದ, ಮೃದುಸ್ವಭಾವದ, ಜಿತೇಂದ್ರಿಯನಾದ, ಯಾವ ವಿಧವಾದ ಕಾಮ್ಯಕರ್ಮಗಳನ್ನೂ ಆರಂಭಿಸದಿರುವ, ಇತರರಲ್ಲಿ ದೋಷವನ್ನೆಣಿಸದ, ಒಳ್ಳೆಯ ಮತ್ತು ಮಧುರವಾದ ಮಾತುಗಳನ್ನಾಡುವ, ಮೇಧಾವಿಯಾದ, ಪ್ರಾಜ್ಞನಾದ ನೀನು ಬಾಲಕನಂತೆ ಈ ಪ್ರಪಂಚದಲ್ಲಿ ತಿರುಗುತ್ತಿರುವೆ.

ನೈವ ಪ್ರಾರ್ಥಯಸೇ ಲಾಭಂ ನಾಲಾಭೇಷ್ವನುಶೋಚಸಿ ।
ನಿತ್ಯತೃಪ್ತ ಇವ ಬ್ರಹ್ಮನ್ನ ಕಿಞ್ಚಿದಿವ ಮನ್ಯಸೇ ॥೫॥

ಬ್ರಾಹ್ಮಣೋತ್ತಮ! ನೀನು ಯಾವ ವಿಧವಾದ ಲಾಭವನ್ನೂ ಅಪೇಕ್ಷಿಸುವವನಲ್ಲ. ಪ್ರಾಣಧಾರಣೆಗೆ ತಕ್ಕಷ್ಟು ಆಹಾರವು ಸಿಗದಿದ್ದರೂ ಶೋಕಪಡುವವನಲ್ಲ. ನಿತ್ಯತೃಪ್ತನಂತಿದ್ದು ಯಾವುದೇ ವಸ್ತುವನ್ನೂ ಪ್ರಿಯವೆಂದಾಗಲೀ–ಅಪ್ರಿಯವೆಂದಾಗಲೀ ಭಾವಿಸುವವನಲ್ಲ.

ಸ್ರೋತಸಾ ಹ್ರಿಯಮಾಣಾಸು ಪ್ರಜಾಸು ವಿಮನಾ ಇವ ।
ಧರ್ಮಕಾಮಾರ್ಥಕಾರ್ಯೇಷು ಕೂಟಸ್ಥ ಇವ ಲಕ್ಷ್ಯಸೇ ॥೬॥

ದುವು. ತಾನು ಧಾನ್ಯವನ್ನು ಕುಟ್ಟುತ್ತಿರುವುದು ಅತಿಥಿಗಳಿಗೆ ತಿಳಿಯಬಾರದೆಂದು ಕುಮಾರಿಯ ಆಶಯವಾಗಿದ್ದಿತು. ಒಡನೆಯೇ ಅವಳು ತನ್ನ ಕೈಗಳಲ್ಲಿ ಒಂದೊಂದೇ ಬಳೆಗಳನ್ನು ಬಿಟ್ಟು ಉಳಿದೆಲ್ಲ ಬಳೆಗಳನ್ನೂ ತೆಗೆದುಹಾಕಿದಳು. ಮುಂದೆ ಧಾನ್ಯವನ್ನು ಕುಟ್ಟುವಾಗ ಯಾವ ಶಬ್ದವೂ ಆಗಲಿಲ್ಲ. ಶಬ್ದವಾಗದಿದ್ದುದಕ್ಕೆ ಕೈಗಳಲ್ಲಿ ಒಂದೊಂದೇ ಬಳೆಯಿದ್ದುದೇ ಕಾರಣ. ಒಂದು ಬಳೆಯು ಶಬ್ದಮಾಡುವುದಿಲ್ಲ. ಹಾಗೆಯೇ ಏಕಾಕಿಯಾಗಿದ್ದರೆ ಯಾವ ಜಂಜಡವೂ ಇಲ್ಲದೇ ಶಾಂತನಾಗಿರುತ್ತಾನೆ. ಕುಮಾರಿಯ ಬಳೆಯ ಕಥೆಯಿಂದಾಗಿ ಶಮಗುಣಸಾಧಕನು ಏಕಾಕಿಯಾಗಿರಬೇಕೆಂಬುದರ ಅರಿವಾಯಿತು.

ಪ್ರಜೆಗಳೆಲ್ಲರೂ ಪ್ರವಾಹರೂಪದಲ್ಲಿರುವ ಕಾಮ-ಕ್ರೋಧಗಳಲ್ಲಿ ಬಿದ್ದು ಕೊಚ್ಚಿಹೋಗುತ್ತಿರುವಾಗ ನೀನು ಅವುಗಳಲ್ಲಿ ಉದಾಸೀನನಂತಿದ್ದು ಧರ್ಮ-ಕಾಮಾರ್ಥಕಾರ್ಯಗಳ ವಿಷಯದಲ್ಲಿಯೂ ಕೂಟಸ್ಥನಂತೆ (ನಿರ್ವ್ಯಾಪಾರನಂತೆ) ಕಾಣುತ್ತಿರುವೆ.

ನಾನುತಿಷ್ಠಸಿ ಧರ್ಮಾರ್ಥೌ ನ ಕಾಮೇ ಚಾಪಿ ವರ್ತಸೇ ।
ಇನ್ದ್ರಿಯಾರ್ಥಾನನಾದೃತ್ಯ ಮುಕ್ತಶ್ಚರಸಿ ಸಾಕ್ಷಿವತ್ ॥೭॥

ಧರ್ಮಾರ್ಥಸಾಧನೆಗಳಿಗೆ ಅನುಗುಣವಾದ ಯಾವ ಕಾರ್ಯವನ್ನೂ ನೀನು ಮಾಡುತ್ತಿಲ್ಲ. ಕಾಮದಲ್ಲಿಯೂ ನಿನಗೆ ಪ್ರವೃತ್ತಿಯಿಲ್ಲ. ಇಂದ್ರಿಯಗಳ ಪ್ರಯೋಜನವನ್ನು (ಶಬ್ದ-ಸ್ಪರ್ಶ-ರೂಪ-ರಸ-ಗಂಧಾದಿಗಳನ್ನು) ಸಂಪೂರ್ಣವಾಗಿ ನಿರ್ಲಕ್ಷಿಸಿ ಸಾಕ್ಷಿಯೋಪಾದಿಯಲ್ಲಿ (ಯಾವುದಕ್ಕೂ ಅಂಟಿಕೊಳ್ಳದೇ ಮುಕ್ತನಾಗಿ) ಸಂಚರಿಸುತ್ತಿರುವೆ.

ಕಾ ನು ಪ್ರಜ್ಞಾ ಶ್ರುತಂ ವಾ ಕಿಂ ವೃತ್ತಿರ್ವಾ ಕಾ ನು ತೇ ಮುನೇ।
ಕ್ಷಿಪ್ರಮಾಚಕ್ಷ್ವ ಮೇ ಬ್ರಹ್ಮನ್ಶ್ರೇಯೋ ಯದಿಹ ಮನ್ಯಸೇ ॥೮॥

ಬ್ರಾಹ್ಮಣೋತ್ತಮ! ನಿನ್ನ ಪ್ರಜ್ಞೆಯು ಎಂತಹುದು? ನೀನು ಹೀಗಿರಲು ಯಾವ ಶಾಸ್ತ್ರವನ್ನು ಅಧ್ಯಯನಮಾಡಿರುವೆ? ನೀನು ಎಂತಹ ವೃತ್ತಿಯುಳ್ಳವನಾಗಿರುವೆ? ಈ ಜಗತ್ತಿನಲ್ಲಿ ನನಗೆ ಯಾವುದು ಶ್ರೇಯಸ್ಸೆಂದು ನೀನು ತಿಳಿದಿರುವೆ? ಆ ವಿಷಯವನ್ನು ಶೀಘ್ರವಾಗಿ ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಪ್ರಹ್ಲಾದನು ಬ್ರಾಹ್ಮಣನನ್ನು ಹೀಗೆ ಪ್ರಶ್ನಿಸಲಾಗಿ, ಲೋಕಧರ್ಮದ ವಿಧಾನವನ್ನು ತಿಳಿದಿದ್ದ ಮೇಧಾವಿಯಾದ ಆ ಮುನಿಯು ಮಧುರವಾದ ಮತ್ತು ಅರ್ಥಯುಕ್ತವಾದ ಮಾತುಗಳನ್ನು ಹೇಳಿದನು :

ಪಶ್ಯ ಪ್ರಹ್ಲಾದ ಭೂತಾನಾಮುತ್ಪತ್ತಿಮನಿಮಿತ್ತತಃ ।
ಹ್ರಾಸಂ ವೃದ್ಧಿಂ ವಿನಾಶಂ ಚ ನ ಪ್ರಹೃಷ್ಯೇ ನ ಚ ವ್ಯಥೇ ॥೧೦॥

"ಪ್ರಹ್ಲಾದ! ನೋಡು! ಪ್ರಪಂಚದಲ್ಲಿರುವ ಪ್ರಾಣಿಗಳ ಉತ್ಪತ್ತಿ, ವೃದ್ಧಿ, ಅವನತಿ ಮತ್ತು ವಿನಾಶ–ಇವುಗಳೆಲ್ಲವೂ ಕಾರಣರಹಿತವಾಗಿಯೇ

ಸತ್ಸ್ವರೂಪನಾದ ಪರಮಾತ್ಮನಿಂದಲೇ ಆಗುತ್ತಿವೆ. ಆದುದರಿಂದ ಇವುಗಳಿಗಾಗಿ ನಾನು ಸಂತೋಷಪಡುವುದೂ ಇಲ್ಲ ; ದುಃಖಪಡುವುದೂ ಇಲ್ಲ.

ಸ್ವಭಾವಾದೇವ ಸಂದೃಶ್ಯಾ ವರ್ತಮಾನಾಃ ಪ್ರವೃತ್ತಯಃ ।
ಸ್ವಭಾವನಿರತಾಃ ಸರ್ವಾಃ ಪರಿತುಷ್ಯೇನ್ನ ಕೇನಚಿತ್ ॥೧೧॥

ಹಿಂದೆ ಮಾಡಿದ ಕರ್ಮಾನುಸಾರವಾಗಿ ಪ್ರಾಣಿಗಳ ಸ್ವಭಾವವಿರುತ್ತದೆ. ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳೂ ಅಂತಹ ಸ್ವಭಾವದಿಂದಲೇ ವರ್ತಿಸುತ್ತಿರುವುದು ಕಂಡುಬರುತ್ತದೆ. ತಮ್ಮ-ತಮ್ಮ ಸ್ವಭಾವಗಳಲ್ಲಿಯೇ ಎಲ್ಲರೂ ನಿರತರಾಗಿರುತ್ತಾರೆ. ಈ ರಹಸ್ಯವನ್ನು ಅರಿತು ಯಾರೂ ಎಂತಹ ಪರಿಸ್ಥಿತಿಯಲ್ಲಿಯೂ ಹಿಗ್ಗಬಾರದು.

ಪಶ್ಯ ಪ್ರಹ್ಲಾದ ಸಂಯೋಗಾನ್ವಿಪ್ರಯೋಗಪರಾಯಣಾನ್ ।
ಸಂಚಯಾಂಶ್ಚ ವಿನಾಶಾನ್ತಾನ್ನ ಕ್ವಚಿದ್ವಿದಧೇ ಮನಃ ॥೧೨॥

ಪ್ರಹ್ಲಾದ! ನೋಡು ; ಸಂಯೋಗಗಳೆಲ್ಲವೂ (ಸಂಬಂಧಗಳೆಲ್ಲವೂ) ವಿಯೋಗವನ್ನೇ ಆಶ್ರಯಿಸುತ್ತವೆ. (ವಿಯೋಗದಲ್ಲಿಯೇ ಪರ್ಯವಸಾನ ಹೊಂದುತ್ತವೆ.) ಸಂಚಯಗಳೆಲ್ಲವೂ (ಸಂಗ್ರಹಗಳೆಲ್ಲವೂ) ವಿನಾಶದಲ್ಲಿಯೇ ಅಂತ್ಯವಾಗುತ್ತವೆ. ಇದನ್ನು ನೋಡಿ ನನ್ನ ಮನಸ್ಸು ಸಂಯೋಗಗಳಿಂದಲೂ ಸಂಚಯಗಳಿಂದಲೂ ದೂರಸರಿದಿದೆ. ಯಾವುದರಲ್ಲಿಯೂ ಪ್ರವೃತ್ತವಾಗುವುದಿಲ್ಲ.

ಅನ್ತವನ್ತಿ ಚ ಭೂತಾನಿ ಗುಣಯುಕ್ತಾನಿ ಪಶ್ಯತಃ ।
ಉತ್ಪತ್ತಿನಿಧನಜ್ಞಸ್ಯ ಕಿಂ ಕಾರ್ಯಮವಶಿಷ್ಯತೇ ॥೧೩॥

ಸತ್ತ್ವ-ರಜಸ್ತಮೋಗುಣಯುಕ್ತವಾದ ಸಮಸ್ತಪ್ರಾಣಿಗಳ ನಾಶವನ್ನು ನೋಡುತ್ತಿರುವವನಿಗೆ, ಹುಟ್ಟು-ಸಾವುಗಳ ರಹಸ್ಯವನ್ನು ತಿಳಿದಿರುವವನಿಗೆ– ಇಲ್ಲಿ ಮಾಡಬೇಕಾದ ಕಾರ್ಯಶೇಷವು ಯಾವುದಿದೆ?

ಜಲಜಾನಾಮಪಿ ಹ್ಯನ್ತಂ ಪರ್ಯಾಯೇಣೋಪಲಕ್ಷಯೇ ।
ಮಹತಾಮಪಿ ಕಾಯಾನಾಂ ಸೂಕ್ಷ್ಮಾಣಾಂ ಚ ಮಹೋದಧೌ ॥೧೪॥

ಮಹಾಸಮುದ್ರದ ನೀರಿನಲ್ಲಿ ವಾಸಿಸುತ್ತಿರುವ ದೊಡ್ಡ-ದೊಡ್ಡದಾದ

ತಿಮಿ-ತಿಮಿಂಗಿಲಗಳೂ ಮತ್ತು ಸೂಕ್ಷ್ಮವಾದ ಕ್ರಿಮಿ-ಕೀಟಗಳೂ ಅನುಕ್ರಮವಾಗಿ ವಿನಾಶಹೊಂದುತ್ತಿರುವುದನ್ನೂ ನಾನು ನೋಡುತ್ತಿದ್ದೇನೆ.

ಜಙ್ಗಮಸ್ಥಾವರಾಣಾಂ ಚ ಭೂತಾನಾಮಸುರಾಧಿಪ ।
ಪಾರ್ಥಿವಾನಾಮಪಿ ವ್ಯಕ್ತಂ ಮೃತ್ಯುಂ ಪಶ್ಯಾಮಿ ಸರ್ವಶಃ ॥೧೫॥

ಅಸುರಾಧಿಪನೇ! ಭೂಮಿಯ ಮೇಲಿರುವ ಸ್ಥಾವರ-ಜಂಗಮಪ್ರಾಣಿಗಳೆಲ್ಲವೂ ಸರ್ವಪ್ರಕಾರಗಳಿಂದಲೂ ಮೃತ್ಯುವಶವಾಗುತ್ತಿರುವುದನ್ನು ನಾನು ನೋಡುತ್ತಿದ್ದೇನೆ.

ಅನ್ತರಿಕ್ಷಚರಾಣಾಂ ಚ ದಾನವೋತ್ತಮ ಪಕ್ಷಿಣಾಮ್ ।
ಉತ್ತಿಷ್ಠತೇ ಯಥಾಕಾಲಂ ಮೃತ್ಯುರ್ಬಲವತಾಮಪಿ ॥೧೬॥

ದಾನವೋತ್ತಮನೇ! ಆಕಾಶದಲ್ಲಿ ಸಂಚರಿಸುವ ಮಹಾಬಲಿಷ್ಠವಾದ ಪಕ್ಷಿಗಳಿಗೂ ಕಾಲಾನುಕ್ರಮವಾಗಿ ಮೃತ್ಯುವು ಪ್ರಾಪ್ತವಾಗುತ್ತದೆ.

ದಿವಿ ಸಂಚರಮಾಣಾನಿ ಹ್ರಸ್ವಾನಿ ಚ ಮಹಾನ್ತಿ ಚ ।
ಜ್ಯೋತೀಂಷ್ಯಪಿ ಯಥಾಕಾಲಂ ಪತಮಾನಾನಿ ಲಕ್ಷಯೇ ॥೧೭॥

ಆಕಾಶದಲ್ಲಿ ಸಂಚರಿಸುವ ಚಿಕ್ಕವುಗಳಾದ ಮತ್ತು ದೊಡ್ಡವುಗಳಾದ ಜ್ಯೋತಿಗಳೂ ಕಾಲಾನುಕ್ರಮವಾಗಿ ಕೆಳಕ್ಕೆ ಬೀಳುತ್ತಿರುವುದನ್ನು (ನಾಶವಾಗುತ್ತಿರುವುದನ್ನು) ನಾನು ನೋಡುತ್ತಿದ್ದೇನೆ.

ಇತಿ ಭೂತಾನಿ ಸಮ್ಪಶ್ಯನ್ನನುಷಕ್ತಾನಿ ಮೃತ್ಯುನಾ ।
ಸರ್ವಸಾಮಾನ್ಯಗೋ ವಿದ್ವಾನ್ಕೃತಕೃತ್ಯಃ ಸುಖಂ ಸ್ವಪೇ ॥೧೮॥

ಈ ರೀತಿಯಲ್ಲಿ ಪ್ರಾಣಿಗಳೆಲ್ಲವೂ ಮೃತ್ಯುಪಾಶದಿಂದ ಬದ್ಧವಾಗಿರುವುದನ್ನು ನೋಡಿ–ಇದು ಸರ್ವಸಾಮಾನ್ಯವೆಂದು ಭಾವಿಸಿ–ಇದರ ರಹಸ್ಯವನ್ನು ತಿಳಿದುಕೊಂಡು ಕೃತಕೃತ್ಯನಾಗಿ ಸುಖವಾಗಿ ನಿದ್ರಿಸುತ್ತೇನೆ.

ಸುಮಹಾನ್ತಮಪಿ ಗ್ರಾಸಂ ಗ್ರಸೇ ಲಬ್ಧಂ ಯದೃಚ್ಛಯಾ ।
ಶಯೇ ಪುನರಭುಞ್ಜಾನೋ ದಿವಸಾನಿ ಬಹೂನ್ಯಪಿ ॥೧೯॥

ದೈವೇಚ್ಛೆಯಿಂದ ಆಕಸ್ಮಿಕವಾಗಿ ಅಧಿಕವಾದ ಆಹಾರವು ಸಿಕ್ಕಿದರೆ ಅಷ್ಟನ್ನೂ ತಿಂದುಬಿಡುತ್ತೇನೆ. (ಒಂದು ತುತ್ತು ಸಿಕ್ಕಿದರೆ ಅಷ್ಟರಿಂದಲೇ

ತೃಪ್ತನಾಗುತ್ತೇನೆ.) ಅದೂ ಸಿಕ್ಕದಿದ್ದರೆ ಅನೇಕ ದಿವಸಗಳವರೆಗೆ ಆಹಾರವಿಲ್ಲದೆಯೇ ಮಲಗುತ್ತೇನೆ.

ಆಶಯನ್ತ್ಯಪಿ ಮಾಮನ್ನಂ ಪುನರ್ಬಹುಗುಣಂ ಬಹು ।
ಪುನರಲ್ಪಂ ಪುನಃ ಸ್ತೋಕಂ ಪುನರ್ನೈವೋಪಪದ್ಯತೇ ॥೨೦॥

ಕೆಲವು ವೇಳೆ ಕೆಲವು ಜನರು ಬಂದು ಬಹುಗುಣಯುಕ್ತವಾದ ಮೃಷ್ಟಾನ್ನವನ್ನು ಸಮೃದ್ಧವಾಗಿ ಭೋಜನಮಾಡಿಸುತ್ತಾರೆ. ಕೆಲವು ಸಮಯಗಳಲ್ಲಿ ಸ್ವಲ್ಪವೇ ಆಹಾರವು ಸಿಕ್ಕುತ್ತದೆ. ಕೆಲವು ಸಮಯಗಳಲ್ಲಿ ಅತ್ಯಲ್ಪವಾದ (ಒಂದು ತುತ್ತು) ಆಹಾರವು ಸಿಕ್ಕುತ್ತದೆ. ಕೆಲವು ಸಮಯಗಳಲ್ಲಿ ಆಹಾರವು ಸಿಕ್ಕುವುದೇ ಇಲ್ಲ.

ಕಣಂ ಕದಾಚಿತ್ಖಾದಾಮಿ ಪಿಣ್ಯಾಕಮಪಿ ಚ ಗ್ರಸೇ ।
ಭಕ್ಷಯೇ ಶಾಲಿಮಾಂಸಾನಿ ಭಕ್ಷ್ಯಾಂಶ್ಚೋಚ್ಚಾವಚಾನ್ಪುನಃ ॥೨೧॥

ಒಂದೊಂದು ಸಮಯದಲ್ಲಿ ಕಾಳಿನ ಕಿರುನುಚ್ಚನ್ನೇ ತಿಂದು ಸುಮ್ಮನಾಗುತ್ತೇನೆ. ಮತ್ತೊಂದು ಸಮಯದಲ್ಲಿ ಎಣ್ಣೆತೆಗೆದ ಹಿಂಡಿಯನ್ನೇ ತಿನ್ನುತ್ತೇನೆ. ಕೆಲವು ಸಮಯಗಳಲ್ಲಿ ಶಾಲ್ಯಾನ್ನಾದಿಗಳನ್ನೂ ತಿನ್ನುತ್ತೇನೆ. ಕೆಲವು ವೇಳೆ ಅನೇಕಪ್ರಕಾರವಾದ ಭಕ್ಷ್ಯಗಳನ್ನೂ ದೊರೆತಾಗ ತಿನ್ನುತ್ತೇನೆ.

ಶ್ರಯೇ ಕದಾಚಿತ್ಪರ್ಯಙ್ಕೇ ಭೂಮಾವಪಿ ಪುನಃ ಶಯೇ ।
ಪ್ರಾಸಾದೇ ಚಾಪಿ ಮೇ ಶಯ್ಯಾ ಕದಾಚಿದುಪಪದ್ಯತೇ ॥೨೨॥

ಕೆಲವು ಸಮಯಗಳಲ್ಲಿ ನಾನು ಮಂಚದ ಮೇಲೆ ಮಲಗುತ್ತೇನೆ. ಕೆಲವೊಮ್ಮೆ ನೆಲದ ಮೇಲೆಯೇ ಮಲಗುತ್ತೇನೆ. ಕೆಲವು ವೇಳೆ ನನಗೆ ದೊಡ್ಡ ದೊಡ್ಡ ಸೌಧಗಳಲ್ಲಿ ಮಲಗಲು ಹಂಸತೂಲಿಕಾತಲ್ಪಗಳೂ ಉಪಲಬ್ಧವಾಗುತ್ತವೆ.

ಧಾರಯಾಮಿ ಚ ಚೀರಾಣಿ ಶಾಣಕ್ಷೌಮಾಜಿನಾನಿ ಚ ।
ಮಹಾರ್ಹಾಣಿ ಚ ವಾಸಾಂಸಿ ಧಾರಯಾಮ್ಯಹಮೇಕದಾ ॥೨೩॥

ಕೆಲವು ಸಮಯಗಳಲ್ಲಿ ನಾನು ಸೆಣಬಿನ ಬಟ್ಟೆಗಳನ್ನೇ ಧರಿಸುತ್ತೇನೆ. ಕೆಲವು ಸಮಯಗಳಲ್ಲಿ ನಾರುಮಡಿಯನ್ನುಡುತ್ತೇನೆ. ಕೆಲವು ಸಮಯ

ಗಳಲ್ಲಿ ರೇಷ್ಮೆಯ ವಸ್ತ್ರಗಳನ್ನೂ ಕೆಲವು ಸಮಯಗಳಲ್ಲಿ ಮೃಗಚರ್ಮವನ್ನೂ ಧರಿಸುತ್ತೇನೆ. ಕೆಲವು ವೇಳೆ ನಾನು ಬಹುಮೂಲ್ಯವಾದ ಪೀತಾಂಬರಗಳನ್ನೂ ಧರಿಸುತ್ತೇನೆ.

ನ ಸಂನಿಪತಿತಂ ಧರ್ಮ್ಯಮುಪಭೋಗಂ ಯದೃಚ್ಛಯಾ ।
ಪ್ರತ್ಯಾಚಕ್ಷೇ ನ ಚಾಪ್ಯೇನಮನುರುಧ್ಯೇ ಸುದುರ್ಲಭಮ್ ॥೨೪॥

ದೈವೇಚ್ಛೆಯಿಂದ ನನಗೆ ಧರ್ಮಾನುಕೂಲವಾದ ಭೋಗ್ಯಪದಾರ್ಥಗಳು ಸಿಕ್ಕಿದರೆ ಅವನ್ನು ನಾನು ದ್ವೇಷಿಸುವುದಿಲ್ಲ ; ಉಪಭೋಗಿಸುತ್ತೇನೆ. ಅಂತಹ ಭೋಗ್ಯವಾದ ಪದಾರ್ಥಗಳನ್ನು ನಾನು ನಿರೀಕ್ಷಿಸುವುದಿಲ್ಲ. ಅತ್ಯಂತ ದುರ್ಲಭವಾದ ಭೋಗ್ಯವಸ್ತುಗಳನ್ನು ಪಡೆದುಕೊಳ್ಳಲು ಯಾವಾಗಲೂ ಇಚ್ಛಿಸುವುದೂ ಇಲ್ಲ.

ಅಚಲಮನಿಧನಂ ಶಿವಂ ವಿಶೋಕಂ
ಶುಚಿಮತುಲಂ ವಿದುಷಾಂ ಮತೇ ಪ್ರವಿಷ್ಟಮ್ ।
ಅನಭಿಮತಮಸೇವಿತಂ ವಿಮೂಢೈ-
ರ್ವ್ರತಮಿದಮಾಜಗರಂ ಶುಚಿಶ್ಚರಾಮಿ ॥೨೫॥

ನಾನು ಯಾವಾಗಲೂ ಶುಚಿಯಾಗಿದ್ದು–ಸುದೃಢವಾದ, ಅಮೃತರೂಪವಾದ, ಮಂಗಳಕರವಾದ, ಶೋಕರಹಿತವಾದ, ಪರಿಶುದ್ಧವಾದ, ಅನುಪಮವಾದ, ವಿದ್ವಾಂಸರ ಅಭಿಮತಕ್ಕೆ ಅನುಗುಣವಾದ, ಮೂಢರಾದವರು ಅನುಮೋದಿಸದ ಮತ್ತು ಸೇವಿಸಲಾಗದ ಆಜಗರವ್ರತವನ್ನು (ಪ್ರಯತ್ನವೇ ಇಲ್ಲದೇ ಜೀವಿಸುವ ಹೆಬ್ಬಾವಿನ ವ್ರತವನ್ನು ಹೋಲುವ ವ್ರತವನ್ನು) ಆಚರಿಸುತ್ತಿದ್ದೇನೆ.

ಅಚಲಿತಮತಿರಚ್ಯುತಃ ಸ್ವಧರ್ಮಾ-
ತ್ಪರಿಮಿತಸಂಸರಣಃ ಪರಾವರಜ್ಞಃ ।
ವಿಗತಭಯಕಷಾಯಲೋಭಮೋಹೋ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥೨೬॥

ಚಲಿಸದಿರುವ (ಸ್ಥಿರವಾದ) ಬುದ್ಧಿಯನ್ನು ಹೊಂದಿ, ಸ್ವಧರ್ಮದಿಂದ ಚ್ಯುತನಾಗದೇ, ಪ್ರಾಪಂಚಿಕವಿಷಯಗಳಲ್ಲಿ ಪರಿಮಿತವಾದ ವ್ಯವಹಾರವನ್ನು

ಮಾತ್ರವೇ ಇಟ್ಟುಕೊಂಡು, ಭಯ-ಅನುರಾಗ-ಲೋಭ ಮತ್ತು ಮೋಹ ಗಳಿಲ್ಲದವನಾಗಿ, ಪರಮಶ್ರೇಷ್ಠವಾದ ಪರಬ್ರಹ್ಮವನ್ನು ತಿಳಿದುಕೊಂಡು ಪರಿಶುದ್ಧನಾಗಿ ಈ * ಆಜಗರವ್ರತವನ್ನು ಆಚರಿಸುತ್ತಿದ್ದೇನೆ.

ಅನಿಯತಫಲಭಕ್ಷ್ಯಭೋಜ್ಯಪೇಯಂ
ವಿಧಿಪರಿಣಾಮವಿಭಕ್ತದೇಶಕಾಲಮ್ ।
ಹೃದಯಸುಖಮಸೇವಿತಂ ಕದರ್ಯೈ-
ರ್ವ್ರತಮಿದಮಾಜಗರಂ ಶುಚಿಶ್ಚರಾಮಿ ॥೨೭॥

ಈ ಆಜಗರವ್ರತವು ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡಿದೆ. ಈ ವ್ರತದಲ್ಲಿ ಫಲ-ಭಕ್ಷ್ಯ-ಭೋಜ್ಯ-ಲೇಹ್ಯ-ಚೋಷ್ಯ-ಪಾನೀಯಗಳನ್ನು ದೈವೇಚ್ಛೆಯಿಂದ ಉಪಲಬ್ಧವಾದಾಗ ಉಪಲಬ್ಧವಾದುದಷ್ಟನ್ನು ಮಾತ್ರವೇ ತಿನ್ನಬೇಕು. ಈ ವ್ರತವು ವಿಧಿಯ ಪರಿಣಾಮದಿಂದಲೇ ವಿಭಕ್ತವಾದ ದೇಶ-ಕಾಲಗಳುಳ್ಳದ್ದಾಗಿದೆ. (ಆಜಗರವ್ರತಸ್ಥನಿಗೆ ಆಹಾರವನ್ನು ಯಾವಾಗ ಒದಗಿಸಬೇಕು? ಎಲ್ಲಿಂದ ಒದಗಿಸಬೇಕು? ಎಂತಹ ಆಹಾರವನ್ನು ಯಾವ ಪರಿಮಾಣದಲ್ಲಿ ಒದಗಿಸಬೇಕು?–ಎಂಬುದೆಲ್ಲಕ್ಕೂ ವಿಧಿಯೇ ಕಾರಣವಾಗುತ್ತದೆ.) ಆದುದರಿಂದಲೇ ಕ್ಷುದ್ರರಾದವರು ಈ ವ್ರತವನ್ನು ಆಚರಿಸುವುದಿಲ್ಲ. ಅಂತಹ ವ್ರತವನ್ನು ನಾನು ಪವಿತ್ರಭಾವದಿಂದ ಆಚರಿಸುತ್ತೇನೆ.

ಇದಮಿದಮಿತಿ ತೃಷ್ಣಯಾಭಿಭೂತಂ
ಜನಮನವಾಪ್ತಧನಂ ವಿಷೀದಮಾನಮ್ ।
ನಿಪುಣಮನುನಿಶಮ್ಯ ತತ್ತ್ವಬುದ್ಧ್ಯಾ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥೨೮॥

* ಆಜಗರವ್ರತವೆಂದರೆ–ಹೆಬ್ಬಾವಿನ ವ್ರತ. ಕಾಡಿನಲ್ಲಿ ಎಲ್ಲಿಯೋ ಮರದ ಕೆಳಗೆ ಹೆಬ್ಬಾವು ಬಿದ್ದುಕೊಂಡಿರುತ್ತದೆ. ಸ್ಥೂಲಶರೀರಿಯಾದುದರಿಂದ ಅದು ಎಲ್ಲಿಗೂ ಹೋಗದೆ ಯಾವಾಗಲೂ ಒಂದೇ ಕಡೆಯಲ್ಲಿಯೇ ಮರದ ಕೊರಡಿನಂತೆಯೇ ಬಿದ್ದು ಕೊಂಡಿರುತ್ತದೆ. ಆದರೆ ಅದರ ಪರಿಸರದಲ್ಲಿ ಯಾವುದೇ ಪ್ರಾಣಿಯು ಸಿಕ್ಕಿದರೂ ಅದನ್ನು ಬಿಡದೆ ನುಂಗಿಬಿಡುತ್ತದೆ. ಆ ಪ್ರಾಣಿಯು ಯಾವಾಗ ಬರುತ್ತದೆ? ಹೇಗೆ ಅದಕ್ಕೆ ಆಹಾರವಾಗುತ್ತದೆ? ಎಂಬ ಪ್ರತೀಕ್ಷೆಯೇನೂ ಅದಕ್ಕೆ ಇಲ್ಲ. ಅದೃಷ್ಟಾಯತ್ತವಾಗಿ

'ಇದು ಬೇಕು ; ಅದು ಬೇಕು ; ಎಲ್ಲವೂ ಬೇಕು'– ಎಂದು ಧಾವಂತಪಡುತ್ತಾ ಆಶಾಪಾಶದಿಂದ ಬದ್ಧರಾಗಿರುವ ಜನರನ್ನೂ, ಎಷ್ಟೇ ಧಾವಂತಪಟ್ಟರೂ ಧನವು ಲಭಿಸದೇ ವಿಷಾದಪಡುವ ಜನರನ್ನೂ–ತತ್ತ್ವ ಬುದ್ಧಿಯಿಂದಲೂ, ಚತುರತೆಯಿಂದಲೂ ಚೆನ್ನಾಗಿ ನೋಡಿ–ಆಶೆಯೇ ಮೃತ್ಯು–ಎಂದು ನಿಶ್ಚಯಿಸಿ, ಈ ಆಜಗರವ್ರತವನ್ನು ಪವಿತ್ರಭಾವದಿಂದ ಆಚರಿಸುತ್ತಿದ್ದೇನೆ.

ಬಹುವಿಧಮನುದೃಶ್ಯ ಚಾರ್ಥಹೇತೋಃ
ಕೃಪಣಮಿಹಾರ್ಯಮನಾರ್ಯಮಾಶ್ರಯನ್ತಮ್ ।
ಉಪಶಮರುಚಿರಾತ್ಮವಾನ್ಪ್ರಶಾನ್ತೋ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥೨೯॥

ಧನಕ್ಕಾಗಿ ಶ್ರೇಷ್ಠರಾದ ಆರ್ಯರೂ ಅನಾರ್ಯರಾದ ನೀಚಪುರುಷ ರನ್ನು ದೀನಭಾವದಿಂದ ಆಶ್ರಯಿಸಿರುವುದನ್ನು ಹಲವು ಬಾರಿ ನೋಡಿ ಧನದ ಆಶೆಯನ್ನೇ ಶಮನಗೊಳಿಸಿಬಿಟ್ಟಿದ್ದೇನೆ. ನಾನೀಗ ಜಿತೇಂದ್ರಿಯನಾಗಿ ಶಾಂತನಾಗಿರುತ್ತಾ ಆಜಗರವ್ರತವನ್ನು ಪವಿತ್ರಭಾವದಿಂದ ಆಚರಿಸುತ್ತಿದ್ದೇನೆ.

ಸುಖಮಸುಖಮಲಾಭಮರ್ಥಲಾಭಂ
ರತಿಮರತಿಂ ಮರಣಂ ಚ ಜೀವಿತಂ ಚ ।
ವಿಧಿನಿಯತಮವೇಕ್ಷ್ಯ ತತ್ತ್ವತೋಽಹಂ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥೩೦॥

ಸುಖ-ದುಃಖಗಳು, ಲಾಭಾಲಾಭಗಳು, ಪ್ರಿಯಾಪ್ರಿಯಗಳು, ಜೀವನ-ಮರಣಗಳು–ಇವೆಲ್ಲವೂ ವಿಧಿವಿಹಿತವಾದುವುಗಳೆಂಬುದನ್ನು ಯಥಾರ್ಥ

ಯಾವುದಾದರೂ ಪ್ರಾಣಿಯು ಯಾವಾಗಲೋ ಬಂದು ಆ ಹಾವಿಗೆ ಆಹಾರವಾಗುತ್ತದೆ. ಇದು ಹೆಬ್ಬಾವಿನ ಗುಣ. ಅದರಂತೆ ಆಚರಿಸುವುದಕ್ಕೆ ಆಜಗರವ್ರತವೆಂದು ಹೆಸರು. ಹಾವಿಗೆ ಇದು ಸ್ವಭಾವಸಿದ್ಧವಾದರೂ ಮನುಷ್ಯನು ಇದನ್ನು ಅನುಸರಿಸಬೇಕಾದರೆ ದೊಡ್ಡದಾದ ಸಾಧನೆಯನ್ನೇ ಮಾಡಬೇಕಾಗುತ್ತದೆ.

ವಾಗಿ ತಿಳಿದುಕೊಂಡು ಪವಿತ್ರಭಾವದಿಂದ ಈ ಆಜಗರವ್ರತವನ್ನು ನಾನು ಆಚರಿಸುತ್ತಿದ್ದೇನೆ.

ಅಪಗತಭಯರಾಗಮೋಹದರ್ಪೋ
ಧೃತಿಮತಿಬುದ್ಧಿಸಮನ್ವಿತಃ ಪ್ರಶಾನ್ತಃ ।
ಉಪಗತಫಲಭೋಗಿನೋ ನಿಶಮ್ಯ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥೩೧॥

ಭಯ-ರಾಗ-ಮೋಹಾಭಿಮಾನಗಳೆಲ್ಲವನ್ನೂ ಕಳೆದುಕೊಂಡು ಧೈರ್ಯ-ಸುಮತಿ-ಸುಬುದ್ಧಿಗಳಿಂದ ಸಂಪನ್ನನಾಗಿ ಪ್ರಶಾಂತನಾಗಿದ್ದೇನೆ. ಯದೃಚ್ಛಾ ಲಾಭದಿಂದ ಸಂತೃಪ್ತರಾಗಿರುವ ಮಹಾತ್ಮರನ್ನು ಸಂದರ್ಶಿಸಿ ಅವರಂತೆ ನಾನೂ ಈ ಆಜಗರವ್ರತವನ್ನು ಪವಿತ್ರಭಾವದಿಂದ ಆಚರಿಸುತ್ತಿದ್ದೇನೆ.

ಅನಿಯತಶಯನಾಸನಃ ಪ್ರಕೃತ್ಯಾ
ದಮನಿಯಮವ್ರತಸತ್ಯಶೌಚಯುಕ್ತಃ ।
ಅಪಗತಫಲಸಂಚಯಃ ಪ್ರಹೃಷ್ಟೋ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥೩೨॥

ಮಲಗುವುದಕ್ಕಾಗಲೀ, ಕುಳಿತುಕೊಳ್ಳುವುದಕ್ಕಾಗಲೀ–ಯಾವುದೊಂದು ನಿಯತವಾದ ಸ್ಥಾನವನ್ನೂ ಇಟ್ಟುಕೊಳ್ಳದೇ, ಸ್ವಭಾವತಃ ದಮ-ನಿಯಮ-ವ್ರತ-ಸತ್ಯನಿಷ್ಠೆ ಮತ್ತು ಶೌಚಗಳಿಂದ ಸಂಪನ್ನನಾಗಿ, ಕರ್ಮಫಲಗಳ ಸಂಗ್ರಹಣೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಪ್ರಹೃಷ್ಟಾಂತರಂಗನಾಗಿ ಈ ಆಜಗರವ್ರತವನ್ನು ಪವಿತ್ರಭಾವದಿಂದ ಆಚರಿಸುತ್ತಿದ್ದೇನೆ.

ಅಪಗತಮಸುಖಾರ್ಥಮೀಹನಾರ್ಥೈ-
ರುಪಗತಬುದ್ಧಿರವೇಕ್ಷ್ಯ ಚಾತ್ಮಸಂಸ್ಥಮ್ ।
ತೃಷಿತಮನಿಯತಂ ಮನೋ ನಿಯನ್ತುಂ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥೩೩॥

ದುಃಖಕ್ಕೆ ಕಾರಣವಾದ ಕಾಮ್ಯಪ್ರಯೋಜನಗಳಿಂದ ವಿರಕ್ತರಾದ ಆತ್ಮನಿಷ್ಠರಾದ ಮಹಾಪುರುಷರನ್ನು ನೋಡಿ ನಾನು ಸುಜ್ಞಾನವನ್ನು

ಪಡೆದುಕೊಂಡಿರುತ್ತೇನೆ. ಆಶೆಯಿಂದ ನಿಬದ್ಧವಾಗಿರುವ ಮತ್ತು ಚಂಚಲ ವಾಗಿರುವ ಮನಸ್ಸನ್ನು ನಿಯಂತ್ರಿಸುವ ಸಲುವಾಗಿ ಈ ಆಜಗರವ್ರತವನ್ನು ಪವಿತ್ರಭಾವದಿಂದ ಆಚರಿಸುತ್ತಿದ್ದೇನೆ.

ನ ಹೃದಯಮನುರುಧ್ಯ ವಾಙ್ಮನೋ ವಾ
ಪ್ರಿಯಸುಖದುರ್ಲಭತಾಮನಿತ್ಯತಾಂ ಚ ।
ತದುಭಯಮುಪಲಕ್ಷಯನ್ನಿವಾಹಂ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥೩೪॥

ಬುದ್ಧಿಯನ್ನಾಗಲೀ, ಮಾತನ್ನಾಗಲೀ, ಮನಸ್ಸನ್ನಾಗಲೀ ನಿರೋಧಿಸದೇ ಪ್ರಿಯವನ್ನುಂಟುಮಾಡುವ ವಿಷಯಸುಖಗಳಿಗಾಗಿಯೇ ಹಾತೊರೆಯು ವವರನ್ನೂ ಮತ್ತು ಆ ವಿಷಯಸುಖಗಳು ಅವರಿಗೆ ಲಭಿಸದೇ ಇರುವುದನ್ನೂ, ಲಭಿಸಿದರೂ ಶಾಶ್ವತವಾಗಿ ಉಳಿಯದೇ ಇರುವುದನ್ನೂ–ಈ ಎರಡನ್ನೂ ಲಕ್ಷ್ಯವಿಟ್ಟು ನೋಡುವವನಂತೆ ನಾನು ಅವೇಕ್ಷಿಸಿ ಇದಕ್ಕೆ ಔಷಧಪ್ರಾಯ ವಾಗಿರುವ ಈ ಆಜಗರವ್ರತವನ್ನು ಪವಿತ್ರಭಾವದಿಂದ ಆಚರಿಸುತ್ತಿದ್ದೇನೆ.

ಬಹುಕಥಿತಮಿದಂ ಹಿ ಬುದ್ಧಿಮದ್ಭಿಃ
ಕವಿಭಿರಪಿ ಪ್ರಥಯದ್ಭಿರಾತ್ಮಕೀರ್ತಿಮ್ ।
ಇದಮಿದಮಿತಿ ತತ್ರ ತತ್ರ ಹನ್ತ
ಸ್ವಪರಮತೈರ್ಗಹನಂ ಪ್ರತರ್ಕಯದ್ಭಿಃ ॥೩೫॥

ತಮ್ಮ ಕೀರ್ತಿಯನ್ನು ವಿಸ್ತಾರಗೊಳಿಸುವ ಬುದ್ಧಿವಂತರೂ ತಮ್ಮ ಮತ್ತು ಇತರರ ಅಭಿಪ್ರಾಯಗಳಿಂದ ಗಹನವಾದ ಈ ವ್ರತದ ವಿಷಯವಾಗಿ ತರ್ಕ-ವಿತರ್ಕಗಳನ್ನು ಮಾಡುವ ವಿದ್ವಾಂಸರೂ–' ಇದು ಹೀಗೆಯೇ ಸರಿ ; ಇದನ್ನು ಹೀಗೆಯೇ ಆಚರಿಸಬೇಕು '– ಇದೇ ಮುಂತಾಗಿ ಗಹನವಿಚಾರ ಗಳನ್ನು ಅಲ್ಲಲ್ಲಿ ಹೇಳುತ್ತಿರುತ್ತಾರೆ. (ಆಜಗರವ್ರತವು ಅಶಾಸ್ತ್ರೀಯವಲ್ಲ. ವಿದ್ವಾಂಸರೂ ಇದನ್ನು ತರ್ಕ-ವಿತರ್ಕಗಳಿಂದ 'ಸರಿ' ಎಂದು ಸಿದ್ಧಪಡಿಸಿರು ತ್ತಾರೆ.)

ತದಿದಮನುನಿಶಮ್ಯ ವಿಪ್ರಪಾತಂ
ಪೃಥಗಭಿಪನ್ನಮಿಹಾಬುಧೈರ್ಮನುಷ್ಯೈಃ ।

ಅನವಸಿತಮನನ್ತದೋಷಪಾರಂ
ನೃಷು ವಿಹರಾಮಿ ವಿನೀತದೋಷತೃಷ್ಣಃ ॥೩೬॥

ಮೂರ್ಖರಾದವರು ಈ ಆಜಗರವ್ರತದ ನಿಯಮಾನುಷ್ಠಾನಗಳನ್ನು ಕೇಳಿದ ಮಾತ್ರದಿಂದಲೇ ಪ್ರಪಾತದಲ್ಲಿ ಬಿದ್ದವರಂತೆ ಭಯಗೊಳ್ಳುತ್ತಾರೆ. ಮಹಾವಿದ್ವಾಂಸರಾದ ಮನುಷ್ಯರು ಈ ವ್ರತದ ವಿಷಯವಾಗಿ ಬೇರೆಯ ಅಭಿಪ್ರಾಯವುಳ್ಳವರಾಗಿದ್ದರೆ. ಈ ಆಜಗರವ್ರತವು ಅಜ್ಞಾನನಾಶಕವೆಂದೂ, ಸಮಸ್ತವಾದ ದೋಷಗಳಿಂದಲೂ ಪಾರುಮಾಡುವುದೆಂದೂ ನಾನು ಭಾವಿಸಿದ್ದೇನೆ. ಆದುದರಿಂದ ತೃಷ್ಣಾದೋಷದಿಂದ ವಿಮುಕ್ತನಾಗಿ ಮನುಷ್ಯರ ಮಧ್ಯದಲ್ಲಿ ಸಂಚರಿಸುತ್ತಿದ್ದೇನೆ."

ಭೀಷ್ಮನು ಹೇಳುತ್ತಾನೆ :

ಅಜಗರಚರಿತಂ ವ್ರತಂ ಮಹಾತ್ಮಾ
ಯ ಇಹ ನರೋಽನುಚರೇದ್ವಿನೀತರಾಗಃ ।
ಅಪಗತಭಯಲೋಭಮೋಹಮನ್ಯುಃ
ಸ ಖಲು ಸುಖೀ ವಿಚರೇದಿಮಂ ವಿಹಾರಮ್ ॥೩೭॥

"ಯುಧಿಷ್ಠಿರ! ಯಾವ ಮಹಾಪುರುಷನು ರಾಗ, ಭಯ, ಲೋಭ, ಮೋಹ ಮತ್ತು ಕ್ರೋಧಗಳನ್ನು ತ್ಯಾಗಮಾಡಿ ಈ ಆಜಗರವ್ರತವನ್ನು ಆಚರಿಸುವನೋ–ಅವನು ಈ ಪ್ರಪಂಚದಲ್ಲಿ ಆನಂದದಿಂದ ವಿಹರಿಸುತ್ತಿರುತ್ತಾನೆ."

೧೭೯ನೆಯ ಅಧ್ಯಾಯವು ಮುಗಿಯಿತು.

೧೮೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಆತ್ಮಹತ್ಯಾದಿ ಪಾಪಕರ್ಮಗಳಿಂದ ದೂರವಿರಬೇಕೆಂಬುದರ ವಿಷಯವಾಗಿ ಇಂದ್ರ-ಕಾಶ್ಯಪರ ಸಂವಾದ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಬಾನ್ಧವಾಃ ಕರ್ಮ ವಿತ್ತಂ ವಾ ಪ್ರಜ್ಞಾ ವೇಹ ಪಿತಾಮಹ ।
ನರಸ್ಯ ಕಾ ಪ್ರತಿಷ್ಠಾ ಸ್ಯಾದೇತತ್ಪೃಷ್ಟೋ ವದಸ್ವ ಮೇ ॥೧॥

" ಪಿತಾಮಹನೇ! ನನ್ನ ಈ ಪ್ರಶ್ನೆಗೆ ಉತ್ತರಿಸು. ಬಾಂಧವರು, ಕರ್ಮ, ಧನ ಅಥವಾ ಬುದ್ಧಿ–ಇವುಗಳಲ್ಲಿ ಮಾನವನು ಯಾವುದನ್ನು ಆಶ್ರಯಿಸಬೇಕು?"

ಭೀಷ್ಮನು ಹೇಳುತ್ತಾನೆ :

ಪ್ರಜ್ಞಾ ಪ್ರತಿಷ್ಠಾ ಭೂತಾನಾಂ ಪ್ರಜ್ಞಾ ಲಾಭಃ ಪರೋ ಮತಃ ।
ಪ್ರಜ್ಞಾ ನಿಃಶ್ರೇಯಸೀ ಲೋಕೇ ಪ್ರಜ್ಞಾ ಸ್ವರ್ಗೋ ಮತಃ ಸತಾಮ್ ॥೨॥

"ಯುಧಿಷ್ಠಿರ! ಪ್ರಾಣಿಗಳಿಗೆ (ಮನುಷ್ಯರಿಗೆ) ಬುದ್ಧಿಯೇ ಪ್ರಧಾನವಾದ ಆಶ್ರಯವಾಗಿದೆ. ಬುದ್ಧಿಯೇ ಉಳಿದೆಲ್ಲವುಗಳಿಗಿಂತಲೂ ಲಾಭದಾಯಕವಾದುದೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಲೋಕದಲ್ಲಿ ಪ್ರಜ್ಞೆಯೇ ಮನುಷ್ಯನ ಕಲ್ಯಾಣಕ್ಕೆ ಕಾರಣವಾಗಿದೆ. ಸತ್ಪುರುಷರ ಅಭಿಪ್ರಾಯದಲ್ಲಿ ಬುದ್ಧಿಯೇ ಸ್ವರ್ಗವೂ ಆಗಿದೆ. (ಸ್ವರ್ಗಪ್ರಾಪಕವೂ ಆಗಿದೆ.)

ಪ್ರಜ್ಞಯಾ ಪ್ರಾಪಿತಾರ್ಥೋಽಹಿ ಬಲಿರೈಶ್ವರ್ಯಸಂಕ್ಷಯೇ ।
ಪ್ರಹ್ಲಾದೋ ನಮುಚಿರ್ಮಙ್ಕಿಸ್ತಸ್ಯಾಃ ಕಿಂ ವಿದ್ಯತೇ ಪರಮ್ ॥೩॥

ಬಲಿಚಕ್ರವರ್ತಿಯು ತನ್ನ ಐಶ್ವರ್ಯವು ಕ್ಷೀಣಿಸಿಹೋದಾಗ ಪ್ರಜ್ಞಾಬಲದಿಂದಲೇ ಪುನಃ ಆ ಐಶ್ವರ್ಯವನ್ನು ಪಡೆದುಕೊಂಡನು. ಪ್ರಹ್ಲಾದ, ನಮುಚಿ ಮತ್ತು ಮಂಕಿಗಳೂ ಪ್ರಜ್ಞಾಬಲದಿಂದಲೇ ಅರ್ಥಸಿದ್ಧಿಯನ್ನು ಪಡೆದುಕೊಂಡರು. ಪ್ರಪಂಚದಲ್ಲಿ ಪ್ರಜ್ಞೆಗಿಂತಲೂ ಶ್ರೇಷ್ಠವಾದುದು ಬೇರೆ ಯಾವುದಿದೆ?

ಈ ವಿಷಯದಲ್ಲಿ ಇಂದ್ರ-ಕಾಶ್ಯಪಸಂವಾದವೆಂಬ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಯುಧಿಷ್ಠಿರ! ಅದನ್ನೇ ತಿಳಿಸುವೆನು, ಕೇಳು.

ಹಿಂದೆ ಧನಮದದಿಂದ ಕೊಬ್ಬಿಹೋಗಿದ್ದ ಶ್ರೀಮಂತನಾದ ವೈಶ್ಯನೊಬ್ಬನು–ಕಠೋರವ್ರತನಿಷ್ಠನಾದ, ತಪಸ್ವಿಯಾದ, ಋಷಿಯ ಮಗನಾದ ಕಾಶ್ಯಪನನ್ನು ರಥದಿಂದ ಕೆಳಕ್ಕೆ ಬೀಳಿಸಿಬಿಟ್ಟನು. ಹಾಗೆ ಕೆಳಕ್ಕೆ ಬಿದ್ದು ಅತ್ಯಂತಪೀಡಿತನಾಗಿದ್ದ ಕಾಶ್ಯಪನು ಕ್ರುದ್ಧನಾಗಿ ಪ್ರಾಣವನ್ನೇ ಪರಿತ್ಯಜಿಸಬೇಕೆನ್ನುವ ಆಶಯದಿಂದ ಕೂಡಿದವನಾಗಿ ಹೇಳಿದನು :

ಮರಿಷ್ಯಾಮ್ಯಧನಸ್ಯೇಹ ಜೀವಿತಾರ್ಥೋ ನ ವಿದ್ಯತೇ ॥೬॥

“ನಾನು ಸತ್ತುಹೋಗುತ್ತೇನೆ. ಏಕೆಂದರೆ : ಈ ಪ್ರಪಂಚದಲ್ಲಿ ದರಿದ್ರನ ಜೀವನವು ವ್ಯರ್ಥವೇ ಸರಿ.”

ಹೀಗೆ ಪ್ರಾಣಪರಿತ್ಯಾಗಮಾಡಲು ನಿಶ್ಚಯಿಸಿ ಕುಳಿತಿದ್ದ, ಮೌನಿಯಾಗಿದ್ದ, ಜ್ಞಾನಶೂನ್ಯನಂತಿದ್ದ, ಧನದ ಆಶೆಯನ್ನು ಹೊಂದಿದ್ದ ಕಾಶ್ಯಪನ ಬಳಿಗೆ ಇಂದ್ರನು ನರಿಯ ರೂಪವನ್ನು ಧರಿಸಿ ಬಂದು ಅವನೊಡನೆ ಹೇಳಿದನು:

ಮನುಷ್ಯಯೋನಿಮಿಚ್ಛನ್ತಿ ಸರ್ವಭೂತಾನಿ ಸರ್ವಶಃ ।
ಮನುಷ್ಯತ್ವೇ ಚ ವಿಪ್ರತ್ವಂ ಸರ್ವ ಏವಾಭಿನನ್ದತಿ ॥೮॥

“ಮುನಿಯೇ! ಎಲ್ಲ ಪ್ರಾಣಿಗಳೂ ಎಲ್ಲ ಕಾಲಗಳಲ್ಲಿಯೂ ಮನುಷ್ಯಯೋನಿಯಲ್ಲಿ ಹುಟ್ಟಲು ಅಪೇಕ್ಷಿಸುತ್ತವೆ. ಆ ಮನುಷ್ಯತ್ವದಲ್ಲಿಯೂ ವಿಪ್ರತ್ವವನ್ನು ಎಲ್ಲರೂ ಪ್ರಶಂಸೆಮಾಡುತ್ತಾರೆ.

ಮನುಷ್ಯೋ ಬ್ರಾಹ್ಮಣಶ್ಚಾಸಿ ಶ್ರೋತ್ರಿಯಶ್ಚಾಸಿ ಕಾಶ್ಯಪ ।
ಸುದುರ್ಲಭಮವಾಪ್ಯೈತನ್ನ ದೋಷಾನ್ಮರ್ತುಮರ್ಹಸಿ ॥೯॥

ಕಾಶ್ಯಪ! ನೀನು ಮನುಷ್ಯನಾಗಿರುವೆ. ಮನುಷ್ಯರಲ್ಲಿಯೂ ಬ್ರಾಹ್ಮಣನಾಗಿರುವೆ. ಬ್ರಾಹ್ಮಣರಲ್ಲಿಯೂ ಶ್ರೋತ್ರಿಯನಾಗಿರುವೆ. ಈ ಶ್ರೋತ್ರಿಯತ್ವವು ಬಹಳ ಕಷ್ಟದಿಂದ ಲಭ್ಯವಾಗತಕ್ಕುದು. ಇಂತಹ ಶರೀರ

ವನ್ನು ದೋಷದೃಷ್ಟಿಯಿಂದ ಕಾಣುತ್ತಾ ಪ್ರಾಣಪರಿತ್ಯಾಗಕ್ಕೆ ಯತ್ನಿಸುತ್ತಿರುವುದು ನಿನಗೆ ಯೋಗ್ಯವಲ್ಲ.

ಸರ್ವೇ ಲಾಭಾಃ ಸಾಭಿಮಾನಾ ಇತಿ ಸತ್ಯವತೀ ಶ್ರುತಿಃ ।
ಸಂತೋಷಣೀಯರೂಪೋऽಸಿ ಲೋಭಾದ್ಯದಭಿಮನ್ಯಸೇ ॥೧೦॥

ಪ್ರಪಂಚದಲ್ಲಿ ಎಲ್ಲ ಲಾಭಗಳೂ ಅಭಿಮಾನದಿಂದ ಕೂಡಿದುವುಗಳೆಂಬುದು ಸತ್ಯಾರ್ಥಪ್ರತಿಪಾದಕವಾದ ಶ್ರುತಿಯ ವಚನವಾಗಿದೆ. (ಈ ಧನವನ್ನು ನಾನು ಸಂಪಾದಿಸಿದೆನು ; ನಾನು ಈ ಮನೆಯನ್ನು ಕಟ್ಟಿದೆನು ; ನಾನು ಈ ಗದ್ದೆಯನ್ನು ಕೊಂಡೆನು–ಇವೇ ಮುಂತಾಗಿ ಎಲ್ಲರೂ ಅಭಿಮಾನಪೂರ್ವಕವಾಗಿ ಹೇಳಿಕೊಳ್ಳುತ್ತಾರೆ.) ನೀನು ಎಲ್ಲರಿಗೂ ಸಂತೋಷವನ್ನುಂಟುಮಾಡುವ ಸ್ವರೂಪವನ್ನು ಹೊಂದಿರುವೆ. ಆದರೆ ಲೋಭದ ಕಾರಣದಿಂದಾಗಿ ನಿನ್ನ ಸ್ವರೂಪವನ್ನೇ ನೀನು ಅವಹೇಳನಮಾಡುತ್ತಿರುವೆ.

ಅಹೋ ಸಿದ್ಧಾರ್ಥತಾ ತೇಷಾಂ ಯೇಷಾಂ ಸನ್ತೀಹ ಪಾಣಯಃ ।
ಅತೀವ ಸ್ಪೃಹಯೇ ತೇಷಾಂ ಯೇಷಾಂ ಸನ್ತೀಹ ಪಾಣಯಃ ॥೧೧॥

ಯಾರ ಬಳಿಯಲ್ಲಿ ಭಗವಂತನು ದಯಪಾಲಿಸಿರುವ ಕೈಗಳಿವೆಯೋ–ಅವರೇ ಸಿದ್ಧಾರ್ಥರೆಂದು ನಾನು ಭಾವಿಸುತ್ತೇನೆ ಯಾರಿಗೆ ಕೈಗಳಿವೆಯೋ ಅವರ ಸೌಭಾಗ್ಯವನ್ನು ನಾನು ಅತ್ಯಂತವಾಗಿ ಅಪೇಕ್ಷಿಸುತ್ತೇನೆ.

ಪಾಣಿಮದ್ಭ್ಯಃ ಸ್ಪೃಹಾಸ್ಮಾಕಂ ಯಥಾ ತವ ಧನಸ್ಯ ವೈ ।
ನ ಪಾಣಿಲಾಭಾದಧಿಕೋ ಲಾಭಃ ಕಶ್ಚನ ವಿದ್ಯತೇ ॥೧೨॥

ನಿನಗೆ ಧನದ ಮೇಲೆ ಆಸೆಯಿರುವಂತೆ ನಮಗೆ ಕೈಗಳನ್ನು ಹೊಂದಿರುವವರಿಂದ (ಮನುಷ್ಯರಿಂದ) ಕೈಗಳನ್ನು ಪಡೆದುಕೊಳ್ಳಬೇಕೆನ್ನುವ (ಕೈಗಳಿರತಕ್ಕ ಪ್ರಾಣಿಗಳಾಗಬೇಕೆಂಬ) ಅಭಿಲಾಷೆಯಿದೆ. ನಮ್ಮ ದೃಷ್ಟಿಯಲ್ಲಿ ಹಸ್ತಲಾಭಕ್ಕಿಂತಲೂ ಅಧಿಕವಾದ ಬೇರೊಂದು ಲಾಭವೇ ಇಲ್ಲ.

ಅಪಾಣಿತ್ವಾದ್ವಯಂ ಬ್ರಹ್ಮನ್ಕಣ್ಟಕಂ ನೋದ್ಧರಾಮಹೇ ।
ಜನ್ತೂನುಚ್ಚಾವಚಾನಙ್ಗೇ ದಶತೋ ನ ಕಷಾಮ ವಾ ॥೧೩॥

ಬ್ರಾಹ್ಮಣೋತ್ತಮ! ನಮಗೆ ಕೈಗಳಿಲ್ಲದೇ ಇರುವುದರಿಂದ ಕಾಲು

ಗಳಲ್ಲಿ ಹೊಕ್ಕಿರುವ ಮುಳ್ಳನ್ನು ಕೀಳಲಾರೆವು. ನಮ್ಮ ಶರೀರವನ್ನು ಕಚ್ಚುವ ಸಣ್ಣದಾದ ಅಥವಾ ದೊಡ್ಡದಾದ ಹೇನು, ಉಣ್ಣೇಹುಳು–ಇತ್ಯಾದಿ ಪ್ರಾಣಿಗಳನ್ನೂ ತೆಗೆದೆಸೆಯಲಾರೆವು ಅಥವಾ ತೀಡಿಹಾಕಲಾರೆವು.

ಅಥ ಯೇಷಾಂ ಪುನಃ ಪಾಣೀ ದೇವದತ್ತೌ ದಶಾಙ್ಗುಲೀ ।
ಉದ್ಧರನ್ತಿ ಕೃಮೀನಙ್ಗಾದ್ದಶತೋ ನಿಕಷನ್ತಿ ಚ ॥೧೪॥

ದೈವದತ್ತವಾದ ಹತ್ತು ಬೆರಳುಗಳನ್ನು ಹೊಂದಿರುವ ಎರಡು ಕೈಗಳು ಯಾರಿಗಿವೆಯೋ–ಅವರು ಕಚ್ಚುತ್ತಿರುವ ಹುಳು-ಹುಪ್ಪಟೆಗಳನ್ನು ತಮ್ಮ ಅಂಗದಿಂದ ತೆಗೆದುಹಾಕುತ್ತಾರೆ ಅಥವಾ ತೀಡಿಹಾಕುತ್ತಾರೆ.

ವರ್ಷಾಹಿಮಾತಪಾನಾಂ ಚ ಪರಿತ್ರಾಣಾನಿ ಕುರ್ವತೇ ।
ಚೈಲಮನ್ನಂ ಸುಖಂ ಶಯ್ಯಾಂ ನಿವಾತಂ ಚೋಪಭುಞ್ಜತೇ ॥೧೫॥

ಕೈಗಳನ್ನು ಹೊಂದಿರುವವರು ಮಳೆಗಾಲದಲ್ಲಿಯೂ, ಹಿಮಗಾಲ ದಲ್ಲಿಯೂ, ಬೇಸಿಗೆಯಲ್ಲಿಯೂ ಛತ್ರಿಯೇ ಮೊದಲಾದುವುಗಳನ್ನು ಹಿಡಿದು ಕೊಂಡು ರಕ್ಷಣೆಯನ್ನು ಮಾಡಿಕೊಳ್ಳುತ್ತಾರೆ. ಕೈಗಳಿಂದ ಬಟ್ಟೆಗಳನ್ನು ಉಟ್ಟುಕೊಳ್ಳುತ್ತಾರೆ. ಸುಖವಾಗಿ ಅನ್ನವನ್ನು ಊಟಮಾಡುತ್ತಾರೆ. ಕೈಗಳಿಂದ ಹಾಸಿಗೆಯನ್ನು ಹಾಸಿಕೊಂಡು ಮಲಗುತ್ತಾರೆ. (ಕೈಗಳಿಂದಲೇ ಕಟ್ಟಿದ) ಮಳೆ-ಗಾಳಿಗಳ ಹೊಡೆತವಿಲ್ಲದ ಒಳ್ಳೊಳ್ಳೆಯ ಮನೆಗಳಲ್ಲಿ ಆಶ್ರಯವನ್ನು ಪಡೆಯುತ್ತಾರೆ.

ಅಧಿಷ್ಠಾಯ ಚ ಗಾಂ ಲೋಕೇ ಭುಞ್ಜತೇ ವಾಹಯನ್ತಿ ಚ ।
ಉಪಾಯೈರ್ಬಹುಭಿಶ್ಚೈವ ವಶ್ಯಾನಾತ್ಮನಿ ಕುರ್ವತೇ ॥೧೬॥

ಕೈಗಳಿರುವ ಮನುಷ್ಯರು ಗಾಡಿಗಳಿಗೆ ಎತ್ತುಗಳನ್ನು ಹೂಡಿ ಕುಳಿತು ಪ್ರಯಾಣಮಾಡುತ್ತಾರೆ. ಎತ್ತುಗಳನ್ನು ನೊಗಗಳಿಗೆ ಕಟ್ಟಿ ಉತ್ತು- ಬಿತ್ತುತ್ತಾರೆ. ಧನ-ಧಾನ್ಯಗಳನ್ನು ಪಡೆದುಕೊಂಡು ಅನೇಕ ವಿಧವಾದ ಭೋಗಗಳನ್ನು ಅನುಭವಿಸುತ್ತಾರೆ. ಅನೇಕವಿಧವಾದ ಉಪಾಯಗಳಿಂದ ಕೈಗಳ ಮೂಲಕವಾಗಿಯೇ ಎಲ್ಲವನ್ನೂ ವಶಪಡಿಸಿಕೊಳ್ಳುತ್ತಾರೆ.

ಯೇ ಖಲ್ವಜಿಹ್ವಾಃ ಕೃಪಣಾ ಅಲ್ಪಪ್ರಾಣಾ ಅಪಾಣಯಃ ।
ಸಹನ್ತೇ ತಾನಿ ದುಃಖಾನಿ ದಿಷ್ಟ್ಯಾ ತ್ವಂ ನ ತಥಾ ಮುನೇ ॥೧೭॥

ಮುನಿಯೇ! ಯಾರು ಮೂಗರೋ, ದೀನರೋ, ದುರ್ಬಲರೋ, ಕೈಗಳಿಲ್ಲದವರೋ–ಅಂತಹವರು ಮಾತ್ರವೇ ದುಃಖಗಳನ್ನು ಸಹಿಸಿಕೊಳ್ಳುತ್ತಾರೆ. ಸೌಭಾಗ್ಯವಶದಿಂದ ನೀನು ಕೈಯಿಲ್ಲದವನೂ ಅಲ್ಲ ; ಮೂಗನೂ ಅಲ್ಲ; ದುರ್ಬಲನೂ ಅಲ್ಲ ; ದೀನನೂ ಅಲ್ಲ. ಆದುದರಿಂದ ನೀನು ಪ್ರಾಣಗಳನ್ನು ತೊರೆಯುವ ಅಗತ್ಯವಿಲ್ಲ.

ದಿಷ್ಟ್ಯಾ ತ್ವಂ ನ ಶೃಗಾಲೋ ವೈ ನ ಕೃಮಿರ್ನ ಚ ಮೂಷಕಃ ।
ನ ಸರ್ಪೋ ನ ಚ ಮಣ್ಡೂಕೋ ನ ಚಾನ್ಯಃ ಪಾಪಯೋನಿಜಃ ॥೧೮॥

ಅದೃಷ್ಟವಶದಿಂದ ನೀನು ನನ್ನಂತೆ ನರಿಯೂ ಅಲ್ಲ ; ಕೃಮಿಯೂ ಅಲ್ಲ; ಇಲಿಯೂ ಅಲ್ಲ ; ಸರ್ಪವೂ ಅಲ್ಲ ; ಕಪ್ಪೆಯೂ ಅಲ್ಲ ; ಬೇರೆ ಯಾವುದಾದರೂ ಪಾಪಯೋನಿಯಲ್ಲಿ ಹುಟ್ಟಿದವನೂ ಆಗಿಲ್ಲ.

ಏತಾವತಾಪಿ ಲಾಭೇನ ತೋಷ್ಟುಮರ್ಹಸಿ ಕಾಶ್ಯಪ ।
ಕಿಂ ಪುನರ್ಯೋಽಸಿ ಸತ್ತ್ವಾನಾಂ ಸರ್ವೇಷಾಂ ಬ್ರಾಹ್ಮಣೋತ್ತಮಃ ॥೧೯॥

ಅಂತಹ ಯಾವ ಹೀನಪ್ರಾಣಿಯೂ ಆಗಿರದೇ ಸರ್ವಾಂಗಪೂರ್ಣವಾದ ಮಾನವತ್ವದ ಲಾಭದಿಂದಲೇ ನೀನು ಸಂತೋಷಪಡುವುದು ಯೋಗ್ಯವಾಗಿದೆ. ಇದಕ್ಕಿಂತಲೂ ಹೆಚ್ಚಿನ ಲಾಭವು ಇನ್ನೇನು ಬೇಕು? ಇದಲ್ಲದೇ ನೀನು ಎಲ್ಲ ಪ್ರಾಣಿಗಳಲ್ಲಿಯೂ ಶ್ರೇಷ್ಠನಾದ ಬ್ರಾಹ್ಮಣನಾಗಿರುವೆ.

ಇಮೇ ಮಾಂ ಕೃಮಯೋಽದನ್ತಿ ಯೇಷಾಮುದ್ಧರಣಾಯ ವೈ ।
ನಾಸ್ತಿ ಶಕ್ತಿರಪಾಣಿತ್ವಾತ್ಪಶ್ಯಾವಸ್ಥಾಮಿಮಾಂ ಮಮ ॥೨೦॥

ಬ್ರಾಹ್ಮಣೋತ್ತಮ! ನನ್ನ ಈ ಅವಸ್ಥೆಯನ್ನಾದರೂ ನೋಡು! ನನಗೆ ಕೈಗಳಿಲ್ಲದೇ ಇರುವುದರಿಂದ ಇಲ್ಲಿ ಹಾರಾಡುತ್ತಿರುವ ಕ್ರಿಮಿಗಳು ನನ್ನನ್ನು ಅಷ್ಟು ಹೊತ್ತಿನಿಂದಲೂ ಕಚ್ಚುತ್ತಲೇ ಇವೆ. ಇವನ್ನು ಓಡಿಸಲೂ ನಾನು ಅಸಮರ್ಥನಾಗಿದ್ದೇನೆ.

ಅಕಾರ್ಯಮಿತಿ ಚೈವೇಮಂ ನಾತ್ಮಾನಂ ಸಂತ್ಯಜಾಮ್ಯಹಮ್ ।
ನಾತಃ ಪಾಪೀಯಸೀಂ ಯೋನಿಂ ಪತೇಯಮಪರಾಮಿತಿ ॥೨೧॥

ಈ ಅವಸ್ಥೆಯಲ್ಲಿರುವುದು ನನಗೂ ದುಃಸಹವಾಗಿದ್ದರೂ ಆತ್ಮಹತ್ಯೆ

ಯನ್ನು ಮಾಡಿಕೊಳ್ಳುವುದು ಅಕಾರ್ಯವೆಂದೂ, ಪಾಪಸಂಪಾದಕವೆಂದೂ ತಿಳಿದು ನಾನು ಪ್ರಾಣಗಳನ್ನು ತ್ಯಜಿಸಿಲ್ಲ. ಆತ್ಮಹತ್ಯೆಯಂತಹ ಮಹಾ ಪಾಪದಿಂದಾಗಿ ಈಗಿರುವುದಕ್ಕಿಂತಲೂ ಪಾಪಿಷ್ಠವಾದ ಬೇರೊಂದು ಯೋನಿಯಲ್ಲಿ ಜನ್ಮವನ್ನು ತಾಳಿಯೇನೆಂಬ ಭಯವೂ ನನಗಿದೆ.

ಮಧ್ಯೇ ವೈ ಪಾಪಯೋನೀನಾಂ ಶಾರ್ಗಾಲೀಂ ಯಾಮಹಂ ಗತಃ ।
ಪಾಪೀಯಸ್ಯೋ ಬಹುತರಾ ಇತೋಽನ್ಯಾಃ ಪಾಪಯೋನಯಃ ॥೨೨॥

ಯದ್ಯಪಿ ನಾನು ಪಾಪಯೋನಿಗಳ ಮಧ್ಯದಲ್ಲಿ ಈ ಶೃಗಾಲಜನ್ಮವನ್ನು ತಾಳಿದ್ದರೂ ನಾನೂ ಪಾಪಯೋನಿಜನೇ ಆಗಿದ್ದರೂ–ಇದಕ್ಕಿಂತಲೂ ಪಾಪಿಷ್ಠವಾದ ಪಾಪಯೋನಿಗಳು ಅನೇಕ ಪ್ರಕಾರವಾಗಿವೆ.

ಜಾತ್ಯೈವ ಕೇ ಸುಖಿತರಾಃ ಸನ್ತ್ಯನ್ಯೇ ಭೃಶದುಃಖಿತಾಃ ।
ನೈಕಾನ್ತಂ ಸುಖಮೇವೇಹ ಕ್ವಚಿತ್ಪಶ್ಯಾಮಿ ಕಸ್ಯಚಿತ್ ॥೨೩॥

ಕೆಲವರು (ದೇವತೆಗಳೇ ಮೊದಲಾದವರು) ಜಾತಿಯಿಂದಲೇ (ದೇವತ್ವದಿಂದಲೇ) ಹೆಚ್ಚು ಸುಖಿಗಳಾಗಿರುತ್ತಾರೆ. ನನ್ನಂತಹ ಪಶುಪ್ರಾಣಿಗಳು ಜಾತಿಯಿಂದಲೇ ಬಹಳ ದುಃಖದಿಂದ ಕೂಡಿರುತ್ತವೆ. ಆದರೆ ಸರ್ವದಾ ಸುಖದಲ್ಲಿಯೇ ಇರುವ ಯಾವನೊಬ್ಬ ಮನುಷ್ಯನನ್ನೂ ನಾನು ಎಲ್ಲಿಯೂ ನೋಡಿರುವುದಿಲ್ಲ.

ಮನುಷ್ಯಾ ಹ್ಯಾಢ್ಯತಾಂ ಪ್ರಾಪ್ಯ ರಾಜ್ಯಮಿಚ್ಛನ್ತ್ಯನನ್ತರಮ್ ।
ರಾಜ್ಯಾದ್ದೇವತ್ವಮಿಚ್ಛನ್ತಿ ದೇವತ್ವಾದಿನ್ದ್ರತಾಮಪಿ ॥೨೪॥

ಮನುಷ್ಯರು ಮೊದಲು ಧನಿಗಳಾಗಿ ಬಳಿಕ ರಾಜ್ಯವನ್ನು ಅಪೇಕ್ಷಿಸುತ್ತಾರೆ. ರಾಜ್ಯವನ್ನು ಪಡೆದುಕೊಂಡನಂತರ ದೇವತೆಗಳಾಗಲು ಬಯಸುತ್ತಾರೆ. ಕ್ರಿಯಾಶಕ್ತಿಯಿಂದ ದೇವತ್ವವನ್ನು ಪಡೆದುಕೊಂಡನಂತರ ಇಂದ್ರಪದವಿಯನ್ನೇ ಅವರು ಅಪೇಕ್ಷಿಸುತ್ತಾರೆ.

ಭವೇಸ್ತ್ವಂ ಯದ್ಯಪಿ ತ್ವಾಢ್ಯೋ ನ ರಾಜಾ ನ ಚ ದೈವತಮ್ ।
ದೇವತ್ವಂ ಪ್ರಾಪ್ಯ ಚೇನ್ದ್ರತ್ವಂ ನೈವ ತುಷ್ಯೇಸ್ತಥಾ ಸತಿ ॥೨೫॥

ಒಂದು ವೇಳೆ ನಿನ್ನ ಆಶಯದಂತೆ ನೀನು ಧನಿಕನೇ ಆಗಬಹುದಾದರೂ (ವರ್ಣದಲ್ಲಿ ನೀನು ಬ್ರಾಹ್ಮಣನಾಗಿರುವುದರಿಂದ) ರಾಜನಾಗಲಾರೆ. ಒಂದು

ವೇಳೆ ರಾಜನಾದರೂ ದೇವತ್ವವನ್ನು ಪಡೆದುಕೊಳ್ಳಲಾರೆ. ದೇವತ್ವವನ್ನು ಪಡೆದುಕೊಂಡರೂ ದೇವೇಂದ್ರನಾಗಲಾರೆ. ದೇವೇಂದ್ರನಾದರೂ ಅಷ್ಟ ರಿಂದಲೂ ನಿನಗೆ ಸಂತುಷ್ಟಿಯಾಗುವುದಿಲ್ಲ.

ನ ತೃಪ್ತಿಃ ಪ್ರಿಯಲಾಭೇಽಸ್ತಿ ತೃಷ್ಣಾ ನಾದ್ಭಿಃ ಪ್ರಶಾಮ್ಯತಿ ।
ಸಮ್ಪ್ರಜ್ವಲತಿ ಸಾ ಭೂಯಃ ಸಮಿದ್ಭಿರಿವ ಪಾವಕಃ ॥೨೬॥

ಪ್ರಿಯವಾದ ವಸ್ತುವು ಸಿಕ್ಕಿತೆಂಬ ಕಾರಣದಿಂದಲೇ ತೃಪ್ತಿಯುಂಟಾಗು ವುದಿಲ್ಲ. ಹೆಚ್ಚುತ್ತಿರುವ ಬಾಯಾರಿಕೆಯು ನೀರಿನಿಂದ ಉಪಶಮನಹೊಂದು ವುದಿಲ್ಲ. ಸಮಿತ್ತುಗಳನ್ನು ಹಾಕಿದಷ್ಟೂ ಅಗ್ನಿಯು ಪ್ರಜ್ವಲಿಸುವಂತೆ–ಪ್ರಿಯ ವಾದ ವಸ್ತುಗಳನ್ನು ಪಡೆದುಕೊಳ್ಳುತ್ತಿದ್ದಂತೆಲ್ಲಾ ತೃಷ್ಣೆಯು ಪುನಃ ಪುನಃ ಹೆಚ್ಚುತ್ತಲೇ ಇರುತ್ತದೆ.

ಅಸ್ತ್ಯೇವ ತ್ವಯಿ ಶೋಕೋಽಪಿ ಹರ್ಷಶ್ಚಾಪಿ ತಥಾ ತ್ವಯಿ ।
ಸುಖದುಃಖೇ ತಥಾ ಚೋಭೇ ತತ್ರ ಕಾ ಪರಿದೇವನಾ ॥೨೭॥

ನಿನ್ನಲ್ಲಿ ಶೋಕವಿರುವಂತೆಯೇ ಹರ್ಷವೂ ನಿನ್ನಲ್ಲಿಯೇ ಇದೆ. ಸುಖ-ದುಃಖಗಳೆರಡೂ ಜೊತೆಯಲ್ಲಿಯೇ ಇವೆ. ಇದಕ್ಕಾಗಿ ಗೋಳಾಡು ವುದೇಕೆ?

ಪರಿಚ್ಛಿದ್ಯೈವ ಕಾಮಾನಾಂ ಸರ್ವೇಷಾಂ ಚೈವ ಕರ್ಮಣಾಮ್ ।
ಮೂಲಂ ಬುದ್ಧೀನ್ದ್ರಿಯಗ್ರಾಮಂ ಶಕುನ್ತಾನಿವ ಪಞ್ಜರೇ ॥೨೮॥

ಬುದ್ಧಿ ಮತ್ತು ಇಂದ್ರಿಯಗಳೇ ಸಕಲವಿಧವಾದ ಕಾಮನೆಗಳಿಗೂ ಕರ್ಮಗಳಿಗೂ ಮೂಲವಾಗಿವೆ. ಪಕ್ಷಿಗಳನ್ನು ಪಂಜರದಲ್ಲಿ ಬಂಧಿಸಿಡು ವಂತೆ–ಬುದ್ಧೀಂದ್ರಿಯಗಳನ್ನು ಬಂಧಿಸಿದರೆ (ವಶಪಡಿಸಿಕೊಂಡರೆ) ಯಾವ ವಿಧವಾದ ಭಯವೂ ಇರುವುದಿಲ್ಲ.

ನ ದ್ವಿತೀಯಸ್ಯ ಶಿರಸಶ್ಛೇದನಂ ವಿದ್ಯತೇ ಕ್ವಚಿತ್ ।
ನ ಚ ಪಾಣೇಸ್ತೃತೀಯಸ್ಯ ಯನ್ನಾಸ್ತಿ ನ ತತೋ ಭಯಮ್ ॥೨೯॥

ಮನುಷ್ಯನಿಗೆ ಎರಡನೆಯ ತಲೆಯನ್ನಾಗಲೀ ಮೂರನೆಯ ಕೈಯನ್ನಾ ಗಲೀ ಕತ್ತರಿಸುವರೆಂಬ ಯಾವ ಭಯವೂ ಇಲ್ಲ. ಎರಡನೆಯ ತಲೆ ಮೂರನೆಯ ಕೈ ಇದ್ದರಲ್ಲವೇ ಕತ್ತರಿಸುವ ಭಯವು ಹುಟ್ಟುವುದು? ಎರಡ

ನೆಯ ತಲೆಯೂ ಇಲ್ಲ ; ಮೂರನೆಯ ಕೈಯೂ ಇಲ್ಲ ; ಆದುದರಿಂದ ಕಳೆದುಕೊಳ್ಳುವ ಭಯವೂ ಇಲ್ಲ.

ನ ಖಲ್ವಪ್ಯರಸಜ್ಞಸ್ಯ ಕಾಮಃ ಕ್ವಚನ ಜಾಯತೇ ।
ಸಂಸ್ಪರ್ಶಾದ್ದರ್ಶನಾದ್ವಾಪಿ ಶ್ರವಣಾದ್ವಾಪಿ ಜಾಯತೇ ॥೩೦॥

ಯಾವನಿಗೆ ವಿಷಯದಲ್ಲಿ ಅನುಭವವೇ ಇಲ್ಲವೋ–ಅಂತಹವನಿಗೆ ಆ ವಿಷಯದಲ್ಲಿ ಕಾಮ (ಆಶೆ) ವೆಂಬುದೇ ಯಾವಾಗಲೂ ಹುಟ್ಟುವುದಿಲ್ಲ. ರಸಾನುಭವವಿಲ್ಲದವನಿಗೆ ಸ್ಪರ್ಶದಿಂದಾಗಲೀ, ದರ್ಶನದಿಂದಾಗಲೀ ಮತ್ತು ಶ್ರವಣದಿಂದಾಗಲೀ ಆಶೆಯು ಹುಟ್ಟುವುದಿಲ್ಲ.

ನ ತ್ವಂ ಸ್ಮರಸಿ ವಾರುಣ್ಯಾ ಲಟ್ವಾಕಾನಾಂ ಚ ಪಕ್ಷಿಣಾಮ್ ।
ತಾಭ್ಯಾಂ ಚಾಪ್ಯಧಿಕೋ ಭಕ್ಷ್ಯೋ ನ ಕಶ್ಚಿದ್ವಿದ್ಯತೇ ಕ್ವಚಿತ್ ॥೩೧॥

ಬ್ರಾಹ್ಮಣನೇ! ನೀನು ವಾರುಣೀಮದ್ಯದ ಮತ್ತು ಲಟ್ವಾಕವೆಂಬ ಹೆಸರಿನ ಪಕ್ಷಿಗಳ ಮಾಂಸದ ಸ್ಮರಣೆಯನ್ನು ಎಂದಿಗೂ ಮಾಡಿಕೊಳ್ಳಲಾರೆ. ಏಕೆಂದರೆ: ನೀನು ಮದ್ಯ-ಮಾಂಸಗಳನ್ನು ಸೇವಿಸುವುದಿಲ್ಲ. ಆದರೆ ತಾಮಸಿಗಳು ಮದ್ಯವನ್ನು ಕುಡಿಯುತ್ತಾರೆ. ಲಟ್ವಾಕಪಕ್ಷಿಯ ಮಾಂಸವನ್ನೂ ತಿನ್ನುತ್ತಾರೆ. ಅವರ ಅಭಿಪ್ರಾಯದಲ್ಲಿ ವಾರುಣೀಮದ್ಯಕ್ಕಿಂತಲೂ–ಲಟ್ವಾಕಪಕ್ಷಿಯ ಮಾಂಸಕ್ಕಿಂತಲೂ ಮಿಗಿಲಾದ ಪೇಯ-ಭಕ್ಷ್ಯಗಳೇ ಬೇರೊಂದಿಲ್ಲ.

ಯಾನಿ ಚಾನ್ಯಾನಿ ಭೂತೇಷು ಭಕ್ಷ್ಯಜಾತಾನಿ ಕಸ್ಯಚಿತ್ ।
ಯೇಷಾಮಭುಕ್ತಪೂರ್ವಾಣಿ ತೇಷಾಮಸ್ಮೃತಿರೇವ ತೇ ॥೩೨॥

ಪ್ರಾಣಿಗಳಲ್ಲಿ ಯಾವ ಪ್ರಾಣಿಗೆ ಯಾವ ಭೋಜನಪದಾರ್ಥವು ಪ್ರಿಯ ವಾಗಿದೆ ಎಂಬುದು ನಿನಗೆ ತಿಳಿಯದು. ನೀನು ಆ ಪದಾರ್ಥಗಳನ್ನು ತಿಂದೂ ಇಲ್ಲ ; ಅವುಗಳ ಸ್ಮರಣೆಯೂ ನಿನಗಿರುವುದಿಲ್ಲ. ಆದುದರಿಂದ ಅವುಗಳ ಅಭಾವದ ಬಗೆಗೆ ದುಃಖವೂ ಇಲ್ಲ.

ಅಪ್ರಾಶನಮಸಂಸ್ಪರ್ಶಮಸಂದರ್ಶನಮೇವ ಚ ।
ಪುರುಷಸ್ಯೈಷ ನಿಯಮೋ ಮನ್ಯೇ ಶ್ರೇಯೋ ನ ಸಂಶಯಃ ॥೩೩॥

ಕುಡಿಯದೇ ಇರುವುದು ಅಥವಾ ತಿನ್ನದೇ ಇರುವುದು, ಮುಟ್ಟದೇ ಇರುವುದು ಮತ್ತು ನೋಡದೇ ಇರುವುದು–ಈ ನಿಯಮಗಳನ್ನು ಅನುಸರಿಸು

ವುದು ಪುರುಷನ ಶ್ರೇಯಸ್ಸಿಗೆ ಕಾರಣಗಳಾಗುವುವೆಂಬುದರಲ್ಲಿ ಸಂಶಯವೇ ಇಲ್ಲ.

(೨೯ನೆಯ ಶ್ಲೋಕದಿಂದ ೩೩ನೆಯ ಶ್ಲೋಕದವರೆಗಿನ ಐದು ಶ್ಲೋಕ ಗಳ ಭಾವಾರ್ಥವನ್ನು ಹೀಗೆ ವಿವರಿಸಬಹುದಾಗಿದೆ. ಆಸೆಯು ಹೇಗೆ ಹುಟ್ಟುವುದೆಂಬುದನ್ನು ನರಿಯು ವಿವರಿಸಿ ಹೇಳುತ್ತದೆ. ಎರಡನೆಯ ಶಿರಸ್ಸಿನ ಛೇದನವಾಗುವುದೆಂದು ಯಾರೂ ಭಯಪಡುವುದಿಲ್ಲ. ಮೂರನೆಯ ಕೈಯಿನ ಛೇದನವಾಗುವುದೆಂದು ಯಾರು ಭಯಪಡುವುದಿಲ್ಲ. ಏಕೆಂದರೆ : ಅದು ಇಲ್ಲದಿರುವುದೇ ಅದಕ್ಕೆ ಕಾರಣ. ಹೀಗೆಯೇ ಇಲ್ಲದ ಪದಾರ್ಥಗಳ ವಿಷಯವಾಗಿ ಆಸೆಯೂ ಹುಟ್ಟುವುದಿಲ್ಲ. ಗಗನಕುಸುಮದ ವಿಷಯವಾಗಿ ಯಾರಾದರೂ ಆಸೆಪಡುವರೇ? ಒಂದು ವೇಳೆ ಇದ್ದರೂ ಆ ಪದಾರ್ಥದ ಆಸ್ವಾದಾನುಭವವಿಲ್ಲದಿದ್ದರೆ ಪದಾರ್ಥದಲ್ಲಿ ಆಶೆಯುಂಟಾಗುವುದಿಲ್ಲ. ವಾರುಣೀ ಮದ್ಯದ ರುಚಿಯಾಗಲೀ ಲಟ್ವಾಕಪಕ್ಷಿಯ ಮಾಂಸದ ಆಸ್ವಾದ ವಾಗಲೀ ಬ್ರಾಹ್ಮಣನಿಗೆ ಇಲ್ಲದೇ ಇರುವುದರಿಂದ ಅಂತಹ ಪದಾರ್ಥಗಳಲ್ಲಿ ಆಶೆಯುಂಟಾಗಲು ಅವಕಾಶವೇ ಇಲ್ಲ. ಎಷ್ಟೋ ಪ್ರಾಣಿಗಳು ಯಾವುದೋ ಪದಾರ್ಥವನ್ನು ಆಹಾರವಾಗಿ ತಿನ್ನುತ್ತವೆ. ದೊಡ್ಡ ಮೀನು ಚಿಕ್ಕ ಮೀನನ್ನೇ ನುಂಗುತ್ತದೆ. ಆದರೆ ಇದರಿಂದ ನಿರಾಮಿಷಭೋಜಿಯಾದ ಮನುಷ್ಯನಿಗೆ ಮೀನನ್ನು ತಿನ್ನಬೇಕೆನ್ನುವ ಇಚ್ಛೆಯುಂಟಾಗುವುದಿಲ್ಲ. ಅದರ ಬಗೆಗೆ ಸ್ಮರಣೆಯೂ ಅಂತಹ ಮನುಷ್ಯನಿಗೆ ಇರುವುದಿಲ್ಲ. ಹಸುವು ಹುಲ್ಲುತಿನ್ನುವು ದನ್ನು ನೋಡಿ ಮನುಷ್ಯನು ಹುಲ್ಲುತಿನ್ನಲು ಹೋಗುವುದಿಲ್ಲ. ಆದರೆ ಮದ್ಯ-ಮಾಂಸಾದಿಗಳು ಸಿಕ್ಕಲಿಲ್ಲ ; ಆದುದರಿಂದ ತಿನ್ನಲಿಲ್ಲ–ಎಂಬುದ ಕ್ಕಿಂತಲೂ ಮನುಷ್ಯನು ಅವು ಸಿಕ್ಕಿದರೂ ಅಂತಹ ವಸ್ತುಗಳನ್ನು ತಿನ್ನುವು ದಿಲ್ಲವೆಂಬ ನಿಯಮವನ್ನು ಪರಿಪಾಲಿಸಬೇಕು. ಇದರಿಂದ ಅವನಿಗೆ ಶ್ರೇಯಸ್ಸುಂಟಾಗುತ್ತದೆ. ಹಾಗೆಯೇ ನೀನೂ ಕಾಮೋಪಭೋಗಗಳಲ್ಲಿ ಆಸಕ್ತಿಯನ್ನು ವಹಿಸಬಾರದು. ಇದರಿಂದಲೇ ನಿನಗೆ ಶ್ರೇಯಸ್ಸು ಲಭಿಸುತ್ತದೆ. **"ಪ್ರವೃತ್ತಿರೇಷಾ ಭೂತಾನಾಂ ನಿವೃತ್ತಿಸ್ತು ಮಹಾಫಲಾ'**–ಎಂಬ ಮನು ಸ್ಮೃತಿಯ ವಾಕ್ಯಕ್ಕೆ ಇದು ವಿವರಣೆಯಾಗಿದೆ.)

ಪಾಣಿಮನ್ತೋ ಬಲವನ್ತೋ ಧನವನ್ತೋ ನ ಸಂಶಯಃ ।
ಮನುಷ್ಯಾ ಮಾನುಷೈರೇವ ದಾಸತ್ವಮುಪಪಾದಿತಾಃ ॥೩೪॥

ಕೈಗಳನ್ನು ಹೊಂದಿರುವವರು–ಬಲಿಷ್ಠರೂ, ಧನವಂತರೂ ಆಗಿರುವರೆಂಬುದರಲ್ಲಿ ಸಂಶಯವೇ ಇಲ್ಲ. ಇಂತಹ ಮನುಷ್ಯರೂ ಮನುಷ್ಯರಿಂದಲೇ ದಾಸತ್ವವನ್ನು ಹೊಂದಿಸಲ್ಪಟ್ಟಿರುತ್ತಾರೆ. (ಇದು ಮನುಷ್ಯನ ಸ್ವಭಾವವೇ ಆಗಿದೆ.)

ವಧಬನ್ಧಪರಿಕ್ಲೇಶೈಃ ಕ್ಲಿಶ್ಯನ್ತೇ ಚ ಪುನಃ ಪುನಃ ।
ತೇ ಖಲ್ವಪಿ ರಮನ್ತೇ ಚ ಮೋದನ್ತೇ ಚ ಹಸನ್ತಿ ಚ ॥೩೫॥

ದಾಸಭೂತರಾಗಿರುವ ಅನೇಕ ಜನರು ಆಢ್ಯರಿಂದ ಹಿಂಸೆ, ಬಂಧನ ಇವೇ ಮುಂತಾದ ಕ್ಲೇಶಗಳಿಂದ ಪುನಃ ಪುನಃ ಪೀಡಿಸಲ್ಪಡುತ್ತಿರುತ್ತಾರೆ. (ಆದರೂ ಕ್ಲೇಶಕ್ಕೊಳಗಾದವರು ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಿಲ್ಲ.) ಹಾಗೆ ಪೀಡೆಗೊಳಗಾದವರೂ ರಮಿಸುತ್ತಾರೆ ; ಸಂತೋಷಪಡುತ್ತಾರೆ ಮತ್ತು ನಗುತ್ತಾರೆ.

ಅಪರೇ ಬಾಹುಬಲಿನಃ ಕೃತವಿದ್ಯಾ ಮನಸ್ವಿನಃ ।
ಜುಗುಪ್ಸಿತಾಂ ಚ ಕೃಪಣಾಂ ಪಾಪವೃತ್ತಿಮುಪಾಸತೇ ॥೩೬॥

(ದಾರಿದ್ರ್ಯವನ್ನು ಕಳೆದುಕೊಂಡು ಆಢ್ಯನಾಗುವುದರಿಂದಲೇ ಕೃತಾರ್ಥನಾಗಲು ಸಾಧ್ಯವಾಗುವುದಿಲ್ಲ. ಆಢ್ಯತೆಯಲ್ಲಿಯೂ ಅನೇಕ ದೋಷಗಳಿವೆ.)

ಬಾಹುಬಲಸಂಪನ್ನರಾದ, ವಿದ್ಯಾಸಂಪನ್ನರಾದ, ಮನಸ್ವಿಗಳಾದ ಹಲವು ಜನರು-ಹೇಯವಾದ, ನಿಂದ್ಯವಾದ ಮತ್ತು ಪಾಪಪೂರ್ಣವಾದ ವೃತ್ತಿಯಿಂದಲೇ ಜೀವಿಸುತ್ತಿರುತ್ತಾರೆ.

ಉತ್ಸಹನ್ತೇ ಚ ತೇ ವೃತ್ತಿಮನ್ಯಾಮಪ್ಯುಪಸೇವಿತುಮ್ ।
ಸ್ವಕರ್ಮಣಾ ತು ನಿಯತಂ ಭವಿತವ್ಯಂ ತು ತತ್ತಥಾ ॥೩೭॥

ಅವರು ಪಾಪವೃತ್ತಿಯನ್ನು ಬಿಟ್ಟು ಬೇರೆಯ ವೃತ್ತಿಯನ್ನು ಆಶ್ರಯಿಸಲೂ ಉತ್ಸುಕರಾಗಿರುತ್ತಾರೆ. ಆದರೆ ಅವರವರ ಪ್ರಾರಬ್ಧಕರ್ಮಗಳಿಗೆ ಅನುಸಾರವಾಗಿ ಯಾವ ವೃತ್ತಿಯು ನಿಯತವಾಗಿರುವುದೋ ಅದೇ ವೃತ್ತಿಯಲ್ಲಿಯೇ ಇರಬೇಕಾದುದು ಅನಿವಾರ್ಯವಾಗಿರುತ್ತದೆ.

ನ ಪುಲ್ಕಸೋ ನ ಚಾಣ್ಡಾಲ ಆತ್ಮಾನಂ ತ್ಯಕ್ತುಮಿಚ್ಛತಿ ।
ತಯಾ ತುಷ್ಟಃ ಸ್ವಯಾ ಯೋನ್ಯಾ ಮಾಯಾಂ ಪಶ್ಯಸ್ವ ಯಾದೃಶೀಮ್ ॥೩೮॥

ಪುಲ್ಕಸನಾಗಲೀ, ಚಾಂಡಾಲನಾಗಲೀ–ಕೀಳುಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ಪ್ರಾಣಪರಿತ್ಯಾಗಮಾಡಲು ಇಚ್ಛಿಸುವುದಿಲ್ಲ. ಅವನು ತನ್ನ ಹುಟ್ಟಿನ ವಿಷಯದಲ್ಲಿ ಸಂತುಷ್ಟನಾಗಿಯೇ ಇರುತ್ತಾನೆ. ಭಗವಂತನ ಮಾಯೆಯು ಹೇಗಿರುವುದೆಂಬುದನ್ನಾದರೂ ನೋಡು, ಕಾಶ್ಯಪ!

ದೃಷ್ಟ್ವಾ ಕುಣೀನ್ಪಕ್ಷಹತಾನ್ಮನುಷ್ಯಾನಾಮಯಾವಿನಃ ।
ಸುಸಮ್ಪೂರ್ಣಃ ಸ್ವಯಾ ಯೋನ್ಯಾ ಲಬ್ಧಲಾಭೋಽಸಿ ಕಾಶ್ಯಪ ॥೩೯॥

ಕಾಶ್ಯಪ! ಲೋಕದಲ್ಲಿ ಕೆಲವು ಮನುಷ್ಯರು ಕುರುಡರಾಗಿರುತ್ತಾರೆ ; ಕಿವುಡರಾಗಿರುತ್ತಾರೆ ; ಹೆಳವರಾಗಿರುತ್ತಾರೆ ; ಕುಂಟರಾಗಿರುತ್ತಾರೆ ; ಪಾರ್ಶ್ವ ವಾಯುವಿನಿಂದ ಒಂದು ಭಾಗವನ್ನೇ ಕಳೆದುಕೊಂಡಿರುತ್ತಾರೆ ; ಯಾವಾ ಗಲೂ ರೋಗಿಗಳಾಗಿರುತ್ತಾರೆ. ಅಂತಹ ಯಾವ ನ್ಯೂನತೆಯೂ ಇಲ್ಲದೇ ನೀನು ಸರ್ವಾಂಗಗಳಿಂದಲೂ ಪರಿಪೂರ್ಣನಾಗಿರುವೆ. ಜನ್ಮದಿಂದ ಬ್ರಾಹ್ಮಣ ತ್ವವು ನಿನಗೆ ಲಭಿಸಿದೆ. (ಇದು ದೊಡ್ಡ ಲಾಭವಲ್ಲವೇ?)

ಯದಿ ಬ್ರಾಹ್ಮಣ ದೇಹಸ್ತೇ ನಿರಾತಙ್ಕೋ ನಿರಾಮಯಃ ।
ಅಙ್ಗಾನಿ ಚ ಸಮಗ್ರಾಣಿ ನ ಚ ಲೋಕೇಷು ಧಿಕ್ಕೃತಃ ॥೪೦॥

ಬ್ರಾಹ್ಮಣೋತ್ತಮ! ನಿನ್ನ ಶರೀರವು ಆತಂಕರಹಿತವಾಗಿದೆ. ರೋಗ ರಹಿತವಾಗಿದೆ. ನಿನ್ನ ಎಲ್ಲ ಅಂಗಗಳೂ ಪರಿಪೂರ್ಣವಾಗಿವೆ. ನಿನ್ನ ಅಂಗಗಳಲ್ಲಿ ಯಾವ ವಿಕಾರವೂ ಇರುವುದಿಲ್ಲ. ನೀನು ಲೋಕಜನರ ಧಿಕ್ಕಾರಕ್ಕೂ ಪಾತ್ರನಾಗಿರುವುದಿಲ್ಲ. (ಹೀಗಿರುವಾಗ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ವಿಚಾರವನ್ನೇಕೆ ಮಾಡುವೆ?)

ನ ಕೇನಚಿತ್ಪ್ರವಾದೇನ ಸತ್ಯೇನೈವಾಪಹಾರಿಣಾ ।
ಧರ್ಮಾಯೋತ್ತಿಷ್ಠ ವಿಪ್ರರ್ಷೇ ನಾತ್ಮಾನಂ ತ್ಯಕ್ತುಮರ್ಹಸಿ ॥೪೧॥

ವಿಪ್ರರ್ಷಿಯೇ! ಜಾತಿಭ್ರಂಶಕವಾದ, ಸತ್ಯವಾದ ಯಾವುದಾದರೂ ಕಳಂಕದಿಂದ ನೀನು ಯುಕ್ತನಾಗಿರುವುದಿಲ್ಲ. (ಅಂತಹ ಅಪರಾಧವನ್ನು

ನೀನು ಮಾಡಿಯೂ ಇಲ್ಲ. ನಿನ್ನ ಮೇಲೆ ಅಂತಹ ಅಪವಾದವು ಬಂದೂ ಇರುವುದಿಲ್ಲ.) ಆದುದರಿಂದ ಧರ್ಮಕಾರ್ಯಗಳನ್ನು ಮಾಡಲು ಎದ್ದೇಳು. ದೇಹತ್ಯಾಗಮಾಡುವುದು ನಿನಗೆ ಯೋಗ್ಯವಲ್ಲ.

ಯದಿ ಬ್ರಹ್ಮಞ್ಶೃಣೋಷ್ಯೇತಚ್ಛ್ರದ್ದಧಾಸಿ ಚ ಮೇ ವಚಃ ।
ವೇದೋಕ್ತಸ್ಯೈವ ಧರ್ಮಸ್ಯ ಫಲಂ ಮುಖ್ಯಮವಾಪ್ಸ್ಯಸಿ ॥೪೨॥

ಬ್ರಾಹ್ಮಣೋತ್ತಮ! ನೀನೇನಾದರೂ ನನ್ನ ಮಾತನ್ನು ಕೇಳುವುದಾದರೆ, ನನ್ನ ಮಾತಿನಲ್ಲಿ ಶ್ರದ್ಧೆಯಿಡುವುದಾದರೆ–ವೇದೋಕ್ತವಾದ ಧರ್ಮದ ಮುಖ್ಯಫಲವನ್ನೇ ಪಡೆದುಕೊಳ್ಳುವೆ.

ಸ್ವಾಧ್ಯಾಯಮಗ್ನಿಸಂಸ್ಕಾರಮಪ್ರಮತ್ತೋಽನುಪಾಲಯ ।
ಸತ್ಯಂ ದಮಂ ಚ ದಾನಂ ಚ ಸ್ಪರ್ಧಿಷ್ಠಾ ಮಾ ಚ ಕೇನಚಿತ್ ॥೪೩॥

ನೀನು ಜಾಗರೂಕನಾಗಿದ್ದುಕೊಂಡು ವೇದಾಧ್ಯಯನವನ್ನು ಮಾಡು ; ಅಗ್ನಿಹೋತ್ರವನ್ನು ಮಾಡು ; ಸತ್ಯನಿಷ್ಠನಾಗಿರು ; ಇಂದ್ರಿಯಗಳನ್ನು ನಿಗ್ರಹಿಸು; ಯಥಾಶಕ್ತಿ ದಾನಮಾಡು. ಆದರೆ ಯಾರೊಡನೆಯೂ ಸ್ಪರ್ಧಿಸಬೇಡ.

ಯೇ ಕೇಚನ ಸ್ವಧ್ಯಯನಾಃ ಪ್ರಾಪ್ತಾ ಯಜನಯಾಜನಮ್ ।
ಕಥಂ ತೇ ಚಾನುಶೋಚೇಯುರ್ಧ್ಯಾಯೇಯುರ್ವಾಪ್ಯಶೋಭನಮ್ ।
ಇಚ್ಛಂತಸ್ತೇ ವಿಹಾರಾಯ ಸುಖಂ ಮಹದವಾಪ್ನುಯುಃ ॥೪೪॥

ನಿನ್ನಂತೆಯೇ ಚೆನ್ನಾಗಿ ಅಧ್ಯಯನಮಾಡಿದ ಯಜನ-ಯಾಜನಗಳಲ್ಲಿಯೂ ನಿರತರಾದ ಬ್ರಾಹ್ಮಣರು ಯಾವ ಕಾರಣದಿಂದ ದುಃಖಪಡುತ್ತಾರೆ? ಪ್ರಾಣಪರಿತ್ಯಾಗವೆಂಬ ಅಶುಭವಾದ ಕಾರ್ಯವನ್ನು ಏತಕ್ಕಾಗಿ ಚಿಂತಿಸುತ್ತಾರೆ? ಅವರು ಯಜ್ಞಾದಿ ಪುಣ್ಯಕಾರ್ಯಗಳನ್ನು ಮಾಡಲು ಇಚ್ಛಿಪಡುತ್ತಾ (ಯಜ್ಞಾದಿಗಳನ್ನು ಮಾಡುತ್ತಾ) ಮಹಾಸುಖವನ್ನು ಹೊಂದುವರು.

ಉತ ಜಾತಾಃ ಸುನಕ್ಷತ್ರೇ ಸುತಿಥೌ ಸುಮುಹೂರ್ತಜಾಃ ।
ಯಜ್ಞದಾನಪ್ರಜೇಹಾಯಾಂ ಯತನ್ತೇ ಶಕ್ತಿಪೂರ್ವಕಮ್ ॥೪೫॥

ಯಾರು ಒಳ್ಳೆಯ ನಕ್ಷತ್ರದಲ್ಲಿ, ಶುಭತಿಥಿಯಲ್ಲಿ, ಒಳ್ಳೆಯ ಮುಹೂರ್ತದಲ್ಲಿ ಹುಟ್ಟಿರುವರೋ–ಅವರು ಯಜ್ಞಮಾಡಲು, ದಾನಮಾಡಲು ಮತ್ತು ಸತ್ಸಂತಾನವನ್ನು ಪಡೆದುಕೊಳ್ಳಲು ಶಕ್ತಿಪೂರ್ವಕವಾಗಿ ಪ್ರಯತ್ನಿಸುತ್ತಾರೆ.

ನಕ್ಷತ್ರೇಷ್ವಾಸುರೇಷ್ವನ್ಯೇ ದುಸ್ತಿಥೌ ದುರ್ಮುಹೂರ್ತಜಾಃ ।
ಸಮ್ಭವನ್ತ್ಯಾಸುರೀಂ ಯೋನಿಂ ಯಜ್ಞಪ್ರಸವವರ್ಜಿತಾಃ ॥೪೬॥

ಆಸುರ (ದುಷ್ಟ) ನಕ್ಷತ್ರದಲ್ಲಿ, ದೂಷಿತವಾದ ತಿಥಿಯಲ್ಲಿ, ಅಶುಭ ಮುಹೂರ್ತದಲ್ಲಿ ಹುಟ್ಟಿರುವ ಕೆಲವರು ಯಜ್ಞಗಳನ್ನು ಮಾಡದೆ, ಮಕ್ಕಳನ್ನು ಪಡೆದುಕೊಳ್ಳದೇ ಅವಸಾನಾನಂತರದಲ್ಲಿ ಆಸುರೀ (ದುಷ್ಟ) ಯೋನಿಗಳಲ್ಲಿ ಹುಟ್ಟುತ್ತಾರೆ.

ಅಹಮಾಸಂ ಪಣ್ಡಿತಕೋ ಹೈತುಕೋ ವೇದನಿನ್ದಕಃ ।
ಆನ್ವೀಕ್ಷಿಕೀಂ ತರ್ಕವಿದ್ಯಾಮನುರಕ್ತೋ ನಿರರ್ಥಿಕಾಮ್ ॥೪೭॥

ನಾನು ಹಿಂದಿನ ಜನ್ಮದಲ್ಲಿ ಒಬ್ಬ ಪಂಡಿತನಾಗಿದ್ದೆನು. ಕುತರ್ಕಗಳನ್ನು ಆಶ್ರಯಿಸಿ ವೇದಗಳನ್ನು ನಿಂದಿಸುತ್ತಿದ್ದೆನು. ಪ್ರತ್ಯಕ್ಷಪ್ರಮಾಣವನ್ನೇ ಆಧರಿಸಿದ್ದ ನಿರರ್ಥಕವಾದ ತರ್ಕವಿದ್ಯೆಯಲ್ಲಿ ನನಗೆ ಹೆಚ್ಚಿನ ಅನುರಾಗವಿದ್ದಿತು.

ಹೇತುವಾದಾನ್ಪ್ರವದಿತಾ ವಕ್ತಾ ಸಂಸತ್ಸು ಹೇತುಮತ್ ।
ಆಕ್ರೋಷ್ಟಾ ಚಾಭಿವಕ್ತಾ ಚ ಬ್ರಹ್ಮವಾಕ್ಯೇಷು ಚ ದ್ವಿಜಾನ್ ॥೪೮॥

ನಾನು ವಿದ್ವತ್ಸಭೆಗಳಿಗೆ ಹೋಗಿ ಯುಕ್ತಿಯುಕ್ತವಾದ ಮಾತುಗಳನ್ನು ತರ್ಕಬದ್ಧವಾಗಿ ಹೇಳುತ್ತಿದ್ದೆನು. ಉಳಿದ ಬ್ರಾಹ್ಮಣರು ಶ್ರದ್ಧಾಪೂರ್ವಕವಾಗಿ ವೇದವಾಕ್ಯಗಳನ್ನು ವಿಚಾರಮಾಡುತ್ತಿದ್ದರೆ ನಾನು ಅವರ ವಿಚಾರಸರಣಿಯನ್ನು ಯುಕ್ತಿಯುಕ್ತವಾದ ಮಾತುಗಳಿಂದ ಖಂಡಿಸುತ್ತಿದ್ದೆನು ಮತ್ತು ಆ ಬ್ರಾಹ್ಮಣರನ್ನು ಬಹಳವಾಗಿ ನಿಂದಿಸುತ್ತಿದ್ದೆನು.

ನಾಸ್ತಿಕಃ ಸರ್ವಶಙ್ಕೀ ಚ ಮೂರ್ಖಃ ಪಣ್ಡಿತಮಾನಿಕಃ ।
ತಸ್ಯೇಯಂ ಫಲನಿರ್ವೃತ್ತಿಃ ಶೃಗಾಲತ್ವಂ ಮಮ ದ್ವಿಜ ॥೪೯॥

ವಿಪ್ರಶ್ರೇಷ್ಠನೇ! ನಾನು ನಾಸ್ತಿಕನಾಗಿದ್ದೆನು. ಎಲ್ಲವನ್ನೂ ಸಂಶಯ ದೃಷ್ಟಿಯಿಂದಲೇ ಕಾಣುತ್ತಿದ್ದೆನು. ಯದ್ಯಪಿ ಮೂರ್ಖನೇ ಆಗಿದ್ದರೂ

ನಾನೊಬ್ಬ ಮಹಾಪಂಡಿತನೆಂಬ ದುರಭಿಮಾನವು ನನಗಿದ್ದಿತು. ಹಾಗೆ ಮಾಡುತ್ತಿದ್ದುದರ ಫಲವಾಗಿಯೇ ಈಗ ಈ ನರಿಯ ಜನ್ಮವನ್ನು ಪಡೆದು ಕೊಂಡಿರುತ್ತೇನೆ.

ಅಪಿ ಜಾತು ತಥಾ ತಸ್ಮಾದಹೋರಾತ್ರಶತೈರಪಿ ।
ಯದಹಂ ಮಾನುಷೀಂ ಯೋನಿಂ ಶೃಗಾಲಃ ಪ್ರಾಪ್ನುಯಾಂ ಪುನಃ ॥

ನರಿಯಾಗಿ ಹುಟ್ಟಿರುವ ನಾನು ಹಗಲು-ರಾತ್ರಿಗಳೆನ್ನದೇ ನೂರಾರು ದಿವಸಗಳು ಅನವರತವಾಗಿ ಸಾಧನೆಮಾಡಿದರೂ ಪಾಪಗಳನ್ನು ಕಳೆದು ಕೊಂಡು ಮನುಷ್ಯಜನ್ಮವನ್ನು ಯಾವಾಗಲಾದರೂ ಪುನಃ ಪಡೆದುಕೊಳ್ಳಲು ಸಮರ್ಥನಾಗುವೆನೇ?

ಸಂತುಷ್ಟಶ್ಚಾಪ್ರಮತ್ತಶ್ಚ ಯಜ್ಞದಾನತಪೋರತಿಃ ।
ಜ್ಞೇಯಜ್ಞಾತಾ ಭವೇಯಂ ವೈ ವರ್ಜ್ಯವರ್ಜಯಿತಾ ತಥಾ ॥೫೧॥

ಮುಂದೆ ಮನುಷ್ಯನಾಗಿ ಹುಟ್ಟಿದರೆ ನಾನು ಸಂತುಷ್ಟನಾಗಿರುವೆನು. ಜಾಗರೂಕನಾಗಿರುವೆನು. ಯಜ್ಞ-ದಾನ-ತಪಸ್ಸುಗಳಲ್ಲಿ ನಿರತನಾಗಿರುವೆನು. ಯಾವುದನ್ನು (ಬ್ರಹ್ಮವಸ್ತುವನ್ನು) ತಿಳಿಯಬೇಕೋ ಅದನ್ನು ತಿಳಿದು ಕೊಳ್ಳುವೆನು. ತ್ಯಾಗಕ್ಕೆ ಯೋಗ್ಯವಾದ ವಸ್ತುಗಳನ್ನು ತ್ಯಾಗಮಾಡುವೆನು."

ಹೀಗೆ ನರಿಯ ರೂಪದಲ್ಲಿದ್ದ ಇಂದ್ರನು ಕಾಶ್ಯಪನಿಗೆ ಹೇಳಿ ವಿರಮಿಸ ಲಾಗಿ, ವಿಸ್ಮಿತನಾದ ಕಾಶ್ಯಪನು ಮೇಲೆದ್ದು ನರಿಯನ್ನು ಕುರಿತು ಹೇಳಿದನು :

"ಶೃಗಾಲನೇ! ಅತ್ಯಾಶ್ಚರ್ಯ! ನೀನು ಮಾತನಾಡುವುದರಲ್ಲಿ ಕುಶಲ ನಾಗಿರುವೆ ; ಬುದ್ಧಿವಂತನೂ ಆಗಿರುವೆ."

ಹೀಗೆ ಹೇಳಿದನಂತರ ಬ್ರಾಹ್ಮಣನು ತನ್ನ ಜ್ಞಾನದೃಷ್ಟಿಯಿಂದ ಆ ನರಿಯನ್ನು ನೋಡಿದನು. ಒಡನೆಯೇ ಬ್ರಾಹ್ಮಣನು ನರಿಯ ಆಕಾರದಲ್ಲಿ ಶಚೀಪತಿಯಾದ, ದೇವದೇವನಾದ ದೇವೇಂದ್ರನನ್ನು ಕಂಡನು. ಬಳಿಕ ಕಾಶ್ಯಪನು ಇಂದ್ರನನ್ನು ಯಥೋಚಿತವಾಗಿ ಪೂಜಿಸಿ ಸತ್ಕರಿಸಿದನು. ಇಂದ್ರ ನಿಂದ ಅಪ್ಪಣೆಯನ್ನು ಪಡೆದು ತನ್ನ ಮನೆಗೆ ಹೊರಟುಹೋದನು."

ಗ೮೦ನೆಯ ಅಧ್ಯಾಯವು ಮುಗಿಯಿತು.

೧೮೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶುಭಾಶುಭಕರ್ಮಗಳ ಪರಿಣಾಮ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದ್ಯಸ್ತಿ ದತ್ತಮಿಷ್ಟಂ ವಾ ತಪಸ್ತಪ್ತಂ ತಥೈವ ಚ ।
ಗುರೂಣಾಂ ವಾಪಿ ಶುಶ್ರೂಷಾ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹ! ದಾನಮಾಡಿದರೆ, ಯಜ್ಞಮಾಡಿದರೆ, ತಪಸ್ಸುಮಾಡಿದರೆ ಮತ್ತು ಗುರುಶುಶ್ರೂಷೆಯನ್ನು ಮಾಡಿದರೆ ಫಲವೇನಾದರೂ ಇರುವುದೇ? ಇರುವುದಾದಲ್ಲಿ ಅದನ್ನು ನನಗೆ ವಿವರಿಸಿ ಹೇಳು.” (ದತ್ತಮಿಷ್ಟಂ– ಎಂಬುದಕ್ಕೆ ವ್ಯಾಖ್ಯಾನಕಾರರು ಹೀಗೆ ವಿವರಿಸಿದ್ದಾರೆ : **ಶರಣಾಗತಸಂತ್ರಾಣಂ ಭೂತಾನಾಮಪ್ಯಹಿಂಸನಮ್ । ಬಹಿರ್ವೇದಿ ಚ ಯದ್ದಾನಂ ದತ್ತಮಿತ್ಯಭಿಧೀಯತೇ ।** –ಶರಣಾಗತರಕ್ಷಣೆ, ಪ್ರಾಣಿಗಳನ್ನು ಹಿಂಸಿಸದೇ ಇರುವುದು, ಬಹಿರ್ವೇದಿಯಲ್ಲಿ ದಾನಮಾಡುವುದು ಇವುಗಳಿಗೆ ದತ್ತವೆಂದು ಹೆಸರು. **ಅಗ್ನಿಹೋತ್ರಂ ತಪಃ ಶೌಚಂ ವೇದಾನಾಂ ಚಾನುಶಾಸನಮ್ । ಆತಿಥ್ಯಂ ವೈಶ್ವದೇವಂ ಚ ಇಷ್ಟಮಿತ್ಯಭಿಧೀಯತೇ॥** ಅಗ್ನಿಹೋತ್ರ, ಕೃಚ್ಛ್ರ-ಚಾಂದ್ರಾಯಣಾದಿ ತಪಸ್ಸುಗಳು, ಶೌಚ, ವೇದವಿಹಿತವಾದ ಮಾರ್ಗದಲ್ಲಿ ನಡೆಯುವುದು, ಅತಿಥಿಸತ್ಕಾರ, ವೈಶ್ವದೇವ–ಇವುಗಳಿಗೆ ಇಷ್ಟವೆಂದು ಹೆಸರು. ದತ್ತ ಮತ್ತು ಇಷ್ಟಗಳು ಗೃಹಸ್ಥನ ಧರ್ಮವೆಂದೂ, ತಪಸ್ಸು ವಾನಪ್ರಸ್ಥನ ಧರ್ಮವೆಂದೂ, ಗುರುಶುಶ್ರೂಷೆಯು ಬ್ರಹ್ಮಚಾರಿಯ ಧರ್ಮವೆಂದೂ ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.)

ಭೀಷ್ಮನು ಹೇಳುತ್ತಾನೆ :

ಆತ್ಮನಾನರ್ಥಯುಕ್ತೇನ ಪಾಪೇ ನಿವಿಶತೇ ಮನಃ ।
ಸ್ವಕರ್ಮಕಲುಷಂ ಕೃತ್ವಾ ಕೃಚ್ಛ್ರೇ ಲೋಕೇ ವಿಧೀಯತೇ ॥೨॥

“ಯುಧಿಷ್ಠಿರ! ಕಾಮ-ಕ್ರೋಧಾದಿ ದೋಷಗಳಿಂದ ಯುಕ್ತವಾದ ಬುದ್ಧಿಯಿಂದ ಪ್ರಚೋದಿತವಾದ ಮನಸ್ಸು ಪಾಪಕರ್ಮಗಳಲ್ಲಿ ಪ್ರವೃತ್ತವಾಗುತ್ತದೆ. ಹೀಗೆ ಮನುಷ್ಯನು ತನ್ನ ಕರ್ಮಗಳ ಮೂಲಕವಾಗಿಯೇ

ಪಾಪವನ್ನು ಆರ್ಜಿಸಿಕೊಂಡು ದುಃಖಮಯವಾದ ಲೋಕದಲ್ಲಿ (ನರಕದಲ್ಲಿ) ಬೀಳುತ್ತಾನೆ.

ದುರ್ಭಿಕ್ಷಾದೇವ ದುರ್ಭಿಕ್ಷಂ ಕ್ಲೇಶಾತ್ಕ್ಲೇಶಂ ಭಯಾದ್ಭಯಮ್ ।
ಮೃತೇಭ್ಯಃ ಪ್ರಮೃತಂ ಯಾನ್ತಿ ದರಿದ್ರಾಃ ಪಾಪಕಾರಿಣಃ ॥೩॥

ಪಾಪಕರ್ಮವನ್ನೇ ಮಾಡುವ ದರಿದ್ರಮನುಷ್ಯರು ಒಂದು ದುರ್ಭಿಕ್ಷದ ನಂತರ ಮತ್ತೊಂದು ದುರ್ಭಿಕ್ಷವನ್ನು ಹೊಂದುತ್ತಾರೆ. (ಇವತ್ತು ಅನ್ನವಿಲ್ಲ ದಿದ್ದರೆ ನಾಳೆ ಬಟ್ಟೆಯಿರುವುದಿಲ್ಲ.) ಒಂದು ಕ್ಲೇಶದಿಂದ ಮತ್ತೊಂದು ಕ್ಲೇಶವನ್ನು ಹೊಂದುತ್ತಾರೆ. ಒಂದು ಭಯದಿಂದ ಮತ್ತೊಂದು ಭಯವನ್ನು ಹೊಂದುತ್ತಾರೆ. ಮರಣದಿಂದ ಮರಣಾಂತರವನ್ನು ಹೊಂದುತ್ತಾರೆ. (ಅನವರತವೂ ಹುಟ್ಟಿ-ಸಾಯುತ್ತಲೇ ಇರುತ್ತಾರೆ.)

ಉತ್ಸವಾದುತ್ಸವಂ ಯಾನ್ತಿ ಸ್ವರ್ಗಾತ್ಸ್ವರ್ಗಂ ಸುಖಾತ್ಸುಖಮ್ ।
ಶ್ರದ್ದಧಾನಾಶ್ಚ ದಾನ್ತಾಶ್ಚ ಧನಾಢ್ಯಾಃ ಶುಭಕಾರಿಣಃ ॥೪॥

ಶ್ರದ್ಧಾಳುಗಳಾದ, ಜಿತೇಂದ್ರಿಯರಾದ, ಧನಸಂಪನ್ನರಾದ ಶುಭಕರ್ಮ ಪರಾಯಣರಾದವರು ಒಂದು ಮಂಗಳೋತ್ಸವದಿಂದ ಮತ್ತೊಂದು ಮಂಗಳೋತ್ಸವಕ್ಕೂ, ಒಂದು ಸ್ವರ್ಗದಿಂದ ಮತ್ತೊಂದು ಉತ್ತಮವಾದ ಸ್ವರ್ಗಕ್ಕೂ, ಒಂದು ಸುಖದಿಂದ ಮತ್ತೊಂದು ಸುಖಕ್ಕೂ ಹೋಗುತ್ತಲೇ ಇರುತ್ತಾರೆ.

ವ್ಯಾಲಕುಞ್ಜರದುರ್ಗೇಷು ಸರ್ಪಚೋರಭಯೇಷು ಚ ।
ಹಸ್ತಾವಾಪೇನ ಗಚ್ಛನ್ತಿ ನಾಸ್ತಿಕಾಃ ಕಿಮತಃ ಪರಮ್ ॥೫॥

ರಾಜನಿಂದ ದೇಶಭ್ರಷ್ಟರಾದ ನಾಸ್ತಿಕರು, ಸಂಕೋಲೆಗಳಿಂದ ಬದ್ಧವಾದ ಕೈಗಳುಳ್ಳವರಾಗಿ, ದುಷ್ಟವಾದ ಆನೆಗಳಿಂದ ನಿಬಿಡವಾದ, ಸರ್ಪಭಯ ದಿಂದಲೂ ಕಳ್ಳ-ಕಾಕರ ಭಯದಿಂದಲೂ ಕೂಡಿರುವ ದುರ್ಗಮವಾದ ಪ್ರದೇಶಗಳಲ್ಲಿ ಹೋಗುತ್ತಿರುತ್ತಾರೆ. ಇದಕ್ಕಿಂತಲೂ ಅಧಿಕವಾದ ದಂಡವು ಬೇರೆ ಯಾವುದು ತಾನೇ ಇದೆ?

ಪ್ರಿಯದೇವಾತಿಥೇಯಾಶ್ಚ ವದಾನ್ಯಾಃ ಪ್ರಿಯಸಾಧವಃ ।
ಕ್ಷೇಮ್ಯಮಾತ್ಮವತಾಂ ಮಾರ್ಗಮಾಸ್ಥಿತಾ ಹಸ್ತದಕ್ಷಿಣಮ್ ॥೬॥

ದೇವತೆಗಳನ್ನೂ–ಅತಿಥಿಗಳನ್ನೂ ಪ್ರೀತಿಯಿಂದ ಕಾಣುವ (ದೇವತಾ ಪೂಜೆಗಳನ್ನೂ ಅತಿಥಿಸತ್ಕಾರಗಳನ್ನೂ ಶ್ರದ್ಧೆಯಿಂದ ಮಾಡುವ), ಉದಾರಿಗಳಾದ, ಸತ್ಪುರುಷರನ್ನು ಪ್ರೀತಿಯಿಂದ ಕಾಣುವ ಪುಣ್ಯಾತ್ಮರಾದ ಮನುಷ್ಯರು-ದಾನಾದಿ ಕರ್ಮಗಳಿಂದ ಕ್ಷೇಮಕರವಾದ ಆತ್ಮದರ್ಶಿಗಳ ಮಾರ್ಗವನ್ನು ಆಶ್ರಯಿಸಿರುತ್ತಾರೆ. (**ಹಸ್ತದಕ್ಷಿಣಂ** ಎಂಬುದಕ್ಕೆ ವ್ಯಾಖ್ಯಾನಕಾರರು **ಹಸ್ತೋಪಲಕ್ಷಿತೇನ ತತ್ಕರ್ತವ್ಯೇನ ದಾನಾದಿನಾ ಕರ್ಮಣಾ, ದಕ್ಷಿಣಂ=ಅನುಕೂಲಂ.** ಹಸ್ತೋಪಲಕ್ಷಿತವಾದ ದಾನಾದಿ ಕರ್ಮಗಳಿಂದ ಅನುಕೂಲವಾದ–ಎಂದು ಅರ್ಥಮಾಡಿರುತ್ತಾರೆ.)

ಪುಲಾಕಾ ಇವ ಧಾನ್ಯೇಷು ಪುತ್ತಿಕಾ ಇವ ಪಕ್ಷಿಷು ।
ತದ್ವಿಧಾಸ್ತೇ ಮನುಷ್ಯಾಣಾಂ ಯೇಷಾಂ ಧರ್ಮೋ ನ ಕಾರಣಮ್ ॥೭॥

ಯಾರಿಗೆ ಧರ್ಮವು ಮುಖ್ಯೋದ್ದೇಶವಾಗಿರುವುದಿಲ್ಲವೋ–ಅವರು ಮನುಷ್ಯರ ಮಧ್ಯದಲ್ಲಿ–ಧಾನ್ಯಗಳಲ್ಲಿ ಬೆರೆತಿರುವ ಜೊಳ್ಳಿನಂತೆಯೂ ರೆಕ್ಕೆಗಳುಳ್ಳ ಪಕ್ಷಿಗಳಲ್ಲಿ ಹೆಣ್ಣುಪತಂಗದ ಹುಳುಗಳಂತೆಯೂ–ಇರುತ್ತಾರೆ.

ಸುಶೀಘ್ರಮಪಿ ಧಾವನ್ತಂ ವಿಧಾನಮನುಧಾವತಿ ।
ಶೇತೇ ಸಹ ಶಯಾನೇನ ಯೇನ ಯೇನ ಯಥಾ ಕೃತಮ್ ॥೮॥

ಉಪತಿಷ್ಠತಿ ತಿಷ್ಠನ್ತಂ ಗಚ್ಛನ್ತಮನುಗಚ್ಛತಿ ।
ಕರೋತಿ ಕುರ್ವತಃ ಕರ್ಮ ಚ್ಛಾಯೇವಾನುವಿಧೀಯತೇ ॥೯॥

ಮನುಷ್ಯನು ಮಾಡುವ ಕರ್ಮಗಳ ಫಲವು ಯಾವಾಗಲೂ ಅವನನ್ನು ಅನುಸರಿಸಿಯೇ ಇರುತ್ತದೆ. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಕರ್ತೃವು ಶೀಘ್ರವಾಗಿ ಓಡುತ್ತಿದ್ದರೆ ಕರ್ಮವೂ ಅಷ್ಟೇ ವೇಗದಿಂದ ಓಡುತ್ತಾ ಅವನನ್ನು ಅನುಸರಿಸಿ ಹೋಗುತ್ತದೆ. ಮಲಗಿದ್ದರೆ ಕರ್ಮಫಲವೂ ಅವನ ಜೊತೆಯಲ್ಲಿಯೇ ಮಲಗಿರುತ್ತದೆ. ನಿಂತಿದ್ದರೆ ತಾನೂ ನಿಂತೇ ಇರುತ್ತದೆ. ಹೋಗುತ್ತಿದ್ದರೆ ಅವನ ಜೊತೆಯಲ್ಲಿಯೇ ಹೋಗುತ್ತಿರುತ್ತದೆ. ಯಾವುದಾದರೂ ಕಾರ್ಯಮಾಡುತ್ತಿರುವಾಗಲೂ ಕರ್ಮಫಲವು ಎಡೆಬಿಡದೆ ಜೊತೆಯಲ್ಲೇ ಇರುತ್ತದೆ. ನೆಳಲಿನಂತೆಯೇ ಕರ್ಮಫಲವು ಯಾವಾಗಲೂ ಕರ್ತೃವನ್ನು ಅನುಸರಿಸಿಯೇ ಇರುತ್ತದೆ.

ಯೇನ ಯೇನ ಯಥಾ ಯದ್ಯತ್ಪುರಾ ಕರ್ಮ ಸಮೀಹಿತಮ್ ।
ತತ್ತದೇಕತರೋ ಭುಙ್ಕ್ತೇ ನಿತ್ಯಂ ವಿಹಿತಮಾತ್ಮನಾ ॥೧೦॥

ಯಾವ ಯಾವ ಮನುಷ್ಯನು ತನ್ನ ಹಿಂದಿನ ಜನ್ಮಗಳಲ್ಲಿ ಯಾವ ಯಾವ ಸತ್ಕರ್ಮಗಳನ್ನೋ ಅಸತ್ಕರ್ಮಗಳನ್ನೋ ಹೇಗೆ ಹೇಗೆ ಮಾಡಿರುವನೋ, ತಾನೇ ಮಾಡಿರುವ ಆಯಾ ಕರ್ಮಗಳಿಗೆ ತಕ್ಕುದಾದ ಶುಭಾಶುಭಫಲಗಳನ್ನು ಹಾಗೆಯೇ ಅವನೊಬ್ಬನೇ ಉಪಭೋಗಿಸುತ್ತಾನೆ.

ಸ್ವಕರ್ಮಫಲನಿಕ್ಷೇಪಂ ವಿಧಾನಪರಿರಕ್ಷಿತಮ್ ।
ಭೂತಗ್ರಾಮಮಿಮಂ ಕಾಲಃ ಸಮನ್ತಾತ್ಪರಿಕರ್ಷತಿ ॥೧೧॥

ತಾನು ಮಾಡಿದ ಕರ್ಮಗಳ ಶುಭಾಶುಭ ಫಲಗಳು ನಿಕ್ಷೇಪರೂಪದಲ್ಲಿರುತ್ತವೆ. ಆ ನಿಧಿಯು ವಿಧಿಯಿಂದ ರಕ್ಷಿಸಲ್ಪಡುತ್ತಿರುತ್ತದೆ. ಅದೇ ನಿಧಿಯನ್ನೇ ಕಾಲವು ಭೋಗಸಮಯವು ಸನ್ನಿಹಿತವಾದಾಗ ಪ್ರಾಣಿಗಳ ಕಡೆಗೆ ಸೆಳೆಯುತ್ತದೆ. (ಸದಸತ್ಕರ್ಮಗಳ ಶುಭಾಶುಭಫಲಗಳು ಯಾವಾಗಲೂ ವಿನಾಶಹೊಂದುವುದೇ ಇಲ್ಲ. ಹಿಂದೆ ಹೇಳಿರುವಂತೆ ಕರ್ತೃವನ್ನು ಆ ಫಲ ಗಳು ಛಾಯೆಯಂತೆ ಅನುಸರಿಸುತ್ತಲೇ ಇರುತ್ತವೆ. ಆದರೆ ಆ ಫಲಗಳು ಒಡನೆಯೇ ಪರಿಣಾಮಕಾರಿಯಾಗುವುದಿಲ್ಲ. ಕರ್ಮಫಲೋಪಭೋಗವು ಯಾವ ಜನ್ಮದಲ್ಲಾದರೂ ಆಗಬಹುದು. ವ್ಯವಸ್ಥಿತವಾದ ಕಾಲದಲ್ಲಿ ಕರ್ಮೋಪಭೋಗಕ್ಕೆ ಅನುವು ಮಾಡಿಕೊಡುವವನು ಕರ್ಮಾಧ್ಯಕ್ಷನಾದ ಕಾಲನು. ಯಾವಾಗ ಯಾವ ಪ್ರಾಣಿಯು ಯಾವ ಫಲವನ್ನು ಅನುಭವಿಸಬೇಕೆಂಬುದು ಕರ್ಮಾಧ್ಯಕ್ಷನಾದ ಕಾಲನಿಗೆ ಮಾತ್ರವೇ ತಿಳಿದಿರುತ್ತದೆ. ಸಮಯವು ಬಂದಾಗ ಕಾಲನು ಸದಾ ಜೊತೆಯಲ್ಲಿಯೇ ಇರುವ ಶುಭಾಶುಭ ಫಲಗಳನ್ನು ಉಪಭೋಗಿಸಲು ಸಹಾಯಕನಾಗುತ್ತಾನೆ. ಇದು ಕಾಲದ ವಿಚಿತ್ರ ಗತಿ. ಅತ್ಯಂತ ರಹಸ್ಯವಾದುದು. ಬೇರೆ ಯಾರಿಗೂ ತಿಳಿಯದೇ ಇರತಕ್ಕುದು. ಫಲಭೋಕ್ತೃವಿಗೂ ಈ ರಹಸ್ಯವು ತಿಳಿದಿರುವುದಿಲ್ಲ.)

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।
ಸ್ವಂ ಕಾಲಂ ನಾತಿವರ್ತನ್ತೇ ತಥಾ ಕರ್ಮ ಪುರಾ ಕೃತಮ್ ॥೧೨॥

ಹೂಗಳು ಮತ್ತು ಹಣ್ಣುಗಳು ಯಾರ ಪ್ರಚೋದನೆಯೂ ಇಲ್ಲದೇ

ಕಾಲಕ್ಕೆ ಸರಿಯಾಗಿ ವೃಕ್ಷಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅವು ಕಾಲವನ್ನು ಸ್ವಲ್ಪವೂ ಅತಿಕ್ರಮಿಸುವುದಿಲ್ಲ. ಅದೇ ರೀತಿಯಲ್ಲಿ ಹಿಂದೆ ಮಾಡಿದ ಕರ್ಮಗಳು ಕಾಲಕ್ಕೆ ಸರಿಯಾಗಿ ಕಾಲಾತೀತವಾಗದಂತೆ ಫಲವನ್ನು ಕೊಡುತ್ತವೆ.

ಸಮ್ಮಾನಶ್ಚಾವಮಾನಶ್ಚ ಲಾಭಾಲಾಭೌ ಕ್ಷಯೋದಯೌ ।
ಪ್ರವೃತ್ತಾ ವಿನಿವರ್ತನ್ತೇ ವಿಧಾನಾನ್ತೇ ಪುನಃ ಪುನಃ ॥೧೩॥

ಸಮ್ಮಾನ-ಅಪಮಾನ, ಲಾಭ-ನಷ್ಟ, ಉನ್ನತಿ-ಅವನತಿ–ಇವುಗಳು ಪೂರ್ವಜನ್ಮದ ಕರ್ಮಕ್ಕೆ ಅನುಸಾರವಾಗಿ ಪುನಃ ಪುನಃ ಆಗುತ್ತಲೇ ಇರುತ್ತವೆ. ಕರ್ಮಫಲಾನುಭವವು ಮುಗಿದುಹೋದನಂತರ ಎಲ್ಲವೂ ನಿವೃತ್ತಿ ಹೊಂದುತ್ತವೆ.

ಆತ್ಮನಾ ವಿಹಿತಂ ದುಃಖಮಾತ್ಮನಾ ವಿಹಿತಂ ಸುಖಮ್ ।
ಗರ್ಭಶಯ್ಯಾಮುಪಾದಾಯ ಭುಜ್ಯತೇ ಪೌರ್ವದೈಹಿಕಮ್ ॥೧೪॥

ದುಃಖವೂ ತಾನೇ ಮಾಡಿದ ಕರ್ಮಫಲಗಳ ಪರಿಣಾಮವಾಗಿದೆ. ಸುಖವೂ ತಾನೇ ಮಾಡಿದ ಕರ್ಮಫಲಗಳ ಪರಿಣಾಮವಾಗಿದೆ. ಜೀವವು ತಾಯಿಯ ಗರ್ಭವನ್ನು ಹೊಕ್ಕೊಡನೆಯೇ ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳ ಫಲವನ್ನು ಉಪಭೋಗಿಸಲು ಪ್ರಾರಂಭಿಸುತ್ತದೆ.

ಬಾಲೋ ಯುವಾ ಚ ವೃದ್ಧಶ್ಚ ಯತ್ಕರೋತಿ ಶುಭಾಶುಭಮ್ ।
ತಸ್ಯಾಂ ತಸ್ಯಾಮವಸ್ಥಾಯಾಂ ತತ್ಫಲಂ ಪ್ರತಿಪದ್ಯತೇ ॥೧೫॥

ಬಾಲಕನಾಗಿರುವಾಗ, ಯುವಕನಾಗಿರುವಾಗ, ವೃದ್ಧನಾಗಿರುವಾಗ ಯಾವ ಯಾವ ಒಳ್ಳೆಯ ಮತ್ತು ಕೆಟ್ಟ ಕೆಲಸಗಳನ್ನು ಮಾಡುವನೋ–ಅದಕ್ಕೆ ಅನುಸಾರವಾದ ಫಲವನ್ನು ಮತ್ತೊಂದು ಜನ್ಮದಲ್ಲಿ ಆಯಾಯಾ ಅವಸ್ಥೆಗಳಲ್ಲಿಯೇ ಅನುಭವಿಸುತ್ತಾನೆ. (ಬಾಲಕನಾಗಿದ್ದಾಗ ಮಾಡಿದ ಸದಸತ್ಕರ್ಮಗಳ ಶುಭಾಶುಭಫಲಗಳನ್ನು ಮರುಹುಟ್ಟಿನಲ್ಲಿ ಬಾಲ್ಯದಲ್ಲಿಯೇ ಉಪಭೋಗಿಸುತ್ತಾನೆ. ಹೀಗೆಯೇ ಯುವಕನು ಮುಂದಿನ ಜನ್ಮದ ಯೌವನ ದಲ್ಲಿಯೂ, ವೃದ್ಧನು ಜನ್ಮಾಂತರದ ವೃದ್ಧಾಪ್ಯದಲ್ಲಿಯೂ ಕರ್ಮಫಲಗಳನ್ನು ಉಪಭೋಗಿಸುತ್ತಾರೆ.)

ಯಥಾ ಧೇನುಸಹಸ್ರೇಷು ವತ್ಸೋ ವಿನ್ದತಿ ಮಾತರಮ್ ।
ತಥಾ ಪೂರ್ವಕೃತಂ ಕರ್ಮ ಕರ್ತಾರಮನುಗಚ್ಛತಿ ॥೧೬॥

ಒಂದು ಸಾವಿರ ಹಸುಗಳಿದ್ದರೂ ಕರುವು ತನ್ನ ತಾಯಿಯ ಬಳಿಗೇ ಹೋಗುವಂತೆ–ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳ ಫಲವು ಕರ್ತೃವನ್ನೇ ಅನುಸರಿಸುತ್ತದೆ.

ಸಮುನ್ನಮಗ್ರತೋ ವಸ್ತ್ರಂ ಪಶ್ಚಾಚ್ಛುಧ್ಯತಿ ಕರ್ಮಣಾ ।
ಉಪವಾಸೈಃ ಪ್ರತಪ್ತಾನಾಂ ದೀರ್ಘಂ ಸುಖಮನನ್ತಕಮ್ ॥೧೭॥

ಚೌಳುಪ್ಪಿನ ನೀರಿನಲ್ಲಿ ಚೆನ್ನಾಗಿ ನೆನೆಸಲ್ಪಟ್ಟ ಬಟ್ಟೆಯು ಅನಂತರ ಒಗೆಯುವಿಕೆಯಿಂದ ಶುದ್ಧವಾಗುತ್ತದೆ. ವಿಷಯತ್ಯಾಗವೆಂಬ ಉಪವಾಸದ ಮೂಲಕವಾಗಿ ತಪಸ್ಸುಮಾಡಿದವರ ಸುಖವು ಸುದೀರ್ಘವೂ–ಕೊನೆಯೇ ಇಲ್ಲದುದೂ ಆಗಿರುತ್ತದೆ. (ತಪಸ್ಸುಮಾಡಿದವರಿಗೆ ಸುದೀರ್ಘವಾದ ಅನಂತವಾದ ಸುಖವುಂಟಾಗುತ್ತದೆ.)

ದೀರ್ಘಕಾಲೇನ ತಪಸಾ ಸೇವಿತೇನ ತಪೋವನೇ ।
ಧರ್ಮನಿರ್ಧೂತಪಾಪಾನಾಂ ಸಮ್ಪದ್ಯನ್ತೇ ಮನೋರಥಾಃ ॥೧೮॥

ಧರ್ಮದಿಂದ ನಿರ್ಧೂತವಾದ ಪಾಪವುಳ್ಳ ಮಹಾತ್ಮರ ಮನೋರಥಗಳೆಲ್ಲವೂ ತಪೋವನದಲ್ಲಿ ದೀರ್ಘಕಾಲದವರೆಗೆ ಆಚರಿಸಲ್ಪಟ್ಟ ತಪಸ್ಸಿನಿಂದ ಸಂಪೂರ್ಣವಾಗಿ ಸಿದ್ಧಿಸುತ್ತವೆ.

ಶಕುನಾನಾಮಿವಾಕಾಶೇ ಮತ್ಸ್ಯಾನಾಮಿವ ಚೋದಕೇ ।
ಪದಂ ಯಥಾ ನ ದೃಶ್ಯೇತ ತಥಾ ಜ್ಞಾನವಿದಾಂ ಗತಿಃ ॥೧೯॥

ಆಕಾಶದಲ್ಲಿ ಪಕ್ಷಿಗಳ ಪದಚಿಹ್ನೆಗಳು ಹೇಗೆ ಕಾಣುವುದಿಲ್ಲವೋ ನೀರಿನಲ್ಲಿ ಮೀನುಗಳ ಪದಚಿಹ್ನೆಗಳು ಹೇಗೆ ಕಾಣುವುದಿಲ್ಲವೋ–ಹಾಗೆಯೇ ಜ್ಞಾನಿಗಳ ಮಾರ್ಗವೂ ಯಾರಿಗೂ ತಿಳಿಯುವುದಿಲ್ಲ.

ಅಲಮನ್ಯೈರುಪಾಲಮ್ಭೈಃ ಕೀರ್ತಿತೈಶ್ಚ ವ್ಯತಿಕ್ರಮೈಃ ।
ಪೇಶಲಂ ಚಾನುರೂಪಂ ಚ ಕರ್ತವ್ಯಂ ಹಿತಮಾತ್ಮನಃ ॥೨೦॥

ಇತರರನ್ನು ನಿಂದಿಸುವುದರಿಂದಾಗಲೀ, ಇತರರು ಮಾಡಿದ ಅಪರಾಧಗಳನ್ನು ಚರ್ಚಿಸುವುದರಿಂದಾಗಲೀ–ಯಾವ ಪ್ರಯೋಜನವೂ ಇಲ್ಲ. ಯಾವ

ಕಾರ್ಯವು ಮನೋಹರವಾಗಿರುವುದೋ, ಅನುಕೂಲವಾಗಿರುವುದೋ, ತನಗೆ ಹಿತಕರವಾಗಿರುವುದೋ–ಅಂತಹ ಕರ್ಮಗಳನ್ನು ಮಾಡುವುದೇ ಯೋಗ್ಯವಾಗಿದೆ."

ದಿ೧೮೧ನೆಯ ಅಧ್ಯಾಯವು ಮುಗಿಯಿತು.

೧೮೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಭೃಗು-ಭರದ್ವಾಜರ ಸಂವಾದದಲ್ಲಿ ಪ್ರಪಂಚದ ಉತ್ಪತ್ತಿ ಮತ್ತು ವಿಭಿನ್ನತತ್ತ್ವಗಳ ವರ್ಣನೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕುತಃ ಸೃಷ್ಟಮಿದಂ ವಿಶ್ವಂ ಜಗತ್ಸ್ಥಾವರಜಙ್ಗಮಮ್ ।
ಪ್ರಲಯೇ ಚ ಕಮಭ್ಯೇತಿ ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹ! ಸ್ಥಾವರ-ಜಂಗಮಾತ್ಮಕವಾದ ಈ ಜಗತ್ತು ಏತಕ್ಕಾಗಿ ಸೃಷ್ಟವಾಯಿತು? ಪ್ರಳಯಕಾಲದಲ್ಲಿ ಈ ವಿಶ್ವವು ಎಲ್ಲಿ ಲೀನವಾಗುತ್ತದೆ? ಈ ವಿಷಯವನ್ನು ತಿಳಿಸು.

ಸಸಾಗರಃ ಸಗಗನಃ ಸಶೈಲಃ ಸಬಲಾಹಕಃ ।
ಸಭೂಮಿಃ ಸಾಗ್ನಿಪವನೋ ಲೋಕೋಽಯಂ ಕೇನ ನಿರ್ಮಿತಃ ॥೨॥

ಸಮುದ್ರ, ಆಕಾಶ, ಪರ್ವತ, ಮೇಘ, ಭೂಮಿ, ಅಗ್ನಿ ಮತ್ತು ವಾಯುಗಳಿಂದ ಯುಕ್ತವಾದ ಈ ಲೋಕವನ್ನು ಯಾರು ನಿರ್ಮಾಣ ಮಾಡಿದರು?

ಕಥಂ ಸೃಷ್ಟಾನಿ ಭೂತಾನಿ ಕಥಂ ವರ್ಣವಿಭಕ್ತಯಃ ।
ಶೌಚಾಶೌಚಂ ಕಥಂ ತೇಷಾಂ ಧರ್ಮಾಧರ್ಮವಿಧಿಃ ಕಥಮ್ ॥೩॥

ಪ್ರಾಣಿಗಳ ಸೃಷ್ಟಿಯು ಯಾವ ರೀತಿಯಲ್ಲಾಯಿತು? ವರ್ಣಗಳ ವಿಭಾಗವು ಹೇಗಾಯಿತು? ವರ್ಣಗಳಲ್ಲಿ ಶೌಚಾಶೌಚಗಳ ವ್ಯವಸ್ಥೆಯು ಹೇಗಾಯಿತು? ಧರ್ಮ ಮತ್ತು ಅಧರ್ಮಗಳ ವಿಧಾನವು ಹೇಗೆ ಮಾಡಲ್ಪಟ್ಟಿತು?

ಕೀದೃಶೋ ಜೀವತಾಂ ಜೀವಃ ಕ್ವ ವಾ ಗಚ್ಛನ್ತಿ ಯೇ ಮೃತಾಃ ।
ಅಸ್ಮಾಲ್ಲೋಕಾದಮುಂ ಲೋಕಂ ಸರ್ವಂ ಶಂಸತು ನೋ ಭವಾನ್ ॥

ಜೀವಂತವಾಗಿರುವ ಪ್ರಾಣಿಗಳಲ್ಲಿ ಜೀವಾತ್ಮನು ಹೇಗಿದ್ದಾನೆ? ಮರಣಾನಂತರ ಜೀವರು ಎಲ್ಲಿಗೆ ಹೋಗುತ್ತಾರೆ? ಈ ಲೋಕದಿಂದ ಆ ಲೋಕವನ್ನು ಹೊಂದಲು ಯಾವ ಕ್ರಮವಿದೆ?– ಈ ಎಲ್ಲ ವಿಷಯಗಳನ್ನೂ ನನಗೆ ಹೇಳು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಇದೇ ವಿಷಯವಾಗಿಯೇ ಪ್ರಶ್ನೆಮಾಡಿದ ಭರದ್ವಾಜನಿಗೆ ಭೃಗುಮಹರ್ಷಿಯು ಹೇಳಿದ ಪುರಾತನವಾದ ಇತಿಹಾಸರೂಪವಾದ ಶಾಸ್ತ್ರವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ತಿಳಿಸುವೆನು, ಕೇಳು.

ಭರದ್ವಾಜಮುನಿಯು ಕೈಲಾಸಪರ್ವತದ ಶಿಖರದಲ್ಲಿ ತೇಜಸ್ಸಿನಿಂದ ದೇದೀಪ್ಯಮಾನನಾಗಿ ಬೆಳಗುತ್ತಾ ಸುಖಾಸೀನನಾಗಿದ್ದ, ಮಹಾತೇಜಸ್ವಿಯಾದ ಭೃಗುಮಹರ್ಷಿಯ ಬಳಿಗೆ ಹೋಗಿ ಪ್ರಶ್ನಿಸಿದನು :

“ಭಗವನ್! ಸಾಗರಾಕಾಶಾದಿಗಳಿಂದ ಸಹಿತವಾದ ಈ ಪ್ರಪಂಚವು ಯಾರಿಂದ ನಿರ್ಮಿತವಾಯಿತು? ಪ್ರಾಣಿಗಳು ಹೇಗೆ ಸೃಷ್ಟಿಸಲ್ಪಟ್ಟುವು? ವರ್ಣಗಳ ವಿಭಾಗವು ಹೇಗಾಯಿತು? ವರ್ಣಗಳಲ್ಲಿ ಶೌಚಾಶೌಚ ವ್ಯವಸ್ಥೆಯು ಹೇಗಾಯಿತು? ಧರ್ಮ ಮತ್ತು ಅಧರ್ಮಗಳ ವಿಧಿಯು ಹೇಗೆ ಮಾಡಲ್ಪಟ್ಟಿತು? ಜೀವವಿರುವ ಪ್ರಾಣಿಗಳಲ್ಲಿ ಜೀವಾತ್ಮನು ಹೇಗಿದ್ದಾನೆ? ಮರಣಾನಂತರ ಜೀವರು ಎಲ್ಲಿಗೆ ಹೋಗುತ್ತಾರೆ? ಇಹಲೋಕ-ಪರಲೋಕ ಗಳು ಹೇಗಿವೆ? ಈ ಎಲ್ಲ ವಿಷಯಗಳನ್ನೂ ನನಗೆ ಹೇಳು.”

ಭರದ್ವಾಜನು ಸಂಶಯವನ್ನು ನಿವಾರಿಸಿಕೊಳ್ಳಲು ಹೀಗೆ ಪ್ರಶ್ನಿಸಿದ ನಂತರ ಬ್ರಹ್ಮಸದೃಶನಾದ, ಬ್ರಹ್ಮರ್ಷಿಯಾದ ಭೃಗುಮುನಿಯು ಎಲ್ಲ ವಿಷಯಗಳನ್ನೂ ಸವಿಸ್ತರವಾಗಿ ಹೇಳಲು ಉಪಕ್ರಮಿಸಿದನು.

“ಭರದ್ವಾಜ! ಮಹರ್ಷಿಗಳಿಂದಲೂ ಶ್ರುತಪೂರ್ವನಾದ ಸುವಿಖ್ಯಾತ ನಾದ ಮಾನಸನೆಂಬ ದೇವನಿದ್ದನು. ಅವನು ಅನಾದಿಯೂ, ಅನಂತನೂ, ಅಭೇದ್ಯನೂ, ಅಜರನೂ ಮತ್ತು ಅಮರನೂ ಆಗಿದ್ದನು. ಅವ್ಯಕ್ತನೆಂಬ ಖ್ಯಾತಿಯನ್ನು ಪಡೆದಿದ್ದ ಮಾನಸದೇವನು ಶಾಶ್ವತನೂ, ಅಕ್ಷಯನೂ,

ಅವಿನಾಶಿಯೂ ಆಗಿದ್ದನು. ಅವನಿಂದ ಸೃಷ್ಟಿಸಲ್ಪಟ್ಟ ಎಲ್ಲ ಪ್ರಾಣಿಗಳೂ ಹುಟ್ಟುತ್ತವೆ ಮತ್ತು ಸಾಯುತ್ತವೆ. ಆ ಮಾನಸದೇವನು ಮೊದಲು ಮಹಾಂತವೆಂಬ ಹೆಸರಿನ ಮಹತ್ತತ್ತ್ವವನ್ನು (ಸಮಷ್ಟಿಬುದ್ಧಿಯನ್ನು) ಸೃಷ್ಟಿಸಿದನು. ಅನಂತರ ಮಹತ್ತತ್ತ್ವಸ್ವರೂಪನಾದ ದೇವನು ಅಹಂಕಾರವನ್ನು (ಸಮಷ್ಟಿಯಾದ ಅಹಂಕಾರವನ್ನು) ಸೃಷ್ಟಿಸಿದನು. ಸಕಲಪ್ರಾಣಿಗಳನ್ನೂ ಧರಿಸಿರುವ ಅಹಂಕಾರಸ್ವರೂಪನಾದ ದೇವನು ಶಬ್ದತನ್ಮಾತ್ರರೂಪವಾದ ಆಕಾಶವನ್ನು ಸೃಷ್ಟಿಸಿದನು.* ಆಕಾಶದಿಂದ ನೀರಿನ ಉತ್ಪತ್ತಿಯಾಯಿತು. ನೀರಿನಿಂದ ಅಗ್ನಿ-ವಾಯುಗಳು ಹುಟ್ಟಿದರು. ಅಗ್ನಿ ಮತ್ತು ವಾಯುಗಳ ಸಂಯೋಗದಿಂದ ಪೃಥ್ವಿಯು ಪ್ರಾದುರ್ಭೂತವಾಯಿತು. ಬಳಿಕ ಮಾನಸದೇವನಾದ ಸ್ವಯಂಭುವು ತೇಜೋಮಯವಾದ, ದಿವ್ಯವಾದ ಕಮಲವನ್ನು ಸೃಷ್ಟಿಸಿದನು. ಆ ಪದ್ಮದಿಂದ ವೇದಮಯನಾದ, ನಿಧಿರೂಪನಾದ ಬ್ರಹ್ಮನು ಹುಟ್ಟಿದನು. ಅಹಂಕಾರ ಎಂದು ಖ್ಯಾತನಾಗಿರುವ ಬ್ರಹ್ಮನು ಸರ್ವಪ್ರಾಣಿಗಳಲ್ಲಿಯೂ ಇರುವವನೂ ಸರ್ವಪ್ರಾಣಿಗಳನ್ನೂ ಸೃಷ್ಟಿಸುವವನೂ ಆಗಿದ್ದಾನೆ. ಯಾವ ಈ ಐದು ಮಹಾಭೂತಗಳಿರುವುವೋ–ಅವುಗಳೆಲ್ಲವೂ ಬ್ರಹ್ಮನ ಐದು ರೂಪಗಳೇ ಆಗಿವೆ. ಈ ಐದು ರೂಪಗಳಿಂದ ಬ್ರಹ್ಮನು ತನ್ನನ್ನು ಪ್ರಕಟಿಸಿಕೊಂಡಿರುತ್ತಾನೆ.

ಶೈಲಸ್ತಸ್ಯಾಸ್ಥಿಸಂಜ್ಞಾಸ್ತು ಮೇದೋ ಮಾಂಸಂ ಚ ಮೇದಿನೀ ।
ಸಮುದ್ರಾಸ್ತಸ್ಯ ರುಧಿರಮಾಕಾಶಮುದರಂ ತಥಾ ॥೧೭॥

ಬ್ರಹ್ಮನಿಗೆ ಪರ್ವತಗಳೇ ಮೂಳೆಗಳಾಗಿವೆ. ಪೃಥ್ವಿಯು ಮೇದಸ್ಸಿನ ಮತ್ತು ಮಾಂಸದ ರೂಪದಲ್ಲಿದೆ. ಸಮುದ್ರಗಳು ಬ್ರಹ್ಮನ ರಕ್ತದ ರೂಪದಲ್ಲಿವೆ. ಆಕಾಶವು ಹೊಟ್ಟೆಯಾಗಿದೆ.

---

* ತೈತ್ತಿರೀಯ ಉಪನಿಷತ್ತಿನಲ್ಲಿ : **ಆಕಾಶಾದ್ವಾಯುಃ । ವಾಯೋರಗ್ನಿಃ । ಅಗ್ನೇರಾಪಃ । ಅದ್ಭ್ಯಃ ಪೃಥಿವೀ । ಪೃಥಿವ್ಯಾ ಓಷಧಯಃ ।** –ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ನೀರೂ, ನೀರಿನಿಂದ ಪೃಥ್ವಿಯೂ, ಪೃಥ್ವಿಯಿಂದ ಓಷಧಿಗಳು ಹುಟ್ಟಿದುವು–ಸೃಷ್ಟಿಯನ್ನು ಈ ಕ್ರಮದಲ್ಲಿ ಹೇಳಿದೆ.

ಪವನಶ್ಚೈವ ನಿಃಶ್ವಾಸಸ್ತೇಜೋऽಗ್ನಿರ್ನಿಮ್ನಗಾಃ ಸಿರಾಃ ।
ಅಗ್ನೀಷೋಮೌ ತು ಚನ್ದ್ರಾರ್ಕೌ ನಯನೇ ತಸ್ಯ ವಿಶ್ರುತೇ ॥೧೮॥

ಬ್ರಹ್ಮನಿಗೆ ವಾಯುವು ನಿಃಶ್ವಾಸರೂಪದಲ್ಲಿದ್ದಾನೆ. ಅಗ್ನಿಯು ತೇಜಸ್ಸಿನ ರೂಪದಲ್ಲಿದ್ದಾನೆ. ನದಿಗಳು ರಕ್ತನಾಳಗಳ ರೂಪದಲ್ಲಿವೆ. ಅಗ್ನೀಷೋಮರೆಂದು ವಿಖ್ಯಾತರಾಗಿರುವ ಸೂರ್ಯ-ಚಂದ್ರರೇ ಬ್ರಹ್ಮನ ಎರಡು ಕಣ್ಣುಗಳ ರೂಪದಲ್ಲಿದ್ದಾರೆ.

ನಭಶ್ಚೋರ್ಧ್ವಂ ಶಿರಸ್ತಸ್ಯ ಕ್ಷಿತಿಃ ಪಾದೌ ಭುಜೌ ದಿಶಃ ।
ದುರ್ವಿಜ್ಞೇಯೋ ಹ್ಯಚಿನ್ತ್ಯಾತ್ಮಾ ಸಿದ್ಧೈರಪಿ ನ ಸಂಶಯಃ ॥೧೯॥

ಮೇಲ್ಭಾಗದಲ್ಲಿರುವ ಆಕಾಶವೇ ಅವನ ಶಿರಸ್ಸಾಗಿದೆ. ಭೂಮಿಯೇ ಅವನ ಕಾಲುಗಳು. ದಿಕ್ಕುಗಳು ತೋಳುಗಳ ರೂಪದಲ್ಲಿವೆ. ಅಚಿಂತ್ಯ ರೂಪನಾದ ಆ ಬ್ರಹ್ಮನು ಸಿದ್ಧಪುರುಷರಿಂದಲೂ ಸುಲಭವಾಗಿ ತಿಳಿಯಲ್ಪಡತಕ್ಕವನಾಗಿಲ್ಲ. ಇದರಲ್ಲಿ ಸಂಶಯವೇ ಇಲ್ಲ. ಆ ಬ್ರಹ್ಮನೇ ಭಗವಾನ್ ವಿಷ್ಣುವೂ ಆಗಿದ್ದಾನೆ. ಅನಂತನೆಂಬ ಹೆಸರಿನಿಂದಲೂ ವಿಖ್ಯಾತನಾಗಿದ್ದಾನೆ. ಅವನು ಸರ್ವಪ್ರಾಣಿಗಳ ಅಂತರಂಗದಲ್ಲಿಯೂ ಅಂತರ್ಯಾಮಿಯಾಗಿ ಆತ್ಮರೂಪದಲ್ಲಿದ್ದಾನೆ. ಹೃದಯಶುದ್ಧಿಯಿಲ್ಲದವರಿಂದ ಅವನು ತಿಳಿಯಲ್ಪಡತಕ್ಕವನಲ್ಲ. ಸಮಸ್ತಪ್ರಾಣಿಗಳ ಉತ್ಪತ್ತಿಯು ಸಲುವಾಗಿ ಪ್ರಾಕೃತವಾದ ಅಹಂಕಾರವನ್ನು ಸೃಷ್ಟಿಸಿದವನೇ ಅವನು.

ಭರದ್ವಾಜ! ನೀನು ವಿಶ್ವವು ಯಾರಿಂದ ಹುಟ್ಟಿತು—ಎಂದು ಪ್ರಶ್ನಿಸಿದ್ದೆಯಲ್ಲವೇ? ಈ ಪ್ರಶ್ನೆಗೆ ನಾನು ಉತ್ತರಿಸಿದ್ದೇನೆ."

ಭೃಗುವು ಹೇಳಿದ ಮಾತನ್ನು ಕೇಳಿ ಭರದ್ವಾಜನು ಹೇಳುತ್ತಾನೆ :

ಗಗನಸ್ಯ ದಿಶಾಂ ಚೈವ ಭೂತಲಸ್ಯಾನಿಲಸ್ಯ ಚ ।
ಕಾನ್ಯತ್ರ ಪರಿಮಾಣಾನಿ ಸಂಶಯಂ ಛಿನ್ಧಿ ತತ್ತ್ವತಃ ॥೨೦॥

"ಪೂಜ್ಯನೇ! ಆಕಾಶ, ದಿಕ್ಕುಗಳು, ಪೃಥಿವೀ ಮತ್ತು ವಾಯು—ಇವುಗಳ ಪರಿಮಾಣವೆಷ್ಟು? ಇದನ್ನು ನನಗೆ ಯಥಾವತ್ತಾಗಿ ಹೇಳಿ ನನ್ನ ಸಂಶಯವನ್ನು ನಿವಾರಿಸು."

ಭೃಗುವು ಹೇಳುತ್ತಾನೆ :

ಅನನ್ತಮೇತದಾಕಾಶಂ ಸಿದ್ಧದೈವತಸೇವಿತಮ್ ।
ರಮ್ಯಂ ನಾನಾಶ್ರಯಾಕೀರ್ಣಂ ಯಸ್ಯಾನ್ತೋ ನಾಧಿಗಮ್ಯತೇ ॥೨೩॥

“ಭರದ್ವಾಜ! ಸಿದ್ಧರಿಂದಲೂ ದೇವತೆಗಳಿಂದಲೂ ಸಂಸೇವಿತವಾದ ಆಕಾಶವು ಅನಂತವಾದುದು. (ಕೊನೆಯೇ ಇಲ್ಲದುದು.) ಆಕಾಶವು ಬಹಳ ರಮ್ಯವಾಗಿದೆ. ಚತುರ್ದಶಭುವನಗಳೂ ಆಕಾಶದಲ್ಲಿಯೇ ಆಶ್ರಯವನ್ನು ಪಡೆದಿವೆ. ಆಕಾಶದ ಅಂತವು ಸಿಕ್ಕುವುದೇ ಇಲ್ಲ.

ಊರ್ಧ್ವಂ ಗತೇರಧಸ್ತಾತ್ತು ಚನ್ದ್ರಾದಿತ್ಯೌ ನ ದೃಶ್ಯತಃ ।
ತತ್ರ ದೇವಾಃ ಸ್ವಯಂ ದೀಪ್ತಾ ಭಾಸ್ವರಾಭಾಗ್ನಿವರ್ಚಸಃ ॥೨೪॥

ಆಕಾಶದಿಂದ ಮೇಲಕ್ಕೆ ಹೋದಾಗ ಕೆಳಭಾಗದಲ್ಲಿ ಚಂದ್ರಾದಿತ್ಯರು ಕಾಣಿಸುವುದಿಲ್ಲ. ಆ ಲೋಕಗಳಲ್ಲಿ ಸೂರ್ಯಾಗ್ನಿಗಳಂತೆ ತೇಜಸ್ಸನ್ನೂ ವರ್ಚಸ್ಸನ್ನೂ ಹೊಂದಿರುವ ದೇವತೆಗಳೇ ಸ್ವಯಂಪ್ರಕಾಶರಾಗಿ ಬೆಳಗುತ್ತಿದ್ದಾರೆ.

ತೇ ಚಾಪ್ಯನ್ತಂ ನ ಪಶ್ಯನ್ತಿ ನಭಸಃ ಪ್ರಥಿತೌಜಸಃ ।
ದುರ್ಗಮತ್ವಾದನನ್ತತ್ವಾದಿತಿ ಮೇ ವಿದ್ಧಿ ಮಾನದ ॥೨೫॥

ಮಾನದನೇ! ನಕ್ಷತ್ರರೂಪಿಗಳಾದ, ಪ್ರಖ್ಯಾತವಾದ ತೇಜಸ್ಸಿನಿಂದ ಕೂಡಿರುವ ದೇವತೆಗಳೂ ಆಕಾಶದ ಅಂತವನ್ನು ಕಂಡಿಲ್ಲ. ಏಕೆಂದರೆ : ಅದು ಅಷ್ಟು ದುರ್ಗಮವಾಗಿದೆ ಮತ್ತು ಅನಂತವಾಗಿದೆ. ಆದುದರಿಂದ ಆಕಾಶದ ಪರಿಮಾಣವನ್ನು ಯಾರೂ ಅರಿಯಲಾರರೆಂಬುದನ್ನು ಸ್ಪಷ್ಟವಾಗಿ ತಿಳಿ.

ಉಪರಿಷ್ಟೋಪರಿಷ್ಟಾತ್ತು ಪ್ರಜ್ವಲದ್ಭಿಃ ಸ್ವಯಂಪ್ರಭೈಃ ।
ನಿರುದ್ಧಮೇತದಾಕಾಶಮಪ್ರಮೇಯಂ ಸುರೈರಪಿ ॥೨೬॥

ಮೇಲು-ಮೇಲಿನ ಭಾಗಗಳಲ್ಲಿ ಪ್ರಜ್ವಲಿಸುತ್ತಿರುವ, ಸ್ವಯಂಪ್ರಕಾಶಮಾನವಾದ ಲೋಕಗಳಿಂದ ವ್ಯಾಪ್ತವಾಗಿರುವ ಈ ಆಕಾಶವನ್ನು ದೇವತೆಗಳೂ ಅಳೆಯಲಾರರು.

ಪೃಥಿವ್ಯನ್ತೇ ಸಮುದ್ರಾಸ್ತು ಸಮುದ್ರಾನ್ತೇ ತಮಃ ಸ್ಮೃತಮ್ ।
ತಮಸೋಽನ್ತೇ ಜಲಂ ಪ್ರಾಹುರ್ಜಲಸ್ಯಾನ್ತೇಽಗ್ನಿರೇವ ಚ ॥೨೮॥

ಭೂಮಿಯ ಅಂತದಲ್ಲಿ ಸಮುದ್ರವಿರುವುದೆಂದೂ, ಸಮುದ್ರದ ಅಂತದಲ್ಲಿ ಕತ್ತಲೆಯಿರುವುದೆಂದೂ, ಕತ್ತಲಿನ ಅಂತದಲ್ಲಿ ನೀರಿರುವುದೆಂದೂ, ನೀರಿನ ಅಂತದಲ್ಲಿ ಅಗ್ನಿಯಿರುವುದೆಂದೂ ಹೇಳುತ್ತಾರೆ.

ರಸಾತಲಾನ್ತೇ ಸಲಿಲಂ ಜಲಾನ್ತೇ ಪನ್ನಗಾಧಿಪಾಃ ।
ತದನ್ತೇ ಪುನರಾಕಾಶಮಾಕಾಶಾನ್ತೇ ಪುನರ್ಜಲಮ್ ॥೨೯॥

ರಸಾತಲದ ಕೊನೆಯಲ್ಲಿ ನೀರಿದೆ. ನೀರಿನ ಕೊನೆಯಲ್ಲಿ ಸರ್ಪಾಧಿಪತಿಗಳಿದ್ದಾರೆ. ಸರ್ಪಲೋಕದ ಕಡೆಯಲ್ಲಿ ಪುನಃ ಆಕಾಶವಿದೆ. ಆಕಾಶದ ಕಡೆಯಲ್ಲಿ ನೀರಿದೆ. ಹೀಗೆ ಭಗವಂತನ, ಆಕಾಶದ, ನೀರಿನ, ಅಗ್ನಿಯ, ವಾಯುವಿನ ಮತ್ತು ಸಮುದ್ರಗಳ (ಸರ್ವಾತ್ಮಕನಾದ ಭಗವಂತನ) ಪರಿಮಾಣವು ದೇವತೆಗಳಿಂದಲೂ ಬಹಳ ಕಷ್ಟದಿಂದ ತಿಳಿಯಲ್ಪಡತಕ್ಕುದ್ದಾಗಿದೆ. (ದೇವತೆಗಳೂ ಕೂಡ ಇವುಗಳ ಪರಿಮಾಣವನ್ನು ತಿಳಿಯಲಾರರು.)

ಅಗ್ನಿಮಾರುತತೋಯಾನಾಂ ವರ್ಣಾಃ ಕ್ಷಿತಿತಲಸ್ಯ ಚ ।
ಆಕಾಶಾದವಗೃಹ್ಯನ್ತೇ ಭಿದ್ಯನ್ತೇಽತತ್ತ್ವದರ್ಶನಾತ್ ॥೩೦॥

ಅಗ್ನಿ, ಗಾಳಿ, ನೀರು ಮತ್ತು ಪೃಥ್ವಿಗಳ ವರ್ಣ-ರೂಪಗಳು ಆಕಾಶದಿಂದಲೇ ಗ್ರಹಿಸಲ್ಪಡುತ್ತವೆ. ಆದುದರಿಂದ ಇವುಗಳ ವರ್ಣಗಳಲ್ಲಿ ಯಾವ ವಿಧವಾದ ಭಿನ್ನತೆಯೂ ಇರುವುದಿಲ್ಲ. ತಾತ್ತ್ವಿಕವಾಗಿ ನೋಡದಿರುವುದರಿಂದ ಇವುಗಳಲ್ಲಿ ಭಿನ್ನತೆಯು ಇರುವಂತೆ ಪ್ರತೀತವಾಗುತ್ತದೆ.

ಋಷಿಗಳು ನಾನಾಶಾಸ್ತ್ರಗಳಲ್ಲಿ ಮೂರು ಲೋಕಗಳಿಗೂ ಮತ್ತು ಸಮುದ್ರಗಳಿಗೂ ಪ್ರಮಾಣವು ವಿಹಿತವಾಗಿರುವುದನ್ನು ಹೇಳಿರುತ್ತಾರೆ. ಆದರೆ ಕಣ್ಣಿಗೆ ಕಾಣಿಸದ ಅಂತ್ಯಕ್ಕೆ ಹೋಗಲು ಸಾಧ್ಯವಾಗದ ಆಕಾಶವೇ ಮೊದಲಾದುವುಗಳ ಪರಿಮಾಣವನ್ನು ಯಾರಿಗೇ ಆಗಲೀ ಹೇಳಲು ಹೇಗೆ ಸಾಧ್ಯವಾಗುತ್ತದೆ? ಸಿದ್ಧರ ಮತ್ತು ದೇವತೆಗಳ ಗತಿಯೂ ಮಿತಿಯನ್ನು

ಹೊಂದಿರುವಾಗ ಬೇರೆ ಯಾರು ತಾನೇ ಆಕಾಶವೇ ಮೊದಲಾದುವುಗಳ ಅಂತ್ಯವನ್ನು ಕಾಣಬಲ್ಲರು?

ತದಾ ಗೌಣಮನನ್ತಸ್ಯ ನಾಮಾನನ್ತೇತಿ ವಿಶ್ರುತಮ್ ।
ನಾಮಧೇಯಾನುರೂಪಸ್ಯ ಮಾನಸಸ್ಯ ಮಹಾತ್ಮನಃ ॥೩೩॥

ಹಾಗೆ ತಿಳಿದಿದ್ದರೆ ಮಾನಸದೇವನ ಅನಂತನಾಮಧೇಯವೂ ಗೌಣವೇ (ಔಪಚಾರಿಕವೇ) ಆಗುತ್ತಿದ್ದಿತು. ಆದುದರಿಂದ ಪರಮಾತ್ಮನಾದ ಮಾನಸ ದೇವನು ತನ್ನ ಹೆಸರಿಗೆ ಅನುಗುಣವಾಗಿ ಅನಂತನೇ ಆಗಿದ್ದಾನೆ. ಅವನ ಸುಪ್ರಸಿದ್ಧವಾದ 'ಅನಂತ'– ಎಂಬ ಹೆಸರು ಅವನಲ್ಲಿರುವ ಗುಣಗಳಿಗೆ ಅನುರೂಪವಾಗಿಯೇ ಇದೆ.

ಯದಾ ತು ದಿವ್ಯಂ ತದ್ರೂಪಂ ಹ್ರಸತೇ ವರ್ಧತೇ ಪುನಃ ।
ಕೋಽನ್ಯಸ್ತದ್ವೇದಿತುಂ ಶಕ್ತೋ ಯೋಽಪಿ ಸ್ಯಾತ್ತದ್ವಿಧೋಽಪರಃ ॥೩೪॥

ಪರಮಾತ್ಮನಾದ ನಾರಾಯಣನ ಆ ದಿವ್ಯರೂಪವು ಅವನ ಮಾಯೆ ಯಿಂದಲೇ ಕೆಲವು ಸಮಯದಲ್ಲಿ ಅಣುರೂಪವಾಗಿಯೂ–ಕೆಲವು ಸಮಯಗಳಲ್ಲಿ ಬೃಹದ್ರೂಪವಾಗಿಯೂ ಇರುತ್ತದೆ. ಅವನಿಗೆ ಸಮಾನವಾದ ಪ್ರಭಾವವಿರುವವನು ಬೇರೆ ಯಾವನಿದ್ದಾನೆ? ಬೇರೆ ಯಾವನು ತಾನೇ ಅವನ ಸ್ವರೂಪವನ್ನು ತಿಳಿಯಲು ಸಮರ್ಥನಾಗಿದ್ದಾನೆ? (ಅವನು ನಿಸ್ಸಮಾಭ್ಯಧಿಕನು. ಅವನ ಪ್ರಭಾವಕ್ಕೆ ಸಮಾನವಾದ ಮತ್ತು ಅಧಿಕವಾದ ಪ್ರಭಾವವಿರುವವರು ಯಾರೂ ಇಲ್ಲ. ಆದುದರಿಂದ ಅವನ ಪ್ರಭಾವವನ್ನು ಯಾರಿಂದಲೂ ತಿಳಿಯಲು ಶಕ್ಯವಿಲ್ಲ.)

ಬಳಿಕ ಹಿಂದೆ ಹೇಳಿದ ದಿವ್ಯಕಮಲದಿಂದ ಸರ್ವಜ್ಞನಾದ, ಪ್ರಭಾವ ಶಾಲಿಯಾದ, ಪರಮಶ್ರೇಷ್ಠನಾದ, ಧರ್ಮಮಯನಾದ, ಮೂರ್ತಿಮಂತ ನಾದ ಮೊದಲನೆಯ ಪ್ರಜಾಪತಿಬ್ರಹ್ಮನು ಪ್ರಾದುರ್ಭವಿಸಿದನು."

ಭರದ್ವಾಜನು ಪ್ರಶ್ನಿಸುತ್ತಾನೆ :

ಪುಷ್ಕರಾದ್ಯದಿ ಸಮ್ಭೂತೋ ಜ್ಯೇಷ್ಠಂ ಭವತಿ ಪುಷ್ಕರಮ್ ।
ಬ್ರಹ್ಮಾಣಂ ಪೂರ್ವಜಂ ಚಾಹ ಭವಾನ್ಸಂದೇಹ ಏವ ಮೇ ॥೩೬॥

"ಭಗವನ್! ನೀನು ಈ ಹಿಂದೆ ಮಾನಸದೇವನು ದಿವ್ಯವಾದ ಪದ್ಮವನ್ನು ಸೃಷ್ಟಿಸಿದನೆಂದೂ ಆ ಪದ್ಮದಿಂದ ವೇದಮಯನಾದ ಬ್ರಹ್ಮನು ಹುಟ್ಟಿದನೆಂದೂ ಹೇಳಿರುವೆ. ಬ್ರಹ್ಮನು ಪುಷ್ಕರದಿಂದ ಹುಟ್ಟಿದವನಾಗಿದ್ದರೆ ಕಮಲವೇ ಬ್ರಹ್ಮನಿಗಿಂತಲೂ ಜ್ಯೇಷ್ಠವಾಗುತ್ತದೆ. ಆದರೆ ನೀನು ಬ್ರಹ್ಮನು ಮೊದಲು ಹುಟ್ಟಿದನೆಂದು ಹೇಳಿರುವೆ. ಈ ವಿಷಯದಲ್ಲಿ ನನಗೆ ಸಂದೇಹವುಂಟಾಗಿದೆ."

ಭೃಗುವು ಹೇಳುತ್ತಾನೆ :

ಮಾನಸಸ್ಯೇಹ ಯಾ ಮೂರ್ತಿರ್ಬ್ರಹ್ಮತ್ವಂ ಸಮುಪಾಗತಾ ।
ತಸ್ಯಾಸನವಿಧಾನಾರ್ಥಂ ಪೃಥಿವೀ ಪದ್ಮಮುಚ್ಯತೇ ॥೩೭॥

"ಮಾನಸದೇವನ ಮೂರ್ತಿಯೇ ಮುಂದೆ ಬ್ರಹ್ಮರೂಪದಲ್ಲಿ ಪ್ರಕಟವಾಯಿತು. ಬ್ರಹ್ಮನ ಆಸನವಿಧಾನಾರ್ಥವಾಗಿ ಈ ಪೃಥ್ವಿಯನ್ನೇ ಕಮಲವೆಂದು ಹೇಳುತ್ತಾರೆ.

ಕರ್ಣಿಕಾ ತಸ್ಯ ಪದ್ಮಸ್ಯ ಮೇರುರ್ಗಗನಮುಚ್ಛ್ರಿತಃ ।
ತಸ್ಯ ಮಧ್ಯೇ ಸ್ಥಿತೋ ಲೋಕಾನ್ಸೃಜತೇ ಜಗತಃ ಪ್ರಭುಃ ॥೩೮॥

ಆ ಕಮಲದ ಬೀಜಕೋಶವು ಆಕಾಶದವರೆಗೂ ಬೆಳೆದುನಿಂತಿರುವ ಮೇರುಪರ್ವತವೇ ಆಗಿದೆ. ಜಗದೀಶ್ವರನಾದ ಬ್ರಹ್ಮನು ಆ ಪರ್ವತದ ಮಧ್ಯಭಾಗದಲ್ಲಿ ಉಪಸ್ಥಿತನಾಗಿ ಲೋಕಗಳನ್ನು ಸೃಷ್ಟಿಮಾಡುತ್ತಾನೆ."

೧೮೨ನೆಯ ಅಧ್ಯಾಯವು ಮುಗಿಯಿತು.

೧೮೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಆಕಾಶದಿಂದ ಉಳಿದ ನಾಲ್ಕು ಭೂತಗಳ ಉತ್ಪತ್ತಿಯ ವರ್ಣನೆ

ಪಾರಿಕ್ಷಿತ! ಭೀಷ್ಮನು ಮುಂದುವರಿಸುತ್ತಾ ಹೇಳುತ್ತಾನೆ :

"ಯುಧಿಷ್ಠಿರ! ಭರದ್ವಾಜನು ಪ್ರಶ್ನಿಸುತ್ತಾನೆ :

ಪ್ರಜಾವಿಸರ್ಗಂ ವಿವಿಧಂ ಕಥಂ ಸ ಸೃಜತೇ ಪ್ರಭುಃ ।
ಮೇರುಮಧ್ಯೇ ಸ್ಥಿತೋ ಬ್ರಹ್ಮಾ ತದ್ಬ್ರೂಹಿ ದ್ವಿಜಸತ್ತಮ ॥೧॥

"ದ್ವಿಜಸತ್ತಮ! ಮೇರುಪರ್ವತದ ಮಧ್ಯಭಾಗದಲ್ಲಿ ಉಪಸ್ಥಿತ

ನಾಗಿರುವ ಬ್ರಹ್ಮನು ನಾನಾಪ್ರಕಾರವಾದ ಪ್ರಾಣಿಗಳ ಸೃಷ್ಟಿಯನ್ನು ಹೇಗೆ ಮಾಡುತ್ತಾನೆ? ಈ ವಿಷಯವನ್ನು ನನಗೆ ತಿಳಿಸು."

ಭೃಗುವು ಹೇಳುತ್ತಾನೆ :

"ಭರದ್ವಾಜ! ಮಾನಸದೇವನು ತನ್ನ ಮನಃಸಂಕಲ್ಪದಿಂದಲೇ ನಾನಾ ಪ್ರಕಾರವಾದ ಪ್ರಾಣಿಗಳನ್ನು ಸೃಷ್ಟಿಸಿದನು. ಅವನು ಪ್ರಾಣಿಗಳ ರಕ್ಷಣಾರ್ಥ ವಾಗಿ ಎಲ್ಲಕ್ಕಿಂತಲೂ ಮೊದಲು ನೀರನ್ನು ಸೃಷ್ಟಿಸಿದನು.

ಯತ್ಪ್ರಾಣಃ ಸರ್ವಭೂತಾನಾಂ ವರ್ಧನ್ತೇ ಯೇನ ಚ ಪ್ರಜಾಃ ।
ಪರಿತ್ಯಕ್ತಾಶ್ಚ ನಶ್ಯನ್ತಿ ತೇನೇದಂ ಸರ್ವಮಾವೃತಮ್ ॥೩॥

ಯಾವುದು ಎಲ್ಲ ಪ್ರಾಣಿಗಳಿಗೂ ಜೀವನರೂಪವಾಗಿರುವುದೋ, ಯಾವುದರಿಂದ ಎಲ್ಲ ಪ್ರಾಣಿಗಳೂ ವರ್ಧಿಸುತ್ತವೆಯೋ, ಯಾವುದನ್ನು ಪರಿ ತ್ಯಜಿಸಿದರೆ ಪ್ರಾಣಿಗಳು ವಿನಾಶಹೊಂದುತ್ತವೆಯೋ, ಯಾವುದರಿಂದ ಈ ವಿಶ್ವವೆಲ್ಲವೂ ವ್ಯಾಪ್ತವಾಗಿರುವುದೋ–ಅಂತಹ ಜಲವನ್ನು ಮಾನಸದೇವನು ಮೊದಲು ಸೃಷ್ಟಿಸಿದನು.

ಪೃಥಿವೀ ಪರ್ವತಾ ಮೇಘಾ ಮೂರ್ತಿಮನ್ತಶ್ಚ ಯೇ ಪರೇ ।
ಸರ್ವಂ ತದ್ವಾರುಣಂ ಜ್ಞೇಯಮಾಪಸ್ತಸ್ತಮ್ಭಿರೇ ಯಃ ॥೪॥

ಪೃಥಿವೀ, ಪರ್ವತ, ಮೇಘಗಳು, ಶರೀರಿಗಳಾದ ಮನುಷ್ಯ-ಪಶ್ವಾದಿ ಗಳು–ಈ ಎಲ್ಲವೂ ವಾರುಣ (ಜಲಮಯ) ವೆಂದೇ ತಿಳಿಯಬೇಕು. ಏಕೆಂದರೆ : ಮೊದಲು ವಿಶ್ವವೆಲ್ಲವೂ ಜಲಮಯವಾಗಿದ್ದು ಕಾಲಕ್ರಮದಲ್ಲಿ ಘನೀಭೂತವಾಗಿ ಪೃಥಿವೀ-ಪರ್ವತಗಳಾಗಿ ರೂಪುಗೊಂಡುವು."

ಭರದ್ವಾಜನು ಪ್ರಶ್ನಿಸುತ್ತಾನೆ :

ಕಥಂ ಸಲಿಲಮುತ್ಪನ್ನಂ ಕಥಂ ಚೈವಾಗ್ನಿಮಾರುತೌ ।
ಕಥಂ ವಾ ಮೇದಿನೀ ಸೃಷ್ಟೇತ್ಯತ್ರ ಮೇ ಸಂಶಯೋ ಮಹಾನ್ ॥೫॥

"ಭೃಗುಮುನಿಯೇ! ಮೊದಲು ನೀರು ಹೇಗೆ ಹುಟ್ಟಿತು? ಅಗ್ನಿ-ವಾಯುಗಳು ಹೇಗೆ ಹುಟ್ಟಿದುವು? ಪೃಥ್ವಿಯು ಹೇಗೆ ಸೃಷ್ಟಿಸಲ್ಪಟ್ಟಿತು? ಈ ವಿಷಯದಲ್ಲಿ ನನಗೆ ಮಹಾಸಂದೇಹವೇ ಇದೆ."

ಭೃಗುವು ಹೇಳುತ್ತಾನೆ :

“ಭರದ್ವಾಜ! ಹಿಂದೆ ಬ್ರಹ್ಮಕಲ್ಪವು ನಡೆಯುತ್ತಿದ್ದಾಗ– ಬ್ರಹ್ಮರ್ಷಿಗಳೆಲ್ಲರೂ ಒಂದೆಡೆಯಲ್ಲಿ ಸೇರಿದರು. ಆ ಸಮಯದಲ್ಲಿ ಆ ಮಹಾತ್ಮರಿಗೂ ಲೋಕಸೃಷ್ಟಿಯ ವಿಷಯದಲ್ಲಿ ಸಂದೇಹವೇ ಉಂಟಾಯಿತು. ಬಳಿಕ ಬ್ರಹ್ಮರ್ಷಿಗಳೆಲ್ಲರೂ ಆಹಾರವನ್ನು ತ್ಯಜಿಸಿ, ವಾಯುಭಕ್ಷರಾಗಿ, ಮೌನಿಗಳಾಗಿ ನೂರು ದಿವ್ಯವರ್ಷಗಳ ಪರ್ಯಂತವಾಗಿ ಧ್ಯಾನಯೋಗವನ್ನೇ ಆಶ್ರಯಿಸಿದ್ದರು. ನೂರು ದಿವ್ಯವರ್ಷಗಳು ಕಳೆದನಂತರ ಧ್ಯಾನಯೋಗದಲ್ಲಿದ್ದ ಅವರಿಗೆ ಬ್ರಹ್ಮಮಯವಾದ ವಾಣಿಯು ಕೇಳಿಸಿತು. ದಿವ್ಯವಾದ ಆ ಸರಸ್ವತಿಯು (ವಾಣಿಯು) ಆಕಾಶದ ಕಡೆಯಿಂದ ಕೇಳಿಬಂದಿತು. ಆ ದಿವ್ಯವಾಣಿಯನ್ನು ಕೇಳಿ ಸೃಷ್ಟಿಕ್ರಮವು ಹೀಗಾಯಿತೆಂದು ಬ್ರಹ್ಮರ್ಷಿಗಳು ತಿಳಿದರು.

ಪುರಾ ಸ್ತಿಮಿತಮಾಕಾಶಮನನ್ತಮಚಲೋಪಮಮ್ ।
ನಷ್ಟಚನ್ದ್ರಾರ್ಕಪವನಂ ಪ್ರಸುಪ್ತಮಿವ ಸಮ್ಬಭೌ ॥೯॥

ಹಿಂದೆ ಅನಂತವಾದ ಆಕಾಶವೂ ಪರ್ವತದಂತೆಯೇ ನಿಶ್ಚಲವಾಗಿದ್ದಿತು. ಆಕಾಶದಲ್ಲಿ ಸೂರ್ಯನಾಗಲೀ, ಚಂದ್ರನಾಗಲೀ, ವಾಯುವಾಗಲೀ ಇರಲಿಲ್ಲ. ಆಕಾಶವು ನಿದ್ರಿಸುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು.

ತತಃ ಸಲಿಲಮುತ್ಪನ್ನಂ ತಮಸೀವಾಪರಂ ತಮಃ ।
ತಸ್ಮಾಚ್ಚ ಸಲಿಲೋತ್ಪೀಡಾದುದತಿಷ್ಠತ ಮಾರುತಃ ॥೧೦॥

ಅಂಧಕಾರದಿಂದ ಮತ್ತೊಂದು ಅಂಧಕಾರವು ಹುಟ್ಟಿಕೊಂಡಂತೆ ಅನಂತವಾದ ಆಕಾಶದಿಂದ ಅನಂತವಾದ ನೀರು ಹುಟ್ಟಿಕೊಂಡಿತು. ಆ ಜಲಪ್ರವಾಹದಿಂದ ವಾಯುವಿನ ಪ್ರಾದುರ್ಭಾವವಾಯಿತು.

ಯಥಾ ಭಾಜನಮಚ್ಛಿದ್ರಂ ನಿಃಶಬ್ದಮಿವ ಲಕ್ಷ್ಯತೇ ।
ಶಚ್ಚಾಮ್ಭಸಾ ಪೂರ್ಯಮಾಣಂ ಸಶಬ್ದಂ ಕುರುತೇಽನಿಲಃ ॥೧೧॥

ಛಿದ್ರರಹಿತವಾದ ಪಾತ್ರೆಯು ಶಬ್ದದಿಂದ ರಹಿತವಾಗಿರುವಂತೆ ಕಾಣುತ್ತದೆ. ಆದರೆ ಪಾತ್ರೆಯನ್ನು ತೂತುಮಾಡಿ ನೀರಿನಿಂದ ತುಂಬಿದರೆ ವಾಯುವು ಅದರಲ್ಲಿ ಶಬ್ದೋತ್ಪತ್ತಿಯನ್ನು ಮಾಡುತ್ತದೆ.

ತಥಾ ಸಲಿಲಸಂರುದ್ಧೇ ನಭಸೋಽನ್ತೇ ನಿರನ್ತರೇ ।
ಭಿತ್ತ್ವಾರ್ಣವತಲಂ ವಾಯುಃ ಸಮುತ್ಪತತಿ ಘೋಷವಾನ್ ॥೧೨॥

ಆಕಾಶದ ಪ್ರದೇಶವೆಲ್ಲವೂ ಸ್ವಲ್ಪವಾದರೂ ಅಂತರವೇ ಇಲ್ಲದ ರೀತಿಯಲ್ಲಿ ನೀರಿನಿಂದ ಆಕ್ರಮಿಸಲ್ಪಟ್ಟುವು. ವಿಶ್ವವೆಲ್ಲವೂ ಏಕಾರ್ಣವವಾಗಿದ್ದ ಆ ಸಮಯದಲ್ಲಿ ಏಕಾರ್ಣವವಾದ ಆಕಾಶದ ತಲಪ್ರದೇಶವನ್ನು ಭೇದಿಸಿ ಕೊಂಡು ಮಹಾಶಬ್ದದೊಡನೆ ವಾಯುವು ಪ್ರಕಟಗೊಂಡಿತು.

ಸ ಏಷ ಚರತೇ ವಾಯುರರ್ಣವೋತ್ಪೀಡಸಮ್ಭವಃ ।
ಆಕಾಶಸ್ಥಾನಮಾಸಾದ್ಯ ಪ್ರಶಾನ್ತಿಂ ನಾಧಿಗಚ್ಛತಿ ॥೧೩॥

ಹೀಗೆ ಏಕಾರ್ಣವದ ತಲಭಾಗವನ್ನು ಭೇದಿಸಿಕೊಂಡು ಹೊರಬಂದ ವಾಯುವು ಸರ್ವತ್ರ ಸಂಚರಿಸತೊಡಗಿತು. ಆದರೆ ವಾಯುವು ಆಕಾಶದಲ್ಲಿ ಯಾವ ಸ್ಥಳದಲ್ಲಿಯೂ ಶಾಂತಿಯನ್ನು ಪಡೆದುಕೊಳ್ಳಲಿಲ್ಲ. (ವಾಯುವಿಗೂ ಜಲಕ್ಕೂ ಸಂಘರ್ಷವು ನಡೆಯುತ್ತಲೇ ಇದ್ದಿತು.)

ತಸ್ಮಿನ್ವಾಯ್ವಮ್ಬು ಸಂಘರ್ಷೇ ದೀಪ್ತತೇಜಾ ಮಹಾಬಲಃ ।
ಪ್ರಾದುರಭೂದೂರ್ಧ್ವಶಿಖಃ ಕೃತ್ವಾ ನಿಸ್ತಿಮಿರಂ ನಭಃ ॥೧೪॥

ವಾಯು ಮತ್ತು ನೀರಿನ ಸತತವಾದ ಸಂಘರ್ಷದಿಂದಾಗಿ ಮಹಾಬಲನಾದ, ಪ್ರದೀಪ್ತವಾದ ತೇಜಸ್ಸನ್ನು ಹೊಂದಿದ್ದ, ಊರ್ಧ್ವಜ್ವಾಲಿಯಾದ ಅಗ್ನಿಯು ಆಕಾಶವನ್ನು ಅಂಧಕಾರದಿಂದ ರಹಿತವನ್ನಾಗಿ ಮಾಡುತ್ತಾ ಪ್ರಾದುರ್ಭವಿಸಿದನು.

ಅಗ್ನಿಃ ಪವನಸಂಯುಕ್ತಃ ಖಂ ಸಮಾಕ್ಷಿಪತೇ ಜಲಮ್ ।
ಸೋಽಗ್ನಿಮಾರುತಸಂಯೋಗಾದ್ಘನತ್ವಮುಪಪದ್ಯತೇ ॥೧೫॥

ಅಗ್ನಿಯು ವಾಯುವಿನೊಡನೆ ಸೇರಿಕೊಂಡು ಸರ್ವತ್ರಸಮಾವೃತವಾಗಿದ್ದ ನೀರನ್ನು ಆಕಾಶದಿಂದ ಹೊರಹಾಕಲು ಪ್ರಯತ್ನಿಸಿದನು. ಆ ನೀರೇ ಅಗ್ನಿ ಮತ್ತು ವಾಯುವಿನ ಸಹಯೋಗದಿಂದಾಗಿ ಘನೀಭೂತವಾಯಿತು.

ತಸ್ಯಾಕಾಶೇ ನಿಪತಿತಃ ಸ್ನೇಹಸ್ತಿಷ್ಠತಿ ಯೋಽಪರಃ ।
ಸ ಸಂಘಾತತ್ವಮಾಪನ್ನೋ ಭೂಮಿತ್ವಮನುಗಚ್ಛತಿ ॥೧೬॥

ಆಕಾಶದಲ್ಲಿ ಬಿದ್ದಿದ್ದ ದ್ರವರೂಪವಾದ ಯಾವ ಬೇರೊಂದು ನೀರಿದ್ದಿತೋ (ಜಿಡ್ಡಿನ ಅಂಶವಿದ್ದಿತೋ)–ಅದು ಅಗ್ನಿ-ವಾಯು ಸಂಘರ್ಷ ದಿಂದ ಘನೀಭೂತವಾಗಿ ಭೂಮಿಯ ರೂಪವನ್ನು ಪಡೆಯಿತು.

ರಸಾನಾಂ ಸರ್ವಗನ್ಧಾನಾಂ ಸ್ನೇಹಾನಾಂ ಪ್ರಾಣಿನಾಂ ತಥಾ ।
ಭೂಮಿರ್ಯೋನಿರಿಹ ಜ್ಞೇಯಾ ಯಸ್ಯಾಂ ಸರ್ವಂ ಪ್ರಸೂಯತೇ ॥

ಈ ಪೃಥ್ವಿಯು- ಎಲ್ಲ ರಸಗಳಿಗೂ, ಎಲ್ಲ ಗಂಧಗಳಿಗೂ, ಜಿಡ್ಡುಗಳಿಗೂ ಮತ್ತು ಪ್ರಾಣಿಗಳಿಗೂ ಯೋನಿಭೂತವಾಗಿದೆ. ಈ ಭೂಮಿಯಲ್ಲಿಯೇ ಎಲ್ಲದರ ಉತ್ಪತ್ತಿಯೂ ಆಗುತ್ತದೆ."

ಗ೮೩ನೆಯ ಅಧ್ಯಾಯವು ಮುಗಿಯಿತು.

ಗ೮೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪಂಚಮಹಾಭೂತಗಳ ಗುಣಗಳ ವರ್ಣನೆ

ಜನಮೇಜಯ! ಭೀಷ್ಮನು ಪ್ರವಚನವನ್ನು ಮುಂದುವರಿಸುತ್ತಾ ಹೇಳುತ್ತಾನೆ :

"ಯುಧಿಷ್ಠಿರ! ಭರದ್ವಾಜನು ಪ್ರಶ್ನಿಸುತ್ತಾನೆ :

ತ ಏತೇ ಧಾತವಃ ಪಞ್ಚ ಬ್ರಹ್ಮಾ ಯಾನಸೃಜತ್ಪುರಾ ।
ಆವೃತಾ ಯೈರಿಮೇ ಲೋಕಾ ಮಹಾಭೂತಾಭಿಸಂಜ್ಞಿತಾಃ ॥೧॥

"ಭೃಗುಮುನಿಯೇ! ನೀನೇ ಹೇಳಿದಂತೆ ಬ್ರಹ್ಮನು ಯಾವ ಈ ಪಂಚಧಾತುಗಳನ್ನು ಸೃಷ್ಟಿಸಿದನೋ ಆ ಪಂಚಧಾತುಗಳೇ ಪಂಚಭೂತ ಗಳೆಂಬ ಸಂಜ್ಞೆಯಿಂದ ಎಲ್ಲ ಲೋಕಗಳನ್ನೂ ವ್ಯಾಪಿಸಿವೆ.

ಯದಾಸೃಜತ್ಸಹಸ್ರಾಣಿ ಭೂತಾನಾಂ ಸ ಮಹಾಮತಿಃ ।
ಪಞ್ಚಾನಾಮೇವ ಭೂತತ್ವಂ ಕಥಂ ಸಮುಪಪದ್ಯತೇ ॥೨॥

ಮಹಾಮತಿಯಾದ ಬ್ರಹ್ಮನು ಸಾವಿರಾರು ಭೂತಗಳನ್ನು (ಪ್ರಾಣಿ ಗಳನ್ನು) ಸೃಷ್ಟಿಸಿರುವಾಗ ಈ ಐದಕ್ಕೆ ಮಾತ್ರವೇ 'ಭೂತಗಳು' ಎಂಬ ಸಂಜ್ಞೆಯು ಹೇಗೆ ಸಂಗತವಾಗುತ್ತದೆ?"

ಭೃಗುವು ಹೇಳುತ್ತಾನೆ :

ಅಮಿತಾನಾಂ ಮಹಾಶಬ್ದೋ ಯಾನ್ತಿ ಭೂತಾನಿ ಸಮ್ಭವಮ್ ।
ತತಸ್ತೇಷಾಂ ಮಹಾಭೂತಶಬ್ದೋಽಯಮುಪಪದ್ಯತೇ ॥೩॥

"ಭರದ್ವಾಜ! ಈ ಪಂಚಭೂತಗಳು ಅಮಿತವಾಗಿವೆ. ಹಿಂದೆಯೇ ಹೇಳಿದಂತೆ ಇವುಗಳ ಪರಿಮಾಣವೆಷ್ಟೆಂಬುದನ್ನು ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದಲೇ ಈ ಐದು ಭೂತಗಳಿಗೆ ಮಹಾ ಎಂಬ ಶಬ್ದವೂ ಸೇರಿಕೊಂಡು ಪಂಚಮಹಾಭೂತಗಳೆಂಬ ಸಂಜ್ಞೆಯನ್ನೂ ಈ ಐದು ಭೂತಗಳು ಹೊಂದಿವೆ. ಮೇಲಾಗಿ ಇವುಗಳಿಂದಲೇ ಉಳಿದ ಭೂತಗಳ (ಪ್ರಾಣಿಗಳ) ಸೃಷ್ಟಿಯಾಗುತ್ತದೆ. ಈ ಕಾರಣಗಳಿಂದಲೂ ಇವುಗಳಿಗೆ ಮಹಾಭೂತಗಳೆಂಬ ಶಬ್ದವು ಸುಸಂಗತವಾಗಿಯೇ ಇದೆ.

ಚೇಷ್ಟಾ ವಾಯುಃ ಖಮಾಕಾಶಮೂಷ್ಮಾಗ್ನಿಃ ಸಲಿಲಂ ದ್ರವಃ ।
ಪೃಥಿವೀ ಚಾತ್ರ ಸಂಘಾತಃ ಶರೀರಂ ಪಾಞ್ಚಭೌತಿಕಮ್ ॥೪॥

ಪ್ರಾಣಿಗಳ ಶರೀರವು ಈ ಪಂಚಮಹಾಭೂತಗಳ ಸಂಘಾತವೇ ಆಗಿದೆ. ಪ್ರಾಣಿಯು ಮಾಡುವ ಚೇಷ್ಟೆಯು ವಾಯುವಿಗೆ ಸಂಬಂಧಿಸಿದ್ದಾಗಿದೆ. ಶೂನ್ಯವಾಗಿರುವುದು (ಕಿವಿ-ಮೂಗು ಮುಂತಾದುವುಗಳಲ್ಲಿ) ಆಕಾಶದ ಅಂಶವಾಗಿದೆ. ಶರೀರವು ಬಿಸಿಯಾಗಿರುವುದು ಅಗ್ನಿಯ ಅಂಶವಾಗಿದೆ. ದ್ರವರೂಪವಾಗಿರುವುದು (ರಕ್ತ-ಜೊಲ್ಲು-ಕಣ್ಣೀರು ಮುಂತಾದುವು) ಜಲದ ಅಂಶವಾಗಿವೆ. ಮನುಷ್ಯನ ಶರೀರದಲ್ಲಿರುವ ಮೂಳೆ-ಮಾಂಸ ಮೊದಲಾದು ವುಗಳು ಪೃಥ್ವಿಯ ಅಂಶವಾಗಿದೆ. ಒಟ್ಟಿನಲ್ಲಿ ಸಕಲಪ್ರಾಣಿಗಳ ಶರೀರವೂ ಪಾಂಚಭೌತಿಕವೇ ಆಗಿದೆ.

ಇತ್ಯೇತೈಃ ಪಞ್ಚಭಿರ್ಭೂತೈರ್ಯುಕ್ತಂ ಸ್ಥಾವರಜಙ್ಗಮಮ್ ।
ಶ್ರೋತ್ರಂ ಘ್ರಾಣಂ ರಸಃ ಸ್ಪರ್ಶೋ ದೃಷ್ಟಿಶ್ಚೇನ್ದ್ರಿಯಸಂಜ್ಞಿತಾಃ ॥೫॥

ಈ ರೀತಿಯಲ್ಲಿ ಪ್ರಪಂಚದಲ್ಲಿರುವ ಸ್ಥಾವರ-ಜಂಗಮಗಳೆಲ್ಲವೂ ಪಂಚ ಮಹಾಭೂತಗಳಿಂದಲೇ ಯುಕ್ತವಾಗಿವೆ. ಈ ಐದು ಮಹಾಭೂತಗಳೂ

ಮನುಷ್ಯನಲ್ಲಿ ಕಿವಿ, ಮೂಗು, ನಾಲಿಗೆ, ತ್ವಕ್ (ಚರ್ಮ), ಕಣ್ಣುಗಳೆಂಬ ಪಂಚೇಂದ್ರಿಯಗಳ ಸಂಜ್ಞೆಗಳನ್ನು ಹೊಂದಿವೆ."

ಭರದ್ವಾಜನು ಹೇಳುತ್ತಾನೆ :

ಪಞ್ಚಭಿರ್ಯದಿ ಭೂತೈಸ್ತು ಯುಕ್ತಾಃ ಸ್ಥಾವರಜಙ್ಗಮಾಃ ।
ಸ್ಥಾವರಾಣಾಂ ನ ದೃಶ್ಯನ್ತೇ ಶರೀರೇ ಪಞ್ಚ ಧಾತವಃ ॥೬॥

"ಭಗವನ್! ಸ್ಥಾವರ-ಜಂಗಮಗಳೆಲ್ಲವೂ ಈ ಪಂಚಭೂತಗಳಿಂದಲೇ ಯುಕ್ತವಾಗಿರುವುದೆಂದು ನೀನು ಹೇಳುವುದಾದರೆ ಸ್ಥಾವರಗಳಲ್ಲಿ ಈ ಪಂಚಭೂತಗಳು ಇರುವುದು ಕಂಡುಬರುವುದಿಲ್ಲ.

ಅನೂಷ್ಮಣಾಮಚೇಷ್ಟಾನಾಂ ಘನಾನಾಂ ಚೈವ ತತ್ತ್ವತಃ ।
ವೃಕ್ಷಾಣಾಂ ನೋಪಲಭ್ಯನ್ತೇ ಶರೀರೇ ಪಞ್ಚ ಧಾತವಃ ॥೭॥

ವೃಕ್ಷಗಳ ಶರೀರದಲ್ಲಿ ಶಾಖವಿರುವುದೇನೂ ಕಂಡುಬರುವುದಿಲ್ಲ. ಆದುದರಿಂದ ಅಗ್ನಿಯ ಅಂಶವು ವೃಕ್ಷದಲ್ಲಿ ಇಲ್ಲವೆಂದಂತಾಯಿತು. ಅದು ಯಾವ ವಿಧವಾದ ಚೇಷ್ಟೆಯನ್ನೂ ಮಾಡುವುದಿಲ್ಲ. ಅತ್ತಿಂದಿತ್ತ ಸಂಚರಿಸುವುದಿಲ್ಲ. ಆದುದರಿಂದ ವಾಯುವಿನ ಅಂಶವೂ ಇರುವುದಿಲ್ಲ. ವಸ್ತುತಃ ವೃಕ್ಷವು ಒಂದು ಘನವಾದ ವಸ್ತುವಾಗಿದೆ. ಆದುದರಿಂದ ವೃಕ್ಷಗಳ ಶರೀರದಲ್ಲಿ ಪಂಚಭೂತಗಳಿರುವುದು ಕಂಡುಬರುವುದಿಲ್ಲ.

ನ ಶೃಣ್ವನ್ತಿ ನ ಪಶ್ಯನ್ತಿ ನ ಗನ್ಧರಸವೇದಿನಃ ।
ನ ಚ ಸ್ಪರ್ಶಂ ವಿಜಾನನ್ತಿ ತೇ ಕಥಂ ಪಾಞ್ಚಭೌತಿಕಾಃ ॥೮॥

ಎಲ್ಲರಿಗೂ ತಿಳಿದಿರುವಂತೆಯೇ ವೃಕ್ಷಗಳು ನಾವು ಹೇಳಿದುದನ್ನು ಕೇಳಿಸಿಕೊಳ್ಳುವುದಿಲ್ಲ. (ಅವುಗಳಿಗೆ ಶ್ರವಣಸಾಧನವಾದ ಕಿವಿಗಳಿಲ್ಲ.) ಅವುಗಳು ಯಾರನ್ನೂ ನೋಡುವುದಿಲ್ಲ. (ದರ್ಶನಸಾಧನವಾದ ಕಣ್ಣುಗಳೂ ಅವುಗಳಿಗಿಲ್ಲ.) ಗಂಧವನ್ನಾಗಲೀ ರಸವನ್ನಾಗಲೀ ವೃಕ್ಷಗಳು ತಿಳಿಯಲಾರವು. ಗಂಧವನ್ನು ಮೂಸಿನೋಡಲು ಅವುಗಳಿಗೆ ಮೂಗುಗಳಿಲ್ಲ. ರಸಾಸ್ವಾದನೆಯನ್ನು ಮಾಡಲು ನಾಲಿಗೆಯೂ ಇಲ್ಲ. ವೃಕ್ಷಗಳು ಸ್ಪರ್ಶವನ್ನು ಅರಿಯವು. ಕತ್ತರಿಸಿದರೂ ಅವು ಯಾವ ಪ್ರತಿಕ್ರಿಯೆಯನ್ನೂ ತೋರದೇ ಇರುವಾಗ ಸ್ಪರ್ಶದಿಂದ ಅವುಗಳ ಮೇಲೆ ಯಾವ ವಿಧವಾದ ಪರಿಣಾಮವೂ

ಆಗುವುದಿಲ್ಲ. ಆದುದರಿಂದ ವೃಕ್ಷಗಳಲ್ಲಿ ಪಂಚಭೂತಗಳೂ ಇಲ್ಲ. ಪಂಚ ಭೂತಗಳನ್ನು ಪ್ರತಿನಿಧಿಸುವ ಇಂದ್ರಿಯಗಳೂ ಇಲ್ಲ. ವೃಕ್ಷಗಳೂ ಹೇಗೆ ಪಾಂಚಭೌತಿಕಗಳಾಗುತ್ತವೆ?

ಅದ್ರವತ್ವಾದನಗ್ನಿತ್ವಾದಭೂಮಿತ್ವಾದವಾಯುತಃ ।
ಆಕಾಶಸ್ಯಾಪ್ರಮೇಯತ್ವಾದ್ವೃಕ್ಷಾಣಾಂ ನಾಸ್ತಿ ಭೌತಿಕಮ್ ॥೯॥

ವೃಕ್ಷಗಳಲ್ಲಿ ದ್ರವವೂ ಇಲ್ಲ; ಉಷ್ಣವೂ ಇಲ್ಲ. ಭೂಮಿಯನ್ನು ಪ್ರತಿನಿಧಿಸುವ ಮೂಳೆ-ಮಾಂಸಗಳೂ ಇಲ್ಲ. ಚೇಷ್ಟೆಗಳಿಲ್ಲದೇ ಇರುವುದ ರಿಂದ ವಾಯುವಿನ ಅಂಶವೂ ಇಲ್ಲ. ಆಕಾಶವು ಇರಲು ಅವಕಾಶವೇ ಇಲ್ಲದಿರುವುದರಿಂದ ವೃಕ್ಷಗಳಲ್ಲಿ ಆಕಾಶದ ಅಂಶವೂ ಇಲ್ಲ. ಆದುದರಿಂದ ನೀನು ಹೇಳಿದಂತೆ ಸ್ಥಾವರಗಳಾದ ವೃಕ್ಷಗಳಲ್ಲಿ ಪಂಚಮಹಾಭೂತಗಳಿಲ್ಲ."

ಭೃಗುವು ಹೇಳುತ್ತಾನೆ :

ಘನಾನಾಮಪಿ ವೃಕ್ಷಾಣಾಮಾಕಾಶೋಽಸ್ತಿ ನ ಸಂಶಯಃ ।
ತೇಷಾಂ ಪುಷ್ಪಫಲವ್ಯಕ್ತಿರ್ನಿತ್ಯಂ ಸಮುಪಪದ್ಯತೇ ॥೧೦॥

"ಯದ್ಯಪಿ ವೃಕ್ಷಗಳು ಘನವಾಗಿದ್ದರೂ (ಗಟ್ಟಿಯಾಗಿದ್ದರೂ) ಅವುಗಳಲ್ಲಿಯೂ ಪಂಚಭೂತಗಳಲ್ಲೊಂದಾದ ಆಕಾಶವು ಇದ್ದೇ ಇದೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಮೇಲಾಗಿ ವೃಕ್ಷಗಳಲ್ಲಿ ಅನುದಿನವೂ ಹೂಗಳೂ, ಕಾಯಿಗಳೂ, ಹಣ್ಣುಗಳೂ ಅಭಿವ್ಯಕ್ತವಾಗುತ್ತಲೇ ಇರುತ್ತವೆ. ಇದು ಆಕಾಶವಿದೆಯೆಂಬುದನ್ನೂ ವ್ಯಕ್ತಪಡಿಸುತ್ತದೆ. ಇದು ವಾಯುವಿನ ಸಂಬಂಧವಾದ ಚೇಷ್ಟೆಯನ್ನೂ ವ್ಯಕ್ತಪಡಿಸುತ್ತದೆ.

ಊಷ್ಮತೋ ಮ್ಲಾಯತೇ ಪರ್ಣಂ ತ್ವಕ್ಫಲಂ ಪುಷ್ಪಮೇವ ಚ ।
ಮ್ಲಾಯತೇ ಶೀರ್ಯತೇ ಚಾಪಿ ಸ್ಪರ್ಶಸ್ತೇನಾತ್ರ ವಿದ್ಯತೇ ॥೧೧॥

ವೃಕ್ಷವನ್ನು ನಾವು ಮುಟ್ಟಿದರೆ ಅದು ನಮಗೆ ಬೆಚ್ಚಗೆ ಕಾಣದಿರಬಹುದು. ಅದರಿಂದಲೇ ವೃಕ್ಷದಲ್ಲಿ ಅಗ್ನಿಯ ಸಂಬಂಧವಾದ ಉಷ್ಣವಿಲ್ಲವೆಂದು ಹೇಳಲಾಗುವುದಿಲ್ಲ. ವೃಕ್ಷದಲ್ಲಿ ಅಗ್ನಿಯ ಸಂಬಂಧವಾದ ಉಷ್ಣ ವಿರುವುದರಿಂದಲೇ ಎಲೆಗಳು ಒಣಗಿಹೋಗುತ್ತವೆ. ಫಲ ಮತ್ತು ಪುಷ್ಪ

ಗಳು ಬಾಡುತ್ತವೆ. ವೃಕ್ಷದ ತೊಗಟೆ ಅಥವಾ ಸಿಪ್ಪೆಗಳು ಬಿರಿಯುತ್ತವೆ. ಹೂವನ್ನು ಮುಟ್ಟಿದರೆ ಅದು ಬಾಡುತ್ತದೆ. ಮುಟ್ಟಿದರೆ ಫಲವು ಉದುರಿ ಹೋಗುತ್ತದೆ. ಸ್ಪರ್ಶದ ಮೂಲಕವಾಗಿ ವೃಕ್ಷದ ಪ್ರತಿಕ್ರಿಯೆಯು ಇರುವು ದೆಂಬುದಕ್ಕೆ ಇದೇ ನಿದರ್ಶನ. ಆದುದರಿಂದ ಪಂಚಭೂತಗಳ ಗುಣಗಳಲ್ಲಿ ಒಂದಾದ ಸ್ಪರ್ಶಗುಣವೂ ವೃಕ್ಷಗಳಿಗಿದೆ.*

ವಾಯ್ವಗ್ನ್ಯಶನಿನಿರ್ಘೋಷೈಃ ಫಲಂ ಪುಷ್ಪಂ ವಿಶೀರ್ಯತೇ ।
ಶ್ರೋತ್ರೇಣ ಗೃಹ್ಯತೇ ಶಬ್ದಸ್ತಸ್ಮಾಚ್ಛೃಣ್ವನ್ತಿ ಪಾದಪಾಃ ॥೧೨॥

ವಾಯು, ಅಗ್ನಿ ಮತ್ತು ಸಿಡಿಲುಗಳ ಶಬ್ದಗಳು ಕೇಳಿಸುತ್ತಿದ್ದಂತೆಯೇ ವೃಕ್ಷಗಳಲ್ಲಿರುವ ಫಲ-ಪುಷ್ಪಗಳು ಶೀರ್ಣವಾಗಿ ಕೆಳಕ್ಕೆ ಬಿದ್ದುಹೋಗುತ್ತವೆ. ವೃಕ್ಷಗಳಿಗೆ ಶ್ರವಣಸಾಮರ್ಥ್ಯವಿಲ್ಲದಿದ್ದರೆ ಈ ವಿಧವಾದ ಪ್ರತಿಕ್ರಿಯೆಗೆ ಅವಕಾಶವಿರಲಿಲ್ಲ. ಶಬ್ದಗ್ರಹಣವು ಶ್ರವಣೇಂದ್ರಿಯದಿಂದಲೇ ಸಾಧ್ಯವಾಗು ತ್ತದೆ. ಅಗೋಚರವಾದ ಶ್ರವಣೇಂದ್ರಿಯವಿರುವುದರಿಂದಲೇ ವೃಕ್ಷಗಳೂ ಸುಂಟರಗಾಳಿಯ ಶಬ್ದವನ್ನೂ, ಅಗ್ನಿಯ ಧಗ-ಧಗಿಸುವ ಶಬ್ದವನ್ನೂ, ಸಿಡಿಲಿನ ಮಹಾಶಬ್ದವನ್ನೂ ಕೇಳಿಸಿಕೊಳ್ಳುತ್ತವೆ.

ವಲ್ಲೀ ವೇಷ್ಟಯತೇ ವೃಕ್ಷಂ ಸರ್ವತಶ್ಚೈವ ಗಚ್ಛತಿ ।
ನ ಹ್ಯದೃಷ್ಟೇಶ್ಚ ಮಾರ್ಗೋಽಸ್ತಿ ತಸ್ಮಾತ್ಪಶ್ಯನ್ತಿ ಪಾದಪಾಃ ॥೧೩॥

ಬಳ್ಳಿಯು ವೃಕ್ಷವನ್ನು ಸುತ್ತಿಕೊಳ್ಳುತ್ತದೆ. ವೃಕ್ಷದ ಎಲ್ಲ ಕಡೆಗಳಿಗೂ ಹಬ್ಬುತ್ತಿರುತ್ತದೆ. ಕಣ್ಣಿಲ್ಲದವನಿಗೆ ಮಾರ್ಗವಿಲ್ಲವೆಂಬುದು ಸ್ವಭಾವಸಿದ್ಧ ವಾಗಿದೆ. ಬಳ್ಳಿಗಳು ನಾನಾದಿಕ್ಕುಗಳಲ್ಲಿ ಮುನ್ನಡೆಯುವುದರಿಂದ ಅವುಗಳಿಗೆ ಕಣ್ಣುಗಳಿವೆಯೆಂದೇ ಆಯಿತಲ್ಲವೇ? ಅಂತೆಯೇ ವೃಕ್ಷಗಳಿಗೂ ಕಣ್ಣುಗಳಿವೆ. ಅವು ನೋಡುತ್ತವೆ.

ಪುಣ್ಯಾಪುಣ್ಯೈಸ್ತಥಾ ಗನ್ಧೈರ್ಧೂಪೈಶ್ಚ ವಿವಿಧೈರಪಿ ।
ಅರೋಗಾಃ ಪುಷ್ಪಿತಾಃ ಸನ್ತಿ ತಸ್ಮಾಜ್ಜಿಘ್ರನ್ತಿ ಪಾದಪಾಃ ॥೧೪॥

ಪವಿತ್ರವಾದ ಮತ್ತು ಅಪವಿತ್ರವಾದ ಗಂಧಗಳಿಂದಲೂ, ವಿಧ-ವಿಧ

---

* ಮುಟ್ಟಿದರೆ ಮುನಿ–ಎಂಬ ಗಿಡವು ಮನುಷ್ಯನು ಮುಟ್ಟಿದೊಡನೆಯೇ ಮುದುರಿಕೊಳ್ಳುತ್ತದೆ. ಇದನ್ನು ಈಗಲೂ ಪ್ರತ್ಯಕ್ಷವಾಗಿ ಕಾಣಬಹುದು.

ವಾದ ಧೂಪಗಳಿಂದಲೂ ಚಿಕಿತ್ಸೆಮಾಡಲ್ಪಟ್ಟ ವೃಕ್ಷಗಳು ರೋಗಗಳಿಂದ ರಹಿತವಾಗಿ ಪುಷ್ಪ-ಫಲಗಳಿಂದ ಸಮೃದ್ಧವಾಗುತ್ತವೆ. ವೃಕ್ಷಗಳೂ ವಾಸನೆ ಯನ್ನು ನೋಡುತ್ತವೆಯೆಂಬುದನ್ನು ಇದು ಪ್ರಮಾಣೀಕರಿಸುತ್ತದೆ. ಆಘ್ರಾಣ ಗುಣವೂ ವೃಕ್ಷಗಳಿಗೆ ಇರುವುದು ಸಿದ್ಧವಾದಂತಾಯಿತು.

ಪಾದೈಃ ಸಲಿಲಪಾನಾಚ್ಚ ವ್ಯಾಧೀನಾಂ ಚಾಪಿ ದರ್ಶನಾತ್ ।
ವ್ಯಾಧಿಪ್ರತಿಕ್ರಿಯತ್ವಾಚ್ಚ ವಿದ್ಯತೇ ರಸನಂ ದ್ರುಮೇ ॥೧೫॥

ವೃಕ್ಷಗಳು ಬೇರುಗಳ ಮೂಲಕವಾಗಿ ನೀರನ್ನು ಕುಡಿಯುತ್ತವೆ. ವೃಕ್ಷಗಳಿಗೂ ರೋಗಗಳು ತಗುಲುವುದು ಸ್ವಾಭಾವಿಕ. ಚಿಕಿತ್ಸೆಯನ್ನೂ ಬೇರುಗಳ ಮೂಲಕವಾಗಿಯೇ ಮಾಡುತ್ತಾರೆ. ಬೇರುಗಳ ಮೂಲಕವಾಗಿ ಔಷಧವನ್ನು ಸೇವಿಸಿ ವೃಕ್ಷಗಳು ರೋಗರಹಿತವಾಗುತ್ತವೆ. ಆದುದರಿಂದ ವೃಕ್ಷಗಳಿಗೆ ನಾಲಿಗೆಯಿದೆಯೆಂಬುದೂ ಸಿದ್ಧವೇ ಆಯಿತಲ್ಲವೇ?

ವಕ್ತ್ರೇಣೋತ್ಪಲನಾಲೇನ ಯಥೋರ್ಧ್ವಂ ಜಲಮಾದದೇತ್ ।
ತಥಾ ಪವನಸಂಯುಕ್ತಃ ಪಾದೈಃ ಪಿಬತಿ ಪಾದಪಃ ॥೧೬॥

ಯಾವ ರೀತಿಯಲ್ಲಿ ಮನುಷ್ಯನು ಕಮಲದ ನಾಳವನ್ನು (ಕಾಂಡವನ್ನು) ಬಾಯಿಯಲ್ಲಿಟ್ಟುಕೊಂಡು ಕೆಳಗಿರುವ ನೀರನ್ನು–ಉಸಿರನ್ನು ಎಳೆದುಕೊಳ್ಳುವುದರ ಮೂಲಕವಾಗಿ ಮೇಲಕ್ಕೆ ಸೆಳೆದುಕೊಳ್ಳುವನೋ– ಅದೇ ರೀತಿಯಲ್ಲಿ ವೃಕ್ಷವು ವಾಯುವಿನ ಸಹಾಯದಿಂದ ಬೇರುಗಳ ಮೂಲಕವಾಗಿ ಕೆಳಭಾಗದಲ್ಲಿರುವ ನೀರನ್ನು ಕುಡಿಯುತ್ತದೆ.

ಸುಖದುಃಖಯೋಶ್ಚ ಗ್ರಹಣಾಚ್ಛಿನ್ನಸ್ಯ ಚ ವಿರೋಹಣಾತ್ ।
ಜೀವಂ ಪಶ್ಯಾಮಿ ವೃಕ್ಷಾಣಾಮಚೈತನ್ಯಂ ನ ವಿದ್ಯತೇ ॥೧೭॥

ವೃಕ್ಷವು ಸುಖ-ದುಃಖಗಳನ್ನು ಅನುಭವಿಸುತ್ತದೆ. ಕೊಡಲಿಯನ್ನು ಹಿಡಿದವನು ಹತ್ತಿರಕ್ಕೆ ಹೋದರೆ ವೃಕ್ಷವು ದುಃಖಪಡುತ್ತದೆ. ನೀರೆರೆಯು ವವನು ಹತ್ತಿರಕ್ಕೆ ಹೋದರೆ ಸಂತೋಷಪಡುತ್ತದೆ. ಕತ್ತರಿಸಿದರೆ ಪುನಃ ಅದು ಚಿಗುರುತ್ತದೆ. ಈ ಕಾರಣಗಳಿಂದ ನಾನು ವೃಕ್ಷಗಳಲ್ಲಿ ಜೀವವಿರುವುದನ್ನು ಕಾಣುತ್ತಿದ್ದೇನೆ. ವೃಕ್ಷಗಳೆಂದಿಗೂ ಅಚೇತನಗಳಲ್ಲ.

ತೇನ ತಜ್ಜಲಮಾದತ್ತಂ ಜರಯತ್ಯಗ್ನಿಮಾರುತೌ ।
ಆಹಾರಪರಿಣಾಮಾಚ್ಚ ಸ್ನೇಹೋ ವೃದ್ಧಿಶ್ಚ ಜಾಯತೇ ॥೧೮॥

ವೃಕ್ಷವು ಬೇರುಗಳ ಮೂಲಕವಾಗಿ ಕುಡಿದ ನೀರನ್ನು ವೃಕ್ಷದೊಳಗಿರುವ ಅಗ್ನಿ ಮತ್ತು ವಾಯುಗಳು ಅರಗಿಸುತ್ತವೆ. ಹೀಗೆ ಆಹಾರವು ಪರಿಣಾಮವಾಗುವುದರಿಂದಲೇ ವೃಕ್ಷದಲ್ಲಿ ಸ್ನಿಗ್ಧತೆಯುಂಟಾಗುತ್ತದೆ ಮತ್ತು ಅದು ದಿನ-ದಿನಕ್ಕೂ ಬೆಳೆಯುತ್ತಿರುತ್ತದೆ.

ಜಙ್ಗಮಾನಾಂ ಚ ಸರ್ವೇಷಾಂ ಶರೀರೇ ಪಞ್ಚ ಧಾತವಃ ।
ಪ್ರತ್ಯೇಕಶಃ ಪ್ರಭಿದ್ಯನ್ತೇ ತೈಃ ಶರೀರಂ ವಿಚೇಷ್ಟತೇ ॥೧೯॥

ಸಮಸ್ತಜಂಗಮಪ್ರಾಣಿಗಳ ಶರೀರಗಳಲ್ಲಿಯೂ ಪಂಚಮಹಾಭೂತಗಳು ಇದ್ದೇ ಇರುತ್ತವೆ. ಆದರೆ ಒಂದೊಂದೂ ಬೇರೆಯಾಗಿರುತ್ತದೆ. ಆ ಪಂಚಭೂತಗಳ ಸಹಯೋಗದಿಂದಲೇ ಪ್ರಾಣಿಗಳ ಶರೀರಗಳು ಕರ್ಮಗಳಲ್ಲಿ ತೊಡಗುತ್ತವೆ.

ತ್ವಕ್ಚ ಮಾಂಸಂ ತಥಾಸ್ಥೀನಿ ಮಜ್ಜಾ ಸ್ನಾಯುಶ್ಚ ಪಞ್ಚಮಮ್ ।
ಇತ್ಯೇತದಿಹ ಸಂಘಾತಂ ಶರೀರೇ ಪೃಥಿವೀಮಯಮ್ ॥೨೦॥

ಶರೀರದಲ್ಲಿರುವ ತ್ವಕ್ (ಚರ್ಮ), ಮಾಂಸ, ಮೂಳೆ, ಮಜ್ಜೆ, ಕರುಳು– ಈ ಐದು ವಸ್ತುಗಳ ಸಮುದಾಯವು ಪೃಥಿವೀಮಯವಾಗಿದೆ.

ತೇಜೋ ಹ್ಯಗ್ನಿಸ್ತಥಾ ಕ್ರೋಧಶ್ಚಕ್ಷುರೂಷ್ಮಾ ತಥೈವ ಚ ।
ಅಗ್ನಿರ್ಜರಯತೇ ಯಶ್ಚ ಪಞ್ಚಾಗ್ನೇಯಾಃ ಶರೀರಿಣಃ ॥೨೧॥

ಶರೀರದಲ್ಲಿರುವ ತೇಜಸ್ಸು, ಕ್ರೋಧ, ಕಣ್ಣು, ಉಷ್ಣ ಮತ್ತು ಜಠರಾಗ್ನಿ–ಈ ಐದು ವಸ್ತುಗಳ ಸಮುದಾಯವು ಅಗ್ನಿಮಯವಾಗಿವೆ.

ಶ್ರೋತ್ರಂ ಘ್ರಾಣಂ ತಥಾऽಸ್ಯಂ ಚ ಹೃದಯಂ ಕೋಷ್ಠಮೇವ ಚ ।
ಆಕಾಶಾತ್ಪ್ರಾಣಿನಾಮೇತೇ ಶರೀರೇ ಪಞ್ಚ ಧಾತವಃ ॥೨೨॥

ಪ್ರಾಣಿಗಳ ಶರೀರದಲ್ಲಿರುವ ಕಿವಿ, ಮೂಗು, ಮುಖ, ಹೃದಯ ಮತ್ತು ಹೊಟ್ಟೆ–ಈ ಐದು ವಸ್ತುಗಳು ಆಕಾಶಮಯವಾಗಿವೆ.

ಶ್ಲೇಷ್ಮಾ ಪಿತ್ತಮಥ ಸ್ವೇದೋ ವಸಾ ಶೋಣಿತಮೇವ ಚ ।
ಇತ್ಯಾಪಃ ಪಞ್ಚಧಾ ದೇಹೇ ಭವನ್ತಿ ಪ್ರಾಣಿನಾಂ ಸದಾ ॥೨೩॥

ಪ್ರಾಣಿಗಳ ಶರೀರದಲ್ಲಿರುವ ಕಫ, ಪಿತ್ತ, ಬೆವರು, ವಸೆ (ಕೊಬ್ಬು), ರಕ್ತ–ಈ ವಸ್ತುಗಳು ಜಲಮಯವಾಗಿವೆ.

[ಬ್ರಹ್ಮಜ್ಞಾನತಂತ್ರದಲ್ಲಿ ಇದನ್ನೇ ಸ್ವಲ್ಪ ವ್ಯತ್ಯಾಸದಿಂದ ಹೇಳಿದ್ದಾರೆ.

ಅಸ್ಥಿ ಮಾಂಸಂ ನಖಂ ಚೈವ ನಾಡೀ ತ್ವಕ್ಚೇತಿ ಪಞ್ಚಮೀ ।
ಪೃಥ್ವೀ ಪಞ್ಚಗುಣಾ ಪ್ರೋಕ್ತಾ ಬ್ರಹ್ಮಜ್ಞಾನೇನ ಭಾಷಿತಮ್ ॥೧೯॥

ಅಸ್ಥಿ, ಮಾಂಸ, ನಖ, ನಾಡೀ (ನರ) ಮತ್ತು ತ್ವಕ್ (ಚರ್ಮ) ಈ ಐದು ಪೃಥ್ವಿಯ ಗುಣಗಳು.

ಮಲಂ ಮೂತ್ರಂ ತಥಾ ಶುಕ್ರಂ ಶ್ಲೇಷ್ಮಾ ಶೋಣಿತಮೇವ ಚ ।
ತೋಯಂ ಪಞ್ಚಗುಣಂ ಪ್ರೋಕ್ತಂ ಬ್ರಹ್ಮಜ್ಞಾನೇನ ಭಾಷಿತಮ್ ॥೨೦॥

ಮಲ, ಮೂತ್ರ, ಶುಕ್ರ, (ರೇತಸ್ಸು), ಕಫ, ರಕ್ತ–ಇವು ನೀರಿನ (ಅಪ್ ಭೂತದ) ಗುಣಗಳು.

ಹ್ರಾಸೋ ನಿದ್ರಾ ಕ್ಷುಧಾ ಚೈವ ಭ್ರಾನ್ತಿರಾಲಸ್ಯಮೇವ ಚ ।
ತೇಜಃ ಪಞ್ಚಗುಣಂ ಪ್ರೋಕ್ತಂ ಬ್ರಹ್ಮಜ್ಞಾನೇನ ಭಾಷಿತಮ್ ॥೨೧॥

ಹ್ರಾಸ, ನಿದ್ರೆ, ಹಸಿವು, ಭ್ರಾಂತಿ ಮತ್ತು ಸೋಮಾರಿತನ–ಇವು ತೇಜಸ್ಸಿನ ಗುಣಗಳು.

ಧಾರಣಂ ಚಾಲನಂ ಕ್ಷೇಪಃ ಸಂಕೋಚಃ ಪ್ರಸರಸ್ತಥಾ ।
ವಾಯುಃ ಪಞ್ಚಗುಣಃ ಪ್ರೋಕ್ತಃ ಬ್ರಹ್ಮಜ್ಞಾನೇನ ಭಾಷಿತಮ್ ॥೨೨॥

ಧಾರಣ, ಚಾಲನ, ಕ್ಷೇಪ, ಸಂಕೋಚ ಮತ್ತು ಪ್ರಸರಣ- ಇವು ವಾಯುವಿನ ಗುಣಗಳು.

ಕಾಮಃ ಕ್ರೋಧಸ್ತಥಾ ಲೋಭಸ್ತ್ರಪಾ ಮೋಹಶ್ಚ ಪಞ್ಚಮಃ ।
ನಭಃ ಪಞ್ಚಗುಣಂ ಪ್ರೋಕ್ತಂ ಬ್ರಹ್ಮಜ್ಞಾನೇನ ಭಾಷಿತಮ್ ॥೨೩॥

ಕಾಮ, ಕ್ರೋಧ, ಲೋಭ, ಲಜ್ಜೆ ಮತ್ತು ಮೋಹ–ಇವುಗಳು ಆಕಾಶಭೂತದ ಗುಣಗಳು.]

ಪ್ರಾಣಾತ್ಪ್ರಣೀಯತೇ ಪ್ರಾಣೀ ವ್ಯಾನಾದ್ವ್ಯಾಯಚ್ಛತೇ ತಥಾ ।
ಗಚ್ಛತ್ಯಪಾನೋಽಧಶ್ಚೈವ ಸಮಾನೋ ಹೃದ್ಯವಸ್ಥಿತಃ ॥೨೪॥

ಉದಾನಾದುಚ್ಛ್ವಸಿತಿ ಚ ಪ್ರತಿಭೇದಾಚ್ಚ ಭಾಷತೇ ।
ಇತ್ಯೇತೇ ವಾಯವಃ ಪಞ್ಚ ಚೇಷ್ಟಯನ್ತೀಹ ದೇಹಿನಮ್ ॥೨೫॥

ಪ್ರಾಣವಾಯುವಿನಿಂದ ಪ್ರಾಣಿಯು ಓಡಾಡುತ್ತದೆ. ವ್ಯಾನದಿಂದ ಬಲಸಾಧ್ಯವಾದ (ಶ್ರಮಸಾಧ್ಯವಾದ) ಕಾರ್ಯಗಳನ್ನು ಮಾಡುತ್ತದೆ. ಅಪಾನವಾಯುವು ಮೇಲಿನಿಂದ ಕೆಳಮುಖವಾಗಿ ಸಂಚರಿಸುತ್ತದೆ. ಸಮಾನ ವಾಯುವು ಹೃದಯದಲ್ಲಿರುತ್ತದೆ. ಉದಾನವಾಯುವಿನಿಂದ ಪುರುಷನು ಗಾಳಿಯನ್ನು ಎಳೆದುಕೊಳ್ಳುತ್ತಾನೆ. (ಉಸಿರಾಡುತ್ತಾನೆ.) ಕಂಠ, ತಾಲು ಮೊದಲಾದ ಸ್ಥಾನಗಳ ಭೇದದಿಂದ ಶಬ್ದಗಳ ಮತ್ತು ಅಕ್ಷರಗಳ ಉಚ್ಚಾರಣೆ ಯಾಗುತ್ತದೆ. ಹೀಗೆ ಈ ಐದು ವಿಧವಾದ ವಾಯುಗಳು ಶರೀರಿಯನ್ನು ಕ್ರಿಯಾಶೀಲನನ್ನಾಗಿ ಮಾಡುತ್ತವೆ.*

ಭೂಮೇರ್ಗನ್ಧಗುಣಾನ್ವೇತ್ತಿ ರಸಂ ಚಾದ್ಭ್ಯಃ ಶರೀರವಾನ್ ।
ಜ್ಯೋತಿಷಾ ಚಕ್ಷುಷಾ ರೂಪಂ ಸ್ಪರ್ಶಂ ವೇತ್ತಿ ಚ ವಾಹಿನಾ ॥೨೬॥

ಜೀವನು ಭೂಮಿಯ ಗಂಧಗುಣವನ್ನು ಶರೀರದಲ್ಲಿ ಪೃಥಿವೀಭೂತ ವನ್ನು ಪ್ರತಿನಿಧಿಸುವ ಘ್ರಾಣೇಂದ್ರಿಯದ ಮೂಲಕವಾಗಿ ತಿಳಿದುಕೊಳ್ಳುತ್ತಾನೆ. ಶರೀರದಲ್ಲಿ ಜಲಭೂತವನ್ನು ಪ್ರತಿನಿಧಿಸುವ ರಸನೆಯ ಮೂಲಕವಾಗಿ ರಸವನ್ನು ಆಸ್ವಾದಿಸುತ್ತಾನೆ. ಶರೀರದಲ್ಲಿ ತೇಜೋಭೂತವನ್ನು ಪ್ರತಿನಿಧಿಸುವ ಕಣ್ಣಿನ ಮೂಲಕವಾಗಿ ರೂಪವನ್ನು ನೋಡುತ್ತಾನೆ. ಶರೀರದಲ್ಲಿ ವಾಯುಭೂತವನ್ನು ಪ್ರತಿನಿಧಿಸುವ ತ್ವಕ್ಕಿನ (ಚರ್ಮದ) ಮೂಲಕವಾಗಿ ಸ್ಪರ್ಶಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಶರೀರದಲ್ಲಿ ಆಕಾಶಭೂತವನ್ನು ಪ್ರತಿನಿಧಿಸುವ ಕಿವಿಗಳ ಮೂಲಕವಾಗಿ ಜೀವನು ಶಬ್ದವನ್ನು ಕೇಳುತ್ತಾನೆ.

ಗನ್ಧ ಸ್ಪರ್ಶೌ ರಸೋ ರೂಪಂ ಶಬ್ದಶ್ಚಾತ್ರ ಗುಣಾಃ ಸ್ಮೃತಾಃ ।
ತಸ್ಯ ಗನ್ಧಸ್ಯ ವಕ್ಷ್ಯಾಮಿ ವಿಸ್ತರಾಭಿಹಿತಾನ್ಗುಣಾನ್ ॥೨೭॥

---

* ಅಮರಸಿಂಹನು ಪಂಚವಾಯುಗಳಿರುವ ಸ್ಥಾನವನ್ನು ಹೀಗೆ ಹೇಳಿದ್ದಾನೆ :
ಹೃದಿ ಪ್ರಾಣೋ ಗುದೇಽಪಾನಃ ಸಮಾನೋ ನಾಭಿಸಂಸ್ಥಿತಃ ।
ಉದಾನಃ ಕಂಠದೇಶಸ್ಥೋ ವ್ಯಾನಃ ಸರ್ವಶರೀರಗಃ ॥

ಪ್ರಾಣವು ಹೃದಯದಲ್ಲಿಯೂ, ಅಪಾನವು ಗುದದಲ್ಲಿಯೂ, ಸಮಾನವು ನಾಭಿ ಯಲ್ಲಿಯೂ, ಉದಾನವು ಕಂಠದೇಶದಲ್ಲಿಯೂ, ವ್ಯಾನವು ಸರ್ವಾಂಗಗಳಲ್ಲಿಯೂ ಇದೆ.

ಗಂಧ, ಸ್ಪರ್ಶ, ರಸ, ರೂಪ, ಶಬ್ದ–ಹೀಗೆ ಈ ಐದು ಪೃಥ್ವಿಯ ಗುಣಗಳೆಂದು ಹೇಳಲ್ಪಟ್ಟಿವೆ. ಇದರಲ್ಲಿ ಪ್ರಧಾನವಾದ ಗಂಧದ ಗುಣಗಳನ್ನು ಸವಿಸ್ತರವಾಗಿ ಹೇಳುತ್ತೇನೆ.

ಇಷ್ಟಶ್ಚಾನಿಷ್ಟಗನ್ಧಶ್ಚ ಮಧುರಃ ಕಟುರೇವ ಚ ।
ನಿರ್ಹಾರೀ ಸಂಹತಃ ಸ್ನಿಗ್ಧೋ ರೂಕ್ಷೋ ವಿಶದ ಏವ ಚ ।
ಏವಂ ನವವಿಧೋ ಜ್ಞೇಯಃ ಪಾರ್ಥಿವೋ ಗನ್ಧವಿಸ್ತರಃ ॥೨೮॥

ಇಷ್ಟವಾದುದು (ಕಸ್ತೂರಿಯೇ ಮೊದಲಾದುವುಗಳು), ಅನಿಷ್ಟ ವಾದುದು (ಶವವೇ ಮೊದಲಾದುವುಗಳಿಂದ ಬರುವ ದುರ್ಗಂಧ), ಮಧುರವಾದುದು (ಪುಷ್ಪಗಳಿಂದ ಬರತಕ್ಕುದು), ಕಟುವಾದುದು (ಮೆಣಸಿನ ಪುಡಿಯ ವಾಸನೆ,) ನಿರ್ಹಾರಿ (ಉಳಿದ ವಾಸನೆಗಳೆಲ್ಲವನ್ನೂ ನಾಶಪಡಿಸುವ ಇಂಗು–ಈರುಳ್ಳಿ ಮುಂತಾದುವು), ಸಂಹತ (ಅನೇಕದ್ರವ್ಯಗಳನ್ನು ಸೇರಿಸುವುದರಿಂದ ಬರುವ ವಾಸನೆ), ಸ್ನಿಗ್ಧ (ತತ್ಕ್ಷಣದಲ್ಲಿ ತೃಪ್ತಿ ಯನ್ನುಂಟುಮಾಡುವ ತುಪ್ಪವೇ ಮೊದಲಾದುವುಗಳ ವಾಸನೆ,) ರೂಕ್ಷ (ಸಾಸುವೆ ಎಣ್ಣೆ ಮುಂತಾದುವುಗಳ ವಾಸನೆ,) ವಿಶದ (ಶಾಲ್ಯನ್ನಾದಿಗಳ ವಾಸನೆ)–ಹೀಗೆ ಭೂಸಂಬಂಧವಾದ ಒಂಬತ್ತು ಬಗೆಯ ಗಂಧಗಳನ್ನು ಹೇಳುತ್ತಾರೆ. (ವ್ಯಾಖ್ಯಾನಕಾರರ ವ್ಯಾಖ್ಯಾನವನ್ನು ಅನುಸರಿಸಿ ವಿವರಣೆ ಯನ್ನು ಕೊಡಲಾಗಿದೆ.)

ಜ್ಯೋತಿಃ ಪಶ್ಯತಿ ಚಕ್ಷುರ್ಭ್ಯಾಂ ಸ್ಪರ್ಶಂ ವೇತ್ತಿ ಚ ವಾಯುನಾ ।
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸಶ್ಚಾಪಿ ಗುಣಾಃ ಸ್ಮೃತಾಃ ।
ರಸಜ್ಞಾನಂ ತು ವಕ್ಷ್ಯಾಮಿ ತನ್ಮೇ ನಿಗದತಃ ಶೃಣು ॥೩೦॥

ಮನುಷ್ಯನು ಕಣ್ಣುಗಳಿಂದ ರೂಪಗಳನ್ನು ನೋಡುತ್ತಾನೆ. ವಾಯುಭೂತಕ್ಕೆ ಸಂಬಂಧಿಸಿದ ತ್ವಗಿಂದ್ರಿಯದಿಂದ ಸ್ಪರ್ಶಾನುಭವವನ್ನು ಪಡೆಯುತ್ತಾನೆ. ಶಬ್ದ-ಸ್ಪರ್ಶ-ರೂಪ-ರಸಗಳು ಜಲದ ಗುಣಗಳೆಂದು ಹೇಳಲ್ಪಟ್ಟಿವೆ. ಇವುಗಳಲ್ಲಿ ರಸವೇ ಪ್ರಧಾನಗುಣ. ರಸಜ್ಞಾನದ ತಿಳಿವಳಿಕೆಗಾಗಿ ಅವುಗಳ ಭೇದಗಳನ್ನು ವಿಸ್ತಾರವಾಗಿ ಹೇಳುತ್ತೇನೆ.

ರಸೋ ಬಹುವಿಧಃ ಪ್ರೋಕ್ತ ಋಷಿಭಿಃ ಪ್ರಥಿತಾತ್ಮಭಿಃ ।

ಮಧುರೋ ಲವಣಸ್ತಿಕ್ತಃ ಕಷಾಯೋऽಮ್ಲಃ ಕಟುಸ್ತಥಾ ।
ಏಷ ಷಡ್ವಿಧವಿಸ್ತಾರೋ ರಸೋ ವಾರಿಮಯಃ ಸ್ಮೃತಃ ॥೩೧॥

ಸುವಿಖ್ಯಾತರಾದ ಋಷಿಗಳು ರಸವು ಅನೇಕ ವಿಧವಾಗಿರುವುದೆಂದು ಹೇಳುತ್ತಾರೆ. ಸಿಹಿ, ಉಪ್ಪು, ಕಹಿ, ಒಗರು, ಹುಳಿ ಮತ್ತು ಖಾರ–ಈ ಆರು ಜಲಮಯವಾದ ರಸಗಳೆಂದು ಹೇಳಲ್ಪಟ್ಟಿವೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ತ್ರಿಗುಣಾ ಜ್ಯೋತಿರುಚ್ಯತೇ ।
ಜ್ಯೋತಿಃ ಪಶ್ಯತಿ ರೂಪಾಣಿ ರೂಪಂ ಚ ಬಹುಧಾ ಸ್ಮೃತಮ್ ॥೩೨॥

ಶಬ್ದ, ಸ್ಪರ್ಶ ಮತ್ತು ರೂಪಗಳು ತೇಜಸ್ಸಿನ ಮೂರು ಗುಣಗಳೆಂದು ಹೇಳಲ್ಪಟ್ಟಿವೆ. ಜ್ಯೋತಿರ್ಮಯವಾದ ಕಣ್ಣುಗಳು ರೂಪವನ್ನು ನೋಡುತ್ತವೆ. ತೇಜಸ್ಸಿನ ಪ್ರಧಾನಗುಣವಾದ ರೂಪದಲ್ಲಿಯೂ ಅನೇಕ ವಿಧಗಳಿವೆ.

ಹ್ರಸ್ವೋ ದೀರ್ಘಸ್ತಥಾ ಸ್ಥೂಲಶ್ಚತುರಸ್ರೋऽನುವೃತ್ತವಾನ್ ।
ಶುಕ್ಲಃ ಕೃಷ್ಣಸ್ತಥಾ ರಕ್ತಃ ಪೀತೋ ನೀಲಾರುಣಸ್ತಥಾ ॥೩೪॥

ಕಠಿನಶ್ಚಿಕ್ಕಣಃ ಶ್ಲಕ್ಷ್ಣಃ ಪಿಚ್ಛಿಲೋ ಮೃದುದಾರುಣಃ ।
ಏವಂ ಷೋಡಶವಿಸ್ತಾರೋ ಜ್ಯೋತೀರೂಪಗುಣಃ ಸ್ಮೃತಃ ॥೩೫॥

ಹ್ರಸ್ವ, ದೀರ್ಘ, ಸ್ಥೂಲ, ಚತುರಸ್ರ (ನಾಲ್ಕು ಕೋನಗಳುಳ್ಳದ್ದು,) ದುಂಡಾಗಿರುವುದು, ಬಿಳುಪು, ಕಪ್ಪು, ಕೆಂಪು, ಹಳದಿ, ಆಕಾಶನೀಲಿ ಬಣ್ಣ, ಕಠಿನ, ನುಣುಪು, ತೆಳುವು, ಪಿಚ್ಛಲ, ಮೃದು, ದಾರುಣ–ಹೀಗೆ ಜ್ಯೋತಿರ್ಮಯರೂಪದ ಗುಣಗಳು ಹದಿನಾರು ಪ್ರಕಾರಗಳಾಗಿರುತ್ತವೆ.

ಶಬ್ದಸ್ಪರ್ಶೌ ಚ ವಿಜ್ಞೇಯೌ ದ್ವಿಗುಣೋ ವಾಯುರಿತ್ಯುತ ।
ವಾಯವ್ಯಸ್ತು ಗುಣಃ ಸ್ಪರ್ಶಃ ಸ್ಪರ್ಶಶ್ಚ ಬಹುಧಾ ಸ್ಮೃತಃ ॥೩೬॥

ವಾಯುಭೂತಕ್ಕೆ ಶಬ್ದ ಮತ್ತು ಸ್ಪರ್ಶಗಳೆಂಬ ಎರಡು ಗುಣಗಳಿವೆ. ವಾಯುವಿನ ಪ್ರಮುಖವಾದ ಗುಣವು ಸ್ಪರ್ಶ. ಸ್ಪರ್ಶದಲ್ಲಿಯೂ ಅನೇಕ ಭೇದಗಳಿವೆ.

ಉಷ್ಣಃ ಶೀತಃ ಸುಖೋ ದುಃಖಃ ಸ್ನಿಗ್ಧೋ ವಿಶದ ಏವ ಚ ।
ತಥಾ ಖರೋ ಮೃದೂ ರೂಕ್ಷೋ ಲಘುರ್ಗುರುತರೋऽಪಿ ಚ ।
ಏವಂ ದ್ವಾದಶಧಾ ಸ್ಪರ್ಶೋ ವಾಯವ್ಯೋ ಗುಣ ಉಚ್ಯತೇ ॥೩೭॥

ಉಷ್ಣ, ಶೀತ, ಸುಖ, ದುಃಖ, ಸ್ನಿಗ್ಧ, ವಿಶದ (ಸುಂದರ), ತೀಕ್ಷ್ಣ, ಮೃದು, ಒರಟು, ಹಗುರ, ಭಾರ ಮತ್ತು ಅತಿಭಾರ–ಹೀಗೆ ವಾಯುಭೂತದ ಪ್ರಧಾನಗುಣವಾದ ಸ್ಪರ್ಶವು ಹನ್ನೆರಡು ಪ್ರಕಾರಗಳಾಗಿರುತ್ತವೆ.

ತತ್ರೈಕಗುಣಮಾಕಾಶಂ ಶಬ್ದ ಇತ್ಯೇವ ತತ್ಸ್ಮೃತಮ್ ।
ತಸ್ಯ ಶಬ್ದಸ್ಯ ವಕ್ಷ್ಯಾಮಿ ವಿಸ್ತರಂ ವಿವಿಧಾತ್ಮಕಮ್ ॥೩೮॥

ಆಕಾಶಭೂತದ ಏಕಮಾತ್ರಗುಣಕ್ಕೆ ಶಬ್ದವೆಂದೇ ಹೆಸರು. ಆ ಶಬ್ದದ ವಿವಿಧಗುಣಗಳನ್ನು ವಿಸ್ತಾರವಾಗಿ ಹೇಳುತ್ತೇನೆ.

ಷಡ್ಜ ಋಷಭಗಾನ್ಧಾರೌ ಮಧ್ಯಮೋ ಧೈವತಸ್ತಥಾ ।
ಪಞ್ಚಮಶ್ಚಾಪಿ ವಿಜ್ಞೇಯಸ್ತಥಾ ಚಾಪಿ ನಿಷಾದವಾನ್ ।
ಏಷ ಸಪ್ತವಿಧಃ ಪ್ರೋಕ್ತೋ ಗುಣ ಆಕಾಶಸಮ್ಭವಃ ॥೩೯॥

ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ ಮತ್ತು ನಿಷಾದ–ಇವು ಆಕಾಶಭೂತದ ಏಕೈಕಗುಣವಾದ ಶಬ್ದದ ಏಳು ಪ್ರಭೇದ ಗಳಾಗಿವೆ.

ಐಶ್ವರ್ಯೇಣ ತು ಸರ್ವತ್ರ ಸ್ಥಿತೋಽಪಿ ಪಟಹಾದಿಷು ।
ಮೃದಙ್ಗಭೇರೀಶಙ್ಖಾನಾಂ ಸ್ತನಯಿತ್ನೋ ರಥಸ್ಯ ಚ ॥೪೦॥

ಯಃ ಕಶ್ಚಿಚ್ಛ್ರೂಯತೇ ಶಬ್ದಃ ಪ್ರಾಣಿನೋಽಪ್ರಾಣಿನೋಽಪಿ ವಾ ।
ಏತೇಷಾಮೇವ ಸರ್ವೇಷಾಂ ವಿಷಯೇ ಸಮ್ಪ್ರಕೀರ್ತಿತಃ ॥೪೧॥

ಶಬ್ದವು ಶ್ರೇಷ್ಠತೆಯನ್ನು ಹೊಂದಿ ಸರ್ವತ್ರವ್ಯಾಪ್ತವಾಗಿದ್ದರೂ ನಗಾರಿಯೇ ಮೊದಲಾದುವುಗಳಲ್ಲಿ ಇದು ವಿಶೇಷರೂಪದಿಂದ ಅಭಿವ್ಯಕ್ತ ವಾಗುತ್ತದೆ. ಮೃದಂಗ, ಭೇರೀ, ಶಂಖ, ಮೇಘ, ರಥ–ಇವೇ ಮೊದಲಾ ದುವುಗಳಲ್ಲಿ ಯಾವ ಶಬ್ದಗಳು ಕೇಳಿಬರುತ್ತವೆಯೋ ಮತ್ತು ಜಡವಸ್ತುಗಳ ಮತ್ತು ಚೇತನಾಯುಕ್ತವಾದ ಪ್ರಾಣಿಗಳ ಯಾವ ಶಬ್ದಗಳು ಕಿವಿಗೆ ಬೀಳುತ್ತವೆಯೋ– ಆ ಎಲ್ಲ ಶಬ್ದಗಳೂ ಈ ಸಪ್ತಸ್ವರಗಳಲ್ಲಿಯೇ ಅಂತರ್ಗತ ವಾಗಿರುತ್ತವೆ.

ಏವಂ ಬಹುವಿಧಾಕಾರಃ ಶಬ್ದ ಆಕಾಶಸಮ್ಭವಃ ।
ಆಕಾಶಜಂ ಶಬ್ದಮಾಹುರೇಭಿರ್ವಾಯುಗುಣೈಃ ಸಹ ॥೪೨॥

ಹೀಗೆ ಆಕಾಶದಿಂದ ಹುಟ್ಟಿದ ಶಬ್ದವು ಅನೇಕವಿಧವಾದ ಆಕಾರಗಳನ್ನು ಹೊಂದಿದೆ. ವಾಯುಸಂಬಂಧವಾದ ಗುಣಗಳೊಡನೆ ಶಬ್ದವು ಆಕಾಶದಲ್ಲಿ ಹುಟ್ಟಿರುವುದೆಂದು ವಿದ್ವಾಂಸರು ಹೇಳುತ್ತಾರೆ.

ಅವ್ಯಾಹತೈಶ್ಚೇತಯತೇ ನ ವೇತ್ತಿ ವಿಷಮಸ್ಥಿತೈಃ ।
ಆಪ್ಯಾಯ್ಯನ್ತೇ ಚ ತೇ ನಿತ್ಯಂ ಧಾತವಸ್ತೈಸ್ತು ಧಾತುಭಿಃ ॥೪೩॥

ವಾಯುಸಂಬಂಧವಾದ ಗುಣವು (ಸ್ಪರ್ಶವು) ಬಾಧಿತವಾಗದೇ ಶಬ್ದದೊಡನೆ ಇರುವಾಗ ಮನುಷ್ಯನು ಶಬ್ದವನ್ನು ಕೇಳುತ್ತಾನೆ ಮತ್ತು ಅರ್ಥಮಾಡಿಕೊಳ್ಳುತ್ತಾನೆ. ವಾಯುಸಂಬಂಧವಾದ ಸ್ಪರ್ಶಗುಣವು ಪ್ರತಿಕೂಲವಾದ ವಾಯುವಿನಿಂದ ಬಾಧಿಸಲ್ಪಟ್ಟು ವಿಷಮಾವಸ್ಥೆಯಲ್ಲಿರುವಾಗ ಮನುಷ್ಯನು ಶಬ್ದಗ್ರಹಣವನ್ನು ಮಾಡಲಾರನು. ಶಬ್ದವೇ ಮೊದಲಾದುವನ್ನು ಉತ್ಪಾದಿಸುವ ಧಾತುವು (ಇಂದ್ರಿಯಸಮೂಹವು) ಪಂಚಮಹಾಭೂತಗಳ ಮೂಲಕವಾಗಿ ಪೋಷಿಸಲ್ಪಡುತ್ತದೆ.

ಆಪೋಽಗ್ನಿರ್ಮಾರುತಶ್ಚೈವ ನಿತ್ಯಂ ಜಾಗ್ರತಿ ದೇಹಿಷು ।
ಮೂಲಮೇತೇ ಶರೀರಸ್ಯ ವ್ಯಾಪ್ಯ ಪ್ರಾಣಾನಿಹ ಸ್ಥಿತಾಃ ॥೪೪॥

ನೀರು, ಅಗ್ನಿ ಮತ್ತು ವಾಯು–ಈ ಮೂರು ತತ್ತ್ವಗಳು ಸದಾ ಕಾಲದಲ್ಲಿಯೂ ದೇಹಧಾರಿಗಳಲ್ಲಿ ಜಾಗ್ರತವಾಗಿರುತ್ತವೆ. ಈ ಮೂರೇ ಶರೀರಕ್ಕೆ ಮೂಲಕಾರಣಗಳಾಗಿವೆ. ಪಂಚಪ್ರಾಣಗಳೊಡನೆ ಓತ-ಪ್ರೋತ ವಾಗಿ ಶರೀರದಲ್ಲಿ ನೆಲೆಸಿವೆ."

ಂ೮೪ನೆಯ ಅಧ್ಯಾಯವು ಮುಗಿಯಿತು.

ಂ೮೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶರೀರದ ಒಳಗಿರುವ ಜಠರಾಗ್ನಿಯು ಮತ್ತು ಪ್ರಾಣಾಪಾನಾದಿ ವಾಯುಗಳ ವರ್ಣನೆ

ಪಾರಿಕ್ಷಿತ! ಭೀಷ್ಮನು ತನ್ನ ಪ್ರವಚನವನ್ನು ಮುಂದುವರಿಸಿ ಹೇಳುತ್ತಾನೆ:

"ಯುಧಿಷ್ಠಿರ! ಭರದ್ವಾಜನು ಭೃಗುವನ್ನು ಪ್ರಶ್ನಿಸುತ್ತಾನೆ :

ಪಾರ್ಥಿವಂ ಧಾತುಮಾಸಾದ್ಯ ಶಾರೀರೋಽಗ್ನಿಃ ಕಥಂ ಪ್ರಭೋ ।
ಅವಕಾಶವಿಶೇಷೇಣ ಕಥಂ ವರ್ತಯತೇಽನಿಲಃ ॥೧॥

"ಭೃಗುಋಷಿಯೇ! ಪ್ರಭೋ! ಶರೀರದ ಒಳಗಿರುವ ಅಗ್ನಿಯು (ತೇಜೋಭೂತವು) ಪೃಥಿವೀಭೂತವನ್ನು ಆಶ್ರಯಿಸಿ ಹೇಗಿರುತ್ತದೆ? ಶರೀರದ ಒಳಗಿರುವ ವಾಯುವು ಪೃಥಿವೀಭೂತವನ್ನು ಆಶ್ರಯಿಸಿ ವಿಶೇಷವಾದ ಅವಕಾಶವನ್ನು ಕಲ್ಪಿಸಿಕೊಂಡು ಶರೀರವನ್ನು ಹೇಗೆ ಕ್ರಿಯಾಶೀಲವನ್ನಾಗಿ ಮಾಡುತ್ತದೆ?"

ಭೃಗುವು ಹೇಳುತ್ತಾನೆ :

ವಾಯೋರ್ಗತಿಮಹಂ ಬ್ರಹ್ಮನ್ಕಥಯಿಷ್ಯಾಮಿ ತೇಽನಘ ।
ಪ್ರಾಣಿನಾಮನಿಲೋ ದೇಹಾನ್ಯಥಾ ಚೇಷ್ಟಯತೇ ಬಲೀ ॥೨॥

"ನಿಷ್ಪಾಪನೇ! ಬ್ರಾಹ್ಮಣೋತ್ತಮ! ನಾನು ನಿನಗೆ ವಾಯುವಿನ ಗತಿಯನ್ನು ವಿಸ್ತಾರವಾಗಿ ಹೇಳುತ್ತೇನೆ. ಬಲಿಷ್ಠನಾದ ವಾಯುವು ಪ್ರಾಣಿಗಳ ದೇಹಗಳನ್ನು ಯಾವ ರೀತಿಯಲ್ಲಿ ಕ್ರಿಯಾಶೀಲವನ್ನಾಗಿ ಮಾಡುವನೆಂಬುದನ್ನೂ ಹೇಳುತ್ತೇನೆ.

ಶ್ರಿತೋ ಮೂರ್ಧಾನಮಾತ್ಮಾತು ಶರೀರಂ ಪರಿಪಾಲಯನ್ ।
ಪ್ರಾಣೋ ಮೂರ್ಧನಿ ಚಾಗ್ನೌ ಚ ವರ್ತಮಾನೋ ವಿಚೇಷ್ಟತೇ ॥೩॥

ಆತ್ಮವು ತಲೆಯಲ್ಲಿರುವ ಸಹಸ್ರಾರವನ್ನಾಶ್ರಯಿಸಿ ಸಂಪೂರ್ಣ ಶರೀರವನ್ನು ರಕ್ಷಣೆಮಾಡುತ್ತಿರುತ್ತದೆ. ಪ್ರಾಣವು ತಲೆಯಲ್ಲಿಯೂ ಮತ್ತು ಅಗ್ನಿಯಲ್ಲಿಯೂ ಇದ್ದುಕೊಂಡು ಶರೀರವನ್ನು ಕ್ರಿಯಾಶೀಲವನ್ನಾಗಿ ಮಾಡುತ್ತದೆ.

ಸ ಜನ್ತುಃ ಸರ್ವಭೂತಾತ್ಮಾ ಪುರುಷಃ ಸ ಸನಾತನಃ ।
ಮನೋ ಬುದ್ಧಿರಹಙ್ಕಾರೋ ಭೂತಾನಿ ವಿಷಯಶ್ಚ ಸಃ ॥೪॥

ಪ್ರಾಣದಿಂದ ಯುಕ್ತನಾದ ಆತ್ಮನೇ ಜೀವನಾಗಿದ್ದಾನೆ. ಅವನೇ ಪಂಚಭೂತಗಳಿಗೂ ಆತ್ಮನೂ ಸನಾತನಪುರುಷನೂ ಆಗಿದ್ದಾನೆ. ಆ

ಜೀವಾತ್ಮನೇ ಮನಸ್ಸು, ಬುದ್ಧಿ, ಅಹಂಕಾರ, ಪಂಚಭೂತಗಳೂ ಮತ್ತು ವಿಷಯರೂಪನೂ (ಶಬ್ದ-ಸ್ಪರ್ಶ-ರೂಪ-ರಸ-ಗಂಧರೂಪನೂ) ಆಗಿದ್ದಾನೆ.

ಏವಂ ತ್ವಿಹ ಸ ಸರ್ವತ್ರ ಪ್ರಾಣೇನ ಪರಿಚಾಲ್ಯತೇ ।
ಪೃಷ್ಠತಸ್ತು ಸಮಾನೇನ ಸ್ವಾಂ ಸ್ವಾಂ ಗತಿಮುಪಾಶ್ರಿತಃ ॥೫॥

ಹೀಗೆ ಜೀವಾತ್ಮನಿಂದ ಯುಕ್ತವಾದ ಪ್ರಾಣದಿಂದ ಶರೀರದೊಳಗಿರುವ ಸಮಸ್ತವಿಭಾಗಗಳೂ, ಇಂದ್ರಿಯಗಳೇ ಮೊದಲಾದ ಸಮಸ್ತಬಾಹ್ಯಾಂಗಗಳೂ ಸಂಚಾಲಿಸಲ್ಪಡುತ್ತವೆ. ಅನಂತರ ಪ್ರಾಣವು ಸಮಾನವಾಯುವಾಗಿ ಪರಿವರ್ತನಹೊಂದಿ ತನ್ನ ಗತಿಯನ್ನು ಆಶ್ರಯಿಸಿ ಶರೀರದ ಸಂಚಾಲಕ ವಾಗುತ್ತದೆ.

ಬಸ್ತಿಮೂಲಂ ಗುದಂ ಚೈವ ಪಾವಕಂ ಸಮುಪಾಶ್ರಿತಃ ।
ವಹನ್ಮೂತ್ರಂ ಪುರೀಷಂ ಚಾಪ್ಯಪಾನಃ ಪರಿವರ್ತತೇ ॥೬॥

ಅಪಾನವಾಯುವು ಜಠರಾಗ್ನಿಯನ್ನೂ, ಹೊಕ್ಕಳಿನ ಕೆಳಭಾಗವನ್ನೂ, ಗುದವನ್ನೂ ಆಶ್ರಯಿಸಿ ಮೂತ್ರ-ಪುರೀಷಗಳನ್ನು ಹೊರಹಾಕುತ್ತಾ ಮೇಲಿನಿಂದ ಕೆಳಕ್ಕೆ ಸಂಚರಿಸುತ್ತಿರುತ್ತದೆ.

ಪ್ರಯತ್ನೇ ಕರ್ಮಣಿ ಬಲೇ ಯ ಏಕಸ್ತ್ರಿಷು ವರ್ತತೇ ।
ಉದಾನ ಇತಿ ತಂ ಪ್ರಾಹುರಧ್ಯಾತ್ಮವಿದುಷೋ ಜನಾಃ ॥೭॥

ಯಾವ ಒಂದೇ ವಾಯುವು ಪ್ರಯತ್ನ, ಕರ್ಮ ಮತ್ತು ಬಲ–ಈ ಮೂರರಲ್ಲಿಯೂ ಪ್ರವೃತ್ತವಾಗಿರುವುದೋ–ಅಂತಹ ವಾಯುವನ್ನು ಅಧ್ಯಾತ್ಮತತ್ತ್ವವನ್ನು ತಿಳಿದ ವಿದ್ವಾಂಸರು ಉದಾನವೆಂದು ಕರೆಯುತ್ತಾರೆ. (ಅಪಾನವಾಯುವು ಕೆಳಮುಖವಾಗಿ ಹೋಗುತ್ತದೆ ; ಉದಾನವಾಯುವು ಊರ್ಧ್ವಮುಖವಾಗಿ ಹೋಗುತ್ತದೆ.)

ಸಂಧಿಷ್ವಪಿ ಚ ಸರ್ವೇಷು ಸಂನಿವಿಷ್ಟಸ್ತಥಾನಿಲಃ ।
ಶರೀರೇಷು ಮನುಷ್ಯಾಣಾಂ ವ್ಯಾನ ಇತ್ಯುಪದಿಶ್ಯತೇ ॥೮॥

ಯಾವ ವಾಯುವು ಮನುಷ್ಯನ ಶರೀರದಲ್ಲಿ ಮತ್ತು ಶರೀರದಲ್ಲಿರುವ ಸಂಧಿಸ್ಥಳಗಳಲ್ಲಿ ವ್ಯಾಪ್ತವಾಗಿರುವುದೋ–ಅದಕ್ಕೆ ವ್ಯಾನವೆಂದು ಹೇಳುತ್ತಾರೆ.

ಧಾತುಷ್ವಗ್ನಿಸ್ತು ವಿತತಃ ಸಮಾನೇನ ಸಮೀರಿತಃ ।
ರಸಾನ್ಧಾತೂಂಶ್ಚ ದೋಷಾಂಶ್ಚ ವರ್ತಯನ್ನವತಿಷ್ಠತೇ ॥೯॥

ದೇಹದಲ್ಲಿರುವ ರಸವೇ ಮೊದಲಾದ ಸಪ್ತಧಾತುಗಳಲ್ಲಿಯೂ ಅಗ್ನಿಯು ವ್ಯಾಪ್ತವಾಗಿರುತ್ತದೆ. ಅದು ಸಮಾನವಾಯುವಿನಿಂದ ಪ್ರಚೋದಿತವಾಗುತ್ತದೆ. ಹೀಗೆ ಅಗ್ನಿಯಿಂದ ಪ್ರಚೋದಿತವಾದ ಸಮಾನವಾಯುವು* ಶರೀರಗತವಾದ ರಸಗಳನ್ನೂ, ಧಾತುಗಳನ್ನೂ (ಇಂದ್ರಿಯಗಳನ್ನೂ), ತ್ರಿದೋಷಗಳನ್ನೂ (ವಾತ-ಪಿತ್ತ-ಕಫಗಳನ್ನೂ) ಸಂಚಾಲನಗೊಳಿಸುತ್ತಾ ಸಂಪೂರ್ಣ ಶರೀರದಲ್ಲಿಯೂ ವ್ಯಾಪಿಸಿರುತ್ತದೆ.

ಅಪಾನಪ್ರಾಣಯೋರ್ಮಧ್ಯೇ ಪ್ರಾಣಾಪಾನಸಮಾಹಿತಃ ।
ಸಮನ್ವಿತಸ್ತ್ವಧಿಷ್ಠಾನಂ ಸಮ್ಯಕ್ಪಚತಿ ಪಾವಕಃ ॥೧೦॥

ಅಪಾನ ಮತ್ತು ಪ್ರಾಣವಾಯುಗಳ ಮಧ್ಯಭಾಗದಲ್ಲಿ (ನಾಭಿಯಲ್ಲಿ) ಪ್ರಾಣಾಪಾನವಾಯುಗಳನ್ನು ಆಶ್ರಯಿಸಿರುವ ಜಠರಾಗ್ನಿಯು, ಪ್ರಾಣಿಯು ತಿನ್ನುವ ಆಹಾರವನ್ನು ಚೆನ್ನಾಗಿ ಪಚನಮಾಡುತ್ತದೆ.

ಆಸ್ಯಂ ಹಿ ಪಾಯುಪರ್ಯನ್ತಮನ್ತೇ ಸ್ಯಾದ್ಗುದಸಂಜ್ಞಿತಮ್ ।
ಸ್ರೋತಸ್ತಸ್ಮಾತ್ಪ್ರಜಾಯನ್ತೇ ಸರ್ವಸ್ರೋತಾಂಸಿ ದೇಹಿನಾಮ್ ॥೧೧॥

ಮುಖದಿಂದ ಹಿಡಿದು ಪಾಯು (ಗುದ) ಪರ್ಯಂತವಾಗಿ ಪ್ರಾಣವು ಸಂಚರಿಸಲು ಪ್ರವಾಹರೂಪವಾಗಿ ಹರಿಯುವ ಒಂದು ದೊಡ್ಡ ಮಾರ್ಗವಿದೆ. ಅದರ ಕಡೆಯ ಭಾಗಕ್ಕೆ ಗುದವೆಂಬ ಸಂಜ್ಞೆಯಿದೆ. ಪ್ರಾಣವಾಯುವಿನ ಆ ಪ್ರವಾಹದ ಮಾರ್ಗದಲ್ಲಿಯೇ ಇತರ ಹಲವು ಚಿಕ್ಕ-ಚಿಕ್ಕ ಕವಲೊಡೆದ ಪ್ರಾಣಪ್ರವಾಹಮಾರ್ಗಗಳೂ ಹುಟ್ಟಿ, ನಾಡೀ ಎಂಬ ಹೆಸರಿನಿಂದ ಪ್ರಾಣಿಗಳ ಶರೀರಗಳನ್ನು ವ್ಯಾಪಿಸಿಕೊಂಡಿವೆ.

ಪ್ರಾಣಾನಾಂ ಸಂನಿಪಾತಾಚ್ಚ ಸಂನಿಪಾತಃ ಪ್ರಜಾಯತೇ ।
ಊಷ್ಮಾ ಚಾಗ್ನಿರಿತಿಜ್ಞೇಯೋ ಯೋಽನ್ನಂ ಪಚತಿ ದೇಹಿನಾಮ್ ॥೧೨॥

* ರಸಾದಿಧಾತುಗಳು ಏಳು : ರಸ (ಅನ್ನರಸ), ರಕ್ತ, ಮಾಂಸ, ಮೇದಸ್ಸು, ಮೂಳೆ, ಮಜ್ಜಾ ಮತ್ತು ಶುಕ್ರ (ರೇತಸ್ಸು). ಚಕ್ಷುರಾದಿ ಪಂಚೇಂದ್ರಿಯಗಳು– ಚಕ್ಷುಸ್, ಶ್ರೋತ್ರ, ಘ್ರಾಣ, ಜಿಹ್ವೆ ಮತ್ತು ತ್ವಕ್.

ಆ ಸ್ರೋತಸ್ಸುಗಳ ಮೂಲಕವಾಗಿ ಪ್ರಾಣಿಗಳ ಸರ್ವಾಂಗಗಳಿಗೂ ಪ್ರಾಣವಾಯುವಿನ ಸಂಬಂಧವಿರುವಂತೆಯೇ–ಆ ಪ್ರಾಣವಾಯುವಿನ ಜೊತೆಯಲ್ಲಿಯೇ ಇರುವ ಜಠರಾಗ್ನಿಗೂ ಪ್ರಾಣಿಗಳ ಸರ್ವಾಂಗಗಳ ಸಂಬಂಧವೂ ಇರುತ್ತದೆ. ಪ್ರಾಣಿಗಳ ಶರೀರದಲ್ಲಿ ಯಾವ ಉಷ್ಣದ ಅನುಭವ ವಾಗುವುದೋ ಅದು ಜಠರಾಗ್ನಿಯ ಸಂಬಂಧವಾದ ಉಷ್ಣವೆಂದೇ ತಿಳಿಯ ಬೇಕು. ಜಠರಾಗ್ನಿಯೇ ಪ್ರಾಣಿಗಳು ತಿನ್ನುವ ಅನ್ನವನ್ನು ಜೀರ್ಣಿಸುತ್ತದೆ.

ಅಗ್ನಿವೇಗವಹಃ ಪ್ರಾಣೋ ಗುದಾನ್ತೇ ಪ್ರತಿಹನ್ಯತೇ ।
ಸ ಊರ್ಧ್ವಮಾಗಮ್ಯ ಪುನಃ ಸಮುತ್ಕ್ಷಿಪತಿ ಪಾವಕಮ್ ॥೧೩॥

ಅಗ್ನಿಯ ವೇಗದಿಂದ ಪ್ರವಹಿಸುವ ಪ್ರಾಣವಾಯುವು ಗುದದ ಅಂತ್ಯ ದಲ್ಲಿ ಪ್ರತಿಹತವಾಗುತ್ತದೆ. ಪುನಃ ಪ್ರಾಣವಾಯುವು ಮೇಲಕ್ಕೆ ಬಂದು ಅಗ್ನಿಯನ್ನು ಮೇಲಕ್ಕೆತ್ತುತ್ತದೆ. (ಪ್ರಾಣವಾಯುವೂ ಮತ್ತು ಜಠರಾಗ್ನಿಯೂ ಪರಸ್ಪರಪೂರಕವಾಗಿ ಶರೀರದಲ್ಲಿ ಕಾರ್ಯಮಾಡುತ್ತವೆ.)

ಪಕ್ವಾಶಯಸ್ತ್ವಧೋ ನಾಭ್ಯಾಮೂರ್ಧ್ವಮಾಮಾಶಯಃ ಸ್ಥಿತಃ ।
ನಾಭಿಮಧ್ಯೇ ಶರೀರಸ್ಯ ಸರ್ವೇ ಪ್ರಾಣಾಶ್ಚ ಸಂಸ್ಥಿತಾಃ ॥೧೪॥

ನಾಭಿಯ ಕೆಳಭಾಗವು ತಿಂದ ಆಹಾರವು ಜೀರ್ಣವಾಗುವ ಸ್ಥಳ. ಇದಕ್ಕೆ ಪಕ್ವಾಶಯವೆಂದು ಹೆಸರು. ನಾಭಿಯ ಮೇಲ್ಭಾಗವು ತಿಂದ ಆಹಾರವು ಸಂಗ್ರಹವಾಗುವ ಸ್ಥಳ. ಇದಕ್ಕೆ ಆಮಾಶಯವೆಂದು ಹೆಸರು. ನಾಭಿಯ ಮಧ್ಯಭಾಗದಲ್ಲಿ ಶರೀರಕ್ಕೆ ಸಂಬಂಧಿಸಿದ ಎಲ್ಲ ಪ್ರಾಣಗಳೂ ಇವೆ.

ಪ್ರಸ್ಥಿತಾ ಹೃದಯಾತ್ಸರ್ವೇ ತಿರ್ಯಗೂರ್ಧ್ವಮಧಸ್ತಥಾ ।
ವಹನ್ತ್ಯನ್ನರಸಾನ್ನಾಡ್ಯೋ ದಶ ಪ್ರಾಣಪ್ರಚೋದಿತಾಃ ॥೧೫॥

ಹೃದಯದಿಂದ ಹೊರಟು ಮೇಲಕ್ಕೂ ಕೆಳಕ್ಕೂ ಪಾರ್ಶ್ವಗಳಿಗೂ ಹೋಗಿರುವ ನಾಡಿಗಳು ದಶಪ್ರಾಣವಾಯುಗಳಿಂದ ಪ್ರೇರಿಸಲ್ಪಟ್ಟುವುಗಳಾಗಿ ಅನ್ನರಸವನ್ನು ಶರೀರಾದ್ಯಂತವಾಗಿ ಒಯ್ಯುತ್ತವೆ.*

---

* ದಶಪ್ರಾಣವಾಯುಗಳು : ಪ್ರಾಣಾಪಾನಸಮಾನೋದಾನವ್ಯಾನಗಳು ಐದು. ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯಗಳೆಂಬ ಉಪವಾಯುಗಳು ಐದು.

ಏಷ ಮಾರ್ಗೋಽಥ ಯೋಗಾನಾಂ ಯೇನ ಗಚ್ಛನ್ತಿ ತತ್ಪದಮ್ ।
ಜಿತಕ್ಲಮಾಃ ಸಮಾ ಧೀರಾ ಮೂರ್ಧನ್ಯಾತ್ಮಾನಮಾದಧನ್ ॥೧೬॥

ಮುಖದಿಂದ ಗುದದವರೆಗೂ ಇರುವ ವಾಯುಪ್ರವಾಹಮಾರ್ಗವೇ (ನಾಡೀಮಾರ್ಗವೇ) ಯೋಗಿಗಳ ಮಾರ್ಗವೂ ಆಗಿದೆ. ಈ ಮಾರ್ಗದ ಮೂಲಕವಾಗಿಯೇ ಕ್ಲೇಶಗಳನ್ನು ಜಯಿಸಿದ, ಸರ್ವಸಮಭಾವದಿಂದಿರುವ ಧೀರರಾದ ಯೋಗಿಗಳು ಸುಷುಮ್ನಾನಾಡಿಯ ಮೂಲಕವಾಗಿ ಆತ್ಮನನ್ನು ಸಹಸ್ರಾರದಲ್ಲಿ ನಿಲ್ಲಿಸುತ್ತಾರೆ.

ಏವಂ ಸರ್ವೇಷು ವಿಹಿತಃ ಪ್ರಾಣಾಪಾನೇಷು ದೇಹಿನಾಮ್ ।
ತಸ್ಮಿನ್ಸಮಿಧ್ಯತೇ ನಿತ್ಯಮಗ್ನಿಃ ಸ್ಥಾಲ್ಯಾಮಿವಾಹಿತಃ ॥೧೭॥

ಹೀಗೆ ಪ್ರಾಣಿಗಳ ಪ್ರಾಣಾಪಾನಗಳೇ ಮೊದಲಾದ ಸರ್ವವಾಯುಗಳ ಲ್ಲಿಯೂ ಸಮಾವೇಶಗೊಂಡಿರುವ ಜಠರಾಗ್ನಿಯು ಶರೀರದಲ್ಲಿಯೇ ಇದ್ದು ಕೊಂಡು ಅಗ್ನಿಕುಂಡದಲ್ಲಿರುವ ಅಗ್ನಿಯಂತೆಯೇ ಪ್ರಜ್ವಲಿಸುತ್ತಿರುತ್ತದೆ."

ಗಿ೮೫ನೆಯ ಅಧ್ಯಾಯವು ಮುಗಿಯಿತು.

೧೮೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಭರದ್ವಾಜನು ಜೀವದ ಅಸ್ತಿತ್ವದಲ್ಲಿರುವ ಸಂದೇಹಗಳನ್ನು ಯುಕ್ತಿಗಳಿಂದ ಪ್ರತಿಪಾದಿಸಿದುದು

ಮಹಾರಾಜ! ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

"ಯುಧಿಷ್ಠಿರ! ಭರದ್ವಾಜನು ತನಗುಂಟಾದ ಸಂಶಯವನ್ನು ಮುಂದಿಡುತ್ತಾ ಹೇಳುತ್ತಾನೆ :

ಯದಿ ಪ್ರಾಣಯತೇ ವಾಯುರ್ವಾಯುರೇವ ವಿಚೇಷ್ಟತೇ ।
ಶ್ವಸಿತ್ಯಾಭಾಷತೇ ಚೈವ ತಸ್ಮಾಜ್ಜೀವೋ ನಿರರ್ಥಕಃ ॥೧॥

"ಭಗವನ್! ಒಂದು ವೇಳೆ ನೀನು ಹೇಳಿದಂತೆ ವಾಯುವೇ ದೇಹಿ

ಉಪನಿಷತ್ಕಾರರು ನೂರೆಂಟು ನಾಡಿಗಳಿವೆಯೆಂದೂ, ಇವೆಲ್ಲವೂ ಹೃದಯದಲ್ಲಿವೆ ಯೆಂದೂ ಹೇಳಿದ್ದಾರೆ. ಶತಂ ಚೈಕಾ ಚ ಹೃದಯಸ್ಯ ನಾಡ್ಯಃ (ಕಠ). ಸುಶ್ರುತರು ನಾಡಿಗಳು ಏಳು ನೂರು–ಎಂದೂ, ಎಲ್ಲ ನಾಡಿಗಳಿಗೂ ನಾಭಿಯೇ (ಹೊಕ್ಕಳು)

ಗಳನ್ನು ಪ್ರಾಣಯುಕ್ತರನ್ನಾಗಿ ಮಾಡುವುದಾದರೆ, ವಾಯುವೇ ಪ್ರಾಣಿಗಳನ್ನು ಕ್ರಿಯಾಶೀಲರನ್ನಾಗಿ ಮಾಡುವುದಾದರೆ, ಉಚ್ಛ್ವಾಸ-ನಿಃಶ್ವಾಸಗಳನ್ನೂ ಮಾಡುವುದಾದರೆ, ಮನುಷ್ಯರಾಡುವ ಮಾತಿಗೂ ವಾಯುವೇ ಕಾರಣ ವಾಗಿರುವುದಾದರೆ–ಈ ಶರೀರದಲ್ಲಿ 'ಜೀವ' ಎಂಬುದು ಬೇರೊಂದಿರು ವುದೆಂದು ಹೇಳುವುದೇ ಅರ್ಥಹೀನವಾಗುತ್ತದೆ.

ಯದ್ಯೂಷ್ಮಭಾವ ಆಗ್ನೇಯೋ ವಹ್ನಿನಾ ಪಚ್ಯತೇ ಯದಿ ।
ಅಗ್ನಿರ್ಜರಯತೇ ಚೈತತ್ತಸ್ಮಾಜ್ಜೀವೋ ನಿರರ್ಥಕಃ ॥೨॥

'ಶರೀರದಲ್ಲಿರುವ ಉಷ್ಣಭಾಗವು ಅಗ್ನಿಯ ಅಂಶ'–ಎನ್ನುವುದಾದರೆ, ಅಗ್ನಿಯಿಂದಲೇ ತಿಂದ ಪದಾರ್ಥಗಳು ಪಚನವಾಗುವುದೆನ್ನುವುದಾದರೆ, ಜಠರಾಗ್ನಿಯೇ ಸರ್ವವನ್ನೂ ಜೀರ್ಣಗೊಳಿಸುವುದೆನ್ನುವುದಾದರೆ–'ಜೀವ' ಎಂಬ ಬೇರೊಂದು ವಸ್ತುವು ಶರೀರದಲ್ಲಿರುವುದೆಂದು ಹೇಳುವುದು ನಿರರ್ಥಕವಾಗುತ್ತದೆ.

ಜನ್ತೋಃ ಪ್ರಮೀಯಮಾಣಸ್ಯ ಜೀವೋ ನೈವೋಪಲಭ್ಯತೇ ।
ವಾಯುರೇವ ಜಹಾತ್ಯೇನಮೂಷ್ಮಭಾವಶ್ಚ ನಶ್ಯತಿ ॥೩॥

ಮರಣಾಸನ್ನವಾದ ಪ್ರಾಣಿಯಲ್ಲಿ ಎಷ್ಟೇ ಹುಡುಕಿದರೂ 'ಜೀವ'– ಎಂಬ ವಸ್ತುವು ಸಿಕ್ಕುವುದಿಲ್ಲ. ಶರೀರಿಯನ್ನು ಕ್ರಿಯಾಶೀಲನನ್ನಾಗಿ ಮಾಡುವ ವಾಯುವು ಹೊರಟುಹೋಗುತ್ತದೆ. ವಾಯುವಿನ ನಿಷ್ಕ್ರಮಣದಿಂದಾಗಿ ಶರೀರವು ನಿಶ್ಚೇಷ್ಟವಾಗುತ್ತದೆ. ಅದರಂತೆಯೇ ಮೃತನಾದವನ ಶರೀರದಲ್ಲಿ ಉಷ್ಣಭಾವವೂ ಇರುವುದಿಲ್ಲ. ಶರೀರವೆಲ್ಲವೂ ಶೀತಲವಾಗುತ್ತದೆ. ಇದರಿಂದ ಶರೀರದಲ್ಲಿ ಮೊದಲು ವಾಯ್ವಗ್ನಿಗಳ ಸಂಚಾರವಿತ್ತೆಂದೂ ವಾಯ್ವಗ್ನಿಗಳು ಹೊರಟುಹೋಗಲಾಗಿ ಶರೀರವು ನಿಶ್ಚೇಷ್ಟವೂ ಶೀತಲವೂ ಆಯಿತೆಂದೂ ಹೇಳಬಹುದಾಗಿದೆ. ಜೀವವು ಇದ್ದುದಕ್ಕಾಗಲೀ, ಜೀವವು ಹೋದುದಕ್ಕಾಗಲೀ–ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಆದುದರಿಂದ ಜೀವಕ್ಕೆ ಅಸ್ತಿತ್ವವನ್ನು ಹೇಳುವುದು ವ್ಯರ್ಥವೇ ಸರಿ.

ಮೂಲಸ್ಥಾನವಾಗಿರುವುದೆಂದೂ, ಅಲ್ಲಿಂದ ಮೇಲಕ್ಕೂ–ಕೆಳಕ್ಕೂ–ಪಾರ್ಶ್ವಗಳಿಗೂ ಹರಡಿಕೊಂಡಿವೆಯೆಂದೂ ಹೇಳಿರುತ್ತಾರೆ. ಸಪ್ತ ಸಿರಾ ಶತಾನಿ ಭವನ್ತಿ ।...ತಾಸಾಂ.ನಾಭಿ ರ್ಮೂಲಮ್ । ತತಾಶ್ಚ ಪ್ರಸರನ್ತ್ಯೂರ್ಧ್ವಮಧಸ್ತಿರ್ಯಕ್ಚ. (ಸುಶ್ರುತ) ೭-೩.

ಯದಿ ವಾಯುಮಯೋ ಜೀವಃ ಸಂಶ್ಲೇಷೋ ಯದಿ ವಾಯುನಾ ।
ವಾಯುಮಣ್ಡಲವದ್ದೃಶ್ಯೋ ಗಚ್ಛೇತ್ಸಹ ಮರುದ್ಗಣೈಃ ॥೪॥

ಒಂದು ವೇಳೆ-ಜೀವವು ವಾಯುಮಯವಾದುದು ; ವಾಯುವಿನೊಡನೆ ಜೀವದ ನಿಕಟಸಂಬಂಧವಿದೆ–ಎಂದು ಹೇಳುವುದಾದರೆ ವಾಯುಮಂಡಲದಂತೆ ಜೀವದ ಪ್ರತ್ಯಕ್ಷಾನುಭವವೂ ಆಗಬೇಕಾಗಿದ್ದಿತು. ಮರಣಾನಂತರದಲ್ಲಿ ವಾಯುವಿನೊಡನೆ ಜೀವವು ಹೋಯಿತೆಂಬುದಕ್ಕೆ ಪ್ರತ್ಯಕ್ಷನಿದರ್ಶನವಾದರೂ ಇರಬೇಕಾಗಿದ್ದಿತು.

ಸಂಶ್ಲೇಷೋ ಯದಿ ವಾತೇನ ಯದಿ ತಸ್ಮಾತ್ಪ್ರಣಶ್ಯತಿ ।
ಮಹಾರ್ಣವವಿಮುಕ್ತತ್ವಾದನ್ಯತ್ಸಲಿಲಭಾಜನಮ್ ॥೫॥

ವಾಯುವಿನೊಡನೆ ಜೀವಕ್ಕೆ ದೃಢವಾದ ಸಂಯೋಗವೇ ಇದ್ದರೆ– ಅದೇ ಕಾರಣದಿಂದ ವಾಯುವಿನೊಡನೆ ಜೀವವೂ ನಷ್ಟವಾಗಿ ಹೋಗುವುದೆನ್ನುವುದಾದರೆ–ನಷ್ಟಹೊಂದಿದ ಜೀವವು ವಾಯುವಿನಂತೆಯೇ ಹೊರಗಿನ ವಾಯುಮಂಡಲದಲ್ಲಿ ಸೇರಿಹೋಯಿತೆನ್ನುವುದಾದರೆ–ನೀರು ತುಂಬಿರುವ ಪಾತ್ರೆಯನ್ನು ಸಮುದ್ರದಲ್ಲಿ ಹಾಕಿದರೆ ನೀರಿಗೆ ಸ್ಥಳಾಂತರವಾದಂತಾಗುವುದೇ ಹೊರತು ಆ ನೀರಿಗೆ ಪ್ರತ್ಯೇಕವಾದ ಅಸ್ತಿತ್ವವೇನೂ ಇರುವುದಿಲ್ಲ. ಅದೇ ರೀತಿಯಲ್ಲಿ ಜೀವನಿಗೂ ಕೂಡ ಪ್ರತ್ಯೇಕವಾದ ಅಸ್ತಿತ್ವವೇನೂ ಇರುವುದಿಲ್ಲ.

ಕೂಪೇ ವಾ ಸಲಿಲಂ ದದ್ಯಾತ್ಪ್ರದೀಪಂ ವಾ ಹುತಾಶನೇ ।
ಕ್ಷಿಪ್ರಂ ಪ್ರವಿಶ್ಯ ನಶ್ಯೇತ ಯಥಾ ನಶ್ಯತ್ಯಸೌ ತಥಾ ॥೬॥

ಪಞ್ಚಧಾರಣಕೇ ಹ್ಯಸ್ಮಿನ್ಶರೀರೇ ಜೀವಿತಂ ಕುತಃ ।
ತೇಷಾಮನ್ಯತರಾಭಾವಾಚ್ಚತುರ್ಣಾಂ ನಾಸ್ತಿ ಸಂಶಯಃ ॥೭॥

ಹೊರಗಡೆಯಿಂದ ಬಾವಿಗೆ ನೀರನ್ನು ಚೆಲ್ಲಿದರೆ ಆ ನೀರು ಬಾವಿಯೊಳಗೆ ಬಿದ್ದೊಡನೆಯೇ ವಿನಾಶಹೊಂದುತ್ತದೆ. ಎಂದರೆ ಪಾತ್ರೆಯಲ್ಲಿದ್ದಾಗ ಆ ನೀರಿಗೆ ಪ್ರತ್ಯೇಕವಾದೊಂದು ಅಸ್ತಿತ್ವವಿದ್ದಿತು. ಬಾವಿಗೆ ಚೆಲ್ಲಿದನಂತರ ಅದು ಬಾವಿಯ ನೀರಿನೊಳಗೆ ಬೆರೆತುಹೋಗಿ ಪ್ರತ್ಯೇಕವಾದ ಅಸ್ತಿತ್ವವನ್ನು ಕಳೆದುಕೊಂಡಿತು. ಪ್ರತ್ಯೇಕವಾಗಿ ಅದು ಕಾಣಿಸದೇ ಇರುವುದರಿಂದ ಅದು

ವಿನಾಶವಾದಂತೆಯೇ ಸರಿ. ಉರಿಯುತ್ತಿರುವ ಬೆಂಕಿಯಲ್ಲಿ ದೀಪವನ್ನು ಹಾಕಿದರೆ ಮರುಕ್ಷಣದಲ್ಲಿಯೇ ಬೆಂಕಿಯಲ್ಲಿ ಆ ದೀಪವು ಕಾಣಿಸುವುದೇ ಇಲ್ಲ. ಅದರಲ್ಲಿಯೇ ಐಕ್ಯವಾಗಿ ಹೋಗುತ್ತದೆ. ಅದೇ ರೀತಿಯಲ್ಲಿ ಪಂಚಭೂತಾತ್ಮಕವಾದ ಈ ಶರೀರದಲ್ಲಿ ವಾಯ್ವಗ್ನಿಗಳು ಹೊರಹೊರಟು ಹೊರವಲಯದಲ್ಲಿರುವ ಮಹಾಭೂತಗಳೊಡನೆ ಲೀನವಾದನಂತರ ಉಳಿದ ಪೃಥ್ವ್ಯಾಕಾಶ-ಜಲಗಳೂ ಕೂಡ ಅನುಕ್ರಮವಾಗಿ ಹೊರಗಿರುವ ಪೃಥ್ವ್ಯಾಕಾಶ-ಜಲಭೂತಗಳೊಡನೆ ಲೀನವಾಗಿ ಹೋಗುತ್ತವೆ. ಹೀಗಿರುವಾಗ ಶರೀರದಲ್ಲಿ ಜೀವಕ್ಕೆ ಅಸ್ತಿತ್ವವೆಲ್ಲಿದೆ? ಆದುದರಿಂದ ಇಷ್ಟು ಸಿದ್ಧವಾಗುತ್ತದೆ : ಪಂಚಭೂತಗಳ ಸಂಘಾತದ ಹೊರತಾಗಿ ಜೀವ ಎಂಬುದು ಪ್ರತ್ಯೇಕವಾಗಿರುವುದಿಲ್ಲ. ಒಟ್ಟಾಗಿ ಸೇರಿರುವ ಈ ಪಂಚಭೂತಗಳಲ್ಲಿ ಯಾವ ಒಂದು ಭೂತಕ್ಕಾದರೂ ಅಭಾವವುಂಟಾದರೆ ಉಳಿದ ನಾಲ್ಕು ಭೂತಗಳೂ ಅಲ್ಲಿ ಉಳಿಯುವುದಿಲ್ಲ. ಇದನ್ನೇ ಮೃತ್ಯು ಎನ್ನುತ್ತಾರೆ. (ಪಂಚಭೂತಗಳ ಸಂಘಾತವೇ ಹುಟ್ಟು. ಪಂಚಭೂತಗಳ ವಿಘಾತವೇ ಸಾವು.)

ನಶ್ಯನ್ತ್ಯಾಪೋ ಹ್ಯನಾಹಾರಾದ್ವಾಯುರುಚ್ಛ್ವಾಸನಿಗ್ರಹಾತ್ ।
ನಶ್ಯತೇ ಕೋಷ್ಠ ಭೇದಾತ್ಖಮಗ್ನಿರ್ನಶ್ಯತ್ಯಭೋಜನಾತ್ ॥೮॥

ಪ್ರಾಣಿಯು ನೀರನ್ನು ಕುಡಿಯದೆಯೇ ಇದ್ದರೆ ಶರೀರದಲ್ಲಿ ಜಲತತ್ತ್ವವು ನಾಶವಾಗುತ್ತದೆ. ಶ್ವಾಸವನ್ನು ನಿಗ್ರಹಿಸುವುದರಿಂದ ಶರೀರದಲ್ಲಿರುವ ವಾಯುತತ್ತ್ವವು ನಾಶವಾಗುತ್ತದೆ. ಹೊಟ್ಟೆಯ ಭೇದನದಿಂದ ಆಕಾಶತತ್ತ್ವವು ನಾಶಹೊಂದುತ್ತದೆ. ಊಟಮಾಡದೇ ಇರುವುದರಿಂದ ಶರೀರದಲ್ಲಿರುವ ಅಗ್ನಿತತ್ತ್ವವು ನಾಶವಾಗುತ್ತದೆ.

ವ್ಯಾಧಿವ್ರಣಪರಿಕ್ಲೇಶೈರ್ಮೇದಿನೀ ಚೈವ ಶೀರ್ಯತೇ ।
ಪೀಡಿತೇಽನ್ಯತರೇ ಹ್ಯೇಷಾಂ ಸಂಘಾತೋ ಯಾತಿ ಪಞ್ಚಧಾ ॥೯॥

ವ್ಯಾಧಿ-ವ್ರಣಗಳೇ ಮುಂತಾದ ಪರಿಕ್ಲೇಶಗಳಿಂದ ಶರೀರದಲ್ಲಿರುವ ಪೃಥ್ವಿತತ್ತ್ವವೂ ವಿನಾಶಹೊಂದುತ್ತದೆ. ಶರೀರದಲ್ಲಿರುವ ಈ ಐದು ತತ್ತ್ವಗಳಲ್ಲಿ ಯಾವ ಒಂದು ತತ್ತ್ವಕ್ಕೆ ಹಾನಿಯುಂಟಾದರೂ ಪಂಚತತ್ತ್ವಗಳ ಸಮೂಹವೇ ವಿನಾಶವನ್ನು ಹೊಂದುತ್ತದೆ.

ತಸ್ಮಿನ್ಪಂಚತ್ವಮಾಪನ್ನೇ ಜೀವಃ ಕಿಮನುಧಾವತಿ ।
ಕಿಂ ವೇದಯತಿ ವಾ ಜೀವಃ ಕಿಂ ಶೃಣೋತಿ ಬ್ರವೀತಿ ಚ ॥೧೦॥

ಪಂಚಭೂತಗಳ ಸಂಘಟನೆಯಿಂದ ಹುಟ್ಟಿರುವ ಶರೀರವು ನಾಶವಾದ ಬಳಿಕವೂ ' ಜೀವ ' ಎಂಬ ಒಂದು ವಸ್ತುವು ಇರುವುದೇ ಆದರೆ–ಅದು ಈ ಪಂಚತತ್ತ್ವಗಳಲ್ಲಿ ಯಾವುದರ ಹಿಂದೆ ಹೋಗುತ್ತದೆ? ಪಂಚತತ್ತ್ವಗಳಿಂದ ವಿಹೀನವಾದ ಆ ಜೀವಕ್ಕೆ ಯಾವ ಅನುಭವವಾಗುತ್ತದೆ? ಏನನ್ನು ಕೇಳುತ್ತದೆ? ಏನನ್ನು ಹೇಳುತ್ತದೆ? (ಕೇಳುವುದು, ಅನುಭವಿಸುವುದು, ಮಾತನಾಡುವುದು, ಆಘ್ರಾಣಿಸುವುದು–ಈ ಎಲ್ಲವೂ ಪಂಚಭೂತಗಳ ಸಹಯೋಗದಿಂದ ಸಾಧ್ಯವಾಗುವುದೇ ಹೊರತು ಪಂಚಭೂತಗಳೇ ಇಲ್ಲದಿದ್ದರೆ ಒಂದು ವೇಳೆ ಜೀವ ಎಂಬುದೊಂದಿದ್ದರೂ ಅದು ಏನೂ ಮಾಡಲಾರದು. ಅದಕ್ಕೆ ಯಾವ ಚೇಷ್ಟೆಯೂ ಇರುವುದಿಲ್ಲ. ಆದುದರಿಂದ ಜೀವನ ಅಸ್ತಿತ್ವದಲ್ಲಿಯೇ ಸಂದೇಹಪಡಬೇಕಾಗಿದೆ.)

ಏಷಾ ಗೌಃ ಪರಲೋಕಸ್ಥಂ ತಾರಯಿಷ್ಯತಿ ಮಾಮಿತಿ ।
ಯೋ ದತ್ತ್ವಾ ಮ್ರಿಯತೇ ಜನ್ತುಃ ಸಾ ಗೌಃ ಕಂ ತಾರಯಿಷ್ಯತಿ ॥೧೧॥

ಪ್ರಾಣೋತಮಣಸಮಯದಲ್ಲಿ ಮಾನವನು–' ಈ ಹಸುವು, ಪರಲೋಕಕ್ಕೆ ಹೋಗಲಿರುವ ನನ್ನನ್ನು ಅನೇಕ ವಿಧವಾದ ಪಾಪಗಳಿಂದ ಉದ್ಧರಿಸುತ್ತದೆ. (ವೈತರಣೀನದಿಯನ್ನು ದಾಟಿಸುತ್ತದೆ)'– ಎಂದು ಹೇಳಿ ಹಾಗೆಯೇ ಸಂಕಲ್ಪಿಸಿ ದಾನಕೊಟ್ಟು ಮರಣಹೊಂದುತ್ತಾನೆ. ದಾನಕೊಟ್ಟ ಹಸುವಿಗೆ ದಾನಿಯನ್ನು ಪಾಪಗಳಿಂದ ಉದ್ಧರಿಸುವ ಸಾಮರ್ಥ್ಯವಿದೆ–ಎಂದೇ ಭಾವಿಸಿದರೂ ಆ ಹಸುವು ಯಾರನ್ನು ಉದ್ಧರಿಸುತ್ತದೆ? ಶರೀರದಿಂದ ಬಿಟ್ಟು ಹೋಗುವ ಪಂಚಭೂತಗಳನ್ನೇ? ಅಥವಾ ಜೀವನನ್ನೇ? ಅಗೋಚರನಾದ ಅತರ್ಕ್ಯನಾದ ಜೀವನನ್ನು ಉದ್ಧರಿಸುವುದಾದರೂ ಹೇಗೆ ಸಾಧ್ಯ?

ಗೌಶ್ಚ ಪ್ರತಿಗ್ರಹೀತಾ ಚ ದಾತಾ ಚೈವ ಸಮಂ ಯದಾ ।
ಇಹೈವ ವಿಲಯಂ ಯಾನ್ತಿ ಕುತಸ್ತೇಷಾಂ ಸಮಾಗಮಃ ॥೧೨॥

ಗೋವು, ಗೋದಾನವನ್ನು ತೆಗೆದುಕೊಂಡವನು, ಗೋದಾನವನ್ನು

ಮಾಡಿದವನು–ಈ ಎಲ್ಲರೂ ನಮ್ಮ ಸಮಕ್ಷದಲ್ಲಿಯೇ ಪಂಚಭೂತಗಳಲ್ಲಿ ಲೀನರಾಗಿ ಹೋಗುತ್ತಾರೆ. ಪುನಃ ಅವರ ಸಮಾಗಮವೆಲ್ಲಿ? ಹೇಗೆ ಸಾಧ್ಯ?

ವಿಹಗೈರುಪಭುಕ್ತಸ್ಯ ಶೈಲಾಗ್ರಾತ್ಪತಿತಸ್ಯ ಚ ।
ಅಗ್ನಿನಾ ಚೋಪಯುಕ್ತಸ್ಯ ಕುತಃ ಸಂಜೀವನಂ ಪುನಃ ॥೧೩॥

ಮೃತನಾದನಂತರ ಶರೀರವನ್ನು ಕೆಲವು ವೇಳೆ ರಣಹದ್ದು ಮೊದಲಾದ ಪಕ್ಷಿಗಳೇ ತಿಂದುಹಾಕುತ್ತವೆ. ಒಬ್ಬನು ಪರ್ವತದ ಮೇಲಿಂದ ಬಿದ್ದು ವಿನಾಶಹೊಂದುತ್ತಾನೆ. ಅವನ ದೇಹವು ನುಚ್ಚುನೂರಾಗುತ್ತದೆ. ಮೃತ ಶರೀರವನ್ನು ಸುಟ್ಟುಹಾಕುತ್ತಾರೆ. ಸಂಘಟಿತವಾಗಿದ್ದ ಪಂಚಭೂತಗಳ ಸಂಬಂಧವಾಗಿ ಲೇಶಮಾತ್ರವೂ ಉಳಿಯುವುದಿಲ್ಲ. ಹೀಗಿರುವಾಗ ದೇಹವೇ ಇಲ್ಲದ ಮೇಲೆ ಜೀವದ ಅಸ್ತಿತ್ವವು ಹೇಗಿರುತ್ತದೆ? ಅದು ಪುನಃ ಜೀವಿಸುವ ಸಂಭವವಾದರೂ ಹೇಗೆ ಸಾಧ್ಯ?

ಛಿನ್ನಸ್ಯ ಯದಿ ವೃಕ್ಷಸ್ಯ ನ ಮೂಲಂ ಪ್ರತಿರೋಹತಿ ।
ಬೀಜಾನ್ಯಸ್ಯ ಪ್ರವರ್ತನ್ತೇ ಮೃತಃ ಕ್ವ ಪುನರೇಷ್ಯತಿ ॥೧೪॥

ವೃಕ್ಷವನ್ನು ಬುಡಸಹಿತ ಕತ್ತರಿಸಿಹಾಕಿಬಿಟ್ಟರೆ ಅದು ಪುನಃ ಚಿಗುರುವುದೇ ಇಲ್ಲ. ಆ ವೃಕ್ಷದ ಬೀಜಗಳು ಮಾತ್ರ ಅಂಕುರಿಸುತ್ತವೆ. ಅಂತೆಯೇ ಸತ್ತುಹೋದವನು ಪುನಃ ಎಲ್ಲಿಂದ ಬರುತ್ತಾನೆ? ವೃಕ್ಷದ ಬೀಜದಂತೆ ಸತ್ತವನ ಸಂತಾನವು ಮುಂದುವರಿಯಲು ಸಾಧ್ಯ. ಛಿನ್ನವಾದ ವೃಕ್ಷವು ಪುನಃ ಜೀವಂತವಾಗದಿರುವಂತೆ ಸತ್ತುಹೋದ ಮನುಷ್ಯನು ಪುನಃ ಹಿಂದಿರುಗುವುದೇ ಇಲ್ಲ. ಈ ಕಾರಣದಿಂದ ಜೀವನಿಗೆ ಅಸ್ತಿತ್ವವೆಂಬುದೇ ಇಲ್ಲ.

ಬೀಜಮಾತ್ರಂ ಪುರಾ ಸೃಷ್ಟಂ ಯದೇತತ್ಪರಿವರ್ತತೇ ।
ಮೃತಾಮೃತಾಃ ಪ್ರಣಶ್ಯನ್ತಿ ಬೀಜಾದ್ಬೀಜಂ ಪ್ರವರ್ತತೇ ॥೧೫॥

ಹಿಂದೆ (ಸೃಷ್ಟ್ಯಾದಿಯಲ್ಲಿ) ಈ ಜಗತ್ತಿನಲ್ಲಿ ಬೀಜವು ಮಾತ್ರವೇ ಸೃಷ್ಟವಾಯಿತು. ಅದರಿಂದಲೇ ಈ ಜಗತ್ತು ವೃದ್ಧಿಯನ್ನು ಹೊಂದುತ್ತಿದೆ. ಯಾರು ಸಾಯುತ್ತಾರೆಯೋ ಅವರು ಸಂಪೂರ್ಣವಾಗಿ ವಿನಾಶಹೊಂದುತ್ತಾರೆ. ಪ್ರತ್ಯಕ್ಷವಾಗಿಯೇ ದೇಹಾಂತರ್ಗತವಾಗಿರುವ ಪಂಚಭೂತಗಳೂ ಹೊರಗಿರುವ ಪಂಚಭೂತಗಳಲ್ಲಿ ಲೀನವಾಗಿ ಹೋಗುವಾಗ ಆ ದೇಹದ

ಸಂಬಂಧವಾಗಿ ಯಾವುದೂ ಉಳಿಯುವುದಿಲ್ಲ. ಆದರೆ ಬೀಜದಿಂದ ವೃಕ್ಷವಾಗುತ್ತದೆ. ವೃಕ್ಷದಿಂದ ಪುನಃ ಬೀಜವಾಗುತ್ತದೆ. ಇದು ಸಹಜ. ಮನುಷ್ಯನಿಗೆ ಮಗನೂ ಮೊಮ್ಮಗನೂ ಹುಟ್ಟಿ ವಂಶವು ಬೆಳೆಯುತ್ತಲೇ ಇರುತ್ತದೆ. (ಆದುದರಿಂದ ‘ ಜೀವ ’ ಎಂಬ ವಸ್ತುವು ಯಾವುದೂ ಇರುವುದಿಲ್ಲ.)”

೧೮೬ನೆಯ ಅಧ್ಯಾಯವು ಮುಗಿಯಿತು.

೧೮೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಭೃಗುವು ಜೀವದ ಅಸ್ತಿತ್ವವನ್ನೂ ಮತ್ತು ಅದರ ನಿತ್ಯತೆಯನ್ನೂ ಯುಕ್ತಿಯುಕ್ತವಾಗಿ ಸಿದ್ಧಮಾಡಿದುದು

ಭೃಗುವು ಹೇಳುತ್ತಾನೆ :

ನ ಪ್ರಣಾಶೋಽಸ್ತಿ ಜೀವಸ್ಯ ದತ್ತಸ್ಯ ಚ ಕೃತಸ್ಯ ಚ ।
ಯಾತಿ ದೇಹಾನ್ತರಂ ಪ್ರಾಣೀ ಶರೀರಂ ತು ವಿಶೀರ್ಯತೇ ॥೧॥

“ಭರದ್ವಾಜ! ದೇಹನಾಶವಾದರೂ ಜೀವವು ನಾಶಹೊಂದುವುದಿಲ್ಲ. ಕೊಟ್ಟ ದಾನವಾಗಲೀ–ಮಾಡಿದ ಕರ್ಮಫಲವಾಗಲೀ ಎಂದಿಗೂ ವಿನಾಶ ಹೊಂದತಕ್ಕುವುಗಳಲ್ಲ. ಶರೀರವು ಮಾತ್ರವೇ ನಷ್ಟವಾಗಿಹೋಗುತ್ತದೆ. ಪ್ರಾಣಿಯು ದೇಹಾಂತರವನ್ನು ಹೊಂದುತ್ತದೆ.

ನ ಶರೀರಾಶ್ರಿತೋ ಜೀವಸ್ತಸ್ಮಿನ್ನಷ್ಟೇ ಪ್ರಣಶ್ಯತಿ ।
ಸಮಿಧಾಮಿವ ದಗ್ಧಾನಾಂ ಯಥಾಗ್ನಿರ್ದೃಶ್ಯತೇ ತಥಾ ॥೨॥

ಸಮಿತ್ತುಗಳು (ಇಂಧನಗಳು) ದಗ್ಧವಾಗಿ ಹೋದರೂ ಇಂಧನಾಂತರ್ಗತವಾಗಿರುವ ಅಗ್ನಿಯು ಆರಿಹೋಗದೇ ಕಾಣಿಸಿಕೊಳ್ಳುವಂತೆ–ಶರೀರವು ನಷ್ಟವಾಗಿ ಹೋದರೂ ಶರೀರವನ್ನು ಆಶ್ರಯಿಸಿರುವ ಜೀವವು ನಷ್ಟವಾಗಿ ಹೋಗದೇ ಚೈತನ್ಯವಿಶಿಷ್ಟವಾಗಿಯೇ ಇರುತ್ತದೆ.”

ಭರದ್ವಾಜನು ಹೇಳುತ್ತಾನೆ :

ಅಗ್ನೇರ್ಯಥಾ ತಥಾ ತಸ್ಯ ಯದಿ ನಾಶೋ ನ ವಿದ್ಯತೇ ।
ಇನ್ಧನಸ್ಯೋಪಯೋಗಾನ್ತೇ ಸ ಚಾಗ್ನಿರ್ನೋಪಲಭ್ಯತೇ ॥೩॥

“ಭಗವನ್! ಇಂಧನಾಂತರ್ಗತವಾಗಿರುವ ಅಗ್ನಿಯು ಕಟ್ಟಿಗೆಯು ಉರಿದನಂತರವೂ ಪ್ರಕಾಶಮಾನವಾಗಿಯೇ ಕಾಣುವಂತೆ–ಶರೀರವು ನಷ್ಟವಾಗಿ ಹೋದರೂ ಜೀವವು ನಷ್ಟವಾಗಿ ಹೋಗುವುದಿಲ್ಲವೆಂದು ಹೇಳುವುದಾದರೆ–ಅಗ್ನಿಯ ಔಪಮ್ಯದಿಂದಾಗಿ ಜೀವವು ನಷ್ಟವಾಗಿ ಹೋಗುವುದೆಂದೇ ಹೇಳಿದಂತಾಯಿತು. ಏಕೆಂದರೆ : ಕಟ್ಟಿಗೆಯು ಸಂಪೂರ್ಣವಾಗಿ ಉರಿದು ಬೂದಿಯಾದನಂತರ ಅಗ್ನಿಯಿರುವುದಿಲ್ಲ.

ನಶ್ಯತೀತ್ಯೇವ ಜಾನಾಮಿ ಶಾನ್ತಮಗ್ನಿಮನಿನ್ಧನಮ್ ।
ಗತಿರ್ಯಸ್ಯ ಪ್ರಮಾಣಂ ವಾ ಸಂಸ್ಥಾನಂ ವಾ ನ ವಿದ್ಯತೇ ॥೪॥

ಕಟ್ಟಿಗೆಯು ಸಂಪೂರ್ಣವಾಗಿ ಉರಿದುಹೋದನಂತರ ಅಗ್ನಿಯು ಶಾಂತವಾಗುವಂತೆ–ಶರೀರವು ನಾಶವಾದನಂತರ ಜೀವವೂ ವಿನಾಶ ಹೊಂದುವುದೆಂದೇ ನಾನು ಭಾವಿಸಿದ್ದೇನೆ. ಏಕೆಂದರೆ : ಜೀವವು ಇರುವುದೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಅದಕ್ಕೆ ಒಂದು ಸ್ಥಿತಿಯೂ ಇಲ್ಲ : ಗತಿಯೂ ಇಲ್ಲ.”

ಭೃಗುವು ಹೇಳುತ್ತಾನೆ :

ಸಮಿಧಾಮುಪಯೋಗಾನ್ತೇ ಯಥಾಗ್ನಿರ್ನೋಪಲಭ್ಯತೇ ।
ಆಕಾಶಾನುಗತತ್ವಾದ್ಧಿ ದುರ್ಗ್ರಾಹ್ಯೋ ಹಿ ನಿರಾಶ್ರಯಃ ॥೫॥

“ವತ್ಸ ಭರದ್ವಾಜ! ಕಟ್ಟಿಗೆಯ ಉಪಯೋಗವಾದನಂತರ (ಕಟ್ಟಿ ಗೆಯು ಸಂಪೂರ್ಣವಾಗಿ ಬೂದಿಯಾದನಂತರ) ಅಗ್ನಿಯು ಕಾಣದಿದ್ದ ಮಾತ್ರಕ್ಕೆ ನಷ್ಟವಾಗಿಹೋಯಿತೆಂಬ ಅರ್ಥವಲ್ಲ. ಅಗ್ನಿಗೆ ನಾಶವೆಂಬುದೇ ಇಲ್ಲ. ಅದು ಆಕಾಶದಲ್ಲಿ ಅವ್ಯಕ್ತರೂಪದಿಂದ ಇರುತ್ತದೆ. ಆಶ್ರಯರಹಿತವಾಗಿರುವುದರಿಂದ ಅಗ್ನಿಯು ಉಪಲಬ್ಧವಾಗುವುದಿಲ್ಲ. (ಅದನ್ನು ಇಂದ್ರಿಯಗಳಿಂದ ಗ್ರಹಿಸಲಾಗುವುದಿಲ್ಲ.)

ತಥಾ ಶರೀರಸಂತ್ಯಾಗೇ ಜೀವೋ ಹ್ಯಾಕಾಶವತ್ಸ್ಥಿತಃ ।
ನ ಗೃಹ್ಯತೇ ತು ಸೂಕ್ಷ್ಮತ್ವಾದ್ಯಥಾ ಜ್ಯೋತಿರ್ನಸಂಶಯಃ ॥೬॥

ಅದೇ ರೀತಿಯಲ್ಲಿ ಶರೀರವನ್ನು ತ್ಯಾಗಮಾಡಿದನಂತರವೂ ಜೀವವು

ಆಕಾಶದಂತೆಯೇ ಇರುತ್ತದೆ. ಜೀವವು ಅತ್ಯಂತಸೂಕ್ಷ್ಮರೂಪದಲ್ಲಿರುವುದರಿಂದ–(ಅರಣಿಯಲ್ಲಿ ಅಡಗಿರುವ) ಸೂಕ್ಷ್ಮವಾದ ಜ್ಯೋತಿಯನ್ನು ಹಿಡಿಯಲಾಗದಂತೆ–ಜೀವವನ್ನು ಹಿಡಿಯಲು ಸಾಧ್ಯವಾಗುವುದಿಲ್ಲ.

ಪ್ರಾಣಾನ್ಧಾರಯತೇ ಹ್ಯಗ್ನಿಃ ಸ ಜೀವ ಉಪಧಾರ್ಯತಾಮ್ ।
ವಾಯುಸಂಧಾರಣೋ ಹ್ಯಗ್ನಿರ್ನಶ್ಯತ್ಯುಚ್ಛ್ವಾಸನಿಗ್ರಹಾತ್ ॥೭॥

ಅಗ್ನಿಯು ಪ್ರಾಣಗಳನ್ನು ಧರಿಸಿರುತ್ತದೆ. ಆ ಅಗ್ನಿಯನ್ನೇ ನೀನು ಜೀವವೆಂದೂ ಜ್ಯೋತಿರ್ಮಯವಾದುದೆಂದೂ ಭಾವಿಸು. ಆ ಅಗ್ನಿಯನ್ನು ಅಥವಾ ಜೀವವನ್ನು ವಾಯುವು ದೇಹದೊಳಗೆ ಧರಿಸಿರುತ್ತದೆ. ಶ್ವಾಸನಿಗ್ರಹದಿಂದಾಗಿ ವಾಯುವಿನೊಡನೆ ಅಗ್ನಿರೂಪವಾದ ಜೀವವೂ ನಾಶವಾಗುತ್ತದೆ. (ಅದೃಶ್ಯವಾಗುತ್ತದೆ.)

ತಸ್ಮಿನ್ನಷ್ಟೇ ಶರೀರಾಗ್ನೌ ತತೋ ದೇಹಮಚೇತನಮ್ ।
ಪತಿತಂ ಯಾತಿ ಭೂಮಿತ್ವಮಯನಂ ತಸ್ಯ ಹಿ ಕ್ಷಿತಿಃ ॥೮॥

ಜಙ್ಗಮಾನಾಂ ಹಿ ಸರ್ವೇಷಾಂ ಸ್ಥಾವರಾಣಾಂ ತಥೈವ ಚ ।
ಆಕಾಶಂ ಪವನೋಽನ್ವೇತಿ ಜ್ಯೋತಿಸ್ತಮನುಗಚ್ಛತಿ ।
ತೇಷಾಂ ತ್ರಯಾಣಾಮೇಕತ್ವಾದ್ದ್ವಯಂ ಭೂಮೌ ಪ್ರತಿಷ್ಠಿತಮ್ ॥೯॥

ಶರೀರದಲ್ಲಿರುವ ಅಗ್ನಿಯು (ಜೀವವು) ನಷ್ಟವಾದನಂತರ ಅಚೇತನವಾದ ಶರೀರವು ಭೂಮಿಯ ಮೇಲೆ ಬಿದ್ದು ಪಾರ್ಥಿವಭಾವವನ್ನು ಹೊಂದುತ್ತದೆ. ಅಚೇತನವಸ್ತುವಿಗೆ ಭೂಮಿಯೇ ಆಶ್ರಯಸ್ಥಾನವಾಗಿದೆ. ಸಮಸ್ತ ಸ್ಥಾವರ-ಜಂಗಮಗಳ ಪ್ರಾಣವಾಯುವೂ ಆಕಾಶಕ್ಕೆ ಹೊರಟುಹೋಗುತ್ತದೆ. ಅಗ್ನಿಯೂ ವಾಯುವನ್ನೇ ಅನುಸರಿಸಿ ಹೋಗುತ್ತದೆ. ಈ ರೀತಿಯಲ್ಲಿ ಆಕಾಶ, ವಾಯು ಮತ್ತು ಅಗ್ನಿಗಳು ಒಂದೆಡೆಯಲ್ಲಿ ಸೇರಿದನಂತರ ಶರೀರಾಂತರ್ಗತವಾಗಿರುವ ಜಲತತ್ತ್ವ ಮತ್ತು ಭೂಮಿತತ್ತ್ವಗಳು ಶವದರೂಪದಲ್ಲಿ ಭೂಮಿಯ ಮೇಲಿರುತ್ತವೆ.

ಯತ್ರ ಖಂ ತತ್ರ ಪವನಸ್ತತ್ರಾಗ್ನಿರ್ಯತ್ರ ಮಾರುತಃ ।
ಅಮೂರ್ತಯಸ್ತೇ ವಿಜ್ಞೇಯಾ ಮೂರ್ತಿಮನ್ತಃ ಶರೀರಿಣಾಮ್ ॥೧೦॥

ಎಲ್ಲಿ ಆಕಾಶವಿರುತ್ತದೆಯೋ–ಅಲ್ಲಿ ವಾಯುವಿರುತ್ತದೆ. ಎಲ್ಲಿ ವಾಯು ವಿರುತ್ತದೆಯೋ–ಅಲ್ಲಿ ಅಗ್ನಿಯಿರುತ್ತದೆ. ಆಕಾರರಹಿತವಾಗಿರುವ ಆಕಾಶ, ವಾಯು ಮತ್ತು ಅಗ್ನಿಗಳು ದೇಹಿಗಳ ದೇಹವನ್ನು ಹೊಂದಿರುತ್ತವೆ. ದೇಹ ಧಾರಿಗಳ ಶರೀರದಲ್ಲಿರುವಾಗ ಸಾಕಾರಗಳಂತೆ ಕಾಣುತ್ತವೆ. ಪ್ರಾಣರೂಪ ವಾದ ಆಕಾರವನ್ನು ಧರಿಸಿರುತ್ತವೆ. ಪ್ರಾಣಿಗಳಲ್ಲಿರುವ ಈ ಮೂರನ್ನೂ ಜನರು ಪ್ರಾಣಿಗಳ ಯಥಾವತ್ತಾದ ಆಕಾರದಲ್ಲಿಯೇ ಕಾಣುತ್ತಾರೆ ಅಥವಾ ಶರೀರಗಳಿಗೆ ಮೂರ್ತಿಸ್ವರೂಪವನ್ನು ಕಲ್ಪಿಸತಕ್ಕುವುಗಳು ಇವುಗಳೇ ಆಗಿವೆ.”

ಭರದ್ವಾಜನು ಪ್ರಶ್ನಿಸುತ್ತಾನೆ :

ಯದ್ಯಗ್ನಿಮಾರುತೌ ಭೂಮಿಃ ಖಮಾಪಶ್ಚ ಶರೀರಿಷು ।
ಜೀವಃ ಕಿಂ ಲಕ್ಷಣಸ್ತತ್ರೇತ್ಯೇತದಾಚಕ್ಷ್ವ ಮೇಽನಘ ॥೧೧॥

“ಅನಘನೇ! ದೇಹಧಾರಿಗಳ ಶರೀರದಲ್ಲಿ ಅಗ್ನಿ-ವಾಯು-ಭೂಮಿ-ಆಕಾಶ-ಜಲಗಳೂ ಮತ್ತು ಜೀವವೂ ಇರುವುದೆನ್ನುವುದಾದರೆ–ಆ ಜೀವದ ಲಕ್ಷಣವೇನು? ಈ ವಿಷಯವನ್ನು ನನಗೆ ಹೇಳು.

ಪಞ್ಚಾತ್ಮಕೇ ಪಞ್ಚರತೌ ಪಞ್ಚವಿಜ್ಞಾನಚೇತನೇ ।
ಶರೀರೇ ಪ್ರಾಣಿನಾಂ ಜೀವಂ ವೇತ್ತುಮಿಚ್ಛಾಮಿ ಯಾದೃಶಮ್ ॥೧೨॥

ನಾನು ತಿಳಿದಿರುವಂತೆ ಶರೀರವು ಪಂಚಭೂತಾತ್ಮಕವಾಗಿದೆ. ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳಲ್ಲಿ ಇದು ಆಸಕ್ತಿಯನ್ನು ಹೊಂದಿದೆ. ಪಂಚ ಜ್ಞಾನೇಂದ್ರಿಯಗಳೂ ಮತ್ತು ಚಿತ್ತವೂ ಶರೀರದಲ್ಲಿವೆ. ಇಂತಹ ಪಂಚ ಭೂತಾತ್ಮಕವಾದ ಶರೀರದಲ್ಲಿ ಜೀವ–ಎಂಬುದೊಂದಿರುವುದೆಂದು ನೀನು ಹೇಳುವೆ. ಪ್ರಾಣಿಗಳ ಶರೀರದಲ್ಲಿರುವ ಜೀವದ ಸ್ವರೂಪವನ್ನು ನಾನು ತಿಳಿಯಲಿಚ್ಛಿಸುತ್ತೇನೆ.

ಮಾಂಸಶೋಣಿತಸಂಘಾತೇ ಮೇದಃಸ್ನಾಯ್ವಸ್ಥಿಸಂಚಯೇ ।
ಭಿದ್ಯಮಾನೇ ಶರೀರೇ ತು ಜೀವೋ ನೈವೋಪಲಭ್ಯತೇ ॥೧೩॥

ರಕ್ತ-ಮಾಂಸಗಳ ಸಮೂಹದಿಂದ ಕೂಡಿರುವ, ಮೇದಸ್ಸು-ಕರುಳು ಮತ್ತು ಮೂಳೆಗಳ ಸಂಗ್ರಹದಿಂದ ರೂಪುಗೊಂಡಿರುವ ಈ ಶರೀರವನ್ನು

ಕತ್ತರಿಸಿದರೆ ನೀನು ಹೇಳುವ ಜೀವವೆಂಬ ವಸ್ತುವು ಖಂಡಿತವಾಗಿಯೂ ಸಿಕ್ಕುವುದಿಲ್ಲ.

ಯದ್ಯಜೀವಂ ಶರೀರಂ ತು ಪಞ್ಚಭೂತಸಮನ್ವಿತಮ್ ।
ಶಾರೀರೇ ಮಾನಸೇ ದುಃಖೇ ಕಸ್ತಾಂ ವೇದಯತೇ ರುಜಮ್ ॥೧೪॥

ಪಂಚಭೂತಾತ್ಮಕವಾದ ಶರೀರವು ಜೀವದಿಂದ ರಹಿತವಾಗಿದೆಯೆಂದು ಭಾವಿಸಿದರೂ ಒಂದು ಪ್ರಶ್ನೆಯು ಹುಟ್ಟಿಕೊಳ್ಳುತ್ತದೆ. ಶರೀರಕ್ಕೆ ಅಥವಾ ಮನಸ್ಸಿಗೆ ಪೀಡೆಯುಂಟಾದರೆ ಆ ಪೀಡೆಯನ್ನು ಅನುಭವಿಸುವವರು ಯಾರು?

ಶೃಣೋತಿ ಕಥಿತಂ ಜೀವಃ ಕರ್ಣಾಭ್ಯಾಂ ನ ಶೃಣೋತಿ ತತ್ ।
ಮಹರ್ಷೇ ಮನಸಿ ವ್ಯಗ್ರೇ ತಸ್ಮಾಜ್ಜೀವೋ ನಿರರ್ಥಕಃ ॥೧೫॥

ಮಹರ್ಷಿಯೇ! ಜೀವನು ಬೇರೊಬ್ಬರು ಹೇಳುವ ಮಾತನ್ನು ಕಿವಿಗಳಿಂದ ಕೇಳುತ್ತಲೇ ಇರುತ್ತಾನೆ. ಆದರೆ ಮನಸ್ಸು ವ್ಯಗ್ರವಾಯಿತೆಂದರೆ ಮುಂದುವರಿದ ಆ ಮಾತನ್ನು ಕಿವಿಗಳು ಕೇಳುವುದೇ ಇಲ್ಲ. ಆದುದರಿಂದ ಮನಸ್ಸಿಗಿಂತಲೂ ಅತಿರಿಕ್ತವಾದ ಜೀವನ ಅಸ್ತಿತ್ವವು ನಿರರ್ಥಕವೆಂದೇ ಭಾವಿಸುತ್ತೇನೆ.

ಸರ್ವಂ ಪಶ್ಯತಿ ಯದ್ದೃಶ್ಯಂ ಮನೋಯುಕ್ತೇನ ಚಕ್ಷುಷಾ ।
ಮನಸಿ ವ್ಯಾಕುಲೇ ಚಕ್ಷುಃ ಪಶ್ಯನ್ನಪಿ ನ ಪಶ್ಯತಿ ॥೧೬॥

ಮನಸ್ಸಿನಿಂದ ಯುಕ್ತವಾದ ಕಣ್ಣಿನಿಂದ ಎಲ್ಲ ದೃಶ್ಯಗಳನ್ನೂ ನೋಡುತ್ತಾನೆ. ಮನಸ್ಸು ವ್ಯಗ್ರವಾಯಿತೆಂದರೆ ಮುಂದೆ ಕಾಣುವ ದೃಶ್ಯವನ್ನು ಕಣ್ಣು ನೋಡುತ್ತಿದ್ದರೂ ಗ್ರಹಿಸುವುದೇ ಇಲ್ಲ. ಆದುದರಿಂದ ಜೀವವು ನಿರರ್ಥಕವೆಂದೇ ನಾನು ಭಾವಿಸುತ್ತೇನೆ.

ನ ಪಶ್ಯತಿ ನ ಚಾಘ್ರಾತಿ ನ ಶೃಣೋತಿ ನ ಭಾಷತೇ ।
ನ ಚ ಸ್ಪರ್ಶರಸೌ ವೇತ್ತಿ ನಿದ್ರಾವಶಗತಃ ಪುನಃ ॥೧೭॥

ನಿದ್ರಾಪರವಶನಾಗಿರುವ ಮನುಷ್ಯನು ನೀನು ಭಾವಿಸಿರುವಂತೆ ಜೀವ ಎಂಬ ವಸ್ತುವಿನಿಂದಲೇ ಯುಕ್ತನಾಗಿದ್ದರೂ ಯಾರನ್ನೂ ನೋಡುವುದಿಲ್ಲ. ಯಾವ ವಾಸನೆಯನ್ನೂ ಆಘ್ರಾಣಿಸುವುದಿಲ್ಲ. ಯಾವುದನ್ನೂ ಕೇಳುವುದಿಲ್ಲ.

ಯಾವ ಮಾತನ್ನೂ ಆಡುವುದಿಲ್ಲ. ಆಗ ಆ ಜೀವನಿಗೆ ಸ್ಪರ್ಶಸುಖವಾಗಲೀ ರಸದ ಅನುಭವವಾಗಲೀ ಇರುವುದಿಲ್ಲ. ಆದುದರಿಂದ ಜೀವನು ನಿರರ್ಥಕನೆಂದು ನಾನು ಭಾವಿಸುತ್ತೇನೆ.

ಹೃಷ್ಯತಿ ಕುಧ್ಯತೇ ಕೋಽತ್ರ ಶೋಚತ್ಯುದ್ವಿಜತೇ ಚ ಕಃ ।
ಇಚ್ಛತಿ ಧ್ಯಾಯತಿ ದ್ವೇಷ್ಟಿ ವಾಚಮೀರಯತೇ ಚ ಕಃ ॥೧೮॥

ಜೀವ ಎಂಬುದು ಇದ್ದರೂ ಅದು ನಿಷ್ಪ್ರಯೋಜಕವೆಂದು ನಾನು ಭಾವಿಸುವೆನಾದರೂ ಕೆಲವು ಪ್ರಶ್ನೆಗಳಿಗೆ ನಾನು ಉತ್ತರವನ್ನು ಬಯಸುತ್ತೇನೆ. ನಮ್ಮ ಶರೀರದೊಳಗೆ ಹರ್ಷಪಡುವವರು ಯಾರು? ಉದ್ವೇಗಗೊಳ್ಳುವವರು ಯಾರು? ಪದಾರ್ಥಗಳನ್ನು ಇಚ್ಛಿಸುವವರು ಯಾರು? ಚಿಂತಿಸುವವರು ಯಾರು? ದ್ವೇಷಹೊಂದುವವರು ಯಾರು? ಮಾತನಾಡುವವರು ಯಾರು?”

ಭೃಗುವು ಹೇಳುತ್ತಾನೆ :

ನ ಪಞ್ಚಸಾಧಾರಣಮತ್ರ ಕಿಞ್ಚಿ
ಚ್ಛರೀರಮೇಕೋ ವಹತೇಽನ್ತರಾತ್ಮಾ ।
ಸ ವೇತ್ತಿ ಗನ್ಧಾಂಶ್ಚ ರಸಾಞ್ಶ್ರುತೀಶ್ಚ
ಸ್ಪರ್ಶಂ ಚ ರೂಪಂ ಚ ಗುಣಾಶ್ಚ ಯೇಽನ್ಯೇ ॥೧೯॥

“ಭರದ್ವಾಜ! ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳ ಸಂಬಂಧವು ಮನಸ್ಸಿಗೂ ಇರುವುದರಿಂದ ಮನಸ್ಸೂ ಪಂಚಭೂತಾತ್ಮಕವೇ ಆಗಿದೆ. ಮನಸ್ಸು ಎಂಬುದು ಪಂಚಭೂತಗಳಿಗಿಂತಲೂ ಭಿನ್ನವಾದ ತತ್ತ್ವವಲ್ಲ. ಆದರೆ ಮನಸ್ಸೇ ಶರೀರನಿರ್ವಾಹಕವಲ್ಲ. ಅಂತರಾತ್ಮನೊಬ್ಬನೇ ಈ ಶರೀರವನ್ನು ಧರಿಸಿದ್ದಾನೆ. ಅವನೇ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳನ್ನೂ ಇತರ ಗುಣಗಳನ್ನೂ ಅನುಭವಿಸುತ್ತಾನೆ.

ಪಞ್ಚಾತ್ಮಕೇ ಪಞ್ಚಗುಣಪ್ರದರ್ಶೀ
ಸ ಸರ್ವಗಾತ್ರಾನುಗತೋಽನ್ತರಾತ್ಮಾ ।
ಸ ವೇತ್ತಿ ದುಃಖಾನಿ ಸುಖಾನಿ ಚಾತ್ರ
ತದ್ವಿಪ್ರಯೋಗಾತ್ತು ನ ವೇತ್ತಿ ದೇಹಃ ॥೨೦॥

ಅಂತರಾತ್ಮನು ಪಂಚಭೂತಾತ್ಮಕವಾದ ಶರೀರದಲ್ಲಿ ಪಂಚೇಂದ್ರಿಯ ಗಳ ಗುಣಗಳನ್ನು ಧರಿಸಿರುವ ಮನಸ್ಸನ್ನು ಕಂಡುಕೊಂಡಿದ್ದಾನೆ ಮತ್ತು ಪಂಚಭೂತಾತ್ಮಕವಾದ ಶರೀರದಲ್ಲಿರುವ ಎಲ್ಲ ಅವಯವಗಳನ್ನೂ ವ್ಯಾಪಿಸಿ ಕೊಂಡಿದ್ದು ಸುಖಗಳನ್ನೂ–ದುಃಖಗಳನ್ನೂ ಅನುಭವಿಸುತ್ತಾನೆ. ಯಾವಾಗ ಶರೀರಕ್ಕೆ ಅಂತರಾತ್ಮನ ಸಂಬಂಧವು ತಪ್ಪಿಹೋಗುವುದೋ–ಆಗ ಶರೀರವು ಸುಖವನ್ನಾಗಲೀ–ದುಃಖವನ್ನಾಗಲೀ ಅನುಭವಿಸುವುದಿಲ್ಲ. ಅದಕ್ಕೆ ಸುಖದ ಅಥವಾ ದುಃಖದ ಅರಿವಾಗುವುದಿಲ್ಲ. (ಆದುದರಿಂದ ಮನಸ್ಸಿಗಿಂತಲೂ ಅತಿರಿಕ್ತವಾದ ಮತ್ತು ಮನಸ್ಸಿಗೆ ಸಾಕ್ಷೀಭೂತವಾದ ಜೀವದ ಅಸ್ತಿತ್ವವು ಇದರಿಂದಲೇ ಸಿದ್ಧವಾಗುತ್ತದೆ.)

ಯದಾ ನ ರೂಪಂ ನ ಸ್ಪರ್ಶೋ ನೋಷ್ಮಭಾವಶ್ಚ ಪಞ್ಚಕೇ ।
ತದಾ ಶಾನ್ತೇ ಶರೀರಾಗ್ನೌ ದೇಹತ್ಯಾಗೇ ನ ನಶ್ಯತಿ ॥೨೧॥

ಯಾವಾಗ ಪಂಚಭೂತಾತ್ಮಕವಾದ ಶರೀರದಲ್ಲಿ ರೂಪ-ಸ್ಪರ್ಶಗಳ ಮತ್ತು ಉಷ್ಣದ ಭಾವವಿರುವುದಿಲ್ಲವೋ–ಆಗ ಶರೀರದಲ್ಲಿರುವ ಅಗ್ನಿಯೂ ಶಾಂತವಾಗುತ್ತದೆ. ಅಗ್ನಿರೂಪವಾದ ಜೀವವು ಅಗ್ನಿಯೊಡನೆ ದೇಹತ್ಯಾಗ ಮಾಡಿದರೂ ಜೀವವು ವಿನಾಶಹೊಂದುವುದಿಲ್ಲ.

ಆಪೋಮಯಮಿದಂ ಸರ್ವಮಾಪೋ ಮೂರ್ತಿಃ ಶರೀರಿಣಾಮ್ ।
ತತ್ರಾತ್ಮಾ ಮಾನಸೋ ಬ್ರಹ್ಮಾ ಸರ್ವಭೂತೇಷು ಲೋಕಕೃತ್ ॥೨೨॥

ಈ ಪ್ರಪಂಚವೆಲ್ಲವೂ ಜಲಮಯವೇ ಆಗಿದೆ. ಪ್ರಾಣಿಗಳ ದೇಹವೂ ಆಪೋಮಯವೇ ಆಗಿದೆ. ಜಲಮಯವಾದ ಶರೀರದಲ್ಲಿ ಚಿದ್ರೂಪನಾದ ಆತ್ಮನು ಶರೀರಾಂತರ್ಗತವಾದ ಮನಸ್ಸಿನಲ್ಲಿ ಅಭಿವ್ಯಕ್ತನಾಗುತ್ತಾನೆ. ಅವನು ಎಲ್ಲ ಪ್ರಾಣಿಗಳನ್ನೂ ಸೃಷ್ಟಿಸುವ 'ಬ್ರಹ್ಮಾ' ಎಂಬ ಹೆಸರಿನಿಂದ ವಿಖ್ಯಾತ ನಾಗಿದ್ದಾನೆ.

ಆತ್ಮಾ ಕ್ಷೇತ್ರಜ್ಞ ಇತ್ಯುಕ್ತಃ ಸಂಯುಕ್ತಃ ಪ್ರಾಕೃತೈರ್ಗುಣೈಃ ।
ತೈರೇವ ತು ವಿನಿರ್ಮುಕ್ತಃ ಪರಮಾತ್ಮೇತ್ಯುದಾಹೃತಃ ॥೨೩॥

ಆತ್ಮನು ಯಾವಾಗ ಪ್ರಾಕೃತವಾದ ಗುಣಗಳಿಂದ ಯುಕ್ತನಾಗು

ವನೋ–ಆಗ ಅವನು ಕ್ಷೇತ್ರಜ್ಞ (ಜೀವ) ನೆನಿಸಿಕೊಳ್ಳುತ್ತಾನೆ. ಪ್ರಾಕೃತವಾದ ಗುಣಗಳಿಂದ ಆತ್ಮನು ಯಾವಾಗ ಮುಕ್ತನಾಗುವನೋ–ಆಗ ಅವನು 'ಪರಮಾತ್ಮಾ' ಎಂದು ಕರೆಯಲ್ಪಡುತ್ತಾನೆ.

ಆತ್ಮಾನಂ ತಂ ವಿಜಾನೀಹಿ ಸರ್ವಲೋಕಹಿತಾತ್ಮಕಮ್ ।
ತಸ್ಮಿನ್ಯಃ ಸಂಶ್ರಿತೋ ದೇಹೇ ಹ್ಯಬ್ಬಿಂದುರಿವ ಪುಷ್ಕರೇ ॥೨೪॥

ಪರಮಾತ್ಮನನ್ನು ನೀನು ಸರ್ವಲೋಕಗಳಿಗೂ ಹಿತವನ್ನುಂಟು ಮಾಡುವ ಬುದ್ಧಿಯುಳ್ಳವನೆಂಬುದನ್ನು ತಿಳಿದುಕೊ. ಆ ಪರಮಾತ್ಮನು ಕಮಲಪತ್ರದ ಮೇಲಿರುವ ನೀರಿನ ಬಿಂದುವು ಕಮಲಪತ್ರಕ್ಕೆ ಅಂಟಿಯೂ ಅಂಟದಂತಿರುವಂತೆ–ಪ್ರಾಣಿಗಳ ಶರೀರದಲ್ಲಿದ್ದಾನೆ.

ಕ್ಷೇತ್ರಜ್ಞಂ ತಂ ವಿಜಾನೀಹಿ ನಿತ್ಯಂ ಲೋಕಹಿತಾತ್ಮಕಮ್ ।
ತಮೋ ರಜಶ್ಚ ಸತ್ತ್ವಂ ಚ ವಿದ್ಧಿ ಜೀವಗುಣಾನಿಮಾನ್ ॥೨೫॥

ಕ್ಷೇತ್ರಜ್ಞನನ್ನೂ (ಜೀವನನ್ನೂ) ನೀನು ಲೋಕಹಿತದಲ್ಲಿಯೇ ಆಸಕ್ತವಾದ ಬುದ್ಧಿಯುಳ್ಳವನೆಂದೇ ತಿಳಿದುಕೊ. ತಮೋಗುಣ. ರಜೋಗುಣ ಮತ್ತು ಸತ್ತ್ವಗುಣಗಳು ಕ್ಷೇತ್ರಜ್ಞನಾದ ಜೀವನ ಗುಣಗಳೆಂಬುದನ್ನೂ ತಿಳಿ.

ಸಚೇತನಂ ಜೀವಗುಣಂ ವದನ್ತಿ
ಸ ಚೇಷ್ಟತೇ ಚೇಷ್ಟಯತೇ ಚ ಸರ್ವಮ್ ।
ಅತಃ ಪರಂ ಕ್ಷೇತ್ರವಿದೋ ವದನ್ತಿ
ಪ್ರಾವರ್ತಯದ್ಯೋ ಭುವನಾನಿ ಸಪ್ತ ॥೨೬॥

ಜೀವನ ಗುಣಗಳಾದ ದೇಹೇಂದ್ರಿಯ–ಮನಸ್ಸುಗಳು ಜೀವನಿಂದ ಚೇತನಯುಕ್ತಗಳಾದುವೆಂದು ಹೇಳುತ್ತಾರೆ. ಜೀವವು ತಾನೂ ಕಾರ್ಯಶೀಲವಾಗಿ ದೇಹೇಂದ್ರಿಯ–ಮನಸ್ಸುಗಳನ್ನೂ ಕಾರ್ಯಶೀಲಗಳನ್ನಾಗಿ ಮಾಡುತ್ತದೆ. ಶರೀರತತ್ತ್ವವನ್ನು ತಿಳಿದ ವಿದ್ವಾಂಸರು ಕ್ಷೇತ್ರಜ್ಞನಾದ ಜೀವನಿಗಿಂತಲೂ ಸಪ್ತಲೋಕಗಳ ಸೃಷ್ಟಿಗೆ ಕಾರಣನಾದ ಅಂತರಾತ್ಮನಾದ ಪರಮಾತ್ಮನೇ ಶ್ರೇಷ್ಠನೆಂದು ಹೇಳುತ್ತಾರೆ.

(ಶ್ರೀಗೀತಾ- ಅ.೧೫. ಶ್ಲೋ. ೧೬-೧೭)

ನ ಜೀವನಾಶೋऽಸ್ತಿ ಹಿ ದೇಹಭೇದೇ
ಮಿಥ್ಯೈತದಾಹುರ್ಮೃತ ಇತ್ಯಬುದ್ಧಾಃ ।
ಜೀವಸ್ತು ದೇಹಾನ್ತರಿತಃ ಪ್ರಯಾತಿ
ದಶಾರ್ಧತೈವಾಸ್ಯ ಶರೀರಭೇದಃ ॥೨೭॥

ದೇಹವು ನಾಶವಾದರೂ ಜೀವವು ನಾಶವಾಗುವುದಿಲ್ಲ. ಅಜ್ಞಾನಿಗಳಾದವರು ಮಾತ್ರವೇ (ದೇವದತ್ತನಾಮಕನಾದ) ಜೀವನು ಮೃತನಾದನೆಂದು ಹೇಳುತ್ತಾರೆ. ಈ ಮಾತು ಸುಳ್ಳು. ಜೀವವೆಂದಿಗೂ ನಾಶಹೊಂದುವುದಿಲ್ಲ. ಪಂಚಭೂತಗಳ ವೈಪರೀತ್ಯದಿಂದ ದೇಹವು ನಾಶವಾದರೆ ಜೀವವು ಆ ದೇಹವನ್ನು ಬಿಟ್ಟು ಬೇರೊಂದು ದೇಹದಲ್ಲಿ ಸೇರಿಕೊಳ್ಳುತ್ತದೆ. ಸಂಘಟಿಸಿದ್ದ ಪಂಚಭೂತಗಳ ಪ್ರತ್ಯೇಕತೆಯೇ ಶರೀರದ ವಿನಾಶವಾಗಿದೆ.

(ಶ್ರೀಗೀತೆ-ಅ.೨, ಶ್ಲೋಕ ೧೮-೧೯)

ಏವಂ ಸರ್ವೇಷು ಭೂತೇಷು ಗೂಢಶ್ಚರತಿ ಸಂವೃತಃ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ತತ್ತ್ವದರ್ಶಿಭಿಃ ॥೨೮॥

ಹೀಗೆ ಆತ್ಮನು (ಜೀವನು) ಎಲ್ಲ ಪ್ರಾಣಿಗಳ ಹೃದಯಗುಹೆಯಲ್ಲಿಯೂ ನಿಗೂಢನಾಗಿ (ಪ್ರಾಣಿಗಳ ದೇಹೇಂದ್ರಿಯಗಳಲ್ಲಿ ಲೀನನಾಗಿ) ಅಜ್ಞಾನದಿಂದ ಆವೃತನಾಗಿ ಸಂಚರಿಸುತ್ತಿರುತ್ತಾನೆ. ತತ್ತ್ವವನ್ನು ತಿಳಿದವರು ಶ್ರೇಷ್ಠವಾದ ಮತ್ತು ಸೂಕ್ಷ್ಮವಾದ ಬುದ್ಧಿಯಿಂದ ಅವನನ್ನು ಕಂಡು ಕೊಳ್ಳುತ್ತಾರೆ.

ತಂ ಪೂರ್ವಾಪರರಾತ್ರೇಷು ಯುಞ್ಜಾನಃ ಸತತಂ ಬುಧಃ ।
ಲಘ್ವಾಹಾರೋ ವಿಶುದ್ಧಾತ್ಮಾ ಪಶ್ಯತ್ಯಾತ್ಮಾನಮಾತ್ಮನಿ ॥೨೯॥

ಲಘುವಾದ (ದೇಹಧಾರಣೆಗೆ ಸಾಕಾಗುವಷ್ಟು) ಆಹಾರವನ್ನು ಸೇವಿಸುತ್ತಾ, ರಾತ್ರಿಯ ಪ್ರಥಮ-ಚರಮಯಾಮಗಳಲ್ಲಿ ಧ್ಯಾನಯೋಗದಲ್ಲಿಯೇ ಆಸಕ್ತನಾಗಿರುತ್ತಾ, ಶುದ್ಧವಾದ ಮನಸ್ಸನ್ನು ಹೊಂದಿರುವ ವಿದ್ವಾಂಸನು ತನ್ನಲ್ಲಿಯೇ ಆ ಪರಮಾತ್ಮನನ್ನು ಕಂಡುಕೊಳ್ಳುತ್ತಾನೆ.

ಚಿತ್ತಸ್ಯ ಹಿ ಪ್ರಸಾದೇನ ಹಿತ್ವಾ ಕರ್ಮ ಶುಭಾಶುಭಮ್ ।
ಪ್ರಸನ್ನಾತ್ಮಾತ್ಮನಿ ಸ್ಥಿತ್ವಾ ಸುಖಮಾನನ್ತ್ಯಮಶ್ನುತೇ ॥೩೦॥

ಮನಸ್ಸಿನ ಪ್ರಸನ್ನತೆಯಿಂದ (ನಿರ್ವಿಕಾರವಾದ ಮನಸ್ಸಿನಿಂದ ಕೂಡಿ) ಶುಭಾಶುಭಕರ್ಮಗಳೆರಡನ್ನೂ ಪರಿತ್ಯಜಿಸಿ ಅಂತರಾತ್ಮನಲ್ಲಿಯೇ ಸಂಶ್ಲಿಷ್ಟ ವಾದ ಮನಸ್ಸುಳ್ಳ ಪ್ರಸನ್ನಾತ್ಮನಾದ ಜ್ಞಾನಿಯು ಅನಂತವಾದ ಸುಖವನ್ನು ಅನುಭವಿಸುತ್ತಾನೆ. (ಶ್ರೀಗೀತೆ ಅ.೨, ಶ್ಲೋಕ ೬೫.)

ಮಾನಸೋಽಗ್ನಿಃ ಶರೀರೇಷು ಜೀವ ಇತ್ಯಭಿಧೀಯತೇ ।
ಸೃಷ್ಟಿಃ ಪ್ರಜಾಪತೇರೇಷಾ ಭೂತಾಧ್ಯಾತ್ಮವಿನಿಶ್ಚಯೇ ॥೩೧॥

ಪ್ರಾಣಿಗಳ ಶರೀರಗಳಲ್ಲಿ ಮನಸ್ಸಿಗೆ ಸಂಬಂಧಿಸಿದಂತೆ ಇರುವಅಗ್ನಿಯು ಜೀವ ಅಥವಾ ಚೈತನ್ಯವೆಂದು ಕರೆಯಲ್ಪಡುತ್ತದೆ. ಅಧ್ಯಾತ್ಮವನ್ನು ನಿಶ್ಚಯಿಸಿ ಹೇಳುವುದರಲ್ಲಿ ಪ್ರಜಾಪತಿಯ ಈ ಸೃಷ್ಟಿಕರ್ಮವು ಉಕ್ತವಾಗಿದೆ."

ಗ೮೭ನೆಯ ಅಧ್ಯಾಯವು ಮುಗಿಯಿತು.

ಗ೮೮ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವರ್ಣವಿಭಾಗಪೂರ್ವಕವಾಗಿ ಮನುಷ್ಯರ ಮತ್ತು ಸಮಸ್ತಪ್ರಾಣಿಗಳ ಉತ್ಪತ್ತಿಯ ವರ್ಣನೆ

ಯುಧಿಷ್ಠಿರ! ಭೃಗುವು ಮುಂದುವರಿದು ಹೇಳುತ್ತಾನೆ :

ಅಸೃಜದ್ಬ್ರಾಹ್ಮಣಾನೇವ ಪೂರ್ವಂ ಬ್ರಹ್ಮಾ ಪ್ರಜಾಪತೀನ್ ।
ಆತ್ಮತೇಜೋಭಿನಿರ್ವೃತ್ತಾನ್ಭಾಸ್ಕರಾಗ್ನಿಸಮಪ್ರಭಾನ್ ॥೧॥

"ಬ್ರಹ್ಮನು ಸೃಷ್ಟಿಯ ಪ್ರಾರಂಭದಲ್ಲಿ ತಮ್ಮ ತೇಜಸ್ಸಿನಿಂದ ಪರಿ ಪೂರ್ಣತೆಯನ್ನು ಹೊಂದಿದ್ದ, ಸೂರ್ಯಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ, ಬ್ರಹ್ಮನಿಷ್ಠರಾದ ಮರೀಚಿಯೇ ಮೊದಲಾದ ಪ್ರಜಾಪತಿಗಳನ್ನು ಸೃಷ್ಟಿಸಿದನು.

ತತಃ ಸತ್ಯಂ ಚ ಧರ್ಮಂ ಚ ತಪೋ ಬ್ರಹ್ಮ ಚ ಶಾಶ್ವತಮ್ ।
ಆಚಾರಂ ಚೈವ ಶೌಚಂ ಚ ಸ್ವರ್ಗಾಯ ವಿದಧೇ ಪ್ರಭುಃ ॥೨॥

ಬಳಿಕ ಭಗವಂತನಾದ ಬ್ರಹ್ಮನು ಸ್ವರ್ಗಪ್ರಾಪ್ತಿಗೆ ಸಾಧಕಗಳಾದ ಸತ್ಯ, ಯಜ್ಞವೇ ಮೊದಲಾದ ಧರ್ಮಗಳು, ಕೃಚ್ಛ್ರ-ಚಾಂದ್ರಾಯಣಾದಿ

ತಪಸ್ಸುಗಳು, ಸನಾತನವಾದ ವೇದಗಳು, ಸ್ನಾನಾದಿ ಆಚಾರಗಳು, ಪ್ರಾಯಶ್ಚಿತ್ತಾದಿ ಶೌಚಗಳು–ಈ ಎಲ್ಲವನ್ನೂ ಸೃಷ್ಟಿಸಿದನು.

ದೇವದಾನವಗನ್ಧರ್ವಾ ದೈತ್ಯಾಸುರಮಹೋರಗಾಃ ।
ಯಕ್ಷರಾಕ್ಷಸನಾಗಾಶ್ಚ ಪಿಶಾಚಾ ಮನುಜಾಸ್ತಥಾ ॥೩॥

ಬಳಿಕ ದೇವ-ದಾನವ-ಗಂಧರ್ವರನ್ನೂ, ದೈತ್ಯಾಸುರ-ಮಹಾಸರ್ಪ ಗಳನ್ನೂ, ಯಕ್ಷ-ರಾಕ್ಷಸ- ನಾಗ-ಪಿಶಾಚರನ್ನೂ, ಮನುಷ್ಯರನ್ನೂ ಸೃಷ್ಟಿ ಸಿದನು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚ ದ್ವಿಜಸತ್ತಮ ।
ಯೇ ಚಾನ್ಯೇ ಭೂತಸಙ್ಘಾನಾಂ ಸಙ್ಘಾಸ್ತಾಂಶ್ಚಾಪಿ ನಿರ್ಮಮೇ ॥೪॥

ಅನಂತರ ಬ್ರಹ್ಮನು ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೆಂಬ ನಾಲ್ಕು ವರ್ಣಗಳನ್ನೂ ಸೃಷ್ಟಿಸಿದನು. ಪ್ರಾಣಿಗಳ ಸಮುದಾಯಗಳಲ್ಲಿ ಬೇರೆ ಯಾವ ಸಮೂಹಗಳಿವೆಯೋ ಅವುಗಳೆಲ್ಲವನ್ನೂ ಸೃಷ್ಟಿಸಿದನು.

ಬ್ರಾಹ್ಮಣಾನಾಂ ಸಿತೋ ವರ್ಣಃ ಕ್ಷತ್ರಿಯಾಣಾಂ ತು ಲೋಹಿತಃ ।
ವೈಶ್ಯಾನಾಂ ಪೀತಕೋ ವರ್ಣಃ ಶೂದ್ರಾಣಾಮಸಿತಸ್ತಥಾ ॥೫॥

ಬ್ರಾಹ್ಮಣರನ್ನು ಶ್ವೇತವರ್ಣೀಯರನ್ನಾಗಿಯೂ, ಕ್ಷತ್ರಿಯರನ್ನೂ ರಕ್ತ ವರ್ಣೀಯರನ್ನಾಗಿಯೂ, ವೈಶ್ಯರನ್ನು ಪೀತ (ಹಳದಿ) ವರ್ಣೀಯರನ್ನಾ ಗಿಯೂ, ಶೂದ್ರರನ್ನು ಕೃಷ್ಣವರ್ಣೀಯರನ್ನಾಗಿಯೂ ಬ್ರಹ್ಮನು ಸೃಷ್ಟಿಸಿದನು. (ಬ್ರಾಹ್ಮಣರು ಸತ್ತ್ವಗುಣಪ್ರಧಾನರಾದರು. ಕ್ಷತ್ರಿಯರು ರಜೋಗುಣ ಪ್ರಧಾನರಾದರು. ವೈಶ್ಯರು ರಜಸ್ಸು ಮತ್ತು ತಮಸ್ಸುಗಳಿಂದ ಮಿಶ್ರಿತವಾದ ಗುಣವುಳ್ಳವರಾದರು. ಶೂದ್ರರು ತಮೋಗುಣಪ್ರಧಾನರಾದರು.)"

ಭರದ್ವಾಜನು ಹೇಳುತ್ತಾನೆ :

ಚಾತುರ್ವರ್ಣ್ಯಸ್ಯ ವರ್ಣೇನ ಯದಿ ವರ್ಣೋ ವಿಭಿದ್ಯತೇ ।
ಸರ್ವೇಷಾಂ ಖಲು ವರ್ಣಾನಾಂ ದೃಶ್ಯತೇ ವರ್ಣಸಂಕರಃ ॥೬॥

"ಭೃಗುಮಹರ್ಷೇ! ನೀನು ಹೇಳಿದಂತೆ ಶ್ವೇತ-ರಕ್ತಾದಿವರ್ಣಗಳಿಂದ

ಚಾತುರ್ವರ್ಣ್ಯದಲ್ಲಿ ವರ್ಣವಿಭಾಗವನ್ನು ಮಾಡಿರುವುದಾದರೆ–ಎಲ್ಲ ವರ್ಣಗಳಲ್ಲಿಯೂ ವರ್ಣಸಂಕರವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. (ಕಪ್ಪಾದ ಬ್ರಾಹ್ಮಣರೂ ಇದ್ದಾರೆ. ಬಿಳಿಯ ಶೂದ್ರರೂ ಇದ್ದಾರೆ. ಕೆಂಪು ಬಣ್ಣದ ವೈಶ್ಯರೂ ಇದ್ದಾರೆ. ಪೀತವರ್ಣದ ಕ್ಷತ್ರಿಯರೂ ಇದ್ದಾರೆ.)

ಕಾಮಃ ಕ್ರೋಧೋ ಭಯಂ ಲೋಭಃ ಶೋಕಶ್ಚಿನ್ತಾ ಕ್ಷುಧಾ ಶ್ರಮಃ ।
ಸರ್ವೇಷಾಂ ನಃ ಪ್ರಭವತಿ ಕಸ್ಮಾದ್ವರ್ಣೋ ವಿಭಿದ್ಯತೇ ॥೭॥

ಕಾಮ, ಕ್ರೋಧ, ಭಯ, ಲೋಭ, ಶೋಕ, ಚಿಂತೆ, ಹಸಿವು ಮತ್ತು ಬಳಲಿಕೆ–ಇವುಗಳು ನಮ್ಮೆಲ್ಲರಿಗೂ ಸಮಾನವಾಗಿಯೇ ಉಂಟಾಗುತ್ತವೆ. ಹೀಗಿರುವಾಗ ವರ್ಣಭೇದಕ್ಕೆ ಕಾರಣವೇನು?

ಸ್ವೇದಮೂತ್ರಪುರೀಷಾಣಿ ಶ್ಲೇಷ್ಮಾ ಪಿತ್ತಂ ಸಶೋಣಿತಮ್ ।
ತನುಃ ಕ್ಷರತಿ ಸರ್ವೇಷಾಂ ಕಸ್ಮಾದ್ವರ್ಣೋ ವಿಭಜ್ಯತೇ ॥೮॥

ಎಲ್ಲ ಮಾನವರ ಶರೀರಗಳಿಂದಲೂ ಬೆವರೂ, ಮಲ-ಮೂತ್ರಗಳೂ, ಕಫವೂ, ಪಿತ್ತರಸವೂ ಮತ್ತು ರಕ್ತವೂ ಹೊರಬರುತ್ತವೆ. ಹೀಗಿರುವಾಗ ಜನರನ್ನು ನಾಲ್ಕು ವರ್ಣಗಳನ್ನಾಗಿ ವಿಭಾಗಿಸುವ ಕಾರಣವೇನು?

ಜಙ್ಗಮಾನಾಮಸಂಖ್ಯೇಯಾಃ ಸ್ಥಾವರಾಣಾಂ ಚ ಜಾತಯಃ ।
ತೇಷಾಂ ವಿವಿಧವರ್ಣಾನಾಂ ಕುತೋ ವರ್ಣವಿನಿಶ್ಚಯಃ ॥೯॥

ಪಶು-ಪಕ್ಷಿ-ಮನುಷ್ಯಾದಿ ಜಂಗಮಪ್ರಾಣಿಗಳಲ್ಲಿಯೂ, ವೃಕ್ಷವೇ ಮೊದಲಾದ ಸ್ಥಾವರಪ್ರಾಣಿಗಳಲ್ಲಿಯೂ ಅಸಂಖ್ಯಾತವಾದ ಜಾತಿಗಳಿವೆ. ಅವುಗಳೆಲ್ಲವೂ ನಾನಾವಿಧವಾದ ಬಣ್ಣಗಳಿಂದ ಕೂಡಿವೆ. ಅವುಗಳಲ್ಲಿ ಬ್ರಾಹ್ಮಣಾದಿ ವರ್ಣಗಳನ್ನು ನಿಶ್ಚಯಿಸುವುದು ಹೇಗೆ?”

ಭೃಗುವು ಹೇಳುತ್ತಾನೆ :

ನ ವಿಶೇಷೋಽಸ್ತಿ ವರ್ಣಾನಾಂ ಸರ್ವಂ ಬ್ರಾಹ್ಮಮಿದಂ ಜಗತ್ ।
ಬ್ರಹ್ಮಣಾ ಪೂರ್ವಸೃಷ್ಟಂ ಹಿ ಕರ್ಮಭಿರ್ವರ್ಣತಾಂ ಗತಮ್ ॥೧೦॥

ಭರದ್ವಾಜ! ಹಿಂದೆ ವರ್ಣಗಳಲ್ಲಿ ಯಾವ ಭೇದವೂ ಇರಲಿಲ್ಲ. ಬ್ರಹ್ಮನು ಸೃಷ್ಟಿಸಿದುದರಿಂದ ಈ ಪ್ರಪಂಚವೆಲ್ಲವೂ ಬ್ರಹ್ಮಮಯವೇ ಆಗಿದ್ದಿತು. (ಬ್ರಾಹ್ಮಣರಿಂದಲೇ ತುಂಬಿದ್ದಿತು.) ಮುಂದೆ ಅವರವರ ಕರ್ಮಗಳಿಗೆ ಅನುಗುಣವಾಗಿ ವರ್ಣಗಳ ವ್ಯವಸ್ಥೆಯಾಯಿತು.

ಕಾಮಭೋಗಪ್ರಿಯಾಸ್ತೀಕ್ಷ್ಣಾಃ ಕ್ರೋಧನಾಃ ಪ್ರಿಯಸಾಹಸಾಃ ।
ತ್ಯಕ್ತಸ್ವಧರ್ಮಾ ರಕ್ತಾಂಗಾಸ್ತೇ ದ್ವಿಜಾಃ ಕ್ಷತ್ರತಾಂ ಗತಾಃ ॥೧೧॥

ಯಾವ ಬ್ರಾಹ್ಮಣರು–ತಮ್ಮ ಬ್ರಾಹ್ಮಣೋಚಿತವಾದ ಧರ್ಮಗಳನ್ನು ಪರಿತ್ಯಜಿಸಿ, ಕಾಮೋಪಭೋಗಗಳಲ್ಲಿಯೇ ಆಸಕ್ತರಾಗಿ, ತೀಕ್ಷ್ಣವಾದ ಸ್ವಭಾವವುಳ್ಳವರಾಗಿ, ಕೋಪಿಷ್ಠರಾಗಿ, ಸಾಹಸಕಾರ್ಯಗಳನ್ನು ಮಾಡುವುದರಲ್ಲಿಯೇ ಆಸಕ್ತಿಯುಳ್ಳವರಾದರೋ–ಅಂತಹ ಬ್ರಾಹ್ಮಣರೆಲ್ಲರೂ ಕ್ಷತ್ರಿಯರಾದರು. ಅವರ ವರ್ಣವೂ ಕೆಂಪಾಯಿತು. (ಅವರು ರಜೋಗುಣ ಪ್ರಧಾನರಾದರು.)

ಗೋಭ್ಯೋ ವೃತ್ತಿಂ ಸಮಾಸ್ಥಾಯ ಪೀತಾಃ ಕೃಷ್ಯುಪಜೀವಿನಃ ।
ಸ್ವಧರ್ಮಾನ್ನಾನುತಿಷ್ಠಂತಿ ತೇ ದ್ವಿಜಾ ವೈಶ್ಯತಾಂ ಗತಾಃ ॥೧೨॥

ಯಾವ ಬ್ರಾಹ್ಮಣರು–ಸ್ವಧರ್ಮೋಚಿತವಾದ ಕರ್ಮಾನುಷ್ಠಾನಗಳನ್ನು ಮಾಡದೇ ಗೋವುಗಳ ಪಾಲನೆಯಿಂದಲೂ ಮತ್ತು ಕೃಷಿಯಿಂದಲೂ ತಮ್ಮ ಜೀವನವನ್ನು ನಿರ್ವಹಿಸಲು ಪ್ರಾರಂಭಿಸಿದರೋ–ಅಂತಹ ಬ್ರಾಹ್ಮಣರು ವೈಶ್ಯರಾದರು. ಅವರ ಬಣ್ಣವೂ ಸುವರ್ಣದ ಬಣ್ಣವಾಯಿತು. (ಅವರು ರಜಸ್ತಮೋಮಿಶ್ರಿತವಾದ ಗುಣಗಳುಳ್ಳವರಾದರು.)

ಹಿಂಸಾನೃತಪ್ರಿಯಾ ಲುಬ್ಧಾಃ ಸರ್ವಕರ್ಮೋಪಜೀವಿನಃ ।
ಕೃಷ್ಣಾ ಶೌಚಪರಿಭ್ರಷ್ಟಾಸ್ತೇ ದ್ವಿಜಾಃ ಶೂದ್ರತಾಂ ಗತಾಃ ॥೧೩॥

ಯಾವ ಬ್ರಾಹ್ಮಣರು ಶೌಚ ಮತ್ತು ಸದಾಚಾರಗಳಿಂದ ಭ್ರಷ್ಟರಾಗಿ, ಹಿಂಸೆಮಾಡುವುದರಲ್ಲಿ ಮತ್ತು ಸುಳ್ಳುಹೇಳುವುದರಲ್ಲಿ ಆಸಕ್ತರಾಗಿ, ಲೋಭವಶರಾಗಿ, ನಾನಾಪ್ರಕಾರವಾದ ಕುತ್ಸಿತಕರ್ಮಗಳಿಂದ ಜೀವಿಕೆಯನ್ನು ನಡೆ

ಸಲು ಪ್ರಾರಂಭಿಸಿದರೋ–ಅಂತಹ ಬ್ರಾಹ್ಮಣರು ಶೂದ್ರರಾದರು. ಅವರ ಬಣ್ಣವೂ ಕಪ್ಪಾಯಿತು. (ಅವರು ತಮೋಗುಣಪ್ರಧಾನರಾದರು.)

ಇತ್ಯೇತೈಃ ಕರ್ಮಭಿರ್ವ್ಯಸ್ತಾ ದ್ವಿಜಾ ವರ್ಣಾನ್ತರಂ ಗತಾಃ ।
ಧರ್ಮೋ ಯಜ್ಞಕ್ರಿಯಾ ತೇಷಾಂ ನಿತ್ಯಂ ನ ಪ್ರತಿಷಿಧ್ಯತೇ ॥೧೪॥

ಇವೇ ಮೊದಲಾದ ಕರ್ಮಗಳಿಂದ ಬ್ರಾಹ್ಮಣ್ಯದಿಂದ ಪ್ರತ್ಯೇಕಿಸಲ್ಪಟ್ಟ ಬ್ರಾಹ್ಮಣರು ಕ್ಷತ್ರವೇ ಮೊದಲಾದ ವರ್ಣಾಂತರಗಳನ್ನು ಹೊಂದಿದರು. ಆದರೆ ಅವರೆಲ್ಲರಿಗೂ ಧರ್ಮಾನುಷ್ಠಾನವಾಗಲೀ ಯಜ್ಞಕ್ರಿಯೆಗಳಾಗಲೀ ನಿಷೇಧಿಸಲ್ಪಟ್ಟಿರುವುದಿಲ್ಲ.

ಇತ್ಯೇತೇ ಚತುರೋ ವರ್ಣಾ ಯೇಷಾಂ ಬ್ರಾಹ್ಮೀ ಸರಸ್ವತೀ ।
ವಿಹಿತಾ ಬ್ರಹ್ಮಣಾ ಪೂರ್ವಂ ಲೋಭಾತ್ತ್ವಜ್ಞಾನತಾಂ ಗತಾಃ ॥೧೫॥

ಈ ಪ್ರಕಾರಗಳಿಂದ ಮೊದಲು ಬ್ರಾಹ್ಮಣರಾಗಿದ್ದವರೆಲ್ಲರೂ ಕರ್ಮಾನುಗುಣವಾಗಿ ನಾಲ್ಕು ವರ್ಣದವರಾಗಿ ವಿಭಾಗಿಸಲ್ಪಟ್ಟರು. ಬ್ರಹ್ಮನು ಈ ನಾಲ್ಕು ವರ್ಣದವರಿಗೂ ವೇದವಾಣಿಯನ್ನು ಮೊದಲು ಪ್ರಕಟಪಡಿಸಿದನು. ಆದರೆ ಲೋಭದ ಕಾರಣದಿಂದ ಅಜ್ಞಾನಭಾವವನ್ನು ಹೊಂದಿದವರು ವೇದಾಧ್ಯಯನಕ್ಕೆ ಅನಧಿಕಾರಿಗಳಾದರು.

ಬ್ರಾಹ್ಮಣಾ ಬ್ರಹ್ಮತನ್ತ್ರಸ್ಥಾಸ್ತಪಸ್ತೇಷಾಂ ನ ನಶ್ಯತಿ ।
ಬ್ರಹ್ಮ ಧಾರಯತಾಂ ನಿತ್ಯಂ ವ್ರತಾನಿ ನಿಯಮಾಂಸ್ತಥಾ ॥೧೬॥

ಯಾವ ಬ್ರಾಹ್ಮಣರು ವೇದಗಳ ಆಜ್ಞೆಗೆ ಅಧೀನರಾಗಿ ವೇದೋಕ್ತವಾದ ಎಲ್ಲ ಕರ್ಮಗಳನ್ನೂ ಮಾಡುತ್ತಿರುವರೋ, ವೇದವನ್ನು ಧಾರಣೆ ಮಾಡಿಕೊಂಡಿರುವರೋ (ಸದಾ ಸ್ಮೃತಿಯಲ್ಲಿಯೇ ಇಟ್ಟುಕೊಂಡಿರುವರೋ), ವ್ರತಾದಿಗಳನ್ನು ಮಾಡುತ್ತಾ ನಿಯಮಾನುಷ್ಠಾನಪರರಾಗಿರುವರೋ–ಅಂತಹ ಬ್ರಾಹ್ಮಣರ ತಪಸ್ಸು ಎಂದಿಗೂ ನಷ್ಟವಾಗುವುದಿಲ್ಲ.

ಬ್ರಹ್ಮ ಚೈವ ಪರಂ ಸೃಷ್ಟಂ ಯೇ ನ ಜಾನನ್ತಿ ತೇಽದ್ವಿಜಾಃ ।
ತೇಷಾಂ ಬಹುವಿಧಾಸ್ತ್ವನ್ಯಾಸ್ತತ್ರ ತತ್ರ ಹಿ ಜಾತಯಃ ॥೧೭॥

ಈ ಎಲ್ಲವನ್ನೂ ಸೃಷ್ಟಿಸಿರುವ ಪರಬ್ರಹ್ಮನನ್ನು ಯಾರು ತಿಳಿದಿಲ್ಲವೋ ಅವರು ವರ್ಣತಃ ಬ್ರಾಹ್ಮಣರೇ ಆಗಿದ್ದರೂ ಅಬ್ರಾಹ್ಮಣರೇ ಸರಿ. ಅಂತಹ

ಜನರಿಗೆ ನಾನಾಪ್ರಕಾರವಾದ ಬೇರೆ ಬೇರೆ ಜಾತಿಗಳು ಲಭ್ಯವಾಗುತ್ತವೆ. (ವಿಧ-ವಿಧವಾದ ಜಾತಿಗಳಲ್ಲಿ ಅವರು ಜನ್ಮತಾಳುತ್ತಾರೆ.)

ಪಿಶಾಚಾ ರಾಕ್ಷಸಾಃ ಪ್ರೇತಾ ವಿವಿಧಾ ಮ್ಲೇಚ್ಛಜಾತಯಃ ।
ಪ್ರಣಷ್ಟಜ್ಞಾನವಿಜ್ಞಾನಾಃ ಸ್ವಚ್ಛನ್ದಾಚಾರಚೇಷ್ಟಿತಾಃ ॥೧೮॥

ಜ್ಞಾನ-ವಿಜ್ಞಾನಗಳಿಂದ ಹೀನರಾದ, ಸ್ವೇಚ್ಛಾಚಾರಿಗಳಾದ ಜನರು ಪಿಶಾಚ-ರಾಕ್ಷಸ-ಪ್ರೇತರಾಗಿಯೂ ವಿಧ-ವಿಧವಾದ ಮ್ಲೇಚ್ಛಜಾತೀಯರಾಗಿಯೂ ಜನ್ಮತಾಳುತ್ತಾರೆ.

ಪ್ರಜಾ ಬ್ರಾಹ್ಮಣಸಂಸ್ಕಾರಾಃ ಸ್ವಕರ್ಮಕೃತನಿಶ್ಚಯಾಃ ।
ಋಷಿಭಿಃ ಸ್ವೇನ ತಪಸಾ ಸೃಜ್ಯನ್ತೇ ಚಾಪರೇ ಪರೈಃ ॥೧೯॥

ಹಿಂದಿನ ಋಷಿಗಳು–ತಮ್ಮ ತಪಸ್ಸಿನ ಬಲದಿಂದ ಬ್ರಾಹ್ಮಣಸಂಸ್ಕಾರ ಸಂಪನ್ನರಾದ ಧರ್ಮಕರ್ಮಗಳನ್ನು ಮಾಡಿಯೇತೀರಬೇಕೆಂಬ ದೃಢನಿಶ್ಚಯದಿಂದ ಕೂಡಿದ್ದ ಪ್ರಜೆಗಳನ್ನು ಸೃಷ್ಟಿಸಿದರು. ಬೇರೆಯವರು ಇತರರಿಂದ ಸೃಷ್ಟಿಸಲ್ಪಟ್ಟರು.

ಆದಿದೇವಸಮುದ್ಭೂತಾ ಬ್ರಹ್ಮಮೂಲಾಕ್ಷಯಾವ್ಯಯಾ ।
ಸಾ ಸೃಷ್ಟಿರ್ಮಾನಸೀ ನಾಮ ಧರ್ಮತನ್ತ್ರಪರಾಯಣಾ ॥೨೦॥

ಬ್ರಹ್ಮಮೂಲವೂ ಅಕ್ಷಯವೂ ಅವಿಕಾರಿಯೂ ಧರ್ಮತಂತ್ರವನ್ನೇ ಆಶ್ರಯಿಸಿರುವುದೂ ಆದ ಯಾವ ಸೃಷ್ಟಿಯು ಆದಿದೇವನಾದ ಬ್ರಹ್ಮನ ಮನಸ್ಸಿನಲ್ಲಿ ಉತ್ಪನ್ನವಾಯಿತೋ ಆ ಸೃಷ್ಟಿಗೆ ಮಾನಸೀಸೃಷ್ಟಿಯೆಂದು ಹೆಸರು.”

ಗಿಲಲನೆಯ ಅಧ್ಯಾಯವು ಮುಗಿಯಿತು.

ಗಿ೮೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾಲ್ಕು ವರ್ಣಗಳವರ ಕರ್ಮಗಳು : ಸದಾಚಾರದ ವರ್ಣನೆ : ವೈರಾಗ್ಯದಿಂದ ಪರಬ್ರಹ್ಮಪ್ರಾಪ್ತಿಯ ಕಥನ

ಭರದ್ವಾಜನು ಪ್ರಶ್ನಿಸುತ್ತಾನೆ :

ಬ್ರಾಹ್ಮಣಃ ಕೇನ ಭವತಿ ಕ್ಷತ್ರಿಯೋ ವಾ ದ್ವಿಜೋತ್ತಮ ।
ವೈಶ್ಯಃ ಶೂದ್ರಶ್ಚ ವಿಪ್ರರ್ಷೇ ತದ್ಬ್ರೂಹಿ ವದತಾಂ ವರ ॥೧॥

"ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ದ್ವಿಜಸತ್ತಮನೇ! ವಿಪ್ರರ್ಷಿಯೇ! ಯಾವ ಕರ್ಮದಿಂದ ಬ್ರಾಹ್ಮಣನಾಗುತ್ತಾನೆ? ಯಾವುದರಿಂದ ಕ್ಷತ್ರಿಯನಾಗುತ್ತಾನೆ? ಯಾವುದರಿಂದ ವೈಶ್ಯ-ಶೂದ್ರರಾಗುತ್ತಾರೆ? ಈ ವಿಷಯವನ್ನು ನನಗೆ ಹೇಳು."

ಭೃಗುವು ಹೇಳುತ್ತಾನೆ :

ಜಾತಕರ್ಮಾದಿಭಿರ್ಯಸ್ತು ಸಂಸ್ಕಾರೈಃ ಸಂಸ್ಕೃತಃ ಶುಚಿಃ ।
ವೇದಾಧ್ಯಯನಸಮ್ಪನ್ನಃ ಷಟ್ಸು ಕರ್ಮಸ್ವವಸ್ಥಿತಃ ॥೨॥

ಶೌಚಾಚಾರಸ್ಥಿತಃ ಸಮ್ಯಗ್ವಿಘಸಾಶೀ ಗುರುಪ್ರಿಯಃ ।
ನಿತ್ಯವ್ರತೀ ಸತ್ಯಪರಃ ಸ ವೈ ಬ್ರಾಹ್ಮಣ ಉಚ್ಯತೇ ॥೩॥

"ಭರದ್ವಾಜ! ಯಾವನು ಜಾತಕರ್ಮ-ನಾಮಕರಣಾದಿ ಸಂಸ್ಕಾರಗಳಿಂದ ಸಂಸ್ಕೃತನಾಗಿರುವನೋ, ಶುಚಿಯಾಗಿರುವನೋ (ಅಂತಃಶುದ್ಧಿ-ಬಹಿಃಶುದ್ಧಿಗಳಿಂದ ಕೂಡಿರುವನೋ,) ವೇದಾಧ್ಯಯನಸಂಪನ್ನನಾಗಿರುವನೋ, ಅಧ್ಯಯನ-ಅಧ್ಯಾಪನ, ಯಜನ-ಯಾಜನ ಮತ್ತು ದಾನ-ಪ್ರತಿಗ್ರಹಗಳೆಂಬ ಷಟ್ಕರ್ಮಗಳಲ್ಲಿ ಪ್ರತಿಷ್ಠಿತನಾಗಿರುವನೋ ಅಥವಾ ಸಂಧ್ಯಾ, ಸ್ನಾನ, ಜಪ, ಹೋಮ, ದೇವತಾಪೂಜೆ ಮತ್ತು ಅತಿಥಿಸತ್ಕಾರ-ವೈಶ್ವದೇವಗಳೆಂಬ ಷಟ್ಕರ್ಮಗಳಲ್ಲಿ ನಿರತನಾಗಿರುವನೋ, ಶೌಚ-ಸದಾಚಾರಗಳಲ್ಲಿ ನಿರತನಾಗಿರುವನೋ, ಯಜ್ಞಶೇಷವನ್ನು ಸೇವಿಸುವನೋ, ಗುರುಪ್ರಿಯನಾಗಿ, ನಿತ್ಯವೂ ವ್ರತಾನುಷ್ಠಾನಗಳಲ್ಲಿಯೇ ತೊಡಗಿರುವನೋ, ಸತ್ಯನಿಷ್ಠನಾಗಿರುವನೋ–ಅಂತಹವನನ್ನೇ ಬ್ರಾಹ್ಮಣನೆಂದು ಹೇಳುತ್ತಾರೆ.

ಸತ್ಯಂ ದಾನಮಥಾದ್ರೋಹ ಆನೃಶಂಸ್ಯಂ ತ್ರಪಾ ಘೃಣಾ ।
ತಪಶ್ಚ ದೃಶ್ಯತೇ ಯತ್ರ ಸ ಬ್ರಾಹ್ಮಣ ಇತಿ ಸ್ಮೃತಃ ॥೪॥

ಯಾವನಲ್ಲಿ ಸತ್ಯ, ದಾನ, ಅದ್ರೋಹ, ಕಾರುಣ್ಯ, ಲಜ್ಜೆ, ದಯೆ ಮತ್ತು ತಪಸ್ಸು–ಈ ಸದ್ಗುಣಗಳಿರುವುವೋ ಅವನೇ ಬ್ರಾಹ್ಮಣನು.

ಕ್ಷತ್ರಜಂ ಸೇವತೇ ಕರ್ಮ ವೇದಾಧ್ಯಯನಸಂಗತಃ ।
ದಾನಾದಾನರತಿರ್ಯಸ್ತು ಸ ವೈ ಕ್ಷತ್ರಿಯ ಉಚ್ಯತೇ ॥೫॥

ಕ್ಷತ್ರಿಯೋಚಿತವಾದ ಯುದ್ಧಾದಿಕರ್ಮಗಳನ್ನು ಮಾಡುತ್ತಾ ವೇದಾಧ್ಯಯನದಲ್ಲಿಯೂ, ಬ್ರಾಹ್ಮಣರಿಗೆ ದಾನಕೊಡುವುದರಲ್ಲಿಯೂ, ಪ್ರಜೆಗಳಿಂದ ಯಥೋಚಿತವಾದ ತೆರಿಗೆಗಳನ್ನು ತೆಗೆದುಕೊಳ್ಳುವುದರಲ್ಲಿಯೂ ಯಾವನು ನಿರತನಾಗಿರುವನೋ–ಅವನೇ ಕ್ಷತ್ರಿಯನೆಂದು ಕರೆಯಲ್ಪಡುತ್ತಾನೆ.

ವಣಿಜ್ಯಾ ಪಶುರಕ್ಷಾ ಚ ಕೃಷ್ಯಾದಾನರತಿಃ ಶುಚಿಃ ।
ವೇದಾಧ್ಯಯನಸಮ್ಪನ್ನಃ ಸ ವೈಶ್ಯ ಇತಿ ಸಂಜ್ಞಿತಃ ॥೬॥

ವ್ಯಾಪಾರ-ಪಶುಪಾಲನೆ, ಕೃಷಿಯನ್ನು ಮಾಡಿ ಆಹಾರವನ್ನು ಸಂಗ್ರಹಿಸುವುದು ಇವುಗಳಲ್ಲಿ ತೊಡಗಿದ್ದು ಸರ್ವದಾ ಶುಚಿಯಾಗಿ ಯಾವನು ವೇದಾಧ್ಯಯನಸಂಪನ್ನನಾಗಿರುವನೋ–ಅವನು ವೈಶ್ಯನೆಂದು ಕರೆಯಲ್ಪಡುತ್ತಾನೆ.

ಸರ್ವಭಕ್ಷರತಿರ್ನಿತ್ಯಂ ಸರ್ವಕರ್ಮಕರೋಽಶುಚಿಃ ।
ತ್ಯಕ್ತವೇದಸ್ತ್ವನಾಚಾರಃ ಸ ವೈ ಶೂದ್ರ ಇತಿ ಸ್ಮೃತಃ ॥೭॥

ಯಾವನು ವೇದವನ್ನೂ ಸದಾಚಾರವನ್ನೂ ಪರಿತ್ಯಜಿಸಿರುವನೋ, ಯಾವಾಗಲೂ ಭಕ್ಷ್ಯಾಭಕ್ಷ್ಯಗಳೆನ್ನದೇ ಏನನ್ನಾದರೂ ತಿನ್ನಲು ಆಸೆಪಡುವನೋ, ವಿವೇಚನೆಯೇ ಇಲ್ಲದೇ ಎಲ್ಲ ಕಾರ್ಯಗಳನ್ನೂ ಮಾಡುವನೋ, ಯಾವನಿಗೆ ಅಂತಃಶುದ್ಧಿ-ಬಹಿಃಶುದ್ಧಿಗಳಿರುವುದಿಲ್ಲವೋ–ಅಂತಹವನು ಶೂದ್ರನೆಂದು ಕರೆಯಲ್ಪಡುತ್ತಾನೆ.

ಶೂದ್ರೇ ಚೈತದ್ಭವೇಲ್ಲಕ್ಷ್ಯಂ ದ್ವಿಜೇ ತಚ್ಚ ನ ವಿದ್ಯತೇ ।
ನ ವೈ ಶೂದ್ರೋ ಭವೇಚ್ಛೂದ್ರೋ ಬ್ರಾಹ್ಮಣೋ ನ ಚ ಬ್ರಾಹ್ಮಣಃ ॥೮॥

ಮೇಲೆ ಹೇಳಿದ ಸತ್ಯವೇ ಮೊದಲಾದ ಏಳು ಗುಣಗಳು ಶೂದ್ರನಲ್ಲಿದ್ದರೆ ಅವನು ಶೂದ್ರನಾಗಿಯೇ ಉಳಿಯುವುದಿಲ್ಲ. ಅಂತೆಯೇ ಸತ್ಯಾದಿಗುಣಗಳು ಬ್ರಾಹ್ಮಣನಲ್ಲಿರದಿದ್ದರೆ ಅವನು ಬ್ರಾಹ್ಮಣನಾಗಿಯೂ ಉಳಿಯುವುದಿಲ್ಲ.

ಸರ್ವೋಪಾಯೈಸ್ತು ಲೋಭಸ್ಯ ಕ್ರೋಧಸ್ಯ ಚ ವಿನಿಗ್ರಹಃ ।
ಏತತ್ಪವಿತ್ರಂ ಜ್ಞಾನಾನಾಂ ತಥಾ ಚೈವಾತ್ಮಸಂಯಮಃ ॥೯॥

ಎಲ್ಲ ವಿಧವಾದ ಉಪಾಯಗಳಿಂದಲೂ ಲೋಭ-ಕ್ರೋಧಗಳನ್ನು ಜಯಿಸುವುದೂ ಮತ್ತು ಆತ್ಮಸಂಯಮಿಯಾಗಿರುವುದೂ–ಜ್ಞಾನಗಳಲ್ಲಿಯೇ ಪರಮಪವಿತ್ರವಾದ ಜ್ಞಾನವಾಗಿರುತ್ತದೆ.

ವಾರ್ಯೌ ಸರ್ವಾತ್ಮನಾ ತೌ ಹಿ ಶ್ರೇಯೋಘಾತಾರ್ಥಮುಚ್ಛ್ರಿತೌ ।
ನಿತ್ಯಂ ಕ್ರೋಧಾಚ್ಛ್ರಿಯಂ ರಕ್ಷೇತ್ತಪೋ ರಕ್ಷೇಚ್ಚ ಮತ್ಸರಾತ್ ।
ವಿದ್ಯಾಂ ಮಾನಾಪಮಾನಾಭ್ಯಾಮಾತ್ಮಾನಂ ತು ಪ್ರಮಾದತಃ ॥೧೦॥

ಕ್ರೋಧ-ಲೋಭಗಳು ಮನುಷ್ಯನ ಶ್ರೇಯಸ್ಸಿಗೆ ಯಾವಾಗಲೂ ಕುಂದನ್ನುಂಟುಮಾಡುವ ಸಲುವಾಗಿಯೇ ಹುಟ್ಟಿದುವುಗಳಾಗಿವೆ. ಆದುದರಿಂದ ಕ್ರೋಧ-ಲೋಭಗಳನ್ನು ಸರ್ವಪ್ರಕಾರದಿಂದಲೂ ದೂರೀಕರಿಸಬೇಕು. ಕ್ರೋಧವು ಧನಸಂಪತ್ತಿಗೆ ಹಾನಿಯನ್ನುಂಟುಮಾಡುತ್ತದೆ. ಆದುದರಿಂದ ಕ್ರೋಧವನ್ನು ತ್ಯಜಿಸಿ ಧನಸಂಪತ್ತಿಯನ್ನು ರಕ್ಷಿಸಬೇಕು. ಮಾತ್ಸರ್ಯವು ತಪಸ್ಸನ್ನು ಕೆಡಿಸುವುದರಿಂದ ಮಾತ್ಸರ್ಯವನ್ನು ಬಿಟ್ಟು ತಪಸ್ಸನ್ನು ಕಾಪಾಡಬೇಕು. ಮಾನಾಪಮಾನಗಳನ್ನು ತ್ಯಜಿಸಿ ಬ್ರಹ್ಮವಿದ್ಯೆಯನ್ನು ರಕ್ಷಿಸಬೇಕು. ಪ್ರಮಾದವು ಮಾನವನಿಗೆ ಹಾನಿಕರ. ಆದುದರಿಂದ ಮಾನವನು ಎಚ್ಚರತಪ್ಪದೇ ತನ್ನನ್ನು ರಕ್ಷಿಸಿಕೊಳ್ಳಬೇಕು. (ಕ್ರೋಧಾಭಿಭೂತನಾದವನು ಧನವನ್ನು ಸಂಗ್ರಹಿಸಲಾರನು. ಮಾತ್ಸರ್ಯವಿರುವವನು ತಪಸ್ಸನ್ನು ಮಾಡಲಾರನು. ಮಾನಾಪಮಾನಗಳನ್ನು ಸಹಿಸದವನು ಬ್ರಹ್ಮವಿದ್ಯೆಯನ್ನು ಕಲಿಯಲಾರನು. ಪ್ರಮತ್ತನಾದವನು ತನ್ನನ್ನು ರಕ್ಷಿಸಿಕೊಳ್ಳಲಾರನು.)

ಯಸ್ಯ ಸರ್ವೇ ಸಮಾರಮ್ಭಾ ನಿರಾಶೀರ್ಬನ್ಧನಾ ದ್ವಿಜ ।
ತ್ಯಾಗೇ ಯಸ್ಯ ಹುತಂ ಸರ್ವಂ ಸ ತ್ಯಾಗೀ ಸ ಚ ಬುದ್ಧಿಮಾನ್ ॥

ಬ್ರಾಹ್ಮಣೋತ್ತಮನೇ! ಯಾವನ ಎಲ್ಲ ಕಾರ್ಯಗಳೂ ಕಾಮನೆಗಳ ಬಂಧನಗಳಿಂದ ವಿಮುಕ್ತವಾಗಿರುವುವೋ–ಯಾವನು ತ್ಯಾಗವೆಂಬ ಅಗ್ನಿಯಲ್ಲಿ ಕಾಮನೆಗಳೆಲ್ಲವನ್ನೂ ಭಸ್ಮಮಾಡಿರುವನೋ (ಹೋಮ-ದಾನಾದಿಗಳನ್ನು ಫಲತ್ಯಾಗಬುದ್ಧಿಯಿಂದಲೇ ಮಾಡುವನೋ)–ಅವನೇ ತ್ಯಾಗಿಯು ಮತ್ತು ಬುದ್ಧಿವಂತನು.

ಅಹಿಂಸ್ರಃ ಸರ್ವಭೂತಾನಾಂ ಮೈತ್ರಾಯಣಗತಶ್ಚರೇತ್ ।
ಪರಿಗ್ರಹಾನ್ಪರಿತ್ಯಜ್ಯ ಭವೇದ್ಬುದ್ಧ್ಯಾ ಜಿತೇನ್ದ್ರಿಯಃ ।
ಅಶೋಕಂ ಸ್ಥಾನಮಾತಿಷ್ಠೇದಿಹ ಚಾಮುತ್ರ ಚಾಭಯಮ್ ॥೧೨॥

ಯಾವ ಪ್ರಾಣಿಗೂ ಹಿಂಸೆಮಾಡದೇ ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಮೈತ್ರೀಭಾವದಿಂದ ವ್ಯವಹರಿಸಬೇಕು. ಪತ್ನೀ-ಪುತ್ರರ ಮೇಲಿನ ಮಮತೆಯನ್ನೂ, ಸಂಸಾರದಲ್ಲಿನ ಆಸಕ್ತಿಯನ್ನೂ ಪರಿತ್ಯಜಿಸಿ, ಬುದ್ಧಿಯ ಮೂಲಕವಾಗಿ ಇಂದ್ರಿಯಗಳನ್ನು ಜಯಿಸಿ, ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಭಯ-ಶೋಕರಹಿತವಾದ ಸ್ಥಾನವನ್ನು ಹೊಂದಬೇಕು.

ತಪೋನಿತ್ಯೇನ ದಾನ್ತೇನ ಮುನಿನಾ ಸಂಯತಾತ್ಮನಾ ।
ಅಜಿತಂ ಜೇತುಕಾಮೇನ ಭಾವ್ಯಂ ಸಙ್ಗೇಷ್ವಸಙ್ಗಿನಾ ॥೧೪॥

ಸಾಮಾನ್ಯರಿಂದ ಗೆಲ್ಲಲು ಸಾಧ್ಯವಾಗದ ಸಂಸಾರವನ್ನು ಜಯಿಸಲಿಚ್ಛಿಸಿರುವ ಮುನಿಯು ಅನುದಿನವೂ ತಪಸ್ಸಿನಲ್ಲಿಯೇ ನಿರತನಾಗಿರಬೇಕು. ಇಂದ್ರಿಯಗಳನ್ನು ದಮನಮಾಡಬೇಕು. ಮನಸ್ಸನ್ನು ಸಂಯಮಗೊಳಿಸಬೇಕು. ಆಸಕ್ತಿಗೆ ಆಶ್ರಯಭೂತಗಳಾದ ಪುತ್ರ-ದಾರ-ಗೃಹಾದಿಗಳಲ್ಲಿ ಅನಾಸಕ್ತನಾಗಿರಬೇಕು.

ಇನ್ದ್ರಿಯೈರ್ಗೃಹ್ಯತೇ ಯದ್ಯತ್ತತ್ತದ್ವ್ಯಕ್ತಮಿತಿ ಸ್ಥಿತಿಃ ।
ಅವ್ಯಕ್ತಮಿತಿ ವಿಜ್ಞೇಯಂ ಲಿಙ್ಗಗ್ರಾಹ್ಯಮತೀನ್ದ್ರಿಯಮ್ ॥೧೫॥

ಇಂದ್ರಿಯಗಳಿಂದ ಯಾವ ವಸ್ತುಗಳನ್ನು ಗ್ರಹಿಸಲು ಸಾಧ್ಯವಾಗುವುದೋ ಅವುಗಳೆಲ್ಲವನ್ನೂ ವ್ಯಕ್ತವೆಂದು ತಿಳಿಯಬೇಕು. ಯಾವುದು ಇಂದ್ರಿಯಾತೀತವೋ, ಅನುಮಾನದಿಂದಲೇ ತಿಳಿಯಲ್ಪಡುವುದೋ– ಅದನ್ನು ಅವ್ಯಕ್ತವೆಂದು ತಿಳಿಯಬೇಕು.

ಅವಿಸ್ರಮ್ಭೇನ ಗನ್ತವ್ಯಂ ವಿಸ್ರಮ್ಭೇ ಧಾರಯೇನ್ಮನಃ ।
ಮನಃ ಪ್ರಾಣೇ ನಿಗೃಹ್ಣೀಯಾತ್ಪ್ರಾಣಂ ಬ್ರಹ್ಮಣಿ ಧಾರಯೇತ್ ॥೧೬॥

ಯಾವುದು ವಿಶ್ವಾಸಕ್ಕೆ ಅರ್ಹವಲ್ಲವೋ–ಆ ಮಾರ್ಗದಲ್ಲಿ ಹೋಗಲೇ ಬಾರದು. ಯಾವುದು ವಿಶ್ವಾಸಾರ್ಹವೋ–ಆ ಮಾರ್ಗದಲ್ಲಿಯೇ ಮನಸ್ಸನ್ನು ಕೇಂದ್ರೀಕರಿಸಬೇಕು. ಮನಸ್ಸನ್ನು ಪ್ರಾಣದಲ್ಲಿ ನಿರೋಧಿಸಬೇಕು. ಪ್ರಾಣವನ್ನು ಬ್ರಹ್ಮದಲ್ಲಿ ಸ್ಥಾಪಿಸಬೇಕು.

ನಿರ್ವೇದಾದೇವ ನಿರ್ವಾಣಂ ನ ಚ ಕಿಞ್ಚಿದ್ವಿಚಿನ್ತಯೇತ್ ।
ಸುಖಂ ವೈ ಬ್ರಾಹ್ಮಣೋ ಬ್ರಹ್ಮ ನಿರ್ವೇದೇನಾಧಿಗಚ್ಛತಿ ॥೧೭॥

ವೈರಾಗ್ಯದಿಂದಲೇ ನಿರ್ವಾಣವು (ಮೋಕ್ಷವು) ಲಭಿಸುತ್ತದೆ. ಇದರಲ್ಲಿ ಸಂಶಯವೇ ಇಲ್ಲ. ಅದನ್ನು ಪಡೆದುಕೊಂಡನಂತರ ಮನುಷ್ಯನು ಆತ್ಮಕ್ಕೆ ಸಂಬಂಧಿಸದೇ ಇರುವ ಯಾವುದನ್ನೂ ಯೋಚಿಸುವುದೇ ಇಲ್ಲ. (ಯಾವಾಗಲೂ ಆತ್ಮಚಿಂತನೆಯಲ್ಲಿಯೇ ಇರುತ್ತಾನೆ.) ಬ್ರಾಹ್ಮಣನು ಸಂಸಾರದಲ್ಲಿ ವೈರಾಗ್ಯವನ್ನು ಹೊಂದಿದನಂತರವೇ ಸುಖಸ್ವರೂಪವಾದ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಶೌಚೇನ ಸತತಂ ಯುಕ್ತಃ ಸದಾಚಾರಸಮನ್ವಿತಃ ।
ಸಾನುಕ್ರೋಶಶ್ಚ ಭೂತೇಷು ತದ್ದ್ವಿಜಾತಿಷು ಲಕ್ಷಣಮ್ ॥೧೮॥

ಯಾವಾಗಲೂ ಶೌಚ (ಸ್ವಚ್ಛತೆ) ಮತ್ತು ಸದಾಚಾರಗಳಿಂದ ಯುಕ್ತನಾಗಿ, ಪ್ರಾಣಿಗಳ ವಿಷಯದಲ್ಲಿ ದಯಾಭಾವದಿಂದಿರುವುದು ಬ್ರಾಹ್ಮಣರ ಲಕ್ಷಣವಾಗಿದೆ.”

ಗ೮೯ನೆಯ ಅಧ್ಯಾಯವು ಮುಗಿಯಿತು.

೧೯೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸತ್ಯದ ಮಹಿಮೆ : ಅಸತ್ಯದ ದೋಷ : ಲೋಕ-ಪರಲೋಕ ಗಳಲ್ಲಿನ ಸುಖ-ದುಃಖಗಳ ವಿವೇಚನೆ

ಭೃಗುವು ಹೇಳುತ್ತಾನೆ :

ಸತ್ಯಂ ಬ್ರಹ್ಮ ತಪಃ ಸತ್ಯಂ ಸತ್ಯಂ ವಿಸೃಜತೇ ಪ್ರಜಾಃ ।
ಸತ್ಯೇನ ಧಾರ್ಯತೇ ಲೋಕಃ ಸ್ವರ್ಗಂ ಸತ್ಯೇನ ಗಚ್ಛತಿ ॥೧॥

“ಭರದ್ವಾಜ! ಸತ್ಯವೇ ಬ್ರಹ್ಮ, ಸತ್ಯವೇ ತಪಸ್ಸು, ಸತ್ಯವೇ ಪ್ರಜೆಗಳನ್ನು ಸೃಷ್ಟಿಸುತ್ತದೆ. ಸತ್ಯದ ಆಧಾರದಿಂದಲೇ ಈ ಲೋಕವು ಧರಿಸಲ್ಪಟ್ಟಿದೆ. ಸತ್ಯದ ಪ್ರಭಾವದಿಂದಲೇ ಮನುಷ್ಯನು ಸ್ವರ್ಗಕ್ಕೆ ಹೋಗುತ್ತಾನೆ.

ಅನೃತಂ ತಮಸೋ ರೂಪಂ ತಮಸಾ ನೀಯತೇ ಹ್ಯಧಃ ।
ತಮೋಗ್ರಸ್ತಾ ನ ಪಶ್ಯನ್ತಿ ಪ್ರಕಾಶಂ ತಮಸಾವೃತಾಃ ॥೨॥

ಅಸತ್ಯವು ಅಂಧಕಾರದ ರೂಪವಾಗಿದೆ. ಅಸತ್ಯರೂಪವಾದ ಆ ಕತ್ತಲೆಯು ಮನುಷ್ಯನಿಗೆ ಅಧಃಪತನವನ್ನುಂಟುಮಾಡುತ್ತದೆ. ಅಜ್ಞಾನಾಂಧ

ಕಾರದಲ್ಲಿ ಮುಳುಗಿದ ಮನುಷ್ಯರು ತಮೋಗುಣದಿಂದ ಗ್ರಸ್ತರಾಗಿ ಜ್ಞಾನದ ಪ್ರಕಾಶವನ್ನು ಕಾಣುವುದಿಲ್ಲ.

ಸ್ವರ್ಗಃ ಪ್ರಕಾಶ ಇತ್ಯಾಹುರ್ನರಕಂ ತಮ ಏವ ಚ ।
ಸತ್ಯಾನೃತಂ ತದುಭಯಂ ಪ್ರಾಪ್ಯತೇ ಜಗತೀಚರೈಃ ॥೩॥

ಸ್ವರ್ಗವು ಪ್ರಕಾಶಮಯವಾಗಿರುವುದೆಂದೂ–ನರಕವು ಅಂಧಕಾರ ಮಯವಾಗಿರುವುದೆಂದೂ ಹೇಳುತ್ತಾರೆ. ಜಗತ್ತಿನ ಜನರು ಸತ್ಯಾನೃತ ಗಳೆರಡನ್ನೂ ಆಶ್ರಯಿಸಿರುತ್ತಾರೆ.

ತತ್ರಾಪ್ಯೇವಂ ವಿಧಾ ಲೋಕೇ ವೃತ್ತಿಃ ಸತ್ಯಾನೃತೇ ಭವೇತ್ ।
ಧರ್ಮಾಧರ್ಮೌ ಪ್ರಕಾಶಶ್ಚ ತಮೋ ದುಃಖಂ ಸುಖಂ ತಥಾ ॥೪॥

ಲೋಕದಲ್ಲಿ ಸತ್ಯಾನೃತಗಳ ವ್ಯವಹಾರವು ಈ ರೀತಿಯಾಗಿರುತ್ತದೆ. ಸತ್ಯವು ಧರ್ಮರೂಪವಾಗಿಯೂ, ಪ್ರಕಾಶಮಯವಾಗಿಯೂ ಮತ್ತು ಸುಖರೂಪವಾಗಿಯೂ ಇರುತ್ತದೆ. ಅನೃತವು ಅಧರ್ಮರೂಪವಾಗಿಯೂ, ಅಂಧಕಾರಮಯವಾಗಿಯೂ ಮತ್ತು ದುಃಖರೂಪವಾಗಿಯೂ ಇರುತ್ತದೆ. ಯಾವುದು ಸತ್ಯವೋ–ಅದೇ ಧರ್ಮ. ಯಾವುದು ಧರ್ಮವೋ–ಅದೇ ಪ್ರಕಾಶ. ಯಾವುದು ಪ್ರಕಾಶವೋ–ಅದೇ ಸುಖ. ಅಂತೆಯೇ ಯಾವುದು ಅನೃತವೋ–ಅದೇ ಅಧರ್ಮ. ಯಾವುದು ಅಧರ್ಮವೋ–ಅದೇ ಅಂಧಕಾರ. ಯಾವುದು ಅಂಧಕಾರವೋ–ಅದೇ ದುಃಖ.

ಶಾರೀರೈರ್ಮಾನಸೈರ್ದುಃಖೈಃ ಸುಖೈಶ್ಚಾಪ್ಯಸುಖೋದಯೈಃ ।
ಲೋಕಸೃಷ್ಟಿಂ ಪ್ರಪಶ್ಯನ್ತೋ ನ ಮುಹ್ಯನ್ತಿ ವಿಚಕ್ಷಣಾಃ ॥೫॥

ಶಾರೀರಿಕವಾದ ಮತ್ತು ಮಾನಸಿಕವಾದ ದುಃಖದಿಂದ ಕೂಡಿರುವ, ಸುಖವಾಗಿ ಕಂಡರೂ ಕಡೆಯಲ್ಲಿ ದುಃಖವನ್ನೇ ಉಂಟುಮಾಡುವ ಈ ಲೋಕ ಸೃಷ್ಟಿಯನ್ನು ವೀಕ್ಷಿಸುತ್ತಿರುವ ವಿದ್ವಾಂಸರು ಪ್ರಾಪಂಚಿಕವಾದ ವಿಷಯಗಳಲ್ಲಿ ಮೋಹಗೊಳ್ಳುವುದಿಲ್ಲ.

ತತ್ರ ದುಃಖವಿಮೋಕ್ಷಾರ್ಥಂ ಪ್ರಯತೇತ ವಿಚಕ್ಷಣಃ ।
ಸುಖಂ ಹ್ಯನಿತ್ಯಂ ಭೂತಾನಾಮಿಹ ಲೋಕೇ ಪರತ್ರ ಚ ॥೬॥

ಆದುದರಿಂದ ವಿದ್ವಾಂಸನಾದವನು ಯಾವಾಗಲೂ ದುಃಖದಿಂದ ಬಿಡು

ಗಡೆಯನ್ನು ಹೊಂದಲು ಪ್ರಯತ್ನಮಾಡುತ್ತಲೇ ಇರಬೇಕು. ಆದರೆ ಈ ಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಸುಖವೂ ಕೂಡ ಶಾಶ್ವತವಲ್ಲ. ಅನಿತ್ಯವಾದುದು.

ರಾಹುಗ್ರಸ್ತಸ್ಯ ಸೋಮಸ್ಯ ಯಥಾ ಜ್ಯೋತ್ಸ್ನಾ ನ ಭಾಸತೇ ।
ತಥಾ ತಮೋಭಿಭೂತಾನಾಂ ಭೂತಾನಾಂ ನಶ್ಯತೇ ಸುಖಮ್ ॥೭॥

ರಾಹುಗ್ರಸ್ತನಾದ ಚಂದ್ರನ ಬೆಳದಿಂಗಳು ಹೇಗೆ ಪ್ರಕಾಶಿಸುವುದಿಲ್ಲವೋ–ಹಾಗೆಯೇ ತಮೋಗುಣದಿಂದ (ಅಜ್ಞಾನದಿಂದ) ಆವರಿಸಲ್ಪಟ್ಟಿರುವ ಪ್ರಾಣಿಗಳಿಗೆ ಸುಖವು ನಶಿಸಿಹೋಗುತ್ತದೆ. (ಅಜ್ಞಾನದಿಂದ ಕೂಡಿರುವ ಪ್ರಾಣಿಗಳಲ್ಲಿ ಸುಖವು ಪ್ರಕಾಶಿಸುವುದಿಲ್ಲ.)" [ಸುಖವು ಶಾರೀರ ಮತ್ತು ಮಾನಸ ಎಂದು ಎರಡು ಪ್ರಕಾರವಾಗಿದೆ. ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ವಸ್ತುಗಳಲ್ಲಿ ಪ್ರವೃತ್ತಿಯು ಸುಖಪ್ರಾಪ್ತಿಗಾಗಿಯೇ–ಎಂದು ಹೇಳಲ್ಪಡುತ್ತದೆ. ಈ ಸುಖಕ್ಕಿಂತಲೂ ತ್ರಿವರ್ಗಫಲವು (ಧರ್ಮಾರ್ಥ-ಕಾಮಗಳ ಫಲವು) ವಿಶಿಷ್ಟವಾದುದಲ್ಲ. ಮನುಷ್ಯನು ಅಪೇಕ್ಷಿಸುವ ಸುಖವೇ ಅದು. ಅದು ವಸ್ತುಗುಣವಿಶೇಷದಿಂದ ಕೂಡಿದೆ. ಧರ್ಮ ಮತ್ತು ಅರ್ಥಗಳು ಯಾವ (ಕಾಮ) ಸುಖಕ್ಕೆ ಅಂಗಗಳಾಗಿವೆಯೋ ಆ ಸುಖದ ಪ್ರಾಪ್ತಿಗಾಗಿ ಕರ್ಮವು ಆರಂಭಿಸಲ್ಪಡುತ್ತದೆ. ಏಕೆಂದರೆ : ಸುಖದ ಉತ್ಪತ್ತಿಗೆ ಉದ್ಯೋಗವೇ ಮೂಲಕಾರಣವಾಗಿದೆ. ಆದುದರಿಂದ ಸುಖದ ಉದ್ದೇಶ ದಿಂದಲೇ ಕರ್ಮಗಳನ್ನು ಆರಂಭಿಸುತ್ತಾರೆ. ಆಧ್ಯಾತ್ಮಿಕಚಿಂತನೆಯೇ ಮಾನಸಿಕ ಸುಖ. ಧರ್ಮಾರ್ಥ-ಕಾಮಗಳೆಂಬ ತ್ರಿವರ್ಗದಲ್ಲಿ ಮೂರನೆಯದಾದ ಕಾಮವೇ ಎಲ್ಲಕ್ಕಿಂತಲೂ ಹೆಚ್ಚು ಸುಖದಾಯಕವೆಂದು ಹೇಳುತ್ತಾರೆ. ಧರ್ಮಾರ್ಥಗಳು ಕಾಮಕ್ಕೆ ಅಂಗಭೂತವಾಗಿರುತ್ತವೆ. ಧರ್ಮಾರ್ಥಗಳೂ ಕೂಡ ಶರೀರದ ಸುಖಕ್ಕಾಗಿಯೇ ಮಾಡಲ್ಪಡುತ್ತವೆ. ಆದುದರಿಂದ ಅಂತಹ ಶರೀರಸುಖವನ್ನು ಪಡೆದುಕೊಳ್ಳುವ ಸಲುವಾಗಿಯೇ ಮನುಷ್ಯರು ಎಲ್ಲ ಕಾರ್ಯಗಳನ್ನೂ ಮಾಡುತ್ತಾರೆ.]

ಭರದ್ವಾಜನು ಹೇಳುತ್ತಾನೆ :

"ಭೃಗುಮಹರ್ಷಿಯೇ! ಶಾರೀರಿಕಸುಖವೇ ಎಲ್ಲ ಸುಖಗಳಿಗಿಂತಲೂ

ಪರಮಶ್ರೇಷ್ಠವೆಂಬ ನಿನ್ನ ಅಭಿಪ್ರಾಯವನ್ನು ನಾವು ಮಾನ್ಯಮಾಡುವುದಿಲ್ಲ. ವಸ್ತುಗುಣವಿಶೇಷದಿಂದ ಕೂಡಿದ ಈ ಕಾಮ್ಯಫಲವು (ಶಾರೀರಿಕಸುಖವು) ಮಹಾತಪಸ್ಸಿನಲ್ಲಿ ಯುಕ್ತರಾಗಿರುವ ಮಹರ್ಷಿಗಳಿಗೆ ಲಭಿಸತಕ್ಕುದಲ್ಲ. ಮೇಲಾಗಿ ಅವರು ಇಂತಹ ಶಾರೀರಿಕಸುಖವನ್ನು ಇಚ್ಛಿಸುವುದೂ ಇಲ್ಲ. ಮೂರು ಲೋಕಗಳನ್ನೂ ಸೃಷ್ಟಿಸಿರುವ ಪ್ರಭುವಾದ ಬ್ರಹ್ಮನು ಯಾವಾಗಲೂ ತಪಸ್ಸಿನಲ್ಲಿಯೇ ನಿರತನಾಗಿರುವನೆಂಬುದನ್ನು ನಾವು ಕೇಳಿದ್ದೇವೆ. ಬ್ರಹ್ಮಚರ್ಯವ್ರತಾನುಷ್ಠಾನದಲ್ಲಿರುವ ಅವನು ಎಂದಿಗೂ ಕಾಮಸುಖಗಳಲ್ಲಿ ಮನಸ್ಸನ್ನು ನಿಯೋಜಿಸುವುದಿಲ್ಲ. ಉಮಾಪತಿಯಾದ ವಿಶ್ವೇಶ್ವರನೂ (ಕಾಮಸುಖವನ್ನು ನೀಡಲು) ತನ್ನೆದುರಾಗಿ ಬಂದ ಮನ್ಮಥನನ್ನೇ ಸುಟ್ಟು ಅವನನ್ನು ಅನಂಗನನ್ನಾಗಿ ಮಾಡಿಬಿಟ್ಟನು. ಆದುದರಿಂದ ಶಾರೀರಿಕಸುಖವೇ ಪರಮಸುಖವೆಂಬ ಅಭಿಪ್ರಾಯವನ್ನು ಮಹಾತ್ಮರಾದವರು ಒಪ್ಪುವುದಿಲ್ಲ ವೆಂದು ನಾವು ಹೇಳುತ್ತೇವೆ. ಅವರಿಗೆ ಕಾಮಸುಖವು ಎಲ್ಲಕ್ಕಿಂತಲೂ ಹೆಚ್ಚಿನ ಸುಖವಿಶೇಷವೆನಿಸುವುದಿಲ್ಲ. ನೀನು ಹೇಳಿದ ಈ ಮಾತಿನಲ್ಲಿ ನಾನು ವಿಶ್ವಾಸ ವಿಡುವುದಿಲ್ಲ. ಶಾರೀರಿಕಸುಖಕ್ಕಿಂತಲೂ ಶ್ರೇಷ್ಠವಾದ ಸುಖವು ಯಾವುದೂ ಇಲ್ಲವೆಂದು ನೀನು ಹೇಳುವೆ. ಆದರೆ ಲೋಕವಾರ್ತೆಯು ಹೀಗಿದೆ :

ದ್ವಿವಿಧಃ ಫಲೋದಯಃ ಸುಕೃತಾತ್ಸುಖಮವಾಪ್ಯತೇ ದುಷ್ಕೃತಾ-
ದ್ದುಃಖಮಿತಿ ||೧೦||

ಫಲದ ಪ್ರಾಪ್ತಿಯು ಎರಡು ಪ್ರಕಾರವಾಗಿದೆ. ಪುಣ್ಯಕರ್ಮದಿಂದ ಪ್ರಾಪ್ತವಾದ ಸುಕೃತದಿಂದ ಸುಖವೂ–ಪಾಪಕರ್ಮದಿಂದ ಪ್ರಾಪ್ತವಾದ ಪಾಪ ದಿಂದ ದುಃಖವೂ ಉಂಟಾಗುತ್ತದೆ.”

ಭೃಗುವು ಹೇಳುತ್ತಾನೆ :

“ಭರದ್ವಾಜ! ಅಸತ್ಯದಿಂದ ಅಜ್ಞಾನವು ಹುಟ್ಟಿರುವುದು. ಆದುದರಿಂದ ಅಜ್ಞಾನಿಯು ಅಥವಾ ತಾಮಸಿಯು ಅಧರ್ಮಮಾರ್ಗವನ್ನೇ ಅನುಸರಿಸಿ ಹೋಗುತ್ತಾನೆ. ಧರ್ಮಕಾರ್ಯಗಳನ್ನೆಂದಿಗೂ ಮಾಡುವುದಿಲ್ಲ. ಯಾರು ಕ್ರೋಧ-ಲೋಭ-ಹಿಂಸಾನೃತಾದಿಗಳಿಂದ ಆವೃತರಾಗಿರುವರೋ–ಅಂತಹವರು

ಈ ಲೋಕದಲ್ಲಿಯೂ ಸುಖಿಗಳಾಗಿರುವುದಿಲ್ಲ ; ಪರಲೋಕದಲ್ಲಿಯೂ ಸುಖಿಗಳಾಗಿರುವುದಿಲ್ಲ. ಅವರು ನಾನಾಪ್ರಕಾರವಾದ ರೋಗಗಳಿಂದಲೂ, ವ್ಯಾಧಿಗಳಿಂದಲೂ, ಉಪತಾಪಗಳಿಂದಲೂ ಪರಿತಪಿಸುತ್ತಿರುತ್ತಾರೆ. ವಧ-ಬಂಧನಗಳೇ ಮುಂತಾದ ಕ್ಲೇಶಗಳಿಂದಲೂ, ಹಸಿವು, ಬಾಯಾರಿಕೆ, ಆಯಾಸ–ಮುಂತಾದ ಉಪತಾಪಗಳಿಂದಲೂ ಪೀಡಿಸಲ್ಪಡುತ್ತಾರೆ. ಮಳೆ-ಬಿರುಗಾಳಿಗಳಿಂದಲೂ, ಅತ್ಯುಷ್ಣದಿಂದಲೂ, ಅತಿಶೀತದಿಂದಲೂ ಉಂಟಾಗುವ ಭಯಂಕರವಾದ ಶಾರೀರಿಕದುಃಖಗಳಿಂದ ಪರಿತಪಿಸುತ್ತಾರೆ. ಬಂಧುಗಳ ಸಾವು, ಧನದ ಹಾನಿ, ಪ್ರಿಯಜನರ ವಿಯೋಗ–ಇವೇ ಮೊದಲಾದ ಕಾರಣಗಳಿಂದ ಉಂಟಾಗುವ ಮಾನಸಿಕಶೋಕಗಳಿಂದಲೂ ನರಳುತ್ತಿರುತ್ತಾರೆ. ಜರಾ-ಮೃತ್ಯುಗಳ ಭಯವೂ ಅವರನ್ನು ಪೀಡಿಸುತ್ತಿರುತ್ತದೆ.

ಯಸ್ತ್ವೇತೈಃ ಶಾರೀರಮಾನಸೈರ್ದುಃಖೈರ್ನ ಸಂಸ್ಪೃಶ್ಯತೇ ಸ ಸುಖಂ ವೇದ ।
ನ ಚೈತೇ ದೋಷಾಃ ಸ್ವರ್ಗೇ ಪ್ರಾದುರ್ಭವನ್ತಿ ತತ್ರ ಖಲು ಭವನ್ತಿ ॥

ಯಾರು ಮೇಲೆ ಹೇಳಿದ ಶಾರೀರಿಕವಾದ ಮತ್ತು ಮಾನಸಿಕವಾದ ದುಃಖಗಳಿಂದ ರಹಿತರಾಗಿರುವರೋ–ಅವರಿಗೇ ಸುಖದ ಅನುಭವವಾಗುತ್ತದೆ. ಸ್ವರ್ಗಲೋಕದಲ್ಲಿ ದುಃಖಕ್ಕೆ ಕಾರಣಭೂತಗಳಾದ ಈ ದೋಷಗಳಿರುವುದಿಲ್ಲ. ಸ್ವರ್ಗದಲ್ಲಿನ ಸ್ಥಿತಿಯು ಹೀಗಿರುತ್ತದೆ.

ಸುಸುಖಃ ಪವನಃ ಸ್ವರ್ಗೇ ಗನ್ಧಶ್ಚ ಸುರಭಿಸ್ತಥಾ ।
ಕ್ಷುತ್ಪಿಪಾಸಾಶ್ರಮೋ ನಾಸ್ತಿ ನ ಜರಾ ನ ಚ ಪಾಪಕಮ್ ॥೧೩॥

ಸ್ವರ್ಗದಲ್ಲಿ ಅತ್ಯಂತಸುಖದಾಯಕವಾದ ವಾಯುಗುಣವಿರುತ್ತದೆ. ಅಲ್ಲಿಯ ವಾತಾವರಣವು ಮನೋಹರವಾದ ಸುಗಂಧದಿಂದ ಪೂರಿತವಾಗಿರುತ್ತದೆ. ಹಸಿವಾಗಲೀ, ಬಾಯಾರಿಕೆಯಾಗಲೀ, ಆಯಾಸವಾಗಲೀ, ಮುಪ್ಪಾಗಲೀ ಅಲ್ಲಿರುವುದಿಲ್ಲ. ಪಾಪಫಲದ ದುಃಖವನ್ನು ಅಲ್ಲಿ ಅನುಭವಿಸಬೇಕಾಗಿಲ್ಲ.

ನಿತ್ಯಮೇವ ಸುಖಂ ಸ್ವರ್ಗೇ ಸುಖಂ ದುಃಖಮಿಹೋಭಯಮ್ ।
ನರಕೇ ದುಃಖಮೇವಾಹುಃ ಸುಖಂ ತತ್ಪರಮಂ ಪದಮ್ ॥೧೪॥

ಸ್ವರ್ಗದಲ್ಲಿ ಯಾವಾಗಲೂ ಸುಖವೇ ಇರುತ್ತದೆ. ಈ ಮರ್ತ್ಯಲೋಕದಲ್ಲಿ ಸುಖ-ದುಃಖಗಳೆರಡೂ ಇರುತ್ತವೆ. ನರಕದಲ್ಲಿ ಯಾವಾಗಲೂ ದುಃಖವೇ ಇರುತ್ತದೆ. ಆದರೆ ನಿಜವಾದ ಮತ್ತು ಶಾಶ್ವತವಾದ ಸುಖವೆಂದರೆ ಪರಮಾತ್ಮನ ಪರಮಪದಾನುಭವವೇ ಆಗಿದೆ.

ಪೃಥಿವೀ ಸರ್ವಭೂತಾನಾಂ ಜನಿತ್ರೀ ತದ್ವಿಧಾಃ ಸ್ತ್ರಿಯಃ ।
ಪುಮಾನ್ಪ್ರಜಾಪತಿಸ್ತತ್ರ ಶುಕ್ರಂ ತೇಜೋಮಯಂ ವಿದುಃ ॥೧೫॥

ಈ ಭೂದೇವಿಯು ಎಲ್ಲ ಪ್ರಾಣಿಗಳಿಗೂ ತಾಯಿಯಾಗಿದ್ದಾಳೆ. ಹಾಗೆಯೇ ಸಂಸಾರದಲ್ಲಿ ಸ್ತ್ರೀಯರು ಭೂದೇವಿಯಂತೆ ಮಾತೆಯರಾಗಿದ್ದಾರೆ. ಪುರುಷನು ಸೃಷ್ಟಿಕರ್ತನಾದ ಪ್ರಜಾಪತಿಯ ರೂಪದಲ್ಲಿದ್ದಾನೆ. ಪುರುಷನ ವೀರ್ಯವೇ ತೇಜೋಮಯವೆಂದು ವಿದ್ವಾಂಸರು ತಿಳಿದಿರುತ್ತಾರೆ.

ಇತ್ಯೇತಲ್ಲೋಕನಿರ್ಮಾಣಂ ಬ್ರಹ್ಮಣಾ ವಿಹಿತಂ ಪುರಾ ।
ಪ್ರಜಾಃ ಸಮನುವರ್ತನ್ತೇ ಸ್ವೈಃ ಸ್ವೈಃ ಕರ್ಮಭಿರಾವೃತಾಃ ॥೧೬॥

ಹೀಗೆ ಬ್ರಹ್ಮನು ಹಿಂದೆ ಸ್ತ್ರೀ-ಪುರುಷಸ್ವರೂಪದ ಈ ಜಗತ್ತನ್ನು ಸೃಷ್ಟಿಸಿದನು. ಇಲ್ಲಿ ಎಲ್ಲ ಪ್ರಜೆಗಳೂ ಜನ್ಮಾಂತರಗಳ ತಮ್ಮ-ತಮ್ಮ ಕರ್ಮಗಳಿಂದ ಆವೃತರಾಗಿರುತ್ತಾ ಸುಖ-ದುಃಖಗಳನ್ನು ಅನುಭವಿಸುತ್ತಾರೆ.”

ಿ೧೯೦ನೆಯ ಅಧ್ಯಾಯವು ಮುಗಿಯಿತು.

೧೯೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮಚರ್ಯ ಮತ್ತು ಗೃಹಸ್ಥಾಶ್ರಮಗಳ ಧರ್ಮಗಳ ವರ್ಣನೆ

ಭರದ್ವಾಜನು ಪ್ರಶ್ನಿಸುತ್ತಾನೆ :

ದಾನಸ್ಯ ಕಿಂ ಫಲಂ ಪ್ರಾಹುರ್ಧರ್ಮಸ್ಯ ಚರಿತಸ್ಯ ಚ ।
ತಪಸಶ್ಚ ಸುತಪ್ತಸ್ಯ ಸ್ವಾಧ್ಯಾಯಸ್ಯ ಹುತಸ್ಯ ವಾ ॥೧॥

“ಭೃಗುಮಹರ್ಷೇ! ದಾನದ ಫಲವೇನು? ಆಚರಣೆಯಲ್ಲಿಟ್ಟುಕೊಂಡಿರುವ ದಾನರೂಪವಾದ ಧರ್ಮಕ್ಕೆ ಯಾವ ಫಲವನ್ನು ಹೇಳಿದ್ದಾರೆ? ಶ್ರದ್ಧೆಯಿಂದ ಮಾಡುವ ತಪಸ್ಸಿಗೆ ಯಾವ ಫಲವಿದೆ? ವೇದಾಧ್ಯಯನಕ್ಕೆ

ಯಾವ ಫಲವಿದೆ? ಅಗ್ನಿಹೋತ್ರವನ್ನು ಮಾಡುವುದರಿಂದ ಯಾವ ಫಲವು ಪ್ರಾಪ್ತವಾಗುತ್ತದೆ?"

ಭೃಗುವು ಹೇಳುತ್ತಾನೆ :

ಹುತೇನ ಶಾಮ್ಯತೇ ಪಾಪಂ ಸ್ವಾಧ್ಯಾಯೈಃ ಶಾನ್ತಿರುತ್ತಮಾ ।
ದಾನೇನ ಭೋಗಾನಿತ್ಯಾಹುಸ್ತಪಸಾ ಸ್ವರ್ಗಮಾಪ್ನುಯಾತ್ ॥೨॥

"ಅಗ್ನಿಹೋತ್ರವನ್ನು ಮಾಡುವುದರಿಂದ ಪಾಪವು ಪರಿಹಾರವಾಗುತ್ತದೆ. ವೇದಾಧ್ಯಯನವನ್ನು ಮಾಡುವುದರಿಂದ ಉತ್ತಮವಾದ ಶಾಂತಿಯು ಲಭಿಸುತ್ತದೆ. ದಾನಮಾಡುವುದರಿಂದ ಸುಖೋಪಭೋಗಗಳು ಲಭಿಸುತ್ತವೆ. ತಪಸ್ಸಿನಿಂದ ಮನುಷ್ಯನು ಸ್ವರ್ಗವನ್ನು ಹೊಂದುತ್ತಾನೆ.

ದಾನಂ ತು ದ್ವಿವಿಧಂ ಪ್ರಾಹುಃ ಪರತ್ರಾರ್ಥಮಿಹೈವ ಚ ।
ಸದ್ಭ್ಯೋ ಯದ್ದೀಯತೇ ಕಿಂಚಿತ್ತತ್ಪರತ್ರೋಪತಿಷ್ಠತೇ ॥೩॥
ಅಸದ್ಭ್ಯೋ ದೀಯತೇ ಯತ್ತು ತದ್ದಾನಮಿಹ ಭುಜ್ಯತೇ ।
ಯಾದೃಶಂ ದೀಯತೇ ದಾನಂ ತಾದೃಶಂ ಫಲಮಶ್ನುತೇ ॥೪॥

ದಾನವು ಎರಡು ಪ್ರಕಾರವಾಗಿರುವುದೆಂದು ಹೇಳುತ್ತಾರೆ. ಒಂದು ವಿಧವಾದ ದಾನವು ಪರಲೋಕಸಾಧನೆಗೂ ಮತ್ತೊಂದು ವಿಧವಾದ ದಾನವು ಐಹಿಕಸುಖಕ್ಕೂ ಕಾರಣವಾಗುತ್ತದೆ. ಸತ್ಪುರುಷರಿಗೆ ಕೊಡುವ ಅಲ್ಪದಾನವೂ ಪರಲೋಕಕ್ಕೆ ಸಾಧನವಾಗುತ್ತದೆ. ಅಸತ್ಪುರುಷರಿಗೆ ಕೊಡುವ ದಾನವೂ ಈ ಲೋಕದಲ್ಲಿಯೇ ಭೋಗಾದಿಫಲಗಳನ್ನು ಕೊಡುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ದಾನವು ಎಂತಹುದಾಗಿರುವುದೋ ಅದರ ಫಲವೂ ಅದಕ್ಕೆ ಅನುಗುಣವೇ ಆಗಿರುತ್ತದೆ."

ಭರದ್ವಾಜನು ಪ್ರಶ್ನಿಸುತ್ತಾನೆ :

ಕಿಂ ಕಸ್ಯ ಧರ್ಮಾಚರಣಂ ಕಿಂ ವಾ ಧರ್ಮಸ್ಯ ಲಕ್ಷಣಮ್ ।
ಧರ್ಮಃ ಕತಿವಿಧೋ ವಾಪಿ ತದ್ಭವಾನ್ವಕ್ತುಮರ್ಹತಿ ॥೫॥

"ಯಾವ ಧರ್ಮಾಚರಣೆಯು ಯಾವನಿಗೆ ವಿಹಿತವಾಗಿದೆ? ಧರ್ಮದ ಲಕ್ಷಣವೇನು? ಧರ್ಮದಲ್ಲಿ ಎಷ್ಟು ಭೇದಗಳಿವೆ?–ಈ ಎಲ್ಲ ವಿಷಯಗಳನ್ನೂ ಕೃಪೆಮಾಡಿ ತಿಳಿಸು."

ಭೃಗುವು ಹೇಳುತ್ತಾನೆ :

ಸ್ವಧರ್ಮಾಚರಣೇ ಯುಕ್ತಾ ಯೇ ಭವನ್ತಿ ಮನೀಷಿಣಃ ।
ತೇಷಾಂ ಸ್ವರ್ಗಫಲಾವಾಪ್ತಿರ್ಯೋಽನ್ಯಥಾ ಸ ವಿಮುಹ್ಯತೇ ॥೬॥

"ಮನನಶೀಲರಾದ ಯಾವ ಮನುಷ್ಯರು ಸ್ವಧರ್ಮಾಚರಣೆಯಲ್ಲಿಯೇ ಆಸಕ್ತರಾಗಿರುವರೋ ಅವರಿಗೆ ಸ್ವರ್ಗಪ್ರಾಪ್ತಿಯ ಫಲವು ಲಭಿಸುತ್ತದೆ. ಯಾರು ಸ್ವಧರ್ಮಕ್ಕೆ ವಿರುದ್ಧವಾದ ಆಚರಣೆಯನ್ನು ಮಾಡುವರೋ ಅವರು ಮೋಹಕ್ಕೆ ವಶೀಭೂತರಾಗುತ್ತಾರೆ. (ಈ ಶ್ಲೋಕದಲ್ಲಿ ಭರದ್ವಾಜನು ಕೇಳಿರುವ ಮೂರು ಪ್ರಶ್ನೆಗಳಿಗೂ ಉತ್ತರವಿದೆ. (1) ಸ್ವಧರ್ಮಾಚರಣೆಯೇ ಎಲ್ಲರ ಧರ್ಮವೂ ಆಗಿದೆ. (2) ಸ್ವರ್ಗಪ್ರಾಪ್ತಿಗೆ ಸಾಧನಭೂತವಾದ ವರ್ಣಾಶ್ರಮಧರ್ಮಗಳ ಅನುಷ್ಠಾನವೇ ಧರ್ಮದ ಲಕ್ಷಣ. (3) ಎಷ್ಟು ವರ್ಣಗಳು ಮತ್ತು ಎಷ್ಟು ಆಶ್ರಮಗಳು ಇವೆಯೋ ಅದಕ್ಕೆ ತಕ್ಕಂತೆ ನಾನಾಧರ್ಮಗಳಿವೆ.)"

ಭರದ್ವಾಜನು ಹೇಳುತ್ತಾನೆ :

ಯದೇತಚ್ಚಾತುರಾಶ್ರಮ್ಯಂ ಬ್ರಹ್ಮರ್ಷಿವಿಹಿತಂ ಪುರಾ ।
ತೇಷಾಂ ಸ್ವೇ ಸ್ವೇ ಸಮಾಚಾರಾಸ್ತಾನ್ಮೇ ವಕ್ತುಮಿಹಾರ್ಹಸಿ ॥೭॥

"ಭಗವನ್! ಹಿಂದೆ ಬ್ರಹ್ಮರ್ಷಿಗಳು ನಾಲ್ಕು ಪ್ರಕಾರವಾಗಿ ವಿಂಗಡಿಸಿರುವ ಆಶ್ರಮಗಳಲ್ಲಿ ಒಂದೊಂದು ಆಶ್ರಮಕ್ಕೂ ಪ್ರತ್ಯೇಕವಾದ ಯಾವ ಧರ್ಮಗಳಿವೆಯೋ–ಆ ಧರ್ಮಗಳನ್ನು ಹೇಳುವ ಕೃಪೆಮಾಡು."

ಭೃಗುವು ಹೇಳುತ್ತಾನೆ :

"ಭರದ್ವಾಜ! ಲೋಕಕ್ಕೆ ಹಿತಕರವಾದ ಕಲ್ಯಾಣಕರ್ಮಗಳಲ್ಲಿಯೇ ಆಸಕ್ತನಾಗಿರುವ ಭಗವನ್ ಬ್ರಹ್ಮನು ಹಿಂದೆಯೇ ಧರ್ಮದ ಸಂರಕ್ಷಣೆಗಾಗಿ ನಾಲ್ಕು ಪ್ರಕಾರವಾದ ಆಶ್ರಮಗಳನ್ನು ವ್ಯವಸ್ಥೆಮಾಡಿರುವನು. ಆ ನಾಲ್ಕು ಆಶ್ರಮಗಳಲ್ಲಿ ಬ್ರಹ್ಮಚರ್ಯವ್ರತವನ್ನು ಪಾಲನೆಮಾಡುತ್ತಾ ಗುರುಕುಲದಲ್ಲಿ ವಾಸಮಾಡುವುದೇ ಮೊದಲನೆಯ ಆಶ್ರಮವಾಗಿದೆ. ಗುರುಕುಲದಲ್ಲಿರುವ ಬ್ರಹ್ಮಚಾರಿಯು ಅಂತಃಶುದ್ಧಿ-ಬಹಿಃಶುದ್ಧಿಯುಳ್ಳವನಾಗಿರಬೇಕು. ವೈದಿಕವಾದ ಜಾತಕರ್ಮಾದಿ ಸಂಸ್ಕಾರಗಳನ್ನು ಹೊಂದಿರ

ಬೇಕು. ವ್ರತ–ನಿಯಮಗಳನ್ನು ಅನುಷ್ಠಾನಮಾಡಬೇಕು. ಮನಸ್ಸನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರಬೇಕು. ಪ್ರತಿಸಂಧ್ಯೆಯಲ್ಲಿಯೂ ಸಂಧ್ಯಾವಂದನೆಯ ಮೂಲಕವಾಗಿ ಸೂರ್ಯೋಪಾಸನೆಯನ್ನು ಮಾಡ ಬೇಕು. ಸಮಿಧಾದಾನದ ಮೂಲಕವಾಗಿ ಅಗ್ನಿಯ ಉಪಾಸನೆಯನ್ನು ಮಾಡ ಬೇಕು. ನಿದ್ರೆಯನ್ನೂ ಆಲಸ್ಯವನ್ನೂ ದೂರಮಾಡಬೇಕು. ಪ್ರತಿನಿತ್ಯವೂ ಗುರುವಂದನೆಯನ್ನು ಮಾಡುತ್ತಾ ವೇದಾಭ್ಯಾಸದಿಂದಲೂ ಮತ್ತು ಶಾಸ್ತ್ರಗಳ ಶ್ರವಣದಿಂದಲೂ ತನ್ನ ಅಂತರಾತ್ಮವನ್ನು ಪವಿತ್ರಗೊಳಿಸಬೇಕು. ಪ್ರಾತಃ ಕಾಲ, ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿಯೂ ಆಚಮನವನ್ನು ಮತ್ತು ಸ್ನಾನವನ್ನು ಮಾಡಬೇಕು. ಬ್ರಹ್ಮಚರ್ಯವ್ರತನಿಷ್ಠನಾಗಿರಬೇಕು. ಅಗ್ನಿಯ ಉಪಾಸನೆಯನ್ನು ಮಾಡುತ್ತಿರಬೇಕು. ಗುರುವಿನ ಸೇವೆಯಲ್ಲಿಯೇ ತತ್ಪರನಾಗಿರಬೇಕು. ಪ್ರತಿನಿತ್ಯವೂ ಭಿಕ್ಷಾಟನೆ ಮಾಡಬೇಕು. ಭಿಕ್ಷಾಟನೆ ಯಿಂದ ಪ್ರಾಪ್ತವಾದ ಎಲ್ಲ ಅನ್ನವನ್ನೂ ಗುರುವಿಗೆ ಸಮರ್ಪಿಸಬೇಕು. ತನ್ನನ್ನೂ ಸಂಪೂರ್ಣವಾಗಿ ಗುರುವಿಗೆ ಅರ್ಪಿಸಿಕೊಳ್ಳಬೇಕು. ಗುರುವು ಏನನ್ನಾದರೂ ಹೇಳಿದರೆ ಅಥವಾ ಯಾವುದಾದರೂ ಕಾರ್ಯಮಾಡಲು ಸಂಜ್ಞೆಮಾಡಿದರೆ ಅಥವಾ ಸ್ಪಷ್ಟವಾಗಿಯೇ ಆಜ್ಞೆಮಾಡಿದರೆ–ಅದರಂತೆಯೇ ನಡೆದುಕೊಳ್ಳಬೇಕು. ಗುರುವಿನ ಆಜ್ಞೆಗೆ ವಿರುದ್ಧವಾಗಿ ನಡೆದುಕೊಳ್ಳ ಬಾರದು. ಗುರುವಿನ ಅನುಗ್ರಹದಿಂದ ಲಭಿಸುವ ವೇದಗಳ ಅಭ್ಯಾಸ ದಲ್ಲಿಯೇ ತತ್ಪರನಾಗಿರಬೇಕು.

ಬ್ರಹ್ಮಚರ್ಯದ ವಿಷಯದಲ್ಲಿ ಈ ಶ್ಲೋಕವು ಉದಾಹೃತವಾಗಿದೆ :-

ಗುರುಂ ಯಸ್ತು ಸಮಾರಾಧ್ಯ ದ್ವಿಜೋ ವೇದಮವಾಪ್ನುಯಾತ್ ।
ತಸ್ಯ ಸ್ವರ್ಗಫಲಾವಾಪ್ತಿಃ ಸಿಧ್ಯತೇ ಚಾಸ್ಯ ಮಾನಸಮ್ ॥೯॥

ಯಾವ ದ್ವಿಜನು ಗುರುವಿನ ಸೇವೆಯನ್ನು ಮಾಡುತ್ತಾ ವೇದಾಧ್ಯ ಯನವನ್ನು ಮಾಡುವನೋ–ಅವನಿಗೆ ಅವಸಾನಾನಂತರದಲ್ಲಿ ಸ್ವರ್ಗಲೋಕವು ಲಭಿಸುತ್ತದೆ. ಅವನ ಮಾನಸಿಕವಾದ ಇಚ್ಛೆಗಳೆಲ್ಲವೂ ಸಿದ್ಧಿಸುತ್ತವೆ.

ಗೃಹಸ್ಥಾಶ್ರಮವನ್ನು ಎರಡನೆಯ ಆಶ್ರಮವೆಂದು ಹೇಳುತ್ತಾರೆ. ಗೃಹಸ್ಥಾಶ್ರಮದಲ್ಲಿರುವ ಉತ್ತಮವಾದ ಆಚರಣೆಗಳ ಲಕ್ಷಣವನ್ನು ಈಗ ನಾನು ವಿವರವಾಗಿ ಹೇಳುತ್ತೇನೆ.

ಸದಾಚಾರನಿಷ್ಠರಾದ ಬ್ರಹ್ಮಚಾರಿಗಳು ವಿದ್ಯಾಭ್ಯಾಸವನ್ನು ಮುಗಿಸಿ ವ್ರತಸಮಾವರ್ತನಾದಿಗಳನ್ನು ಮುಗಿಸಿ, ಸ್ನಾತಕರಾದನಂತರ ಸಹಧರ್ಮಿಣಿಯನ್ನು ಪರಿಗ್ರಹಿಸಿ, ಅವಳೊಡನೆ ವೇದೋಕ್ತವಾದ ಧರ್ಮಗಳನ್ನು ಆಚರಿಸುತ್ತಾ ಧರ್ಮಗಳ ಫಲವನ್ನು ಪಡೆದುಕೊಳ್ಳುವ ಅಪೇಕ್ಷೆಯುಳ್ಳವರಿಗೆ ಗೃಹಸ್ಥಾಶ್ರಮವು ಉಕ್ತವಾಗಿದೆ. ಗೃಹಸ್ಥಾಶ್ರಮದಲ್ಲಿ ಧರ್ಮಾರ್ಥ-ಕಾಮಗಳ ಪ್ರಾಪ್ತಿಯಾಗುತ್ತದೆ. ಆದುದರಿಂದ ಮೂರು ಪುರುಷಾರ್ಥಗಳನ್ನೂ ಸಾಧಿಸಿಕೊಳ್ಳುವ ಸಲುವಾಗಿ ಗೃಹಸ್ಥಾಶ್ರಮಿಯು ಅನಿಂದ್ಯವಾದ ಕರ್ಮಗಳಿಂದ ಧನವನ್ನು ಸಂಗ್ರಹಿಸಬೇಕು. ಸ್ವಾಧ್ಯಾಯದಿಂದ ಉಪಲಬ್ಧವಾದ ವಿಶಿಷ್ಟವಾದ ಯೋಗ್ಯತೆಯಿಂದ ಹಣವನ್ನು ಸಂಪಾದಿಸಬಹುದು. ಬ್ರಹ್ಮರ್ಷಿಗಳು ಧರ್ಮಶಾಸ್ತ್ರಗಳಲ್ಲಿ ನಿರ್ಣಯಿಸಿರುವ ಮಾರ್ಗದಿಂದ (ಯಾಜನ-ಪ್ರತಿಗ್ರಹಗಳಿಂದ) ಧನವನ್ನು ಸಂಪಾದಿಸಬಹುದು. ಪರ್ವತಗಳಲ್ಲಿ ಸಿಕ್ಕುವ ಸಾರಭೂತವಾದ ಮಣಿ, ರತ್ನ, ದಿವ್ಯೌಷಧಿ ಮತ್ತು ಸುವರ್ಣಗಳಿಂದಾದರೂ ಧನವನ್ನು ಸಂಪಾದಿಸಬಹುದು. ಹವ್ಯ (ಯಜ್ಞ), ಕವ್ಯ (ಶ್ರಾದ್ಧಾದಿಗಳು), ನಿಯಮವ್ರತಾನುಷ್ಠಾನಗಳು, ವೇದಾಭ್ಯಾಸ (ವೇದಪಾರಾಯಣ), ದೇವತೆಗಳ ಅನುಗ್ರಹ–ಇವುಗಳಿಂದ ಉಪಲಬ್ಧವಾದ ಧನದಿಂದಲೂ ಗೃಹಸ್ಥನು ಗಾರ್ಹಸ್ಥ್ಯ ಧರ್ಮವನ್ನು ಪರಿಪಾಲಿಸಬಹುದು. ಗೃಹಸ್ಥಾಶ್ರಮವೇ ಎಲ್ಲ ಆಶ್ರಮಗಳಿಗೂ ಮೂಲಭೂತವಾದುದೆಂದು ಹೇಳುತ್ತಾರೆ.

ಗುರುಕುಲನಿವಾಸಿನಃ ಪರಿವ್ರಾಜಕಾ ಯೇ ಚಾನ್ಯೇ ಸಂಕಲ್ಪಿತ-ವ್ರತನಿಯಮಧರ್ಮಾನುಷ್ಠಾಯಿನಸ್ತೇಷಾಮಪ್ಯತ ಏವ ಭಿಕ್ಷಾಬಲಿ-ಸಂವಿಭಾಗಾಃ ಪ್ರವರ್ತನ್ತೇ ॥೧೦॥

ಗುರುಕುಲದಲ್ಲಿ ವಾಸಮಾಡುವ ಬ್ರಹ್ಮಚಾರಿಗಳಿಗೂ, ವ್ರತ-ನಿಯಮ-ಧರ್ಮಗಳನ್ನು ಪರಿಪಾಲನಮಾಡುವ ವಾನಪ್ರಸ್ಥರಿಗೂ, ಎಲ್ಲವನ್ನೂ ತ್ಯಾಗ ಮಾಡಿ ಸರ್ವತ್ರ ಸಂಚರಿಸುವ ಸಂನ್ಯಾಸಿಗಳಿಗೂ–ಗೃಹಸ್ಥನ ಮನೆಯಲ್ಲಿಯೇ ಭಿಕ್ಷೆ-ದಾನ-ಉಪಹಾರಾದಿಗಳು ಲಭಿಸುತ್ತವೆ. ಆದುದರಿಂದ ಗೃಹಸ್ಥಾಶ್ರಮವೇ ಎಲ್ಲ ಆಶ್ರಮಗಳೂ ಆಶ್ರಯಭೂತವಾಗಿದೆ.

ವಾನಪ್ರಸ್ಥರಿಗೆ ಧನಸಂಗ್ರಹವು ನಿಷಿದ್ಧ. ಆ ಶ್ರೇಷ್ಠಪುರುಷರು ಶುದ್ಧವಾದ ಮತ್ತು ಹಿತಕರವಾದ ಆಹಾರದಲ್ಲಿ ಮಾತ್ರವೇ ಇಚ್ಛೆಯುಳ್ಳವರಾಗಿರುತ್ತಾರೆ. ಸ್ವಾಧ್ಯಾಯನಿರತರಾಗಿರುತ್ತಾರೆ. ತೀರ್ಥಯಾತ್ರೆಗಾಗಿ ಮತ್ತು ದೇಶಗಳನ್ನು ಸಂದರ್ಶಿಸಲು ಪೃಥ್ವಿಯನ್ನು ಪರ್ಯಟನಮಾಡುತ್ತಿರುತ್ತಾರೆ. ಅವರೇನಾದರೂ ಗೃಹಸ್ಥನ ಮನೆಗೆ ಬಂದರೆ ಒಡನೆಯೇ ಗೃಹಸ್ಥರು ಮೇಲೆದ್ದು ಮುಂದೆ ಹೋಗಿ ಸ್ವಾಗತಿಸಬೇಕು. ಅಭಿವಾದನಮಾಡಬೇಕು. ಅವರಲ್ಲಿ ದೋಷವನ್ನೆಣಿಸಬಾರದು. ಅವರೊಡನೆ ಒಳ್ಳೆಯ ಮಾತನ್ನಾಡಬೇಕು. ಯಥಾಶಕ್ತಿ ಸುಖಾಸನವನ್ನು ನೀಡಬೇಕು. ಮಲಗಲು ಒಳ್ಳೆಯ ಹಾಸಿಗೆಯನ್ನು ಕೊಡಬೇಕು. ಒಳ್ಳೆಯ ಭೋಜನವನ್ನು ಮಾಡಿಸಬೇಕು. ಹೀಗೆ ಗೃಹಸ್ಥನು ವಾನಪ್ರಸ್ಥಾಶ್ರಮಿಯನ್ನು ಸತ್ಕರಿಸಬೇಕು. ಶ್ರೇಷ್ಠಪುರುಷರ ವಿಷಯದಲ್ಲಿ ಹೀಗೆ ನಡೆದುಕೊಳ್ಳುವುದು ಗೃಹಸ್ಥನ ಮುಖ್ಯ ಕರ್ತವ್ಯವಾಗಿದೆ. ಅತಿಥಿಯ ವಿಷಯದಲ್ಲಿ ಲೋಕಗಾಥೆಯು ಹೀಗಿದೆ :

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿನಿವರ್ತತೇ ।
ಸ ದತ್ತ್ವಾ ದುಷ್ಕೃತಂ ತಸ್ಮೈ ಪುಣ್ಯಮಾದಾಯ ಗಚ್ಛತಿ ॥೧೨॥

ಅತಿಥಿಯು ನಿರಾಶನಾಗಿ ಯಾವ ಗೃಹಸ್ಥನ ಮನೆಯಿಂದ ಹಿಂದಿರುಗುವನೋ–ಆ ಅತಿಥಿಯು ಆ ಗೃಹಸ್ಥನಿಗೆ ತನ್ನ ಪಾಪಗಳೆಲ್ಲವನ್ನೂ ಕೊಟ್ಟು ಅವನ ಪುಣ್ಯಗಳೆಲ್ಲವನ್ನೂ ತೆಗೆದುಕೊಂಡು ಹೋಗುತ್ತಾನೆ. ಗೃಹಸ್ಥಾಶ್ರಮದಲ್ಲಿದ್ದುಕೊಂಡು ಯಜ್ಞಮಾಡುವುದರಿಂದ ದೇವತೆಗಳು ಸುಪ್ರೀತರಾಗುತ್ತಾರೆ. ಶ್ರಾದ್ಧ-ತರ್ಪಣಾದಿಗಳಿಂದ ಪಿತೃಗಳು ತೃಪ್ತರಾಗುತ್ತಾರೆ. ವೇದ-ಶಾಸ್ತ್ರಗಳ ಶ್ರವಣಾಭ್ಯಾಸ-ಧಾರಣಗಳಿಂದ ಋಷಿಗಳು ತೃಪ್ತರಾಗುತ್ತಾರೆ. ಸಂತಾನವನ್ನು ಪಡೆಯುವುದರಿಂದ ಪ್ರಜಾಪತಿಯು ಪ್ರಸನ್ನನಾಗುತ್ತಾನೆ.

ಈ ವಿಷಯದಲ್ಲಿ ಈ ಎರಡು ಶ್ಲೋಕಗಳನ್ನು ಉದಾಹರಿಸುತ್ತಾರೆ :

ವಾತ್ಸಲ್ಯಾತ್ಸರ್ವಭೂತೇಭ್ಯೋ ವಾಚ್ಯಾಃ ಶ್ರೋತ್ರಸುಖಾ ಗಿರಃ ।
ಪರಿತಾಪೋಪಘಾತಶ್ಚ ಪಾರುಷ್ಯಂ ಚಾತ್ರ ಗರ್ಹಿತಮ್ ॥೧೪॥

ಗೃಹಸ್ಥನಾದವನು ಎಲ್ಲರೊಡನೆಯೂ ವಾತ್ಸಲ್ಯಪೂರ್ವಕವಾಗಿ ಮಾತನಾಡಬೇಕು. ಕಿವಿಗಳಿಗೆ ಇಂಪಾಗುವಂತಹ ಮಾತುಗಳನ್ನೇ ಆಡಬೇಕು. ಮತ್ತೊಬ್ಬರಿಗೆ ಪರಿತಾಪವನ್ನುಂಟುಮಾಡುವುದು, ಮತ್ತೊಬ್ಬರನ್ನು

ಹಾಳು ಮಾಡುವುದು. ಕಠಿನವಾದ ಮಾತುಗಳನ್ನಾಡುವುದು–ಈ ಎಲ್ಲವೂ ಅತಿನಿಂದ್ಯವಾದುವುಗಳು.

ಅವಜ್ಞಾನಮಹಂಕಾರೋ ದಮ್ಭಶ್ಚೈವ ವಿಗರ್ಹಿತಃ ।
ಅಹಿಂಸಾ ಸತ್ಯಮಕ್ರೋಧಃ ಸರ್ವಾಶ್ರಮಗತಂ ತಪಃ ॥೧೫॥

ಪರತಿರಸ್ಕಾರ, ಅಹಂಕಾರ ಮತ್ತು ದಾಂಭಿಕತೆ–ಇವುಗಳು ನಿಂದ್ಯವಾದುವುಗಳು. ಯಾವ ಪ್ರಾಣಿಗೇ ಆಗಲೀ ಹಿಂಸೆಮಾಡದಿರುವುದು, ಸತ್ಯ ಹೇಳುವುದು, ಕೋಪಿಸದಿರುವುದು–ಇವು ಎಲ್ಲ ಆಶ್ರಮಿಗಳಿಗೂ ಉಕ್ತವಾಗಿರುವ ತಪಸ್ಸಾಗಿದೆ.

ಗೃಹಸ್ಥಾಶ್ರಮದಲ್ಲಿ ಪುಷ್ಪಮಾಲೆಗಳು, ನಾನಾವಿಧವಾದ ಆಭರಣ ಗಳು, ನೃತ್ಯ-ಗೀತ-ವಾದ್ಯಗಳು. ಕಣ್ಣುಗಳಿಗೆ ಆನಂದವನ್ನುಂಟುಮಾಡುವ, ಕಿವಿಗಳಿಗೆ ಇಂಪನ್ನುಂಟುಮಾಡುವ ದೃಶ್ಯಗಳು–ಎಲ್ಲವೂ ಪ್ರಾಪ್ತವಾಗುತ್ತವೆ. (ಈ ಎಲ್ಲವನ್ನೂ ಗೃಹಸ್ಥನು ಅನುಭವಿಸಬಹುದು) ಭಕ್ಷ್ಯ, ಭೋಜ್ಯ, ಲೇಹ್ಯ ಪೇಯ ಮತ್ತು ಚೋಷ್ಯರೂಪವಾದ ನಾನಾವಿಧವಾದ ಭೋಜನ ಪದಾರ್ಥಗಳು ತಿನ್ನಲು ಮತ್ತು ಕುಡಿಯಲು ಉಪಲಬ್ಧವಾಗುತ್ತವೆ. ಉದ್ಯಾನವನಗಳಲ್ಲಿ ಸಂಚರಿಸುತ್ತಾ ಆನಂದವನ್ನು ಪಡೆಯಬಹುದು. ಭಾರ್ಯೆಯೊಡನೆ ಕಾಮಸುಖವನ್ನೂ ಅನುಭವಿಸಬಹುದು.

ತ್ರಿವರ್ಗಗುಣನಿರ್ವೃತ್ತಿರ್ಯಸ್ಯ ನಿತ್ಯಂ ಗೃಹಾಶ್ರಮೇ ।
ಸ ಸುಖಾನ್ಯನುಭೂಯೇಹ ಶಿಷ್ಟಾನಾಂ ಗತಿಮಾಪ್ನುಯಾತ್ ॥೧೭॥

ಯಾವ ಮನುಷ್ಯನಿಗೆ ಗೃಹಸ್ಥಾಶ್ರಮದಲ್ಲಿ ಧರ್ಮಾರ್ಥ-ಕಾಮಗಳು (ಮೂರು ಪುರುಷಾರ್ಥಗಳು) ನಿತ್ಯವೂ ಸಿದ್ಧಿಸುತ್ತವೆಯೋ–ಆ ಗೃಹಸ್ಥನು ಈ ಲೋಕದಲ್ಲಿ ಎಲ್ಲ ವಿಧವಾದ ಸುಖಗಳನ್ನೂ ಅನುಭವಿಸಿ ಕಡೆಯಲ್ಲಿ ಶಿಷ್ಟಪುರುಷನು ಪಡೆದುಕೊಳ್ಳುವ ಸದ್ಗತಿಯನ್ನೂ ಹೊಂದುತ್ತಾನೆ.

ಉಞ್ಛವೃತ್ತಿರ್ಗೃಹಸ್ಥೋ ಯಃ ಸ್ವಧರ್ಮಾಚರಣೇ ರತಃ ।
ತ್ಯಕ್ತಕಾಮಸುಖಾರಮ್ಭಃ ಸ್ವರ್ಗಸ್ತಸ್ಯ ನ ದುರ್ಲಭಃ ॥೧೮॥

ಯಾವ ಗೃಹಸ್ಥನು ಸ್ವಧರ್ಮಾಚರಣೆಯಲ್ಲಿಯೇ ತತ್ಪರನಾಗಿರುತ್ತಾ ಉಂಛವೃತ್ತಿಯಿಂದಲೇ ಜೀವನನಿರ್ವಹಣೆಯನ್ನು ಮಾಡುತ್ತಿರುವನೋ,

ಕಾಮಸುಖಗಳನ್ನು ಪರಿತ್ಯಾಗಮಾಡಿರುವನೋ–ಅಂತಹ ಗೃಹಸ್ಥನಿಗೆ ಸ್ವರ್ಗವು ದುರ್ಲಭವಲ್ಲ."*

೧೯೧ನೆಯ ಅಧ್ಯಾಯವು ಮುಗಿಯಿತು.

೧೯೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವಾನಪ್ರಸ್ಥ ಮತ್ತು ಸಂನ್ಯಾಸಧರ್ಮಗಳ ವರ್ಣನೆ : ಹಿಮಾಲಯದ ಉತ್ತರಭಾಗದಲ್ಲಿರುವ ಉತ್ಕೃಷ್ಟಪ್ರದೇಶದ ಮಹತ್ತ್ವದ ಪ್ರತಿಪಾದನೆ : ಭೃಗು–ಭರದ್ವಾಜರ ಸಂವಾದದ ಉಪಸಂಹಾರ

ಭೃಗುವು ಹೇಳುತ್ತಾನೆ :

"ಭರದ್ವಾಜ! ಮೂರನೆಯ ಆಶ್ರಮವಾದ ವಾನಪ್ರಸ್ಥವನ್ನು ಆಶ್ರಯಿಸಿರತಕ್ಕವರು ಆಶ್ರಮೋಕ್ತವಾದ ಧರ್ಮಾನುಸರಣೆಯನ್ನು ಮಾಡುತ್ತಾ ಪವಿತ್ರವಾದ ತೀರ್ಥಗಳಲ್ಲಿಯೂ, ನದಿಗಳ ತೀರಗಳಲ್ಲಿಯೂ, ಚಿಲುಮೆಗಳಿರುವ ಸ್ಥಳಗಳಲ್ಲಿಯೂ, ಮೃಗ-ಮಹಿಷ-ವರಾಹ-ಸಿಂಹ-ಗಜಗಳಿಂದ ನಿಬಿಡವಾದ ಅರಣ್ಯಪ್ರದೇಶಗಳಲ್ಲಿಯೂ ಏಕಾಂತದಲ್ಲಿದ್ದುಕೊಂಡು ತಪಸ್ಸನ್ನು ಮಾಡುತ್ತಿರುತ್ತಾರೆ. ಗೃಹಸ್ಥರ ಉಪಭೋಗಕ್ಕೆ ಮಾತ್ರವೇ ಯೋಗ್ಯವಾದ, ಗ್ರಾಮಜನೋಚಿತವಾದ ಸುಂದರವಾದ ವಸ್ತ್ರಗಳನ್ನೂ, ರುಚಿಕರವಾದ ಭೋಜನಗಳನ್ನೂ, ವಿಷಯೋಪಭೋಗಗಳನ್ನೂ ಪರಿತ್ಯಾಗಮಾಡಿ, ಅರಣ್ಯಗಳಲ್ಲಿ ತಾವಾಗಿಯೇ ಬೆಳೆಯುವ ಫಲ-ಮೂಲ-ಪರ್ಣಗಳಿಗೆ ಮಾತ್ರವೇ ಪರಿಮಿತವಾದ, ಗ್ರಾಮವಾಸಿಗಳ ದೃಷ್ಟಿಯಿಂದ ವಿಚಿತ್ರವಾಗಿ ಕಾಣುವ, ನಿಯತವಾದ ಆಹಾರವನ್ನು ಸೇವಿಸುತ್ತಾರೆ. ನೆಲದ ಮೇಲೆಯೇ ಕುಳಿತುಕೊಳ್ಳುತ್ತಾರೆ. ಭೂಮಿ, ಬಂಡೆ, ಮುಳಲು, ನುರುಜುಗಲ್ಲು, ಬೂದಿ–ಇವುಗಳ ಮೇಲೆಯೇ ಮಲಗುತ್ತಾರೆ. ಕಾಶ, ಕುಶ, ಮೃಗಚರ್ಮ ಮತ್ತು ವಲ್ಕಲಗಳಿಂದ (ವೃಕ್ಷಗಳ ತೊಗಟೆಯಿಂದ) ಮಾಡಿದ ವಸ್ತ್ರವನ್ನೇ ಉಡು

* ಉಂಛವೃತ್ತಿ : ಗದ್ದೆಯನ್ನು ಕೊಯ್ದನಂತರ ಕೆಳಗೆ ಉದುರಿರುವ ಕಾಳುಗಳನ್ನು ಆರಿಸಿಕೊಂಡು ಅದರಿಂದಲೇ ಜೀವನನಿರ್ವಹಣೆ ಮಾಡುವುದು.

ತ್ತಾರೆ. ಗಡ್ಡ-ಮೀಸೆ-ಉಗುರು-ಜಟೆಗಳನ್ನು ಯಥೇಚ್ಛವಾಗಿ ಬೆಳೆಯಲು ಬಿಟ್ಟಿರುತ್ತಾರೆ. (ಆಯುಷ್ಕರ್ಮವನ್ನು ಮಾಡಿಸಿಕೊಳ್ಳುವುದಿಲ್ಲ.) ನಿಯತ ವಾದ ಸಮಯಗಳಲ್ಲಿ ಸ್ನಾನಮಾಡುತ್ತಾ ಕಾಲಾತೀತವಾಗದಂತೆ ಬಲಿ-ವೈಶ್ವ ದೇವಾದಿಗಳನ್ನೂ ಅಗ್ನಿಹೋತ್ರಗಳನ್ನೂ ಮಾಡುತ್ತಾರೆ. ಹೊತ್ತಿಗೆ ಮುಂಚೆ ಎದ್ದು ಅಗ್ನಿಹೋತ್ರ-ಪೂಜಾದಿಗಳಿಗೆ ಸಮಿತ್ಕುಶ-ಫಲ-ಪುಷ್ಪಾದಿಗಳನ್ನು ತಂದು ಆಶ್ರಮವನ್ನು ಸ್ವಚ್ಛಗೊಳಿಸಿದನಂತರ ಅವರಿಗೆ ಸ್ವಲ್ಪ ವಿಶ್ರಾಂತಿಯು ಸಿಕ್ಕುತ್ತದೆ. ಶೀತೋಷ್ಣ-ವೃಷ್ಟಿ-ವಾತಗಳ ಪ್ರಖರತೆಯನ್ನು ಸದಾ ಸಹಿಸಿಕೊಳ್ಳುವ ವಾನಪ್ರಸ್ಥಾಶ್ರಮಿಗಳ ಚರ್ಮವು ಒಡೆದುಹೋಗಿರುತ್ತದೆ. (ಬಿರುಕುಬಿಟ್ಟಿರುತ್ತದೆ.) ನಾನಾವಿಧವಾದ ಕಠೋರನಿಯಮಗಳನ್ನು ಪರಿ ಪಾಲಿಸುತ್ತಾ ಸತ್ಕರ್ಮಗಳನ್ನು ಅನುಷ್ಠಾನಮಾಡುವ ವಾನಪ್ರಸ್ಥಾಶ್ರಮಿಗಳ ರಕ್ತ-ಮಾಂಸಗಳು ಒಣಗಿಹೋಗಿರುತ್ತವೆ. ಚರ್ಮ ಮತ್ತು ಮೂಳೆಗಳು ಮಾತ್ರವೇ ಉಳಿದಿರುತ್ತವೆ. ಆದರೂ ಅವರು ಧೈರ್ಯಶಾಲಿಗಳಾಗಿ ಕೇವಲ ಸತ್ತ್ವಯೋಗದಿಂದ ಶರೀರವನ್ನು ಧಾರಣೆಮಾಡಿಕೊಂಡಿರುತ್ತಾರೆ.

ಯಸ್ತ್ವೇತಾಂ ನಿಯತಶ್ಚರ್ಯಾಂ ಬ್ರಹ್ಮರ್ಷಿವಿಹಿತಾಂ ಚರೇತ್ ।
ಸ ದಹೇದಗ್ನಿವದ್ದೋಷಾಞ್ಜಯೇಲ್ಲೋಕಾಂಶ್ಚ ದುರ್ಜಯಾನ್ ॥

ಯಾವ ಪುರುಷನು ನಿಯಮಪೂರ್ವಕವಾಗಿದ್ದುಕೊಂಡು ಬ್ರಹ್ಮರ್ಷಿ ಗಳಿಂದಲೇ ವಿಹಿತವಾಗಿರುವ ಈ ವಾನಪ್ರಸ್ಥಾಶ್ರಮಧರ್ಮವನ್ನು ಯಥಾ ವತ್ತಾಗಿ ಅನುಷ್ಠಾನಮಾಡುವನೋ–ಅಂತಹ ಪುರುಷನು ಅಗ್ನಿಯಂತೆ ತನ್ನ ಲ್ಲಿರುವ ಪಾಪಗಳೆಲ್ಲವನ್ನೂ ಭಸ್ಮಮಾಡಿ ದುರ್ಲಭವಾದ ಲೋಕಗಳನ್ನು ಪಡೆದುಕೊಳ್ಳುತ್ತಾನೆ.

ಭರದ್ವಾಜ! ಈಗ ನಾನು ಸಂನ್ಯಾಸಿಗಳ ಆಚಾರ-ವ್ಯವಹಾರಗಳನ್ನು ಹೇಳುತ್ತೇನೆ. ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಪುರುಷರು ಅಗ್ನಿಹೋತ್ರ, ಧನ, ಕಳತ್ರ–ಇವೇ ಮೊದಲಾದ ಮನೆಯಲ್ಲಿರುವ ಸರ್ವಸಾಮಗ್ರಿಗಳನ್ನೂ ಪರಿತ್ಯಾಗಮಾಡಿ ಭೋಗಗಳನ್ನು ತೊರೆದು, ಸ್ನೇಹಪಾಶಗಳನ್ನು ಕಿತ್ತೊಗೆದು ಮನೆಯನ್ನು ಬಿಟ್ಟುಹೋಗುತ್ತಾರೆ. ಮಣ್ಣುಹೆಂಟೆ, ಕಲ್ಲು ಮತ್ತು ಚಿನ್ನಗಳನ್ನು ಅವರು ಸಮವಾಗಿ ಭಾವಿಸುತ್ತಾರೆ. ತ್ರಿವರ್ಗದಲ್ಲಿ (ಧರ್ಮಾರ್ಥ-ಕಾಮಗಳಲ್ಲಿ) ಅವರ ಬುದ್ಧಿಯು ನಿರಾಸಕ್ತವಾಗಿರುತ್ತದೆ.

ಶತ್ರು, ಮಿತ್ರ ಮತ್ತು ಉದಾಸೀನರಲ್ಲಿ ಅವರು ಸಮಾನವಾದ ದೃಷ್ಟಿಯುಳ್ಳವರಾಗಿರುತ್ತಾರೆ. ಸ್ಥಾವರ, ಜರಾಯುಜ, ಅಂಡಜ ಸ್ವೇದಜ ಮತ್ತು ಉದ್ಭಿಜ್ಜ ಪ್ರಾಣಿಗಳ ವಿಷಯದಲ್ಲಿ, ಮಾತು-ಮನಸ್ಸು ಮತ್ತು ಕರ್ಮಗಳ ಮೂಲಕವಾಗಿ ಯಾವ ವಿಧವಾದ ದ್ರೋಹವನ್ನೂ ಮಾಡುವುದಿಲ್ಲ. ಆಶ್ರಮ-ಮಠಾದಿಗಳಲ್ಲಿ ವಾಸಮಾಡುವುದಿಲ್ಲ. ಸಂನ್ಯಾಸಿಗಳು ಯಾವಾಗಲೂ ಸಂಚರಿಸುತ್ತಲೇ ಇರುತ್ತಾರೆ. ರಾತ್ರಿಯ ಕಾಲದಲ್ಲಿ ಪರ್ವತಗಳ ಗುಹೆಗಳಲ್ಲಾಗಲೀ, ನದಿಯ ತೀರಗಳಲ್ಲಾಗಲೀ, ವೃಕ್ಷಗಳ ಬುಡದಲ್ಲಾಗಲೀ, ದೇವಮಂದಿರಗಳಲ್ಲಾಗಲೀ, ನಗರಗಳಲ್ಲಾಗಲೀ ತಂಗುತ್ತಾರೆ. ನಗರಗಳಲ್ಲಿ ಐದು ರಾತ್ರಿಗಳಿಗಿಂತಲೂ ಹೆಚ್ಚಾಗಿ, ಗ್ರಾಮಗಳಲ್ಲಿ ಒಂದು ರಾತ್ರಿಗಿಂತಲೂ ಹೆಚ್ಚಾಗಿ ತಂಗುವುದಿಲ್ಲ. ಪ್ರಾಣಧಾರಣೆಗಾಗಿ ವಿಶುದ್ಧವಾದ ಧರ್ಮವನ್ನು ಪರಿಪಾಲನೆ ಮಾಡುವ ತಮ್ಮ ವರ್ಣಾಶ್ರಮಧರ್ಮಗಳಿಗೆ ವಿರೋಧವಾದ ಕರ್ಮಗಳನ್ನು ಮಾಡದಿರುವ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರ ಮನೆಗಳ ಮುಂದೆ ನಿಲ್ಲುತ್ತಾರೆ. ಭಿಕ್ಷೆಯನ್ನು ಕೇಳದೇ ಭಿಕ್ಷಾಪಾತ್ರೆಯಲ್ಲಿ ಎಷ್ಟು ಅನ್ನವು ಸಂಗ್ರಹವಾಗು ವುದೋ ಅಷ್ಟನ್ನೇ ತಿಂದು ತೃಪ್ತರಾಗುತ್ತಾರೆ. ಕಾಮ, ಕ್ರೋಧ, ಲೋಭ, ಮೋಹ, ಕೃಪಣತೆ, ದಂಭ, ನಿಂದೆ, ಅಭಿಮಾನ ಮತ್ತು ಹಿಂಸೆಗಳನ್ನು ಸಂಪೂರ್ಣವಾಗಿ ತ್ಯಾಗಮಾಡುತ್ತಾರೆ.

ಇವರ ವಿಷಯದಲ್ಲಿ ಈ ಶ್ಲೋಕಗಳು ಪ್ರಸಿದ್ಧವಾಗಿದೆ :

ಅಭಯಂ ಸರ್ವಭೂತೇಭ್ಯೋ ದತ್ತ್ವಾ ಯಶ್ಚರತೇ ಮುನಿಃ ।
ನ ತಸ್ಯ ಸರ್ವಭೂತೇಭ್ಯೋ ಭಯಮುತ್ಪದ್ಯತೇ ಕ್ವಚಿತ್ ॥೪॥

ಸರ್ವಪ್ರಾಣಿಗಳಿಗೂ ಅಭಯಪ್ರದಾನಮಾಡುತ್ತಾ ಯಾವ ಮುನಿಯು ಸಂಚರಿಸುತ್ತಿರುತ್ತಾನೆಯೋ ಅಂತಹ ಮುನಿಗೆ ಪ್ರಪಂಚದಲ್ಲಿರುವ ಯಾವ ಪ್ರಾಣಿಗಳಿಂದಲೂ ಯಾವ ವಿಧವಾದ ಭಯವೂ ಉಂಟಾಗುವುದಿಲ್ಲ.

ಕೃತ್ವಾಗ್ನಿಹೋತ್ರಂ ಸ್ವಶರೀರಸಂಸ್ಥಂ
ಶಾರೀರಮಗ್ನಿಂ ಸ್ವಮುಖೇ ಜುಹೋತಿ ।
ವಿಪ್ರಸ್ತು ಭೈಕ್ಷ್ಯೋಪಗತೈರ್ಹವಿರ್ಭಿ-
ಶ್ಚಿತಾಗ್ನಿನಾಂ ಸ ವ್ರಜತೇ ಹಿ ಲೋಕಮ್ ॥೫॥

ಯಾವ ಬ್ರಾಹ್ಮಣನು ಅಗ್ನಿಹೋತ್ರವನ್ನು ತನ್ನ ಶರೀರದಲ್ಲಿ ಆರೋಪಿಸಿಕೊಂಡು ಶರೀರವನ್ನೇ ಇಷ್ಟಕಾಚಿತಿಯನ್ನಾಗಿ ಮಾಡಿಕೊಂಡು ತನ್ನ ಮುಖದ ಮೂಲಕವಾಗಿ ಭಿಕ್ಷಾರೂಪವಾದ ಹವಿಸ್ಸನ್ನು ಹೋಮಮಾಡುವನೋ–ಅಂತಹ ಸಂನ್ಯಾಸಿಯು ಅಗ್ನಿಚಯನವನ್ನು ಮಾಡುವ ಅಗ್ನಿಹೋತ್ರಿಗಳು ಹೋಗುವ ಲೋಕಕ್ಕೇ ಹೋಗುತ್ತಾನೆ. (**ಸ್ವಶರೀರಸಂಸ್ಥಂ ಶಾರೀರಮಗ್ನಿಂ ಸ್ವಮುಖೇ ಜುಹೋತಿ**– ಎನ್ನುವುದಕ್ಕೆ ವ್ಯಾಖ್ಯಾನಕಾರರು ಆತ್ಮಸಾಕ್ಷಾತ್ಕಾರವೆನ್ನುವ ಅರ್ಥವನ್ನು ಮಾಡಿದ್ದಾರೆ. **ಶಾರೀರಂ**= **ಶರೀರಸಂಸ್ಥಂ** ಶರೀರದಲ್ಲಿರುವ, **ಅಗ್ನಿಮಿವ ಪ್ರಕಾಶಮಾನಂ ಜೀವಂ**= ಅಗ್ನಿಯಂತೆ ಪ್ರಕಾಶಮಾನವಾಗಿರುವ ಜೀವವನ್ನು, **ಸ್ವಮುಖೇ**= **ನಿರ್ಗಮನ ಸ್ಥಾನೇ ಪರಮಾತ್ಮನಿ ಜುಹೋತಿ**–ಬ್ರಹ್ಮರಂಧ್ರದಲ್ಲಿರುವ ಪರಮಾತ್ಮನಲ್ಲಿ ಅರ್ಪಿಸುತ್ತಾನೆ. **ಜೀವಂ ಬ್ರಹ್ಮಣಿ ಪ್ರವಿಲಾಪಯತಿ = ಯೋಗಂ ಕರೋತಿ**– ಜೀವನನ್ನು ಬ್ರಹ್ಮನಲ್ಲಿ ಸೇರಿಸುತ್ತಾನೆ. ಅಂತಹವನು **ಚಿತಾನಾಂ**= **ನಷ್ಟಾನಾಂ ಅಗ್ನೀನಾಂ** =ನಷ್ಟವಾದ ಅಗ್ನಿಯುಳ್ಳವರ **ಲೋಕಂ ಅವ್ಯಕ್ತಭಾವಂ ವ್ರಜತೇ** = ಅವ್ಯಕ್ತಭಾವವನ್ನು ಹೊಂದುತ್ತಾನೆ. ಪರಮಾತ್ಮನಲ್ಲಿ ಜೀವನನ್ನು ವಿಲೀನಗೊಳಿಸಿದನಂತರ ಪರಮಾತ್ಮನಂತೆ ಅವ್ಯಕ್ತನೇ ಆಗುತ್ತಾನೆ.

ಯಥಾ ನಿರಿನ್ಧನೋ ವಹ್ನಿಃ ಸ್ವಯೋನಾವುಪಶಾಮ್ಯತಿ ।
ತಥಾ ವೃತ್ತಿಕ್ಷಯೇ ಚಿತ್ತಂ ಸ್ವಯೋನಾವುಪಶಾಮ್ಯತಿ ॥

ಅಗ್ನಿಯು, ಕಟ್ಟಿಗೆಯು ಮುಗಿದನಂತರ ಯಾವ ರೀತಿಯಲ್ಲಿ ತನ್ನಲ್ಲಿಯೇ ಉಪಶಮನವನ್ನು ಹೊಂದುವುದೋ–ಹಾಗೆಯೇ ಚಿತ್ತವು, ಸಂಸಾರವೃತ್ತಿಯೆಲ್ಲವೂ ಕ್ಷಯಿಸಿದನಂತರ ತನ್ನ ಮೂಲಸ್ಥಾನವಾದ ಬ್ರಹ್ಮ ವಸ್ತುವಿನಲ್ಲಿಯೇ ಉಪಶಮನವಾಗುತ್ತದೆ.

ಮೋಕ್ಷಾಶ್ರಮಂ ಯಶ್ಚರತೇ ಯಥೋಕ್ತಂ
ಶುಚಿಃ ಸುಸಂಕಲ್ಪಿತಮುಕ್ತಬುದ್ಧಿಃ ।
ಅನಿನ್ಧನಂ ಜ್ಯೋತಿರಿವ ಪ್ರಶಾನ್ತಂ
ಸ ಬ್ರಹ್ಮಲೋಕಂ ಶ್ರಯತೇ ಮನುಷ್ಯಃ ॥೬॥

ಯಾವನು ಬುದ್ಧಿಯನ್ನು ಸಂಕಲ್ಪಗಳಿಂದ ರಹಿತವನ್ನಾಗಿ ಮಾಡಿ ಪರಿಶುದ್ಧನಾಗಿ ಶಾಸ್ತ್ರೋಕ್ತವಿಧಿಗೆ ಅನುಸಾರವಾಗಿ ಮೋಕ್ಷಾಶ್ರಮದ (ಸಂನ್ಯಾಸದ) ನಿಯಮಗಳನ್ನು ಪರಿಪಾಲಿಸುವನೋ–ಅಂತಹ ಮನುಷ್ಯನು ಇಂಧನದಿಂದ ರಹಿತವಾದ ಅಗ್ನಿಯಂತೆ–ಪರಮಶಾಂತವಾಗಿರುವ ಜ್ಯೋತಿರ್ಮಯವಾದ ಬ್ರಹ್ಮಲೋಕವನ್ನು ಹೊಂದುತ್ತಾನೆ."

ಭರದ್ವಾಜನು ಹೇಳುತ್ತಾನೆ :

ಅಸ್ಮಾಲ್ಲೋಕಾತ್ಪರೋ ಲೋಕಃ ಶ್ರೂಯತೇ ನೋಪಲಭ್ಯತೇ ।
ತಮಹಂ ಜ್ಞಾತುಮಿಚ್ಛಾಮಿ ತದ್ಭವಾನ್ವಕ್ತುಮರ್ಹತಿ ॥೭॥

"ಈ ಲೋಕಕ್ಕಿಂತಲೂ ಶ್ರೇಷ್ಠವಾದ ಲೋಕವೊಂದಿರುವುದೆಂದು ಕೇಳಿದ್ದೇನೆ. ಆದರೆ ಆ ಲೋಕವನ್ನು ನೋಡಲು ಸಾಧ್ಯವಾಗುವುದಿಲ್ಲ. ನಾನು ಆ ಲೋಕದ ವಿಷಯವನ್ನು ತಿಳಿದುಕೊಳ್ಳಬೇಕೆಂದಿರುತ್ತೇನೆ. ಹೇಳುವ ಕೃಪೆಮಾಡು."

ಭೃಗುವು ಹೇಳುತ್ತಾನೆ :

ಉತ್ತರೇ ಹಿಮವತ್ಪಾರ್ಶ್ವೇ ಪುಣ್ಯೇ ಸರ್ವಗುಣಾನ್ವಿತೇ ।
ಪುಣ್ಯಃ ಕ್ಷೇಮ್ಯಶ್ಚ ಕಾಮ್ಯಶ್ಚ ಸ ಪರೋ ಲೋಕ ಉಚ್ಯತೇ ॥೮॥

"ಉತ್ತರದಿಕ್ಕಿನಲ್ಲಿ ಹಿಮವತ್ಪರ್ವತದ ಪಕ್ಕದಲ್ಲಿ ಸರ್ವಗುಣಸಂಪನ್ನವಾದ ಪುಣ್ಯಮಯವಾದ ಪ್ರದೇಶವಿದೆ. ಅದನ್ನು ಲೋಕಗಳಲ್ಲಿಯೇ ಪರಮ ಶ್ರೇಷ್ಠವಾದ ಲೋಕವೆನ್ನುತ್ತಾರೆ. ಆ ಪ್ರದೇಶವು ಪರಮಪವಿತ್ರವಾದುದು, ಕಲ್ಯಾಣಕರವಾದುದು ಮತ್ತು ಕಾಮ್ಯವಾದುದು. (ಈ ಶ್ಲೋಕದಲ್ಲಿ ಹಿಮವತ್ಪರ್ವತದ ಪಕ್ಕದಲ್ಲಿರುವ ದೇಶದ ವರ್ಣನೆಯು ಹೇಳಲ್ಪಟ್ಟಿಲ್ಲವೆಂದೂ, ಇದು ಪರಮಾತ್ಮನನ್ನು ಕುರಿತು ಹೇಳಿರುವ ಶ್ಲೋಕವೆಂದೂ ವ್ಯಾಖ್ಯಾನಕಾರರು ಯುಕ್ತಿಯುಕ್ತವಾಗಿ ಪ್ರತಿಪಾದಿಸಿದ್ದಾರೆ. ಆದರೆ ಕೆಲವು ಪದಗಳಿಗೆ ಅವರು ಮಾಡಿರುವ ಅರ್ಥವು ಅಸಹಜವಾಗಿ ಕಾಣುತ್ತದೆ. ಹಿಂದೆ ಉತ್ತರಕುರುಗಳ ದೇಶದ ವರ್ಣನೆಯಿದೆ. ಇದೂ ಕೂಡ ಅದೇ ಪ್ರದೇಶವಿರಬಹುದೆಂದು ಊಹಿಸಲು ಅವಕಾಶವಿದೆ. ಆಧ್ಯಾತ್ಮಪರವಾಗಿ ಅರ್ಥಮಾಡುವ ಅವಶ್ಯಕತೆಯಿಲ್ಲವೆಂದೇ ತೋರುತ್ತದೆ. ಉತ್ತರೇ =

ಉತ್ಕೃಷ್ಟತರೇ – ಉತ್ಕೃಷ್ಟವಾದ, **ಹಿಮವತ್ಪಾರ್ಶ್ವೇ = ಹಿಮವತ್ತುಲ್ಯೇ ಮೇರುಶಬ್ದೋದಿತ ನಾಸಾವಂಶಃ ತಸ್ಯ ಪಾರ್ಶ್ವೇ = ಸಮೀಪೇ** ಹಿಮವತ್ಸದೃಶವಾದ ಮೇರುಶಬ್ದದಿಂದ ಪ್ರತೀಯಮಾನವಾದ ಮೂಗಿನ ದಿಂಡಿನ ಪಾರ್ಶ್ವದಲ್ಲಿರುವ, **ಭ್ರೂಘ್ರಾಣಮಧ್ಯೇ** – ಹುಬ್ಬುಗಳ ಮತ್ತು ಮೂಗಿನ ದಿಂಡಿನ ಮಧ್ಯದಲ್ಲಿ, **ಪುಣ್ಯೇ= ಬಹುಪುಣ್ಯಗಮ್ಯೇ**– ಬಹುಪುಣ್ಯದಿಂದ ಹೊಂದಲ್ಪಡುವ, **ಸರ್ವಗುಣೈಃ = ರಮಣೀಯತ್ವಾದಿ ಸರ್ವಗುಣೈರ್ಯುತೇ ದೇಶೇ**– ರಮಣೀಯತ್ವಾದಿ ಸರ್ವಗುಣಗಳಿಂದ ಯುಕ್ತವಾದ ದೇಶದಲ್ಲಿ, **ಪುಣ್ಯಃ = ಅಪಹತಪಾಪ್ಮಾ**– ಸಕಲವಾದ ಪಾಪಗಳಿಂದಲೂ ವಿಮುಕ್ತನಾದ, **ಕ್ಷೇಮ್ಯಃ = ಸತ್ಯಕಾಮಃ** – ಸತ್ಯಕಾಮನಾದ ಸತ್ಯಸಂಕಲ್ಪನಾದ, **ಕಾಮ್ಯಃ = ಸರ್ವಕಾಮೋಪಭೋಗ್ಯಃ** – ಸರ್ವಕಾಮೋಪಭೋಗಯೋಗ್ಯನಾದ, **ಪರೋ ಲೋಕಃ = ಪರಮಾತ್ಮಾ ಅಸ್ತೀತ್ಯುಚ್ಯತೇ**– ಪರಮಾತ್ಮನು ಇದ್ದಾನೆಂದು ಹೇಳುತ್ತಾರೆ. ಸೋಪಾಧಿಕನಾದ ಬ್ರಹ್ಮನ ಗುಣಗಳನ್ನು ಹೇಳುವಾಗ ಶ್ರುತಿಯು ಈ ಗುಣಗಳನ್ನೇ ಹೇಳಿದೆ. **ಯ ಆತ್ಮಾಪಹತಪಾಪ್ಮಾ ವಿರಜೋಽಪಮೃತ್ಯುರ್ವಿಶೋಕೋ ವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಙ್ಕಲ್ಪಃ ।** ಮೇರುಪರ್ವತಕ್ಕೆ ಬದಲಾಗಿ ಹಿಮವತ್ಪರ್ವತವೆಂದು ಹೇಳಿದ್ದಾರೆಂಬುದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ. ಮೇರುದಂಡವೆಂಬುದು ನಮ್ಮ ಶರೀರದಲ್ಲಿಯೇ ಇದೆ. **ಹೇಮರೂಪೋ ಭ್ರುವೋರ್ಮಧ್ಯೇ ಮೇರುಸ್ತಿಷ್ಠತಿ ಪರ್ವತಃ** – ಸುವರ್ಣಮಯವಾದ ಮೇರುಪರ್ವತವು ಹುಬ್ಬುಗಳ ನಡುಭಾಗದಲ್ಲಿದೆ. ಅಂತಹ ಸರ್ವಗುಣಯುಕ್ತವಾದ ಮೇರು (ಹಿಮವತ್ಪರ್ವತದ) ದಂಡದ ಪಾರ್ಶ್ವದಲ್ಲಿರುವ ಹುಬ್ಬುಗಳ ನಡುಭಾಗದಲ್ಲಿ ಪುಣ್ಯನಾದ, ಕ್ಷೇಮ್ಯನಾದ ಪರಮಾತ್ಮನಿದ್ದಾನೆ. ವ್ಯಾಖ್ಯಾನಕಾರರ ಅಭಿಪ್ರಾಯದಂತೆ ಇದು ಈ ಶ್ಲೋಕದ ತಾತ್ಪರ್ಯವಾಗಿದೆ.)

ತತ್ರ ಹ್ಯಪಾಪಕರ್ಮಾಣಃ ಶುಚಯೋಽತ್ಯನ್ತನಿರ್ಮಲಾಃ ।
ಲೋಭಮೋಹಪರಿತ್ಯಕ್ತಾ ಮಾನವಾ ನಿರುಪದ್ರವಾಃ ॥೯॥

ಅಲ್ಲಿ ಪಾಪಕರ್ಮಗಳಿಂದ ರಹಿತರಾದ, ಪವಿತ್ರರಾದ, ಅತ್ಯಂತನಿರ್ಮಲ

ರಾದ, ಲೋಭ-ಮೋಹಶೂನ್ಯರಾದ, ಉಪದ್ರವರಹಿತರಾದ ಮಾನವರು ವಾಸಮಾಡುತ್ತಾರೆ.

(**ಅಪಾಪಕರ್ಮತ್ವಾದಿ ಗುಣಚತುಷ್ಟಯವನ್ತೋ ಮಾನವಾಃ ಸನ್ತಃ ನಿರುಪದ್ರವಾಃ ಭವನ್ತಿ** – ಎಂದು ವ್ಯಾಖ್ಯಾನಕಾರರು ಈ ಶ್ಲೋಕಕ್ಕೆ ಅನ್ವಯಮಾಡಿದ್ದಾರೆ. ಪಾಪಕರ್ಮರಹಿತರಾದ, ಪವಿತ್ರರಾದ, ಅತ್ಯಂತ ನಿರ್ಮಲರಾದ, ಲೋಭ-ಮೋಹಶೂನ್ಯರಾದ ಮಾನವರು ಅಲ್ಲಿಗೆ ಹೋಗಿ (ಪರಮಾತ್ಮನಲ್ಲಿ ಸೇರಿ) ಉಪದ್ರವರಹಿತರಾಗುತ್ತಾರೆ. **ತಂ ವಾ ಏತಂ ಸೇತುಂ ತೀರ್ತ್ವಾಽನ್ಧಃ ಸನ್ನನನ್ಧೋಭವತಿ ಉಪತಾಪೀ ಸನ್ನನುಪತಾಪೀ ಭವತಿ**– ಸಮಾಧಿಕಾಲದಲ್ಲಿ ಆತ್ಮನನ್ನು ಸೇರಿದನಂತರ ಅಂಧನು ಅನಂಧನಾಗುತ್ತಾನೆ. ಉಪದ್ರವವಿರುವವನು ಉಪದ್ರವರಹಿತನಾಗುತ್ತಾನೆ– ಎಂಬ ಶ್ರುತಿವಚನವನ್ನು ಇದಕ್ಕೆ ಪೋಷಕವಾಗಿ ಉದ್ಧರಿಸಿದ್ದಾರೆ.)

ಸ ಸ್ವರ್ಗಸದೃಶೋ ದೇಶಸ್ತತ್ರ ಹ್ಯುಕ್ತಾಃ ಶುಭಾ ಗುಣಾಃ ।
ಕಾಲೇ ಮೃತ್ಯುಃ ಪ್ರಭವತಿ ಸ್ಪೃಶನ್ತಿ ವ್ಯಾಧಯೋ ನ ಚ ॥೧೦॥

ಆ ದೇಶವು ಸ್ವರ್ಗತುಲ್ಯವಾಗಿದೆ. ಅಲ್ಲಿ ಸಕಲಶುಭಗುಣಗಳೂ ಶಾಶ್ವತವಾಗಿರುವುವೆಂದು ಹೇಳುತ್ತಾರೆ. ಕಾಲಾನುಸಾರವಾಗಿ ಅಲ್ಲಿಯ ಜನರಿಗೆ ಮರಣವು ಪ್ರಾಪ್ತವಾಗುತ್ತದೆ. (ಯಾರಿಗೂ ಅಕಾಲಮರಣ ವಿಲ್ಲ.) ಅಲ್ಲಿರುವವರನ್ನು ಆಧಿ-ವ್ಯಾಧಿಗಳು ಸ್ಪರ್ಶಿಸುವುದೂ ಇಲ್ಲ. (ಪರಮಾತ್ಮನಿರುವ ಭ್ರೂಮಧ್ಯಪ್ರದೇಶವು ಸ್ವರ್ಗಸದೃಶವಾಗಿದೆ. (ಸುಖಮಯವಾಗಿದೆ). ಅಲ್ಲಿರುವ ಪರಮಾತ್ಮನು ಸತ್ಯಕಾಮ-ಸತ್ಯ ಸಂಕಲ್ಪಾದಿ ಗುಣಗಳಿಂದ ವಿಶಿಷ್ಟನಾಗಿದ್ದಾನೆ. ನಿರುಪದ್ರವಾಃ ಎಂಬುದಕ್ಕೆ **ವ್ಯಾಧಯಃ ನ ಸ್ಪೃಶನ್ತಿ** – ಎಂಬುದು ವ್ಯಾಖ್ಯೆಯಾಗಿದೆ. **ಕಾಲೇ ಮೃತ್ಯುಃ** – ಎಂಬುದನ್ನು ವ್ಯಾಖ್ಯಾನಕಾರರು **ಕಾಲೇಽಮೃತ್ಯುಃ ಪ್ರಭವತಿ** ಎಂಬುದಾಗಿ ಮಾಡಿ **ಅಮೃತ್ಯುಃ ಆತ್ಮಾ ಸಮಾಧಿಕಾಲೇ ಪ್ರಭವತಿ ಈಶ್ವರೋ ಭವತಿ** = ಸಮಾಧಿಕಾಲದಲ್ಲಿ ಆತ್ಮನು ಈಶ್ವರನಾಗುತ್ತಾನೆ ಎಂದು ವ್ಯಾಖ್ಯಾನಿಸಿದ್ದಾರೆ. **ಕಾಲೇ ಮೃತ್ಯುಃ** ಎಂದೇ ಇದ್ದರೂ ಆತ್ಮನ ಪರವಾಗಿ ಹೀಗೆ ಅರ್ಥಮಾಡಬಹುದಾಗಿದೆ. ಕಡೆಯಲ್ಲಿ **ಚ** ಎಂಬ ಶಬ್ದ

ವಿರುವುದರಿಂದ **ಕಾಲೇ ಮೃತ್ಯುಃ ನ ಪ್ರಭವತಿ ವ್ಯಾಧಯಶ್ಚ ನ ಸ್ಪೃಶನ್ತಿ**= ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡವನಿಗೆ ಆಧಿ-ವ್ಯಾಧಿಗಳ ಭಯವಾಗಲೀ, ಅಕಾಲಮೃತ್ಯುವಿನ ಭಯವಾಗಲೀ ಇರುವುದಿಲ್ಲ- ಎಂದೂ ಅರ್ಥಮಾಡಬಹುದಾಗಿದೆ.)

ನ ಲೋಭಃ ಪರದಾರೇಷು ಸ್ವದಾರನಿರತೋ ಜನಃ ।
ನಾನ್ಯೋನ್ಯಂ ಬಧ್ಯತೇ ತತ್ರ ದ್ರವ್ಯೇಷು ಚ ನ ವಿಸ್ಮಯಃ ।
ಪರೋ ಹ್ಯಧರ್ಮೋ ನೈವಾಸ್ತಿ ಸಂದೇಹೋ ನಾಪಿ ಜಾಯತೇ ॥

ಆ ಪ್ರದೇಶದಲ್ಲಿರುವ ಯಾವ ಮನುಷ್ಯರ ಮನಸ್ಸಿನಲ್ಲಿಯೂ ಪರ ಸ್ತ್ರೀಯರ ವಿಷಯದಲ್ಲಿ ಲೋಭವುಂಟಾಗುವುದಿಲ್ಲ. ಎಲ್ಲ ಜನರೂ ತಮ್ಮ-ತಮ್ಮ ಪತ್ನಿಯರಲ್ಲಿಯೇ ಅನುರಕ್ತರಾಗಿರುತ್ತಾರೆ. ಅಲ್ಲಿಯ ಜನರು ಧನದ ಸಲುವಾಗಿ ಒಬ್ಬರು ಮತ್ತೊಬ್ಬರನ್ನು ಹಿಂಸಿಸುವುದಿಲ್ಲ ಅಥವಾ ಬಂಧಿಸುವು ದಿಲ್ಲ. ಅವರಿಗೆ ಯಾವಾಗಲೂ ಯಾವುದರಲ್ಲಿಯೂ ವಿಸ್ಮಯವೇ ಉಂಟಾಗು ವುದಿಲ್ಲ. ಅಲ್ಲಿ ಅಧರ್ಮದ ಹೆಸರೂ ಕೇಳಿಬರುವುದಿಲ್ಲ. ಯಾರ ಮನಸ್ಸಿ ನಲ್ಲಿಯೂ ಯಾವ ವಿಷಯವಾಗಿಯೂ ಸಂದೇಹವೂ ಉಂಟಾಗುವುದಿಲ್ಲ. (ಈ ಶ್ಲೋಕದಲ್ಲಿಯೂ ವ್ಯಾಖ್ಯಾನಕಾರರ ಅಭಿಪ್ರಾಯದಂತೆ ಅರ್ಥ ಮಾಡಲು ಸಾಧ್ಯವಾಗದ ಕೆಲವು ಪದಗಳಿವೆ. ಆ ಪದಗಳಿಗೆ ಅವರು ವಿಶೇಷ ರೀತಿಯಲ್ಲಿಯೇ ಅರ್ಥಮಾಡಿರುತ್ತಾರೆ. **ಪರದಾರೇಷು ಪರೇ ಅನಾತ್ಮ ಭೂತಾಶ್ಚ ತೇ ದಾರಾಃ ಇತಿ ಸಮಾಸಃ** – ಅನಾತ್ಮಭೂತರಾದ ಯಾವ ಪತ್ನಿಯರಿರುವರೋ ಅವರ ವಿಷಯದಲ್ಲಿ ಆಸಕ್ತರಾಗಿರದೇ, **ಸ್ವದಾರ ನಿರತಾಃ ಸ್ವ ಆತ್ಮೈವ ದಾರಾಃ ತತ್ರ ನಿರತಾಃ** – ಆತ್ಮವನ್ನೇ ಪತ್ನಿ ಯನ್ನಾಗಿ ಭಾವಿಸಿ ಅದರಲ್ಲಿಯೇ ನಿರತನಾಗಿರುವ, **ಅಜನಃ** ಎಂದು ಪದವಿಭಾಗಮಾಡಿ **ಯತ್ರ ಅಜನಃ ಬಾಧಿತಬಾಹ್ಯಲೋಕಃ** ಎಂದು ವ್ಯಾಖ್ಯಾನಿಸಿದ್ದಾರೆ. **ನಾನ್ಯೋನ್ಯಂ ಬಧ್ಯತೇ ತತ್ರ ಭೇದಾಭಾವಾತ್** – ಅಲ್ಲಿ ಭೇದಭಾವವಿಲ್ಲದೇ ಇರುವುದರಿಂದ ಪರಸ್ಪರವಾಗಿ ತೊಂದರೆ ಪಡಿಸುವುದಿಲ್ಲ. **ದ್ರವ್ಯೇಷು = ಸಙ್ಕಲ್ಪಮಾತ್ರೋಪನತೇಷು** – ಸಂಕಲ್ಪ ಮಾತ್ರದಿಂದ ಲಭ್ಯವಾಗುವ ದ್ರವ್ಯಗಳ ವಿಷಯದಲ್ಲಿ **ನ ವಿಸ್ಮಯಃ** ಆಶ್ಚರ್ಯಪಡುವುದಿಲ್ಲ. **ಪರೋ ಹ್ಯಧರ್ಮಃ ನಾತ್ಮಭೂತಃ ಅಧರ್ಮಃ**

ಅನೃತಾದಿಃ ನಾಸ್ತಿ– ಅಲ್ಲಿ ಅನೃತಾದಿಗಳಿಲ್ಲ. **ಸಂದೇಹೋ ನಾಪಿಜಾಯತೇ ಕಿಂ ದೇಹಾದಿಃ ಆತ್ಮಾ–** ದೇಹಾದಿಗಳೇ ಆತ್ಮವೇ? **ಉತ ಅನ್ಯಃ –** ಆತ್ಮನು ದೇಹಭಿನ್ನನಾದವನೇ? **ಅನ್ಯೋಽಪಿ ಕರ್ತಾಽಕರ್ತಾ ವಾ** ಬೇರೆಯವನಾದರೂ ಅವನು ಕರ್ತೃವೇ ಅಕರ್ತೃವೇ? **ಅಕರ್ತಾಪಿ ಏಕೋ ನೈಕಃ –** ಅಕರ್ತನಾದರೂ ಒಬ್ಬನೇ ಅನೇಕನೇ?– ಇವೇ ಮುಂತಾದ ಸಂದೇಹಗಳಿರುವುದಿಲ್ಲ– ಹೀಗೆ ಈ ಶ್ಲೋಕಕ್ಕೂ ವ್ಯಾಖ್ಯೆಮಾಡಿರುತ್ತಾರೆ.)

ಕೃತಸ್ಯ ತು ಫಲಂ ತತ್ರ ಪ್ರತ್ಯಕ್ಷಮುಪಲಭ್ಯತೇ ।
ಪಾನಾಸನಾಶನೋಪೇತಾಃ ಪ್ರಾಸಾದಭವನಾಶ್ರಯಾಃ ॥೧೨॥

ಸರ್ವಕಾಮೈರ್ವೃತಾಃ ಕೇಚಿದ್ಧೇಮಾಭರಣಭೂಷಿತಾಃ ।
ಶ್ರಮೇಣ ಮಹತಾ ಕೇಚಿತ್ಕುರ್ವನ್ತಿ ಪ್ರಾಣಧಾರಣಮ್ ॥೧೩॥

ಆ ಪ್ರದೇಶದಲ್ಲಿ ಮಾಡಿದ ಕರ್ಮಗಳಿಗೆ ಪ್ರತ್ಯಕ್ಷವಾಗಿಯೇ ಫಲವು ಲಭಿಸುತ್ತದೆ. ಆ ಲೋಕದಲ್ಲಿ ಕೆಲವರು ದೊಡ್ಡ-ದೊಡ್ಡ ಸೌಧಗಳಲ್ಲಿ ವಾಸಮಾಡುತ್ತಾರೆ. ಒಳ್ಳೆಯ ಆಸನಗಳಲ್ಲಿ ಕುಳಿತುಕೊಳ್ಳುತ್ತಾರೆ. ಉತ್ತಮೋತ್ತಮವಾದ ಭೋಜನವನ್ನು ಭುಂಜಿಸುತ್ತಾರೆ. ಒಳ್ಳೆಯ ಪಾನೀಯಗಳನ್ನು ಪಾನಮಾಡುತ್ತಾರೆ. ಸಮಸ್ತವಾದ ಕಾಮನಾವಸ್ತುಗಳಿಂದಲೂ ಸಂಪನ್ನರಾಗಿದ್ದು ಸುವರ್ಣಮಯವಾದ ಆಭರಣಗಳಿಂದ ವಿಭೂಷಿತರಾಗಿರುತ್ತಾರೆ. ಆದರೆ ಅಲ್ಲಿ ಕೆಲವು ಜನರಿಗೆ ಪ್ರಾಣಧಾರಣೆಗೆ ಮಾತ್ರವೇ ಅನ್ನವು ಸಿಕ್ಕುತ್ತದೆ. ಕೆಲವರು ಅತ್ಯಂತಶ್ರಮದಿಂದ ಪ್ರಾಣವನ್ನು ಉಳಿಸಿಕೊಂಡಿರುತ್ತಾರೆ. (ಈ ಶ್ಲೋಕಕ್ಕೂ ವ್ಯಾಖ್ಯಾನಕಾರರು ಆಧ್ಯಾತ್ಮಪರವಾಗಿಯೇ ಅರ್ಥಮಾಡಿರುತ್ತಾರೆ.)

ಇಹ ಧರ್ಮಪರಾಃ ಕೇಚಿತ್ಕೇಚಿನ್ನೈಕೃತಿಕಾ ನರಾಃ ।
ಸುಖಿತಾಃ ದುಃಖಿತಾಃ ಕೇಚಿನ್ನಿರ್ಧನಾ ಧನಿನೋಽಪರೇ ॥೧೪॥

ಆದರೆ ಈ ಮನುಷ್ಯಲೋಕದಲ್ಲಿ ಕೆಲವರು ಧರ್ಮಪರಾಯಣರಾಗಿರುತ್ತಾರೆ. ಕೆಲವರು ವಂಚಕರಾಗಿರುತ್ತಾರೆ. ಕೆಲವರು ಸುಖಿಗಳಾ

ಗಿರುತ್ತಾರೆ. ಕೆಲವರು ದುಃಖಿಗಳಾಗಿರುತ್ತಾರೆ. ಕೆಲವರು ದರಿದ್ರರಾಗಿರು ತ್ತಾರೆ. ಕೆಲವರು ಧನಿಕರಾಗಿರುತ್ತಾರೆ.

ಇಹ ಶ್ರಮೋ ಭಯಂ ಮೋಹಂ ಕ್ಷುಧಾ ತೀವ್ರಾ ಚ ಜಾಯತೇ ।
ಲೋಭಶ್ಚಾರ್ಥಕೃತೋ ನೃಣಾಂ ಯೇನ ಮುಹ್ಯನ್ತ್ಯಪಣ್ಡಿತಾಃ ॥೧೫॥

ಈ ಲೋಕದಲ್ಲಿ ಶ್ರಮವಿದೆ. ಭಯವಿದೆ. ಮೋಹವಿದೆ. ಹಸಿವಂತೂ ಬಹಳವಾಗಿದೆ. ಮನುಷ್ಯರು ಧನದ ವಿಷಯದಲ್ಲಿ ಅತ್ಯಂತಲೋಭಿಗಳಾಗಿರು ತ್ತಾರೆ. ಈ ಕಾರಣದಿಂದಲೇ ಅಜ್ಞಾನಿಗಳಾದವರು ವಿಮೋಹಗೊಳ್ಳುತ್ತಾರೆ.

ಇಹ ವಾರ್ತಾ ಬಹುವಿಧಾ ಧರ್ಮಾಧರ್ಮಸ್ಯ ಕಾರಿಣಃ ।
ಯಸ್ತದ್ವೇದೋಭಯಂ ಪ್ರಾಜ್ಞಃ ಪಾಪ್ಮನಾ ನ ಸ ಲಿಪ್ಯತೇ ॥೧೬॥

ಈ ಲೋಕದಲ್ಲಿ ಧರ್ಮ ಮತ್ತು ಅಧರ್ಮಗಳನ್ನು ಮಾಡುವವರ ವಿಷಯದಲ್ಲಿ ಅನೇಕಪ್ರಕಾರವಾದ ಮಾತುಗಳು ಕೇಳಿಬರುತ್ತವೆ. ಯಾರು ಧರ್ಮಾಧರ್ಮಗಳ ಸ್ವರೂಪ- ಪರಿಣಾಮಗಳನ್ನು ತಿಳಿದಿರುವನೋ ಅಂತಹ ವಿದ್ವಾಂಸನು ಪಾಪದಿಂದ ಲಿಪ್ತನಾಗುವುದಿಲ್ಲ.

ಸೋಪಧಂ ನಿಕೃತಿಃ ಸ್ತೇಯಂ ಪರೀವಾದೋ ಹ್ಯಸೂಯಿತಾ ।
ಪರೋಪಘಾತೋ ಹಿಂಸಾ ಚ ಪೈಶುನ್ಯಮನೃತಂ ತಥಾ ॥೧೭॥

ಏತಾನಾಸೇವತೇ ಯಸ್ತು ತಪಸ್ತಸ್ಯ ಪ್ರಹೀಯತೇ ।
ಯಸ್ತ್ವೇತಾನ್ನಾಚರೇದ್ವಿದ್ವಾಂಸ್ತಪಸ್ತಸ್ಯ ಪ್ರವರ್ಧತೇ ॥೧೮॥

ಕಪಟ, ವಂಚನೆ, ಚೌರ್ಯ, ಪರನಿಂದೆ, ಅಸೂಯೆ, ಮತ್ತೊಬ್ಬರಿಗೆ ಹಾನಿಯನ್ನುಂಟುಮಾಡುವುದು, ಪ್ರಾಣಿಹಿಂಸೆ, ಚಾಡಿಹೇಳುವುದು, ಸುಳ್ಳು ಹೇಳುವುದು–ಈ ದುರ್ಗುಣಗಳನ್ನು ಯಾವನು ಸೇವಿಸುತ್ತಾನೆಯೋ– ಅವನು ಮಾಡಿದ ತಪಸ್ಸೆಲ್ಲವೂ ಹಾಳಾಗುತ್ತದೆ. ಯಾವ ವಿದ್ವಾಂಸನು ಈ ದುರ್ಗುಣಗಳನ್ನು ಆಚರಣೆಯಲ್ಲಿ ಇಟ್ಟುಕೊಳ್ಳುವುದಿಲ್ಲವೋ–ಅಂತಹ ವಿದ್ವಾಂಸನ ತಪಸ್ಸು ವರ್ಧಿಸುತ್ತದೆ.

ಇಹ ಚಿನ್ತಾ ಬಹುವಿಧಾ ಧರ್ಮಾಧರ್ಮಸ್ಯ ಕರ್ಮಣಃ ।
ಕರ್ಮಭೂಮಿರಿಯಂ ಲೋಕೇ ಇಹ ಕೃತ್ವಾ ಶುಭಾಶುಭಮ್ ।
ಶುಭೈಃ ಶುಭಮವಾಪ್ನೋತಿ ತಥಾಶುಭಮಥಾನ್ಯಥಾ ॥೧೯॥

ಈ ಲೋಕದಲ್ಲಿ ಪುಣ್ಯಕರ್ಮಗಳ ಮತ್ತು ಪಾಪಕರ್ಮಗಳ ಸಂಬಂಧ ವಾಗಿ ಬಹುವಿಧವಾದ ಚಿಂತನೆಯು ನಡೆಯುತ್ತಿರುತ್ತದೆ. ಇದು ಕರ್ಮ ಭೂಮಿಯಾಗಿದೆ. ಈ ಲೋಕದಲ್ಲಿ ಶುಭಾಶುಭಕರ್ಮಗಳನ್ನು ಮಾಡುವ ಮನುಷ್ಯನು–ಶುಭಕರ್ಮಗಳಿಗೆ ಶುಭಫಲವನ್ನೂ, ಅಶುಭಕರ್ಮಗಳಿಗೆ ಅಶುಭಫಲಗಳನ್ನೂ ಪಡೆದುಕೊಳ್ಳುತ್ತಾನೆ.

ಇಹ ಪ್ರಜಾಪತಿಃ ಪೂರ್ವಂ ದೇವಾಃ ಸರ್ಷಿಗಣಾಸ್ತಥಾ ।
ಇಷ್ಟ್ವೇಷ್ಟತಪಸಃ ಪೂತಾ ಬ್ರಹ್ಮಲೋಕಮುಪಾಶ್ರಿತಾಃ ॥೨೦॥

ಹಿಂದೆ ಈ ಹಿಮವತ್ಪರ್ವತದಲ್ಲಿಯೇ ಪ್ರಜಾಪತಿಬ್ರಹ್ಮನೂ, ಋಷಿ ಗಳಿಂದ ಕೂಡಿದ ದೇವತೆಗಳೂ ಯಜ್ಞವನ್ನೂ ಮತ್ತು ಅಭೀಷ್ಟವಾದ ತಪಸ್ಸನ್ನೂ ಮಾಡಿ ಪವಿತ್ರಾತ್ಮರಾಗಿ ಬ್ರಹ್ಮಲೋಕವನ್ನು ಸೇರಿದರು.

ಉತ್ತರಃ ಪೃಥಿವೀಭಾಗಃ ಸರ್ವಪುಣ್ಯತಮಃ ಶುಭಃ ।
ಇಹಸ್ಥಾಸ್ತತ್ರ ಜಾಯನ್ತೇ ಯೇ ವೈ ಪುಣ್ಯಕೃತೋ ಜನಾಃ ॥೨೧॥

ಪೃಥ್ವಿಯ ಉತ್ತರಭಾಗವು (ಹಿಮವತ್ಪಾರ್ಶ್ವಭಾಗವು) ಎಲ್ಲ ಭೂಭಾಗಗಳಿಗಿಂತಲೂ ಪವಿತ್ರತಮವಾದ ಮತ್ತು ಶುಭಪ್ರದವಾದ ಭೂಭಾಗವಾಗಿದೆ. ಇಲ್ಲಿರುವವರಲ್ಲಿ ಯಾರು ಪುಣ್ಯಕಾರ್ಯಗಳನ್ನು ಮಾಡಿರುವರೋ ಅವರು ಅವಸಾನಾನಂತರದಲ್ಲಿ ಪೃಥ್ವಿಯ ಉತ್ತರದಲ್ಲಿರುವ ಹಿಮವತ್ಪಾರ್ಶ್ವದಲ್ಲಿ ಹುಟ್ಟುತ್ತಾರೆ.

ಅಸತ್ಕರ್ಮಾಣಿ ಕುರ್ವನ್ತಸ್ತಿರ್ಯಗ್ಯೋನಿಷು ಚಾಪರೇ ।
ಕ್ಷೀಣಾಯುಷಸ್ತಥಾ ಚಾನ್ಯೇ ನಶ್ಯನ್ತಿ ಪೃಥಿವೀತಲೇ ॥೨೨॥

ಪಾಪಕರ್ಮಗಳನ್ನು ಮಾಡುವವರು ಪಶು-ಪಕ್ಷಿಗಳ ಯೋನಿಗಳಲ್ಲಿ ಹುಟ್ಟುತ್ತಾರೆ. ಇನ್ನೂ ಕೆಲವರು ಆಯುಷ್ಯವು ಕಳೆದುಹೋದನಂತರ ಭೂಮಿಯಲ್ಲಿ ಬಿದ್ದು ನಾಶಹೊಂದುತ್ತಾರೆ.

ಅನ್ಯೋನ್ಯಭಕ್ಷಣಾಸಕ್ತಾ ಲೋಭಮೋಹಸಮನ್ವಿತಾಃ ।
ಇಹೈವ ಪರಿವರ್ತನ್ತೇ ನ ತೇ ಯಾನ್ತ್ಯುತ್ತರಾಂ ದಿಶಮ್ ॥೨೩॥

ಯಾರು ಲೋಭ-ಮೋಹಪರವಶರಾಗಿ ಒಬ್ಬರು ಮತ್ತೊಬ್ಬರನ್ನು ಕಬಳಿಸಲು ಆಸಕ್ತರಾಗಿರುತ್ತಾರೆಯೋ – ಅಂತಹವರು ಇಲ್ಲಿಯೇ ಹುಟ್ಟಿ

ಸಾಯುತ್ತಿರುತ್ತಾರೆ. ಅವರೆಂದಿಗೂ ಉತ್ತರದಿಕ್ಕಿನಲ್ಲಿರುವ ಉತ್ಕೃಷ್ಟವಾದ ಲೋಕಕ್ಕೆ ಹೋಗುವುದಿಲ್ಲ.

ಯೇ ಗುರೂನ್ಪರ್ಯುಪಾಸನ್ತೇ ನಿಯತಾ ಬ್ರಹ್ಮಚಾರಿಣಃ ।
ಪನ್ಥಾನಂ ಸರ್ವಲೋಕಾನಾಂ ವಿಜಾನನ್ತಿ ಮನೀಷಿಣಃ ॥೨೪॥

ಯಾರು ಮನಸ್ಸನ್ನೂ ಇಂದ್ರಿಯಗಳನ್ನೂ ಸಂಯಮದಲ್ಲಿಟ್ಟುಕೊಂಡು ಬ್ರಹ್ಮಚರ್ಯವ್ರತಾನುಷ್ಠಾನಪರರಾಗಿ, ಗುರುಜನರ ಸೇವೆಯನ್ನು ಮಾಡುವರೋ–ಅಂತಹ ವಿದ್ವಾಂಸರು ಎಲ್ಲ ಪುಣ್ಯಲೋಕಗಳ ಮಾರ್ಗಗಳನ್ನೂ ತಿಳಿದವರಾಗಿರುತ್ತಾರೆ.

ಭರದ್ವಾಜ! ಹೀಗೆ ನಾನು ಬ್ರಹ್ಮನಿಂದಲೇ ನಿರ್ಮಿತವಾದ ಧರ್ಮವನ್ನು ಸಂಕ್ಷೇಪವಾಗಿ ಹೇಳಿರುವೆನು. ಯಾವನು ಈ ಲೋಕದಲ್ಲಿ ಮಾಡಬೇಕಾದ ಧರ್ಮವನ್ನೂ ಮಾಡಬಾರದ ಅಧರ್ಮವನ್ನೂ ತಿಳಿದಿರುವನೋ ಅವನೇ ಬುದ್ಧಿವಂತನಾಗಿರುತ್ತಾನೆ.”

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

“ಯುಧಿಷ್ಠಿರ! ಭೃಗುವು ಹೀಗೆ ಹೇಳಿದನಂತರ ಪರಮಧರ್ಮಾತ್ಮನಾದ ಪ್ರತಾಪಶಾಲಿಯಾದ ಭರದ್ವಾಜನು ಅತ್ಯಂತವಿಸ್ಮಿತನಾಗಿ ಭೃಗುಋಷಿಯನ್ನು ಯಥೋಚಿತವಾಗಿ ಸತ್ಕರಿಸಿದನು.

ಧರ್ಮಜ! ನಾನು ಜಗತ್ತಿನ ಉತ್ಪತ್ತಿಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನೂ ಸಂಪೂರ್ಣವಾಗಿ ನಿನಗೆ ಹೇಳಿದ್ದೇನೆ. ಪುನಃ ನೀನು ಯಾವ ವಿಷಯವನ್ನು ನನ್ನಿಂದ ಕೇಳಿ ತಿಳಿಯಬೇಕೆಂದಿರುವೆ?”

ಲ೯೨ನೆಯ ಅಧ್ಯಾಯವು ಮುಗಿಯಿತು.

೧೯೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶಿಷ್ಟಾಚಾರಗಳ ಅನುಷ್ಠಾನಗಳಿಗೆ ಫಲ : ಪಾಪವನ್ನು ಮುಚ್ಚಿಡುವುದರಿಂದ ಉಂಟಾಗುವ ಹಾನಿ : ಧರ್ಮಪ್ರಶಂಸೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಆಚಾರಸ್ಯ ವಿಧಿಂ ತಾತ ಪ್ರೋಚ್ಯಮಾನಂ ತ್ವಯಾನಘ ।
ಶ್ರೋತುಮಿಚ್ಛಾಮಿ ಧರ್ಮಜ್ಞ ಸರ್ವಜ್ಞೋ ಹ್ಯಸಿ ಮೇ ಮತಃ ॥೧॥

"ಅನಘನೇ! ಧರ್ಮಜ್ಞನೇ! ನೀನು ಸರ್ವಜ್ಞನಾಗಿರುವೆಯೆಂಬುದು ನನ್ನ ಅಭಿಪ್ರಾಯವಾಗಿದೆ. ಆಚಾರದ ವಿಧಿಯನ್ನು ನಿನ್ನಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

ದುರಾಚಾರಾ ದುರ್ವಿಚೇಷ್ಟಾ ದುಷ್ಪ್ರಜ್ಞಾಃ ಪ್ರಿಯಸಾಹಸಾಃ ।
ಅಸಂತಸ್ತ್ವಿತಿ ವಿಖ್ಯಾತಾಃ ಸಂತಶ್ಚಾಚಾರಲಕ್ಷಣಾಃ ॥೨॥

"ಯುಧಿಷ್ಠಿರ! ದುರಾಚಾರಿಗಳು, ಕೆಟ್ಟಕೆಲಸಗಳನ್ನು ಮಾಡುವವರು, ದುರ್ಬುದ್ಧಿಯಿರುವವರು, ದುಃಸಾಹಸವನ್ನೇ ಪ್ರಿಯವಾಗಿ ಭಾವಿಸುವವರು (ದುಡುಕಿ ಕೆಟ್ಟಕೆಲಸವನ್ನು ಮಾಡುವವರು)– ಇವರೆಲ್ಲರೂ ಅಸಂತರು ಅಥವಾ ದುಷ್ಟಾತ್ಮರು ಎಂದು ವಿಖ್ಯಾತರಾಗಿರುತ್ತಾರೆ. ಸದಾಚಾರವೇ ಸತ್ಪುರುಷರ ಲಕ್ಷಣವಾಗಿದೆ.

ಪುರೀಷಂ ಯದಿ ವಾ ಮೂತ್ರಂ ಯೇ ನ ಕುರ್ವನ್ತಿ ಮಾನವಾಃ ।
ರಾಜಮಾರ್ಗೇ ಗವಾಂ ಮಧ್ಯೇ ಧಾನ್ಯಮಧ್ಯೇ ಚ ತೇ ಶುಭಾಃ ॥೩॥

ಯಾವ ಮನುಷ್ಯರು ಬೀದಿಯಲ್ಲಾಗಲೀ, ಕೊಟ್ಟಿಗೆಯಲ್ಲಿರುವ ಹಸುಗಳ ಮಧ್ಯದಲ್ಲಾಗಲೀ, ಧಾನ್ಯದ ಮಧ್ಯದಲ್ಲಾಗಲೀ ಮಲ-ಮೂತ್ರಗಳನ್ನು ವಿಸರ್ಜಿಸುವುದಿಲ್ಲವೋ ಅವರೇ ಸದಾಚಾರಿಗಳು.

ಶೌಚಮಾವಶ್ಯಕಂ ಕೃತ್ವಾ ದೇವತಾನಾಂ ಚ ತರ್ಪಣಮ್ ।
ಧರ್ಮಮಾಹುರ್ಮನುಷ್ಯಾಣಾಮುಪಸ್ಪೃಶ್ಯ ನದೀಂ ತರೇತ್ ॥೪॥

ಶೌಚಾಚಾರಗಳನ್ನು ಮುಗಿಸಿ, ಆಚಮನವನ್ನು ಮಾಡಿ ನದಿಗೆ ಹೋಗಿ ಸ್ನಾನವನ್ನು ಮಾಡಬೇಕು. ಯಥೋಪದೇಶವಾದ ರೀತಿಯಲ್ಲಿ ಸಂಧ್ಯಾವಂದನೆಯನ್ನು ಮಾಡಿ, ದೇವತೆಗಳನ್ನು ಪೂಜಾದಿಗಳಿಂದಲೂ–ಪಿತೃಗಳನ್ನು ತರ್ಪಣಾದಿಗಳಿಂದಲೂ ಅರ್ಚಿಸಬೇಕು. ನದಿಯನ್ನು ದಾಟಬೇಕಾದರೆ ಆಚಮನವನ್ನು ಮಾಡಿದನಂತರ ದಾಟಬೇಕು. ಎಲ್ಲ ಮನುಷ್ಯರು ಮಾಡಬೇಕಾದ ಧರ್ಮವಿದೆಂದು ವಿದ್ವಾಂಸರು ಹೇಳುತ್ತಾರೆ.

ಸೂರ್ಯಂ ಸದೋಪತಿಷ್ಠೇತ ನ ಚ ಸೂರ್ಯೋದಯೇ ಸ್ವಪೇತ್ ।
ಸೂರ್ಯಂ ಪ್ರಾತರ್ಜಪೇತ್ಸಂಧ್ಯಾಂ ತಿಷ್ಠನ್ಪೂರ್ವಾಂ ತಥೇತರಾಮ್ ॥

ಪ್ರತಿನಿತ್ಯವೂ ಸೂರ್ಯೋಪಸ್ಥಾನವನ್ನು ಮಾಡಬೇಕು. ಸೂರ್ಯೋದಯದ ಸಮಯದಲ್ಲಿ ಎಂದಿಗೂ ಮಲಗಿರಬಾರದು. ಪ್ರಾತಃಕಾಲದಲ್ಲಿ ಪೂರ್ವದಿಕ್ಕಿಗೆ ಮುಖಮಾಡಿ ನಿಂತುಕೊಂಡು, ಸಾಯಂಕಾಲದಲ್ಲಿ ಪಶ್ಚಿಮ ದಿಕ್ಕಿಗೆ ಮುಖಮಾಡಿ ನಿಂತುಕೊಂಡು ಸಂಧ್ಯೋಪಾಸನೆಮಾಡಿ ಗಾಯತ್ರೀ ಮಂತ್ರವನ್ನು ಜಪಿಸಬೇಕು.

ಪಞ್ಚಾರ್ದ್ರೋ ಭೋಜನಂ ಭುಞ್ಜ್ಯಾತ್ಪ್ರಾಙ್ಮುಖೋ ಮೌನಮಾಸ್ಥಿತಃ ।
ನ ನಿನ್ದ್ಯಾದನ್ನಭಕ್ಷ್ಯಾಂಶ್ಚ ಸ್ವಾದ್ವಸ್ವಾದು ಚ ಭಕ್ಷಯೇತ್ ॥೬॥

ಭೋಜನಕ್ಕೆ ಮೊದಲು ಐದನ್ನು (ಎರಡು ಕೈಗಳನ್ನೂ ಎರಡು ಕಾಲುಗಳನ್ನೂ ಮತ್ತು ಮುಖವನ್ನೂ [ಬಾಯನ್ನೂ]) ತೊಳೆದುಕೊಂಡು ಪೂರ್ವಾಭಿಮುಖವಾಗಿ ಕುಳಿತು ಭೋಜನಮಾಡಬೇಕು. ಭೋಜನಮಾಡುವಾಗ ಮಾತನ್ನಾಡಬಾರದು. ಅನ್ನ-ಭಕ್ಷ್ಯಗಳನ್ನು ರುಚಿಯಾಗಿರಲೀ, ಇಲ್ಲದಿರಲೀ–ನಿಂದಿಸಬಾರದು. (ಅನ್ನ-ಭಕ್ಷ್ಯಗಳನ್ನು ಪ್ರೀತಿಯಿಂದ ಭೋಜನ ಮಾಡಬೇಕು.)

ಆರ್ದ್ರಪಾಣಿಃ ಸಮುತ್ತಿಷ್ಠೇನ್ನಾರ್ದ್ರಪಾದಃ ಸ್ವಪೇನ್ನಿಶಿ ।
ದೇವರ್ಷಿರ್ನಾರದಃ ಪ್ರಾಹ ಏತದಾಚಾರಲಕ್ಷಣಮ್ ॥೭॥

ಭೋಜನವಾದನಂತರ ಉತ್ತರಾಪೋಶನವನ್ನು ತೆಗೆದುಕೊಂಡು ಮೇಲೇಳಬೇಕು. (ಬಹಳ ಹೆಚ್ಚುಕಾಲ ಊಟಮಾಡಬಾರದು. ಕೈ ಒಣಗುವ ವರೆಗೂ ಕುಳಿತಿರದೆ ಇನ್ನೂ ಒದ್ದೆಯಾಗಿರುವಾಗಲೇ ಊಟವನ್ನು ಮುಗಿಸಿ ಮೇಲೇಳಬೇಕು.) ರಾತ್ರಿಯಲ್ಲಿ ಒದ್ದೆಯ ಕಾಲಿನಲ್ಲಿ ಮಲಗಬಾರದು. (ಕಾಲುಗಳನ್ನು ತೊಳೆದುಕೊಂಡರೂ ಚೆನ್ನಾಗಿ ಕಾಲುಗಳನ್ನು ಒರೆಸಿಕೊಂಡ ನಂತರವೇ ಹಾಸಿಗೆಯಲ್ಲಿ ಮಲಗಬೇಕು.) ದೇವರ್ಷಿಗಳಾದ ನಾರದರು ಇದನ್ನೇ ಸದಾಚಾರದ ಲಕ್ಷಣವೆಂದು ಹೇಳಿದ್ದಾರೆ.

ಶುಚಿಂ ದೇಶಮನಡ್ವಾಹಂ ದೇವಗೋಷ್ಠಂ ಚತುಷ್ಪಥಮ್ ।
ಬ್ರಾಹ್ಮಣಂ ಧಾರ್ಮಿಕಂ ಚೈತ್ಯಂ ನಿತ್ಯಂ ಕುರ್ಯಾತ್ಪ್ರದಕ್ಷಿಣಮ್ ॥೮॥

ಅತಿಥೀನಾಂ ಚ ಸರ್ವೇಷಾಂ ಪ್ರೇಷ್ಯಾಣಾಂ ಸ್ವಜನಸ್ಯ ಚ ।
ಸಾಮಾನ್ಯಂ ಭೋಜನಂ ಭೃತ್ಯೈಃ ಪುರುಷಸ್ಯ ಪ್ರಶಸ್ಯತೇ ॥೯॥

ಯಜ್ಞಶಾಲೆಯೇ ಮೊದಲಾದ ಪವಿತ್ರಸ್ಥಳಗಳನ್ನೂ, ಎತ್ತನ್ನೂ, ದೇವಾಲಯವನ್ನೂ, ನಾಲ್ಕು ಬೀದಿಗಳು ಸೇರುವ ಚೌಕಿಯನ್ನೂ, ಬ್ರಾಹ್ಮಣನನ್ನೂ, ಧಾರ್ಮಿಕನನ್ನೂ, ಅಶ್ವತ್ಥವೇ ಮೊದಲಾದ ದೇವವೃಕ್ಷಗಳನ್ನೂ ಯಾವಾಗಲೂ ಬಲಭಾಗಕ್ಕೆ ಬಿಟ್ಟುಕೊಂಡು ಹೋಗಬೇಕು. ಗೃಹಸ್ಥನ ಮನೆಯಲ್ಲಿ ಅತಿಥಿಗಳಿಗೂ, ಸೇವಕರಿಗೂ, ಸ್ವಜನರಿಗೂ ಒಂದೇ ವಿಧವಾದ ಭೋಜನವನ್ನು ಮಾಡಿಸುವುದು ಪ್ರಶಸ್ತವಾಗಿದೆ. (ಒಬ್ಬೊಬ್ಬರಿಗೂ ಒಂದೊಂದು ಬಗೆಯ ಊಟವನ್ನು ಬಡಿಸಬಾರದು. ಭೋಜನದ ವಿಷಯದಲ್ಲಿ ಸೇವಕರಿಗಾಗಲೀ ಸ್ವಜನರಿಗಾಗಲೀ ಯಾವ ವಿಧವಾದ ಪಕ್ಷಪಾತವೂ ಇರಬಾರದು.)

ಸಾಯಂ ಪ್ರಾತರ್ಮನುಷ್ಯಾಣಾಮಶನಂ ವೇದನಿರ್ಮಿತಮ್ ।
ನಾನ್ತರಾ ಭೋಜನಂ ದೃಷ್ಟಮುಪವಾಸೀ ತಥಾ ಭವೇತ್ ॥೧೦॥

ವೇದದಲ್ಲಿ ಉಕ್ತವಾಗಿರುವಂತೆ ಮನುಷ್ಯರು ಸಾಯಂಕಾಲ ಮತ್ತು ಪ್ರಾತಃಕಾಲ–ಈ ಎರಡು ಸಮಯಗಳಲ್ಲಿಯೇ ಭೋಜನವನ್ನು ಮಾಡಬೇಕು. ಒಂದು ಭೋಜನಕ್ಕೂ ಮತ್ತೊಂದು ಭೋಜನಕ್ಕೂ ನಡುವೆ ಯಾವ ಆಹಾರವನ್ನೂ ಸೇವಿಸಬಾರದು. ಯಾರು ವೇದದಲ್ಲಿ ಹೇಳಿರುವಂತೆ ಎರಡೇ ಹೊತ್ತು ಭೋಜನವನ್ನು ನಿಯತವಾಗಿ ಮಾಡುವರೋ, ಈ ನಿಯಮವನ್ನು ನಿರಂತರವಾಗಿ ಪಾಲಿಸುವರೋ–ಅವರಿಗೆ ಉಪವಾಸವ್ರತವನ್ನು ಮಾಡಿದ ಫಲವು ಪ್ರಾಪ್ತವಾಗುತ್ತದೆ.

ಹೋಮಕಾಲೇ ತಥಾ ಜುಹ್ವನ್ನೃತುಕಾಲೇ ತಥಾ ವ್ರಜನ್ ।
ಅನನ್ಯಸ್ತ್ರೀಜನಃ ಪ್ರಾಜ್ಞೋ ಬ್ರಹ್ಮಚಾರೀ ತಥಾ ಭವೇತ್ ॥೧೧॥

ಯಾವನು ಹೋಮಸಮಯದಲ್ಲಿ ಪ್ರತಿನಿತ್ಯವೂ ಕಾಲಾತಿಕ್ರಮವಾಗದಂತೆ ಹೋಮಮಾಡುವನೋ, ಋತುಕಾಲದಲ್ಲಿ ಮಾತ್ರವೇ ಭಾರ್ಯಾಗಮನ ಮಾಡುವನೋ, ಪರಸ್ತ್ರೀಯರನ್ನು ಮನಸ್ಸಿನಿಂದಲೂ ಸೇವಿಸುವುದಿಲ್ಲವೋ–ಅಂತಹ ಪ್ರಾಜ್ಞನು ಬ್ರಹ್ಮಚರ್ಯವ್ರತವನ್ನು ಅನುಷ್ಠಾನಮಾಡಿದ ಫಲವನ್ನು ಹೊಂದುತ್ತಾನೆ. ಅಥವಾ ಬ್ರಹ್ಮಚಾರಿಯೇ ಆಗುತ್ತಾನೆ.

ಅಮೃತಂ ಬ್ರಾಹ್ಮಣೋಚ್ಛಿಷ್ಟಂ ಜನನ್ಯಾ ಹೃದಯಂ ಕೃತಮ್ ।
ತಜ್ಜನಾಃ ಪರ್ಯುಪಾಸನ್ತೇ ಸತ್ಯಂ ಸನ್ತಃ ಸಮಾಸತೇ ॥೧೨॥

ಬ್ರಾಹ್ಮಣನು ಭೋಜನಮಾಡಿದನಂತರ ಉಳಿಯುವ ಅನ್ನಶೇಷವು ಅಮೃತಕ್ಕೆ ಸಮಾನವಾಗಿರುತ್ತದೆ. ಅದು ತಾಯಿಯ ಮನಸ್ಸಿನಂತೆ ಹಿತಕರ ವಾಗಿರುತ್ತದೆ. ಯಾರು, ಬ್ರಾಹ್ಮಣರು ಊಟಮಾಡಿದನಂತರ ಉಳಿದ ಅನ್ನ ವನ್ನು ಊಟಮಾಡುವರೋ–ಅಂತಹ ಸತ್ಪುರುಷರು ಸತ್ಯಸ್ವರೂಪನಾದ ಪರಬ್ರಹ್ಮಪರಮಾತ್ಮನನ್ನು ಹೊಂದುತ್ತಾರೆ.

ಲೋಷ್ಟಮರ್ದೀ ತೃಣಚ್ಛೇದೀ ನಖಖಾದೀ ತು ಯೋ ನರಃ ।
ನಿತ್ಯೋಚ್ಛಿಷ್ಟಃ ಶಂಕುಶುಕೋ ನೇಹಾಯುರ್ವಿನ್ದತೇ ಮಹತ್ ॥೧೩॥

ಅಂಗಚೇಷ್ಟೆಗಾಗಿ ಮಣ್ಣುಹೆಂಟೆಯನ್ನು ಒಡೆಯುವವನೂ, ಹುಲ್ಲು ಕೊಯ್ಯುವವನೂ, ಉಗುರು ಕಚ್ಚುವವನೂ, ಅನುದಿನವೂ ಎಂಜಲನ್ನೇ ಊಟ ಮಾಡುವವನೂ, ಬಂಧನದಲ್ಲಿರುವ ಗಿಳಿಯಂತೆ ಪರಾಧೀನತೆಯ ಜೀವನ ವನ್ನು ನಡೆಸುವವನೂ–ದೀರ್ಘಾಯುವಾಗಿರುವುದಿಲ್ಲ. (ವ್ಯಾಖ್ಯಾನಕಾರರು ಇದಕ್ಕೆ ವಿಶೇಷಾರ್ಥವನ್ನು ಮಾಡಿದ್ದಾರೆ. **ಲೋಷ್ಟಮರ್ದೀ= ಯಜ್ಞವೇದೀ ಕರಣಾರ್ಥಂ**- ಯಜ್ಞವೇದಿಯನ್ನು ಮಾಡುವ ಸಲುವಾಗಿ ಭೂಮಿಯನ್ನು ಅಗೆಯುವವನು. **ತೃಣಚ್ಛೇದೀ = ಬರ್ಹಿರಾಹರಣಾರ್ಥಂ** – ಬರ್ಹಿಯ (ದರ್ಭೆಯ) ಆಹರಣಕ್ಕಾಗಿ ತೃಣವನ್ನು ಕತ್ತರಿಸುವವನು. **ನಖಖಾದೀ= ನಖೈಃ ಛಿತ್ವಾ ಛಿತ್ವಾ ಯಜ್ಞಶೇಷಂ ಮಾಂಸಂ ಖಾದತೀತಿ ತಥಾ=** ಯಜ್ಞಶೇಷವಾದ ಮಾಂಸವನ್ನು ಉಗುರುಗಳಿಂದ ಕಿತ್ತು ತಿನ್ನುವವನು. **ನಿತ್ಯೋಚ್ಛಿಷ್ಟಃ = ನಿತ್ಯಸೋಮಪಾಯೀ**– ನಿತ್ಯವೂ ಸೋಮಪಾನ ಮಾಡುವವನು, **ಶಂಕುಶುಕಃ = ಸಂಕುಶುಕಃ = ಫಲಾಭಿಷ್ವಜ್ಗೀ**– ಫಲಾಭಿ ಲಾಷಿಯೂ, **ಮಹದಾಯುಃ = ಬ್ರಹ್ಮನನ್ನು ಅನವಿನ್ದತೇ=** ಹೊಂದುವುದಿಲ್ಲ. ವ್ಯಾಖ್ಯಾನಕಾರರ ಈ ಅರ್ಥವೂ ಸಮಂಜಸವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಈ ಅರ್ಥವು ಸಂದರ್ಭಕ್ಕೆ ಹೊಂದಿಕೊಳ್ಳುವುದಿಲ್ಲ. **ಮಹದಾಯುಃ** ಎಂಬುದಕ್ಕೆ ಬ್ರಹ್ಮ ಎಂಬ ಅರ್ಥವನ್ನು ನಾವು ವ್ಯಾಖ್ಯಾನಕಾರರಿಂದಲೇ ತಿಳಿಯಬೇಕಾಗಿದೆ. ಈ

ಶ್ಲೋಕವು ಭಂ. ರಿ. ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿರುವ ಪುಸ್ತಕದಲ್ಲಿ ರುವುದಿಲ್ಲ. ಅಂಗಚೇಷ್ಟೆಗಾಗಿ ಮಣ್ಣು ಹೆಂಟೆ ಒಡೆಯುವುದು ಇತ್ಯಾದಿ ಗಳನ್ನು ಮಾಡಬಾರದು. ಇವು ಆರೋಗ್ಯಕ್ಕೆ ಧಕ್ಕೆ ತರುವುದರಿಂದ ಅಂತಹವುಗಳನ್ನು ಸರ್ವದಾ ಮಾಡುವವರು ದೀರ್ಘಾಯುಗಳಾಗಿರುವುದು ಸಾಧ್ಯವಿಲ್ಲ–ಎಂಬುದು ಸುರಸವಾದ ಅರ್ಥ.)

ಯಜುಷಾ ಸಂಸ್ಕೃತಂ ಮಾಂಸಂ ನಿವೃತ್ತೋ ಮಾಂಸಭಕ್ಷಣಾತ್ ।
ನ ಭಕ್ಷಯೇದ್ವೃಥಾ ಮಾಂಸಂ ಪೃಷ್ಠಮಾಂಸಂ ಚ ವರ್ಜಯೇತ್ ॥

ಯಾರು ಮಾಂಸವನ್ನು ಭಕ್ಷಿಸುವ ಅಭ್ಯಾಸವನ್ನೇ ಇಟ್ಟುಕೊಂಡಿ ಲ್ಲವೋ–ಅವರು ಯಜುರ್ವೇದಮಂತ್ರದಿಂದ ಸಂಸ್ಕೃತವಾದ ಮಾಂಸವನ್ನೂ (ಎಂದರೆ ಯಜ್ಞಶೇಷವಾದ ಮಾಂಸವನ್ನೂ) ತಿನ್ನಬಾರದು. ವ್ಯರ್ಥವಾಗಿ (ಜಿಹ್ವಾಚಾಪಲ್ಯಕ್ಕಾಗಿ) ಮಾಂಸವನ್ನು ತಿನ್ನಬಾರದು. ಪ್ರಾಣಿಯ ಪೃಷ್ಠ ಭಾಗದ ಮಾಂಸವನ್ನೂ ತಿನ್ನಬಾರದು. (ವ್ಯಾಖ್ಯಾನಕಾರರು ಪೃಷ್ಠಮಾಂಸಂ ಎಂಬುದಕ್ಕೆ ಚರಮಮಾಂಸಂ = ಶ್ರಾದ್ಧಶೇಷ ಮಿತ್ಯರ್ಥಃ – ಶ್ರಾದ್ಧಶೇಷದ ಮಾಂಸವನ್ನು ತಿನ್ನಬಾರದು – ಎಂದು ಅರ್ಥ ಮಾಡಿದ್ದಾರೆ. ಮಾಂಸವನ್ನೇ ತಿನ್ನಬಾರದು. ಹಿಂಸಾಯುಕ್ತವಾದ ಧರ್ಮ ವನ್ನು ಮಾಡಬಾರದು. ಹಿಂಸಾಯುಕ್ತೋ ಧರ್ಮೋ ನ ಕರ್ತವ್ಯಃ –ಎಂದು ಈ ಶ್ಲೋಕದ ಒಟ್ಟು ಅಭಿಪ್ರಾಯ–ಎಂದು ಹೇಳಿದ್ದಾರೆ. ಮಾಂಸವನ್ನೇ ತಿನ್ನಬಾರದೆಂಬುದು ಈ ಶ್ಲೋಕದ ಅಭಿಪ್ರಾಯವಾಗಿದ್ದರೆ ಮಾಂಸವನ್ನು ಭಕ್ಷಿಸಬಾರದೆಂದು ಒಂದೇ ಪಾದದಲ್ಲಿಯೇ ಹೇಳಬಿಡಬಹುದಾಗಿದ್ದಿತು. ಮಾಂಸವನ್ನು ತಿನ್ನಬಾರದೆಂಬ ನಿಯಮವನ್ನು ಇಟ್ಟುಕೊಳ್ಳದೇ ಇರುವವರು ಅಧ್ವರ್ಯುವಿನಿಂದ ಸಂಸ್ಕೃತವಾದ ಯಜ್ಞೀಯಮಾಂಸವನ್ನು ತಿನ್ನಬಹುದು ಎಂಬ ಅಭಿಪ್ರಾಯವು ಇಲ್ಲಿದೆ. ಮಾಂಸವನ್ನು ವೃಥಾ ತಿನ್ನಬಾರದೆಂದರೆ ಅಸಂಸ್ಕೃತವಾದುದನ್ನು ತಿನ್ನಬಾರದು ಎಂದರ್ಥ. ಪೃಷ್ಠಭಾಗದ ಮಾಂಸವನ್ನು ತಿನ್ನಕೂಡದೆಂಬ ವಿಷಯವು ಈ ಹಿಂದೆ ವಿಶ್ವಾಮಿತ್ರ-ಚಾಂಡಾಲರ ಸಂಭಾಷಣೆಯ ಪ್ರಕರಣದಲ್ಲಿಯೂ ಬಂದಿದೆ. (ಅಧ್ಯಾಯ ೧೪೧) ಮೇಲಾಗಿ ಶ್ರಾದ್ಧಶೇಷವು-ಬ್ರಾಹ್ಮಣೋಚ್ಛಿಷ್ಟವೂ ಪಿತೃಶೇಷವೂ

ಆಗುವುದರಿಂದ ಅದನ್ನು ಅಧಿಕಾರಿಗಳಾದವರು ಅವಶ್ಯವಾಗಿ ತಿನ್ನಬೇಕು. ಶ್ರಾದ್ಧಗಳಲ್ಲಿ ಮಾಂಸವನ್ನು ಉಪಯೋಗಿಸುವ ವಿಷಯವು ಇಲ್ಲಿ ಬಂದಿರುವುದಿಲ್ಲ. ಯಜ್ಞದ ವಿಷಯವು ಮಾತ್ರವೇ ಇದೆ. ಆದುದರಿಂದ **ಪೃಷ್ಠಮಾಂಸಂ** ಎಂಬುದಕ್ಕೆ **ಚರಮಮಾಂಸಂ ಅರ್ಥಾತ್ ಶ್ರಾದ್ಧಶೇಷಂ** ಎಂಬುದು ಸಮಂಜಸವಾಗಿ ಕಾಣುವುದಿಲ್ಲ.)

ಸ್ವದೇಶೇ ಪರದೇಶೇ ವಾ ಅತಿಥಿಂ ನೋಪವಾಸಯೇತ್ ।
ಕಾಮ್ಯಕರ್ಮಫಲಂ ಲಬ್ಧ್ವಾ ಗುರೂಣಾಮುಪಪಾದಯೇತ್ ॥೧೫॥

ಗೃಹಸ್ಥನು ಸ್ವದೇಶದಲ್ಲಿರಲಿ, ಪರದೇಶದಲ್ಲಿರಲಿ ತನ್ನ ಬಳಿಗೆ ಬರುವ ಅತಿಥಿಯನ್ನು ಉಪವಾಸವಿರುವಂತೆ ಮಾಡಬಾರದು. ಕಾಮ್ಯಕರ್ಮಗಳನ್ನು ಮಾಡಿ ಅದರಿಂದ ಪ್ರಾಪ್ತವಾಗುವ ಧನ-ಕನಕಾದಿ ಫಲಗಳನ್ನು ಗುರುಜನರಿಗೆ ನಿವೇದಿಸಬೇಕು. (**ಕಾಮ್ಯಕರ್ಮಫಲಂ** ಎಂಬುದಕ್ಕೆ **ಕಾಮ್ಯಂ ಕಮನೀಯಂ ಕರ್ಮ ಭಿಕ್ಷಾಚರ್ಯಂ**– ಕಮನೀಯವಾದ ಕರ್ಮ ; ಭಿಕ್ಷಾಚರ್ಯೆ. ಅದರ ಫಲವೆಂದರೆ ಅನ್ನ. ಅದನ್ನು ಗುರುಗಳಿಗೆ, ತಂದೆಯೇ ಮೊದಲಾದವರಿಗೆ ಅರ್ಪಿಸಬೇಕು– ಎಂದು ವ್ಯಾಖ್ಯಾನಕಾರರು ವ್ಯಾಖ್ಯಾನಿಸಿದ್ದಾರೆ. ವ್ರತಾದಿ ಕಾಮ್ಯಕರ್ಮಗಳನ್ನು ವಿಧ್ಯುಕ್ತವಾಗಿ ಆಚರಿಸಿ ಅವುಗಳ ಫಲವನ್ನೂ ಗುರುಜನರಿಗೆ ಅರ್ಪಿಸಿ ಅನಂತರ ಅದರ ಫಲವನ್ನು ಅನುಭವಿಸುವುದರಿಂದ ಯಾವ ದೋಷವೂ ಉಂಟಾಗುವುದಿಲ್ಲ ಮತ್ತು ಫಲವೂ ಅನಂತವಾಗುತ್ತದೆ.)

ಗುರುಭ್ಯ ಆಸನಂ ದೇಯಂ ಕರ್ತವ್ಯಂ ಚಾಭಿವಾದನಮ್ ।
ಗುರೂನಭ್ಯರ್ಚ್ಯ ಯುಜ್ಯನ್ತೇ ಆಯುಷಾ ಯಶಸಾ ಶ್ರಿಯಾ ॥೧೬॥

ಗುರುಜನರು ಬಂದೊಡನೆಯೇ ಅವರಿಗೆ ಕುಳಿತುಕೊಳ್ಳಲು ಆಸನ ವನ್ನು ಕೊಡಬೇಕು. ಅವರು ಆಸನದಲ್ಲಿ ಕುಳಿತುಕೊಂಡನಂತರ ಅಭಿವಾದನ ಪೂರ್ವಕವಾಗಿ ನಮಸ್ಕಾರವನ್ನು ಮಾಡಬೇಕು. ಅನಂತರ ಅವರನ್ನು ಯಥಾ ಯೋಗ್ಯವಾಗಿ ಸತ್ಕರಿಸಬೇಕು. ಹೀಗೆ ಮಾಡುವುದರಿಂದ ಮನುಷ್ಯರು ಆಯುಷ್ಯದಿಂದಲೂ, ಯಶಸ್ಸಿನಿಂದಲೂ, ಐಶ್ವರ್ಯದಿಂದಲೂ ಸಂಪನ್ನ ರಾಗುತ್ತಾರೆ.

ನೇಕ್ಷೇತಾದಿತ್ಯಮುದ್ಯನ್ತಂ ನ ಚ ನಗ್ನಾಂ ಪರಸ್ತ್ರಿಯಮ್ ।
ಮೈಥುನಂ ಸತತಂ ಧರ್ಮ್ಯಂ ಗುಹ್ಯೇ ಚೈವ ಸಮಾಚರೇತ್ ॥೧೭॥

ಹುಟ್ಟುತ್ತಿರುವ ಸೂರ್ಯನನ್ನೂ, ನಗ್ನಳಾಗಿರುವ ಪರಸ್ತ್ರೀಯನ್ನೂ ನೋಡಬಾರದು. ಋತುಸಮಯಗಳಲ್ಲಿ ಧರ್ಮಾನುಸಾರವಾಗಿ ತನ್ನ ಪತ್ನಿಯೊಡನೆ ಏಕಾಂತಸ್ಥಳದಲ್ಲಿ (ರಹಸ್ಯವಾಗಿ) ಸಮಾಗಮಮಾಡಬೇಕು.

ತೀರ್ಥಾನಾಂ ಹೃದಯಂ ತೀರ್ಥಂ ಶುಚೀನಾಂ ಹೃದಯಂ ಶುಚಿ ।
ಸರ್ವಮಾರ್ಯಕೃತಂ ಚೌಕ್ಷ್ಯವಾಲಸಂಸ್ಪರ್ಶನಾನಿ ಚ ॥೧೮॥

ತೀರ್ಥಗಳಲ್ಲಿ ಶ್ರೇಷ್ಠವಾದುದು ಪರಿಶುದ್ಧವಾದ ಹೃದಯವೇ ಆಗಿದೆ. ಪವಿತ್ರವಸ್ತುಗಳಲ್ಲಿ ಅತ್ಯಂತಪವಿತ್ರವಾದ ವಸ್ತುವೂ ಶುದ್ಧವಾದ ಹೃದಯವೇ ಆಗಿದೆ. ಶಿಷ್ಟರು ಯಾವುದನ್ನು ಆಚರಿಸುತ್ತಾರೆಯೋ ಅಂತಹ ಆಚರಣೆಯೇ ಸರ್ವಶ್ರೇಷ್ಠವಾದುದು. ಹಸುಗಳ ಬಾಲದಲ್ಲಿರುವ ಕೂದಲನ್ನು ಸ್ಪರ್ಶಿಸು ವುದು ಮುಂತಾದುವು ಶಿಷ್ಟಾಚಾರವೇ ಆದುದರಿಂದ ಶುಭಾವಹವು.

ದರ್ಶನೇ ದರ್ಶನೇ ನಿತ್ಯಂ ಸುಖಪ್ರಶ್ನಮುದಾಹರೇತ್ ।
ಸಾಯಂ ಪ್ರಾತಶ್ಚ ವಿಪ್ರಾಣಾಂ ಪ್ರದಿಷ್ಟಮಭಿವಾದನಮ್ ॥೧೯॥

ಪರಿಚಿತರಾದವರು ಯಾವಾಗ ಭೇಟಿಯಾದರೂ ಅವರ ಕುಶಲಪ್ರಶ್ನೆಗಳನ್ನು ಕೇಳಬೇಕು. ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಬ್ರಾಹ್ಮಣರಿಗೆ ಅಭಿವಾದನಪೂರ್ವಕವಾಗಿ ನಮಸ್ಕಾರವನ್ನು ಮಾಡಬೇಕೆಂಬುದು ಶಾಸ್ತ್ರವಿಧಿಯಾಗಿದೆ.

ದೇವಾಗಾರೇ ಗವಾಂ ಮಧ್ಯೇ ಬ್ರಾಹ್ಮಣಾನಾಂ ಕ್ರಿಯಾಪಥೇ ।
ಸ್ವಾಧ್ಯಾಯೇ ಭೋಜನೇ ಚೈವ ದಕ್ಷಿಣಂ ಪಾಣಿಮುದ್ಧರೇತ್ ॥೨೦॥

ದೇವಮಂದಿರದಲ್ಲಿ, ಹಸುಗಳ ಮಧ್ಯದಲ್ಲಿ, ಬ್ರಾಹ್ಮಣರು ಯಜ್ಞಾದಿ ಕರ್ಮಗಳನ್ನು ಮಾಡುವ ಸಮಯದಲ್ಲಿ, ವೇದಾಧ್ಯಯನಮಾಡುವ ಸಮಯದಲ್ಲಿ ಮತ್ತು ಭೋಜನದ ಸಮಯದಲ್ಲಿ ಬಲಗೈಯನ್ನು ಮುಂದಿಟ್ಟುಕೊಂಡಿರಬೇಕು. (ಎತ್ತಿರಬೇಕು).

ಸಾಯಂ ಪ್ರಾತಶ್ಚ ವಿಪ್ರಾಣಾಂ ಪೂಜನಂ ಚ ಯಥಾವಿಧಿ ।

ಪಣ್ಯಾನಾಂ ಶೋಭತೇ ಪಣ್ಯಂ ಕೃಷೀಣಾಂ ಬಾಧ್ಯತೇ ಕೃಷಿಃ ।
ಬಹುಕಾರಂ ಚ ಸಸ್ಯಾನಾಂ ವಾಹ್ಯೇ ವಾಹೋ ಗವಾಂ ತಥಾ ॥೨೧॥

ಪ್ರಾತಃಕಾಲ-ಸಾಯಂಕಾಲಗಳಲ್ಲಿ ಶ್ರೋತ್ರಿಯರಾದ ಬ್ರಾಹ್ಮಣರನ್ನು ಯಥಾವಿಧಿಯಾಗಿ ಸತ್ಕರಿಸಬೇಕು. ಅದರಿಂದ ಪ್ರತ್ಯಕ್ಷಫಲವು ಲಭ್ಯವಾಗುತ್ತದೆ. ಬ್ರಾಹ್ಮಣರನ್ನು ಸತ್ಕರಿಸಿದವನ ವಾಣಿಜ್ಯ-ವ್ಯವಹಾರಗಳು ಇತರರ ವಾಣಿಜ್ಯ-ವ್ಯವಹಾರಗಳಿಗಿಂತಲೂ ಶೋಭಾಯಮಾನವಾಗುತ್ತವೆ. ಅವನ ಹೊಲ-ಗದ್ದೆಗಳು ಇತರರ ಹೊಲ-ಗದ್ದೆಗಳಿಗಿಂತಲೂ ಹೆಚ್ಚು ಫಲವತ್ತಾಗುತ್ತವೆ. ಅವನ ಸಸ್ಯಸಮೃದ್ಧಿಯು ಇತರರ ಸಸ್ಯಸಮೃದ್ಧಿಗಿಂತ ಅಧಿಕವಾಗಿರುತ್ತದೆ. ವಾಹನಗಳಲ್ಲಿ ಶ್ರೇಷ್ಠವಾದ ಎತ್ತಿನಗಾಡಿಯಂತಹ ಶ್ರೇಷ್ಠವಾದ ವಾಹನವು ಬ್ರಾಹ್ಮಣಪೂಜಕನಿಗೆ ಲಭ್ಯವಾಗುತ್ತದೆ.

ಸಮ್ಪನ್ನಂ ಭೋಜನೇ ನಿತ್ಯಂ ಪಾನೀಯೇ ತರ್ಪಣಂ ತಥಾ ।
ಸುಶೃತಂ ಪಾಯಸೇ ಬ್ರೂಯಾದ್ಯವಾಗ್ವಾಂ ಕೃಸರೇ ತಥಾ ॥೨೨॥

ಪ್ರತಿನಿತ್ಯವೂ ಬ್ರಾಹ್ಮಣನು ಭೋಜನಮಾಡಿದನಂತರ ಯಜಮಾನನು ಬ್ರಾಹ್ಮಣನನ್ನು ಕುರಿತು–'ಭೋಜನವು ಸಂಪನ್ನವಾಯಿತೇ? (ಪೂರ್ಣವಾಯಿತೇ?') – ಎಂದು ಪ್ರಶ್ನಿಸಬೇಕು. ಅದಕ್ಕೆ ಉತ್ತರವಾಗಿ ಬ್ರಾಹ್ಮಣನು– 'ಸುಸಂಪನ್ನಂ' 'ಪೂರ್ಣವಾಯಿತು'– ಎನ್ನಬೇಕು. ಬ್ರಾಹ್ಮಣನು ನೀರುಕುಡಿದನಂತರ– 'ತೃಪ್ತಿಯಾಯಿತೇ?'– ಎಂದು ಯಜಮಾನನು ಕೇಳಬೇಕು. ಬ್ರಾಹ್ಮಣನು 'ತೃಪ್ತಿಯಾಯಿತು'–ಎಂದು ಹೇಳಬೇಕು. ಹಾಗೆಯೇ ಬ್ರಾಹ್ಮಣನು ಪಾಯಸವನ್ನು ಕುಡಿದನಂತರ ಯಜಮಾನನು 'ಪಾಯಸವು ರುಚಿಕರವಾಗಿರುವುದೇ? ಚೆನ್ನಾಗಿ ಮಾಡಿರುವರೇ?' ಎಂದು ಪ್ರಶ್ನಿಸಬೇಕು. ಬ್ರಾಹ್ಮಣನು 'ಅತ್ಯಂತರುಚಿಕರವಾಗಿದೆ. ಬಹಳ ಶ್ರದ್ಧೆಯಿಂದ ಮಾಡಿದ್ದಾರೆ'– ಎಂದು ಹೇಳಬೇಕು. ಹೀಗೆಯೇ ಸಜ್ಜಿಗೆ-ಎಳ್ಳನ್ನಗಳನ್ನು ತಿಂದನಂತರವೂ ಯಜಮಾನನು ಬ್ರಾಹ್ಮಣನನ್ನು 'ರುಚಿಕರವಾಗಿರುವುದೇ?' ಎಂದು ಪ್ರಶ್ನಿಸಬೇಕು. ಬ್ರಾಹ್ಮಣನು 'ಬಹಳ ರುಚಿಕರವಾಗಿದೆ'–ಎಂದು ಉತ್ತರಿಸಬೇಕು.

ಶ್ಮಶ್ರುಕರ್ಮಣಿ ಸಮ್ಪ್ರಾಪ್ತೇ ಕ್ಷುತೇ ಸ್ನಾನೇಽಥ ಭೋಜನೇ ।
ವ್ಯಾಧಿತಾನಾಂ ಚ ಸರ್ವೇಷಾಮಾಯುಷ್ಯಮಭಿನನ್ದನಮ್ ॥೨೩॥

ಆಯುಷ್ಕರ್ಮ (ಕ್ಷೌರ) ವನ್ನು ಮಾಡಿಸಿಕೊಂಡನಂತರ, ಶೀನಿದಾಗ, ಸ್ನಾನವಾದನಂತರ ಮತ್ತು ಭೋಜನವಾದನಂತರ **ಸ್ವಸ್ತಿ, ಸುಸ್ನಾತಂ, ಸುಭುಕ್ತಂ, ಲಘುಶರೀರಂ**– ಶುಭವಾಗಲಿ, ಸ್ನಾನವು ಶುಭವಾಯಿತೇ? ಶುಭವಾಗಿ ಭೋಜನವಾಯಿತೇ? ದೇಹವು ಲಘುವಾಗಿದೆಯೇ? ಇತ್ಯಾದಿ ವಚನಗಳಿಂದ ಅಭಿನಂದನೆ ಮಾಡಬೇಕು. ಇದರಿಂದ ಅವರ ರೋಗವು ಪರಿಹಾರವಾಗುತ್ತದೆ. ಆಯುಷ್ಯವೂ ಹೆಚ್ಚುತ್ತದೆ.

ಪ್ರತ್ಯಾದಿತ್ಯಂ ನ ಮೇಹೇತ ನ ಪಶ್ಯೇದಾತ್ಮನಃ ಶಕೃತ್ ।
ಸಹ ಸ್ತ್ರಿಯಾಥ ಶಯನಂ ಸಹ ಭೋಜ್ಯಂ ಚ ವರ್ಜಯೇತ್ ॥೨೪॥

ಸೂರ್ಯನಿಗೆ ಅಭಿಮುಖವಾಗಿ ಕುಳಿತು ಮಲ-ಮೂತ್ರಾದಿಗಳನ್ನು ವಿಸರ್ಜಿಸಬಾರದು. ತನ್ನ ಮಲವನ್ನು ನೋಡಬಾರದು. ಸ್ತ್ರೀಯೊಡನೆ ಒಂದೇ ಹಾಸಿಗೆಯಲ್ಲಿ ಮಲಗಬಾರದು. ಸ್ತ್ರೀಯ ಜೊತೆಯಲ್ಲಿಯೇ ಕುಳಿತು ಭೋಜನವನ್ನು ಮಾಡಬಾರದು.

ತ್ವಂಕಾರಂ ನಾಮಧೇಯಂ ಚ ಜ್ಯೇಷ್ಠಾನಾಂ ಪರಿವರ್ಜಯೇತ್ ।
ಅವರಾಣಾಂ ಸಮಾನಾನಾಮುಭಯೇಷಾಂ ನ ದುಷ್ಯತಿ ॥೨೫॥

ತನಗಿಂತಲೂ ದೊಡ್ಡವರಾದವರ ಹೆಸರನ್ನು ಹಿಡಿದು ಕರೆಯುವುದಾಗಲೀ ಅವರೊಡನೆ 'ನೀನು'–ಎಂಬ ಏಕವಚನದಿಂದ ವ್ಯವಹರಿಸುವುದಾಗಲೀ ಕೂಡದು. ತನಗೆ ಸಮಾನರಾದವರನ್ನೂ ಮತ್ತು ತನಗಿಂತಲೂ ಚಿಕ್ಕವರನ್ನೂ ಹೆಸರು ಹಿಡಿದು ಕರೆದರೆ ಮತ್ತು 'ನೀನು'–ಎಂದು ಅವರೊಡನೆ ವ್ಯವಹರಿಸಿದರೆ ದೋಷವಿಲ್ಲ.

ಹೃದಯಂ ಪಾಪವೃತ್ತಾನಾಂ ಪಾಪಮಾಖ್ಯಾತಿ ವೈ ಕೃತಮ್ ।
ಜ್ಞಾನಪೂರ್ವಂ ವಿನಶ್ಯನ್ತಿ ಗೂಹಮಾನಾ ಮಹಾಜನೇ ॥೨೬॥

ಪಾಪಕರ್ಮಿಗಳ ಹೃದಯವು–ಮುಖ ಮತ್ತು ಕಣ್ಣುಗಳ ಮೂಲಕ ಅವರು ಪಾಪಕರ್ಮಿಗಳೆಂಬುದನ್ನು ಸ್ಪಷ್ಟಪಡಿಸುತ್ತದೆ. ಯಾರು ತಾವು ಮಾಡಿದ ಪಾಪಗಳನ್ನು ಉದ್ದೇಶಪೂರ್ವಕವಾಗಿಯೇ ಮಹಾಜನರಿಗೆ ತಿಳಿಯದಂತೆ ಮುಚ್ಚಿಡುವರೋ–ಅಂತಹವರು ವಿನಾಶಹೊಂದುತ್ತಾರೆ. (ಪಾಪಮಾಡಿದವರು ತಾವು ಮಾಡಿದ ಪಾಪವನ್ನು ಮಹಾಜನರಲ್ಲಿ

ಹೇಳಿಕೊಂಡು ಪಶ್ಚಾತ್ತಾಪಪಡಬೇಕು. ಅವರು ಹೇಳಿದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.)

ಜ್ಞಾನಪೂರ್ವಕೃತಂ ಪಾಪಂ ಛಾದಯತ್ಯಬಹುಶ್ರುತಃ ।
ನೈನಂ ಮನುಷ್ಯಾಃ ಪಶ್ಯನ್ತಿ ಪಶ್ಯನ್ತ್ಯೇವ ದಿವೌಕಸಃ ॥೨೭॥

ತಿಳಿದೂ ಮಾಡಿದ ಪಾಪವನ್ನು ಮೂರ್ಖನಾದವನು ಮಾತ್ರವೇ ಬಚ್ಚಿಡುತ್ತಾನೆ. ಹಾಗೆ ಬಚ್ಚಿಟ್ಟ ಪಾಪವು ಮನುಷ್ಯರಿಗೆ ತಿಳಿಯದಿದ್ದರೂ ದೇವತೆಗಳಿಗೆ ತಿಳಿದಿರುತ್ತದೆ.

ಪಾಪೇನಾಪಿಹಿತಂ ಪಾಪಂ ಪಾಪಮೇವಾನುವರ್ತತೇ ।
ಧರ್ಮೇಣಾಪಿಹಿತೋ ಧರ್ಮೋ ಧರ್ಮಮೇವಾನುವರ್ತತೇ ।
ಧಾರ್ಮಿಕೇಣ ಕೃತೋ ಧರ್ಮೋ ಧರ್ಮಮೇವಾನುವರ್ತತೇ ॥೨೮॥

ಪಾಪಿಷ್ಠನು ತನ್ನ ಪಾಪವನ್ನು ಬಚ್ಚಿಟ್ಟುಕೊಂಡರೆ ಅದರಿಂದ ಅವನ ಪಾಪವು ಬೆಳೆಯುತ್ತದೆ. ಅದು ಅನಂತರ ಪಾಪಗಳಿಗೆ ಕಾರಣವಾಗುತ್ತದೆ. ಧರ್ಮಿಷ್ಠನು ತನ್ನ ಧರ್ಮವನ್ನು ಬಹಿರಂಗಪಡಿಸದೆ ಗುಟ್ಟಾಗಿರಿಸಿಕೊಂಡರೆ ಅದರಿಂದ ಅವನ ಧರ್ಮವು ವೃದ್ಧಿಹೊಂದುತ್ತದೆ. ಅನಂತರದ ಧರ್ಮ ಕಾರ್ಯಗಳಿಗೆ ಅದು ಕಾರಣವಾಗುತ್ತದೆ. ಅವನು ಆಚರಿಸಿದ ಧರ್ಮವು ಹೇಗೂ ಧರ್ಮವೃದ್ಧಿಗೇ ಕಾರಣವಾಗಿ ಧರ್ಮವನ್ನೇ ಅನುಸರಿಸುತ್ತದೆ.

(ಪಾಪಿಷ್ಠನು ತನ್ನ ಪಾಪವನ್ನು ಘೋಷಿಸಿಕೊಂಡರೆ ಅದರಿಂದ ಪಾಪದ ಗಾತ್ರವು ಕಡಿಮೆಯಾಗುತ್ತದೆ. ಆದರೆ ಪುಣ್ಯಕಾರ್ಯಮಾಡಿದವನು ಅದನ್ನು ಬಹಿರಂಗಪಡಿಸದೆ ಗುಟ್ಟಾಗಿರಿಸಿಕೊಳ್ಳಬೇಕು. "**ಧರ್ಮಃ ಕ್ಷರತಿ ಕೀರ್ತನಾತ್**" ಎಂಬಂತೆ ತಾನು ಇಂತಹ ಪುಣ್ಯವನ್ನು ಮಾಡಿದೆನು– ಎಂದು ಹೇಳಿದರೆ ಅದರಿಂದ ಆ ಪುಣ್ಯದ ಪ್ರಮಾಣವು ಕಡಿಮೆಯಾಗುತ್ತದೆ. ಯಯಾತಿಮಹಾರಾಜನು ಇಂದ್ರನ ಮುಂದೆ ತನ್ನ ಪುಣ್ಯಕಾರ್ಯಗಳನ್ನು ಘೋಷಿಸಿ ಪುಣ್ಯಹೀನನಾದ ವೃತ್ತಾಂತವನ್ನು ಸ್ಮರಿಸಬಹುದು. "**ಪಾಪಂ ಪ್ರಕಾಶನೀಯಂ, ಧರ್ಮಸ್ತು ಗೋಪನೀಯಃ**" ಧರ್ಮಿಷ್ಠನು ಆಚರಿಸಿದ ಧರ್ಮವು ಪ್ರಕಾಶಕ್ಕೆ ಬಂದರೂ ಅದು ಇತರರಿಗೆ ಆದರ್ಶವಾಗಿ ಅದರಿಂದ ಧರ್ಮವೃದ್ಧಿಯೇ ಆಗುತ್ತದೆ. ಹೇಗೂ ಅದು ಧರ್ಮವನ್ನೇ

ಅನುಸರಿಸುತ್ತದೆ. ಪಾಠಾಂತರವು ಹೀಗಿದೆ : “ಧಾರ್ಮಿಕೇಣ ಕೃತೋ ಧರ್ಮಃ ಕರ್ತಾರಮನುವರ್ತತೇ । ಪಾಪೇನ ಹಿ ಕೃತಂ ಪಾಪಂ ಪಾಪಮೇವಾನುವರ್ತತೇ”)

ಪಾಪಂ ಕೃತಂ ನ ಸ್ಮರತೀಹ ಮೂಢೋ
ವಿವರ್ತಮಾನಸ್ಯ ತದೇತಿ ಕರ್ತುಃ ।
ರಾಹುರ್ಯಥಾ ಚನ್ದ್ರಮುಪೈತಿ ಚಾಪಿ
ತಥಾಬುಧಂ ಪಾಪಮುಪೈತಿ ಕರ್ಮ ॥೨೯॥

ಮೂಢನಾದವನು ತಾನು ಮಾಡಿದ ಪಾಪಗಳನ್ನು ಸ್ಮರಣೆಯಲ್ಲಿಟ್ಟು ಕೊಳ್ಳುವುದಿಲ್ಲ. ಆದರೆ ಕರ್ತೃವು ಅದನ್ನು ಸ್ಮರಣೆಯಲ್ಲಿಟ್ಟುಕೊಳ್ಳದಿದ್ದರೂ–ರಾಹುವೇ ಚಂದ್ರನನ್ನು ಅನುಸರಿಸಿ ಹೋಗುವಂತೆ–ಪಾಪಕರ್ಮವು ಮೂರ್ಖ ಮನುಷ್ಯನನ್ನು ಅನುಸರಿಸಿ ಹೋಗುತ್ತಿರುತ್ತದೆ.

ಆಶಯಾ ಸಂಚಿತಂ ದ್ರವ್ಯಂ ದುಃಖೇನೈವೋಪಭುಜ್ಯತೇ ।
ತದ್ಬುಧಾ ನ ಪ್ರಶಂಸನ್ತಿ ಮರಣಂ ನ ಪ್ರತೀಕ್ಷತೇ ॥೩೦॥

ಯಾವುದೋ ಒಂದು ಕಾಮನೆಯನ್ನು ಪೂರ್ಣಮಾಡಿಕೊಳ್ಳಲು ಮೂರ್ಖಮನುಷ್ಯನು ಆಶೆಯಿಂದ ದ್ರವ್ಯವನ್ನು ಸಂಗ್ರಹಿಸುತ್ತಿರುತ್ತಾನೆ. ಆದರೆ ಅದರ ಫಲವನ್ನು ದುಃಖಪೂರ್ವಕವಾಗಿಯೇ ಅನುಭವಿಸಬೇಕಾಗುತ್ತದೆ. ಇಂತಹ ಆಶೆಯನ್ನು ವಿದ್ವಾಂಸರು ಪ್ರಶಂಸೆಮಾಡುವುದಿಲ್ಲ. ಏಕೆಂದರೆ: ಆಶೆಯು ಪೂರ್ಣವಾಗುವವರೆಗೂ ಮರಣವು ಕಾಯುತ್ತಿರುವುದಿಲ್ಲ.

ಮಾನಸಂ ಸರ್ವಭೂತಾನಾಂ ಧರ್ಮಮಾಹುರ್ಮನೀಷಿಣಃ ।
ತಸ್ಮಾತ್ಸರ್ವೇಷು ಭೂತೇಷು ಮನಸಾ ಶಿವಮಾಚರೇತ್ ॥೩೧॥

ಸರ್ವಪ್ರಾಣಿಗಳೂ ಮನಃಪೂರ್ವಕವಾಗಿ ಮಾಡುವ ಧರ್ಮವೇ ಶ್ರೇಷ್ಠವೆಂದು ವಿದ್ವಾಂಸರು ಹೇಳುತ್ತಾರೆ. ಆದುದರಿಂದ ಎಲ್ಲ ಪ್ರಾಣಿಗಳ ಕಲ್ಯಾಣವನ್ನೇ ಮನಸ್ಸಿನಲ್ಲಿ ಯಾವಾಗಲೂ ಆಶಿಸುತ್ತಿರಬೇಕು.

ಏಕ ಏವ ಚರೇದ್ಧರ್ಮಂ ನಾಸ್ತಿ ಧರ್ಮೇ ಸಹಾಯತಾ ।
ಕೇವಲಂ ವಿಧಿಮಾಸಾದ್ಯ ಸಹಾಯಃ ಕಿಂ ಕರಿಷ್ಯತಿ ॥೩೨॥

(ವೇದವಿಧಿಯ ಸಹಾಯವನ್ನು ಪಡೆದು) ಏಕಾಕಿಯಾಗಿಯೇ ಧರ್ಮಾಚರಣೆಯನ್ನು ಮಾಡಬೇಕು. ಸ್ವಧರ್ಮಾಚರಣೆಗೆ ಯಾರೊಬ್ಬರ ಸಹಾಯವೂ ಬೇಕಾಗಿಲ್ಲ. ನಾವು ಮಾಡುವ ಸ್ವಧರ್ಮಾಚರಣೆಗೆ ಬೇರೊಬ್ಬರ ಸಹಾಯವು ಹೇಗೆ ನೆರವಾಗಬಲ್ಲುದು?

ಧರ್ಮೋ ಯೋನಿರ್ಮನುಷ್ಯಾಣಾಂ ದೇವಾನಾಮಮೃತಂ ದಿವಿ ।
ಪ್ರೇತ್ಯಭಾವೇ ಸುಖಂ ಧರ್ಮಾಚ್ಛಶ್ವತ್ತೈರುಪಭುಜ್ಯತೇ ॥೩೩॥

ಧರ್ಮವೇ ಮನುಷ್ಯರಿಗೆ ಉತ್ಪತ್ತಿಸ್ಥಾನವಾಗಿದೆ. (ದೇವತ್ವ-ಮನುಷ್ಯತ್ವಗಳನ್ನು ಹೊಂದಿಸುವ ಸ್ಥಾನವಾಗಿದೆ.) ಅದೇ ಧರ್ಮವೇ ಸ್ವರ್ಗದಲ್ಲಿರುವ ದೇವತೆಗಳಿಗೆ ಅಮೃತವಾಗಿದೆ. ಧರ್ಮಾತ್ಮರಾದ ಮನುಷ್ಯರು ಮರಣಾನಂತರದಲ್ಲಿ ಧರ್ಮದ ಬಲದಿಂದಲೇ ಶಾಶ್ವತವಾದ ಸುಖವನ್ನು ಅನುಭವಿಸುತ್ತಾರೆ."

೧೯೩ನೆಯ ಅಧ್ಯಾಯವು ಮುಗಿಯಿತು.

೧೯೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅಧ್ಯಾತ್ಮಜ್ಞಾನದ ನಿರೂಪಣೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಆಧ್ಯಾತ್ಮಂ ನಾಮ ಯದಿದಂ ಪುರುಷಸ್ಯೇಹ ಚಿನ್ತ್ಯತೇ ।
ಯದಧ್ಯಾತ್ಮಂ ಯಥಾ ಚೈತತ್ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಶಾಸ್ತ್ರಗಳಲ್ಲಿ ಪುರುಷನ ಸಲುವಾಗಿ 'ಅಧ್ಯಾತ್ಮ' ಎಂಬ ಹೆಸರಿನಿಂದ ಯಾವುದನ್ನು ವಿಚಾರಮಾಡುತ್ತಾರೆ? ಅಧ್ಯಾತ್ಮ ಎಂದರೆ ಯಾವುದು? ಯಾವ ರೀತಿಯಲ್ಲಿರುತ್ತದೆ?–ಈ ವಿಷಯವನ್ನು ನನಗೆ ತಿಳಿಯಪಡಿಸು.

ಕುತಃ ಸೃಷ್ಟಮಿದಂ ವಿಶ್ವಂ ಬ್ರಹ್ಮನ್ಸ್ಥಾವರಜಙ್ಗಮಮ್ ।
ಪ್ರಲಯೇ ಕಥಮಭ್ಯೇತಿ ತನ್ಮೇ ವಕ್ತುಮಿಹಾರ್ಹಸಿ ॥೨॥

ಬ್ರಹ್ಮನ್! ಈ ಸ್ಥಾವರ-ಜಂಗಮಗಳು ಎಲ್ಲಿಂದ ಸೃಷ್ಟಿಯಾದ್ದುವು? ಪ್ರಳಯಕಾಲದಲ್ಲಿ ಈ ಸ್ಥಾವರ-ಜಂಗಮಗಳ ಲಯವು ಹೇಗಾಗುತ್ತದೆ? ಈ ವಿಷಯವನ್ನು ನನಗೆ ದಯಮಾಡಿ ಹೇಳು.” (ಈ ಶ್ಲೋಕದಲ್ಲಿ ಯುಧಿಷ್ಠಿರನು ಭೀಷ್ಮನನ್ನು ‘ಬ್ರಹ್ಮನ್’ ಎಂದು ಸಂಬೋಧಿಸಿದ್ದಾನೆ. ಭೀಷ್ಮನು ಬ್ರಹ್ಮಸಾಕ್ಷಾತ್ಕಾರವನ್ನು ಪಡೆದವನೆಂದು ಅರ್ಥಮಾಡಬೇಕಾಗುತ್ತದೆ. ಈ ಶ್ಲೋಕವು ಭಂ. ರಿ. ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿರುವುದಿಲ್ಲ.)

ಭೀಷ್ಮನು ಹೇಳುತ್ತಾನೆ :

ಅಧ್ಯಾತ್ಮಮಿತಿ ಮಾಂ ಪಾರ್ಥ ಯದೇತದನುಪೃಚ್ಛಸಿ ।
ತದ್ವ್ಯಾಖ್ಯಾಸ್ಯಾಮಿ ತೇ ತಾತ ಶ್ರೇಯಸ್ಕರತಮಂ ಸುಖಮ್ ॥೩॥

“ಕುಂತೀಪುತ್ರನೇ! ಯುಧಿಷ್ಠಿರ! ನೀನು ಅಧ್ಯಾತ್ಮದ ವಿಷಯವಾಗಿ ಯಾವ ಪ್ರಶ್ನೆಯನ್ನು ಕೇಳಿರುವೆಯೋ–ಆ ಪ್ರಶ್ನೆಗೆ ಉತ್ತರವಾಗಿ ಅಧ್ಯಾತ್ಮದ ವಿಷಯವನ್ನು ವಿವರವಾಗಿಯೇ ನಿನಗೆ ಹೇಳುತ್ತೇನೆ. ನಿಶ್ಚಯವಾಗಿಯೂ ಅಧ್ಯಾತ್ಮವಿದ್ಯೆಯು ಅತ್ಯಂತ ಶ್ರೇಯಸ್ಕರವಾದುದು ಮತ್ತು ಸುಖಾವಹ ವಾದುದು.

ಸೃಷ್ಟಿಪ್ರಲಯಸಂಯುಕ್ತಮಾಚಾರ್ಯೈಃ ಪರಿದರ್ಶಿತಮ್ ।
ಯಜ್ಜ್ಞಾತ್ವಾ ಪುರುಷೋ ಲೋಕೇ ಪ್ರೀತಿಂ ಸೌಖ್ಯಂ ಚ ವಿನ್ದತಿ ।
ಫಲಲಾಭಶ್ಚ ತಸ್ಯ ಸ್ಯಾತ್ಸರ್ವಭೂತಹಿತಂ ಚ ತತ್ ॥೪॥

ಆಚಾರ್ಯರು ಸೃಷ್ಟಿ ಮತ್ತು ಪ್ರಳಯಗಳ ವ್ಯಾಖ್ಯಾನದೊಡನೆಯೇ ಅಧ್ಯಾತ್ಮಜ್ಞಾನದ ವಿವೇಚನೆಯನ್ನೂ ಮಾಡಿದ್ದಾರೆ. ಈ ಅಧ್ಯಾತ್ಮವಿದ್ಯೆಯನ್ನು ತಿಳಿದುಕೊಳ್ಳುವುದರಿಂದ ಮನುಷ್ಯನು ಈ ಲೋಕದಲ್ಲಿ ಪ್ರಸನ್ನತೆಯನ್ನೂ ಸೌಖ್ಯವನ್ನೂ ಹೊಂದುತ್ತಾನೆ. ಇಷ್ಟವಾದ ಫಲವನ್ನೂ ಹೊಂದುತ್ತಾನೆ. ಅಧ್ಯಾತ್ಮಜ್ಞಾನವು ಸಕಲಪ್ರಾಣಿಗಳಿಗೂ ಹಿತಕರವೂ ಆಗಿದೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ।
ಮಹಾಭೂತಾನಿ ಭೂತಾನಾಂ ಸರ್ವೇಷಾಂ ಪ್ರಭವಾಪ್ಯಯೌ ॥೫॥

ಪೃಥಿವೀ, ವಾಯು, ಆಕಾಶ, ಜಲ ಮತ್ತು ಅಗ್ನಿ–ಈ ಪಂಚಮಹಾ ಭೂತಗಳು ಎಲ್ಲ ಪ್ರಾಣಿಗಳ ಉತ್ಪತ್ತಿಗೂ ಮತ್ತು ಲಯಕ್ಕೂ ಸ್ಥಾನಗಳಾಗಿವೆ.

ಯತಃ ಸೃಷ್ಟಾನಿ ತತ್ರೈವ ತಾನಿ ಯಾನ್ತಿ ಪುನಃ ಪುನಃ ।
ಮಹಾಭೂತಾನಿ ಭೂತೇಭ್ಯಃ ಸಾಗರಸ್ಯೋರ್ಮಯೋ ಯಥಾ ॥೬॥

ಯಾವ ರೀತಿಯಲ್ಲಿ ಸಮುದ್ರದಲ್ಲಿ ಹುಟ್ಟಿದ ಅಲೆಗಳು ಪುನಃ ಸಮುದ್ರ ದಲ್ಲಿಯೇ ಲೀನವಾಗುತ್ತವೆಯೋ–ಅದೇ ರೀತಿಯಲ್ಲಿ ಪರಮಾತ್ಮನಿಂದ ಹುಟ್ಟಿದ ಪಂಚಮಹಾಭೂತಗಳು ಎಲ್ಲ ಪ್ರಾಣಿಗಳೊಡನೆ (ಆ ಪರಮಾತ್ಮ ನಲ್ಲಿಯೇ) ಲಯಹೊಂದುತ್ತವೆ.

ಪ್ರಸಾರ್ಯ ಚ ಯಥಾಙ್ಗಾನಿ ಕೂರ್ಮಃ ಸಂಹರತೇ ಪುನಃ ।
ತದ್ವದ್ಭೂತಾನಿ ಭೂತಾತ್ಮಾ ಸೃಷ್ಟಾನಿ ಹರತೇ ಪುನಃ ॥೭॥

ಯಾವ ರೀತಿಯಲ್ಲಿ ಆಮೆಯು ಮೊದಲು ತನ್ನ ಅಂಗಗಳೆಲ್ಲವನ್ನೂ ಹೊರಚಾಚಿದ್ದು ಪುನಃ ಎಲ್ಲ ಅಂಗಗಳನ್ನೂ ಒಳಕ್ಕೆ ಸೆಳೆದುಕೊಳ್ಳು ವುದೋ–ಅದೇ ರೀತಿಯಲ್ಲಿ ಸಕಲಭೂತಾತ್ಮನಾದ ಪರಮಾತ್ಮನು ಮೊದಲು ತನ್ನಲ್ಲಿಯೇ ಲೀನವಾಗಿದ್ದ ಪ್ರಪಂಚವನ್ನು ಸೃಷ್ಟಿಸಿ ಪುನಃ ಪ್ರಪಂಚವನ್ನು ತನ್ನಲ್ಲಿಯೇ ವಿಲೀನಗೊಳಿಸುತ್ತಾನೆ.

ಮಹಾಭೂತಾನಿ ಪಞ್ಚೈವ ಸರ್ವಭೂತೇಷು ಭೂತಕೃತ್ ।
ಅಕರೋತ್ತೇಷು ವೈಷಮ್ಯಂ ತತ್ತು ಜೀವೋ ನ ಪಶ್ಯತಿ ॥೮॥

ಸರ್ವಪ್ರಾಣಿಗಳನ್ನೂ ಸೃಷ್ಟಿಸುವ ಪರಮಾತ್ಮನು ಎಲ್ಲ ಪ್ರಾಣಿಗಳ ಶರೀರಗಳಲ್ಲಿಯೂ ಪಂಚಮಹಾಭೂತಗಳನ್ನೇ ಸ್ಥಾಪಿಸಿದ್ದಾನೆ. ಆದರೆ ಪಂಚ ಮಹಾಭೂತಗಳು ಎಲ್ಲ ಪ್ರಾಣಿಗಳಲ್ಲಿಯೂ ಸಮಪ್ರಮಾಣದಿಂದ ಇರುವು ದಿಲ್ಲ. ಕೆಲವರಲ್ಲಿ ಕೆಲವು ಅಧಿಕ ಪ್ರಮಾಣದಲ್ಲಿರುತ್ತವೆ ; ಕೆಲವರಲ್ಲಿ ಕೆಲವು ಕಡಿಮೆ ಪ್ರಮಾಣದಲ್ಲಿರುತ್ತವೆ. ಪಂಚಭೂತಗಳು ತನ್ನ ಶರೀರದಲ್ಲಿ ಯಾವ-ಯಾವ ಪ್ರಮಾಣದಲ್ಲಿವೆಯೆಂಬುದನ್ನು ಸಾಮಾನ್ಯಮನುಷ್ಯನು ತಿಳಿಯಲಾರನು.

ಶಬ್ದಃ ಶ್ರೋತ್ರಂ ತಥಾ ಖಾನಿ ತ್ರಯಮಾಕಾಶಯೋನಿಜಮ್ ।
ವಾಯೋಃ ಸ್ಪರ್ಶಸ್ತಥಾ ಚೇಷ್ಟಾ ತ್ವಕ್ಚೈವ ತ್ರಿತಯಂ ಸ್ಮೃತಮ್ ॥೯॥

ಶಬ್ದ, ಶ್ರೋತ್ರೇಂದ್ರಿಯ ಮತ್ತು ಶರೀರದಲ್ಲಿರುವ ರಂಧ್ರಗಳು–ಈ ಮೂರೂ ಆಕಾಶತತ್ತ್ವದಿಂದ ಹುಟ್ಟಿದುವುಗಳಾಗಿವೆ. ಸ್ಪರ್ಶ-ಚೇಷ್ಟೆ ಮತ್ತು ತ್ವಗಿಂದ್ರಿಯ– ಈ ಮೂರೂ ವಾಯುತತ್ತ್ವದಿಂದ ಹುಟ್ಟಿದುವುಗಳಾಗಿವೆ.

ರೂಪಂ ಚಕ್ಷುಸ್ತಥಾ ಪಾಕಸ್ತ್ರಿವಿಧಂ ತೇಜ ಉಚ್ಯತೇ ।
ರಸಃ ಕ್ಲೇದಶ್ಚ ಜಿಹ್ವಾ ಚ ತ್ರಯೋ ಜಲಗುಣಾಃ ಸ್ಮೃತಾಃ ॥೧೦॥

ರೂಪ, ಚಕ್ಷುರಿಂದ್ರಿಯ ಮತ್ತು ಪಾಕ (ಪಕ್ವತೆ: ಅಗ್ನಿಯ ಮೂಲಕವಾಗಿ ಪಕ್ವಮಾಡುವುದು)– ಇವುಗಳು ತೇಜಸ್ತತ್ತ್ವದಿಂದ ಉಂಟಾಗಿವೆ. ರಸ, ತೇವ ಮತ್ತು ನಾಲಿಗೆ–ಇವುಗಳು ಜಲತತ್ತ್ವದ ಗುಣಗಳಾಗಿವೆ ಅಥವಾ ಜಲತತ್ತ್ವದಿಂದ ಹುಟ್ಟಿವೆ.

ಘ್ರೇಯಂ ಘ್ರಾಣಂ ಶರೀರಂ ಚ ಏತೇ ಭೂಮಿಗುಣಾಸ್ತ್ರಯಃ ।
ಮಹಾಭೂತಾನಿ ಪಞ್ಚೈವ ಷಷ್ಠಂ ಚ ಮನ ಉಚ್ಯತೇ ॥೧೧॥

ಗಂಧ, ಘ್ರಾಣೇಂದ್ರಿಯ ಮತ್ತು ಶರೀರ–ಈ ಮೂರೂ ಪೃಥ್ವೀತತ್ತ್ವದಿಂದ ಹುಟ್ಟಿವೆ ಅಥವಾ ಪೃಥ್ವೀತತ್ತ್ವದ ಗುಣಗಳಾಗಿವೆ. ಹೀಗೆ ಮನುಷ್ಯನ ಶರೀರದಲ್ಲಿ ಪಂಚಮಹಾಭೂತಗಳ ಸಮಾಗಮವಿದೆ. ಆರನೆಯದು ಮನಸ್ಸೆಂದು ಹೇಳುತ್ತಾರೆ.

ಇನ್ದ್ರಿಯಾಣಿ ಮನಶ್ಚೈವ ವಿಜ್ಞಾನಾನ್ಯಸ್ಯ ಭಾರತ ।
ಸಪ್ತಮೀ ಬುದ್ಧಿರಿತ್ಯಾಹುಃ ಕ್ಷೇತ್ರಜ್ಞಃ ಪುನರಷ್ಟಮಃ ॥೧೨॥

ಚಕ್ಷುಃ - ಶ್ರೋತ್ರಾದಿ ಪಂಚೇಂದ್ರಿಯಗಳೂ ಮತ್ತು ಮನಸ್ಸೂ ಜೀವಾತ್ಮನಿಗೆ ವಿಷಯಗಳ ಜ್ಞಾನವನ್ನುಂಟುಮಾಡಿಕೊಡುತ್ತವೆ. ಶರೀರದಲ್ಲಿರುವ ಏಳನೆಯದನ್ನು 'ಬುದ್ಧಿ' ಎಂದೂ ಎಂಟನೆಯದನ್ನು 'ಕ್ಷೇತ್ರಜ್ಞ' ಎಂದೂ ಹೇಳುತ್ತಾರೆ.

ಚಕ್ಷುರಾಲೋಚನಾಯೈವ ಸಂಶಯಂ ಕುರುತೇ ಮನಃ ।
ಬುದ್ಧಿರಧ್ಯವಸಾನಾಯ ಕ್ಷೇತ್ರಜ್ಞಃ ಸಾಕ್ಷಿವತ್ಸ್ಥಿತಃ ॥೧೩॥

ಕಣ್ಣೇ ಮೊದಲಾದ ಐದು ಇಂದ್ರಿಯಗಳು ವಿಷಯಗಳನ್ನು ಗ್ರಹಿಸುತ್ತವೆ. ಮನಸ್ಸು ಸಂಕಲ್ಪ-ವಿಕಲ್ಪಗಳನ್ನು ಮಾಡುತ್ತದೆ. ಯಾವುದು ಸರಿ ಯಾವುದು ತಪ್ಪು–ಎಂಬ ವಿಷಯದಲ್ಲಿ ಸಂದೇಹಿಸುತ್ತಿರುತ್ತದೆ. ಬುದ್ಧಿಯು ಮನಸ್ಸಿನ ಸಂದೇಹವನ್ನು ನಿವಾರಿಸಿ ನಿಶ್ಚಯಪಡಿಸುತ್ತದೆ. ಕ್ಷೇತ್ರಜ್ಞನು (ಆತ್ಮನು) ಕೇವಲ ಸಾಕ್ಷಿಯಂತೆ ಎಲ್ಲವನ್ನೂ ಗಮನಿಸುತ್ತಿರುತ್ತಾನೆ.

ಊರ್ಧ್ವಂ ಪಾದತಲಾಭ್ಯಾಂ ಯದರ್ವಾಕ್ಚೋರ್ಧ್ವಂ ಚ ಪಶ್ಯತಿ ।
ಏತೇನ ಸರ್ವಮೇವೇದಂ ವಿದ್ಧ್ಯಭಿವ್ಯಾಪ್ತಮನ್ತರಮ್ ॥೧೪॥

ಪಾದಗಳ ತಳದಿಂದ ಹಿಡಿದು ಶಿಖಾಂತವಾಗಿ ಯಾವ ಚೇತನವಿರುವುದೋ ಸಾಕ್ಷೀಭೂತವಾದ ಆ ಚೇತನವು ಮೇಲೆ ಕೆಳಗೆ ಮತ್ತು ಎಲ್ಲ ಕಡೆಗಳಲ್ಲಿಯೂ ನೋಡುತ್ತಿರುತ್ತದೆ. ಆ ಚೇತನವು ಪ್ರಾಣಿಯ ಶರೀರದೊಳಗೆ ಪೂರ್ಣವಾಗಿ ವ್ಯಾಪಿಸಿದೆ. ಈ ವಿಷಯವನ್ನು ನೀನು ಚೆನ್ನಾಗಿ ತಿಳಿದುಕೊ. (ಚೇತನವು ಪ್ರಾಣಿಗಳ ಶರೀರದಲ್ಲಿ ಸರ್ವತ್ರವ್ಯಾಪಿಸಿದೆ. ಹಾಗೆ ವ್ಯಾಪಿಸಿರುವುದರಿಂದಲೇ ಕಾಲುಬೆರಳುಗಳನ್ನೂ ಕೈಬೆರಳುಗಳನ್ನೂ ಆಡಿಸಬಹುದು. ಶರೀರದ ಯಾವ ಭಾಗದಲ್ಲಿಯೇ ಗಾಯವಾದರೂ ಅದು ಚೇತನಕ್ಕೆ ತಿಳಿಯುತ್ತದೆ. ಸರ್ವತ್ರ ವ್ಯಾಪಿಸಿರುವುದೆಂಬುದಕ್ಕೆ ಇದೇ ನಿದರ್ಶನ. ಶರೀರದೊಳಗೆ ಚೇತನವು ನೋಡುತ್ತದೆಂದರೆ ಕಣ್ಣುಗಳಿಂದ ನೋಡುತ್ತದೆ–ಎಂಬ ಅರ್ಥವಲ್ಲ. ಶರೀರವ್ಯಾಪಾರವನ್ನು ಅದು ತಿಳಿದುಕೊಳ್ಳುತ್ತದೆ. ಹೊಟ್ಟೆಯಲ್ಲಿ, ತಲೆಯಲ್ಲಿ, ಕಾಲಿನಲ್ಲಿ ನೋವಾದರೆ ಅದಕ್ಕೆ ತಿಳಿಯುತ್ತದೆ. ಹೊಟ್ಟೆ ತುಂಬಿರುವುದು ತುಂಬದೇ ಇರುವುದು ಅದಕ್ಕೆ ತಿಳಿಯುತ್ತದೆ. ಹೀಗೆ ಶರೀರದಲ್ಲಾಗುವ ಎಲ್ಲ ವಿಷಯಗಳೂ ಚೇತನಕ್ಕೆ ತಿಳಿದಿರುತ್ತದೆ.)

ಪುರುಷೈರಿನ್ದ್ರಿಯಾಣೀಹ ವೇದಿತವ್ಯಾನಿ ಕೃತ್ಸ್ನಶಃ ।
ತಮೋ ರಜಶ್ಚ ಸತ್ತ್ವಂ ಚ ತೇಽಪಿ ಭಾವಾಸ್ತದಾಶ್ರಿತಾಃ ॥೧೫॥

ಪ್ರತಿಯೊಬ್ಬ ಮನುಷ್ಯನೂ ತನ್ನ ಇಂದ್ರಿಯಗಳ, ಮನಸ್ಸಿನ ಮತ್ತು ಬುದ್ಧಿಯ ವ್ಯಾಪಾರಗಳನ್ನು ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಏಕೆಂದರೆ : ಸತ್ತ್ವ-ರಜಸ್ತಮೋಗುಣಗಳು ಇಂದ್ರಿಯಗಳನ್ನೂ, ಮನಸ್ಸನ್ನೂ ಮತ್ತು ಬುದ್ಧಿಯನ್ನೂ ಆಶ್ರಯಿಸಿವೆ.

ಏತಾಂ ಬುದ್ಧ್ವಾ ನರೋ ಬುದ್ಧ್ಯಾ ಭೂತಾನಾಮಾಗತಿಂ ಗತಿಮ್ ।
ಸಮವೇಕ್ಷ್ಯ ಶನೈಶ್ಚೈವ ಲಭತೇ ಶಮಮುತ್ತಮಮ್ ॥೧೬॥

ಮನುಷ್ಯನು ತನ್ನ ಬುದ್ಧಿಯ ಬಲದಿಂದ ಪ್ರಾಣಿಗಳ ಹುಟ್ಟು-ಸಾವು ಗಳ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು ಮೆಲ್ಲ-ಮೆಲ್ಲನೆ ಉತ್ತಮೋ ತ್ತಮವಾದ ಶಾಂತಿಯನ್ನು ಹೊಂದುತ್ತಾನೆ. (ಆತ್ಮಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತಾನೆ)

ಗುಣೈರ್ನೇನೀಯತೇ ಬುದ್ಧಿರ್ಬುದ್ಧೇರೇವೇನ್ದ್ರಿಯಾಣ್ಯಪಿ ।
ಮನಃಷಷ್ಠಾನಿ ಸರ್ವಾಣಿ ತದಭಾವೇ ಕುತೋ ಗುಣಾಃ ॥೧೭॥

ಸತ್ತ್ವ-ರಜಸ್ತಮಸ್ಸುಗಳೆಂಬ ಮೂರು ಗುಣಗಳೇ ಬುದ್ಧಿಗೆ ಪ್ರೇರಕ ಗಳಾಗಿವೆ. ಗುಣಪೂರ್ಣವಾದ ಬುದ್ಧಿಗೆ ಅನುಸಾರವಾಗಿಯೇ ಮನಸ್ಸೇ ಆರನೆಯದಾಗಿರುವ ಇಂದ್ರಿಯಗಳೆಲ್ಲವೂ ಕಾರ್ಯಮಾಡುತ್ತವೆ. ಬುದ್ಧಿಯೇ ಇಲ್ಲದಿದ್ದರೆ ಗುಣಗಳಿಗೆ ಸ್ಥಾನವೆಲ್ಲಿರುತ್ತದೆ? (ಸತ್ತ್ವ-ರಜಸ್ತಮೋಗುಣಗಳು ಹುಟ್ಟಿನಿಂದಲೇ ಜೀವನನ್ನು ಅನುಸರಿಸಿ ಬರುತ್ತವೆ. ಪ್ರತಿಯೊಬ್ಬ ಮನುಷ್ಯ ನಲ್ಲಿಯೂ ಇವು ತರತಮಭಾವದಿಂದ ಇರುತ್ತವೆ. ಶುದ್ಧಸತ್ತ್ವವಾಗಲೀ, ಶುದ್ಧರಜಸ್ಸಾಗಲೀ, ಶುದ್ಧತಮಸ್ಸಾಗಲೀ–ಒಬ್ಬನಲ್ಲಿರಲು ಸಾಧ್ಯವಾಗು ವುದಿಲ್ಲ. ಕೆಲವರು ಸತ್ತ್ವಗುಣಪ್ರಧಾನರಾಗಿರುತ್ತಾರೆ. ಕೆಲವರು ರಜೋಗುಣ ಪ್ರಧಾನರಾಗಿರುತ್ತಾರೆ. ಕೆಲವರು ತಮೋಗುಣಪ್ರಧಾನರಾಗಿರುತ್ತಾರೆ. ಉಳಿದ ಗುಣಗಳೂ ಅವರಲ್ಲಿ ಅಲ್ಪಪ್ರಮಾಣದಲ್ಲಿ ಇರುತ್ತವೆ. ಅವರ ಲ್ಲಿರುವ ಪ್ರಧಾನಗುಣಗಳಿಗೆ ಅನುಸಾರವಾಗಿ ಅವರ ಬುದ್ಧಿಯಿರುತ್ತದೆ. ಸ್ಫಟಿಕದ ಹಿಂದೆ ಕೆಂಪುಬಣ್ಣದ ಪದಾರ್ಥವನ್ನಿಟ್ಟರೆ ಸ್ಫಟಿಕವು ಕೆಂಪಾಗಿ ಕಾಣುತ್ತದೆ. ಕರಿಯದನ್ನಿಟ್ಟರೆ ಕಪ್ಪಾಗಿ ಕಾಣುತ್ತದೆ. ಅದೇ ರೀತಿಯಲ್ಲಿ

ಜೀವನೊಡನೆ ಬಂದ ಈ ಗುಣಗಳು ಬುದ್ಧಿಯಲ್ಲಿ ಪ್ರತಿಬಿಂಬಿಸುತ್ತವೆ. ಆ ಬುದ್ಧಿಯನ್ನೇ ಅನುಸರಿಸಿ ಇಂದ್ರಿಯಗಳೂ ಮತ್ತು ಮನಸ್ಸೂ ಕಾರ್ಯದಲ್ಲಿ ತೊಡಗುತ್ತವೆ. ಪ್ರತಿಬಿಂಬಿಸಲು ಒಂದು ಆಸರೆಯೇ ಇಲ್ಲದಿದ್ದರೆ ಗುಣಗಳೆಲ್ಲಿರುವುವು? ಆದುದರಿಂದ ಗುಣಗಳನ್ನು ಪ್ರತಿಬಿಂಬಿಸಲು ಬುದ್ಧಿಯು ಇರಲೇಬೇಕು.)

ಇತಿ ತನ್ಮಯಮೇವೈತತ್ಸರ್ವಂ ಸ್ಥಾವರಜಙ್ಗಮಮ್ ।
ಪ್ರಲೀಯತೇ ಚೋದ್ಭವತಿ ತಸ್ಮಾನ್ನಿರ್ದಿಶ್ಯತೇ ತಥಾ ॥೧೮॥

ಚರಾಚರಗಳಿಂದ ಕೂಡಿರುವ ಈ ಸಂಪೂರ್ಣ ಜಗತ್ತು ಬುದ್ಧಿಯ ಉದಯವಾದನಂತರವೇ ಹುಟ್ಟಿದೆ. ಬುದ್ಧಿಯು ಲೀನವಾದೊಡನೆಯೇ ಜಗತ್ತೂ ಲೀನವಾಗುತ್ತದೆ. ಆದುದರಿಂದ ಈ ಎಲ್ಲ ಪ್ರಪಂಚವೂ ಬುದ್ಧಿ ಮಯವಾಗಿದೆ. ಆದುದರಿಂದಲೇ ಶ್ರುತಿಯಲ್ಲಿ ಎಲ್ಲವೂ ಬುದ್ಧಿರೂಪ ವಾಗಿರುವುದೆಂಬ ನಿರ್ದೇಶವಿದೆ. (ಮನಸಾ ಹ್ಯೇವ ಪಶ್ಯತಿ ಮನಸಾ ಶೃಣೋತಿ–ಎಂಬ ಶ್ರುತಿವಾಕ್ಯವನ್ನು ವ್ಯಾಖ್ಯಾನಕಾರರು ಉದ್ಧರಿಸಿದ್ದಾರೆ.)

ಯೇನ ಪಶ್ಯತಿ ತಚ್ಚಕ್ಷುಃ ಶೃಣೋತಿ ಶ್ರೋತ್ರಮುಚ್ಯತೇ ।
ಜಿಘ್ರತಿ ಘ್ರಾಣಮಿತ್ಯಾಹುಃ ರಸಂ ಜಾನಾತಿ ಜಿಹ್ವಯಾ ॥೧೯॥

ಬುದ್ಧಿಯು ಯಾವುದರ ಮೂಲಕವಾಗಿ ನೋಡುವುದೋ–ಅದೇ ಕಣ್ಣು. ಯಾವುದರ ಮೂಲಕವಾಗಿ ಕೇಳುವುದೋ–ಅದೇ ಶ್ರೋತ್ರ. ಯಾವುದರ ಮೂಲಕವಾಗಿ ವಾಸನೆಯನ್ನು ತಿಳಿದುಕೊಳ್ಳುವುದೋ–ಅದೇ ಘ್ರಾಣ. ಯಾವುದರ ಮೂಲಕವಾಗಿ ರಸಾಸ್ವಾದನೆಯನ್ನು ಮಾಡುವುದೋ– ಅದೇ ಜಿಹ್ವೆ.

ತ್ವಚಾ ಸ್ಪರ್ಶಯತೇ ಸ್ಪರ್ಶಂ ಬುದ್ಧಿರ್ವಿಕ್ರಿಯತೇಽಸಕೃತ್ ।
ಯೇನ ಪ್ರಾರ್ಥಯತೇ ಕಿಞ್ಚಿತ್ತದಾ ಭವತಿ ತನ್ಮನಃ ॥೨೦॥

ಬುದ್ಧಿಯು ತ್ವಚೆಯ (ಚರ್ಮದ) ಮೂಲಕವಾಗಿ ಸ್ಪರ್ಶದ ಅನುಭವವನ್ನು ಪಡೆದುಕೊಳ್ಳುತ್ತದೆ. ಹೀಗೆ ಬುದ್ಧಿಯು ಕ್ಷಣ-ಕ್ಷಣಕ್ಕೂ

ಒಂದೊಂದು ವಿಕಾರವನ್ನು ಹೊಂದುತ್ತದೆ. ಒಂದು ವಸ್ತುವನ್ನು ನೋಡಿದಾಗ ಆ ನೋಡುವಿಕೆಯೆಂಬುದೇ ಬುದ್ಧಿಯಾಗುತ್ತದೆ. ಬುದ್ಧಿಯ ಸಹಯೋಗವಿಲ್ಲದಿದ್ದರೆ ನೋಡಲು ಸಾಧ್ಯವಾಗುವುದಿಲ್ಲ. ಒಂದು ಶಬ್ದವನ್ನು ಕೇಳಿದಾಗ ಆ ಕೇಳುವಿಕೆಯೆಂಬುದೇ ಬುದ್ಧಿಯಾಗುತ್ತದೆ. ಬುದ್ಧಿಯ ಸಹಯೋಗವಿಲ್ಲದಿದ್ದರೆ ಕೇಳಲು ಸಾಧ್ಯವಾಗುವುದಿಲ್ಲ. ರುಚಿಯನ್ನು ನೋಡುವಾಗ ಜಿಹ್ವೆಯೇ ಬುದ್ಧಿಯಾಗುತ್ತದೆ. ಬುದ್ಧಿಯ ಸಹಯೋಗವಿಲ್ಲದಿದ್ದರೆ ರುಚಿಯೇ ತಿಳಿಯುವುದಿಲ್ಲ. ವಾಸನೆಯನ್ನು ನೋಡುವಾಗ ಘ್ರಾಣವೇ ಬುದ್ಧಿಯಾಗುತ್ತದೆ. ಬುದ್ಧಿಯ ಸಹಯೋಗವಿಲ್ಲದಿದ್ದರೆ ವಾಸನೆಯನ್ನೂ ತಿಳಿಯಲಾಗುವುದಿಲ್ಲ. ಸ್ಪರ್ಶಿಸುವಾಗ ತ್ವಚೆಯೇ ಬುದ್ಧಿಯಾಗುತ್ತದೆ. ಬುದ್ಧಿಯ ಸಹಯೋಗವಿಲ್ಲದಿದ್ದರೆ ಸ್ಪರ್ಶದ ಅನುಭವವೇ ಆಗುವುದಿಲ್ಲ. ಹೀಗೆ ಬುದ್ಧಿಯು ಕ್ಷಣ-ಕ್ಷಣಕ್ಕೂ ತ್ವಕ್ಚಕ್ಷುಃ-ಶ್ರೋತ್ರ-ಜಿಹ್ವಾ-ಘ್ರಾಣಗಳೆಂಬ ನಾನಾರೂಪಗಳನ್ನು ಹೊಂದುತ್ತಿರುತ್ತದೆ. ಯಾವ ಕರಣದ ಮೂಲಕವಾಗಿ ಯಾವ ಅನುಭವವನ್ನು ಪಡೆಯಲು ಇಚ್ಛಿಸುವುದೋ–ಅಂತಹ ಅನುಭವದ ರೂಪವನ್ನೇ ಬುದ್ಧಿಯು ತಾಳುತ್ತದೆ. (**ಸಪ್ರಾಣನ್ನೇವ ಪ್ರಾಣೋ ನಾಮ ಭವತಿ। ವದನ್ವಾಕ್ ಪಶ್ಯನ್‌ಚಕ್ಷುಃ ಶೃಣ್ವನ್ ಶ್ರೋತ್ರಂ ಮನ್ವಾನೋ ಮನಃ ತಾನ್ಯಸ್ಯ ಕರ್ಮನಾಮಾನ್ಯೇವ**– ಎಂಬ ಶ್ರುತಿವಚನವೂ ಇದನ್ನೇ ಹೇಳುತ್ತದೆ.)

ಅಧಿಷ್ಠಾನಾನಿ ಬುದ್ಧೇರ್ಹಿ ಪೃಥಗರ್ಥಾನಿ ಪಞ್ಚಧಾ ।
ಇನ್ದ್ರಿಯಾಣೀತಿ ಯಾನ್ಯಾಹುಸ್ತಾನ್ಯದೃಶ್ಯೋಽಧಿತಿಷ್ಠತಿ ॥೨೧॥

ಭಿನ್ನ-ಭಿನ್ನವಾದ ವಿಷಯಗಳನ್ನು ಗ್ರಹಿಸಲು ಬುದ್ಧಿಗೆ ಯಾವ ಐದು ಆಶ್ರಯಸ್ಥಾನಗಳಿವೆಯೋ ಅವುಗಳನ್ನೇ ಪಂಚೇಂದ್ರಿಯಗಳೆಂದು ಕರೆಯುತ್ತಾರೆ. ಅದೃಶ್ಯನಾದ ಜೀವಾತ್ಮನು ಆ ಎಲ್ಲಕ್ಕೂ ಪ್ರೇರಕನಾಗಿದ್ದಾನೆ. (ಅಧಿಷ್ಠಾತೃವಾಗಿದ್ದಾನೆ.)

ಪುರುಷೇ ತಿಷ್ಠತೀ ಬುದ್ಧಿಸ್ತ್ರಿಷು ಭಾವೇಷು ವರ್ತತೇ ।
ಕದಾಚಿಲ್ಲಭತೇ ಪ್ರೀತಿಂ ಕದಾಚಿದನುಶೋಚತಿ ।
ನ ಸುಖೇನ ನ ದುಃಖೇನ ಕದಾಚಿದಪಿ ವರ್ತತೇ ॥೨೨॥

ಜೀವಾತ್ಮದ ಆಶ್ರಯದಲ್ಲಿರುವ ಬುದ್ಧಿಯು ಸತ್ತ್ವ-ರಜಸ್ತಮೋ ರೂಪವಾದ ಸುಖ, ದುಃಖ ಮತ್ತು ಮೋಹ–ಈ ಮೂರು ಭಾವಗಳಿಂದ ಕೂಡಿರುತ್ತದೆ. ಕೆಲವು ವೇಳೆ ಅದು (ಬುದ್ಧಿಯು) ಪ್ರಸನ್ನವಾಗಿರುತ್ತದೆ. (ಸತ್ತ್ವಗುಣವನ್ನು ಆಶ್ರಯಿಸಿರುತ್ತದೆ.) ಕೆಲವು ವೇಳೆ ಶೋಕದಲ್ಲಿ ಮುಳುಗಿಹೋಗಿರುತ್ತದೆ. (ರಜೋಗುಣವನ್ನು ಆಶ್ರಯಿಸಿರುತ್ತದೆ.) ಕೆಲವು ವೇಳೆ ಸುಖ-ದುಃಖಗಳೆರಡರಿಂದಲೂ ವಿಹೀನವಾಗಿ ಮೋಹಕವಾಗಿರುತ್ತದೆ. (ತಮೋಗುಣವನ್ನು ಆಶ್ರಯಿಸಿರುತ್ತದೆ.)

ಏವಂ ನರಾಣಾಂ ಮನಸಿ ತ್ರಿಷು ಭಾವೇಷ್ವವಸ್ಥಿತಾ ।
ಸೇಯಂ ಭಾವಾತ್ಮಿಕಾ ಭಾವಾಂಸ್ತ್ರೀನೇತಾನತಿವರ್ತತೇ ।
ಸರಿತಾಂ ಸಾಗರೋ ಭರ್ತಾ ಮಹಾವೇಲಾಮಿವೋರ್ಮಿಮಾನ್ ॥

ಹೀಗೆ ಮನುಷ್ಯರ ಮನಸ್ಸಿನಲ್ಲಿ ಮೂರು ಭಾವಗಳಿಂದ ಕೂಡಿರುವ ಭಾವಾತ್ಮಿಕವಾದ ಬುದ್ಧಿಯು ಸಮಾಧಿಯ ಅವಸ್ಥೆಯಲ್ಲಿ–ನದಿಗಳಿಗೆ ಒಡೆಯನಾದ, ಊರ್ಮಿಮಂತನಾದ ಸಮುದ್ರನು ಕೆಲವು ಸಮಯದಲ್ಲಿ ತೀರ ಗಳನ್ನೂ ಅತಿಕ್ರಮಿಸಿ ಹೋಗುವಂತೆ ಸುಖ-ದುಃಖ-ಮೋಹಗಳೆಂಬ ಮೂರು ಭಾವಗಳನ್ನೂ (ಸತ್ತ್ವ-ರಜಸ್ತಮೋಗುಣಗಳನ್ನೂ) ಅತಿಕ್ರಮಿಸಿ ಹೋಗುತ್ತದೆ.

ಅತಿಭಾವಗತಾ ಬುದ್ಧಿರ್ಭಾವೇ ಮನಸಿ ವರ್ತತೇ ।
ಪ್ರವರ್ತಮಾನಂ ತು ರಜಸ್ತದ್ಭಾವಮನುವರ್ತತೇ ॥೨೫॥

ಹೀಗೆ ಸಮಾಧಿಸ್ಥಿತಿಯಲ್ಲಿ ಸುಖ-ದುಃಖ-ಮೋಹಗಳೆಂಬ ಅಥವಾ ಸತ್ತ್ವ-ರಜಸ್ತಮಸ್ಸುಗಳೆಂಬ ಮೂರು ಭಾವಗಳನ್ನು ಅತಿಕ್ರಮಿಸಿ ಹೋದಾಗಲೂ ಬುದ್ಧಿಯು ಭಾವಾತ್ಮಕವಾದ ಮನಸ್ಸಿನಲ್ಲಿ ಸೂಕ್ಷ್ಮರೂಪದಲ್ಲಿ ಇದ್ದೇ ಇರುತ್ತದೆ. ಸಮಾಧಿಯಿಂದ ಎದ್ದನಂತರ ಪ್ರವೃತ್ತ್ಯಾತ್ಮಕವಾದ ರಜೋಗುಣವು ಬುದ್ಧಿಭಾವವನ್ನು ಅನುಸರಿಸುತ್ತದೆ. (ಈರುಳ್ಳಿ-ಬೆಳ್ಳುಳ್ಳಿಗಳನ್ನು ಬೇಯಿಸಿದ ಪಾತ್ರೆಯನ್ನು ಎಷ್ಟೇ ತೊಳೆದರೂ ಅದರ ವಾಸನೆಯು ಸಂಪೂರ್ಣವಾಗಿ ಹೋಗದಂತೆ– ಅಜ್ಞಾನವು ನಾಶವಾಗಿದ್ದರೂ ಪ್ರಾರಬ್ಧ

ಕರ್ಮಾನುಸಾರವಾಗಿ ಸತ್ತ್ವ-ರಜಸ್ತಮೋಗುಣಗಳ ಪ್ರಭಾವವು ಸ್ವಲ್ಪವಾದರೂ ಬುದ್ಧಿಯಲ್ಲಿ ಇದ್ದೇ ಇರುತ್ತದೆ. ಪ್ರಾರಬ್ಧಕರ್ಮವು ತೀರಿದನಂತರ ಅನಿರ್ಬಂಧಿತವಾದ ಕೈವಲ್ಯವು ಪ್ರಾಪ್ತವಾಗುತ್ತದೆ. ಇದು ವ್ಯಾಖ್ಯಾನಕಾರರ ವಿವರಣೆಯಾಗಿದೆ.)

ಇನ್ದ್ರಿಯಾಣಿ ಹಿ ಸರ್ವಾಣಿ ಪ್ರವರ್ತಯತಿ ಸಾ ತದಾ ।
ತತಃ ಸತ್ತ್ವಂ ತಮೋಭಾವಃ ಪ್ರೀತಿಯೋಗಾತ್ಪ್ರವರ್ತತೇ ॥೨೬॥

ಆ ಸಮಯದಲ್ಲಿ ರಜೋಗುಣದಿಂದ ಯುಕ್ತವಾದ ಬುದ್ಧಿಯು ಎಲ್ಲ ಇಂದ್ರಿಯಗಳನ್ನೂ ಕಾರ್ಯಪ್ರವೃತ್ತಗಳನ್ನಾಗಿ ಮಾಡುತ್ತದೆ. ತತ್ಪರಿಣಾಮವಾಗಿ ಪ್ರೀತಿಯಿಂದಲೂ, ಅತ್ಯಾಸಕ್ತಿಯಿಂದಲೂ ಸತ್ತ್ವದ ಮತ್ತು ತಮಸ್ಸಿನ ಭಾವಗಳೂ ಬುದ್ಧಿಯಲ್ಲಿ ಉಂಟಾಗುತ್ತವೆ.

ಪ್ರೀತಿಃ ಸತ್ತ್ವಂ ರಜಃ ಶೋಕಸ್ತಮೋ ಮೋಹಸ್ತು ತೇ ತ್ರಯಃ ।
ಯೇ ಯೇ ಚ ಭಾವಾ ಲೋಕೇಽಸ್ಮಿನ್ಸರ್ವೇಷ್ವೇತೇಷು ವೈ ತ್ರಿಷು ॥

ಪ್ರೀತಿಯು (ಹರ್ಷವು) ಸತ್ತ್ವಗುಣದ ಭಾವವಾಗಿದೆ. ಶೋಕವು ರಜೋಗುಣದ ಭಾವವಾಗಿದೆ. ಮೋಹವು ತಮೋಗುಣದ ಭಾವವಾಗಿದೆ. ಈ ಪ್ರಪಂಚದಲ್ಲಿ ಯಾವ ಯಾವ ಭಾವಗಳಿವೆಯೋ–ಅವುಗಳೆಲ್ಲವೂ ಈ ಮೂರರಲ್ಲಿಯೇ ಅಂತರ್ಗತವಾಗಿವೆ.

ಯುಧಿಷ್ಠಿರ! ಈ ರೀತಿಯಲ್ಲಿ ಬುದ್ಧಿಯು ಪ್ರವಹಿಸುವ ಮಾರ್ಗಗಳೆಲ್ಲವನ್ನೂ ಸವಿಸ್ತರವಾಗಿ ನಿನಗೆ ತಿಳಿಸಿದ್ದೇನೆ. ಬುದ್ಧಿಮಂತನಾದ, ಆತ್ಮಾನಂದವನ್ನು ಪಡೆಯುವ ಅಭಿಲಾಷೆಯುಳ್ಳ ಮನುಷ್ಯನು ಎಲ್ಲ ಇಂದ್ರಿಯಗಳನ್ನೂ ವಶಪಡಿಸಿಕೊಳ್ಳಬೇಕು.

ಸತ್ತ್ವಂ ರಜಸ್ತಮಶ್ಚೈವ ಪ್ರಾಣಿನಾಂ ಸಂಶ್ರಿತಾಃ ಸದಾ ।
ತ್ರಿವಿಧಾ ವೇದನಾ ಚೈವ ಸರ್ವಸತ್ತ್ವೇಷು ದೃಶ್ಯತೇ ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೇತಿ ಭಾರತ ॥೨೮॥

ಸತ್ತ್ವ-ರಜಸ್ತಮೋಗುಣಗಳು ಯಾವಾಗಲೂ ಪ್ರಾಣಿಗಳನ್ನು ಆಶ್ರಯಿಸಿಯೇ ಇರುತ್ತವೆ. ಈ ಕಾರಣದಿಂದ ಎಲ್ಲ ಪ್ರಾಣಿಗಳಲ್ಲಿಯೂ ಸಾತ್ತ್ವಿಕೀ,

ರಾಜಸೀ ಮತ್ತು ತಾಮಸೀ–ಎಂಬ ಮೂರು ವಿಧವಾದ ಅನುಭೂತಿಗಳು ಪ್ರತ್ಯೇಕ-ಪ್ರತ್ಯೇಕವಾಗಿ ಕಂಡುಬರುತ್ತವೆ.

ಸುಖಸ್ಪರ್ಶಃ ಸತ್ತ್ವಗುಣೋ ದುಃಖಸ್ಪರ್ಶೋ ರಜೋಗುಣಃ ।
ತಮೋಗುಣೇನ ಸಂಯುಕ್ತೌ ಭವತೋऽವ್ಯಾವಹಾರಿಣೌ ॥೩೦॥

ಸತ್ತ್ವಗುಣವು ಸುಖದ ಅನುಭವವನ್ನು ಉಂಟುಮಾಡುತ್ತದೆ. ರಜೋಗುಣವು ದುಃಖದ ಅನುಭವವನ್ನು ಉಂಟುಮಾಡುತ್ತದೆ. ಸತ್ತ್ವ-ರಜಸ್ಸುಗಳೆರಡೂ (ಸುಖ-ದುಃಖಗಳೆರಡೂ) ತಮೋಗುಣ (ಮೋಹ)ದೊಡನೆ ಸೇರಿದರೆ ಅದು ಅವ್ಯವಹಾರವಾಗುತ್ತದೆ. ಎಂದರೆ ತಮೋಗುಣದ ಮೋಹವೊಂದೇ ಉಳಿದುಕೊಳ್ಳುವುದೇ ಹೊರತು ಸುಖ-ದುಃಖಗಳು ಉಳಿಯುವುದಿಲ್ಲ.

ತತ್ರ ಯತ್ಪ್ರೀತಿಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ವರ್ತತೇ ಸಾತ್ತ್ವಿಕೋ ಭಾವ ಇತ್ಯಾಚಕ್ಷೀತ ತತ್ತಥಾ ॥೩೧॥

ಯಾವಾಗ ಶರೀರದಲ್ಲಿ ಅಥವಾ ಮನಸ್ಸಿನಲ್ಲಿ ಪ್ರಸನ್ನತೆಯ ಭಾವವು ಉಂಟಾಗುವುದೋ–ಆಗ ಮನುಷ್ಯನಲ್ಲಿ ಸಾತ್ತ್ವಿಕಭಾವವು ಉದಯವಾಗಿದೆಯೆಂದು ತಿಳಿಯಬೇಕು. (ಹೋಲಿಕೆ : ಶ್ರೀಗೀತೆ-ಅ. ೧೪-ಶ್ಲೋ. ೧೧)

ಅಥ ಯದ್ದುಃಖಸಂಯುಕ್ತಮಪ್ರೀತಿಕರಮಾತ್ಮನಃ ।
ಪ್ರವೃತ್ತಂ ರಜ ಇತ್ಯೇವ ತನ್ನ ಸಂರಭ್ಯ ಚಿನ್ತಯೇತ್ ॥೩೨॥

ಯಾವಾಗ ಶರೀರದಲ್ಲಿ ಅಥವಾ ಮನಸ್ಸಿನಲ್ಲಿ ದುಃಖಯುಕ್ತವಾದ ಅಪ್ರೀತಿಯು ಉಂಟಾಗುವುದೋ (ಮನಸ್ಸಿಗೆ ಅಹಿತವುಂಟಾಗುವುದೋ)–ಆಗ ಮನುಷ್ಯನಲ್ಲಿ ರಜೋಭಾವವು ಉದಯವಾಗಿರುವುದೆಂದು ತಿಳಿಯಬೇಕು. ಆ ದುಃಖವನ್ನು ಮನಸ್ಸಿಗೆ ಹಚ್ಚಿಕೊಂಡು ಚಿಂತಿಸಬಾರದು. ಏಕೆಂದರೆ: ಚಿಂತೆಯಿಂದ ದುಃಖವು ಮತ್ತಷ್ಟು ಅಧಿಕವಾಗುತ್ತದೆ.

(ಹೋಲಿಕೆ : ಶ್ರೀಗೀತೆ-ಅ. ೧೪-ಶ್ಲೋ.೧೨)

ಅಥ ಯನ್ಮೋಹಸಂಯುಕ್ತಮವ್ಯಕ್ತವಿಷಯಂ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥೩೩॥

ಯಾವಾಗ ಮನಸ್ಸಿನಲ್ಲಿ ಮೋಹಯುಕ್ತವಾದ ಭಾವವು ಉಂಟಾಗುವುದೋ–ಇಂದ್ರಿಯಗಳ ವಿಷಯಗಳೆಲ್ಲವೂ ಅಸ್ಪಷ್ಟವಾಗಿರುವುವೋ–ಕಣ್ಣು-ಕಿವಿ-ಮೂಗು-ನಾಲಿಗೆಗಳ ಮೇಲೆ ಹತೋಟಿಯೇ ತಪ್ಪಿಹೋಗಿರುವುದೋ, ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳ ಅರಿವೇ ಇರುವುದಿಲ್ಲವೋ, ವಿವೇಚನಾಶಕ್ತಿಯೇ ಲುಪ್ತವಾಗಿರುವುದೋ, ಯಾವುದೊಂದೂ ತಿಳಿಯುವುದೇ ಇಲ್ಲವೋ, ಆಗ ತಮೋಗುಣವು ವೃದ್ಧಿಯಾಗಿರುವುದೆಂದು ತಿಳಿಯಬೇಕು. (ಹೋಲಿಕೆ : ಶ್ರೀಗೀತೆ- ಅ. ೧೪-ಶ್ಲೋ. ೧೩)

ಪ್ರಹರ್ಷಃ ಪ್ರೀತಿರಾನನ್ದಃ ಸುಖಂ ಸಂಶಾನ್ತಚಿತ್ತತಾ ।
ಕಥಂಚಿದಭಿವರ್ತನ್ತ ಇತ್ಯೇತೇ ಸಾತ್ತ್ವಿಕಾ ಗುಣಾಃ ॥೩೪॥

ಮನುಷ್ಯನ ಮನಸ್ಸಿನಲ್ಲಿ ಯಾವುದಾದರೂ ರೀತಿಯಲ್ಲಿ ಯಾವಾಗಲಾದರೂ ಅತ್ಯಂತಹರ್ಷ, ಪ್ರೀತಿ, ಆನಂದ, ಸುಖ ಮತ್ತು ಪ್ರಸನ್ನತೆ– ಇವುಗಳುಂಟಾಗುತ್ತವೆ. ಮನಸ್ಸಿನ ಆ ವಿಕಾರಗಳು ಸಾತ್ತ್ವಿಕಗುಣಗಳೆನಿಸಿಕೊಳ್ಳುತ್ತವೆ. (ಸುಖಸ್ಪರ್ಶಃ ಸತ್ತ್ವಗುಣಃ – ಎಂದು ಸತ್ತ್ವಗುಣದ ಅನುಭವವನ್ನು ಹೇಳಿದನಂತರ (ಶ್ಲೋ.೩೦) ಆ ಸುಖದ ಪ್ರಭೇದಗಳನ್ನು ಇಲ್ಲಿ ಹೇಳಿದ್ದಾರೆ.)

ಅತುಷ್ಟಿಃ ಪರಿತಾಪಶ್ಚ ಶೋಕೋ ಲೋಭಸ್ತಥಾಕ್ಷಮಾ ।
ಲಿಙ್ಗಾನಿ ರಜಸಸ್ತಾನಿ ದೃಶ್ಯನ್ತೇ ಹೇತ್ವಹೇತುಭಿಃ ॥೩೫॥

ಮನುಷ್ಯನ ಮನಸ್ಸಿನಲ್ಲಿ ಯಾವಾಗಲಾದರೂ ಸಕಾರಣವಾಗಿಯೇ ಆಗಲೀ ಅಥವಾ ನಿಷ್ಕಾರಣವಾಗಿಯೇ ಆಗಲೀ–ಅಸಂತುಷ್ಟಿ, ಪರಿತಾಪ, ಶೋಕ, ಲೋಭ, ಅಸಹನೆ–ಇವುಗಳು ಉಂಟಾಗುತ್ತವೆ. ಇವು ರಜೋಗುಣದ ಚಿಹ್ನೆಗಳಾಗಿವೆ ಅಥವಾ ರಜೋಗುಣದ ಮುಖ್ಯಾಂಗವಾದ ದುಃಖದ ಪ್ರಭೇದಗಳಾಗಿವೆ.

ಅವಮಾನಸ್ತಥಾ ಮೋಹಃ ಪ್ರಮಾದಃ ಸ್ವಪ್ನತನ್ದ್ರಿತಾ ।
ಕಥಂಚಿದಭಿವರ್ತನ್ತೇ ವಿವಿಧಾಸ್ತಾಮಸಾ ಗುಣಾಃ ॥೩೬॥

ಅವಮಾನ, ಮೋಹ, ಪ್ರಮಾದ, ಸ್ವಪ್ನ ಮತ್ತು ಆಲಸ್ಯ–ಇವುಗಳು ಮನುಷ್ಯನನ್ನು ಹೇಗೋ ಆವರಿಸಿಕೊಳ್ಳುತ್ತವೆ. ಇವುಗಳು ತಮೋಗುಣದ ಮುಖ್ಯಾಂಗವಾದ ಮೋಹದ ಪ್ರಭೇದಗಳು.

ದೂರಗಂ ಬಹುಧಾಗಾಮಿ ಪ್ರಾರ್ಥನಾಸಂಶಯಾತ್ಮಕಮ್ ।
ಮನಃ ಸುನಿಯತಂ ಯಸ್ಯ ಸ ಸುಖೀ ಪ್ರೇತ್ಯ ಚೇಹ ಚ ॥೩೭॥

ಬಹಳ ದೂರ ಓಡಿಹೋಗುವ, ಅನೇಕವಿಷಯಗಳ ಕಡೆಗೆ–ಅನೇಕ ವಸ್ತುಗಳ ಕಡೆಗೆ ಪ್ರವಹಿಸುವ, ಅನೇಕವಸ್ತುಗಳನ್ನು ಇಚ್ಛಿಸುವ, ಸಂಶಯಾತ್ಮಕವಾದ ಮನಸ್ಸನ್ನು ಯಾವನು ಸಂಯಮದಲ್ಲಿಟ್ಟುಕೊಂಡಿರುವನೋ–ಅವನು ಇಲ್ಲಿಯೂ ಸುಖವಾಗಿರುತ್ತಾನೆ ; ದೇಹದ ಅವಸಾನಾನಂತರದಲ್ಲಿಯೂ ಜಿತೇಂದ್ರಿಯತ್ವದ ಫಲದಿಂದಾಗಿ ಸುಖಿಯಾಗುತ್ತಾನೆ.

ಸತ್ತ್ವಕ್ಷೇತ್ರಜ್ಞಯೋರೇತದನ್ತರಂ ಪಶ್ಯ ಸೂಕ್ಷ್ಮಯೋಃ ।
ಸೃಜತೇ ತು ಗುಣಾನೇಕ ಏಕೋ ನ ಸೃಜತೇ ಗುಣಾನ್ ॥೩೮॥

ಯುಧಿಷ್ಠಿರ! ಸೂಕ್ಷ್ಮತತ್ತ್ವಗಳಾದ ಬುದ್ಧಿಗೂ ಮತ್ತು ಆತ್ಮನಿಗೂ ಇರುವ ವ್ಯತ್ಯಾಸವನ್ನು ಗಮನಿಸು. ಬುದ್ಧಿಯು ಅಹಂಕಾರಾದಿಗುಣಗಳನ್ನು ಹುಟ್ಟಿಸುತ್ತದೆ. ಆತ್ಮನು ಸಾಕ್ಷಿಭೂತನಾಗಿದ್ದು ಯಾವ ಗುಣಗಳನ್ನೂ ಹುಟ್ಟಿಸುವುದಿಲ್ಲ.

ಮಶಕೋದುಮ್ಬರೌ ವಾಪಿ ಸಮ್ಪ್ರಯುಕ್ತೌ ಯಥಾ ಸದಾ ।
ಅನ್ಯೋನ್ಯಮೇತೌ ಸ್ಯಾತಾಂ ಚ ಸಮ್ಪ್ರಯೋಗಸ್ತಥಾ ತಯೋಃ ॥೩೯॥

ಅತ್ತಿಯ ಹಣ್ಣಿನಲ್ಲಿ ತಿರುಳೂ ಮತ್ತು ಹುಳುಗಳೂ ಏಕತ್ರ ಇರುವುದು ಸ್ವಾಭಾವಿಕವೇ ಆದರೂ ತಿರುಳಿಗೂ ಮತ್ತು ಹುಳುಗಳಿಗೂ ಹೇಗೆ ಪ್ರತ್ಯೇಕವಾದ ಅಸ್ತಿತ್ವವಿರುವುದೋ– ಹಾಗೆಯೇ ಬುದ್ಧಿಯೂ ಮತ್ತು ಆತ್ಮನೂ ಒಟ್ಟಾಗಿಯೇ ಇದ್ದರೂ ಅವುಗಳು ಪ್ರತ್ಯೇಕವಾಗಿವೆ.

ಪೃಥಗ್ಭೂತೌ ಪ್ರಕೃತ್ಯಾ ತೌ ಸಮ್ಪ್ರಯುಕ್ತೌ ಚ ಸರ್ವದಾ ।
ಯಥಾ ಮತ್ಸ್ಯೋ ಜಲಂ ಚೈವ ಸಮ್ಪ್ರಯುಕ್ತೌ ತಥೈವ ತೌ ॥೪೦॥

ನೀರು ಮತ್ತು ಮೀನು ಪ್ರತ್ಯೇಕವಾದರೂ (ಪ್ರತ್ಯೇಕವಾದ ಸ್ವಭಾವವುಳ್ಳವುಗಳಾದರೂ) ಒಂದಕ್ಕೊಂದು ಯಾವ ರೀತಿಯಲ್ಲಿ ಸೇರಿಕೊಂಡಿರುವುವೋ–ಅದೇ ರೀತಿಯಲ್ಲಿ ಬುದ್ಧಿ ಮತ್ತು ಆತ್ಮಗಳು ಸ್ವಭಾವತಃ ಪ್ರತ್ಯೇಕವಾಗಿದ್ದರೂ ಸದಾಕಾಲದಲ್ಲಿಯೂ ಒಂದಕ್ಕೊಂದು ಸೇರಿಕೊಂಡಿರುತ್ತವೆ. ಮೀನಿಗೆ ಆಧಾರಭೂತವಾದ ನೀರಿಲ್ಲದಿದ್ದರೆ ಮೀನು ಉಳಿಯದಂತೆ– ಬುದ್ಧಿಗೆ ಆಧಾರಭೂತವಾದ ಆತ್ಮನಿಲ್ಲದಿದ್ದರೆ ಬುದ್ಧಿಯು ಉಳಿಯುವುದಿಲ್ಲ.

ನ ಗುಣಾ ವಿದುರಾತ್ಮಾನಂ ಸ ಗುಣಾನ್ವೇತ್ತಿ ಸರ್ವಶಃ ।
ಪರಿದ್ರಷ್ಟಾ ಗುಣಾನಾಂ ತು ಸಂಸೃಷ್ಟಾನ್ಮನ್ಯತೇ ತಥಾ ॥೪೧॥

ಸತ್ತ್ವಾದಿಗುಣಗಳು ಜಡವಾದುದರಿಂದ ಆತ್ಮನನ್ನು ತಿಳಿಯಲಾರವು. ಆದರೆ ಆತ್ಮನು ಚೇತನನಾಗಿರುವುದರಿಂದ ಸತ್ತ್ವಾದಿಗುಣಗಳನ್ನು ಸರ್ವಪ್ರಕಾರದಿಂದಲೂ ತಿಳಿದುಕೊಂಡಿರುತ್ತಾನೆ. ಆತ್ಮನು ಗುಣಗಳಿಗೆ ಸಾಕ್ಷಿಭೂತನಾಗಿ ಗುಣಗಳಿಂದ ಭಿನ್ನನಾಗಿದ್ದರೂ ಸತ್ತ್ವಾದಿಗುಣಗಳು ತನ್ನೊಡನೆ ಸೇರಿವೆಯೆಂದು ಭಾವಿಸುತ್ತಾನೆ.

ಇನ್ದ್ರಿಯೈಸ್ತು ಪ್ರದೀಪಾರ್ಥಂ ಕುರುತೇ ಬುದ್ಧಿಸಪ್ತಮೈಃ ।
ನಿರ್ವಿಚೇಷ್ಟೈರಜಾನದ್ಭಿಃ ಪರಮಾತ್ಮಾ ಪ್ರದೀಪವತ್ ॥೪೨॥

ಯಾವ ರೀತಿಯಲ್ಲಿ ಗಡಿಗೆಯೊಳಗಿರುವ ದೀಪವು ಗಡಿಗೆಯಲ್ಲಿರುವ ಹಲವಾರು ರಂಧ್ರಗಳ ಮೂಲಕವಾಗಿ ಹೊರಗಿನ ಪದಾರ್ಥಗಳನ್ನು ಪ್ರಕಾಶಗೊಳಿಸುತ್ತದೆಯೋ–ಅದೇ ರೀತಿಯಲ್ಲಿ ಆತ್ಮನು ಚೈತನ್ಯರೂಪದಲ್ಲಿ ಮನುಷ್ಯನ ಶರೀರದಲ್ಲಿದ್ದು ಚೇಷ್ಟಾರಹಿತವಾದ ಮತ್ತು ಜ್ಞಾನಶೂನ್ಯವಾದ ಪಂಚೇಂದ್ರಿಯಗಳು, ಬುದ್ಧಿ ಮತ್ತು ಮನಸ್ಸು–ಈ ಏಳು ಶರೀರದ ರಂಧ್ರಗಳ ಮೂಲಕವಾಗಿ ವಿಶ್ವದಲ್ಲಿರುವ ಎಲ್ಲ ಪದಾರ್ಥಗಳ ಅನುಭವವನ್ನೂ ಮಾಡಿಕೊಂಡಿರುತ್ತಾನೆ.

ಸೃಜತೇ ಹಿ ಗುಣಾನ್ಸತ್ತ್ವಂ ಕ್ಷೇತ್ರಜ್ಞಃ ಪರಿಪಶ್ಯತಿ ।
ಸಮ್ಪ್ರಯೋಗಸ್ತಯೋರೇಷ ಸತ್ತ್ವಕ್ಷೇತ್ರಜ್ಞಯೋರ್ಧ್ರುವಃ ॥೪೩॥

ಬುದ್ಧಿಯು ಗುಣಗಳನ್ನು ಸೃಷ್ಟಿಸುತ್ತಿರುತ್ತದೆ. ಆತ್ಮನು ಸಾಕ್ಷಿಭೂತನಾಗಿದ್ದುಕೊಂಡು ನೋಡುತ್ತಿರುತ್ತಾನೆ. ಬುದ್ಧಿ ಮತ್ತು ಆತ್ಮರ ಈ ಸಹಯೋಗವು ಅನಾದಿಕಾಲದಿಂದಲೂ ನಡೆದುಕೊಂಡೇ ಬರುತ್ತಿದೆ.

ಆಶ್ರಯೋ ನಾಸ್ತಿ ಸತ್ತ್ವಸ್ಯ ಕ್ಷೇತ್ರಜ್ಞಸ್ಯ ಚ ಕಶ್ಚನ ।
ಸತ್ತ್ವಂ ಮನಃ ಸಂಸೃಜತೇ ನ ಗುಣಾನ್ವೈ ಕದಾಚನ ॥೪೪॥

ಬುದ್ಧಿಗೆ ಆತ್ಮನನ್ನು ಬಿಟ್ಟು ಬೇರೆ ಆಶ್ರಯವೇ ಇಲ್ಲ. ಕ್ಷೇತ್ರಜ್ಞನಿಗೂ (ಆತ್ಮನಿಗೂ) ಬುದ್ಧಿಯನ್ನು ಬಿಟ್ಟು ಬೇರೆಯ ಆಶ್ರಯವಿಲ್ಲ. ಬುದ್ಧಿಯು ಮನಸ್ಸಿನೊಡನೆ ನಿಕಟವಾದ ಸಂಬಂಧವನ್ನು ಹೊಂದಿದೆ. ಆದರೆ ಗುಣಗಳೊಡನೆ ಬುದ್ಧಿಯ ನೇರವಾದ ಸಂಬಂಧವು ಎಂದಿಗೂ ಇರುವುದಿಲ್ಲ.

ರಶ್ಮೀಂಸ್ತೇಷಾಂ ಸ ಮನಸಾ ಯದಾ ಸಮ್ಯಙ್ನಿಯಚ್ಛತಿ ।
ತದಾ ಪ್ರಕಾಶತೇಽಸ್ಯಾತ್ಮಾ ಘಟೇ ದೀಪೋ ಜ್ವಲನ್ನಿವ ॥೪೫॥

ಯಾವಾಗ ಜೀವಾತ್ಮನು ಬುದ್ಧಿಯ ರಶ್ಮಿಗಳಂತಿರುವ ಇಂದ್ರಿಯಗಳನ್ನು ಮನಸ್ಸಿನಿಂದ ನಿಯಂತ್ರಿಸುತ್ತಾನೆಯೋ ಆಗ ಘಟಸ್ಥವಾಗಿರುವ ದೀಪವು ಘಟದಲ್ಲಿ ಪ್ರಕಾಶಿಸುವಂತೆ–ಹೃದಯಗಹ್ವರದಲ್ಲಿ ಆತ್ಮನು ಪ್ರಕಾಶಿಸುತ್ತಾನೆ.

ತ್ಯಕ್ತ್ವಾ ಯಃ ಪ್ರಾಕೃತಂ ಕರ್ಮ ನಿತ್ಯಮಾತ್ಮರತಿರ್ಮುನಿಃ ।
ಸರ್ವಭೂತಾತ್ಮಭೂತಸ್ತಸ್ಮಾತ್ಸ ಗಚ್ಛೇದುತ್ತಮಾಂ ಗತಿಮ್ ॥೪೬॥

ಯಾವ ಮುನಿಯು ಪ್ರಕೃತಿಸಂಬಂಧವಾದ (ಸಂಸಾರಸಂಬಂಧವಾದ) ಕರ್ಮಗಳೆಲ್ಲವನ್ನೂ ಪರಿತ್ಯಜಿಸಿ ನಿತ್ಯವೂ ಆತ್ಮನನ್ನು ಕಾಣುವುದರಲ್ಲಿಯೇ ನಿರತನಾಗಿರುವನೋ–ಅಂತಹ ಮುನಿಯು ಸರ್ವಭೂತಗಳಿಗೂ ಆತ್ಮಭೂತನಾಗಿ ಶ್ರೇಷ್ಠವಾದ ಗತಿಯನ್ನು ಹೊಂದುತ್ತಾನೆ. (ತನಗೆ ಆತ್ಮಾನುಭವವಾದನಂತರ ಅಂತಹ ಜ್ಞಾನಿಯು ಎಲ್ಲರಲ್ಲೂ ಒಬ್ಬನೇ ಚಿದಾತ್ಮನನ್ನೇ ಕಾಣುತ್ತಾನೆ. ತಾನೇ ಅವರಲ್ಲಿರುವಂತೆಯೂ ಅವರೇ ತನ್ನಲ್ಲಿರುವಂತೆಯೂ ಆತ್ಮಜ್ಞಾನಿಗೆ ಭಾಸವಾಗುತ್ತದೆ. 'ಸರ್ವಂ ಖಲ್ವಿದಂ ಬ್ರಹ್ಮ'– ಎಂಬ

ಉಪನಿಷದ್ವಾಕ್ಯದ ಅನುಭವವು ಅವನಿಗಾಗುತ್ತದೆ. (ಶ್ರೀಗೀತೆ-ಅ. ೬.ಶ್ಲೋ. ೩೦ ಅನುಸಂಧೇಯ.)

ಯಥಾ ವಾರಿಚರಃ ಪಕ್ಷೀ ಸಲಿಲೇನ ನ ಲಿಪ್ಯತೇ ।
ಏವಮೇವ ಕೃತಪ್ರಜ್ಞೋ ಭೂತೇಷು ಪರಿವರ್ತತೇ ॥೪೭॥

ಯಾವ ರೀತಿಯಲ್ಲಿ ನೀರಿನಲ್ಲಿ ಓಡಾಡುವ ಪಕ್ಷಿಯು ನೀರಿನಿಂದ ನೆನೆದಿರುವುದಿಲ್ಲವೋ–ಅದೇ ರೀತಿಯಲ್ಲಿ ವಿಶುದ್ಧಬುದ್ಧಿಯವನಾದ ಆತ್ಮ ಜ್ಞಾನಿಯು ಪ್ರಾಣಿಗಳ ಮಧ್ಯದಲ್ಲಿಯೇ ಇದ್ದರೂ ನಿರ್ಲಿಪ್ತನಾಗಿ ಅವುಗಳ ವಿಷಯದಲ್ಲಿ ಪ್ರೀತಿ-ದ್ವೇಷಗಳೆರಡನ್ನೂ ತೊರೆದು ಜೀವಿಸುತ್ತಿರುತ್ತಾನೆ.

ಏವಂ ಸ್ವಭಾವಮೇವೈತತ್ಸ್ವಬುದ್ಧ್ಯಾ ವಿಹರೇನ್ನರಃ ।
ಅಶೋಚನ್ನಪ್ರಹೃಷ್ಯಂಶ್ಚ ಸಮೋ ವಿಗತಮತ್ಸರಃ ॥೪೮॥

ಜ್ಞಾನಿಯಾದ ಪುರುಷನು, ಆತ್ಮತತ್ತ್ವವು ನಿರ್ಲಿಪ್ತವಾದ ವಿಶುದ್ಧ ಸ್ವರೂಪವೆಂಬುದನ್ನು ತನ್ನ ಬುದ್ಧಿಯ ಮೂಲಕವಾಗಿ ನಿಶ್ಚಯಿಸಿ–ಹರ್ಷ, ಶೋಕ, ಮಾತ್ಸರ್ಯ–ಇವೇ ಮುಂತಾದ ದೋಷಗಳಿಂದ ರಹಿತನಾಗಿ ಸರ್ವತ್ರ ಸಮಭಾವದಿಂದಿರಬೇಕು.

ಸ್ವಭಾವಯುಕ್ತ್ಯಾ ಯುಕ್ತಸ್ತು ಸ ನಿತ್ಯಂ ಸೃಜತೇ ಗುಣಾನ್ ।
ಊರ್ಣನಾಭಿರ್ಯಥಾ ಸೂತ್ರಂ ವಿಜ್ಞೇಯಾಸ್ತನ್ತುವದ್ಗುಣಾಃ ॥೪೯॥

ಜೇಡರಹುಳುವು ಯಾವ ರೀತಿಯಲ್ಲಿ ತನ್ನ ಸುತ್ತಲೂ ಬಲೆಯನ್ನು ಹೆಣೆದುಕೊಂಡು ಅದರ ಮಧ್ಯದಲ್ಲಿ ಕುಳಿತುಕೊಳ್ಳುವುದೋ–ಹಾಗೆಯೇ ಆತ್ಮನು ತನ್ನ ಸ್ವಸ್ವರೂಪದಲ್ಲಿಯೇ ಇರುತ್ತಾ ಬಲೆಯಂತಿರುವ ಸತ್ತ್ವಾದಿ ಗುಣಗಳನ್ನು ಸೃಷ್ಟಿಸುತ್ತಾನೆ. ಸತ್ತ್ವಾದಿಗುಣಗಳು ಜೇಡರಹುಳುವಿನ ಬಲೆಯಂತೆ–ಎಂಬುದನ್ನು ತಿಳಿದುಕೊಳ್ಳಬೇಕು.

ಪ್ರಧ್ವಸ್ತಾ ನ ನಿವರ್ತನ್ತೇ ನಿವೃತ್ತಿರ್ನೋಪಲಭ್ಯತೇ ।
ಪ್ರತ್ಯಕ್ಷೇಣ ಪರೋಕ್ಷಂ ತದನುಮಾನೇನ ಸಿಧ್ಯತಿ ॥೫೦॥

ಏವಮೇಕೇಽಧ್ಯವಸ್ಯನ್ತಿ ನಿವೃತ್ತಿರಿತಿ ಚಾಪರೇ ।
ಉಭಯಂ ಸಮ್ಪ್ರಧಾರ್ಯೈತದ್ವ್ಯವಸ್ಯೇತ ಯಥಾಮತಿ ॥೫೧॥

(ಆತ್ಮಸಾಕ್ಷಾತ್ಕಾರವಾದನಂತರ) ಸತ್ತ್ವಾದಿ ಗುಣಗಳು ನಾಶಹೊಂದು ತ್ತವೆ. ಅವು ಪುನಃ ಹಿಂದಿರುಗುವುದಿಲ್ಲ–ಎಂಬುದು ಕೆಲವರ ಅಭಿಮತ ವಾಗಿದೆ. ಆದರೆ ಅವು ಸರ್ವಥಾ ನಿವೃತ್ತಿಹೊಂದುವುದಿಲ್ಲ. ಏಕೆಂದರೆ ಆ ಗುಣಗಳು ಹೋಗುವುದು ನಮ್ಮ ಕಣ್ಣಿಗೆ ಕಾಣುವುದಿಲ್ಲ– ಎಂಬುದು ಕೆಲವರ ಅಭಿಮತವಾಗಿದೆ. ಯಾವುದು ಪರೋಕ್ಷದಲ್ಲಾಗುವುದೋ ಅದರ ವಿಷಯವನ್ನು ಅನುಮಾನದಿಂದ ಸಿದ್ಧಪಡಿಸಿಕೊಳ್ಳಬೇಕಾಗಿದೆ. ಹೀಗೆ ಕೆಲವು ವಿದ್ವಾಂಸರು ಆತ್ಮಸಾಕ್ಷಾತ್ಕಾರವಾದೊಡನೆಯೇ ತ್ರಿಗುಣಗಳು ನಿವೃತ್ತಿ ಹೊಂದುವುವೆಂದೂ–ಕೆಲವು ವಿದ್ವಾಂಸರು ನಿವೃತ್ತಿಹೊಂದುವುದಿಲ್ಲವೆಂದೂ ಹೇಳುತ್ತಾರೆ. ಈ ಎರಡು ಅಭಿಪ್ರಾಯಗಳನ್ನೂ ಚೆನ್ನಾಗಿ ವಿಚಾರಮಾಡಿ ತನ್ನ ಬುದ್ಧಿಗೆ ಅನುಸಾರವಾಗಿ ಯಥಾರ್ಥವನ್ನು ನಿಶ್ಚಯಿಸಬೇಕಾಗಿದೆ. (ಆತ್ಮಸಾಕ್ಷಾತ್ಕಾರದ ಸಮಯದಲ್ಲಿ (ಸಮಾಧಿಸ್ಥಿತಿಯಲ್ಲಿ) ಯಾವ ಗುಣಗಳೂ ಇರುವುದಿಲ್ಲ. ಏಕೆಂದರೆ; ಗುಣಗಳನ್ನು ಪ್ರತಿಫಲಿಸುವ ಬುದ್ಧಿಯೇ ಆತ್ಮನಲ್ಲಿ ಲೀನವಾಗಿ ಹೋಗುವಾಗ ತ್ರಿಗುಣಗಳು ಇರುವ ಸಾಧ್ಯತೆಯೇ ಇಲ್ಲ. ಆ ಸಮಯದಲ್ಲಿ ಜ್ಞಾನಿಗಳು ತ್ರಿಗುಣಾತೀತರು. ಅಂತರ್ಮುಖರಾಗಿರುವವರು ಬಹಿರ್ಮುಖರಾದಾಗ ಬುದ್ಧಿ-ಮನಸ್ಸು-ಇಂದ್ರಿಯಗಳು ಪೂರ್ವರೂಪಕ್ಕೆ ಬರುತ್ತವೆ. ಗುಣಗಳೂ ತಮ್ಮ ಕಾರ್ಯವನ್ನು ಪ್ರಾರಂಭಿಸುತ್ತವೆ. ಆದರೆ ಆತ್ಮಜ್ಞಾನಿಯಾದವನಿಗೆ ಗುಣಗಳು ಅತಿವೇಗದಿಂದ ವರ್ತಿಸದೇ ಇರ ಬಹುದು. ಪ್ರೀತಿ-ಆನಂದ ಇತ್ಯಾದಿ ಸಾತ್ತ್ವಿಕಗುಣಗಳು ಇದ್ದೇ ಇರುತ್ತವೆ. ಮನಸ್ಸು ನಿರ್ವಿಷಯವಾಗಿದ್ದರೂ ನಿಃಸಂಕಲ್ಪವಾಗಿದ್ದರೂ ಪ್ರೀತಿ-ದಯೆ- ಇತ್ಯಾದಿ ಸಾತ್ತ್ವಿಕಗುಣಗಳನ್ನು ಜ್ಞಾನಿಯೂ ಹೊಂದಿರಬೇಕಾಗುತ್ತದೆ. ಆದುದರಿಂದ ಜ್ಞಾನಿಯಾದವನಲ್ಲಿಯೂ ತ್ರಿಗುಣಗಳು ಸಮಾಧಿಸಮಯದ ಹೊರತಾಗಿ ಬೇರೆ ಸಮಯಗಳಲ್ಲಿ ಇರುತ್ತವೆ.)

ಇತೀಮಂ ಹೃದಯಗ್ರನ್ಥಿಂ ಬುದ್ಧಿಭೇದಮಯಂ ದೃಢಮ್ ।
ವಿಮುಚ್ಯ ಸುಖಮಾಸೀತ ನ ಶೋಚೇಚ್ಛಿನ್ನಸಂಶಯಃ ॥೫೨॥

ಹೀಗೆ ಬುದ್ಧಿಭೇದವನ್ನುಂಟುಮಾಡುವ ಈ ದೃಢವಾದ ಹೃದಯ

ಗ್ರಂಥಿಯನ್ನು ತೊರೆದು ಸುಖವಾಗಿರಬೇಕು. ಸಂಶಯಗಳನ್ನು ಕಳೆದು ಕೊಂಡವನು ಶೋಕಿಸುವುದಿಲ್ಲ. (ಹೋಲಿಕೆ : **ಭಿದ್ಯತೇ ಹೃದಯ ಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ । ತರತಿ ಶೋಕಮಾತ್ಮವಿತ್ ।**)

ಮಲಿನಾಃ ಪ್ರಾಪ್ನುಯುಃ ಶುದ್ಧಿಂ ಯಥಾ ಪೂರ್ಣಾಂ ನದೀಂ ನರಾಃ ।
ಅವಗಾಹ್ಯ ಸುವಿದ್ವಾಂಸೋ ವಿದ್ಧಿ ಜ್ಞಾನವಿದಂ ತಥಾ ॥೫೩॥

ಯುಧಿಷ್ಠಿರ! ಮಲಿನವಾದ ಶರೀರದಿಂದ ಕೂಡಿರುವವರು ಯಾವ ರೀತಿಯಲ್ಲಿ ಜಲಪೂರ್ಣವಾದ ನದಿಯಲ್ಲಿ ಮಿಂದು ಪರಿಶುದ್ಧರಾಗುವರೋ ಅದೇ ರೀತಿಯಲ್ಲಿ ಅಜ್ಞಾನಿಗಳಾದವರು (ಮಲಿನಚಿತ್ತರು) ಜ್ಞಾನಮಯ ವಾದ ಈ ನದಿಯಲ್ಲಿ ಅವಗಾಹನಮಾಡಿದರೆ ಶುದ್ಧರೂ-ಜ್ಞಾನಸಂಪನ್ನರೂ ಆಗುವರೆಂಬುದನ್ನು ತಿಳಿದುಕೊ.

ಮಹಾನದ್ಯಾ ಹಿ ಪಾರಜ್ಞಸ್ತಪ್ಯತೇ ನ ತದನ್ಯಥಾ ।
ನ ತು ತಪ್ಯತಿ ತತ್ತ್ವಜ್ಞಃ ಫಲೇ ಜ್ಞಾತೇ ತರತ್ಯುತ ॥೫೪॥

ಮಹಾನದಿಯ ಎದುರು ದಡಕ್ಕೆ ಹೇಗೆ ಹೋಗಬೇಕೆಂಬ ವಿಜ್ಞಾನವು ಒಬ್ಬನಿಗೆ ತಿಳಿದಿದ್ದರೂ ಅದನ್ನು ದಾಟಲು ನೌಕೆ-ನಾವಿಕ ಮುಂತಾದ ಸಾಧನಗಳು ಬೇಕೇ ಬೇಕಾಗುತ್ತವೆ. ಆದುದರಿಂದ ನೌಕೆ-ನಾವಿಕರು ಸಿದ್ಧ ವಾಗುವವರೆಗೂ ಅವನು ಪರಿತಪಿಸುತ್ತಲೇ ಇರುತ್ತಾನೆ. ಆದರೆ ತತ್ತ್ವಜ್ಞನು ಸಂಸಾರಸಾಗರವನ್ನು ದಾಟಲು ಯಾವ ಸಾಧನಕ್ಕಾಗಲೀ ಕಾಯಬೇಕಾಗಿಲ್ಲ. ತತ್ತ್ವವನ್ನು (ಬ್ರಹ್ಮತತ್ತ್ವವನ್ನು) ತಿಳಿದಮಾತ್ರದಿಂದಲೇ ಸಂಸಾರಸಾಗರ ವನ್ನು ದಾಟಿದಂತೆಯೇ ಆಗುತ್ತದೆ. ಸಂಸಾರಶೃಂಖಲೆಗಳು ತಾವಾಗಿಯೇ ಕಳಚಿಬೀಳುತ್ತವೆ. ತತ್ತ್ವಜ್ಞಾನವೆಂಬುದು ಸ್ವಯಂ ಫಲಸ್ವರೂಪವೇ ಆಗಿದೆ.

ಏವಂ ಯೇ ವಿದುರಾಧ್ಯಾತ್ಮಂ ಕೇವಲಂ ಜ್ಞಾನಮುತ್ತಮಮ್ ।
ಏತಾಂ ಬುದ್ಧ್ವಾ ನರಃ ಸರ್ವಾಂ ಭೂತಾನಾಮಾಗತಿಂ ಗತಿಮ್ ।
ಅವೇಕ್ಷ್ಯ ಚ ಶನೈರ್ಬುದ್ಧ್ಯಾ ಲಭತೇ ಶಮನಂ ತತಃ ॥೫೫॥

ಕೇವಲವೂ ಉತ್ತಮವೂ ಆದ ಆಧ್ಯಾತ್ಮಜ್ಞಾನವನ್ನು ಪಡೆದವರು ಹೀಗಿರುತ್ತಾರೆ. ಇದನ್ನರಿತು ಮನುಷ್ಯನು ಪ್ರಾಣಿಗಳ ಹುಟ್ಟು-ಸಾವುಗಳನ್ನು ವಿಚಾರಮಾಡುತ್ತಿದ್ದರೆ ನಿಧಾನವಾಗಿ ಅವನಿಗೆ ಶಾಂತಿಯುಂಟಾಗುತ್ತದೆ. (ಹೋಲಿಕೆ : ಶನೈಃ ಶನೈಃ ಶಾನ್ತಿಮುಪೈತಿ ಚೇತಃ – ಯೋಗ ತಾರಾವಳಿ)

ತ್ರಿವರ್ಗೋ ಯಸ್ಯ ವಿದಿತಃ ಪ್ರೇಕ್ಷ್ಯ ಯಶ್ಚ ವಿಮುಞ್ಚತಿ ।
ಅನ್ವಿಷ್ಯ ಮನಸಾ ಯುಕ್ತಸ್ತತ್ತ್ವದರ್ಶೀ ನಿರುತ್ಸುಕಃ ॥೫೭॥

ಧರ್ಮಾರ್ಥ-ಕಾಮಗಳನ್ನು ಯಾವನು ಚೆನ್ನಾಗಿ ತಿಳಿದಿರುವನೋ ಮತ್ತು ತ್ರಿವರ್ಗಗಳು ಪ್ರಾಣಿಗಳ ಹುಟ್ಟು-ಸಾವುಗಳಿಗೆ ಕಾರಣವಾಗುವುವೇ ಹೊರತು ಪರಾಶಾಂತಿಯನ್ನು ಕೊಡತಕ್ಕುವುಗಳಲ್ಲವೆಂಬುದನ್ನು ವಿವೇಕದಿಂದ ನಿರ್ಧರಿಸಿ ಯಾವನು ಆ ತ್ರಿವರ್ಗಗಳನ್ನೂ ಪರಿತ್ಯಜಿಸುವನೋ–ಯಾವಾಗಲೂ ಆತ್ಮತತ್ತ್ವವನ್ನೇ ಅನುಸಂಧಾನಮಾಡುತ್ತಾ ಯೋಗಯುಕ್ತನಾಗಿರುವನೋ–ಆತ್ಮನಿಂದ ಭಿನ್ನವಾದ ಎಲ್ಲ ವಸ್ತುಗಳಲ್ಲಿಯೂ ನಿರುತ್ಸುಕನಾಗಿರುವನೋ–ಅವನೇ ತತ್ತ್ವದರ್ಶಿಯು.

ನ ಚಾತ್ಮಾ ಶಕ್ಯತೇ ದ್ರಷ್ಟುಮಿನ್ದ್ರಿಯೈಶ್ಚ ವಿಭಾಗಶಃ ।
ತತ್ರ ತತ್ರ ವಿಸೃಷ್ಟೈಶ್ಚ ದುರ್ವಾರ್ಯೈಶ್ಚಾಕೃತಾತ್ಮಭಿಃ ॥೫೮॥

ಮನಸ್ಸನ್ನು ವಶಪಡಿಸಿಕೊಳ್ಳದಿರುವ ವಿಷಯಲಂಪಟರು, ಭಿನ್ನ-ಭಿನ್ನ ವಿಷಯಗಳಲ್ಲಿ ಪ್ರೇರಿತವಾಗಿ ಹಂಚಿಹೋದ, ತಡೆಯಲು ಅಸಾಧ್ಯವಾದ ಇಂದ್ರಿಯಗಳ ಮೂಲಕ ಆತ್ಮಸಾಕ್ಷಾತ್ಕಾರಮಾಡಿಕೊಳ್ಳಲು ಸಮರ್ಥರಾಗುವುದಿಲ್ಲ.

ಏತದ್ಬುದ್ಧ್ವಾ ಭವೇದ್ಬುದ್ಧಃ ಕಿಮನ್ಯದ್ಬುದ್ಧಲಕ್ಷಣಮ್ ।
ವಿಜ್ಞಾಯ ತದ್ಧಿ ಮನ್ಯನ್ತೇ ಕೃತಕೃತ್ಯಾ ಮನೀಷಿಣಃ ॥೫೯॥

ಮನಸ್ಸನ್ನು ವಶಪಡಿಸಿಕೊಳ್ಳದೇ ಆತ್ಮಸಾಕ್ಷಾತ್ಕಾರವು ಸಾಧ್ಯವಿಲ್ಲವೆಂಬುದನ್ನು ಅರಿತು ಮನಸ್ಸನ್ನು ಸಂಯಮಗೊಳಿಸಿದವನು ಬುದ್ಧನಾಗುತ್ತಾನೆ. (ಜ್ಞಾನಿಯಾಗುತ್ತಾನೆ.) ಇದಕ್ಕಿಂತಲೂ ಜ್ಞಾನಿಯ ಲಕ್ಷಣವು

ಬೇರೆ ಯಾವುದಿದೆ? ವಿದ್ವಾಂಸರಾದವರು ಪರಮಾತ್ಮತತ್ತ್ವವನ್ನು ತಿಳಿದು ಕೊಂಡನಂತರವೇ ಕೃತಕೃತ್ಯರಾದೆವೆಂದು ಭಾವಿಸುತ್ತಾರೆ.

ನ ಭವತಿ ವಿದುಷಾಂ ತತೋ ಭಯಂ
ಯದವಿದುಷಾಂ ಸುಮಹದ್ಭಯಂ ಭವೇತ್ ।
ನ ಹಿ ಗತಿರಧಿಕಾಸ್ತಿ ಕಸ್ಯಚಿ-
ತ್ಸತಿ ಗುಣೇ ಪ್ರವದನ್ತ್ಯತುಲ್ಯತಾಮ್ ॥೬೦॥

ಅಜ್ಞಾನಿಗಳಾಗಿರುವವರಿಗೆ ಯಾವುದರಿಂದ ಮಹಾಭಯವಿರು ವುದೋ– ಆ ಸಂಸಾರಭಯವು ಜ್ಞಾನಿಗಳಿಗಿರುವುದಿಲ್ಲ. ಆತ್ಮಜ್ಞಾನವಾದ ನಂತರ ಎಲ್ಲರಿಗೂ ಒಂದೇ ವಿಧವಾದ ಗತಿ (ಮುಕ್ತಿ)ಯುಂಟಾಗುತ್ತದೆ. ಒಬ್ಬರಿಗೆ ಉತ್ಕೃಷ್ಟವಾದ ಮತ್ತೊಬ್ಬರಿಗೆ ನಿಕೃಷ್ಟವಾದ ಗತಿಯು ಸಿಕ್ಕುವುದಿಲ್ಲ. ಇದಕ್ಕೆ ಕಾರಣವೇನೆಂದರೆ : ಆತ್ಮಜ್ಞಾನಿಗಳೆಲ್ಲರೂ ತ್ರಿಗುಣಾತೀತರಾಗಿರು ತ್ತಾರೆ. ಗುಣಗಳ ಸಂಬಂಧವಿರುವವರೆಗೆ ಸತ್ತ್ವಾದಿಗುಣಗಳ ಪರಿಮಾಣವನ್ನು ಅನುಸರಿಸಿ ತಾರತಮ್ಯವಿರುವುದು ಸಹಜವಾಗಿಯೇ ಇದೆ. ತ್ರಿಗುಣಗಳನ್ನು ಮೀರಿದರೆ ಸಾಮ್ಯ.

ಯಃ ಕರೋತ್ಯನಭಿಸಂಧಿಪೂರ್ವಕಂ
ತಚ್ಚ ನಿರ್ಣುದತಿ ಯತ್ಪುರಾಕೃತಮ್ ।
ನಾಪ್ರಿಯಂ ತದುಭಯಂ ಕುತಃ ಪ್ರಿಯಂ
ತಸ್ಯ ತಜ್ಜನಯತೀಹ ಸರ್ವತಃ ॥೬೧॥

ಯಾವನು ಕರ್ಮಗಳನ್ನು ನಿಷ್ಕಾಮಭಾವದಿಂದ ಮಾಡುವನೋ ಅವನ ಆ ನಿಷ್ಕಾಮಕರ್ಮಗಳ ಫಲವು ಹಿಂದೆ ಅವನು ಮಾಡಿದ ಪಾಪ ಕರ್ಮಗಳ ಫಲಗಳೆಲ್ಲವನ್ನೂ ತೊಡೆದುಹಾಕುತ್ತದೆ. ಹಿಂದಿನ ಜನ್ಮದಲ್ಲಿ ಮತ್ತು ಈ ಜನ್ಮದಲ್ಲಿ ಮಾಡಿರುವ ಕರ್ಮಗಳು ಅವನಿಗೆ ಅಪ್ರಿಯವಾದ ಫಲವನ್ನಾಗಲೀ- ಪ್ರಿಯವಾದ ಫಲವನ್ನಾಗಲೀ ಕೊಡುವುದಿಲ್ಲ. (ಫಲಾಭಿ ಸಂಧಿಯಿಲ್ಲದೇ ಈ ಜನ್ಮದಲ್ಲಿ ಮಾಡಿರುವ ಕರ್ಮಗಳಿಂದ ಹಿಂದಿನ ಜನ್ಮದ ಅಪ್ರಿಯಫಲಗಳು ನಾಶವಾಗುತ್ತವೆ. ಅವನ ಇಂದ್ರಿಯಗಳಿಗೆ ಪ್ರಿಯವಾದ

ವಸ್ತುಗಳೂ ಲಭ್ಯವಾಗುವುದಿಲ್ಲ. ನಿಷ್ಕಾಮಕರ್ಮದಿಂದ ಅನುಕ್ರಮವಾಗಿ ಆತ್ಮಸಾಕ್ಷಾತ್ಕಾರವೇ ಆಗುತ್ತದೆ.)

ಲೋಕಮಾತುರಮಸೂಯತೇ ಜನ-
ಸ್ತಸ್ಯ ತಜ್ಜನಯತೀಹ ಸರ್ವತಃ ॥೬೨॥

ಯಾವನು ಕಾಮ-ಕ್ರೋಧಾದಿ ಭವರೋಗಗಳಿಂದ ಪೀಡಿತನಾಗಿರುವನೋ–ಅಂತಹವನನ್ನು ವಿಚಾರವಂತರಾದ ಮನುಷ್ಯರು ಧಿಕ್ಕರಿಸುತ್ತಾರೆ. ಹಾಗೆ ಕಾಮ-ಕ್ರೋಧಾದಿಗಳಿಂದ ಅಭಿಭೂತನಾಗಿ ನಿಂದ್ಯವಾದ ಕರ್ಮಗಳನ್ನು ಮಾಡುವ ಮನುಷ್ಯನು ಪಶು-ಪಕ್ಷಿಗಳೇ ಮೊದಲಾದ ಸಕಲವಿಧವಾದ ತಿರ್ಯಗ್ಯೋನಿಗಳಲ್ಲಿಯೂ ಜನ್ಮವನ್ನು ತಾಳುತ್ತಾನೆ.

ಲೋಕ ಆತುರಜನಾನ್ವಿರಾವಿಣ-
ಸ್ತತ್ತದೇವ ಬಹು ಪಶ್ಯ ಶೋಚತಃ ।
ತತ್ರ ಪಶ್ಯ ಕುಶಲಾನಶೋಚತೋ
ಯೇ ವಿದುಸ್ತದುಭಯಂ ಪದಂ ಸತಾಮ್ ॥೬೩॥

ಲೋಕದಲ್ಲಿ ಭೋಗಾಸಕ್ತರಾಗಿ ಭವರೋಗಪೀಡಿತರಾದವರು ಪ್ರಿಯ ವಸ್ತುಗಳನ್ನೂ, ಪ್ರಿಯಜನರನ್ನೂ ಕಳೆದುಕೊಂಡರೆ ದುಃಖಪಡುತ್ತಾರೆ ಮತ್ತು ಗಟ್ಟಿಯಾಗಿ ಅಳುತ್ತಾರೆ. ಇದನ್ನು ಗಮನಿಸು. ಸಾರಾಸಾರವಿವೇಕ ಕುಶಲಿಗಳೂ ಜೀವನದ ತತ್ತ್ವವನ್ನು ತಿಳಿದವರೂ ಶೋಕಪಡದೇ ಇರುವುದನ್ನೂ ನೋಡು. ಅಜ್ಞಾನಿಗಳು ಶೋಕಪಡುವುದಕ್ಕೆ ಕಾರಣ, ಸುಜ್ಞಾನಿಗಳು ಶೋಕಪಡದಿರುವುದಕ್ಕೆ ಕಾರಣ–ಇವೆರಡನ್ನೂ ಯಾರು ಸತತವಾದ ಚಿಂತನೆಯಿಂದ ತಿಳಿದುಕೊಳ್ಳುವರೋ–ಅವರು ಸತ್ಪುರುಷರ ಸ್ಥಾನವನ್ನು ಪಡೆಯುತ್ತಾರೆ."

೧೯೪ನೆಯ ಅಧ್ಯಾಯವು ಮುಗಿಯಿತು.

೨೩ನೆಯ ಸಂಪುಟವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಶ್ರೀಕೃಷ್ಣಾರ್ಪಣಮಸ್ತು
ಶ್ರೀ ಸದ್ಗುರುಚರಣಾರವಿನ್ದಾರ್ಪಣಮಸ್ತು
ಹರಿಃ ಓಂ ತತ್ಸತ್

ಪರಿಶಿಷ್ಟ

(೨೨ನೆಯ ಸಂಪುಟದಿಂದ ಮುಂದುವರಿದಿದೆ.)

ದುರ್ಯೋಧನನು ಓಡುತ್ತೋಡುತ್ತಾ ದ್ವೈಪಾಯನಸರೋವರದ ಬಳಿಗೆ ಹೋಗುತ್ತಾನೆ. ವ್ಯಾಸರ ಆದೇಶದಂತೆ ಸಂಜಯನಿಗೆ ಬಂಧವಿಮುಕ್ತಿ ಯಾಗುತ್ತದೆ. ನಗರಾಭಿಮುಖವಾಗಿ ಓಡುತ್ತಾ ಬಂದ ಸಂಜಯನು ಹಾದಿ ಯಲ್ಲಿ ದುರ್ಯೋಧನನನ್ನು ನೋಡುತ್ತಾನೆ. ಕೃಪಾಶ್ವತ್ಥಾಮ-ಕೃತವರ್ಮರು ಮಾತ್ರವೇ ಕೌರವರ ಕಡೆಯಲ್ಲಿ ಉಳಿದಿದ್ದಾರೆಂದು ವ್ಯಾಸರು ಹೇಳಿದ ವಾರ್ತೆ ಯನ್ನು ಸಂಜಯನು ದುರ್ಯೋಧನನಿಗೆ ತಿಳಿಸುತ್ತಾನೆ. ದುರ್ಯೋಧನನು ಅತ್ಯಂತಖೇದದಿಂದ ತಾನು ಜೀವಂತನಾಗಿ ಸರೋವರದಲ್ಲಿ ಬಚ್ಚಿಟ್ಟುಕೊಂಡಿ ರುವ ವಿಷಯವನ್ನು ಸಂಜಯನ ಮೂಲಕ ಧೃತರಾಷ್ಟ್ರನಿಗೆ ಹೇಳಿಕಳುಹಿಸು ತ್ತಾನೆ. ಆ ವೇಳೆಗೆ ಕೃಪಾದಿಗಳೂ ಅಲ್ಲಿಗೆ ಬರುತ್ತಾರೆ. ದುರ್ಯೋಧನನು ಎಲ್ಲಿರುವನೆಂಬ ವಿಷಯವನ್ನು ಸಂಜಯನು ಅವರಿಗೆ ಹೇಳುತ್ತಾನೆ. ಅವ ರೆಲ್ಲರೂ ಬಹಳವಾಗಿ ದುಃಖಿಸುತ್ತಾ ಸಂಜಯನೊಡನೆ ಶಿಬಿರಗಳಿಗೆ ಹೋಗು ತ್ತಾರೆ. ಶಿಬಿರಗಳಲ್ಲಿ ರಾಣಿವಾಸದವರಿಗೆ ದುರ್ಯೋಧನನೊಬ್ಬನ ಹೊರತಾಗಿ ಎಲ್ಲರೂ ಯುದ್ಧದಲ್ಲಿ ಅಸುನೀಗಿದ ವಿಷಯವು ತಿಳಿಯುತ್ತದೆ. ಎಲ್ಲರೂ ಬಹಳವಾಗಿ ವಿಲಪಿಸುತ್ತಾರೆ. ರಾಜಭಟರು ಅವರೆಲ್ಲರನ್ನೂ ಹಸ್ತಿನಾಪುರಕ್ಕೆ ಕರೆದೊಯ್ಯುತ್ತಾರೆ. ಆ ಸಮಯದಲ್ಲಿ ಯುಯುತ್ಸುವು ರಾಜಮಹಿಷಿಯರನ್ನು ರಕ್ಷಣೆಮಾಡುತ್ತಾ ಹಸ್ತಿನಾಪುರಕ್ಕೆ ಹೋಗಲು ನಿಶ್ಚಯಿಸುತ್ತಾನೆ. ಯುಧಿಷ್ಠಿರನ ಅನುಮತಿಯನ್ನು ಪಡೆದು ಅಂತಃಪುರದ ಸ್ತ್ರೀಯರನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹಸ್ತಿನಾಪಟ್ಟಣಕ್ಕೆ ಹೋಗುತ್ತಾನೆ. ಅಲ್ಲಿ ಅವನು ವಿದುರನಿಗೆ ನಮಸ್ಕರಿಸಿ ಎಲ್ಲ ವಿಷಯಗಳನ್ನೂ ಹೇಳುತ್ತಾನೆ. ವಿದುರನು ಯುಯುತ್ಸುವಿನೊಡನೆ ಸಮಯೋಚಿತವಾದ ಮಾತುಗಳನ್ನಾಡಿ ಅವನೊಡನೆ ರಾಜಗೃಹವನ್ನು ಪ್ರವೇಶಿಸುತ್ತಾನೆ. ರಾಜಗೃಹವು ಆನಂದಶೂನ್ಯವಾಗಿರುತ್ತದೆ. ರಾಜಗೃಹದ ಅಂತಹ ದುಃಸ್ಥಿತಿಯನ್ನು ಕಂಡು ವಿದುರನ ದುಃಖವು ಇಮ್ಮಡಿಯಾಗುತ್ತದೆ. ಯುಯುತ್ಸುವು ಆ ರಾತ್ರಿಯನ್ನು ಹಸ್ತಿನಾಪಟ್ಟಣ ದಲ್ಲಿಯೇ ಕಳೆಯುತ್ತಾನೆ. ಬದುಕಿಬಂದುದಕ್ಕಾಗಿ ಅವನ ಬಂಧು-ಮಿತ್ರರಿಗೆ ಆನಂದವಾಗಿದ್ದರೂ ಯುಯುತ್ಸುವಿಗೆ ಆನಂದವೆಂಬುದೇ ಇರಲಿಲ್ಲ. ಇಲ್ಲಿಗೆ

೨೯ನೆಯ ಅಧ್ಯಾಯವು ಮುಗಿಯುತ್ತದೆ. ಯುದ್ಧದ ಈ ವಿಶ್ಲೇಷಣೆಯು ೧೯ನೆಯ ಸಂಪುಟದ ಕಥಾಭಾಗಕ್ಕೆ ಸೇರಿದ್ದಾಗಿದೆ.

೩೦ನೆಯ ಅಧ್ಯಾಯ :- ಶಿಬಿರಗಳಿಗೆ ಹೋಗಿದ್ದ ಕೃಪಾಶ್ವತ್ಥಾಮ-ಕೃತವರ್ಮರು ಶೂನ್ಯವಾಗಿದ್ದ ಶಿಬಿರಗಳನ್ನು ನೋಡಿ ಅಲ್ಲಿರಲು ಇಚ್ಛಿಸದೇ ದುರ್ಯೋಧನನನ್ನೇ ನೋಡಲು ಹೋಗುತ್ತಾರೆ. ಪಾಂಡವರು ರಾಜನನ್ನು ಎಲ್ಲಿಯೂ ಕಾಣದೇ ತಮ್ಮ ಶಿಬಿರಗಳಿಗೆ ಹೊರಟುಹೋಗುತ್ತಾರೆ. ಆ ಸಮಯದಲ್ಲಿ ಕೃಪಾದಿ ಮೂವರೂ ದುರ್ಯೋಧನನಿದ್ದ ಸರೋವರವನ್ನು ಸಮೀಪಿಸಿ ಪಾಂಡವರೊಡನೆ ಯುದ್ಧಮಾಡಲು ಸರೋವರದಿಂದ ಹೊರಬರಲು ದುರ್ಯೋಧನನಿಗೆ ಹೇಳುತ್ತಾರೆ. ದುರ್ಯೋಧನನು ವಿಶ್ರಾಂತಿಪಡೆದನಂತರ ಮಾರನೆಯ ದಿವಸ (ಹತ್ತೊಂಬತ್ತನೆಯ ದಿವಸ) ನಾಲ್ವರೂ ಸೇರಿ ಪಾಂಡವರೊಡನೆ ಯುದ್ಧಮಾಡೋಣವೆಂದು ಹೇಳುತ್ತಾನೆ. ಅಶ್ವತ್ಥಾಮನು ಅನೇಕ ವಿಧವಾಗಿ ಪ್ರಮಾಣಗಳನ್ನು ಮಾಡಿ ತಾನು ಪಾಂಡವರನ್ನು ಜಯಿಸುವುದಾಗಿಯೂ ಕೂಡಲೇ ಪಾಂಡವರೊಡನೆ ಯುದ್ಧಮಾಡಲು ಬರಬೇಕೆಂದೂ ದುರ್ಯೋಧನನನ್ನು ಬಲಾತ್ಕರಿಸುತ್ತಾನೆ. ಹೀಗವರು ಪರಸ್ಪರವಾಗಿ ಮಾತನಾಡುತ್ತಿದ್ದಾಗ ಮಾಂಸವನ್ನು ಹೊತ್ತ ವ್ಯಾಧರು ಅಲ್ಲಿಗೆ ಬರುತ್ತಾರೆ. ದುರ್ಯೋಧನಾಶ್ವತ್ಥಾಮರ ಸಂಭಾಷಣೆಗಳನ್ನು ಕೇಳಿಸಿಕೊಳ್ಳುತ್ತಾರೆ. ದುರ್ಯೋಧನನು ಸರೋವರದೊಳಗೆ ಹುದುಗಿಕೊಂಡಿರುವ ವಿಷಯವೂ ಅವರಿಗೆ ತಿಳಿದುಹೋಗುತ್ತದೆ. ಆ ವಿಷಯವನ್ನು ಯುಧಿಷ್ಠಿರನಿಗೆ ತಿಳಿಸಿದರೆ ತಮಗೆ ಪಾರಿತೋಷಿಕವು ಸಿಕ್ಕುವುದೆಂದು ಭಾವಿಸಿ ಯುಧಿಷ್ಠಿರನಿಗೆ ವಿಷಯವನ್ನು ತಿಳಿಸಲು ಹೊರಟುಹೋಗುತ್ತಾರೆ. ಆ ವೇಳೆಗೆ ದುರ್ಯೋಧನನು ಎಲ್ಲಿಯೂ ಸಿಕ್ಕಲಿಲ್ಲವೆಂದು ಚಾರರು ಹೇಳಿದ್ದರಿಂದ ಯುಧಿಷ್ಠಿರನು ಚಿಂತಾಕ್ರಾಂತನಾಗಿ ಕುಳಿತಿರುತ್ತಾನೆ. ವ್ಯಾಧರು ಭೀಮಸೇನನಿಗೆ ದುರ್ಯೋಧನನಿರುವ ಸ್ಥಳವನ್ನು ತಿಳಿಸಿ ಅವನಿಂದ ಪಾರಿತೋಷಿಕವನ್ನು ಪಡೆದು ಹೊರಟುಹೋಗುತ್ತಾರೆ. ಭೀಮಸೇನನು ಯುಧಿಷ್ಠಿರನಿಗೆ ವಿಷಯವನ್ನು ತಿಳಿಸುತ್ತಲೇ ಅವನು ಸಂತೋಷಭರಿತನಾಗಿ ಶ್ರೀಕೃಷ್ಣಪ್ರಮುಖನಾಗಿ ಎಲ್ಲರನ್ನೂ ಕರೆದುಕೊಂಡು ಸರೋವರದ ಬಳಿಗೆ ಹೋಗುತ್ತಾನೆ. ಪಾಂಡವರು ಸೈನ್ಯಸಮೇತರಾಗಿ ಸರೋವರದ ಕಡೆಗೆ ಬರುತ್ತಿರುವುದನ್ನು ನೋಡಿ ಕೃಪಾದಿತ್ರಯರು

ದುರ್ಯೋಧನನಿಗೆ ಪಾಂಡವರು ಬರುತ್ತಿರುವ ಸೂಚನೆಯನ್ನಿತ್ತು ಹೊರಟು ಹೋಗುತ್ತಾರೆ. ದುರ್ಯೋಧನನು * ಜಲವನ್ನು ಸ್ತಂಭಿಸಿ ನೀರಿನಲ್ಲಿಯೇ ಇದ್ದುಬಿಡುತ್ತಾನೆ.

೩೧ನೆಯ ಅಧ್ಯಾಯ :- ಪಾಂಡವರು ಸರೋವರದ ಬಳಿಗೆ ಹೋಗಿ ದುರ್ಯೋಧನನು ಮಾಯಾವಿದ್ಯೆಯನ್ನು ಆಶ್ರಯಿಸಿ ನೀರಿನೊಳಗೆ ಕುಳಿತಿರುವುದನ್ನು ಗಮನಿಸುತ್ತಾರೆ. ಶ್ರೀಕೃಷ್ಣನು ಮಾಯಾವಿಯನ್ನು ಮಾಯೆಯ ಆಶ್ರಯದಿಂದಲೇ ಸಂಹರಿಸಬೇಕೆಂದು ಅನೇಕವಾದ ಉಪಮಾನಗಳೊಡನೆ ಯುಧಿಷ್ಠಿರನಿಗೆ ಉಪದೇಶಮಾಡುತ್ತಾನೆ. ಬಳಿಕ ಯುಧಿಷ್ಠಿರನು ನೀರಿನಲ್ಲಿದ್ದ ದುರ್ಯೋಧನನನ್ನು ಸಂಬೋಧಿಸಿ ಚುಚ್ಚುಮಾತುಗಳನ್ನಾಡುತ್ತಾನೆ. ಷಂಡನಾದವನಿಗೂ ವೀರತ್ವವನ್ನುಂಟುಮಾಡತಕ್ಕ ಚುಚ್ಚುಮಾತುಗಳವು. ಆದರೆ ಆ ಸಮಯದಲ್ಲಿ ದುರ್ಯೋಧನನು ತನ್ನ ಸಹನೆಯನ್ನು ಕಳೆದುಕೊಳ್ಳುವುದಿಲ್ಲ. ಶ್ರಮದಿಂದಾಗಿ ಸರೋವರದಲ್ಲಿರುವುದಾಗಿಯೂ ಶ್ರಮ ಪರಿಹಾರವಾದೊಡನೆಯೇ ಯುದ್ಧಮಾಡುವುದಾಗಿಯೂ ಹೇಳುತ್ತಾನೆ. ಆ ಮಾತಿಗೆ ಯುಧಿಷ್ಠಿರನು ಒಪ್ಪುವುದಿಲ್ಲ. ಯುದ್ಧಮಾಡಲು ಹೊರಬರಬೇಕೆಂದು ಒತ್ತಾಯಮಾಡುತ್ತಾನೆ. ಆ ಸಮಯದಲ್ಲಿ ದುರ್ಯೋಧನನು ಮಾತನ್ನು ಬೇರೆಯ ರೀತಿಯಲ್ಲಿ ಬದಲಾಯಿಸುತ್ತಾನೆ. ತನಗೆ ರಾಜ್ಯವೇ ಬೇಡವೆಂದೂ ಕಾಡಿಗೆ ಹೊರಟುಹೋಗುವುದಾಗಿಯೂ ಹೇಳುತ್ತಾನೆ. ಅದಕ್ಕುತ್ತರವಾಗಿ ಯುಧಿಷ್ಠಿರನು ದಾನವಾಗಿ ಬಂದ ರಾಜ್ಯವು ತನಗೆ ಬೇಡವೆನ್ನುತ್ತಾನೆ. 'ನಿನ್ನನ್ನು ಯುದ್ಧದಲ್ಲಿ ಸೋಲಿಸಿದ ನಂತರವೇ ನಾನು ಈ ಪೃಥ್ವಿಯನ್ನು ಉಪಭೋಗಿಸುತ್ತೇನೆ'–ಎನ್ನುತ್ತಾನೆ ಧರ್ಮಜ. ಈ ಸಂದರ್ಭದಲ್ಲಿ ಯುಧಿಷ್ಠಿರನಾಡುವ ಮಾತುಗಳು ಹೃದಯಂಗಮವಾಗಿವೆ.

೩೨ನೆಯ ಅಧ್ಯಾಯ :- ಯುಧಿಷ್ಠಿರನ ಮಾತುಗಳು ಹೇಗಿದ್ದುವೆಂದರೆ

---

* ಜಲಸ್ತಂಭ, ಅಗ್ನಿಸ್ತಂಭ, ವಾಯುಸ್ತಂಭ– ಇವು ಯೋಗದ ಮೂಲಕವಾಗಿ ಸಿದ್ಧಿಸುವ ವಿದ್ಯೆಗಳು. ನೀರಿನಲ್ಲಿ ಮುಳುಗಿಕೊಂಡಿರುವುದು, ಅಗ್ನಿಯಲ್ಲಿ ನಡೆದು ಹೋಗುವುದು, ಆಕಾಶದಲ್ಲಿ ತೇಲುವುದು–ಇವು ಯೋಗವಿದ್ಯೆಯಿಂದ ಸಾಧ್ಯವಾಗುತ್ತದೆ. ಆದರೆ ಈಗ ಈ ವಿದ್ಯೆಯು ನಶಿಸಿಹೋಗಿದೆ. ಜಲಸ್ತಂಭನ. ವಾಯುಸ್ತಂಭನಗಳೆಂದರೆ ಪರಮಾದ್ಭುತವಾದುದೆಂಬ ಭಾವನೆಯುಂಟಾಗುತ್ತದೆ.

ಧೃತರಾಷ್ಟ್ರನೇ ಆ ಮಾತಿನ ವಿಷಯವಾಗಿ ಸಂಜಯನನ್ನು ಪ್ರಶ್ನಿಸುತ್ತಾನೆ. 'ಅಂತಹ ಅಭಿಮಾನಿಯಾದ ನನ್ನ ಮಗನು ಯುಧಿಷ್ಠಿರನು ಹೇಳಿದ ಮಾತುಗಳನ್ನು ಹೇಗೆ ಸಹಿಸಿಕೊಂಡನು?' ಅಂತಹ ತೀಕ್ಷ್ಣವಾದ ಮಾತುಗಳನ್ನು ದುರ್ಯೋಧನನು ಸಹಿಸಿಕೊಂಡುದು ಧೃತರಾಷ್ಟ್ರನಿಗೂ ಅಚ್ಚರಿಯನ್ನುಂಟು ಮಾಡಿತು. ಆದರೆ ದುರ್ಯೋಧನನು ಕಾರ್ಯಸಾಧಕ. ಮತ್ತೊಂದು ರೀತಿಯಲ್ಲಿ ಮಾತನಾಡಿ ಯುಧಿಷ್ಠಿರನನ್ನು ಧರ್ಮಸಂಕಟದಲ್ಲಿ ಸಿಕ್ಕಿಸುತ್ತಾನೆ. "ನಾನೊಬ್ಬನೇ ಇದ್ದೇನೆ. ನೀವು ಅಪಾರಸಂಖ್ಯೆಯಲ್ಲಿರುವಿರಿ. ನಾನು ಬಳಲಿದ್ದೇನೆ. ನನ್ನ ಬಳಿ ಅಸ್ತ್ರ-ಶಸ್ತ್ರಗಳಿಲ್ಲ. ನನ್ನಲ್ಲಿದ್ದ ಒಂದು ಕುದುರೆಯೂ ಸತ್ತುಹೋಯಿತು. ಆದರೆ ನಾನು ಹೆದರಿಕೆಯಿಂದ ಹೀಗೆ ಮಾತನಾಡುತ್ತಿಲ್ಲ. ನಿಮ್ಮೆಲ್ಲರನ್ನೂ ಏಕಾಕಿಯಾಗಿಯೇ ಧ್ವಂಸಮಾಡುತ್ತೇನೆ. ಆದರೆ ನನ್ನ ಸ್ಥಿತಿಯನ್ನು ತಿಳಿಸಿದ್ದೇನೆ"– ಎನ್ನುತ್ತಾನೆ ದುರ್ಯೋಧನ. ದುರ್ಯೋಧನನ ಮನೋಗತವಾದ ಆಶಯವು ಫಲಿಸುತ್ತದೆ. ಧರ್ಮಭೀರುವಾದ ಯುಧಿಷ್ಠಿರನು ಹೇಳುತ್ತಾನೆ– "**ಏಕ ಏಕೇನ ಸಂಗಮ್ಯ ಯತ್ತೇ ಸಮ್ಮತಮಾಯುಧಮ್ । ತತ್ತ್ವಮಾದಾಯ ಯುಧ್ಯಸ್ವ ಪ್ರೇಕ್ಷಕಾಸ್ತೇ ವಯಂ ಸ್ಥಿತಾಃ॥೨೫॥ ಹತ್ವೈಕಂ ಭವತೋ ರಾಜ್ಯಂ ಹತೋ ವಾ ಸ್ವರ್ಗಮಾಪ್ನುಹಿ ॥೨೬॥** ಏಕಾಕಿಯಾಗಿರುವ ನೀನು ನಿನಗೆ ಸಮ್ಮತವೆನಿಸಿದ ಆಯುಧವನ್ನು ತೆಗೆದುಕೊಂಡು ನಮ್ಮ ಪಕ್ಷದಲ್ಲಿರುವ ಒಬ್ಬನೊಡನೆ ಯುದ್ಧಮಾಡು. ನಮ್ಮೈವರಲ್ಲಿ ಒಬ್ಬನನ್ನು ಸಂಹರಿಸಿದರೂ ರಾಜ್ಯವು ನಿನ್ನದಾಗುತ್ತದೆ. ಒಂದು ವೇಳೆ ನೀನೇ ಹತನಾದರೆ ಸ್ವರ್ಗವನ್ನು ಹೊಂದುವೆ."

ಆಗ ದುರ್ಯೋಧನನು ಗದಾಪಾಣಿಯಾಗಿ ನೆಲದ ಮೇಲೆ ನಿಂತು 'ಯಾವನಾದರೂ ನನ್ನೊಡನೆ ಯುದ್ಧಮಾಡಲಿ' ಎನ್ನುತ್ತಾನೆ. ಯುಧಿಷ್ಠಿರನು ಅದಕ್ಕೂ ಒಪ್ಪುತ್ತಾನೆ. ಅನ್ಯಮಾರ್ಗವೇ ಇಲ್ಲದೇ ದುರ್ಯೋಧನನು ಸರೋವರದಿಂದ ಮೇಲಕ್ಕೆ ಬರುತ್ತಾನೆ. ಗದಾಯುದ್ಧಕ್ಕಾಗಿ ಯಾರಾದರೂ ಬರಬಹುದೆಂದು ಆಹ್ವಾನಿಸುತ್ತಾನೆ.

ಅನಂತರ ದುರ್ಯೋಧನನು ಪುನಃ ಹಿಂದೆ ಹೇಳಿದುದನ್ನೇ ಹೇಳುತ್ತಾನೆ. 'ಏಕೈಕೇನ ತು ಮಾಂ ಯೂಯಂ.' ೧೨ನೆಯ ಶ್ಲೋಕವೇ

ಪುನಃ ೫೨ನೆಯ ಶ್ಲೋಕವೂ ಆಗಿದೆ. ಮುಂದಿನ ೫೩ನೆಯ ಶ್ಲೋಕವೂ ಸಹ ೧೩ನೆಯ ಶ್ಲೋಕದ ಪುನರಾವರ್ತನೆಯೇ ಆಗಿದೆ. ಇದಕ್ಕೆ ಉತ್ತರವಾಗಿ ಯುಧಿಷ್ಠಿರನು ಅಭಿಮನ್ಯುವಿನ ಪ್ರಕರಣವನ್ನು ಉದಾಹರಿಸಿ ದುರ್ಯೋಧನ ನನ್ನು ಮೂದಲಿಸಿ ಅವನಿಗೆ ಬೇಕಾದ ಯುದ್ಧಸಾಮಗ್ರಿಗಳೆಲ್ಲವನ್ನೂ (ಕವಚವೇ ಮೊದಲಾದುವು) ಒದಗಿಸಿಕೊಡುತ್ತಾನೆ. ದುರ್ಯೋಧನನು ಗದೆ ಯನ್ನೆತ್ತಿಕೊಂಡು–'ನಿಮ್ಮಲ್ಲಿ ಯಾರಾದರೂ ಗದೆಯನ್ನೆತ್ತಿಕೊಂಡು ನನ್ನೊಡನೆ ಯುದ್ಧಕ್ಕೆ ಬರಲಿ'– **ಗೃಹ್ಣಾತು ಚ ಗದಾಂ ಯೋ ವೈ ಯೋತ್ಸ್ಯ- ತೇಽದ್ಯ ಮಯಾ ಸಹ**–ಎಂದು ಪಾಂಡವರನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆ.

೩೩ನೆಯ ಅಧ್ಯಾಯ :- ಯುಧಿಷ್ಠಿರನು ದುರ್ಯೋಧನನ ವಿಷಯ ದಲ್ಲಿ ಬಹಳ ಔದಾರ್ಯದಿಂದಲೇ ನಡೆದುಕೊಂಡುದೇನೋ ನಿಜ. ಹೀಗೆ ಮಾಡಬೇಕಾದುದು ಒಂದು ವಿಧದಲ್ಲಿ ಅನಿವಾರ್ಯವೂ ಆಗಿದ್ದಿತು. ದುರ್ಯೋಧನನೇ ತನ್ನ ದುರ್ಬಲತೆಯನ್ನು ಹೇಳಿಕೊಳ್ಳುತ್ತಾನೆ. 'ನಾನು ಏಕಾಕಿ, ನನ್ನಲ್ಲಿ ವಾಹನಗಳಾವುವು ಇರುವುದಿಲ್ಲ. ನೀವು ಬಹಳ ಮಂದಿ ಇದ್ದೀರಿ. ನನಗೇನೋ ನಿಮ್ಮೆಲ್ಲರನ್ನೂ ಎದುರಿಸಿ ಯುದ್ಧಮಾಡುವ ಸಾಮರ್ಥ್ಯವಿದೆ. ಆದರೆ ಒಬ್ಬನ ಮೇಲೆ ನೀವೆಲ್ಲರೂ ಆಕ್ರಮಣ ನಡೆಸುವುದು ಯೋಗ್ಯವೇ?–ಎಂಬುದನ್ನು ಧರ್ಮಾತ್ಮನಾದ ನೀನೇ ನಿಶ್ಚಯಿಸು.'

ಯೂಯಂ ಸಸುಹೃದಃ ಪಾರ್ಥಾಃ ಸರ್ವೇ ಸರಥವಾಹನಾಃ ।
ಅಹಮೇಕಃ ಪರಿದ್ಯೂನೋ ವಿರಥೋ ಹತವಾಹನಃ ॥೧೦॥

ಏಕೈಕೇನ ತು ಮಾಂ ಯೂಯಂ ಯೋಧಯಧ್ವಂ ಯುಧಿಷ್ಠಿರ ।
ನ ಹ್ಯೇಕೋ ಬಹುಭಿರ್ವೀರೈರ್ನ್ಯಾಯ್ಯೋ ಯೋಧಯಿತುಂ ಯುಧಿ ॥

ಮೇಲಾಗಿ ಧರ್ಮರಾಜನು '**ಹತ್ವೈಕಂ ಭವತೋ ರಾಜ್ಯಂ**'– ನಮ್ಮಲ್ಲಿ ಯಾರೊಬ್ಬರನ್ನು ಸಂಹರಿಸಿದರೂ ನಿನಗೆ ರಾಜ್ಯವು ಲಭಿಸುವುದು ಎಂದು ಹೇಳುತ್ತಾನೆಯೇ ಹೊರತು 'ನೀನು ನಿನಗೆ ಬೇಕಾದವರನ್ನು ಆರಿಸಿ ಕೊಳ್ಳಬಹುದು' ಎಂದೇನೂ ಹೇಳುವುದಿಲ್ಲ. ಅದಕ್ಕೆ ಪ್ರತಿಯಾಗಿ ಅಭಿಮಾನಿ ಯಾದ ದುರ್ಯೋಧನನೂ '**ಶೂರೋಽದ್ಯ ಮಮ ದೀಯತಾಮ್**'–

'ಶೂರನಾದವನೊಬ್ಬನನ್ನು ನನ್ನೊಡನೆ ಯುದ್ಧಮಾಡಲು ಕಳುಹಿಸಿ ಕೊಡು'–ಎಂದು ಹೇಳುತ್ತಾನೆಯೇ ಹೊರತು ಇಂತಹವನನ್ನೇ ಕಳುಹಿಸಿ ಕೊಡೆಂದು ಹೇಳುವುದಿಲ್ಲ. ಈ ಧಾಟಿಯಲ್ಲವನು ಮಾತನಾಡಿದಾಗ ತನ್ನ ಗೌರವ, ಪ್ರತಿಷ್ಠೆ ಮತ್ತು ಎಲ್ಲಕ್ಕಿಂತಲೂ ಮಿಗಿಲಾದ ಧರ್ಮನಿಷ್ಠೆಗೆ ಅನುಗುಣವಾಗಿ ಯುಧಿಷ್ಠಿರನು ದುರ್ಯೋಧನನಿಗೆ ಸಕಲಸೌಕರ್ಯಗಳನ್ನೂ ಒದಗಿಸಿಕೊಟ್ಟು ಯುದ್ಧಕ್ಕೆ ಸಿದ್ಧನಾಗುವಂತೆ ಹೇಳಿದುದು ಒಂದು ರೀತಿಯಲ್ಲಿ ಸೂಕ್ತವಾಗಿಯೇ ಕಾಣುತ್ತದೆ. ಈ ಪ್ರಕರಣವಾದನಂತರ ಶ್ರೀಕೃಷ್ಣನು ಯುಧಿಷ್ಠಿರನನ್ನು ಆಕ್ಷೇಪಿಸುವ ಪ್ರಕರಣವು ಬರುತ್ತದೆ. ೩೨ನೆಯ ಅಧ್ಯಾಯದ ವಿಷಯವೇ ಇದಾಗಿದೆ. ಶ್ರೀಕೃಷ್ಣನ ಮುಖ್ಯವಾದ ಆಕ್ಷೇಪಗಳು ಎರಡು : ನಿನ್ನನ್ನೋ, ಅರ್ಜುನ-ನಕುಲ-ಸಹದೇವರನ್ನೋ ಯುದ್ಧಕ್ಕೆ ಕರೆದುಬಿಟ್ಟಿದ್ದರೆ ಪರಿಣಾಮವೇನಾಗುತ್ತಿದ್ದಿತು? ನ್ಯಾಯರೀತಿಯಲ್ಲಿ ಯುದ್ಧಮಾಡಿದರೆ ಭೀಮನಿಂದಲೂ ದುರ್ಯೋಧನನು ಅಜಯ್ಯನು. (ಆದುದರಿಂದ ಉಳಿದಿರುವ ಒಬ್ಬ ಶತ್ರುವನ್ನು ಎಲ್ಲರೂ ಸೇರಿ ಸಂಹರಿಸುವುದು ಯುಕ್ತವಾಗಿದ್ದಿತೇ ಹೊರತು, ಅವನಿಗೆ ಬೇಕಾದ ಸಲಕರಣೆಗಳೆಲ್ಲವನ್ನೂ ಒದಗಿಸಿಕೊಟ್ಟು ಒಬ್ಬ ವೀರನ ಮೂಲಕವಾಗಿ ಅವನೊಡನೆ ಯುದ್ಧ ಮಾಡಲು ಒಪ್ಪಿಕೊಂಡುದು ಉಚಿತವಲ್ಲ.) ಎರಡನೆಯದು : **ಏಕಂ- ವಾಸ್ಮಾನ್ನಿಹತ್ಯ ತ್ವಂ ಭವ ರಾಜಾ-** ನಮ್ಮಲ್ಲಿ ಒಬ್ಬನನ್ನು ಸಂಹರಿಸಿದರೂ ನೀನು ರಾಜನಾಗಬಹುದು'– ಎಂದು ಪುನಃ ಪುನಃ ಹೇಳಿದುದು ತಪ್ಪು. ಇದರಿಂದ ಕುಂತಿಯ ಮಕ್ಕಳಿಗೆ ರಾಜ್ಯವೇ ಸಿಕ್ಕುವಂತೆ ಕಾಣುವುದಿಲ್ಲ. ಅನಂತವಾದ ವನವಾಸ ಮತ್ತು ಭಿಕ್ಷೆಗಳಿಗೆ ಮಾತ್ರವೇ ಇವರು ಹುಟ್ಟಿರುವಂತೆ ಕಾಣುತ್ತದೆ. ಧರ್ಮರಾಜನು 'ಏಕಂ ವಾಸ್ಮಾನ್ನಿಹತ್ಯ ತ್ವಂ ಭವ ರಾಜಾ'– ಎಂದು ಹೇಳಿರುವುದರಲ್ಲಿ ಅತಿಶಯವೇನೂ ಕಾಣುವುದಿಲ್ಲ. ಅವನು ಹಾಗೆ ಹೇಳಿದ್ದರಲ್ಲಿ ತಪ್ಪೂ ಕಾಣುವುದಿಲ್ಲ. ಹದಿನೆಂಟು ದಿವಸಗಳ ಯುದ್ಧದಲ್ಲಿ ಪಂಚಪಾಂಡವರಲ್ಲಿ ಒಬ್ಬನು ಮೃತನಾಗಿದ್ದರೂ ಮುಂದೆ ಯುದ್ಧವೂ ನಡೆಯುತ್ತಿರಲಿಲ್ಲ. ಪಾಂಡವರಿಗೆ ರಾಜ್ಯವೂ ಸಿಕ್ಕುತ್ತಿರಲಿಲ್ಲ. ಪಂಚಪ್ರಾಣಗಳಂತಿರುವ ಪಾಂಡವರಲ್ಲಿ ಒಂದು ಪ್ರಾಣವು ಹೋಗಿ ಉಳಿದ ನಾಲ್ಕು ಪ್ರಾಣಗಳು ಉಳಿದಿರಲು ಸಾಧ್ಯವೇ ಇಲ್ಲ. ಹೋಗುವುದಾದರೆ ಎಲ್ಲವೂ ಹೋಗಬೇಕು. ಉಳಿಯುವುದಾದರೆ ಐದೂ ಉಳಿದಿರಲೇಬೇಕು.

ಇದು ಆಧ್ಯಾತ್ಮಿಕ ಸತ್ಯ. ಆದುದರಿಂದ ಯುಧಿಷ್ಠಿರನು ಹೇಳಿದುದು ಸಹಜವಾಗಿ ಕಾಣುತ್ತದೆ. **ಮಮ ಪ್ರಾಣಾ ಹಿ ಪಾಂಡವಾಃ** ಎಂದು ಹೇಳಿಕೊಂಡಿದ್ದ, ಭಯಕೃತ್ ಮತ್ತು ಭಯನಾಶಕನೂ ಆದ ಶ್ರೀಕೃಷ್ಣನು ಈ ಆಕ್ಷೇಪಗಳನ್ನು ಎತ್ತಿದುದೂ ಸಹಜವೇ. ಮೇಲಾಗಿ ಉಳಿದಿರುವ ಒಬ್ಬನೇ ಒಬ್ಬ ಅತಿಕುಟಿಲನಾದ ಶತ್ರುವಿನ ವಿಷಯದಲ್ಲಿ ಹೇಗೆ ನಡೆದುಕೊಳ್ಳ ಬೇಕೆಂಬುವ ರಾಜನೀತಿಯೂ ಶ್ರೀಕೃಷ್ಣನ ಮಾತಿನಲ್ಲಡಗಿದೆ. ಇದೇ ಇಲ್ಲಿ ಮುಖ್ಯ. ಈ ಸಮಯಕ್ಕೆ ಸರಿಯಾಗಿ ಭೀಮಸೇನನು ಸಮಯೋಚಿತವಾದ ಮಾತುಗಳನ್ನಾಡಿ ಧರ್ಮರಾಜನು ಧೈರ್ಯಗೆಡದಂತೆ ಮಾಡುತ್ತಾನೆ. ಬಳಿಕ ಶ್ರೀಕೃಷ್ಣನೂ ಭೀಮಸೇನನನ್ನು ಹುರಿದುಂಬಿಸುತ್ತಾನೆ. ಧರ್ಮರಾಜನೇ ಮೊದಲಾದವರು ಭೀಮಸೇನನನ್ನು ಪ್ರಶಂಸೆಮಾಡುತ್ತಾರೆ. ಬಳಿಕ ಭೀಮನು ಧರ್ಮರಾಜನಿಗೆ ಆಶ್ವಾಸನೆಯನ್ನಿತ್ತು ದುರ್ಯೋಧನನನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆ. ದುರ್ಯೋಧನನು, ಆತ್ಮಪ್ರಶಂಸೆಮಾಡಿಕೊಂಡುದಕ್ಕಾಗಿ ಭೀಮಸೇನನನ್ನು ನಿಂದಿಸುತ್ತಾ–' ನಿನ್ನ ಪರಾಕ್ರಮವನ್ನು ಕೃತಿಯಲ್ಲಿ ತೋರಿಸು. **ಕಿಂ ಕತ್ಥಿತೇನ ಬಹುನಾ ಯುದ್ಧ್ಯಸ್ವಾದ್ಯ ಮಯಾ ಸಹ**'– ಎನ್ನುತ್ತಾನೆ. 'ನಾನು ಗದಾಪಾಣಿಯಾಗಿ ಯುದ್ಧಸನ್ನದ್ಧನಾಗಿಯೇ ನಿಂತಿರುವುದನ್ನು ನೀನು ಕಾಣುತ್ತಿಲ್ಲವೇ? ನಿನ್ನ ಬಲವನ್ನು ಗದಾಯುದ್ಧದಲ್ಲಿ ತೋರಿಸು'- ಎನ್ನುತ್ತಾನೆ ದುರ್ಯೋಧನ. ಗದಾಯುದ್ಧಕ್ಕೆ ಸಜ್ಜಾಗಿ ಇಬ್ಬರೂ ನಿಲ್ಲುತ್ತಾರೆ.

೩೪ನೆಯ ಅಧ್ಯಾಯ :- ಭೀಮ-ದುರ್ಯೋಧನರಿಬ್ಬರೂ ಯುದ್ಧಕ್ಕೆ ಸಜ್ಜಾಗಿ ನಿಂತಿರಲಾಗಿ, ಪಾಂಡವರೆಲ್ಲರೂ ಪ್ರೇಕ್ಷಕರಾಗಿ ಕುಳಿತಿರಲಾಗಿ ತನ್ನ ಇಬ್ಬರು ಶಿಷ್ಯರಿಗೂ ಗದಾಯುದ್ಧವು ನಡೆಯುತ್ತಿದೆಯೆಂಬ ವಾರ್ತೆಯನ್ನು ಕೇಳಿದ ಬಲರಾಮನು ಅಲ್ಲಿಗೆ ಆಗಮಿಸುತ್ತಾನೆ. ಕೃಷ್ಣಸಹಿತರಾದ ಪಾಂಡವರು ಬಲರಾಮನನ್ನು ಸ್ವಾಗತಿಸಿ ಸತ್ಕರಿಸುತ್ತಾರೆ. ಯುಧಿಷ್ಠಿರನು ಸಹೋದರರಿಬ್ಬರ ಗದಾಯುದ್ಧವನ್ನು ನೋಡುವಂತೆ ಬಲರಾಮನನ್ನು ಕೇಳಿಕೊಳ್ಳುತ್ತಾನೆ. ಆ ರಾಜರ ಮಧ್ಯದಲ್ಲಿ ಬಲರಾಮನು ಗದಾಯುದ್ಧವನ್ನು ನೋಡುವ ಸಲುವಾಗಿ ಕುಳಿತುಕೊಳ್ಳುತ್ತಾನೆ. ಭೀಮ-ದುರ್ಯೋಧನರ

ಯುದ್ಧವು ಪ್ರಾರಂಭವಾಗುತ್ತದೆ. **ತತಸ್ತಯೋಃ ಸಂನಿಪಾತಸ್ತುಮುಲೋ ಲೋಮಹರ್ಷಣಃ । ಆಸೀದನ್ತಕರೋ ರಾಜನ್ವೈರಸ್ಯ ತವ ಪುತ್ರಯೋಃ ॥೨೨॥** ೩೫ನೆಯ ಅಧ್ಯಾಯದಲ್ಲಿ ಕಥೆಯು ಕವಲೊಡೆಯುತ್ತದೆ. ಕೊಲೆ-ರಕ್ತಪಾತಗಳನ್ನೇ ಉದ್ದಕ್ಕೂ ಓದಿಕೊಂಡ ವಾಚಕರಿಗೆ ಈ ಕವಲೊಡೆದ ಕಥೆಯು ಓದುಗರ ಮನಸ್ಸಿಗೆ ಆಪ್ಯಾಯಮಾನವನ್ನು ಉಂಟು ಮಾಡುತ್ತದೆ. ಸಂಧಿಪ್ರಯತ್ನವು ನಿಷ್ಫಲವಾದನಂತರ ಶ್ರೀಕೃಷ್ಣನು ಉಪಪ್ಲವ್ಯಕ್ಕೆ ಹೋಗಿ ಪಾಂಡವರನ್ನು ಯುದ್ಧಕ್ಕೆ ಹೊರಡುವಂತೆ ಹೇಳುತ್ತಾನೆ. ಆ ಸಮಯದಲ್ಲಿ ಬಲರಾಮನು ದುರ್ಯೋಧನನಿಗೂ ಸಹಾಯಮಾಡುವಂತೆ ಶ್ರೀಕೃಷ್ಣನಿಗೆ ಹೇಳುತ್ತಾನೆ. ಅದಕ್ಕೆ ಶ್ರೀಕೃಷ್ಣನು ಒಪ್ಪುವುದಿಲ್ಲ. ಕೃತವರ್ಮಪ್ರಮುಖರಾದ ಕೆಲವು ಯಾದವಸೈನಿಕರನ್ನು ದುರ್ಯೋಧನನ ಕಡೆಗೆ ಕಳುಹಿಸುತ್ತಾನೆ. ಅದರಿಂದಾಗಿ ಬಲರಾಮನಿಗೆ ಸಿಟ್ಟುಬಂದು ಅವನು ತೀರ್ಥಯಾತ್ರೆಗೆ ಹೊರಟುಬಿಡುತ್ತಾನೆ. ಇದು ತೀರ್ಥಯಾತ್ರಾಪ್ರಸಂಗದ ಪೂರ್ವಕಥೆ. ಇಲ್ಲಿ ಬಲರಾಮನು ನಲವತ್ತೆರಡು ದಿವಸಗಳು ಮಾಡಿದ ತೀರ್ಥಯಾತ್ರಾಪ್ರಸಂಗವು ಬರುತ್ತದೆ. ಮಧ್ಯ-ಮಧ್ಯದಲ್ಲಿ ಅನೇಕ ಉಪಕಥೆಗಳೂ ಇದ್ದು ಮನಸ್ಸಿಗೆ ಆಹ್ಲಾದವುಂಟಾಗುತ್ತದೆ. ಸಾಮಾನ್ಯವಾಗಿ ಇಲ್ಲಿ ಸರಸ್ವತೀನದಿಯ ತೀರ್ಥಗಳನ್ನೇ ಹೇಳಿದ್ದಾರೆ. ೩೬ನೆಯ ಅಧ್ಯಾಯದಲ್ಲಿ: ತ್ರಿತಮುನಿಯ ಉಪಾಖ್ಯಾನವು ಬರುತ್ತದೆ. ತಪ್ಪಿಗೆ ತಕ್ಕುದಾದ ಶಿಕ್ಷೆಯಾಗಬೇಕೆಂಬುದನ್ನು ಈ ಕಥೆಯು ಪ್ರತಿಪಾದಿಸುತ್ತದೆ. ಬಾವಿಯಲ್ಲಿ ಬಿದ್ದ ತ್ರಿತನನ್ನು ಮೇಲಕ್ಕೆತ್ತಲು ಪ್ರಯತ್ನಿಸದೇ ಗೋಧನದ ಲೋಭದಿಂದ ಹೊರಟುಹೋದ ಏಕತ ಮತ್ತು ದ್ವಿತರಿಗೆ ತ್ರಿತನು ಕಪಿ-ಕರಡಿಗಳಾಗಿ ಹುಟ್ಟುವಂತೆ ಶಾಪಕೊಡುತ್ತಾನೆ. ಯಜ್ಞವನ್ನು ಮಾನಸಿಕವಾಗಿ ಮಾಡಿ ತ್ರಿತನು ಫಲವನ್ನು ಪಡೆದುಕೊಂಡ ವಿಷಯವಿದೆ. ೩೭ನೆಯ ಅಧ್ಯಾಯದಲ್ಲಿ : ವಿನಶನ, ಸುಭೂಮಿಕ, ಗಂಧರ್ವ, ಗರ್ಗಸ್ರೋತ, ಶಂಖ, ದ್ವೈತವನ, ನೈಮಿಷೇಯತೀರ್ಥಗಳ ವರ್ಣನೆಯಿದೆ. ಮುಂದೆ ಸಪ್ತಸರಸ್ವತೀ ತೀರ್ಥಕ್ಷೇತ್ರಕ್ಕೆ ಬಲರಾಮನು ಪ್ರಯಾಣಮಾಡುತ್ತಾನೆ. ೩೮ನೆಯ ಅಧ್ಯಾಯದಲ್ಲಿ : ಸಪ್ತಸಾರಸ್ವತತೀರ್ಥದ ಉತ್ಪತ್ತಿ ಮತ್ತು ಮಹಿಮೆಗಳಿವೆ. ಮಂಕಣಮುನಿಯ ದಿವ್ಯಚರಿತ್ರೆಯಿದೆ. ಹಿಂದೆ ವನಪರ್ವದಲ್ಲಿಯೂ

(ಅಧ್ಯಾಯ ೮೩) ಇವನ ಕಥೆಯು ಬಂದಿರುತ್ತದೆ. ೩೯ನೆಯ ಅಧ್ಯಾಯ ದಲ್ಲಿ ಔಶನಸ ಮತ್ತು ಕಪಾಲಮೋಚನತೀರ್ಥಗಳ ಮಾಹಾತ್ಮ್ಯವಿದೆ. ರುಷಂಗುವಿನ ಆಶ್ರಮದ ವರ್ಣನೆಯಿದೆ ಮತ್ತು ಪೃಥೂದಕತೀರ್ಥದ ಮಹಿಮೆಯಿದೆ. ೪೦ನೆಯ ಅಧ್ಯಾಯದಲ್ಲಿ : ಆರ್ಷ್ಟಿಷೇಣ, ಸಿಂಧುದ್ವೀಪ, ದೇವಾಪಿ ಮತ್ತು ವಿಶ್ವಾಮಿತ್ರರು ತಪಸ್ಸಿನ ಮೂಲಕವಾಗಿ ಬ್ರಾಹ್ಮಣ್ಯವನ್ನು ಪಡೆದ ಆಖ್ಯಾನವಿದೆ. ೪೧ನೆಯ ಅಧ್ಯಾಯದಲ್ಲಿ : ರಾಜ್ಯದ ಕಥಾ ಪ್ರಸಂಗದಲ್ಲಿ ಧೃತರಾಷ್ಟ್ರರಾಜನ ಕಥೆಯು ಬರುತ್ತದೆ. ಆದರೆ ಆ ಧೃತರಾಷ್ಟ್ರ ರಾಜನು ಮಹಾಭಾರತದ ಕಥೆಯಲ್ಲಿ ಬರುವ ಧೃತರಾಷ್ಟ್ರರಾಜನಲ್ಲ. ತೀರ್ಥಯಾತ್ರಾ ಪ್ರಸಂಗದಲ್ಲಿ ಬರುವ ಧೃತರಾಷ್ಟ್ರನು ಕುರುಡನೂ ಆಗಿರಲಿಲ್ಲ ಮತ್ತು ಅವನು ಹಸ್ತಿನಾಪಟ್ಟಣದಲ್ಲಿದ್ದನೆಂಬ ಪ್ರಸ್ತಾಪವೂ ಬರುವುದಿಲ್ಲ.

೪೨ನೆಯ ಅಧ್ಯಾಯ :- ವಸಿಷ್ಠರ ಮೇಲಿನ ದ್ವೇಷದಿಂದ ವಿಶ್ವಾ ಮಿತ್ರರು ಸರಸ್ವತೀನದಿಗೆ ಶಾಪವಿತ್ತ ಪ್ರಕರಣವು ಬರುತ್ತದೆ. ೪೩ನೆಯ ಅಧ್ಯಾಯದಲ್ಲಿ : ಋಷಿಗಳೆಲ್ಲರೂ ಸೇರಿ ಸರಸ್ವತೀನದಿಯನ್ನು ಶಾಪದಿಂದ ವಿಮುಕ್ತಿಗೊಳಿಸುವ ಕಥೆಯಿದೆ. ಅರುಣಾಸಂಗಮದ ಮಾಹಾತ್ಮ್ಯವಿದೆ. ನಮುಚಿಯ ಕಥೆಯು ಸಂಕ್ಷೇಪವಾಗಿ ಬರುತ್ತದೆ. ಸ್ಕಂದನು ತಾರಕಾಸುರನನ್ನು ಸಂಹಾರಮಾಡಿದ ಪ್ರಸಂಗವೂ ಬರುತ್ತದೆ. ಮುಂದಿನ ಅಧ್ಯಾಯಗಳಲ್ಲಿ ಬರುವ ಕಾರ್ತಿಕೇಯನ ಕಥೆಗೆ ಇದು ಪೀಠಿಕೆಯಾಗಿದೆ. ೪೪ನೆಯ ಅಧ್ಯಾಯದಿಂದ ೪೬ನೆಯ ಅಧ್ಯಾಯಪೂರ್ತಿಯಾಗಿ ಸ್ಕಂದನ ಕಥೆಯೇ ಬರುತ್ತದೆ. ಸ್ಕಂದನ ಕಥೆಯು ಈ ಹಿಂದೆ ಅರಣ್ಯಪರ್ವದ ೨೨೫ನೆಯ ಅಧ್ಯಾಯದಿಂದ ೨೩೨ನೆಯ ಅಧ್ಯಾಯದವರೆಗಿನ ೮ ಅಧ್ಯಾಯಗಳಲ್ಲಿ ವಿಸ್ತಾರವಾಗಿ ಬಂದಿರುತ್ತದೆ. ಮುಂದೆ ಶಾಂತಿ ಮತ್ತು ಅನುಶಾಸನಪರ್ವ ಗಳಲ್ಲಿಯೂ ಸ್ಕಂದನ ಪ್ರಸ್ತಾಪವು ಬರುತ್ತದೆ.

೪೭ನೆಯ ಅಧ್ಯಾಯದಲ್ಲಿ :- ವರುಣಪಟ್ಟಾಭಿಷೇಕ, ಅಗ್ನಿ-ಬ್ರಹ್ಮಮತ್ತು ಕುಬೇರತೀರ್ಥಗಳ ಉತ್ಪತ್ತಿಯ ಕಥನವಿದೆ. ೪೮ನೆಯ ಅಧ್ಯಾಯದಲ್ಲಿ ಬದರಪಾಚನತೀರ್ಥದ ಮಹಿಮೆಯಿದೆ. ಶ್ರುತಾವತೀ ಮತ್ತು ಅರುಂಧತಿ ಯರ ತಪಸ್ಸಿನ ವರ್ಣನೆಯಿದೆ. ೪೯ನೆಯ ಅಧ್ಯಾಯದಲ್ಲಿ : ಇಂದ್ರ, ರಾಮ,

ಯಮುನಾ ಮತ್ತು ಆದಿತ್ಯತೀರ್ಥಗಳ ಮಹಿಮೆಯ ಕಥನವಿದೆ. ೫೦ನೆಯ ಅಧ್ಯಾಯದಲ್ಲಿ : ಅಸಿತ, ದೇವಲ ಮತ್ತು ಜೈಗೀಷವ್ಯರ ಪುಣ್ಯಚರಿತ್ರೆಯಿದೆ.

೫೧ನೆಯ ಅಧ್ಯಾಯದಲ್ಲಿ :- ದಧೀಚ ಮತ್ತು ಸಾರಸ್ವತಮುನಿಗಳ ದಿವ್ಯಚರಿತ್ರೆಯಿದೆ. ೫೨ನೆಯ ಅಧ್ಯಾಯದಲ್ಲಿ : ವೃದ್ಧಕನ್ಯೆಯ ಚರಿತ್ರೆ ಯಿದೆ. ಹೆಂಗಸರಿಗೆ ವಿವಾಹಸಂಸ್ಕಾರವಾಗಿಯೇ ತೀರಬೇಕೆಂಬುದು ಇಲ್ಲಿ ಪ್ರತಿಪಾದಿತವಾಗಿದೆ. ೫೩ನೆಯ ಅಧ್ಯಾಯದಲ್ಲಿ : ಕುರುಕ್ಷೇತ್ರದ ಮಹಿಮೆ ಮತ್ತು ಅದರ ಎಲ್ಲೆಯ ಕಥನವಿದೆ. ೫೪ನೆಯ ಅಧ್ಯಾಯದಲ್ಲಿ : ಪ್ಲಕ್ಷ ಪ್ರಸ್ರವಣ ಮತ್ತು ಸರಸ್ವತೀತೀರ್ಥಗಳ ವರ್ಣನೆಯಿದೆ. ಇಲ್ಲಿಯೇ ನಾರದರು ಬಲರಾಮನನ್ನು ಸಂದರ್ಶಿಸಿ ಕೌರವರ ವಿನಾಶವನ್ನೂ, ಭೀಮ-ದುರ್ಯೋಧನರಿಗೆ ಗದಾಯುದ್ಧವು ನಡೆಯಲಿದೆಯೆಂಬ ವಿಷಯವನ್ನೂ ಹೇಳುತ್ತಾರೆ. ಯುದ್ಧವನ್ನು ನೋಡುವ ಸಲುವಾಗಿ ಬಲರಾಮನು ಕುರುಕ್ಷೇತ್ರಕ್ಕೆ ಪ್ರಯಾಣಮಾಡುತ್ತಾನೆ.

೫೫ನೆಯ ಅಧ್ಯಾಯ :- ಬಲರಾಮನ ಸಲಹೆಯಂತೆ ಗದಾಯುದ್ಧಕ್ಕಾಗಿ ಎಲ್ಲರೂ ಸಮಂತಪಂಚಕತೀರ್ಥದ ಬಳಿಗೆ ಹೋಗುತ್ತಾರೆ. ಭೀಮ-ದುರ್ಯೋಧನರಿಬ್ಬರೂ ಗದಾಯುದ್ಧಕ್ಕಾಗಿ ಎದುರು-ಬದುರು ನಿಲ್ಲುತ್ತಾರೆ. ಅವರ ಆಗಿನ ಸ್ವರೂಪಗಳನ್ನು ವ್ಯಾಸರು ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ದುರ್ಯೋಧನನು, ಕುಳಿತುಕೊಂಡು ಗದಾಯುದ್ಧವನ್ನು ನೋಡುವಂತೆ ಎಲ್ಲರನ್ನೂ ಪ್ರಾರ್ಥಿಸುತ್ತಾನೆ. ಯುಧಿಷ್ಠಿರಾದಿಯಾಗಿ ಎಲ್ಲರೂ ಕುಳಿತುಕೊಳ್ಳುತ್ತಾರೆ. ಅವರ ಮಧ್ಯದಲ್ಲಿ ಬಲರಾಮ-ಕೃಷ್ಣರೂ ಕುಳಿತುಕೊಳ್ಳುತ್ತಾರೆ. ಭೀಮ-ದುರ್ಯೋಧನರು ಪರಸ್ಪರವಾಗಿ ದುರುಗುಟ್ಟಿಕೊಂಡು ನೋಡುತ್ತಾ ಗದೆಗಳನ್ನು ಮೇಲೆತ್ತಿ ನಿಲ್ಲುತ್ತಾರೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೫೬ನೆಯ ಅಧ್ಯಾಯ :- ದುರ್ಯೋಧನನಿಗೆ ಅಪಶಕುನವಾಗುತ್ತದೆ. ಅದೇ ಭೀಮಸೇನನಿಗೆ ಶುಭಶಕುನವಾಗುತ್ತದೆ. ಅದನ್ನು ಗಮನಿಸಿದ ಭೀಮಸೇನನು ಯುಧಿಷ್ಠಿರನಿಗೆ ತಾನು ದುರ್ಯೋಧನನನ್ನು ಖಂಡಿತವಾಗಿಯೂ ಗೆಲ್ಲುವೆನೆಂದು ಹೇಳುತ್ತಾನೆ. ಈ ಅಧ್ಯಾಯದಲ್ಲಿ ಬಂದಿರುವ ೧೬, ೧೭, ೧೮ನೆಯ ಶ್ಲೋಕಗಳಾಗಿ ೩೩ನೆಯ ಅಧ್ಯಾಯದ ೩೨, ೩೩,೩೪, ೩೫ನೆಯ

ಶ್ಲೋಕಗಳೂ ಬಂದಿವೆ. ಪ್ರಕರಣವೂ ಒಂದೇ ಆಗಿರುತ್ತದೆ. ಹೀಗೆಯೇ ೨೯ನೆಯ ಶ್ಲೋಕದಿಂದ ೩೯ನೆಯ ಶ್ಲೋಕದವರೆಗಿರುವ ಶ್ಲೋಕಗಳು ೩೩ನೆಯ ಅಧ್ಯಾಯದಲ್ಲಿಯೂ ಬಂದಿವೆ. ಪ್ರಕರಣವು ಒಂದೇ ಆಗಿರುವುದರಿಂದ ಶ್ಲೋಕಗಳು ಪುನರಾವರ್ತಿತವಾಗಿವೆ. ಭೀಮಸೇನನ ಹಳಿಯುವ ಮಾತುಗಳಿಗೆ ದುರ್ಯೋಧನನು ಸರಿಯಾಗಿಯೇ ಉತ್ತರಿಸುತ್ತಾನೆ. ಅವನ ವೀರವಾಣಿಯನ್ನು ಕೇಳಿ ಶತ್ರುಪಕ್ಷದವರೂ ಪ್ರಶಂಸೆಮಾಡುತ್ತಾರೆ. ಭೀಮಸೇನನು ದುರ್ಯೋಧನನ ಮೇಲೆ ಬೀಳುತ್ತಾನೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೫೭ನೆಯ ಅಧ್ಯಾಯ :- ಭೀಮ-ದುರ್ಯೋಧನರ ಗದಾಯುದ್ಧದ ಅದ್ಭುತವರ್ಣನೆಯಿದೆ. ಇಬ್ಬರು ವೀರರೂ ನಾಲ್ಕಾರು ಬಾರಿ ಬಿದ್ದು ಏಳುತ್ತಾರೆ. ಅವರಿಬ್ಬರೂ ಯುದ್ಧಮಾಡುವಾಗ ಯಾರು ಹೆಚ್ಚು? ಯಾರು ಕಡಿಮೆ?– ಎಂಬುದನ್ನು ನಿರ್ಧರಿಸಲು ಸಾಧ್ಯವಾಗುವುದೇ ಇಲ್ಲ. ಅಂತಹ ಪರಮಾದ್ಭುತವಾದ ರೀತಿಯಲ್ಲಿ ಯುದ್ಧವು ನಡೆಯುತ್ತದೆ. ಭೀಮಸೇನನ ಕವಚವು ಕಡಿದುಹೋಗಿ ನೆಲದ ಮೇಲೆ ಮೂರ್ಛಿತನಾಗಿ ಬಿದ್ದು ಹೋಗುತ್ತಾನೆ. ಪಾಂಡವರು ಅಧೀರರಾಗುತ್ತಾರೆ. ಸ್ವಲ್ಪ ಹೊತ್ತಿನಲ್ಲಿಯೇ ಭೀಮಸೇನನು ಪುನಃ ಎಚ್ಚರಗೊಳ್ಳುತ್ತಾನೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ.

೫೮ನೆಯ ಅಧ್ಯಾಯ :- ಯುದ್ಧದಲ್ಲಿ ಭೀಮಸೇನನು ಮೂರ್ಛಿತ ನಾಗಿ ಬೀಳುತ್ತಿರುವುದನ್ನು ನೋಡಿ ಅರ್ಜುನನು ಇವರಿಬ್ಬರಲ್ಲಿ ಯಾರು ಯಾವ ಗುಣದಲ್ಲಿ ಹೆಚ್ಚಿನವರೆಂದು ಶ್ರೀಕೃಷ್ಣನನ್ನು ಪ್ರಶ್ನಿಸುತ್ತಾನೆ. ಬಲದಲ್ಲಿ ಭೀಮಸೇನನು ಅಧಿಕನೆಂದೂ ಅಭ್ಯಾಸ ಮತ್ತು ಪ್ರಯತ್ನಶೀಲತೆ ಗಳಲ್ಲಿ ದುರ್ಯೋಧನನೇ ಅಧಿಕನೆಂದೂ ಶ್ರೀಕೃಷ್ಣನು ನಿಸ್ಸಂದೇಹವಾಗಿ ಹೇಳುತ್ತಾನೆ. **ಭೀಮಸೇನಸ್ತು ಧರ್ಮೇಣ ಯುಧ್ಯಮಾನೋ ನ ಜೇಷ್ಯತಿ। ಅನ್ಯಾಯೇನ ತು ಯುಧ್ಯನ್ವೈ ಹನ್ಯಾದೇವ ಸುಯೋಧನಮ್॥೪॥** ಅನ್ಯಾಯಮಾರ್ಗದಲ್ಲಿ ದುರ್ಯೋಧನನನ್ನು ಸಂಹರಿಸಬೇಕೇ ಹೊರತು ನ್ಯಾಯರೀತಿಯಲ್ಲಿ ಯುದ್ಧಮಾಡುತ್ತಿದ್ದರೆ ದುರ್ಯೋಧನನನ್ನು ಸಂಹರಿಸಲು ಸಾಧ್ಯವಾಗುವುದಿಲ್ಲ'– ಎಂದು ಸ್ಪಷ್ಟವಾಗಿ ಹೇಳುತ್ತಾನೆ.

ಶತ್ರುಗಳನ್ನು ವಂಚನೆಯಿಂದಲೇ ಸಂಹರಿಸಬೇಕೆಂದು ನಿದರ್ಶನಗಳೊಡನೆ ಸಮರ್ಥಿಸುತ್ತಾನೆ. ಈ ಹಿಂದೆಯೇ ಶ್ರೀಕೃಷ್ಣನು ಭೀಮಸೇನನಿಗೆ 'ದುರ್ಯೋಧನನ ತೊಡೆಯನ್ನು ಮುರಿದು ನಿನ್ನ ಪ್ರತಿಜ್ಞೆಯನ್ನು ಪೂರ್ಣ ಮಾಡಿಕೊಳ್ಳುವೆ' ಎಂದೇ ಹೇಳಿರುತ್ತಾನೆ. **ತ್ವಮಸ್ಯ ಸಕ್ಥಿನೀ ಭಂಕ್ತ್ವಾ ಪ್ರತಿಜ್ಞಾಂ ಪಾಲಯಿಷ್ಯಸಿ** (ಅಧ್ಯಾಯ ೩೩- ಶ್ಲೋ, ೨೭) ಆದರೆ ಇದುವರೆಗೂ ಭೀಮಸೇನನು ಆ ಕಾರ್ಯವನ್ನು ಮಾಡದೇ ಇದ್ದುದರಿಂದ, ಅರ್ಜುನನ ಮೂಲಕವಾಗಿ ಸೂಚನೆಯನ್ನು ಕೊಡುತ್ತಾನೆ. ಅರ್ಜುನನು ಎಡತೊಡೆಯನ್ನು ತಟ್ಟಿಕೊಳ್ಳುತ್ತಾನೆ. ಅರ್ಜುನನು ಇತ್ತ ಸೂಚನೆಯನ್ನು ಭೀಮಸೇನನು ಗ್ರಹಿಸಿದರೂ ಒಡನೆಯೇ ಅವನು ದುರ್ಯೋಧನನ ತೊಡೆಯನ್ನು ಗದೆಯಿಂದ ಪ್ರಹರಿಸಲು ಯತ್ನಿಸುವುದಿಲ್ಲ. ಯಥಾಪೂರ್ವವಾಗಿ ಭೀಮ-ದುರ್ಯೋಧನರಿಗೆ ಯುದ್ಧವು ನಡೆಯುತ್ತಲೇ ಇರುತ್ತದೆ. ಇಬ್ಬರೂ ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳುತ್ತಾರೆ. ಪುನಃ ಯುದ್ಧವನ್ನು ಪ್ರಾರಂಭಿಸು ತ್ತಾರೆ. ಭೀಮಸೇನನ ಗದಾಪ್ರಹಾರವನ್ನು ದುರ್ಯೋಧನನು ತಪ್ಪಿಸಿ ಕೊಳ್ಳುತ್ತಾನೆ. ಅದಕ್ಕೆ ಪ್ರತಿಯಾಗಿ ದುರ್ಯೋಧನನು ಪ್ರಹರಿಸಿದ ಗದಾ ಪ್ರಹಾರದಿಂದ ಭೀಮಸೇನನು ಮೂರ್ಛಿತನಂತಾಗುತ್ತಾನೆ. ಆದರೆ ಭೀಮಸೇನನು ಅಂತಹ ದುಃಸ್ಥಿತಿಯಲ್ಲಿದ್ದುದು ದುರ್ಯೋಧನನಿಗೆ ತಿಳಿಯು ವುದಿಲ್ಲ. ಭೀಮನು ತನ್ನನ್ನು ಪ್ರಹರಿಸುವ ಭಂಗಿಯಲ್ಲೇ ಇದ್ದಾನೆಂದು ಭಾವಿಸಿ ದುರ್ಯೋಧನನು ಮೂರ್ಛಿತನಂತಾಗಿದ್ದ ಭೀಮಸೇನನನ್ನು ಪುನಃ ಪ್ರಹರಿಸಹೋಗುವುದಿಲ್ಲ. ಈ ಭ್ರಮೆಯೇ ದುರ್ಯೋಧನನ ಪರಾ ಜಯಕ್ಕೂ ಭೀಮನ ಗೆಲುವಿಗೂ ಕಾರಣವಾಗುತ್ತದೆ. ಮರುಕ್ಷಣದಲ್ಲಿಯೇ ಭೀಮಸೇನನು ಚೇತರಿಸಿಕೊಂಡು, ಗದಾಪ್ರಹಾರವನ್ನು ತಪ್ಪಿಸಿಕೊಳ್ಳುವ ಸಲುವಾಗಿ ಕುಪ್ಪಳಿಸಲಿದ್ದ ದುರ್ಯೋಧನನ ತೊಡೆಗಳಿಗೆ ಬಲವಾಗಿ ಪ್ರಹರಿಸಿ ಅವನ ತೊಡೆಗಳನ್ನು ಮುರಿದುಹಾಕುತ್ತಾನೆ. ದುರ್ಯೋಧನನು ಕೆಳಕ್ಕೆ ಬಿದ್ದೊಡನೆಯೇ ಭೂಮಿಯಲ್ಲಿ ಅನೇಕ ವಿಧವಾದ ವೈಪರೀತ್ಯಗಳು ಕಾಣಿಸಿಕೊಳ್ಳುತ್ತವೆ. ಗಂಧರ್ವ-ಸಿದ್ಧ-ಚಾರಣರು ಇಬ್ಬರು ಯೋಧರನ್ನೂ ಪ್ರಶಂಸೆಮಾಡುತ್ತಾ ಹೊರಟುಹೋಗುತ್ತಾರೆ.

೫೯ನೆಯ ಅಧ್ಯಾಯ :- ದುರ್ಯೋಧನನನ್ನು ಕೆಡವಿದಮಾತ್ರದಿಂದಲೇ

ಭೀಮಸೇನನ ಕೋಪವು ಉಪಶಮನಹೊಂದುವುದಿಲ್ಲ. ದುರ್ಯೋಧನನ ಕಿರೀಟವನ್ನು ಒದೆದು ದೂರಕ್ಕೆ ತಳ್ಳಿ ಅವನ ತಲೆಯನ್ನೂ ಕಾಲಿನಿಂದ ಮೆಟ್ಟುತ್ತಾನೆ. ದುರ್ಯೋಧನನು ಮಾಡಿದ್ದ ಅಪರಾಧಗಳೆಲ್ಲವನ್ನೂ ಪಟ್ಟಿಮಾಡಿ ಹೇಳುತ್ತಾ ಮೂದಲಿಸುತ್ತಾನೆ. ಆದರೆ ಭೀಮನ ಈ ಕೃತ್ಯವು ಪಾಂಡವರ ಕಡೆಯವರಿಗೇ ಸರಿ ಎನಿಸುವುದಿಲ್ಲ. ಧರ್ಮರಾಜನೇ ಆ ಕಾರ್ಯದಿಂದ ವಿರತನಾಗುವಂತೆ ಭೀಮಸೇನನಿಗೆ ಸಲಹೆ ನೀಡುತ್ತಾನೆ. ಬಳಿಕ ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ ಯುಧಿಷ್ಠಿರನು ದುರ್ಯೋಧನನಿಗೆ ಸಮಾಧಾನ ಹೇಳುತ್ತಾನೆ. ಹಾಗೆ ಸಮಾಧಾನಹೇಳುವಾಗ ಯುಧಿಷ್ಠಿರನಾಡುವ ಒಂದು ಮಾತು ಬಹಳ ಸಹಜವಾಗಿ ಕಾಣುತ್ತದೆ. ಇದೇ ಮಾತನ್ನೇ ಮುಂದೆ ದುರ್ಯೋಧನನೂ ನಾಲ್ಕಾರು ಬಾರಿ ಹೇಳುತ್ತಾನೆ. ಆದರೆ ಸ್ವಭಾವಕ್ಕೆ ತಕ್ಕಂತೆ ಅವು ದ್ವೇಷಪೂರಿತವಾಗಿ ಕಹಿಯಾಗಿಯೇ ಇರುತ್ತವೆ.

ತ್ವಮೇಕಃ ಸುಸ್ಥಿತೋ ರಾಜನ್ಸ್ವರ್ಗೇ ತೇ ನಿಲಯೋ ಧ್ರುವಃ ।
ವಯಂ ನರಕಸಂಜ್ಞಂ ವೈ ದುಃಖಂ ಪ್ರಾಪ್ಸ್ಯಾಮ ದಾರುಣಮ್ ॥

'ದುರ್ಯೋಧನ! ನೀನೊಬ್ಬನೇ ಸುಖಿಯು. ಸ್ವರ್ಗದಲ್ಲಿ ನಿನಗೊಂದು ಶಾಶ್ವತವಾದ ಸ್ಥಾನವು ಲಭಿಸುವುದು ನಿಶ್ಚಯ. ನಾವಾದರೋ ನರಕಸದೃಶವಾದ ಸುದಾರುಣವಾದ ದುಃಖಕ್ಕೆ ಭಾಗಿಗಳಾಗುತ್ತೇವೆ.'

ಯುಧಿಷ್ಠಿರನು ಇದೇ ಕಾರಣದಿಂದಲೇ ಬಹಳವಾಗಿ ದುಃಖಿಸುತ್ತಿರುತ್ತಾನೆ.

೬೦ನೆಯ ಅಧ್ಯಾಯ :- ಯುದ್ಧದ ಪ್ರೇಕ್ಷಕನಾಗಿದ್ದ ಬಲರಾಮನಿಗೆ ಭೀಮಸೇನನ ಕೃತ್ಯವು ಸಹ್ಯವಾಗುವುದಿಲ್ಲ. ಹಲಾಯುಧವನ್ನೆತ್ತಿಕೊಂಡು ಭೀಮಸೇನನ ಕಡೆಗೆ ಧಾವಿಸುತ್ತಾನೆ. ಶ್ರೀಕೃಷ್ಣನು ತನ್ನೆರಡು ತೋಳುಗಳಿಂದಲೂ ಅವನನ್ನು ಬಲವಾಗಿ ತಬ್ಬಿಕೊಂಡು ಬಲರಾಮನನ್ನು ಮುಂದೆ ಹೋಗದಂತೆ ತಡೆಯುತ್ತಾನೆ ಮತ್ತು ಯುಕ್ತಿಯುಕ್ತವಾಗಿ ಸಮಾಧಾನ ಹೇಳುತ್ತಾನೆ. ಶ್ರೀಕೃಷ್ಣನ ಮಾತಿನಿಂದ ಬಲರಾಮನಿಗೆ ಸಮಾಧಾನವಾಗುವುದಿಲ್ಲ. ಭೀಮಸೇನನು ಮಾಡಿದುದು ಉಚಿತವೆಂದೂ ಎನಿಸುವುದಿಲ್ಲ. ದುರ್ಯೋಧನನನ್ನು ಶ್ಲಾಘಿಸಿ ದ್ವಾರಾವತಿಗೆ ಹೊರಟುಹೋಗುತ್ತಾನೆ.

ದುರ್ಯೋಧನನ ತಲೆಯನ್ನು ಭೀಮಸೇನನು ಮೆಟ್ಟುತ್ತಿದ್ದರೂ ತಡೆಯದೇ ಇದ್ದುದಕ್ಕಾಗಿ ಶ್ರೀಕೃಷ್ಣನೂ ಯುಧಿಷ್ಠಿರನನ್ನು ಆಕ್ಷೇಪಿಸುತ್ತಾನೆ. ತನಗೆ ಇಷ್ಟವಿಲ್ಲದಿದ್ದರೂ ಭೀಮಸೇನನ ಕೋಪವು ಉಪಶಮನವಾಗಲೆಂಬ ಕಾರಣದಿಂದ ತಾನು ಹೀಗೆ ಮಾಡಿದೆನೆಂದು ಧರ್ಮಜನು ಹೇಳುತ್ತಾನೆ. ಶ್ರೀಕೃಷ್ಣನು ಸುಮ್ಮನಾಗುತ್ತಾನೆ. ಬಳಿಕ ಭೀಮಸೇನನು ಧರ್ಮರಾಜನಿಗೆ ನಿಷ್ಕಂಟಕವಾದ ಭೂಮಂಡಲವನ್ನು ಪರಿಪಾಲಿಸುವಂತೆ ಹೇಳುತ್ತಾನೆ. ಧರ್ಮಜನು ಶ್ರೀಕೃಷ್ಣನ ಸಮಯೋಚಿತವಾದ ಸಲಹೆಗಳಿಂದ ನಾವು ಯುದ್ಧದಲ್ಲಿ ಜಯಿಸಿದೆವೆಂದು ಹೇಳಿ ಭೀಮಸೇನನನ್ನು ಶ್ಲಾಘಿಸುತ್ತಾನೆ.

೬೧ನೆಯ ಅಧ್ಯಾಯ :- ದುರ್ಯೋಧನನನ್ನು ಸಂಹರಿಸಿದುದಕ್ಕಾಗಿ ಪಾಂಡವ-ಪಾಂಚಾಲಯೋಧರು ಭೀಮಸೇನನನ್ನು ಬಹಳವಾಗಿ ಶ್ಲಾಘಿಸುತ್ತಾರೆ. ಆದರೆ ದುರ್ಯೋಧನನನ್ನು ನಿಂದಿಸುವುದಿಲ್ಲ. "ಅದೃಷ್ಟವಶಾತ್ ನೀನು ದುರ್ಯೋಧನನ ತಲೆಯನ್ನು ಮೆಟ್ಟಿದೆ. ಅದೃಷ್ಟವಶದಿಂದ ನೀನು ದುಃಶಾಸನನ ರಕ್ತವನ್ನು ಕುಡಿದೆ." ಇಂತಹ ಭೀಮಪ್ರಶಂಸಾವಾಕ್ಯಗಳಿವೆ. ೧೭ನೆಯ ಶ್ಲೋಕದಲ್ಲಿ **ಬ್ರುವತೋಽಸದೃಶಂ, ಬ್ರುವತಃ ಸದೃಶಂ**–ಎಂದು ಎರಡು ಪಾಠಗಳಿವೆ. ನಾವು **ಅಸದೃಶಂ** ಅನುಚಿತವಾದ ಎಂಬ ಪಾಠವನ್ನೇ ಅನುಸರಿಸಿದ್ದೇವೆ. ಆದರೆ **ಸದೃಶಂ** ಎಂಬುದೇ ಸಾಧುವಾಗಿ ಕಾಣುತ್ತದೆ. ಏಕೆಂದರೆ : ಯೋಧರು ಹೇಳಿರುವುದರಲ್ಲಿ ಅನುಚಿತವಾದ ಮಾತುಗಳಾವುದೂ ಇರುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ದುರ್ಯೋಧನನನ್ನವರು ನಿಂದಿಸಿರುವುದಿಲ್ಲ. ಆದರೆ ಶ್ರೀಕೃಷ್ಣನು ಈ ಪ್ರಕರಣದಲ್ಲಿ **'ನ ನ್ಯಾಯಂ ನಿಹತಂ ಶತ್ರುಂ ಭೂಯೋ ಹನ್ತುಂ ನರಾಧಿಪಾಃ' 'ಹತನಾಗಿರುವ ಶತ್ರುವನ್ನು ಪುನಃ ಪುನಃ ಮಾತುಗಳಿಂದ ಪೀಡಿಸುವುದು ಉಚಿತವಲ್ಲ'**– ಎಂದು ಹೇಳಿರುವುದು ಮತ್ತು ತಾನೇ ದುರ್ಯೋಧನನನ್ನು ಬಹಳವಾಗಿ ನಿಂದಿಸಿರುವುದು ವಿಚಿತ್ರವಾಗಿ ಕಾಣುತ್ತದೆ. ಈ ಸಂದರ್ಭದಲ್ಲಿ ಶ್ರೀಕೃಷ್ಣನು ದುರ್ಯೋಧನನನ್ನು ಬಹಳವಾಗಿಯೇ ನಿಂದಿಸುತ್ತಾನೆ. ಅವನ ಮಾತಿನಿಂದ ದುರ್ಯೋಧನನೂ ಬಹಳ ದುಃಖಿತನಾಗುತ್ತಾನೆ. ಕಷ್ಟಪಟ್ಟು ಮೊಳಕೈ ಊರಿಕೊಂಡು ಮೇಲೆದ್ದು **'ಕಂಸದಾಸಸ್ಯ ದಾಯಾದ!'** ಎಂದು ಶ್ರೀಕೃಷ್ಣನನ್ನು ಸಂಬೋಧಿಸಿ ಹೇಳುತ್ತಾನೆ. ಶ್ರೀಕೃಷ್ಣನ

ಸಲಹೆಯಂತೆ ಪಾಂಡವರು ಯುದ್ಧದಲ್ಲಿ ಮಾಡಿದ ಅಪರಾಧಗಳೆಲ್ಲವನ್ನೂ ಪಟ್ಟಿಮಾಡಿ ಹೇಳುತ್ತಾನೆ. ಇದಕ್ಕೆ ತಕ್ಕ ಸಮಾಧಾನವನ್ನು ಶ್ರೀಕೃಷ್ಣನು ಹೇಳಿ ದುರ್ಯೋಧನನು ಮಾಡಿದ ಪಾಪಕಾರ್ಯಗಳನ್ನು ವಿವರಿಸಿ ಹೇಳುತ್ತಾನೆ. ಅದಕ್ಕುತ್ತರವಾಗಿ ದುರ್ಯೋಧನನು 'ನಾನು ನನ್ನ ಸುಹೃದರಿಂದಲೂ, ಅನುಯಾಯಿಗಳಿಂದಲೂ ಒಡಗೂಡಿ ಸ್ವರ್ಗಕ್ಕೆ ಹೋಗುತ್ತೇನೆ. ನೀವು ಭಗ್ನಮನೋರಥರಾಗಿ ದುಃಖಿಸುತ್ತಾ ಜೀವನವನ್ನು ನಡೆಸುವಿರಿ– **ಸಸುಹೃತ್ಸಾನುಗಶ್ಚೈವ ಸ್ವರ್ಗಂ ಗನ್ತಾಹಮಚ್ಯುತ । ಯೂಯಂ ನಿಹತಸಂಕಲ್ಪಾಃ ಶೋಚನ್ತೋ ವರ್ತಯಿಷ್ಯಥ ॥೫೩॥** ಎನ್ನುತ್ತಾನೆ. ದುರ್ಯೋಧನನ ಮಾತುಗಳನ್ನು ಕೇಳಿ ದೇವತೆಗಳು ಅವನ ಮೇಲೆ ಪುಷ್ಪ ವೃಷ್ಟಿಯನ್ನು ಸುರಿಸುತ್ತಾರೆ. ಅದನ್ನು ನೋಡಿದ ಪಾಂಡವರು ಖಿನ್ನರಾಗುತ್ತಾರೆ. ಪುನಃ ಶ್ರೀಕೃಷ್ಣನು ಯುಕ್ತಿಯುಕ್ತವಾದ ಮಾತುಗಳಿಂದ ಪಾಂಡವರಿಗೆ ಸಮಾಧಾನಹೇಳುತ್ತಾನೆ. ಎಲ್ಲರೂ ಸಿಂಹನಾದಗಳನ್ನು ಮಾಡಿ ಶಂಖ ಗಳನ್ನೂದುತ್ತಾರೆ.

೬೨ನೆಯ ಅಧ್ಯಾಯ :- ಪಾಂಡವರು ತಮ್ಮ ಬಂಧು-ಮಿತ್ರರೊಡನೆ ದುರ್ಯೋಧನನ ಶಿಬಿರಗಳಿಗೆ ಹೋಗುತ್ತಾರೆ. ಆ ಸಮಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಗಾಂಡೀವಧನುಸ್ಸಿನೊಡನೆ ರಥದಿಂದಿಳಿಯಲು ಹೇಳುತ್ತಾನೆ. ಶ್ರೀಕೃಷ್ಣನ ಮಾತಿನಂತೆ ಅರ್ಜುನನು ಧನುರ್ಬಾಣಗಳೊಡನೆ ಕೆಳಗಿಳಿದ ನಂತರ ಶ್ರೀಕೃಷ್ಣನೂ ಕುದುರೆಗಳ ಕಡಿವಾಣಗಳನ್ನು ಬಿಟ್ಟು ಕೆಳಗಿಳಿಯು ತ್ತಾನೆ. ಒಡನೆಯೇ ರಥವು ಹೊತ್ತಿಕೊಂಡು ಭಸ್ಮವಾಗುತ್ತದೆ. ಹದಿನೆಂಟು ದಿವಸಗಳ ಮಹಾಯುದ್ಧದಲ್ಲಿ ಅರ್ಜುನನ ರಥವೊಂದೇ ಕಡೆಯವರೆಗೂ ಉಳಿದಿರುತ್ತದೆ. ಬಳಿಕ ಯುಧಿಷ್ಠಿರನು ದುರ್ಯೋಧನನ ಶಿಬಿರವನ್ನು ಪ್ರವೇಶಿಸಿ ಬೊಕ್ಕಸವನ್ನು ವಶಪಡಿಸಿಕೊಳ್ಳುತ್ತಾನೆ. ಅನಂತರ ಪಾಂಡವರೂ ಸಾತ್ಯಕಿಯೂ ಶಿಬಿರದ ಒಂದು ಭಾಗದಲ್ಲಿ ಕುಳಿತಿರುತ್ತಾರೆ. ಆ ಸಮಯ ದಲ್ಲಿ ಶ್ರೀಕೃಷ್ಣನು ಅವರನ್ನು ಕುರಿತು 'ಇಂದಿನ ರಾತ್ರಿ ನಮ್ಮೆಲ್ಲರ ಕಲ್ಯಾಣ ಕ್ಕಾಗಿ ನಾವೆಲ್ಲರೂ ಶಿಬಿರದ ಹೊರಭಾಗದಲ್ಲಿಯೇ ಇರಬೇಕು' ಎನ್ನುತ್ತಾನೆ. ಅವನ ಮಾತಿನಂತೆ ಪಾಂಡವರೈವರು ಮತ್ತು ಸಾತ್ಯಕಿ– ಈ ಆರು ಮಂದಿಗಳೂ ಓಘವತೀನದಿಯ ದಂಡೆಯಲ್ಲಿ ರಾತ್ರಿ ತಂಗುತ್ತಾರೆ. ಆ

ಸಮಯದಲ್ಲಿ ಯುಧಿಷ್ಠಿರನು ಗಾಂಧಾರಿಯ ಕೋಪವನ್ನು ಶಾಂತಗೊಳಿಸಿ ಬರುವಂತೆ ಹೇಳಿ ಶ್ರೀಕೃಷ್ಣನನ್ನು ಹಸ್ತಿನಾಪುರಿಗೆ ಕಳುಹಿಸುತ್ತಾನೆ.

೬೩ನೆಯ ಅಧ್ಯಾಯ :- ಯುಧಿಷ್ಠಿರನು ಗಾಂಧಾರಿಯ ಕೋಪದ ವಿಷಯವಾಗಿ ಏಕೆ ಹೆದರಿದ್ದನೆಂಬುದು ಈ ಅಧ್ಯಾಯದಲ್ಲಿ ವರ್ಣಿತವಾಗಿದೆ. ಯುಧಿಷ್ಠಿರ-ಶ್ರೀಕೃಷ್ಣರ ಸಂಭಾಷಣೆ, ಯುಧಿಷ್ಠಿರನ ಅಭಿಪ್ರಾಯವನ್ನು ಗ್ರಹಿಸಿ ಶ್ರೀಕೃಷ್ಣನು ಹಸ್ತಿನಾಪಟ್ಟಣಕ್ಕೆ ಹೋದುದು. ಅಲ್ಲಿ ಧೃತರಾಷ್ಟ್ರ-ಗಾಂಧಾರಿಯರಿಗೆ ಸಮಾಧಾನವಾಗುವಂತೆ ಯುಕ್ತಿಯುಕ್ತವಾಗಿ ಶ್ರೀಕೃಷ್ಣನು ಮಾತನಾಡಿದುದು—ಈ ಎಲ್ಲ ವಿಷಯಗಳೂ ಈ ಅಧ್ಯಾಯದಲ್ಲಿವೆ. ಶ್ರೀಕೃಷ್ಣನು ಕೃತಕೃತ್ಯನಾಗಿ ಹಿಂದಿರುಗುತ್ತಾನೆ. ಯುಧಿಷ್ಠಿರನು ಹೇಳಿದ್ದಂತೆ ಧೃತರಾಷ್ಟ್ರನ ಬಳಿಯಲ್ಲಿ ವ್ಯಾಸರಿರುತ್ತಾರೆ. ಆದರೆ ಅವರು ಯಾವ ಮಾತನ್ನೂ ಆಡುವುದಿಲ್ಲ. ಅಧ್ಯಾಯದ ಕಡೆಯಲ್ಲಿ ಅವರು ಧೃತರಾಷ್ಟ್ರನನ್ನು ಸಮಾಧಾನಗೊಳಿಸಿದರು—ಎಂದಿದೆ.

೬೪ನೆಯ ಅಧ್ಯಾಯ :- ಈ ಅಧ್ಯಾಯವನ್ನು ವಿಶ್ಲೇಷಿಸುವ ಮೊದಲು ನಾವು ಹಿಂದಿನ ಅಧ್ಯಾಯಗಳಲ್ಲಿ ಬಂದಿರುವ ಒಂದಂಶವನ್ನು ಗಮನಿಸ ಬೇಕಾಗಿದೆ. ೬೨ನೆಯ ಅಧ್ಯಾಯದಲ್ಲಿ 'ಯುಧಿಷ್ಠಿರನು ಶ್ರೀಕೃಷ್ಣನನ್ನು ಗಾಂಧಾರಿಯ ಸಮೀಪಕ್ಕೆ ಕಳುಹಿಸಿದನು' ಎಂಬ ವಿಷಯವನ್ನು ಸಂಜಯನು ಧೃತರಾಷ್ಟ್ರನಿಗೆ ಹೇಳುತ್ತಾನೆ. ಅಲ್ಲಿಂದ ಮುಂದೆ ೬೩ನೆಯ ಅಧ್ಯಾಯದಲ್ಲಿ ವೈಶಂಪಾಯನರು ಜನಮೇಜಯನ ಪ್ರಶ್ನೆಯನ್ನು ಆಧರಿಸಿ ಶ್ರೀಕೃಷ್ಣನು ಗಾಂಧಾರಿಯನ್ನೂ ಮತ್ತು ಧೃತರಾಷ್ಟ್ರನನ್ನೂ ಸಂದರ್ಶಿಸಿ ಸಂಭಾಷಿಸಿದ ವಿಷಯವನ್ನೂ ಹೇಳುತ್ತಾರೆ.

(ಮುಂದುವರಿಯುವುದು.)

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.